

ಡಾ|| ಸಿ.ಯು. ಬಮ್ಮೂದೇವಿ ಬಮ್ಮೂರಂಕರ್

ಆಶೀರ್ವಾದ

ಪಟ್ಟಾರೋಹಣದ 25 ರಜತ ಮಹೋತ್ಸವ

ಶ್ರೀ 1008 ಜಗದ್ಗುರು
ಡಾ|| ಚಂದ್ರಶೇಖರ ಶಿವಾಚಾರ್ಯ
ಮಹಾಸನ್ನಿಧಿಯವರ

ಶ್ರೀ 1008 ಜಗದ್ಗುರು
ಡಾ|| ಚಂದ್ರಶೇಖರ ಶಿವಾಚಾರ್ಯ
ಮಹಾಸನ್ನಿಧಿಯವರ



ಆಶೀರ್ವಾದ

ಶ್ರೀ 1008 ಜಗದ್ಗುರು
ಡಾ॥ ಚಂದ್ರಶೇಖರ ಶಿವಾಚಾರ್ಯ
ಮಹಾಸನ್ನಿಧಿಯವರ

ಪಟ್ಟಾರೋಹಣದ 25 ರಜತ ಮಹೋತ್ಸವ



ಆಶೀರ್ವಾದ

ಡಾ॥ ಸಿ.ಯು. ಉಮಾದೇವಿ ಉಮಾಶಂಕರ್

ಶ್ರೀ 1008 ಜಗದ್ಗುರು
ಡಾ॥ ಚಂದ್ರಶೇಖರ ಶಿವಾಚಾರ್ಯ
ಮಹಾಸನ್ನಿಧಿಯವರ

ಪಟ್ಟಾರೋಹಣದ 25 ರಜತ ಮಹೋತ್ಸವ

ಆಶೀರ್ವಾದ



ಸಂಗ್ರಹ ಮತ್ತು ಸಂಪಾದನೆ :

ಡಾ॥ ಸಿ.ಯು. ಉಮಾದೇವಿ ಉಮಾಶಂಕರ್
ಎಂ.ಎ., ಪಿ.ಹೆಚ್.ಡಿ. (ಕನ್ನಡ) M.A., Philosophy

ಪ್ರಕಾಶಕರು :
ಶೈವಭಾರತಿ ಶೋಧ ಪ್ರತಿಷ್ಠಾನ
ಡಿ–35/77, ಜಂಗಮವಾಡಿ ಮಠ, ವಾರಣಾಶಿ–221001

'ASHIRVADA' Editor : Dr. C.U. Umadevi Umashankar, M.A., Ph.D. (Kannada), M.A. Philosophy, G 1102, Sterling Terrace, 100 ft. Ring Road, Banashankari III Stage, 5th Block, Bangalore-560 085. Mobile : 9591758310
E-mail: umadevicu@yahoo.in

Size	:	Demmy 1/4 th
Pages	:	418 + xvi
Paper Used	:	90 GSM Art Paper

Year of Publication	:	1-1-2015
Price	:	Rs. 1,000/-
Published by	:	**Shaivabharathi Shoda Pratishtana** D 35/77, Jangamavadi Math Varanasi-221001 (U.P.)
ISBN No	:	978-93-82639-27-6
Series No	:	77
Designer	:	**Mr. Krishna Murthy E.M.**
DTP	:	**Varshini Graphics,** Bangalore-40
Printer	:	**Sneha Printers** # 114, 4th Cross, B.C.C. Layout Attiguppe, Vijayanagar II Stage Bangalore-560 040. Ph : 080-23392814

ಕಾಶೀ ಪೀಠದ ಗುರು ಪರಂಪರೆ



ಕಾಶೀ ಪೀಠದ 79ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ಹರೀಶ್ವರ ಶಿವಾಚಾರ್ಯ ಮಹಾಸ್ವಾಮಿಗಳು
1825–1879



ಕಾಶೀ ಪೀಠದ 80ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು
1879–1889





ಕಾಶೀ ಪೀಠದ 81ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ರಾಜೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು
1889–1907



ಕಾಶೀ ಪೀಠದ 82ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು
1907–1932

ಕಾಶೀ ಪೀಠದ ಗುರು ಪರಂಪರೆ



ಕಾಶೀ ಪೀಠದ 83ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು
1932–1944



ಕಾಶೀ ಪೀಠದ 84ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು
27–9–1944 ರಿಂದ 25–1–1948





ಕಾಶೀ ಪೀಠದ 85ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು
1948–1989



ಕಾಶೀ ಪೀಠದ 86ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು
17–11–1989



ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ
ಶ್ರೀ ೧೦೦೮ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ
ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು
ಸುಕ್ಷೇತ್ರ ಉಜ್ಜಯಿನಿ

ಶುಭ ಸಂದೇಶ

ಸನಾತನ ವೀರಶೈವ ಧರ್ಮದ ಒಡೆಯರೇ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರು. ಕಾಶೀ ಪೀಠದ ಪ್ರಸ್ತುತ ಜ್ಞಾನಸಿಂಹಾಸನಾಧೀಶ್ವರರು ವೀರಶೈವ ಧರ್ಮದ ಬೃಹಸ್ಪತಿ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಭಗವತ್ಪಾದರು.

ಪರಮಪೂಜ್ಯ ಜಗದ್ಗುರುವರೇಣ್ಯರು ಮೂಲತಃ ಗುಳೇದಗುಡ್ಡದ ತೋಗುಣಸಿ ಗ್ರಾಮದವರು. ತಮ್ಮ ಪ್ರತಿಭಾಸಂಪನ್ನ ವಿದ್ಯಾರ್ಜನೆಯೊಂದಿಗೆ ಗುಳೇದಗುಡ್ಡದ ಶ್ರೀ ಅಮರೇಶ್ವರ ಮಠದ ಪಟ್ಟಾಧ್ಯಕ್ಷರಾದರು. ನಂತರ ಕಾಶೀ ಪೀಠದ ಜಂಗಮವಾಡಿ ಮಠದಲ್ಲಿ ಹೆಚ್ಚಿನ ಸಂಸ್ಕೃತಾಭ್ಯಾಸ ಮುಂದುವರಿಸಿದರು. ೧೯೭೩ರಲ್ಲಿ ಕಾಶೀ ಸಂಸ್ಕೃತ ಸಂಪೂರ್ಣಾನಂದ ವಿಶ್ವವಿದ್ಯಾಲಯದ 'ವೇದಾಂತಾಚಾರ್ಯ' ಪರೀಕ್ಷೆಯನ್ನು ಮೂರು ಚಿನ್ನದ ಪದಕಗಳೊಂದಿಗೆ ಯಶಸ್ವಿಯಾಗಿ ಪೂರೈಸಿದರು. ವೀರಶೈವ ಧರ್ಮ ಮತ್ತು ದರ್ಶನಗಳಲ್ಲಿನ 'ಶ್ರೀ ಸಿದ್ಧಾಂತ ಶಿಖಾಮಣಿ ಸಮೀಕ್ಷಾ' ಎಂಬ ಮಹಾಪ್ರಬಂಧಕ್ಕೆ 'ವಿದ್ಯಾವಾರಿಧಿ' (ಪಿಹೆಚ್.ಡಿ.) ಪದವಿ ಭಾಜನರಾದರು. "ವೀರಶೈವ ತತ್ವತ್ರಯ ವಿಮರ್ಶೆ" ಎಂಬ ಮತ್ತೊಂದು ಮಹಾಪ್ರಬಂಧವನ್ನು ಸಲ್ಲಿಸಿ 'ವಿದ್ಯಾವಾಚಸ್ಪತಿ' (ಡಿ.ಲಿಟ್.) ಪದವಿ ಸಂಪಾದಿಸಿ ಈ ಕಾರ್ಯವೆಸಗಿದ ದಕ್ಷಿಣ ಭಾರತದ ಮೊದಲ ವೀರಶೈವ ಮಹನೀಯರೆನಿಸಿದರು. ಇದೆಲ್ಲದರ ಜೊತೆಗೆ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಾ ತಮ್ಮ ಪ್ರಕಾಂಡ ಪಾಂಡಿತ್ಯದ ಪರಿಪಕ್ವತೆಯನ್ನು ಓರ್ವ ವೀರಶೈವ ಧರ್ಮಗುರುವಾಗಿ ಸಾಧಿಸಿದರು. ಅವಿರತ ಹದಿನಾರು ವರ್ಷಗಳ ವಿದ್ಯಾವ್ಯಾಸಂಗದ ಫಲವಾಗಿ ವೀರಶೈವ ದರ್ಶನದ ಮಹಾವ್ಯಕ್ತಿತ್ವದ ಸಿದ್ಧಿಯನ್ನು ಸಂಪಾದಿಸಿಕೊಂಡರು.

ವಿದ್ಯಾರ್ಜನೆಯ ಕಾರ್ಯನಿಮಿತ್ಯ ಕಾಶೀಗೆ ತೆರಳಿದ ಜ್ಞಾನದ ಶಿಖಾಮಣಿಯಾದ ಪೂಜ್ಯರಿಗೆ ಕಾಶೀ ವಿಶ್ವನಾಥನ ಅನುಗ್ರಹದಿಂದ ೧೯೮೯ರಲ್ಲಿ ವಾರಣಾಸಿಯ ಜ್ಞಾನಸಿಂಹಾಸನದೊಡೆಯರಾಗುವ ಭಾಗ್ಯ ಒದಗಿ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರೆನಿಸಿ ಸನಾತನ ಸಂಸ್ಕಾರ, ವಿನೂತನ ಜ್ಞಾನದ ಪ್ರತಿಭೆಗಳ ಸಂಗಮದಿಂದ ನಾಡಿಗೆ ಹೊಸ ಮನ್ವಂತರದ ಶುಭೋದಯಕ್ಕೆ ನಾಂದಿ ಹಾಡಿದಂತಾಯಿತು.

ಅವರು ಕಳೆದ ೨೫ ವರ್ಷಗಳಿಂದ ಅವಿರತವಾಗಿ ದೇಶ ವಿದೇಶಗಳಲ್ಲಿ ಸಂಚರಿಸಿ ಮಾನವರ ಉದ್ಧಾರಕ್ಕಾಗಿ ಮಾಡಿರುವ ಉಪದೇಶಗಳನ್ನೆಲ್ಲಾ ಪತ್ರಿಕೆಗಳಿಂದ ಸಂಗ್ರಹಿಸಿ – ಅದಕ್ಕೊಂದು ವ್ಯವಸ್ಥಿತ ರೂಪ ನೀಡಿ – ಓದುಗರನ್ನು ಅಕರ್ಷಿಸುವಂತೆ ಬಹಳ ಶ್ರಮಪಟ್ಟು ಸಂಪಾದಿಸಿರುವ ಡಾ॥ ಸಿ.ಯು. ಉಮಾದೇವಿಯವರ ಶ್ರಮ ಸಾರ್ಥಕವಾಗಿದೆ. ಜಗದ್ಗುರುಗಳವರ ೨೫ ವರ್ಷಗಳ ಸಾಧನೆಗಳನ್ನು ದಾಖಲಿಸಿರುವ ಕ್ರಮ ಮೆಚ್ಚುವಂತಹದ್ದು. ಈ ೨೫ ವರ್ಷಗಳಲ್ಲಿ ಕಾಶೀ ಜಗದ್ಗುರುಗಳು ಮಾಡಿರುವ ಸಾಧನೆಯ ಈ ದಾಖಲಾತಿ ಗ್ರಂಥ 'ಆಶೀರ್ವಾದ' ಮುಂದಿನ ಮನುಕುಲಕ್ಕೆ ಮಾರ್ಗದರ್ಶನವಾಗುವಂತಹದ್ದು. ಜಗದ್ಗುರುಗಳು ನೀಡಿರುವ ಉಪದೇಶಗಳು ದಿನನಿತ್ಯದ ಬದುಕಿಗೆ ತೀರ ಅನಿವಾರ್ಯವಾಗಿರುವಂತಹದ್ದು.

ಕಾಶೀ ಜಗದ್ಗುರುಗಳ ಸಾಧನೆಯೆಲ್ಲವನ್ನು ಸಂಗ್ರಹಿಸಿಟ್ಟಿರುವ ಈ 'ಆಶೀರ್ವಾದ' ಗ್ರಂಥವು ಹೊರಬಂದು ಸರ್ವಜನರಿಗೂ ಉಪಯುಕ್ತವಾಗಲಿದೆ. ಶ್ರೀ ಜಗದ್ಗುರು ಮಹಾಸನ್ನಿಧಿಯವರು ಉನ್ನತ ವಿದ್ವಾಂಸರು, ಸಾಹಿತ್ಯ ಪ್ರೇಮಿಗಳು, ಶ್ರೇಷ್ಠ ಸಂಶೋಧಕರು, ಜೊತೆಗೆ ಸರಳ ಸ್ವಭಾವದ ಸಾಕಾರಮೂರ್ತಿಗಳಾಗಿ ಆಧ್ಯಾತ್ಮ ಪಿಪಾಸುಗಳಿಗೆ ಜ್ಞಾನಾನುಭವದ ತತ್ತ್ವಾಮೃತವನ್ನುಣಿಸುತ್ತಲಿದ್ದಾರೆ. ಡಾ॥ ಸಿ.ಯು. ಉಮಾದೇವಿಯವರು – ಜಗದ್ಗುರುಗಳನ್ನು ವೀರಶೈವದ ಮಹಾಮೇರು ಶಿಖರವನ್ನಾಗಿ – ಈ ಗ್ರಂಥದಲ್ಲಿ ಕಡೆದು ನಿಲ್ಲಿಸಿರುವುದು ನಿಜಕ್ಕೂ ಸ್ತುತ್ಯರ್ಹ.

ಡಾ॥ ಸಿ.ಯು. ಉಮಾದೇವಿ ಮತ್ತು ಅವರ ಪತಿ ಶ್ರೀ ಸಿ. ಉಮಾಶಂಕರ್
ಅವರಿಗೆ ಶುಭ ಹಾರೈಕೆಗಳೊಂದಿಗೆ ಮಂಗಳಾಶೀರ್ವಾದಗಳು.

ಉಜ್ಜಯಿನಿ
೧೮-೧೨-೨೦೧೪

ಶುಭಕಾಂಕ್ಷೆಗಳೊಂದಿಗೆ
ಶ್ರೀ ಉಜ್ಜಯಿನಿ ಜಗದ್ಗುರುಗಳವರು

ಶ್ರೀಮದ್ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ
ಶ್ರೀ ೧೦೦೮ ಜಗದ್ಗುರು ಡಾ॥ ಚನ್ನಸಿದ್ಧರಾಮ ಪಂಡಿತಾರಾಧ್ಯ
ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು
ಸುಕ್ಷೇತ್ರ ಶ್ರೀಶೈಲ



ಶುಭ ಸಂದೇಶ

ಸರ್ವಲೋಕೋಪಕಾರಾಯ ಯೋ ದೇವಃ ಪರಮೇಶ್ವರಃ॥
ಚರತ್ಯತಿಥಿರೂಪೇಣ ನಮಸ್ತೇ ಜಂಗಮಾತ್ಮನೇ॥

ಎಂಬ ಉಕ್ತಿಯಂತೆ ಶ್ರೀಮತ್ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರದು ದೇವರ ಅಪರಾವತಾರವಾದ 'ಜಗದ್ಗುರು' ಎಂಬ ನಾಮಕ್ಕೆ ಅನ್ವರ್ಥಕ ವ್ಯಕ್ತಿತ್ವ. ಜಗದುದ್ಧಾರದ ಉದ್ದೇಶವನ್ನಿರಿಸಿಕೊಂಡು ಜಗತ್ತಿನ ಉದ್ದಗಲಕ್ಕೂ ಅವಿಶ್ರಾಂತ ಸಂಚರಿಸಿ ಸಮಾಜೋದ್ಧಾರ, ಪೀಠೋದ್ಧಾರ, ದೇಶೋದ್ಧಾರ ಮತ್ತು ಧರ್ಮೋದ್ಧಾರ ಗೈಯುವವರು ಜಗದ್ಗುರುಗಳು. 'ಜಗದ್ಗುರು' ಶಬ್ದದ ಈ ಪರಿಭಾಷೆ ಕಾಶೀ ಜಗದ್ಗುರು ಮಹಾಸನ್ನಿಧಿಯವರ ಸಾಧನೆಯಲ್ಲಿ ಮೂರ್ತರೂಪ ತಾಳಿದೆ. ಕಾಶೀ ಜಗದ್ಗುರುಗಳವರು ತಮ್ಮ ಪೀಠಾರೋಹಣದ ತರುವಾಯ ಇಲ್ಲಿಯವರೆಗೆ ಇಪ್ಪತ್ತೈದು ವರ್ಷಗಳ ಪರ್ಯಂತ ಭಾರತದ ಅನೇಕ ಪ್ರಾಂತಗಳಲ್ಲಿ ಮತ್ತು ಇತರ ದೇಶ-ವಿದೇಶಗಳಲ್ಲಿ ಸಂಚರಿಸಿ ಅನೇಕ ಸಮಾರಂಭಗಳಲ್ಲಿ ಪಾಲ್ಗೊಂಡು ಅಲ್ಲಿ ಅವರು ನೀಡಿದ ವಿದ್ವತ್‌ಪೂರ್ಣ ಮತ್ತು ವಿಚಾರಪೂರ್ಣವಾದ ಧರ್ಮಸಂದೇಶಗಳು ಭಾವಚಿತ್ರಸಮೇತವಾಗಿ ವಿಭಿನ್ನ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತ ಬಂದಿವೆ. ಸಂಶೋದಕ ವಿದ್ವಾಂಸರಾದ ಬೆಂಗಳೂರಿನ ಡಾ. ಸಿ.ಯು. ಉಮಾದೇವಿಯವರು ಕಾಶೀ ಪೀಠದಲ್ಲಿ ಸಂಗ್ರಹಗೊಂಡ ಭಾವಚಿತ್ರಸಮೇತವಾದ ಆ ಪತ್ರಿಕೆಗಳನ್ನು ತರಿಸಿಕೊಂಡು ಅವುಗಳನ್ನು ಚೆನ್ನಾಗಿ ಅಭ್ಯಸಿಸಿ ಅತ್ಯಂತ ಸುಂದರವಾಗಿ ವಸ್ತುನಿಷ್ಠವಾಗಿ ಮತ್ತು ಯಾವುದೇ ಲೋಪದೋಷಗಳಿಲ್ಲದಂತೆ ಸಂಗ್ರಹಿಸಿ ಸಂಪಾದಿಸಿ ರಚಿಸಿ ಒಂದು ವಿಶಿಷ್ಟವಾದ ಹಾಗೂ ಮಹತ್ವಪೂರ್ಣವಾದ ವರ್ಣರಂಜಿತ ಕೃತಿಯನ್ನು ಸಾಹಿತ್ಯಲೋಕಕ್ಕೆ ನೀಡಿದ್ದಾರೆ. ಇಲ್ಲಿ ಅವರು ದಿನಾಂಕಗಳಿಗನುಗುಣವಾಗಿ ಮಾಹಿತಿಯನ್ನು ಜೋಡಿಸುವುದಕ್ಕೆ ಬದಲಾಗಿ ವಿಷಯ-ವಿಚಾರಗಳಿಗೆ ಆದ್ಯತೆಯನ್ನು ನೀಡಿ ಅದಕ್ಕನುಗುಣವಾಗಿ ಮಾಹಿತಿಗಳನ್ನು ವಿಂಗಡಿಸಿ ಮಂಡಿಸಿರುವುದು ಈ ಕೃತಿಯನ್ನು ಅವಲೋಕಿಸುವವರಿಗೆ ಹೆಚ್ಚು ಅನುಕೂಲಕರವಾಗಿದೆ. ಉಮಾದೇವಿಯವರ ಈ ಕಾರ್ಯ ಅತ್ಯಂತ ಶ್ಲಾಘನೀಯವಾದುದು. ಈ ಕಾರ್ಯಕ್ಕೆ ಶ್ರೀ ಸಿ. ಉಮಾಶಂಕರ್‌ರವರು ನೀಡಿದ ಸಹಕಾರವೂ ಉಲ್ಲೇಖನೀಯವಾದುದು.

ಬೆಂಗಳೂರು ಮಹಾನಗರದಲ್ಲಿ ಕಾಶೀ ಪೀಠದ ಕಾರ್ಯಕ್ರಮದ ಸಂದರ್ಭದಲ್ಲಿ ಮತ್ತು ಕಾಶೀ ಪೀಠದಿಂದ ಕರ್ನಾಟಕದ ಯಾವುದೇ ಭಾಗದಲ್ಲಿ ನಡೆದಿರುವ ವಿಚಾರ ಸಂಕಿರಣಗಳ ಸಂದರ್ಭದಲ್ಲಿ ಈ ಸತಿ-ಪತಿಗಳು ಮುಂಚೂಣಿಯಲ್ಲಿ ನಿಂತು ಸೇವೆ ಸಲ್ಲಿಸಿರುವುದು ಸ್ಮರಣಾರ್ಹವಾದುದು. ಈ ಗ್ರಂಥದ ಮುದ್ರಣ ದಾಸೋಹವನ್ನು ಮಾಡಿದ ಕರ್ನಾಟಕದ ವಿಶೇಷವಾಗಿ ವೀರಶೈವರ ಹೆಮ್ಮೆಯ ಶಿಕ್ಷಣ ಸಂಸ್ಥೆಯಾದ ಬಾಗಲಕೋಟೆಯ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ವೀರಣ್ಣ ಚರಂತಿಮಠರ ಹಾಗೂ ಗೌರವ ಕಾರ್ಯದರ್ಶಿಯಾದ ಮಹೇಶ ಅಥಣಿಯವರ ಮತ್ತು ಈ ಸಂಸ್ಥೆಯ ಅಧ್ಯಕ್ಷ ಉಪಾಧ್ಯಕ್ಷರ ಸೇವೆ ಅಭಿನಂದನಾರ್ಹವಾದುದು. ಈ ಕೃತಿಯ ಕೇಂದ್ರಬಿಂದುಗಳಾಧ ಶ್ರೀ ಕಾಶೀ ಜಗದ್ಗುರು ಮಹಾಸನ್ನಿಧಿಯವರಿಂದ ಹೀಗೆಯೇ ಸುದೀರ್ಘಕಾಲದವರೆಗೆ ಧರ್ಮಪ್ರಚಾರ-ಪ್ರಸಾರ ಕಾರ್ಯ ನಿರಂತರ ಜರುಗಿ ಜನರಿಗೆ ಉತ್ತಮ ಸಂದೇಶ ದೊರೆಯುವಂತಾಗಲಿ ಅದಕ್ಕಾಗಿ ಭಗವಂತನು ಮಹಾಸನ್ನಿಧಿಯವರಿಗೆ ಉತ್ತಮ ಆಯುಷ್ಯ-ಆರೋಗ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ. ಈ ಗ್ರಂಥದ ರಚನಾಕಾರರಿಗೆ, ಸಹಕಾರ ನೀಡಿದವರಿಗೆ ಮತ್ತು ದಾನಿಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರ ಹಾಗೂ ಭ್ರಮರಾಂಬಾ ಸಮೇತ ಮಲ್ಲಿಕಾರ್ಜುನ ಸ್ವಾಮಿಯ ಅನಂತ ಮಂಗಲಾಶೀರ್ವಾದಗಳು.

ಶ್ರೀಶೈಲ
೧೮-೧೨-೨೦೧೪

ಶುಭಕಾಂಕ್ಷೆಗಳೊಂದಿಗೆ
ಶ್ರೀಶೈಲ ಜಗದ್ಗುರುಗಳವರು

ಶ್ರೀಮದ್ ಕಾಶೀ ಜ್ಞಾನಾಸಿಂಹಾಸನಾಧೀಶ್ವರ
ಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ
ಭಗವತ್ಪಾದ ಮಹಾಸ್ವಾಮಿಗಳು
ಸುಕ್ಷೇತ್ರ ಕಾಶೀ



ಶುಭಾಶೀರ್ವಚನ

ಶ್ರೀಮತಿ ಡಾ. ಸಿ.ಯು. ಉಮಾದೇವಿ ಉಮಾಶಂಕರ್ ಅವರು ಸಂಗ್ರಹಿಸಿ ಸಂಪಾದಿಸಿದ 'ಆಶೀರ್ವಾದ' ಎಂಬ ಹೆಸರಿನ ವರ್ಣರಂಜಿತವಾದ ಗ್ರಂಥವನ್ನು ಅವಲೋಕಿಸಿ ಅತೀವ ಸಂತೋಷವಾಯಿತು. ಶ್ರೀ ಕಾಶೀ ಜಗದ್ಗುರುಗಳವರು ದಿ. ೧೭–೧೧–೧೯೮೯ ರಿಂದ ೧೧–೧೧–೨೦೧೪ರವರೆಗೆ ೨೫ ವರ್ಷಗಳಲ್ಲಿ ಧರ್ಮ ಪ್ರಚಾರಕ್ಕಾಗಿ ದೇಶ ವಿದೇಶಗಳಲ್ಲಿ ಸಂಚರಿಸಿ ಮನುಕುಲದ ಉದ್ಧಾರಕ್ಕಾಗಿ ಮಾಡಿದ ದಿವ್ಯ ಉಪದೇಶಗಳು ಚಿತ್ರ ಸಮೇತವಾಗಿ ಇಲ್ಲಿ ಸಂಗ್ರಹಿತವಾಗಿವೆ. ಶ್ರೀ ಕಾಶೀ ಜಗದ್ಗುರುಗಳ ಲೋಕಕಲ್ಯಾಣದ ಸಂದೇಶಗಳು ಆಗಾಗ ದಿನಪತ್ರಿಕೆಗಳಲ್ಲಿ ಚಿತ್ರಸಮೇತವಾಗಿ ಪ್ರಕಟವಾಗುತ್ತಿದ್ದವು. ಅವೆಲ್ಲವುಗಳನ್ನು ಶ್ರೀಪೀಠದ ಸೇವಾ ಸಿಬ್ಬಂದಿಯವರು ಸಂಗ್ರಹಿಸಿದ್ದರು. ಆ ಎಲ್ಲ ಸಂಗ್ರಹವನ್ನು ಅತ್ಯಂತ ಸಾವಧಾನದಿಂದ ಅವಲೋಕಿಸಿದ ಡಾ. ಉಮಾದೇವಿಯವರು ಈ ಸುಂದರವಾದ ಗ್ರಂಥವನ್ನು ಸಿದ್ಧಗೊಳಿಸಿದ್ದಾರೆ. ೨೫ ವರ್ಷದ ಈ ಸಂಗ್ರಹವನ್ನು ಕೇವಲ ೪ ತಿಂಗಳಲ್ಲಿ ಸಾವಧಾನದಿಂದ ಅಭ್ಯಾಸವನ್ನು ಮಾಡಿರುವ ಈ ಕಾರ್ಯ ಸರ್ವರೂ ಮೆಚ್ಚಿಕೊಳ್ಳುವಂಥಾದ್ದು. ಡಾ. ಉಮಾದೇವಿಯವರು ಈ ಗ್ರಂಥದಲ್ಲಿ ವಿವಿಧ ಅಧ್ಯಾಯಗಳನ್ನು ಮಾಡಿ ಒಂದು ವಿಷಯಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಒಂದೆಡೆ ತಂದಿರುವುದು ನಿಜವಾಗಿಯೂ ಮೆಚ್ಚಿಕೊಳ್ಳುವಂಥಾದ್ದು. ಒಂದು ಕಾರ್ಯವನ್ನು ಕೈಗೆತ್ತಿಕೊಂಡರೆ ಎಲ್ಲವನ್ನೂ ಮರೆತು ಅದರಲ್ಲಿಯೇ ಮುಳುಗಿ ತನ್ಮಯತೆಯಿಂದ ಕಾರ್ಯಮಾಡುವ ಸ್ವಭಾವ ಉಮಾದೇವಿಯವರದು. ಅಂತೆಯೇ ಅಲ್ಪಾವಧಿಯಲ್ಲಿಯೆ ಈ ಬೃಹತ್ ಕಾರ್ಯವನ್ನು ಮಾಡಿ ಯಶಸ್ವಿಯಾಗಿದ್ದಾರೆ. ಶ್ರೀ ಕಾಶೀ ಜಗದ್ಗುರುಗಳವರ ವ್ಯಕ್ತಿತ್ವ ಮತ್ತು ಕೃತಿತ್ವವನ್ನು ಎತ್ತಿ ತೋರಿಸುವ ವಸ್ತುನಿಷ್ಠವಾದ ನೈಜ ಕೃತಿಯಿದು. ಕಟ್ಟುಕಥೆಯಲ್ಲದ ಕಾಲ್ಪನಿಕತೆಗೆ ಅವಕಾಶಕೊಡದ ನೈಜ ಆಧಾರಗಳನ್ನು ಹೊಂದಿದ ೨೫ ವಸಂತಗಳ ಇತಿಹಾಸ ಗ್ರಂಥವಿದು. ಇಂತಹ ಸಾಹಸಕ್ಕೆ ಕೈಹಾಕಿ ಯಶಸ್ವಿಯಾದ ಡಾ. ಉಮಾದೇವಿಯವರಿಗೆ ಅನಂತ ಮಂಗಲಾಶೀರ್ವಾದಗಳು. ಇವರ ಈ ಕಾರ್ಯಕ್ಕೆ ಅನುಕೂಲತೆಯನ್ನು ಮಾಡಿಕೊಟ್ಟ ಅವರ ಪತಿ ಶ್ರೀ ಉಮಾಶಂಕರ ಅವರ ಸಹಕಾರ ಪ್ರಶಂಸಾರ್ಹವಾದುದು. ಈ ಸತಿ–ಪತಿಗಳು ಕಳೆದ ೧೫ ವರ್ಷಗಳಿಂದ ನಿಸ್ವಾರ್ಥವಾಗಿ ಶ್ರೀ ಕಾಶೀಪೀಠದ ಸೇವೆಯನ್ನು ಮಾಡುತ್ತ ಬಂದಿದ್ದಾರೆ. ಈ ಉಭಯೇತರಿಗೆ ಕಾಶೀ ವಿಶ್ವನಾಥ, ಮಾತೆ ಅನ್ನಪೂರ್ಣೆ ಹಾಗೂ ಶ್ರೀ ಜಗದ್ಗುರು ಪಂಚಾರ್ಯರು ಉತ್ತಮ ಆರೋಗ್ಯ ಮತ್ತು ಪೂರ್ಣ ಆಯುಷ್ಯವನ್ನು ದಯಪಾಲಿಸಲಿ. ಈ ಗ್ರಂಥದ ಸಂಪಾದನೆಯಲ್ಲಿ ಮಾರ್ಗದರ್ಶನ ಮಾಡಿದ ಡಾ. ಎಸ್. ವಿದ್ಯಾಶಂಕರ ಅವರಿಗೆ ಮತ್ತು ಅವರ ಚಿರಂಜೀವಿ ವಿ. ಕಾರ್ತಿಕ್ ಅವರಿಗೆ ಹಾಗೂ ಮುದ್ರಣ ಸಿಬ್ಬಂದಿಯವರಿಗೆ ಅನಂತ ಮಂಗಲಾಶೀರ್ವಾದಗಳು. ಬಹು ಬೆಲೆಬಾಳುವ ಈ ಗ್ರಂಥದ ಮುದ್ರಣ ಸೇವೆಯನ್ನು ಶ್ರದ್ಧೆಯಿಂದ ವಹಿಸಿಕೊಂಡ ಬಾಗಲಕೋಟೆಯ ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ವೀರಣ್ಣ ಚರಂತಿಮಠ, ಗೌರವಕಾರ್ಯದರ್ಶಿಯಾದ ಶ್ರೀ ಮಹೇಶ ಅಥಣಿ ಹಾಗೂ ಸಂಘದ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ಎಲ್ಲಾ ಪದಾಧಿಕಾರಿಗಳಿಗೆ ಶುಭಾಶೀರ್ವಾದಗಳು.

ಕಾಶೀ
೧೮–೧೨–೨೦೧೪

ಶ್ರೀ ಜಗದ್ಗುರುಗಳು
ತಮ್ಮ ವಿದ್ಯಾರ್ಥಿ ಜೀವನದಲ್ಲಿ
ಗಳಿಸಿದ
ಸ್ವರ್ಣಪದಕಗಳು

1973



ವೇದಾಂತ ವಿಭಾಗದ
ಎಂಟು ಶಾಖೆಗಳಲ್ಲೂ
ಪ್ರಥಮ ರ್‍ಯಾಂಕ್ ಗಳಿಸಿದ್ದಕ್ಕಾಗಿ
ಸಂಪೂರ್ಣಾನಂದ ಸಂಸ್ಕೃತ
ವಿಶ್ವವಿದ್ಯಾನಿಲಯದಿಂದ
ಸ್ವರ್ಣ ಪದಕ

1973



ವೇದಾಂತ ಆಚಾರ್ಯ
ಅಂತಿಮ ವರ್ಷದ ಪರೀಕ್ಷೆಯಲ್ಲಿ
ಶಾಂಕರ ವೇದಾಂತ ವಿಷಯದಲ್ಲಿ
ವಿಶ್ವವಿದ್ಯಾನಿಲಯಕ್ಕೆ
ಪ್ರಥಮ ರ್‍ಯಾಂಕ್
ಬಂದಾಗ ದೊರೆತ ಸ್ವರ್ಣ ಪದಕ



1973



ವೇದಾಂತ ವಿಭಾಗದ
ಎಂಟು ಶಾಖೆಗಳಲ್ಲೂ
ಪ್ರಥಮ ರ್‍ಯಾಂಕ್ ಬಂದಾಗ
ಅನ್ನಾದ ಪ್ರಸಾದ್ ಮುಖರ್ಜಿ
ಸ್ವರ್ಣ ಪದಕವನ್ನು ಗಳಿಸಿದರು.

1974



ಪಶ್ಚಿಮ ಬಂಗಾಳದ
ವಂಗೀಯ ಸಂಸ್ಕೃತ ಶಿಕ್ಷಾ ಪರಿಷತ್
ಕಲ್ಕತ್ತಾ ಸಂಸ್ಥೆಯಿಂದ ಸರ್ವದರ್ಶನ ತೀರ್ಥ
ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್
ಗಳಿಸಿದ್ದಕ್ಕಾಗಿ ಅಂದಿನ
ಪಶ್ಚಿಮ ಬಂಗಾಳದ ಗರ್ವನರ್ ಶ್ರೀ ನೂರುಲ್ಲಾ ಹಸನ್
ಅವರಿಂದ ಪಡೆದರು ಸ್ವರ್ಣಪದಕ



ನಲ್ನುಡಿ

ಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸನ್ನಿಧಿಯವರ ಪೀಠಾರೋಹಣ ರಜತಮಹೋತ್ಸವ ಸಂದರ್ಭದಲ್ಲಿ ಅವರ ಇಪ್ಪತ್ತೈದು ವರ್ಷಗಳ ಸಾಧನೆ–ಸಿದ್ಧಿ–ಉಪದೇಶಗಳ ಹಾಗೂ ಧರ್ಮ–ಸಾಹಿತ್ಯ–ಸಂಸ್ಕೃತಿಗಳ ಸಂವರ್ಧನೆಯಲ್ಲಿ ಅವರು ನಡೆಸಿದ ಮಹತ್ವದ ಅಭಿಯಾನವನ್ನು ನೆನಪು ಮಾಡಿಕೊಳ್ಳುವ ಒಂದು ವಿಶಿಷ್ಟ ಪ್ರಯತ್ನ **'ಆಶೀರ್ವಾದ'**ವೆನ್ನುವ ಈ ಬೃಹತ್ ಸಂಪುಟವಿದ್ದು. ಕಾಶೀ ಜಗದ್ಗುರುಗಳು ಪರಿವ್ರಾಜಕರಾಗಿ ಇಡೀ ಭಾರತದಲ್ಲೆಲ್ಲಾ ಸಂಚರಿಸಿ ವೀರಶೈವ ಧರ್ಮ–ತತ್ತ್ವ–ಸಿದ್ಧಾಂತ–ಆಚರಣೆಗಳಿಗೆ ಸಂಬಂಧಿಸಿದಂತೆ ಅವರು ಮಾಡಿದ ಉದ್ಬೋಧಕ ಉಪನ್ಯಾಸಗಳನ್ನು, ಚರ್ಚೆಗಳನ್ನು, ದೇಶದ ಜ್ವಲಂತ ಸಮಸ್ಯೆಗಳ ಬಗೆಗೆ ನಡೆಸಿದ ಚಿಂತನ–ಮಂಥನಗಳನ್ನು ಪತ್ರಿಕಾಮಾಧ್ಯಮದವರು ಲಿಖಿತ ದಾಖಲೆಯ ರೂಪದಲ್ಲಿ ಉಳಿಸಿ ಉಪಕರಿಸಿರುವರು. ಕಾಶೀ ಜಗದ್ಗುರುಗಳು ತಮ್ಮ ಬದುಕಿನ ಸಾರವತ್ತಾದ ಈ ೨೫ ವರ್ಷಗಳಲ್ಲಿ ತಮ್ಮನ್ನು ಲೋಕಾರ್ಪಣೆ ಮಾಡಿಕೊಂಡ ಒಂದು ಧೀಮಂತ ಚೇತನದ ನುಡಿ ಚಿತ್ರ ಪತ್ರಿಕಾ ಮಾಧ್ಯಮದವರಿಂದಾಗಿ ಈಗ ಲೋಕಕ್ಕೆ ತಿಳಿಯುವಂತಾಗಿದೆ. ಶ್ರೀಗಳವರು ಮಾಡಿದ ಸಾಮಾಜಿಕ–ಧಾರ್ಮಿಕ ಸಂಚಲನದ ವಿವರಗಳು ಅವರ ಪ್ರಯೋಗಶೀಲತೆ ಹಾಗೂ ಸಾಮಾಜಿಕ ಕಳಕಳಿಯಲ್ಲಿ ಅಪೂರ್ವವಾಗಿ ದಾಖಲಾಗಿವೆ. ಶ್ರೀಗಳವರು ಪಿಎಚ್.ಡಿ. ಡಿ.ಲಿಟ್ ಮೊದಲಾದ ಉಪಾಧಿಗಳನ್ನು ಹೊಂದಿರುವ, ತಾವು ಕಲಿತದ್ದನ್ನು ಆತ್ಮಸಾತ್ ಮಾಡಿಕೊಂಡಿರುವ ಅಪರೂಪದ ವಿದ್ವಾಂಸರು; ಕಾಶೀ ಜ್ಞಾನಸಿಂಹಾಸನದ ಪೀಠಾಧಿಪತಿಗಳು; ನಿಜವಾದ ಅರ್ಥದಲ್ಲಿ ಶ್ರೇಷ್ಠ ಜ್ಞಾನಿಗಳು. ಅವರಲ್ಲಿನ ಶಾಸ್ತ್ರಜ್ಞಾನ, ತತ್ತ್ವಜ್ಞಾನಗಳ ಅಭಿರತಿ ಅಪರೂಪವಾದದ್ದು. ಅವರ ಜ್ಞಾನ ಪಾಂಡಿತ್ಯದಲ್ಲಿ ಅವಗತವಾಗುವುದಿಲ್ಲ. ಅವರು ತಮ್ಮ ಸತತ ಅಭ್ಯಾಸದಿಂದ ಪಡೆದ ಜ್ಞಾನವನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಹೇಳುವಲ್ಲಿ ಅವರ ವಾಗ್ವೈಖರಿ ಅವರು ಮಾಡುವ ಉಪನ್ಯಾಸಗಳಲ್ಲಿ ಸರಳಾತಿಸರಳವಾಗಿಬಿಡುತ್ತದೆ, ದ್ರಾಕ್ಷಾಪಾಕವಾಗಿಬಿಡುತ್ತದೆ, ಶ್ರೋತೃಗಳಿಗೆ ಆಪ್ಯಾಯನರಾಗಿಬಿಡುತ್ತದೆ. ಅಷ್ಟರಮಟ್ಟಿಗೆ ಅದು ಅವರಿಗೆ ಸಾಧಿತವಾಗಿರುವ ಅಭಿಜಾತಕಲೆಯಾಗಿಬಿಟ್ಟಿದೆ. ಬೇರೆ ಮಠಾಧೀಶರಿಂದ ಇವರು ಭಿನ್ನರಾಗಿ ನಿಲ್ಲುವುದು, ವಿಶಿಷ್ಟರಾಗುವುದು ಈ ಕಾರಣಕ್ಕಾಗಿಯೇ.

ಡಾ.ಸಿ.ಯು . ಉಮಾದೇವಿಯವರು 'ಆಶೀರ್ವಾದ' ಗ್ರಂಥದಲ್ಲಿ ಜಗದ್ಗುರುಗಳ ೨೫ ವರ್ಷಗಳ ಸಾರ್ಥಕ ಜೀವನ ಪರಿಚಯವನ್ನು ಲಿಖಿತರೂಪದಲ್ಲಿ ದಾಖಲಾಗಿದ್ದ ಪತ್ರಿಕಾವರದಿಗಳನ್ನು ಆಧರಿಸಿ ಶ್ರೀಗಳವರ ಸಾಹಿತ್ಯಕ, ಧಾರ್ಮಿಕ, ಸಾಮಾಜಿಕ ಹಾಗೂ ತಾತ್ತ್ವಿಕ ಚಿಂತನೆಗಳನ್ನು ಕ್ರೋಡೀಕರಿಸಿ ಅವುಗಳಿಗೊಂದು ಸಾವಯವ ಸಂಬಂಧ ಕಲ್ಪಿಸುವ ಅಪೂರ್ವಶ್ರಮಸಾಧ್ಯವಾದ ಒಂದು ಅನನ್ಯ ಸಾಧನೆ ಮಾಡಿರುವರು. ಇದು ಅರ್ಪಣಾಮನೋಭಾವದಿಂದ ಮಾತ್ರ ಸಾಧ್ಯವಾಗುವಂತಹ ಕೆಲಸ. ಬೌದ್ಧಿಕಶ್ರಮ, ತಾಳ್ಮೆ, ಹಿಡಿದ ಕೆಲಸವನ್ನು ಕೊನೆಮುಟ್ಟಿಸುವ ಸಾತ್ವಿಕ ಹಠ ಅಥವಾ ಜಿಗುಟು ಸ್ವಭಾವ ಇಂತಹ ಕೆಲಸಗಳಿಗೆ ಅಗತ್ಯವಾಗಿ ಬೇಕು. ಕಾಶೀ ಜಗದ್ಗುರುಗಳ ಅವಿರತ ಸಾಮಾಜಿಕ ಸೇವೆ, ಅರ್ಪಣಾ ಮನೋಭಾವ, ವೀರಶೈವ ಧರ್ಮದ ತಾತ್ತ್ವಿಕ ತಳಹದಿಯನ್ನು ತಿಳಿಯಪಡಿಸುವ ಕಳಕಳಿ ಡಾ. ಉಮಾದೇವಿಯವರಿಗೆ ಬಹಳ ಮೆಚ್ಚುಗೆಯಾಗಿರುವ ಕಾರಣ ಪೂಜ್ಯರನ್ನು ಪ್ರತ್ಯಕ್ಷ ಶಿವಸ್ವರೂಪಿಯಾಗಿ ಕಂಡ ಆ ಆರಾಧನಾಭಾವ ಹಲವು ಸಂದರ್ಭಗಳಲ್ಲಿ ಪತ್ರಿಕಾ ಹೇಳಿಕೆಗೆ ವ್ಯಾಖ್ಯಾನರೂಪದಲ್ಲಿ ಬಂದಿರುವ ಅವರ ಮಾತುಗಳಲ್ಲಿ ಪ್ರಕಟವಾಗಿದೆ. **'ಆಶೀರ್ವಾದ'**ವು ನಿನ್ನೆ ಮತ್ತು ಇಂದಿಗೆ ಕೊಂಡಿರೂಪದಲ್ಲಿ, ಸಾಕ್ಷೀಪ್ರಜ್ಞೆಯ ರೂಪದಲ್ಲಿ ಇರುವ ಕಾಶೀಶ್ರೀಗಳ ಉಪನ್ಯಾಸ ಸಂಚಯವನ್ನು, ಪತ್ರಿಕಾವರದಿಗಳನ್ನು ಅವಿರುವ ರೀತಿಯಲ್ಲಿಯೇ ಕೊಡುವುದು ಮತ್ತು ಅಂದಂದಿನ ಪತ್ರಿಕಾವರದಿಯನ್ನಾಧರಿಸಿ ಸಂಗ್ರಹರೂಪದಲ್ಲಿ–ಸಾರರೂಪದಲ್ಲಿ–ಗುರುಗಳ ಉಪನ್ಯಾಸದ ಮುಖ್ಯ ತಿರುಳನ್ನು ತಮ್ಮ ಮಾತುಗಳಲ್ಲಿ ವಿವರಿಸುವುದು ಶ್ರೀಮತಿ ಡಾ. ಉಮಾದೇವಿಯವರ ಮುಖ್ಯ ಉದ್ದೇಶ. ಇವು ಸಚಿತ್ರರೂಪದ ಗುರುಗಳ ಪರ್ಯಟನದ ದಾಖಲೆಗಳಾಗಿವೆ. ಹೀಗಾಗಿ ಇಲ್ಲಿ ಗುರುಗಳ ಉಪನ್ಯಾಸದಲ್ಲಿ ಮಿಂಚಿದ ಚಿಂತನೆಗಳನ್ನು ಒಂದೆಡೆ ಸಂಗ್ರಹಿಸುವ ವಿಶಿಷ್ಟ ಪ್ರಯತ್ನವಾಗಿ ನನ್ನ ಮೊದಲ ಓದಿಗೇ ಕಂಡುಬಂದಿತು. ಅವರ ಉಪನ್ಯಾಸಗಳ ವಸ್ತು ಸಿದ್ಧಾಂತ ಶಿಖಾಮಣಿಯ ತಾತ್ತ್ವಿಕ ಜಿಜ್ಞಾಸೆ ನಡೆಸುವುದಾಗಿದೆ. ಅದರಲ್ಲಿನ ಲೋಕೋತ್ತರವಾದ ಹಾಗೂ ಮನುಷ್ಯ ಜೀವನದ ಉತ್ಕೀರ್ಣಕ್ಕೆ ಸಂಬಂಧಿಸಿದ ಉದ್ಬೋಧೆಗಳನ್ನು ಸರಳವಾಗಿ ತಿಳಿಸಿ ಮನದಟ್ಟು ಮಾಡುವ ಪ್ರಾಮಾಣಿಕ ಪ್ರಯತ್ನವಾಗಿ ಕಂಡುಬರುತ್ತದೆ. ಅವರ ಉಪನ್ಯಾಸದ ಎರಡನೆಯ ಮಜಲು ಸಿದ್ಧಾಂತ ಶಿಖಾಮಣಿ ಹಾಗೂ ಭಗವದ್ಗೀತೆಗಳ ತುಲನಾತ್ಮಕ ಆಧ್ಯಾತ್ಮಿಕ ವಿವೇಚನೆ ವಿಶ್ಲೇಷಣೆ ಸ್ವರೂಪದ್ದಾಗಿರುತ್ತದೆ.

ಅವರ ಉಪನ್ಯಾಸಗಳ ಮೂರನೆಯ ಮಜಲು ವೀರಶೈವಧರ್ಮದ ಸಮನ್ವಯಕಾರರಾಗಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ, ಸಿದ್ಧಾಂತ ಶಿಖಾಮಣಿ ಮತ್ತು ಶೂನ್ಯಸಂಪಾದನೆಗಳಲ್ಲಿನ ಸಮಾನ ತಾತ್ತ್ವಿಕಾಂಶಗಳನ್ನು ವಿಶದಪಡಿಸುವುದಾಗಿದೆ. ಇಲ್ಲೆಲ್ಲ ಅವರ ಸಮಚಿತ್ತದ ಆಲೋಚನೆ ಮೆಚ್ಚುವಂತೆ ಬಂದಿದೆ. ಕಾಶೀಶ್ರೀಗಳ ಮನಸ್ಸಿನಲ್ಲಿ ಸಿದ್ಧಾಂತ ಶಿಖಾಮಣಿಯನ್ನು ವ್ಯಾಪಕವಾಗಿ ದೇಶ–ವಿದೇಶಗಳಲ್ಲಿ ಪ್ರಚುರಪಡಿಸುವ ಮಹದಾಕಾಂಕ್ಷೆಯೂ ಇದೆ. 'ಸಿದ್ಧಾಂತ ಶಿಖಾಮಣಿ'ಯಲ್ಲಿನ ತಾತ್ತ್ವಿಕ ಚಿಂತನೆ ಅವರ ಉಪನ್ಯಾಸಗಳಲ್ಲಿ ಹಾಸುಹೊಕ್ಕಾಗಿಬಿಟ್ಟಿರುವಂತಿದೆ. ಅದರ ರಚನಾಸ್ವರೂಪ ಹಾಗೂ ಅದರಲ್ಲಿನ ಮಾನವ ಬದುಕಿನ ಉದಾತ್ತೀಕರಣಕ್ಕೆ ಅಗತ್ಯವಾದ ಚಿಂತನೆ ಹರಳುಗೊಂಡಿರುವುದನ್ನು ಅವರು ನಿರ್ಭಾವುಕರಾಗಿ ವಿಶ್ಲೇಷಿಸುವರು. ಸಿದ್ಧಾಂತ ಶಿಖಾಮಣಿ ಅವರ ದೇಹದಲ್ಲಿನ ರಕ್ತ ಮಾಂಸಗಳಲ್ಲಿ ಅವಿಭಾಜ್ಯವಾಗಿಬಿಟ್ಟಿವೆ. ಅವರು ಸುಷುಪ್ತಾವಸ್ಥೆಯಲ್ಲೂ ಸಿದ್ಧಾಂತ ಶಿಖಾಮಣಿಯ ಶ್ಲೋಕಗಳ ಬಗೆಗೇ ಧ್ಯಾನಿಸುವರು. ದೇಶೀಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಿದ್ಧಾಂತ ಶಿಖಾಮಣಿಯನ್ನು ನಿಯೋಜನೆ (project) ಮಾಡುವ ಕನಸನ್ನು ಅವರು ರಷ್ಯನ್ ಭಾಷೆಗೆ ಸಿದ್ಧಾಂತ ಶಿಖಾಮಣಿ ಪಾರಾಯಣಗ್ರಂಥವನ್ನು ಅನುವಾದ ಮಾಡಿಸುವ, ಭಾರತದ ಮುಖ್ಯ ಭಾಷೆಗಳಿಗೆ ಅದನ್ನು ಭಾಷಾಂತರಿಸುವ ಪ್ರಯತ್ನದಲ್ಲಿ ಗುರುತಿಸಬಹುದಾಗಿದೆ. ಭಾರತ ದೇಶದ ಎಲ್ಲೆಡೆ ಈ ಪಾರಾಯಣಗ್ರಂಥ ಜನತೆಯ ನಿತ್ಯ ಓದಿಗೆ ಲಭ್ಯವಾಗಬೇಕೆನ್ನುವ ದೂರದೃಷ್ಟಿ ಈ ಅನುವಾದ ಯೋಜನೆಯಲ್ಲಿ ಪ್ರಮುಖವಾಗಿದೆ. ಅವರು ತಮ್ಮನ್ನಷ್ಟೇ ಉಪನ್ಯಾಸ ಹಾಗೂ ಅಡ್ಡಪಲ್ಲಕ್ಕಿ ಉತ್ಸವಗಳಲ್ಲಿ ನಿಯೋಜಿಸಿಕೊಳ್ಳುವುದಿಲ್ಲ, ಉಳಿದ ನಾಲ್ವರು ಆಚಾರ್ಯರುಗಳನ್ನೂ ಸಮಾನ ಗೌರವದಿಂದ ಪಾಲುಗೊಳ್ಳಲು ಅವಕಾಶಮಾಡಿಕೊಡುವರು. ಪಂಚಾಚಾರ್ಯರ ಯುಗಮಾನೋತ್ಸವದ ನೆಪದಲ್ಲಿ ಅವರೆಲ್ಲರನ್ನೂ ಒಂದೇ ವೇದಿಕೆಯಲ್ಲಿ ಸೇರುವಂತೆ ಭಾವಮೈತ್ರಿಯನ್ನು ಬೆಸೆಯಿಸಿ ತಮ್ಮಲ್ಲಿನ ಒಗ್ಗಟ್ಟನ್ನು ಸ್ಪಷ್ಟಪಡಿಸುವರು. ಗುರು–ವಿರಕ್ತರ ನಡುವೆ ಅಭಿನಿವೇಶ ಮೂಡಿಸುವಲ್ಲಿ ಕಾಶೀಶ್ರೀಗಳು ಮುಕ್ತಮನಸ್ಸಿನ ಸಹಕಾರ ಕೊಡುವರು. ತಮ್ಮ ನಡುವೆ ಸಾಮಾಜಿಕ ನೆಲೆಯಲ್ಲಿ ಒಡಕುದನಿ ಕೇಳದಂತೆ ಎಚ್ಚರವಹಿಸುವರು; ತಮ್ಮ ಉಪನ್ಯಾಸಗಳಲ್ಲಿ ಸಮನ್ವಯ ಸಿದ್ಧಾಂತವನ್ನು ಅನುಷ್ಠಾನಕ್ಕೆ ತರುವರು; ತಮ್ಮ ಮಾತಿನಲ್ಲಿ ಬಸವಾದಿ ಶಿವಶರಣರ ಬಗೆಗಿನ ಅಂತಃಕರಣದ ತುಂಬು ಗೌರವವನ್ನು ಪ್ರಕಟಪಡಿಸುವರು. ತಾತ್ತ್ವಿಕ ವಿವೇಚನೆ ನಡೆಸುವಾಗ ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿಯರ ವಚನಗಳನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳುವರು. ಬಾಳೆಹೊನ್ನೂರಿನಲ್ಲಿ ಗುರು–ವಿರಕ್ತರನ್ನು ಒಂದುಗೂಡಿಸುವ ಪ್ರಯತ್ನ ಮುರಿದುಬಿದ್ದರೂ ಕಾಶೀ ಶ್ರೀಗಳು ವಿರಕ್ತಪೀಠದ ಗುರುಗಳ ಜೊತೆ ವೇದಿಕೆ ಹಂಚಿಕೊಳ್ಳುವ ಉದಾತ್ತತೆಯನ್ನು, ಸಮನ್ವಯಮಾರ್ಗವನ್ನು ತಮ್ಮ ಆಚಾರ–ವಿಚಾರ–ವರ್ತನೆಗಳಲ್ಲಿ ಅರ್ಥಪೂರ್ಣವಾಗಿ ಅನುಷ್ಠಾನಕ್ಕೆ ತಂದಿರುವರು.

ಕಾಶೀಶ್ರೀಗಳ ವೈಚಾರಿಕತೆ ಹಾಗೂ ಸತ್ಯವನ್ನು ನೇರವಾಗಿ ಹೇಳುವ ನಿರ್ಭೀತ ಮನೋಭಾವವನ್ನು ರೂಢಿಸಿಕೊಂಡಿರುವರು. ಇದು ಅವರ ಪತ್ರಿಕಾ ಮಾಧ್ಯಮದವರ ಜೊತೆ ನಡೆಸಿದ ಮಾತುಕತೆ/ಸಂದರ್ಶನಗಳಲ್ಲಿ ಸ್ಪಷ್ಟಗೊಂಡಿದೆ. ವಿಜ್ಞಾನವು ಇಡೀ ವಿಶ್ವವನ್ನು ಒಂದು ಗ್ರಾಮವನ್ನಾಗಿಸಿದರೆ–ಆಧ್ಯಾತ್ಮವು ಸಂಪೂರ್ಣ ವಿಶ್ವವನ್ನು ಒಂದು ಕುಟುಂಬವನ್ನಾಗಿಸುತ್ತದೆ. ಶಿವಾಗಮಗಳು, ಶರಣರ ವಚನ ಸಾಹಿತ್ಯ ಹಾಗೂ ಸಿದ್ಧಾಂತ ಶಿಖಾಮಣಿ ಈ ಮೂರು ವೀರಶೈವ ಧರ್ಮದ ಪ್ರಸ್ಥಾನತ್ರಯಗಳು. ಗೋಹತ್ಯೆ ನಿಷೇಧ ಕಾಯ್ದೆಯನ್ನು ರಾಷ್ಟ್ರೀಯ ಕಾರ್ಯವೆಂದು ಬೆಂಬಲಿಸಿ ಎಂದು ರಾಜಕಾರಣಿಗೆ ಅವರು ಕಿವಿಮಾತು ಹೇಳುವರು. ಭ್ರಷ್ಟಾಚಾರ ನಿರ್ಮೂಲನ ಚಳವಳಿಯ ಪ್ರಸ್ತುತ ದಿನಮಾನಗಳಲ್ಲಿ ಅವರು ಅಣ್ಣಾ ಹಜಾರೆಯವರನ್ನು ಬೆಂಬಲಿಸುವರು. ಜನಗಣತಿಯಲ್ಲಿ ಒಳಪಂಗಡ ಬರೆಸದಿರಿ ವೀರಶೈವ/ಲಿಂಗಾಯತ ಎಂದೇ ಹೇಳಿರಿ ಎಂದು ಅಖಿಲಭಾರತ ವೀರಶೈವ ಮಹಾಸಭಾದ ನಿರ್ಣಯಕ್ಕೆ ತಮ್ಮ ಸಹಮತ ವ್ಯಕ್ತಪಡಿಸುವರು. ಇಷ್ಟಲಿಂಗಧಾರಣೆಗೆ ಜಾತಿಯ ಅಡೆತಡೆ ಬರಬಾರದೆಂದು ಯೋಗ್ಯರೆನ್ನಿಸಿದವರೆಲ್ಲರಿಗೆ ಅವರು ಲಿಂಗಧಾರಣೆ ಮಾಡುವರು. ರಷ್ಯಾದ ಮಿಹಾಯಿಲ್, ಯೋಗಪಟು ಡ್ಯಾನಿಷ್, ಯುಲಿಯಾ, ಅಲೆಕ್ಸಾಂಡ್ರಾ, ಸ್ಲಾವಾ–ಹೀಗೆ ನೂರಾರು ಮಂದಿಗೆ ಲಿಂಗದೀಕ್ಷೆ ನೀಡಿ ಅವರಿಗೆ ಪೂಜಾವಿಧಾನವನ್ನು ತಿಳಿಸಿಹೇಳುವರು. ಲಿಂಗಧಾರಣೆಯಾದ ಸಂದರ್ಭದಲ್ಲಿ ಅವರಿಗೆ ಪುನರ್ನಾಮಕರಣಮಾಡಿ ಶಿವಮಯವಾದ ಹೊಸ ಬದುಕಿಗೆ ಅವರು ತೆರೆದುಕೊಳ್ಳುವಂತೆ ಮಾಡುವರು. ರಾಜದಂಡದ ಭೀತಿ ಇಲ್ಲದಿರುವುದೇ ಭಾರತದ ಹಿನ್ನೆಡೆಗೆ ಕಾರಣವೆಂದು ವಿಚಾರಮಾಡುವರು. ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳು ಒದಗಿಸುವ ಆಮಿಷಗಳಿಗೆ ಒಳಗಾಗಬೇಡಿ ಯೋಗ್ಯರನ್ನು ಆರಿಸಿ ಪ್ರಜಾಪ್ರಭುತ್ವಕ್ಕೆ ಮನ್ನಣೆ ಕೊಡಿ ಎಂದು ಮತದಾರರಲ್ಲಿ ವಿನಂತಿ ಮಾಡುವರು. ಆರ್ಥಿಕ ಆಧಾರದ ಮೇಲೆ ಮೀಸಲಾತಿಯನ್ನು ಜಾರಿಗೊಳಿಸಬೇಕು. ಎಲ್ಲಾ ಪಂಗಡಗಳಲ್ಲಿಯೂ ಹಲವರು ಆರ್ಥಿಕವಾಗಿ ಹಿಂದುಳಿದಿದ್ದಾರೆ. ಇಂಥವರಿಗೂ ಆರ್ಥಿಕ ಮೀಸಲಾತಿ ಬಂದರೆ ಪ್ರಗತಿ ಹೊಂದಲು ಸಾಧ್ಯವೆನ್ನುವರು. ವೀರಶೈವ ಪಂಚಮಸಾಲಿ ಪಂಗಡದ ಪ್ರತ್ಯೇಕ ಮನೋಭಾವನೆ ಸಲ್ಲದು ಎಂದಿರುವರು. ಮಠಾಧಿಪತಿಗಳಲ್ಲಿ ಸೈದ್ಧಾಂತಿಕವಾದ ಅನೇಕ ಅಭಿಪ್ರಾಯಗಳಿದ್ದರೂ ಸಮಗ್ರ ಸಮಾಜದ ಹಿತದೃಷ್ಟಿಯಿಂದ ನಾವು ನಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಂದುಗೂಡಿ ಸಮಾಜಕ್ಕೆ ಮಾರ್ಗದರ್ಶನ ಮಾಡಲು ಸಿದ್ಧರಾಗಿರಬೇಕು ಎಂದು ಕಳಕಳಿಯ ಮನವಿ ಮಾಡುವರು. ಬಸವಣ್ಣ ಬೋಧಿಸಿದ್ದು ವೀರಶೈವ ಧರ್ಮವೇ ಹೊರತು ಬಸವಧರ್ಮವಲ್ಲ ಎಂದು ಕಠಿಣವಾಗಿ ತಮ್ಮ ನಿಲವನ್ನು ಸ್ಪಷ್ಟಪಡಿಸುವರು. ಯಜ್ಞವನ್ನು ವಿರೋಧಿಸುವವರನ್ನು ದೇವರಿಗೆ ನೀವು ತುಪ್ಪದ ದೀಪ ಹಚ್ಚುವುದಿಲ್ಲವೆ? ಅದೂ ಒಂದು ರೀತಿಯಲ್ಲಿ ತುಪ್ಪದ ಅಪವ್ಯಯವಲ್ಲವೆ? ಎಂದು ಪ್ರಶ್ನಿಸುವರು. ವಿವಾಹ ಸಂದರ್ಭದಲ್ಲಿ ವಧೂವರರಿಗೆ ಅಕ್ಷತೆ ಹಾಕುವುದು ತಪ್ಪಲ್ಲ ಎನ್ನುವರು. ಮಡೆಸ್ನಾನವನ್ನು ವಿರೋಧಿಸುವವರನ್ನು ಪ್ರಶ್ನಿಸುತ್ತ, ಅದು ಅವರವರ ನಂಬಿಕೆಗೆ ಸಂಬಂಧಪಟ್ಟದ್ದು, ನೀವು ವಿರೋಧಿಸುವ ಬದಲು

ವೈಚಾರಿಕವಾಗಿ ಹಾಗೆ ಆಚರಿಸುವವರನ್ನು ಅದರ ಕೆಡುಕುಗಳ ಬಗೆಗೆ ಅವರಿಗೆ ಮನವರಿಕೆ ಮಾಡಿ ಮಾನಸಿಕವಾಗಿ ಪರಿವರ್ತಿಸಿ ಎಂದು ಬುದ್ಧಿವಾದ ಹೇಳುವರು. ಅಡ್ಡಪಲ್ಲಕ್ಕಿ ಉತ್ಸವ ಭಕ್ತರ ಭಾವನಾತ್ಮಕ ಪ್ರಪಂಚಕ್ಕೆ ಸಂಬಂಧಿಸಿದುದು. ಅದು ಅವರವರ ಆಚಾರ-ವಿಚಾರಗಳಿಗೆ ಸಂಬಂಧಿಸಿದುದು. ಅದನ್ನು ಖಂಡಿಸುವ ಹಕ್ಕು ನಮ್ಮದಾಗಿರಬಹುದು, ಆದರೆ ಅದು ವ್ಯಕ್ತಿಯ ವೈಯಕ್ತಿಕ ನೆಲೆಗೆ ಸಂಬಂಧಿಸಿದುದು. ಮಹಿಳೆಯರ ಸಬಲೀಕರಣವಾಗದೆ ಸಮಾಜಕ್ಕೆ ಭವಿಷ್ಯವಿಲ್ಲ; ಎಲ್ಲಿ ಮಹಿಳೆಯು ಗೌರವಿಸಲ್ಪಡುವಳೋ ಅಲ್ಲಿ ದೇವತೆಗಳು ಸಂತೃಪ್ತರಾಗುವರು, ಸ್ವರ್ಗ ಅಲ್ಲಿ ನೆಲೆಸುತ್ತದೆ. ಶಿವನು ಸ್ತ್ರೀಸಮಾನತೆಯ ಹರಿಕಾರ-ಹೀಗೆ ಶ್ರೀಗಳವರ ಪ್ರಗತಿಪರ ನಿಲವು ಅವರ ಸಾಮಾಜಿಕ ಕಳಕಳಿಗೆ ಪೂರಕವಾಗಿವೆ.

ಶ್ರೀಗಳು ಭಕ್ತರ ವೈಯಕ್ತಿಕ ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವವುಳ್ಳವರು, ಸಾಧ್ಯವಾದಷ್ಟು ಅವರ ಸಮಸ್ಯೆಗಳಿಗೆ ತಮ್ಮಿಂದಾದಷ್ಟು ನೆರವು, ಪರಿಹಾರ ಕಾಣಿಸುವವರು. ಪ್ರತಿಭೆಯನ್ನು ಗೌರವಿಸುವ, ಮನ್ನಿಸುವ ಅವರ ಅಂತಃಕರಣ ಪ್ರತಿಭೆಯಿದ್ದೂ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಪದವಿ ಪಡೆಯಲಾಗದ ಭಾಗ್ಯಹೀನರ ಪಾಲಿಗೆ ಅವರು ಆಶಾದೀಪವಾಗಿರುವರು. ತಾವು ಕಾಶೀಪೀಠದ ಪಟ್ಟಾಧಿಕಾರ ಸ್ವೀಕರಿಸಿದ ಹೊಸತರಲ್ಲಿಯೇ ಪ್ರತಿಭಾವಂತರನ್ನು ಗುರುತಿಸಿ ಅವರ ಓದು ಮುಗಿಯುವವರೆವಿಗೂ ತಿಂಗಳಿಗೆ ಒಂದುಸಾವಿರ ರೂಪಾಯಿಯ ನೆರವು ನೀಡುವ ಯೋಜನೆಯನ್ನು ಜಾರಿಗೆ ತಂದರು. ಇದರ ಫಲಾನುಭವಿಗಳು ನೂರಾರಲ್ಲ, ಸಹಸ್ರಾರು ಮಂದಿ ವಿದ್ಯಾರ್ಥಿಗಳು. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಅವರು ಯಾವ ರೀತಿಯ ತ್ಯಾಗಕ್ಕಾದರೂ ಸಿದ್ಧರು. ಭಕ್ತಾದಿಗಳಲ್ಲಿ ತಮ್ಮ ಯೋಜನೆಗೆ ನೆರವು ನೀಡಿ ಎಂದು ವಿನಂತಿಸಿದಾಗ, ಹಣ ಹರಿದುಬಂದ ರೀತಿಯನ್ನು ಗಮನಿಸಿದರೆ, ಭಕ್ತಾದಿಗಳು ಒಳ್ಳೆಯ ಕಾರ್ಯಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವರೆಂಬುದು ಇದರಿಂದ ದೃಢವಾಗುತ್ತದೆ.

'ಆಶೀರ್ವಾದ' ಹೊರತರುವ ಸಂದರ್ಭದಲ್ಲಿ ಜಗದ್ಗುರುಗಳು ಸ್ವಲ್ಪ ಹಿಂಜರಿದರು. ಪ್ರಚಾರ ಬೇಡ, ಇದಕ್ಕಾಗಿ ಭಕ್ತರ ಹಣ ವಿನಿಯೋಗವಾಗುವುದು ಬೇಡ, ಬೇರೆ ಸತ್ಕಾರ್ಯಗಳಿಗೆ ಆ ಹಣ ವಿನಿಯೋಗಿಸೋಣವೆಂದು ಬಿಗಿ ಧೋರಣೆ ಅನುಸರಿಸಿದರು. ನಾನು 'ಆಶೀರ್ವಾದ' ಕೃತಿಯನ್ನು ಹೊರತರುವ ಉದ್ದೇಶಕ್ಕೆ ಹಿನ್ನೆಲೆಯಾಗಿರುವ ನಮ್ಮ ಪ್ರಾಮಾಣಿಕತೆಯನ್ನು, ಶ್ರಮದಧಾರೆಯನ್ನು ವಿವರಿಸಿ ಹೇಳಿ ಅವರನ್ನು ಒಪ್ಪಿಸಲು ಸಾಕಷ್ಟು ಪ್ರಯತ್ನಪಡಬೇಕಾಯಿತು. ಇದು ಒಂದು ಮಾದರಿ ಕಾರ್ಯ. ನಿಮ್ಮ ಪಟ್ಟಾಧಿಕಾರದ ೨೫ ವರ್ಷಗಳ ನಿರಂತರ ಶ್ರಮವನ್ನು ಭಕ್ತಜನರಿಗೆ ತಿಳಿಯಪಡಿಸುವ ಉದ್ದೇಶವೆಂದು ಸ್ಪಷ್ಟಪಡಿಸಬೇಕಾಯಿತು. ಆದರೂ ಅವರು ಅರೆಮನಸ್ಸಿನಿಂದ ಒಪ್ಪಿ, ಕಡಿಮೆ ಸಂಖ್ಯೆಯ ಮುದ್ರಣಪ್ರತಿ ಮಾಡಿಸಿ; ಮುದ್ರಣವೆಚ್ಚ ದಾನಿಗಳಿಗೆ ಭಾರವಾಗಬಾರದು ಎಂದು ನಿಬಂಧನೆಗಳನ್ನು ಒಡ್ಡಿದರು. ಅವರು ಒಪ್ಪಿಗೆ ಕೊಟ್ಟಿದ್ದು ವಿಶೇಷವಾಗಿ ಡಾ. ಉಮಾದೇವಿಯವರ ಆತಂಕ ಹಾಗೂ ಈ ಪುಸ್ತಕವನ್ನು ಸರ್ವಾಂಗ ಸುಂದರವಾಗಿ ಹೊರತರಬೇಕೆನ್ನುವ ನನ್ನ ಆಶಯ ಎರಡೂ ಸಮಾಧಾನದ ನಿಟ್ಟುಸಿರುಬಿಡುವಂತೆ ಮಾಡಿತು.

ಇದು ಕಾಶೀಶ್ರೀಗಳು ನಡೆದುಬಂದ ದಾರಿಯ ಹೆಜ್ಜೆ ಗುರುತುಗಳು; ಒಂದು ರೀತಿಯಲ್ಲಿ ಇದು ಅವರ ಧಾರ್ಮಿಕ ಸಾಮಾಜಿಕ ಸಂಘಟನೆಯ ಸ್ವರೂಪವನ್ನು ತಿಳಿಸುವ ತೋರುಬೆರಳು; ಅವರ ದೀರ್ಘಕಾಲದ ಅಧ್ಯಯನ-ಚಿಂತನ ಮಂಥನಗಳಿಂದ ದೀಪ್ತವಾದ ವಿಚಾರ ಸ್ಫುರಣಗಳು. ಡಾ.ಸಿ.ಯು. ಉಮಾದೇವಿಯವರ ಹಲವು ತಿಂಗಳ ಹಾಗೂ ಅಪಾರವಾದ ಶ್ರಮ ಹಾಗೂ ಅವರು ಕಂಡ ಕನಸು ಪುಸ್ತಕ ಬೆಳಕು ಕಾಣುವ ಮೂಲಕ ಸಾರ್ಥಕ್ಯ ಪಡೆದುಕೊಂಡಿವೆ. ಈ ಮಹತ್ವದ ಕಾರ್ಯಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

– ಎಸ್. ವಿದ್ಯಾಶಂಕರ

ಒಳಗೆ ಸಾಗುವ ಮುನ್ನ



ಜನವರಿ ೨೦೧೪ರಲ್ಲಿ ಕಾಶೀ ಜಗದ್ಗುರುಗಳು ಧನುರ್ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನದ ಸಲುವಾಗಿ ಆಗಮಿಸಿದ್ದರು. ಆ ಸಮಯದಲ್ಲಿ ನನ್ನನ್ನು ಕರೆದು ನಿನಗೊಂದು ಕೆಲಸ ಕೊಡುತ್ತೇವೆ ಎಂದರು. ಏನೆಂದು ಕೇಳಿದಾಗ ೨೫ ವರ್ಷಗಳಿಂದ ನಡೆಸಿದ ಕಾರ್ಯಕ್ರಮಗಳು–ದಿನ ಪತ್ರಿಕೆಯಲ್ಲಿ ಬಂದಿವೆ. ಅವೆಲ್ಲವನ್ನು file ಮಾಡಿದೆ. ಅದನ್ನು ಕಳುಹಿಸಿಕೊಡುವುದಾಗಿಯೂ, ಅದನ್ನು ಏನು ಮಾಡುವಿರೋ ನೀವೇ ಯೋಚಿಸಿ ಎಂದು ಹೇಳಿದರು. ೫೦–೬೦ ಫೈಲ್‌ಗಳು ನನ್ನ ಕೈ ಸೇರಿದ್ದು ಏಪ್ರಿಲ್ ತಿಂಗಳಲ್ಲಿ. ಜಗದ್ಗುರುಗಳ ಕಾರ್ಯಕ್ರಮ ಪ್ರಕಟಗೊಂಡಿರುವ ಪತ್ರಿಕೆಯ ಎಲ್ಲಾ ಪುಟಗಳನ್ನು ಸಂಗ್ರಹಿಸಿದ್ದರು. ಮೊಟ್ಟ ಮೊದಲಿಗೆ ನನ್ನ ಸಹೋದರಿ ಗಾಯತ್ರಿ ಶಶಿಧರ್ ಜೊತೆ ಸೇರಿ ಪತ್ರಿಕೆಯಲ್ಲಿ ಜಗದ್ಗುರುಗಳ ವಿಚಾರ ಇರುವುದನ್ನು ಯಾವ ಪತ್ರಿಕೆ, ಯಾವ ದಿನಾಂಕ ಎಂದು ಗುರುತು ಹಾಕಿ ಅದನ್ನು ಇಟ್ಟುಕೊಂಡು ಉಳಿದವನ್ನು ಬೇರೆ ಇಟ್ಟೆವು. ಈ ಕೆಲಸಕ್ಕೆ ಮೇ–ಜೂನ್ ಎರಡು ತಿಂಗಳು ಮುಗಿದವು. ಇದು ಮೊದಲ ಹಂತ.

ಒಂದೊಂದು ಫೈಲ್‌ನಲ್ಲೂ ಏನೇನು ವಿಚಾರಗಳಿವೆ ಎಂದು ಬರೆದುಕೊಂಡು ಅದಕ್ಕೆ ಪುಟಸಂಖ್ಯೆ ಕೊಟ್ಟುಕೊಂಡೆ. ಹೀಗೆ ವಿಷಯಸೂಚಿ ತಯಾರಾಯಿತು. ಇದಾದ ನಂತರ ೧೦–೧೨ ದಿನಗಳ ಕಾಲ (ಜುಲೈನಲ್ಲಿ) ವಿಷಯ ಸೂಚಿಗಳನ್ನು ಪದೇ ಪದೇ ನೋಡಿದ ಕಾರಣ, ಸಮಾನ ವಿಷಯಗಳನ್ನು ಒಂದೆಡೆ ಸೇರಿಸುವ ಆಲೋಚನೆ ಬಂತು. ಹೀಗೆ ಮಾಡುವಾಗ ಬೇರೆ ಬೇರೆ ಅಧ್ಯಾಯಗಳಾಗಿ ವಿಂಗಡಿಸಬಹುದೆಂಬ ಸುಳಿವು ಸಿಕ್ಕ ಕೂಡಲೆ ಮೊದಲಿಗೆ ೮–೧೦ ಅಧ್ಯಾಯಗಳಾದವು. ಅವೆಲ್ಲವನ್ನು ಜಗದ್ಗುರುಗಳಿಗೆ ದೂರವಾಣಿ ಮೂಲಕ ಓದಿ ಹೇಳಿದಾಗ–ಅಧ್ಯಾಯಗಳನ್ನು ಮಾಡಿಕೊಂಡಿದ್ದು 'ಬಹಳ ಛಲೋ' ಆಯಿತೆಂದರು. ಅಧ್ಯಾಯಗಳು ಬರಹರೂಪದಲ್ಲಿ ಮೂಡಿ ಬರುವವರೆವಿಗೆ–ದಟ್ಟವಾದ ಅರಣ್ಯದ ನಡುವೆ ಕಣ್ಣುಕಟ್ಟಿ ಬಿಟ್ಟಂತಾಗಿತ್ತು. ಒಂದೊಂದು ಅಧ್ಯಾಯವನ್ನು ಆರಂಭಿಸುವ ಮುನ್ನ ಅನೇಕ ಪ್ರಶ್ನೆಗಳೇಳುತ್ತಿದ್ದವು. ಆಗ ಜಗದ್ಗುರುಗಳನ್ನು ದೂರವಾಣಿ ಮೂಲಕ ಸಂಪರ್ಕಿಸುತ್ತಿದ್ದೆ. ರಜತ ಮಹೋತ್ಸವದ ಬಿಡುವಿಲ್ಲದ ಕಾರ್ಯಗಳ ನಡುವೆಯೂ ಗುರುಗಳು ಎಲ್ಲಾ ಪ್ರಶ್ನೆಗಳಿಗೂ ಸಮಾಧಾನದಿಂದ ಉತ್ತರಿಸುತ್ತಿದ್ದರು. ಉತ್ತರ ಸಿಕ್ಕ ನಂತರ ಹೊಸ ಅಧ್ಯಾಯ ಆರಂಭಿಸುತ್ತಿದ್ದೆ. ದಿನ ಪತ್ರಿಕೆಗಳಲ್ಲಿದ್ದ ವಿಚಾರಗಳನ್ನು ಓದುತ್ತಾ ಹೋದಂತೆಲ್ಲಾ ಜಗದ್ಗುರುಗಳ–ವೇದಾಗಮಾನುಸಾರ ಪೂಜಾವಿಧಿಗಳನ್ನು ಮಾಡುತ್ತಿದ್ದುದು ತಿಳಿದು ಬಂತಲ್ಲದೆ–ಇದಲ್ಲದೆ–ಜಗದ್ಗುರುಗಳಾಗಿ ಪರಿಸರಕ್ಕೆ, ಸಮಾಜಕ್ಕೆ, ದೇಶಕ್ಕೆ, ಜ್ಞಾನಾರ್ಜನೆಗೆ ಇನ್ನೂ ಮುಂತಾದ ಸಂದರ್ಭಗಳಲ್ಲಿ ಯಾವ ಯಾವ ರೀತಿಯಲ್ಲಿ ಸೇವೆ ಮಾಡಬಹುದೆಂದು ತೋರಿಸಿಕೊಟ್ಟು–ಇಂದು ಹಾಗೂ ಮುಂದೆ ಬರುವ ಎಲ್ಲಾ ಸ್ವಾಮೀಜಿಗಳಿಗೆ ಮಾದರಿಯಾಗಿದ್ದಾರೆಂದರೆ ತಪ್ಪಾಗಲಾರದು. ಜ್ಞಾನದ ಮೇರುವೇ ಆಗಿರುವ ಜಗದ್ಗುರುಗಳಿಗೆ ಅವರ ಅಪಾರ ನೆನಪಿನ ಶಕ್ತಿಗೆ ಎಂಥವರು ಮಣಿಯಲೇ ಬೇಕಾಗಿದೆ.

ಕಳೆದ ನಾಲ್ಕು ತಿಂಗಳಲ್ಲಿ ಶ್ರೀಪೀಠದಲ್ಲಿ ೪ ತಿಂಗಳ ಕಾಲ ಹಮ್ಮಿಕೊಳ್ಳಲಾಗಿದ್ದ ಪೀಠಾರೋಹಣದ ರಜತ ಮಹೋತ್ಸವ ಸಮಾರಂಭಕ್ಕೆ ದೇಶ ವಿದೇಶಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ದಿನನಿತ್ಯ ಬರುತ್ತಿದ್ದರು. ಕೆಲವು ವಿಶೇಷ ದಿನಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಇರುತ್ತಿದ್ದರು. ಜಗದ್ಗುರುಗಳಿರುವ ಕೊಠಡಿಯಲ್ಲಿ ಜನಸಾಗರ ತುಂಬಿ ತುಳುಕುತ್ತಿತ್ತು. ಇಷ್ಟೆಲ್ಲದರ ನಡುವೆಯೂ ನನ್ನ ಪ್ರಶ್ನೆಗಳಿಗೆ ಉತ್ತರಿಸಿದ್ದನ್ನು ಎಷ್ಟು ಕೃತಜ್ಞತೆಯಿಂದ ನೆನೆದರೂ ಸಾಲದು. ಗ್ರಂಥದ ಕಾರ್ಯ ಸಂಪೂರ್ಣವಾಗಿ ಮುಗಿಯುವ ವೇಳೆಗೆ ಕಾಶೀ ಜಗದ್ಗುರುಗಳು–ನನ್ನ ಮಟ್ಟಿಗೆ ಸಾಕ್ಷಾತ್ ಪರಶಿವನ ಸ್ವರೂಪವೇ ಆಗಿಬಿಟ್ಟಿದ್ದರು. ಅವರು ನೀಡಿರುವ ಪ್ರತಿಯೊಂದು ಆಶೀರ್ವಚನವೂ ಅನುಭಾವದಿಂದ ಹೊರಹೊಮ್ಮಿರುವ ವಿಚಾರಧಾರೆಗಳಾಗಿವೆ. ಸಂಪೂರ್ಣವಾಗಿ ಈ ಬೃಹತ್ ಗ್ರಂಥವನ್ನು ಓದಿ ಮುಗಿಸುವ ಯಾರಿಗಾದರೂ ಇದು ಅನುಭವಕ್ಕೆ ಬರುತ್ತದೆ.

ಸೆಪ್ಟೆಂಬರ್‌ನಲ್ಲಿ ಕಾಶಿಗೆ ಹೋದಾಗ ಅನೇಕ ಫೋಟೋಗಳು ನನಗೆ ಬೇಕಿದ್ದವು. ತಮ್ಮಲ್ಲಿದ್ದ ಎಲ್ಲಾ Albumಗಳನ್ನೂ ಬಿಡಿಬಿಡಿಯಾಗಿದ್ದ ನೂರಾರು ಫೋಟೋಗಳನ್ನು ತಾವೇ ಸ್ವತಃ ಹುಡುಕಿ ತೆಗೆದುಕೊಟ್ಟರು. ಅಲ್ಲದೆ ಅವರ ಬಳಿ ಇದ್ದ pendriveನಲ್ಲಿ ವಿದೇಶಗಳ ಫೋಟೋಗಳಿದ್ದವು. ಎರಡು pendriveಗಳನ್ನು ನನಗೆ ಕೊಟ್ಟರು. ಫೋಟೋಗಳಲ್ಲಿ ನನಗೆ ಬೇಕಿದ್ದ ನೂರಾರು ಫೋಟೋಗಳನ್ನು ಆರಿಸಿಕೊಂಡಾಗ ಜಗದ್ಗುರುಗಳು ಏನ್ ಮಾಡ್ತೀರಾ ಇಷ್ಟೊಂದು ಫೋಟೋ ತೆಗೆದುಕೊಂಡು ಎಂದು ಕೇಳಿದರಲ್ಲದೆ ಪುಟಗಳ ಸಂಖ್ಯೆ ಹೆಚ್ಚಾಗದಂತೆ ನೋಡಿಕೊಳ್ಳಿ ಎಂದೂ ಎಚ್ಚರಿಕೆ ನೀಡಿದ್ದರು. ನನಗೆ ಅಚ್ಚರಿಯಾಗಿತ್ತು, ಏಕೆಂದರೆ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥದ ಮುದ್ರಣದಲ್ಲಿ ಜಗದ್ಗುರುಗಳ ಅತೀ ದುಬಾರಿಯ ಬೈಬಲ್‌ಗೆ ಬಳಸಿರುವ ಕಾಗದವನ್ನು ಆಯ್ಕೆ ಮಾಡಿದ್ದರು. ತಮ್ಮ ಬದುಕಿನ ಮಹತ್ವಪೂರ್ಣ ಸಾಧನೆಯ ಮಾರ್ಗದರ್ಶನ ಗ್ರಂಥಕ್ಕಾಗಿ ಹೆಚ್ಚು ಖರ್ಚು ಮಾಡುವುದು ಗುರುಗಳಿಗೆ ಇಷ್ಟವಿರಲಿಲ್ಲ. ನನಗೋ ಇಷ್ಟು ಸಾಧನೆಗೈದಿರುವ ಮಹಾತ್ಮರ ಬೃಹತ್ ಗ್ರಂಥ ಅತ್ಯಂತ ಸುಂದರವಾಗಿ ಮೂಡಿ ಬರಬೇಕೆಂಬ ಆಸೆ. ಕೊನೆಗೆ ಮಠದ ಗ್ರಂಥಾಲಯದ ಮುಖ್ಯಸ್ಥರಾದ ಡಾ॥ ಕೆಂಡದಮಠ್, ನನ್ನ ತಂಗಿ ಮತ್ತು ನನ್ನ ಎಲ್ಲ ಒತ್ತಾಯಕ್ಕೆ ಮಣಿದು ಒಪ್ಪಿಕೊಂಡಿದ್ದರಿಂದ ಇಂದು ಈ ಗ್ರಂಥ ನಾನು ಬಯಸಿದ ರೀತಿಯಲ್ಲಿಯೇ ಸುಂದರವಾಗಿ ಮೂಡಿಬಂದಿದೆ.

ಇಂತಹ ಒಂದು ಪುಣ್ಯಕಾರ್ಯವನ್ನು ನನ್ನಿಂದ ಆಗುವಂತೆ ಮಾಡಿದ ಸಾಕ್ಷಾತ್ ಶಿವಸ್ವರೂಪಿ ಜಗದ್ಗುರುಗಳ ಪವಿತ್ರ ಪಾದಗಳಿಗೆ ಭಕ್ತಿಯಿಂದ ನಮಿಸುವೆ.

ಆರಂಭದಲ್ಲಿ ಎಲ್ಲಾ ಫೈಲ್‌ಗಳನ್ನು ವಿಂಗಡಣೆ ಮಾಡಲು ಉತ್ಸಾಹದಿಂದ ನೆರವು ನೀಡಿದ ನನ್ನ ತಂಗಿ ಶ್ರೀಮತಿ ಗಾಯತ್ರಿ ಶಶಿಧರ್ ಅವರನ್ನು ಇಂದು ನೆನೆಯಲೇಬೇಕಾಗಿದೆ.

ಕಾಶಿಗೆ ಹೋದಾಗ pendriveನಲ್ಲಿದ್ದ photoಗಳನ್ನು ಕಂಪ್ಯೂಟರ್‌ನಲ್ಲಿ ತೋರಿಸಿ ಎಲ್ಲೆಲ್ಲಿಯದೆಂದು ಗುರುತು ಹಾಕಿಕೊಳ್ಳಲು ಗಂಟೆಗಟ್ಟಲೆ–ತಾಳ್ಮೆಯಿಂದ ಸಹಕರಿಸಿದ ಶ್ರೀಮಠದ ಗುರುಕುಲದ ವಿದ್ಯಾರ್ಥಿಯಾದ ಶ್ರೀ ವಿರುಪಾಕ್ಷದೇವರ ನೆರವನ್ನು ಮರೆಯುವಂತಿಲ್ಲ.

ಪೂಜ್ಯ ಕಾಶೀ ಜಗದ್ಗುರುಗಳು–ಹಿರಿಯ ವಿದ್ವಾಂಸರಾದ ಡಾ. ಎಸ್. ವಿದ್ಯಾಶಂಕರ ಅವರಿಗೆ ಹಸ್ತಪ್ರತಿ ಕೊಟ್ಟು ಅವರ ಅಭಿಪ್ರಾಯ ತಿಳಿದು ಆನಂತರ ಮುದ್ರಿಸುವ ವ್ಯವಸ್ಥೆ ಮಾಡಿ–ಎಂದು ಹೇಳಿದ್ದರು. ಆ ಪ್ರಕಾರ ನಾನು ಅವರಿಗೆ ಹಸ್ತಪ್ರತಿ ಕೊಟ್ಟು ಕೃತಿಯನ್ನು ಹೊರತರುವ ಉದ್ದೇಶ, ಸ್ವರೂಪ ತಿಳಿಸಿ ಅದರ ವಿನ್ಯಾಸ ಹೇಗಿರಬೇಕು ಎಂದು ಚರ್ಚಿಸಿದೆನು. ಅದಕ್ಕೆ ಅವರು ನಾನೀಗ ವೀರಶೈವ ಸಾಹಿತ್ಯ ಚರಿತ್ರೆಯ ಯೋಜನೆಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿರುವೆನು. ಆದರೂ ಗುರುಗಳ ಅಪ್ಪಣೆಯಾಗಿರುವುದರಿಂದ ನನ್ನ ಕೆಲಸ ಬದಿಗೊತ್ತಿ ನನ್ನಿಂದಾಗುವಷ್ಟು ಸಹಾಯ ಮಾಡುವೆನು. ನನ್ನ ಕಿರಿಯ ಮಗ ಚಿರಂಜೀವಿ ವಿ. ಕಾರ್ತಿಕ್ ಇಂತಹ ಸಚಿತ್ರ ಪುಸ್ತಕಗಳ ಮುದ್ರಣ ವಿನ್ಯಾಸ ಚೆನ್ನಾಗಿ ತಿಳಿದಿದೆ. ಅವನು ಈಗಾಗಲೇ ವಿಜಯಪುರದ ಮಹಿಳಾ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಈ ತರಹದ ಪುಸ್ತಕಗಳನ್ನು ಮುದ್ರಿಸಿಕೊಟ್ಟಿರುವನು. ಅವನಿಗೆ ಸಂಪೂರ್ಣ ಜವಾಬ್ದಾರಿ ಒಪ್ಪಿಸಿಬಿಡಿ, ಅವನು ಸಕಾಲಕ್ಕೆ ಪುಸ್ತಕ ಸಿದ್ಧಪಡಿಸಿಕೊಡುವನು ಎಂದು ಹೇಳಿದರು. ಅವರು 'ಆಶೀರ್ವಾದ' ಕೃತಿಯ ಕಚ್ಚಾಪ್ರತಿಯನ್ನು ಡಿಟಿಪಿ ಮಾಡಲು ಕೊಟ್ಟು, ಕರಡು ತಿದ್ದುವ ಸಂದರ್ಭದಲ್ಲಿ ಸಾಧ್ಯವಾದಷ್ಟು ಪರಿಷ್ಕರಣೆ ಮಾಡಿದರು; ಒಂದು ತಿಂಗಳು ಈ ಕಾರ್ಯಕ್ಕೆ ಮೀಸಲಿಟ್ಟರು. ಚಿರಂಜೀವಿ ವಿ. ಕಾರ್ತಿಕ್ ವಿನ್ಯಾಸಕಾರ ಶ್ರೀ ಕೃಷ್ಣಮೂರ್ತಿಯವರ ಜೊತೆ ಚರ್ಚಿಸಿ ಅದರ ಸ್ವರೂಪ ಹೇಗಿರಬೇಕೆಂಬುದರ ಬಗೆಗೆ ಸಲಹೆ ಸೂಚನೆ ಕೊಟ್ಟು ನವೆಂಬರ್ ೭ರಂದು ಪುಸ್ತಕದ ಎರಡು ಪ್ರತಿಗಳನ್ನು ಸಿದ್ಧಪಡಿಸಿ ನನ್ನ ಕೈಗಿತ್ತರು. ನಾನು ಅವನ್ನು ನನ್ನ ಬಂಧುಗಳ ಜೊತೆ ಕಾಶಿಗೆ ಕಳುಹಿಸಿದೆ. ಪ್ರಧಾನಿಯವರು ವಾರಣಾಸಿಗೆ ಭೇಟಿಕೊಡುವರೆನ್ನುವ ಸುದ್ದಿ ಹರಡಿದ್ದಿತು. ಅವರು ಶ್ರೀಮಠಕ್ಕೆ ಭೇಟಿಕೊಟ್ಟರೆ ಆ ಸಂದರ್ಭದಲ್ಲಿ ಅವರಿಂದ 'ಆಶೀರ್ವಾದ' ಅನಾವರಣವಾಗಲಿ ಎನ್ನುವ ದೂರದ ಆಸೆ ನನ್ನದು. ಆದರೆ ಪೂರ್ವನಿಯೋಜಿತ ಕಾರ್ಯಕ್ರಮಗಳಿಂದಾಗಿ ಪ್ರಧಾನಿಯವರಿಂದ 'ಆಶೀರ್ವಾದ' ಗ್ರಂಥ ಬಿಡುಗಡೆಯಾಗಲಿಲ್ಲ. ಅದು ೧೧.೧೧.೨೦೧೪ರಂದು ಪಂಜಾಬ್‌ನ ರಾಜ್ಯಪಾಲರಾದ ಶ್ರೀ ಶಿವರಾಜ ಪಾಟೀಲರಿಂದ ಲೋಕಾರ್ಪಣೆಗೊಂಡಿತು. ಪುಸ್ತಕವನ್ನು ಆಕರ್ಷಕವಾಗಿ ಹೊರತರಲು ಪೂರ್ಣ ಸಹಕಾರ ನೀಡಿದ ಡಾ.ಎಸ್. ವಿದ್ಯಾಶಂಕರ ಅವರಿಗೆ; ಮುದ್ರಣ ವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತು ಉತ್ಸಾಹದಿಂದ ದುಡಿದ ಚಿ. ವಿ. ಕಾರ್ತಿಕ್ ಅವರಿಗೆ ಹೃತ್ಪೂರ್ವಕ ವಂದನೆಗಳು.

ಸೊಲ್ಲಾಪುರದ ಫೋಟೋಗ್ರಾಫರ್ ಶ್ರೀ ಜಗದೀಶ ಹಿರೇಮಠ ಅವರು ನಾನು ದೂರವಾಣಿ ಮೂಲಕ ಯಾವ ಯಾವ ಫೋಟೋಗಳು ಬೇಕೆನ್ನುತ್ತಿದ್ದೆನೋ ಅವೆಲ್ಲವನ್ನು ಹುಡುಕಿ ಮೇಲ್ ಮಾಡುತ್ತಿದ್ದರು. ಅವರಿಗೂ ಧನ್ಯವಾದಗಳು.

ಇಂತಹ ಒಂದು ದೊಡ್ಡ ಕಾರ್ಯ ನನ್ನಿಂದ ಆಗುಮಾಡಿದ ಕಾಶೀ ಜಗದ್ಗುರುಗಳಿಗೆ ನಾನು ಮತ್ತೊಮ್ಮೆ ಭಕ್ತಿಯಿಂದ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಈ ಬೃಹತ್ ಗ್ರಂಥ ಸುಂದರವಾಗಿ ಆರ್ಟ್‌ಪೇಪರ್‌ನಲ್ಲಿ ಮುದ್ರಿಸಿ ಹೊರತರಬೇಕೆಂಬ ಬಹುದಿನಗಳ ನನ್ನ ಕನಸನ್ನು ನನಸಾಗಿಸಿದವರು ಅಧ್ಯಕ್ಷರಾದ ಶ್ರೀ ವೀರಣ್ಣ ಚರಂತಿಮಠ ಅವರು. ಅವರಿಗೂ ಬಾಗಲಕೋಟೆಯ ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಎಲ್ಲಾ ಪದಾಧಿಕಾರಿಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕಳೆದ ಆರು ತಿಂಗಳಿಂದ ಎಲ್ಲಾ ರೀತಿಯಲ್ಲಿ ಸಹಕರಿಸುತ್ತಾ ಕೆಲವೊಮ್ಮೆ ಮಾರ್ಗದರ್ಶನ ಮಾಡುತ್ತಾ ಬಂದ ನನ್ನ ಪತಿ ಶ್ರೀ ಉಮಾಶಂಕರ್ ಅವರ ನೆರವಿನಿಂದ ಈ ಕಾರ್ಯ ನನ್ನಿಂದ ಸಾಧ್ಯವಾಯಿತೆಂದರೆ ತಪ್ಪಾಗಲಾರದು.

೧೨–೧೨–೨೦೧೪ — ಡಾ. ಉಮಾದೇವಿ ಸಿ.ಯು.



೨೦೧೪ ಜನವರಿ ೧೨ನೇ ತಾರೀಖಿನಂದು ಜಗದ್ಗುರುಗಳು ಡಾ॥ ಸಿ.ಯು. ಉಮಾದೇವಿ ಮತ್ತು ಶ್ರೀ ಸಿ. ಉಮಾಶಂಕರ್ ಇಬ್ಬರಿಗೂ ಈ ಗ್ರಂಥವನ್ನು ಸಂಪಾದನೆ ಮಾಡಲು ಆದೇಶ ನೀಡಿ ಆಶೀರ್ವದಿಸಿದಾಗ ತೆಗೆದ ಭಾವಚಿತ್ರ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ (ರಿ.), ಜಂಗಮವಾಡಿ ಮಠ, ವಾರಣಾಸಿ, (ಉ.ಪ್ರ.) – 221 001, **ಶಾಖಾ : ಬೆಂಗಳೂರು**


ಕಳೆದ 16 ವರ್ಷಗಳಿಂದ ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನದ ಗೌ॥ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲು ಸಹಕರಿಸಿದ ಪೋಷಕ ಮಂಡಲಿ ಹಾಗೂ ಸಂಪಾದಕ ಮಂಡಲಿಯಲ್ಲಿನ ಎಲ್ಲಾ ಸದಸ್ಯರನ್ನು ಇಂದು ಕೃತಜ್ಞತೆಯಿಂದ ನೆನೆಯುವಂತಾಗಿದೆ. ಅವರೆಲ್ಲರ ಸಹಕಾರದಿಂದಾಗಿ ಇಂದು ಕಾಶೀ ಜಗದ್ಗುರುಗಳಂತಹ ಮಹಾತ್ಮರ ಜೀವನ ಸಾಧನೆಯನ್ನು ಸಂಗ್ರಹಿಸಿ ಸಂಪಾದಿಸುವ ಸೌಭಾಗ್ಯ ನನಗೊದಗಿ ಬಂತು. ಇಂದು ಈ ಸದಸ್ಯರಲ್ಲಿ ಅನೇಕರು ನಮ್ಮನ್ನಗಲಿದ್ದಾರೆ. ಅವರನ್ನು ಹಾಗೂ ಇಂದಿನ ಎಲ್ಲಾ ಸದಸ್ಯ, ಸದಸ್ಯೆಯರನ್ನು ಧನ್ಯತೆಯಿಂದ ನೆನಪಿಸಿಕೊಳ್ಳುತ್ತೇನೆ.

– ಡಾ. ಸಿ.ಯು. ಉಮಾದೇವಿ


ಪೋಷಕ ಮಂಡಲಿ ಸದಸ್ಯರು



ಲಿಂ॥ ಶ್ರೀ ಬಿ.ಆರ್.ವಿ. ಗೌಡ
ಮಾಜಿ ಅಧ್ಯಕ್ಷರು



ಶ್ರೀ ಕೆ.ಎನ್. ಜಯಲಿಂಗಪ್ಪ
ಅಧ್ಯಕ್ಷರು



ಶ್ರೀ ಆರ್.ಬಿ.ಎಸ್. ಚನ್ನಬಸವರಾಧ್ಯ
ಉಪಾಧ್ಯಕ್ಷರು



ಶ್ರೀ ಕೆ.ಜಿ. ಶ್ರೀಧರ್
ಉಪಾಧ್ಯಕ್ಷರು



ಡಾ॥ ಸಿ.ಯು. ಉಮಾದೇವಿ ಉಮಾಶಂಕರ್
ಗೌರವ ಕಾರ್ಯದರ್ಶಿ



ಶ್ರೀ ಸಿ. ಉಮಾಶಂಕರ್
ಸಹ ಕಾರ್ಯದರ್ಶಿ



ಶ್ರೀ ಬಿ.ಎಸ್. ವಾಗೀಶ್ ಪ್ರಸಾದ್
ಖಜಾಂಚಿ



ಶ್ರೀ ಎಂ. ಮಾದಯ್ಯ
ಪೋಷಕರು



ಲಿಂ॥ ಶ್ರೀ ಬಿ.ಎಸ್ ಶಿವಪ್ಪಶೆಟ್ಟಿ
ಮಾಜಿ ಅಧ್ಯಕ್ಷರು



ಶ್ರೀ ಎಸ್.ಎಸ್. ವಿನೋದ್



ಶ್ರೀ ಎಂ.ಎಸ್. ಆರಾಧ್ಯ



ಶ್ರೀ ಬಿ.ವಿ. ಅಜಯ್‌ಗೌಡ



ಶ್ರೀ ಸಿ. ವಿನಾಯಕ ಪತ್ರೆ



ಶ್ರೀ ಎಂ.ಕೆ. ರಾಜಮಾನೆ



ಶ್ರೀ ಟಿ.ಜಿ. ಮೃತ್ಯುಂಜಯ





ಲಿಂ॥ ಶ್ರೀ. ಆರ್.ವಿ. ವಿಜಯಕುಮಾರ್

ಪೋಷಕ ಮಂಡಲಿ ಸದಸ್ಯರು


ಶ್ರೀ ಸಿ. ವೀರಭದ್ರಯ್ಯ


ಶ್ರೀ ಜಗದೀಶಾರಾಧ್ಯ, ತುಮಕೂರು


ಶ್ರೀ ಯಜಮಾನ್ ಶ್ರೀಕಂಠಪ್ಪ


ಶ್ರೀ ಎನ್.ಆರ್. ಪಂಡಿತಾರಾಧ್ಯ


ಶ್ರೀ ಸಿ. ನಟರಾಜ್


ಶ್ರೀಮತಿ ಸ್ವರ್ಣಲತಾ ಚನ್ನಬಸವಾರಾಧ್ಯ



ಶ್ರೀಮತಿ ಶಾಂತಾ ವಿ. ಗೌಡ್


ಶ್ರೀಮತಿ ಗಾಯತ್ರಿ ಶಶಿಧರ್


ಶ್ರೀಮತಿ ಕಟ್ಟೆಬಸಮ್ಮ ಪಂಡಿತಾರಾಧ್ಯ



ಲಿ॥ ಶ್ರೀಮತಿ ಕಮಲಮ್ಮ ಶಿವಪ್ಪಶೆಟ್ಟಿ


ಸಂಪಾದಕ ಮಂಡಲಿ ಸದಸ್ಯರು


ಡಾ॥ ಎಂ. ಶಿವಕುಮಾರಸ್ವಾಮಿ
ಅಧ್ಯಕ್ಷರು


ಡಾ॥ ಮಹಂತಲಿಂಗ ಶಿವಾಚಾರ್ಯ ಸ್ವಾಮೀಜಿ
ವಿಭೂತಿಪುರ


ಷ॥ ಬ್ರ॥ ಮಲೆಯ ಶಾಂತಮುನಿಸ್ವಾಮಿ
ಶಿವಾಚಾರ್ಯ ಸ್ವಾಮೀಜಿ


ಲಿ॥ ಶ್ರೀ ಎನ್. ಬಸವಾರಾಧ್ಯ



ಶ್ರೀ ಷಣ್ಮುಖಯ್ಯ ಅಕ್ಕೂರಮಠ


ಲಿ॥ ವಿದ್ವಾನ್ ಜಿ.ವಿ. ಶಿವಸ್ವಾಮಿ


ಡಾ॥ ಸಿ. ಶಿವಕುಮಾರಸ್ವಾಮಿ


ಡಾ॥ ಎಂ.ಜಿ. ನಾಗರಾಜ್


ಶ್ರೀ ವಿದ್ವಾನ್ ಕೋ.ರಂ. ಬಸವರಾಜ್



ಶ್ರೀ ಎಸ್. ವಿದ್ಯಾಶಂಕರ




ಕೆ.ವಿ.ವಿ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ವೀರಶೈವ ಅನುಸಂಧಾನ ಆರಂಭವಾದಾಗಿನಿಂದಲೂ – ಅದರ ಕಾರ್ಯಕ್ರಮಗಳನ್ನು ನಡೆಸಲು ಪ್ರತೀ ವರ್ಷ ಉಚಿತವಾಗಿ ಶ್ರೀ ಜಗಜ್ಯೋತಿ ಬಸವೇಶ್ವರ ಕಲ್ಯಾಣ ಕೇಂದ್ರವನ್ನು ಕೊಡುತ್ತಾ ಬಂದಿದ್ದಾರೆ. ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಪ ರಿ ವಿ ಡಿ

ಜಂಗಮವಾಡಿ ಮಠ




ಜಂಗಮವಾಡಿ ಮಠದ ಮಹಾದ್ವಾರ




ಕಾಶೀ ಜಗದ್ಗುರುಗಳ
ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು
ಪೀಠಾಧಿಕಾರ ವಹಿಸಿಕೊಳ್ಳುವ ಮೊದಲು
ಇದ್ದ ಜಂಗಮವಾಡಿ ಮಹಾ ಮಠದ ಮಹಾದ್ವಾರ




ಪುಣೆಯ ಬಾಬಾ ಕಲ್ಯಾಣಿಯವರು ನಿರ್ಮಿಸಿರುವ
ಧರ್ಮರತ್ನ ಕಲ್ಯಾಣಿ ಮಹಾದ್ವಾರ






ಪ್ರವೇಶ ದ್ವಾರದಿಂದ ಕಾಣಬರುವ ಒಳಾಂಗಣ ಆವರಣ



ರುದ್ರಾಕ್ಷಿಯಿಂದ ಅಲಂಕಾರಗೊಂಡಿರುವ ತುಲಾಭಾರದ ತಕ್ಕಡಿ



ಕಲ್ಯಾಣಿ ಮಹಾದ್ವಾರದಿಂ ಒಳಕ್ಕೆ ಬಂದಾಗ ಬಲಗಡೆಯಲ್ಲಿರುವ ಮಠದ ಕಛೇರಿ




ಜಂಗಮವಾಡಿ ಮಠದ ಆವರಣದಲ್ಲಿ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ
ರಿಂದ ನೂತನವಾಗಿ ನಿರ್ಮಿಸಲ್ಪಟ್ಟಿರುವ ವಿಶ್ವನಾಥ ಮಂದಿರ




ಒಳಬಂದ ನಂತರ ಸಿಗುವ ಮತ್ತೊಂದು ಸುಂದರ ದ್ವಾರ



ಕಲ್ಯಾಣಿ ಮಹಾದ್ವಾರದಿಂದ ಒಳಗೆ ಬಂದಾಗ ಎಡಗಡೆಯಲ್ಲಿರುವ ಇಂದಿನ ಜಗದ್ಗುರುಗಳಿಂದ
ಸ್ಥಾಪಿತವಾಗಿರುವ ವಿಶ್ವನಾಥ ಮಂದಿರದ ಒಳಗಿನ ವಿಶ್ವನಾಥ ಲಿಂಗ



ಜ್ಞಾನಪೀಠ ಉದ್ದನೆಯ ಸ್ತಂಭಗಳು



ಜಂಗಮವಾಡಿ ಮಠದ ಕಛೇರಿ ನಂತರ ಬಲಭಾಗದಲ್ಲಿ ಜಗದ್ಗುರುಗಳನ್ನು ದರ್ಶನ
ಮಾಡಲು ಸಿಂಗರಿಸಿಕೊಂಡು ನಿಂತಿರುವ ದ್ವಾರ



ಜ್ಞಾನಪೀಠ



ರುದ್ರಾಕ್ಷಿಹಾರಗಳಿಂದ ಅಲಂಕೃತವಾಗಿರುವ ಆದಿಜಗದ್ಗುರು ವಿಶ್ವಾರಾಧ್ಯ ಮಂದಿರ




ಜಗದ್ಗುರುಗಳನ್ನು ದರ್ಶನ ಮಾಡುವ ಪುರಾತನ ಪ್ರಾಂಗಣ





ಜಗದ್ಗುರುಗಳ ಖಾಸಗೀ ಪೂಜಾ ಮಂದಿರ



ಜಗದ್ಗುರುಗಳನ್ನು ದರ್ಶನ ಮಾಡುವಲ್ಲಿ ಇರುವ ಪುರಾತನ ನೀರಿನ ಕಾರಂಜಿ





ಹಿಂದಿನ ಜಗದ್ಗುರುಳೆಲ್ಲರ ಸಮಾಧಿಗಳಿಗೂ ರಜತಮಹೋತ್ಸವದಲ್ಲಿ ನಡೆಸಲು ರುದ್ರಾಕ್ಷಾರ್ಚನೆಯ ರುದ್ರಾಕ್ಷಿಗಳಿಂದ ಅಲಂಕರಿಸಿರುವ ಮಂಟಪ



ಭಕ್ತಾದಿಗಳು ಲಿಂಗೈಕ್ಯರಾಗಿರುವ ತಮ್ಮ ಹಿರಿಯರ ಹೆಸರಿನಲ್ಲಿ ಲಿಂಗ ಸ್ಥಾಪಿಸಿರುವುದು.
ಇಂದಿನ ಜಗದ್ಗುರುಗಳು ಬಹಳ ವ್ಯವಸ್ಥಿತವಾಗಿ ನೋಡಲು ಸುಂದರವಾಗಿ ಕಾಣುವಂತೆ ಮಾಡಿದ್ದಾರೆ.





ಜಂಗಮವಾಡಿ ಮಠದ ಎದುರು ಪೀಠಕ್ಕೆ ಸೇರಿದ ಜಾಗದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಯಾತ್ರಿ ನಿವಾಸಗಳು

ಶ್ರೀ 1008 ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸನ್ನಿಧಿಯವರ ಪೀಠಾರೋಹಣದ ರಜತಮಹೋತ್ಸವ 7-7-2014 ರಿಂದ 11-11-2014

ಕಾಶೀ ಜಗದ್ಗುರುಗಳು ಕಾಶೀ ಪೀಠದ ಗುರುಕುಲದಲ್ಲಿ ಅಧ್ಯಯನ ಮಾಡುತ್ತಿರುವಾಗ 1971-72ರಲ್ಲಿ ಕಾಶೀ ವೀರಶೈವ ವಿದ್ವತ್ ಸಂಘದ ಕಾರ್ಯದರ್ಶಿಯಾಗಿದ್ದಾಗಲೇ ಸತತ ಪರಿಶ್ರಮ ಪ್ರಯತ್ನಗಳಿಂದಾಗಿ ಯಾವ ನಿಧಿಯನ್ನು ಕೊಡದೆ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ 'ಶಕ್ತಿ ವಿಶಿಷ್ಟಾದ್ವೈತ ಪೀಠ'ವನ್ನು ಸ್ಥಾಪಿಸುವ ಮೂಲಕ ಕಾಶೀ ಜ್ಞಾನಸಿಂಹಾಸನದಲ್ಲಿ ಒಂದು ಹೊಸ ದಾಖಲೆಯನ್ನೇ ಮಾಡಿದರು. ಇದಕ್ಕೆಲ್ಲಾ ಅಂದಿನ ಜಗದ್ಗುರುಗಳಾಗಿದ್ದ ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಸಂಪೂರ್ಣ ಪ್ರೋತ್ಸಾಹವೇ ಕಾರಣವಾಗಿತ್ತು. ಉತ್ತರ ಪ್ರದೇಶದಲ್ಲಿ ಯಾವ ರಾಜಕಾರಣಿಗಳ ಬೆಂಬಲವಿಲ್ಲದೆ, ಯಾರ ಧನಸಹಾಯವಿಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಶಕ್ತಿ ವಿಶಿಷ್ಟಾದ್ವೈತ ಪೀಠ ಸ್ಥಾಪನೆಯಾಗಿದ್ದು ಇಡೀ ವೀರಶೈವ ಸಮುದಾಯವೇ ಅಚ್ಚರಿಪಡುವಂತಾಯ್ತು. ಕಾಶೀ ಜಗದ್ಗುರುಗಳು ಛಲಗಾರರು. ಸಮಾಜದ ಹಿತದೃಷ್ಟಿಯಿಂದ ಕೈಗೆತ್ತಿಕೊಂಡ ಕಾರ್ಯವನ್ನು ಪೂರ್ಣಗೊಳಿಸುತ್ತಿದ್ದರು.

ಬೆಂಗಳೂರಿನ ವೀರಶೈವ ಅನುಸಂಧಾನ ಪ್ರಾರಂಭಿಸುವ ಕಾಲದಲ್ಲಿ 1998ರಲ್ಲಿ ಅನೇಕ ವಿರೋಧಗಳನ್ನು ಎದುರಿಸಬೇಕಾಯ್ತು. ಆ ಸಮಯದಲ್ಲಿ ಕಾಶೀ ಜಗದ್ಗುರುಗಳು ಪ್ರೋತ್ಸಾಹ ನೀಡಿ-ಬೆಂಬಲಿಸಿ-'ಇಟ್ಟ ಹೆಜ್ಜೆ ಹಿಂದಿಡಬೇಡಿ' ಎಂದು ಧೈರ್ಯ ತುಂಬಿದ್ದ ಕಾರಣ ಇಂದಿಗೂ ಯಶಸ್ವಿಯಾಗಿ ಕಾಶೀ ಜಗದ್ಗುರುಗಳವರ ಯೋಜನೆಯಂತೆ ಕಾರ್ಯಗಳು ನಡೆಯುತ್ತಿವೆ.



ಇಂತಹ ಗುಣ ಸ್ವಭಾವಗಳನ್ನು ಹೊಂದಿರುವ ಜಗದ್ಗುರುಗಳಿಗೆ ಪೀಠದಲ್ಲಿ ಯಾವುದೇ ಸಮಾರಂಭವನ್ನು ದೊಡ್ಡ ಪ್ರಮಾಣದಲ್ಲಿ ಆಯೋಜಿಸುವುದು ಕಷ್ಟದ ಮಾತೇನಲ್ಲ. ದ್ವಾದಶಮಾನೋತ್ಸವದಲ್ಲಿ 19-10-2001 ರಿಂದ 5-12-2001ರವರೆಗೆ ಬಹು ಯಶಸ್ವಿಯಾಗಿ ಬಹು ಸಮರ್ಪಕವಾಗಿ ನಿರ್ವಹಿಸಲಾಗಿತ್ತು. ಇದು ಜಗದ್ಗುರುಗಳಿಗೆ ದೇಶಾದ್ಯಂತ ಲಕ್ಷಾಂತರ ಭಕ್ತರು ಅವರ ಸೇವೆ ಮಾಡಲು ಮುಂದಾಗಿರುವಂತ ಇಂದಿನ ದಿನಗಳಲ್ಲಿ ಜಗದ್ಗುರುಗಳು ಆಯೀಜಿಸಿರುವ ಈ ಬೃಹತ್ ಪ್ರಮಾಣದ ರಜಮಹೋತ್ಸವ ಆಚರಣೆಯನ್ನು ಈ ಬಾರಿ 126 ದಿನಗಳ ಕಾಲ 7-7-2014ರಿಂದ 11-11-2014ರವರೆಗೆ ಕಾಶಿಯಲ್ಲಿ ಆತ್ಮಶುದ್ಧಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕಾಶೀ ಪೀಠದ ಇತಿಹಾಸದಲ್ಲೇ ಹಿಂದೆಂದೂ ನಡೆಯದಿರುವಂತಹ 12 ಕೋಟಿ ಜಪಯಜ್ಞ, ಲಕ್ಷ ಕುಂಬಾಭಿಷೇಕ, ಕೋಟಿ ರುದ್ರಾಕ್ಷಾರ್ಚನೆ, ಕುಂಕುಮಾರ್ಚನೆ, ಬಿಲ್ವಾರ್ಚನೆ ತಿಲ ತೈಲ ದೀಪೋತ್ಸವ, ತುಲಾಭಾರ, ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ

ಲಿಂಗಾಂಗ ಸಾಮರಸ್ಯವನ್ನು ಪಡೆದು 25 ಸಂವತ್ಸರಗಳು ಆಗಿದ್ದು ಇವರ ಪುಣ್ಯಾರಾಧನೆಯ ರಜತ ಮಹೋತ್ಸವ ಸಿದ್ಧಾಂತ ಶಿಖಾಮಣಿಯ ಪಾರಾಯಣ ಸಪ್ತಾಹಗಳು (18 ಸಪ್ತಾಹಗಳು), ದೀಪೋತ್ಸವ, ಗುರುಪೂರ್ಣಿಮಾ ವಿಶೇಷ ಕಾರ್ಯಕ್ರಮ, ಹೊಸದಾಗಿ ಆರಂಭಿಸಲಾಗುವ ಸ್ಕಂಧಷಷ್ಠಿ, ಜಗದ್ಗುರುಗಳವರ 68ನೇ ವರ್ಷದ ಜನ್ಮ ದಿನೋತ್ಸವ, ವಿಜಯದಶಮಿ, ಮಹಾಲಕ್ಷ್ಮಿ–ಮಹಾಸರಸ್ವತಿ ಮಹಾಪೂಜೆ, ಗಣೇಶೋತ್ಸವ, ಪಾರಾಯಣ ಮಂಗಲೋತ್ಸವ, ಶಿವಯೋಗ ವಿಜ್ಞಾನ ಶಿಬಿರ, ಕಾಶೀ ಹಿಂದೂ ವಿಶ್ವವಿದ್ಯಾಲಯ ವಾರಾಣಸಿ, ಶೈವ ಭಾರತಿ ಶೋಧ ಪ್ರತಿಷ್ಠಾನ, ಜಂಗಮವಾಡಿಮಠ, ವಾರಾಣಸಿ ಇವುಗಳ ಸಂಯುಕ್ತಾಶ್ರಯದಲ್ಲಿ 'ವೀರಶೈವ ಧರ್ಮ–ದರ್ಶನ ಉಗಮ ಮತ್ತು ವಿಕಾಸ' ಜಾಗತಿಕ ಮಟ್ಟದ ವಿಚಾರಗೋಷ್ಠಿ, ಅಖಿಲ ಭಾರತೀಯ ಶಿವಾಚಾರ್ಯರ ಸಮ್ಮೇಳಂ ಹಾಗೂ ಶ್ರೀ ಕಾಶೀ ಜಗದ್ಗುರುಗಳ ಪೀಠಾರೋಹಣದ ರಜತ ಮಹೋತ್ಸವ ಹಾಗೂ ವಿಶ್ವ ವೀರಶೈವ ಮಹಾಸಮ್ಮೇಳನ ಹೀಗೆ 10–20 ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಕಾಶೀ ಜಗದ್ಗುರು 2014ರ ಜನವರಿಯಿಂದಲೇ ಹೋದೆಡೆಯಲ್ಲೆಲ್ಲಾ ಪತ್ರಿಕಾಗೋಷ್ಠಿ ನಡೆಸಿ ಮೇಲೆ ತಿಳಿಸಿರುವ ಕಾರ್ಯಕ್ರಮಗಳ ಬಗ್ಗೆ ವರದಿಗಾರರಿಗೆ ತಿಳಿಸಿ ನಾಡಿನ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಬರುವಂತೆ ಮಾಡಿದ್ದರು. ಎಲ್ಲಾ ರಾಜ್ಯಗಳಲ್ಲೂ ಪತ್ರಿಕಾಗೋಷ್ಠಿ ನಡೆಸಿ ಕಾಶೀ ಜಂಗಮವಾಡಿ ಮಠದೆಡೆ ಧಾವಿಸಿ ಬರುವಂತೆ ಮಾಡಿದ್ದಾರೆ. ಜುಲೈ 7ನೇ ತಾರೀಖಿನಿಂದ ದೇಶದ ನಾನಾ ಭಾಗಗಳಿಂದ ಪ್ರತಿನಿತ್ಯ ಸಹಸ್ರ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸುತ್ತಿದ್ದಾರೆ. ಪ್ರತಿನಿತ್ಯ ಎರಡರಿಂದ ಮೂರು ಸಾವಿರ ಭಕ್ತಾದಿಗಳಿಗೆ ವಿಶೇಷ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರಸಾದವನ್ನು ತಯಾರಿಸುವ ಜವಾಬ್ದಾರಿಯನ್ನು ಮಹಾರಾಷ್ಟ್ರದ ಹೆಸರಾಂತ ಅಡಿಗೆ ಭಟ್ಟರುಗಳಿಗೆ ವಹಿಸಿದ್ದಾರೆ. ಕಾಶಿಗೆ ಹೋಗಿ ಬಂದ ಭಕ್ತರು ಅಲ್ಲಿನ ಪ್ರಸಾದದ ವ್ಯವಸ್ಥೆ ಬಗ್ಗೆ ಬಹಳ ಮೆಚ್ಚಿ–ತುಂಬಾ ರುಚಿಕರವಾಗಿತ್ತೆಂದರು. ಅಂದರೆ ಜಗದ್ಗುರುಗಳು ಧಾರ್ಮಿಕ, ಸಾಹಿತ್ಯಿಕ ಕಾರ್ಯಗಳಿಗೆ ಗಮನ ಕೊಟ್ಟಷ್ಟೇ ಪ್ರಸಾದ ವ್ಯವಸ್ಥೆ ಕಡೆಯೂ ಗಮರಿತ್ತಿರುವುದು ಇದರಿಂದ ತಿಳಿಯುತ್ತದೆ.

ನಾವುಗಳು ಕಾಶಿಗೆ ಭೇಟಿ ನೀಡಿದ್ದು ಸೆಪ್ಟೆಂಬರ್ 26ರಂದು. ಕಳೆದ 80 ದಿನಗಳಿಂದ ನಿರಂತರವಾಗಿ ನಡೆಯುತ್ತಿರುವ 12 ಕೋಟಿ ಜಪಯಜ್ಞದಿಂದ ಇಡೀ ಜಂಗಮವಾಡಿ ಮಠದ ತುಂಬೆಲ್ಲಾ ಜಪದ ತರಂಗಗಳೇ ತುಂಬಿರುವುದು ನನ್ನ ಅನುಭವಕ್ಕೆ ಬಂದಿತು. ಶಾದ್ ನಗರದಲ್ಲಿನ ಮಠದ 25–30 ವಿದ್ಯಾರ್ಥಿಗಳು ಪೀಠದ ಗುರುಕುಲದ ವಿದ್ಯಾರ್ಥಿಗಳು ವಿಶ್ವನಾಥ ಮಂದಿರದ ಮುಂಭಾಗದಲ್ಲಿ ಕುಳಿತು ಪಠಿಸುತ್ತಿರುವ ರುದ್ರ ಮಂತ್ರಗಳ ತರಂಗಗಳೂ ಎಲ್ಲೆಡೆ ತುಂಬಿ ಒಳ ಹೋದವರ ಮನಸ್ಸಿನ ದುಗುಡ, ದುಮ್ಮಾನಗಳೆಲ್ಲಾ ಕರಗಿ ಒಂದು ರೀತಿಯ ಶಾಂತ ಮನಸ್ಥಿತಿಯನ್ನು ಪಡೆಯಬಹುದಾಗಿದೆ.

27–9–14ರಂದು ಲಿಂ॥ 1008 ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರು ಪೂಜ್ಯಾರಾಧನೆಯ ರಜತ ಮಹೋತ್ಸವದಂದು ಬೆಳಗಿನ 5 ಗಂಟೆಗೆ ಮಂಗಳವಾದ್ಯಗಳು ಮೊಳಗಿ ಗಂಗಾನದಿ ತೀರಕ್ಕೆ ಹೊರಟು–ಗಂಗೆಯನ್ನು ತರಲು ಮಠದಲ್ಲಿರುವ ಎಲ್ಲಾ ಭಕ್ತಾದಿಗಳೂ ಹೊರಟರು. ದಶಾಶ್ವಮೇಧ ಘಾಟ್‌ನಲ್ಲಿ ನೆರೆದ ಭಕ್ತಾದಿಗಳೆಲ್ಲರೂ ಸ್ನಾನಮಾಡಿ ಮಡಿಯಿಂದ ಕುಂಭ ಹೊತ್ತು ಗಂಗಾಜಲವನ್ನು ಮಂಗಳವಾದ್ಯದೊಂದಿಗೆ ಮೆರವಣಿಗೆಯಲ್ಲಿ ತರಲಾಯಿತು.

ಪೂರ್ವಾಚಾರ್ಯರ ಸಮಾಧಿಗಳ ಮೇಲೆ ಸ್ಥಾಪಿತವಾಗಿರುವ ಶಿವಲಿಂಗಗಳಿಗೆ ಮಹಾರುದ್ರಾಭಿಷೇಕ, ರುದ್ರಾಕ್ಷಾರ್ಚನೆ ಮತ್ತು ಬಿಲ್ವಾರ್ಚನೆ ನಡೆಸಿ ಸಂಜೆ ನಡೆದ ಧಾರ್ಮಿಕ ಸಭೆಯಲ್ಲಿ ಕಾಶೀ ಜಗದ್ಗುರುಗಳು ತಮ್ಮ ಲಿಂ॥ ಜಗದ್ಗುರುಗಳನ್ನು ಸ್ಮರಿಸಿ ಅವರ ಭಾವಚಿತ್ರಕ್ಕೆ ದೀಪಾರತಿ ಬೆಳಗಿ ಭಕ್ತಿಯಿಂದ ಗೌರವ ಸಲ್ಲಿಸಿದರು.





8–7–2014ರಂದು ಶ್ರೀಪೀಠದಲ್ಲಿ ಸಿದ್ಧಾಂತ ಶಿಖಾಮಣಿ ಪಾರಾಯಣ ಸಪ್ತಾಹದ ಉದ್ಘಾಟನೆಯಂದು ಜಗದ್ಗುರು ವಿಶ್ವಾರಾಧ್ಯರಿಗೆ ರುದ್ರಾಕ್ಷಾರ್ಚನೆ ಸಲ್ಲಿಸುತ್ತಿರುವ ಜಗದ್ಗುರುಗಳು



8–7–14ರಂದು ಗುರು ಪೂರ್ಣಿಮಾದಂದು ಜಗದ್ಗುರುಗಳಿಗೆ ಸುಮಂಗಲೆಯರಿಂದ ಅರಿಶಿನ ಮಂಗಲಸ್ನಾನ



8–7–14ರಂದು ಗುರು ಪೂರ್ಣಿಮಾ ದಿನದಂದು ಭಕ್ತರಿಂದ ಪುಷ್ಪವೃಷ್ಟಿ



ಜಂಗಮವಾಡಿ ಮಠದಲ್ಲಿ ಸಂಪೂರ್ಣವಾಗಿ ರುದ್ರಾಕ್ಷಿಯಿಂದ ಅಲಂಕೃತಗೊಂಡಿರುವ ತಕ್ಕಡಿಯಲ್ಲಿ ಜಗದ್ಗುರುಗಳವರ ತುಲಾಭಾರ



ತುಲಾಭಾರದ ಸಂದರ್ಭದಲ್ಲಿ ವಿಶೇಷ ರೀತಿಯಲ್ಲಿ ಜಗದ್ಗುರುಗಳಿಗೆ ದೀಪಾರತಿ ಬೆಳಗುತ್ತಿರುವುದು



9–8–2014 ಶ್ರೀ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸನ್ನಿಧಿಯವರ 68ನೇ ಜನ್ಮದಿನೋತ್ಸವವನ್ನು ಆಂಧ್ರಪ್ರದೇಶದ 500 ಭಕ್ತರು ಶ್ರೀಪೀಠಕ್ಕೆ ಆಗಮಿಸಿ ಸಂಭ್ರಮದಿಂದ ಆಚರಣೆ ಮಾಡಿದಾಗಿನ ದೃಶ್ಯಗಳು



ಹೈದರಬಾದ್ 2014




9–8–2014ರಂದು ಹೈದರಬಾದ್ ಬಲಕಂಪೇಟದ ಭಕ್ತರು ಹಾಗೂ ವಿವಿಧ ಪ್ರಾಂತಗಳ ಸುಮಂಗಲೆಯರಿಂದ ಮಂಗಲಸ್ನಾನ



9–8–2014 ಕಾಶೀ ಜಗದ್ಗುರುಗಳವರ 68ನೇ ಜನ್ಮದಿನದಂದು ಹೈದರಬಾದ್‌ನ ಬಲಕಂಪೇಟ ವೀರಶೈವ ಸಮಾಜದ ವತಿಯಿಂದ 68 ಸ್ವರ್ಣ ಕುಸುಮಗಳಿಂದ ಶ್ರೀಮಹಾಸನ್ನಿಧಿಯವರ ಪಾದಪೂಜೆ ಮಾಡುತ್ತಿರುವುದು



9–8–2014ರಂದು ಜಗದ್ಗುರುಗಳ 64ನೇ ಜನ್ಮದಿನೋತ್ಸವದಂದು ಸಂಜೆ ಧಾರ್ಮಿಕ ಸಭೆಯಲ್ಲಿ ಹೈದರಾಬಾದ್‌ನ ಅಮೂಲ್ಯ ಮುತ್ತುಗಳಿಂದ ಪಾದಪೂಜೆ ಮಾಡುತ್ತಿರುವ ದೃಶ್ಯ



ಪ್ರತಿನಿತ್ಯ ಶ್ರೀಪೀಠದಲ್ಲಿ ನಡೆಯುತ್ತಿರುವ ಜಗದ್ಗುರು ವಿಶ್ವಾರಾಧ್ಯರಿಗೆ ಕೋಟಿ ಬಿಲ್ವಾರ್ಚನೆ ಕಾಶೀ ಜಗದ್ಗುರುಗಳಿಂದ



ಶ್ರೀ ಪೀಠದ ಆವಣದಲ್ಲಿ ಜಗದ್ಗುರುಗಳ ಆಶೀರ್ವಾದದೊಂದಿಗೆ ಗ್ರಂಥ ಪಲ್ಲಕ್ಕಿ ಉತ್ಸವ



ಶ್ರೀ ಪೀಠದಲ್ಲಿ ಪಾರಾಯಣಗ್ರಂಥ ಬಿಡುಗಡೆ



ಪ್ರತಿ ನಿತ್ಯ ಜಗದ್ಗುರುಗಳಿಂದ ಶ್ರೀಮಠದಲ್ಲಿ ಸ್ಥಾಪನೆಗೊಂಡಿರುವ ವಿಶ್ವನಾಥ ಲಿಂಗಕ್ಕೆ ಅಭಿಷೇಕ ಮಾಡುವಾಗಿನ ದೃಶ್ಯ



7–7–2014ರಿಂದ 11–11–2014ರವರೆಗೆ ನಡೆಯುವ ದಾಸೋಹ ಆರಂಭವಾಗುವ ಮುನ್ನ ಜಗದ್ಗುರುಗಳು ಆಗಮಿಸಿ ಸೇವಾ ಕರ್ತೃಗಳಿಗೆ ಆಶೀರ್ವದಿಸಿದ ನಂತರ ಪ್ರಸಾದ ವಿತರಣೆ ಆರಂಭ

ಶ್ರೀ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಪಟ್ಟಾಭಿಷೇಕ 17–11–1989

ಪಂಚ ಪೀಠಾಧೀಶ್ವರರ ಪಟ್ಟಾಭಿಷೇಕವು ಆಗಮ ಶಾಸ್ತ್ರಾನುಸಾರ ನಡೆಯುವುದು. ಪ್ರಧಾನ ಅರ್ಚಕರ ನೇತೃತ್ವದಲ್ಲಿ ಎಲ್ಲಾ ಋತ್ವಿಜರೂ ಸೇರಿ (15ರಿಂದ 20 ಜನರಿರುತ್ತಾರೆ) ಸಂಪ್ರದಾಯಬದ್ಧ ಧಾರ್ಮಿಕ ಕಾರ್ಯಕ್ರಮವನ್ನು ನಸುಕಿನಲ್ಲೇ ಆರಂಭಿಸುತ್ತಾರೆ. ರುದ್ರಯಾಗ ನಂತರ ಪೀಠದ ನೂತನ ಉತ್ತರಾಧಿಕಾರಿಗಳಿಗೆ ಕೇಶಮುಂಡನ, ಎಣ್ಣೆ ಮಜ್ಜನ, ಪೂರ್ಣಅಭಿಷೇಕ ಮಾಡುವರು.

ಯಾವುದೇ ಪೀಠಕ್ಕೆ ನೂತನ ಜಗದ್ಗುರುಗಳ ಪೀಠಾರೋಹಣ ಕಾರ್ಯಕ್ರಮದಲ್ಲಿ ಉಳಿದ ನಾಲ್ಕು ಪೀಠಾಚಾರ್ಯರ ಸಾನ್ನಿಧ್ಯದಲ್ಲಿ ಹಾಗೂ ಅವರೆಲ್ಲರ ಅಮೃತಹಸ್ತದಿಂದ ಅಭಿಷೇಕಾದಿ ವಿಧಿ–ವಿಧಾನಗಳು ನೆರವೇರಿ ಪಟ್ಟಬಂಧನ, ಕಿರೀಟಧಾರಣ, ದಂಡ ಕಮಂಡಲು ಮತ್ತು ಮುದ್ರಾ ಪ್ರದಾನಗಳೆಲ್ಲವನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವರು ಕೊನೆಯಲ್ಲಿ ರತ್ನಖಚಿತ ಕಿರೀಟ ಧಾರಣೆ ಮಾಡಿ ಪಟ್ಟಾಭಿಷೇಕವನ್ನು ಉಳಿದ ನಾಲ್ಕು ಪೀಠಾಧಿಪತಿಗಳು ಕೂಡಿ ನೆರವೇರಿಸುವರು.

ಪೀಠಕ್ಕೆ ಮುಂದಿನ ಉತ್ತರಾಧಿಕಾರಿಯ ಆಯ್ಕೆ ಹೇಗಿರುತ್ತದೆ ಎಂದರೆ–

1) ಪೀಠಾಚಾರ್ಯರು ತಮ್ಮ ಜೀವಿತಕಾಲದಲ್ಲಿಯೇ ಯೋಗ್ಯ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿ ತಮ್ಮ ಕರಕಮಲಗಳಿಂದಲೇ ಪಟ್ಟಾಭಿಷೇಕವನ್ನು ನೆರವೇರಿಸಬೇಕು. ಇದಕ್ಕೆ ಇತ್ತೀಚಿನ ಉದಾಹರಣೆ ಎಂದರೆ ಶ್ರೀಶೈಲ ಜಗದ್ಗುರುಗಳಾಗಿದ್ದ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಉತ್ತರಾಧಿಕಾರಿಯಾಗಿ ಡಾ. ಸಿದ್ಧರಾಮ ಪಂಡಿತಾರಾಧ್ಯರಿಗೆ ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿ ಎಂಬ ಅಭಿದಾನ ಅನುಗ್ರಹಿಸಿ ಪಟ್ಟಾಭಿಷೇಕ ನೆರವೇರಿಸಿದರು.

2) ವರ್ತಮಾನ ಪೀಠಾಚಾರ್ಯರು ತಮಗೆ ಇಷ್ಟವಾಗಿರುವ ವಟುವಿನ ಹೆಸರಿನಲ್ಲಿ ಮೃತ್ಯುಪತ್ರವನ್ನು (will) ಬರೆದಿಡಬೇಕು.

ಮೇಲಿನಂತೆ ಎರಡನ್ನು ಮಾಡದೆ ಇದ್ದಾಗ

3) ಪಂಚಪೀಠದ ನಾಲ್ವರು ಜಗದ್ಗುರುಗಳೂ ಒಂದೆಡೆ ಸೇರಿ ಒಮ್ಮತ ನಿರ್ಣಯವನ್ನು ತೆಗೆದುಕೊಂಡು ನಿರ್ಣಯಿಸಿದ ವಟುವಿಗೆ ಪಟ್ಟಾಧಿಕಾರವನ್ನು ಮಾಡುವರು. ಇದಕ್ಕೆ ಉದಾಹರಣೆಯಾಗಿ ಇಂದಿನ ಕಾಶೀ ಜಗದ್ಗುರುಗಳ ಆಯ್ಕೆ ನಡೆಯಿತು.

ಲಿಂ॥ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ತಾವು ಲಿಂಗೈಕ್ಯರಾಗುವ ಮುನ್ನ ಉತ್ತರಾಧಿಕಾರಿಯಾರೆಂದು ವಿಲ್ ಮಾಡದೆ 2–10–1989ರಂದು ಲಿಂಗೈಕ್ಯರಾದರು. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಲಿಂಗೈಕ್ಯರಾದ ವಿಷಯ ತಿಳಿದ ಕೂಡಲೆ ನೆಲಮಂಗಲದಲ್ಲಿ ದಸರಾ ಉತ್ಸವ ನಡೆಸುತ್ತಿದ್ದ ಜಗದ್ಗುರು ಪ್ರಸನ್ನ ರೇಣುಕ ವೀರರುದ್ರ ಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಉತ್ಸವವನ್ನು ಮೊಟಕುಗೊಳಿಸಿ ಕಾಶಿಗೆ ಆಗಮಿಸಿದರು. ಕೇದಾರ ಪೀಠದ ಜಗದ್ಗುರುಗಳವರು ಸಿದ್ಧೇಶ್ವರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಕೇದಾರದಿಂದ ಆಗಮಿಸಿದರು.



ಶ್ರೀಶೈಲ ಜಗದ್ಗುರುಗಳು, ರಂಭಾಪುರಿ ಜಗದ್ಗುರುಗಳು ಮತ್ತು ಕೇದಾರ ಜಗದ್ಗುರುಗಳು ಕೂಡಿ ಕಾಶೀಪೀಠದ ಉತ್ತರಾಧಿಕಾರಿಯ ಬಗ್ಗೆ ಚರ್ಚಿಸುತ್ತಿದ್ದಾರೆ. ಎಡ ತುದಿಯಲ್ಲಿ ಕೆಳಗೆ ಕುಳಿತಿರುವವರು – ಡಾ॥ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು

ಸೊಲ್ಲಾಪುರದಲ್ಲಿ ದುರ್ಗಾ ಸಪ್ತಶತಿ ಕುರಿತು ಪ್ರವಚನ ನೀಡುತ್ತಿದ್ದ ಇಂದಿನ ಕಾಶೀಜಗದ್ಗುರುಗಳು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು. ಅವರಿಗೆ ಕಾಶೀ ಜಗದ್ಗುರುಗಳು ಲಿಂಗೈಕ್ಯರಾದ ವಿಷಯ ತಿಳಿದ ಕೂಡಲೆ ಪೂನಾಗೆ ಧಾವಿಸಿ ಬಂದರು. ಅಷ್ಟರಲ್ಲಿ ಡಾ॥ ನೀಲಕಂಠರಾವ್ ಕಲ್ಯಾಣಿಯವರು ತಮ್ಮ ಕಂಪನಿಯ ವಿಶೇಷ ವಿಮಾನದಲ್ಲಿ ಜಗದ್ಗುರುಗಳ ಶವದೊಡನೆ ಶ್ರೀ ಗಂಗಾಧರ ಜರಮೆ ಮತ್ತು ರೇವಣಸಿದ್ಧ ಶಿವಾಚಾರ್ಯರುಗಳು ಜೊತೆಗೆ ಹೋಗಿ ಕಾಶಿಗೆ ಬಂದರು. ಡಾ॥ ಚಂದ್ರಶೇಖರ ಶಿವಾಚಾರ್ಯರು ಪೂನಾದಿಂದ ವಿಶೇಷ ವಾಹನ ಮಾಡಿಕೊಂಡು 4–6 ಜನ ಕೂಡಿಕೊಂಡು ಕಾಶಿಗೆ ಬಂದು ಸೇರಿದರು. ಆದರೆ ತಂದೆಯ ಸಮಾನರಾಗಿದ್ದ ಜಗದ್ಗುರುಗಳ ಅಂತಿಮ ದರ್ಶನ ಸಿಗಲಿಲ್ಲ.

ಲಿಂಗೈಕ್ಯ ಜಗದ್ಗುರುಗಳ ಅಂತಿಮ ವಿಧಿ ಮಾಡಲು ಬಾಳೆಹೊನ್ನೂರು ಮತ್ತು ಕೇದಾರ ಜಗದ್ಗುರುಗಳು ಇಬ್ಬರೇ ಕೂಡಿಕೊಂಡು ಗುರುಕುಲದ ವಿದ್ಯಾರ್ಥಿಯಾಗಿದ್ದ ಮಹೇಶ್ವರ ದೇವರನ್ನು ಉತ್ತರಾಧಿಕಾರಿ ಎಂದು ಘೋಷಣೆ ಮಾಡಿದರು. ಆ ವೇಳೆಗೆ ಕಾಶಿ ಪೀಠಕ್ಕೆ ಬಂದು ಸೇರಿದ್ದ ಶ್ರೀಶೈಲ ಜಗದ್ಗುರುಗಳಿಗೆ ಕಾಶೀ ಪೀಠದ ಉತ್ತರಾಧಿಕಾರಿ ಬಗ್ಗೆ ಇಬ್ಬರೇ ನಿರ್ಣಯ ತೆಗೆದುಕೊಂಡದ್ದು ಸಮಂಜಸವೆನಿಸಲಿಲ್ಲ. ಕಾರಣ ಇಷ್ಟೆ, ಲಿಂಗೈಕ್ಯರಾದ ಜಗದ್ಗುರುಗಳ ತಮ್ಮ ವಿಲ್ ಮಾಡದಿದ್ದಲ್ಲಿ – ಉಳಿದ ನಾಲ್ಕು ಜನ ಜಗದ್ಗುರುಗಳು ಸೇರಿ ಒಮ್ಮತದಿಂದ ಉತ್ತರಾಧಿಕಾರಿಯ ಆಯ್ಕೆ ಮಾಡಬೇಕೆಂಬ ನಿಯಮವಿದೆ. ಹಾಗಾಗಿ ಇಬ್ಬರೇ ಸೇರಿ ನಿರ್ಣಯಿಸಿದ್ದು ಸರಿಯಿಲ್ಲವೆಂದು ಬಾಳೆಹೊನ್ನೂರು ಜಗದ್ಗುರುಗಳಿಗೆ ತಿಳಿಸಿ – ಉತ್ತರಾಧಿಕಾರಿ ಘೋಷಣೆಯನ್ನು ಹಿಂತೆಗೆದುಕೊಳ್ಳಲು ಒಪ್ಪಿಸಿದರು. ಮೂರು ದಿನಗಳ ಪುಣ್ಯಾರಾಧನೆಯ ನಂತರ ಮೂವರು ಜಗದ್ಗುರುಗಳು ತಮ್ಮ ತಮ್ಮ ಜಾಗಗಳಿಗೆ ಹೊರಟುಬಿಟ್ಟರು. ಅವರೆಲ್ಲರೂ ತೆರಳಿದ ನಂತರ ಲಿಂ. ಜಗದ್ಗುರುಗಳ ಆದಾಯತೆರಿಗೆ ಇಲಾಖೆಗೆ ಬರೆದ ವ್ಯವಸ್ಥಾಪತ್ರವು ಕೆಲವು ದಿನಗಳ ನಂತರ ಸಿಕ್ಕಿತು. ಆ ಪತ್ರದ ಪ್ರಕಾರ ಪೀಠದ ಜಗದ್ಗುರುಗಳು ತಮ್ಮ ಉತ್ತರಾಧಿಕಾರಿಯ ಬಗ್ಗೆ ಯಾವುದೇ ನಿರ್ಣಯ ಮಾಡದೆ ಹೋದರೆ – ಪಂಚಪೀಠದ ಉಳಿದ ಸಮಾನ ಪೀಠಾಚಾರ್ಯರು ಒಂದೆಡೆ ಸೇರಿ ನಿರ್ಣಯಿಸಬೇಕೆಂದು – ಆ ಪುಸ್ತಕದಲ್ಲಿ ತಿಳಿಸಿದ್ದರು. ಈ ಪೂರ್ವದಲ್ಲಿ ಮಾಡಿದ್ದ ನಿರ್ಣಯವು ಆ ವ್ಯವಸ್ಥಾ ಪತ್ರಕ್ಕೆ ಅನುಕೂಲವಾಗಿರಲಿಲ್ಲ. ಈ ಪತ್ರದ ಪ್ರಕಾರ ನಿರ್ಣಯ ಮಾಡುವ ಸಲುವಾಗಿ ಪುನಃ ರಂಭಾಪುರಿ, ಉಜ್ಜಯಿನಿ, ಶ್ರೀಶೈಲ ಮತ್ತು ಕೇದಾರ ಜಗದ್ಗುರುಗಳು ಕಾಶೀಪೀಠದಲ್ಲಿ ಸೇರಿ ಸುದೀರ್ಘ ಆಲೋಚನೆ ಮಾಡಿ ಕೊನೆಗೆ ಗುಳೇದಗುಡ್ಡದ ಅಮರೇಶ್ವರ ಮಠದ ಡಾ॥ ಚಂದ್ರಶೇಖರ ಶಿವಾಚಾರ್ಯರನ್ನು ಕಾಶೀಪೀಠದ ಉತ್ತರಾಧಿಕಾರಿಯನ್ನಾಗಿ ಮಾಡಿ ಬದಾಮಿಯ ಶಿವಪುರ ಮಠದ ಮಹೇಶ್ವರ ದೇವರನ್ನು ಮಠದ ವ್ಯವಸ್ಥಾಪಕರನ್ನಾಗಿ ನೇಮಕ ಮಾಡುವುದೆಂದು ನಾಲ್ವರು ಜಗದ್ಗುರುಗಳು ಒಮ್ಮತದ ನಿರ್ಣಯ ತೆಗೆದುಕೊಂಡು 16–11–1989 ರಂದು ಘೋಷಣೆ ಮಾಡಿ ಮರುದಿನವೇ ಪಟ್ಟಾಭಿಷೇಕ ಮಾಡುವುದೆಂದು ತೀರ್ಮಾನಿಸಿದರು.

॥ श्री विश्वाराध्यो विजयतेतराम् ॥



काशी जगद्गुरु पीठाधिरोहण समारोह

निमन्त्रण-पत्रिका

मान्यवर,

काशी क्षेत्र में सुप्रसिद्ध ज्ञानसिंहासन जंगमबाड़ी मठ के ८५ वें पीठाधिपति श्री १००८ जगद्गुरु विश्वेश्वरशिवाचार्य महास्वामीजी २-१०-८९ के दिन शिवैक्य हो जाने के कारण उनके उत्तराधिकारी के चयन के लिये वीरशैव धर्म के अन्य चार पीठाधीश्वरों का काशी आगमन हुआ और दो दिन विचार-विमर्श करने के पश्चात् सर्वसम्मति से जंगमवाड़ी मठ के वरिष्ठ विद्वान् तथा पूर्व जगद्गुरु के प्रिय शिष्य गुलेदगुड्ड के अमरेश्वरमठाध्यक्ष डा० चन्द्रशेखर शिवाचार्य जी को उत्तराधिकारी के रूप में दिनांक १६-११-८९ को चयन किया गया।

अतः १७-११-८९ को श्री १००८ जगद्गुरु प्रसन्नरेणुक वीररुद्रमुनिदेव शिवाचार्य महास्वामीजी रंभापुरी, श्री १००८ जगद्गुरु सिद्धेश्वर शिवाचार्य महास्वामीजी उज्जैनी, श्री १००८ जगद्गुरु रावल सिद्धेश्वरलिंग शिवाचार्य महास्वामीजी केदार, श्री १००८ जगद्गुरु उमापतिपण्डिताराध्य शिवाचार्य महास्वामीजी श्रीशैल इन चारों जगद्गुरु महास्वामीजीयों के अमृतहस्त से प्रातः ९ बजे नूतन जगद्गुरुजी का पट्टाभिषेक सम्पन्न होगा तथा दोपहर २-४५ बजे श्री १००८ जगद्गुरु डा० चन्द्रशेखर शिवाचार्य महास्वामीजी ८६ वें जगद्गुरु के रूप में पीठाधिरोहण करेंगे तथा चारों जगद्गुरुओं के कर-कमलों द्वारा किरीट धारण होगा।


इस पवित्र कार्यक्रम में वीरशैवधर्म के अनेक शिवाचार्य काशी के मूर्धन्य विद्वान् तथा कलाकार एवं भक्तगण भाग ले रहे हैं। अतः आपसे अनुरोध है कि आप भी इस कार्यक्रम में सहभागी होकर वीरशैव धर्म के पाँचों जगद्गुरुओं का दर्शनाशीर्वाद प्राप्त करें।

वाराणसी
१६-११-८९


भवदीय
श्री महेश्वर देव बदामि
संयोजक पट्टाभिषेक समिति
जंगमबाडी मठ, वाराणसी।

ಈ ಮೊದಲೇ ಮಹೇಶ್ವರ ದೇವರನ್ನೇ ಉತ್ತರಾಧಿಕಾರಿ ಎಂದು ಘೋಷಿಸಿದ್ದು ಈಗ ಆ ನಿರ್ಣಯವನ್ನು ಹಿಂತೆಗೆದದ್ದು – ಅವರ ಮನಸ್ಸಿಗೆ ಬಹಳ ನೋವಾಗಿತ್ತು. ಅದನ್ನರಿತ ಡಾ॥ ಚಂದ್ರಶೇಖರ ಶಿವಾಚಾರ್ಯರು ಮಹೇಶ್ವರ ದೇವರ ಬಳಿ ಹೋಗಿ ಅವರನ್ನು ಸಮಾಧಾನಗೊಳಿಸಿದ್ದು ನಿಜಕ್ಕೂ ನಾಲ್ವರು ಜನ ಜಗದ್ಗುರುಗಳಿಗೂ ಸಮಾಧಾನ ತಂದಿತ್ತು.

ಮರುದಿನ 17–11–1989ರಂದು ನಡೆದ ಪಟ್ಟಾಭಿಷೇಕದ ನೇತೃತ್ವವನ್ನು ಮಹೇಶ್ವರ ದೇವರೇ ವಹಿಸಿಕೊಂಡು ಎಲ್ಲಾ ಕಾರ್ಯಗಳು ಸುಸೂತ್ರವಾಗಿ ನಡೆಯವಂತೆ ನೋಡಿಕೊಂಡರು. 16–11–1989ರಂದು ಯಾವುದೋ ಕಾರಣದಿಂದ ಇದೇ ವಾರಣಸಿಯಲ್ಲಿ ಕರ್ಫ್ಯೂ ಜಾರಿಯಾಗಿ – ಪಟ್ಟಾಭಿಷೇಕಕ್ಕೆ ಬೇಕಾಗಿದ್ದ ಅನೇಕ ವಸ್ತುಗಳು ದೊರೆಯಲಿಲ್ಲ. ಹೀಗಾಗಿ ಅದ್ದೂರಿಯಿಂದಲ್ಲದಿದ್ದರೂ – ನಾಲ್ವರು ಪೀಠಾಚಾರ್ಯರ ಸಮ್ಮತಿಯಿಂದಾಗಿ ಪಟ್ಟಾಭಿಷೇಕವು ಎಲ್ಲಾ ವಿಧಿವಿಧಾನಗಳಿಂದ ಶಾಲಿವಾಹನ ಶಕೆ 1911 ಶುಕ್ಲನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತಿಕ ಮಾಸ ಕೃಷ್ಣಪಕ್ಷ ಪಂಚಮಿ ತಾ॥ 17–11–1989 ಶುಕ್ರವಾರ ಮಧ್ಯಾಹ್ನ 2–45 ಗಂಟೆಗೆ ಕಿರೀಟಧಾರಣೆ ಶಾಸ್ತ್ರೋಕ್ತವಾಗಿ ನೆರವೇರಿತು. ತೋಗುಣಸಿ (ಬಾದಾಮಿ ತಾ॥ ಬಾಗಲಕೋಟೆ ಜಿಲ್ಲೆ)ಯಲ್ಲಿ ತಂದೆ ಶ್ರೀ ಸಿದ್ದಯ್ಯ ವಿರೂಪಾಕ್ಷಯ್ಯ ಪುರಾಣಮತ, ತಾಯಿ ಶ್ರೀಮತಿ ಸಾವಂತ್ರಮ್ಮ ಸಿದ್ದಯ್ಯ ಪುರಾಣಮತ ದಂಪತಿಗಳ ಸುಪುತ್ರರು ಶ್ರೀ ಶಾಲಿವಾಹನ ಶಕೆ 1869 ಸರ್ವಜಿತು ಸಂವತ್ಸರ ದಕ್ಷಿಣಾಯಣ ವರ್ಷಋತು ನಿಜ ಶ್ರಾವಣ ಮಾಸ ಶುಕ್ಲ ಪಕ್ಷ ದ್ವಾದಶಿ ತಾ॥ 28–8–1947 ಬುಧವಾರ ಪ್ರಾತಃಕಾಲ 5 ಗಂಟೆ 40 ನಿಮಿಷ ಸಿಂಹ ಲಗ್ನದಲ್ಲಿ ಪೂರ್ವಾಷಾಢ ನಕ್ಷತ್ರ ಪ್ರಥಮಪಾದ (ಚರಣ)ದಲ್ಲಿ – ಜನ್ಮ ತಾಳಿದ ಶೇಖರಯ್ಯ ಮುಂದೆ ಚಂದ್ರಶೇಖರರಾಗಿ – ಇಂದು ಕಾಶೀಪೀಠದ ಜಗದ್ಗುರುಗಳಾಗಿ ಪೀಠದ ಜ್ಞಾನ ಪತಾಕೆಯನ್ನು ದೇಶ ವಿದೇಶಗಳಲ್ಲೆಲ್ಲಾ ಹಾರಿಸಿದ್ದಾರೆ. ಕಾಶೀಪೀಠ ಹಿಂದೆಂದೂ ಕಾಣದಂತಹ ಸಮರ್ಥ ಜ್ಞಾನ ನಿಧಿಯೇ ಆಗಿರುವ ಡಾ॥ ಚಂದ್ರಶೇಖರರನ್ನು ಪಡೆದಿರುವುದು ಕಾಶೀಪೀಠಕ್ಕೆ ಮಾತ್ರವಲ್ಲ ಇಡೀ ಭಾರತವೇ ಹೆಮ್ಮೆಪಡುವಂತಾಗಿದೆ.



ಪಟ್ಟಾಭಿಷೇಕದಲ್ಲಿ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳನ್ನು ಮಂಗಳಸ್ನಾನಕ್ಕೆ





ಬಾಳೆಹೊನ್ನೂರು ಜಗದ್ಗುರುಗಳು, ಶ್ರೀಶೈಲ ಜಗದ್ಗುರುಗಳು ಮತ್ತು ಕೇದಾರ ಜಗದ್ಗುರುಗಳವರಿಂದ ನೂತನವಾಗಿ ಪಟ್ಟಾಧಿಕಾರ ಸ್ವೀಕರಿಸಿದ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಕಿರೀಟಧಾರಣೆ ಮಾಡಿದರು



ಪಟ್ಟಾಭಿಷೇಕದ ನಂತರ ಬಾಳೆಹೊನ್ನೂರು ಜಗದ್ಗುರುಗಳು ಕಾಶೀ ಜಗದ್ಗುರುಗಳಿಗೆ ಮಂತ್ರೋಪದೇಶ ಮಾಡಿದರು.



ಪಟ್ಟಾಭಿಷೇಕದ ನಂತರ ನಡೆಸಿದ ಧರ್ಮಸಭೆಯಲ್ಲಿ ನೂತನ ಜಗದ್ಗುರುಗಳೊಂದಿಗೆ, ಬಾಳೆಹೊನ್ನೂರು, ಉಜ್ಜಯಿನಿ, ಶ್ರೀಶೈಲ ಹಾಗೂ ಕೇದಾರ ಜಗದ್ಗುರುಗಳು ಉಪಸ್ಥಿತರಿದ್ದರು




ಕಾಶೀ ಜಗದ್ಗುರುಗಳ ಪಟ್ಟಾಧಿಕಾರ ಆದನಂತರ ನಡೆಸಿದ ಪ್ರಥಮ ವಿದ್ವತ್ ಗೋಷ್ಠಿಯಲ್ಲಿ ಸೇರಿರುವ ಸಂಪೂರ್ಣಾನಂದ ವಿಶ್ವವಿದ್ಯಾಲಯದ ಎಲ್ಲಾ ಪಂಡಿತರೂ, ಕಾಶಿಯಲ್ಲಿರುವ ವಿವಿಧ ಸಂಘ ಸಂಸ್ಥೆಯಲ್ಲಿರುವಂಥವರು ಸಭೆಯಲ್ಲಿದ್ದಾರೆ.

श्रीविश्वनाथोविजयतेतराम्

अभिनन्दनपत्रम्

इह त्रिभुवनवन्दितत्रिपुरारिपरिपालित सकलवृन्दारकवृन्दानन्दकाननाविमुक्तक्षेत्रभागीरथीपयःपूत ज्ञानविज्ञान-प्रकाशिकायां काशिकायां जङ्गमवाड़ास्थित विश्वाराध्यज्ञानसिंहासनपीठे महनीये तपःसिद्धैर्विज्ञानवृद्धैः पूर्वाचार्यैः विश्वा-राध्यजगद्गुरुभिः पञ्चाशीतिसंख्याकैः श्रीहरीश्वर-वीरभद्र-राजेश्वर-शिवलिङ्ग पञ्चाक्षर-विश्वेश्वरशिवाचार्यप्रभृतिभिरुपस्कृते श्रीमद् जगद्गुरुविश्वेश्वरशिवाचार्यादनन्तरम् तदनुमत्या सम्प्रदायान्यचतुष्पीठाधीश्वरैः जगद्गुरुभिः सम्मत्या अभिषिक्तानां विद्यावाक्तपस्तेजःक्षमादयादानौदार्यादिसकलगुणगणमण्डितानां वेदान्ताचार्यविद्यावारिध्याद्यनेकोपाधिभाजां साम्बशिवभक्तिभृतां श्रीविश्वाराध्यज्ञानसिंहासनाधीश्वराणां श्री १००८ जगद्गुरु डॉ० चन्द्रशेखरशिवाचार्यमहाराजानामभिनवानां चरणकमलेषु अभिनन्दनपद्यप्रसूनाञ्जलिं समर्पयामः ।

श्रीकाश्यां त्रिपुरारिपालितपुरे गङ्गातटे पावने आचार्यैः समलङ्कृतं शिवमयैः श्रीवीरशैवागमैः ।
धर्मज्ञानतपोविवर्धनपरं विज्ञानपीठं महत् श्रीमज्जङ्गमवाटिकास्थमधुना देदिप्यमानं शुभम् ॥ १ ॥

धर्मात्मा विभवैः सुरोत्तमगुणै र्युक्तः सतामग्रणीः वेदज्ञो निजसम्प्रदायपरिभूवक्ता सहस्रेष्वपि ।
विश्वाराध्यजगद्गुरुः सुचरिता विज्ञानसिंहासने पीठे राजति चन्द्रशेखरशिवाचार्यो महापण्डितः ॥ २ ॥

सिद्धय्या गुणवान् पितास्य जननी सावन्त्रमाखराशुभा धन्यौतौ वसुधा हि गौरवमयो कार्णाटको भारते ।
लब्ध्वा जन्म यतो जगद्गुरुरयं ज्योतिः समं भासते विश्वाराध्यपदेन्दुशेखरयतिर्विज्ञानसिंहासने ॥ ३ ॥

बाल्याद् वैदिक वाङ्मयेऽतिनिपुणो गङ्गाधराच्छास्त्रिणः आचार्यादमरेश्वराद् भगवतः सम्प्राप्तदीक्षः शुचिः ।
अध्येतुं विधिवत् समस्तपुरवाग्विज्ञानजातं महत् विद्वद्वृन्दनिषेवितां शिवमयीं पुण्यामगात् काशिकाम् ॥ ४ ॥

विद्यावाग्जितपण्डितं शिवकुमाराख्यं जगद्वन्दितम् । पूर्वं संश्रितवान् यथा परगुरुः पीठेशराजेश्वरः ।
संप्राप्तुं वरचन्द्रशेखरयतिः शास्त्रार्थसारं तथा पाण्डित्यप्रतिभोद्भटं गुरुसमं देवस्वरूपं गुरुम् ॥ ५ ॥

समस्तविद्यां निगमागमानाम् शास्त्रार्थवादञ्च विशुद्धबुद्धया ।
वाचस्पतेरिन्द्रसमोऽध्यगीष्ट देवस्वरूपाद् विनयाद् गुरोर्वै ॥ ६ ॥

विमुक्तपाशो विमलाशयोऽयम् त्रिपुण्ड्रभस्माक्षमहोत्तमश्रीः ।
शान्तः सुविद्याम्बुनिधिप्रपन्नः त्रिशूलिनि लीनमना मनस्वी ॥ ७ ॥

अद्वैतवेदान्तनिधिं प्रविष्टः उमाविशिष्टं भजते महेशम् ।
आचार्यवक्ता प्रतिभाविशेषैः त्रय्यन्तवाचां च शिवागमानाम् ॥ ८ ॥

वन्दे विमुक्तभवमाश्रितशक्तिशम्भुम् विश्वेश्वरादनुगतं मतमन्यपीठैः ।
सिंहासनेऽतिमहनीयतमेऽधिरूढम् श्री चन्द्रशेखरयतीश्वरपादपद्मम् ॥ ९ ॥

श्रेयस्तनोतु सममभ्युदयञ्च तस्य आयुष्यसौख्यविभवश्रुतभूतिजातम् ।
पीठोन्नतिं निखिलपण्डितपूजनञ्च साम्बः शिवः परिकरैः सहितः प्रसन्नः ॥ १० ॥

सम्वत् २०४६
मार्गशीर्ष शुक्ल
तृतीया शुक्रवासरे
१-१२-१९८९
ईशवीये
दिनाङ्के ।

वयं स्मो भावत्काः
सम्पूर्णानन्द संस्कृत विश्वविद्यालय
परिवार सदस्याः काशीस्थाः

श्री विश्वनाथोविजयतेतराम्

अभिनन्दनसमारोहः

महानुभावाः,

तत्र भवतां परमविदुषां परापरविद्याविचक्षणानां १००८ श्रीजगद्गुरुविश्वाराध्यज्ञानसिंहासनाधीश्वराणां काशीस्थजङ्गमवाड़ीमठस्थानां सम्पूर्णानन्दसंस्कृतविश्वविद्यालयान्तर्गतवेदान्तविभागीयस्नातकानां श्रीमतां डा० चन्द्रशेखरशिवाचार्यस्वामिनां जगद्गुरुत्वेन सद्यः सञ्जातपट्टाभिषेकसमारोहावसरे विश्वविद्यालयपरिवारद्वारा तेषामभिनन्दनसमारोहो निभाल्यते । तत्र श्रीमतां सपरिवाराणामस्मिन् ज्ञानयज्ञे समुपस्थितिं प्रार्थयते—

स्थानम्—अनुसन्धानपरिसरः ।
सं० सं० वि० वि० वाराणसी ।
समयः— मार्गशीर्षशुक्लतृतीया सं० २०४६
शुक्रवासरे
दिनाङ्के—१-१२-८९
दिवा-द्विवादने


देवस्वरूपमिश्रः
संयोजको निवेदकश्च ।
आचार्योऽध्यक्षश्च वेदान्तविभागे
सं० सं० वि० वि० वाराणसी

कार्यक्रमः

१—वैदिकं मङ्गलाचरणम् ।
२—पौराणिकं मङ्गलाचरणम् ।
३—माल्यार्पणम् ।
४—स्वागत भाषणम्—डा० देवस्वरूप मिश्र द्वारा ।
५—अभिनन्दनपत्र समर्पणम्—डा० पारसनाथ द्विवेदिभिः उपाचार्यैः ।
६—सिद्धान्तशिखामणिसमीक्षाग्रन्थस्याचार्यश्रीजगद्गुरु चन्द्रशेखरशिवाचार्यप्रणीतस्य विमोचनम् ।
७—विदुषां भाषणम् !
८—शास्त्रार्थः ।
९—जगद्गुरुविश्वाराध्यज्ञानसिंहासनाधीश्वराणां १००८ श्रीचन्द्रशेखरशिवाचार्याणामुपदेशः ।
१०—विद्यागुरूणां श्रीदेवस्वरूपमिश्राणां जगद्गुरुभिः सम्माननम् ।
११—विद्वत्सत्कारः ।
१२—प्रसादवितरणम् ।

ಸಂಪೂರ್ಣಾನಂದ ವಿಶ್ವವಿದ್ಯಾಲಯದ ಪಂಡಿತರು
ಸಮರ್ಪಿಸಿದ ಅಭಿನಂದನಾಪತ್ರ


ನಾಲ್ವರು ಜಗದ್ಗುರುಗಳವರ ದಿವ್ಯ ಸಾನಿಧ್ಯದಲ್ಲಿ ಪೀಠದ ಉತ್ತರಾಧಿಕಾರಿಗಳ ಪೀಠಾರೋಹಣವು ಬಹು ವಿಜೃಂಭಣೆಯಿಂದ ನಡೆದು ಸಹಸ್ರಾರು ಪೀಠಾಭಿಮಾನಿ ಭಕ್ತರೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಬಾಲ್ಯದಲ್ಲಿ ಶೇಖರಯ್ಯನವರ ಭಾವಚಿತ್ರ



INDIAN EXPRESS
23-3-1988, Bangalore



Dr. Chandrashekhar Shivacharya recipient of the Kumar Shardindu Gold Medal awarded by the West Bengal Government.

Kannadiga bags West Bengal award

Express News Service

Varanasi, March 22 : Dr. Chandrashekhar Shivacharya of Guledgud (Karnataka), a senior scholar of the famous Jangamawadi Math, here was recently awarded the West Bengal Government's "Kumar Shardindu Narayan gold medal" by the Governor S. Nurul Hasan.

The medal is conferred on him for having topped in the "Sarvadarshanatirtha" examination of Vangiya Sanskrit Shisha Parishat, Calcutta.

Dr. Chandrashekhar Shivacharya has received several awards earlier for standing first in various Sanskrit examinations.

A Ph.D. of the Sampurnand Sanskrit University, he is a recipient of the UGC Scholarship for post doctoral research on Veerashaiva Tattvatraya Vimarsha.

ಸಂಯುಕ್ತ ಕರ್ನಾಟಕ, 22–3–1988

ಗುಳೇದಗುಡ್ಡ ಚಂದ್ರಶೇಖರ ಶಿವಾಚಾರ್ಯರಿಗೆ ಸ್ವರ್ಣಪದಕ

ವಾರಣಾಸಿ 21– ಗುಳೇದಗುಡ್ಡ ಅಮರೇಶ್ವರ ಮಠಾಧ್ಯಕ್ಷರೂ ಕಾಶಿ ಜಂಗಮವಾಡಿ ಮಠದ ವರಿಷ್ಠ ವಿದ್ವಾಂಸರೂ ಆದ. ಡಾ॥ ಚಂದ್ರಶೇಖರ ಶಿವಾಚಾರ್ಯರಿಗೆ ಪಶ್ಚಿಮ ಬಂಗಾಲ ಸರಕಾರದಿಂದ "ಕುಮಾರ ಶರದಿಂದು ನಾರಾಯಣ ಸ್ವರ್ಣಪದಕ"ವು ಲಭಿಸಿದೆ.



ಕಲಕತ್ತಾದ ವಂಗೀಯ ಸಂಸ್ಕೃತ ಶಿಕ್ಷಣ ಪರಿಷತ್ತಿನ 'ಸರ್ವದರ್ಶನತೀರ್ಥ' ಪರೀಕ್ಷೆಯಲ್ಲಿ ಸರ್ವೋನ್ನತ ಸ್ಥಾನವನ್ನು ಪಡೆದುದಕ್ಕಾಗಿ ದೊರೆತ ಈ ಪದಕವನ್ನು ರಾಜ್ಯಪಾಲ ಎಸ್. ನೂರುಲ್ ಹಸನ್ ಇತ್ತೀಚೆಗೆ ಸ್ವಾಮಿಗಳಿಗೆ ನೀಡಿ ಅವರನ್ನು ಸನ್ಮಾನಿಸಿದ್ದಾರೆ.

ಡಾ॥ ಚಂದ್ರಶೇಖರ ಶಿವಾಚಾರ್ಯರಿಗೆ ಈ ಮುಂಚೆ (1973) ವಾರಣಾಸಿಯ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತಾಚಾರ್ಯ ಪರೀಕ್ಷೆಯನ್ನು ಪ್ರಥಮ ರ್‍ಯಾಂಕಿನಲ್ಲಿ ಉತ್ತೀರ್ಣರಾಗಿದ್ದಕ್ಕಾಗಿ "ಸ್ವಾಮಿ ವಿವೇಕಾನಂದ ಸ್ವರ್ಣಪದಕ" "ಅನ್ನದಾ ಪ್ರಸಾದ ಮುಖರ್ಜಿ ಸ್ವರ್ಣಪದಕ" ಮತ್ತು ಸಂಪೂರ್ಣಾನಂದ ಸ್ವರ್ಣ ಪದಕ ಕೂಡ ಲಭಿಸಿದೆ.

ಅತ್ಯಂತ ಮೇಧಾವಿಗಳೂ, ವಾಗ್ಮಿಗಳೂ ಆದ ಸ್ವಾಮಿಗಳು 1973ರಲ್ಲಿ ಕೇರಳದ ಗುರುವಾಯೂರಿನಲ್ಲಿ ನಡೆದ ಅಖಿಲ ಭಾರತ ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ಕೇಂದ್ರ ಸರಕಾರದಿಂದಲೂ ಪುರಸ್ಕಾರವನ್ನು ಪಡೆದಿದ್ದಾರೆ.

ನಿರಂತರ ಸಂಶೋಧನಶೀಲರಾದ ಅವರು 1980ರಲ್ಲಿ ಕಾಶೀ ಸಂಸ್ಕೃತ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದು ಸದ್ಯ ಅದೇ ವಿಶ್ವವಿದ್ಯಾಲಯದಲ್ಲಿ "ವೀರಶೈವ ತತ್ವತ್ರಯ ವಿಮರ್ಶೆ" ಎಂಬ ವಿಷಯದ ಮೇಲೆ ಡಿ.ಲಿಟ್ ಉಪಾಧಿಗಾಗಿ ಸಂಸ್ಕೃತದಲ್ಲಿ ಶೋಧ ಪ್ರಬಂಧವನ್ನು ಬರೆಯುತ್ತಲಿದ್ದಾರೆ. ಈ ಕಾರ್ಯಕ್ಕಾಗಿ ಯು.ಜಿ.ಸಿ.ಯಿಂದ ಅನುದಾನವು ಪ್ರಾಪ್ತವಾಗಿದೆ.

ಸ್ವಾಮಿಗಳು ಈಗಾಗಲೇ ಸಂಸ್ಕೃತ, ಹಿಂದಿ ಹಾಗೂ ಕನ್ನಡ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ಬರೆದು ಖ್ಯಾತನಾಮರಾಗಿದ್ದಾರೆ. "ವೀರಶೈವ ಅಷ್ಟಾವರಣ ವಿಜ್ಞಾನ" ಎಂಬ ಪುಸ್ತಕವು ತೆಲಗು ಮರಾಠಿ ಇಂಗ್ಲೀಷ್ ಭಾಷೆಗಳಲ್ಲಿ ಅನುವಾದಗೊಂಡಿದೆ.

ಷ॥ ಬ್ರ॥ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಗೆ ಸ್ವರ್ಣಪದಕ ಗಳಿಸಿದ ವಿಷಯ ಕರ್ನಾಟಕದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಬಾಳೆಹೊನ್ನೂರಿನ ಜಗದ್ಗುರುಗಳಿಗೆ, ಶ್ರೀಶೈಲ ಜಗದ್ಗುರುಗಳಿಗೆ, ಉಜ್ಜಯಿನಿ ಜಗದ್ಗುರುಗಳಿಗೆ ಈ ವಿಷಯ ತಿಳಿದು ಬಹಳ ಸಂತೋಷಗೊಂಡರು. ಷ॥ ಬ್ರ॥ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಬದುಕಿನಲ್ಲಿ ಮಹತ್ತರ ತಿರುವು ಕೊಟ್ಟ ಸಂಗತಿ ಇದಾಗಿತ್ತು.

ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಹಸ್ತಾಕ್ಷರ



ಬಿಲ್ವವು ಒಂದು ದಿವ್ಯ ವನಸ್ಪತಿಯು

ಶ್ರೀ ಕಾಶೀ ಜಗದ್ಗುರು

ತಾಂಡೂರು: ೧೮. ಬಿಲ್ವವೃಕ್ಷವು ಒಂದು ದಿವ್ಯ ವನಸ್ಪತಿಯು. ಇದು ಶಿವನಿಗೆ ಅತ್ಯಂತ ಪ್ರಿಯವಾದುದು. ಬಿಲ್ವಪತ್ರಿಯಿಂದಲೇ ಶಿವನನ್ನು ಪೂಜಿಸುವುದು ಶ್ರೇಷ್ಠವು ಎಂಬ ವಿಚಾರವನ್ನು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.



ಆಂಧ್ರಪ್ರದೇಶದ ರಂಗಾರೆಡ್ಡಿ ಜಿಲ್ಲಾ ತಾಂಡೂರ ನಗರದ ಶ್ರೀ ಭಾವಗಿ ಬಾಧ್ರೇಶ್ವರ ದೇವಸ್ಥಾನದಲ್ಲಿ ನಡೆದ ಲಕ್ಷ ಬಿಲ್ವಾರ್ಚನೆಯ ಕಾರ್ಯಕ್ರಮದಲ್ಲಿ ಈ ವಿಚಾರವನ್ನು ತಿಳಿಸಿದರು.


ಶಿವನ ಸೃಷ್ಟಿಯಲ್ಲಿಯ ಎಲ್ಲ ವನಸ್ಪತಿಗಳು ಜೀವಿಗಳಿಗೆ ಜೀವನಾಧಾರಗಳಾಗಿವೆ. ಒಂದು ವೇಳೆ ಗಿಡ, ಮರ ವನಸ್ಪತಿಗಳು ಇರದೇ ಹೋಗಿದ್ದರೆ ಯಾವ ಜೀವಿಗಳು ಬದುಕಲು ಸಾಧ್ಯವಾಗುತ್ತಿರಲಿಲ್ಲ. ಇಂತಹ ಜೀವನಾಧಾರವಾದ ವನಸ್ಪತಿಗಳಲ್ಲಿ ಬಿಲ್ವ ಮತ್ತು ತುಳಸಿಗೆ ಧಾರ್ಮಿಕ ಪ್ರಪಂಚದಲ್ಲಿ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ತುಳಸಿಯು ವಿಷ್ಣುವಿಗೆ ಪ್ರಿಯವಾಗಿದ್ದರೆ ಬಿಲ್ವ ಶಿವನಿಗೆ ಪ್ರಿಯವಾಗಿದೆ ~~[illegible]~~ ಶಿವಲಿಂಗಕ್ಕೆ ಬಿಲ್ವಾರ್ಚನೆಯನ್ನು ಮಾಡುವಂತೆ ಪಾರಂಪರಿಕ ನಿಯಮದಲ್ಲಿ ಗುರುಗಳ ಪಾದಕ್ಕೆ ಬಿಲ್ವಾರ್ಚನೆಯನ್ನು ಮಾಡುವ ಪದ್ಧತಿಯುಂಟು.





ಲಿಂಗಕ್ಕೆ ಇಲ್ಲವೆ ಗುರುಗಳ ಪಾದಕ್ಕೆ ಅರ್ಪಣೆ ಮಾಡಿದ ಬಿಲ್ವ ಪತ್ರಿಗಳನ್ನು ನದಿ, ಕೆರೆ ಮತ್ತು ಬಾವಿಗಳಲ್ಲಿ ಬಿಡದೇ ಅವುಗಳನ್ನು ನೆರಳಲ್ಲಿ ಒಣಗಿಸಿ ಅದರ ಚೂರ್ಣವನ್ನು ಮಾಡಿ ಅದನ್ನು ದಿನಾಲು ನೀರಿನಲ್ಲಿ ಹಾಕಿ ಆ ನೀರನ್ನು ಕುಡಿಯುವುದರಿಂದ ಉದರಕ್ಕೆ ಸಂಬಂಧಿಸಿದ ಎಲ್ಲ ವ್ಯಾಧಿಗಳು ವಾಸಿಯಾಗುವವು






ಆಯುರ್ವೇದ ಶಾಸ್ತ್ರದಲ್ಲಿ ಬಿಲ್ವಗಿಡದ ಬೇರು, ತೊಗಟೆ, ಎಲೆ, ಹೂವು ಮತ್ತು ಹಣ್ಣು - ಈ ಪಂಚಾಂಗಗಳನ್ನು ಔಷಧಿಯಾಗಿ ಉಪಯೋಗಿಸುತ್ತಾರೆ.

ಒಂದು ಬಿಲ್ವಗಿಡವು ಹತ್ತು ಮಕ್ಕಳಿಗೆ ಸಮಾನ ಎಂಬ ವಿಷಯವನ್ನು ವ್ಯಾಸ ಮಹರ್ಷಿಗಳು "ದಶಪುತ್ರ ಸಮೋ ದ್ರುಮಃ" ಎಂದು ಹೇಳಿದ್ದಾರೆ. ಇದರಿಂದ ಯಾವುದೇ ಕಾರಣದಿಂದ ಮಕ್ಕಳಾಗದ ಗೃಹಸ್ಥರು ನಿರಾಶರಾಗದೆ ಆಸಕ್ತಿಯಿಂದ ಗಿಡವನ್ನು ಬೆಳೆಸಿದರೆ ಹತ್ತು ಮಕ್ಕಳನ್ನು ಹೆತ್ತ ಪುಣ್ಯವನ್ನು ಪಡೆಯಬಹುದು ಎಂಬ ವಿಷಯವನ್ನು ಶ್ರೀಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ನಂತರ ಶ್ರೀ ಜಗದ್ಗುರುಗಳವರು ಶ್ರಾವಣ ಮಾಸದ ನಿಮಿತ್ತವಾಗಿ ಆಂಧ್ರಪ್ರದೇಶ ತೆಲಂಗಾಣ ಪ್ರಾಂತದಲ್ಲಿ ಧರ್ಮ ಪ್ರಚಾರಕ್ಕಾಗಿ ಕೈಗೊಂಡಿರುವ ಶ್ರಾವಣ ಸಂಚಾರದಲ್ಲಿಯ ಬಾರ ಆಂಧ್ರದ ಬಿಲ್ವ ಕ್ಷೇತ್ರದವರು ಶ್ರೀಗಳ ಪಾದಪೂಜೆ ಲಕ್ಷ ಬಿಲ್ವಾರ್ಚನೆಯನ್ನು ಮಾಡಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರೆಂದರೆ - ಶ್ರೀಯವರು. ಬಸವಕುಮಾರ ಶಾಸ್ತ್ರೀ ಮಲ್ಲಿಕಾರ್ಜುನಯ್ಯ ಡಾ. ಮಲ್ಲಿಕಾರ್ಜುನ ಡಾ. ಮಲ್ಲಿಕಾರ್ಜುನಸ್ವಾಮಿ ಮತ್ತು ಸಮಾಜದ ಮುಖಂಡರಾದ ಬಾಲಗಂಗಾಧರಯ್ಯ, ಬೆಂಗಳೂರು. ಶಾಸಕರು. ಬೆಂಗಳೂರಿನ ಸುರೇಶ, ಶಿವಕುಮಾರ ಶಿಕ್ಷಣ, ಚಂದ್ರು, ಚಂದ್ರಶೇಖರ, ಮಲ್ಲಿಕಾರ್ಜುನ, ಮೋಹನದಲ್ಲಿ ಚಂದ್ರಶೇಖರ ಪಾಟೀಲ ಮಲ್ಲಯ್ಯ ನಾಗರಾಜ ಶಿವಯೋಗಿ ಮುಂತಾದ ಗಣ್ಯರು ಮತ್ತು ಶಿವಗಣಂಗಳು ಪಾಲ್ಗೊಂಡಿದ್ದರು ಬಂದ ಭಕ್ತರಿಗೆ ಪಂಚಾಚಾರ್ಯ ಕಲ್ಯಾಣ ಮಂಟಪದ ಭಾಂಡಾರದಲ್ಲಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.






ಜಗದ್ಗುರುಗಳು ರಚಿಸಿರುವ ಗ್ರಂಥಗಳು

ಗುಳೇದಗುಡ್ಡದ ಅಮರೇಶ್ವರ ಮಠಾಧ್ಯಕ್ಷರಾಗಿದ್ದ ಷ॥ ಬ್ರ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಕಾಶೀ ಜಂಗಮವಾಡಿ ಮಠದ ಗುರುಕುಲದ ವಿದ್ಯಾರ್ಥಿಯಾಗಿ ಸಂಸ್ಕೃತ ಆಚಾರ್ಯ (ಎಂ.ಎ.) ಅಧ್ಯಯನ ಮಾಡಲು ಸಂಪೂರ್ಣನಂದ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾಗಿದ್ದರು. 1971ರಲ್ಲಿ ಕಾಶಿ ಜಂಗಮವಾಡಿ ಮಠದ ವಿದ್ವತ್ ಸಂಘದ ಸೆಕ್ರೆಟರಿಯಾಗಿ ಪಂಚಾಚಾರ್ಯ ಪ್ರಭಾ ಪತ್ರಿಕೆಗೆ ಜಂಗಮವಾಡಿ ಮಠದಲ್ಲಿ ನಡೆದ ಎಲ್ಲ ಕಾರ್ಯಕ್ರಮಗಳ ವರದಿಯನ್ನು ಬರೆಯುತ್ತಿದ್ದರು. 1973ರಲ್ಲಿ ಕೇರಳದ ಗುರುವಾಯೂರಿನಲ್ಲಿ ನಡೆದ ಅಖಿಲ ಭಾರತ ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಲು ಸಂಪೂರ್ಣಾನಂದ ಸಂಸ್ಕೃತ ವಿದ್ಯಾಲಯದಲ್ಲಿ ನ್ಯಾಯಶಾಸ್ತ್ರದ ಮುಖ್ಯಸ್ಥರಾಗಿದ್ದ ಪಂ। ಬದರಿನಾಥ್ ಶುಕ್ಲ ಅವರು – ವೇದಾಂತದ ಬಗ್ಗೆ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಲು ಷ॥ ಬ್ರ॥ ಚಂದ್ರಶೇಖರ ಶಿವಾಚಾರ್ಯರನ್ನು ಆಯ್ಕೆ ಮಾಡಿದ್ದರು. ಬೇರೆ ಬೇರೆ ವಿಭಾಗಗಳಲ್ಲಿ ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳನ್ನು ಶುಕ್ಲ ಅವರು ಜೊತೆಯಲ್ಲಿ ಕರೆದುಕೊಂಡು ಗುರುವಾಯೂರಿಗೆ ಬಂದರು. ಆ ಸಮಯದಲ್ಲಿ ಷ॥ ಬ್ರ॥ ಚಂದ್ರಶೇಖರ ಸ್ವಾಮಿಗಳು ಪಂ। ಬದರಿನಾಥ್ ಶುಕ್ಲ ಅವರ ನಿಕಟ ಸಂಪರ್ಕ ಹೊಂದುವಂತಾಯಿತು. ಅಖಿಲ ಭಾರತದ ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿ ಅತ್ಯಂತ ಮೇಧಾವಿಗಳೂ, ವಾಗ್ಮಿಗಳೂ ಆದ ಚಂದ್ರಶೇಖರ ಸ್ವಾಮಿಗಳು ಪ್ರಥಮ ಸ್ಥಾನ ಪಡೆದರು. ಈ ಕಾರಣದಿಂದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರು ಪಂ। ಬದರಿನಾಥ್ ಶುಕ್ಲಾ ಅವರ ಮೆಚ್ಚಿನ ವಿದ್ಯಾರ್ಥಿಯಾದರು.

ಕೇರಳದಿಂದ ಬಂದ ಮೇಲೆ ಷ॥ ಬ್ರ॥ ಚಂದ್ರಶೇಖರಸ್ವಾಮಿಗಳೂ ಸಂಸ್ಕೃತದಲ್ಲಿ ಎಂ.ಎ. (ಆಚಾರ್ಯ) ಪದವಿ ಗಳಿಸಿದರು. ಆ ಸಮಯದಲ್ಲಿ ಪಂ॥ ಬದರಿನಾಥ್ ಶುಕ್ಲ ಅವರು ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಷ॥ ಬ್ರ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಕಾಶೀಪೀಠದ ಅಂದಿನ ಜಗದ್ಗುರುಗಳಾಗಿ ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಪ್ರೋತ್ಸಾಹದಿಂದ ಪಿಹೆಚ್.ಡಿ. ಪದವಿಗೆ ದಾಖಲಿಸಿಕೊಂಡರು. ಒಂದು ವರ್ಷಕಾಲ ಅವರ ಮಾರ್ಗದರ್ಶಕರಿಂದ ಸರಿಯಾದ ಮಾರ್ಗದರ್ಶನವಿಲ್ಲದೆ – ಏನೂ ಮಾಡಲು ತೋಚದೆ ಸುಮ್ಮನಾಗಿದ್ದರು. 'ಭಾರತೀಯ ದರ್ಶನ ಕೋಶ' – ಮಾಡುವ ಯೋಜನೆಯೊಂದು ಕೇಂದ್ರ ಸರಕಾರದಿಂದ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ದೊರತಿತ್ತು. ಮಾನವ ಸಂಪನ್ಮೂಲ ಸಾಧನ ಮಂತ್ರಾಲಯ (Ministry of Human Resource development Govt. of India) ದ ಯೋಜನೆ ಇದು. ಅಂದಿನ ಕುಲಪತಿಗಳಿಗೆ ತೀರ ಆತ್ಮೀಯ ವಿದ್ಯಾರ್ಥಿಯಾಗಿದ್ದ ಚಂದ್ರಶೇಖರ ಶಿವಾಚಾರ್ಯರಿಗೆ 'ಭಾರತೀಯ ದರ್ಶನ ಕೋಶ' ಮಾಡುವ ಜವಾಬ್ದಾರಿಯನ್ನು ವಹಿಸಿಕೊಟ್ಟರು. ಬಹು ಯಶಸ್ವಿಯಾಗಿ ಅವರು ಈ ಯೋಜನೆಯನ್ನು ಪೂರೈಸಿ ಕೇಂದ್ರ ಸರಕಾರದಿಂದ ಪುರಸ್ಕಾರವನ್ನು ಪಡೆದರು.

'ಭಾರತೀಯ ದರ್ಶನ ಕೋಶ'ದಲ್ಲಿ ಬರುವ ಅಷ್ಟಾವರಣವನ್ನು ಕುರಿತು ಷ॥ ಬ್ರ॥ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ತಾವೇ ಸ್ವತ। 'ವೀರಶೈವ ಅಷ್ಟಾವರಣ ವಿಜ್ಞಾನ' – ಎಂದ ಗ್ರಂಥವನ್ನು ರಚಿಸಿದರು.



ಮುಂದೆ 7–6–1985ರಲ್ಲಿ ಕೇದಾರ ಜಗದ್ಗುರು ರಾವಲ್ ಸಿದ್ಧೇಶ್ವರ ಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪಟ್ಟಾಭಿಷೇಕದ ಸಂದರ್ಭದಲ್ಲಿ 'ವೀರಶೈವ ಅಷ್ಟಾವರಣ ವಿಜ್ಞಾನ ಗ್ರಂಥ'ವನ್ನು ಬಿಡುಗಡೆ ಮಾಡಲಾಯಿತು. ಮುಂದಿನ ಪುಟದಲ್ಲಿರುವ ಚಿತ್ರದಲ್ಲಿ ಹಸಿರು ಬ್ಯಾಡ್ಜ್ ಹಾಕಿರುವವರೇ ಇಂದಿನ ಕಾಶೀ ಪೀಠದ 86ನೇ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ಹೀಗೆ ಇಂದಿನ ಜಗದ್ಗುರುಗಳವರ ಗ್ರಂಥ ರಚನಾಕಾರ್ಯ ಆರಂಭವಾಯಿತು.

1980ರಲ್ಲಿ 'ಸಿದ್ಧಾಂತ ಶಿಖಾಮಣಿ ಸಮೀಕ್ಷಾ' ಪ್ರಬಂಧಕ್ಕೆ ಪಿಹೆಚ್.ಡಿ. ಪದವಿ ದೊರೆಯಿತು. ಈ ಗ್ರಂಥವನ್ನು ಕೇಂದ್ರ ಸರ್ಕಾರ ಪ್ರಕಟಿಸಿತು. ಮುಂದೆ ಡಿ.ಲಿಟ್. ಪದವಿಗಾಗಿ' ಶಕ್ತಿವಿಶಿಷ್ಟಾದ್ವೈತ ತತ್ವತ್ರಯ ವಿಮರ್ಶೆ' ಎಂಬ ವಿಷಯದಲ್ಲಿ ಸಂಶೋಧನೆ ಆರಂಭಿಸಿದ ಮಹಾಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದರು. ಈ ಗ್ರಂಥಕ್ಕೆ ಉತ್ತರಪ್ರದೇಶದ ಸಂಸ್ಕೃತ ಅಕಾಡೆಮಿಯಿಂದ ಶಾಂಕರ ಪ್ರಶಸ್ತಿ ದೊರೆಯಿತು. ಅದೇ ವೇಳೆಗೆ ಕಾಶೀ ಜಗದ್ಗುರುಗಳಾಗಿದ್ದ ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಲಿಂಗೈಕ್ಯರಾದರು. 86ನೇ ಜಗದ್ಗುರುಗಳಾಗಿ ಉಳಿದ ನಾಲ್ವರು ಪಂಚಪೀಠಾಧೀಶ್ವರರು ಒಮ್ಮತದಿಂದ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳನ್ನು ಆಯ್ಕೆ ಮಾಡಿದರು. ಡಿ.ಲಿಟ್. ಪದವಿಯ ಮೌಖಿಕ ಪರೀಕ್ಷೆ ನಡೆಯುವ ಕಾಲಕ್ಕಾಗಲೇ ಜಗದ್ಗುರುಗಳಾಗಿದ್ದರು. ಈ ಮೂರು ಗ್ರಂಥಗಳನ್ನು ಈಗ ಶೈವಭಾರತಿ ಶೋಧ ಪ್ರತಿಷ್ಠಾನ ಪ್ರಕಾಶನ ಪ್ರಕಟಿಸಿದೆ.




7–6–1985 : ಕೇದಾರ ಪೀಠದ ಪಟ್ಟಾಭಿಷೇಕದಲ್ಲಿ ಅಷ್ಟಾವರಣ ವಿಜ್ಞಾನ ಪ್ರಸಾರ ವಿಮೋಚನ


ಜಗದ್ಗುರುಗಳಾದ ಕೂಡಲೆ 48 ದಿನದ ತಪೋನುಷ್ಠಾನವನ್ನು ಪ್ರಾರಂಭಿಸಿದರು. ಈ 48 ದಿನಗಳಲ್ಲಿ ಡಾ॥ ಚಂದ್ರಶೇಖರ ಕಪಾಳೆಯವರನ್ನು ತಮ್ಮ ಜೊತೆ ಇರಿಸಿಕೊಂಡು ಸಿದ್ಧಾಂತ ಶಿಖಾಮಣಿ ಗ್ರಂಥಕ್ಕೆ ವ್ಯಾಖ್ಯಾನ ಸಿದ್ಧಪಡಿಸಿದರು. ಸಿದ್ಧಾಂತಶಿಖಾಮಣಿ ಮರಾಠಿ ಭಾವಾನುವಾದವೂ ಶೈವಭಾರತಿ ಶೋಧ ಪ್ರತಿಷ್ಠಾನದಿಂದ ಪ್ರಕಟಗೊಂಡಿದೆ. ಅದು ಇಂದು ಮಹಾರಾಷ್ಟ್ರದ ವೀರಶೈವರ ಜನಪ್ರಿಯ ಗ್ರಂಥವಾಗಿದೆ. ಹಿಂದಿ ಹಾಗೂ ಮರಾಠಿಯಲ್ಲಿ ಈ ಗ್ರಂಥ ಲಭ್ಯವಿದೆ.


ಸಿದ್ಧಾಂತ ಶಿಖಾಮಣಿ ಪ್ರವಚಪ್ರಭೆ – ಬೃಹತ್ತಾದ ಎರಡು ಸಂಪುಟಗಳು ಕನ್ನಡಿಗರ ಮನೆ ಮನೆಗಳಲ್ಲಿ ರಾರಾಜಿಸುತ್ತಿದೆ. ಇದೇ ಗ್ರಂಥ ಮರಾಠಿಯಲ್ಲಿ 'ಜನ್ಮಹಃ ಅಕೇರಚಾ' ಬಹು ಜನಪ್ರಿಯ.




















ಪ್ರಯಾಗ (ಅಲಹಾಬಾದ) ಕ್ಷೇತ್ರದಲ್ಲಿ
ಅಧಿಕ ಮಾಸದ ಪ್ರೀತ್ಯರ್ಥ,
ಶ್ರೀ ಜಗದ್ಗುರುಗಳವರ
ತಪೋನುಷ್ಠಾನ.

ಈ ವರ್ಷ ದಿ. ೧೫-೪-೯೧ ಸೋಮವಾರದಿಂದ ಅಧಿಕ ವೈಶಾಖ ಮಾಸವು ಪ್ರಾರಂಭವಾಗಲಿದೆ. ಪ್ರತಿ ಮೂರು ವರ್ಷಕ್ಕೊಮ್ಮೆ ಬರುವ ಈ ಅಧಿಕಮಾಸವು ಅತ್ಯಂತ ಪವಿತ್ರವಾದದ್ದು. ಈ ಮಾಸದಲ್ಲಿ ತೀರ್ಥಸ್ನಾನ ಹಾಗೂ ಕ್ಷೇತ್ರದರ್ಶನದಿಂದ ಮಹತ್‌ಪುಣ್ಯವು ಪ್ರಾಪ್ತವಾಗುತ್ತದೆ. ಎಲ್ಲ ಕ್ಷೇತ್ರಗಳಲ್ಲಿ ಕಾಶೀ ಕ್ಷೇತ್ರವು ಬಹು ಶ್ರೇಷ್ಠವಾಗಿದೆ. ಹಾಗೂ ಎಲ್ಲ ತೀರ್ಥಗಳಲ್ಲಿ ಪ್ರಯಾಗ ತ್ರಿವೇಣಿ ಸಂಗಮವು ಪರಮಪಾವನವಾಗಿದೆ.

ಅಂತೆಯೇ ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಈ ಪವಿತ್ರವಾದ ಅಧಿಕ ಮಾಸ ನಿಮಿತ್ತ್ಯವಾಗಿ ಪ್ರಯಾಗ ಕ್ಷೇತ್ರದ ಧಾರಾಗಂಜ ಮೊಹಲ್ಲಾದಲ್ಲಿರುವ ಜಂಗಮವಾಡಿ ಮಠದಲ್ಲಿ ತಪೋನುಷ್ಠಾನವನ್ನು ಕೈಕೊಳ್ಳುತ್ತಾರೆ. ಕಾರಣ ಭಕ್ತಾದಿಗಳು ಈ ಅಧಿಕ ವೈಶಾಖ ಮಾಸದಲ್ಲಿ ಕಾಶಿ ಹಾಗೂ ಪ್ರಯಾಗ (ಅಲಹಾಬಾದ) ಕ್ಷೇತ್ರಗಳ ಯಾತ್ರೆಯನ್ನು ಮಾಡಿ, ಕ್ಷೇತ್ರದರ್ಶನ, ತೀರ್ಥಸ್ನಾನ ಹಾಗೂ ಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದು ಪುನೀತರಾಗಬೇಕಾಗಿ ಕೋರಿಕೆ.

ತಮ್ಮ ವ್ಯವಸ್ಥಾಪಕ,
ಜಂಗಮವಾಡಿ ಮಠ, ವಾರಾಣಾಸಿ-೨೨೧ ೦೦೧.

ಫೋನ ನಂ. : ೬೪೪೦೭

ಪ್ರಯಾಗ ಕ್ಷೇತ್ರದ ವಿಳಾಸ-
ಶ್ರೀ ೧೦೦೮ ಜಗದ್ಗುರು
ಡಾ|| ಚಂದ್ರಶೇಖರ ಶಿವಾಚಾರ್ಯ
ಮಹಾಸ್ವಾಮಿಗಳು ಜಂಗಮವಾಡಿ ಮಠ,
ಧಾರಾಗಂಜ, ವಾರಾಣಾಸಿ.



ಅಲಹಾಬಾದ್ ತ್ರಿವೇಣಿ ಸಂಗಮದಲ್ಲಿ ಕಾಶೀ ಪೀಠದ ಗುರುಕುಲದ ವಿದ್ಯಾರ್ಥಿಗಳೊಂದಿಗೆ ಇಷ್ಟಲಿಂಗ ಪೂಜೆ ಮಾಡುತ್ತಿರುವ ಕಾಶೀ ಜಗದ್ಗುರುಗಳು

ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಪೀಠಾಧಿಕಾರವನ್ನು ಸ್ವೀಕರಿಸಿದ ನಂತರ ಮೊದಲ ಬಾರಿಗೆ ಅಲಹಾಬಾದ್‌ನಲ್ಲಿಯ ಜಂಗಮವಾಡಿ ಖಾಸಾ ಶಾಖಾಮಠದಲ್ಲಿ ಪ್ರಥಮ ಬಾರಿಗೆ 15-4-91ರಿಂದ 14-5-91ರವರೆಗೆ ತಪೋನುಷ್ಠಾನ ಕೈಕೊಂಡಿದ್ದರು.



2013ರಲ್ಲಿ ನಡೆದ ಕುಂಭಮೇಳದಲ್ಲಿ ಪವಿತ್ರಸ್ನಾನ ಮಾಡಲೆಂದು ಕಾಶೀಪೀಠದ ಭಕ್ತರೊಂದಿಗೆ ಆಗಮಿಸಿದ ಕಾಶೀ ಜಗದ್ಗುರುಗಳು





ಕಾಶೀ ಪೀಠದಲ್ಲಿ–ಶಿವರಾತ್ರಿ ದಸರಾ ಉತ್ಸವಗಳು

ಮಹಾಶಿವರಾತ್ರಿಯಂದು ದೇಶದಾದ್ಯಂತ ಶಿವನ ಆರಾಧನೆಯನ್ನು ಬಹು ಭಕ್ತಿಯಿಂದ ಎಲ್ಲಾ ದೇಗುಲಗಳಲ್ಲಿ ಮನೆ ಮನೆಗಳಲ್ಲಿ ಆಚರಿಸಲಾಗುತ್ತಿದೆ. ಸರ್ವಾರಾಧ್ಯನಾದ ಶಿವನು ಸರ್ವಜೀವಿಗಳನ್ನು ಸಮನಾಗಿ ಅನುಗ್ರಹಿಸುತ್ತಾನೆ ಎಂದೇ ಭಾರತೀಯ ಧಾರ್ಮಿಕ ಭಾವನೆಯಾಗಿದೆ. ಆ ಕಾರಣವಾಗಿಯೇ ದೇಶ, ಕಾಲ, ಜಾತಿ, ಮತ ಯಾವ ಭೇದವಿಲ್ಲದೆ ಸರ್ವರೂ ಶಿವನ ಆರಾಧನೆಯನ್ನು ಮಾಡುತ್ತಾರೆ.

ಶಿವರಾತ್ರಿಯ ಮಹಾತ್ಮೆಯನ್ನು ಜಗದ್ಗುರುಗಳು ಹೇಳುತ್ತಾ ಶಿವನು ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯ ಮಹಾಶಿವರಾತ್ರಿ ಮಹಾನಿಶಿಯಲ್ಲಿ ಲಿಂಗರೂಪದಲ್ಲಿ ಪ್ರಕಟವಾದನು. ಅಂತೆಯೇ ಮಹಾಶಿವರಾತ್ರಿಯಂದು ಲಿಂಗಪೂಜೆಗೆ ಮಹತ್ವ ನೀಡಲಾಗಿದೆ ಎಂದು ಹೇಳಿದರು.

ಸಂಜೆ ಆರು ಘಂಟೆಯಿಂದ ಬೆಳಗಿನ ಆರು ಘಂಟೆಯವರೆಗೆ 4 ಪ್ರಹರಗಳಲ್ಲಿ ಲಿಂಗಪೂಜೆಯ ವಿಧಾನ ಮಾಡಲಾಗಿದೆ. ವೀರಶೈವ ಧರ್ಮದ ಪ್ರಕಾರ ಮೊದಲಿನ 3 ಪ್ರಹರಗಳಲ್ಲಿ ಲಿಂಗಪೂಜೆಯಿಂದ ಜೀವಿಗಳ ಆಣವ, ಮಾಯಾ ಮತ್ತು ಕಾರ್ಮಿಕ ಮಲತ್ರಯಗಳು ಇಲ್ಲವಾಗಿ ನಾಲ್ಕನೇ ಪ್ರಹರದಲ್ಲಿ ಶಿವಸಾಮರಸ್ಯವನ್ನು ಜೀವಿ ಪಡೆದುಕೊಳ್ಳುತ್ತಾನೆ. ಶಿವರಾತ್ರಿಯಂದು ಲಿಂಗಪೂಜೆಯ ಜೊತೆಗೆ ಉಪವಾಸ ಹಾಗೂ ಜಾಗರಣೆಯನ್ನು ಆಚರಿಸಲು ಬೋಧಿಸಲಾಗಿದೆ ಎಂದು ವಿವರಿಸಿದರು.

ದೇಶದೆಲ್ಲೆಡೆ ಈ ರೀತಿ ಆಚರಿಸುವಾಗ ಕಾಶೀ ಜಂಗಮವಾಡಿ ಮಹಾಮಠದಲ್ಲಿ ಈ ಶಿವರಾತ್ರಿಗೆ ಇನ್ನೂ ಹೆಚ್ಚಿನ ಮಹತ್ವ ಒದಗಿ ಬಂದಿದೆ. ಮಹಾಶಿವರಾತ್ರಿಯ ಪರ್ವಕಾಲದಲ್ಲಿ ವೀರಶೈವ ಮಹಾಮತ ಸ್ಥಾಪಕ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರು ಕಾಶಿ ವಿಶ್ವನಾಥ ಜ್ಯೋತಿರ್ಲಿಂಗದಿಂದ ಆವಿರ್ಭವಿಸಿ ಈ ಜ್ಞಾನಪೀಠವನ್ನು ಸ್ಥಾಪಿಸಿರುವುದರಿಂದ ಜಂಗಮವಾಡಿ ಮಠದಲ್ಲಿ ಆಚರಿಸುವ ಮಹಾಶಿವರಾತ್ರಿ ಬಹು ವಿಶಿಷ್ಟವಾದದ್ದು. ಮಹಾಶಿವರಾತ್ರಿ ಯಂದು ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿ ಯನ್ನು ಆಚರಿಸಲಾಗುವುದು. ಈ ಎಲ್ಲಾ ವಿಷಯವೂ ಸ್ವಯಂಭೂ ಆಗಮದಲ್ಲಿ ಪ್ರತಿಪಾದಿಸಲಾಗಿದೆ. ಕಾಶೀ ಜ್ಞಾನಪೀಠಕ್ಕೆ 2000 ವರ್ಷಗಳ ಇತಿಹಾಸವಿದೆ. ಈ ಎಲ್ಲಾ ವಿಶೇಷತೆ ಗಳಿಂದಾಗಿ ಇಲ್ಲಿ ಆಚರಿಸುವ ಮಹಾ ಶಿವರಾತ್ರಿ ಆಚರಣೆಗೆ ಬಹು ಮಹತ್ವ ಬಂದಿದೆ.

ಸರ್ವ ಜೀವಿಗಳಿಗೆ ಶಿವನಿಂದ ಅನುಗ್ರಹ : ಕಾಶೀ ಜಗದ್ಗುರು



ವಾರಣಾಸಿ : ಮಹಾಶಿವರಾತ್ರಿ ದಿನದಂದು ಕಾಶಿ ಮಹಾಪೀಠದ ಮೂಲಕರ್ತೃ ಜಗದ್ಗುರು ವಿಶ್ವಾರಾಧ್ಯರ ಜಯಂತ್ಯುತ್ಸವ ನಿಮಿತ್ತ ನಡೆದ ರಥೋತ್ಸವಕ್ಕೆ ಕಾಶೀ ಜಗದ್ಗುರುಗಳು ಚಾಲನೆ ನೀಡಿದರು.

ಜಂಗಮವಾಡಿ ಮಠದಲ್ಲಿ ಮಹಾ ಶಿವರಾತ್ರಿ ನಿಮಿತ್ತ ಎರಡು ದಿನಗಳ ಕಾರ್ಯಕ್ರಮಗಳನ್ನು ಜಗದ್ಗುರುಗಳು ಪೀಠಾಧಿಕಾರ ವಹಿಸಿಕೊಂಡಾಗಲಿಂದ ಆಚರಿಸುತ್ತಾ ಬಂದಿದ್ದಾರೆ. ಪೀಠದ ಪೂರ್ವಾಚಾರ್ಯರೆಲ್ಲರೂ ಶ್ರದ್ಧಾಭಕ್ತಿಯಿಂದ ಮಹಾಶಿವರಾತ್ರಿ ಹಾಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿ ಆಚರಿಸುತ್ತಲಿದ್ದರು. ಜಗದ್ಗುರು ಡಾ॥



ಚಂದ್ರಶೇಖರ ಶಿವಾಚಾರ್ಯರು ವಿಶ್ವಾರಾಧ್ಯ ಜಯಂತಿ, ಮಹಾಶಿವರಾತ್ರಿ ಆಚರಣೆಗಳ ಮುನ್ನಾದಿನ ಬೆಳಗ್ಗೆ ಪಂಚಾಚಾರ್ಯರ ಧ್ವಜಾರೋಹಣ, ಮಧ್ಯಾಹ್ನ 2 ಗಂಟೆಗೆ ಬೃಹತ್ ವಿದ್ವತ್‌ಸಭೆಯನ್ನು ಏರ್ಪಡಿಸಿ ಅದರ ಸಾನ್ನಿಧ್ಯ ವಹಿಸುವ ಜಗದ್ಗುರುಗಳು ಭಾರತದ ಓರ್ವ ಶ್ರೇಷ್ಠ ಸಂಸ್ಕೃತ ವಿದ್ವಾಂಸರಿಗೆ ವಿಶ್ವಾರಾಧ್ಯ ವಿಶ್ವಭಾರತಿ ಪುರಸ್ಕಾರವನ್ನು ಕೊಡುವ ಮತ್ತು ಗ್ರಂಥಗಳ ಬಿಡುಗಡೆ ಮಾಡಿಸುವ ಹೊಸ ಸಂಪ್ರದಾಯವನ್ನು ಇಂದಿನ ಜಗದ್ಗುರುಗಳು 1997ರಲ್ಲಿ ಆರಂಭಿಸಿ ಇದುವರೆವಿಗೆ 18 ಜನ ವಿದ್ವಾಂಸರಿಗೆ ಈ ಪುರಸ್ಕಾರವನ್ನು ಬಹು ವಿಜೃಂಭಣೆಯಿಂದ ಕೊಡುತ್ತಾ ಬಂದಿರುವುದು ಜಂಗಮವಾಡಿ ಮಹಾಮಠದ ವಿಶೇಷತೆಯಾಗಿದೆ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಜಯಂತಿ ನಿಮಿತ್ತವಾದ ಮಹಾಶಿವರಾತ್ರಿಯ ಪರ್ವಕಾಲದಂದು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿದ್ದಾರೆ.

ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಲಿಂಗೋದ್ಭವ ಮೂರ್ತಿಗೆ ಮಹಾರುದ್ರಾಭಿಷೇಕ, ಲಕ್ಷ ಬಿಲ್ವಾರ್ಚನೆ ಮಹಾ ಮಂಗಳಾರತಿ ಮಾಡಲಾಗುವುದು. ಮಧ್ಯಾಹ್ನ 11 ಗಂಟೆಗೆ ಬೆಳ್ಳಿಯ ರಥದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಮೂರ್ತಿಯ ರಥೋತ್ಸವವು ವೈಭವಪೂರ್ಣವಾಗಿ ಜರಗುವುದು. ವಿವಿಧ ವಾದ್ಯಗಳಿಂದೊಡಗೂಡಿದ ಉತ್ಸವದಲ್ಲಿ ವಿವಿಧ ಪ್ರಾಂತ್ಯಗಳ ಸಹಸ್ರಾರು ಜನ ಭಕ್ತರು ರಥವನ್ನು ಎಳೆಯುವ ಸೇವೆ ಮಾಡುವರು. ಶ್ರೀ ಕಾಶೀ ಜಗದ್ಗುರುಗಳು ಉತ್ಸವ ಮೂರ್ತಿಗೆ ಮಹಾಮಂಗಳಾರತಿಯನ್ನು ಮಾಡುವುದರ ಮೂಲಕ ರಥೋತ್ಸವದ ಉದ್ಘಾಟನೆ ಮಾಡುವ ಪದ್ಧತಿ ಬೆಳೆದುಬಂದಿದೆ. ಈ ಉತ್ಸವವನ್ನು ಕಾಶೀಪೀಠದಿಂದ ಗಂಗಾನದಿಯ ದಶಾಶ್ವಮೇಧ ಘಾಟ್‌ನವರೆಗೆ ಮಾಡಲಾಗುವುದು.



ಕಾಶೀ ಜಂಗಮವಾಡಿ ಮಠದಲ್ಲಿ ಮಹಾಶಿವರಾತ್ರಿ ನಿಮಿತ್ತ ಸಾವಿರಾರು ಭಕ್ತರು ಸಾಮೂಹಿಕ ಇಷ್ಟಲಿಂಗಪೂಜೆ ನೆರವೇರಿಸಿದರು.

ಉತ್ಸವದ ನಂತರ ಬೃಹತ್ ಪ್ರಮಾಣದ ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ಪ್ರತಿವರ್ಷ ರಾಷ್ಟ್ರದ ನಾನಾ ಭಾಗಗಳಿಂದ ವೀರಶೈವರು ಆಗಮಿಸಿ ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸುವರು. ರಾತ್ರಿ 9 ಗಂಟೆಗೆ ಮಹಾ ಸನ್ನಿಧಿಯವರ ಸಾನ್ನಿಧ್ಯದಲ್ಲಿ ಧರ್ಮಸಭೆಯು ನಡೆಸಲಾಗುತ್ತಿದೆ. ಈ ಧರ್ಮಸಭೆಯಲ್ಲಿ ಸಾಮಾನ್ಯವಾಗಿ ಅನೇಕ ರಾಜ್ಯಗಳ ಶಾಸಕರು ಮಂತ್ರಿಗಳು ಹೆಸರಾಂತ ಕಲಾವಿದರು ಪಾಲ್ಗೊಳ್ಳುವರು. ವಿಶ್ವಾರಾಧ್ಯ ಜಯಂತಿ ಹಾಗೂ ಮಹಾಶಿವರಾತ್ರಿ ಕುರಿತು ಅನೇಕರು ಉಪನ್ಯಾಸ ಮಾಡುವರು. ಜಗದ್ಗುರುಗಳು ದಾನಿಗಳಿಗೆ, ವಿವಿಧ ಸೇವೆ ಮಾಡಿರುವ ಸದ್ಭಕ್ತರಿಗೆ ಗುರುರಕ್ಷೆ ನೀಡಿ ಆಶೀರ್ವದಿಸಿ ಆಶೀರ್ವಚನ ನೀಡುವರು.

ರಾತ್ರಿ 11 ಗಂಟೆಗೆ ವೀರಶೈವ ವಿಶ್ವಾರಾಧ್ಯ ಗುರುಕುಲದ ವಟುಗಳಿಂದ ಮಠದಲ್ಲಿರುವ ಕಾಶಿ ವಿಶ್ವನಾಥನ ಮಂದಿರದಲ್ಲಿ ಮಹಾರುದ್ರಾಭಿಷೇಕ, ಲಕ್ಷ ಬಿಲ್ವಾರ್ಚನೆ, ಲಕ್ಷ ದೀಪೋತ್ಸವ ಜರುಗಿ ಮಹಾನಿಶಾಕಾಲದಲ್ಲಿ ಜಗದ್ಗುರು ಮಹಾಸನ್ನಿಧಿಯವರ ಸಾನ್ನಿಧ್ಯದಲ್ಲಿ ಮಹಾಮಂಗಲವಾಗಿ ಈ ಪವಿತ್ರ ಸಮಾರಂಭ ಪೂರ್ಣಗೊಳ್ಳುವುದು.

ಶ್ರೀ ಕಾಶೀ ಜಗದ್ಗುರು ಲಿಂ॥ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳ ಜನ್ಮಶತಮಾನೋತ್ಸವ

ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಲಿಂ॥ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳೆಂದರೆ ಅಪಾರ ಗೌರವ. ವೀರಭದ್ರ ಜಗದ್ಗುರುಗಳ ಅನೇಕ ಆದರ್ಶಗಳನ್ನು ಇಂದಿನ ಜಗದ್ಗುರುಗಳು ಮೈಗೂಡಿಸಿಕೊಂಡಿರುವುದಲ್ಲದೆ, ವೀರಭದ್ರ ಜಗದ್ಗುರುಗಳ ಅನೇಕ ಅಪೂರ್ಣವಾಗಿದ್ದ ಯೋಜನೆಗಳನ್ನು ತಾವು ಕೈಗೆತ್ತಿಕೊಂಡು ಪೂರೈಸಿ – ವೀರಭದ್ರ ಜಗದ್ಗುರುಗಳಿಗೆ ಗೌರವ ಸಲ್ಲಿಸಿದ್ದಾರೆ. 2004ನೇ ವರ್ಷ ವೀರಭದ್ರ ಶಿವಾಚಾರ್ಯಸ್ವಾಮಿಗಳ ಜನ್ಮ ಶತಮಾನೋತ್ಸವದ ವರ್ಷ. 2004–2005 ಒಂದು ವರ್ಷಕಾಲ ಇಂದಿನ ಜಗದ್ಗುರುಗಳು ತಾವು ಹೋದೆಡೆಯಲ್ಲೆಲ್ಲಾ ವೀರಭದ್ರ ಶಿವಾಚಾರ್ಯರ ಶತಮಾನೋತ್ಸವವನ್ನು ಆಚರಿಸಿದರು. ಲಿಂ॥ ಜಗದ್ಗುರು ವೀರಭದ್ರ ಶಿವಾಚಾರ್ಯ ಸ್ವಾಮೀಜಿಯವರ ದೈವನಿಷ್ಠೆ, ಸಮಾಜ ಸೇವೆ, ಇದ್ದ ಸ್ವಲ್ಪ ಸಮಯದಲ್ಲಿ ಪೀಠವನ್ನು ಊರ್ಜಿತಗೊಳಿಸಿದ ಬಗ್ಗೆ, ಸಾಹಿತ್ಯ ಪ್ರೇಮದ ಬಗ್ಗೆ – ಹೀಗೆ ಹಲವಾರು ವಿಷಯಗಳನ್ನು ಅಲ್ಲಿ ನೆರೆದಿದ್ದ ಭಕ್ತಾದಿಗಳಿಗೆ ತಿಳಿಸಿದರು. 3ವರ್ಷ, 3 ತಿಂಗಳು, 29 ದಿನಗಳವರೆಗೆ ಮಾತ್ರ ಪೀಠಾಧ್ಯಕ್ಷರಾಗಿದ್ದರೂ ಸಹ ನೂರು ವರ್ಷದಲ್ಲಿ ಸಾಧಿಸಲಸಾಧ್ಯವಾದ ಸಾಧನೆಗಳನ್ನು ಮಾಡಿದರು – ಎಂದು ಸ್ಮರಿಸಿದರು.

ಬಡ ವೀರಶೈವ ಕುಟುಂಬದಲ್ಲಿ ಜನಿಸಿದ ವೀರಭದ್ರ ಶಿವಾಚಾರ್ಯ ಸ್ವಾಮೀಜಿಯವರು ಶಿಕ್ಷಕರಾಗಿ, ಸಂಸ್ಕೃತ ಕಾಲೇಜು ಪ್ರಾಧ್ಯಾಪಕರಾಗಿ ಲಿಪಿತಜ್ಞರಾಗಿ, ಸಂಶೋಧಕರಾಗಿ ಸೇವೆಸಲ್ಲಿಸಿ, ಕೊನೆಗೆ ಕಾಶೀಪೀಠದ ಜಗದ್ಗುರುಗಳಾದರು. ತಮ್ಮ ಬದುಕಿನ ಪ್ರತಿಕ್ಷಣವನ್ನು ಅಧ್ಯಯನದಲ್ಲಿ ಕಳೆದಿರುವ ಅವರ ಜನ್ಮ ಶತಮಾನೋತ್ಸವ ಆಚರಿಸುತ್ತಿರುವುದು ಶ್ಲಾಘನೀಯ ಎಂದು – ಕಾಶೀಪೀಠದ ವೀರಶೈವ ವಿದ್ವತ್ ಸಂಘದ ಪದಾಧಿಕಾರಿಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.



11–12–2004ರಂದು ಜಗದ್ಗುರುಗಳು ಹುಕ್ಕೇರಿಗೆ ಆಗಮಿಸಿ, ವೀರಭದ್ರ ಜಗದ್ಗುರುಗಳ ಕಾಶೀ ಪೀಠದ ಭವ್ಯ ಪರಂಪರೆಯನ್ನು, ಸಾಹಿತ್ಯದ ಶ್ರೀಮಂತಿಕೆಯನ್ನು ಎತ್ತಿಹಿಡಿದವರು ವೀರಭದ್ರ ಜಗದ್ಗುರುಗಳು. ಅವರಿಂದ ಬೆಳೆದಿರುವ ಪೀಠದ ಸಾಹಿತ್ಯ ಭಂಡಾರವು ದೇಶ ವಿದೇಶೀಯರು ಅಧ್ಯಯನ ಮಾಡಲು ಅನುವು ಮಾಡಿಕೊಟ್ಟಿದೆ ಎಂದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ವಿರಕ್ತಮಠದ ಕುಮಾರಸ್ವಾಮಿಗಳು ಮಾತನಾಡಿ ಗುರು ವಿರಕ್ತರಿಗೆ ಭೇದಭಾವವಿಲ್ಲದೆ ಶಿಕ್ಷಣವನ್ನು ನೀಡಿದ ಪವಿತ್ರ ಕ್ಷೇತ್ರ ಕಾಶಿ ಜಂಗಮವಾಡಿ ಮಠ – ಎಂದರು.

ವೀರಭದ್ರ ಜಗದ್ಗುರುಗಳ ಜನ್ಮಶತಮಾನೋತ್ಸವ ಇಂದು

ಸಂಕ, 14–12–2004



ಚೆನ್ನಮ್ಮಕಿತ್ತೂರ, 13 – *ಕ್ರಿ.ಶ. ಆರನೇ ಶತಮಾನದಲ್ಲೇ ಸ್ಥಾಪಿತವಾದದ್ದೆಂಬ ಇತಿಹಾಸವುಳ್ಳ ಕಾಶೀ ವಿಶ್ವಾರಾಧ್ಯ ಜ್ಞಾನಸಿಂಹಾಸನದ ಜಂಗಮವಾಡಿ ಮಠದಲ್ಲಿ ದಿ. 14ರಂದು ಶ್ರೀ ವೀರಭದ್ರ ಜಗದ್ಗುರುಗಳ ಶತಮಾನೋತ್ಸವ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.*

ಮಠದ 84 ಪೀಠಾಧಿಪತಿಯಾಗಿದ್ದ ವೀರಭದ್ರ ಶಿವಾಚಾರ್ಯರು ಬಹುಮುಖ ಪ್ರತಿಭೆಯಿಂದ ಪೀಠಕ್ಕೆ ಮೆರಗು ತಂದಿದ್ದರು. ಆಂಧ್ರದ ನಲಗೊಂಡ ಜಿಲ್ಲೆಯಲ್ಲಿ ಜನಿಸಿದ ಅವರು ವೀರಶೈವ ಧರ್ಮ ಪ್ರಚಾರಕ್ಕಾಗಿ ಅವಿರತ ಶ್ರಮಿಸಿದರು. ಕರ್ನಾಟಕ, ಆಂಧ್ರ ನಾಡಿನ ವೀರಶೈವ ಧರ್ಮಕ್ಕೆ ಭಾವ ಸೇತುವೆಯಾಗಿ ನಿಂತು, ಉತ್ತರದ ಕಾಶಿಯಲ್ಲಿ ಜಗದ್ಗುರು ವಿಶ್ವಾರಾಧ್ಯ ಪೀಠವನ್ನಲಂಕರಿಸಿ ಕೇವಲ ಮೂರುವರೆ ವರ್ಷಗಳಲ್ಲಿಯೇ ಮೂನ್ನೂರು ವರ್ಷಗಳಷ್ಟು ಸಾಧನೆಗೈದರು.

ಸಂಸ್ಕೃತ, ತೆಲುಗು, ಕನ್ನಡ, ಹಿಂದಿ, ಉರ್ದು, ಬೆಂಗಾಲಿ, ಮರಾಠಿ ಹಾಗೂ ಆಂಗ್ಲ ಭಾಷೆಗಳಲ್ಲಿ ಪ್ರಾವಿಣ್ಯರಾಗಿದ್ದ ಅವರು, ತಾಡೋಲೆ ಹಾಗೂ ಶಾಸನಗಳನ್ನು ಓದುವ ಸಾಮರ್ಥ್ಯ ಹೊಂದಿದ್ದರು. ಅಂತೆಯೇ ರಾಯಲ್ ಏಷ್ಯಾಟಿಕ್ ಸೊಸೈಟಿಯವರು ಗೌರವಿಸಿದ್ದಲ್ಲದೆ, ಕಾಶಿ ವಿದ್ವಾಂಸರು 'ವಿದ್ಯಾರತ್ನ' ಪ್ರಶಸ್ತಿ ನೀಡಿ ಸನ್ಮಾನಿಸಿದ್ದರು. ಶ್ರೀಗಳ ಅನೇಕ ಮಹತ್ಕಾರ್ಯಗಳಲ್ಲಿ "ಜ್ಞಾನ ಮಂದಿರ ಗ್ರಂಥಾಲಯ" ಸ್ಥಾಪನೆಯೂ ಒಂದು. ದೇಶದ ಕೆಲವೇ ಪ್ರಾಚ್ಯ ಗ್ರಂಥಾಲಯಗಳಲ್ಲಿ ಇದೂ ಒಂದು ಎಂಬ ಹೆಗ್ಗಳಿಕೆಯೂ ಅದಕ್ಕಿದೆ. ನಿರಂತರ ಜ್ಞಾನಾರ್ಜನೆಗೆ, ಜ್ಞಾನದಾಸೋಹಕ್ಕೆ ಜ್ಞಾನಮಂದಿರ ತವನಿಧಿಯಾಗಿ ನೆಲೆ ನಿಂತಿವೆ.

ಹೀಗೆ ಧರ್ಮಕ್ಕಾಗಿ, ಧರ್ಮ ಜಾಗೃತಿಗಾಗಿ, ಸಾಹಿತ್ಯಕ್ಕಾಗಿ ನಿರಂತರ ಶ್ರಮಿಸಿದ ವೀರಭದ್ರ ಶ್ರೀಗಳ ಶತಮಾನೋತ್ಸವ ದಿನಾಂಕ 14ರಂದು ಕಾಶಿಯ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯುವುದು. ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು.

1–1–2005ರಲ್ಲಿ ಬೆಂಗಳೂರಿನ ವೀರಶೈವ ಆನುಸಂಧಾನ ಸಂಸ್ಥಾನವು ಧನುರ್ಮಾಸದಲ್ಲಿ ಕಾಶೀ ಜಗದ್ಗುರುಗಳವರ ಇಷ್ಟಲಿಂಗ ಮಹಾಶಿವಪೂಜೆ ಹಾಗೂ ಆಧ್ಯಾತ್ಮಿಕ ಆಶೀರ್ವಚನ ಸಮಾರಂಭದಲ್ಲಿ ಲಿಂ॥ ಜಗದ್ಗುರು ವೀರಭದ್ರ ಶಿವಾಚಾರ್ಯರ ಜನ್ಮಶತಮಾನೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.

ಅಂದೇ ವೀರಭದ್ರ ಜಗದ್ಗುರುಗಳ ಜೀವನ–ಸಾಧನೆ ಕುರಿತು ತುಮಕೂರಿನ ಹಿರೇಮಠದ ಡಾ॥ ಶಿವಾನಂದ ಶಿವಾಚಾರ್ಯಸ್ವಾಮಿಗಳು ರಚಿಸಿದ 'ವಿದ್ವದ್ವಿಭೂತಿ' ಗ್ರಂಥವನ್ನು ನ್ಯಾಯಮೂರ್ತಿ ವಿ.ಎಸ್. ಮಳಿಮಠ ಅವರು ಬಿಡುಗಡೆ ಮಾಡಿದರು. ಅಲ್ಪಾವಧಿಯ ಜಗದ್ಗುರುಗಳಾಗಿದ್ದ ವೀರಭದ್ರ ಶಿವಾಚಾರ್ಯರ ಕುರಿತು ಪೀಠದಲ್ಲಿದ್ದ ಎಲ್ಲಾ ಕಡತಗಳನ್ನು, ಪತ್ರಿಕೆಗಳನ್ನು, ಗ್ರಂಥಗಳನ್ನು ಇಂದಿನ ಜಗದ್ಗುರುಗಳು ಸಂಗ್ರಹಿಸಿ ಡಾ॥ ಶಿವಾನಂದ ಶಿವಾಚಾರ್ಯರಿಗೆ ವೀರಭದ್ರ ಜಗದ್ಗುರುಗಳವರನ್ನು ಕುರಿತು ಗ್ರಂಥ ಬರೆಯಲು ಆದೇಶ ಕೊಟ್ಟರು. ಅಲ್ಲಿಯವರೆಗೆ ಕಣ್ಮರೆಯಾಗಿ ಎಲ್ಲೋ ಅಡಗಿದ್ದ ವೀರಭದ್ರ ಜಗದ್ಗುರುಗಳ ಆದರ್ಶ, ಮಾರ್ಗದರ್ಶನ ಎಲ್ಲವೂ ಇಂದು ಎಲ್ಲರಿಗೂ ದೊರಕುವಂತೆ ಇಂದಿನ ಜಗದ್ಗುರುಗಳು ಮಾಡಿದ್ದು – ಅವರ ಮೇಲೆ ಇರಿಸಿರುವ ಭಕ್ತಿ ಗೌರವಗಳ ದ್ಯೋತಕವಾಗಿದೆ.



ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಅಂಗಸಂಸ್ಥೆ ವೀರಶೈವ ಅನುಸಂಧಾನ ಸಂಸ್ಥಾನವು ವೀರಭದ್ರ ಜಗದ್ಗುರುಗಳವರಿಗೆ ಗೌರವ ಸಲ್ಲಿಸಿತು.



ಹೈದರಾಬಾದ್ ವೀರಭದ್ರ ಜಗದ್ಗುರುಗಳ ಜನ್ಮಸ್ಥಳದ ರಾಜಧಾನಿ. ಅಲ್ಲಿ ಬಹುವಿಜೃಂಭಣೆಯಿಂದ ಸಹಸ್ರ ಸಹಸ್ರ ಭಕ್ತಾದಿಗಳು ಸೇರಿ ಜನ್ಮೋತ್ಸವವನ್ನು ಆಚರಿಸಿದರು. ವೀರಭದ್ರ ಜಗದ್ಗುರುಗಳ ಫೋಟೋವನ್ನು ತೊಟ್ಟಿಲಲ್ಲಿಟ್ಟು ತೂಗಿದರು.

ಹೀಗೆ ಇಡೀ ಒಂದು ವರ್ಷಕಾಲ ಪ್ರತೀ ಕಾರ್ಯಕ್ರಮಗಳನ್ನು ಕಾಶೀ ಜಗದ್ಗುರುಗಳು ವೀರಭದ್ರ ಶಿವಾಚಾರ್ಯರ ಸಾಧನೆಗಳನ್ನು ಭಕ್ತಾದಿಗಳಿಗೆ ತಿಳಿಸುತ್ತಾ ತಮ್ಮ ಭಕ್ತಿಪೂರ್ವಕ ಗೌರವವನ್ನು ಅವರಿಗೆ ಸಲ್ಲಿಸಿದರು.

ಕಾಶೀ ಪೀಠದಲ್ಲಿ ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರ ಪುಣ್ಯಾರಾಧನೆಯ ರಜತಮಹೋತ್ಸವ



ಕಾಶೀ ಪೀಠದಲ್ಲಿ 27–9–2014 ರಂದು ಲಿಂ. ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಹಾಗೂ ಕಾಶೀ ಜ್ಞಾನಸಿಂಹಾಸನದ ಸರ್ವ ಪೂರ್ವಾಚಾರ್ಯರ ಪುಣ್ಯಸ್ಮರಣೆ ಮಹೋತ್ಸವವನ್ನು ಕಳೆದ 25 ವರ್ಷಗಳಿಂದ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಶ್ರದ್ಧೆ, ಭಕ್ತಿಯಿಂದ ಆಚರಿಸುತ್ತಾ ಬಂದಿದ್ದಾರೆ. ಅಂದು ಪೀಠದಲ್ಲಿರುವ ಎಲ್ಲಾ ಪೂರ್ವಾಚಾರ್ಯರ ಸಮಾಧಿಗಳ ಮೇಲೆ ಸ್ಥಾಪಿತವಾಗಿರುವ ಶಿವಲಿಂಗಗಳಿಗೆ ಮಹಾ ರುದ್ರಾಭಿಷೇಕ, ರುದ್ರಾಕ್ಷಾರ್ಚನೆ ಮತ್ತು ಬಿಲ್ವಾರ್ಚನೆ ಮಾಡಿ ಭಕ್ತಿ ಸಲ್ಲಿಸುವರು.

ಲಿಂ. ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯಾರಾಧನೆ ನಡೆಸುವ ಕಾಲಕ್ಕೆ ಕಾಶೀ ಜಗದ್ಗುರುಗಳು ತಮ್ಮ ಗುರುಗಳನ್ನು ಬಹುವಾಗಿ ನೆನೆಯುತ್ತಾ ಅವರು ಮಾಡಿರುವ ಪುಣ್ಯಕಾರ್ಯಗಳನ್ನು ಅವರ ಬದುಕು–ವಿದ್ಯಾಭ್ಯಾಸ–ಪೀಠಾಚಾರ್ಯರಾಗಿ ನಿರ್ವಹಿಸಿದ ಕಾರ್ಯಗಳು ಹೀಗೆ ಹಲವಾರು ವಿಷಯಗಳನ್ನು ಪ್ರತೀ ವರ್ಷ ನೆನೆಯುತ್ತಾ ಬಂದಿದ್ದಾರೆ. ಗುರುವೇ ಪ್ರತ್ಯಕ್ಷ ದೈವ–ಎನ್ನುವ ಮಾತನ್ನು ಕಾಶೀ ಜಗದ್ಗುರುಗಳು ತಮ್ಮ ಬಾಳಿನ ಬೆಳವಣಿಗೆಯಲ್ಲಿ ಸಾಕ್ಷಾತ್ ದೈವಸ್ವರೂಪರಂತಿದ್ದ ಲಿಂ. ಜಗದ್ಗುರುಗಳನ್ನು ಸದಾ ಸ್ಮರಿಸುತ್ತಾರೆ. ಕಾಶೀ ಜಗದ್ಗುರುಗಳು ಎಲ್ಲೇ ಪ್ರವಚನವನ್ನು ಆರಂಭಿಸಲಿ ಆದಿ ಜಗದ್ಗುರು ವಿಶ್ವಾರಾಧ್ಯರನ್ನೇ ಮೊದಲುಗೊಂಡು ವಿಶ್ವೇಶ್ವರ ಶಿವಾಚಾರ್ಯ ಪರ್ಯಂತ ಎಲ್ಲಾ ಗುರುಪರಂಪರೆಗೆ ವಂದಿಸಿ ಎಂದೇ ಹೇಳುತ್ತಾ ಬಂದಿರುವುದನ್ನು ನಾವೆಲ್ಲಾ ಕೇಳಿದ್ದೇವೆ.



ಸಂಯುಕ್ತ ಕರ್ನಾಟಕ

SAMYUKTA KARNATAKA HUBLI 4-10-1989 ನಗರ ಮುದ್ರಣ

ಕಾಶಿ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಶ್ರೀಗಳು ಲಿಂಗೈಕ್ಯ

(ಸ್ವಂತ ಸುದ್ದಿಗಾರರಿಂದ)

ರಾಣಿಬೆನ್ನೂರ ೩- ವೀರಶೈವ ಪಂಚ ಪೀಠಗಳಲ್ಲಿ ಒಂದಾದ ಕಾಶೀ ಜ್ಞಾನ ಸಿಂಹಾಸನಾಧೀಶರಾಗಿದ್ದ ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ದಿ. ೩ ರಂದು ಪುಣೆಯ ತಮ್ಮ ಶಾಖಾ ಮಠದಲ್ಲಿ ೭೩ನೇ ವಯಸ್ಸಿನಲ್ಲಿ ಲಿಂಗೈಕ್ಯರಾದರು.

ಶ್ರೀಗಳವರ ಪಾರ್ಥಿವ ಶರೀರವನ್ನು ಇಂದು ವಿಮಾನದಲ್ಲಿ ಕಾಶಿಗೆ ತೆಗೆದುಕೊಂಡು ಹೋಗಿ ಗುರುವಾರ (ದಿ. ೫–೧೦–೮೯) ರಂದು ಅಂತ್ಯ ಸಂಸ್ಕಾರ ನಡೆಸಲಾಗುವದು.

ಜಗದ್ಗುರುಗಳು ಹಿರೇಕೆರೂರು ತಾಲೂಕು ಮಾಸೂರು ಗ್ರಾಮದವರಾಗಿದ್ದು, ತಮ್ಮ ಕಿರಿಯ ವಯಸ್ಸಿನಲ್ಲಿಯೇ ಗುರುತ್ವವನ್ನು ಸ್ವೀಕರಿಸಿ ವೀರಶೈವ ಸಿದ್ಧಾಂತ-ಅಧ್ಯಯನ ಮಾಡಿದ್ದರು.

ಅನೇಕ ವರ್ಷ ಕಾಶೀ ಜಂಗಮವಾಡಿ ಮಠದ ಆಶ್ರಯದಲ್ಲಿ ಸಂಸ್ಕೃತ ಸಾಹಿತ್ಯಗಳ ಅಧ್ಯಯನ ಮಾಡಿದ್ದರು. ೧೪ ನವ್ಹೆಂಬರ ೧೯೪೮ ರಂದು ಕಾಶೀ ಸಿಂಹಾಸನದ ೮೫ನೇ ಜಗದ್ಗುರುಗಳಾಗಿ ಅಧಿಕಾರ ಸ್ವೀಕರಿಸಿ ಸತತ ೪೧ ವರ್ಷಗಳ ವರೆಗೆ ಶ್ರೀ ಪೀಠದ ಮತ್ತು ಧರ್ಮದ ಏಳಿಗೆಗಾಗಿ ಪರಿಶ್ರಮಿಸಿದ್ದಾರೆ.

ಅನೇಕ ವಿದ್ಯಾಸಂಸ್ಥೆಗಳನ್ನು, ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ್ದಾರೆ. ಕಾಶೀ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ ಶಕ್ತಿ ವಿಶಿಷ್ಟಾದ್ವೈತ ಶಾಖೆ ಸ್ಥಾಪಿಸಿ ಅತ್ಯಂತ ಮಹತ್ವದ ಕಾರ್ಯಗೈದಿದ್ದಾರೆ. ಮತ್ತು ಅನೇಕ ವೀರಶೈವ ಧರ್ಮ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಪರಮ ಪೂಜ್ಯ ಜಗದ್ಗುರುಗಳ ಗೌರವಾರ್ಥ ನಾಳೆ ದಿ. ೪ ರಂದು ನಗರದ ದೊಡ್ಡ ಪೇಟೆಯ ಶ್ರೀಬಸವೇಶ್ವರ ದೇವಸ್ಥಾನದಲ್ಲಿ ಶ್ರದ್ಧಾಂಜಲಿ ಸಭೆ ಏರ್ಪಡಿಸಲಾಗಿದೆ. ತಾಲೂಕಿನ ಜನತೆ ಪರವಾಗಿ ಜರುಗುವ ಈ ಶ್ರದ್ಧಾಂಜಲಿ ಸಭೆಯ ನೇತೃತ್ವವನ್ನು ಹೊಸ್ಮಳಿಯ ಷ. ಬ್ರ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ವಹಿಸುತ್ತಾರೆ.

ಮೂಜಗಂ ಕಂಬನಿ

ಹುಬ್ಬಳ್ಳಿ, ೩- ಕಾಶಿಯ ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಶಿವಾಧೀನರಾದುದಕ್ಕೆ ಮೂರುಸಾವಿರ ಮಠದ ಜಗದ್ಗುರುಗಳು ಶೋಕ ವ್ಯಕ್ತಪಡಿಸಿ ಜಗದ್ಗುರುಗಳು ವಿದ್ವಾಂಸರು, ಹೃದಯ ಸಂಪನ್ನರೂ ಆಗಿದ್ದಾರೆಂದೂ ಹೇಳಿದ್ದಾರೆ.

ಇಂದು ಅಂತ್ಯಕ್ರಿಯೆ

ಕಾಶೀಪೀಠದ ಶ್ರೀ ವಿಶ್ವೇಶ್ವರ ಶಿವಾಚಾರ್ಯರ ಶ್ರೀಗಳು ಲಿಂಗೈಕ್ಯ



ಕಾಶಿ,೪-ವೀರಶೈವ ಪಂಚಪೀಠಗಳಲ್ಲಿ ಒಂದಾದ ಕಾಶೀ ಪೀಠದ ಜ್ಞಾನ ಸಿಂಹಾಸನಾಧೀಶ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ದಿನಾಂಕ ೨ ರಂದು ಪುಣೆಯ ಶಾಖಾಮಠದಲ್ಲಿ ತಮ್ಮ ೭೩ನೇ ವಯಸ್ಸಿನಲ್ಲಿ ಲಿಂಗೈಕ್ಯರಾದರು; ಶ್ರೀಗಳವರ ಪಾರ್ಥಿವ ಶರೀರವನ್ನು ಇಂದು ವಿಮಾನದಲ್ಲಿ ಕಾಶೀ ಕ್ಷೇತ್ರಕ್ಕೆ ತರಲಾಗಿದ್ದು, ನಾಳೆ ದಿನಾಂಕ ೫-೧೦-೮೯ ಗುರುವಾರ ದಂದು ಜಂಗಮವಾಡಿಮಠದಲ್ಲಿ ಅಂತ್ಯ ಸಂಸ್ಕಾರ ನೆರವೇರುವುದು;

ಹಿರೇಕೆರೂರ ತಾಲೂಕ ಮಾಸೂರಿನಲ್ಲಿ ಜನಿಸಿದ್ದ ಜಗದ್ಗುರುಗಳು ಕಿರಿಯ ವಯಸ್ಸಿನಲ್ಲಿ ಗುರುತ್ವವನ್ನು ಸ್ವೀಕರಿಸಿ ಕಾಶೀ ಕ್ಷೇತ್ರದಲ್ಲಿ ವೀರಶೈವ ಸಿದ್ಧಾಂತವನ್ನು ಅಧ್ಯಯನ ಮಾಡಿದವರಾಗಿದ್ದರು;

೧೯೪೮ ರ ನವ್ಹೆಂಬರ ೧೪ ರಂದು ಕಾಶೀ ಜ್ಞಾನ ಸಿಂಹಾಸನದ ೮೫ ನೇ ಜಗದ್ಗುರುಗಳಾಗಿ ಅಧಿಕಾರ ಸ್ವೀಕರಿಸಿದ್ದ ಶ್ರೀಗಳು ೪೧ ವರ್ಷಗಳವರೆಗೆ ಧರ್ಮದ ಮತ್ತು ಮಠದ ಏಳಿಗೆಗಾಗಿ ಸಾಕಷ್ಟು ಪರಿಶ್ರಮಿಸಿದ್ದರು;

ಜಗದ್ಗುರುಗಳವರ ಅಧಿಕಾರ ವಧಿಯಲ್ಲಿ ಅನೇಕ ವಿದ್ಯಾಸಂಸ್ಥೆಗಳು, ಪ್ರಸಾದ ನಿಲಯಗಳು, ವಿದ್ಯಾರ್ಥಿ ನಿಲಯಗಳು ಮೈದಾಳಿವೆ; ಕಾಶೀ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ ಶಕ್ತಿ ವಿಶಿಷ್ಟಾದ್ವೈತ ಶಾಖೆಯನ್ನು ಸ್ಥಾಪಿಸುವುದಲ್ಲದೆ ಅನೇಕ ಧರ್ಮಗ್ರಂಥಗಳನ್ನು ಪ್ರಕಟಿಸಿದ್ದರು;

ನಾಗನೂರ ಶ್ರೀಗಳ ಶೋಕ

ವೀರಶೈವ ಸಮಾಜಕ್ಕೆ ಅನುಪಮ ಸೇವೆ ಸಲ್ಲಿಸಿದ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಲಿಂಗೈಕ್ಯರಾದುದಕ್ಕೆ, ಪೂಜ್ಯ ಶ್ರೀ ನಾಗನೂರು ಶಿವಬಸವ ಮಹಾಸ್ವಾಮಿಗಳು, ನಾಗನೂರು ಕಿರಿಯ ಶ್ರೀಗಳು, ಕಾರಂಜಿಮಠದ ಶ್ರೀ ಗುರುಸಿದ್ಧ ಸ್ವಾಮಿಗಳು ತಮ್ಮ ಶೋಕ ವ್ಯಕ್ತಪಡಿಸಿದ್ದಾರೆ;

ಅರ್ಚನ, ಅರ್ಪಣ, ಅನುಭಾವ ಗಳನ್ನು ಕಾಯಕವೆಂಬಂತೆ ಸ್ವೀಕರಿಸಿದ್ದ ಶ್ರೀಗಳು ದಿವ್ಯ ವ್ಯಕ್ತಿತ್ವ ಹಾಗೂ ದೂರದೃಷ್ಟಿಗಳಿಗೆ ಹೆಸರಾದವರಾಗಿದ್ದರು; ಅನೇಕ ಜನರ ಬಾಳಿಗೆ ಬೆಳಕನ್ನು ತೋರಿ, ಶಾಂತಿ ಭರವಸೆಗಳನ್ನು ನೀಡಿದ ಪೂಜ್ಯರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸಿದ್ದಾರೆ;



ಪುಣ್ಯಾರಾಧನೆಯಂದು 27-9-2014 – ಲಿಂ॥ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸನ್ನಿಧಿಯವರ ಸಮಾಧಿಗೆ ರುದ್ರಾಭಿಷೇಕದ ನಂತರ ಅಲಂಕಾರ ಮಾಡಿದಾಗಿನ

ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರು ಹಿರೇಕೆರೂರ ತಾಲೂಕು ಮದಗಮಾಸೂರ ಗ್ರಾಮದಲ್ಲಿ 1917ರ ಮಾರ್ಚ್ 20 ರಂದು ಜನಿಸಿದರು. ತಂದೆ ಪರಮೇಶ್ವರಯ್ಯ, ತಾಯಿ ರುದ್ರಮ್ಮ. ಶ್ರೀಗಳು ಪ್ರಾಥಮಿಕ ಅಧ್ಯಯನ ಪೂರ್ಣಗೊಳಿಸಿ ಶಿಕಾರಿಪುರ ತಾಲೂಕು ಕಡೇನಂದಿಹಳ್ಳಿಯ ಗುರುಮೂರ್ತಿ ಶಾಸ್ತ್ರಿಗಳಲ್ಲಿ ಪ್ರಾಥಮಿಕ ಸಂಸ್ಕೃತ ಅಧ್ಯಯನ ಮಾಡಿದರು. 1937ರಲ್ಲಿ ಶ್ರೀಶೈಲಶಾಖೆಯ ಕ್ಯಾಸನೂರ ಹಿರೇಮಠದ ಪಟ್ಟಾಧಿಕಾರ ಸ್ವೀಕರಿಸಿದರು.

1937ರಲ್ಲಿ ಸೊಲ್ಲಾಪುರದ ವಾರದ ಸಂಸ್ಕೃತ ಪಾಠಶಾಲೆಯ ಪಂ. ಜಗದೀಶ ಶಾಸ್ತ್ರಿಗಳ ಶಿಷ್ಯರಾಗಿ ಕೊಲ್ಕತ್ತದ ಆದ್ಯ ಮತ್ತು ಕಾವ್ಯ, ಮಧ್ಯಮ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯರ ಆದೇಶದಂತೆ ಉನ್ನತ ವ್ಯಾಸಂಗಕ್ಕಾಗಿ 1943ರಲ್ಲಿ ಶ್ರೀ ಕಾಶೀ ಕ್ಷೇತ್ರಕ್ಕೆ ತೆರಳಿದರು.

ಕಾಶೀ ಕ್ಷೇತ್ರದ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನದ ಗುರುಕುಲದಲ್ಲಿ ಪ್ರವೇಶಪಡೆದು ಇಲ್ಲಿಯ ನಾನಾ ಸಂಸ್ಕೃತ ಮಹಾವಿದ್ಯಾಲಯಗಳಲ್ಲಿ ಕಾವ್ಯ, ನ್ಯಾಯ ಮತ್ತು ವೇದಾಂತ ಶಾಸ್ತ್ರಗಳ ಅಧ್ಯಯನ ಮಾಡಿದರು. ಅಂದಿನ ಪೀಠಾಧಿಪತಿಗಳಾಗಿದ್ದ ಲಿಂ. ಜಗದ್ಗುರು ವೀರಭದ್ರ ಶಿವಾಚಾರ್ಯರು ಇವರ ಲಕ್ಷಣ, ವಿದ್ಯಾಚಾತುರ್ಯಾದಿಗಳನ್ನು ಕಂಡು 1948ರ ಜನವರಿ 1ರಂದು ಇವರ ಹೆಸರಿಗೆ ಮೃತ್ಯುಪತ್ರ ಬರೆದು ಅದೇ ವರ್ಷ ಜನವರಿ 25 ರಂದು ಲಿಂಗೈಕ್ಯರಾದರು. ಮೃತ್ಯುಪತ್ರದ ಪ್ರಕಾರ ನವೆಂಬರ್ 14, 1948 ರಂದು ಅಂದಿನ ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯರು ಮತ್ತು ರಂಭಾಪುರಿ ಜಗದ್ಗುರು ವೀರಗಂಗಾಧರ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಕಾಶೀಪೀಠದ ಅಧಿಕಾರ ಸ್ವೀಕರಿಸಿದರು.

ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರು 1948ರಿಂದ 1989ರವರೆಗೆ 41 ವರ್ಷಗಳ ಕಾಲ ಪೀಠಾಚಾರ್ಯರಾಗಿದ್ದು, ಪೀಠದ ಅಭಿವೃದ್ಧಿ ಜತೆಗೆ ಸಮಾಜೋದ್ಧಾರ ಮಾಡಿದ್ದಾರೆ.

ಮಹಾರಾಷ್ಟ್ರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಎಲ್ಲ ಜಿಲ್ಲೆಗಳಲ್ಲಿ ಸಂಚರಿಸಿ ಜನರಲ್ಲಿ ಧರ್ಮಜಾಗೃತಿ ಜತೆಗೆ ಬಡಮಕ್ಕಳ ಶಿಕ್ಷಣಕ್ಕಾಗಿ ಪುಣೆ, ಮಂಗಳವೇಢಾ, ನಾಗಪುರ ಮತ್ತು ಔರಂಗಾಬಾದಗಳಲ್ಲಿ ಉಚಿತ ವಿದ್ಯಾರ್ಥಿ ವಸತಿ ಗೃಹಗಳನ್ನು ಸ್ಥಾಪಿಸಿದ್ದಾರೆ.

ಕಾಶೀ ಕ್ಷೇತ್ರಕ್ಕೆ ಉನ್ನತ ವ್ಯಾಸಂಗಕ್ಕಾಗಿ ಬರುವ ಎಲ್ಲ ಪರಂಪರೆಯ ಮಠಾಧಿಪತಿಗಳಿಗೆ ಅಧ್ಯಯನಕ್ಕೆ ಅನುಕೂಲವಾಗುವುದಕ್ಕಾಗಿ ಇಲ್ಲಿಯ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 1984ರಲ್ಲಿ ವೀರಶೈವ ಅಧ್ಯಯನ ಪೀಠ ಸ್ಥಾಪಿಸಿದರು. ಇಂದು ಸಂಸ್ಕೃತ ಭಾಷೆಯ ಮಾಧ್ಯಮದಿಂದ ಶಕ್ತಿವಿಶಿಷ್ಟಾದ್ವೈತ ಶಾಸ್ತ್ರ ಮತ್ತು ಆಚಾರ್ಯ ಪರೀಕ್ಷೆಗಳ ಅಧ್ಯಯನ ಮಾಡುವ ಜತೆಗೆ ಡಾಕ್ಟರೇಟ್ ಸಹ ಮಾಡಲು ಅನುಕೂಲತೆ ಇದೆ. ಶ್ರೀಗಳು ಅನೇಕ ಅಪ್ರಕಟಿತ ಸಂಸ್ಕೃತ ಗ್ರಂಥಗಳನ್ನು ಮುದ್ರಿಸಿದ್ದಾರೆ. ಕರ್ನಾಟಕ, ಆಂಧ್ರಪ್ರದೇಶಗಳಲ್ಲಿ ಧರ್ಮಪ್ರಚಾರ ಕೈಗೊಂಡು ಧರ್ಮಜಾಗೃತಿ ಮಾಡಿದ್ದಾರೆ.

ಶ್ರೀಗಳು ತಮ್ಮ 72ನೇ ವಯಸ್ಸಿನಲ್ಲಿ ಆಶ್ವೀಜಮಾಸದ ಶುದ್ಧ ತೃತೀಯ ದಿನದಂದು ಪುಣೆ ನಗರದಲ್ಲಿ ಲಿಂಗೈಕ್ಯರಾದರು. ಅವರ ಪಾರ್ಥಿವ ಶರೀರವನ್ನು ವಿಶೇಷ ವಿಮಾನ ಮೂಲಕ ಕಾಶಿಗೆ ತರಲಾಯಿತು. ಶ್ರೀಕ್ಷೇತ್ರದಲ್ಲಿ ಅಂದಿನ ರಂಭಾಪುರಿ ಮತ್ತು ಕೇದಾರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಕ್ರಿಯಾಸಮಾಧಿ ಮಾಡಲಾಯಿತು.



ಗಂಗಾನದಿ ಘಾಟ್‌ನಿಂದ ಜಂಗಮವಾಡಿ ಮಠಕ್ಕೆ ಗಂಗೆ ತರುವಾಗಿನ ದೃಶ್ಯ

ಇಂದಿಗೆ ಶ್ರೀಗಳು ಲಿಂಗೈಕ್ಯರಾಗಿ 25 ವರ್ಷ ಪೂರ್ಣಗೊಂಡಿವೆ. ಶ್ರೀಪೀಠದಲ್ಲಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಅವರ 25ನೇ ಪುಣ್ಯಾರಾಧನೆಯನ್ನು ಆಚರಿಸಲಾಯಿತು. ಅಂದು ಬೆಳಗಿನ ಜಾವ 5 ಗಂಟೆಗೆ ಮಂಗಳವಾದ್ಯಗಳ ಸಮೇತ ನೂರಾರು ಭಕ್ತರು ಗಂಗಾನದಿಗೆ ತೆರಳಿ ಶಾಸ್ತ್ರೋಕ್ತವಾಗಿ ಗಂಗೆಗೆ ಪೂಜೆ ಸಲ್ಲಿಸಿ ಕುಂಭಗಳಲ್ಲಿ ಗಂಗೆಯನ್ನು ಮೆರವಣಿಗೆಯ ಮೂಲಕ ಪೀಠಕ್ಕೆ ತರಲಾಯಿತು. ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಗದ್ದುಗೆ ಜೊತೆಯಲ್ಲಿ – ಶ್ರೀ ಪೀಠದಲ್ಲಿರುವ ಪೂರ್ವಾಚಾರ್ಯರು ಸಮಾಧಿಗಳ ಮೇಲೆ ಗಂಗಾಭಿಷೇಕ ಮಾಡಿದ ನಂತರ ವಿಶ್ವೇಶ್ವರ ಶಿವಾಚಾರ್ಯರು ಗದ್ದುಗೆ ಮಠದ ವಿದ್ಯಾರ್ಥಿಗಳೆಲ್ಲ ಸೇರಿ ರುದ್ರಾಭಿಷೇಕ, ರುದ್ರಾಕ್ಷಾರ್ಚನೆ, ಬಿಲ್ವಾರ್ಚನೆ ಮಾಡಲಾಯಿತು. ನಂತರ ಗದ್ದುಗೆಯನ್ನು ಅಲಂಕರಿಸಿದ ನಂತರ ಜಗದ್ಗುರುಗಳು ಆಗಮಿಸಿ ಮಹಾಮಂಗಳಾರತಿಯನ್ನು ನೆರವೇರಿಸಿದರು. ಸಂಜೆ ಧರ್ಮಸಭೆ ನಡೆಸಿ ತಿಳಿಸಿದರು. ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರವಿಟ್ಟು ಜಗದ್ಗುರುಗಳು ಪೂಜೆ ಸಲ್ಲಿಸಿ ಮಂಗಳಾರತಿಯನ್ನು ಮಾಡಿದರು. ಬಿ.ವಿ.ಬಿ. ಬಣ್ಣದ್ ಅವರಿಂದ ದೊಡ್ಡಾಟ ಕಾರ್ಯಕ್ರಮದಲ್ಲಿ 'ಭಕ್ತ ಮಾರ್ಕಂಡೇಯ ಎಂಬ ನಾಟಕವನ್ನು ಏರ್ಪಡಿಸಲಾಗಿತ್ತು. ನಾಟಕದ ಮುಖ್ಯಸ್ಥರಿಗೆ ಜಗದ್ಗುರುಗಳು ಸನ್ಮಾನಿಸಿದರು.

ಕಾಶೀ ಪೀಠದಲ್ಲಿ ದಸರಾ ಮಹೋತ್ಸವ

ಕಾಶೀ ಕ್ಷೇತ್ರದಲ್ಲಿ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನದ ಜಂಗಮವಾಡಿ ಮಠದಲ್ಲಿ ನವರಾತ್ರಿ ಹಾಗೂ ವಿಜಯದಶಮಿ ಉತ್ಸವವನ್ನು ಬಹು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಪ್ರತಿದಿನ ಬೆಳಗ್ಗೆ 6ರಿಂದ 8ಗಂಟೆಯವರೆಗೆ ವಿದ್ವಾಂಸರಿಂದ ದುರ್ಗಾಸಪ್ತಶತಿ ಪಾರಾಯಣ, ಶ್ರೀಯಂತ್ರಕ್ಕೆ ಕುಂಕುಮಾರ್ಚನೆ, 8ರಿಂದ 10ರವರೆಗೆ ಡಾ॥ ಚಂದ್ರಶೇಖರ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಇಷ್ಟಲಿಂಗ ಮಹಾಪೂಜೆ, ಬಿಲ್ವಾರ್ಚನೆ, ಪಾದಪೂಜೆ, ಪಾದೋದಕ ಪ್ರಸಾದ ನೆರವೇರುವುದು. ವಿಜಯದಶಮಿ ನಿಮಿತ್ತ ಸಂಜೆ 5 ಗಂಟೆಗೆ ಜಗದ್ಗುರುಗಳಿಂದ ಶಮೀಪೂಜೆ ನಡೆದು, ಪರಸ್ಪರ ಶಮೀಪ್ರದಾನದ ನಂತರ ಧಾರ್ಮಿಕ ಸಭೆಯಲ್ಲಿ ವಿದ್ವಾಂಸರು ಮತ್ತು ಶಿವಾಚಾರ್ಯರು ಧರ್ಮೋಪದೇಶ ಮಾಡುವರು. ಕೊನೆಯಲ್ಲಿ ಕಾಶೀ ಜಗದ್ಗುರುಗಳು ಆಶೀರ್ವಚನ ನೀಡುವರು. ಇದು ಪೀಠದಲ್ಲಿ ಆಚರಿಸುವ ದಸರಾ ಪದ್ಧತಿ.

ದಶವಿಧ ಪಾಪಹರಣ ಮಾಡುವುದೇ ದಶಹರಾ


ಕಾಶೀ ಮಹಾಪೀಠದಲ್ಲಿ ವಿಜಯದಶಮಿ ದಿನದಂದು ಶ್ರೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಶಮೀಪೂಜೆ ನೆರವೇರಿಸಿದರು.

ದಶ ಇಂದ್ರಿಯಗಳಿಂದ ಉಂಟಾಗುವ ಪಾಪಗಳನ್ನು ಹರಣ ಮಾಡುವುದೇ ದಸರಾ. ಮನುಷ್ಯನಿಗೆ ಪಂಚ ಕರ್ಮೇಂದ್ರಿಯ ಮತ್ತು ಪಂಚ ಜ್ಞಾನೇಂದ್ರಿಯಗಳು ಇರುತ್ತವೆ. ಇವುಗಳ ಮೂಲಕ ಶುಭ ಕರ್ಮಗಳನ್ನು ಮಾಡಿ ಮಾನವ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು. ಘಟಸ್ಥಾಪನೆ ಮಾಡಿ ಅಖಂಡ ದೀಪವನ್ನಿಟ್ಟು ಕೆಲವರು ದುರ್ಗಾಸಪ್ತಶತಿಯನ್ನು ಇನ್ನು ಕೆಲವರು ಶ್ರೀದೇವಿ ಮಹಾತ್ಮೆ ಪುರಾಣ ಪಾರಾಯಣ ಮಾಡುತ್ತಾರೆ. ಈ ಪುರಾಣದಲ್ಲಿ ಬರುವ ಕುಂಭ, ನಿಕುಂಭ, ರಕ್ತಬೀಜ, ಧೂಮ್ರಲೋಚನ, ಚಂಡ-ಮುಂಡ ಮತ್ತು ಸುಗ್ರೀವ ಮುಂತಾದ ರಾಕ್ಷಸರು ಬೇರಾರೂ ಅಲ್ಲ. ಅವರೆಲ್ಲಾ ನಮ್ಮಲ್ಲಿರುವ ಅಹಂಕಾರ, ಕಾಮ, ಕ್ರೋಧ, ದರ್ಪ ಮತ್ತು ಪರಿಗ್ರಹಗಳೆಂಬ ಅಸುರೀ ಭಾವನೆಗಳೇ ಆಗಿವೆ. ನವರಾತ್ರಿಯಲ್ಲಿ ದೇವಿಯನ್ನು ಆರಾಧಿಸಿದಾಗ ಈ ಅಸುರೀ ಭಾವನೆಗಳ ಮೇಲೆ ವಿಜಯವನ್ನು ಹೊಂದಿ ಪಾಪವೃತ್ತಿಯಿಂದ ದೂರವಾಗುವುದು ಸಾಧ್ಯ ಎಂದು ಜಗದ್ಗುರುಗಳು ದಸರಾ ಉತ್ಸವದ ದಿನ ಆಶೀರ್ವಚನದಲ್ಲಿ ತಿಳಿಸಿದರು.

ವಿಜಯದಶಮಿಯ ದಿನದಂದು ಶಮೀಗಿಡ ಪೂಜಿಸಿ ಅದರ ಎಲೆಯನ್ನು ಪರಸ್ಪರ ಆದಾನ-ಪ್ರದಾನಗಳನ್ನು ಮಾಡುವ ಪದ್ಧತಿ ರೂಢಿಯಲ್ಲಿದೆ. ಇದರಿಂದ ಪರಸ್ಪರ ದ್ವೇಷಭಾವನೆ ಮರೆತು ಸೌಹಾರ್ದದಿಂದ ಬದುಕುವ ಸಂದೇಶ ವ್ಯಕ್ತವಾಗುವುದು. ಹೀಗೆ ನವರಾತ್ರಿಯು ಪಾಪ ನಾಶಕವೂ, ಸೌಹಾರ್ದ ವರ್ಧಕವೂ ಆಗಿದೆ ಎಂದು ಹೊಸ ನಿಟ್ಟಿನಲ್ಲಿ ಆಲೋಚನೆಗೆ ಹಚ್ಚುವಂತೆ ಜಗದ್ಗುರುಗಳು ಹೇಳಿದರು.

ಪಾಪ ಕಳೆದುಕೊಳ್ಳಲು ಶಾಸ್ತ್ರಗಳಲ್ಲಿ ಅನೇಕ ಧರ್ಮಾಚರಣೆಯನ್ನು ಹೇಳಲಾಗಿದೆ. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯಾ, ಕ್ಷಮಾ, ದಾನ, ಪೂಜಾ, ಜಪ ಮತ್ತು ಧ್ಯಾನ ಎಂಬುದಾಗಿ ಹತ್ತು ಧರ್ಮಾಚರಣೆ ಹೇಳಲ್ಪಟ್ಟಿವೆ. ಇವುಗಳಲ್ಲಿ ಇಷ್ಟದೇವರ ಪೂಜೆ, ಆ ದೇವರ ಮಂತ್ರ ಜಪ ಮತ್ತು ಧ್ಯಾನಾದಿಗಳನ್ನು ಪ್ರತಿಯೊಬ್ಬರೂ ಸಹಜವಾಗಿ ಆಚರಿಸಬಹುದಾಗಿದೆ ಎಂದು ಉಪದೇಶ ಮಾಡಿದರು.

ತಂತ್ರಶಾಸ್ತ್ರದಲ್ಲಿ 2 ವರ್ಷದಿಂದ 10 ವರ್ಷದವರೆಗಿನ ಕುಮಾರಿಯನ್ನು ಸಾಕ್ಷಾತ್ ದೇವಿಯೆಂದು ಭಾವಿಸಿ ಅವಳನ್ನು ಪೂಜಿಸಿ ಭೋಜನಾದಿಗಳಿಂದ ತೃಪ್ತಿಪಡಿಸುವ ವಿಧಾನ ಪ್ರತಿಪಾದಿತವಾಗಿದೆ. ಆ ಶಾಸ್ತ್ರದ ಪ್ರಕಾರ ಎರಡು ವರ್ಷದ ಕುಮಾರಿಗೆ ಕನ್ಯಾಕುಮಾರಿ, ಮೂರುವರ್ಷಕ್ಕೆ-ತ್ರಿಪುರಾರಿ, 4 ವರ್ಷಕ್ಕೆ – ಕಲ್ಯಾಣಿ, ಐದು ವರ್ಷಕ್ಕೆ – ರೋಹಿಣಿ, ಆರು ವರ್ಷದ ಹೆಣ್ಣು ಮಗುವಿಗೆ ಕಾಲಿಕಾ, ಏಳು ವರ್ಷದ ಹೆಣ್ಣು ಮಗುವಿಗೆ ಚಂಡಿಕಾ, ಎಂಟು ವರ್ಷದ ಹೆಣ್ಣು ಮಗುವಿಗೆ ಶಾಂಭವಿ, ಒಂಬತ್ತು ವರ್ಷದ ಹೆಣ್ಣು ಮಗುವಿಗೆ ದುರ್ಗಾ ಮತ್ತು ಹತ್ತು ವರ್ಷದ ಹೆಣ್ಣು ಮಗುವಿಗೆ ಸುಭದ್ರಾ ಎಂಬುದಾಗಿ ಕರೆಯುತ್ತಾರೆ. ಹೀಗೆ ನವರಾತ್ರಿಯಲ್ಲಿ ನಡೆಯುವ ಕುಮಾರಿಕಾ ಪೂಜೆಯು ತೃಪ್ತಿದಾಯಕವೂ ಫಲದಾಯಕವೂ ಆಗಿರುತ್ತದೆ. ಇಂಥ ಪೂಜೆಗಳಿಂದ ಸ್ತ್ರೀ ಶಕ್ತಿಯನ್ನು ಗೌರವಿಸುವ ಭಾವನೆಗಳು ಬೆಳೆಯುತ್ತದೆ ಎಂದು ತಂತ್ರಶಾಸ್ತ್ರದ ವಿಚಾರಗಳನ್ನು ತಮ್ಮ ಆಶೀರ್ವಚನದಲ್ಲಿ ಜಗದ್ಗುರುಗಳು ತಿಳಿಸುತ್ತಾ ಬಂದಿದ್ದಾರೆ.

ಶ್ರೀಪೀಠದಲ್ಲಿ ನವರಾತ್ರಿ ಒಂಬತ್ತು ದಿನಗಳವರೆಗೆ ಸಾಮೂಹಿಕ ಇಷ್ಟಲಿಂಗಪೂಜೆ, ದುರ್ಗಾಸಪ್ತಶತಿಯ ಪಾರಾಯಣ, ಹೋಮ, ಹವನ ಹಾಗೂ ಧರ್ಮ ಸಭೆಯನ್ನು ನಡೆಸುತ್ತಾ ಬಂದಿದೆ.

2010ನೇ ವರ್ಷದ ದಸರಾ ಮಹೋತ್ಸವ ಆಚರಣೆ ಮರೆಯುವಂತಿಲ್ಲ. ಕಾಶೀ ಕ್ಷೇತ್ರದಲ್ಲಿ ಮುನ್ನೂರಕ್ಕೂ ಹೆಚ್ಚು ಮಠಗಳಿವೆ. ಇವುಗಳಲ್ಲಿ ಸನಾತನ ವೀರಶೈವ ಧರ್ಮದ ಪಂಚಪೀಠಗಳ ಪರಂಪರೆಯ ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನ ಸಿಂಹಾಸನದ ಜಂಗಮವಾಡಿ ಮಹಾಮಠವೇ ಪುರಾತನವಾದುದು. ಈ ಕಾಶೀಪೀಠಕ್ಕೆ, ಕಾಶೀ ನರೇಶ (ಕಾಶೀರಾಜ) ಜಯನಂದನ ದೇವನು ಕ್ರಿ.ಶ. 574ರಲ್ಲಿ 365 ಎಕರೆ ಭೂದಾನ ಮಾಡಿದ ಕಾಗದದಲ್ಲಿ ಬರೆದ ದಾನಪತ್ರವು ಪೀಠದಲ್ಲಿ ಇಂದಿಗೂ ಸುರಕ್ಷಿತವಾಗಿದೆ. ಈ ಭೂಮಿಯಲ್ಲಿ ಅಂದೇ ಜಂಗಮಪುರ ಸ್ಥಾಪಿತವಾಗಿದ್ದು, ಆ ಊರು ಇಂದಿಗೂ ಹಿಂದೂ ಬನಾರಸ್ ವಿಶ್ವವಿದ್ಯಾಲಯದ ಬಳಿ ಇದೆ.

PART - II

Exhibit -1

No. 500-Al.-Grant (Danpatra) by Maharaja of Benares to Goswami Mallikarjun Jangam.

(FROM THE ORIGINAL PRESERVED INSIDE A FRAME).

A bow to Ganesh ‘Patsahi’ (certified to be correct)

Here there is a drawing of ‘ankush’ (goad for elephant)

Shri Vishweshwar.

By Order of Swasti Shri Maharajadhiraj Shri Shri Shri Maharaj Jainand Dev Kashinaresh land has been granted to Gosain Mallikarjun Jangam of Shri Vishvaradhya Sinhasan out of the Gocharan Van between-

Kardameshwar Mahadeo and the Ganges (paper worn out.due to age and letters missing by half). North-South 800 steps. Whatever is produced in this land shall be enjoyed by you Gosain Mallikarjun along with your 'sampraday' (community) always and for ever. Anybody who casts an evil eye on this (paper worn out and whole line missing).

Anybody who takes back this land gifted by him or anybody else becomes a worm, of the filth for sixty thousand years. The doings of man are watched by sun, moon, air, fire, sky, earth, water, heart, yam, day and night and both the evenings and 'dharma'. Out of making a gift and protecting a gift it is better to protect. By making a gift one attains heaven and by protecting 'moksha'. By protecting another's gift one attains double the merit of making a gift. By taking away another's gifted things one's own gift becomes useless.

Miti Kartik Shukla Dheothan Ekadeshi, Sambat 63.1.

In the Court of the Additional Subordinate Judge of Benares.

Suit No. 12 of 1932. Mallikarjun Jangam vs. Nishi Kant and others. Filed by the plaintiff, on 10th February, 1933. Exhibit 1.

Admitted against the defendant. (Sd.) B.P.,

A. S. J. 5ht October, 1933.

(Translated by H. B. Joshi in the presence of expert Ram Chandra Prasad.)

ಕ್ರಿ.ಶ. 574ರಲ್ಲಿ ಕಾಶೀ ರಾಜರ ವಂಶಸ್ಥರು ಕಾಶೀ ನರೇಶ ಎಂದೇ ಹೆಸರಾಗಿರುವವರು ಇಂದಿಗೂ ಕಾಶಿಯಲ್ಲಿದ್ದಾರೆ. ನವರಾತ್ರಿ ಶುಭ ದಿನದಂದು ಕಾಶೀ ರಾಜವಂಶಸ್ಥರ ಸಮ್ಮುಖದಲ್ಲಿ ಕಾಶೀ ಕ್ಷೇತ್ರದ ಸುಪ್ರಸಿದ್ಧ ರಾಮಲೀಲಾ ಮೈದಾನದಲ್ಲಿ ರಾಮಲೀಲೆಯನ್ನು ನಡೆಸುವ ಪದ್ಧತಿ ಇಂದಿಗೂ ಬೆಳೆದುಬಂದಿದೆ. 2010ರ ದಸರಾ ಮಹೋತ್ಸವಕ್ಕೆ ಕಾಶೀ ನರೇಶ ಅನಂತ ನಾರಾಯಣ ಸಿಂಹ ಅವರು ಕಾಶೀ ಜ್ಞಾನ ಸಿಂಹಾಸನದ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯರಿಗೆ ರಾಮಲೀಲಾ ಮೈದಾನಕ್ಕೆ ಬರಲು ವಿಶೇಷ ಆಮಂತ್ರಣ ನೀಡಿದ್ದರು. ಸುಮಾರು 15 ಶತಮಾನಗಳಷ್ಟು ಇತಿಹಾಸವಿರುವ ಕಾಶೀ ಮಹಾ ರಾಜನ ವಂಶಸ್ಥರಾದ ಕಾಶೀ ನರೇಶ ಅನಂತ ನಾರಾಯಣಸಿಂಹ ಮತ್ತು ಜಂಗಮವಾಡಿ ಮಹಾಮಠದ ಜಗದ್ಗುರುಗಳು ಅಪೂರ್ವ ಸಂಗಮಕ್ಕೆ ಅಲ್ಲಿನ ಸಹಸ್ರಾರು ನಿವಾಸಿಗಳು ಸಾಕ್ಷಿಯಾದರು.

ಮನಸೂರೆಗೊಂಡ ರಾಮಲೀಲಾ ಉತ್ಸವ

ಕಾಶೀ ನರೇಶ, ಕಾಶೀ ಶ್ರೀಗಳ ಅಪೂರ್ವ ಸಂಗಮ

ವಿಜಯ ಕರ್ನಾಟಕ



ಕಾಶೀನರೇಶ, ಕಾಶೀ ಶ್ರೀಗಳ ಅಪೂರ್ವ ಸಂಗಮ

ವಿಶ್ವನಾಥನ ಪವಿತ್ರ ಭೂಮಿ ಕಾಶಿ ಕ್ಷೇತ್ರದಲ್ಲಿ ನವರಾತ್ರಿಯ ಶುಭದಿನದಂದು ನಡೆದ ಅಪರೂಪದ ಕಾರ್ಯಕ್ರಮ ಅಲ್ಲಿ ನೆರೆದಿದ್ದ ಸಹಸ್ರಾರು ಜನತೆಗೆ ರೋಮಾಂಚನವನ್ನುಂಟುಮಾಡಿತು.

ಅಂದಾಜು 15 ಶತಮಾನಗಳ ಇತಿಹಾಸವಿರುವ ಕಾಶೀ ಮಹಾರಾಜರ ವಂಶಸ್ಥರಾದ ಕಾಶೀ ನರೇಶ ಅನಂತ ನಾರಾಯಣ ಸಿಂಹ ಮತ್ತು ವೀರಶೈವ ಧರ್ಮದ ಪಂಚಪೀಠಗಳ ಪರಂಪರೆಯ ಕಾಶೀ ಪೀಠದ ಇಂದಿನ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಅಪೂರ್ವ ಸಂಗಮಕ್ಕೆ ಅಲ್ಲಿನ ನಿವಾಸಿಗಳು ಸಾಕ್ಷಿಯಾದರು.

ಕಾಶಿರಾಜರ ವಿಶೇಷ ಆಮಂತ್ರಣ ಮೇರೆಗೆ ಕಾಶೀ ಜಗದ್ಗುರುಗಳು ರಾಮಲೀಲಾ ಉತ್ಸವ ವೀಕ್ಷಿಸಲು ರಾಮನಗರದ ರಾಮಲೀಲಾ ಮೈದಾನಕ್ಕೆ ಆಗಮಿಸುತ್ತಿದ್ದಂತೆ ರಾಜಾ ಅನಂತ ನಾರಾಯಣ ಸಿಂಹ ತಮ್ಮ ಮಕ್ಕಳಾದ ಅನಿರುದ್ಧ ನಾರಾಯಣ ಸಿಂಹ ಮತ್ತು ಚಿ. ಪ್ರದ್ಯುಮ್ನ ನಾರಾಯಣ ಸಿಂಹ ಅವರೊಂದಿಗೆ ಭಕ್ತಿಯಿಂದ ಮಾಲಾರ್ಪಣೆ ಮಾಡಿ ಸ್ವಾಗತಿಸಿದರು.

ಕಾಶೀ ಜಗದ್ಗುರುಗಳು ಪೀಠದ ಗುರುರಕ್ಷಾ ಆಶೀರ್ವಾದ ಅನುಗ್ರಹಿಸಿ ಗೌರವಿಸಿದರು. ಕಾಶೀ ಪೀಠ ಮತ್ತು ಕಾಶೀ ನರೇಶರ ಗುರುಮನೆ–ಅರಮನೆಗಳ ಪ್ರಾಚೀನ ಸಂಬಂಧವನ್ನು ಪರಸ್ಪರರು ಹಂಚಿಕೊಂಡು ರಾಜಾ ಅನಂತನಾರಾಯಣ ಸಿಂಹ ಹಾಗೂ ಅವರ ಪುತ್ರರನ್ನು ಆಶೀರ್ವದಿಸಿದರು.

ಅಂಬಾರಿಯಿಂದ ಅಲಂಕರಿಸಿದ ಒಂದು ಆನೆ ಮೇಲೆ ಕಾಶೀ ಮಹಾರಾಜರು, ಇನ್ನೊಂದು ಆನೆ ಮೇಲೆ ಕಾಶೀ ಜಗದ್ಗುರುಗಳು ಮುಹೂರ್ತ ಮಾಡಿದರು. ಉಳಿದ ಮೂರು ಆನೆಗಳ ಮೇಲೆ ಮಹಾರಾಜರ ಪರಂಪರೆಯ ಮಹಾಮಂತ್ರಿ ಮತ್ತು ಪರಿವಾರದವರೆಲ್ಲ ಆಸೀನರಾದರು. ಈ ರಾಜವೈಭವವನ್ನು ಕಂಡ ಜನಸಾಗರ ಹರ–ಹರ ಮಹಾದೇವ ಎಂಬ ಜಯಘೋಷದೊಂದಿಗೆ ಕಾಶೀ ಶ್ರೀ ಮತ್ತು ಕಾಶೀ ನರೇಶರನ್ನು ರಾಮಲೀಲಾ ಮೈದಾನದಲ್ಲಿ ಸ್ವಾಗತಿಸಿದರು. ರಾಮಾಯಣದಲ್ಲಿನ ಕುಂಭಕರ್ಣ ವಧೆಯ ಪ್ರಸಂಗ ಆರಂಭವಾಗಿ ಮಂಗಳಾರತಿಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಕಾಶೀರಾಜರ ವಿಶೇಷ ಆಮಂತ್ರಣದ ಮೇರೆಗೆ ರಾಮಲೀಲೆ ನೋಡಲು ಶ್ರೀಪೀಠದ ವಿಶೇಷ ಸಿಬ್ಬಂದಿಯೊಂದಿಗೆ ರಾಮನಗರದ ರಾಮಲೀಲಾ ಮೈದಾನಕ್ಕೆ ಕಾಶೀ ಜಗದ್ಗುರುಗಳು ಬರುತ್ತಿದ್ದಂತೆಯೇ ರಾಜಾ ಅನಂತ ನಾರಾಯಣ ಸಿಂಹ ಅವರು, ಪುತ್ರರಾದ ಅನಿರುದ್ಧ ನಾರಾಯಣ ಸಿಂಹ ಮತ್ತು ಪ್ರದ್ಯುಮ್ನ ನಾರಾಯಣ ಸಿಂಹ ಅವರೊಂದಿಗೆ ಭಕ್ತಿಯಿಂದ ಮಾಲಾರ್ಪಣೆ ಮಾಡಿ ಸ್ವಾಗತಿಸಿದರು.

ವಿಶ್ವ ಪ್ರಸಿದ್ಧ ರಾಮಲೀಲಾ ಮೈದಾನಕ್ಕೆ ಹರಿದುಬಂದ ಜನಸಾಗರ

ಇದೇ ಸಂದರ್ಭದಲ್ಲಿ ಕಾಶೀ ಜಗದ್ಗುರುಗಳು ಶ್ರೀ ಪೀಠದ ವತಿಯಿಂದ ಕಾಶೀ ರಾಜರಿಗೆ ಗುರುರಕ್ಷಾ ಆಶೀರ್ವಾದ ಅನುಗ್ರಹಿಸಿ ಗೌರವಿಸಿದರು. ಕಾಶೀ ಪೀಠ ಮತ್ತು ಕಾಶೀ ನರೇಶರವರ ಗುರುಮನೆ–ಅರಮನೆಗಳ ಪ್ರಾಚೀನ ಸಂಬಂಧವನ್ನು ನೆನಪಿಸಿಕೊಂಡು ಪರಸ್ಪರ ಸಂತಸ ಹಂಚಿಕೊಂಡರು. ಮುಂದೆಯೂ ಈ ಸಂಬಂಧವನ್ನು ಮುಂದುವರೆಸಿಕೊಂಡು ಹೋಗುವುದೆಂದು ತಿಳಿಸಿದರು.

ಬದುಕಿನ ಸಂದೇಶ ಸಾರುವ ಗಣೇಶ

ತನ್ನ ವಿಶಿಷ್ಟ ಅವಯವಗಳಿಂದ ಜಗತ್ತಿಗೆಲ್ಲ ಬೋಧನೆ ಮಾಡುತ್ತಿರುವ ಗಣೇಶನಿಗೆ ಪ್ರಥಮ ಪೂಜೆ ಸಲ್ಲುತ್ತದೆ ಎಂದು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಹೇಳಿದರು.



28–8–2014ರಂದು ಶ್ರೀ ಕಾಶೀಪೀಠದಲ್ಲಿ ಭಾದ್ರಮಾಸದ ಚತುರ್ಥಿಯಂದು ಪ್ರತಿಷ್ಠಾಪಿಸಿದ ಗಣಪತಿಗೆ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಪೂಜೆ ಸಲ್ಲಿಸಿದರು.

ಗಣೇಶನ ದೇಹದ ವಿಲಕ್ಷಣ ಅವಯವಗಳು ನಮಗೆಲ್ಲ ಬದುಕಿನ ಸಂದೇಶವನ್ನು ಕೊಡುತ್ತವೆ. ಗಣೇಶ ಮಹಾಭಾರತ ಗ್ರಂಥ ಬರೆಯಲು ತನ್ನ ಒಂದು ಹಲ್ಲನ್ನು ಮುರಿದು ಅದನ್ನೇ ಲೇಖನಿಯನ್ನಾಗಿ ಮಾಡಿಕೊಂಡಿದ್ದನು. ಇದರಿಂದ ಅವನನ್ನು ಏಕದಂತ ಎನ್ನುತ್ತಾರೆ. ಲೋಕಕಲ್ಯಾಣಕ್ಕಾಗಿ ಎಂಥ ತ್ಯಾಗಕ್ಕೂ ಸಿದ್ಧರಾಗಬೇಕು ಎಂಬುದು ಗಣೇಶ ಸಾರುವ ಸಂದೇಶ. ಗಣಪತಿ ಕಿವಿಗಳು ಮೊರಗಳಂತೆ ಇವೆ. ಮೊರ ಧಾನ್ಯಗಳನ್ನು ಸ್ವಚ್ಛಗೊಳಿಸಿ ಉತ್ತಮ ಕಾಳುಗಳನ್ನು ಮಾತ್ರ ತನ್ನ ಉದರದಲ್ಲಿ ಇಟ್ಟುಕೊಳ್ಳುವಂತೆ ನಾವು ನಮ್ಮ ಕಿವಿಗಳಿಂದ ಕೇಳಿದ ಶಬ್ದಗಳಲ್ಲಿ ನಿರುಪಯುಕ್ತವಾದದ್ದನ್ನು ಹೊರಗೆ ಬಿಟ್ಟು ಉಪಯುಕ್ತವಾದದ್ದನ್ನು ಮಾತ್ರ ಮನಸ್ಸಿಗೆ ತಲುಪಿಸಬೇಕು. ಗಣೇಶನ ಹೊಟ್ಟೆ ಬಹಳ ದೊಡ್ಡದು. ಇದು ಎಲ್ಲವನ್ನೂ ಜೀರ್ಣಿಸಿಕೊಳ್ಳುವುದರ ಸಂಕೇತ. ನಾವು ಕೇಳಿದ ಕೆಲ ಶಬ್ದಗಳನ್ನು ವಾಣಿಯ ಮುಖಾಂತರ ಹೊರಹಾಕಿದರೆ ಮನೆ, ಗ್ರಾಮ, ಪ್ರದೇಶ ಮತ್ತು ದೇಶಗಳಲ್ಲಿ ಅನಾಹುತಗಳಾಗುವಂತಿದ್ದರೆ ಅವುಗಳನ್ನು ಹೊರಹಾಕದೆ ತನ್ನ ಉದರದಲ್ಲಿ ಜೀರ್ಣಿಸಿಕೊಳ್ಳಬೇಕೆಂಬ ಸಂದೇಶ ನೀಡಿದ್ದಾನೆ. ಇಂತಹ ದೀರ್ಘಕಾಯನಾದ ಗಣೇಶನಿಗೆ ವಾಹನವಾಗಿ ದೊರೆತದ್ದು ಇಲಿ. ಇದು ಬಹಳ ಕ್ಷುದ್ರವಾದ ಪ್ರಾಣಿ. ತನಗೆ ಶರಣಾಗತನಾದ ವ್ಯಕ್ತಿಯು ಕ್ಷುದ್ರನಾಗಿದ್ದರೂ ಅವನಿಗೆ ಆಶ್ರಯ ಕೊಡಬೇಕು. ಅಂದರೆ ಸಮಾಜದಲ್ಲಿಯ ಕೊನೆಯ ವ್ಯಕ್ತಿಯೂ ತಿರಸ್ಕಾರಕ್ಕೆ ಒಳಗಾಗಬಾರದು ಎಂಬುದು ಇದರ ಸಂಕೇತ. ಹೀಗೆ ಗಣೇಶನ ದೇಹದಲ್ಲಿಯ ವಿಲಕ್ಷಣ ಅವಯವಗಳಿಂದ ಜಗತ್ತಿಗೆ ತ್ಯಾಗ, ವಿವೇಕ, ಸಹನೆ ಮತ್ತು ಸರ್ವರನ್ನು ಗೌರವಿಸುವ ಉದಾತ್ತ ಭಾವನೆಗಳನ್ನು ಉಪದೇಶ ಮಾಡಿದ್ದಾನೆ ಎಂದು ಶ್ರೀಗಳು ಹೇಳಿದರು.


ಗಣಪತಿಯನ್ನು ಸ್ಥಾಪಿಸಿ, ಪೂಜಿಸಿ ಕೊನೆಗೆ ಅನಂತ ಚತುರ್ದಶಿ ದಿನದಂದು ವಿಸರ್ಜನೆ ಮಾಡುತ್ತಾರೆ. ಈ 11 ದಿನಗಳ ಪೂಜೆಯಿಂದ ಪ್ರತಿಯೊಬ್ಬರೂ ಸದ್ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಗಣೇಶನ ಹಬ್ಬ ಆಚರಿಸಿದ್ದು ಸಾರ್ಥಕವಾಗುತ್ತದೆ ಎಂದು ಶ್ರೀಗಳು ಹೇಳಿದರು.

ಶ್ರೀ ಪೀಠದಿಂದ ಪಲ್ಲಕ್ಕಿಯಲ್ಲಿ ಗಣೇಶನನ್ನು ಉತ್ಸವದೊಂದಿಗೆ ತೆಗೆದುಕೊಂಡು ಹೋಗಿ ದಶಾಶ್ವಮೇಧ ಘಾಟದ ಗಂಗೆಯಲ್ಲಿ ವಿಸರ್ಜಿಸಲಾಯಿತು.

ಕಾಶೀ ಪೀಠದ ಪ್ರಶಸ್ತಿ ಪುರಸ್ಕಾರಗಳು–ಜಗದ್ಗುರುಗಳಿಂದ

ಗೌರವ ಪ್ರಾಧ್ಯಾಪಕರಾಗಿ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾನಿಲಯದಲ್ಲಿ ಶಕ್ತಿ ವಿಶಿಷ್ಟಾದ್ವೈತ ವೇದಾಂತದ ಪಾಠಗಳನ್ನು ಹೇಳುವುದರ ಜೊತೆಯಲ್ಲೇ ಅನೇಕ ಗ್ರಂಥಗಳನ್ನು ಮುದ್ರಿಸಿ ಪ್ರಕಾಶನಗೊಳಿಸುವ ಬಹು ದೊಡ್ಡ ಜವಾಬ್ದಾರಿಯನ್ನು ಹೊತ್ತು ಅನೇಕ ವಿದ್ವಾಂಸರ ಜೊತೆಗೂಡಿ ಮಾಡಿದ್ದ ಷ॥ ಬ್ರ॥ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು (ಇಂದಿನ ಜಗದ್ಗುರುಗಳು) ಸದಾ ಕಾಲ ಅಧ್ಯಯನ, ಅಧ್ಯಾಪನ, ಪ್ರಕಾಶನ ಎಂದು ವಿದ್ವತ್‌ವಲಯದಲ್ಲೇ ಸಂಚರಿಸುತ್ತಿದ್ದರು. 1984 ರಿಂದ 1989ರವರೆಗೆ ಸ್ವಾಮಿಗಳು ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವೀರಶೈವ ಧರ್ಮದರ್ಶನಗಳ ಅಧ್ಯಯನ ವ್ಯವಸ್ಥೆಯನ್ನು ಮಾಡಿದರು.

1989 ನವೆಂಬರ್ 17ನೇ ದಿನಾಂಕ ಅಂದರೆ ಶಾಲಿವಾಹನ ಶಕೆ 1911 ಶುಕ್ಲನಾಮ ಸಂವತ್ಸರ ಕಾರ್ತಿಕ ಬಹುಳ ಪಂಚಮಿ ಶುಕ್ರವಾರ ಮಧ್ಯಾಹ್ನ 2 ಗಂಟೆ 45 ನಿಮಿಷದ ಮೀನ ಲಗ್ನದ ಶುಭಯೋಗದಲ್ಲಿ ಜಗದ್ಗುರು ವಿಶ್ವಾರಾಧ್ಯ ಜ್ಞಾನ ಸಿಂಹಾಸನದ ಪಟ್ಟಾಭಿಷೇಕ ನೆರವೇರಿ, ಜ್ಞಾನಪೀಠ ಸಿಂಹಾಸನಾರೋಹಣ ಆದ ಕ್ಷಣದಿಂದ ಜಗದ್ಗುರುಗಳೆನಿಸಿ, ಜಗದ್ಗುರು ಚಂದ್ರಶೇಖರ ಶಿವಾಚಾರ್ಯರು ವಿದ್ವತ್ ವಲಯದಿಂದ ಹೊರಬರಬೇಕಾಯಿತು. ಸದಾ ಅಧ್ಯಯನದಲ್ಲಿದ್ದ ಜಗದ್ಗುರುಗಳಿಗೆ ಪೀಠಾಚಾರ್ಯರ ಜವಾಬ್ದಾರಿಯ ನಡುವೆ ಅಧ್ಯಯನ ಮಾಡಲಾಗುತ್ತಿರಲಿಲ್ಲ. ಹಾಗಾಗಿ ಎಲ್ಲೇ ಪ್ರವಾಸ ಮಾಡಲಿ ಅಲ್ಲಿನ ವಿದ್ವಾಂಸರನ್ನು ತಮ್ಮ ಬಳಿ ಕರೆಯಿಸಿಕೊಂಡು ಏನಾದರೂ ಚರ್ಚಿಸುತ್ತಿದ್ದರು. ವಿದ್ವಾಂಸರೆಂದರೆ ಜಗದ್ಗುರುಗಳಿಗೆ ಅಪಾರ ಅಭಿಮಾನ ಹಾಗೂ ಗೌರವ.



20–11–1989 ಅಪರಾಹ್ನ 3 ಗಂಟೆಗೆ ಜ್ಞಾನಮಂದಿರ ಗ್ರಂಥಾಲಯದಲ್ಲಿ ಕಾಶೀಜಗದ್ಗುರುಗಳ ಮೊದಲ ವಿದ್ವತ್ ಸಭೆ ಏರ್ಪಡಿಸಲಾಗಿತ್ತು.

ಪೀಠಾಧಿಪತಿಗಳಾದ ಕೂಡಲೇ ಜಗದ್ಗುರುಗಳು ಮಾಡಿದ ಮೊದಲ ಸಮಾರಂಭವೆಂದರೆ–ಜಂಗಮವಾಡಿ ಮಠದ ಜ್ಞಾನಮಂದಿರ ಗ್ರಂಥಾಲಯದಲ್ಲಿ ಒಂದು ವಿದ್ವತ್ ಸಭೆಯನ್ನು ಅಪರಾಹ್ನ 3ಗಂಟೆಗೆ ಏರ್ಪಡಿಸಲು ಮಠದ ವ್ಯವಸ್ಥಾಪಕರಿಗೆ ತಿಳಿಸಿದರು.

ಈ ಸಭೆಯಲ್ಲಿ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ಪಂ॥ ದೇವಸ್ವರೂಪ ಮಿಶ್ರ, ವೇದಾಂತ ವಿಭಾಗಾಧ್ಯಕ್ಷ; ಪಂ॥ ಶ್ಯಾಮನಾರಾಯಣ ದೀಕ್ಷಿತ್, ಪ್ರಾಧ್ಯಾಪಕರು, ಮಧ್ವ ವೇದಾಂತ; ಡಾ॥ ಭಾಗೀರಥ ಪ್ರಸಾದ ತ್ರಿಪಾಠಿ, ನಿರ್ದೇಶಕರು ಅನುಸಂಧಾನ ಸಂಸ್ಥಾ; ಡಾ॥ ಯುಗಲಕಿಶೋರ ಮಿಶ್ರ, ವೇದವಿಭಾಗಾಧ್ಯಕ್ಷ; ಪಂ॥ ವ್ರಜವಲ್ಲಭ ದ್ವಿವೇದಿ, ಪೂರ್ವ ಆಚಾರ್ಯ, ಯೋಗ ತಂತ್ರವಿಭಾಗ; ಡಾ॥ ಪಾರಸನಾಥ ದ್ವಿವೇದಿ, ಉಪಾಚಾರ್ಯ, ವೇದಾಂತ ವಿಭಾಗ; ಡಾ॥ ನರೇಂದ್ರನಾಥ ಪಾಂಡೇಯ ಪ್ರಾಧ್ಯಾಪಕರು, ರಮಾನಂದ ವೇದಾಂತ ವಿಭಾಗ; ಡಾ॥ ಜಯಪ್ರಕಾಶ ತ್ರಿಪಾಠಿ, ಪ್ರಾಧ್ಯಾಪಕ, ರಾಮಾನುಜ ವೇದಾಂತ; ಡಾ॥ ರಾಮನಾಥ ತ್ರಿಪಾಠಿ ಪ್ರಾಧ್ಯಾಪಕ, ಆಗಮ ವಿಭಾಗ; ಪಂ॥ ಸುಧಾಕರ ಮಿಶ್ರ ವೇದಾಂತ ವಿಭಾಗ; ಸ್ವಾಮಿ ಶಿವಾನಂದ, ವೇದಾಂತ ಪ್ರಾಧ್ಯಾಪಕ, ವಿಶ್ವನಾಥ ಗುರುಕುಲ; ಡಾ॥ ನೀಲಕಂಠ ಶರ್ಮಾ ಹಿರೇಮಠ, ಪ್ರಧಾನಾಚಾರ್ಯ, ಬ್ರಹ್ಮ ಮಹಾವಿದ್ಯಾಲಯ; ಪಂ॥ ಸಂಗಮನಾಥ ಶರ್ಮಾ ಹಿರೇಮಠ, ಸಾಹಿತ್ಯ ಅಧ್ಯಾಪಕ, ಬ್ರಹ್ಮ ಮಹಾವಿದ್ಯಾಲಯ; ಜನಾರ್ಧನ ಶಾಸ್ತ್ರಿ ಪಾಂಡೇಯ, ಶೋಧ ಸಹಾಯಕ ತಿಬ್ಬತೀ ಸಂಸ್ಥಾ; ಪಂ॥ ರಾಮಪ್ರಸಾದ ತ್ರಿಪಾಠಿ, ಪೂರ್ವಾಚಾರ್ಯ, ವ್ಯಾಕರಣ ವಿಭಾಗ; ಪಂ॥ ಕರುಣಾಪತಿ ತ್ರಿಪಾಠಿ, ಪೂರ್ವ ಕುಲಪತಿ, ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ; ಪಂ॥ ಬಟುಕನಾಥ ಶಾಸ್ತ್ರಿ ಖಿಸ್ತೆ, ಅಧ್ಯಕ್ಷ, ಕಾಶೀ ಪಂಡಿತ ಸಭಾ; ಡಾ॥ ವಿನೋದರಾವ ಪಾಠಕ, ಮಹಾಮಂತ್ರಿ, ಕಾಶೀ ಪಂಡಿತ ಸಭಾ; ಪಂ॥ ಬ್ರಹ್ಮಾನಂದ ಚತುರ್ವೇದಿ, ಪ್ರಾಧ್ಯಾಪಕ ಮೀಮಾಂಸಾ ವಿಭಾಗ; ಶ್ರೀರಾಮ ಪಾಂಡೇಯ, ಪೂರ್ವಾಚಾರ್ಯ, ನ್ಯಾಯವಿಭಾಗ; ಡಾ॥ ಶಾಂತಶರ್ಮ ಹಿರೇಮಠ, ಪ್ರಾಧ್ಯಾಪಕ, ಮಹಾತ್ಮಾಗಾಂಧೀ ಕಾಶೀ ವಿದ್ಯಾಪೀಠ ಮುಂತಾದ ಮೂರ್ಧನ್ಯ (ಶ್ರೇಷ್ಠ) ವಿದ್ವಾಂಸರು ಉಪಸ್ಥಿತರಾಗಿದ್ದರು.

ಸಭೆಗೆ ಆಗಮಿಸಿದ ವಿದ್ವಾಂಸರಿಗೆ ಮಠದ ವ್ಯವಸ್ಥಾಪಕರಾದ ಶ್ರೀ ಮಹೇಶ್ವರದೇವರು ಮತ್ತು ಪಂಚಾಕ್ಷರಿ ಲಿಗಾಡೆ–ಇವರಿಬ್ಬರೂ ಕೂಡಿ ತಿಲಕಧಾರಣ ಮಾಡಿ ಹೂಮಾಲೆಯನ್ನು ಹಾಕಿ ಸ್ವಾಗತಿಸಿದರು. ಸಭೆಯಲ್ಲಿ ಅನೇಕ ಶಾಸ್ತ್ರಾರ್ಥಗಳು ನೆರವೇರಿದವು. ಕೊನೆಯಲ್ಲಿ ಜಗದ್ಗುರುಗಳು ತಮ್ಮ ಆಶೀರ್ವಚನ ನಂತರ ಎಲ್ಲಾ ವಿದ್ವಾಂಸರಿಗೆ ಶಾಲು ಹೊದಿಸಿ ಕಾಣಿಕೆಯನ್ನಿತ್ತು ಗುರುರಕ್ಷಾ ಆಶೀರ್ವಾದವನ್ನು ಮಾಡಿದರು. ಕಾಶೀ ಪಂಡಿತರೆಲ್ಲಾ ಸೇರಿ ಮಹಾಸನ್ನಿಧಿಯವರಿಗೆ ಸಂಸ್ಕೃತ ಭಾಷೆಯಲ್ಲಿ ಅಭಿನಂದನಾ ಪತ್ರವನ್ನು ಸಲ್ಲಿಸಿದರು.



ರಶಿಯಾದ ಉಕ್ರೇನ್ ದೇಶದ ಕುಮಾರಿ ಯುಲಿಯಾ (ಗೌರಿ)ಗೆ 2013ರ ವಿಶ್ವಭಾರತಿ ಪುರಸ್ಕಾರ ನೀಡಿ ಗೌರವಿಸಲಾಯಿತು.

ಪೀಠಾಚಾರ್ಯರಾಗುವ ಮೊದಲು ಜಗದ್ಗುರುಗಳು 1972 ರಲ್ಲಿ ಕಾಶೀ ವೀರಶೈವ ವಿದ್ವತ್ ಸಂಘದ ಕಾರ್ಯದರ್ಶಿಯಾಗಿದ್ದರು. ಅಲ್ಲಿನ ವೀರಶೈವ ವಿದ್ವತ್ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರೆಲ್ಲರಿಗೂ ಕಾಶಿಯಲ್ಲಿರುವ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ ಎಲ್ಲಾ ವೇದಾಂತಗಳ ಅಧ್ಯಯನ ವ್ಯವಸ್ಥೆಯಿದ್ದರೂ, ವೀರಶೈವದ ಶಕ್ತಿ ವಿಶಿಷ್ಟಾದ್ವೈತ ವೇದಾಂತ ಅಧ್ಯಯನದ ವ್ಯವಸ್ಥೆಯಿರಲಿಲ್ಲ-ಹೇಗಾದರೂ ಮಾಡಿ ವೀರಶೈವ ಸಿದ್ಧಾಂತವಾದ ಶಕ್ತಿ ವಿಶಿಷ್ಟಾದ್ವೈತ ವಿಭಾಗವನ್ನು ಸ್ಥಾಪಿಸುವ ಆಲೋಚನೆ ಮಾಡತೊಡಗಿದರು. ಆ ವೇಳೆಗಾಗಲೆ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ತಮ್ಮ ಪಿಹೆಚ್.ಡಿ ಪದವಿ ಗಳಿಸಿ ಮುಂದೆ ಡಿ.ಲಿಟ್ ಪದವಿಗಾಗಿ ಓದುತ್ತಿದ್ದರು. ಅವರಿಗೆ ಪಿಹೆಚ್.ಡಿ.ಯಲ್ಲಿ ಮಾರ್ಗದರ್ಶಕರಾಗಿದ್ದವರು ಪಂ. ದೇವ ಸ್ವರೂಪ ಮಿಶ್ರ ಅವರು. ಮಿಶ್ರ ಅವರಿಗೂ, ಗುರುಗಳಿಗೂ ಪರಸ್ಪರರಲ್ಲಿ ಪ್ರೀತಿ, ಗೌರವ, ವಿಶ್ವಾಸ ಭಾವಗಳು ಉದಯಿಸಿದವು. ದೇವ ಸ್ವರೂಪ ಮಿಶ್ರ ಅವರ ಮನವೊಲಿಸಿ, ಅವರೊಂದಿಗೆ ಚರ್ಚಿಸಿಯಾದ ಮೇಲೆ ನಿಧಿಯನ್ನು ವಿಶ್ವವಿದ್ಯಾಲಯಕ್ಕೆ ಕೊಡದೆ ಸಂಪೂರ್ಣಾನಂದ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ 'ಶಕ್ತಿ ವಿಶಿಷ್ಟಾದ್ವೈತ ವೇದಾಂತ ಪೀಠ'ವನ್ನು ಸ್ಥಾಪಿಸುವಲ್ಲಿ ಸಫಲರಾದರು. ಈ ಸಂದರ್ಭದಲ್ಲಿ ಜಗದ್ಗುರುಗಳು ಅನೇಕ ಬಾರಿ ಕುಲಪತಿಗಳನ್ನು ಬೇರೆ ಬೇರೆ ವಿಭಾಗದ ಮುಖ್ಯಸ್ಥರನ್ನು ಭೇಟಿಯಾಗಿ ನೆರವು ಪಡೆದಿದ್ದರು. ಇವೆಲ್ಲವೂ ಜಗದ್ಗುರುಗಳ ಮನದಲ್ಲಿ ಅಚ್ಚಳಿಯದೆ ನಿಂತಿದ್ದು-ತಾವು ಪೀಠಾಧಿಕಾರವನ್ನು ವಹಿಸಿಕೊಂಡ ಕೂಡಲೆ ಎಲ್ಲಾ ಪಂಡಿತ ವಿದ್ವಾಂಸರನ್ನು ಪೀಠಕ್ಕೆ ಕರೆಸಿ-ಪೀಠದ ಘನತೆಗೆ ತಕ್ಕಂತೆ ಗೌರವ ಸಲ್ಲಿಸಿದರು.

ಆಗಿನಿಂದ ಜಗದ್ಗುರುಗಳಿಗೆ ವಿದ್ವಾಂಸರನ್ನು ಗೌರವಿಸಿ ಸನ್ಮಾನ ಮಾಡಬೇಕೆಂಬ ಆಲೋಚನೆ ಸುಳಿಯಲಾರಂಭಿಸಿತು. ಜ್ಞಾನಪೀಠದಲ್ಲಿ ಆಗಿಹೋದ ಹಿಂದಿನ ಜಗದ್ಗುರುಗಳು ಅನೇಕರು-ಆಗಿಂದಾಗ್ಯೆ ವಿದ್ವಾಂಸರನ್ನು ಸನ್ಮಾನಿಸಿದ ದಾಖಲೆಗಳಿದ್ದವು. ಆದರೂ ಅದಕ್ಕೊಂದು ಸ್ವರೂಪ ಕೊಡುವ ಚಿಂತನೆ ಆರಂಭಿಸಿದರು.

ಈ ಚಿಂತನೆಗಳೆಲ್ಲಾ ಒಂದು ರೂಪ ತಾಳಿ ಹೊರಹೊಮ್ಮಿದ್ದೇ "ಶ್ರೀ ಜಗದ್ಗುರು ವಿಶ್ವಾರಾಧ್ಯ ವಿಶ್ವಭಾರತಿ ಪುರಸ್ಕಾರ" ಯೋಜನೆ. ಭಾರತೀಯ ಸಾಹಿತ್ಯ, ಸಂಸ್ಕೃತಿ ಹಾಗೂ ಸಂಶೋಧನಾ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸುವವರಿಗೆ ಕೊಡುವುದೆಂದು ತೀರ್ಮಾನಿಸಿ ಪ್ರಶಸ್ತಿಗೆ 25,000 ರೂ ನಗದು, ಪ್ರಶಸ್ತಿ ಪತ್ರ ಹಾಗೂ ಪದಕವನ್ನು ಕೊಡುವಂತೆ ಆಲೋಚಿಸಿ 1997ರ ಶಿವರಾತ್ರಿಯ ಮುನ್ನಾದಿನ ಒಂದು ದೊಡ್ಡ ಪ್ರಮಾಣದಲ್ಲಿ ಹೆಸರಾಂತ ವಿದ್ವಾಂಸರನ್ನು ಆಹ್ವಾನಿಸಿ ಅವರ ಸಮ್ಮುಖದಲ್ಲಿ ರಾಷ್ಟ್ರ ಮಟ್ಟದ ಓರ್ವ ವಿದ್ವಾಂಸರಿಗೆ ಈ ಪ್ರಶಸ್ತಿ ಕೊಡುವುದೆಂದು ತೀರ್ಮಾನಿಸಿದರು. ಹಾಗೂ ಅಂದು ಉಪಸ್ಥಿತರಿರುವ ಎಲ್ಲಾ ವಿದ್ವಾಂಸರಿಗೆ ಸನ್ಮಾನ ಕಾಣಿಕೆ ನೀಡಿ ಗೌರವಿ ಸುವುದೆಂದು ನಿರ್ಧರಿಸಿದರು.



ಶಿವರಾತಿಯ ಹಿಂದಿನದಿನ ನಡೆಯುವ ವಿದ್ವತ್ ಸಭೆಯಲ್ಲಿ ವಿಶ್ವಾರಾಧ್ಯ ವಿಶ್ವಭಾರತಿ ಪುರಸ್ಕಾರವನ್ನು 2013ರಲ್ಲಿ ರಷ್ಯಾದೇಶದ ಉಕ್ರೇನ್ ಕುಮಾರಿ ಯೂಲಿಯಾಗೆ ನೀಡಿ ಸತ್ಕರಿಸಿದರು. ಶ್ರೀ ಸಿದ್ಧಾಂತ್ ಶಿಖಾಮಣಿಯನ್ನು ರಷ್ಯನ್ ಭಾಷೆಗೆ ಅನುವಾದ ಮಾಡಿ 2012ರಲ್ಲಿ ರಷ್ಯಾ ದೇಶದಲ್ಲೇ ಜಗದ್ಗುರುಗಳು ಬಿಡುಗಡೆ ಮಾಡಿದ್ದರು.

ಮೊಟ್ಟ ಮೊದಲಿಗೆ ಪಿಹೆಚ್.ಡಿ. ಪದವಿಯ ಮಾರ್ಗದರ್ಶಕರೂ, ಶಕ್ತಿ ವಿಶಿಷ್ಟಾದ್ವೈತ ಪೀಠ ಸ್ಥಾಪನೆಗೆ ಬಹುವಾಗಿ ಸಹಾಯ ಮಾಡಿದ ಪಂ. ದೇವಸ್ವರೂಪ ಮಿಶ್ರ ಅವರಿಗೆ 1997ರಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ವಿಶ್ವ ಭಾರತಿ ಪುರಸ್ಕಾರವನ್ನು ನೀಡಿ ತಮ್ಮ ವಿದ್ಯಾಗುರುಗಳಿಗೆ ಗೌರವವನ್ನು ಸಲ್ಲಿಸಿದರು. 1997ರಿಂದ ಆರಂಭಿಸಿದ 'ವಿಶ್ವ ಭಾರತಿ ಪುರಸ್ಕಾರ' 2014 ರವರೆಗೆ ಸುಮಾರು 18 ಶ್ರೇಷ್ಠ ವಿದ್ವಾಂಸರನ್ನು ಗುರುತಿಸಿ ಕೊಡಲಾಗಿದೆ. 2013ರ

ವಿಶೇಷವೆಂದರೆ 'ಶ್ರೀ ಸಿದ್ಧಾಂತ ಶಿಖಾಮಣಿ'ಯನ್ನು ರಷ್ಯನ್ ಭಾಷೆಗೆ ಅನುವಾದಿಸಿ–ರಷ್ಯಾ ದೇಶದಲ್ಲಿ ಜಗದ್ಗುರುಗಳಿಂದ ಬಿಡುಗಡೆ ಮಾಡಿಸಿದ ಕು. ಯುಲಿಯಾ (ಗೌರಿ)ಗೆ ಈ ಪುರಸ್ಕಾರ ದೊರೆತಿರುವುದು ಹೆಮ್ಮೆ ತರುವಂಥದ್ದಾಗಿದೆ.

ಇದುವರೆಗೂ ವಿಶ್ವಭಾರತಿ ಪುರಸ್ಕಾರ ಪಡೆದ ಗೌರವಾನ್ವಿತರ ಹೆಸರುಗಳು

1997–ಪಂ. ದೇವ ಸ್ವರೂಪ ಮಿಶ್ರ– ವಾರಾಣಸಿ, 1998– ಪಂ.ವ್ರಜವಲ್ಲಭ ದ್ವಿವೇದಿ–ವಾರಾಣಸಿ, 1999– ಡಾ॥ ಎಂ. ಶಿವಕುಮಾರ ಸ್ವಾಮಿ– ಬೆಂಗಳೂರು, 2000– ಡಾ॥ ಚಂದ್ರಶೇಖರ ಕಪಾಳೆ–ಸೊಲ್ಲಾಪುರ, 2001– ಡಾ॥ ಶೇ.ದೇ. ಪಸಾರಕಾರ–ಸೊಲ್ಲಾಪುರ, 2002–ಪ್ರೊ.ವ್ಹಿ. ವೆಂಕಟಾಚಲಮ್–ವಾರಾಣಸಿ, 2003– ಡಾ॥ ಕೆ. ಪ್ರತಾಪ್– ತಿರುಪತಿ, 2004– ಡಾ॥ ಮಲ್ಲಿಕಾರ್ಜುನ ಪರಡ್ಡಿ–ಧಾರವಾಡ, 2005– ಡಾ॥ ಪರಮಹಂಸ ಮಿಶ್ರ–ವಾರಾಣಸಿ, 2006– ಶ್ರೀ ಮಠಮ್ ಲಿಂಗಯ್ಯ ಸ್ವಾಮಿ–ಹೈದರಾಬಾದ್, 2007– ಡಾ॥ ಕುಟುಂಬಶಾಸ್ತ್ರಿ–ನವದೆಹಲಿ, 2008– ಹ.ಭ.ಪ. ಚಂದ್ರಶೇಖರ ಮಹಾರಾಜ್ ದೇಗಲೂರ, 2009– ಪಂ. ಜಗನ್ನಾಥ ಶಾಸ್ತ್ರಿ ತೈಲಂಗ್–ವಾರಾಣಸಿ, 2010–ಪಂ. ಗಂಗಾಧರ್ ಶಾಸ್ತ್ರಿ–ಮೈಸೂರು, 2011–ಕಮಲೇಶದತ್ತ ತ್ರಿಪಾಠಿ–ವಾರಾಣಸಿ, 2012–ಶ್ರೀಮತಿ ಮಹಾನಂದ ಖಕೆ–ಚಾರಠಣಾ, 2013–ಕುಮಾರಿ ಯುಲಿಯಾ (ಗೌರಿ) ಕ್ರಾವಚೆನ್ಕೋ ಯುಕ್ರೇನ್, 2014–ಪಂ. ಅಮರನಾಥ್ ಪಾಂಡೆ–ವಾರಾಣಸಿ

ಚಂದ್ರಶೇಖರ ಕಪಾಳೆ ಪುರಸ್ಕಾರ

ಡಾ॥ ಚಂದ್ರಶೇಖರ ಕಪಾಳೆಯವರು ಮರಾಠಿ ವೀರಶೈವ ಸಾಹಿತ್ಯದ ಒಬ್ಬ ಶ್ರೇಷ್ಠ ಸಂಶೋಧಕರಾಗಿದ್ದರು. ಅವರು ಅನೇಕ ಮೂಲ ಮರಾಠಿ ಸಾಹಿತ್ಯವನ್ನು ಸಂಶೋಧಿಸಿ ಅನೇಕ ಗ್ರಂಥಗಳನ್ನು ಬರೆದಿರುವುದಲ್ಲದೇ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಮರಾಠಿಗೆ ಅನುವಾದಿಸಿದ್ದಾರೆ. ಇವರಿಗೆ 2000ದಲ್ಲಿ ಕಾಶೀ ಪೀಠದ ಶ್ರೀ ಜಗದ್ಗುರು ವಿಶ್ವಾರಾಧ್ಯ ವಿಶ್ವಭಾರತಿ ಪುರಸ್ಕಾರವೂ ದೊರೆತಿದೆ. ಇಂತಹ ಒಬ್ಬ ಶ್ರೇಷ್ಠ ಮರಾಠಿ ವೀರಶೈವ ಸಂಶೋಧಕರ ಸ್ಮರಣಾರ್ಥವಾಗಿ ಕಾಶೀ ಪೀಠದ ವತಿಯಿಂದ ಈ ಪುರಸ್ಕಾರವನ್ನು ಪ್ರತೀ ವರ್ಷವೂ ಒಬ್ಬ ವಿದ್ವಾಂಸರಿಗೆ ಕೊಡಲಾಗುವುದು. ಈ ಪ್ರಶಸ್ತಿಗಾಗಿ ಡಾ. ಕಪಾಳೆಯವರ ಚಿರಂಜೀವಿ ಅಭಯ ಕಪಾಳೆ, ಕಾಶೀ ಪೀಠಕ್ಕೆ 1 ಲಕ್ಷ ರೂ ಠೇವಣಿ ಸಲ್ಲಿಸಿದ್ದಾರೆ. 2002ರಿಂದ ಆರಂಭಗೊಂಡಿರುವ ಈ ಪುರಸ್ಕಾರವನ್ನು ಮೊದಲ ಬಾರಿಗೆ ಪುಣೆಯ ಡಾ. ರಾಮಚಂದ್ರ ಚಿಂತಾಮಣಿ ಡೇರೆ ಅವರಿಗೆ ಕೊಡಲಾಗಿದೆ.

2002 ರಿಂದ 2014ರವರೆವಿಗೆ ಚಂದ್ರಶೇಖರ ಕಪಾಳೆ ಪುರಸ್ಕಾರವನ್ನು ಸ್ವೀಕರಿಸಿರುವ ವಿದ್ವಾಂಸರ ಹೆಸರುಗಳು ಮುಂದೆ ಕೊಡಲಾಗಿದೆ :

2003–ಡಾ॥ ರಾ.ಚಿಂ. ಡೇರೆ–ಪುಣೆ, 2003–ಶ್ರೀ ಶಾಂತಿ ತೀರ್ಥಸ್ವಾಮಿ–ಔರಂಗಾಬಾದ್, 2004–ಡಾ॥ ಯು.ಎಂ. ಪಠಾಣ–ಔರಂಗಾಬಾದ್–ಯುಸಫ್‌ಖಾನ ಮಹಮ್ಮದಖಾನ ಪಠಾಣ, 2005–ಡಾ॥ ನಿರ್ಮಲ ಕುಮಾರ್ ಫಡಕುಲೆ–ಸೊಲ್ಲಾಪುರ, 2006–ಡಾ॥ ಈರೇಶ ಸ್ವಾಮಿ–ಸೊಲ್ಲಾಪುರ, 2008–ಡಾ॥ ಶೆ.ದೆ. ಪಸಾರಕರ–ಸೊಲ್ಲಾಪುರ, 2009–ಅಶೋಕ ಕಾಮತ್–ಪುಣೆ, 2010–ಡಾ॥ ಭೀ.ಸಿ. ಸ್ವಾಮಿ–ಔಸಾ, 2011–ಡಾ॥ ರಾಮತೋನ್ದಾರೆ–ಉದ್ಗೀರ, 2012–ಡಾ॥ ಚಂದ್ರಕಾಂತ ದೆವ್ತಾಳ ಗಾವ್‌ಕರ–ಲಾತೂರ, 2013–ಡಾ॥ ಶ್ಯಾಮಾ ಘೋಣಸೆ, 2014–ಡಾ॥ ಶಿವಶಂಕರ್ ಉಪಾಸೆ ಅಜರಾ (ಕೊಲ್ಹಾಪುರ)

ಈ ಪುರಸ್ಕಾರವನ್ನು ಜಗದ್ಗುರುಗಳು ಸೊಲ್ಲಾಪುರದಲ್ಲಿ ಆಷಾಢ ಮಾಸದ ಅನುಷ್ಠಾನದಲ್ಲಿ ಕೊಡಲಾಗುತ್ತಿದೆ. ಪುರಸ್ಕಾರವು 10,000 ನಗದು ಹಣ, ಸ್ಮೃತಿ ಚಿಹ್ನೆ, ಪ್ರಶಸ್ತಿಪತ್ರ ಮತ್ತು ಶಾಲು ಶ್ರೀಫಲಗಳನ್ನು ಒಳಗೊಂಡಿರುತ್ತದೆ. 2004ರಲ್ಲಿ ಈ ಪುರಸ್ಕಾರವು ಇಸ್ಲಾಂ ಧರ್ಮೀಯರಿಗೆ ಸಿಕ್ಕಿರುವುದೊಂದು ವಿಶೇಷವಾಗಿದೆ. ಪಠಾಣರು ವೀರಶೈವ ಸಾಹಿತ್ಯದ ಪ್ರಕಾಂಡ ಪಂಡಿತರಾಗಿದ್ದಾರೆ. ಇವರು ವಿಶ್ವವಿದ್ಯಾಲಯದಲ್ಲಿ ಮರಾಠಿ ವಿಭಾಗದ ವೀರಶೈವ ಮರಾಠಿ ಸಾಹಿತ್ಯದ ಅಭಿವೃದ್ಧಿ ಮತ್ತು ಪ್ರಸಾರಕ್ಕಾಗಿ ಶ್ರೀ ಕಾಶೀ ಪೀಠದಿಂದ ಸ್ಥಾಪಿತವಾದ ಡಾ॥ ಚಂದ್ರಶೇಖರ ಕಪಾಳೆ ಪುರಸ್ಕಾರವು ವೀರಶೈವ ಮರಾಠಿ ವಾಙ್ಮಯಲೋಕದಲ್ಲಿ ಒಂದು ಹೊಸ ಸಂಚಲನವನ್ನುಂಟುಮಾಡಿದೆ.

ಶ್ರೀ ವೇ. ವೀರಸಂಗಯ್ಯಸ್ವಾಮಿ ಆದರ್ಶ ಶಿಕ್ಷಕರ ಪುರಸ್ಕಾರ

ಶ್ರೀ ವೇ. ವೀರಸಂಗಯ್ಯಸ್ವಾಮಿ ಅವರು ಮೂಲತಃ ಬೀದರ್ ಜಿಲ್ಲಾ ಹುಮನಾಬಾದ್ ತಾಲ್ಲೂಕಿನ ಆವಳಗಿ ಗ್ರಾಮದವರು. ವೇ॥ ವೀರ ಸಂಗಯ್ಯಸ್ವಾಮಿ ಅವರು ಮಾಸ್ತರ್ ಎಂದೇ ಹೆಸರಾಗಿದ್ದರು. ಆದರ್ಶ ಶಿಕ್ಷಕರಾಗಿದ್ದರಲ್ಲದೆ ಕವಿಗಳೂ ಆಗಿದ್ದರು. ಅವರು 'ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣ'ವನ್ನು ಮರಾಠಿ ಪದ್ಯರೂಪದಲ್ಲಿ ಬರೆದಿದ್ದರು. ಆದರೆ ಆ ಗ್ರಂಥ ಅವರು ಬದುಕಿದ್ದಾಗ ಪ್ರಕಟವಾಗದೆ ನಂತರ ಅವರ ಸುಪುತ್ರ ಚಂದ್ರಶೇಖರ ಹಿರೇಮಠ ಅವರು ಅನೇಕ ಭಕ್ತಾದಿಗಳ ಆರ್ಥಿಕ ನೆರವನ್ನು ಪಡೆದು ಅದನ್ನು ಮುದ್ರಿಸಿ ಕಾಶೀಪೀಠಕ್ಕೆ

ಸಮರ್ಪಿಸಿದರು. ಈ ಪ್ರಕಾರ ಮಾರಾಟದಿಂದ ಬಂದ 1 ಲಕ್ಷ ರೂ. ಹಣವನ್ನು ಜಗದ್ಗುರುಗಳು ಬ್ಯಾಂಕ್‌ನಲ್ಲಿ ಠೇವಣಿ ಇಟ್ಟು ಅದರ ಬಡ್ಡಿ ಹಣದಲ್ಲಿ "ವೇ॥ ವೀರಸಂಗಯ್ಯಸ್ವಾಮಿ ಆದರ್ಶ ಶಿಕ್ಷಕರ ಪುರಸ್ಕಾರ" ಕೊಡುವುದಾಗಿ 2006ರಲ್ಲಿ ಘೋಷಣೆ ಮಾಡಿದರು.

ಈ ಪುರಸ್ಕಾರವು 10,000 ರೂ ನಗದು ಹಣ, ಸ್ಮೃತಿ ಚಿಹ್ನೆ, ಪ್ರಶಸ್ತಿಪತ್ರ ಮತ್ತು ಶಾಲು, ಶ್ರೀ ಫಲತಾಂಬೂಲಗಳನ್ನೊಳಗೊಂಡಿರುವುದು.

2006ರಿಂದ ಆರಂಭಗೊಂಡು 2014ರವರೆಗೆ ಈ ಪುರಸ್ಕಾರವನ್ನು ಸ್ವೀಕರಿಸಿರುವವರ ಹೆಸರುಗಳು ಹೀಗಿವೆ :

2006–ರೆ.ರಾ. ಮಗಾಯಿ–ಸೊಲ್ಲಾಪುರ, 2007–ಡಾ॥ ಬಾ.ಮ. ಚಮಕೆ–ಪುಣೆ, 2008–ಪಂ. ಶಿವಪ್ಪ ಖಕೆ–ಚಾರಠಾಣ, 2009–ಶಿವಶರಣ ಕಂಬಾಳೆಮಠ–ಸೊಲ್ಲಾಪುರ, 2010–ಶ್ರೀ ಮನೋಹರ್ ಕವಚಾಳೆ–ಬೋರಳಾ, 2011–ಸುರೇಖಾ ಚಡಚನಕರ ಕಪಾಳೆ–ಸೊಲ್ಲಾಪುರ, 2012–ಶ್ರೀ ಬಿ.ಎನ್ ಕುಲಕರ್ಣಿ–ಸೊಲ್ಲಾಪುರ, 2013–ಶ್ರೀ ಶಾಂತಾ ಮರಗೂರ–ಸೊಲ್ಲಾಪುರ, 2014–ಶ್ರೀಮತಿ ಸ್ವರ್ಣಲತಾ ಭಿಶಿಕರ–ಹರಾಳಿ

ಜಗದ್ಗುರುಗಳು 'ರೇಣುಕ ವಿಜಯ' ಮಾರಾಟದಿಂದ ಬಂದ ಹಣವನ್ನು ಜಂಗಮವಾಡಿ ಮಠದ ಬೇರೆ ಯಾವುದೆ ಕೆಲಸಕ್ಕೆ ಬಳಸಬಹುದಿತ್ತು. ಆದರೆ ಜಗದ್ಗುರುಗಳಿಗೆ ಉತ್ತಮ ಶಿಕ್ಷಣ ನೀಡುವ ಶಿಕ್ಷಕರ ಬೆಲೆಯ ಅರಿವಿತ್ತು. ಜೊತೆಗೆ ವೀರಸಂಗಯ್ಯನವರು ಉತ್ತಮ ಶಿಕ್ಷಕರಾಗಿದ್ದ ಕಾರಣ ಈ ಹಣವನ್ನು ಅವರಂತಹ ಶಿಕ್ಷಕರಿಗೇ ಕೊಡಬೇಕೆಂದು ತೀರ್ಮಾನಿಸಿ ಈ ಪ್ರಶಸ್ತಿಯನ್ನು ಸ್ಥಾಪಿಸಿದರು.

ಸದಾಶಿವ ಸ್ವಾಮಿ ಪ್ರಜ್ಞಾ ಪುರಸ್ಕಾರ

ಶ್ರೀ ಸದಾಶಿವಸ್ವಾಮಿ ಅವರು ವೃತ್ತಿಯಲ್ಲಿ ಅಕೌಂಟೆಂಟ್ ಆಗಿದ್ದವರು. ಆಗಿನ ಕಾಲದಲ್ಲಿ ಬಹಳ ಕಷ್ಟಪಟ್ಟು ಮಕ್ಕಳನ್ನು ಓದಿಸಿದ್ದರು. ಅವರ ಮಗ ಡಾ. ವಿರೇಶಸ್ವಾಮಿ ಅವರು ಸ್ವಂತ ಪರಿಶ್ರಮದಿಂದ ಹಾಗೂ ತಂದೆಯ ಪ್ರೋತ್ಸಾಹದಿಂದ ಹೆಚ್ಚಿನ ವ್ಯಾಸಂಗ ಮಾಡಿ–ವೃತ್ತಿ ಆರಂಭಿಸಿ ಕೊನೆಗೆ ಸೊಲ್ಲಾಪುರದ ವಿಶ್ವವಿದ್ಯಾಲಯದ ಪ್ರಥಮ ಉಪಕುಲಪತಿಗಳಾದರು. ತಮ್ಮ ಇಂದಿನ ಈ ಸ್ಥಿತಿಗೆ–ತಂದೆಯ ಕಷ್ಟದ ದುಡಿಮೆಯೇ ಕಾರಣವೆಂಬುದನ್ನು ಮರೆತಿರಲಿಲ್ಲ. ಹಾಗಾಗಿ ಡಾ. ಈರೇಶಸ್ವಾಮಿ ಅವರು ತಮ್ಮ ತಂದೆಯವರ ಹೆಸರಿನಲ್ಲಿ ಪ್ರಜ್ಞಾ ಪುರಸ್ಕಾರ ಕೊಡಲೆಂದು ಕಾಶೀ ಪೀಠಕ್ಕೆ 1 ಲಕ್ಷ ರೂ. ನಿಶ್ಚಿತ ಠೇವಣಿಗಾಗಿ ನೀಡಿದರು.

ಪ್ರಥಮ ಪುರಸ್ಕಾರವನ್ನು ಆರಂಭಿಸಿದ್ದು 2009ನೇ ವರ್ಷದಲ್ಲಿ.

2009–ಕು. ಆರತಿ ಗುಂಜೀ–ಸೊಲ್ಲಾಪುರ, 2010–ಕು. ನಮಿತಾ ನಗರಕರ–ಸೊಲ್ಲಾಪುರ, 2011–ಕು. ಯಾಸ್ಮಿನ ಮುಲ್ಲಾ–ಸೊಲ್ಲಾಪುರ, 2012–ಕು. ಉರ್ಮಿಳಾ ಚವ್ಹಾಣ–ಹಗಲೂರ ಸೊಲ್ಲಾಪುರ, 2013–ಅಂಬಾದಾಸ ಫಲಮಾರಿ–ಸೊಲ್ಲಾಪುರ (ಗಣಿತ ವಿಷಯದಲ್ಲಿ ಪ್ರಥಮ ಸ್ಥಾನ)

ಬಂಡಯ್ಯ ಮಠಪತಿ ಸಮಾಜ ಸೇವಾ ಪುರಸ್ಕಾರ

2012ರಿಂದ ಈ ಪುರಸ್ಕಾರವನ್ನು ಆರಂಭಿಸಿ ಇದುವರೆವಿಗೂ ಮೂವರು ಸಮಾಜಸೇವೆ ಸಲ್ಲಿಸಿರುವ ಮಹನೀಯರಿಗೆ ಕೊಡಲಾಗಿದೆ.

2012–ಶ್ರೀ ಸಿದ್ರಾಮಪ್ಪ ಬಿರಾದರ–ಸೊಲ್ಲಾಪುರ, 2013–ಶ್ರೀ ಜಯ ನಾರಾಯಣ ಭೂತಡಂ–ಸೊಲ್ಲಾಪುರ, 2014–ಶ್ರೀಮತಿ ಶಕುಂತಲಾ ಬಾಯಿ ಟೆಕಾಡೆ–ಫಂಡರಾಪುರ

ವಿಠಾಬಾಯಿ ಪಸಾರಕರ ಕೃತಜ್ಞತಾ ಪುರಸ್ಕಾರ

ಸೊಲ್ಲಾಪುರ ಸಂಗಮೇಶ್ವರ ಮಹಾವಿದ್ಯಾಲಯದ ಮರಾಠಿ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಶೇ.ದೇ. ಪಸಾರಕರ್ ಅವರು ತಮ್ಮ ಮಾತೋಶ್ರೀಯವರ ಹೆಸರಿನಲ್ಲಿ 1 ಲಕ್ಷ ರೂ.ಠೇವಣಿಯನ್ನು ಕಾಶೀ ಪೀಠಕ್ಕೆ 2012ರಲ್ಲಿ ನೀಡಿದ ಕಾರಣ ಈ ಪುರಸ್ಕಾರ ಕೊಡಲಾರಂಭಿಸಿದೆ.

2012–ಹ.ಭ.ಪ. ಥಾವರೆ–ಸೊಲ್ಲಾಪುರ, 2013–ಆನಂದ ಕುಂಭಾರ್–ಸೊಲ್ಲಾಪುರ, 2014–ಅರುಣರಾಮ ತೀರ್ಥಕರ–ಸೊಲ್ಲಾಪುರ

ಕೋಡಿಮಠ ಸಂಸ್ಕೃತ ಸಾಹಿತ್ಯ ಪುರಸ್ಕಾರ

ಕೋಡಿಮಠದ ಶ್ರೀ ಮ.ನಿ.ಪ್ರ. ಶಿವಾನಂದ ಸ್ವಾಮಿಗಳು ತಮ್ಮ ಮಠದಿಂದ ಪ್ರತಿವರ್ಷ ಮಠದ ಹೆಸರಿನಲ್ಲಿ ಸಂಸ್ಕೃತ ಸಾಹಿತ್ಯ ಪುರಸ್ಕಾರ ಕೊಡುವುದಾಗಿ ಶಿವರಾತ್ರಿಯ ಸಮಯದಲ್ಲಿ ಕಾಶೀ ಜಗದ್ಗುರುಗಳಿಗೆ ವಾಗ್ದಾನ ಮಾಡಿ ಪ್ರತಿ ವರ್ಷ 11,000ರೂ ನಗದು ಕೊಡಲಾರಂಭಿಸಿದ್ದಾರೆ.

2010–ಡಾ॥ ಸುಧಾಕರ ಮಿಶ್ರ, 2011– ____________, 2012– ಶೀತಲ್ ಪ್ರಸಾದ್ ಉಪಾಧ್ಯಾಯ, 2013– ____________, 2014–____________



ಕೋಡಿಮಠದ ಶ್ರೀ ಮ.ನಿ.ಪ್ರ. ಶಿವಾನಂದ ಸ್ವಾಮಿಗಳಿಗೆ ಕಾಶೀ ಜಗದ್ಗುರುಗಳು ಕಾಶೀಪೀಠದಲ್ಲಿ ಸನ್ಮಾನ ಮಾಡುತ್ತಿರುವುದು.

ಪಂ. ವ್ರಜವಲ್ಲಭ ದ್ವಿವೇದಿ ಪುರಸ್ಕಾರ

ವಾರಣಾಸಿಯಲ್ಲಿರುವ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಾಂಖ್ಯಯೋಗ ತಂತ್ರಾಗಮ ವಿಭಾಗದ ಡೈರಕ್ಟರ್ ಆಗಿದ್ದ ಪಂ. ವ್ರಜವಲ್ಲಭ ದ್ವಿವೇದಿ ಅವರ ಹೆಸರಿನಲ್ಲಿ ಒಂದು ಪುರಸ್ಕಾರವನ್ನು ಆರಂಭಿಸಿ ಅವರ ಹೆಸರನ್ನು ಶಾಶ್ವತಗೊಳಿಸಬೇಕೆಂಬ ಆಲೋಚನೆ ಅವರ ಶಿಷ್ಯರಾಗಿದ್ದ ಕಾಶೀ ಜಗದ್ಗುರುಗಳಿಗೆ ಬಂದು ಈ ವಿಚಾರವನ್ನು ಇಂದಿನ ಶ್ರೀಶೈಲ ಜಗದ್ಗುರುಗಳ ಬಳಿ ಹೇಳಿದಾಗ ತಾವೂ ಈ ಪುರಸ್ಕಾರಕ್ಕೆ ಕೈ ಜೋಡಿಸುವುದಾಗಿ ತಿಳಿಸಿದರು. ಇಂದಿನ ಶ್ರೀ ಶೈಲ ಜಗದ್ಗುರು ಡಾ॥ ಚನ್ನ ಸಿದ್ಧರಾಮ ಪಂಡಿತ ಶಿವಾಚಾರ್ಯ ಮಹಾಸ್ವಾಮಿಗಳು. ವ್ರಜವಲ್ಲಭ ದ್ವಿವೇದಿ ಅವರ ಶಿಷ್ಯರಾಗಿದ್ದರು. ಕಾಶೀಪೀಠ, ಶ್ರೀಶೈಲ ಪೀಠಗಳ ಜೊತೆಗೆ ಬೆಳಗಾಂನ ಕಾರಂಜಿಮಠದ ಗುರುಸಿದ್ಧ ಸ್ವಾಮಿಗಳೂ ಸೇರಿ ಪಂ. ವ್ರಜವಲ್ಲಭ ದ್ವಿವೇದಿ ಪುರಸ್ಕಾರವನ್ನು 2013ರಿಂದ ಕೊಡಲಾರಂಭಿಸಿದ್ದು ಈ ಪುರಸ್ಕಾರದ ವಿಶೇಷತೆಯಾಗಿದೆ.

2012–ಡಾ॥ ಪ್ರಭುನಾಥ್, 2013–ಶ್ರೀ ರೇತುಪ್ರಸಾದ್ ಉಪಾಧ್ಯಾಯ, 2014–ಡಾ. ಕಮಲೇಶ್

ಬೆಂಗಳೂರು ನಗರದಲ್ಲಿ ಶಿವಕಮಲ ಸಾಹಿತ್ಯ ಪ್ರಶಸ್ತಿ 2004 ರಿಂದ

ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ ವಾರಾಣಸಿಯ ಅಂಗಸಂಸ್ಥೆಯಾದ ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನವನ್ನು 8–5–1998ರಲ್ಲಿ ಉದ್ಘಾಟನೆ ಮಾಡಲಾಯಿತು. ಕಾಶೀ ಜಗದ್ಗುರುಗಳೇ ಅದರ ಸಂಸ್ಥಾಪಕ ಅಧ್ಯಕ್ಷರಾಗಿ ಅವರ ಮಾರ್ಗದರ್ಶನದಲ್ಲಿ ಕಾಶಿಯಲ್ಲಿ ಪ್ರಕಟಗೊಂಡಿದ್ದ ಆಗಮಗಳನ್ನೆಲ್ಲಾ ಇಲ್ಲಿ ಹೆಸರಾಂತ ವಿದ್ವಾಂಸರಿಂದ ಕನ್ನಡಕ್ಕೆ ಅನುವಾದಿಸಿ ಪ್ರಕಟಗೊಳಿಸುವುದರ ಜೊತೆಜೊತೆಗೆ ಪ್ರಕಟಗೊಂಡ ಕೃತಿ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಿ–ಅಲ್ಲಿನ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಹೊರತರುವ ಜವಾಬ್ದಾರಿಯುತ ಕೆಲಸವನ್ನು ಡಾ.ಎಂ. ಶಿವಕುಮಾರ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಮಾಡಲಾಗಿದೆ. ಸಂಪಾದಕ ಮಂಡಲಿ ಹಾಗೂ ಪೋಷಕ ಮಂಡಲಿಗಳನ್ನು ಜಗದ್ಗುರುಗಳು ರಚಿಸಿ ಒಂದಕ್ಕೊಂದು ಪೂರಕವಾಗಿ ಕೆಲಸ ನಿರ್ವಹಿಸಿಕೊಂಡು ಬರುತ್ತಿದೆ. ಪೋಷಕ ಮಂಡಲಿಯ ಸದಸ್ಯರಾಗಿದ್ದ ದಿವಂಗತ ಶ್ರೀ ಬಿ.ಎಸ್. ಶಿವಪ್ಪ ಶೆಟ್ಟರು ಪಂಚಪೀಠಗಳ ಪರಮ ಭಕ್ತರು, ಪೀಠಗಳಿಗೇನಾದರು ಅವಮಾನವಾಗುವಂತಹ ಸಂದರ್ಭಗಳಲ್ಲಿ ಸಿಡಿದೆದ್ದು ಹೋರಾಟ ಮಾಡುವಷ್ಟು ಪೀಠಾಭಿಮಾನಿಯಾಗಿದ್ದರು. ಅವರು ಲಿಂಗೈಕ್ಯರಾದ ನಂತರ ಅವರ ಕೊನೆಯಪುತ್ರ ಶ್ರೀ ಬಿ.ಎಸ್. ವಾಗೀಶ ಪ್ರಸಾದ್ ಅವರು 2004ರಿಂದ ತಂದೆ ತಾಯಿಯ ಹೆಸರಿನಲ್ಲಿ 'ಶಿವಕಮಲ ಸಾಹಿತ್ಯ ಪ್ರಶಸ್ತಿ'ಯನ್ನು ಕನ್ನಡನಾಡಿನ ಹೆಸರಾಂತ ವೀರಶೈವ ಸಾಹಿತಿಗಳಿಗೆ, ವಿದ್ವಾಂಸರುಗಳಿಗೆ ಕೊಡಲಾಗುತ್ತಿದೆ.

2004–ಪ್ರೊ.ಎಂ. ಮಹಾದೇವಪ್ಪ, ಬೆಂಗಳೂರು, 2005–ಪ್ರೊ.ಎನ್. ಬಸವಾರಾಧ್ಯ, ಮಾಜಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು, ಬೆಂಗಳೂರು, 2006–ಶ್ರೀ ಷಣ್ಮುಖಯ್ಯ ಅಕ್ಕೂರಮಠ, ಬೆಂಗಳೂರು, 2007–ಡಾ॥ ಎಸ್. ವಿದ್ಯಾಶಂಕರ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ–ಬೆಂಗಳೂರು, 2008– ಡಾ॥ ಎಂ.ಜಿ. ನಾಗರಾಜ್, ಖ್ಯಾತ ಸಂಶೋಧಕರು, 2009– ಡಾ॥ ಪಂಚಾಕ್ಷರಿ ಹಿರೇಮಠ–ಧಾರವಾಡ, 2010–ಡಾ॥ ಸಂಗಮೇಶ ಸವದತ್ತಿಮಠ ಪ್ರಾಧ್ಯಾಪಕರು, ಧಾರವಾಡ, 2011–ಶ್ರೀ ಎಸ್.ಎಂ. ಹಿರೇಮಠ ಪ್ರಾಧ್ಯಾಪಕರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, 2012– ಡಾ॥ ಸಾ.ಶಿ. ಮರುಳಯ್ಯ–ಮಾಜಿ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್–ಬೆಂಗಳೂರು, 2013–ವಿದ್ವಾನ್. ಬಿ. ರಾಜಶೇಖರಯ್ಯ, ತುಮಕೂರು, 2014–ಶ್ರೀ ಹೀ.ಚಿ. ಶಾಂತವೀರಯ್ಯ, ಬೆಂಗಳೂರು, ಪ್ರಶಸ್ತಿಗೆ 11,000 ರೂ. ನಗದು, ಪ್ರಶಸ್ತಿಪತ್ರ ಶಾಲು ಫಲತಾಂಬೂಲವಿತ್ತು ವಿದ್ವಾಂಸರನ್ನು ಗೌರವಿಸುತ್ತಾ ಬಂದಿದ್ದಾರೆ.

'ಪಂಚಾಚಾರ್ಯಶ್ರೀ ಪ್ರಶಸ್ತಿ'

ವೀರಶೈವ ಅನುಸಂಧಾನ ಸಂಸ್ಥಾನ ಆರಂಭಗೊಂಡಾಗಲಿಂದ ಪೋಷಕ ಮಂಡಲಿಯ ಅಧ್ಯಕ್ಷರಾಗಿ 13 ವರ್ಷಗಳ ಕಾಲ ಸಮರ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದವರು ಶ್ರೀ ಬಿ.ಆರ್.ವಿ. ಗೌಡ ಅವರು. ಶ್ರೀ ಬಿ.ಆರ್. ವಿ.ಗೌಡ ಅವರು ಪಂಚಪೀಠಗಳ ಭಕ್ತರಾಗಿ ಅನೇಕ ಸೇವಾ ಕಾರ್ಯಗಳನ್ನು ಎಲ್ಲಾ ಪೀಠಗಳಲ್ಲಿ ಮಾಡಿದ್ದರು. ಅವರು ಲಿಂಗೈಕ್ಯರಾದ ಮೇಲೆ ಅವರ ಧರ್ಮಪತ್ನಿ ಶ್ರೀಮತಿ ಶಾಂತಾ ವಿ.ಗೌಡ ಅವರು "ಶ್ರೀಮತಿ ಶಾಂತ ಮತ್ತು ದಿ॥ ಶ್ರೀ ಬಿ.ಆರ್.ವಿ. ಗೌಡ ಫೌಂಡೇಷನ್" ಆರಂಭಿಸಿ ಆ ಮೂಲಕ ಗಣ್ಯರಿಗೆ, ಸಾಹಿತಿಗಳಿಗೆ, ಸಮಾಜ ಸೇವೆ ಸಲ್ಲಿಸಿದವರಿಗೆ ಕೊಡುವ ಪ್ರಶಸ್ತಿಯಾಗಿದೆ. ಈ ಪ್ರಶಸ್ತಿಗೆ 25,000 ರೂ ನಗದು, ಪ್ರಶಸ್ತಿ ಪತ್ರ, ಶಾಲು, ಹಣ್ಣುಗಳನ್ನು ಕೊಟ್ಟು ಸತ್ಕರಿಸಲಾಗುತ್ತಿದೆ. ಈವರೆಗೆ 2013ರಲ್ಲಿ ಡಾ॥ ಎಂ. ಶಿವಕುಮಾರ ಸ್ವಾಮಿಗಳು, ರಾಷ್ಟ್ರಪತಿ ಗೌರವ ಪ್ರಶಸ್ತಿ ಪುರಸ್ಕೃತರು, 2014ರಲ್ಲಿ ಶ್ರೀ ಷಣ್ಮುಖಯ್ಯ ಅಕ್ಕೂರಮಠ ಅವರಿಗೆ ಕೊಡಲಾಗಿದೆ.

ಕಾಶೀ ಜಗದ್ಗುರುಗಳು ಆಶೀರ್ವದಿಸಿ ಸತ್ಕರಿಸಿದ ಕ್ಷಣಗಳು

ಕಾಶೀ ಪೀಠದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು 2010ರಲ್ಲಿ ಆಚರಿಸಿದಾಗ ಕಾಶೀ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಶ್ರೀಶೈಲ ಪೀಠದ ನೂತನ ಜಗದ್ಗುರು ಡಾ. ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳನ್ನು ವಾರಣಾಸಿಯ ಅನೇಕ ವಿದ್ವಾಂಸರ ಸಮ್ಮುಖದಲ್ಲಿ ಸತ್ಕರಿಸಲಾಯಿತು. ಪಂ. ವ್ರಜವಲ್ಲಭ ದ್ವಿವೇದಿ, ಡಾ. ಪಾರಸನಾಥ ದ್ವಿವೇದಿ, ಡಾ. ರಾಜರಾಮ ಶುಕ್ಲ, ಡಾ. ಕಮಲೇಶ ಝಾ ಮತ್ತಿತರ ವಿದ್ವಾಂಸರೆಲ್ಲಾ ಸೇರಿ ಶ್ರೀಶೈಲ ಜಗದ್ಗುರುಗಳಿಗೆ ಅಭಿನಂದನಾ ಪತ್ರ ಸಮರ್ಪಿಸಿದರು.



ಕಾಶೀ ಪೀಠದಲ್ಲಿ ಶ್ರೀಶೈಲ ಪೀಠದ ನೂತನ ಜಗದ್ಗುರು ಡಾ. ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರನ್ನು ಸತ್ಕರಿಸಲಾಯಿತು.

ಮಹಾಂತಲಿಂಗ ಶಿವಾಚಾರ್ಯರ ಸೇವೆ ಮಠಾಧೀಶರಿಗೆ ಮಾದರಿ


ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಬೆಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದಲ್ಲಿ 'ಶಿವಾಗಮಗಳು ಮತ್ತು ಶ್ರೀ ಸಿದ್ಧಾಂತ ಶಿಖಾಮಣಿ' ವಿಷಯದ ಮೇಲೆ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಪಡೆದ ಮೇಲೆ ಕಾಶೀ ಪೀಠಕ್ಕೆ ಬಂದಾಗ ಕಾಶೀ ಜಗದ್ಗುರುಗಳು ಡಾ॥ ಮಹಾಂತಲಿಂಗ ಶಿವಾಚಾರ್ಯರಿಗೆ ಗುರುರಕ್ಷಾ ಆಶೀರ್ವಾದ ಅನುಗ್ರಹಿಸಿ ಗೌರವಿಸಿದರು. ಮಹಾಂತಲಿಂಗ ಶಿವಾಚಾರ್ಯರು ಬೆಂಗಳೂರು ವಿಭೂತಿಪುರ ಮಠದಲ್ಲಿ ಸುಮಾರು 500 ಬಡವಿದ್ಯಾರ್ಥಿಗಳಿಗೆ ವಸತಿ ಶಾಲೆ ಆರಂಭಿಸಿರುವ ವಿಷಯವನ್ನು ಜಗದ್ಗುರುಗಳು ತಿಳಿಸುತ್ತಾ ಅವರ ಸೇವೆ ಇತರ ಮಠಾಧೀಶರಿಗೆ ಮಾದರಿಯಾಗಿದೆ ಎಂದು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ವಿಜಯ ಕರ್ನಾಟಕ 23–10–2010



ಕಾಶೀ ಪೀಠದಲ್ಲಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಡಾ. ಮಹಾಂತಲಿಂಗ ಶ್ರೀಗಳಿಗೆ ವಿಶ್ವನಾಥ ಮಂದಿರದ ಸ್ವರ್ಣ ಶಿಖರದ ಪ್ರತಿಕೃತಿ ನೀಡಿ ಗೌರವಿಸಿದರು.

ವಿಜಯ ಕರ್ನಾಟಕ 30–10–2010



ಕಾಶೀ ಮಹಾಪೀಠದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಧರ್ಮಸಭೆಯಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಪಂ. ವಿಜಯ ಶ್ರೀರಂಗ ಜಂಗಮಸ್ವಾಮಿ ಇವರಿಗೆ 'ಜ್ಯೋತಿಷ್ಯ ಮಾರ್ತಾಂಡ' ಪ್ರಶಸ್ತಿ ನೀಡಿ ಗೌರವಿಸಿದರು.

ಪ್ರಾಚೀನ ಶಾಸ್ತ್ರಗಳನ್ನು ಸಂರಕ್ಷಿಸಿ

ಪಂ. ವಿಜಯ ಶ್ರೀರಂಗ ಜಂಗಮಸ್ವಾಮಿ ಇವರು ಕಳೆದ 13 ವರ್ಷಗಳಿಂದ ವಾಸ್ತು ಮತ್ತು ಜ್ಯೋತಿಷ್ಯ ಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿ ಮುಂಬಯಿಯ ಉಪನಗರ ಗಳಾದ ವರಳಿ ಗೋರೆಗಾಂವ್‌ಗಳಲ್ಲಿ ಖ್ಯಾತಿ ಪಡೆದಿರುವ ವಿಷಯವನ್ನು ಕಾಶೀ ಜಗದ್ಗುರುಗಳು ಕಾಶೀ ಪೀಠದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಧರ್ಮ ಸಭೆಯ ಆಶೀರ್ವಚನದಲ್ಲಿ ತಿಳಿಸಿದರು. ಸಮಾಜದ ಕಲ್ಯಾಣಕ್ಕಾಗಿ ಮಹರ್ಷಿ ಮುನಿಗಳಿಂದ ರಚಿತವಾದ ವಾಸ್ತು ಮತ್ತು ಜ್ಯೋತಿಷ್ಯ ಶಾಸ್ತ್ರಗಳನ್ನು ಸಂರಕ್ಷಿಸಬೇಕು. ಭಾರತದೇಶ ಪ್ರಾಚೀನ ಶಾಸ್ತ್ರಗಳ ತವರುಮನೆ. ಶಿಕ್ಷಾ, ಕಲ್ಪ, ವ್ಯಾಕರಣ, ಛಂದಸ್ಸು, ಜ್ಯೋತಿಷ್ಯ ಮತ್ತು ನಿರುಕ್ತಗಳು ವೇದಗಳ ಷಡಂಗಗಳು. ಜ್ಯೋತಿಷ್ಯ, ವಾಸ್ತು ಶಾಸ್ತ್ರಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ಸಾಮಾನ್ಯ ಜನರಿಗೆ ಪ್ರಯೋಜನವಾಗುವಂತೆ ನೋಡಿಕೊಳ್ಳಬೇಕೆಂದು ತಿಳಿಸಿ ಪಂ. ವಿಜಯ ಶ್ರೀರಂಗ ಜಂಗಮಸ್ವಾಮಿ ಇವರಿಗೆ 'ಜ್ಯೋತಿಷ್ಯ ಮಾರ್ತಾಂಡ' ಪ್ರಶಸ್ತಿ ನೀಡಿ ಆಶೀರ್ವದಿಸಿದರು.

ಸಾತಾರಕರ್‌ಗೆ ಕೀರ್ತನ ಚಕ್ರವರ್ತಿ ಪ್ರಶಸ್ತಿ


ಕಾಶೀ ಪೀಠದಲ್ಲಿ ನಡೆದ ವಿಶ್ವಾರಾಧ್ಯರ ಜಯಂತಿ ಮಹೋತ್ಸವದಲ್ಲಿ ಮಹಾರಾಷ್ಟ್ರದ ವಾರಕರೀ ಸಂಪ್ರದಾಯದ ಸುಪ್ರಸಿದ್ಧ ಕೀರ್ತನಕಾರ ಬಾಬಾ ಮಹಾರಾಜ ಸಾತಾರಕರ್ ಅವರಿಗೆ ಕಾಶೀ ಜಗದ್ಗುರುಗಳು "ಕೀರ್ತನ ಚಕ್ರವರ್ತಿ ಪ್ರಶಸ್ತಿ" ಪ್ರದಾನ ಮಾಡಿದರು. ವಿಶ್ವನಾಥ ಮಂದಿರದ ಸುವರ್ಣ ಶಿಖರದ ಪ್ರತಿಕೃತಿ ಪ್ರಶಸ್ತಿ ಪತ್ರ ಮತ್ತು ಬಂಗಾರದ ಉಂಗುರವನ್ನು ತೊಡಿಸಿ ಗೌರವಿಸಿದರು.

ವಿಜಯ ಕರ್ನಾಟಕ 5–3–2011



ವಾರಾಣಸಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಶಿ ಜಗದ್ಗುರುಗಳು ಕೀರ್ತನಕಾರ ಬಾಬಾ ಮಹಾರಾಜ ಸಾತಾರಕರ್ ಅವರನ್ನು ಸನ್ಮಾನಿಸಿದರು.

ಭಾರತೀಯ ಮಹಿಳೆಯರ ಸಂಸ್ಕೃತಿ ಭವ್ಯವಾದದ್ದು : ಕಾಶೀ ಜಗದ್ಗುರು



ನಾಡ ನುಡಿ 2–7–11

ಇಳಕಲ್ಲಿನ ಸದ್ಗುರು ಅಮರೇಶ್ವರ ಸೇವಾ ಸಂಘ ಹಾಗೂ ಆಧ್ಯಾತ್ಮ ಮಂಡಳಿ ಜೇಷ್ಠಮಾಸ ಜ್ಞಾನ ಯಜ್ಞ ವಿಶೇಷ ಕಾರ್ಯಕ್ರಮಕ್ಕೆ ಕಾಶೀ ಜಗದ್ಗುರುಗಳು ಸಾನ್ನಿಧ್ಯ ವಹಿಸಿದ್ದರು. ಈ ವರ್ಷದಿಂದ "ಭಾರತೀಯ ನಾರಿ ಗೌರವ" ಪ್ರಶಸ್ತಿಯನ್ನು ಪ್ರಾರಂಭಿಸಿದ ಜಗದ್ಗುರುಗಳು–ಇಳಕಲ್ಲ ಸಹಕಾರ ಬ್ಯಾಂಕಿನ ನಿರ್ದೇಶಕರಾದ ಲಲಿತಾಬಾಯಿ ಹನುಮಂತಪ್ಪ ಸಪ್ಪರದ ಅವರಿಗೆ ನೀಡಿ ಮಾಲೆ ಹಾಕಿ ಶಾಲು ಹೊದಿಸಿ ಸತ್ಕರಿಸಿದರು.

ಇಂದಿನ ಮಹಿಳೆಯರು ಪಾಶ್ಚಿಮಾತ್ಯ ಸಂಸ್ಕೃತಿಗೆ ವಾಲುತ್ತಿರುವುದನ್ನು ಸರಿಯಲ್ಲವೆಂದು ಹೇಳಿ ಭಾರತೀಯ ಭವ್ಯ ಪರಂಪರೆಯನ್ನು ಕೈಬಿಡದೆ ಉತ್ತಮ ಗೃಹಿಣಿ ಮತ್ತು ತಾಯಿಯಾಗಿರಬೇಕೆಂದು ಜಗದ್ಗುರುಗಳ ಉದ್ದೇಶವಾಗಿದ್ದು, ಎಲ್ಲಿ ಮಹಿಳೆಯರನ್ನು ಪೂಜ್ಯತೆಯಿಂದ ಹಾಗೂ ಗೌರವದಿಂದ ಕಾಣುತ್ತಾರೋ ಅಲ್ಲಿ ದೇವರು ಪ್ರಸನ್ನನಾಗುತ್ತಾನೆ. ನಾರಿಮಣಿಗಳಿಗೆ ಭಾರತ ಶ್ರೇಷ್ಠವಾಗಿದೆ ಎನ್ನುವ ಕಾರಣಕ್ಕೆ ಭಾರತೀಯ ನಾರಿ ಗೌರವ ಪ್ರಶಸ್ತಿಯನ್ನು ಪ್ರಾರಂಭಿಸಿರುವುದಾಗಿ ಜಗದ್ಗುರುಗಳು ತಿಳಿಸಿದರು

ಹೀಗೆ ಕಾಶೀ ಜಗದ್ಗುರುಗಳು ಜ್ಞಾನಿಗಳನ್ನು, ವಿದ್ವಾಂಸರನ್ನು, ಸಂಶೋಧಕರನ್ನು, ಕಲಾವಿದರನ್ನು ಗೌರವಿಸುವ ಕಾಶೀ ಪೀಠದ ಪರಂಪರೆಯನ್ನು ಇನ್ನೂ ವ್ಯವಸ್ಥಿತ ರೀತಿಯಲ್ಲಿ ಮುಂದುವರಿಸಿಕೊಂಡು ಬಂದಿರುವುದು ಅನುಕರಣೀಯವಾಗಿದೆ.

ಜಗತ್ತಿನಲ್ಲಿ ಜ್ಞಾನವೇ ಅತ್ಯಂತ ಪವಿತ್ರವಾದದ್ದು. ಆಧ್ಯಾತ್ಮಿಕ ಜ್ಞಾನವನ್ನು ಪಡೆದುಕೊಂಡ ಜ್ಞಾನಿಯು ಜಗತ್ತಿನಲ್ಲಿ ಮಾನ್ಯತೆ ಪಡೆಯುತ್ತಾನೆ ಎಂದು ಕಾಶೀ ಜಗದ್ಗುರುಗಳು ಹೇಳಿ, ಪ್ರಪಂಚದ ಭೌತಿಕ ಐಶ್ವರ್ಯಗಳು ಕ್ಷಣಕಾಲ ಸುಖ ಕೊಟ್ಟರೂ, ಪ್ರತಿ ಜೀವಿಯೂ ಅದರಿಂದ ದುಃಖ ಅನುಭವಿಸುತ್ತಾನೆ. ಶಾಶ್ವತವಾದ ಶಾಂತಿಗಾಗಿ ಆಧ್ಯಾತ್ಮ ಜ್ಞಾನ ಪಡೆದುಕೊಳ್ಳಬೇಕೆಂದು ಸದಾ ಹೇಳುತ್ತಿರುತ್ತಾರೆ.

ಶ್ರೀ ಪೀಠದ ಆರ್ಥಿಕ ವ್ಯವಸ್ಥೆ ಹಾಗೂ ಜಗದ್ಗುರುಗಳು

ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಕಾಶೀ ಪೀಠದ ಜಗದ್ಗುರುಗಳಾಗಿದ್ದಾಗ ಇಂದಿನ ಜಗದ್ಗುರುಗಳಾದ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳೂ ಅಂದು ಗುರುಕುಲದ ವಿದ್ಯಾರ್ಥಿಗಳಾಗಿದ್ದರು. ಆಗಲೇ ಕಾಶೀ ಪೀಠದ ಅನೇಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರು. ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಬಹಳ ಆಪ್ತರೂ ಆಗಿದ್ದರು. ಹೀಗಾಗಿ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಪೀಠದ ಅನೇಕ ಕಾರ್ಯಕ್ರಮಗಳು–ಅವುಗಳ ನಿರ್ವಹಣೆ–ಬ್ಯಾಂಕ್ ವ್ಯವಹಾರಗಳು ಎಲ್ಲವೂ ಸ್ವಲ್ಪಮಟ್ಟಿಗೆ ತಿಳಿದಿತ್ತು. ಈ ಎಲ್ಲಾ ಅನುಭವಗಳ ಹಿನ್ನೆಲೆ ಇಂದಿನ ಜಗದ್ಗುರುಗಳಿಗೆ ಇದ್ದಿದ್ದರಿಂದ ಪೀಠಾಧಿಪತಿಗಳಾದ ಕೂಡಲೆ ಪೀಠದ ಹಣಕಾಸಿನ ವ್ಯವಹಾರದ ಕಡೆ ಗಮನ ಹರಿಸಿದರು. ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಮನಸ್ಸಿನಲ್ಲಿ ಅನೇಕ ಯೋಜನೆಗಳು ಮೂಡತೊಡಗಿದ್ದವು. ಆ ಯೋಜನೆಗಳಿಗೆ ಹಣ ವ್ಯಯವಾಗಬೇಕೆಂಬ ಕಾರಣದಿಂದ ವಾರಣಾಸಿಯಲ್ಲಿರುವ Nationalised Bankಗಳಲ್ಲಿ, ಕೆಲವು ಕೋ. ಆಪರೇಟಿವ್ ಬ್ಯಾಂಕ್‌ಗಳಲ್ಲಿ ವಿವಿಧ ಖಾತೆಗಳನ್ನು ತೆರೆದರು. ಪ್ರತೀ ಯೋಜನೆಗಳಿಗೂ ಬೇರೆ ಬೇರೆ ರಶೀದಿ ಪುಸ್ತಕಗಳನ್ನಿರಿಸಿದರು. ಜಗದ್ಗುರುಗಳು ಆರಂಭಿಸಿದ ಯೋಜನೆಗಳು ಹೀಗಿವೆ:

1. ಮಹಾಶಿವರಾತ್ರಿ ಪೂಜಾ–ಪ್ರಸಾದ ನಿಧಿ
2. ನಿತ್ಯ ರುದ್ರಾಭಿಷೇಕ ನಿಧಿ
3. ನಿತ್ಯ ಅನ್ನದಾಸೋಹ ನಿಧಿ
4. ಕಟ್ಟಡ ನಿಧಿ
5. ಶಿಷ್ಯವೃತ್ತಿ ನಿಧಿ
6. ತ್ರೈಮಾಸಿಕ ಮರಾಠಿ ಪತ್ರಿಕಾ ಆಜೀವಸದಸ್ಯರ ನಿಧಿ
7. ಸಂಶೋಧನಾ ಸಂಸ್ಥಾ ನಿಧಿ
8. ಶ್ರೀ ಜಗದ್ಗುರು ವಿಶ್ವಾರಾಧ್ಯ ಜನ ಕಲ್ಯಾಣ ಪ್ರತಿಷ್ಠಾನದ ಖಾತೆ.

ಹೀಗೆ ಹಲವರು ಖಾತೆಗಳನ್ನು ತೆರೆದು ಯಾರು ಯಾವ ಉದ್ದೇಶಕ್ಕಾಗಿ ಕಾಣಿಕೆ ನೀಡಿರುವರೋ ಆ ಖಾತೆಗೆ ಹಣ ಜಮಾ ಮಾಡಿ ಅದೇ ಉದ್ದೇಶಕ್ಕಾಗಿ ಮಾಡಿಸಿರುವ ರಶೀದಿಯನ್ನು ಭಕ್ತರಿಗೆ ಕೊಡುವ ವ್ಯವಸ್ಥೆಯನ್ನು ಪೀಠದ ಕಛೇರಿಯಲ್ಲಿ ಮಾಡಿದರು.

ಜಗದ್ಗುರುಗಳು ಮಹಾಶಿವರಾತ್ರಿ ನವರಾತ್ರಿ, ದೀಪಾವಳಿ ಹೊರತುಪಡಿಸಿ ಮಿಕ್ಕ ಮಾಸಗಳಲ್ಲಿ ದೇಶಾದ್ಯಂತ ಪ್ರವಾಸದಲ್ಲಿರುತ್ತಾರೆ. ಹೋದೆಡೆಯಲ್ಲೆಲ್ಲಾ ಭಕ್ತಾದಿಗಳು ಕಾಣಿಕೆ ನೀಡುತ್ತಲೇ ಇರುತ್ತಾರೆ. ಅದಕ್ಕಾಗಿ ಕಾಶೀ ಜಗದ್ಗುರುಗಳು ತಮಗಾಗಿ ಬೇರೆ ಒಂದು ರಶೀದಿ ಪುಸ್ತಕವನ್ನು ಮಾಡಿಸಿದ್ದಾರೆ. ಅದರಲ್ಲಿ ಮೇಲೆ ತಿಳಿಸಿದ ಎಲ್ಲಾ ಯೋಜನೆಗಳ ಹೆಸರುಗಳನ್ನು ಮುದ್ರಿಸಿದ್ದಾರೆ. ಭಕ್ತರು ಯಾವ ಯಾವ ಉದ್ದೇಶಕ್ಕಾಗಿ ಕಾಣಿಕೆ ನೀಡುವರೋ ಆ ಯೋಜನೆಗೆ ಟಿಕ್‌ಮಾಡಿ ಸಾಧ್ಯವಾದಷ್ಟು ಅಂದೇ ರಶೀದಿ ಬರೆದು ಭಕ್ತರಿಗೆ ಮರುದಿನ ಮುಟ್ಟಿಸುತ್ತಾರೆ. ರಾತ್ರಿ ವಿಶ್ರಾಂತಿ ತೆಗೆದುಕೊಳ್ಳುವ ಮುನ್ನ ಎಲ್ಲಾ ಲೆಕ್ಕಾಚಾರ ಮಾಡಿ–ಮರುದಿನ ಬ್ಯಾಂಕ್‌ಗೆ ಕಟ್ಟಿಸುವ ವ್ಯವಸ್ಥೆ ಮಾಡುತ್ತಾರೆ.

ಮೊದಮೊದಲು ಸದಾ ಹಣವನ್ನು ಜೊತೆಯಲ್ಲೇ ಕೊಂಡೊಯ್ಯುತ್ತಿದ್ದರು. ಐಸಿಐಸಿಐ ಬ್ಯಾಂಕ್ ಆರಂಭವಾದ ಮೇಲೆ ಮುಂದಿನ ಊರಿಗೆ ಪ್ರವಾಸ ಹೊರಡುವ ಮುನ್ನ ಬ್ಯಾಂಕ್‌ಗೆ ಜಮಾ ಮಾಡಲಾರಂಭಿಸಿದರು. ಐ.ಸಿ.ಐ.ಸಿ.ಐ. ಬ್ಯಾಂಕ್ ಮ್ಯಾನೇಜರ್ ಅವರನ್ನು ತಮ್ಮ ಬಳಿಗೆ ಕರೆಯಿಸಿಕೊಂಡು ಹೊಸ ವ್ಯವಸ್ಥೆಗಳ ಬಗ್ಗೆ ವಿವರವಾಗಿ ತಿಳಿದುಕೊಂಡರು. ಯಾವ ಊರಿನಲ್ಲೇ ಇರಲಿ ಅಲ್ಲಿಂದಲೇ ಹಣ ಜಮಾಮಾಡುವ ವ್ಯವಸ್ಥೆಯ ಬಗ್ಗೆ ತಿಳಿದುಕೊಂಡು ಅಂದಿನಿಂದಲೇ ತಾವೂ ಕೂಡ ಬ್ಯಾಂಕಿಗೆ onlineನಲ್ಲಿ ಜಮಾ ಮಾಡಲಾರಂಭಿಸಿದರು. ಅನುಕೂಲಕರವಾದ ಹೊಸ ಹೊಸ ಆವಿಷ್ಕಾರಗಳನ್ನು ಜಗದ್ಗುರುಗಳು ಬಹಳ ಮೆಚ್ಚಿಕೊಳ್ಳುತ್ತಿದ್ದರು. ಅದನ್ನು ಅಳವಡಿಸಿಕೊಳ್ಳುತ್ತಿದ್ದರು. ಹಾಗಾಗಿ ಇಂದು ಜಗದ್ಗುರುಗಳು ತಮ್ಮದೇ ಇ-ಮೇಲ್ ಐಡಿ ಹೊಂದಿದ್ದಾರೆ. ಕಾಶೀ ಪೀಠದ ವೆಬ್‌ಸೈಟ್ ಹೊಂದಿದ್ದಾರೆ. ರಷ್ಯನ್ ಭಾಷೆಗೆ ಅನುವಾದಗೊಂಡಿರುವ. ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಅಂತರ್ಜಾಲಕ್ಕೆ ಅಳವಡಿಸಿ ರಷ್ಯಾದಲ್ಲೇ ಅದನ್ನು ಉದ್ಘಾಟನೆ ಮಾಡಿದ್ದಾರೆ. ಹೀಗೆ ಹೊಸ ಆವಿಷ್ಕಾರಗಳಿಂದ ತಮ್ಮ ಬ್ಯಾಂಕ್ ಕೆಲಸ ಮೊದಲಿಗಿಂತ ಬಹಳ ಆರಾಮವಾಗಿದೆ ಎನ್ನುತ್ತಾರೆ ಜಗದ್ಗುರುಗಳು.

ಹೀಗೆ ಪ್ರವಾಸದಲ್ಲಿರುವಾಗ ಜಮಾ ಮಾಡಿರುವ ಎಲ್ಲಾ ಕಾಣಿಕೆಗಳನ್ನು ಪೀಠಕ್ಕೆ ಬಂದಾಗ–ವಿವಿಧ ಖಾತೆಗಳಿಗೆ ಸೇರಬೇಕಾದ ಮೊತ್ತಗಳಿಗೆ ಚೆಕ್ ಬರೆದು ಆಯಾ ಖಾತೆಗೆ ಸೇರುವಂತೆ ಮಾಡುತ್ತಾರೆ. ರಶೀದಿ ತಲ್ಪದವರಿಗೆ ಪೀಠದ ಕಛೇರಿಯಿಂದ ಕೊಡಲಾಗುವುದು.

ಮಹಾಶಿವರಾತ್ರಿ ಪೂಜಾ ಪ್ರಸಾದ ನಿಧಿಯಲ್ಲಿ ಸುಮಾರು 15 ಸಾವಿರಕ್ಕೂ ಮಿಕ್ಕಿ ಇರುವ ಭಕ್ತಾದಿಗಳ ವಿಳಾಸಗಳೆಲ್ಲವನ್ನು ಕಂಪ್ಯೂಟರ್‌ನಲ್ಲಿ ಅಳವಡಿಸಿ ಶಿವರಾತ್ರಿ ಆದ ಮರುದಿನದಂದು ಎಲ್ಲರಿಗೂ ಶಿವರಾತ್ರಿಯ ಪ್ರಸಾದವನ್ನು ಅಂಚೆ ಮೂಲಕ ಕಳಿಸುವ ಶಿಸ್ತಿನ ವ್ಯವಸ್ಥೆಯನ್ನು ಮಾಡಿದ್ದಾರೆ.

ಠೇವಣಿ ಇಟ್ಟಿರುವ ನಿಧಿಯಿಂದ ಬರುವ ಬಡ್ಡಿಯಲ್ಲಿ ಶೇ. 85ರಷ್ಟು ಆ ವರ್ಷವೇ ವಿನಿಯೋಗವಾಗಬೇಕು. ಇದು ಆದಾಯ ತೆರಿಗೆಯವರು ಮಾಡಿರುವ ನಿಯಮ. ಅದರಂತೆ ಎಲ್ಲವೂ ವ್ಯವಸ್ಥಿತವಾಗಿ ನಡೆಯುತ್ತಿರುವುದರಿಂದಲೇ 80% ತೆರಿಗೆ ವಿನಾಯಿತಿಯನ್ನು ಕಾಶೀ ಪೀಠಕ್ಕೆ ಕೊಡಮಾಡಲಾಗಿದೆ. ಮೊದಮೊದಲು ಮೂರು ವರ್ಷಗಳಿಗೊಮ್ಮೆ ನವೀಕರಿಸಬೇಕಾಗಿತ್ತು. ಆದರೆ ಈಗ ಶಾಶ್ವತವಾಗಿ ತೆರಿಗೆ ವಿನಾಯಿತಿಯನ್ನು ಕೊಡಲಾಗಿರುವುದು ಒಂದು ಹೆಮ್ಮೆಯ ವಿಷಯವಾಗಿದೆ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಶಾಖೆಗಳು ಯಾವ ಯಾವ ರಾಜ್ಯಗಳಲ್ಲಿವೆಯೋ ಆ ಶಾಖೆಯವರೂ ಆ ವರ್ಷದ ಲೆಕ್ಕಪತ್ರವನ್ನು ಆಡಿಟ್‌ಮಾಡಿಸಿ ಜೂನ್–ಜುಲೈ ತಿಂಗಳೊಳಗೆ ಕಾಶೀಪೀಠಕ್ಕೆ ಕಳುಹಿಸಬೇಕು. ಪೀಠದ ಸೆಪ್ಟೆಂಬರ್ ತಿಂಗಳಲ್ಲಿ ಎಲ್ಲಾ ಜಮಾ–ಖರ್ಚಿನ ಅಡಿಟ್ ನಡೆಸಲಾಗುವುದು. ಪೀಠದಲ್ಲಿ ಆಡಿಟ್ ಮಾಡುವ ಕಾಲದಲ್ಲಿ – ಜನಕಲ್ಯಾಣ ಪ್ರತಿಷ್ಠಾನದ ಯಾವುದೇ ಶಾಖೆಯಿಂದ ಯಾವುದೇ ವರ್ಷದ ಸಂಪೂರ್ಣ ಲೆಕ್ಕಗಳಿರುವ File ಅನ್ನು ಆಡಿಟ್‌ನವರು ಕೇಳಬಹುದು. ಅದನ್ನು ಆ ಶಾಖೆಯವರು ಕೊರಿಯರ್ ಮೂಲಕ ಎಲ್ಲಾ Fileಗಳನ್ನು ಕಳುಹಿಸಬೇಕು. ಬೆಂಗಳೂರಿಗೆ ಶಾಖೆ ವೀರಶೈವ ಅನುಸಂಧಾನ ಸಂಸ್ಥಾನದ File ಅನ್ನು ಹೀಗೆ ಒಮ್ಮೆ ತರಿಸಿಕೊಂಡಿದ್ದರು. ಈ ರೀತಿ ಕಟ್ಟುನಿಟ್ಟಾದ ನಿಯಮಗಳಿರುವುದರಿಂದ ಶ್ರೀ ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಎಲ್ಲಾ ಶಾಖೆಗಳೂ ಬಹಳ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುತ್ತಾ ಎಲ್ಲದಕ್ಕೂ ಲೆಕ್ಕ ಇಡುತ್ತಾರೆ.

ಕಾಶೀ ಜಗದ್ಗುರುಗಳು ಜಗದ್ಗುರುಗಳಾಗಿದ್ದರೂ, ಬಹಳ ಸರಳ ಸ್ವಭಾವದವರಾದರೂ ತಮ್ಮ ಸ್ವಂತಕ್ಕೆಂದು ಯಾವುದೇ ದುಂದುವೆಚ್ಚ ಮಾಡುವುದಿಲ್ಲ. ಹಣದ ವಿಚಾರದಲ್ಲಿ ತುಂಬಾ ಲೆಕ್ಕಾಚಾರಸ್ತರು. ಹಾಗಿದ್ದರೂ ಸಮಾಜೋಪಯೋಗಕ್ಕಾಗಿ ಎಷ್ಟೇ ಖರ್ಚು ಬಂದರು ಆ ಕಾರ್ಯಗಳಿಗೆ ಧಾರಾಳವಾಗಿ ಖರ್ಚು ಮಾಡುತ್ತಾರೆ. ಸಾರ್ಥಕ ಪಡೆಯುವಂತಹ ಕಾರ್ಯಗಳಿಗೆ ಹಿಂದು ಮುಂದು ನೋಡುವುದಿಲ್ಲ. ವೈಯಕ್ತಿಕವಾಗಿರಬಹುದು–ಸಾಮಾಜಿಕವಾಗಿರಬಹುದು ಅನಾವಶ್ಯಕ ದುಂದುವೆಚ್ಚವನ್ನೆಂದೂ ಜಗದ್ಗುರುಗಳು ಅಪೇಕ್ಷಿಪಡುವುದಿಲ್ಲ.

ಇಂದಿನ ದಿನಗಳಲ್ಲಿ ಇಂತಹ ಪುಣ್ಯಾತ್ಮರೂ, ಅನುಭಾವಿಗಳೂ ಆದ ಜಗದ್ಗುರುಗಳವರ ಸೇವೆ ಮಾಡುವ ಭಾಗ್ಯ ದೊರೆತಿರುವುದು ವೀರಶೈವರ ಪುಣ್ಯವೆಂದೇ ಎಣಿಸಬಹುದು.

ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಾಶೀ ಜಗದ್ಗುರುಗಳು

ಕಾಶೀ ಜಗದ್ಗುರುಗಳನ್ನು ಧಾರ್ಮಿಕ ಕಾರ್ಯಕ್ರಮಗಳಿಗಲ್ಲದೆ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಜನರು ಆಹ್ವಾನಿಸುತ್ತಿದ್ದರು. ಹೀಗೆ ಆಹ್ವಾನಿಸಲು ಬರುತ್ತಿದ್ದವರನ್ನು–ಕಾರ್ಯಕ್ರಮದ ಉದ್ದೇಶವೇನು? ಇದರಿಂದ ಸಮಾಜಕ್ಕೆ ಒಳಿತಾಗುವುದೆ? ಕಾರ್ಯಕ್ರಮ ಮಾಡಲೇಬೇಕೆಂಬ ಒತ್ತಡದಿಂದ ಯಾವ ಸದುದ್ದೇಶವನ್ನೂ ಹೊಂದಿರದೆ ಏರ್ಪಡಿಸಿದ್ದೀರೋ? ಎಂದು ಮುಂತಾಗಿ ವಿಚಾರಿಸಿ ತಮಗೆ ಸಮಾಧಾನವಾದರೆ ಮಾತ್ರ ಒಪ್ಪಿಕೊಳ್ಳುತ್ತಿದ್ದರು.

ಇಳಕಲ್ಲಿನ ಆಧ್ಯಾತ್ಮಿಕ ಮಂಡಲಿಯು ಜ್ಞಾನಯಜ್ಞದ ಒಂದು ವಾರದ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಆದರ್ಶಗುರುಗಳನ್ನು ಗೌರವಿಸಿ ಸನ್ಮಾನಿಸುವುದು, ಪ್ರಥಮ ರ್‍ಯಾಂಕ್ ಬಂದವರನ್ನು, ಶಿಕ್ಷಣ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದವರನ್ನು ಸತ್ಕರಿಸುವುದು, ಶ್ರದ್ಧಾಂಜಲಿ, ಕನ್ನಡಕ ಬ್ಯಾಂಕ್‌ನಿಂದ ಉಚಿತ ನೇತ್ರ ಪರೀಕ್ಷೆ ಹಾಗೂ ಹಳೆಯ ಕನ್ನಡಕಗಳ ವಿತರಣೆ, ಸ್ಥಳೀಯ ಅಂಗವಿಕಲರ ಮತ್ತು ಅನಾಥ ಸೇವಾ ಸಂಸ್ಥೆಯವರಿಂದ ದಾನಿಗಳಿಗೆ ಗೌರವ ಫಲಕ ವಿತರಣೆ ಹಾಗೂ ಮುಕ್ತಾಯ ಸಮಾರಂಭದಂದು ಪೂಜ್ಯ ಜಗದ್ಗುರುಗಳಿಂದ ಆಶೀರ್ವಚನ–ಹೀಗೆ ವಿವಿಧ ಸಮಾಜ ಸೇವಾಕಾರ್ಯಕ್ರಮಕ್ಕೆ ಜಗದ್ಗುರುಗಳನ್ನು ಆಹ್ವಾನಿಸಿದ್ದರು. 20–6–1993ರಂದು ಜರುಗಿದ ಮುಕ್ತಾಯ ಸಮಾರಂಭದಲ್ಲಿ ಆಶೀರ್ವಚನ ಮಾಡುತ್ತ–ಕಷ್ಟದಲ್ಲಿರುವ ಸಜ್ಜನರಿಗೆ ಸಹಾಯ ಮಾಡಲು ಕರೆ ನೀಡಿದರು.

ಕಷ್ಟದಲ್ಲಿರುವ ಸಜ್ಜನರಿಗೆ ಸಹಾಯ ಮಾಡಲು ಕರೆ
ಸಂಯುಕ್ತ ಕರ್ನಾಟಕ – **21–6–1993**

ಕಷ್ಟದಲ್ಲಿರುವವರ ಮನಸ್ಸಿಗೆ ಸಂತೋಷವಾಗುವ ರೀತಿಯಲ್ಲಿ ಯಾರು ನಡೆದುಕೊಳ್ಳುವರೋ ಅವರ ಮನಸ್ಸಿನಲ್ಲೇ ದೇವರು ನೆಲೆಸಿರುತ್ತಾನೆ; ಮಠ, ಮಂದಿರ, ಮಸೀದಿಗಳಲ್ಲಿ ಅಲ್ಲ ಎಂದು ಹೇಳಿ ಆಧ್ಯಾತ್ಮಮಂಡಳಿಯವರು ಸತತವಾಗಿ 50 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ವಿಭಿನ್ನ ರೀತಿಯ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಜಗದ್ಗುರುಗಳು ಶ್ಲಾಘಿಸಿದರು. ಒಂದು ವಾರದಲ್ಲಿ ಪ್ರತೀದಿನ ಒಂದೊಂದು ಸೇವಾ ಕಾರ್ಯಕ್ರಮವನ್ನು ರೂಪಿಸಿಕೊಂಡು ಅವುಗಳನ್ನು ನಡೆಸಿ ಒಂದು ರೀತಿಯಲ್ಲಿ ಸಮಾಜದ ಋಣ ತೀರಿಸುವ ಆಧ್ಯಾತ್ಮ ಮಂಡಲಿಯವರ ಈ ಕಾರ್ಯಗಳು ಎಲ್ಲಾ ಸಂಸ್ಥೆಗಳಿಗೂ ಅನುಕರಣೀಯವಾದುದು ಎಂದು ಜಗದ್ಗುರುಗಳು ಸಂತಸ ವ್ಯಕ್ತಪಡಿಸಿದರು.

ಪ್ರಾಮಾಣಿಕ ಕರ್ತವ್ಯ ಪಾಲನೆಯಿಂದ ಮನಶ್ಶಾಂತಿ
ವಿಜಯ ಕರ್ನಾಟಕ 7 ಫೆಬ್ರವರಿ 2000



ಗುಳೇದಗುಡ್ಡ ಸಮೀಪದ ತೋಗಣಸಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಶಿಲಾನ್ಯಾಸವನ್ನು ಕಾಶೀ ಜಗದ್ಗುರು ಚಂದ್ರಶೇಖರ ಶ್ರೀಗಳು ನೆರವೇರಿಸಿದರು. ಶಾಸಕ ನಂಜಯ್ಯನಮಠ, ಮಾಜಿ ಶಾಸಕ ಶೀಲವಂತ, ಶ್ರೀಮತಿ ರೇಣುಕಾ ಗುರ್ಲ, ಕೃಷ್ಣಾಜಿ ಚವ್ಹಾಣ, ಎಸ್.ಎಂ. ಪಾಟೀಲ, ನಾಗಪ್ಪ ಕೆಂದೂರ ಮುಂತಾದವರು ಚಿತ್ರದಲ್ಲಿರುವರು.

ಕಾಶೀ ಜಗದ್ಗುರುಗಳ ಜನ್ಮ ಗ್ರಾಮವಾದ ತೋಗಣಸಿ (ಗುಳೇಗುಡ್ಡ ತಾ॥)ಯಲ್ಲಿ ಜಿಲ್ಲಾ ಪಂಚಾಯಿತಿಯವರು ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕಟ್ಟಲು ತೀರ್ಮಾನಿಸಿ ಅಡಿಗಲ್ಲು ಹಾಕಿ ಆಶೀರ್ವಾದ ಮಾಡಬೇಕೆಂದು ಜಗದ್ಗುರುಗಳನ್ನು ಕೇಳಿಕೊಂಡಿದ್ದರು. ಆ ಊರಿನ ಜನತೆಗೆ

ಗುರುಗಳೆಂದರೆ ಅಭಿಮಾನ. ಏಕೆಂದರೆ ತಮ್ಮ ಊರಿನ ಪ್ರತಿಭಾವಂತ ಹುಡುಗ ಇಂದು ಧಾರ್ಮಿಕ ಕ್ಷೇತ್ರದಲ್ಲಿ ಸಾಧನೆ ಮಾಡಿ, ಒಂದು ಧರ್ಮದ ಅತ್ಯುನ್ನತ ಸ್ಥಾನವಾದ ಕಾಶೀಪೀಠದ ಜಗದ್ಗುರುಗಳಾಗಿರುವುದು ಅವರೆಲ್ಲರಿಗೂ ಸಂತೋಷದ ವಿಷಯ. ಊರಿನಲ್ಲಿ ಏನಾದರೊಂದು ವಿಶೇಷ ಕಾರ್ಯಕ್ರಮ ಇಟ್ಟುಕೊಳ್ಳುವಾಗ ಗುರುಗಳು ಹತ್ತಿರದಲ್ಲಿ ಯಾವ ಊರಿಗೆ ದಯಮಾಡಿಸುತ್ತಾರೆ ಎಂದು ಗುಳೇದಗುಡ್ಡದ ಅಮರೇಶ್ವರ ಮಠದಲ್ಲಿರುವ ಬಸವಯ್ಯನವರಿಂದ ತಿಳಿದುಕೊಂಡು ಕಾರ್ಯಕ್ರಮವನ್ನು ನಿಗದಿಪಡಿಸಿಕೊಳ್ಳುತ್ತಿದ್ದರು. ಜಗದ್ಗುರುಗಳೂ ಒಪ್ಪಿ ಬರುತ್ತಿದ್ದರು.

ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡದ ಅಡಿಗಲ್ಲು ಸ್ಥಾಪಿಸಿದ ನಂತರ ಜಗದ್ಗುರುಗಳು ಮಾತನಾಡುತ್ತಾ–ಹಣಗಳಿಸುವುದು ಮುಖ್ಯವಲ್ಲ. ಆದರೆ ಪ್ರಾಮಾಣಿಕ ಕರ್ತವ್ಯ ಪಾಲನೆಯಿಂದ ಹಣ ಗಳಿಸಿದರೆ ಮನಸ್ಸಿಗೆ ಶಾಂತಿ ತೃಪ್ತಿ ಸಿಗುತ್ತದೆ ಎಂದು ಹೇಳಿ ಔಷಧಗಳಿಂದ ಮಾಡುವ ಉಪಚಾರಕ್ಕಿಂತ ಒಳ್ಳೆಯ ಮಾತಿನಿಂದ ಅರ್ಧರೋಗ ಶಮನವಾಗುತ್ತದೆ. ವೈದ್ಯರನ್ನು ಪ್ರೀತಿ ವಿಶ್ವಾಸದಿಂದ ಗೌರವದಿಂದ ಕಾಣಬೇಕು. ಆಗ ವೈದ್ಯರು ತಮ್ಮನ್ನು ಅಂತಃಕರಣದಿಂದ ಕಾಣಲು ಸಾಧ್ಯ ಎಂದು ಗ್ರಾಮಸ್ಥರಿಗೆ ಕರೆ ನೀಡಿದರು.

ಮಾಜಿ ಶಾಸಕ ರಾಜಶೇಖರ ಶೀಲವಂತ ಅವರು–ತಾವು ಶಾಸಕರಾಗಿದ್ದಾಗ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಮಂಜೂರು ಮಾಡಿಸುವ ಸಲುವಾಗಿ ಕಾಶೀ ಜಗದ್ಗುರುಗಳು ಒಂದು ಲಕ್ಷ ರೂ. ನೀಡಿದ್ದನ್ನು ಈ ಸಂದರ್ಭದಲ್ಲಿ ನೆನೆದರು.

ಗ್ರಾಮೀಣ ಜನರ ಬದುಕು ಸುಧಾರಿಸಬೇಕಾದರೆ ಅಲ್ಲಿ ಉತ್ತಮ ಶಾಲೆ, ಆಸ್ಪತ್ರೆ, ಕುಡಿಯಲು ಶುದ್ಧ ನೀರಿನ ವ್ಯವಸ್ಥೆ ಇರಬೇಕೆಂಬುದು ಗುರುಗಳ ಚಿಂತನೆ. ಹಾಗಾಗಿ ಆರೋಗ್ಯ ಕೇಂದ್ರ ಸ್ಥಾಪಿಸಲು ಒಂದು ಲಕ್ಷ ರೂ. ನೀಡಿದ್ದರು.

ಅಂಬ್ಯುಲೆನ್ಸ್ ಸೇವೆ ಆರಂಭ

ಪ್ರಜಾವಾಣಿ 18–4–2005



ಗುಳೇದಗುಡ್ಡದಲ್ಲಿ ಸೇವಾಭಾರತಿಯ ಸಂಚಾರಿ ಚಿಕಿತ್ಸಾ ಅಂಬ್ಯುಲೆನ್ಸ್ ವಾಹನವನ್ನು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಕಮಲ ಮಾಲಪಾಣಿ, ಘನಶ್ಯಾಂದಾಸ್ ರಾಠಿ, ಮುರಗೇಶ ಭೆಂಡೆ ಚಿತ್ರದಲ್ಲಿದ್ದಾರೆ.

ಗುಳೇದಗುಡ್ಡದಲ್ಲಿರುವ ಸೇವಾ ಭಾರತಿ–ಸಂಘದವರು ಸೇವಾಭಾರತಿ ಸಂಚಾರಿ ಚಿಕಿತ್ಸಾ ಆಸ್ಪತ್ರೆ ಹಾಗೂ ಆಂಬ್ಯುಲೆನ್ಸ್ ವಾಹನವನ್ನು ಸಮಾಜಕ್ಕೆ ಅರ್ಪಿಸುವ ಉದ್ದೇಶದಿಂದ ಅದರ ಆರಂಭೋತ್ಸವವನ್ನು ಜಗದ್ಗುರುಗಳಿಂದ ಮಾಡಿಸುವ ಸಲುವಾಗಿ ಆಹ್ವಾನ ಮಾಡಿದ್ದರು–ಸೇವಾ ಭಾರತಿಯ ಅಧ್ಯಕ್ಷರಾದ ಶ್ರೀ ಘನಶ್ಯಾಂದಾಸ್ ರಾಠಿ ಅವರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಜಗದ್ಗುರುಗಳು– ಮನುಷ್ಯನು ಸಮಾಜದಲ್ಲಿ ಸದೃಢವಾಗಿ ಬದುಕಿ ಬಾಳಲು ಆಹಾರ, ಶಿಕ್ಷಣಗಳ ಜೊತೆಗೆ ಆರೋಗ್ಯವೂ ಅಷ್ಟೇ ಮುಖ್ಯವಾದುದು ಎಂದು ಹೇಳಿ ಸೇವಾಭಾರತಿಯವರಿಂದ ಚಿಕಿತ್ಸಾ ಕಾರ್ಯ ನಿರಂತರವಾಗಿ ನಡೆಯಬೇಕು, ವೈದ್ಯರು ಸೇವಾಭಾವನೆಯಿಂದ ಗ್ರಾಮೀಣ ಬಡಜನರಿಗೆ ಚಿಕಿತ್ಸೆ ನೀಡಬೇಕು ಎಂದು ಸಲಹೆ ನೀಡಿದರು.

ಕೊಲ್ಹಾಪುರದಲ್ಲಿ **25–11–2008**ರಲ್ಲಿ ಜಗದ್ಗುರುಗಳಿಗೆ ನಾಗರಿಕರೆಲ್ಲಾ ಸೇರಿ ಸನ್ಮಾನ ಮಾಡಬೇಕೆಂದು ವರ್ಧಂತಿ ಮಹೋತ್ಸವ ಧರ್ಮಸಭೆಯ ಕಾರ್ಯಕ್ರಮವನ್ನು ರೂಪಿಸಿ ಸನ್ಮಾನ ಸ್ವೀಕರಿಸಲು ಜಗದ್ಗುರುಗಳಿಗೆ ಆಹ್ವಾನ ನೀಡಿದ್ದರು. ಕೊಲ್ಹಾಪುರದ ನಾಗರಿಕರು ಜಗದ್ಗುರುಗಳು ಕಿರೀಟಧರಿಸಿ ಸಿಂಹಾಸನಾರೋಹಣವನ್ನು ಮಾಡಬೇಕೆಂದು ಮನವಿ ಮಾಡಿದ್ದರಿಂದ–ಜಗದ್ಗುರುಗಳು ಹಾಗೆಯೇ ಮಾಡಿ ಕುಳಿತ ನಂತರ ಅಲ್ಲಿಯ ಶಾಸಕರಾದ ಛತ್ರಪತಿ ಮಲೋಜಿರಾವ್ ರಾಜೇ ಭೋಸಲೇ ಮತ್ತು ಉತ್ಸವ ಸಮಿತಿಯ ಗಣ್ಯರೆಲ್ಲಾ ಸೇರಿ ಕಾಶೀ ಗುರುಗಳಿಗೆ ಮಹಾವಸ್ತ್ರ, ಸ್ಮೃತಿಚಿಹ್ನೆ, ಮಹಾಕಾಣಿಕೆ ಸಮರ್ಪಿಸಿ ಗೌರವ ಸಲ್ಲಿಸಿದರು. ಸನ್ಮಾನ ಸ್ವೀಕರಿಸಿದ ಜಗದ್ಗುರುಗಳು ಆಶೀರ್ವಚನದಲ್ಲಿ ಸಮಾಜದ ಸರ್ವಾಂಗೀಣ ಅಭಿವೃದ್ಧಿಯೇ ಶ್ರೀ ಕಾಶೀ ಪೀಠದ ಗುರಿಯಾಗಿದೆ. ಪೀಠ–ಮಠಗಳು ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಗಾಗಿ ಕಾರ್ಯ ಮಾಡಬೇಕು. ಅನಾದಿಕಾಲದಿಂದಲೂ ಕಾಶೀಪೀಠ ಭೇದಭಾವ ಮಾಡದೇ ಅನ್ನದಾನ–ಜ್ಞಾನದಾನವನ್ನು ಮಾಡುತ್ತಾ ಬಂದಿರುವುದನ್ನು ವಿವರಿಸಿದರು. ಶ್ರೀ ಕಾಶೀ ಪೀಠದಲ್ಲಿನ ಶ್ರೀ ವಿಶ್ವಾರಾಧ್ಯ ಗುರುಕುಲದಲ್ಲಿ ಎಲ್ಲಾ ಸಂಪ್ರದಾಯಗಳ ಸಾವಿರಾರು ಮಠಾಧಿಪತಿಗಳು, ಶಾಸ್ತ್ರಿಗಳು,

'ಸಮಾಜದ ಅಭಿವೃದ್ಧಿ ಕಾಶೀಪೀಠದ ಗುರಿ'

ಸಂಯುಕ್ತ ಕರ್ನಾಟಕ 26–11–2008



ಕೊಲ್ಹಾಪುರದಲ್ಲಿ ನಡೆದ ವರ್ಧಂತಿ ಮಹೋತ್ಸವದ ಧರ್ಮಸಭೆಯಲ್ಲಿ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನಾಗರಿಕ ಸನ್ಮಾನ ಸ್ವೀಕರಿಸುತ್ತಿರುವುದು.

ಕವಿ, ಕಲಾವಿದರು ಅಧ್ಯಯನ ಮಾಡಿ, ಅವರವರ ಊರುಗಳಲ್ಲಿ ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯ ಮಾಡುತ್ತಿರುವರು. ಕಾಶೀ ಪೀಠದಿಂದಲೇ ಪ್ರಾಥಮಿಕ, ಮಾಧ್ಯಮಿಕ ಶಾಲಾ ಶಿಕ್ಷಣ ಕೊಡಲೆಂದೂ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸ ಲಾಗಿದೆ. ಹೋಮಿಯೋಪತಿ ಕಾಲೇಜು, ದವಾಖಾನೆಗಳನ್ನು ನಡೆಸಲಾಗುತ್ತಿದೆ ಎಂದು ವಿವರಿಸಿದರು. ಸಮಾಜದ ಎಲ್ಲಾ ವರ್ಗದ ಬಡ ಬುದ್ಧಿವಂತ 65 ವಿದ್ಯಾರ್ಥಿಗಳಿಗೆ ಶಿಷ್ಯವೇತನ ಕೊಡುತ್ತಿರುವುದನ್ನು ತಿಳಿಸಿದರು. ಕಾಶೀ ಪೀಠದ ಎಲ್ಲಾ ಸೇವಾ ಕಾರ್ಯಗಳನ್ನು ವಿವರಿಸುತ್ತಾ ಅದರ ಕಾರ್ಯ ವ್ಯಾಪ್ತಿಯನ್ನು, ಮುಂದಿನ ಯೋಜನೆಗಳನ್ನು ಸಭೆಗೆ ತಿಳಿಸಿದರು.

ದಾನದಲ್ಲಿ ದೇಹದಾನ ಶ್ರೇಷ್ಠ : ಕಾಶೀ ಶ್ರೀಗಳು

ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸಂಶೋಧನೆ ನಡೆಸಲು ಶವಗಳ ಕೊರತೆ ನಮ್ಮ ರಾಜ್ಯದಲ್ಲಿ ಬಹಳವಾಗಿದೆ. ಹೆಚ್ಚು ಸಂಖ್ಯೆಯಲ್ಲಿರುವ ವೈದ್ಯಕೀಯ ಕಾಲೇಜುಗಳಿಗೆ ನೆರೆರಾಜ್ಯಗಳಿಂದ ಶವ ತರುವ ಪರಿಸ್ಥಿತಿಯಿತ್ತು. ಈ ಕೊರತೆಯನ್ನು ನೀಗಿಸಬೇಕೆಂದು ಇಳಕಲ್‌ನ 'ಅಮ್ಮಾ' ಸಂಸ್ಥೆಯವರು ಒಂದು ಹೊಸ ಯೋಜನೆ ರೂಪಿಸಿ ಜನರಲ್ಲಿ ಮರಣಾನಂತರ ದೇಹದಾನ ಮಾಡಿ–ಎಂದು ಹೇಳಿ ಆ ಬಗ್ಗೆ ಜನರು ಆಲೋಚಿಸುವಂತೆ ಮಾಡಿತು. ನೇತ್ರದಾನದಂತೆಯೇ ದೇಹದಾನ ಎಂಬ ತಿಳುವಳಿಕೆ ನೀಡಿ–ಸಂಶೋಧನೆಗೆ ನೆರವಾಗಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು.

ಇಂತಹ ಅಪರೂಪದ ದೇಹದಾನ ಮಾಡಲು ಇಳಕಲ್‌ನ ಮೂವರು ಮುಂದೆ ಬಂದಾಗ 'ಅಮ್ಮಾ' ಸಂಸ್ಥೆಯವರು ಇದಕ್ಕಾಗಿಯೇ ಕಾರ್ಯಕ್ರಮ ಏರ್ಪಡಿಸಿ ಸಾನ್ನಿಧ್ಯ ವಹಿಸಲು ಜಗದ್ಗುರುಗಳನ್ನು ಕರೆದಿದ್ದರು. ದೇಹದಾನ ಮಾಡಲು ಮುಂದೆ ಬಂದಿದ್ದ ಇಳಕಲ್‌ನ ಪದ್ಮವ್ವ ಕಿಲಿಕಿಲಿ, ನಿಂಗಪ್ಪ ಸಜ್ಜನ ಮತ್ತು ಮಹಾಂತಪ್ಪ ಮರಿಗುದ್ದಿ ಇವರಿಗೆ ದೇಹದಾನ ಪತ್ರಾರ್ಪಣ ಮಾಡಿ ಮರಣಾನಂತರ ಭೂಮಿಯಲ್ಲಿ ಹೂಳುವುದಾಗಲಿ, ಸುಡುವುದಾಗಲಿ ಮಾಡದೆ ದೇಹವನ್ನು ವೈದ್ಯಕೀಯ ಸಂಶೋಧನೆಗೆ ಪರೋಪಕಾರ ಮಾಡುವುದೇ ಮುಕ್ತಿ ಎಂದು ಜಗದ್ಗುರುಗಳು ಹೇಳಿ, ದೇಹದಾನ ಶ್ರೇಷ್ಠದಾನ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಉಪಯುಕ್ತವಾದರೆ ಅದರ ಶ್ರೇಯಸ್ಸು ದಾನ ಮಾಡಿದವರಿಗೆ ಸಲ್ಲುತ್ತದೆ ಎಂದು ಹೇಳುತ್ತಾ ಇಂದು ದಾನಪತ್ರ ಸ್ವೀಕರಿಸಿದವರನ್ನು ಶ್ಲಾಘಿಸಿದರು.

'ಅಮ್ಮಾ' ಸೇವಾ ಸಂಸ್ಥೆಯು ಸಾರ್ವಜನಿಕರ ನೆರವಿನಿಂದ ಕಳೆದ 25 ವರ್ಷಗಳಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡಿಕೊಂಡು–ಅನಾಥರ ಅಂಗವಿಕಲರ ಹಾಗೂ ವೃದ್ಧರ ಸೇವೆಗೆ ತನ್ನನ್ನು ಸಮರ್ಪಣೆ ಮಾಡಿಕೊಂಡಿದೆ. ಈ ಸಂಸ್ಥೆಗೆ 630 ಜನರು ಧನ ಸಹಾಯ ಮಾಡುತ್ತಾ 'ಅಮ್ಮಾ' ಸೇವಾ ಸಂಸ್ಥೆಯ ಶಕ್ತಿಯನ್ನು ಬಲಪಡಿಸುತ್ತಿರುವುದು ಇತರರಿಗೆ ಮಾದರಿಯಾಗಿದೆ.

'ಅಮ್ಮಾ' ಸೇವಾ ಸಂಸ್ಥೆಯವರ ಈ ಕಾರ್ಯದಿಂದ ಪ್ರಭಾವಿತರಾಗಿ ಇಳಕಲ್‌ನ ಅಮರೇಶ್ವರ ಸೇವಾ ಬಳಗ ಹಾಗೂ ಆಧ್ಯಾತ್ಮ ಮಂಡಳಿ 20–6–2009ರಲ್ಲಿ ಆಯೋಜಿಸಿದ್ದ ನೇತ್ರದಾನ, ದೇಹದಾನ ಕಾರ್ಯಕ್ರಮದಲ್ಲಿ ಜಗದ್ಗುರುಗಳು ಸಾನ್ನಿಧ್ಯ ವಹಿಸಿ ನೇತ್ರದಾನ, ದೇಹದಾನ ಮಾಡಿದವರಿಗೆ ದಾನಪತ್ರ ವಿತರಣೆ ಮಾಡಿ ಆಶೀರ್ವದಿಸಿದರು. ಎಲ್ಲಾ ಊರುಗಳಲ್ಲೂ ಈ ಬಗ್ಗೆ ಜಾಗೃತಿ ಮೂಡಲೆಂದು ಆಶಿಸಿದರು. ದಾನಿಗಳಲ್ಲಿ ಪ್ರೇರಣೆ ಮೂಡಿಸುವ ಕಾರ್ಯವನ್ನು ಪ್ರಾಮಾಣಿಕವಾಗಿ ನಿಷ್ಠೆಯಿಂದ ಮಾಡುತ್ತಿರುವ ಅಮ್ಮಾ ಸೇವಾ ಸಂಸ್ಥೆಯ ಕಾರ್ಯ ಶ್ಲಾಘನೀಯ. ದಾನ, ದಾಸೋಹ ಮಾಡಲು ಪವಿತ್ರ ಮನಸ್ಸಿದ್ದರೆ ಸಾಧ್ಯ. ಪ್ರತಿಯೊಬ್ಬರೂ ತಮ್ಮ ಯೋಗ್ಯತಾನುಸಾರವಾಗಿ ದಾನ ಧರ್ಮದ ಸತ್ಕಾರ್ಯಗಳನ್ನು ಬದುಕಿನುದ್ದಕ್ಕೂ ಅಳವಡಿಸಿಕೊಳ್ಳಬೇಕು ಎಂದು ಜಗದ್ಗುರುಗಳು ಭಕ್ತರಿಗೆ ತಿಳಿಸಿದರು.

ಇದೇ ಸಂಸ್ಥೆಯವರು ಹುನಗುಂದದ ಶಿಕ್ಷಕರ ಸರಕಾರಿ ತರಬೇತಿ ಸಂಸ್ಥೆಯ ಅಧೀಕ್ಷಕಿ ಲಲಿತ ಹೊಸಪೇಟೆ ಅವರನ್ನು 'ಉತ್ತಮ ಭಾರತೀಯ ನಾರಿ' ಪ್ರಶಸ್ತಿಗೆ ಆಯ್ಕೆ ಮಾಡಿ 21–6–2012ರಲ್ಲಿ ಜಗದ್ಗುರುಗಳಿಂದ ಈ ಪ್ರಶಸ್ತಿಯನ್ನು ಕೊಡಿಸಿದರು. ಈ ಸಂದರ್ಭದಲ್ಲಿ ಜಗದ್ಗುರುಗಳು ಮಹಿಳೆಯರನ್ನು ಕುರಿತು ಹೇಳಿರುವ ಮಾತುಗಳಿಂದ ಭಾರತೀಯ ನಾರಿಯರ ಬಗ್ಗೆ ಜಗದ್ಗುರುಗಳಿಗೆ ಇರುವ ಗೌರವದ ಬಗ್ಗೆ ತಿಳಿದುಬರುತ್ತದೆ.

ದೇಹದಾನ ಮಾಡಿ ಪರೋಪಕಾರಿಯಾಗಿ

ಸಂಯುಕ್ತ ಕರ್ನಾಟಕ ೧೨-೬-೨೦೦೯



11-6-2009 ಇಳಕಲ್‌ನ 'ಅಮ್ಮಾ'ಸೇವಾ ಸಂಸ್ಥೆ ಹಮ್ಮಿಕೊಂಡಿದ್ದ ದೇಹದಾನ. ಪತ್ರಾರ್ಪಣ ಕಾರ್ಯಕ್ರಮದಲ್ಲಿ ಕಾಶೀಪೀಠದ ಶ್ರೀ ಚಂದ್ರಶೇಖರ ಶಿವಾಚಾರ್ಯರು, ಶಾಸನಕ ವೀರಣ್ಣ ಚರಂತಿಮಠ ದಾನಿಗಳಿಂದ ದೇಹದಾನ ಪತ್ರಗಳನ್ನು ಸ್ವೀಕರಿಸಿದರು.


"ಜಾಗತೀಕರಣ ಹಾಗೂ ಆಧುನೀಕರಣದಿಂದಾಗಿ ಭಾರತೀಯ ಸಂಸ್ಕೃತಿ, ಪರಂಪರೆಗೆ ಧಕ್ಕೆ ಬಂದಿದೆ. ಇದನ್ನು ಉಳಿಸಿಕೊಳ್ಳಬೇಕಾದರೆ ಸ್ತ್ರೀಯರ ಪಾತ್ರ ಮುಖ್ಯವಾಗಿದೆ. ಸ್ತ್ರೀಯರಿಗೆ ಭಾರತೀಯ ಸಮಾಜದಲ್ಲಿ ಪೂಜ್ಯ ಸ್ಥಾನವಿದೆ. ಕುಟುಂಬದ ಜವಾಬ್ದಾರಿ ಹೊತ್ತು ಸ್ತ್ರೀಯರು ಅನರ್ಘ್ಯ ರತ್ನಗಳನ್ನು ನೀಡಿದ್ದಾರೆ. ಮಹಿಳೆಯರೂ ಕೂಡ ಇಂದು ಎಲ್ಲಾ ಕ್ಷೇತ್ರಗಳಲ್ಲೂ ಸಾಕಷ್ಟು ಪ್ರಗತಿ ಸಾಧಿಸಿ ದೇಶಕ್ಕೆ ಕೊಡುಗೆ ನೀಡಿದ್ದಾರೆ" ಎಂದು ಹೇಳಿದರು.

ವಿದೇಶಿ ಸಂಸ್ಕೃತಿಯಿಂದ ಭಾರತೀಯ ಸಂಸ್ಕೃತಿಗೆ ಧಕ್ಕೆ

ವಿದೇಶೀಯ ವಿಕೃತ ಸಂಸ್ಕೃತಿ ಭಾರತೀಯ ಪರಂಪರೆ ಮೇಲೆ ಪ್ರಭಾವ ಬೀರುತ್ತಿರುವ ಪರಿಣಾಮ ಡಿಸೆಂಬರ್ 31ರ ರಾತ್ರಿ ಹೊಸ ವರ್ಷವನ್ನು ಸ್ವಾಗತಿಸುವ ಆಚರಣೆ ನಮಗೆ ಸಾಕ್ಷಿಯೊದಗಿಸುತ್ತದೆ. ನಮ್ಮ ಸಂಸ್ಕೃತಿ ಪ್ರಕಾರ 'ಯುಗಾದಿ' ದಿನ ಹೊಸ ವರ್ಷಾಚರಣೆ ಮಾಡುತ್ತಾ ಬಂದಿರುವೆವು. ಇದು ಸನಾತನ ಕಾಲದಿಂದಲೂ ರೂಢಿಯಲ್ಲಿ ಬಂದಿರುವ ಪದ್ಧತಿ. ಯುವ ಜನತೆ ಡಿಸೆಂಬರ್ 31ರ ರಾತ್ರಿ 12 ಗಂಟೆ ನಂತರ ಪೈಶಾಚಿಕ ಕೃತ್ಯಗಳಿಂದ ಮದ್ಯದ ಅಮಲಿನಲ್ಲಿ ಹೊಸವರ್ಷವನ್ನು ಆಚರಿಸುವುದು ಹಿಂದುಗಳಿಗೆ ಸರಿಯಲ್ಲ ಎಂದು ವಿಷಾಧದಿಂದ ಹೇಳಿ ಎಚ್ಚರಿಸಿದ ಶ್ರೀಗಳು, ಈ ಮಾತುಗಳನ್ನು ಪ್ರತಿ ವರ್ಷ ಡಿಸೆಂಬರ್ 31ರಂದು ಎಲ್ಲಾ ಪತ್ರಿಕೆಗಳಲ್ಲಿ ದೂರದರ್ಶನಗಳ ಚಾನೆಲ್‌ಗಳಲ್ಲಿ ಮತ್ತೆ ಮತ್ತೆ ಬಿತ್ತರಿಸಿದರೆ ಶೇ. 11 ಭಾಗದಷ್ಟು ಪರಿಣಾಮ ಬೀರಬಹುದು.

ಜಗದ್ಗುರುಗಳು ಸಹಕಾರಿ ಸಂಘಗಳಿಗೆ ನೀಡಿದ ಅಮೂಲ್ಯ ಸಲಹೆಗಳು :

ಮಹಲಿಂಗಪುರದಲ್ಲಿ **24-6-2014**ರಂದು ಅನ್ನಪೂರ್ಣೇಶ್ವರಿ ಮಹಿಳಾ ನೇಕಾರರ ವಿವಿಧೋದ್ದೇಶಗಳ ಸಹಕಾರಿ ಸಂಘವನ್ನು ಉದ್ಘಾಟಿಸಿ ಮಾತನಾಡುತ್ತಾ ಶ್ರೀಗಳವರು ಸದೃಢ ಸಮಾಜ ನಿರ್ಮಾಣವಾಗಬೇಕಿದ್ದರೆ ಪ್ರತಿಭಾವಂತರನ್ನು ಗುರುತಿಸಿ ಸಮಾಜ, ಸರಕಾರ, ಸಂಘ ಸಂಸ್ಥೆಗಳು ಮಹಿಳೆಯರನ್ನು ಕುರಿತು ಮನನ ಮಾಡುವಂತಹ ನುಡಿಗಳನ್ನಾಡಿದರು. ಜಗತ್ತಿನ ಸೃಷ್ಟಿ ಮತ್ತು ವಿಕಾಸದ ಪ್ರತಿಯೊಂದು ಹಂತದಲ್ಲೂ ಸಹಕಾರತತ್ವ ಬಹು ಮುಖ್ಯ ಪಾತ್ರ ವಹಿಸುತ್ತದೆ. ಪಂಚಭೂತಗಳಲ್ಲೂ ಪರಸ್ಪರ ಸಹಕಾರವಿದ್ದು ಅವು ಪಂಚೀಕೃತಗೊಂಡಾಗಲೇ ಜೀವ ಸೃಷ್ಟಿ ಸಾಧ್ಯ; ಮಾನವ ಶರೀರದ ಅಂಗಾಂಗಳ ಪರಸ್ಪರ ಹೊಂದಾಣಿಕೆಯಿಂದ ಆರೋಗ್ಯವಾಗಿರಲು ಸಾಧ್ಯ. ಪ್ರತಿ ಅಂಗಗಳ



ಮಹಾಲಿಂಗಪುರದ ಬನಶಂಕರಿ ಸಾಂಸ್ಕೃತಿಕ ಭವನದಲ್ಲಿ ಜರುಗಿದ ಶ್ರೀ ಅನ್ನಪೂರ್ಣೇಶ್ವರಿ ಮಹಿಳಾ ನೇಕಾರ ವಿವಿಧೋದ್ದೇಶಗಳ ಸಹಕಾರಿ ಸಂಘದ ಪ್ರಾರಂಭೋತ್ಸವ ಸಮಾರಂಭವನ್ನು ಕಾಶೀ ಜಗದ್ಗುರು ಚಂದ್ರಶೇಖರ ಶಿವಾಚಾರ್ಯರು ಉದ್ಘಾಟಿಸಿದರು.

"ವಿದ್ಯೆಯನ್ನು ಎಲ್ಲಿಯವರೆಗೆ ರಕ್ಷಣೆ ಮಾಡುತ್ತೀರೋ ಅಲ್ಲಿಯವರೆಗೆ ಅದು ನಿಮ್ಮನ್ನು ರಕ್ಷಿಸುತ್ತದೆ. ಅದೇ ರೀತಿ ಎಲ್ಲಿಯವರೆಗೆ ಇನ್ನೊಬ್ಬರಿಗೆ ಸಹಾಯ ಮಾಡುವ ಮನೋಭಾವ ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯ ವರೆಗೆ ಇಂತಹ ಸಹಕಾರಿ ಸಂಘಗಳು ಹುಟ್ಟುವುದಿಲ್ಲ."

– ಚಂದ್ರಶೇಖರ ಶಿವಾಚಾರ್ಯರು

ಆರೋಗ್ಯವೂ ಮುಖ್ಯ ಎಂಬ ಮಹೋಪಮೆಯನ್ನು ಕೊಟ್ಟು ಬಹಳ ಅರ್ಥಪೂರ್ಣವಾಗಿ ಹೇಳಿದರು : ಜಾತಿ ಧರ್ಮಗಳಿಂದ ಮಾನವ ವಿಕಾಸ ಸಾಧ್ಯವಿಲ್ಲ. ದುಡ್ಡಿನ ವ್ಯವಹಾರದಲ್ಲಿ ಪರಿಶುದ್ಧವಾಗಿರುವವನೆ ಪವಿತ್ರ ಮನುಷ್ಯನಾಗುತ್ತಾನೆ. ಹೆಚ್ಚಿನ ಮಕ್ಕಳು ಸಹನಶೀಲರೂ, ಸಂಸ್ಕಾರವಂತರೂ, ಜಗನ್ಮಾತೆಯ ಸ್ವರೂಪಿಗಳೂ ಆಗಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲೂ ನಿಮ್ಮನ್ನು ನೀವು ತೊಡಗಿಸಿಕೊಳ್ಳಿ ಎಂದು ಶ್ರೀಗಳು ಉದ್ಬೋಧಕವಾಗಿ ಹೇಳಿದರು. ಎಲ್ಲಾ ವಿದ್ಯೆಗಳಲ್ಲಿ ಆಧ್ಯಾತ್ಮಿಕ ವಿದ್ಯೆಯೇ ಶ್ರೇಷ್ಠ. ನಾವು ಈ ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದನ್ನು ತಿಳಿಯಬೇಕಾದರೆ ಸಹಕಾರಿ ಸಂಘಗಳತ್ತ ಬರಬೇಕು. ಹೆಣ್ಣುಮಕ್ಕಳು ಕಾರ್ಯಾಧ್ಯಕ್ಷರು ಎನ್ನುವ ನಂಬಿಕೆಯಿಂದಲೇ ಸರ್ಕಾರ ಅವರಿಗೆ ಹೆಚ್ಚಿನ ಮಹತ್ವ ನೀಡಿದೆ . ಅದನ್ನು ನಿಜಮಾಡುವ ರೀತಿಯಲ್ಲಿ ಎಲ್ಲಾ ರಂಗಗಳಲ್ಲೂ ಮಹಿಳೆಯರು ತೊಡಗಿಸಿದಾಗ ಮಾತ್ರ ಸಂಘಟನಾತ್ಮಕವಾಗಿ ಮುಂದೆ ಬರಲು ಸಾಧ್ಯ ಎಂದು ಶ್ರೀಗಳು ಹೇಳಿ ಆಶೀರ್ವದಿಸಿದರು.

ಜಂಗಮವಾಡಿ ಮಠದಲ್ಲಿ ವಿಕಲಚೇತನ ಮಕ್ಕಳ ದಸರಾ ಪ್ರತಿಭೋತ್ಸವ

ಕಾಶೀಯಲ್ಲಿರುವ ಕರ್ನಾಟಕ ಸಂಘವು ಯಾವುದೇ ದೊಡ್ಡ ಪ್ರಮಾಣದ ಕಾರ್ಯಕ್ರಮವನ್ನು ಹಮ್ಮಿಕೊಂಡಾಗ ಜಂಗಮವಾಡಿ ಮಠದ ಸಂಯುಕ್ತಾಶ್ರಯದಲ್ಲಿ ಮಾಡುತ್ತಾ ಬಂದಿದೆ. ಜಗದ್ಗುರುಗಳು ಇದಕ್ಕೆ ಸಹಕರಿಸುತ್ತಲಿರುವರು.

ಈ ಬಾರಿಯೂ 24–10–2011ರಲ್ಲಿ ಬೆಂಗಳೂರಿನ ಚೈತ್ರ ಕಲಾನಿಕೇತನ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾಶೀ ಜಂಗಮವಾಡಿ ಮಠ ಮತ್ತು ಕಾಶೀ ಕರ್ನಾಟಕ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಜಂಗಮವಾಡಿ ಮಠದ ಆವರಣದಲ್ಲಿ ರಾಷ್ಟ್ರಮಟ್ಟದ ದೃಷ್ಟಿ ವಿಕಲಚೇತನ ಮತ್ತು ವಿಕಲಚೇತನ ಮಕ್ಕಳ ದಸರಾ ಪ್ರತಿಭೋತ್ಸವ ಕಾರ್ಯಕ್ರಮವನ್ನು ಕಾಶಿಯ ಕರ್ನಾಟಕ ಸಂಘವು ಹಮ್ಮಿಕೊಂಡಿದ್ದಿತು.

ವಿಕಲಚೇತನ ಮಕ್ಕಳು ಭೂಮಿಗೆ ಭಾರವಲ್ಲ

ಪ್ರಜಾವಾಣಿ ವಾರ್ತೆ ೨೦–೬–೨೦೧೨



ಕಾಶೀ ಜಂಗಮವಾಡಿ ಮಠದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರಮಟ್ಟದ ದೃಷ್ಟಿವಿಕಲಚೇತನ ಮಕ್ಕಳ ದಸರಾ ಮಹೋತ್ಸವವನ್ನು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕಾಶೀ ಜಗದ್ಗುರುಗಳು "ಇಂತಹ ಮಕ್ಕಳ ಬಗ್ಗೆ ಹೇಳಿದ ಮಾತುಗಳು ಹೃದಯ ತಟ್ಟುವಂತಿತ್ತು. ವಿಕಲ ಚೇತನಮಕ್ಕಳು ಭೂಮಿಗೆ ಭಾರ ಎಂದು ಭಾವಿಸಬೇಡಿ, ಪ್ರತಿಯೊಬ್ಬ ವ್ಯಕ್ತಿಯ ಜೀವನವು ರೂಪುಗೊಳ್ಳುವುದು ಅವರವರ ಮನೋಧರ್ಮದ ಮೇಲೆ. ಆದ್ದರಿಂದ ಮನಃಸ್ಥಿತಿಯನ್ನು ಚೆನ್ನಾಗಿ ಇಟ್ಟುಕೊಂಡು ಸಂಕಲ್ಪಶಕ್ತಿಯನ್ನು ಬೆಳೆಸಿಕೊಳ್ಳುತ್ತಾ ಹೋದರೆ ಅಂಗವೈಕಲ್ಯವಿದ್ದರೂ ತನ್ನ ಜೀವನವನ್ನು ತಾನೇ ರೂಪಿಸಿಕೊಂಡು ಬದುಕಬಲ್ಲ. ಜೊತೆಗೆ ಅನೇಕ ಜನರನ್ನು ಸಂರಕ್ಷಿಸುವ ಸಾಮರ್ಥ್ಯವನ್ನು ಸಹಾ ಅವರು ಪಡೆಯಬಹುದು. ಅವರು ಭೂಭಾರಕರಲ್ಲ. ಸಕಲಾಂಗ ಮಕ್ಕಳಿಗೆ ಕೊಡುವ ಶಿಕ್ಷಣವನ್ನು ಅವರದೇ ರೀತಿಯಲ್ಲಿ ವಿಕಲಾಂಗರಿಗೆ ಕೊಟ್ಟಾಗ ಅವರೂ ಸಹ ಒಳ್ಳೆಯ ಗುಣಮಟ್ಟದ ಶಿಕ್ಷಣ ಪಡೆದು ಸಕಲಾಂಗರ ಜೊತೆ ಸ್ಪರ್ಧಿಸುವ ಸಾಮರ್ಥ್ಯ ಪಡೆಯುವರು" ಎಂದು ಹೇಳಿ ಜಗದ್ಗುರುಗಳು ಒಂದು ಉತ್ತಮ ಉದಾಹರಣೆಯನ್ನು ಕೊಟ್ಟರು. ಇತ್ತೀಚೆಗೆ ಲಿಂಗೈಕ್ಯರಾದ ಕರ್ನಾಟಕದ ಪಂಚಾಕ್ಷರ ಗವಾಯಿಗಳು, ಲಿಂ. ಪುಟ್ಟರಾಜ ಗವಾಯಿಗಳು ಅಂಧರಾಗಿದ್ದರೂ ಗುರುಗಳ ಆಶೀರ್ವಾದ ಮತ್ತು ಸಮಾಜದ ಸಹಕಾರದಿಂದ ಸಂಗೀತ ವಿದ್ಯೆಯಲ್ಲಿ ಮೇರುಪರ್ವತದಂತೆ ವ್ಯಕ್ತಿತ್ವ ರೂಪಿಸಿಕೊಂಡು ಅವರೇ ಇಂದು ಲಕ್ಷಾಂತರ ಅಂಧಮಕ್ಕಳಿಗೆ ಆಸರೆ ಯಾಗಿದ್ದರು ಎಂದು ಅಂತಹ ಭರವಸೆಯ ಮಾತುಗಳನ್ನು ಸಭೆಯಲ್ಲಿ ಹೇಳಿದರು. ಕಾಶೀ ಪೀಠದಿಂದಲೂ ಈ ಮಕ್ಕಳ ವಿಕಾಸಕ್ಕೆ ನಿರಂತರ ಆರ್ಥಿಕ ನೆರವು ನೀಡುವುದಾಗಿ ಆಶ್ವಾಸನೆ ಕೊಟ್ಟದ್ದು ಜಗದ್ಗುರುಗಳು ಎಷ್ಟು ಕರುಣಾಮಯಿಗಳೆಂಬುದನ್ನು ತಿಳಿಯಪಡಿಸುತ್ತದೆ.

ನಂಬಿಕೆ, ಆಚರಣೆ, ಭಾವನೆಗಳ ಮೇಲೆ ನಿರ್ಬಂಧ ಬೇಡ – ಜಗದ್ಗುರುಗಳು
'ಮಡೆಸ್ನಾನ ನಿರ್ಬಂಧ ಬೇಡ : ತಿಳಿವಳಿಕೆ ನೀಡಿ'

ಪ್ರಜಾವಾಣಿ, 1–1–2012

ಕರ್ನಾಟಕದ ಸುಬ್ರಮಣ್ಯ ಕ್ಷೇತ್ರದಲ್ಲಿ ಬಹು ಹಿಂದಿನಿಂದ 'ಮಡೆಸ್ನಾನ' ಎಂಬ ಒಂದು ಆಚರಣೆ ನಡೆದುಕೊಂಡು ಬಂದಿದೆ. ಈ ವಿಚಾರವೀಗ ಚರ್ಚಾಸ್ಪದವಾಗಿ ನಾಡಿನಾದ್ಯಂತ ಇದರ ಬಗೆಗೆ ಪರ ವಿರೋಧವಾದ ಅಭಿಪ್ರಾಯಗಳು ದಿನವೂ ಪತ್ರಿಕೆಗಳಲ್ಲಿ ಬರಲಾರಂಭಿಸಿತು. ಇಂತಹ ದಿನಗಳಲ್ಲಿ ತಾ 31–12–2012ರಂದು ಜಗದ್ಗುರುಗಳು ಯಾದಗಿರಿಯಲ್ಲಿ ಪ್ರವಚನ ಕಾರ್ಯಕ್ರಮಕ್ಕೆ ದಯಮಾಡಿಸಿದ್ದಾಗ–ಪತ್ರಕರ್ತರು

ಅವರನ್ನು ಭೇಟಿಯಾಗಿ–ಮಡೆಸ್ನಾನದ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಜಗದ್ಗುರುಗಳನ್ನು ಕೇಳಿದರು. ಜಗದ್ಗುರುಗಳ ಅಭಿಪ್ರಾಯದಲ್ಲಿ ವೈಚಾರಿಕ ಪ್ರಜ್ಞೆ ಮತ್ತು ಶ್ರದ್ಧೆ ಬೇರೆ ಬೇರೆ. ಶ್ರದ್ಧೆಯ ಎದುರು ಯಾವ ವಿಚಾರವೂ ನಿಲ್ಲುವುದಿಲ್ಲ. ಮಡೆಸ್ನಾನ ಎನ್ನುವುದು ಭಕ್ತರ ಶ್ರದ್ಧಾಭಾವನೆ. ಅದನ್ನು ಪ್ರತಿಬಂಧಿಸುವುದು ಸರಿಯಲ್ಲ. ಬದಲಿಗೆ ವೈಚಾರಿಕತೆಯ ಮೂಲಕ ಜನರಿಗೆ ಈ ಬಗ್ಗೆ ತಿಳುವಳಿಕೆ ನೀಡಬೇಕು. ಜನರ ಭಾವನೆಗಳನ್ನು ಗೌರವಿಸಬೇಕು. ಒತ್ತಡದಿಂದ ಅದನ್ನು ಹತ್ತಿಕ್ಕುವುದು ಸರಿಯಲ್ಲ. ವೈಜ್ಞಾನಿಕ ದೃಷ್ಟಿಯಲ್ಲಿ ಮಡೆಸ್ನಾನ ಅಸಹ್ಯವಾಗಿ ಕಾಣುತ್ತಿದ್ದರೆ, ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಜನರೇ ಹಿಂದೆ ಸರಿದರೆ ಆಗ ಯಾವ ತೊಂದರೆಯೂ ಇರಲಾರದು. ಅದನ್ನು ಬಿಟ್ಟು ಹೇಳಿಕೆ ನೀಡುವುದು, ವಿರೋಧ ವ್ಯಕ್ತಪಡಿಸುವುದು ಒಳ್ಳೆಯದಲ್ಲ–ಎಂದು ಸ್ಪಷ್ಟವಾಗಿ ತಿಳಿಸಿದರು.

ಕಾನೂನು ಬಿಡುತ್ತೇವೆ ಆಚರಣೆ ಬಿಡಲ್ಲ

ಪ್ರಜಾವಾಣಿ, 21–11–13

ದೇಶದಲ್ಲಿ ಮೂಢನಂಬಿಕೆಗಳ ಆಚರಣೆಗಳು ಹೆಚ್ಚಾಗಿ ಜನರು ಶೋಷಣೆಗೆ ಒಳಗಾಗುತ್ತಿದ್ದಾರೆ. ಇದರ ಮೇಲೆ ನಿಷಿದ್ಧ ಕಾಯ್ದೆ ಜಾರಿಗೆ ತರಬೇಕೆಂದು ಸರಕಾರದ ಮೇಲೆ ಒಂದು ವರ್ಗದ ಜನ ಒತ್ತಡ ಹಾಕಲಾರಂಭಿಸಿದರು. ಈ ವಿಚಾರದ ಬಗ್ಗೆ ಈಗಾಗಲೇ ನಡೆಯುತ್ತಿದ್ದ ಚರ್ಚೆಗಳನ್ನೆಲ್ಲಾ ದಿನ ಪತ್ರಿಕೆಗಳಿಂದ, ಟಿ.ವಿ. ಮಾಧ್ಯಮದಿಂದ ತಿಳಿದಿದ್ದ ಜಗದ್ಗುರುಗಳಿಗೆ ಪರ–ವಿರೋಧ ಬಗ್ಗೆ ಎಲ್ಲವೂ ತಿಳಿದ್ದಿತು. ಪತ್ರಕರ್ತರು ಅಳವಾಡಿ ಗ್ರಾಮದಲ್ಲಿ (ಕೊಪ್ಪಳ ತಾ॥) ಜಗದ್ಗುರುಗಳನ್ನು ಭೇಟಿ ಮಾಡಿ ಈ ಬಗ್ಗೆ ಅವರೊಡನೆ ಚರ್ಚೆ ಮಾಡಿದಾಗ ಜಗದ್ಗುರುಗಳು–ಅಕಲ್ಯಾಣ ಹಾಗೂ ಅಸಹ್ಯಕರ ಆಚರಣೆಗಳನ್ನು ವಿರೋಧಿಸೋಣ ಆದರೆ ಶಾಸ್ತ್ರ, ಸಂಪ್ರದಾಯದ ಪ್ರಕಾರ ಪರಂಪರಾನುಗತವಾಗಿ ನಡೆಸಿಕೊಂಡು ಬಂದಿರುವ ಸದಾಚಾರಗಳನ್ನು ಯಾವ ಕಾನೂನು ತಂದರೂ ಬಿಡುವುದಿಲ್ಲ. ನಿಜವಾಗಿಯೂ ಈ ಮೂಢನಂಬಿಕೆಗಳ ಯಾವ ಅಂಶಗಳನ್ನು ಒಳಗೊಂಡಿದೆ ಎಂಬುದು ಇನ್ನೂ ಗೊತ್ತಾಗಿಲ್ಲ. ಆ ಕರಡನ್ನು ಓದಿದ ಬಳಿಕ ಸೂಕ್ತ ಅಭಿಪ್ರಾಯ ಹೇಳಬಹುದು ಎಂದರು. ರುದ್ರಾಕ್ಷಿ ಧರಿಸುವುದು, ವಿಭೂತಿ ಹಚ್ಚುವುದು ಬಹುಕಾಲದಿಂದ ಆಚರಣೆಯಲ್ಲಿದೆ. ಇವುಗಳು ನಡೆಯಬೇಕೆಂಬುದು ನಮ್ಮ ಧರ್ಮದ ಸಂವಿಧಾನ.

ಮಠಗಳು ಕಾನೂನಿನ ವ್ಯಾಪ್ತಿಗೆ ಒಳಪಟ್ಟಿಲ್ಲ ಎನ್ನುವುದು ತಪ್ಪು. ಮಠ ಇದ್ದ ಮೇಲೆ ಟ್ರಸ್ಟ್ ಇದ್ದೇ ಇರುತ್ತದೆ. ಟ್ರಸ್ಟ್‌ನ ನೀತಿ ನಿಯಮಾವಳಿಗಳನ್ನು ರೂಪಿಸುವುದು ಸರ್ಕಾರ. ಆದ್ದರಿಂದ ಮಠಗಳು ಸರಕಾರದ ಅಧೀನದಲ್ಲಿ ಇದ್ದಂತೆ ಅಲ್ಲವೆ? ಎಂದು ಪ್ರಶ್ನಿಸಿದರು.

ಮಠಾಧೀಶರೂ ರಾಜಕಾರಣಿಗಳಂತೆ ಕಚ್ಚಾಡುವುದೇಕೆ? ಎಂಬುದು ಮುಂದಿನ ಪ್ರಶ್ನೆ ಆಗಿತ್ತು. ಆಚರಣೆಗಳಿಗೆ ಕುಂದು ಬಂದಾಗ ಮಾತಾಡುವುದು ಕಚ್ಚಾಡಿದಂತೆ ಕಂಡರೆ ಏನೂ ಮಾಡಲಾಗದು. ಇಂಥ ಸಂದರ್ಭದಲ್ಲಿ ಮಠಾಧೀಶರು ಇಲ್ಲವೆ ಭಕ್ತರು ಮಾತನಾಡಬೇಕು. ಮಠಾಧೀಶರ ಮಾತೇನಿದ್ದರೂ ಸದಾಚಾರ ಪಾಲನೆಯತ್ತ ಇರುತ್ತದೆಯೇ ವಿನಃ ಮತ್ತ್ಯಾವ ಉದ್ದೇಶವೂ ಇರುವುದಿಲ್ಲ. ಮಠಗಳ ಸದಾಚಾರದ ಮೇಲೆ ಪ್ರತಿಬಂಧ ಹೇರುವುದು ತಪ್ಪು ಎಂದು ವಿವರಿಸಿ ಹೇಳಿದರು.

ಮುಂದಿನ ಪ್ರಶ್ನೆ ಅಡ್ಡಪಲ್ಲಕ್ಕಿ ಕುರಿತದ್ದಾಗಿತ್ತು. ಅದರ ಬಗೆಗೆ ಜಗದ್ಗುರುಗಳು "ಅಡ್ಡಪಲ್ಲಕ್ಕಿ ಭಕ್ತರು ಶ್ರದ್ಧೆಯಿಂದ ಮಾಡುವ ಗೌರವ ಕಾರ್ಯ. ಅಡ್ಡಪಲ್ಲಕ್ಕಿ ಕಡ್ಡಾಯವೇನಿಲ್ಲ. ಆದರೆ ಒಂದು ಮಠಕ್ಕೆ ನೂತನ ಸ್ವಾಮೀಜಿ ಪಟ್ಟಾಧಿಕಾರ ಪ್ರಕ್ರಿಯೆ ನಡೆದು ಅಧಿಕಾರ ಗ್ರಹಣ ಮಾಡುವಾಗ ಮತ್ತು ದಸರಾ ಉತ್ಸವದಲ್ಲಿ ಬನ್ನಿ ಮುಡಿಯುವ ಘಳಿಗೆಯಲ್ಲಿ ಅಡ್ಡಪಲ್ಲಕ್ಕಿ ನಡೆದುಕೊಂಡು ಬಂದ ಸಂಪ್ರದಾಯ. ಇವೆರಡನ್ನು ಹೊರತುಪಡಿಸಿ ಉಳಿದ ಸಂದರ್ಭದಲ್ಲಿ ಅಡ್ಡಪಲ್ಲಕ್ಕಿ ಮಾಡಲೇಬೇಕೆಂಬ ನಿಯಮವೇನಿಲ್ಲ" ಎಂದು ನೇರ ಉತ್ತರ ಕೊಟ್ಟರು.

ಎಂ.ಎಂ. ಕಲಬುರ್ಗಿ ಹೇಳಿಕೆಗೆ–ಕಾಶೀ ಜಗದ್ಗುರುಗಳ ಖಂಡನೆ

ಸಾಹಿತಿ ಕಲ್ಬುರ್ಗಿ ಹೇಳಿಕೆ ಖಂಡಿಸಿ ಬಿಜೆಪಿಯಿಂದ ಪ್ರತಿಭಟನೆ
ಸಂಶೋಧಕ ಕಲ್ಬುರ್ಗಿ ಹೇಳಿಕೆ ಖಂಡಿಸಿ ಇಂದು ಬ್ರಾಹ್ಮಣ ಸಮಾಜದಿಂದ ಪ್ರತಿಭಟನೆ
ಕಲಬುರ್ಗಿಗೆ ಪ್ರಚಾರದ ಹುಚ್ಚು : ಕಾಶಿ ಶ್ರೀ

ಉದಯವಾಣಿ 14–6–14

ಖ್ಯಾತ ಸಂಶೋಧಕರೆನಿಸಿಕೊಂಡು ಎಂ.ಎಂ. ಕಲಬುರ್ಗಿಯವರು ಕನ್ನಡ ಸಾಹಿತ್ಯದಲ್ಲಿ ಅನೇಕ ವಿಚಾರಗಳ ಮೇಲೆ ಸಂಶೋಧನೆ ಮಾಡಿದ್ದಾರೆ. ಈ ಎಲ್ಲದರ ಬಗ್ಗೆ ಹೆಚ್ಚಿನ ಅರಿವಿರುತ್ತದೆ. ಇಂತಹ ಸಾಹಿತಿಗಳು ಜನರು ನಂಬಿ ಮೂರ್ತಿಪೂಜೆ ಮಾಡುವುದನ್ನ ಅವಾಚ್ಯ ಶಬ್ದಗಳಿಂದ ಹೇಳಿಕೆ ನೀಡಿರುವುದು–ಅವರ ಸಂಶೋಧನೆಗೆ, ಅವರ ಸಾಹಿತ್ಯ ಕೃಷಿಗೆ ಅವರೇ ಅವಮಾನ ಮಾಡಿಕೊಂಡಂತೆ ಆಗಿದೆ. ಬಾಳಿಗೊಂದು ನಂಬಿಕೆ ಇರಬೇಕು. ಆ ನಂಬಿಕೆಯ ಆಸರೆಯಿಂದ ಜನ ಬದುಕಬೇಕು. ಅಂತಹ ನಂಬಿಕೆಗಳಿಗೆ ಕೊಡಲಿಪೆಟ್ಟು ಕೊಟ್ಟಿರುವುದು ನಾಡಿನಾದ್ಯಂತ ತೀವ್ರ ಚರ್ಚೆಗೊಳಗಾಗಿ ಅವರ ಕುರಿತು ವಿವಾದಗಳು ಪ್ರತಿನಿತ್ಯ ಪತ್ರಿಕೆಗಳಲ್ಲಿ ಬರಲಾರಂಭಿಸಿದ ಸಮಯದಲ್ಲಿ ಅಂದರೆ

2014 ಜೂನ್‌ನಲ್ಲಿ ಕಾಶೀ ಜಗದ್ಗುರುಗಳು ದೇವದುರ್ಗದ ಬಳಿ ಮಸರಕಲ್ ಗ್ರಾಮದಲ್ಲಿ ರಾಯಚೂರಿನ ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಗಮಿಸಿದ್ದಾಗ ಈ ವಿಷಯ ಕುರಿತು ಪತ್ರಕರ್ತರು ಭೇಟಿಮಾಡಿ ಜಗದ್ಗುರುಗಳಿಂದ ಹೇಳಿಕೆ ಪಡೆದುಕೊಂಡರು.

ಜಗದ್ಗುರುಗಳು ಎಂದಿನಂತೆ ಸಮಸ್ಯೆಯ ಆಳಕ್ಕಿಳಿದು ಚೆನ್ನಾಗಿ ಅದರ ಬಗ್ಗೆ ಅರಿತು ಉತ್ತರ ಕೊಡುವುದು ವಾಡಿಕೆ. ಜಗದ್ಗುರುಗಳೇ ಸ್ವತಃ ಸಂಶೋಧಕರು, ಸತ್ಯದ ಅರಿವಿರುವವರು, ಸತ್ಯವನ್ನೇ ಉಸಿರಾಗಿಸಿ ನಡೆಯುವವರು. ಅವರು ಹೇಳಿದ್ದಿಷ್ಟೆ – "ಎಂ.ಎಂ. ಕಲಬುರ್ಗಿ ಅವರಿಗೆ ಪ್ರಚಾರದ ಹುಚ್ಚು. ಏನಾದರೂ ಮಾಡಿ ಪ್ರಸಿದ್ಧಿಗೆ ಬರಬೇಕು ಎಂದು ಜನರ ಭಾವನೆಗೆ ಸಂಬಂಧಿಸಿದ ಹೇಳಿಕೆ ನೀಡುತ್ತಿದ್ದಾರೆ. ಅವರು ಹೇಳಿರುವ ಹೇಳಿಕೆ ಅತ್ಯಂತ ಖಂಡನೀಯ. ಭಾರತವು ಭಾವನೆಗಳ ತಳಹದಿಯ ಮೇಲೆ ನಿಂತಿದೆ. ಬುದ್ಧಿಜೀವಿಗಳಾಗುವ ಮೊದಲು ಭಾವಜೀವಿಯಾಗಬೇಕು. ಪಶು, ಪ್ರಾಣಿಗಳು ಜ್ಞಾನದ ಅರಿವಿಲ್ಲದೇ ಮಲ ಮೂತ್ರ ವಿಸರ್ಜನೆ ಮಾಡುತ್ತಿವೆ, ಆದರೆ ಜ್ಞಾನ ಇರುವವರು ಇಂತಹ ಹೇಳಿಕೆ ನೀಡಬಾರದು.

ಭಾರತೀಯ ಸಂಸ್ಕೃತಿಯಲ್ಲಿ ಪ್ರತಿಕ್ಷೇತ್ರದಲ್ಲಿ ತಾನು ಬಳಸುವ ಉಪಕರಣಗಳನ್ನು ಪೂಜೆ ಮಾಡುತ್ತಾನೆ. ರೈತನು ನೇಗಿಲನ್ನು ಪೂಜಿಸಿದರೆ, ವ್ಯಾಪಾರಿ ತಕ್ಕಡಿ ಪೂಜೆ ಮಾಡುತ್ತಾನೆ. ಆಯುಧಪೂಜೆ ಬಂತೆಂದರೆ ವಾಹನಗಳ ಪೂಜೆ, ಮನೆಗಳಲ್ಲಿರುವ ಬೀರು, ಖಜಾನೆ ಮುಂತಾದವುಗಳ ಪೂಜೆ. ಅವನ್ನು ಎಲ್ಲರೂ ಮಾಡಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಹೀಗಿರುವಾಗ ಕುತರ್ಕಮಾಡಿ ಬೇರೆಯವರ ಭಾವನೆಗಳಿಗೆ ಧಕ್ಕೆ ತರುವುದನ್ನು ಪ್ರತಿಯೊಬ್ಬರೂ ಖಂಡಿಸಬೇಕು ಎಂದರು. ಮುಂದುವರೆದು ಜಗದ್ಗುರುಗಳು ಸಾಕಾರಗಳ ಪೂಜೆಯಿಂದ ಮಾನವನ ಮನಸ್ಸು ನಿಧಾನವಾಗಿ ನಿರಾಕಾರದತ್ತ ಸಾಗಬೇಕೆಂಬುದೇ ಭಾರತೀಯ ಎಲ್ಲಾ ಧರ್ಮಗಳ ಬೋಧನೆಯಾಗಿದೆ. ಈ ನಿಟ್ಟಿನಲ್ಲಿ ಯಾರೂ ಧಾರ್ಮಿಕ ಭಾವನೆಗಳನ್ನು ಕದಡುವ ಕೆಲಸ ಮಾಡಬಾರದು. ಈ ಹಿಂದೆ ಇದೇ ಕಲಬುರ್ಗಿಯವರು ಉಳವಿ ಚೆನ್ನಬಸವಣ್ಣನವರ ಜನ್ಮದ ಕುರಿತು ಹಗುರವಾಗಿ ಮಾತನಾಡಿದ್ದರು" ಎಂಬುದನ್ನು ಈ ಸಂದರ್ಭದಲ್ಲಿ ಕಾಶೀ ಜಗದ್ಗುರುಗಳು ನೆನಪಿಸಿಕೊಂಡರು.

ಕಲಬುರ್ಗಿ ಹೇಳಿಕೆ ಖಂಡಿಸಿ ನಾನಾ ಸಂಘಟನೆಗಳು ರಾಯಚೂರು ಮುಂತಾದ ಕಡೆ ಪ್ರತಿಭಟನೆ ಏರ್ಪಡಿಸಿರುವರು.



ಜಗದ್ಗುರುಗಳ ಪೂರ್ವಾಶ್ರಮದ ತಂದೆ–ತಾಯಿ ಪಂಚಭೂತಗಳಲ್ಲಿ ಲೀನ

ಜಗದ್ಗುರುಗಳು ಮಠದ ಸ್ವಾಮಿಯಾಗುವ ಪೂರ್ವದಲ್ಲಿ ಹೈಸ್ಕೂಲ್‌ನಲ್ಲಿ ವಿದ್ಯಾರ್ಜನೆಗಾಗಿ ಗುಳೇದಗುಡ್ಡದ ಮುನಿಸಿಪಲ್ ಹೈಸ್ಕೂಲ್ ಸೇರಿದಾಗ ಅಲ್ಲಿನ ಅಮರೇಶ್ವರ ಮಠದ ಸ್ವಾಮಿಗಳ ಒಪ್ಪಿಗೆ ಮೇರೆಗೆ ವಾರದರವರಲ್ಲಿ ವಸತಿ ವ್ಯವಸ್ಥೆ ಆಯಿತು–ಇವರು ಸಹೋದರನನ್ನು ಇಲ್ಲೇ ಸೇರಿಸಿದ್ದರು. ಮಠದ ಸ್ವಾಮಿಗಳು ಇಬ್ಬರು ಹುಡುಗರನ್ನು ಹತ್ತಿರದಿಂದ ಸೂಕ್ಷ್ಮವಾಗಿ ಗಮನಿಸುತ್ತಾ ಇಬ್ಬರ ಹಸ್ತರೇಖೆಯನ್ನು ನೋಡಿ ಅವರಲ್ಲಿ ಶೇಖರಯ್ಯನನ್ನು (ಜಗದ್ಗುರುಗಳ ಪೂರ್ವಾಶ್ರಮದ ಹೆಸರು) ಆಯ್ಕೆಮಾಡಿ ಒಂದು ದಿನ ಶ್ರೀ ಸಿದ್ದಯ್ಯನವರು ವಿರುಪಾಕ್ಷಯ್ಯ ಪುರಾಣಮಠ ಅವರನ್ನು ಅವರ ಮಡದಿ ಸಾವಂತ್ರಮ್ಮನವರನ್ನು ಮಠಕ್ಕೆ ಕರೆಸಿ–ನಿಮ್ಮ ಈ ಮಗನನ್ನು ನಮ್ಮ ಮಠದ ಉತ್ತರಾಧಿಕಾರಿಯನ್ನಾಗಿ ಮಾಡಲು ಒಪ್ಪಿಗೆ ಕೊಡಿ ಎಂದು ಕೇಳಿದರು. ಶಿಷ್ಯ ಪರಂಪರೆಯ ಮಠ ಅಮರೇಶ್ವರಮಠವಾದ್ದರಿಂದ ಅಂದಿನ ಸ್ವಾಮಿಗಳು ತಮ್ಮ ಮಠಕ್ಕೆ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಬಹುದಿತ್ತು. ಒಂದು ಸುಮುಹೂರ್ತ ನೋಡಿ ಪುತ್ರದಾನ ಕಾರ್ಯಕ್ರಮ ಏರ್ಪಡಿಸಿ ತಂದೆ ತಾಯಿಗಳು ತಮ್ಮ ಎರಡನೇ ಪುತ್ರ ಶೇಖರಯ್ಯನನ್ನು ಸ್ವಾಮಿಗಳ ಉಡಿಗೆ ತುಂಬಿ ಇಂದಿನಿಂದ ಈ ಮಗು ನಮ್ಮದಲ್ಲ–ನಿಮಗೆ ಸೇರಿದವನು ಎಂದು ಹೇಳಿದರು. ಇದಕ್ಕೆ ಪೂರ್ವದಲ್ಲಿ ಮಗ–ತಮ್ಮ ತಾಯಿ ತಂದೆ ಪಾದಗಳಿಗೆ ನಮಸ್ಕರಿಸಿದ ನಂತರ ಶ್ರೀಗಳವರ ಉಡಿಗೆ ಮಗನನ್ನು ಹಾಕಿದರು. ಅಲ್ಲಿಗೆ ಹೆತ್ತವರ ಋಣ ತೀರಿದಂತಾಯ್ತು. ಮುಂದೆ 1963ರಲ್ಲಿ ಮೃತ್ಯುಪತ್ರ ಮಾಡಿ ಅದರಲ್ಲಿ ಇವರನ್ನು ಮಠದ ಉತ್ತರಾಧಿಕಾರಿ ಎಂದು ಬರೆಸಿ ನಂತರ ಬಾಲಕನಿಗೆ ಮಂತ್ರೋಪದೇಶ ಮಾಡಿದರು. ಶ್ರೀ ಅಮರೇಶ್ವರ ಸ್ವಾಮಿಗಳು ತಮ್ಮ 86ನೇ ವಯಸ್ಸಿನಲ್ಲಿ ಲಿಂಗೈಕ್ಯರಾದ ನಂತರ ಎಲ್ಲಾ ಸ್ವಾಮಿಗಳು, ಭಕ್ತರು ಸೇರಿ ಅವರ ಪಟ್ಟಾಭಿಷೇಕವನ್ನು ನೆರವೇರಿಸಿ ವೀರಶೈವ ಆಗಮ ಪ್ರಕಾರ ಶಾಸ್ತ್ರೋಕ್ತವಾಗಿ ಅರಿಶಿನ ಹಚ್ಚಿ ಕಂಕಣ

ಕಟ್ಟಿ, ಮುದ್ರೆಯುಂಗುರ ತೊಡಿಸಿ ವೀರಶೈವ ಧರ್ಮ ಗ್ರಂಥ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಕೊಟ್ಟು ಪಟ್ಟಬಂಧ ಕಟ್ಟಿ ದಂಡ ಕಮಂಡಲ ಕೊಟ್ಟು ಷಟ್‌ಸ್ಥಲ ಬ್ರಹ್ಮೋಪದೇಶ ಮಾಡಿ ಶ್ರೀ ಷ॥ ಬ್ರ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಎಂದು ನಾಮಕರಣ ಮಾಡಿದರು.

ಬಾಗಲಕೋಟೆ ಜಿಲ್ಲೆ

೧೭-೧೨-೨೦೦೩, ಪ್ರಜಾವಾಣಿ



ಗುಳೇದಗುಡ್ಡ ಬಳಿಯ ತೋಗುಣಸಿ ಗ್ರಾಮದಲ್ಲಿ ಲಿಂ. ಸಿದ್ಧಯ್ಯ ಪುರಾಣಮಠರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಸ್ವಾಮೀಜಿ ಮಾತನಾಡಿದರು, ಕಾಶೀನಾಥ ಸ್ವಾಮೀಜಿ, ದಾಮುಖ ಸ್ವಾಮೀಜಿ, ಪಕ್ಕಿರೇಶ್ವರ, ಬಸವರಾಜ ಶಾಸ್ತ್ರಿ ಚಿತ್ರದಲ್ಲಿದ್ದಾರೆ.

ಸ್ವಾಮಿಗಳಿಗೆ ನೆರೆದ ಭಕ್ತರೆಲ್ಲಾ ಭಕ್ತಿಯಿಂದ ಪಾದಗಳಿಗೆ ನಮಸ್ಕರಿಸುವಾಗ ಹೆತ್ತ ತಾಯಿ-ತಂದೆಗಳೂ ನಮಸ್ಕಾರ ಮಾಡಿದರು. ಇದೆಲ್ಲವೂ ಜಗದ್ಗುರುಗಳ ಪೂರ್ವಾಶ್ರಮದಲ್ಲಿ ನಡೆದದ್ದು. ಇಲ್ಲಿಂದ ಸ್ವಾಮಿಗಳಿಗೆ ತಾಯಿ-ತಂದೆಯ ಯಾವ ಸಂಬಂಧವೂ ಇರುವುದಿಲ್ಲ. ಎಲ್ಲರಂತೆ ಇವರು ಶಿಷ್ಯರು. ಸ್ವಾಮಿಗಳಾದವರಿಗೆ ತಾಯಿ-ತಂದೆಯು ಲಿಂಗೈಕ್ಯರಾದಾಗಲೂ ಯಾವುದೇ ಕರ್ಮಗಳನ್ನು ಮಾಡುವಂತಿಲ್ಲ. ಸಮಾಧಿ ಸಮಯದಲ್ಲಿ ಉಪಸ್ಥಿತರಿದ್ದು ಎಲ್ಲವನ್ನು ನೋಡಬಹುದು. ನಂತರ ಸೇರಿದ ಭಕ್ತರನ್ನುದ್ದೇಶಿಸಿ ಆಶೀರ್ವಾದ ಮಾಡಬಹುದು.

ಪೂರ್ವಭಾವಿಯಾಗಿ ಈ ವಿಚಾರಗಳೆಲ್ಲಾ ಇಲ್ಲೇಕೆ ಬಂದಿತೆಂದರೆ 2002ರ ಡಿಸೆಂಬರ್‌ನಲ್ಲಿ ಕಾಶೀ ಜಗದ್ಗುರುಗಳ ಪೂರ್ವಾಶ್ರಮದ ತಂದೆಯವರು ಲಿಂಗೈಕ್ಯರಾದರು. 16-12-2003ರಲ್ಲಿ ಸಿದ್ದಯ್ಯನವರ ಪ್ರಥಮ ಪುಣ್ಯಸ್ಮರಣೆಯಲ್ಲಿ ಧರ್ಮಸಭೆಯನ್ನು ನಡೆಸಿ ಜಗದ್ಗುರುಗಳು ಆಶೀರ್ವಚನ ಮಾಡಿದರು.

ಲಿಂ. ಸಿದ್ಧಯ್ಯ ಪುರಾಣಮಠರು ಸ್ವಾತಂತ್ರ್ಯಪೂರ್ವದಲ್ಲಿ ಗೌಂಡಿ ಶಾಲಾ ಶಿಕ್ಷಕರಾಗಿ ದುಡಿದವರು, ಜಂಗಮ ವಂಶಸ್ಥರಾಗಿ ಸಮಾಜ ಸೇವೆ ಮಾಡಿದವರೆಂದು ಸೋಲಾಪುರದ ಬಸವರಾಜ ಶಾಸ್ತ್ರಿಗಳು ಸಿದ್ಧಯ್ಯನವರ ಜೀವನ-ಸಾಧನೆ-ಕೊಡುಗೆ ಕುರಿತು ಮಾತ ನಾಡುತ್ತ ಹೇಳಿದರು.

4-12-2012ರಂದು ಜಗದ್ಗುರುಗಳ ಪೂರ್ವಾಶ್ರಮದ ಮಾತೆಯವರಾದ ಶಾವಂತ್ರಮ್ಮನವರು ಲಿಂಗೈಕ್ಯರಾದರು. ಅಂತ್ಯಕ್ರಿಯೆಗೆ ಜಗದ್ಗುರುಗಳು ಆಗಮಿಸಿದ್ದರು. ಅಂತ್ಯಕ್ರಿಯೆಯನ್ನು ಮುಕ್ತಿ ಮಂದಿರದ ಶ್ರೀ ವೀರಮುಕ್ತಿಮುನಿ ಶಿವಾಚಾರ್ಯರು ಮತ್ತು ಗುಳೇದಗುಡ್ಡದ ವೇ. ಮೃತ್ಯುಂಜಯನವರು ಕ್ರಿಯಾ ಸಮಾಧಿಯ ವಿಧಿ ವಿದಾನ ನಡೆಸಿಕೊಟ್ಟರು. ನೂರಾರು ಹಳ್ಳಿ ಪಟ್ಟಣಗಳಿಂದ ಹತ್ತು ಸಾವಿರಕ್ಕೂ ಹೆಚ್ಚು ಭಕ್ತರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

"ಜನನ-ಮರಣಗಳ ನಡುವೆ ಇರುವುದೇ ಜೀವನ. ಮನುಷ್ಯನ ಜನನ ಮತ್ತು ಬೆಳವಣಿಗೆಗೆ ಜನನಿ ಕಾರಣ. ಜಗತ್ತಿನ ಮೊದಲಗುರು ತಾಯಿ. ತಾಯಿ ಋಣತೀರಿಸಬೇಕಾದರೆ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬೇಕು. ಸ್ವಾಮಿಗಳು ಎಲ್ಲಾ ಸಂಬಂಧಗಳನ್ನು ಪರಿತ್ಯಾಗ ಮಾಡಿದರೂ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬೇಕು" ಎಂದು ಹೇಳಿದಾಗ ಇಲ್ಲಿ ಶ್ರೀ ಶಂಕರಾಚಾರ್ಯರ ನೆನಪಾಗುತ್ತಿದೆ. ಎಲ್ಲೋ ದೂರದಲ್ಲಿದ್ದರೂ

ಶಾವಂತ್ರಮ್ಮನವರ ಅಂತ್ಯಕ್ರಿಯೆ

ಉದಯವಾಣಿ ೫-೧೨-೧೨

ಗುಳೇದಗುಡ್ಡ : ಕಾಶೀಪೀಠದ ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಪೂರ್ವಾಶ್ರಮದ ಮಾತೋಶ್ರೀ ಶಾವಂತ್ರಮ್ಮ ಸಿದ್ದಯ್ಯ ಪುರಾಣಿಕ ಮಠ (೯೫) ಅವರ ಅಂತ್ಯಕ್ರಿಯೆ ಸ್ವಗ್ರಾಮ ತೋಗುಣಸಿ ಗ್ರಾಮದಲ್ಲಿ ಮಂಗಳವಾರ ಸಂಜೆ ನಡೆಯಿತು.

ಕಾಶೀಪೀಠದ ಜಗದ್ಗುರುಗಳು ಸೇರಿದಂತೆ ಎಲ್ಲ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಸಕಲ ಧಾರ್ಮಿಕ ಕ್ರಿಯಾವಿಧಿಗಳೊಂದಿಗೆ ಅಂತ್ಯಕ್ರಿಯೆ ಜರುಗಿತು.

ಶ್ರದ್ಧಾಂಜಲಿ ಸಭೆ :

ಶಾವಂತ್ರಮ್ಮನವರ ಅಂತ್ಯಕ್ರಿಯೆ ವೇಳೆ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಮಾತನಾಡಿ ಶಾವಂತ್ರಮ್ಮನವರು ಸಂಸ್ಕಾರಯುತ ಮನೆತನದಿಂದ ಬಂದವರು. ಜಗತ್ತಿನ ಮೊದಲ ಗುರು ತಾಯಿ, ತಾಯಿಯ ಋಣ ತೀರಿಸಬೇಕಾದರೆ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬೇಕು ಎಂದರು.

ಕೆರೂರ ಚರಂತಿಮಠ ಡಾ. ಶಿವಕುಮಾರ ಶ್ರೀಗಳು, ಅಮರೇಶ್ವರ ಮಠದ ಪೀಠಾಧ್ಯಕ್ಷ ನೀಲಕಂಠ ಶ್ರೀಗಳು, ಕೋಟೆಕಲ್ ಹುಚ್ಚೇಶ್ವರ ಶ್ರೀಗಳು, ಮುರುಘಾಮಠದ ಕಾಶಿನಾಥ ಶ್ರೀಗಳು, ಹೊನ್ನಾಳ್ಳಿ, ಕಲಾದಗಿ, ಚಾಂದಕೋಟೆ ಶ್ರೀಗಳು, ಸೊಲ್ಲಾಪುರದ ಬಸವರಾಜ ಶಾಸ್ತ್ರಿಗಳು, ಮಾಜಿ ಶಾಸಕ ಆರ್.ಜಿ. ನಂಜಯ್ಯನಮಠ, ಸವದತ್ತಿ ಮಾಜಿ ಶಾಸಕ ಆರ್.ಜಿ. ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನಮಂತ ಮಾವಿನಮರದ, ಪ್ರಕಾಶ ಮುರಗೋಡ, ಅಶೋಕ ಚಿತ್ತರಗಿ, ವೀರಭದ್ರಪ್ಪ ಬಳಿಗಾರ, ಪ್ರಭುಮೊರಬದ, ಬಸವರಾಜ ಚಿಲ್ಲಾಪೂರ, ಎಸ್.ಎಂ. ಪಾಟೀಲ ಮತ್ತಿತರರು ಇದ್ದರು.

ಕಾಶಿ ಜಗದ್ಗುರುಗಳ ಮಾತೋಶ್ರೀ ಶಾವಂತ್ರಮ್ಮನವರ ಅಂತ್ಯಕ್ರಿಯೆ




ಗುಳೇದಗುಡ್ಡ : ತೋಗುಣಸಿ ಗ್ರಾಮದಲ್ಲಿ ನಡೆದ ಶಾವಂತ್ರಮ್ಮನವರ ಅಂತ್ಯಕ್ರಿಯೆಯಲ್ಲಿ ಕಾಶೀ ಪೀಠದ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಹುಚ್ಚೇಶ್ವರ ಶ್ರೀಗಳು, ಕಾಶಿನಾಥ ಶ್ರೀಗಳು, ನೀಲಕಂಠ ಶಿವಾಚಾರ್ಯರು ಸೇರಿದಂತೆ ಅನೇಕ ಶ್ರೀಗಳು ಭಾಗವಹಿಸಿದ್ದರು.

ತಾಯಿಯ ಅಂತಿಮ ದಿನದ ಬಗ್ಗೆ ಅವರಿಗೆ ತಿಳಿಯುತ್ತೆ. ತಾಯಿಗೆ ಮಾತು ಕೊಟ್ಟಂತೆ-ಆ ಸಮಯಕ್ಕೆ ಶಂಕರಾಚಾರ್ಯರು ಅಲ್ಲಿರುತ್ತಾರೆ. ಹೀಗೆ ಸರ್ವಸಂಗ ಪರಿತ್ಯಾಗಿ ಯಾದರೂ ತಾಯಿಯ ಋಣ ತೀರಿಸುವುದು ಬಹುಮುಖ್ಯ ಎಂಬುದು ಭಾರತೀಯ ಧಾರ್ಮಿಕ ನಂಬಿಕೆಗಳಲ್ಲೊಂದು. ತಾಯಿಯ ಸ್ಥಾನ ಬದುಕಿನಲ್ಲಿ ಎಷ್ಟು ಮಹತ್ವದ್ದು ಎಂದು ಇದರಿಂದ ತಿಳಿದು ಬರುತ್ತದೆ. ಮುಂದೆ ಜಗದ್ಗುರುಗಳು - ಅವರ ತಾಯಿ ಶಾವಂತ್ರಮ್ಮನವರು ಸಂಸ್ಕಾರಯುತ ಮನೆತನದಿಂದ ಬಂದವರು - ಎಂದು ಹೇಳಿದರು. ದಿ. ಶಾವಂತ್ರಮ್ಮನವರ ಸೋದರರೇ ಲಿಂ.ಪಂ.ಶ್ರೀ ಕಾಶೀನಾಥ ಶಾಸ್ತ್ರೀಗಳು. ಇಂತಹ ಸಂಸ್ಕಾರಯುತ ಮನೆತನದಲ್ಲಿ ಸರಳತೆಯೇ ಮೈವೆತ್ತಂತಹ ತಾಯಿ-ತಂದೆ ಗರ್ಭದಲ್ಲಿ ಜನಿಸಿ ವೀರಶೈವ ಸಮಾಜವಲ್ಲದೆ ದೇಶವೇ ಹೆಮ್ಮೆ ಪಡುವಂತಹ ಜಗದ್ಗುರುಗಳನ್ನು ಪಡೆಯುವಂತಾಯಿತು.

ಲಿಂ. ಶಾವಂತ್ರಮ್ಮನವರು ಸಿದ್ದಯ್ಯ ಪುರಾಣಿಕಮಠ ಅವರ ಶ್ರದ್ಧಾಂಜಲಿ ಸಭೆ ಹಾಗೂ ಧರ್ಮ ಸಭೆಯನ್ನು ತೋಗುಣಸಿಯ ಗಣ್ಯರು ಏರ್ಪಡಿಸಿದರು. ಆ ಸಭೆಗೆ ಶ್ರೀ ಶೈಲ ಜಗದ್ಗುರು ಚನ್ನ ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳೂ ದಯಮಾಡಿಸಿದ್ದರು. ಈ ಸಭೆಯಲ್ಲಿ ಕಾಶೀ ಜಗದ್ಗುರುಗಳು ತಾಯಿ-ತಂದೆಗಳು ಜಗತ್ತಿನಲ್ಲಿ ದೊಡ್ಡ ಆಸ್ತಿಯಾಗಿದ್ದಾರೆ. ತಾಯಿ ಮತ್ತು ಗುರುವಿನ ಆಶೀರ್ವಾದ ಪಡೆದವರು ಕೇವಲ ವ್ಯಕ್ತಿಯಾಗುವುದಿಲ್ಲ, ಜಗತ್ತಿಗೆ ಒಂದು ಶಕ್ತಿಯಾಗುತ್ತಾರೆ. ಭಾರತದಲ್ಲಿನ ತಂದೆ-ತಾಯಿ ಮಕ್ಕಳ ಸಂಬಂಧ ಕೇವಲ ಕೆಲವೇ ವರ್ಷಗಳದ್ದಲ್ಲ, ಅದು ದೀರ್ಘವಾದದ್ದು ಎಂದು ಹೇಳಿದರು. ಇಂದಿನ ದಿನಗಳಲ್ಲಿ ಈ ಭಾವನೆಗಳೆಲ್ಲಾ ಕ್ಷೀಣಿಸುತ್ತಾ ಬಾಂಧವ್ಯಗಳು ಸಡಿಲವಾಗುತ್ತಾ ತಾಯಿ-ತಂದೆಯರನ್ನು ವೃದ್ಧಾಶ್ರಮಗಳಿಗೆ ಸೇರಿಸುವಂತಹ ಈ ಕಾಲದಲ್ಲಿ, ತಾಯಿ-ತಂದೆ ದೇವರ ಸಮಾನ ಎನ್ನುವ ಮಾತು ದೂರವಾಗುತ್ತಿರುವ ಇಂದಿನ ದಿನಗಳಲ್ಲಿ ಜನರ ಮನಸ್ಥಿತಿಯನ್ನು ಜಗದ್ಗುರುಗಳೂ ಬಲ್ಲರು. ತಂದೆ ತಾಯಿ, ಗುರು ಮತ್ತು ಅತಿಥಿ ಸತ್ಕಾರಗಳಲ್ಲಿ ದೇವರನ್ನು ಕಾಣುವ ಸಂಸ್ಕೃತಿ ನಮ್ಮದಾಗಿದೆ. ಸದ್ಯದ ದಿನಗಳಲ್ಲಿ ಉದಾರತೆ ಕಡಿಮೆಯಾಗುತ್ತಿದೆ. ಹೀಗಾಗಿ ಭಾರತೀಯ ಸಂಸ್ಕೃತಿ, ಸಂಪ್ರದಾಯಗಳು ಇಂದು ವಿಕಾರವಾಗುತ್ತಿದೆ ಎಂದು ವಿಷಾದ ಪಟ್ಟರು.

ಹೆತ್ತವರ ಮನಸ್ಸು ನೋಯಿಸಬೇಡಿ : ಶ್ರೀಶೈಲ ಶ್ರೀ

ಉದಯವಾಣಿ 8-12-2012



ಗುಳೇಗುಡ್ಡ : ಕಾಶೀ ಪೀಠದ ಜಗದ್ಗುರು ಡಾ। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಮಾತೋಶ್ರೀ ಶಾವಂತ್ರಮ್ಮನವರ ಶ್ರದ್ಧಾಂಜಲಿ ಸಭೆ ಹಾಗೂ ಧರ್ಮಸಭೆಯಲ್ಲಿ ಶ್ರೀಶೈಲ ಜಗದ್ಗುರುಗಳು ಮಾತನಾಡಿದರು.

ಈ ಜನ್ಮ ಜೀವನ ಆರಂಭಿಕ ಅವಸ್ಥೆಯಾದರೆ, ಮರಣ ಬದುಕಿನ ಕೊನೆಯ ಘಟ್ಟವಾಗಿದೆ. ಇವೆರಡರ ನಡುವೆ ನಡೆಯುವ ಸತ್ಕಾರ್ಯ, ಆಚಾರ-ವಿಚಾರಗಳು ಸಮಾಜಕ್ಕೆ ಮಾದರಿಯಾಗಿ ಉಳಿಯಬೇಕು. ಅಂತಹ ಕೆಲಸವನ್ನು ಮಾತೋಶ್ರೀ ಶಾವಂತ್ರಮ್ಮನವರು ಮಾಡಿದ್ದಾರೆ ಎಂದು ತಾಯಿಯ ಗುಣ ಸ್ವಬಾವಗಳನ್ನು ಸ್ಮರಿಸಿಕೊಂಡರು. ಆತ್ಮವೇ ಪರಮಾತ್ಮ ಎನ್ನುವ ಭಾವ ಮತ್ತು ಆತ್ಮಜ್ಞಾನ ಪ್ರತಿಯೊಬ್ಬರಲ್ಲೂ ಮೂಡಬೇಕು. ಆಗ ಬದುಕು ಸಾಕಾರಗೊಳ್ಳುತ್ತದೆ ಎಂದು ಜಗದ್ಗುರುಗಳು ಹೇಳಿದರು.

ವಿಶ್ವವೇ ಗೌರವಿಸುವಂತಹ ದಾರ್ಶನಿಕ ಪುತ್ರರಾದ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರಂತಹ ಮಗನನ್ನು ಹಡೆದು ಕೊಟ್ಟಿರುವ ಇಂತಹ ಮಾತೆಯನ್ನು ಪಡೆದಿರುವುದು ನಮ್ಮ ಭಾಗ್ಯ. ಎಲ್ಲಾ ಭಕ್ತಾದಿಗಳ ಪರವಾಗಿ ಆ ಮಹಾ ತಾಯಿಗೆ ಭಕ್ತಿಯಿಂದ ನಮಸ್ಕರಿಸುವೆ.

'ಧರ್ಮದ ಬಗ್ಗೆ ಒಲವು ಹೊಂದಿದ್ದ ಶಾಸಕ'

28–6–2003

ಕೂಡ್ಲಿಗಿ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಅಸು ನೀಗಿದ ಹುನಗುಂದದ ಶಾಸಕ, ಮಾಜಿ ಸಚಿವ ಎಸ್.ಆರ್. ಕಾಶಪ್ಪನವರ್ ಅವರ ಪಾರ್ಥಿವ ಶರೀರಕ್ಕೆ ಸ್ವಗ್ರಾಮ ಹಾವರಗಿಯಲ್ಲಿ ಸಕಲ ಸರ್ಕಾರಿ ಗೌರವ–ಮರ್ಯಾದೆಯೊಂದಿಗೆ ಅಂತ್ಯಕ್ರಿಯೆ ನೆರವೇರಿಸಿದಾಗ ಕಾಶಿ ಜಗದ್ಗುರುಗಳು, ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಹಾಗೂ ಅನೇಕ ಸಚಿವರು ಶಾಸಕರು ಪಾಲ್ಗೊಂಡಿದ್ದರು. ಅಂತಿಮ ಕ್ರಿಯೆಗೆ ಮುನ್ನ ನಡೆಸಿದ ಶೋಕಸಭೆಯಲ್ಲಿ ಜಗದ್ಗುರುಗಳು ನೆರೆದಿದ್ದ ಲಕ್ಷಾಂತರ ಜನಸ್ತೋಮವನ್ನುದ್ದೇಶಿಸಿ ಆಶೀರ್ವಚನದಲ್ಲಿ ಧಾರ್ಮಿಕ ಒಲವುಳ್ಳ ರಾಜಕಾರಣಿ ಕಾಶಪ್ಪನವರ್ ಮೇಲ್ಪಂಕ್ತಿಯ ವ್ಯಕ್ತಿಯಾಗಿದ್ದರು. ಅಂಥವರ ಅಗಲಿಕೆ ಧಾರ್ಮಿಕ ಕ್ಷೇತ್ರಕ್ಕೆ ಅಪಾರ ಹಾನಿಯುಂಟಾಗಿದೆ. ಅವರಿಗೆ ಪಂಚಪೀಠಗಳೆಂದರೆ ಪಂಚಪ್ರಾಣ. ಯಾವುದೇ ಕಾರ್ಯಕ್ರಮವಿರಲಿ ಯಾವುದೇ ಸಹಾಯವಿರಲಿ ಅಲ್ಲಿ ಅವರ ಸೇವೆ ಇದ್ದೇ ಇರುತ್ತಿತ್ತು ಎಂದು ಸ್ಮರಿಸಿದರು. ಅಂತಹ ಭಕ್ತನೊಬ್ಬ ಇಲ್ಲದಿರುವುದು ನಿಜಕ್ಕೂ ವಿಷಾದನೀಯವೆಂದು ಹೇಳಿದರು. ಶರಣರೆಲ್ಲ ದೇಹವನ್ನು ಬಿಡಲೇಬೇಕು. ಮರಣಕ್ಕೆ ಯಾರ ಯಾವ ಹಂಗೂ ಇಲ್ಲವೆಂದರು.

ಅವರ ಅಗಲಿಕೆಯಿಂದ ಆದ ದುಃಖ–ನೋವುಗಳನ್ನು ತಡೆದುಕೊಳ್ಳುವ ಶಕ್ತಿಯನ್ನು ದೇವರು ಕುಟುಂಬವರ್ಗದವರಿಗೆ ಕರುಣಿಸಲಿ ಎಂದು ಪ್ರಾರ್ಥಿಸಿದರು.



ಶನಿವಾರ ಹಾವರಗಿಯಲ್ಲಿ ನಡೆದ ಕಾಳಪ್ಪನವರ ಶೋಕಸಭೆಯಲ್ಲಿ ಕಾಶೀ ಪೀಠದ ಚಂದ್ರಶೇಖರ ಶ್ರೀಗಳು ಪಾಲ್ಗೊಂಡಿದ್ದರು. ಮುಖ್ಯಮಂತ್ರಿ ಕೃಷ್ಣ, ಸಚಿವರುಗಳು ಉಪಸ್ಥಿತರಿದ್ದರು.

ಪ್ರತಿಯೊಬ್ಬರು ಬದುಕಿನಲ್ಲಿ ಆತ್ಮಜ್ಞಾನ ಪಡೆಯಬೇಕು

ಸಂಯುಕ್ತ ಕರ್ನಾಟಕ 7–12–12



ಗುಳೇಗುಡ್ಡದ ಸಮೀಪದ ತೋಗುಣಸಿ ಗ್ರಾಮದಲ್ಲಿ ಮಾತೋಶ್ರೀ ಶಾವಂತ್ರಮ್ಮನವರ ಅಂತ್ಯಕ್ರಿಯೆ ಸಂದರ್ಭದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ವಾರಣಾಸಿ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿದರು.

ಶರಣೆ ಲಕ್ಷ್ಮೀಬಾಯಿ ಅಂತ್ಯಕ್ರಿಯೆಯಲ್ಲಿ ಜಗದ್ಗುರುಗಳು

ಜಗದ್ಗುರುಗಳು ಶ್ರೀ ಅಮರೇಶ್ವರ ಮಠದ ಅಧಿಕಾರವನ್ನು ವಹಿಸಿಕೊಂಡ ನಂತರ ಹೆಚ್ಚಿನ ವ್ಯಾಸಂಗಕ್ಕಾಗಿ ಕಾಶಿಗೆ ಹೋಗಬೇಕಿತ್ತು. ಲಿಂ. ಗುರುಗಳಾಗಿದ್ದ ಅಮರೇಶ್ವರ ಸ್ವಾಮಿಗಳ ಕಾಲದಿಂದ ಮಠದಲ್ಲೇ ಇದ್ದು ಸ್ವಾಮಿಗಳ ಸೇವೆ ಮಾಡುತ್ತಿದ್ದ ಪರಮ ಶಿಷ್ಯರುಗಳಾದ ದೇಶಿಕಮೂರ್ತಿ ಬಸವಯ್ಯ ಸ್ವಾಮಿಗಳು ಮತ್ತು ಶ್ರೀಮತಿ ಲಕ್ಷ್ಮೀಬಾಯಿ ಅಮ್ಮನವರಿಗೆ ಮಠದ ಉಸ್ತುವಾರಿ ವಹಿಸಿಕೊಟ್ಟರು. ಸ್ವಾಮಿಗಳು ಅಲ್ಲಿಲ್ಲದಿದ್ದರೂ ಮಠದಲ್ಲಿ ನಡೆಯಬೇಕಾದ ಎಲ್ಲಾ ಕಾರ್ಯಗಳನ್ನು ಊರಿನ ಭಕ್ತರ ನೆರವಿನಿಂದ ಭಕ್ತಿಯಿಂದ ಮಾಡಿಕೊಂಡು ಬರುತ್ತಿದ್ದರು. ಇವರಿಬ್ಬರೂ ಜಗದ್ಗುರುಗಳು ಕಾಶಿಯಿಂದ ಬಂದಾಗಲೆಲ್ಲಾ ಬಹಳ ಸೇವೆ ಮಾಡುತ್ತಿದ್ದರು.

ನಾವುಗಳು ನಮ್ಮ ಕುಟುಂಬದವರೆಲ್ಲಾ ಬಿಜಾಪುರ ಬಾದಾಮಿಯ ಕಡೆ ಪ್ರವಾಸ ಹೊರಟಾಗ ಕಾಶಿಯಲ್ಲಿದ್ದ ಜಗದ್ಗುರುಗಳು ಗುಳೇದಗುಡ್ಡದ ಅಮರೇಶ್ವರ ಮಠದಲ್ಲಿ ಉಳಿದುಕೊಂಡು ಬಾದಾಮಿಯನ್ನು ನೋಡಿ ಪ್ರವಾಸ ಮುಂದುವರೆಸಿ ಎಂದು ನಮಗೆಲ್ಲ ಹೇಳಿದ್ದರು. ಅವರ ಆದೇಶದಂತೆ ನಾವುಗಳು 8–10 ಜನರು ಮಠಕ್ಕೆ ಹೋದಾಗ ನಮ್ಮನ್ನು ಎಂದೂ ನೋಡದಿದ್ದರೂ ಬಹಳ ಆತ್ಮೀಯವಾಗಿ ಶ್ರೀ ಬಸವಯ್ಯನವರು, ಲಕ್ಷ್ಮೀಬಾಯಿ ಅಮ್ಮ ನೋಡಿಕೊಂಡರು. ಗೋಧಿ ಹುಗ್ಗಿಯ ಹಬ್ಬದಡಿಗೆ ಮಾಡಿ ವಾತ್ಸಲ್ಯದಿಂದ ಉಣಬಡಿಸಿದ್ದನ್ನು ಎಂದೂ ಮರೆಯುವಂತಿಲ್ಲ. ರಾತ್ರಿ ಮಠದಲ್ಲೇ ಉಳಿದಿದ್ದೆವು. ಬೆಳಗ್ಗೆ ಬಾದಾಮಿ ಪಟ್ಟದಕಲ್ಲು ನೋಡಲು ಹೊರಟಾಗ ಮಧ್ಯಾಹ್ನಕ್ಕೆ ಬುತ್ತಿಯನ್ನು ಕಟ್ಟಿಕೊಟ್ಟಿದ್ದರು. ಕಾಶಿಯಿಂದ ಜಗದ್ಗುರುಗಳು ದೂರವಾಣಿ ಮೂಲಕ ನಾವು ಬರುವ ವಿಷಯ ತಿಳಿಸಿದ್ದರು. ಬಸವಯ್ಯ ಮತ್ತು ಲಕ್ಷ್ಮಮ್ಮನವರು ಮಾಡಿದ ಉಪಚಾರಗಳೆಲ್ಲವೂ ಅವರುಗಳಿಗೆ ಗುರುಗಳ ಮೇಲಿದ್ದ ಭಕ್ತಿ ಗೌರವದ ದ್ಯೋತಕವಾಗಿತ್ತು. ಅಲ್ಲಿಂದ ನಾವುಗಳು ಹೊರಟಾಗ ತೌರೂರಿನಿಂದ ಹೊರಟಂತಾಗಿತ್ತು.

ಇಂತಹ ಪುಣ್ಯಜೀವಿ ಎಲ್ಲರಿಗೂ ಅಮ್ಮನಾಗಿದ್ದ ಶರಣೆ ಲಕ್ಷ್ಮೀಬಾಯಿ ಅಮ್ಮನವರು 5-2-2012ರಲ್ಲಿ ಲಿಂಗೈಕ್ಯರಾದರು. ಸುಮಾರು 60 ವರ್ಷಗಳಿಂದ ಮಠದ ಸೇವೆ ಮಾಡಿದ್ದ ಶರಣೆ ಲಕ್ಷ್ಮೀಬಾಯಿ ಅಮ್ಮ ಮಠಕ್ಕೆ ಬಂದವರಿಗೆಲ್ಲಾ ಉಣಬಡಿಸಿ-ಅನ್ನಪೂರ್ಣೆ ಎನಿಸಿದ್ದರು. ಅವರ ಅಂತ್ಯಕ್ರಿಯೆಗೆ ಕಾಶಿಯ ಜಗದ್ಗುರುಗಳು ಆಗಮಿಸಿದ್ದ ಅವರ ಸಾನಿಧ್ಯದಲ್ಲಿ ಅಂತ್ಯಕ್ರಿಯೆ ನಡೆಯಿತು.

ಸುಮಾರು 10-12 ಊರು ಗಳಿಂದ ಭಕ್ತರು ಆಗಮಿಸಿ ಅವರ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿ, ಅಂತಿಮ ನಮನ ಸಲ್ಲಿಸಿದರು.

ಅವರಿಗಾಗಿ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಜಗದ್ಗುರುಗಳು ಅವರು ಮಾಡಿದ ಸೇವೆಯನ್ನು ಸ್ಮರಿಸುತ್ತಾ ಅವರು ಯಂತ್ರ, ಮಂತ್ರ ಸಿದ್ಧಿ ಮಾಡಿಕೊಂಡ ಹಸ್ತರೇಖೆ ಪ್ರವೀಣೆಯಾಗಿದ್ದರು ಎಂದು ಹೇಳಿದರು.

ಶರಣೆ ಲಕ್ಷ್ಮೀಬಾಯಿ ಪಂಚಭೂತಗಳಲ್ಲಿ ಲೀನ

ಸಂಯುಕ್ತ ಕರ್ನಾಟಕ ೬-೨-೨೦೧೨



ಗುಳೇಗುಡ್ಡ ಸಮೀಪದ ಅಮರೇಶ್ವರ ಮಠದಲ್ಲಿ ಲಕ್ಷ್ಮೀಬಾಯಿ ಮ್ಮನವರ ಅಂತ್ಯಕ್ರಿಯೆಯು ಶ್ರೀಕಾಶಿ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಕಾಶಿನಾಥ ಶ್ರೀಗಳ ಸಮ್ಮುಖದಲ್ಲಿ ನಡೆಯಿತು.

ದಿ॥ ಕೇಂದ್ರ ಸಚಿವ ವಿಲಾಸರಾವ್ ದೇಶಮುಖ ಅವರ ನಿವಾಸಕ್ಕೆ ಜಗದ್ಗುರು

ಜಗದ್ಗುರುಗಳು ಮಹಾರಾಷ್ಟ್ರದ ಪ್ರತಿಯೊಂದು ಊರಿನಲ್ಲೂ ತುಂಬಾ ಪ್ರಸಿದ್ಧಿ ಪಡೆದು ಲಕ್ಷಾಂತರ ಭಕ್ತರನ್ನು ಹೊಂದಿದ್ದಾರೆ. ಮಹಾರಾಷ್ಟ್ರದ ಯಾವುದೇ ಜಿಲ್ಲೆಗಳಲ್ಲಿ ಜಗದ್ಗುರುಗಳ ಆಶೀರ್ವಾದ ಸಮಾರಂಭದಲ್ಲಿ ಭಾಗವಹಿಸದ ಮಂತ್ರಿಗಳೇ ಇಲ್ಲ. ಅಲ್ಲಿನ ಜನತೆ ರಾಜಕಾರಣಿಗಳೇ ಇರಬಹುದು ಪ್ರಖ್ಯಾತ ಉದ್ಯಮಿಗಳೇ ಇರಬಹುದು, ಶ್ರೀಮಂತ ಭಕ್ತರೇ ಇರಬಹುದು-ಎಲ್ಲರೂ ಬಹು ಭಕ್ತಿಯಿಂದ ಜಗದ್ಗುರುಗಳನ್ನು ಕಾಣುತ್ತಾರೆ. ಅಂತಹ ವ್ಯಕ್ತಿಗಳಲ್ಲಿ ಶ್ರೀ ವಿಲಾಸರಾವ್ ದೇಶಮುಖ ಅವರೂ ಒಬ್ಬರು. ಅವರ ನಿಧನಾನಂತರ ಜಗದ್ಗುರುಗಳು ಅವರ ನಿವಾಸಕ್ಕೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಉದಯವಾಣಿ 11-8-2012



ಲಾತೂರ (ಮಹಾರಾಷ್ಟ್ರ) : ಇತ್ತೀಚೆಗೆ ನಿಧನರಾದ ಕೇಂದ್ರ ಸಚಿವ ವಿಲಾಸರಾವ್ ದೇಶಮುಖ ಅವರ ಬಾಭಳಗಾಂವದ ದೇಶಮುಖವಾಡ ನಿವಾಸಕ್ಕೆ ಭೇಟಿ ನೀಡಿದ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಜಗದ್ಗುರು ಪೂರ್ವಾಶ್ರಮದ ತಂದೆ-ತಾಯಿಗಳ ಅಂತ್ಯಕ್ರಿಯೆಗಳಲ್ಲಿ ಭಾಗಿಯಾಗಿ ಅವರ ಋಣ ತೀರಿಸಿ ಅವರನ್ನು ಸ್ಮರಿಸಿದ್ದಾಗಲಿ, ಜಗದ್ಗುರುಗಳ ಸೇವೆಯನ್ನು ಬಹಳ ವರ್ಷಗಳಿಂದ ಮಾಡಿಕೊಂಡು ಬಂದ ಲಕ್ಷ್ಮೀಬಾಯಿ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿ ಅವರ ಸೇವೆಯನ್ನು ಶ್ಲಾಘಿಸಿದ್ದಾಗಲಿ, ದಿ. ವಿಲಾಸರಾವ ದೇಶಮುಖ ಅವರ ಸಾವಿನ ಸಂದರ್ಭದಲ್ಲಿ ಅವರ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸಿದ್ದಾಗಲಿ ಮತ್ತು ಶಾಸಕ ಕಾಶಪ್ಪನವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದಾಗಲಿ ನೋಡಿದರೆ ಜಗದ್ಗುರುಗಳ ಹೃದಯವಂತಿಕೆ, ಸಂಸ್ಕಾರಗಳು ಎಷ್ಟು ಉತ್ತಮ ಮಟ್ಟದ್ದು ಎಂದು ತಿಳಿಯಬಹುದು.

ರಾಜಕೀಯ ಕಾರ್ಯಕ್ರಮದಲ್ಲಿ ಜಗದ್ಗುರು

27–11–2012ರಂದು ಬೀಳಗಿ ತಾ॥ ಚಿಕ್ಕ ಸಂಗಮದಲ್ಲಿ ತಾಲ್ಲೂಕಿನ ನಾನಾ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಲು ಕಾಶೀ ಜಗದ್ಗುರುಗಳನ್ನು, ಶ್ರೀಶೈಲ, ಉಜ್ಜಯಿನಿ ಜಗದ್ಗುರುಗಳವರನ್ನು ಆಹ್ವಾನಿಸಿದ್ದಾಗ ಅಂದಿನ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಚಾಲನೆ ನೀಡಿದರು. ಧಾರ್ಮಿಕ ಕಾರ್ಯಕ್ರಮವಲ್ಲದಿದ್ದರೂ ಸಮಾಜದ ಅಭಿವೃದ್ಧಿ ಕಾರ್ಯಕ್ರಮವಾದ್ದರಿಂದ ಗುರುಗಳು ಭಾಗಿಯಾಗಿ ಆಶೀರ್ವಚನ ನೀಡಿದರು.

ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ ಬದ್ಧ
27–11–2012, ವಿಜಯ ಕರ್ನಾಟಕ



ಮೀಸಲಾತಿ ಕುರಿತು ಜಗದ್ಗುರುಗಳು :

ಜಾತಿ ಆಧಾರದ ಬದಲು ಆರ್ಥಿಕವಾಗಿ ಹಿಂದುಳಿದ ಆಧಾರದ ಮೇಲೆ ಮೀಸಲಾತಿ ಅಗತ್ಯ–ಕಾಶೀ ಶ್ರೀಗಳು
ರಾಯಚೂರು ವಾಣಿ 14–6–2014

ರಾಯಚೂರಿನಲ್ಲಿ 13–6–2014ರಂದು ಅನೇಕ ಪತ್ರಿಕೆಗಳ ಸುದ್ದಿಗಾರರು ಜಗದ್ಗುರುಗಳಿಗೆ ಅನೇಕ ವಿಷಯವಾಗಿ ಎಂದರೆ ಮೀಸಲಾತಿ ಕುರಿತು, ಎಂ.ಎಂ. ಕಲಬುರ್ಗಿಯವರ ಹೇಳಿಕೆಯನ್ನು ಕುರಿತು, ಅಸ್ಪೃಶ್ಯತೆ ನಿವಾರಣೆ ಕುರಿತು ಪ್ರಶ್ನೆಗಳನ್ನು ಕೇಳಿದಾಗ ಜಗದ್ಗುರುಗಳಿಗೆ ಮೊದಲಿಂದಲೂ ಸಮಾಜದಲ್ಲಿ ಸಾಮರಸ್ಯ ಮೂಡಬೇಕಿದ್ದಲ್ಲಿ ಮೇಲು ಕೀಳು ಎಂಬ ಭಾವ ಹೋಗಿ ಪರಸ್ಪರ ಪ್ರೀತಿ ವಿಶ್ವಾಸವಿದ್ದರೆ ಮಾತ್ರ ಸಾಧ್ಯ ಎಂದು ಹೋದೆಡೆಯಲ್ಲಿ ಹೇಳುತ್ತಲೇ ಬಂದಿದ್ದಾರೆ. ಹಾಗಾಗಿ ಜಗದ್ಗುರುಗಳು ಜಾತಿ ಆಧಾರದ ಮೇಲೆ ಮೀಸಲಾತಿ ನೀಡುವ ಬದಲು ಆರ್ಥಿಕವಾಗಿ ಹಿಂದುಳಿದವರ ಆಧಾರದ ಮೇಲೆ ಮೀಸಲಾತಿ ನೀಡಬೇಕೆಂದು ಹೇಳಿದರು. ಸರಕಾರ ಜಾತಿ ಆಧಾರದ ಮೇಲೆ ವಿವಿಧ ಒಳಪಂಗಡಗಳ ಆಧಾರದ ಮೇಲೆ ರಾಜಕೀಯ ಸೇರಿದಂತೆ ಇನ್ನಿತರ ಕ್ಷೇತ್ರಗಳಲ್ಲಿ ಮೀಸಲಾತಿ ನೀಡುತ್ತಿದೆ. ಹೀಗಾಗಿ ಜಾತಿ ಒಳ ಪಂಗಡ ಪದ್ಧತಿ ಹೆಚ್ಚಾಗುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದರು.

ಪ್ರಾಕೃತಿಕ ವಿಪತ್ತುಗಳಿಗೆ ಸ್ಪಂದಿಸಿದ ಜಗದ್ಗುರುಗಳು

ಲಿಂ॥ ಪರಮ ಪೂಜ್ಯ ಶ್ರೀ ಶ್ರೀ ಶ್ರೀ 1008 ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳ 'ಮಾನವ ಧರ್ಮಕ್ಕೆ ಜಯವಾಗಲಿ' ಎಂಬ ಸಮಾಜಮುಖಿ ಘೋಷಣೆಯನ್ನು ಆಚರಣೆಗೆ ತಂದವರು ಕಾಶೀ ಪೀಠದ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ರಂಭಾಪುರಿ ಪೀಠದ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು.

ಇಬ್ಬರೂ ಜಗದ್ಗುರುಗಳನ್ನು ತುಮಕೂರಿನ ಭಕ್ತಾದಿಗಳು ಅಡ್ಡಪಲ್ಲಕ್ಕಿ ಮಹೋತ್ಸವ ಏರ್ಪಡಿಸಿ ಸ್ವಾಗತಿಸುವ ತಯಾರಿ ಮಾಡಿಕೊಂಡಿದ್ದರು. ಜಗದ್ಗುರುಗಳ ಪ್ರಥಮ ಪುರಪ್ರವೇಶವೆಂದರೆ ಪದ್ಧತಿಯಂತೆ ಜಗದ್ಗುರುಗಳನ್ನು ಅಡ್ಡಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ಮಂಗಳವಾದ್ಯದೊಂದಿಗೆ ಪೂರ್ಣಕುಂಭ ವೇದಘೋಷಗಳೊಂದಿಗೆ ಸಾಗಿ ಜಾನಪದ ಕಲಾವಿದರೆಲ್ಲರೂ ಡೊಳ್ಳು ಕುಣಿತ, ನಂದಿಧ್ವಜ, ಮುಂತಾದ ಕಣ್ ಮನ ಸೆಳೆಯುವ ಕಲಾವಿದರು ಮಾರ್ಗದುದ್ದಕ್ಕೂ ಸಾಗಿದಾಗ–ನೋಡಲು ಜನಸ್ತೋಮ ಸೇರಿರುತ್ತದೆ. ನಗರಸಭೆಯ ನಗರಾಧ್ಯಕ್ಷರು ಸ್ವಾಗತ ಮಾಡುತ್ತಾರೆ. ಊರಿನ ಇನ್ನಿತರ ಮುಖ್ಯ ರಾಜಕಾರಣಿಗಳು ಸಂಘ ಸಂಸ್ಥೆಗಳವರು ಈ ಉತ್ಸವದಲ್ಲಿ ಭಾಗಿಯಾಗುತ್ತಾರೆ. ಜಗದ್ಗುರುಗಳ

ದರ್ಶನ ಪಡೆಯುವ ಸಲುವಾಗಿ ಅನೇಕ ಹಳ್ಳಿಗಳಿಂದ ಭಕ್ತರು ಆಗಮಿಸಿ–ಒಂದು ರೀತಿಯ ಜಾತ್ರೆಯ ವಾತಾವರಣವಿರುತ್ತದೆ.

ಇಷ್ಟು ಅದ್ದೂರಿಯ ಸ್ವಾಗತ ಸಮಾರಂಭವನ್ನು ತಾ 11–10–1993ರಲ್ಲಿ ಜಗದ್ಗುರುಗಳಿಬ್ಬರೂ ಬೇಡವೆಂದರು. ಕಾರಣ ಗುಜರಾತ್‌ನಲ್ಲಿ ಸಂಭವಿಸಿದ ಭೂಕಂಪದಿಂದಾಗಿ ಇಡೀ ರಾಜ್ಯವೇ ತತ್ತರಿಸಿಹೋಗಿತ್ತು. ಅಪಾರ ನಷ್ಟವಾಗಿ ಲಕ್ಷಾಂತರ ಜನರು ಮನೆ–ಮಠಗಳನ್ನು, ಬಂಧು ಬಾಂಧವರನ್ನು ಕಳೆದುಕೊಂಡು ಸಂಕಷ್ಟದಲ್ಲಿ ಸಿಲುಕಿದ್ದರು. ಇಡೀ ರಾಜ್ಯವೇ ಸಂಕಷ್ಟದಲ್ಲಿರುವಾಗ ಈ ರೀತಿಯ ಅಡ್ಡಪಲ್ಲಕ್ಕಿ ಮಹೋತ್ಸವ ಬೇಡವೆಂದು ಪಾದಯಾತ್ರೆಯ ಮೂಲಕ ಪುರಪ್ರವೇಶ ಮಾಡಿದರು. ಪೂರ್ಣಕುಂಭ, ವೇದ ಘೋಷಣೆಗಳ ಮಧ್ಯೆ ಭಕ್ತಿಪೂರ್ವಕವಾಗಿ ಸ್ವಾಗತಿಸಿ ಬರಮಾಡಿಕೊಳ್ಳಲಾಯಿತು. ಸಭಾಧ್ಯಕ್ಷರಾದ ಹನುಮಂತರಾಯಪ್ಪನವರು ಜಗದ್ಗುರುಗಳಿಗೆ ಮಾಲಾರ್ಪಣೆ ಮಾಡಿ ಸ್ವಾಗತ ಕೋರಿದರು.

ಪುರ ಪ್ರವೇಶದ ನಂತರ ಜಗದ್ಗುರುಗಳಿಬ್ಬರೂ ಭೂಕಂಪಪೀಡಿತ ಸಂತ್ರಸ್ತರಿಗೆ ನಿಧಿಸಂಗ್ರಹಣೆಗಾಗಿ ಪಾದಯಾತ್ರೆ ಆರಂಭಿಸಿದರು. ಪಾದಯಾತ್ರೆಯಲ್ಲಿ ವೀರಗಾಸೆ, ಪಟದ ಕುಣಿತ, ನಂದೀಧ್ವಜ, ಡಂಕ ವಾದ್ಯ, ತಮಟೆ, ಬ್ಯಾಂಡ್ ವಾದನಗಳೊಂದಿಗೆ ನಗರದ ಎಲ್ಲಾ ಗಣ್ಯರು, ಸಂಘ ಸಂಸ್ಥೆಗಳೂ ಪಾದಯಾತ್ರೆಯಲ್ಲಿ ಗುರುಗಳೊಂದಿಗೆ ಸಾಗಿದ್ದು ಒಂದು ಹೊಸ ಅಧ್ಯಾಯವನ್ನು ಪಂಚಪೀಠದವರು ಬರೆದಂತಾಯ್ತು. ಸಂಪ್ರದಾಯ, ಪರಂಪರೆಗಳಿಗಿಂತ ನೊಂದವರಿಗೆ ನೆರವನ್ನು ನೀಡುವುದು ಬಹುಮುಖ್ಯವೆಂದು ಜನತೆಗೆ ತೋರಿಸಿಕೊಟ್ಟಂತಾಯಿತು. ಅಂದು ಸಂಗ್ರಹವಾದ ಒಟ್ಟು ಮೊತ್ತ 1, 92, 399–65 ಪೈಸೆ. ಇದೆಲ್ಲವನ್ನು ಯೋಜನಾ ಸಚಿವರಾಗಿದ್ದ ಟಿ.ಎಂ. ಮುಂಜುನಾಥ್‌ರವರ ಸಮ್ಮುಖದಲ್ಲಿ ಜಿಲ್ಲಾಧಿಕಾರಿ ಭಾಸ್ಕರ್ ಅವರು ಜಗದ್ಗುರುಗಳಿಂದ ಸ್ವೀಕರಿಸಿದರು. ಎಲ್ಲಾ ಧರ್ಮೀಯರೂ ಈ ಸಮಾರಂಭದಲ್ಲಿ ಉಭಯ ಜಗದ್ಗುರುಗಳಿಗೆ ಮಾಲಾರ್ಪಣೆ ಮಾಡಿ ಭಕ್ತಿ ಸಮರ್ಪಿಸಿದರು. ಪಂಚಪೀಠಗಳು ಯಾವತ್ತೂ ಜನರಿಂದ ದೂರ ಎನ್ನುವ ಮಾತನ್ನು ಉಭಯ ಜಗದ್ಗುರುಗಳು ಜನತೆಯ ಒಳಿತಿಗಾಗಿ ಭೂಕಂಪ ಪೀಡಿತರಿಗೆ ನಿಧಿ ಸಂಗ್ರಸಿ ಸುಳ್ಳಾಗಿಸಿದರು.

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರಿಂದ ನಗರದಲ್ಲಿ ಪಾದಯಾತ್ರೆ



ಮುಂದೆ ಭೂಕಂಪ ಪೀಡಿತ ಸಂತ್ರಸ್ತರಿಗೆ ನಿಧಿ ಸಂಗ್ರಹಿಸುವ ಈ ಕಾರ್ಯದಲ್ಲಿ ಎಲ್ಲಾ ಪೀಠಗಳೂ ಜೊತೆಗೂಡಿ 30–1–2001ರಲ್ಲಿ ಮಲೇಬೆನ್ನೂರಿನಲ್ಲಿ ನಡೆಯಬೇಕಿದ್ದ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವವನ್ನು ರದ್ದುಮಾಡಿ ಪಾದಯಾತ್ರೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾನವೀಯತೆಯನ್ನು ಮೆರೆದರು.

ದಾವಣಗೆರೆಯಲ್ಲಿ ಪಂಚಪೀಠಾಧೀಶ್ವರರು ಸೇರಿ ಭೂಕಂಪದಲ್ಲಿ ನೊಂದವರಿಗೆ ನೆರವಾಗಲು ಪಾದಯಾತ್ರೆಯನ್ನು ಕೈಗೊಂಡರು. ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಶ್ರೀ ಅಭಿನವ ರೇಣುಕ ಮಂದಿರವನ್ನು ಸೇರಿದರು. 1.60,000 ಲಕ್ಷ ರೂ ಹಣ ಸಂಗ್ರಹವಾಯಿತು.

ಚಿಕ್ಕಮಗಳೂರಿನ ಬಳಿ ಕಡೂರಿನಲ್ಲಿಯೂ ಪಂಚಪೀಠಾಧೀಶ್ವರರು ಒಟ್ಟಿಗೆ ಜೋಳಿಗೆ ಹಿಡಿದು

ಜನವಾಹಿನಿ, ದಾವಣಗೆರೆ



ಗುಜರಾತ್‌ನ ಭೂಕಂಪ ಸಂತ್ರಸ್ಥರು ಪರಿಹಾರ ನಿಧಿ ಸಂಗ್ರಹಣೆಗಾಗಿ ಪಂಚ ಪೀಠಾಧೀಶ್ವರರು ಇಂದು ನಗರದಲ್ಲಿ ಪಾದಯಾತ್ರೆ ನಡೆಸಿದರು. ಈ ಸಂದರ್ಭದಲ್ಲಿ ಲಕ್ಷ ರೂ. ಹಣ ಸಂಗ್ರಹವಾಯಿತು. ಪಾದಯಾತ್ರೆಯಲ್ಲಿ ನಗರದ ವರ್ತಕರು, ಅಖಿಲ ಭಾರತ ವೀರಶೈವ ಮಹಾಸಭಾದ ಪದಾಧಿಕಾರಿಗಳು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ನಿಧಿ ಸಂಗ್ರಹಿಸಿದ್ದು ಮಾನವೀಯ ತುಡಿತಕ್ಕೆ ಪಂಚಪೀಠಾಧೀಶ್ವರರು ಸ್ಪಂದಿಸುವ ಮೂಲಕ ಸಾಮಾಜಿಕ ಜವಾಬ್ದಾರಿಯನ್ನು ಮೆರೆದದ್ದು ನೆನೆಯುವಂಥದ್ದು. ಜಗದ್ಗುರುಗಳೈವರು ಜೊತೆಗೂಡಿ ನಿಧಿ ಸಂಗ್ರಹಣೆಗೆ ಹೊರಟಾಗ ಜನತೆ ಸ್ಪಂದಿಸಿ ತಮ್ಮ ನೆರವನ್ನು ನೀಡಿ ಕಡೂರಿನ ಇತಿಹಾಸದಲ್ಲೊಂದು ದಾಖಲೆ ನಿರ್ಮಿಸಿದರು.

ಸಂತ್ರಸ್ಥರಿಗೆ ಹಣ ಸಂಗ್ರಹಿಸುವ ಕಾರ್ಯ ಗದಗ್ ನಗರದಲ್ಲೂ ಮುಂದುವರೆಯಿತು. ಪತ್ರಿಕೆಗಳಲ್ಲಿ ಜಾಹಿರಾತುಗಳ ಮೂಲಕ ಚೆನ್ನಾಗಿ ಪ್ರಚಾರಮಾಡಿದ ಕಾರಣ ಜಗದ್ಗುರುಗಳೈವರ ಜೊತೆಯಲ್ಲಿ ನಗರದ ಎಲ್ಲಾ ಗಣ್ಯರು, ಪ್ರಮುಖರು ಹಿರಿಯರು ಕಿರಿಯರು ಭಾಗವಹಿಸಿ ನಿಧಿ ಸಂಗ್ರಹಿಸಿದ್ದು ಜಗದ್ಗುರುಗಳು ಧಾರ್ಮಿಕ ರಕ್ಷಣೆಗೆ ಮಾತ್ರವಲ್ಲ–ಸಾಮಾಜಿಕ ಘಟನೆಗಳಿಗೂ ತೀವ್ರವಾಗಿ ಸ್ಪಂದಿಸುವುದನ್ನು ಕಂಡು ಇಡೀ ಪಂಚಪೀಠಗಳ ಸಕಲ ಭಕ್ತರೂ ಹೆಮ್ಮೆಪಡುವಂತಾಯಿತು.

ಈ ನಿಧಿ ಸಂಗ್ರಹಣ ಕಾರ್ಯದಲ್ಲಿ ಭಾಗಿಗಳಾಗಿದ್ದ ಉಜ್ಜಯಿನಿ ಜಗದ್ಗುರುಗಳು ಶ್ರೀಶೈಲ ಜಗದ್ಗುರುಗಳು ಇಂದು ನಮ್ಮೊಡನಿಲ್ಲ. ನಮಗಾಗಿ ಅವರು ಮಾಡಿದ ಸತ್ಕಾರ್ಯಗಳು ನಮಗೆ ಮಾರ್ಗದರ್ಶಕವಾಗಿವೆ.

ಕರ್ನಾಟಕ ನೆರೆ ಸಂತ್ರಸ್ತರ ಪರಿಹಾರಕ್ಕಾಗಿ ಸ್ಪಂದಿಸಿದ ಕಾಶೀ ಜಗದ್ಗುರುಗಳು

ಜಗದ್ಗುರುಗಳು ಧರ್ಮ ಪ್ರಚಾರದ ಸಲುವಾಗಿ ಭಕ್ತರು ಕರೆದ ಊರುಗಳಿಗೆಲ್ಲಾ ಭೇಟಿ ನೀಡಿದ್ದಾರೆ. ದೊಡ್ಡ ಪಟ್ಟಣಗಳಿರಬಹುದು–ಸಣ್ಣ ಹಳ್ಳಿ ಇರಬಹುದು. ಹೋಗಿ ಆಶೀರ್ವಚನ ಮಾಡುವ ಸಂದರ್ಭಗಳಲ್ಲಿ ಹಳ್ಳಿಯ ಜನರ ಬದುಕನ್ನು ತೀರ ಹತ್ತಿರದಿಂದ ನೋಡುವ ಅವಕಾಶ ಅವರಿಗೆ ಸಿಗುತ್ತಿತ್ತು. ಬೇರೆ ಬೇರೆ ಸಂಕಷ್ಟಗಳಲ್ಲಿ ಸಿಲುಕಿದ ಕುಟುಂಬಗಳು ಜಗದ್ಗುರುಗಳನ್ನು ಭೇಟಿಯಾದಾಗ–ಅವರ ಕಷ್ಟಗಳಿಗೆ ಮರುಗಿ ತಮ್ಮ ಕೈಲಾದ ಸಹಾಯ ಮಾಡುತ್ತಿರುವುದನ್ನು ಕಂಡಾಗ ಮಾತೃಹೃದಯಿ ಜಗದ್ಗುರುಗಳ ಪರಿಚಯವಾಗುತ್ತಿತ್ತು. ಲೆಕ್ಕಕ್ಕೆ ಸಿಗದಷ್ಟು ಇಂತಹ ನೆರವನ್ನು ಕಾಶೀ ಜಗದ್ಗುರುಗಳು ಮಾಡಿದ್ದಾರೆ. ಕರುಣಾಮಯಿಗಳಾದ ಜಗದ್ಗುರುಗಳು 'ಮುಖ್ಯಮಂತ್ರಿಗಳ ಪ್ರಕೃತಿ ವಿಕೋಪ ಪರಿಹಾರ' ನಿಧಿಗೆ ಸಹಾಯ ಮಾಡಿ ಎಂದು ರಾಜ್ಯದ ಜನತೆಯಲ್ಲಿ ಮನವಿ ಮಾಡಿದ್ದರು.

ಬಾಗಲಕೋಟೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿದ್ದ ಹಿರೇಮಠದ ಉದ್ಘಾಟನೆಗೆ ಆಗಮಿಸಿದ್ದಾಗ ಮುಖ್ಯಮಂತ್ರಿಗಳ ಮನವಿಗೆ ಸ್ಪಂದಿಸಿ ಕಾಶೀಪೀಠ ಹಾಗೂ ಕೇದಾರಪೀಠ ವತಿಯಿಂದ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ 2ಲಕ್ಷರೂ.ಗಳನ್ನು (1 ಲಕ್ಷ ಕಾಶೀಪೀಠದ ವತಿಯಿಂದ ಮತ್ತು ಕೇದಾರಪೀಠದಿಂದ 1 ಲಕ್ಷ) ಚೆಕ್ ಮೂಲಕ ಜಿಲ್ಲಾಧಿಕಾರಿ ಡಿ.ಎಸ್. ವಿಶ್ವನಾಥ್ ಅವರಿಗೆ ಜಗದ್ಗುರುಗಳು ನೀಡಿದರು.

ಅಂದು ಮುಖ್ಯಮಂತ್ರಿಗಳು ಮಾಡಿದ ಮನವಿಗೆ ರಾಜ್ಯದ ಜನತೆ ಸ್ಪಂದಿಸಿ ಸಾವಿರ ಕೋಟಿ ರೂ ನಿಧಿಯನ್ನು ನೀಡಿರುವುದು ಇತರ ರಾಜ್ಯಗಳಿಗೆ ಅಚ್ಚರಿ ಮೂಡಿಸಿದೆ. ಜಗದ್ಗುರುಗಳು ನಿಧಿ ಸಮರ್ಪಿಸುವ ಕಾಲಕ್ಕೆ–ಈ ನಿಧಿ ಸಮರ್ಪಕವಾಗಿ ವಿತರಣೆಯಾಗಬೇಕು, ಸಂತ್ರಸ್ತರು ಮನಸ್ಥೈರ್ಯದಿಂದ ಬಾಳುವಂತಾಗಬೇಕು ಎಂದು ಹಾರೈಸಿ ಜಿಲ್ಲಾಧಿಕಾರಿಗಳಿಗೆ ಎಚ್ಚರಿಕೆಯ ಮಾತುಗಳನ್ನು ಹೇಳಿದರು.

ಪರಿಹಾರ ನಿಧಿಗೆ ಕಾಶಿ, ಕೇದಾರ ಪೀಠದಿಂದ 2 ಲಕ್ಷ ರೂ. ನೆರವು 24–10–2009



ಬಾಗಲಕೋಟೆ ಹಿರೇಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೆರೆಹಾವಳಿ ಪೀಡಿತ ಸಂತ್ರಸ್ತರಿಗೆ ವಾರಣಾಸಿ ಜಂಗಮವಾಡಿ ಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯರು ಎರಡು ಲಕ್ಷ ರೂ.ಗಳ ಚೆಕ್‌ನ್ನು ಜಿಲ್ಲಾಧಿಕಾರಿ ವಿಶ್ವನಾಥ ಅವರಿಗೆ ವಿತರಿಸಿದರು. ಶಾಸಕ ವೀರಣ್ಣ ಚರಂತಿಮಠ ಚಿತ್ರದಲ್ಲಿದ್ದಾರೆ.

ಬಾಗಲಕೋಟೆ, 23–ವೀರಶೈವ ಸಮುದಾಯದ ಪ್ರಮುಖ ಪೀಠಗಳಾದ ಕಾಶಿ ಹಾಗೂ ಕೇದಾರ ಪೀಠದಿಂದ ನೆರೆ ಸಂತ್ರಸ್ತರ ನೆರವಿಗಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 2 ಲಕ್ಷ ರೂ. ವಂತಿಕೆ ಸಂದಾಯ ವಾಗಿದೆ.

ನವನಗರದಲ್ಲಿಂದು ನಡೆದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಕಾಶಿ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ತಮ್ಮ ಪೀಠದಿಂದ ಲಕ್ಷ ರೂಪಾಯಿ, ಕೇದಾರ ಪೀಠದಿಂದ 1 ಲಕ್ಷ ರೂಪಾಯಿ ನೆರವಿನ ಡಿ.ಡಿ.ಯನ್ನು ಜಿಲ್ಲಾಧಿಕಾರಿ ಡಿ.ಎಸ್. ವಿಶ್ವನಾಥ ಅವರಿಗೆ ನೀಡಿ ಸಂತ್ರಸ್ತರ ನೆರವಿಗೆ ಹಣ ಬಳಸಲು ಸಲಹೆ ಮಾಡಿದರು. ಶಾಸಕ ವೀರಣ್ಣ ಚರಂತಿಮಠ ಉಪಸ್ಥಿತರಿದ್ದರು.

ಆಂಧ್ರಪ್ರದೇಶದ ಪ್ರವಾಹ ಸಂತ್ರಸ್ತರಿಗೆ ಕಾಶಿ ಜಗದ್ಗುರುಗಳ ನೆರವು–30–10–2009

ಕಾಶೀ ಪೀಠದಿಂದ 2 ಲಕ್ಷ ರೂ. ಪರಿಹಾರ

ವಿಜಯ ಕರ್ನಾಟಕ 30–10–09



ಹೈದ್ರಾಬಾದ್ ಸಮೀಪದ ಕೋಮುರವೆಲ್ಲಿ ಕ್ಷೇತ್ರದಲ್ಲಿ ಗುರುವಾರ ಆರಂಭವಾದ ವೀರಶೈವ ಆಗಮ ಪಾಠ ಶಾಲೆಯ ಉದ್ಘಾಟನಾ ಸಮಾರಂಭದಲ್ಲಿ ಕಾಶೀ ಜಗದ್ಗುರುಗಳು ಆಶೀರ್ವಚನ ನೀಡಿದರು.

'ಪ್ರಾಕೃತಿಕ ವಿಪತ್ತುಗಳು ಬಂದಾಗ ಪೀಡಿತ ಕುಟುಂಬಗಳಿಗೆ ಪ್ರತಿಯೊಬ್ಬರು ತಮ್ಮ ಶಕ್ತ್ಯಾನುಸಾರ ಸಹಾಯಹಸ್ತ ಚಾಚಬೇಕು.'
– ಕಾಶೀ ಶ್ರೀ

ಹೈದರಬಾದ್ ಸಮೀಪದ ಕೋಮುರವೆಲ್ಲಿಯಲ್ಲಿ ಆರಂಭವಾದ ವೀರಶೈವ ಆಗಮ ಪಾಠಶಾಲೆ ಉದ್ಘಾಟನಾ ಸಮಾರಂಭದಲ್ಲಿ ಜಗದ್ಗುರುಗಳು ಕರ್ನಾಟಕ ಜಿಲ್ಲೆಯ ಪ್ರವಾಹದಿಂದಾಗಿ ನರಳುತ್ತಿರುವ ಕುಟುಂಬಗಳಿಗೆ ಸರ್ವರೂ ನೆರವಿನ ಸಹಾಯಹಸ್ತ ಚಾಚಬೇಕು. ಇಂತಹ ಪ್ರಸಂಗಗಳು ಮನುಷ್ಯನ ಉದಾರತೆಯ ಪರೀಕ್ಷೆಯಾಗಿರುತ್ತವೆ. ಈ ಸಮಯಕ್ಕೆ ಕೈಕಟ್ಟಿ ಕುಳಿತುಕೊಳ್ಳುವುದು ಮಾನವೀಯತೆಯಲ್ಲ ಎಂದು ಹೇಳಿದರು. ಕಾಶೀ ಪೀಠದಿಂದ ನೆರೆ ಹಾವಳಿಗಾಗಿ 1 ಲಕ್ಷ ರೂ ಪರಿಹಾರವನ್ನು ಕೊಡುವುದಾಗಿ ಮತ್ತು ಅಲ್ಲಿಯ ಬಡ ವಿದ್ಯಾರ್ಥಿಗಳಿಗಾಗಿ 1 ಲಕ್ಷ ರೂ. ಸೇರಿದಂತೆ 2 ಲಕ್ಷ ರೂ – ನಿಧಿ ಘೋಷಿಸಿದರು. ಈ ಹಣವನ್ನು ಕಾಶೀಪೀಠದ ಶ್ರೀ ಜಗದ್ಗುರು ವಿಶ್ವಾರಾಧ್ಯ ಶಿಕ್ಷಣ ಸಮಿತಿಯ ಪರವಾಗಿ ನೀಡಲಾಗುವುದೆಂದು ತಿಳಿಸಿದರು.

16–6–2013 ಕೇದಾರದಲ್ಲಿ ಸಂಭವಿಸಿದ ಜಲಪ್ರಳಯ, ಭೂಕುಸಿತದಿಂದಾಗಿ ಇಡೀ ಕೇದಾರವೇ ಸ್ಮಶಾನದಂತಾಗಿ ಸಾವು–ನೋವುಗಳು ಅಪಾರವಾಗಿತ್ತು. ಆ ಘಟನೆ ನಡೆದಾಗ ಕಾಶೀ ಜಗದ್ಗುರುಗಳು ತಕ್ಷಣವೇ 2 ಲಕ್ಷ ರೂ. ಚೆಕ್ ಅನ್ನು ಅಲ್ಲಿನ ಸರಕಾರದ ಪರಿಹಾರ ನಿಧಿಗೆ ಕಳುಹಿಸಿಕೊಟ್ಟಿದ್ದನ್ನು ಇಲ್ಲಿ ನೆನೆಯಲೇಬೇಕಾಗಿದೆ.

ಹೀಗೆ ಜಗದ್ಗುರುಗಳು ಕರ್ನಾಟಕ, ಗುಜರಾತ್‌ಗಳಲ್ಲಿ ಸಂಭವಿಸಿದ ಪ್ರಾಕೃತಿಕ ವಿಪತ್ತುಗಳಿಗೆ ತಾವು ಸ್ಪಂದಿಸಿ–ನಿಧಿಗೆ ನೆರವು ನೀಡಿದ್ದಲ್ಲದೆ ತಮ್ಮೊಡನೆ ಇಡೀ ಸಮುದಾಯವೇ ಭಾಗಿಯಾಗುವಂತೆ ಉತ್ತೇಜನ ನೀಡಿ ಸಾಮಾಜಿಕ ಕಾರ್ಯಗಳಿಗೆ ಜನತೆ ಸ್ಪಂದಿಸುವಂತೆ ಮಾಡಿದರು. ಸಂಕಷ್ಟ ಕುಟುಂಬಗಳಿಗೆ ನಿಮ್ಮ ಹಿಂದೆ ನಾವಿದ್ದೇವೆಂಬ ಭರವಸೆ ಮೂಡಿಸಿದರು.

ಗೋವುಗಳ ರಕ್ಷಣೆ – ಜಗದ್ಗುರುಗಳು

'ಗೋಹತ್ಯೆ ನಿಷೇಧ ಶೀಘ್ರ ಜಾರಿ' – ಪ್ರಜಾವಾಣಿ ವಾರ್ತೆ 20–1–2010



ಬೈಲಹೊಂಗಲ ತಾಲ್ಲೂಕಿನ ಕಾದರವಳ್ಳಿಯಲ್ಲಿ ಮಂಗಳವಾರ ಜರುಗಿದ ಅದೃಶ್ಯ ಶಿವಯೋಗಿಗಳ 125ನೇ ಜಯಂತಿ, ಅಪ್ಪ ಶಿವಯೋಗೀಶ್ವರರ ಜನ್ಮ ಶತಮಾನೋತ್ಸವ ಸಮಾರಂಭ ಉದ್ದೇಶಿಸಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡಿದರು. ಲಕ್ಷ್ಮಣ ಸವದಿ, ಉಮೇಶ ಕತ್ತಿ, ಬಸವರಾಜ ಬೊಮ್ಮಾಯಿ, ಚಂದ್ರಶೇಖರ ಸ್ವಾಮೀಜಿ, ಪಾಲಾಕ್ಷ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ ಚಿತ್ರದಲ್ಲಿದ್ದಾರೆ.

20–1–10 ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾ॥ ಕಾದರವಳ್ಳಿಯಲ್ಲಿ ಅದೃಶ್ಯ ಶಿವಯೋಗಿಗಳ 125ನೇ ಜಯಂತಿ, ಅಪ್ಪ ಶಿವಯೋಗೀಶ್ವರರ ಜನ್ಮ ಶತಮಾನೋತ್ಸವದ ಸ್ಮಾರಕ ಭವನಕ್ಕೆ ಅಡಿಗಲ್ಲು ಹಾಕುವ ಸಮಾರಂಭದ ಸಂದರ್ಭದಲ್ಲಿ ಕರ್ನಾಟಕದಾದ್ಯಂತ ಗೋಹತ್ಯೆ ನಿಷೇಧದ ಕಾನೂನು ಜಾರಿಗೊಳಿಸಲು ಒಂದು ರೀತಿಯ ಚಳವಳಿ ಆರಂಭವಾಗಿತ್ತು. ಆದರೆ ಸರಕಾರ ಇತ್ತ ಇನ್ನೂ ಗಮನ ಹರಿಸಿರಲಿಲ್ಲ. ಈ

ಸಮಾರಂಭಕ್ಕೆ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರನ್ನು ಆಹ್ವಾನಿಸಲಾಗಿತ್ತು. ಸಾನ್ನಿಧ್ಯ ವಹಿಸಿದ್ದ ಕಾಶೀ ಜಗದ್ಗುರುಗಳು– ಕಾದರವಳ್ಳಿ ಜ್ಞಾನದಾಸೋಹ ಅನ್ನದಾಸೋಹ ಮಾಡುವುದು ಈ ಮಠದ ಸಂಪ್ರದಾಯವಾಗಿದೆ. ಭಕ್ತರೇ ಈ ಮಠದ ದೊಡ್ಡ ಆಸ್ತಿ ಎಂದು ಆರಂಭಿಸಿ ಮುಖ್ಯಮಂತ್ರಿಗಳಿಗೆ–ಗೋಹತ್ಯೆ ನಿಷಿದ್ಧ ಕಾನೂನು ಜಾರಿಗೊಳಿಸುವ ಮೂಲಕ ರಾಜ್ಯವನ್ನು ಗೋವುಗಳ ಹತ್ಯೆ ಮುಕ್ತರಾಜ್ಯವನ್ನಾಗಿಸಬೇಕು. ಹಸು ಎತ್ತು ಮುಂತಾದ ಪ್ರಾಣಿಗಳು ಮಾನವನ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅವುಗಳ ರಕ್ಷಣೆ ಮಾಡಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

ಅದಕ್ಕೆ ಉತ್ತರಿಸಿದ ಮುಖ್ಯಮಂತ್ರಿಗಳು–ಮುಂದಿನ ಮಾರ್ಚ್ ತಿಂಗಳಲ್ಲಿ ನಡೆಯಲಿರುವ ವಿಧಾನಮಂಡಲ ಅಧಿವೇಶನದಲ್ಲಿ ಗೋಹತ್ಯೆ ನಿಷೇಧಕ್ಕೆ ಅವಶ್ಯವಿರುವ ಕಾನೂನು ರೂಪಿಸಲಾಗುವುದು ಎಂದು ಜಗದ್ಗುರುಗಳಿಗೆ ಭರವಸೆ ನೀಡಿದರು.

ಈ ಸಮಾರಂಭದಲ್ಲಿ ರಾಜ್ಯ ಸರಕಾರದ ಅನೇಕ ಇನ್ನಿತರ ಸಚಿವರುಗಳು, ಶಾಸಕರುಗಳು ಉಪಸ್ಥಿತರಿದ್ದರು.

ತಾಯಿಯ ಹಾಲಿಲ್ಲದ ಎಳೆಯ ಮಗುವಿಗೆ ಹಸುವಿನ ಹಾಲನ್ನೇ ಉಣಿಸುವುದು ಆರೋಗ್ಯಕರ ಎಂಬ ನಂಬಿಕೆ ಶತಮಾನಗಳಷ್ಟು ಹಳೆಯದು. ಹಸುವನ್ನು ತಾಯಿಯಂತೆ ಪೂಜಿಸುವುದು ಅಷ್ಟೇ ಹಿಂದಿನದು. ಇಂದಿಗೂ ಭಾರತೀಯರ ಭಾವನೆಯಲ್ಲಿ ಹಸು–ತಾಯಿ ಸಮಾನ ಎಂಬ ಭಾವನೆಯೇ ಬೆಳೆದುಬಂದಿದೆ. ಹೀಗಿರುವಲ್ಲಿ ಗೋಹತ್ಯೆ ನಡೆದರೆ ಭಾರತೀಯರ ನಂಬಿಕೆಗೇ ಕೊಡಲಿಪೆಟ್ಟು ಬಿದ್ದಂತೆ. ದೇಶಾದ್ಯಂತ ಗೋವಂಶ ಹತ್ಯೆ ಮತ್ತು ಜಾನುವಾರು ವಧೆ ಪ್ರತಿಬಂಧಕ ಕಾನೂನು ಜಾರಿಗೆ ತರಲು ತೀವ್ರ ಹೋರಾಟ ನಡೆದಾಗ ಪತ್ರಕರ್ತರು ಜಗದ್ಗುರುಗಳು ಹೋದೆಡೆಯಲ್ಲೆಲ್ಲಾ ಈ ಬಗ್ಗೆ ಅವರ ಅಭಿಪ್ರಾಯವನ್ನು ಕೇಳತೊಡಗಿದರು. ಈ ಹಿಂದೆ ಎಂದರೆ 2–4–2003ರಲ್ಲಿ ಹೊನ್ನಕಿರಣಗಿ (ಗುಲ್ಬರ್ಗಾ ತಾ॥)ಯಲ್ಲಿ 105 ಗೋವುಗಳ ಪೂಜಾ ಕಾರ್ಯಕ್ರಮದಲ್ಲಿ ಜಗದ್ಗುರುಗಳು ಬಹಳ ಸಂತೋಷದಿಂದ ಭಾಗಿಯಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ವಿಜಯ ಕರ್ನಾಟಕ2–4–03



ಗುಲ್ಬರ್ಗಾ ತಾಲೂಕಿನ ಹೊನ್ನಕಿರಣಗಿಯಲ್ಲಿ ನಡೆದ 105 ಗೋ ಪೂಜೆ ಕಾರ್ಯಕ್ರಮದಲ್ಲಿ ಶಹಾಬಾದ್ ನಗರಸಭೆ ಸದಸ್ಯ ಮೃತ್ಯುಂಜಯ ಹಿರೇಮಠ ಅವರನ್ನು ಕಾಶೀ ಜಗದ್ಗುರುಗಳು ಸನ್ಮಾನಿಸಿದರು.

ಗೋಹತ್ಯೆ ನಿಷೇಧ ಪಕ್ಷಾತೀತವಾಗಿ ಸಮರ್ಥಿಸಿ : ಕಾಶೀ ಶ್ರೀಗಳು

ವಾರಣಾಸಿಯಲ್ಲಿ 1–3–10ಸ ಗೋರೊಬಾಳ ತಾಲ್ಲೂಕಿನ ರೌಡ ಕುಂದಿಗ್ರಾಮದಲ್ಲಿ 11–3–10, ಗುಲ್ಬರ್ಗದಲ್ಲಿ 13–3–10 ಹೀಗೆ ಅನೇಕ ಕಡೆಗಳಲ್ಲಿ ಪತ್ರಕರ್ತರಿಗೆ ಜಗದ್ಗುರುಗಳು ಉತ್ತರ ನೀಡಿದ್ದರಲ್ಲಿ ಕೆಲವು ಭಾಗಗಳನ್ನು ಅವು ಪ್ರಕಟಮಾಡಿದ್ದವು.

ಗೋಹತ್ಯೆ ನಿಷೇಧ ಕಾಯ್ದೆಯನ್ನು ರಾಷ್ಟ್ರೀಯ ಕಾರ್ಯವೆಂದು ಬೆಂಬಲಿಸಿ : ಕಾಶೀ ಜಗದ್ಗುರುಗಳು

ಈ ಬಗ್ಗೆ ಜಗದ್ಗುರುಗಳ ಒಟ್ಟು ಅಭಿಪ್ರಾಯಗಳನ್ನು ದಿನ ಪತ್ರಿಕೆಗಳು ಪೂರ್ಣರೂಪದಲ್ಲಿ ಪ್ರಕಟಿಸಿಲ್ಲ. ಗುರುಗಳು ಈ ವಿಚಾರವಾಗಿ ಬಹಳಷ್ಟು ದೀರ್ಘವಾಗಿ ಉತ್ತಮ ವಿಚಾರಗಳನ್ನು ಪ್ರಸ್ತಾಪಿಸಿದ್ದು, ಅವರ ಮಾತುಗಳು ಒಂದೆಡೆ ಸಿಗುವಂತೆ ಇಲ್ಲಿ ಮಾಡಲಾಗಿದೆ.

ಗೋ ಹತ್ಯೆ ನಿಷೇಧಕ್ಕೆ ಕಾಶೀ ಶ್ರೀಗಳ ಬೆಂಬಲ

ಕರ್ನಾಟಕ ಸರ್ಕಾರವು ಗೋವಂಶ ಹತ್ಯೆ ನಿಷೇಧ ಮತ್ತು ಜಾನುವಾರು ವಧೆ ಪ್ರತಿಬಂಧಕ ಕಾನೂನು ಜಾರಿಗೆ ತಂದು ಕರ್ನಾಟಕ ರಾಜ್ಯವನ್ನು ಗೋವಂಶ ಹತ್ಯೆ ಮುಕ್ತರಾಜ್ಯವನ್ನಾಗಿ ಮಾಡಬೇಕೆಂದು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಗೋವಂಶಾದಿ ಪಶು–ಪ್ರಾಣಿಗಳು ಮಾನವಕುಲದ ಆಧಾರ ಸ್ತಂಭಗಳು. ಪರಿಸರ ಸಮತೋಲನದ ಪ್ರಧಾನ ರಂಗಗಳು. ಗೋಮಾತೆಯಿಂದ ಮತ್ತು ಎಮ್ಮೆಗಳಿಂದ ಬಂದ ಹಾಲು ಮತ್ತು ಅದರಿಂದಾದ ಮೊಸರು, ಬೆಣ್ಣೆ, ಮಜ್ಜಿಗೆ, ತುಪ್ಪಗಳಿಂದ ಹಾಗೂ ದನಕರುಗಳು ಎತ್ತು, ಎಮ್ಮೆ, ಕೋಣ ಮುಂತಾದವುಗಳಿಂದ ಹೊಲ, ಗದ್ದೆ, ತೋಟಗಳನ್ನು ಉತ್ತಿ–ಬಿತ್ತಿ

ಅವುಗಳ ಗೊಬ್ಬರ ಗಂಜಲ ಬಳಸಿ ಬೇಸಾಯ ಮಾಡಿ ಉತ್ಪಾದಿಸಲ್ಪಟ್ಟ ದವಸ–ಧಾನ್ಯ, ಹಣ್ಣು–ಹಂಪಲುಗಳಿಂದ ಇಡೀ ಮಾನವ ಕುಲ ಜೀವಿಸುತ್ತಿದೆ. ಸ್ತ್ರೀ–ಪುರುಷರು ಅಬಾಲ ವೃದ್ಧರಾದಿಯಾಗಿ ಸರ್ವ ಮಾನವರ ನರ ನಾಡಿಯಲ್ಲಿಯೂ ಹರಿಯುತ್ತಿರುವ ರಕ್ತ ಈ ಹಸು (ಗೋಮಾತೆ), ಎತ್ತು (ಬಸವಣ್ಣ), ಎಮ್ಮೆ ಮುಂತಾದ ಪಶು–ಪ್ರಾಣಿಗಳ ತ್ಯಾಗ ಪರಿಶ್ರಮಗಳಿಂದಾದವುಗಳು ಎಂಬುದನ್ನು ಯಾರೂ ಮರೆಯಬಾರದು. ಆದ್ದರಿಂದ ಗೋರಕ್ಷಣೆ ನಮ್ಮೆಲ್ಲರ ಹೊಣೆ ಎಂದು ನಾವೆಲ್ಲರೂ ತಿಳಿದುಕೊಳ್ಳಬೇಕು ಎಂದು ಜಗದ್ಗುರುಗಳು ತಿಳಿಸಿದ್ದಾರೆ.

ಸರಕುಗಳ ಸಾಗಾಣಿಕೆಯಲ್ಲಿಯೂ ಗೋವಂಶಾದಿಗಳ ಪಾತ್ರ ಹಿರಿಯದು. ಆದ್ದರಿಂದ ಗೋವಂಶ ರಕ್ಷಣೆಗೆ ಸರ್ಕಾರ ಶೀಘ್ರವೇ ಕಾನೂನು ಜಾರಿ ಮಾಡಬೇಕು. ಈ ವಿಷಯದಲ್ಲಿ ಧರ್ಮ ಜಾತಿ ಭೇದ–ಭಾವಗಳನ್ನು ಬಿಟ್ಟು ಇದೊಂದು ರಾಷ್ಟ್ರಹಿತ ಕಾರ್ಯವೆಂದು ಪರಿಗಣಿಸಿ ಸರ್ವ ಧರ್ಮದ, ಸರ್ವ ಜಾತಿಗಳ ಮತ್ತು ಸರ್ವ ಪಕ್ಷಗಳ ಜನರು ಸರ್ಕಾರಕ್ಕೆ ಬೆಂಬಲ ನೀಡಬೇಕೆಂದು ಶ್ರೀ ಜಗದ್ಗುರುಗಳು ಸಾರ್ವಜನಿಕರಿಗೆ ತಿಳುವಳಿಕೆಯ ಕರೆ ನೀಡಿದ್ದಾರೆ.

ಈಗಾಗಲೇ 1964ರಲ್ಲಿ ಕರ್ನಾಟಕ ಸರ್ಕಾರವು ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ ಕಾನೂನನ್ನು ಜಾರಿಗೊಳಿಸಿದೆ. ಹಾಗೂ ಆಯುಧಪೂಜೆ ವಿಜಯದಶಮಿ ಸಂದರ್ಭಗಳಲ್ಲಿ ಪ್ರಾಣಿಬಲಿ ನೀಡದಂತೆ ಕ್ರಮ ಕೈಗೊಳ್ಳಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿವಿಧ ಇಲಾಖೆಗಳು ವಿವಿಧ ಸುತ್ತೋಲೆಗಳನ್ನು ಹೊರಡಿಸಿದ್ದರೂ ಮಾನವೋಪಯೋಗಿ ಪ್ರಾಣಿಗಳ ಮಾರಣಹೋಮವು ನಿರಂತರವಾಗಿ ನಡೆಯುತ್ತಿರುವುದು ಅಪಾಯಕಾರಿ ವಿಷಯ. ಒಂದು ವೇಳೆ ಈ ಪ್ರಾಣಿಬಲಿಯನ್ನು ಸರಕಾರ ಹಾಗೂ ಸಾರ್ವಜನಿಕರು ತಡೆಯದೆ ಹೋದರೆ ಪ್ರಕೃತಿಯ ಮೇಲೆ ವಿಪರೀತ ಪರಿಣಾಮವಾಗಿ ಮನುಕುಲವು ಸಂಕಷ್ಟದಲ್ಲಿ ಸಿಲುಕಿಕೊಳ್ಳುವಲ್ಲಿ ಸಂದೇಹವಿಲ್ಲ ಎಂದು ಜಗದ್ಗುರುಗಳು ಪ್ರತಿಪಾದಿಸಿದ್ದಾರೆ.

ಗೋವಂಶ ರಕ್ಷಣೆ ಮತ್ತು ಎತ್ತು, ಎಮ್ಮೆ ಮುಂತಾದ ಜಾನುವಾರು ಪರಿರಕ್ಷಣೆಯು ಭಾರತ ಸಂವಿಧಾನಬದ್ಧವೂ ಹಾಗೂ ನ್ಯಾಯಾಲಯದ ಸಮ್ಮತವೂ ಆಗಿದೆ. ನಮ್ಮ ಸಂವಿಧಾನದ ಕಲಂ 48, 48ಎ, 51ಎ, 51(ಜಿ) ಗಳಲ್ಲಿ ಈ ವಿಷಯದ ಉಲ್ಲೇಖವಾಗಿದೆ. ಅದರಂತೆ ಕರ್ನಾಟಕ ಪ್ರಾಣಿಬಲಿ ಪ್ರತಿಬಂಧಕ ಕಾಯ್ದೆ 1959, ವನ್ಯಪ್ರಾಣಿ ಸಂರಕ್ಷಣಾ ಕಾಯ್ದೆ–1972, ಪ್ರಾಣಿಸಂತಾನ ನಿಯಂತ್ರಣಾ ಕಾಯ್ದೆ–2001, ಒಂಟೆಹತ್ಯೆ ಪ್ರತಿಬಂಧಕ ಸುತ್ತೋಲೆ–1997–98, 1996ರ ಮಾರ್ಚ್ 25 ರ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ, ಗುಜರಾತ ಸರ್ಕಾರ 1994 ರಂದು ಜಾರಿಗೆ ತಂದಿದ್ದ ಸಂಪೂರ್ಣ ಗೋಹತ್ಯೆ ನಿಷೇಧ ಕಾಯ್ದೆಯನ್ನು ಎತ್ತಿಹಿಡಿದ 25–10–2005ರ ಸುಪ್ರೀಂ ಕೋರ್ಟ್‌ನ 6 ಜನ ನ್ಯಾಯಮೂರ್ತಿಗಳ ತೀರ್ಪು, ಇದೂ ಅಲ್ಲದೆ ಜಮ್ಮು ಮತ್ತು ಕಾಶ್ಮೀರ, ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಪಂಜಾಬ, ಹರಿಯಾಣ, ಹಿಮಾಚಲ ಪ್ರದೇಶ ಮತ್ತು ದೆಹಲಿ ರಾಜ್ಯಗಳು ಜಾರಿಗೆ ತಂದಿರುವ ಸಂಪೂರ್ಣ ಗೋವಂಶ ಹತ್ಯೆ ನಿಷೇಧ ಕಾಯ್ದೆಗಳು ಇದಕ್ಕೆ ಪೂರಕವಾಗಿವೆ ಎಂದು ಜಗದ್ಗುರುಗಳು ತಿಳಿಸಿದ್ದಾರೆ.

ಸಂವಿಧಾನ ಮತ್ತು ನ್ಯಾಯಾಲಯಗಳ ಸಮ್ಮತಿ ಇರುವ ಗೋವಂಶ ಹತ್ಯೆ ಮತ್ತು ಜಾನುವಾರು ವಧೆ ಪ್ರತಿಬಂಧಕ ಕಾನೂನು ಜಾರಿಗೆ ತರಲು ಕರ್ನಾಟಕ ಎಲ್ಲ ಸಂಪ್ರದಾಯಗಳ ಮಠಾಧೀಶರು, ಅಖಿಲ ಕರ್ನಾಟಕ ಪ್ರಾಣಿದಯಾ ಸಂಘ, ವಿವಿಧ ಜೈನ ಸಂಘಟನೆಗಳು, ವಿವಿಧ ಸಾಮಾಜಿಕ ಸಂಘಟನೆಗಳು, ವಿಶೇಷವಾಗಿ ಅಖಿಲ ಭಾರತ ವೀರಶೈವ ಮಹಾಸಭಾ ಎಲ್ಲಕ್ಕೂ ಮುಖ್ಯವಾಗಿ ಕರ್ನಾಟಕ ರಾಜ್ಯ ಯೂನಿಯನ್ ಮುಸ್ಲಿಂಲೀಗ್ ಸಂಘಟನೆಯು ಇದಕ್ಕೆ ತನ್ನ ಸಮರ್ಥನೆಯನ್ನು ಕೊಟ್ಟಿರುವುದು ಅತ್ಯಂತ ಹೆಮ್ಮೆಯ ವಿಷಯ. ಇದೂ ಅಲ್ಲದೆ ಮೊಗಲ್ ಹಾಗೂ ಮುಸ್ಲಿಂ ದೊರೆಗಳ ಆಡಳಿತದಲ್ಲಿ ಸಂಪೂರ್ಣ ಗೋವಂಶ ಹತ್ಯೆ ನಿಷೇಧ ಕಾನೂನು ಜಾರಿಯಲ್ಲಿತ್ತು ಎಂಬುದಕ್ಕೆ ಆಧಾರಗಳು ದೊರೆತಿವೆ. ಈ ಕಾನೂನು ಜಾರಿಗೆ ಪಂಚಪೀಠಗಳ ಪೀಠಾಚಾರ್ಯರು ಮತ್ತು ಶಾಖಾಮಠಗಳ ಸರ್ವ ಶಿವಾಚಾರ್ಯರು ಮತ್ತು ಪೀಠಗಳ ಎಲ್ಲ ಭಕ್ತರ ಬೆಂಬಲವಿದೆ ಎಂಬುದಾಗಿ ಜಗದ್ಗುರುಗಳು ತಿಳಿಸಿದ್ದಾರೆ.

ಆದಷ್ಟೂ ಬೇಗನೆ ಈ ಕುರಿತು ಪಂಚಪೀಠಗಳ ಒಕ್ಕೂಟದ ಸಭೆಯಲ್ಲಿ ಚರ್ಚಿಸಿ ಸರ್ಕಾರಕ್ಕೆ ಪ್ರತ್ಯೇಕವಾದ ಒಕ್ಕೂಟದ ಆದೇಶ ಪತ್ರವನ್ನು ಕಳುಹಿಸುವುದಾಗಿ ಶ್ರೀಗಳು ತಿಳಿಸಿದ್ದಾರೆ. ಆದಕಾರಣ ಸರ್ಕಾರ ಗೋವಂಶ ಹತ್ಯೆ ನಿಷೇಧ ಮತ್ತು ಜಾನುವಾರು ವಧೆ ಪ್ರತಿಬಂಧಕ ಕಾನೂನು ಜಾರಿಗೆ ತರಬೇಕು. ಇದಕ್ಕೆ ಎಲ್ಲ ಧರ್ಮಿಯರೂ ಇದೊಂದು ರಾಷ್ಟ್ರೀಯ ಕಾರ್ಯವೆಂದು ಪರಿಗಣಿಸಿ ಸರ್ಕಾರಕ್ಕೆ ಸಹಕರಿಸಬೇಕೆಂದು ಜಗದ್ಗುರುಗಳು ಹೇಳಿದ್ದಾರೆ.

ಇಂದು ಮನುಷ್ಯನು ನಿರೋಗಿಯಾಗಿ ದೀರ್ಘಕಾಲ ಬಾಳಬೇಕಾದರೆ ಸಸ್ಯಾಹಾರವೇ ಶ್ರೇಷ್ಠ ಎಂಬ ವಿಚಾರವು ವೈಜ್ಞಾನಿಕವೂ ಮತ್ತು ಸರ್ವ ಸಮ್ಮತವೂ ಆಗಿದೆ. ಕಾರಣ ಸರ್ವರೂ ಪ್ರಾಣಿದಯಾಪರರಾಗಿ, ಸಸ್ಯಾಹಾರಿಗಳಾಗಿ, ದೀರ್ಘಜೀವಿಗಳಾಗಬೇಕೆಂದು ಜಗದ್ಗುರುಗಳು ಕಿವಿಮಾತು ಹೇಳಿದ್ದಾರೆ.

ಸಮಾಜದ ಎಲ್ಲಾ ಸಂಘಟನೆಗಳಿಂದ ಗೋಹತ್ಯೆ ನಿಷೇಧ ಕಾಯ್ದೆಯನ್ನು ರಾಜ್ಯ ಸರಕಾರ ಅಂಗೀಕರಿಸಿದಾಗ ಎಲ್ಲೆಡೆ ವಿಜಯೋತ್ಸವವನ್ನು ಆಚರಿಸಿ ಪರಸ್ಪರ ಸಿಹಿ ಹಂಚಿಕೊಂಡರು. ಈ ಸಮಯದಲ್ಲಿ ಅಂದರೆ 25–3–2010ರಲ್ಲಿ ಜಗದ್ಗುರುಗಳು ಗುಳೇದಗುಡ್ಡದ ಅಮರೇಶ್ವರ

'ಅಮ್ಮ' ಸೇವಾ ಸಂಸ್ಥೆಯ ರಜತ ಮಹೋತ್ಸವ ಸಮಾರಂಭದಲ್ಲಿ ಕಾಶಿ ಜಗದ್ಗುರುಗಳ ಕರೆ

ಹಸುವನ್ನು ತಾಯಿಯಂತೆ ಗೌರವಿಸಿ – ಕನ್ನಡಪ್ರಭ ಜೂ. 18



ಗೋ ರಕ್ಷಣೆ ಮತ್ತು ಗುರುಕುಲ ಕಾರ್ಯಾಲಯವನ್ನು ಶಾಸಕ ದೊಡ್ಡನಗೌಡ ಪಾಟೀಲ ಉದ್ಘಾಟಿಸಿದರು.

ಮಠದಲ್ಲಿದ್ದರು. ಎಲ್ಲರ ಹೋರಾಟದ ಫಲ ಇಷ್ಟು ಬೇಗ ಪ್ರಾಪ್ತಿಯಾಗುವುದೆಂದು ಎಣಿಸಿರಲಿಲ್ಲ. ಪ್ರಜಾವಾಣಿ ಪ್ರತಿನಿಧಿಯು ಜಗದ್ಗುರುಗಳನ್ನು ಅಮರೇಶ್ವರ ಮಠದಲ್ಲಿ ಭೇಟಿಯಾಗಿ ಮಾತನಾಡುತ್ತಾ ಕರ್ನಾಟಕ ಸರಕಾರ ಗೋಹತ್ಯೆ ನಿಷೇಧಿಸುವ ವಿಧೇಯಕ ಮಂಡಿಸಿ ಅಂಗೀಕಾರ ಮಾಡಿರುವ ಕ್ರಮವನ್ನು ಪಂಚಪೀಠಾಧೀಶ್ವರರು ಸ್ವಾಗತಿಸುತ್ತೇವೆ ಎಂದು ಉಳಿದ ನಾಲ್ಕು ಜನ ಜಗದ್ಗುರುಗಳ ಪರವಾಗಿ ಹೇಳಿದರು. ತಾಯಿ ತನ್ನ ಮಗುವಿಗೆ ಆರು ತಿಂಗಳ ಕಾಲ ಹಾಲು ಕುಡಿಸುತ್ತಾಳೆ. ಗೋಮಾತೆ ಜೀವನಪರ್ಯಂತ ಅಬಾಲವೃದ್ಧಾದಿ ಎಲ್ಲರಿಗೂ ಹಾಲನ್ನು ಕೊಟ್ಟು ಪೋಷಿಸುವುದರಿಂದ ಈ ಕಾಯಿದೆಯನ್ನು ಸ್ವಾಗತಿಸುತ್ತೇವೆಂದರು. ಏಕೆಂದರೆ ತಾಯಿಗಿಂತ ಗೋಮಾತೆ ಸ್ಥಾನ ಅತ್ಯಂತ ಮಹತ್ವದ್ದು. ಇಂತಹ ಭಾವನೆಯಿಂದ ದೇಶದಲ್ಲಿ ಗೋಹತ್ಯೆ ನಡೆದರೆ ಅಪರಾಧವೇ ಸರಿ ಎಂದರು. ಮತ್ತೊಂದು ವಿಚಾರವನ್ನು ಪತ್ರಕರ್ತರಿಗೆ ತಿಳಿಸಿದರು–ಸಮಾಜದಲ್ಲಿ ಯಾವುದೇ ಒಂದು ಮಹಾಪರಾಧವನ್ನು ಮಾಡಿದವನಿಗೆ ಶಿಕ್ಷೆ ವಿಧಿಸುವುದು ಕಾನೂನು ಸಮ್ಮತವಾದುದು. ಒಂದು ಮಹಾಪರಾಧವನ್ನು ಮಾಡಿದವನಿಗೆ ಶಿಕ್ಷೆ ವಿಧಿಸುವುದು ಕಾನೂನು ಸಮ್ಮತವಾದದು. ಆದರೆ ಯಾವ ಅಪರಾಧವನ್ನೂ ಮಾಡದೆ ಮನುಷ್ಯನಿಗೆ ಸದಾ ಸಹಕಾರಿಯಾಗಿರುವ ಗೋ ಮುಂತಾದ ಪಶುಗಳನ್ನು ಹತ್ಯೆಗೈಯ್ಯುವುದು ಯಾವ ನ್ಯಾಯ? ಎಂದು ಕೇಳಿದರು.

ವೀರಶೈವ ಪಂಚಪೀಠಗಳು ಸಹ ಸಂಯುಕ್ತವಾಗಿ ಗೋಹತ್ಯೆ ನಿಷೇಧಕ್ಕೆ ಠರಾವು ಪಾಸ್ ಮಾಡಿ ಕರ್ನಾಟಕ ಸರಕಾರಕ್ಕೆ ಸಮರ್ಪಿಸಿದ್ದನ್ನು ಗಮನಿಸಿ ಸರಕಾರವು ಗೋಹತ್ಯೆ ನಿಷೇಧ ಮಸೂದೆಯನ್ನು ಮಂಡಿಸಿ ಅಂಗೀಕಾರ ಮಾಡಿರುವುದು ಸಂತೋಷ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

2010ರ ಜೂನ್ ತಿಂಗಳಲ್ಲಿ ಇಳಕಲ್ಲಿನ 'ಅಮ್ಮ' ಸಂಸ್ಥೆಯು ರಜತ ಮಹೋತ್ಸವ ಆಚರಿಸಿತು. 'ಅಮ್ಮ' ಸಂಸ್ಥೆ ಸಮಾಜ ಸೇವಾ ಕಾರ್ಯಗಳನ್ನು ಅನೇಕ ವರ್ಷಗಳಿಂದ ಮಾಡಿಕೊಂಡು ಬಂದಿದೆ. 'ಅಮ್ಮ' ಸಂಸ್ಥೆ ಮಾಡುವ ಕಾರ್ಯಕ್ರಮಗಳಿಗೆಲ್ಲಾ ಕಾಶೀ ಜಗದ್ಗುರುಗಳನ್ನು ಆಹ್ವಾನಿಸುತ್ತಿದ್ದರು. ಈ ಬಾರಿ ಈ ಸಂಸ್ಥೆ ರಜತ ಮಹೋತ್ಸವದ ಅಂಗವಾಗಿ ಗೋವರ್ಧನಗಿರಿ ವಿಶ್ವಸ್ಥ ಮಂಡಲಿ ಸಹಯೋಗದೊಂದಿಗೆ ಗೋರಕ್ಷಣೆ ಮತ್ತು ಗುರುಕುಲ ಕಾರ್ಯವನ್ನು ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಜಗದ್ಗುರುಗಳಿಂದ ಮಾಡಿಸಿದರು. ತಮ್ಮ ಆಶೀರ್ವಚನದಲ್ಲಿ ಮಾನವನಿಗೆ ಗೋವುಗಳು ಆರೋಗ್ಯ ಸುಧಾರಣೆಯ ಯಂತ್ರಗಳಿದ್ದಂತೆ. ಗೋವು ನಮ್ಮ ಮನೆಯ ದೇವತೆ. ಅವುಗಳ ಬಗ್ಗೆ ತಾತ್ಸಾರ ಬೇಡ. ಗೋಹತ್ಯೆ ಮಾಡಿದರೆ ಮನೆದೇವರನ್ನು ಅಥವಾ ತಾಯನ್ನು ಹತ್ಯೆ ಮಾಡಿದಂತೆ ಎಂದು ಉಪದೇಶ ನೀಡಿದರು. ಗೋಮಾತೆ ನೀಡುವ ಹಾಲು, ಮೊಸರು, ಬೆಣ್ಣೆ, ತುಪ್ಪ, ಗೋಮೂತ್ರ ಮತ್ತು ಸೆಗಣಿಯಿಂದ ಆರೋಗ್ಯ ಸುಧಾರಣೆ ಮಾಡಿಕೊಳ್ಳಬಹುದೆಂದರು.

ಇನ್ನೊಂದೆಡೆ ಗೋಶಾಲೆ ಉದ್ಘಾಟನೆ ಮಾಡಿದಾಗ ಗೋವಿನ ಬಗ್ಗೆ ಈ ಹಿಂದಿನ ದಿನಗಳ ಕಾರ್ಯಕ್ರಮಗಳಲ್ಲಿ ಹೇಳಿದ್ದನ್ನೇ ಇಲ್ಲೂ ತಿಳಿಸಿ ಗೋಮೂತ್ರ, ಸೆಗಣಿಯಲ್ಲಿ ಕ್ರಿಮಿನಾಶಕ ಶಕ್ತಿ ಇರುವುದರಿಂದ ರೈತರು ಇವುಗಳ ಮೂಲಕ ಹಣ್ಣು–ಹಂಪಲು, ಎಲ್ಲಾ ಬೆಳೆಗಳನ್ನು ಬೆಳೆಯಬಹುದು ಎಂದು ಹೇಳಿದರು. ಆಶ್ಚರ್ಯಕರ ವಿಚಾರವೊಂದನ್ನು ಸಭೆಯಲ್ಲಿ ಜಗದ್ಗುರುಗಳು ಹೇಳಿದರು–ಇತ್ತೀಚೆಗೆ ಜಪಾನ್‌ನಲ್ಲಿ ಉಂಟಾದ ಭೂಕಂಪದಲ್ಲಿ ಆದ ಅಣುಸ್ಫೋಟದಲ್ಲಿ ಅಣುಕಿರಣಗಳನ್ನು ತಡೆಯುವ ಸಾಮರ್ಥ್ಯ ಗೋಮೂತ್ರ, ಗೋಮಯದಲ್ಲಿದೆ ಎಂದು ವಿಜ್ಞಾನಿಗಳು ಒಪ್ಪಿರುವುದನ್ನು ತಿಳಿಸಿದರು. ಆದ್ದರಿಂದ ಗೋವಂಶ ರಕ್ಷಣೆ ಎಲ್ಲರ ಜವಾಬ್ದಾರಿಯಾಗಿದೆ–ಎಲ್ಲರೂ ಸಹಕರಿಸಬೇಕೆಂದು ಸೂಚಿಸಿದರು.

ಸಾಲೂರು ಹೀರೇಮಠದಲ್ಲಿ ನೂತನ ಗೋಶಾಲೆ

29–4–12 ಸಾಲೂರು ಹೀರೇಮಠದ ಸ್ವಾಮಿಗಳು ನೂತನ ಗೋಶಾಲೆ ಆರಂಭಿಸುತ್ತಿರುವುದನ್ನು ಪ್ರಶಂಶಿಸಿದ ಕಾಶೀ ಜಗದ್ಗುರುಗಳು ಹೆತ್ತ ತಾಯಿ ಸು. 6 ತಿಂಗಳು 1 ವರ್ಷ ಹಾಲುಣಿಸಿದರೆ ಗೋಮಾತೆ ನಮ್ಮ ಜೀವನಪೂರ್ತ ಹಾಲುಣಿಸುತ್ತಾಳೆ. ಗೋವುಗಳಿಂದಾಗುವ ಉಪಯೋಗಗಳನ್ನು ವಿವರಿಸಿ–ಗೋಹತ್ಯೆ ನಿಷೇಧ ಜಾರಿಗೆ ಬಂದು ಗೋವಂಶ ರಕ್ಷಣೆಯಲ್ಲಿ ಸರ್ವರೂ ಪಾಲುಗೊಳ್ಳಬೇಕೆಂದರು.

ಗೋಶಾಲೆ ಉದ್ಘಾಟನೆ ಹೊಸದಿಗಂತ 6–4–2011



18–2–13ರಲ್ಲಿ ಇಂಡಿ ತಾಲೂಕಿನ ಹಿರೇಬೇವೂರ ಗ್ರಾಮದ ರೈತ ಸಂಗನಗೌಡ ಬಿರಾದಾರ ಅವರು ತಮ್ಮ ತೋಟದಲ್ಲಿ ಒಂದು ವಿಶೇಷ ಕಾರ್ಯಕ್ರಮ ಏರ್ಪಡಿಸಿದ್ದರು. ಹೊಸ ಮನೆ ಗೃಹಪ್ರವೇಶದಲ್ಲಿ ಗೋದಾನ ಮಾಡುವಾಗ ಗೋವುಗಳು ಸಿಗದೆ ಬೆಳ್ಳಿ ಗೋವನ್ನು ಕೊಡುವ ರೂಢಿ ಬಂದಿದೆ. ಇನ್ನು ಯಾವುದಾದರೂ ಆಶ್ರಮಗಳಿಗೋ ಮಠಗಳಿಗೋ ಒಂದೆರಡು ಗೋದಾನ ಮಾಡುವುದನ್ನು ನೋಡಿದ್ದೇವೆ. ಗೋಶಾಲೆಗಳಲ್ಲಿರುವ ಗೋವುಗಳಲ್ಲಿ ಒಂದೋ ಎರಡೋ ಗೋವುಗಳನ್ನು ದತ್ತಕ ತೆಗೆದುಕೊಂಡು ಅವುಗಳ ಸಂಪೂರ್ಣ ಖರ್ಚನ್ನು ಗೋಶಾಲೆಯವರಿಗೆ ಕೊಡುವ ರೂಢಿಯು ನಡೆದುಬಂದಿದೆ. ಆದರೆ ಸಂಗನಗೌಡರು ಏರ್ಪಡಿಸಿದ್ದ ಕಾರ್ಯಕ್ರಮ ಇವೆಲ್ಲಕ್ಕೂ ಭಿನ್ನವಾದದ್ದು! ಗೌಡರು 109 ಗೋದಾನ ಮತ್ತು 101 ಜಂಗಮರ ಪಾದಪೂಜೆ ಕಾರ್ಯಕ್ರಮ. ಇದಕ್ಕೆ ಕಾಶೀ, ಶ್ರೀಶೈಲ, ಉಜ್ಜಯಿನಿ ಜಗದ್ಗುರುಗಳನ್ನು ಆಮಂತ್ರಿಸಿದ್ದರು. ಈ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಕಾಶೀ ಜಗದ್ಗುರು ರಾಮಾಯಣದ ಸೀತೆಯ ತಂದೆ ಜನಕ ಮಹಾರಾಜನ ಕುರಿತು ರಾಮಾಯಣದ ಕಾಲದಲ್ಲಿ 1000 ಗೋವುಗಳನ್ನು ದಾನ ಮಾಡಿದ್ದ ವಿಚಾರ ತಿಳಿಸಿ ಇಂದು ಗೋವುಗಳ ಸಂತತಿ ಕಡಿಮೆಯಾಗುತ್ತಿರುವ ಕಾಲದಲ್ಲಿ ಸಂಗನಗೌಡ ಬಿರಾದಾರ ಅವರು 109 ಗೋವುಗಳನ್ನು ದಾನಮಾಡಿ ಕಲಿಯುಗದ ಜನಕರಾಗಿದ್ದಾರೆ ಎಂದರು.

ಇಂತಹ ಸತ್ಕಾರ್ಯಗಳಲ್ಲಿ ಸಾನ್ನಿಧ್ಯ ವಹಿಸಲು ಜಗದ್ಗುರುಗಳಿಗೆ ಸಂತೋಷವಾಗುತ್ತದೆ; ಇಂತಹ ಕಾರ್ಯಗಳಲ್ಲಿ ಸಮಾಜದ ಏಳಿಗೆಯನ್ನು ಅವರು ಕಾಣುವರು.

ವಿಶ್ವ ಪರಿಸರ ದಿನಾಚರಣೆ–ಜಗದ್ಗುರುಗಳು

ಜಗದ್ಗುರುಗಳು ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸಲಿ ಆ ಬಗ್ಗೆ ಅವರು ಕೊಡುವ ಅಂಕಿ ಅಂಶಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಬಿಡುವಿಲ್ಲದ ಅವರ ಕಾರ್ಯಕ್ರಮಗಳ ನಡುವೆ ಯಾವಾಗ ಅವರು ಬೇರೆ ವಿಚಾರಗಳ ಬಗ್ಗೆ ತಿಳಿದುಕೊಳ್ಳುತ್ತಾರೊ, ನೋಡುತ್ತಾರೊ ತಿಳಿಯದು. ನೋಡಿದ, ಕೇಳಿದ ವಿಚಾರಗಳನ್ನು ನೆನಪಿಟ್ಟುಕೊಳ್ಳುವ ಅವರ ನೆನಪಿನ ಶಕ್ತಿ ನಿಜಕ್ಕೂ ಅಚ್ಚರಿ ಮೂಡಿಸುವಂತಿರುತ್ತದೆ. ಮರಗಳು ಒಂದು ಗಂಟೆಗೆ ಎಷ್ಟು ಕಾರ್ಬನ್ ಡೈ ಆಕ್ಸೈಡ್ ಅನ್ನು ಹೀರಿಕೊಳ್ಳುತ್ತದೆ, ಎಷ್ಟು ಆಕ್ಸಿಜನ್ ಕೊಡುತ್ತದೆ ಎಂದು ಮಾಹಿತಿ ಕೊಡು ವುದನ್ನು ನೋಡಿದರೆ ಇವರೇನು ವಿಜ್ಞಾನಿಗಳೋ ಎಂಬ ಅನುಮಾನ ಮೂಡುತ್ತದೆ.

28–6–2013

ಗುಲಬರ್ಗಾ ನಗರದ ಹೊರ ವಲಯದ ಸುಲ್ತಾನಪುರ ಗ್ರಾಮದಲ್ಲಿ ಶರಣಗೌಡ ಪಾಟೀಲ್ ಮದರಕ್ಕಿ ಅವರು ಕಾಶೀಪೀಠಕ್ಕೆ ಭೂದಾನ ಮಾಡಿದ್ದರು. ಜಗದ್ಗುರುಗಳಿಗೆ ಈ ಜಾಗದಲ್ಲಿ ಜನರ ಮಾನಸಿಕ, ದೈಹಿಕ ಸ್ವಾಸ್ಥ್ಯ ವೃದ್ಧಿಗಾಗಿ ನೈಸರ್ಗಿಕ ಚಿಕಿತ್ಸಾ ಕೇಂದ್ರ, ಯೋಗ, ವೈದಿಕ ಪಾಠಶಾಲೆ ಮತ್ತು ಜ್ಯೋತಿಷ್ಯ, ಗುರುಕುಲ ವಸತಿಶಾಲೆ ಮುಂತಾದ ಶೈಕ್ಷಣಿಕ ಕೇಂದ್ರಗಳನ್ನು ತೆರೆಯುವ ಸದಿಚ್ಛೆಯನ್ನು ವ್ಯಕ್ತಪಡಿಸಿದ್ದರು. 28–6–2003ರಲ್ಲಿ ಪರಿಸರ ದಿನಾಚರಣೆ ಅಂಗವಾಗಿ ವೃಕ್ಷಾರೋಹಣವನ್ನು ಕಾಶೀ ಜಗದ್ಗುರುಗಳು ಮಾಡಿ ಅಂದಿನ ಆಶೀರ್ವಚನದಲ್ಲಿ

ಮನುಷ್ಯನ ಬದುಕಿಗೆ ನೀರು –ಆಹಾರಕ್ಕಿಂತ ಶುದ್ಧ ಗಾಳಿ ಮುಖ್ಯ

ಸಂಯುಕ್ತ ಕರ್ನಾಟಕ 29–6–2003



ಕಲಬುರ್ಗಿ ತಾಲೂಕಿನ ತಾಜ ಸುಲ್ತಾನಪುರ ಗ್ರಾಮದಲ್ಲಿ ವೃಕ್ಷಾರೋಹಣ ಮಾಡಿ ಪರಿಸರ ಸಂರಕ್ಷಣೆಗೆ ಕರೆ ನೀಡಿದ ಕಾಶೀ ಜಗದ್ಗುರುಗಳಾದ ಡಾ. ಚಂದ್ರಶೇಖರ ಶಿವಾಚಾರ್ಯರಿಗೆ ಶಖಾಪುರ ವಿಶ್ವಾರಾಧ್ಯ ತಪೋವನ ಮಠದ ಶ್ರೀ ಸಿದ್ಧರಾಮ ಶಿವಾಚಾರ್ಯರು ಮಾಲಾರ್ಪಣೆ ಮಾಡಿದರು.

ವೈಜ್ಞಾನಿಕ ಮಾಹಿತಿಗಳನ್ನು ನೀಡಿದರು. ಒಂದು ವೃಕ್ಷವು ಒಂದು ಗಂಟೆಗೆ 250 ಕೆ.ಜಿ. ಕಾರ್ಬನ್ ಡೈ ಆಕ್ಸೈಡ್ ಹೀರಿಕೊಂಡು 170 ಕೆ.ಜಿ. ಶುದ್ಧವಾದ ಆಕ್ಸಿಜನ್ ನೀಡುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಾರೆಂದರು.

ಉಚಿತವಾಗಿ ಪ್ರಕೃತಿದತ್ತವಾಗಿ ಸಿಗುತ್ತಿರುವ ಆಕ್ಸಿಜನ್ ಬೆಲೆ ಗೊತ್ತಾಗಬೇಕಿದ್ದರೆ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಕೊಡುವ ಆಕ್ಸಿಜನ್ ಬೆಲೆ ಡಾಕ್ಟರ್ ಕೊಡುವ ಬಿಲ್‌ನಿಂದ ತಿಳಿಯುತ್ತದೆ ಎಂದು ಹೇಳಿ ಅದೇ ಗಿಡ ಮರಗಳು ಕೊನೆಯವರೆವಿಗೂ ಏನನ್ನೂ ಬಯಸದೆ ಶುದ್ಧ ಗಾಳಿಯನ್ನು ಕೊಡುತ್ತದೆ. ಇಂದಿನ ದಿನಗಳಲ್ಲಿ ಗಿಡ ಮರಗಳನ್ನು ಬೆಳೆಸುವುದು ಅವಶ್ಯಕವಾಗಿದೆ. ಮನುಷ್ಯನ ಬದುಕಿಗೆ ಆಹಾರ, ನೀರುಗಳಿಗಿಂತ ಗಾಳಿ, ಶುದ್ಧವಾದ ಗಾಳಿ ಮುಖ್ಯವಾಗಿದೆ ಎಂದು ಜನರ ಮನಸ್ಸು ಮುಟ್ಟುವಂತೆ ಮರಗಳ ಅವಶ್ಯಕತೆಯನ್ನು ತಿಳಿಸಿದರು.



14–7–2009 ಕಲಬುರ್ಗಿ ಶೇಖರೋಜಾದ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಸಸಿ ನೆಟ್ಟು ಪರಿಸರ ಸಂರಕ್ಷಣಾ ಜಾಥಾ ಉದ್ಘಾಟಿಸಿದರು. ಕಡಗಂಚಿ ವೀರಭದ್ರ ಶಿವಾಚಾರ್ಯರು, ಶಿವಶರಣಪ್ಪ ಸರಸಂಬಾ ಮತ್ತಿತರರು ಉಪಸ್ಥಿತರಿದ್ದರು.

27–1–2006

ಕಂಪ್ಲಿಯಲ್ಲಿ ಏರ್ಪಡಿಸಲಾಗಿದ್ದ ಆಶೀರ್ವಚನದ ಸಂದರ್ಭದಲ್ಲಿ ಪ್ರಕೃತಿ, ಪರಿಸರದ ಬಗ್ಗೆ ತಿಳುವಳಿಕೆ ನೀಡಿದರು. ಇತ್ತೀಚೆಗೆ ಪ್ರಕೃತಿ ನಿಯಮ ಮೀರಿ ಬದುಕುತ್ತಿರುವುದರಿಂದ ಮನಸ್ಸಿಗೆ ಶಾಂತಿ ಇಲ್ಲವಾಗಿದೆ. ಮನಸ್ಸನ್ನು ದೇವರಿಗಾಗಿ, ದೇಶಕ್ಕಾಗಿ ಸಮರ್ಪಿಸಿಕೊಂಡಾಗ ನೆಮ್ಮದಿ ಸಿಗುವುದು. ವೃಕ್ಷಪೂಜೆಯಲ್ಲಿ ವೈಜ್ಞಾನಿಕತೆ ಇರುವುದನ್ನು ತಿಳಿಸಿ ಬ್ರಾಹ್ಮೀಮುಹೂರ್ತದಲ್ಲಿ ಮರಗಳು ಬೀಸುವ ಗಾಳಿಯಲ್ಲಿ ಹೆಚ್ಚು ರೋಗ ನಿರೋಧಕ ಶಕ್ತಿ ಇರುತ್ತದೆ. ವೃಕ್ಷ ಪ್ರದಕ್ಷಿಣೆ ಮಾಡುವುದರಿಂದ ಮನುಷ್ಯರು ನಿರೋಗಿಗಳಾಗುತ್ತಾರೆ ಪ್ರಕೃತಿ ಸಂರಕ್ಷಣೆ ಅತ್ಯವಶ್ಯಕವಾಗಿದೆ. ಅವರ ರಕ್ಷಣೆ ಇಲ್ಲದಿದ್ದರೆ ಜಗತ್ತಿನ ಅವನತಿ ನಿಶ್ಚಿತ ಎಂದರು.

ಚಿಕ್ಕವರಿದ್ದಾಗಿನ ಅನುಭವವನ್ನು ಗುರುಗಳು ಹೀಗೆ ಹೇಳುವರು : ವಿಜಯದಶಮಿಯಂದು ಬನ್ನಿ ಪತ್ರೆಯನ್ನು ಎದುರಿಗೆ ಯಾರು ಸಿಕ್ಕರೂ ಕೊಡುತ್ತಿದ್ದೆವು. ದೊಡ್ಡವರಾದರೆ ಕಾಲಿಗೆ ನಮಸ್ಕರಿಸಿ 'ಶಮೀ ಶಮಯತೇ ಪಾಪಂ ಶಮೀ ಶತ್ರುವಿನಾಶಿನಿ' ಎಂದು ಪಠಪಠನೆ ಹೇಳಿ ಕೊಡುತ್ತಿದ್ದೆವು. ಅದನ್ನು ಯಾರು ಕಲಿಸಿದರೋ ಗೊತ್ತಿಲ್ಲ. ನಮಗೆ ಅದರ ಅರ್ಥ ತಿಳಿದಿರಲಿಲ್ಲ, ಹೇಳಬೇಕು ಹೇಳುತ್ತಿದ್ದೆವು.

ಇದೇ ಬನ್ನಿಪತ್ರೆಯ ವಿಶೇಷವೆಂದರೆ, ವಾರಣಾಸಿಯಲ್ಲಿ ವಿಜಯದಶಮಿಯ ದಿನದಂದು ಸಾವಿರಾರು ಭಕ್ತರು ಮಠಕ್ಕೆ ಆಗಮಿಸಿ ಗುರುಗಳಿಗೆ ಬನ್ನಿಪತ್ರೆ ಕೊಟ್ಟು ಅವರಿಂದ ಆಶೀರ್ವಾದ ಪಡೆಯುತ್ತಾರೆ. ವಾರಣಾಸಿಯ ಬಹುತೇಕ ಜನರು ಅಂದು ಮಠಕ್ಕೆ ಆಗಮಿಸಿ

ಜಗದ್ಗುರುಗಳಿಂದ ಆಶೀರ್ವಾದ ಪಡೆಯುತ್ತಾರೆ. ಅಂದು ಶಮೀಪೂಜೆ ಸಂದರ್ಭದಲ್ಲಿ ಅವರ ಆಶೀರ್ವಚನದಲ್ಲಿ ಬನ್ನಿಪತ್ರೆ, ಪರಿಸರ ಮತ್ತು ಮರಗಳ ಸಂರಕ್ಷಣೆ ಹೀಗೆ ಮಹತ್ವದ ವಿಚಾರಗಳನ್ನು ವಿವರವಾಗಿ ತಿಳಿಸಿದರು.

ಶಿವನ ಪೂಜೆಗೆ ಬಿಲ್ವಪತ್ರೆ ಉಪಯೋಗಿಸುವಂತೆ ದೇವೀಪೂಜೆಗೆ ಶಮೀಪತ್ರೆ ಉಪಯೋಗಿಸುತ್ತೇವೆ. 'ಸಮೀ ಶಮಯತೇ ಪಾಪಂ ಶಮೀ ಶತ್ರುವಿನಾಶಿನಿ' ಎಂಬ ಉಕ್ತಿಯಂತೆ ಶಮೀ ದಳದಿಂದ (ಬನ್ನೀಪತ್ರೆ) ದೇವಿಯನ್ನು ಆರಾಧಿಸುವುದರಿಂದ ಸರ್ವ ಪಾಪಗಳು ನಾಶವಾಗುತ್ತವೆ. ಆತನನ್ನು ಯಾರೂ ಶತ್ರುಭಾವದಿಂದ ನೋಡುವುದಿಲ್ಲ. ಇಂದು ಪರಸ್ಪರರಲ್ಲಿರುವ ಶತ್ರುತ್ವ ಭಾವವೇ ಸರ್ವ ಅಶಾಂತಿಗೆ ಮೂಲವಾಗಿದೆ. ಹಾಗಾಗಿ ವಿಜಯದಶಮಿ ದಿನದಂದು ಹಿರಿಯರಿಗೆ ಬನ್ನಿ ಬಂಗಾರ ಕೊಟ್ಟು ಆಶೀರ್ವಾದ ಪಡೆಯುವುದರ ಜೊತೆಗೆ ಸ್ನೇಹಿತರು ಪರಸ್ಪರ ಪತ್ರೆ ವಿನಿಮಯ ಮಾಡಿಕೊಳ್ಳುವುದರ ಮೂಲಕ 'ನಾವು ನೀವು ಬಂಗಾರದ ಹಾಗೆ ಇರೋಣ' ಎಂದು ಹೇಳುವ ರೂಢಿಯಿದೆ ಇದರಿಂದ ಶತ್ರುತ್ವ ನಾಶವಾಗಿ ಮಿತ್ರತ್ವ ಮೂಡಿಸುತ್ತದೆ.

ಶಮೀಪೂಜೆ ಪರಿಸರ ಪ್ರೇಮ

ವಿಜಯ ಕರ್ನಾಟಕ 21-10-2009



ವಿಜಯದಶಮಿ ಅಂಗವಾಗಿ ಕಾಶೀ ಜಂಗಮವಾಡಿ ಮಠದಲ್ಲಿ ಭಕ್ತರು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಬನ್ನಿ ಕೊಡುವ ಮೂಲಕ ಆಶೀರ್ವಾದ ಪಡೆದರು.

ಶಮೀಪೂಜೆ ಪರಿಸರದ ಸಂಕೇತವಾಗಿದೆ. ಹಿಂದೂ ಸಂಸ್ಕೃತಿಯಲ್ಲಿ ಆಚರಿಸುವ ಎಲ್ಲಾ ಹಬ್ಬ ಹರಿದಿನಗಳಲ್ಲಿ ವಿಜ್ಞಾನ ಅಡಗಿದೆ ಎಂದು ಗುರುಗಳು ಪ್ರತಿಪಾದಿಸುತ್ತಾ, ಮುಂದುವರೆದು, ಬದುಕಿಗೆ ಗಿಡಮರಗಳ ಪಾತ್ರ ಎಷ್ಟು ಹಿರಿದಾದುದು ಎಂದು ವಿಜ್ಞಾನಿಗಳು ಎಚ್ಚರಿಸುತ್ತಲೇ ಇದ್ದಾರೆ. ಆದರೆ ನಮ್ಮ ದೇಶದ ಋಷಿಮುನಿಗಳು ಧರ್ಮಾಚರಣೆ ಮೂಲಕ ಮರಗಳಲ್ಲಿ ದೇವತಾ ಭಾವನೆ ನಿರ್ಮಿಸಿ ಪರಿಸರ ಸಂರಕ್ಷಣೆಯ ತಿಳಿವಳಿಕೆಯನ್ನು ಮೊದಲಿಂದಲೂ ಹೇಳುತ್ತಾ ಬಂದಿದ್ದಾರೆ. ಬಿಲ್ವ, ಬೇವು, ಆಲ, ಬನ್ನಿ, ತುಳಸಿ ಮುಂತಾದ ಗಿಡಮರಗಳ ಪೂಜೆಯಿಂದ ಪರಿಸರ ಸಂರಕ್ಷಣೆಯ ಜೊತೆಗೆ ವೈಜ್ಞಾನಿಕವಾಗಿ ಹೇಳಬೇಕೆಂದರೆ ಒಂದು ಗಿಡ ಪ್ರತಿದಿನ 200 ಜನರಿಗೆ ಬೇಕಾಗುವಷ್ಟು ಪ್ರಾಣವಾಯು ಒದಗಿಸುತ್ತದೆ. ಆ ಗಿಡವನ್ನು ನಾವು ಸರಿಯಾಗಿ ಜೋಪಾನ ಮಾಡಿದರೆ ಅದು ನಮಗೆ 150-200 ವರ್ಷಗಳ ಕಾಲ ಪ್ರಾಣವಾಯು ಕೊಡುತ್ತದೆ ಎಂಬುದು ವಿಜ್ಞಾನಿಗಳ ಸಂಶೋಧನೆಯಿಂದ ಸಾಬೀತಾಗಿದೆ. ಆದ್ದರಿಂದ ವಿಜಯದಶಮಿಯಂತಹ ಹಬ್ಬಗಳಿಂದ ಪ್ರತಿಯೊಬ್ಬರೂ ಪರಿಸರ ಪ್ರೇಮ ಬೆಳಸಿಕೊಳ್ಳಬೇಕೆಂದು ಮನೋಜ್ಞವಾಗಿ ತಿಳಿಯುವಂತೆ ಹೇಳಿರುವ ಶ್ರೀಗಳವರ ಈ ವಿಚಾರಗಳು ಸರ್ವಕಾಲಕ್ಕೂ ಪ್ರಸ್ತುತವಿರುತ್ತದೆ.

ಪರಿಸರಪ್ರೀತಿ ಪೂಜೆಗೆ ಸಮಾನ : ಕಾಶಿ ಶ್ರೀಗಳು

ವಿಜಯವಾಣಿ 8-7-2012



ಗದಗನಲ್ಲಿ ಬಿಎಸ್ಆರ್ ಕಾಂಗ್ರೆಸ್ ಮುಖಂಡ ಅನಿಲ ಮೆಣಸಿನಕಾಯಿ ನೀಡಿದ ಸಸಿಯನ್ನು ಕಾಶೀ ಶ್ರೀಗಳು ವೈದಿಕ ಪಾಠಶಾಲೆಯಲ್ಲಿ ನೆಡಲು ಸಿದ್ಧಲಿಂಗಪ್ಪ ಚಳಗೇರಿ ಅವರಿಗೆ ವಿತರಿಸಿದರು.

ಗದಗ್‌ನಲ್ಲಿರುವ ಶಿವಬಸವ ಜನಕಲ್ಯಾಣ ಸಂಸ್ಥೆಯವರು ಪರಿಸರ ದಿನಾಚರಣೆ ಸಲುವಾಗಿ ಸಸಿಗಳನ್ನು ವಿತರಿಸುವ ಕಾರ್ಯಕ್ರಮವನ್ನು ಕಾಶೀ ಜಗದ್ಗುರುಗಳವರ ಆಶೀರ್ವಚನದ ಕಾರ್ಯಕ್ರಮದಲ್ಲಿ ಹಮ್ಮಿಕೊಂಡಿದ್ದರು. ಕಾಶೀ ಪೀಠದ ವೈದಿಕ ಪಾಠಶಾಲೆಯಲ್ಲಿ ಸಸಿ ನೆಡಲು ಗಿಡಗಳನ್ನು ಕಾಂಗ್ರೆಸ್ ಪಕ್ಷದ ಮುಖಂಡ ಅನಿಲ ಮೆಣಸಿನಕಾಯಿ ಅವರು ವಿತರಿಸಿದ್ದನ್ನು ಕಾಶೀ ಜಗದ್ಗುರುಗಳು ಶ್ಲಾಘಿಸಿ-ಮನುಷ್ಯನ ಬದುಕಿಗೆ ಅನ್ನ ನೀರುಗಳಿಗಿಂತ ಶುದ್ಧ ಹವೆ ಅವಶ್ಯಕವಾಗಿದ್ದು-ಇದು ಗಿಡ ಮರಗಳಿಂದಲೇ ದೊರೆಯುವುದು. ಪ್ರಕೃತಿ ಪರಮಾತ್ಮನ ವ್ಯಕ್ತರೂಪ. ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ, ಸೂರ್ಯ, ಚಂದ್ರ ನಮ್ಮಲ್ಲಿರುವ ಆತ್ಮ-ಈ ರೂಪಗಳಲ್ಲಿ ಪರಮಾತ್ಮನು ಪ್ರತ್ಯಕ್ಷ ತೋರುತ್ತಿದ್ದಾನೆ. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಬರುವ 'ಶಿವಜಗನ್ಮಯ ಸ್ಥಲ'ದಲ್ಲಿ ಈ ವಿಷಯ

ಪ್ರತಿಪಾದಿತವಾಗಿದೆ. 'ಎತ್ತತ್ತ ನೋಡಿದರತ್ತತ್ತ ನೀನೇ ದೇವಾ' ಎಂಬ ವಚನದಲ್ಲಿ ಬಸವಣ್ಣನವರು ಪರಿಸರವನ್ನು ಪರಮಾತ್ಮನ ರೂಪವೆಂದೇ ವರ್ಣಿಸಿದ್ದಾರೆ ಎಂದರು.

ಮಾನವನ ಬದುಕಿಗೆ ಪರಿಸರ ಅವಶ್ಯ : ಕಾಶೀ ಸ್ವಾಮೀಜಿ
ಪ್ರಜಾವಾಣಿ ವಾರ್ತೆ 8-7-2012

ಒಂದು ಗಿಡ ಹತ್ತು ಮಕ್ಕಳಿಗೆ ಸಮಾನ. ಒಂದು ಗಿಡವನ್ನು ನೆಟ್ಟು ಬೆಳಸಿದರೆ ಹತ್ತು ಮಕ್ಕಳಿಗೆ ಜನ್ಮ ಕೊಟ್ಟಂತೆ. ಒಂದು ಗಿಡ ಕಡಿದರೆ ಹತ್ತು ಮಕ್ಕಳನ್ನು ಕೊಂದ ದೋಷ ದೊರೆಯುವುದು. ಪರಿಸರವನ್ನು ಸಂರಕ್ಷಿಸುವುದು ಸರ್ವರ ಕರ್ತವ್ಯವಾಗಿದೆ. ಪರಿಸರ ಉಳಿದರೆ ನಾವು ಉಳಿಯಲು ಸಾಧ್ಯ.

ಪರಿಸರ ಸಂರಕ್ಷಣೆಯಿಂದ ಮಾನವನ ಬದುಕು : ಕಾಶೀ ಶ್ರೀಗಳು
8-7-2012

ಮಾತೃದೇವೋಭವ ಅನ್ನುವ ಹಾಗೆ 'ವೃಕ್ಷದೇವೋಭವ' ಎನ್ನುವ ಸಮಯ ಬಂದೊದಗಿದೆ. ವೃಕ್ಷಗಳನ್ನು ದೇವರಂತೆ ಗೌರವಿಸಬೇಕು. ಪರಿಸರದಲ್ಲಿರುವ ಎಲ್ಲ ಗಿಡ ಮರಗಳು ದೇವರ ಸ್ವರೂಪ ಎಂಬುದನ್ನು ನಾವೆಂದಿಗೂ ಮರೆಯಬಾರದೆಂದರು.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಮೇಲಿರುವ ಜವಾಬ್ದಾರಿ : ಕಾಶೀ ಶ್ರೀಗಳು
8-7-2012

ಗುಲ್ಬರ್ಗಾದಲ್ಲಿ ಕಾಶೀ ಜಗದ್ಗುರುಗಳವರ ಆಷಾಢ ಮಾಸದ ಆಧ್ಯಾತ್ಮಿಕ ಧರ್ಮ ಸಭೆಯಲ್ಲಿ ಬೀದರ್ ಪರಿಸರ ವಾಹಿನಿ ಅಧ್ಯಕ್ಷ ಶೈಲೇಂದ್ರ ಕವಡೆಯವರ ನೇತೃತ್ವದಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಜಗದ್ಗುರುಗಳು-ಒಂದು ಮರ ದಿನಾಲೂ 200 ಜನಕ್ಕೆ ಬೇಕಾಗುವಷ್ಟು ಪ್ರಾಣವಾಯುವನ್ನು ಹೊರಹಾಕುತ್ತದೆ. ಅವುಗಳನ್ನು ಯಾರೂ ನಾಶ ಮಾಡದಿದ್ದರೆ ಅದು 200 ವರ್ಷಗಳವರೆಗೆ ಪ್ರಾಣವಾಯುವನ್ನು ಕೊಡುತ್ತಲೇ ಇರುತ್ತದೆ. ಹಾಗೆ ಎಲ್ಲಾ ಜೀವರಾಶಿಗಳಿಗೆ ಜೀವದಾನ ಮಾಡುವ ಗಿಡಗಳನ್ನು ನೆಟ್ಟು ಬೆಳೆಸುವುದು ಪುಣ್ಯದ ಕೆಲಸವೆಂದು ಹೇಳಿ ಗದಗ್ ಜನತೆಗೆ ತಿಳಿಸಿದ ವಿಚಾರಗಳನ್ನೇ ಇಲ್ಲೂ ಜಗದ್ಗುರುಗಳು ಹೇಳಿದರು.

ಒಂದು ಮರ ಹತ್ತು ಮಕ್ಕಳಿಗೆ ಸಮ : ಕಾಶೀ ಶ್ರೀಗಳು
17-7-2013



ಶಾಂತಲಿಂಗೇಶ್ವರ ಕಲ್ಯಾಣಮಂಟಪದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಧರ್ಮಸಭೆ ಅಂಗವಾಗಿ ಏರ್ಪಡಿಸಿದ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಸಸಿ ವಿತರಣೆ ನಡೆಯಿತು. ಶೈಲೇಂದ್ರ ಕವಡೆ, ಕಡಗಂಚಿ ಶ್ರೀ, ಹಾಗರಗಿ ಶ್ರೀ ಇದ್ದರು.

'ಶಿವನಿಗೆ ಜಲಧಾರೆ ಪ್ರಿಯವಾದದ್ದು'

ಹಾಗೆಯೇ ಪಂಚಭೂತಗಳಲ್ಲಿ ಒಂದಾದ ನೀರಿನ ಬಗ್ಗೆಯೂ ಜಗದ್ಗುರುಗಳು ಹೇಳುತ್ತಾ 'ಜಲಧಾರಾ ಪ್ರಿಯಃ ಶಿವಃ' ಎಂಬ ಉಕ್ತಿಗನುಸಾರವಾಗಿ ಶಿವನು ಜಲಧಾರಾ ಪ್ರಿಯನಾಗಿದ್ದಾನೆ. ವಿಷ್ಣು ಅಲಂಕಾರ ಪ್ರಿಯ. ಶಿವನ ಕೃಪೆ ಪಡೆಯಲು ಹೆಚ್ಚಿನ ಉಪಚಾರಗಳ ಅವಶ್ಯಕತೆ ಇರುವುದಿಲ್ಲ. ಕೇವಲ ಶುದ್ಧ ಮನಸ್ಸಿನಿಂದ ಜಲಾಭಿಷೇಕ ಮಾಡಿ ಭಸ್ಮ ಮತ್ತು ಬಿಲ್ವಪತ್ರೆಯನ್ನು ಸಮರ್ಪಿಸಿದರೆ ಶಿವನು ಸಂತುಷ್ಟನಾಗಿ ಶಿವಪದವಿಯನ್ನೇ ಅನುಗ್ರಹಿಸುತ್ತಾನೆ. ಶಿವನಿಗೆ ಅಶುತೋಷ ಅಂದರೆ ಶೀಘ್ರ ಪ್ರಸನ್ನನಾಗುವವನು ಎಂಬುದಾಗಿ ಕರೆದಿದ್ದಾರೆ ಎಂದು ಹೇಳಿ ಜಲತತ್ವವು ಸರ್ವಜೀವಿಗಳ ಜೀವನಕ್ಕೆ ಗಾಳಿಯಂತೆ ಆಧಾರವಾಗಿದೆ. ಶಿವನು ಜಲವನ್ನು ಪ್ರೀತಿಸುವ ಮೂಲಕ ಜಗತ್ತಿಗೆ ಕೊಟ್ಟ ಸಂದೇಶವೇನೆಂದರೆ ಜಲವು ಜೀವನದ ಆಧಾರ. ಕಾರಣ ನೀರನ್ನು ಸದಾ ಶುಚಿಯಾಗಿ ಇರಿಸಬೇಕು. ಯಾವ ಕಾಲಕ್ಕೂ ಕೆರೆ ಹೊಳೆಗಳಲ್ಲಿ ಕಸಕಡ್ಡಿಗಳನ್ನು ಹಾಕಿ ಕಲುಷಿತಗೊಳಿಸಬಾರದು. ಜಲವನ್ನು ಮಾಲಿನ್ಯ ಮಾಡಿದರೆ ಶಿವನ ಕೋಪಕ್ಕೆ ಗುರಿಯಾಗಬೇಕಾಗುತ್ತದೆ ಎಂಬ ಎಚ್ಚರಿಕೆಯ ಮಾತುಗಳನ್ನು ಹೇಳಿದರು.

ಹೀಗೆ ಸಿದ್ಧಾಂತ ಶಿಖಾಮಣಿಯಲ್ಲಿರುವ ತತ್ವಗಳು, ಸಿದ್ಧಾಂತಗಳು ನಮ್ಮ ನಿತ್ಯಜೀವನದ ಬದುಕಿಗೆ ಹೇಗೆ ಅನ್ವಯವಾಗುತ್ತದೆ ಎಂದು ತಿಳಿಸಿಹೇಳುವ ಶಕ್ತಿ ಇರುವುದು ಕಾಶೀ ಜಗದ್ಗುರುಗಳಿಗೆ ಮಾತ್ರ.

ಕಾಶೀ ಜಗದ್ಗುರುಗಳ ರಾಷ್ಟ್ರಪ್ರೇಮ ವ್ಯಕ್ತವಾದ ವಿವಿಧ ಸಂದರ್ಭಗಳು

ಜಗದ್ಗುರುಗಳವರ ಪೂರ್ವಾಶ್ರಮದ ತಂದೆಯವರು ಸ್ವಾತಂತ್ರ್ಯ ಪೂರ್ವದಲ್ಲಿ ಶಾಲಾ ಶಿಕ್ಷಕರಾಗಿದ್ದವರು. ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿರದಿಂದ ಕಂಡವರು. ಶಾಲಾ ಶಿಕ್ಷಕರಾಗಿ ಮಕ್ಕಳಿಗೆ ಸ್ವಾತಂತ್ರ್ಯ ಹೋರಾಟದ ಬಗ್ಗೆ, ಬ್ರಿಟಿಷರ ದಬ್ಬಾಳಿಕೆ ಬಗ್ಗೆ, ಹೋರಾಡಿದ ದೇಶದ ನಾಯಕರ ಬಗ್ಗೆ ತಿಳಿಸಿ ಮಕ್ಕಳಲ್ಲೂ ದೇಶಪ್ರೇಮ ಮೂಡುವಂತೆ ಮಾಡಿದವರು. ಇಂತಹ ವಾತಾವರಣದಲ್ಲಿ ಸ್ವಾತಂತ್ರ್ಯ ದೊರೆತ ತಿಂಗಳಲ್ಲೇ ಜನ್ಮತಾಳಿದ ಜಗದ್ಗುರುಗಳಿಗೆ ಬಾಲ್ಯದಲ್ಲಿ ಸ್ವಾತಂತ್ರ್ಯ ಚಳುವಳಿ, ಅದಕ್ಕಾಗಿ ನಡೆದ ಹೋರಾಟ, ನಾಯಕರ ಬಂಧನ, ಗಾಂಧೀಜಿಯವರ ಉಪವಾಸ ಸತ್ಯಾಗ್ರಹ–ಹೀಗೆ ಹತ್ತು ಹಲವು ಘಟನೆಗಳನ್ನು ಮನೆಯಲ್ಲೇ ಕೇಳುತ್ತಾ ಬೆಳೆದು ಬಂದ ಕಾರಣ ಅವರಲ್ಲೂ ದೇಶಾಭಿಮಾನ ಬೆಳೆಯಿತು. ದೊಡ್ಡವರಾದಂತೆ ಸಂಸ್ಕೃತ ಶಾಸ್ತ್ರಾಧ್ಯಯನ ಮುಂದುವರೆದಂತೆಲ್ಲಾ, ಸಾವಿರಾರು ವರ್ಷಗಳ ಹಿಂದಿನ ದಾರ್ಶನಿಕರ ದರ್ಶನಗಳನ್ನು ಅಧ್ಯಯನ ಮಾಡಿದಂತೆಲ್ಲಾ ಭರತಖಂಡದಂತಹ ಪುಣ್ಯಭೂಮಿಯ ಪುರಾತನ ನಗರಗಳಲ್ಲಿ ಒಂದಾದ ಕಾಶೀ ನಗರದಲ್ಲಿರುವ ಜಂಗಮವಾಡಿ ಮಠದ ಜ್ಞಾನ ಸಿಂಹಾಸನಾಧೀಶ್ವರಾದರು. ಇಂತಹ ವಾತಾವರಣದಲ್ಲಿ ಬೆಳೆದು ಬಂದ ಜಗದ್ಗುರುಗಳಲ್ಲಿ ದೇಶ, ಭಾಷೆ, ಸಂಸ್ಕೃತಿ, ಸಮಾಜ ಎಲ್ಲದರ ಮೇಲೆ ಅಭಿಮಾನ ಸಹಜವಾಗಿ ಬೆಳೆದಿತ್ತು.

ರಾಷ್ಟ್ರದ ಏಳಿಗೆಗೆ ಪೂರಕವಾದ ಘಟನೆಗಳಿಗೆ ಅಥವಾ ಪೂರಕವಾಗದ ಘಟನೆಗಳಿಗೆ ಜಗದ್ಗುರುಗಳು ಸ್ಪಂದಿಸಿದ ರೀತಿಯಲ್ಲಿ ಅವರ ರಾಷ್ಟ್ರಪ್ರೇಮ ಎದ್ದು ಕಾಣುತ್ತದೆ.

ಕಳೆದ 25 ವರ್ಷಗಳಲ್ಲಿ ಅನೇಕ ಸಂದರ್ಭಗಳಲ್ಲಿ ಅವರು ನೀಡಿರುವ ಹೇಳಿಕೆಗಳು ಇಂದಿಗೂ ಪ್ರಸ್ತುತವಾಗಿವೆ. ಸಂದರ್ಭಗಳು ದೊರೆತಾಗಲೆಲ್ಲಾ ಜನತೆಯಲ್ಲಿ ರಾಷ್ಟ್ರಪ್ರೇಮ ಜಾಗೃತಗೊಳಿಸುತ್ತಿದ್ದರು. ಪ್ರತೀ ದಿನ ರಾಷ್ಟ್ರದ ಆಗು ಹೋಗುಗಳನ್ನು ಪತ್ರಿಕೆಗಳ ಮೂಲಕ ತಿಳಿಯುತ್ತಿದ್ದರು. ದೂರದರ್ಶನ ಬಂದ ಮೇಲೆ ಸದಾ ನ್ಯೂಸ್ ಚಾನಲ್‌ಗಳಲ್ಲಿ ದೇಶ ವಿದೇಶಗಳ ಸುದ್ದಿಗಳನ್ನು ನೋಡುತ್ತಿದ್ದರು.

ರಾಷ್ಟ್ರೀಯ ಭಾವೈಕ್ಯತೆ ಕುರಿತು

ರಾಷ್ಟ್ರದ ಪ್ರಗತಿ ಕುಂಠಿತವಾಗಲು ಜನರಲ್ಲಿ ಸಮಾನತೆಯ ಕೊರತೆ ಉಂಟಾಗಿದೆ, ಹೀಗಾಗಿ ರಾಷ್ಟ್ರೀಯ ಭಾವೈಕ್ಯತೆ ಅಂಕುರಿಸಿಲ್ಲ ಎಂದು ಅಂದಿನ ಸಮಾಜದ ಜನತೆಯನ್ನು ಕುರಿತು ಸುಮಾರು 23 ವರ್ಷಗಳ ಹಿಂದೆ ಅಂದರೆ 10–1–1991ರಲ್ಲಿ ಧಾರವಾಡದಲ್ಲಿ ಭಾರತೀಯ ಸಂಸ್ಕೃತಿ ಸಮಾಜ ಪ್ರತಿಷ್ಠಾನವು ಹಮ್ಮಿಕೊಂಡಿದ್ದ 6 ದಿನಗಳ ವಿಶೇಷ ಬೋಧನೋಪನ್ಯಾಸಗಳ ಸಮಾರೋಪ ಸಮಾರಂಭದಲ್ಲಿ ಹೇಳಿದ್ದರು. ದೇಶವನ್ನಾಳುವವರಲ್ಲಿ ಈ ಭಾವನಾತ್ಮಕವಾದ ಸಮಾನತೆಯ ಕೊರತೆಯುಂಟಾಗಿದೆ. ಒಬ್ಬರು ಇನ್ನೊಬ್ಬರನ್ನು ಒಡೆದು ಆಳುವ ನೀತಿಯಿಂದ (Divide and rule-British policy) ಸ್ವಾರ್ಥ ಸಾಧನೆಗೆ ಪ್ರಯತ್ನಿಸುತ್ತಿರುವುದನ್ನು ಗಮನಿಸಿ ಧರ್ಮದಲ್ಲಿ ಕೈಹಾಕುವಾಗ ಸರಕಾರಗಳು ಎಚ್ಚರಿಕೆ ವಹಿಸಬೇಕು, ರಾಜಕಾರಣಿಗಳು ಜನರ ಪ್ರೀತಿಗಾಗಿ ಮಾಡುವುದೇ ಬೇರೆ; ಜನರ ಹಿತಕ್ಕಾಗಿ ಮಾಡುವುದೇ ಬೇರೆ–ಎಂದು ಜಗದ್ಗುರುಗಳು ಅಂದಿನ ಸಭೆಯಲ್ಲಿ ವಿಮರ್ಶೆ ಮಾಡುತ್ತಾ ಮುಂದುವರೆದು ರಾಜಕಾರಣಿಗಳು ಮಾಡುವುದೆಲ್ಲಾ ತಾವು ಜನರ ಪ್ರೀತಿ ಸಂಪಾದಿಸಿ ಕುರ್ಚಿಯನ್ನು ಭದ್ರಪಡಿಸಿ ಕೊಳ್ಳುವುದೇ ಹೊರತು ಅವರಲ್ಲಿ ಜನಹಿತವಿಲ್ಲ ಎಂದರು. ಅವರು ಶಾಸಕರಿಗೆ, ರಾಜ್ಯ ಆಳುವ ಮುಖಂಡರಿಗೆ ಆಧ್ಯಾತ್ಮಿಕ ತರಬೇತಿಯ ಕೊರತೆಯಿಂದ ಇಂತಹ ಸಮಾನತೆಯ ಕೊರತೆ ಉಂಟಾಗಿ ಪ್ರಮಾದಗಳು ನಡೆಯುತ್ತಿವೆ. ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ಇಂದು ಭಾರತೀಯರು ಭಾವೈಕ್ಯತೆಯನ್ನು ಮರೆತು ಕೊಲೆ ಕದನಗಳಲ್ಲಿ ಮುಂದುವರೆದಿರುವುದು ನಮ್ಮ ದೇಶದ ಭವ್ಯ ಪರಂಪರೆಗೆ, ಸಂಸ್ಕೃತಿಗೆ ಕೊಡಲಿಪೆಟ್ಟು ಬಿದ್ದಂತೆ ಎಂದು ವಿಷಾದದಿಂದ ಹೇಳಿದರು. ಈ ಬಗ್ಗೆ ಎಲ್ಲರೂ ಚಿಂತನೆ ಮಾಡುವ ಕಾಲ ಬಂದಿದೆ. ಸಮಾಜದಲ್ಲಿ ಅಧಿಕಾರದಲ್ಲಿರುವವರು ತಮ್ಮ ಅಂತಸ್ತನ್ನು ಕಾಯ್ದುಕೊಳ್ಳುವ ಆತುರದಲ್ಲಿ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡಬಾರದೆಂದು ಜಗದ್ಗುರುಗಳು ಅಂದು ಹೇಳಿರುವ ಈ ಆಲೋಚನೆಗಳು ಇಂದಿಗೂ ಪ್ರಸ್ತುತವಾಗಿದೆ ಎಂದರೆ ತಪ್ಪಾಗಲಾರದು.

'ಸಮಾನತೆ ಕೊರತೆಯಿಂದ ರಾಷ್ಟ್ರದ ಪ್ರಗತಿ ಕುಂಠಿತ'

ಪ್ರಜಾವಾಣಿ ವಾರ್ತೆ 10–1–1991



ರಾಷ್ಟ್ರೀಯ ಭಾವೈಕ್ಯ ಹಾಗೂ ಧರ್ಮ ಸಮನ್ವಯ ಕುರಿತು ಧಾರವಾಡದಲ್ಲಿ ಮಂಗಳವಾರ ಏರ್ಪಡಿಸಿದ್ದ ಉಪನ್ಯಾಸ ಮಾಲೆಯ ಸಮಾರೋಪ ಭಾಷಣವನ್ನು ವಾರಾಣಸಿ ಪೀಠದ ಜಗದ್ಗುರುಗಳು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರು ಮಾಡಿದರು. ಮುರುಘಾಮಠದ ಮಹಂತಪ್ಪ ಸ್ವಾಮೀಜಿ, ಎಸ್. ನಿಜಲಿಂಗಪ್ಪ ಅವರು ಚಿತ್ರದಲ್ಲಿದ್ದಾರೆ.

ಕಾಶೀ ಜಗದ್ಗುರುಗಳ ಸನ್ನಿಧಾನದಲ್ಲಿ ಗಣರಾಜ್ಯೋತ್ಸವ 26–1–1997

ಗಣರಾಜ್ಯೋತ್ಸವದ ದಿನ ಜಗದ್ಗುರುಗಳು ಪುಣೆಯಲ್ಲಿದ್ದಂತಹ ಸಂದರ್ಭ. ಪುಣೆಯ ಸದಾಶಿವಪೇಟೆಯಲ್ಲಿಯ ವಿಶ್ವಾರಾಧ್ಯ ವಿದ್ಯಾರ್ಥಿನಿಲಯ ಜಂಗಮ ಸಂಸ್ಥಾನ ಮಠದಲ್ಲಿ ಜಗದ್ಗುರುಗಳ ಸಾನಿಧ್ಯದಲ್ಲಿ ಹಾಗೂ ಪುಣೆ ನಗರದ ಅನೇಕ ಗಣ್ಯವ್ಯಕ್ತಿಗಳು, ಸಮಾಜ ಚಿಂತಕರು, ರಾಜಕೀಯ ನಾಯಕರ ಜೊತೆ ಬಹು ವಿಜೃಂಭಣೆಯಿಂದ ನಡೆಯಿತು.

ಸಾನಿಧ್ಯ ವಹಿಸಿದ್ದ ಗುರುಗಳು ರಾಷ್ಟ್ರಧ್ವಜದ ಬಗ್ಗೆ ಯುವ ವಿದ್ಯಾರ್ಥಿಗಳಿಗೆ ವಿವರಿಸುತ್ತಾ ರಾಷ್ಟ್ರಧ್ವಜದಲ್ಲಿ ತ್ಯಾಗದ ಪ್ರತೀಕ, ಸಂಯಮ, ಶೌರ್ಯ ಮುಂತಾದ ತತ್ವಗಳು ಕೂಡಿವೆ. ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಬೇಕು. ದೇಶ ಸ್ವಾತಂತ್ರ್ಯ ಪಡೆಯಲು ಅನೇಕ ವ್ಯಕ್ತಿಗಳು ಪ್ರಾಣ ಬಲಿದಾನ ಮಾಡಿದ್ದಾರೆ. ಸುಭಾಷ್‌ಚಂದ್ರ ಬೋಸ್, ವಲ್ಲಭ ಬಾಯಿ ಪಟೇಲ್, ಲಾಲ ಲಜಪತರಾಯ್, ಭಗತ್‌ಸಿಂಗ್ ಇಂತಹ ಕ್ರಾಂತಿಕಾರರ ಬಗ್ಗೆ ನಾವಿಂದು ಸ್ಮರಣೆ ಮಾಡಬೇಕಾಗಿದೆ. ಯುವಕರು ಇಂತಹ ನಾಯಕರ ದೇಶಪ್ರೇಮ, ತ್ಯಾಗದ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಶ್ರೀಗಳವರು ವಿದ್ಯಾರ್ಥಿಗಳಿಗೆ ಹೇಳುತ್ತಾ ಕರ್ತವ್ಯನಿಷ್ಠೆ ಶಿಸ್ತು ಹಾಗೂ ಒಳ್ಳೆಯದನ್ನು ಮಾಡಲು ಹಾತೊರೆಯುವ ಮನೋಭಾವ ಬೆಳಿಸಿಕೊಳ್ಳಬೇಕು ಎಂದು ಉಪದೇಶ ನೀಡಿ ವಿದ್ಯಾರ್ಥಿಗಳಲ್ಲಷ್ಟೇ ಅಲ್ಲ, ನೆರೆದಿದ್ದ ನಾಗರೀಕರಲ್ಲಿಯೂ ರಾಷ್ಟ್ರಪ್ರೇಮದ ಬಗ್ಗೆ ತಮ್ಮನ್ನು ತಾವು ಅವಲೋಕಿಸಿಕೊಳ್ಳುವಂತೆ ಮಾಡಿತು ಗುರುಗಳ ಅಂದಿನ ಉಪದೇಶ.

ಧರ್ಮಾಚರಣೆ ಜೊತೆಗೆ ರಾಷ್ಟ್ರಾಭಿಮಾನ ಬೆಳೆಸಲು ಕಾಶಿ ಜಗದ್ಗುರುಗಳ ಕರೆ

ಜಗದ್ಗುರುಗಳು ಹೋದೆಡೆಯಲ್ಲೆಲ್ಲಾ ಧರ್ಮಾಚರಣೆ ಜೊತೆಗೆ ರಾಷ್ಟ್ರಾಭಿಮಾನ ಬೆಳೆಸಲು ಸಾರ್ವಜನಿಕ ಸಮಾರಂಭಗಳಲ್ಲಿ, ಶಾಲೆಗಳಲ್ಲಿ, ಧಾರ್ಮಿಕ ಸಭೆಗಳಲ್ಲಿ ಮರೆಯದೆ ಹೇಳುತ್ತಿದ್ದುದು ಅವರಲ್ಲಿರುವ ಜ್ವಲಂತ ದೇಶಪ್ರೇಮವನ್ನು ತೋರಿಸುತ್ತದೆ.

ರಾಮ ಜನ್ಮಭೂಮಿ ಮತ್ತು ಬಾಬರೀ ಮಸೀದಿ ವಿವಾದ : ಜಗದ್ಗುರುಗಳು

8–1–1993 – ಸರ್ವಧರ್ಮಗಳ ಸಮನ್ವಯದ ರಂಗಭೂಮಿ ನಮ್ಮ ಭಾರತದೇಶ. ಹಲವಾರು ಶತಮಾನಗಳಿಂದ ಅನೇಕ ಧರ್ಮೀಯರು ಜೊತೆಗೂಡಿ ಬಾಳಿದ ದೇಶವಿದು. ಹೀಗಿರುವಾಗ, ಇಂತಹ ಇತಿಹಾಸ ಪಡೆದಿರುವ ನಾವು ಮಸೀದಿ ಕೆಡಹುವ ಮೂಲಕ ಇತಿಹಾಸಕ್ಕೆ ಅಪಚಾರವೆಸಗಿದಂತಾಗಿದೆ–ಇಂತಹ ಸಂಕೀರ್ಣ ಸಂದರ್ಭಗಳಲ್ಲಿ ಧರ್ಮದ ವಿಚಾರದಲ್ಲಿ ಸರ್ಕಾರಗಳಾಗಲಿ, ಜನಪ್ರತಿನಿಧಿಗಳಾಗಲಿ ಆತುರದ ನಿರ್ಣಯಗಳನ್ನು ಕೈಗೊಳ್ಳಬಾರದು. ಹೀಗೆಯೇ ಕೋಮು ಗಲಭೆ, ಸಾವು, ಹಿಂಸೆ ಸಂಭವಿಸಿದರೆ ದೇಶಕ್ಕೆ ಒಳ್ಳೆಯ ಭವಿಷ್ಯ ನಿರ್ಮಾಣವಾಗದು ಎಂದು ಪತ್ರಕರ್ತರಿಗೆ ಜಗದ್ಗುರುಗಳು ತಿಳಿಸಿದರು. ಪತ್ರಿಕೆಗಳ ಮೂಲಕ ಲಕ್ಷಾಂತರ ಜನರಿಗೆ, ಮುಖಂಡರುಗಳಿಗೆ–ತಮ್ಮ ಅಭಿಪ್ರಾಯ ತಿಳಿಯಲೆಂದು ತಾವೇ ಪತ್ರಿಕಾಗೋಷ್ಠಿ ಕರೆದು ತಮ್ಮ ಚಿಂತನೆಗಳನ್ನು ಮುಂದಿಟ್ಟರು.

ಶ್ರೀರಾಮನ ಅಸ್ತಿತ್ವದ ಬಗ್ಗೆ ಪ್ರಶ್ನಿಸಿದ ಕೇಂದ್ರ ಸರ್ಕಾರದ ನಿಲುವಿನ ಬಗ್ಗೆ ಜಗದ್ಗುರುಗಳು ಪ್ರತಿಕ್ರಿಯೆ ನೀಡುತ್ತಾ, ಸರಕಾರದ ಈ ವಿಚಾರವನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ ಎಂದು ಧೈರ್ಯವಾಗಿ ದೊಡ್ಡ ಸಮಾರಂಭವೊಂದರಲ್ಲಿ ಹೇಳಿದರು. ದೇಶದ ಜನರ ಭಾವನೆಗಳಿಗೆ, ನಂಬಿಕೆಗಳಿಗೆ ಘಾಸಿ ಮಾಡಿದಾಗ ಸತ್ಯ ಹೇಳುವ ಧೈರ್ಯ, ಹಾಗೂ ಗಟ್ಟಿ ನಿಲವು ಜಗದ್ಗುರುಗಳದು ಎಂಬ ಭಾವನೆಯಿಂದ ಗೌರವ ಮೂಡುತ್ತದೆ. ಶ್ರೀರಾಮ ಈ ದೇಶದ ಜನರ ಭಾವನೆಯಲ್ಲಿ ಸಮರಸನಾಗಿದ್ದಾನೆ. ಅಂತಹ ರಾಮನನ್ನು ಕಾಲ್ಪನಿಕ ವ್ಯಕ್ತಿ ಎಂದು ಹೇಳುವುದು ಸರಿಯಲ್ಲ–ಎಂದು ಹೇಳುತ್ತಾ ಶ್ರೀರಾಮನ ವ್ಯಕ್ತಿತ್ವದ ಬಗ್ಗೆ ತಮಗಿದ್ದ ಅಪಾರ ನಂಬಿಕೆಯನ್ನು ಅಂದಿನ ಸಭೆಯ ಮುಂದೆ ಹೇಳಿದರು. ತಮ್ಮ ಷಷ್ಠ್ಯಬ್ಧಿ ಸಮಾರಂಭದ ಸಲುವಾಗಿ 13–9–2007ರಲ್ಲಿ ವಾರಣಾಸಿಯಲ್ಲಿ ಏರ್ಪಡಿಸಿದ್ದ ಗುರುವಂದನಾ ಸಮಾರಂಭದಲ್ಲಿ ಕೇಂದ್ರ ಸರಕಾರದ ನಿಲುವಿನ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದನ್ನು ಕಂಡರೆ ಜಗದ್ಗುರುಗಳ ಸತ್ಯಕ್ಕಾಗಿ ನೇರವಾಗಿ ನುಡಿಯುವ ನಿಲುವು ಎದ್ದು ಕಾಣುತ್ತದೆ.

ಕಾಶೀ ಜಗದ್ಗುರುಗಳ ಆತಂಕ ಶಾಂತಿ, ಸಹಬಾಳ್ವೆ ನಮ್ಮ ಉಸಿರಾಗಬೇಕು

ಜನತಾ ವಾಣಿ 8–1–1993



ಕಾಶೀ ಪೀಠದ ಜಗದ್ಗುರುಗಳಾದ ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ತೆಗೆದ ಚಿತ್ರ. ಸಂಘದ ಅಧ್ಯಕ್ಷ ಎಂ.ಎಂ.ಜೆ. ಸತ್ಯಪ್ರಕಾಶ್ ಹಾಗೂ ಜಾನುಕೋಡಿ ಮಠದ ಸಿದ್ಧಲಿಂಗ ಶಿವಾಚಾರ್ಯರು ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ರಾಮಸೇತು ಒಡೆದು ಸೇತು ಸಮುದ್ರದಲ್ಲಿ ಕಾಲುವೆ ನಿರ್ಮಾಣಕ್ಕೆ ದೇಶಾದ್ಯಂತ ವಿರೋಧ ವ್ಯಕ್ತವಾದಂತಹ ಸಮಯದಲ್ಲಿ ಜಗದ್ಗುರುಗಳು ರಾಮನ ಗುಣ ಸ್ವಭಾವಗಳನ್ನು ಹೇಳುತ್ತಾ ರಾಮನಲ್ಲಿ ಅನೇಕ ಮಾನವೀಯ ಆದರ್ಶಗಳನ್ನು ಕಾಣಬಹುದು ಎಂದರು.

ಮಹಾತ್ಮ ಗಾಂಧೀಜಿಯವರು ಭಾರತವನ್ನು ರಾಮರಾಜ್ಯವನ್ನಾಗಿ ಮಾಡುವ ಕನಸು ಕಂಡ ಬಗ್ಗೆ ಹೇಳುತ್ತಾ ಗಾಂಧೀಜಿಯವರ ದೃಷ್ಟಿಯಲ್ಲಿ ರಾಮನು ಕಾಲ್ಪನಿಕ ವ್ಯಕ್ತಿಯಲ್ಲ. ಅವನೊಬ್ಬ ಐತಿಹಾಸಿಕ ಆದರ್ಶ ಪುರುಷ. ಸಾಮ್ರಾಜ್ಯಶಾಹಿ ಕಾಲದಲ್ಲಿ ಪ್ರಜಾತಂತ್ರಕ್ಕೆ ಮಹತ್ವಕೊಟ್ಟ ಒಂದು ವಿಶಿಷ್ಟವಾದ ತಮ್ಮದೇ ಆದ ಆಲೋಚನೆಯನ್ನು ಶ್ರೀಗಳು ಹೀಗೆ ಹೇಳಿದರು–ರಾಮನ ಪಟ್ಟಾಭಿಷೇಕಕ್ಕಾಗಿ ಆಯೋಧ್ಯೆಯ ಪ್ರಜೆಗಳೆಲ್ಲರೂ ಒಮ್ಮತ ತೋರಿ ಸಂಭ್ರಮಿಸುತ್ತಿದ್ದಾಗ ಕೇವಲ ಕೈಕೇಯಿ ಮಾತ್ರ ಅದನ್ನು ವಿರೋಧಿಸಿದಳು. ರಾಮನ ದೃಷ್ಟಿಯಲ್ಲಿ ಸಂಪೂರ್ಣ ಪ್ರಜಾತಂತ್ರವೆಂದರೆ ಒಬ್ಬ ಪ್ರಜೆಯ ವಿರೋಧವೂ ಇರಬಾರದು ಎಂದು ಪಟ್ಟಾಭಿಷೇಕವನ್ನು ತಿರಸ್ಕರಿಸಿದ ರಾಮನ ಆದರ್ಶವನ್ನು ಇಂದಿನ ಜನನಾಯಕರು ಪರಿಪಾಲಿಸಬೇಕೆಂಬುದೇ ಗಾಂಧೀಜಿಯವರ ಆಶಯವಾಗಿತ್ತು. 99 ಮತಗಳು ತನ್ನ ಕಡೆ ಇದ್ದರೂ ಒಂದು ಮತವಿಲ್ಲದ ಕಾರಣ ರಾಜ್ಯ ತ್ಯಜಿಸಿದ ತ್ಯಾಗಮಯಿ ಆದರ್ಶಮೂರ್ತಿ ಶ್ರೀರಾಮ. ರಾಮನು ಪ್ರಜಾನುರಾಗಿ ರಾಜನಾಗಿದ್ದನು. ಎಲ್ಲ ಜನಾಂಗದ ಪ್ರಜೆಗಳನ್ನು ಸಮಾನವಾಗಿ ಕಾಣುತ್ತಿದ್ದನು. ತನ್ನ ವೈಯಕ್ತಿಕ ಸೌಖ್ಯಕ್ಕಿಂತ ಪ್ರಜೆಗಳ ಯೋಗಕ್ಷೇಮವೇ ಅವನಿಗೆ ಮಹತ್ವದ್ದಾಗಿತ್ತು. ಬಹುಮತ ರಾಜಕಾರಣಕ್ಕಿಂತ ಸರ್ವ ಸಮ್ಮತ ರಾಜಕಾರಣಕ್ಕೆ ರಾಮ ಮಹತ್ವ ಕೊಟ್ಟಿದ್ದ. ಒಬ್ಬ ವ್ಯಕ್ತಿ (ಕೈಕೆಯಿ) ತನ್ನ ಪರವಾಗಿರದ ಕಾರಣ ವನವಾಸಕ್ಕೆ ಹೋದ. ಈ ಎಲ್ಲಾ ಸದ್ಗುಣಗಳಿಂದಾಗಿ ಶ್ರೀರಾಮ ಮರ್ಯಾದಾ ಪುರುಷೋತ್ತಮನೆಂದೇ ಪ್ರಸಿದ್ಧಿಯಾಗಿದ್ದವನು. ಇಂತಹ ರಾಮನನ್ನು ಎಲ್ಲರೂ ಗೌರವಿಸಬೇಕು. ಇಂತಹ ರಾಮನನ್ನು ಕಾಲ್ಪನಿಕ ಪುರುಷನೆಂದು ಹೇಳದೆ ಕೇಂದ್ರ ಸರಕಾರ ರಕ್ಷಣೆ ಮಾಡಿದರೆ ಜನರ ಭಾವನೆಗಳನ್ನು ಗೌರವಿಸಿದಂತಾಗುತ್ತದೆ– ಎಂದು ಕೇಂದ್ರ ಸರಕಾರಕ್ಕೆ ಈ ಹೊಸ ದಿಕ್ಕಿನಲ್ಲಿ ಆಲೋಚಿಸುವ ಸಲಹೆ ನೀಡಿದರು. ಯಾವ ಕಾರಣಕ್ಕಾಗಿ ಶ್ರೀರಾಮ ಆದರ್ಶ ಪುರುಷನೆನಿಸಿಕೊಂಡಿದ್ದಾನೆ ಎಂದು ವಿವರಿಸಿ, ಯಾವ ರೀತಿಯಲ್ಲಿ ಕೇಂದ್ರದ ನಿಲುವು ಸರಿಯಲ್ಲ ಎಂದು ವಿಶ್ಲೇಷಿಸಿ ವಿವೇಚಿಸುವ ಜಗದ್ಗುರುಗಳು ಬುದ್ಧಿಸಾಮರ್ಥ್ಯವು ಸರ್ವರೂ ಮೆಚ್ಚುವಂಥದ್ದು.

22–9–2003ರಲ್ಲಿ ರಾಣೇಬೆನ್ನೂರಿನಲ್ಲಿ ವರ್ತಕರ ಸಂಘದಲ್ಲಿ ಪತ್ರಿಕೆಯವರೊಂದಿಗೆ ಮಾತನಾಡಿದ ಜಗದ್ಗುರುಗಳು ರಾಮಮಂದಿರ ನಿರ್ಮಾಣ ಯಾವುದೇ ಪಕ್ಷದ, ಜಾತಿಯ ಕೆಲಸವಲ್ಲ; ಅದು ಸಮಸ್ತ ಭಾರತೀಯರದ್ದು. ಇದೊಂದು ರಾಷ್ಟ್ರೀಯ ಕೆಲಸವೆಂದು ಪರಿಗಣಿಸಬೇಕು. ಇದರಲ್ಲಿ ರಾಜಕೀಯ ಕುತಂತ್ರ ಮಾಡದೆ ಎಲ್ಲಾ ಪಕ್ಷದವರು ಸಹಕರಿಸಿ ರಾಷ್ಟ್ರೀಯ ಸಮಸ್ಯೆಯನ್ನು ಬಗೆಹರಿಸಿ ದೇಶದಲ್ಲಿ ಶಾಂತಿ ನೆಲೆಸುವಂತೆ ಕರೆ ನೀಡಿದ್ದು ಅವರಲ್ಲಿರುವ ಸಾಮರಸ್ಯದ ಭಾವ ಪ್ರಕಟಗೊಂಡಂತಾಯಿತು.

ರಾಮಮಂದಿರ ನಿರ್ಮಾಣ ಸಮಸ್ತ ಭಾರತೀಯರ ಜವಾಬ್ದಾರಿ

ಜನತಾವಾಣಿ 23–9–2003

ಅಯೋಧ್ಯೆ ವಿವಾದ ಕುರಿತು ಅಲಹಾಬಾದ್ ಉಚ್ಚನ್ಯಾಯಾಲಯವು 18–9–2010ರಂದು ತನ್ನ ನಿರ್ಣಯವನ್ನು ಘೋಷಿಸಲಿತ್ತು. ಅದನ್ನು ತಿಳಿದ ಜಗದ್ಗುರುಗಳು ವಾರಣಾಸಿಯ ಜಂಗಮವಾಡಿ ಮಠಕ್ಕೆ ಪತ್ರಕರ್ತರನ್ನು ಆಹ್ವಾನಿಸಿ ಅವರೊಂದಿಗೆ ಮಾತನಾಡುತ್ತಾ ಇಂದು ಹೈಕೋರ್ಟ್ ತೀರ್ಪು ಹೊರಬೀಳಲಿದೆ. ಅದನ್ನು ಎಲ್ಲರೂ ಶಾಂತಿಯಿಂದ ಸ್ವಾಗತಿಸಬೇಕು. ಈ ಸಂದರ್ಭದಲ್ಲಿ ಭಾವನಾವಶರಾಗಿ ರಾಷ್ಟ್ರಕ್ಕೆ ಅಹಿತವಾಗುವ ಯಾವ ಕಾರ್ಯವನ್ನೂ ಯಾರೂ ಮಾಡಬಾರದು. ಉಭಯ ಪಕ್ಷಗಳು ಒದಗಿಸಿರುವ ಸಾಕ್ಷ್ಯಾಧಾರಗಳ ಮೇಲೆ ಉಚ್ಚನ್ಯಾಯಾಲಯವು ತನ್ನ ನಿರ್ಣಯವನ್ನು ಘೋಷಿಸುವುದರಿಂದ ಉಭಯ ಪಕ್ಷಗಳೂ ಅದನ್ನು ಗೌರವಿಸಬೇಕು ಎಂದರು. ದೇಶದಲ್ಲಿ ಎಲ್ಲಿಯೂ ಅಹಿತ ಘಟನೆಗಳು ನಡೆಯದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮುನ್ನೆಚ್ಚರಿಕೆ ವಹಿಸಿರುವುದನ್ನು ಸ್ವಾಗತಿಸಿದರು. ಆದರೂ ಪ್ರಶಾಸನಕ್ಕಿಂತಲೂ ಅನುಶಾಸನ ಹೆಚ್ಚು ಪರಿಣಾಮಕಾರಿಯಾದುದು. ಆದ್ದರಿಂದ ಎಲ್ಲರೂ ತಮ್ಮತಮ್ಮ ಭಾವನೆಗಳನ್ನು ನಿಯಂತ್ರಿಸಿಕೊಳ್ಳಬೇಕು ಎಂದಲ್ಲದಲ್ಲದೆ ಭಾರತ ದೇಶವು ಸರ್ವಧರ್ಮಗಳ ಒಂದು ಪವಿತ್ರ ಸಂಗಮಸ್ಥಲ. ಸಂತರು, ಅನೇಕ ಋಷಿಮುನಿಗಳು, ಆಚಾರ್ಯರು, ಶರಣರು ರಾಷ್ಟ್ರೀಯ ಭಾವೈಕ್ಯತೆಯನ್ನು ಬೋಧಿಸುತ್ತಾ ಬಂದಿದ್ದಾರೆ. ಸೋದರ ಭಾವನೆಯನ್ನು ಉಳಿಸಿಕೊಂಡು ಬೆಳಸಬೇಕಾಗಿದೆ. ಜಗದ್ಗುರುಗಳು ಹೇಳಿದ ಕೊನೆ ಮಹತ್ವದ ಸಂದೇಶವೆಂದರೆ "ಇಂದು ನಾವು ನಮ್ಮ ನಮ್ಮ ಧರ್ಮಗಳನ್ನು ಪ್ರೀತಿಸಿದರೂ ರಾಷ್ಟ್ರವನ್ನು ಪ್ರೀತಿಸಬೇಕಾಗಿದೆ. ಸರ್ವಧರ್ಮೀಯರು ರಾಷ್ಟ್ರದ ಹಿತದೃಷ್ಟಿಯಿಂದ ಶಾಂತಿಯನ್ನು ಪಾಲಿಸಬೇಕು" ಎಂದು ರಾಷ್ಟ್ರದ ಸರ್ವ ಜನರಿಗೆ ಮನವಿ ಮಾಡಿಕೊಂಡರು.

ತೀರ್ಪನ್ನು ಶಾಂತಿಯಿಂದ ಸ್ವಾಗತಿಸಿ

ಜಗದ್ಗುರುಗಳಿಗೆ ತಿಳಿದಿತ್ತು ಯಾವ ಕ್ಷಣದಲ್ಲಿ ಬೇಕಿದ್ದರೂ ಜನ ಉದ್ರೇಕಗೊಂಡು ಅಪಾರ ಹಾನಿಯುಂಟುಮಾಡಬಹುದು ಎಂದು ಕೋರ್ಟಿನ ನಿರ್ಣಯ ಹೊರಬೀಳುವ ಪೂರ್ವದಲ್ಲೇ ಪತ್ರಿಕೆಗಳಿಗೆ ತಮ್ಮ ಸಂದೇಶವನ್ನು ರವಾನಿಸಿದರು.

ಒಂದು ರಾಷ್ಟ್ರದ ನಾಯಕರು ಮಾಡುವ ಆಲೋಚನೆಗಳನ್ನು ಧರ್ಮದ ಗುರುಗಳು ಮಾಡಿರುವುದು, ಜಗದ್ಗುರುಗಳಿಗೆ ದೇಶದ ಬಗ್ಗೆ ಇರುವ ಪ್ರೀತಿಯ ಸಂಕೇತವಾಗಿದೆ.

ಸರ್ವರಿಗೂ ಸಮಾಧಾನ ತಂದ ತೀರ್ಪು : ಕಾಶೀ ಶ್ರೀ

ಜಗದ್ಗುರುಗಳಿಗೂ ತೀರ್ಪಿನ ಬಗೆಗೆ ಒಂದು ರೀತಿಯ ಆತಂಕವಿದ್ದಿತೆಂದು ಕಾಣುತ್ತದೆ. 2010ರ ಅಕ್ಟೋಬರ್ ತಿಂಗಳಲ್ಲಿ ಹೊರಬಿದ್ದ ಹೈಕೋರ್ಟ್ ತೀರ್ಪು ಎಲ್ಲಾ ಸಮುದಾಯದವರಿಗೂ ಒಪ್ಪುವಂಥದ್ದಾಗಿತ್ತು. ಇದನ್ನು ತಿಳಿದು ಈ ತೀರ್ಪು ಸರ್ವರಿಗೂ ಸಮಾಧಾನ ತಂದಿದೆ ಎಂದರು. ಶ್ರೀರಾಮನ ಪಕ್ಕದಲ್ಲಿಯೇ ಮುಸಲ್ಮಾನ ಬಂಧುಗಳಿಗೆ ಪ್ರಾರ್ಥನಾ ಮಂದಿರ ನಿರ್ಮಿಸಿಕೊಳ್ಳಲು ಹೈಕೋರ್ಟ್ ಒಪ್ಪಿಗೆ ನೀಡಿರುವುದು ಅಯೋಧ್ಯೆ ಹಿಂದು-ಮುಸ್ಲಿಂ ಭಾವೈಕ್ಯ ಕೇಂದ್ರವಾಗಿ ಇತಿಹಾಸದಲ್ಲಿ ಉಳಿಯುವುದೆಂದು ಮುಂದಿನ ದಿನಗಳಲ್ಲಿ ಸಾಮರಸ್ಯಕ್ಕೆ ನಾಂದಿಯಾಗುವುದೆಂದು ಜಗದ್ಗುರುಗಳು ತಮ್ಮ ಸಂದೇಶದಲ್ಲಿ ತಿಳಿಸಿದರು.

ಮುಂಬಯಿನಗರದಲ್ಲಿ ಉಗ್ರರ ದಾಳಿಗೆ ಜಗದ್ಗುರುಗಳ ಪ್ರತಿಕ್ರಿಯೆ

2008ರಲ್ಲಿ ಮುಂಬಯಿ ನಗರದಲ್ಲಿ ನಡೆದ ಉಗ್ರರ ದಾಳಿಯಿಂದಾಗಿ ರಾಷ್ಟ್ರವೇ ಬೆಚ್ಚಿ ಬೀಳುವಂತಾಗಿತ್ತು. ಪ್ರತಿಷ್ಠಿತ ತಾಜ್ ಹೋಟೆಲ್ ಮತ್ತು ಇತರ ಜಾಗಗಳಲ್ಲಿ ನಡೆದ ಉಗ್ರರ ದಾಳಿಯನ್ನು ಕುರಿತು ವಿದೇಶಗಳೂ ಖಂಡಿಸಿದವು. ಮಹಾರಾಷ್ಟ್ರ, ಲಾತೂರು ಜಿಲ್ಲೆಯ ಜೌಸಾ ನಗರದಲ್ಲಿ 6-12-2008ರಲ್ಲಿ ಲಿಂ. ಶ್ರೀ ನಿರಂಜನ ಶಿವಾಚಾರ್ಯ ಸ್ವಾಮಿಗಳ ಅಮೃತ ಶಿಲಾಮೂರ್ತಿ ಪ್ರತಿಷ್ಠಾಪನೆ ಮಾಡಲೆಂದು ಆಗಮಿಸಿದಾಗ ಅಲ್ಲಿನ ಪತ್ರಕರ್ತರು ಈ ದಾಳಿಯ ಬಗ್ಗೆ ತಮ್ಮ ಅಭಿಪ್ರಾಯವೇನೆಂದು ಕೇಳಿದ್ದರು. ಅದಕ್ಕೆ ಉತ್ತರವಾಗಿ ತಮ್ಮ ಆಶೀರ್ವಚನದಲ್ಲಿ ಹೇಳಿದ ಒಂದೊಂದು ಮಾತೂ ಎಚ್ಚರಿಕೆಯ ಘಂಟೆಯಿದ್ದಂತಿತ್ತು. ಇಂತಹ ಸಂದರ್ಭಗಳಲ್ಲಿ ರಾಜಕೀಯ ಪಕ್ಷಗಳು ಒಗ್ಗಟ್ಟಿನಿಂದ ಉಗ್ರರ ವಾದವನ್ನು ಖಂಡಿಸಬೇಕು, ಒಟ್ಟಾಗಿ ಎದುರಿಸಬೇಕು, ಪ್ರತಿಯೊಬ್ಬ ವ್ಯಕ್ತಿ ತನ್ನ ಧರ್ಮವನ್ನು ಪ್ರೀತಿಸುವಂತೆ ತನ್ನ ದೇಶವನ್ನು ಪ್ರೀತಿಸುವುದು ರಾಷ್ಟ್ರಪ್ರೇಮವೆನಿಸಿಕೊಳ್ಳುವುದು. ರಾಷ್ಟ್ರವು ಸುರಕ್ಷಿತವಾಗಿದ್ದಲ್ಲಿ ಧರ್ಮಗಳು ಸುರಕ್ಷಿತವಾಗಬಲ್ಲವು. ಹೊರದೇಶದ ಉಗ್ರರು ನಮ್ಮ ದೇಶದ ಮೇಲೆ ದಾಳಿ ಮಾಡಬೇಕಾದರೆ ನಮ್ಮ ದೇಶದ ವ್ಯಕ್ತಿಗಳ ಸಹಕಾರವಿಲ್ಲದೇ ಸಾಧ್ಯವಿಲ್ಲ. ಇದನ್ನು ನಮ್ಮ ದೇಶದ ಇತಿಹಾಸದ ಪುಟಗಳನ್ನು ತೆಗೆದು ನೋಡಿದರೆ ಸ್ಪಷ್ಟವಾಗಿ ತಿಳಿಯುತ್ತದೆ. ಮುಸ್ಲಿಂ ರಾಜರು ರಾಜ್ಯಭಾರ ಮಾಡಿದ್ದಾಗಲಿ, ಬ್ರಿಟಿಷರು ಒಳಬರಲು ಕಾರಣವಾಗಲಿ, ಕಿತ್ತೂರು ಚನ್ನಮ್ಮಳ ಸೋಲಿನ ಕಾರಣವಾಗಲಿ-ಹೀಗೆ ಹತ್ತು ಹಲವು ಘಟನೆಗಳ ಹಿನ್ನೆಲೆಯಲ್ಲಿ ಇಲ್ಲಿನವರ ಸಹಕಾರ ಪಿತೂರಿಗಳಿಂದಲೇ ಇವೆಲ್ಲಾ ನಡೆದಿದ್ದೆಂದು ತಿಳಿಯುತ್ತದೆ. ಇದನ್ನು ತಿಳಿದಿದ್ದ ಜಗದ್ಗುರುಗಳು ಮುಂದುವರೆದು ಹಣದ ಆಸೆ, ಆಮಿಷಕ್ಕೆ ಇಂತಹ ಹೀನ ಕೃತ್ಯಗಳಿಗೆ ಸಹಕರಿಸುವವರು ದೇಶದ್ರೋಹಿಗಳೆನಿಸಿಕೊಳ್ಳುವರು ಎಂದು ಅಭಿಪ್ರಾಯಪಟ್ಟರು. ಭಾರತದೇಶ ಎಲ್ಲ ಧರ್ಮಗಳ ತವರೂರು. ಎಲ್ಲಾ ಧರ್ಮೀಯರಿಗೂ ಸಮಾನ ಅವಕಾಶಗಳಿವೆ. ಹೀಗಿರುವಾಗ ಎಲ್ಲಾ ಧರ್ಮದ ಅನುಯಾಯಿಗಳು ಒಂದಾಗಿ ಸಂಕಷ್ಟದ ಸಮಯದಲ್ಲಿ ದೇಶರಕ್ಷಣೆಗೆ ಮುಂದಾಗಬೇಕು. ಇಂದು ದೇಶಭಕ್ತ, ದೇಶಭಕ್ತಿ ಮಾಯವಾಗಿ ದೇಹಭಕ್ತಿ ಅಂದರೆ ಸ್ವಾರ್ಥ ಭಾವನೆ ಎಲ್ಲೆಡೆ ಬೆಳೆಯುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಒಗ್ಗಟ್ಟಿನಿಂದ ಉಗ್ರರ ವಾದ ಎದುರಿಸಿ

ವಿಜಯ ಕರ್ನಾಟಕ 7-12-2008

ಮುಂಬಯಿನ ಉಗ್ರರ ದಾಳಿ ನಡೆದ ಘಟನೆಯನ್ನು ನೆನೆಯುತ್ತಾ ಇತ್ತೀಚೆಗೆ ವಿಶ್ವದೆಲ್ಲೆಡೆ ರಾಜಸಿ ಮತ್ತು ತಾಮಸಿ ಶಕ್ತಿಯು ಬೆಳೆಯುತ್ತಿದ್ದು ಸಾತ್ವಿಕತೆಗೆ ಅವಕಾಶ ಕಡಿಮೆಯಾಗುತ್ತಿದೆ. ಎಲ್ಲೆಡೆ ರಾಕ್ಷಸೀ ಕೃತ್ಯಗಳು ನಡೆಯುತ್ತಿವೆ. ಜಗತ್ತಿನ ಯಾವುದೇ ಧರ್ಮವು ಹಿಂಸೆಯನ್ನು ಬೋಧಿಸುವುದಿಲ್ಲ. ಉಗ್ರ ಚಟುವಟಿಕೆಗಳು ಯಾವ ಸಮಸ್ಯೆಯನ್ನೂ ದೂರ ಮಾಡುವುದಿಲ್ಲ. ಆದರೂ ನೆರೆರಾಷ್ಟ್ರಗಳ ಯುವಕರು ಈ ದಾರಿ ತುಳಿಯುತ್ತಿರುವುದನ್ನು ಆಯಾ ರಾಷ್ಟ್ರಗಳ ಸಾಧುಸಂತರು ಮತ್ತು ಫಕೀರರು ಇಂದು ತಮ್ಮ ದೇಶದ ಪ್ರಜೆಗಳಿಗೆ ಸಾತ್ವಿಕತೆಯ ಸಂದೇಶವನ್ನು ಕೊಡಬೇಕಾಗಿದೆ. 'ಮಾರೋ ಔರ್ ಮರೋ' ಎಂಬ ಸಂಸ್ಕೃತಿಯನ್ನು ಬಿಟ್ಟು 'ಜಿಯೋ ಔರ್ ಜೀನೇದೋ' ಎಂಬ ಸಂಸ್ಕೃತಿಯನ್ನು ಎಲ್ಲಾ ರಾಷ್ಟ್ರದ ಯುವಕರು ಅನುಸರಿಸಬೇಕೆಂಬ ಆಶಯವನ್ನು ಜಗದ್ಗುರುಗಳು ವ್ಯಕ್ತಪಡಿಸಿದ್ದನ್ನು ನೋಡಿದರೆ ಅವರ ದೂರದೃಷ್ಟಿ ಎಷ್ಟೆಂಬುದು ತಿಳಿಯುತ್ತದೆ. ಸಾಧು ಸಂತರು ರಾಷ್ಟ್ರದ ಸಾತ್ವಿಕ ಶಕ್ತಿಗಳು. ಭಾರತದ ಸಾಧು-ಸಂತರು ಮೊದಲಿನಿಂದಲೂ ಅಹಿಂಸೆಯ ಸಂದೇಶವನ್ನು ಸಾರುತ್ತಾ ಬಂದಿದ್ದಾರೆ. ಹಾಗೂ ಈ ರಾಷ್ಟ್ರದಲ್ಲಿ ಎಲ್ಲ ಕೋಮಿನವರೂ ಸಹಬಾಳ್ವೆಯನ್ನು ನಡೆಸಲು ಸಾಧ್ಯವಾಗಿದೆ ಎಂದು ಸಾಧು-ಸಂತರ ಕರ್ತವ್ಯವನ್ನು ಮತ್ತೊಮ್ಮೆ ಜಾಗ್ರತಗೊಳಿಸಿದರು.

ಸಾಧು, ಸಂತರು ರಾಷ್ಟ್ರದ ಸಾತ್ವಿಕ ಶಕ್ತಿಗಳು : ಕಾಶಿ ಜಗದ್ಗುರುಗಳು

ವಿಜಯ ಕರ್ನಾಟಕ 2-12-2008

ಕೇಂದ್ರ ಕಾರ್ಯಗಳನ್ನು ತಡೆಗಟ್ಟಲು ನಮ್ಮ ರಕ್ಷಣಾ ಪಡೆಯು ಸಮರ್ಥವಾಗಿದೆ. ಆದರೂ ಅದಕ್ಕೆ ಇನ್ನಷ್ಟು ಬಲವನ್ನು ಒದಗಿಸಲು ಎಲ್ಲ ಪಕ್ಷಗಳು ಒಗ್ಗಟ್ಟಿನಿಂದ ವರ್ತಿಸಬೇಕೇ ಹೊರತು ಪರಸ್ಪರ ದೋಷಾರೋಪಣೆ ನಿಲ್ಲಿಸಬೇಕೆಂದು ರಾಜಕಾರಣಿಗಳಿಗೆ ಸಲಹೆ ಮಾಡಿದ್ದನ್ನು

ತಿಳಿದಾಗ, ಜಗದ್ಗುರುಗಳು ಯಾವುದೇ ಸಮಸ್ಯೆಗೆ ಪರಿಹಾರ ಕೊಡುವಲ್ಲಿ ಆ ಸಮಸ್ಯೆಯ ಮೂಲಕ್ಕೆ ಹೋಗಿ ತಲಸ್ಪರ್ಶಿಯಾಗಿ ಅದರ ಬಗೆಗೆ ಆಲೋಚಿಸುವ ಅವರ ವೈಖರಿ ರಾಷ್ಟ್ರವನ್ನಾಳುವ ನಾಯಕರಿಗೆ ಇದ್ದರೆ ರಾಷ್ಟ್ರವು ಪ್ರಗತಿ ಕಾಣುವುದರಲ್ಲಿ ಅನುಮಾನವಿಲ್ಲ. ರಕ್ಷಣಾ ಪಡೆಗಳೊಡನೆ ಸಾರ್ವಜನಿಕರೂ ಕೈ ಜೋಡಿಸಬೇಕೆಂಬ ಜಗದ್ಗುರುಗಳ ಚಿಂತನೆಯ ಬಗ್ಗೆ ಎಲ್ಲರೂ ಯೋಚಿಸಬೇಕಾಗಿದೆ.

ಭಯೋತ್ಪಾದನಾ ನಿಗ್ರಹಕ್ಕೆ ಜನರಲ್ಲಿ ದೈವಭಕ್ತಿ ಜೊತೆಗೆ ದೇಶಭಕ್ತಿ ಬೆಳೆಯಬೇಕಾಗಿದೆ. ಪರ ರಾಷ್ಟ್ರಗಳ ಆಕ್ರಮಣ, ಭಯೋತ್ಪಾದನೆ ತಡೆಗೆ ಸರ್ವರೂ, ಜಾತಿ ಮತ ಧರ್ಮ ಭಾಷೆಗಳ ಭೇದ ಮರೆತು ಒಂದಾಗಬೇಕು.

'ದೇಶದ ಪ್ರತಿಯೊಬ್ಬರಿಗೂ ಸೈನಿಕ ಶಿಕ್ಷಣ ತರಬೇತಿ ಅಗತ್ಯ' ಎಂದ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಹೇಳಿಕೆಯನ್ನು ಜಗದ್ಗುರುಗಳು ಬೆಂಬಲಿಸುತ್ತಾ ಇದನ್ನು ಶಾಲಾ ಕಾಲೇಜುಗಳು ಅನುಷ್ಠಾನಕ್ಕೆ ತರಬೇಕೆಂದರು. ಒಟ್ಟಿನಲ್ಲಿ ರಾಷ್ಟ್ರಾಭಿಮಾನ ಬೆಳೆಸುವ ಶಿಕ್ಷಣ ಅತ್ಯಗತ್ಯವಾಗಿದೆ ಎಂಬುದು ಅವರ ಒಟ್ಟಾರೆಯಾದ ನಿಲವು.

ಅಮರನಾಥ : ರಾಜಕೀಯ ಬೇಡ

ವಿಜಯ ಕರ್ನಾಟಕ 15-8-2008

ಅಮರನಾಥ ಹಿಮಲಿಂಗದ ದೇವಾಲಯದ ಭೂಮಿ ವಿವಾದ : ಜಗದ್ಗುರುಗಳ ಹೇಳಿಕೆ

ಜಗದ್ಗುರುಗಳು ಯಾವುದೇ ವಿಷಯ ಅಥವಾ ಘಟನೆ ಕುರಿತು ಎಂದೂ ಹಾರಿಕೆಯ ಉತ್ತರವನ್ನಾಗಲಿ, ಹೇಳಿಕೆಯನ್ನಾಗಲಿ ಕೊಡುತ್ತಿರಲಿಲ್ಲ. ತಮ್ಮ ಜ್ಞಾನದ ಪರಿಧಿಯನ್ನು ಪ್ರತಿನಿತ್ಯ ಹೆಚ್ಚಿಸಿಕೊಳ್ಳುತ್ತಿದ್ದರು. ಹಾಗಾಗಿ ಪ್ರಸ್ತುತ ಘಟನೆಗಳಲ್ಲಿ ಯಾವುದನ್ನೇ ಕುರಿತು ಪ್ರಶ್ನೆ ಕೇಳಿದಾಗ-ಆ ಸಮಸ್ಯೆ ಕುರಿತು ಪರಿಹಾರಾತ್ಮಕ ಉತ್ತರಗಳನ್ನು ಕೊಡುವ ಜಗದ್ಗುರುಗಳ ಜ್ಞಾನಕ್ಕೆ ನಾವು ಮಣಿಯಲೇಬೇಕು.

ಅಮರನಾಥ ದೇವಾಲಯ ಮಂಡಲಿಗೆ ಸ್ಥಳೀಯ ಸರಕಾರ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಭೂಮಿ ನೀಡಿದ್ದರು. ರಾಜಕೀಯ ಕಾರಣಗಳಿಂದಾಗಿ ಹಿಂದಕ್ಕೆ ಪಡೆಯುವ ತಪ್ಪು ನಿರ್ಧಾರದಿಂದಾಗಿ ಅಲ್ಲಿ ಭೂಮಿವಿವಾದ ರಾಜಕೀಯ ಸ್ವರೂಪ ತಾಳಿತ್ತು. ಈ ಸಂದರ್ಭದಲ್ಲಿ ಹೈದರಾಬಾದ್‌ನಲ್ಲಿದ್ದ ಜಗದ್ಗುರುಗಳು ಈ ವಿಷಯ ಕುರಿತು ತಮ್ಮ ಅಭಿಪ್ರಾಯವೇನು ಎಂದು ಅಲ್ಲಿನವರು ಕೇಳಿದ್ದಕ್ಕೆ ಆ ಸಮಸ್ಯೆಯನ್ನು ಕುರಿತು ವಿಶ್ಲೇಷಣೆ ಮಾಡಿ, ಅಮರನಾಥ ಪ್ರಪಂಚದ ಅತ್ಯಂತ ಪವಿತ್ರಕ್ಷೇತ್ರ ಹಾಗೂ ಪರಮ ಶ್ರದ್ಧಾಕೇಂದ್ರವಾಗಿದೆ. ಅದರ ಅಭಿವೃದ್ಧಿ, ಸಂರಕ್ಷಣೆ ಎಲ್ಲರ ಆದ್ಯ ಕರ್ತವ್ಯ. ಜೊತೆಗೆ ಕಾಶ್ಮೀರ ಮೂಲತಃ ಶೈವ ಕ್ಷೇತ್ರ. ಕಾಶ್ಮೀರ ಶೈವದರ್ಶನ ಜಾಗತಿಕ ಧರ್ಮದರ್ಶನಗಳಲ್ಲಿ ಅಗ್ರಸ್ಥಾನ ಪಡೆದಿರುವುದಕ್ಕೆ ಮೂಲ ಕಾರಣ ಅಮರನಾಥ ಹಿಮಲಿಂಗ ದೇವಾಲಯ. ಈ ದೇವಾಲಯಕ್ಕೆ ಭೂಮಿ ಕೊಟ್ಟು ಮತ್ತೆ ಹಿಂಪಡೆದಿರುವುದು ತಪ್ಪು ನಿರ್ಧಾರ. ಈ ನಿರ್ಧಾರ ಬಹುಸಂಖ್ಯಾತರ ಭಾವನೆಗಳಿಗೆ ಧಕ್ಕೆ ತಂದಿದೆ. ಈ ವಿವಾದವನ್ನು ಕೇಂದ್ರ ಸರಕಾರ ಬೇಗ ಬಗೆಹರಿಸಬೇಕೆಂದು ಶ್ರೀಗಳವರು ಕೇಂದ್ರಕ್ಕೆ ಕಿವಿಮಾತು ಹೇಳಿದರು. ಈ ದೇವಾಲಯಕ್ಕೆ ಭೂಮಿ ಸಿಕ್ಕಿದಲ್ಲಿ ಆಗುವ ಅನುಕೂಲಗಳ ಪಟ್ಟಿಯನ್ನೇ ನೀಡಿದರು. ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಮೂಲಭೂತ ಸೌಕರ್ಯ ಕಲ್ಪಿಸಿಕೊಡುವುದರಿಂದ ಅಲ್ಲಿಗೆ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಾಗುವುದು, ದರ್ಶನಾರ್ಥಿಗಳು ಹೆಚ್ಚಾಗಿ ಬಂದಷ್ಟು ರಾಜ್ಯ ಸರಕಾರಕ್ಕೆ ಲಾಭವಾಗುವುದು, ಸ್ಥಳೀಯ ಅಲ್ಪಸಂಖ್ಯಾತ ಬಂಧುಗಳಿಗೆ ಹೆಚ್ಚಾಗಿ ಕೆಲಸ ದೊರೆಯುವುದು, ಇದರಿಂದಾಗಿ ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು-ಮುಂತಾದ ಅನುಕೂಲಗಳನ್ನು ತಿಳಿಸಿ ಜಗದ್ಗುರುಗಳು ಸರಕಾರ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ವಿವಾದವನ್ನು ಸುಖಾಂತ್ಯಗೊಳಿಸಬೇಕು ಇಲ್ಲದಿದ್ದಲ್ಲಿ ಕೋಮು ಸದ್ಭಾವನೆಗೆ ಧಕ್ಕೆ ತಗಲುವುದು ಎಂದು ಹೇಳಿದ್ದಲ್ಲದೆ-ಕೋಮು ದಳ್ಳುರಿಗೆ ಯತ್ನಿಸಿ ಶಾಂತಿ ಕದಡುವವರ ವಿರುದ್ಧ ಕಠಿಣಕ್ರಮ ತೆಗೆದುಕೊಂಡು ದೇಶದ ಏಕತೆ ಮತ್ತು ಸೌಹಾರ್ದವನ್ನು ಕೇಂದ್ರ ಸರಕಾರ ಕಾಪಾಡಬೇಕೆಂದು ಸರಕಾರಕ್ಕೆ ಮನವಿ ಮಾಡಿದರು.

ಮಠಾಧೀಶರು ರಾಜಕೀಯ ಸಲಹೆ ನೀಡುವುದು ತಪ್ಪಲ್ಲ-ಜಗದ್ಗುರುಗಳು

ಒಮ್ಮೆ ದಾವಣಗೆರೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಅನೇಕ ದಿನಪತ್ರಿಕಾ ಪ್ರತಿನಿಧಿಗಳು ಒಟ್ಟಾಗಿ ಸೇರಿ ಜಗದ್ಗುರುಗಳಿಗೆ ನೇರವಾಗಿ ಕೆಲವು ಪ್ರಶ್ನೆಗಳನ್ನು ಕೇಳಿದರು.

1. ಮಠಾಧೀಶರು ರಾಜಕಾರಣಿಗಳಿಗೆ ಸಲಹೆ ನೀಡುವುದು ಸರಿಯೆ?
2. 2012ರಲ್ಲಿ ಪ್ರಳಯವಾಗುತ್ತದೆ ಎನ್ನುವ ಬಗ್ಗೆ ತಮ್ಮ ಅಭಿಪ್ರಾಯವೇನು?
3. ಕಾಶೀಪೀಠದ ಸಾಮಾಜಿಕ ಕೊಡುಗೆಗಳೇನು?

ಎಲ್ಲ ಪ್ರಶ್ನೆಗಳಿಗೆ ಎಂದಿನಂತೆ ಜಗದ್ಗುರುಗಳು ಯಾವ ರೀತಿಯಲ್ಲಿ ತಮ್ಮ ಅಭಿಪ್ರಾಯಗಳು ಸರಿ ಎಂದು ಕೆಲವು ಉದಾಹರಣೆ ನೀಡುತ್ತಾ ಹೇಳಿದರು.

'ರಾಜಕಾರಣಿಗಳಿಗೆ ಮಾರ್ಗದರ್ಶನ ತಪ್ಪಲ್ಲ'

ಮಠಾಧೀಶರು ಒಂದೇ ಪಕ್ಷಕ್ಕೆ ಅಂಟಿಕೊಳ್ಳುವುದು ತಪ್ಪು–ಕಾಶೀ ಶ್ರೀಗಳು

ನಗರವಾಣಿ ರಾವಣಸಿರಿ 29–12–2009

ರಾಷ್ಟ್ರ ಅಥವಾ ರಾಜ್ಯದ ಹಿತಾಸಕ್ತಿಯಿಂದ ಯಾವುದೇ ಮಠಾಧೀಶರೂ ಸಹ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡುವುದು ತಪ್ಪಲ್ಲ. ಆದರೆ, ಮಠಾಧೀಶರು ಒಂದೇ ಪಕ್ಷಕ್ಕೆ ಅಂಟಿಕೊಳ್ಳುವುದು ಸೂಕ್ತವಲ್ಲ. ರಾಜಕಾರಣದಲ್ಲಿ ಮಠಾಧೀಶರ ಪ್ರವೇಶ ಕೇವಲ ರಾಷ್ಟ್ರ ಸಮಾಜ ಹಿತಾಸಕ್ತಿಗೆ ಇರಬೇಕು–ಯಾವುದೇ ಸ್ವಂತ ರಾಜಕಾರಣ ಮಾಡಬಾರದು. ಧರ್ಮಪೀಠಗಳು ಹಿಂದಿನಿಂದಲೂ ರಾಜ್ಯ, ರಾಷ್ಟ್ರದ ಹಿತ ಆಧರಿಸಿ ರಾಜ ಮಹಾರಾಜರಿಗೆ ಮಾರ್ಗದರ್ಶನ ನೀಡಿವೆ. ರಾಜನೇ ಇರಲಿ, ರಾಜಕಾರಣಿಯೇ (ಅಧಿಕಾರದಲ್ಲಿರುವ) ಆಗಿರಲಿ ಹಾದಿಬಿಟ್ಟು ನಡೆದಾಗ ಅಂಥವರನ್ನು ಸನ್ಮಾರ್ಗಕ್ಕೆ ತರುವ 'ಧರ್ಮದಂಡ' ಅನಾದಿಯಿಂದಲೂ ಇದ್ದೇ ಇದೆ. ಹಿಂದೆ ರಾಜ ಆದವನು ತನಗಿಂತ ಹೆಚ್ಚಿನ ಅಧಿಕಾರಿಗಳು ಯಾರೂ ಇಲ್ಲ ಎಂದು ಅಹಂಕಾರದಿಂದ ಹಾದಿತಪ್ಪಿ ನಡೆದಾಗ ಆತನಿಗಿಂತ ಮೇಲಿರುತ್ತಿದ್ದ 'ಧರ್ಮದಂಡ' ಸನ್ಮಾರ್ಗ ತೋರುತ್ತಿತ್ತು. ರಾಜನಿರಲಿ, ರಾಜಕಾರಣಿಯಿರಲಿ ಸತ್ಯ, ಅಹಿಂಸೆ, ಸನ್ಮಾರ್ಗ ಬಿಟ್ಟು ತಪ್ಪು ಹಾದಿ ತುಳಿದಾಗ ಆತನಿಗೆ ತಿಳಿ ಹೇಳುವ ಕೆಲಸವನ್ನು ಧರ್ಮದಂಡ ಮಾಡುತ್ತದೆ. ಯಾವುದೇ ಸರಕಾರ ತಪ್ಪು ಹಾದಿ ತುಳಿದಾಗ ಅದಕ್ಕೆ ಸನ್ಮಾರ್ಗ ತೋರುವುದು ಮಠಾಧೀಶರ ಕರ್ತವ್ಯವಾಗಿದೆ. ಮಠಾಧೀಶರ ಮಾತು ಕೇಳಿ, ತಪ್ಪು ತಿದ್ದಿಕೊಳ್ಳುವ ಮನೋಭಾವವೂ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಬರಬೇಕು ಎಂದು ಸಮರ್ಥನೆ ನೀಡಿದರು.

'ರಾಜ್ಯ, ರಾಷ್ಟ್ರ ಹಿತಕ್ಕೆ ರಾಜಕೀಯ ಸಲಹೆ ತಪ್ಪಲ್ಲ'

ಧರ್ಮಪೀಠಗಳು ಹಿಂದಿನಿಂದಲೂ ರಾಜ್ಯ, ರಾಷ್ಟ್ರದ ಹಿತ ಆಧರಿಸಿ ರಾಜ, ಮಹಾರಾಜರಿಗೆ ಕೂಡಾ ಮಾರ್ಗದರ್ಶನ ನೀಡಿವೆ.

2012ರಲ್ಲಿ ಪ್ರಳಯ ಎಂಬುದು ಕಾಲ್ಪನಿಕ ಕಟ್ಟು ಕಥೆಯಲ್ಲ. ಭೂತಾಪಮಾನದಿಂದ ಸಮುದ್ರಮಟ್ಟ ಏರಿಕೆಯಾಗಿ ದುಷ್ಪರಿಣಾಮವಾಗಲಿದೆ ಎಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ಪರಿಶೀಲಿಸಬೇಕು ಎಂದದ್ದಲ್ಲದೆ ನಿತ್ಯಪ್ರಕೃತಿಯ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯದಿದ್ದರೆ ಪ್ರಳಯವಷ್ಟೇ ಅಲ್ಲ ಮಾನವ ಸಂಕುಲವೇ ನಾಶವಾದೀತು. ಆನಂತರ ಹೊಸ ಜೀವಕೋಟಿ ಹುಟ್ಟಿದರೂ ಅಚ್ಚರಿಪಡಬೇಕಿಲ್ಲ ಎಂದು ವೈಚಾರಿಕ ಚಿಂತನೆಯನ್ನು ಪತ್ರಕರ್ತರ ಮುಂದಿಟ್ಟರು.

'ಮಠಾಧೀಶರಿಗೆ ನಿಸ್ವಾರ್ಥತೆ ಅಗತ್ಯ'

22–3–12

(ಕಾಶೀಪೀಠದ ಬಗ್ಗೆ ಈಗಾಗಲೇ ಅನೇಕ ಕಡೆ ಬರೆದಿರುವುದರಿಂದ ಇಲ್ಲಿ ಈ ಪ್ರಶ್ನೆ ಅಪ್ರಸ್ತುತವೆಂದು ಕೈಬಿಡಲಾಗಿದೆ.)

ನಮ್ಮ ನಾಡಿನ ಮಠಾಧಿಪತಿಗಳು ಸಮಾಜ ಸುಧಾರಣೆಯಲ್ಲಿ ನೀಡಿರುವ ಕೊಡುಗೆ ಅಪಾರವಾದದ್ದು. ನ್ಯಾಯಾಲಯಗಳು ದುಷ್ಟನನ್ನು ದುಷ್ಟ ಎಂದು ಗುರುತಿಸುವುದೇ ಹೊರತು, ಒಳ್ಳೆಯವನೆಂದು ಹೇಳುವುದಿಲ್ಲ. ಧರ್ಮಾಧಿಕಾರಿಗಳಾದ ಗುರುಗಳು ಅವನಿಗೆ ಸಂಸ್ಕಾರ ನೀಡಿ, ಸುಧಾರಣೆ ಮಾಡುವ ಅಧಿಕಾರವಿದೆ ಎಂದು ಪತ್ರಕರ್ತರಿಗೆ ತಿಳಿಸಿದರು.

ಮಠಗಳಿಗೆ ಹಣ ನೀಡುವುದು ತಪ್ಪಲ್ಲ

ಕಾಶಿ ಜಗದ್ಗುರುಗಳು ಅಬ್ಬೆ ತುಮಕೂರಿನ ಶ್ರೀಮಠದಲ್ಲಿ ಪತ್ರಿಕಾ ಸುದ್ದಿಗಾರರೊಂದಿಗೆ ಅನೇಕ ವಿಷಯಗಳ ಬಗ್ಗೆ ತಮ್ಮ ನಿಲವನ್ನು ಸ್ಪಷ್ಟಪಡಿಸಿದರು.

ಹಿಂದೆ ರಾಜರ ಆಶ್ರಯದಲ್ಲಿ ಮಠಗಳು ಬೆಳೆಯುತ್ತಿದ್ದವು. ಸಾರ್ವಜನಿಕ ಕ್ಷೇತ್ರದಲ್ಲಿ ಮಠಗಳು ಸರ್ಕಾರವು ಮಾಡುವ ಕೆಲಸಗಳನ್ನು ಮಾಡುತ್ತಿವೆ. ಅದನ್ನು ಗಮನಿಸಿ ಸರ್ಕಾರ ಮಠಗಳಿಗೆ ಅನುದಾನ ನೀಡುತ್ತಿದೆ. ಅಂದು ರಾಜರು ಕೊಡುತ್ತಿದ್ದ ನೆರವು ಇಂದು ಸರ್ಕಾರ ಕೊಟ್ಟರೆ ತಪ್ಪಲ್ಲ. ಸರ್ಕಾರ ಒದಗಿಸಿದ ಅನುದಾನ ಸದ್ಬಳಕೆ ಮಾಡಿಕೊಂಡು ಸಾಮಾಜಿಕ ಕ್ಷೇತ್ರಕ್ಕೆ ಸೇವೆ ಸಲ್ಲಿಸಬೇಕೇ ಹೊರತು ದುರ್ಬಳಕೆ ಆಗಬಾರದು. ಬಡ ಮಕ್ಕಳಿಗೆ ಶಿಕ್ಷಣ ಒದಗಿಸಬೇಕಾದ್ದು ಸರ್ಕಾರದ ಕೆಲಸ. ಈ ಕೆಲಸವನ್ನು ಮಠಮಾನ್ಯಗಳು ಮಾಡುತ್ತಿವೆ. ಸರ್ಕಾರದ ಅನುದಾನದ ಬಗ್ಗೆ ತಪ್ಪಾಗಿ ಅರ್ಥೈಸಿಕೊಳ್ಳುವುದು ಸರಿಯಲ್ಲವೆಂದರು.

ನಾಯಕನ ಆಯ್ಕೆ ಪ್ರಜಾಪ್ರತಿನಿಧಿಗಳಿಗೆ ಬಿಟ್ಟ ವಿಷಯ : ಕಾಶೀ ಜಗದ್ಗುರು ಗೊಂದಲದ ಹೇಳಿಕೆ ನೀಡದಿರಲು ಮಠಾಧೀಶರಿಗೆ ಸಲಹೆ

ಮಠಾಧಿಪತಿಗಳ ಮೇಲೆ ಎಲ್ಲರಿಗೂ ಗೌರವವಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮಠಾಧೀಶರು ಹೇಳಿಕೆ ನೀಡಬೇಕು. ಗೊಂದಲ ಸೃಷ್ಟಿಸುವ ಹೇಳಿಕೆ ನೀಡಬಾರದು. ಏಕೆಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ತಮ್ಮ ನಾಯಕನನ್ನು ಆಯ್ಕೆ ಮಾಡಿಕೊಳ್ಳುವುದು ಪ್ರಜಾಪ್ರತಿನಿಧಿಗಳಿಗೆ ಬಿಟ್ಟ ವಿಷಯ. ಇದನ್ನು ಕುರಿತಂತೆ ಮಠಾಧೀಶರು ಗೊಂದಲದ ಹೇಳಿಕೆ ನೀಡಿ ಬಿಕ್ಕಟ್ಟು ಸೃಷ್ಟಿ ಮಾಡಬಾರದೆಂದರು.



ಮಠಗಳು ಬಹುಕಾಲದಿಂದಲೂ ಸರಕಾರ ಮಾಡುವುದಕ್ಕಿಂತ ನೂರು ಪಟ್ಟು ಸಾಮಾಜಿಕ ಕೆಲಸ ಮಾಡುತ್ತ ಬಂದಿವೆ. ಸಮಾಜದ ಅಭಿವೃದ್ಧಿಗೆ ಶ್ರಮಿಸುವ ಮಠಗಳಿಗೆ ಸರಕಾರ ಹಣ ನೀಡಿದರೆ ತಪ್ಪೇನಲ್ಲ.

ರಾಜಕಾರಣಿಗಳಿಗೆ ಶ್ರೀಗಳ ಸಲಹೆ : ಸಮರ್ಥನೆ

ಅಗತ್ಯ ಸಂದರ್ಭಗಳಲ್ಲಿ ಮಠಾಧೀಶರು ರಾಜಕಾರಣಿಗಳಿಗೆ ಸಲಹೆ ನೀಡುವುದು, ಸರಿಯಾದ ದಾರಿಯಲ್ಲಿ ನಡೆಯುವಂತೆ ತಿಳಿ ಹೇಳುವುದು ತಪ್ಪಲ್ಲ. ಹಿಂದೆ ಅಗತ್ಯ ಸಂದರ್ಭಗಳಲ್ಲಿ ರಾಜನಿಗೆ ಧರ್ಮಗುರುಗಳು ಮಾರ್ಗದರ್ಶನ ನೀಡುತ್ತಿದ್ದ ಅನೇಕ ನಿದರ್ಶನಗಳು ಇತಿಹಾಸದಲ್ಲಿ ದೊರೆಯುತ್ತವೆ. ಸರಿಯಾದ ಮಾರ್ಗದಲ್ಲಿ ನಡೆಯುವಂತೆ ನಿಸ್ವಾರ್ಥದಿಂದ ನೀಡುವ ಯಾವುದೇ ಸಲಹೆ ತಪ್ಪಲ್ಲ. ರಾಷ್ಟ್ರದ್ರೋಹ ಮಾಡದೇ ಆತ್ಮವಂಚನೆಯಿಲ್ಲದೆ ಯಾರು ಬೇಕಾದರೂ ಮಾರ್ಗದರ್ಶನ ನೀಡಬಹುದೆಂದರು.

ಇದೇ ಸಂದರ್ಭದಲ್ಲಿ ಕಾಶೀ ಪೀಠದ 'ಕಾಶಿ ವಿಶ್ವೇಶ್ವರ ಇಂಗ್ಲಿಷ್ ಮಾಧ್ಯಮ ಶಾಲೆ'ಯ ನೂತನ ಕಟ್ಟಡವನ್ನು ಕೇಂದ್ರ ಗೃಹಸಚಿವರಾದ ಶ್ರೀ ಶಿವರಾಜ ಪಾಟೀಲ್ ಉದ್ಘಾಟಿಸಿದರು. ಈ ಕಟ್ಟಡವನ್ನು ಕಲ್ಯಾಣಿಯವರು ಒಂದು ಕೋಟಿ ರೂ. ವೆಚ್ಚದಿಂದ ನಿರ್ಮಿಸಿ ಪೀಠಕ್ಕೆ ಕೊಟ್ಟಿದ್ದಾರೆಂದು ಜಗದ್ಗುರುಗಳು ತಿಳಿಸಿದರು.

ಡಾ. ಬಾಬಾ ಸಾಹೇಬ ಕಲ್ಯಾಣಿ ಅವರಿಗೆ ನಾಗರಿಕ ಸನ್ಮಾನ-ಸಾನ್ನಿಧ್ಯ ಜಗದ್ಗುರುಗಳು

ಕಾಶೀ ಪೀಠಕ್ಕೂ ಬಾಬಾ ಸಾಹೇಬ ಕಲ್ಯಾಣಿಯವರಿಗೂ ನಿಕಟ ಬಾಂಧವ್ಯವಿದೆ. ಜಗದ್ಗುರುಗಳು ಯಾವುದೇ ಸಾಮಾಜಿಕ ಕಲ್ಯಾಣಕರ ಯೋಜನೆಗಳನ್ನು ಪುಣೆಯಲ್ಲಿ ರೂಪಿಸಿದರೆ-ಅದನ್ನು ಅನುಷ್ಠಾನಗೊಳಿಸಲು ಕಲ್ಯಾಣಿಯವರು ಸದಾ ಸಿದ್ಧರಿರುತ್ತಾರೆ. ಇಂತಹ ಡಾ. ಬಾಬಾ ಸಾಹೇಬ ಕಲ್ಯಾಣಿಯವರಿಗೆ ಭಾರತ ಸರಕಾರ 'ಪದ್ಮಭೂಷಣ' ಪ್ರಶಸ್ತಿ ನೀಡಿ ಗೌರವಿಸಿದಾಗ-ಪುಣೆಯ ನಾಗರೀಕರು ಅವರಿಗಾಗಿ ನಾಗರಿಕ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಿ-ಸಾನ್ನಿಧ್ಯ ವಹಿಸಲು ಕಾಶೀ ಜಗದ್ಗುರುಗಳಿಗೆ ಆಮಂತ್ರಣ ನೀಡಿದ್ದರು. ಜಗದ್ಗುರುಗಳು ಕಲ್ಯಾಣಿಯವರ ಪರಿಚಯ ಚೆನ್ನಾಗಿದ್ದುದರಿಂದ ಕಲ್ಯಾಣಿಯವರು ಇಂದು ಇಂತಹ ಪ್ರಶಸ್ತಿಗೆ ಭಾಜನರಾಗಬೇಕಾದರೆ ಅದರ ಹಿಂದಿರುವ ಅವರ ಪರಿಶ್ರಮವೇ ಕಾರಣವೆಂದು ಹಂತ ಹಂತವಾಗಿ ಕಲ್ಯಾಣಿಯವರು ಬೆಳೆದದ್ದನ್ನು ತಿಳಿಸಿದರು.

ಮನುಷ್ಯನು ಭಗವಂತನ ಕೃಪೆ ಪಡೆಯಬೇಕಾದಲ್ಲಿ ತನಗಾಗಿ ಮತ್ತು ಲೋಕಕಲ್ಯಾಣಕ್ಕಾಗಿ ನಿರಂತರ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಆಲಸ್ಯವು ಮನುಷ್ಯನ ಬಹು ದೊಡ್ಡ ಶತ್ರು. ಅಂತಹ ಮನುಷ್ಯ ತನ್ನ ಬದುಕಿನಲ್ಲಿ ಏನನ್ನೂ ಸಾಧಿಸಲಾರ. ನಿರಂತರ ಉದ್ಯೋಗನಿರತನಾದ ಮನುಷ್ಯ ಅಭ್ಯುದಯ ಪಡೆಯಲು ಸಾಧ್ಯ ಎಂದು ಆರಂಭಿಸಿ, ಅಮೇರಿಕದಲ್ಲಿ ಎಂ.ಐ.ಟಿ. ಪಡೆದು ಭಾರತಕ್ಕೆ ಬಂದ ಡಾ. ಬಾಬಾ ಸಾಹೇಬ ಕಲ್ಯಾಣಿಯವರು ಭಾರತ್ ಫೋರ್ಜ್ ಕಂಪನಿಯಲ್ಲಿ ಸ್ವತಃ ಶ್ರಮವಹಿಸಿ ದುಡಿದಿದ್ದರಿಂದಲೇ ಇಂದು ಅವರು ಈ ಕಂಪನಿಯ ಶಾಖೆಗಳನ್ನು ಅಮೇರಿಕ, ಜರ್ಮನಿ, ಚೀನಾ ಮತ್ತು ಸಿಂಗಾಪುರದಲ್ಲಿ ತೆರೆಯಲು ಸಾಧ್ಯವಾಯಿತು. ಫೋರ್ಜಿಂಗ್ ನಿರ್ಮಾಣ ಕಾರ್ಯದಲ್ಲಿ ಭಾರತದ ಖ್ಯಾತಿಯನ್ನು ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲಿ ಪ್ರಸಾರಗೊಳಿಸಿದ ಕಾರಣ ಭಾರತ ಸರಕಾರ ಅವರಿಗೆ 'ಪದ್ಮಭೂಷಣ' ಪ್ರಶಸ್ತಿ ನೀಡಿ ಗೌರವಿಸಿದೆ. ಈ ಗೌರವ ಅವರಿಗೆ ದೊರೆಯಬೇಕಾದರೆ ಅವರಿಗಿರುವ ಉತ್ತಮ ಜ್ಞಾನ ಮತ್ತು ಸತತ ಪರಿಶ್ರಮಗಳೇ ಕಾರಣ. ಇಂದಿನ ಯುವ ಜನಾಂಗ ವಿವಿಧ ಕ್ಷೇತ್ರಗಳ ಜ್ಞಾನ ಪಡೆದು ಅದರ ಸತತ ಅಭಿವೃದ್ಧಿಗೆ ಪ್ರಯತ್ನಿಸಬೇಕೆಂದರು. ಬಾಬಾ ಸಾಹೇಬ ಕಲ್ಯಾಣಿ ಮತ್ತು ಅವರ ಪತ್ನಿ ಸುನಿತಾ ಕಲ್ಯಾಣಿಯವರಿಗೆ ಕಾಶೀ ಪೀಠದಿಂದ ಗುರುರಕ್ಷೆ ನೀಡಿ ಗೌರವಿಸಿದರು.



ಡಾ॥ ಬಾಬಾ ಸಾಹೇಬ ಕಲ್ಯಾಣಿ ಅವರಿಗೆ ನಾಗರಿಕ ಸನ್ಮಾನ - ಸಾನಿಧ್ಯ ಜಗದ್ಗುರುಗಳು

ಈ ಭವ್ಯ ಸಮಾರಂಭದಲ್ಲಿ ಭಾಗಿಯಾಗಲು ಪುಣೆಯ ಮಹಾಪೌರ ಶ್ರೀಮತಿ ಲಕ್ಷ್ಮೀ ಭೋಸಲೇ, ಅನೇಕ ಸಂಸದರು, ಮಾಜಿ ಸಚಿವರು ಅಲ್ಲದೆ ಪುಣೆಯ ನಾಗರಿಕರು ಮತ್ತು ಮಹಾರಾಷ್ಟ್ರದ ವಿವಿಧ ನಗರಗಳಿಂದ ಐದು ಸಾವಿರಕ್ಕೂ ಹೆಚ್ಚು ಜನ ಸಮುದಾಯ ಭಾಗವಹಿಸಿದ್ದರು.

ರಾಷ್ಟ್ರಕ್ಕೆ ಹೆಮ್ಮೆ ತಂದ ಭಾರತ್ ಫೋರ್ಜ್ ಕಂಪನಿ ಇಂದು ವಿಶ್ವದಲ್ಲಿ ದ್ವಿತೀಯ ಸ್ಥಾನ ಗಳಿಸಿ ಭಾರತೀಯರು ಹೆಮ್ಮೆ ಪಡುವಂತಾಗಿದೆ.

ಪ್ರಾಮಾಣಿಕ ಪ್ರಯತ್ನ ಕಾರಣ

ಕೇಂದ್ರ ಗೃಹಸಚಿವ ಶಿವರಾಜ ಪಾಟೀಲ ಅವರು ಸಮಸ್ತ ನಾಗರಿಕರ ಪರವಾಗಿ ಸ್ಮೃತಿ ಚಿಹ್ನೆ ನೀಡಿ ಕಲ್ಯಾಣಿಯವರನ್ನು ಗೌರವಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಬಾಬಾಸಾಹೇಬ ಕಲ್ಯಾಣಿ, ಭಾರತ ಫೋರ್ಜ್ ಕಂಪನಿ ವಿಶ್ವದಲ್ಲಿ ಖ್ಯಾತಿ ಗಳಿಸಲು ಮತ್ತು ತಮಗೆ ಪದ್ಮಭೂಷಣ ಪ್ರಶಸ್ತಿ ದೊರೆಯಲು ಕಂಪನಿಯ ಕೆಲಸಗಾರರ ಪ್ರಾಮಾಣಿಕ ಪ್ರಯತ್ನವೇ ಕಾರಣ ಎಂದರು. ಸದ್ಯ ಫೋರ್ಜಿಂಗ್ ನಿರ್ಮಾಣ ಕಾರ್ಯದಲ್ಲಿ ಭಾರತ ವಿಶ್ವದಲ್ಲಿ ದ್ವಿತೀಯ ಸ್ಥಾನದಲ್ಲಿದೆ. 2009ರೊಳಗೆ ನಮ್ಮ ಕಂಪನಿಯ ಮುಖಾಂತರ ಪ್ರಥಮ ಸ್ಥಾನಕ್ಕೆ ತರಲು ಯತ್ನಿಸುವುದಾಗಿಯೂ ಹೇಳಿದರು.

ರಾಷ್ಟ್ರದ ಉತ್ಥಾನಕ್ಕೆ ಉತ್ತಮ ಜ್ಞಾನ ಅಗತ್ಯ



ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಡಾ. ಬಾಬಾಸಾಹೇಬ ಕಲ್ಯಾಣಿಯವರನ್ನು ಪುಣೆಯಲ್ಲಿ ಏರ್ಪಡಿಸಿದ್ದ ನಾಗರಿಕ ಸನ್ಮಾನ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಶಿವರಾಜ ಪಾಟೀಲ ಅವರು ಗೌರವಿಸಿದರು. ಕಾಶೀ ಪೀಠದ ಜಗದ್ಗುರು ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಸಾನ್ನಿಧ್ಯ ವಹಿಸಿದ್ದರು.

ಚುನಾವಣೆ ವ್ಯವಸ್ಥೆಯ ಬಗ್ಗೆ ಜಗದ್ಗುರುಗಳ ಚಿಂತನೆ

ಭ್ರಷ್ಟಾಚಾರಕ್ಕೆ ಚುನಾವಣೆ ವ್ಯವಸ್ಥೆ ಕಾರಣ

ವಿಜಯ ಕರ್ನಾಟಕ 30, ಜನವರಿ 2009

ಯಾದಗಿರಿ ತಾಲೂಕಿನ ಅಬ್ಬೆ ತುಮಕೂರಿನಲ್ಲಿ ಚುನಾವಣೆ ಮತ್ತು ನಾಗರಿಕರ ಹಕ್ಕು ಇವುಗಳನ್ನು ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಸುದ್ದಿಗಾರರೊಂದಿಗೆ 30–1–2009ರಲ್ಲಿ ತಮ್ಮ ಅಮೂಲ್ಯ ಆಲೋಚನೆಗಳನ್ನು ಹಂಚಿಕೊಂಡರು. ಈಗಿನ ಚುನಾವಣಾ ವ್ಯವಸ್ಥೆಯೇ ಭ್ರಷ್ಟಾಚಾರಕ್ಕೆ ಕಾರಣವಾಗಿದೆ. ಚುನಾವಣೆಗಳಲ್ಲಿ ಕೋಟ್ಯಂತರ ರೂ. ಖರ್ಚು ಮಾಡಿದವರೇ ಇಂದು ಭ್ರಷ್ಟಾಚಾರಕ್ಕೆ ಇಳಿದಿರುವುದು ಜನಜನಿತ. ಮತದಾರ ಹಣ, ಮದ್ಯ, ಬಟ್ಟೆ ಮುಂತಾದ ಆಮಿಷಗಳಿಗೆ ಬಲಿಯಾಗಿ ತಮ್ಮ ಪವಿತ್ರ ಹಕ್ಕನ್ನು ಮಾರಿಕೊಂಡು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ತಂದಿದ್ದಾರೆ ಎಂದು ಕಳವಳದಿಂದ ಹೇಳಿದರು. ಪ್ರಜಾಪ್ರಭುತ್ವದ ಪ್ರಭುವಾದ ಮತದಾರ ತನ್ನ ಪಾತ್ರ ತಿಳಿಯದ ಕಾರಣ ಅವರ ಅಮಾಯಕತೆಯನ್ನು ರಾಜಕಾರಣಿಗಳು ದುರುಪಯೋಗ ಮಾಡಿಕೊಂಡು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆಂದರು.

ಇನ್ನೂ ಮುಂದುವರೆದು ಜಗದ್ಗುರುಗಳು ರಾಜಕಾರಣಿಗಳು ತಮ್ಮ ಸ್ವಂತ ಲಾಭಕ್ಕಾಗಿ ಯಾವ ಮಟ್ಟಕ್ಕಾದರೂ ಇಳಿಯುತ್ತಾರೆ. ಕೆಲ ರಾಜಕೀಯ ಪಕ್ಷಗಳು ಗಡಿವಿವಾದದ ನೆಪದಲ್ಲಿ ದ್ವೇಷ ಭಾವನೆ ಮೂಡಿಸಿ ಭಾರತದ ಏಕತೆಗೆ ಧಕ್ಕೆ ಉಂಟುಮಾಡುತ್ತಿದ್ದಾರೆ. ಇದರಿಂದಾಗಿ ಜನರಲ್ಲಿ ಪರಸ್ಪರ ದ್ವೇಷವುಂಟಾಗಿ ಸಾರ್ವಜನಿಕ ಆಸ್ತಿ ಹಾನಿಮಾಡುತ್ತಿರುವುದು ಉತ್ತಮ ಬೆಳವಣಿಗೆಯಲ್ಲ. ಇದಕ್ಕೆ ಕಡಿವಾಣ ಹಾಕಬೇಕಾದರೆ ಜನಪ್ರತಿನಿಧಿಗಳು ಆಡಳಿತಾಧಿಕಾರಿಗಳು ಮುಂದಾಗಬೇಕಿದೆ. ರಾಜಕಾರಣಿಗಳು ತಮ್ಮ ಸ್ಥಾನ ಉಳಿಸಿಕೊಳ್ಳಲು ಪ್ರಚೋದನಕಾರಿ ಹೇಳಿಕೆಗಳನ್ನು ನೀಡಿ ರಾಷ್ಟ್ರದಲ್ಲಿ ಅಶಾಂತಿ ಸೃಷ್ಟಿಸುವುದನ್ನು ಬಿಟ್ಟು ದೇಶದ ಅಖಂಡತೆ ಮತ್ತು ಅಭಿವೃದ್ಧಿ ಕಡೆ ಗಮನ ಹರಿಸಬೇಕು ಎಂದು ಭಾರತದೇಶದ ಹಿತವನ್ನೇ ದೃಷ್ಟಿಯಲ್ಲಿರಿಸಿಕೊಂಡು ಜಗದ್ಗುರುಗಳು ಹೇಳಿರುವ ಮಾತುಗಳ ಒಂದೊಂದು ಪದದಲ್ಲೂ ರಾಷ್ಟ್ರದ ಬಗೆಗಿನ ಕಾಳಜಿ ಎದ್ದು ಕಾಣುತ್ತದೆ.

ಅಣ್ಣಾ ಹಜಾರೆ, ಬಾಬಾ ರಾಮದೇವರಿಗೆ–ಜಗದ್ಗುರುಗಳ ಬೆಂಬಲ

2011ರಲ್ಲಿ ಅಣ್ಣಾ ಹಜಾರೆ ಮತ್ತು ಬಾಬಾ ರಾಮದೇವ್ ಅವರು ಆರಂಭಿಸಿದ ಭ್ರಷ್ಟಾಚಾರ ನಿರ್ಮೂಲನ ಮತ್ತು ಕಪ್ಪು ಹಣ ಕುರಿತು ಸತ್ಯಾಗ್ರಹದ ಮೂಲಕ ಹೋರಾಟ ಆರಂಭಿಸಿದ್ದು–ಸತ್ಯಾಗ್ರಹದ ಬಿಸಿ ಇಡೀ ಭಾರತವನ್ನೇ ವ್ಯಾಪಿಸಿತ್ತು ಎಂದರೆ ತಪ್ಪಾಗಲಾರದು. ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿ, ಜಿಲ್ಲೆಗಳಲ್ಲಿ, ತಾಲೂಕು ಮಟ್ಟಗಳಲ್ಲಿ ಜನರು ಜಾಗೃತಗೊಂಡು ಅಣ್ಣಾ ಹಜಾರೆಯವರನ್ನು ಬೆಂಬಲಿಸಿ ಸತ್ಯಾಗ್ರಹ,

ಭ್ರಷ್ಟಾಚಾರ ವಿರೋಧಿ ಆಂದೋಲನ

ವಿಜಯ ಕರ್ನಾಟಕ 5–6–2011



ಸಿಂದಗಿಯ ಅಂಬೇಡ್ಕರ್ ವೃತ್ತದಲ್ಲಿ ಕಾಶೀ ಜಗದ್ಗುರು, ಡಾ. ಚಂದ್ರಶೇಖರ ಶಿವಾಚಾರ್ಯರು ನಿರಶನಕ್ಕೆ ಬೆಂಬಲ ವ್ಯಕ್ತಪಡಿಸಿ ಮಾತನಾಡಿದರು.

ಉಪವಾಸಗಳಲ್ಲಿ ಲಕ್ಷಾಂತರ ಜನರು ಭಾಗವಹಿಸಲಾರಂಭಿಸಿದರು. ಯುವ ಜನಾಂಗದಲ್ಲಿ ವಿದ್ಯುತ್ ಸಂಚಲನವಾದಂತೆ ಶಾಲಾ, ಕಾಲೇಜುಗಳಿಂದ ಹೊರಬಂದು ಚಳವಳಿಯಲ್ಲಿ ನಾವೂ ನಿಮ್ಮೊಡನಿದ್ದೇವೆ ಎಂದು ವ್ಯಕ್ತಪಡಿಸಲಾರಂಭಿಸಿದರು. ಈ ಕಾರ್ಯ ಆರಂಭಗೊಳ್ಳಲು ಇಡೀ ದೇಶ ಒಬ್ಬ ಮುಖಂಡನಿಗಾಗಿ ಕಾಯುತ್ತಿದ್ದಂತಿತ್ತು–ಈ ಹೋರಾಟದಲ್ಲಿ ಭಾಗಿಯಾದ ಜನಸಾಗರ ಕಂಡು.

ಈ ಸಮಯದಲ್ಲಿ ಜಗದ್ಗುರುಗಳು ಎರಡು ವರ್ಷಗಳ ಹಿಂದೆ ಚುನಾವಣಾ ವ್ಯವಸ್ಥೆಯೇ ಭ್ರಷ್ಟಾಚಾರಕ್ಕೆ ಕಾರಣ ಎಂಬ ಹೇಳಿಕೆ ನೀಡಿದ್ದು ಇಲ್ಲಿ ನೆನಪಿಸಿಕೊಳ್ಳಬಹುದು. ಜಗದ್ಗುರುಗಳಿಗೂ ಈ ಭ್ರಷ್ಟಾಚಾರ ಕಪ್ಪು ಹಣಗಳ ಬಗ್ಗೆ ತೀವ್ರ ಅಸಮಾಧಾನವಿತ್ತೆಂದು ಕಾಣುತ್ತದೆ. 2011ರಲ್ಲಿ ಸಿಂದಗಿ ಊರಿನಲ್ಲಿ ಜೂನ್ 4ನೇ ತಾ.ನಂದು ಬಾಬಾ ರಾಮದೇವ್ ಯೋಗ ಗುರೂಜಿ ಮತ್ತು ಅಣ್ಣಾ ಹಜಾರೆಯವರು ಕಪ್ಪುಹಣ ಹಾಗೂ ಭ್ರಷ್ಟಾಚಾರ ವಿರೋಧಿಸಿದ ಚಳವಳಿಗೆ ಆ ಊರಿನ ಜನರು ಸ್ಪಂದಿಸಿ ತಾವೂ ಸತ್ಯಾಗ್ರಹ ಮಾಡಿದ್ದರು. ಪಕ್ಷಾತೀತವಾಗಿ ಎಲ್ಲರೂ ಈ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದರು.

ದೇಶ ಕಾಯುವ ಯೋಧ ಯೋಗಿಗೆ ಸಮಾನ

ಉದಯವಾಣಿ 30–6–2011



ಯೋಗಿಯೊಬ್ಬ ಹೇಗೆ ತನ್ನೆಲ್ಲಾ ಪ್ರಾಪಂಚಿಕ ಸಂಬಂಧಗಳನ್ನು ಸುಖ–ಭೋಗಗಳನ್ನು ತ್ಯಜಿಸುವನೋ ಹಾಗೆಯೇ ಯೋಧನೂ ಕೂಡ ತಂದೆ–ತಾಯಿ, ಸಹೋದರ–ಸಹೋದರಿ, ಹೆಂಡತಿ ಮಕ್ಕಳು ಸೇರಿದಂತೆ ಹುಟ್ಟೂರನ್ನು ಬಿಟ್ಟು ತನ್ನ ದೇಶವೇ ಸರ್ವಸ್ವವೆಂದು ದೇಶಕ್ಕಾಗಿ ಹೋರಾಡುವ ಯೋಧ ಸರ್ವಸಂಗ ಪರಿತ್ಯಾಗಿ ಎಂದು ಹೋಲಿಕೆ ನೀಡಿದ್ದು ಯೋಧರ ಬಗ್ಗೆ ಗೌರವ ಹೆಚ್ಚಾಗುವಂತೆ ಮಾಡಿದೆ.

ಈ ಸತ್ಯಾಗ್ರಹದಲ್ಲಿ ಜಗದ್ಗುರುಗಳು ತಾವು ಪೀಠಾಧಿಪತಿಯಾಗಿದ್ದರೂ ಚಳವಳಿಯಲ್ಲಿ ಪಾಲ್ಗೊಂಡಿದ್ದು ನಿಜಕ್ಕೂ ಸ್ವಾಮೀಜಿಗಳ ವಲಯದಲ್ಲಿ ಸಂಚಲನ ಮೂಡಿಸಿತು. ಜಗದ್ಗುರುಗಳು ಅಲ್ಲಿ ಪಾಲ್ಗೊಂಡು ಪಂಚಪೀಠದ ಸಮಸ್ತ ಶಾಖಾಮಠಗಳ ಪರವಾಗಿ ಬೆಂಬಲ ವ್ಯಕ್ತಪಡಿಸಿದ್ದು ಚರಿತ್ರಾರ್ಹ!

ಮಹಾತ್ಮಾ ಗಾಂಧೀಜಿ ಅಂದು ಸ್ವಾತಂತ್ರ್ಯ ಗಳಿಸಲು ಚಳುವಳಿ ಕೈಕೊಂಡಿದ್ದರು. ಇಂದು ಅಣ್ಣಾ ಹಜಾರೆ ಮತ್ತು ಬಾಬಾ ರಾಮ್‌ದೇವ್ ಗುರೂಜಿ ದೇಶದಲ್ಲಿರುವ ಭ್ರಷ್ಟಾಚಾರ ನಿರ್ಮೂಲನೆಗೆ ಹೋರಾಡುತ್ತಿರುವುದು–ನಮಗೆ ಮಾದರಿ ಎಂದು ಗುರುಗಳು ನುಡಿದರು.

ಗಾಂಧೀವಾದಿ ದೇಶಭಕ್ತ ಅಣ್ಣಾ ಹಜಾರೆಯವರ ಉಪವಾಸ ಸುಖಾಂತ್ಯಗೊಳಿಸಲು ಕೇಂದ್ರ ಸರಕಾರಕ್ಕೆ ಒತ್ತಾಯಿಸಿದರು. ಗಾಂಧೀಜಿಯವರು ಆರಂಭಿಸಿದ ಚಳವಳಿಯಲ್ಲಿ ರಾಷ್ಟ್ರಪ್ರೇಮ ಪ್ರತಿಯೊಬ್ಬರಲ್ಲೂ ತುಂಬಿ ತುಳುಕುತ್ತಿತ್ತು. ಈ ಭಾವನೆ ಹಾಗೆಯೇ ಮುಂದುವರಿದಿದ್ದರೆ ಇಂದು ಭಾರತ ಸಂಪದ್ಭರಿತ ರಾಷ್ಟ್ರವಾಗುತ್ತಿತ್ತು. ದುರ್ದೈವವಶಾತ್ ಇಂದು ಅದರ ವಿಪರೀತ ಸ್ಥಿತಿಯನ್ನು ಅನುಭವಿಸುತ್ತಿದ್ದೇವೆ ಎಂದು ಹೇಳುತ್ತಾ ಮುಂದುವರೆದು ಹೈಕೋರ್ಟ್ ನ್ಯಾಯಮೂರ್ತಿಗಳ ಮೇಲೆ ಮಹಾಭಿಯೋಗ ವನ್ನು ಹೊರಡಿಸುವ ಕಾಲ ಬಂದಿದೆ ಎಂದರೆ ಉಳಿದ ಕ್ಷೇತ್ರಗಳ ಗತಿ ಏನು? ಎಂದು ಪ್ರಶ್ನಿಸಿದರು. ಅಣ್ಣಾ ಹಜಾರೆ ಭ್ರಷ್ಟಾಚಾರ ನಿರ್ಮೂಲನೆಗೆ ಶಂಖ ಮೊಳಗಿಸಿದ್ದಾರೆ ಇದನ್ನು ಸರ್ವರೂ ಬೆಂಬಲಿಸಿರುವುದು, ಯುವಜನತೆ ಬೀದಿಗಿಳಿದಿರುವುದು ಒಂದು ಶುಭೋದಯದ ಕಾಲ, ಕೇಂದ್ರ ಸರ್ಕಾರ ಕಿವುಡನಂತೆ ವರ್ತಿಸದೆ ದೇಶದ ಸಮಸ್ತ ಪ್ರಜಾಪ್ರಭುಗಳ ಧ್ವನಿಯನ್ನು ಕೇಳಿ ಸಶಕ್ತ ಲೋಕಪಾಲ ಮಸೂದೆಗೆ ಅನುಮೋದನೆ ನೀಡುವುದರ ಮೂಲಕ ಅಣ್ಣಾ ಹಜಾರೆಯವರ ಉಪವಾಸವನ್ನು ಅಂತ್ಯಗೊಳಿಸಬೇಕೆಂದು ಮತ್ತೊಮ್ಮೆ ಹೇಳಿದರು.

ಕೇದಾರದಲ್ಲಿ ಉತ್ಸವಮೂರ್ತಿಗಳ ಸ್ಥಳಾಂತರ–ವಿವಾದದ ಬಗ್ಗೆ ಜಗದ್ಗುರುಗಳ ಹೇಳಿಕೆ

ಉತ್ತರಾಖಂಡ ಕೇದಾರನಾಥದಲ್ಲಿ 2013ರ ಜೂನ್ ತಿಂಗಳ 16ನೇ ತಾ. ಭಾನುವಾರದಂದು ಸಂಭವಿಸಿದ ಜಲಪ್ರಳಯ, ಭೂಕಂಪ ಸಂಭವಿಸಿದಾಗ ದೇಶವೇ ತಲ್ಲಣಗೊಂಡಿತ್ತು. ಟಿವಿ ಮಾಧ್ಯಮದವರು ಬಿತ್ತರಿಸಿದ ದೃಶ್ಯಗಳು ಭಯಾನಕವಾಗಿದ್ದವು. ಈ ಘಟನೆಯ ನಂತರ ಇಡೀ ಪ್ರದೇಶವೇ ಸ್ಮಶಾನದಂತಾಗಿಬಿಟ್ಟಿತ್ತು. ಮಂದಿರದ ಸುತ್ತಮುತ್ತ ಶವಗಳ ರಾಶಿಯೇ ಬಿದ್ದಾಗ ದೇವಸ್ಥಾನ ಶುಚಿಗೊಳಿಸದೇ ಇಂತಹ ಸ್ಥಿತಿಯಲ್ಲಿ ಮಂದಿರದಲ್ಲಿ ಪೂಜೆ ಸಲ್ಲಿಸಲು ಸಾಧ್ಯವಿರಲಿಲ್ಲ. ಈ ಕಾರಣದಿಂದಾಗಿ ಉತ್ಸವ ಮೂರ್ತಿಗಳನ್ನು ಸ್ಥಳಾಂತರ ಮಾಡಿ ಊಖೀಮಠದಲ್ಲಿ ಪ್ರತೀದಿನ ಪೂಜೆ ಸಲ್ಲಿಸುವ ಏರ್ಪಾಡು ಮಾಡಲಾಗಿತ್ತು.

ಚಳಿಗಾಲದಲ್ಲಿ ಕೇದಾರನಾಥದಲ್ಲಿ ಹಿಮ ಸುರಿಯುವುದರಿಂದ ಜೀವನ ನಡೆಸುವುದು ಕಷ್ಟದ ಮಾತು. ಅಂತಹ ಸಂದರ್ಭದಲ್ಲಿ ಮೂರ್ತಿಗಳನ್ನು ಊಖೀಮಠಕ್ಕೆ ಕೊಂಡೊಯ್ದು ಪೂಜೆ ಮಾಡುವುದು ಪರಂಪರಾನುಗತವಾಗಿ ನಡೆದುಬಂದಿರುವ ಪದ್ಧತಿ.

ಪ್ರಳಯಾನಂತರ ಕೇದಾರನಾಥ ಪೂಜಾ ವಿಷಯದಲ್ಲಿ ಜೋಶಿ ಮಠದ ಸ್ವರೂಪಾನಂದ ಸರಸ್ವತಿಯವರು ಸುದ್ದಿ ಮಾಧ್ಯಮಗಳಿಗೆ ವಿವಾದಾಸ್ಪದ ಹೇಳಿಕೆಗಳನ್ನು ನೀಡುವ ಮೂಲಕ ಪರಂಪರೆಗೆ ಧಕ್ಕೆ ತಂದಿದ್ದಾರೆ. ಇವರ ಈ ವಾದವು ಅರ್ಥಹೀನವಾದುದು ಎಂದು ಕಾಶೀ ಮತ್ತು ಶ್ರೀಶೈಲ ಜಗದ್ಗುರುಗಳು ಮಹಾರಾಷ್ಟ್ರದ ಅಮರಾವತಿಯಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಕೇದಾರನಾಥ ಜ್ಯೋತಿರ್ಲಿಂಗವು ಸನಾತನ ವೀರಶೈವ ಧರ್ಮದ ಪಂಚಪೀಠಗಳಲ್ಲಿ ಒಂದಾದ ಕೇದಾರ ವೈರಾಗ್ಯ ಸಿಂಹಾಸನ ಮಹಾಪೀಠದ ಅಧೀನದಲ್ಲಿರುತ್ತದೆ. ಕಾಶೀ ಜಗದ್ಗುರುಗಳು ಪತ್ರಕರ್ತರಿಗೆ ಕೇದಾರ ಕ್ಷೇತ್ರದಲ್ಲಿ ಕೇದಾರನಾಥಲಿಂಗ, ಗುಪ್ತ ಕಾಶಿಯಲ್ಲಿ ವಿಶ್ವನಾಥ ಲಿಂಗ, ಮದುಮಹೇಶ್ವರದಲ್ಲಿ ಶಿವಲಿಂಗ ಮತ್ತು ಓಖಿಮಠದಲ್ಲಿ ಓಂಕಾರೇಶ್ವರಲಿಂಗ ಇವುಗಳ ಪ್ರಧಾನ ಅರ್ಚಕರು ದಕ್ಷಿಣ ಭಾರತದ ಜಂಗಮರೇ ಇರಬೇಕೆಂಬುದು ಪುರಾತನ ಕಾಲದಿಂದ ಬಂದ ಪದ್ಧತಿ ಎಂದು ತಿಳಿಸಿ–ಈ ಅರ್ಚಕರೆಲ್ಲರೂ ಕೇದಾರಪೀಠದ ರಾವಲ್‌ರಿಂದ ಚೇಲಾ ದೀಕ್ಷೆ ಪಡೆದುಕೊಂಡಿರುತ್ತಾರೆ ಎಂದು ಹೇಳಿದರು. ಅಲ್ಲದೆ ಕೇದಾರಪೀಠದ ಜಗದ್ಗುರುಗಳಿಗೆ ಡೆಹರೀ ಗಡವಾಲದ ಮಹಾರಾಜರು ತಿಲಕೋತ್ಸವ ಮಾಡಿ ಅವರಿಗೆ ರಾವಲ್ ಪದವಿ ಕೊಟ್ಟು ಗೌರವಿಸುವ ಪದ್ಧತಿಯು ಶತಶತಮಾನಗಳಿಂದ ನಡೆದುಬಂದಿದೆ ಎಂದರು.

ಈಗ ಈ ವಿವಾದ ಬಗೆಹರಿದಿದೆ ಎಂದು ತಿಳಿಸಿ ಉತ್ತರಾಖಂಡದ ಪ್ರವಾಹ ಪರಿಹಾರ ಕಾರ್ಯಗಳಿಗೆ ಸ್ಥಳೀಯ ಸರಕಾರಕ್ಕೆ ಕಾಶೀಪೀಠವು ಈಗಾಗಲೆ 2 ಲಕ್ಷ ರೂ. ಸಲ್ಲಿಸಿದೆ ಎಂದು ತಿಳಿಸಿದರು.

ಪಂಚಪೀಠಾಧೀಶ್ವರರು ಈ ವಿವಾದದ ಬಗ್ಗೆ ಈ ರೀತಿ ಹೇಳಿದ್ದಾರೆ :

ಸಮಾಜವೂ ಧ್ವನಿ ಎತ್ತಬೇಕಾಗಿದೆ



ಜಲಪ್ರಳಯದಿಂದಾಗಿ ಕೇದಾರನಾಥ ಮಂದಿರದಲ್ಲಿ ಶವಗಳು ಬಿದ್ದಿವೆ. ಸಾಕಷ್ಟು ಹೂಳು ತುಂಬಿದೆ. ದೇವಸ್ಥಾನ ಶುಚಿಗೊಳಿಸದೇ ಇಂತಹ ಸ್ಥಿತಿಯಲ್ಲಿ ಮಂದಿರದಲ್ಲಿ ಪೂಜೆ ಸಲ್ಲಿಸುವುದಾದರೂ ಹೇಗೆ? ಸ್ವರೂಪಾನಂದ ಶಂಕರಾಚಾರ್ಯರು ವಾಸ್ತವ ತಿಳಿದೂ ಇಂತಹ ಹೇಳಿಕೆ ನೀಡಬಾರದಿತ್ತು. ವೀರಶೈವ ಪೂಜಾಪರಂಪರೆ ಪ್ರಶ್ನಿಸುವ ಇಂತಹ ಹೇಳಿಕೆಯನ್ನು ರಂಭಾಪುರಿಪೀಠ ಖಂಡಿಸುತ್ತದೆ. ಈ ಬಗ್ಗೆ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹಾಗೂ ರಾಜ್ಯ ಘಟಕದ ಎನ್. ತಿಪ್ಪಣ್ಣ ಅವರೊಂದಿಗೂ ಚರ್ಚಿಸಲಾಗುವುದು. ವೀರಶೈವ ಸಮಾಜವೂ ಧ್ವನಿ ಎತ್ತಬೇಕಾಗಿದೆ.

– ಪ್ರಸನ್ನ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು, ರಂಭಾಪುರಿ ಪೀಠ

ಅನಾದಿ ಕಾಲದ ಪರಂಪರೆ



ಕೇದಾರ ಪೀಠ ಅನಾದಿ ಕಾಲದಿಂದ ಅದರದ್ದೇ ಪೂಜಾ ಪರಂಪರೆ ಹೊಂದಿದೆ. ನಾಲ್ಕು ತಲೆಮಾರುಗಳಿಂದ ಪೀಠದ ಜಗದ್ಗುರು ವಿಶ್ವನಾಥಲಿಂಗ ಶಿವಾಚಾರ್ಯರಿಂದ ಹಿಡಿದು ಇಂದಿನ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯರವರೆಗೂ ಅಲ್ಲಿನ ಪೂಜಾ ಪರಂಪರೆಯನ್ನು ನಾವೇ ನೋಡುತ್ತ ಬಂದಿದ್ದೇವೆ. ಇದನ್ನು ಗಮನಿಸಿಯೂ ಸ್ವರೂಪಾನಂದ ಶಂಕರಾಚಾರ್ಯರು ಕೇವಲ ಪ್ರಚಾರಕ್ಕಾಗಿ ಪರಂಪರೆಗೆ ಧಕ್ಕೆ ತರುವಂತಹ ಹೇಳಿಕೆ ನೀಡುವುದು ಸರಿಯಲ್ಲ.

–ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಕಾಶೀ ಪೀಠ

ಉತ್ತರಾಖಂಡ ಸಿಎಂ ಭೇಟಿ



ಕೇದಾರನಾಥ ಮಂದಿರ ಸ್ವಚ್ಛಗೊಂಡು ಶುಚಿಗೊಂಡ ಅನಂತರ ಉತ್ಸವಮೂರ್ತಿಗಳನ್ನು ಯಥಾಸ್ಥಿತಿ ಅಲ್ಲಿಗೆ ತೆಗೆದುಕೊಂಡು ಹೋಗಿ ಪೂಜೆ ಮಾಡಲಾಗುವುದು. ಕೇವಲ ಪ್ರಚಾರಕ್ಕಾಗಿ ಸ್ವರೂಪಾನಂದ ಶಂಕರಾಚಾರ್ಯರು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಈ ಕುರಿತು ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡಿ ಚರ್ಚಿಸಿದ್ದು, ಶನಿವಾರ ಉತ್ತರಾಖಂಡ ಮುಖ್ಯಮಂತ್ರಿಯವರನ್ನು ಭೇಟಿಮಾಡಿ ಚರ್ಚಿಸಲಾಗುವುದು.

–ಜಗದ್ಗುರು ಭೀಮಾ ಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು, ಕೇದಾರ ಪೀಠ

ಅರ್ಥವಿಲ್ಲದ ಹೇಳಿಕೆ



ಉತ್ತರಾಖಂಡದಲ್ಲಿ ಸಂಭವಿಸಿದ ಜಲಪ್ರಳಯದ ಸಂಕಷ್ಟ ಸ್ಥಿತಿ ಅರಿಯದೆ ಸ್ವರೂಪಾನಂದ ಶಂಕರಾಚಾರ್ಯರು ನೀಡಿದ ಹೇಳಿಕೆ ಅರ್ಥವಿಲ್ಲದ್ದು, ಕೇದಾರನಾಥದಲ್ಲಿನ ಸಂಕಷ್ಟಸ್ಥಿತಿ ನಿವಾರಣೆ ಹಾಗೂ ಪರಿಹಾರಕ್ಕೆ ಪೀಠಗಳು ಕೈಗೊಳ್ಳುವ ನಿರ್ಧಾರಕ್ಕೆ ಉಜ್ಜಯಿನಿ ಪೀಠ ಪೂರ್ಣವಾಗಿ ಬೆಂಬಲಿಸಿ ಪಾಲ್ಗೊಳ್ಳಲಿದೆ.

–ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದರು, ಉಜ್ಜಯಿನಿ ಪೀಠ

ಬೈಲಾದಲ್ಲೇ ಇದೆ



ಕೇದಾರನಾಥ ಬದರಿನಾಥ ಮಂದಿರಗಳ ಟ್ರಸ್ಟ್ ಕಮಿಟಿ ಬೈಲಾದಲ್ಲೇ ಕೇದಾರನಾಥ ಮಂದಿರ ಪೂಜೆಗೆ ಅರ್ಚಕರು ಯಾರು, ಪದ್ಧತಿ ಯಾವುದು ಎಂಬ ಸ್ಪಷ್ಟ ಉಲ್ಲೇಖವಿದೆ. ಧಾರ್ಮಿಕ ಮುಖಂಡರಾಗಿದ್ದವರು ಇನ್ನೊಂದು ಧಾರ್ಮಿಕ ಪದ್ಧತಿಯಲ್ಲಿ ಹಸ್ತಕ್ಷೇಪ ಮಾಡುವುದು ಸರಿಯಲ್ಲ. ವೀರಶೈವ ಪರಂಪರೆ ಬಗ್ಗೆ ಆಕ್ಷೇಪ ವ್ಯಕ್ತವಾಗಿರುವುದರ ವಿರುದ್ಧ ಸಮಾಜದ ಜನ ಒಗ್ಗಟ್ಟಿನಿಂದ ಧ್ವನಿ ಎತ್ತಬೇಕಾಗಿದೆ.

–ಜಗದ್ಗುರು ಡಾ॥ ಚನ್ನಸಿದ್ಧರಾಮ ಶಿವಾಚಾರ್ಯ ಭಗವತ್ಪಾದರು, ಶ್ರೀಶೈಲ ಪೀಠ

13–5–2014 ಲೋಕಸಭಾ ಮತದಾನ ಮಾಡಿದ ಜಗದ್ಗುರುಗಳು


2014ರಲ್ಲಿ ಲೋಕಸಭೆಗೆ ಮತದಾನ ನಡೆಯಲಿದೆ ಎಂದು ಎಲ್ಲರಿಗೂ ತಿಳಿದಿತ್ತು. ಆದರೆ ಯಾವ ತಿಂಗಳಲ್ಲಿ ಯಾವ ತಾರೀಖಿನಂದು ಎಂದು ತಿಳಿದಿರಲಿಲ್ಲ. ಈ ಬಾರಿಯ ಚುನಾವಣೆ ವಿಶೇಷವಾಗಿ ಜನರ ಮನ ಸೆಳೆದಿತ್ತು. ಬದಲಾವಣೆಗಾಗಿ ಇಡೀ ದೇಶವೇ ಹಾತೊರೆಯುತ್ತಿತ್ತು. ಇಂತಹ ಸಮಯದಲ್ಲಿ ಮೋದಿಯನ್ನು ಪ್ರಧಾನಿಯನ್ನಾಗಿ ಬಿಜೆಪಿ ಆಯ್ಕೆಮಾಡಿದ ನಂತರ ಎಲ್ಲೆಡೆ ಮೋದಿ ಅಲೆ ಆರಂಭವಾಯಿತು.



ವಾರಣಾಸಿಯಲ್ಲಿ ಸೋಮವಾರ ನಡೆದ ಲೋಕಸಭೆ ಕ್ಷೇತ್ರದ ಮತದಾನದಲ್ಲಿ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹಕ್ಕು ಚಲಾಯಿಸಿದರು.

ಜಗದ್ಗುರುಗಳು ತಮ್ಮ ಕಾರ್ಯಕ್ರಮಗಳಲ್ಲೆಲ್ಲಾ ಜನರಿಗೆ ಮತ ಹಾಕುವ ಜವಾಬ್ದಾರಿಯ ಬಗ್ಗೆ ತಿಳುವಳಿಕೆ ನೀಡುತ್ತಲೇ ಇದ್ದರು. ಮತವನ್ನು ಯಾವ ಆಮಿಷಕ್ಕೂ ಬಲಿಯಾಗಿ ಮಾರಿಕೊಳ್ಳಬೇಡಿ. ನಾಗರೀಕರಾದ ನೀವು ನಿಮ್ಮ ಹಕ್ಕನ್ನು ಚಲಾಯಿಸಬೇಕೆಂದು ಹೇಳುತ್ತಾ ಬಂದಿದ್ದರು. ಗುರುಗಳ ಕಾರ್ಯಕ್ರಮಗಳು ಹೆಚ್ಚು ಕಡಿಮೆ ಒಂದು ವರ್ಷದ ಮೊದಲೇ ನಿಗದಿಯಾಗಿರುತ್ತದೆ. ರಾಷ್ಟ್ರೀಯ ಕಾರ್ಯವಾದ ಮತದಾನದ ಸಲುವಾಗಿ ಜಗದ್ಗುರುಗಳು ತಮ್ಮೆಲ್ಲಾ ಪೂರ್ವ ನಿಯೋಜಿತ ಧಾರ್ಮಿಕ ಕಾರ್ಯಕ್ರಮಗಳನ್ನು

ವಿಜಯವಾಣಿ, ಹುಬ್ಬಳಿ



ಕಾಶೀ ಕ್ಷೇತ್ರದಲ್ಲಿ ಸೋಮವಾರ ನಡೆದ ಲೋಕಸಭೆ ಕೊನೆ ಹಂತದ ಮತದಾನದಲ್ಲಿ ಕಾಶೀ ಜಗದ್ಗುರು ಡಾ। ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮತದಾನ ಮಾಡಿದರು.

ಕಾಶಿಯ ಮತದಾನದಲ್ಲಿ ಕಾಶೀ ಜಗದ್ಗುರುಗಳು ಅಗ್ರಪಂಕ್ತಿಯಲ್ಲಿ – ಕಿತ್ತೂರು ಕರ್ನಾಟಕ



ಮುಂದೂಡಿ ಮೇ ತಿಂಗಳಲ್ಲಿ ಕೊಟ್ಟೂರಿನಿಂದ ಸುಮಾರು 350–400 ಕಿ.ಮೀ. ದೂರ ಪ್ರಯಾಣಮಾಡಿ ರಾತ್ರಿ 9 ಗಂಟೆಗೆ ಬೆಂಗಳೂರು ಸೇರಿದರು. ಮರುದಿನ ಬೆಳಗ್ಗೆ 7 ಗಂಟೆಗೆ ವಿಮಾನದಲ್ಲಿ ವಾರಣಾಸಿಗೆ–ಮತದಾನದ ಸಲುವಾಗಿ ದಯಮಾಡಿಸಿದರು. 12–5–2014 ರಂದು ಮಹಾಸನ್ನಿಧಿಯವರು ಶ್ರೀಪೀಠದ ಸಿಬ್ಬಂದಿಯೊಂದಿಗೆ ಬೆಳಗ್ಗೆ 7 ಗಂಟೆಗೆ ಮತಕೇಂದ್ರದವರೆಗೆ ಕಾಲ್ನಡಿಗೆಯಲ್ಲಿ ದಯಮಾಡಿಸಿ ಮತದಾನ ಪ್ರಾರಂಭವಾಗುತ್ತಿದ್ದಂತೆ ಪ್ರಥಮವಾಗಿ ಮತದಾನ ಮಾಡಿ ರಾಷ್ಟ್ರೀಯ ಕಾರ್ಯವನ್ನು ಮುಗಿಸಿದರು.

ವಾರಣಾಸಿಯಲ್ಲಿ ಪ್ರಸಿದ್ಧಿ ಪಡೆದಿರುವ ಜಗದ್ಗುರುಗಳನ್ನು ಅನೇಕ ಪತ್ರಿಕಾ ಪ್ರತಿನಿಧಿಗಳು ಭೇಟಿಯಾಗಿ ಜಗದ್ಗುರುಗಳು ಮತದಾನ ಮಾಡಿ ಹೊರಗೆ ಬಂದಾಗ ಅವರ ಫೋಟೋ ತೆಗೆದು–ಚುನಾವಣೆ ಬಗ್ಗೆ ಕೇಳಿದಾಗ ಜಗದ್ಗುರುಗಳು "ಲೋಕತಂತ್ರ ಮೆ ಮತದಾತಾ ಕಾ ಸ್ಥಾನ್ ಪ್ರಭು ಕೆ ಸಮಾನ್ ಹೈ!" "ರಾಷ್ಟ್ರಕೆ ಉತ್ಥಾನ್ ಔರ್ ಬೆಹತರೀ ಕೆ ಲಿಯೆ ಓಟ್ ಕೆ ಸ್ವೋಪ್ ಮೆ ಅಪನಿ ಶಕ್ತಿ ಕ ಇಸ್ತೆಮಾಲ್ ಹರ್ ಹಾಲ್ ಮೆ ಕರನಾ ಚಾಹಿಯೆ"ಎಂದು ಹೇಳಿದ್ದಾರೆ. ವಾರಣಾಸಿಯ ಪತ್ರಿಕೆಗಳಾದ 'ಅಮರ್ ಉಜಾಲಾ' 'ಅರ್ಥ್ ಸಂಚಾರ್' ಮುಂತಾದ ಪತ್ರಿಕೆಗಳಲ್ಲಿ ಜಗದ್ಗುರುಗಳ ಫೋಟೋ ಬಂದಿದೆ. 'ಲೋಕತಂತ್ರದಲ್ಲಿ ಮತ ಹಾಕುವವನು ಪ್ರಭುವಿಗೆ ಸಮಾನ' ಎಂದು ಅರ್ಥಪೂರ್ಣ ಮಾತುಗಳನ್ನು ಶ್ರೀಗಳವರು ಹೇಳಿದ್ದಾರೆ.

ತಮ್ಮೆಲ್ಲಾ ಕಾರ್ಯಕ್ರಮಗಳನ್ನು ಮುಂದೂಡಿ ಕರ್ನಾಟಕದಿಂದ ವಾರಣಾಸಿಗೆ ಆಗಮಿಸಿ ಮತದಾನ ಮಾಡಿ ಭಾರತೀಯ ನಾಗರೀಕರಾಗಿ ಅದರಲ್ಲೂ ವಿಶೇಷ ದೇಶಪ್ರೇಮಿಯಾದ ಜಗದ್ಗುರುಗಳು ತಮ್ಮ ಕರ್ತವ್ಯವನ್ನು ಮುಗಿಸಿದರು.



13 मई 2014

वाराणसी 5

सभी फोटोः नरेंद्र यादव, अनिरुद्ध पांडेय, रामजी श्रीवास्तव, जावेद अली, सुनील सिंह।

लोकतंत्र के महापर्व में हुए शामिल जंगमबाड़ी मठ के महंत डा. चंद्रशेखर शिवाचार्य, पद्मश्री डा. देवी प्रसाद द्विवेदी, पूर्व नगर प्रमुख कौशलेंद्र सिंह और महापौर राम गोपाल मोहले।

आइए मतदान करें और अपनी सरकार बनाएं

वाराणसी। वोट ताकत है। ऐसा हक जिसकी मदद साल में एक बार आने वाले लोकतंत्र के महापर्व में नागरिकों की है। उन्होंने मतदान को राजधर्म और

मतदान करना राजधर्म

मतदान करना भी एक राजधर्म है। देश की बागडोर सुरक्षित हाथों में देने के लिए मतदान करना जरूरी है। हम किसी सरकार की आलोचना तभी कर सकते हैं, जब हमने मतदान में भाग लिया हो। हमें कुशल एवं योग्य प्रत्याशी को वोट देना चाहिए। वोट देकर हम राष्ट्र की सच्ची सेवा कर सकते हैं।

– प्रो. विश्वंभरनाथ मिश्र, महंत, संकटमोचन मंदिर

मतदान व्यक्ति का धर्म

मसीही समाज भी अपने वोट का इस्तेमाल जरूर करे। क्योंकि वह भी देश के नागरिक हैं और इसके तरक्की और खुशहाली में उनका भी योगदान है। लिहाजा वोट कर अच्छे प्रशासक का चुनाव करना उनका धर्म बनता है। मसीही समाज वोट करे और जरूर करे।

–सैम जोशुआ सिंह, रेव्हरन लाल गिरजा

महापर्व में सब हों शामिल

लोकतंत्र के महापर्व में हर किसी की भागीदारी आवश्यक है। एक मजबूत राष्ट्र का सपना हम तब ही देख सकते हैं जब मतदान में हम भागीदारी सुनिश्चित करें। योग्य प्रत्याशी को चुनकर हम देश को मजबूत बना सकते हैं। हम सभी को इस बार रिकॉर्ड वोटिंग करनी चाहिए।

– जेवी सिंह, सीईओ, छावनी परिषद

मतदाता हैं प्रभु के समान

लोकतंत्र में मतदाता का स्थान प्रभु के समान है। मत ही सत्ता शक्ति की स्थापना की सबसे बड़ी ताकत है। राष्ट्र के उत्थान और बेहतरी के लिए वोट के रूप में अपनी शक्ति का इस्तेमाल हर हाल में करना चाहिए।

–विश्वाराध्य महास्वामी डॉ. चंदशेखर शिवाचार्य–पीठाधीश्वर जंगमबाड़ी मठ



इन मानिंद लोगों ने किया मतदान

जंगम बाड़ी मठ के महंत डा. चंद्रशेखर शिवाचार्य।

काशी विश्वनाथ मंदिर के महंत डा. कुलपति तिवारी।

पद्मश्री डा. देवी प्रसाद द्विवेदी।



अर्थसंचार

छायाचित्रातून...

काशी जगद्गुरू डॉ. चंद्रशेखर शिवाचार्य यांनी वाराणसीत मतदानाचा हक्क बजावला.

पश्चिम बंगालमध्ये मुर्शिदाबाद येथे साधूंनी लोकसभेसाठी मतदान केले. यावेळी बोटावरील शाई आणि मतदान ओळखपत्र दाखविताना.


भाजपचे ज्येष्ठ नेते मुरलीमनोहर जोशी यांनी वाराणसीत मतदान केले.

ಕನ್ನಡ ಅಭಿಮಾನವುಳ್ಳ ಜಗದ್ಗುರುಗಳು

ಜಂಗಮವಾಡಿ ಮಠದ ಕಾಶೀ ಜಗದ್ಗುರುಗಳು ಸಂಸ್ಕೃತದಲ್ಲೇ ವ್ಯಾಸಂಗ ಮಾಡುತ್ತಾ ಬಿ.ಎ.,ಎಂ.ಎ., ಪಿಹೆಚ್.ಡಿ. ಮತ್ತು ಡಿ.ಲಿಟ್. ಪದವಿಗಳನ್ನು ಪಡೆದವರು. ನಿರರ್ಗಳವಾಗಿ ಸಂಸ್ಕೃತದಲ್ಲಿ ಮಾತನಾಡಬಲ್ಲವರು. ಭಾರತೀಯ ಷಡ್‌ದರ್ಶನಗಳನ್ನು ಮೂಲ ಸಂಸ್ಕೃತದಲ್ಲೇ ಓದಿದವರು. ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಗೌರವಾನ್ವಿತ ಪ್ರಾಧ್ಯಾಪಕರಾಗಿ ಕೆಲಸ ಮಾಡಿದವರು. ಹೀಗೆ ಜಗದ್ಗುರುಗಳ ಅಧ್ಯಯನ ಅಧ್ಯಾಪನ ಎಲ್ಲವೂ ಸಂಸ್ಕೃತದಲ್ಲೇ ಆಗಿದ್ದರೂ ಜನ್ಮತಾಳಿದ್ದು ಕನ್ನಡನಾಡಿನ ಗುಳೇದಗುಡ್ಡದ ಬಳಿಯ ತೋಗಣಸಿ ಗ್ರಾಮದಲ್ಲಿ. ತಾಯ್‌ನುಡಿ ಕನ್ನಡ, ಅವ್ವ ಅಪ್ಪನೊಡನೆ ಸಂಭಾಷಣೆ ಮಾಡಿದ್ದು ಕನ್ನಡದಲ್ಲಿ, ಅಣ್ಣ ತಮ್ಮಂದಿರೊಡನೆ ಆಡಿ ಬೆಳೆದ ಭಾಷೆ ಕನ್ನಡ. ಸಂಸ್ಕೃತದಲ್ಲಿ ವ್ಯಾಸಂಗ ಮಾಡಿದ್ದ ಕಾರಣ ಕನ್ನಡ ಭಾಷೆಯ ಮೇಲೆ ಒಳ್ಳೆಯ ಪ್ರಭುತ್ವವಿದೆ. ಅವರು ಪ್ರವಚನಗಳನ್ನು ಮಾತನಾಡುವಾಗ ಒಂದು ಗಂಟೆಗೂ ಮಿಕ್ಕಿ ಕುಳಿತು ಮಾಡುವಾಗ ಎಂದೂ ಕನ್ನಡ ಪದಗಳಿಗಾಗಿ ತಡಕಾಡಿದವರಲ್ಲ. ಸಂಸ್ಕೃತದಷ್ಟೆ, ಅಥವಾ ಇನ್ನೂ ಹೆಚ್ಚು ನಿರರ್ಗಳವಾಗಿ ಕನ್ನಡದಲ್ಲಿ ಮಾತನಾಡುತ್ತಾರೆ. ಹಿಂದಿ ಮರಾಠಿ ಭಾಷೆಗಳಲ್ಲಿ ಅಷ್ಟೇ ಪ್ರಭುತ್ವ ಹೊಂದಿದ್ದಾರೆ.

ಹೊರನಾಡ ಕನ್ನಡಿಗರ ಕಾರ್ಯಕ್ರಮ ಕಾಶಿಯಲ್ಲಿ ಕನ್ನಡ ಸಾಹಿತ್ಯ ಕಲಾ ಮೇಳ

ಕನ್ನಡ ಪ್ರಭ 8–11–1998



ವಾರಣಾಸಿಯ ಜಂಗಮವಾಡಿ ಮಠದಲ್ಲಿ ಅಖಿಲ ಭಾರತ ಕನ್ನಡ–ಸಾಂಸ್ಕೃತಿಕ ಕಲಾ ಮೇಳವನ್ನು ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಬಲತುದಿಯಲ್ಲಿರುವವರು ಗಾಂಧೀವಾದಿ ಹೊ. ಶ್ರೀನಿವಾಸಯ್ಯ.

ಕನ್ನಡದ ಕಾರ್ಯಕ್ರಮಗಳಿಗೆ ಅಂದರೆ ರಾಜ್ಯೋತ್ಸವ ಆಚರಣೆ, ಗ್ರಂಥ ಬಿಡುಗಡೆ, ಗ್ರಂಥಾಲಯ ಉದ್ಘಾಟನೆ– ಹೀಗೆ ಹತ್ತು ಹಲವು ಕನ್ನಡ ಕಾರ್ಯಕ್ರಮಗಳಿಗೆ ಜಗದ್ಗುರುಗಳನ್ನು ಆಹ್ವಾನಿಸಿದಾಗ ಸಂತೋಷದಿಂದ ಕಾರ್ಯಕ್ರಮಗಳ ಸಾನ್ನಿಧ್ಯ ವಹಿಸಿ ಅಮೂಲ್ಯವಾದ ಸಲಹೆಗಳನ್ನು ನೀಡಿದ್ದಾರೆ.

ವಾರಣಾಸಿಯಲ್ಲಿ ನಾಡಿನ ಕಲಾವಿದರು

ಭಾರತ ದೇಶದ ಪುಣ್ಯಕ್ಷೇತ್ರಗಳಲ್ಲೊಂದಾದ ಉತ್ತರಪ್ರದೇಶದ ಕಾಶಿಯಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇತ್ತೀಚೆಗೆ ಕನ್ನಡನಾಡಿನ ಅರವತ್ತೈದು ಜಾನಪದ ವಿವಿಧ ಕಲಾವಿದರ ನೃತ್ಯ ಜಂಗಮವಾಡಿಯಿಂದ ಗಂಗಾನದಿಯ ದಶಾಶ್ವಮೇಧ ಘಾಟ್‌ನವರೆಗೆ ಜರುಗಿತು. ಕನ್ನಡನಾಡಿನ ಜಾನಪದದ ಕಲಾವೈಭವ ಸಾರುವ ಪಟಕುಣಿತ, ವೀರಗಾಸೆ, ಪೂಜಾಕುಣಿತ ಮತ್ತು ಡೊಳ್ಳುಕುಣಿತ ಪ್ರದರ್ಶನವನ್ನು ಸಹಸ್ರಜನ ವೀಕ್ಷಿಸಿ ಆನಂದಿಸಿದರು. ವಾರಣಾಸಿ ದೇಶದ ಪಂಚಪೀಠಗಳಲ್ಲೊಂದಾದ ಕಾಶಿಯ ಜ್ಞಾನಪೀಠ ಸಂಸ್ಥಾಪಕ ಮಹಾಚಾರ್ಯರಾದ ಜಗದ್ಗುರು ಶ್ರೀ ವಿಶ್ವಾರಾಧ್ಯ ಭಗವತ್ಪಾದರ ಉತ್ಸವಮೂರ್ತಿಯ ಭವ್ಯ ಮೆರವಣಿಗೆ ಹಾಗೂ ಜಾನಪದ ಕಲಾಮೇಳ ಬಹು ಆಕರ್ಷಣೀಯವಾಗಿತ್ತು. ಬೆಳಿಗ್ಗೆ 11.00 ಘಂಟೆಗೆ ಜಂಗಮವಾಡಿ ಪ್ರದೇಶದ ಶ್ರೀಮಠದಿಂದ ಹೊರಟ ಕಲಾಮೇಳ ಉತ್ಸವದ ಮೆರವಣಿಗೆಯು ಕಾಶಿಯ ಮುಖ್ಯ ಬೀದಿಗಳಲ್ಲಿ ಸಾಗಿತು. ಕಾಶೀ ಕನ್ನಡಿಗರು ಮತ್ತು ದೇಶ–ವಿದೇಶಗಳಿಂದ ಬಂದಿದ್ದ ಸಹಸ್ರಾರು ಮಂದಿ ಈ ಮಹಾ ಶೋಭಾಯಾತ್ರೆಯಲ್ಲಿ ಭಾಗವಹಿಸಿದ್ದರು.

ವಿದೇಶೀಯರು ವಿಶೇಷವಾಗಿ ತಮ್ಮ ಕ್ಯಾಮರಾಗಳಿಂದ ವಿವಿಧ ಭಂಗಿಯ, ವಿಭಿನ್ನ ರೀತಿಯ ಜಾನಪದ ಕುಣಿತ ದೃಶ್ಯಗಳನ್ನು ಸೆರೆಹಿಡಿದುಕೊಳ್ಳುತ್ತ ಸಂತೋಷದೊಂದಿಗೆ ಈ ಮೆರವಣಿಗೆಯಲ್ಲಿ ಸಾಗಿದರು. ಜಗದ್ಗುರು ವಿಶ್ವಾರಾಧ್ಯರ ಜಯಂತಿ ಮಹೋತ್ಸವ ಮತ್ತು



ಶಿವರಾತ್ರಿ ಪ್ರಯುಕ್ತ ಈ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನಾಲಯದ ಸಹಯೋಗದಿಂದ ಬೆಂಗಳೂರು ಅಭಿನಯ ಕಲಾವಿದರು ಆಯೋಜಿಸಿದ್ದರು. ಈ ಜಾನಪದ ಕಲಾ ಉತ್ಸವದಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಗೌತಮಪುರದ ಪ್ರಸಿದ್ಧ ಗೌತಮೇಶ್ವರ ಯುವಕ ಸಂಘದಿಂದ ಡೊಳ್ಳುಕುಣಿತ, ಪಟಕುಣಿತ, ಪೂಜಾಕುಣಿತ ಮತ್ತು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಮಾಳೇನಹಳ್ಳಿಯ ಹೆಸರಾಂತ ಬಾಪೂಜಿ ವೀರಗಾಸೆ ಕಲಾ ಸಂಘದಿಂದ ವೀರಗಾಸೆ ಈ ಭವ್ಯ ಕಲಾಮೇಳದಲ್ಲಿ ಪಾಲ್ಗೊಂಡಿದ್ದವು.

ಜಂಗಮವಾಡಿ ಮಠದಲ್ಲೇ ಒಮ್ಮೆ 1998ರ ನವೆಂಬರ್ ತಿಂಗಳಲ್ಲಿ ಕನ್ನಡ ರಾಜ್ಯೋತ್ಸವವನ್ನು ಜಗದ್ಗುರುಗಳು ವಾರಣಾಸಿಯಲ್ಲಿ ಏರ್ಪಡಿಸಿದ್ದರು. ಉತ್ತರಪ್ರದೇಶ ಹಿಂದೀ ಭಾಷಿಗರದ್ದು. ಅಲ್ಲಿ ಕನ್ನಡ ಕಹಳೆ ಮೊಳಗಿಸಿದವರು ಜಗದ್ಗುರುಗಳು. ಜಗದ್ಗುರುಗಳು ಯಾವುದೇ ಕಾರ್ಯಕ್ರಮ ಏರ್ಪಡಿಸಲಿ ಅಲ್ಲೊಂದು ವಿಶೇಷತೆಯಿರುತ್ತದೆ. ಕರ್ನಾಟಕದ ಹೊಸನಗರ ಸ್ಫೂರ್ತಿ ಕಲಾ ತಂಡದ ಸುಗ್ಗಿಕುಣಿತ, ಶಿವಮೊಗ್ಗಾದ ಚನ್ನಬಸವೇಶ್ವರ ತಂಡದ ವೀರಗಾಸೆ ತಂಡಗಳನ್ನು ವಾರಣಾಸಿಗೆ ಕರೆಸಿ ಜಂಗಮವಾಡಿ ಮಠದಿಂದ ಗಂಗಾನದಿಯ ತೀರದವರೆಗೂ ನಂದಿಕೋಲು, ವೀರಗಾಸೆ, ಕೊರವರ ಕುಣಿತ, ಸುಗ್ಗಿ ಕುಣಿತ, ಕನ್ನಡ ಕಲಾವಿದರು ವೇಷ–ಭೂಷಣಗಳೊಂದಿಗೆ ನಡೆಸಿದ ಮೆರವಣಿಗೆ–ಅಲ್ಲಿನ ಜನಗಳ ಮನ ಸೂರೆಗೊಂಡಿತು.

ಶ್ರೀ ಕಾಶೀ ಪೀಠದಲ್ಲಿ ಗ್ರಂಥ ಬಿಡುಗಡೆ ಸಮಾರಂಭ
12–4–93

12–4–1993ರಲ್ಲಿ ಕಾಶಿ ಜಗದ್ಗುರುಗಳು ಪೀಠದಲ್ಲಿರದೆ ಪ್ರವಾಸದಲ್ಲಿದ್ದರು. ಆ ಸಮಯದಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರೊ ॥ ಡಾ.ವಿ. ಶಿವಾನಂದರು ರಚಿಸಿದ "ಉತ್ತರ ಭಾರತದ ಕನ್ನಡ ಹಸ್ತಲಿಪಿ ಮತ್ತು ಇತರ ದಾಖಲಾತಿಗಳ ಸೂಚಿ" ಎನ್ನುವ ಗ್ರಂಥದ ಬಿಡುಗಡೆ ಆಗಬೇಕಿತ್ತು. ಜಗದ್ಗುರುಗಳು ತಾವು ಪೀಠದಲ್ಲಿಲ್ಲದಿದ್ದರೂ ಎಲ್ಲಾ ಏರ್ಪಾಡುಮಾಡಿ ಪೀಠದ ವತಿಯಿಂದ ಗ್ರಂಥಕರ್ತರನ್ನು ಮುಖ್ಯ ಅತಿಥಿಗಳನ್ನು ಸನ್ಮಾನಿಸಿ ಕಳುಹಿಸಿಕೊಡಿ ಎಂದು ತಿಳಿಸಿದ್ದರು. ಆ ಪ್ರಕಾರವೇ ಗ್ರಂಥವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ರೀಡರ್ ಆದ ಡಾ॥ ಎಸ್. ವಿದ್ಯಾಶಂಕರ ಅವರು ಗ್ರಂಥಬಿಡುಗಡೆ ಮಾಡಿದರು. ಜಗದ್ಗುರುಗಳ ಆದೇಶದಂತೆ ಡಾ॥ ವಿ. ಶಿವಾನಂದರನ್ನು, ಡಾ॥ ಎಸ್. ವಿದ್ಯಾಶಂಕರ ದಂಪತಿಗಳನ್ನು ಶಾಲು ಹೊದಿಸಿ ಪೀಠದ ವತಿಯಿಂದ ಸನ್ಮಾನಿಸಿದರು.

ಈ ಸಂದರ್ಭಕ್ಕಾಗಿ ಕವಿಗೋಷ್ಠಿಯನ್ನು ಏರ್ಪಡಿಸಿದ್ದರು. ಗೋಷ್ಠಿಯ ಉದ್ಘಾಟನೆಗಾಗಿ ಕೆ.ವಿ. ಕೃಷ್ಣಯ್ಯ ಅವರನ್ನು ಕರೆಸಿದ್ದರು. ನಾಡಗೀತೆಗಳನ್ನು ಕಲಾವಿದರು ಹಾಡಿದರು. ಅಲ್ಲೇ ಇದ್ದವರು ಗೊ.ರು.ಚ. ಅವರ 'ಬೆಳ್ಳಕ್ಕಿ ಹಿಂಡು ಬೆದರಾವೊ' ರಾಧಾಕೃಷ್ಣರ ವಧ ನಾಟಕಗಳು ಪ್ರೇಕ್ಷಕರ ಮನ ಸೂರೆಗೊಂಡವು. ದಿನವಿಡೀ ಮಠವೆಲ್ಲಾ ಕನ್ನಡಮಯವಾಗಿಬಿಟ್ಟಿತ್ತು. ಜಗದ್ಗುರುಗಳು ಮೊದಲಿಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಕಲಾಮೇಳವನ್ನು ಉದ್ಘಾಟಿಸಿದರು. ಪ್ರೊ.ಎಂ.ಹೆಚ್ ಕೃಷ್ಣಯ್ಯನವರು ಸಮಾರೋಪ ಭಾಷಣದಲ್ಲಿ ನೂರಾರು ವರ್ಷಗಳಿಂದ ಉತ್ತರ ಭಾರತದ ವಾರಣಾಸಿಯಲ್ಲಿ ಕನ್ನಡ ತನವನ್ನು ಉಳಿಸಿಕೊಂಡು

ಗ್ರಂಥ ವಿಶೇಷ

ಉತ್ತರ ಭಾರತದ ಕನ್ನಡ ಹಸ್ತಲಿಪಿ ಮತ್ತು ಇತರ ದಾಖಲಾತಿಗಳ ಬಹಳ ಉತ್ತಮವಾದ ಸೂಚಿಯಾಗಿದೆ. ಸಂಶೋಧನೆ ಮಾಡುವವರಿಗೆ ಬಹಳ ಉಪಯುಕ್ತವಾಗಿದೆ ಈ ಸೂಚಿಯನ್ನು ಡಾ॥ ವಿ. ಶಿವಾನಂದರು 10 ವರ್ಷಗಳ ಕಾಲ ಬಹಳ ಕಷ್ಟಪಟ್ಟು ಆಯಾ ಸ್ಥಳಗಳಿಗೆ ಹೋಗಿ ಸಂಗ್ರಹಿಸಿದ್ದಾರೆ. ಈ ಗ್ರಂಥದಲ್ಲಿ ಜಂಗಮವಾಡಿ ಮಠದ ತಾಳೆಯೋಲೆಗಳು, ಶಾಸನ–ಫರ್ಮಾನ್‌ಗಳ ದಾಖಲೆ ಮತ್ತು ಶಾಖಾಮಠಗಳ ಶಿಲಾಶಾಸನಗಳ ದಾಖಲೆ ಮತ್ತು ಕೇದಾರಪೀಠದ ತಾಳೆಯೋಲೆ, ಶಾಸನಗಳ ದಾಖಲೆಗಳು (ಉತ್ತರಪ್ರದೇಶ) ಬಿಹಾರದ ಆರಾದ ಶಾಸನ ತಾಳೆಯೋಲೆಗಳು–ಕನ್ನಡ ಹಸ್ತಲಿಪಿಗಳು, ಪಶ್ಚಿಮ ಬಂಗಾಲದ ಕಲ್ಕತ್ತದಲ್ಲಿದ್ದ ಕನ್ನಡ ಹಸ್ತಲಿಪಿಗಳು ಮತ್ತು ತಾಳೆಯೋಲೆಗಳು ಈ ರೀತಿಯಾಗಿ ಮೊಟ್ಟಮೊದಲಿಗೆ ಉತ್ತರ ಭಾರತದ ಕನ್ನಡ ಹಸ್ತಲಿಪಿಗಳನ್ನು ಸಂಗ್ರಹಿಸಿದ್ದಾರೆ. ಇದು ಬಹಳ ಅಮೂಲ್ಯವಾದ ಕಾರ್ಯ. ಅದರಲ್ಲೂ, ಸಂಶೋಧಕರಿಗೆ ಈ ತರಹದ ಗ್ರಂಥಗಳು ಇಲ್ಲಿ ದೊರೆಯುತ್ತವೆಂಬುದು ಈ ಗ್ರಂಥಸೂಚಿಯ ಮೂಲಕ ತಿಳಿಯುತ್ತದೆ. ಅವರ ಈ ಗ್ರಂಥದ ಹಸ್ತ ಲೇಖನ ಪ್ರತಿಗಳನ್ನು ಕುರಿತು ಅನುಸಂಧಾನ ಗೈಯುವಂತಹ ಸಂಶೋಧಕರಿಗೆ ವಿದ್ಯಾರ್ಥಿಗಳಿಗೆ ತುಂಬಾ ಪ್ರಯೋಜನಕಾರಿ ಹಾಗೂ ಮಾರ್ಗದರ್ಶಕವಾಗಿರುತ್ತವೆ.

ಬಂದಿರುವ ಜಂಗಮವಾಡಿ ಮಠದ ಬಗ್ಗೆ ಮೆಚ್ಚುಗೆ ನುಡಿಗಳನ್ನಾಡಿದರು. ಜಗದ್ಗುರುಗಳು ಪೀಠದ ಅಂತಸ್ತಿಗನುಗುಣವಾಗಿ, ಸಾಹಿತಿಗಳನ್ನು, ಸಾಂಸ್ಕೃತಿಕ ಕಲಾ ಮೇಳದವರನ್ನು, ಕವಿಗಳನ್ನು ಸನ್ಮಾನಿಸಿ-ಬಹು ಆತ್ಮೀಯವಾಗಿ ಕನ್ನಡ ಕಲಾವಿದರನ್ನು ಜಗದ್ಗುರುಗಳು ಬೀಳ್ಕೊಟ್ಟರು.

ಒಮ್ಮೆ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಘಟನೆ ಇದು. ಕಿತ್ತೂರು ರಾಣಿ ಚೆನ್ನಮ್ಮನ ಹೆಸರನ್ನು ಪಠ್ಯಪುಸ್ತಕದಿಂದ ತೆಗೆದದ್ದು ಜಗದ್ಗುರುಗಳ ಗಮನಕ್ಕೆ ಬಂದಿತು. ಪಠ್ಯಪುಸ್ತಕ ತಯಾರುಮಾಡುವ ತಜ್ಞರ ಸಮಿತಿಗೆ ಎಚ್ಚರಿಕೆಯ ಸಲಹೆ ನೀಡಬೇಕೆಂದು ಜಗದ್ಗುರುಗಳು 'ವಿಜಯ ಕರ್ನಾಟಕ'ದೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಕನ್ನಡನಾಡಿನ ಪ್ರಪ್ರಥಮ ಹೋರಾಟಗಾರ್ತಿ ಕಿತ್ತೂರ ಚೆನ್ನಮ್ಮನವರ ಹೆಸರನ್ನು ಪಠ್ಯಪುಸ್ತಕದಿಂದ ತೆಗೆದದ್ದು ಸಮಸ್ತ ಕನ್ನಡಿಗರ ಭಾವನೆಗಳ ಮೇಲೆ ಬರೆ ಎಳೆದಂತಾಗಿದೆ ಎಂದು ಹೇಳುತ್ತಾ, ಸುಮಾರು ಅರ್ಧ ಶತಮಾನಗಳ ಕಾಲ ಪಠ್ಯಪುಸ್ತಕದಲ್ಲಿ ಬಂದ ಚೆನ್ನಮ್ಮ ಸಂಕುಚಿತ ರಾಜಕೀಯ ಮನೋಭಾವನೆಯ ಪ್ರತೀಕವಾಗಿದೆ ಎಂದರು.

ಕನ್ನಡಿಗರ ಭಾವನೆಗಳ ಮೇಲೆ ಬರೆ : ಕಾಶೀ ಶ್ರೀ ಕಳವಳ

ಇಂತಹ ರಾಷ್ಟ್ರಭಕ್ತರ ಚರಿತ್ರೆಗಳನ್ನು ಪಠ್ಯಪುಸ್ತಕಗಳಿಂದ ತೆಗೆದುಹಾಕಿದರೆ ಆಗುವ ಪರಿಣಾಮದ ಬಗ್ಗೆ ತಿಳಿಸುತ್ತಾ, ಇಂತಹವರ ಚರಿತ್ರೆಗಳನ್ನು ಮಕ್ಕಳಿಗೆ ಓದಿಸದಿದ್ದರೆ ಮುಂದಿನ ಪೀಳಿಗೆಯಲ್ಲಿ ದೇಶಪ್ರೇಮ ಮೂಡಿಸುವುದು ಕಷ್ಟ ಸಾಧ್ಯವಾದೀತು. ಇಂತಹ ಪೀಳಿಗೆಯವರಿಂದ ದೇಶಕ್ಕೆ ಮತ್ತೊಂದು ಅಪಾಯ ಸನ್ನಿಹಿತವಾಗುವುದು ಎಂಬ ಎಚ್ಚರಿಕೆಯ ಮಾತುಗಳನ್ನು ಹೇಳಿದರು.

ದೊಡ್ಡ ದೊಡ್ಡ ನಗರಗಳಲ್ಲಿ ಅಶ್ವಾರೂಢ ಚೆನ್ನಮ್ಮನ ಮೂರ್ತಿಗಳನ್ನು ಸರ್ಕಾರ ಸ್ಥಾಪಿಸಿ ದೇಶಾಭಿಮಾನ ಮೂಡುವಂತೆ ಮಾಡಿರುವಾಗ, ಪಠ್ಯಪುಸ್ತಕದಿಂದ ಆಕೆಯ ಚರಿತ್ರೆ ಬಿಟ್ಟಿರುವುದು ಹೋರಾಟಗಾರ್ತಿ ಚೆನ್ನಮ್ಮನಿಗೆ ಅವಮಾನ ಮಾಡಿದಂತೆ, ದ್ರೋಹ ಬಗೆದಂತೆ ಆಗಿದೆ.

ಇದೆಲ್ಲವನ್ನು ಮನಗೊಂಡಿದ್ದ ಜಗದ್ಗುರುಗಳು ಸರಕಾರವು ಜನಹಿತ ಯೋಜನೆಗಳತ್ತ ಗಮನ ಹರಿಸಬೇಕೇ ವಿನಃ ವಿನಾಕಾರಣ ವಿಷಾದದ ಸುಳಿಯಲ್ಲಿ ಸಿಲುಕಬಾರದು. ಸರಕಾರ ಇದರ ಬಗ್ಗೆ ತುರ್ತು ನಿರ್ಣಯ ತೆಗೆದುಕೊಂಡು ಪುನಃ ಚೆನ್ನಮ್ಮನ ಚರಿತ್ರೆಯನ್ನು ಪುಸ್ತಕದಲ್ಲಿ ಅಳವಡಿಸಲು ಆದೇಶ ಹೊರಡಿಸಬೇಕೆಂದು ಕಿವಿಮಾತು ಹೇಳಿದರು.

ಜ್ಞಾನಪೀಠದ ಜ್ಞಾನಿಗಳು ವಿದ್ಯೆಯನ್ನು, ವಿದ್ಯಾವಂತರನ್ನು ಬಹಳ ಪ್ರೀತಿಯಿಂದ ಕಾಣುವವರು. ಪೀಠವತಿಯಿಂದ ಶಾಲೆಗಳನ್ನು ನಡೆಸುತ್ತಿರುವವರು-ಶಾಲಾ ಕಾಲೇಜುಗಳ ವಿದ್ಯಮಾನಗಳ ಬಗ್ಗೆ ಪತ್ರಿಕೆ, ಟಿ.ವಿ.ಗಳಲ್ಲಿ ವಿಚಾರಗಳನ್ನು ಕೇಳುತ್ತಾ ಇರುತ್ತಾರೆ. ಹೀಗಾಗಿ ಜಗದ್ಗುರುಗಳಿಗೆ ಬಹಳ ಬೇಗ ಚೆನ್ನಮ್ಮನ ವಿಚಾರ ಗಮನ ಸೆಳೆಯಿತು. ಸುಮ್ಮನಿರುವರೆ ಗುರುಗಳು ತಮ್ಮ ಅಭಿಪ್ರಾಯ, ಆಲೋಚನೆ, ಚಿಂತನೆಗಳು ಜನತೆಗೂ ಸರಕಾರಕ್ಕೂ ತಿಳಿಯಬೇಕೆಂಬ ಉದ್ದೇಶದಿಂದ ತಾವೇ ಪತ್ರಿಕೆಯವರನ್ನು ಸಂಪರ್ಕಿಸಿದ್ದು ನೆನೆದರೆ ಅವರಿಗೆ ಕನ್ನಡ ನಾಡಿನ ಇತಿಹಾಸದ ಬಗ್ಗೆ ಇರುವ ಅಭಿಮಾನ ವ್ಯಕ್ತವಾಗುತ್ತದೆ.

ಡಾ. ಸಜನಾ ಗ್ರಂಥಾಲಯ ಉದ್ಘಾಟನೆ

ವಿಜಯ ಕರ್ನಾಟಕ 25-11-2006



ಹುಕ್ಕೇರಿ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದಲ್ಲಿ ನಡೆದ ಸಮಾರಂಭದಲ್ಲಿ ಕಾಶೀ ಜಗದ್ಗುರುಗಳು, ಶ್ರೀ ವೀರಭದ್ರ ಶಿವಾಚಾರ್ಯರು, ಬಸವರಾಜ ಕಂಬಿ, ಶಾಂತಾ ನಾಗಲೋಟಿಮಠ ಮುಂತಾದವರು ಉಪಸ್ಥಿತರಿದ್ದರು.

2006 ನವೆಂಬರ್ 24ರಂದು ಜಗದ್ಗುರುಗಳು ಹುಕ್ಕೇರಿಗೆ ಆಗಮಿಸಿ ಅಲ್ಲಿನ ಗುರು ಶಾಂತೇಶ್ವರ ಹಿರೇಮಠದ ಸ್ವಾಮಿಗಳು ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ, ಕಾಶಿ ಜಗದ್ಗುರುಗಳ ಷಷ್ಟ್ಯಬ್ದಿ ಸಮಾರಂಭ ಹಾಗೂ ಡಾ. ಸಜನಾ ಗ್ರಂಥಾಲಯ ಉದ್ಘಾಟನೆ ಮಾಡಿದರು. ತಮ್ಮ ಆಶೀರ್ವಚನದಲ್ಲಿ ಜಾತಿ, ಮತ, ಪಂಥವೆನಿಸದೆ ಎಲ್ಲರ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯವನ್ನು ನಡೆಸಿಕೊಂಡು ಬಂದಿರುವ ಹಿರೇಮಠದ ಸ್ವಾಮಿಗಳನ್ನು ಶ್ಲಾಘನೆ ಮಾಡಿದರು. ಎಲ್ಲಾ ವರ್ಗದವರನ್ನು ಸೇರಿಸಿ ಭಾರತೀಯ ಸಂಸ್ಕೃತಿಗೆ ಮೆರಗು ನೀಡುತ್ತಿರುವ ಕೆಲಸಗಳ ಬಗ್ಗೆ ಮೆಚ್ಚಿಕೊಂಡು, ಕನ್ನಡದ ಉಳಿವಿಗಾಗಿ ನಿತ್ಯ ಶ್ರಮಿಸುತ್ತಿರುವ ಶ್ರೀಮಠದ ಸ್ವಾಮಿಗಳನ್ನೆ ಮೆಚ್ಚುಗೆ ವ್ಯಕ್ತಪಡಿಸಿ ಆಶೀರ್ವದಿಸಿದರು. ಕಾಶೀ ಮಹಾಪೀಠದಲ್ಲಿ ಪುರಾತನವಾದ ಬಹು ದೊಡ್ಡ ಗ್ರಂಥಾಲಯದಲ್ಲಿ ಪುರಾತನ ಗ್ರಂಥಗಳೂ, ತಾಡೋಲೆಗಳ ಸಂಗ್ರಹವೂ ಇದ್ದು, ಜಗದ್ಗುರುಗಳು ಪೀಠಕ್ಕೆ ಬಂದ ನಂತರ ಸಂಸ್ಕೃತ ಗ್ರಂಥಗಳನ್ನು ಹಿಂದಿ, ಇಂಗ್ಲಿಷ್‌ಗೆ ಅನುವಾದಿಸಿ ಮುದ್ರಿಸಿರುವ ಗ್ರಂಥಗಳ ಸಂಗ್ರಹ ಬಹಳ ವ್ಯವಸ್ಥಿತವಾಗಿ ಜೋಡಿಸಲ್ಪಟ್ಟಿದೆ. ಅದೆಷ್ಟೋ ವಿದ್ಯಾರ್ಥಿಗಳು ಈ ಗ್ರಂಥಾಲಯ ವನ್ನು ಬಳಸಿ ಇಲ್ಲಿ

ವಿದ್ಯಾವಂತರಾಗಿ ದೇಶಾದ್ಯಂತ ಹರಡಿ ಅನೇಕ ಸಂಸ್ಕೃತ ಶಾಲೆಗಳನ್ನು, ಕನ್ನಡ ಶಾಲೆಗಳನ್ನು ತೆರೆದಿದ್ದಾರೆ. ಯುವ ಪೀಳಿಗೆಯ ಸ್ವಾಮೀಜಿಗಳಿಗೆಲ್ಲಾ ಕಾಶೀ ಜಗದ್ಗುರುಗಳು ಮಾದರಿಯಾಗಿದ್ದಾರೆ.

ನೈತಿಕ ನಾಟಕಗಳಿಂದ ಪರಮಶಾಂತಿ : ಕಾಶಿ ಶ್ರೀ

ವಿಜಯ ಕರ್ನಾಟಕ 13-9-2007



ಕಾಶಿ ಜಂಗಮವಾಡಿ ಮಹಾಮಠದಲ್ಲಿ ಗುಬ್ಬಿ ವೀರಣ್ಣ ಪ್ರಶಸ್ತಿ ವಿಜೇತ ಏಣಗಿ ಬಾಳಪ್ಪ ದಂಪತಿಗಳನ್ನು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಸತ್ಕರಿಸಿದರು.

ಕಾಶೀ ಜಂಗಮವಾಡಿ ಮಠದಲ್ಲಿ ನೂರ ಇಪ್ಪತ್ತು ದಿನಗಳ ಕಾಲ ನಡೆದ ಜಗದ್ಗುರುಗಳ ಷಷ್ಠ್ಯಬ್ದಿ ಕಾರ್ಯಕ್ರಮದಲ್ಲಿ ಪ್ರತೀ ದಿನ ದೇಶದ ಒಬ್ಬರೊ ಇಬ್ಬರೊ ಸಾಧನೆ ಮಾಡಿರುವ ವ್ಯಕ್ತಿಗಳನ್ನು ಜಗದ್ಗುರುಗಳು ಪೀಠಕ್ಕೆ ಕರೆಸಿ ಗುರುರಕ್ಷೆ ನೀಡಿ ಸತ್ಕರಿಸುವ ಪದ್ಧತಿಯನ್ನು ಮಾಡಿಕೊಂಡು ಬಂದಿದ್ದಾರೆ. 2007ರ ಸೆಪ್ಟೆಂಬರ್ 12ರಂದು ಮಹಾಪೀಠಕ್ಕೆ 96 ವರ್ಷ ವಯಸ್ಸಿನ ಗುಬ್ಬಿ ವೀರಣ್ಣ ಪ್ರಶಸ್ತಿ ವಿಜೇತ ಕನ್ನಡಿಗರಾದ ಏಣಗಿ ಬಾಳಪ್ಪನವರು ಬಂದರು-ಪತ್ನೀ ಸಹಿತರಾಗಿ. ಜಗದ್ಗುರುಗಳು ವಯೋವೃದ್ಧ ಆರೋಗ್ಯವಂತ ದಂಪತಿಗಳನ್ನು ಹರ್ಷದಿಂದ ಬರಮಾಡಿಕೊಂಡು ಶಾಲು, ಶ್ರೀಫಲ ಮತ್ತು ಕಾಶಿ ವಿಶ್ವನಾಥ ಮಂದಿರದ ಸ್ವರ್ಣ ಕಳಸದ ಸ್ಮೃತಿ ಚಿನ್ಹೆ ನೀಡಿ ಗೌರವಿಸಿದರು.

ತಾವು ಸಂಸ್ಕೃತ ಅಧ್ಯಯನ ಮಾಡುವಾಗ ನಾಟಕಗಳ ವಿಚಾರಗಳನ್ನು ಓದಿ ಬಂದವರು ಜಗದ್ಗುರುಗಳು. ಈ ಹಿನ್ನಲೆಯಿದ್ದಿದ್ದರಿಂದಲೇ ತಮ್ಮ ಆಶೀರ್ವಚನದಲ್ಲಿ ರಂಗಮಂದಿರವೆಂದರೆ-ಅದೊಂದು ಶಾಲಾ ತರಗತಿ ಇದ್ದಂತೆ. ಅಲ್ಲದೆ ಸಮಾಜ ಸುಧಾರಣೆಯ ಸಶಕ್ತ ಮಾಧ್ಯಮ. ಸಮಾಜದ ಜನರ ಆಚಾರಗಳನ್ನು ತಿದ್ದುವ ಸಲುವಾಗಿ ಎಲ್ಲಾ ಭಾಷೆಗಳ ಕವಿಗಳು ಪೌರಾಣಿಕ ಸಾಮಾಜಿಕ ನಾಟಕಗಳನ್ನು ಬರೆದಿದ್ದಾರೆ. ನಾಟಕವೆಂದರೆ ದೃಶ್ಯಕಾವ್ಯಗಳೆಂದು ಕರೆಯಲ್ಪಟ್ಟಿದೆ. ಇವುಗಳನ್ನು ಅಭಿನಯಿಸುವಾಗ ಶೃಂಗಾರಾದಿ ನವರಸಗಳ ಜೊತೆಗೆ ಕೊನೆಯದಾದ ಶಾಂತರಸದ ಅನುಭೂತಿ ದರ್ಶಕರಿಗೆ ಆಗುತ್ತದೆ. ಉತ್ತಮ ಕಲಾಕಾರರು ನೈತಿಕ ನಾಟಕಗಳನ್ನು ಅಭಿನಯಿಸಿದರೆ ಅದರಿಂದ ಜನರ ಮನಸ್ಸಿನಲ್ಲಿ ಶಾಂತರಸ ಉತ್ಪತ್ತಿಯಾಗಿ ಜನರು ಕೇವಲ ಮನರಂಜನೆ ಪಡೆಯದೆ ನಾಟಕ ಮುಖಾಂತರವೂ ಸಹ ಪರಮ ಶಾಂತಿ ಪಡೆಯಬಹುದೆಂದು ಹೇಳಿದರು.

ವಿಜಯ ಕರ್ನಾಟಕ 20-11-06



ಶ್ರೀ ಕ್ಷೇತ್ರ ಯಡೂರಿನಲ್ಲಿ ಯುವ ಕನ್ನಡ ಜಾಗೃತಿ ಬಳಗವನ್ನು ಕಾಶೀ ಜ್ಞಾನಸಿಂಹಾಸನಾಧೀಶ್ವರ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು.

ಜಗದ್ಗುರುಗಳು ಸೊಲಾಪುರದಲ್ಲಿ ಸಂಸ್ಕೃತ ಬಿ.ಎ. ಮಾಡುವ ಕಾಲಕ್ಕೆ ಅಲ್ಲಿ ಓದುತ್ತಿದ್ದ ಸಂಸ್ಕೃತದ ನಾಟಕಗಳನ್ನು ರಜೆಯಲ್ಲಿ ಗುಳೇದಗುಡ್ಡಕ್ಕೆ ಬಂದಾಗ ಅಲ್ಲಿನ ಮಠದ ಶ್ರೀ ಅಮರೇಶ್ವರ ಸ್ವಾಮಿಗಳ ಇಚ್ಛೆಯಂತೆ ಅವರ ಮುಂದೆ ಅಭಿನಯಿಸಿ ತೋರಿಸಬೇಕೆಂದು ಆಶಿಸುತ್ತಿದ್ದರು. ಜಗದ್ಗುರುಗಳಿಗೆ ಅಪಾರ ಜ್ಞಾಪಕಶಕ್ತಿ ಇದ್ದುದರಿಂದ ನಾಟಕದಲ್ಲಿನ ಸಂಭಾಷಣೆಗಳನ್ನು ಸುಲಭದಲ್ಲಿ ತೋರಿಸುತ್ತಿದ್ದುದು ಇಲ್ಲಿ ನೆನೆಯುವಂತಾಗಿದೆ.

2008ರಲ್ಲಿ ಕೇಂದ್ರ ಸರ್ಕಾರ ಕನ್ನಡ ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಸ್ಥಾನಮಾನ ನೀಡಿದಾಗ ಕನ್ನಡಿಗರು, ಕನ್ನಡ ನಾಡಿನವರಿರಬಹುದು, ಹೊರ ರಾಜ್ಯಗಳ ಕನ್ನಡಿಗರಿರಬಹುದು, ಹೊರದೇಶದಲ್ಲಿರುವ ಕನ್ನಡಿಗರಿರಬಹುದು ಎಲ್ಲರೂ ವಿಜಯೋತ್ಸವ ಆಚರಿಸಿದ ವರ್ಷ 2008.

ಕನ್ನಡ ವಿಶ್ವಮಾನ್ಯ ಭಾಷೆಯಾಗಲಿ

ಸುದ್ದಿಲೋಕ 4-11-08



ಮುಂಬಯಿ ಉಪನಗರ ಅಂಬರನಾಥದಲ್ಲಿ ಖ್ಯಾತ ಉದ್ಯಮಿ ಆರ್.ಬಿ. ಹೆಬ್ಬಳ್ಳಿ ಹೊರನಾಡ ಕನ್ನಡಿಗರ ವತಿಯಿಂದ ಏರ್ಪಡಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಕಾಶೀ ಜಗದ್ಗುರು ಉದ್ಘಾಟಿಸಿದರು.

ಮುಂಬಯಿಯ ಖ್ಯಾತ ಉದ್ಯಮಿ ಶ್ರೀ ಆರ್.ಬಿ. ಹೆಬ್ಬಳ್ಳಿ ಅವರು ಹೊರನಾಡ ಕನ್ನಡಿಗರ ವತಿಯಿಂದ ಮುಂಬಯಿಯಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಪ್ರತೀವರ್ಷ ಏರ್ಪಡಿಸುತ್ತಿದ್ದರು. ರಾಜ್ಯೋತ್ಸವ ಆಚರಣೆ ಎಂದಿಗಿಂತಲೂ ವಿಜೃಂಭಣೆಯಿಂದ ಆಚರಿಸಬೇಕೆಂದು ಆಲೋಚಿಸಿ ಆರ್.ಬಿ. ಹೆಬ್ಬಳ್ಳಿಯವರು ಕಾಶೀ ಜಗದ್ಗುರುಗಳನ್ನು ಈ ಸಂಭ್ರಮದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲು ಆಹ್ವಾನಿಸಿದ್ದರು. ಅಲ್ಲಿನ ಕನ್ನಡಿಗರ ಉತ್ಸಾಹವನ್ನು ಕಂಡು ಜಗದ್ಗುರುಗಳಿಗೆ ಸಂತಸವಾಯಿತು. ನೆರೆದಿದ್ದ ಕನ್ನಡಿಗರನ್ನು ಉದ್ದೇಶಿಸಿ ಆಶೀರ್ವಚನದಲ್ಲಿ ಕನ್ನಡ ಭಾಷೆ ಎರಡು ಸಾವಿರ ವರ್ಷಗಳ ಶ್ರೀಮಂತ ಭಾಷೆ-ಇದು ವಿಶ್ವಮಾನ್ಯ ಭಾಷೆಯಾಗಿ ಮೆರೆಯಲಿ ಎಂದು ಶುಭ ಕೋರಿದರು. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಲು ಶ್ರಮಿಸಿದ-ಕರ್ನಾಟಕದ ಸಾಹಿತಿಗಳು, ಕಲಾವಿದರು, ಮಠಾಧೀಶರು, ಸರ್ವಪಕ್ಷಗಳ ಜನಪ್ರತಿನಿಧಿಗಳು ಇವರನ್ನೆಲ್ಲಾ ನೆನೆಯುತ್ತಾ ಜಗದ್ಗುರುಗಳು ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಎಲ್ಲಾ ಕನ್ನಡಿಗರ ಮೇಲಿದೆ. ಕನ್ನಡ ಅಭಿವೃದ್ಧಿಗಾಗಿ ಪ್ರತಿ ವರ್ಷ 25 ಕೋಟಿ ರೂಪಾಯಿಗಳನ್ನು ನೀಡುವುದಾಗಿ ಕರ್ನಾಟಕ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ಹೇಳಿಕೆಯನ್ನು ಸಭಿಕರೆಲ್ಲಾ ಹರ್ಷೋದ್ಗಾರದಿಂದ ಸ್ವಾಗತಿಸಿದರು. ಜೊತೆಗೆ ಹೊರನಾಡ ಕನ್ನಡಿಗರಿಗೂ ಕೋಟ್ಯಂತರ ರೂಪಾಯಿ ಬಿಡುಗಡೆ ಮಾಡುವುದಾಗಿ ಹೇಳಿರುವುದನ್ನು ಜಗದ್ಗುರುಗಳು ಸಭೆಯಲ್ಲಿ ತಿಳಿಸಿದರು. ಹೊರನಾಡಿನಲ್ಲಿರುವ ಕನ್ನಡಿಗರು ತಮ್ಮ ಪರಿಸರದಲ್ಲಿ ಭಾಷೆಯನ್ನು ಇನ್ನಷ್ಟು ಶ್ರೀಮಂತಗೊಳಿಸಬೇಕೆಂದು ಕನ್ನಡಿಗರಿಗೆ ತಿಳಿಹೇಳಿದರು.

ವಾರಣಾಸಿಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ, ಕಾಶೀ ಕನ್ನಡ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾಯೋಜಕತ್ವದಲ್ಲಿ ಕಾಶಿಯ ಮಹಾತ್ಮಾಗಾಂಧಿ ಅಧ್ಯಯನ ಪೀಠದಲ್ಲಿ ನಡೆದ ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ ಎರಡನೇ ಮಹಾಮೇಳವನ್ನು ಆಯೋಜಿಸಿ ಕಾಶೀ ಜಗದ್ಗುರುಗಳನ್ನು ಸಾನ್ನಿಧ್ಯ ವಹಿಸಲು ಆಹ್ವಾನಿಸಿ ಅವರಿಂದ 'ನಾವೆಲ್ಲರೂ ಒಂದೇ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿಸಿದರು.



ಕಾಶಿಯ ಮಹಾತ್ಮಾ ಗಾಂಧಿ ಅಧ್ಯಯನ ಪೀಠದಲ್ಲಿ ಆಯೋಜಿಸಿದ ಅಖಿಲ ಭಾರತ ಹೊರನಾಡು ಕನ್ನಡ ಸಂಘಗಳ ಎರಡನೇ ಮಹಾಮೇಳವನ್ನು ಶನಿವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಬಸವರಾಜು ಉದ್ಘಾಟಿಸಿದರು. ನಾಡೋಜ ಪಾಟೀಲ ಪುಟ್ಟಪ್ಪ ಸೇರಿದಂತೆ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

'ಮಾತೃ ಭಾಷೆಗೆ ನಿಷ್ಠೆ ಇರಲಿ ಅನ್ಯ ಭಾಷೆಯ ಬಗ್ಗೆ ಸಹನೆ ಇರಲಿ'-ಜಗದ್ಗುರುಗಳು

ಕರ್ನಾಟಕ ಸರಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಗುರು .....ಲಿಂಗೇಶ್ವರ ಕಲ್ಯಾಣಕೇಂದ್ರ ನಾಗಣಸೂರ ಆಶ್ರಯದಲ್ಲಿ ಮಹಾರಾಷ್ಟ್ರದ ಸೋಲಾಪುರದಲ್ಲಿ ಬೃಹತ್ ಭಾಷಾಭಾವೈಕ್ಯ ಸಮಾವೇಶ ಆಯೋಜಿಸಲಾಗಿತ್ತು. ಜೊತೆಗೆ ಕನ್ನಡ ಮಾಧ್ಯಮ ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ಮತ್ತು ಕವಿಗೋಷ್ಠಿ ಸಮಾರಂಭದ ಸಾನಿಧ್ಯ ವಹಿಸಲು ಕಾಶೀ ಜಗದ್ಗುರುಗಳನ್ನು 21-5-2012ರಲ್ಲಿ ಸೋಲ್ಲಾಪುರಕ್ಕೆ ಆಹ್ವಾನಿಸಲಾಗಿತ್ತು. ಎರಡು

ಭಾಷಾ ಭಾವೈಕ್ಯ ಸಮಾವೇಶ 21–5–2012



ಸೊಲ್ಲಾಪುರದಲ್ಲಿ ನಡೆದ ಭಾಷಾ ಭಾವೈಕ್ಯತಾ ಸಮಾವೇಶವನ್ನು ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಮಂತ್ರಿ ಗೋವಿಂದ ಕಾರಜೋಳ ನಗಾರಿ ಬಾರಿಸುವುದರ ಮೂಲಕ ಚಾಲನೆ ನೀಡಿದರು. ಕಾಶಿ ಜಗದ್ಗುರು, ಮುಖ್ಯಮಂತ್ರಿ ಚಂದ್ರು ಮತ್ತಿರರು ಇದ್ದಾರೆ.

ರಾಜ್ಯಗಳ ಭಾಷಾ ಭಾವೈಕ್ಯ ಸಮಾವೇಶವಾದ್ದರಿಂದ ಕರ್ನಾಟಕ ಮತ್ತು ಮಹಾರಾಷ್ಟ್ರದ ಸಚಿವರುಗಳು ಆಗಮಿಸಿದ್ದರು. ಸಮಾರಂಭ ಆರಂಭದ ಮೊದಲು ನಗರದ ಪ್ರಮುಖ ಬೀದಿಗಳಲ್ಲಿ ಬೃಹತ್ತ ಜಾನಪದ ಜಾಥಾ ಜರುಗಿತು. ಡೊಳ್ಳು, ಜಗಲಿ, ಹಲಗೆ ಪ್ರದರ್ಶನ, ವೀರಗಾಸೆ ವಿವಿಧ ಜಾನಪದ ತಂಡ ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಕರ್ನಾಟಕದಿಂದ ಕನ್ನಡ ಸಂಸ್ಕೃತಿ ಸಚಿವರಾದ ಶ್ರೀಮಾನ್ ಗೋವಿಂದ ಕಾರಜೋಳ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು, ಮಹಾರಾಷ್ಟ್ರದ ಪಶು ಸಂಗೋಪನೆ ಸಚಿವ ಮಾಧವರಾವ್ ಚವ್ಹಾಣ ಮುಂತಾದವರು ಆಗಮಿಸಿದ್ದರು. ಭಾಷಾ ಭಾವೈಕ್ಯದ ಸಮಾವೇಶಕ್ಕೆ ಸಾಂಸ್ಕೃತಿಕ ಮೆರಗು ರಾಜಕೀಯ ಮೆರಗು ಸೇರಿ ಹೆಚ್ಚು ಅದ್ಧೂರಿ ಸಮಾರಂಭವಾಗಿತ್ತು.

ಸಮಾರಂಭವನ್ನು ಎರಡೂ ರಾಜ್ಯಗಳ ಮಂತ್ರಿಗಳು ನಗಾರಿ ಬಾರಿಸುವುದರ ಮೂಲಕ ಸಮಾರಂಭಕ್ಕೆ ಚಾಲನೆ ನೀಡಿದ್ದು ವಿಶೇಷವೆನಿಸಿತು. ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು–ಭಾಷಾ ಸೌಹಾರ್ದತೆ ಸಾಧಿಸಬೇಕಾದರೆ ಪರಸ್ಪರ ಗೌರವಿಸಿ ಐಕ್ಯತೆಯಿಂದ ಬಾಳಬೇಕು. ಭಾಷೆಯ ಹೆಸರಿನಲ್ಲಿ ರಾಜಕೀಯಕ್ಕಾಗಿ ಭಾಷಾ ಕಲಹ ಹುಟ್ಟುಹಾಕುವುದು ಅವಿವೇಕತನ ಎಂದು ಹೇಳಿದ್ದಲ್ಲದೆ ಬೇರೆ ರಾಜ್ಯದಲ್ಲಿ ಬದುಕುವಾಗ

ಭಾಷೆ ನೆಪದಲ್ಲಿ ಕಲಹ ಬೇಡ : 22–5–2012



ಮಹಾರಾಷ್ಟ್ರದ ಸೊಲ್ಲಾಪುರದ ಹುತಾತ್ಮ ಸ್ಮೃತಿ ಮಂದಿರದಲ್ಲಿ ಸೋಮವಾರ ಏರ್ಪಡಿಸಿದ್ದ ಭಾಷಾ ಭಾವೈಕ್ಯ ಸಮಾವೇಶವನ್ನುದ್ದೇಶಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಗೋವಿಂದ ಕಾರಜೋಳ ಮಾತನಾಡಿದರು.

ಹೇಗಿರಬೇಕೆಂದು ವಿವೇಕಯುತ ಮಾತುಗಳಿಂದ ಹೇಳಿದ್ದು ಸಮಾವೇಶದ ಉದ್ದೇಶಕ್ಕೆ ಪೂರಕವಾಗುವಂತಿದ್ದವು. ಯಾವ ರಾಜ್ಯದಲ್ಲಿ ನಾವು ಬದುಕುತ್ತಿದ್ದೇವೋ ಆ ರಾಜ್ಯದ ಆಡಳಿತ ವ್ಯವಸ್ಥೆ, ಸಂಸ್ಕೃತಿ, ಭಾಷೆಗಳನ್ನು ಗೌರವಿಸುತ್ತಾ ನಮ್ಮ ಮಾತೃ ಭಾಷೆಯನ್ನು ಪೂಜಿಸುತ್ತಾ ಬೆಳಸಬೇಕು. ಮಾತೃಭಾಷೆ ಬಗೆಗೆ ನಿಷ್ಠೆ ಇರಲಿ, ಅನ್ಯಭಾಷೆಯ ಬಗೆಗೆ ಸಹನೆ ಇರಲಿ ಎಂಬ ಮನೋಭಾವ ಎಲ್ಲರಲ್ಲೂ ಬೆಳೆಯಬೇಕೆಂದರು.

ಎರಡು ನದಿ ಕೂಡಿದರೆ ಬೇರೆಯಾಗದೆ ಕೂಡಿ ಸಾಗುವಂತೆ ಬೇರೆ ಬೇರೆ ಸಂಸ್ಕೃತಿ, ಭಾಷೆ ಕೂಡಿದರೆ ವೈಚಾರಿಕತೆ, ಭಾವೈಕ್ಯತೆ ಬೆಳೆದು ವ್ಯಕ್ತಿತ್ವ ವಿಕಸನವಾಗುತ್ತದೆ ಎಂದು ಸಂದರ್ಭಕ್ಕೆ ಸೂಕ್ತವಾದ ಹಿತನುಡಿಗಳನ್ನಾಡಿ ಆಶೀರ್ವದಿಸಿದರು. ಭಾಷಾ ಭಾವೈಕ್ಯ ಸಮಾವೇಶ ಎರಡು ರಾಜ್ಯಗಳ ಹಬ್ಬ ಮದುವೆ ಸಂಭ್ರಮದಂತೆ ಇತ್ತು.

ಜಗದ್ಗುರುಗಳು ಹೀಗೆ ಅನೇಕ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳಲ್ಲಿ ಭಾಷಾ ಭಾವೈಕ್ಯ ಸಮಾವೇಶದಲ್ಲಿ ಭಾಗವಹಿಸಿ ಎಲ್ಲೆಡೆಯೂ ಮಾತೃಭಾಷೆಯ ಬಗ್ಗೆ ಅಮೂಲ್ಯ ವಿಚಾರಗಳನ್ನು ತಿಳಿಸುತ್ತಾ ಬಂದದ್ದನ್ನು ನೋಡಿದರೆ ಜಗದ್ಗುರುಗಳಿಗೆ ಮಾತೃಭಾಷೆಯ ಮೇಲಿನ ಪ್ರೀತಿ ಅಭಿಮಾನ ಎಷ್ಟಿದೆ ಎಂಬುದು ಕಂಡುಬರುತ್ತದೆ.

ಮಾತೃಭಾಷೆ ಸ್ವರ್ಗಕ್ಕಿಂತ ಮಿಗಿಲು



ವಿ.ಕ ನೆಟ್‌ಲೋಕ
25–2–12

ಜನ್ಮನೀಡಿದ ತಾಯಿ ಹಾಗೂ ಮಾತೃಭಾಷೆ ಸ್ವರ್ಗಕ್ಕಿಂತ ಶ್ರೇಷ್ಠ ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಹೇಳಿದರು. ಕಾಶಿ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ನಾನಾ ಪ್ರಾಂತಗಳ ಕನ್ನಡ ಸಂಘಗಳ 2ನೇ ಮಹಾಸಮ್ಮೇಳನ ಉದ್ಘಾಟನೆ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ನಮ್ಮ ದೇಶ ಹಲವು ಭಾಷೆಗಳ ತವರು ಎನಿಸಿದೆ. ಇದರಿಂದ ದೇಶದ ಸಾಹಿತ್ಯ ಸಮೃದ್ಧವಾಗಿದೆ. ವಿಶ್ವದಲ್ಲಿ ಅತ್ಯಂತ ಪ್ರಾಚೀನವಾದ ನಗರ ಕಾಶಿ. ದೇಶದ ಎಲ್ಲ ಭಾಷೆಗಳನ್ನು ಮಾತನಾಡುವವರು ಇಲ್ಲಿ ಸಾವಿರಾರು ವರ್ಷಗಳಿಂದ ಇದ್ದಾರೆ. ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನದ ಜಂಗಮವಾಡಿ ಮಠ ಇಲ್ಲಿ ಕನ್ನಡದ ಕಂಪನ್ನು ಉಳಿಸಿಕೊಂಡು ಬಂದಿದೆ. ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪಿಸಿದಂತೆ ಮಹಾತ್ಮಾ ಗಾಂಧಿ ವಿದ್ಯಾಪೀಠ, ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಅಧ್ಯಯನ ಕೇಂದ್ರ ಸ್ಥಾಪಿಸಲು ಸರಕಾರ ಮುಂದಾಗಬೇಕೆಂದು ಶ್ರೀಗಳು ಸಲಹೆ ನೀಡಿದರು.

ಮಾಧ್ಯಮಗಳ ಕುರಿತು ಜಗದ್ಗುರುಗಳು

ಸಮಾಜದ ಚಿಂತಕರಾದ ಜಗದ್ಗುರುಗಳು ಮಾಧ್ಯಮಗಳ ಪ್ರಭಾವ–ಮತ್ತದರಿಂದಾಗುವ ಪರಿಣಾಮಗಳನ್ನು ಹೋದೆಡೆಯಲ್ಲೆಲ್ಲಾ ನೋಡುತ್ತಿದ್ದರು. ಗುರುಗಳು ಯಾವಾಗಲೂ ಹೇಳುತ್ತಿದ್ದರು : ನಾವು ಪ್ರವಚನ ಮಾಡಿದಾಗ ಹೆಚ್ಚೆಂದರೆ ಸಾವಿರ ಸಾವಿರ ಜನಗಳು ಕೇಳಬಹುದು. ಆದರೆ, ಅದೇ ಪ್ರಚಾರ ಮಾಧ್ಯಮಗಳ ಮೂಲಕ ಲಕ್ಷಾಂತರ ಜನರ ಮನೆಬಾಗಿಲಿಗೇ ತಲುಪುತ್ತದೆ. ಅದರ ಪರಿಣಾಮವೇ ಹೆಚ್ಚು ಎಂದು. ತಾವು ಪೀಠಕ್ಕೆ ಬಂದ ಮರುವರ್ಷದಲ್ಲಿ ಅಂದರೆ 29–9–1990ರಲ್ಲಿ ರಾಣಿಬೆನ್ನೂರಿನಲ್ಲಿ ಶರನ್ನವರಾತ್ರಿ, ವಿಜಯದಶಮಿ ಉತ್ಸವದ ಸಮಾರೋಪದಲ್ಲಿ ಆಶೀರ್ವಚನ ನೀಡುತ್ತಾ ಮಾಧ್ಯಮದವರನ್ನು ಕುರಿತು ಮಾತನಾಡಿ–ಇಂದಿನ ಸಮಾಜದಲ್ಲಿ ಪತ್ರಿಕೆಗಳು ಮಹತ್ತರ ಸಾಧನೆ ಮಾಡಿವೆ. ಲಕ್ಷದ ಮೇಲ್ಪಟ್ಟ ಜನರಿಗೆ ಸುದ್ದಿ ಮುಟ್ಟಿಸುವ ವ್ಯವಸ್ಥೆ, ಎಲ್ಲಾ ಊರುಗಳಲ್ಲೂ ಪತ್ರಿಕಾ ಪ್ರತಿನಿಧಿಗಳ ವ್ಯವಸ್ಥೆ, ಅನೇಕ ಕೇಂದ್ರಗಳನ್ನು ಸ್ಥಾಪಿಸಿ ಮುದ್ರಣಗೊಳ್ಳುವ ವ್ಯವಸ್ಥೆ–ಎಲ್ಲಾದರ ಕುರಿತು ಹೇಳುತ್ತಾ ಇಂತಹ ಪ್ರಭಾವ ಬೀರುವ ಮಾಧ್ಯಮ ತನ್ನ ಪತ್ರಿಕೆಯಲ್ಲಿ ಸುದ್ದಿಗಳನ್ನು ಮುದ್ರಣ ಮಾಡುವಾಗ ಸಮಾಜವನ್ನು ಗಮನದಲ್ಲಿರಿಸಿಕೊಂಡು ಮುದ್ರಿಸಬೇಕು. ದುರ್ಘಟನೆಗಳನ್ನು ಪ್ರಕಟಿಸಿ ಜನರಲ್ಲಿ ಜಾಗೃತಿ ಮೂಡಿಸುತ್ತೇವೆ ಎಂದು ಪತ್ರಿಕಾ ಮಾಧ್ಯಮ ತಿಳಿದಿದ್ದರೆ ತಪ್ಪಾಗುತ್ತದೆ. ಜಾಗೃತಿ ಮೂಡಿಸುವ ಬದಲು ಆ ಕೃತ್ಯವನ್ನು ತಾನು ಮಾಡಲು ಹೊರಡುತ್ತಾನೆ–ಇದು ದುಷ್ಪರಿಣಾಮವೇ ಹೊರತು ಜಾಗೃತಿ ಮೂಡಿಸುವುದಿಲ್ಲ. ಮನುಷ್ಯನಿಗೆ ನೆಮ್ಮದಿ ನೀಡುವ ಧಾರ್ಮಿಕ ವಿಷಯಗಳಿಗೆ ಆದ್ಯತೆ ಕೊಡುತ್ತಿಲ್ಲ–ದೇಶದ ಹಾಗೂ ಸಮಾಜದ ಹಿತದೃಷ್ಟಿಯಿಂದ ಆಧ್ಯಾತ್ಮಿಕ ಸುದ್ದಿಗಳನ್ನು ಪ್ರಕಟಿಸಲು ಪತ್ರಿಕೆಗಳಿಗೆ ಕರೆನೀಡಿದರು.

ಸಮಾಜದ ಅಂಕು ಡೊಂಕುಗಳನ್ನು ತಿದ್ದಿ ಸರಿಯಾದ ದಾರಿಯಲ್ಲಿ ಸಾಗಿಸುವ ಪ್ರಯತ್ನ ಮಾಡುವ ರಥದ ಎರಡು ಗಾಲಿಗಳೆಂದರೆ ಧರ್ಮ ಮತ್ತು ಪತ್ರಿಕೆ. ಈ ಎರಡೂ ಇಲ್ಲದಿದ್ದರೆ ಸಮಾಜದಲ್ಲಿ ಅಧರ್ಮ ತುಂಬಿರುತ್ತದೆ.


ಇಂದು ಮಾಧ್ಯಮಗಳ ವಿಕಾಸವಾಗಿರುವುದರಿಂದ ಒಂದು ಸ್ಥಾನದಲ್ಲಿ ನಡೆದ ಧರ್ಮ ಹಾಗೂ ಆಧ್ಯಾತ್ಮ ಯೋಗ ಶಾಸ್ತ್ರಗಳನ್ನು ಮನೆ ಮನೆಗೆ ಮುಟ್ಟಿಸಲು ಸಮರ್ಥರಾಗಿದ್ದಾರೆ ಎಂದು ತಿಳಿಸಿದರು.

22–6–1993 – ಕೆಟ್ಟ ವಿಚಾರಗಳ ಅಬ್ಬರ ಪ್ರಚಾರ ಸಲ್ಲದು : ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು

ಇಳಕಲ್ಲಿನಲ್ಲಿರುವ ಆಧ್ಯಾತ್ಮ ಮಂಡಳಿಯವರು ಒಂದು ವಾರ ಕಾಲ ಅನೇಕ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಪ್ರತೀ ವರ್ಷದಂತೆ ಈ ವರ್ಷವೂ ಏರ್ಪಡಿಸಿದ್ದರು. ಇಂತಹ ಸೇವಾ ಕಾರ್ಯಕ್ರಮಗಳು ಯಾವ ಸರಕಾರದ ಧನ ಸಹಾಯವೂ ಇಲ್ಲದೆ ಸಾಮಾಜಿಕ ಕಳಕಳಿಯುಳ್ಳ ಜನತೆಯಿಂದ ನಡೆಯುತ್ತಿರುವುದನ್ನು ಸುದ್ದಿ ಮಾಧ್ಯಮದವರು ಹೆಚ್ಚಿಗೆ ಪ್ರಚಾರ ಕೊಡದ ಕಾರಣ ಜಗದ್ಗುರುಗಳು ಪತ್ರಿಕಾ ಮಾಧ್ಯಮದವರಿಗೆ, ದೂರದರ್ಶನಗಳಿಗೆ, ಬಾನುಲಿಗಳಿಗೆ ಹೇಳಿದ ಕೆಲವು ಮಾತುಗಳು ಇಂದಿಗೂ ಪ್ರಸ್ತುತವೆನಿಸಿದೆ.

ಎಲ್ಲಾ ಮಾಧ್ಯಮಗಳಲ್ಲೂ ಕೆಟ್ಟ ವಿಚಾರಗಳ ಅಬ್ಬರ ಹೆಚ್ಚಾಗಿ ಅವು ಎಲ್ಲಿಲ್ಲದ ಪ್ರಚಾರ ಪಡೆಯುತ್ತಿವೆ. ಹೀಗಾಗಿ ಮಾನವರಲ್ಲಿ ಆ ರೀತಿಯಲ್ಲಿ ಕೆಟ್ಟದ್ದನ್ನು ಮಾಡುವಂತೆ ಪ್ರಚೋದನೆ ನೀಡುತ್ತದೆ. ಅದಕ್ಕಾಗಿ ಎಲ್ಲಾ ಮಾಧ್ಯಮಗಳೂ, ಜನ ಸಾಮಾನ್ಯರೂ ಅವುಗಳಿಗೆ ಕಡಿವಾಣ ಹಾಕಬೇಕು ಎಂದು ಜಗದ್ಗುರುಗಳು ಹೇಳುತ್ತಾ ಮಂದಿರ ಮಠ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುವುದರಿಂದ ಅದು ಭಗವಂತನಿಗೆ ಸೇರುವುದಿಲ್ಲ. ಕಷ್ಟದಲ್ಲಿದ್ದವರಿಗೆ, ದೀನದಲಿತರಿಗೆ ಸಹಾಯ ಮಾಡುವುದರೊಂದಿಗೆ ಅವರ ಮನಸ್ಸಿಗೆ ಸಂತೋಷವಾಗುವ ರೀತಿಯಲ್ಲಿ ನಡೆದುಕೊಂಡರೆ ಅದು ಬೇಗ ದೇವರನ್ನು ಮುಟ್ಟುತ್ತದೆ ಎಂದು ಸಾಮಾಜಿಕ ಕಳಕಳಿಯಿಂದ ಮಾಧ್ಯಮದವರಿಗೆ ತಿಳಿ ಹೇಳಿದರು.

4–2–2000 – ವಿಜಯ ಕರ್ನಾಟಕಕ್ಕೆ ಶ್ರೀ ಕಾಶಿ ಜಗದ್ಗುರುಗಳವರ ಕೃಪಾಶೀರ್ವಾದ




ಮಹಾರಾಷ್ಟ್ರ ಬೀಡದ ಮಾಜಲಗಾಂವ ಮಠದಲ್ಲಿ ನಡೆದ 'ಮನ್ಮತಮಂಚ' ಮರಾಠಿ ಧಾರ್ಮಿಕ ಮಾಸ ಪತ್ರಿಕೆಯ ದಶಮಾನೋತ್ಸವ ಸಮಾರಂಭವನ್ನು ಕಾಶೀ ಜಗದ್ಗುರುಗಳು ಉದ್ಘಾಟಿಸಿದರು. ವಿವಿಧ ಮಠಾಧಿಪತಿಗಳು ಹಾಜರಿದ್ದರು.

ಗದಗ್‌ನಿಂದ ವಿಜಯ ಕರ್ನಾಟಕ ಪತ್ರಿಕೆ ಪ್ರಕಟಣೆ ಆರಂಭವಾದರೂ, ಜಗದ್ಗುರುಗಳು ವಿಜಯ ಕರ್ನಾಟಕವು ದಿನದಿಂದ ದಿನಕ್ಕೆ ಪ್ರವರ್ಧಮಾನಕ್ಕೆ ಬಂದು ಕರ್ನಾಟಕದಾದ್ಯಂತ ವಿಜಯಪತಾಕೆ ಹಾರಿಸುತ್ತಿರುವುದು ಆನಂದದಾಯಕವಾಗಿದೆ ಎಂದು ತಿಳಿಸಿ ಪ್ರಾದೇಶಿಕ ಸುದ್ದಿಗಳಿಗೆ ಆದ್ಯತೆ ನೀಡುವ ಸಲುವಾಗಿ ರಾಜ್ಯದ ನಾನಾ ಭಾಗಗಳಲ್ಲಿ ಕೇಂದ್ರ ತೆಗೆದಿರುವುದು ಹೆಮ್ಮೆಯ ವಿಷಯವಾಗಿದೆ.

ಈ ಪತ್ರಿಕೆ ಕೇವಲ ರಾಜಕೀಯ ಸಂಗತಿಗಳಿಗೆ ಆದ್ಯತೆ ಕೊಡದೆ ಧಾರ್ಮಿಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೂ ಸ್ಥಾನಮಾನ ಕಲ್ಪಿಸುತ್ತಿರುವುದು ಸ್ವಾಗತಾರ್ಹವಾಗಿದೆ ಎಂದು ಶುಭ ಹಾರೈಸಿದರು.

ಒಬ್ಬ ಧರ್ಮಗುರುಗಳು ಊರಿಂದೂರಿಗೆ ತಿರುಗಿ ಧರ್ಮ ಪ್ರಚಾರಕ್ಕಾಗಿ ತಮ್ಮ ಆಯುಷ್ಯವನ್ನೆಲ್ಲಾ ಕಳೆಯಬೇಕಾಗಿದೆ. ಅದೇ ಮಾಧ್ಯಮಗಳಿಂದ ಅಷ್ಟೇ ಪ್ರಚಾರವನ್ನು ಕೆಲವೇ ಸಮಯದಲ್ಲಿ ಮಾಡಬಹುದಾಗಿದೆ. ಈ ದಿಸೆಯಲ್ಲಿ ಮಾಧ್ಯಮಗಳ ಕೊಡುಗೆ ಅಪಾರವೆಂದು ಮಾಧ್ಯಮ ಕುರಿತು ತಮ್ಮ ಅನಿಸಿಕೆಗಳನ್ನು ಅನೇಕ ಕಡೆ ಪತ್ರಕರ್ತರೊಂದಿಗೆ ಹಂಚಿಕೊಂಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ಉತ್ತಮ ಪತ್ರಕರ್ತರನ್ನು ಸನ್ಮಾನಿಸಿ ಗುರುರಕ್ಷೆ ನೀಡಿದ್ದಾರೆ.

ಹೀಗೆ ಮಾಧ್ಯಮಗಳ ಒಳಿತು ಕೆಡಕು ಎಲ್ಲವನ್ನು ವಿಮರ್ಶಾತ್ಮಕವಾಗಿ ಹೋದೆಡೆಯಲ್ಲಿ ಪತ್ರಕರ್ತರ ಬಳಿ ತಿಳುವಳಿಕೆ ನೀಡುತ್ತಿದ್ದರು.



ಇಳಕಲ್‌ನಲ್ಲಿ 3–7–2008 ಜ್ಞಾನಯಜ್ಞ ವಿಶೇಷ ಕಾರ್ಯಕ್ರಮದಲ್ಲಿ 'ಕಾಲಭೂಷಣ' ಪ್ರಶಸ್ತಿಯನ್ನು ಕಾಶಿಯ ಜಗದ್ಗುರುಗಳು ಪತ್ರಕರ್ತ ಡಾ. ನಾಗರಾಜ ಹವಲದಾರ ಅವರಿಗೆ ನೀಡಿ ಗೌರವಿಸಿದರು.

ಸಾಮೂಹಿಕ ವಿವಾಹಗಳ ಬಗ್ಗೆ ಜಗದ್ಗುರುಗಳ ಚಿಂತನೆ

ಮಗಳ ಮದುವೆ ಎಂದರೆ ಸಾಕು ಮದುವೆಯ ಖರ್ಚು ವೆಚ್ಚಗಳ ಲೆಕ್ಕ ನೋಡಿ ಹೆತ್ತವರು ತಲೆಯ ಮೇಲೆ ಕೈಹೊತ್ತು ಚಿಂತಿಸುವುದು ಇವತ್ತು ನಿನ್ನೆಯ ಸಮಸ್ಯೆಯಲ್ಲ. ಆಯಾ ಕಾಲಕ್ಕೆ ಅಂದಿನ ಬೆಲೆಯ ಲೆಕ್ಕದಲ್ಲಿ ವಿವಾಹ ಎಂದರೆ ದುಬಾರಿ ಎಂದೇ ಭಾವಿಸಲಾಗಿದೆ. ಶ್ರೀಮಂತರನ್ನು ಹೊರತುಪಡಿಸಿ ಮಧ್ಯಮವರ್ಗದವರಿಗೆ ಮತ್ತು ಕಡಿಮೆ ಆದಾಯವಿರುವ ಕೆಳವರ್ಗದ ಜನರಿಗೆ ಜೀವಮಾನವೆಲ್ಲಾ ದುಡಿದರೂ ಮಗಳ ಮದುವೆಯ ಸಮಯಕ್ಕೆ ಬವಣೆ ತಪ್ಪುತ್ತಿರಲಿಲ್ಲ. ಈ ಎಲ್ಲಾ ಹಣಕಾಸಿನ ತೊಂದರೆಯಿಂದ ರಿಜಿಸ್ಟರ್ ಮಾಡಿ ಮದುವೆ ಮಾಡಿಕೊಳ್ಳುವ ರೂಢಿ ಆರಂಭವಾಯ್ತು. ಆದರೆ ಎಷ್ಟೇ ಬಡತನವಿರಲಿ ಸಂಪ್ರದಾಯ ಬಿಡಲಾಗದೆ ಶಾಸ್ತ್ರೋಕ್ತವಾಗಿ ಮದುವೆಯನ್ನು ಕಷ್ಟಪಟ್ಟಾದರೂ ಮಾಡುತ್ತಿದ್ದರು.

ಸಮಾಜದ ಕೆಲವು ಹಿತಚಿಂತಕರು, ಮಠಮಾನ್ಯಗಳು ಸಾಮೂಹಿಕ ವಿವಾಹವನ್ನು ಮಾಡಲಾರಂಭಿಸಿದರು. ವಧೂವರರನ್ನು ಆಶೀರ್ವದಿಸಲು ಆಯಾ ಧರ್ಮದ ಗುರುಗಳನ್ನು ಕರೆಸುವ ಪದ್ಧತಿ ರೂಢಿಗೆ ಬಂದಿತು. ಈ ಸಾಮೂಹಿಕ ವಿವಾಹಗಳು ದಿನೇ ದಿನೇ ಹೆಚ್ಚು ಜನಪ್ರಿಯವಾಗತೊಡಗಿದವು. ಬಡ ಸಂಸಾರಗಳಿಗೆ ದೇವರ ವರ ಸಿಕ್ಕಂತಾಯ್ತು ಸಾಮೂಹಿಕ ವಿವಾಹ.

ತಾ|| 12–4–1993ನೇ ಸೋಮವಾರ
ನೂಲ್ವಿ ಗ್ರಾಮ (ಹುಬ್ಬಳಿ) ಮಧ್ಯಾಹ್ನ 12–00 ಘಂಟೆಗೆ

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ದಿವ್ಯ ಸನ್ನಿಧಾನದಲ್ಲಿ
251 ಜೋಡಿ ಸಾಮೂಹಿಕ ವಿವಾಹ ಮಹೋತ್ಸವ

ಮುಖ್ಯ ಅತಿಥಿಗಳು
ಮಾನ್ಯ ಶ್ರೀ ಟಿ.ಎಂ. ಮಂಜುನಾಥ, ಸಣ್ಣ ಉಳಿತಾಯ ಸಚಿವರು, ಕರ್ನಾಟಕ ಸರ್ಕಾರ
ಮಾನ್ಯ ಶ್ರೀ ಹರೀಶ ಖೋಡೆ, ಉದ್ಯೋಗಪತಿಗಳು, ಬೆಂಗಳೂರು
ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ವಿರೋಧ ಪಕ್ಷದ ನಾಯಕರು
ಮಾನ್ಯ ಶ್ರೀ ಸಿ. ವೀರಭದ್ರಯ್ಯ, ಶಾಸಕರು, ಕೊರಟಗೆರೆ
ಶ್ರೀಮತಿ ಉಮಾದೇವಿ, ಸಂಪಾದಕರು, "ಕನ್ನಡಮ್ಮ"

ವೀರಶೈವ ಪಂಚಪೀಠಗಳು ಇಂತಹ ವಿವಾಹ ಸಮಾರಂಭಗಳಲ್ಲಿ ಭಾಗವಹಿಸಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಸಾಮೂಹಿಕ ವಿವಾಹ ಮಾಡಲಾರಂಭಿಸಿದರೂ ಸಾಮೂಹಿಕ ವಿವಾಹಗಳನ್ನು ಕೆಲವರು ಅಂದರೆ ಶ್ರೀಮಂತರು ತಮ್ಮ ಮಕ್ಕಳ ಮದುವೆ ಸಂದರ್ಭದಲ್ಲಿ ಬಡ ಹೆಣ್ಣುಮಕ್ಕಳ ಮದುವೆಯನ್ನು ಮಾಡುತ್ತಿದ್ದರು. ಕೆಲವೊಮ್ಮೆ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವದಲ್ಲೂ ಸಾಮೂಹಿಕ ವಿವಾಹದ ಏರ್ಪಾಡಿರುತ್ತಿತ್ತು. ಊರಿನ ಜಾತ್ರೆ ದಿನವೂ ಸಾಮೂಹಿಕ ವಿವಾಹಕ್ಕೆ ಅನುವು ಮಾಡುತ್ತಿದ್ದುದೂ ಉಂಟು. ಇನ್ನು ಕೆಲವು ಮಠಗಳಲ್ಲಿ ಹಿಂದಿನ ಸ್ವಾಮಿಗಳ ವಾರ್ಷಿಕ ಲಿಂಗೈಕ್ಯ ಪುಣ್ಯಾರಾಧನೆ ಸಮಯದಲ್ಲಿ ಏರ್ಪಾಡು ಮಾಡುತ್ತಿದ್ದರು. ಹೀಗೆ ಹತ್ತು ಹಲವು ಕಾರಣಗಳನ್ನು ಮುಂದಿಟ್ಟುಕೊಂಡು ಸಾಮೂಹಿಕ ವಿವಾಹದ ಏರ್ಪಾಡಾಗುತ್ತಿತ್ತು.

ಭಾರತೀಯ ಸಂಸ್ಕೃತಿಯಲ್ಲಿ ವಿವಾಹ ಸಂಸ್ಕಾರ ಶ್ರೇಷ್ಠವಾದುದು
ವಿಜಯ ಕರ್ನಾಟಕ 18–2–03



ಗುಳೇಗುಡ್ಡದ ಸಮೀಪದ ತೋಗುಣಸಿ ಗ್ರಾಮದಲ್ಲಿ ಶ್ರೀ ಅಮರೇಶ್ವರ ಕಲ್ಯಾಣ ಮಂಟಪವನ್ನು ಕಾಶೀಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಕೇದಾರ ಪೀಠದ ಶ್ರೀ ರಾವಲ್ ಭೀಮಾಶಂಕರ ಶಿವಾಚಾರ್ಯರು ಉಪಸ್ಥಿತರಿದ್ದರು.

ಕಾಶೀ ಜಗದ್ಗುರುಗಳು ಪೀಠಕ್ಕೆ ಬಂದ 3–4 ವರ್ಷಗಳಲ್ಲಿ ಹುಬ್ಬಳ್ಳಿಯ ನೂಲ್ವಿ ಗ್ರಾಮದಲ್ಲಿ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವದ ಪ್ರಯುಕ್ತ ಅನೇಕ ಕಾರ್ಯಕ್ರಮಗಳ ಜೊತೆಗೆ ಸಾಮೂಹಿಕ ವಿವಾಹ ಏರ್ಪಡಿಸಿದ್ದರು. ಬಹು ದೊಡ್ಡ ಸಂಖ್ಯೆಯಲ್ಲಿ 251 ಜೋಡಿ ಸಾಮೂಹಿಕ ವಿವಾಹದಲ್ಲಿ ಸಾನ್ನಿಧ್ಯ ವಹಿಸಿದ್ದರು. ಬಹುಶಃ ಇದೇ ಮೊದಲು ಸಾಮೂಹಿಕ ವಿವಾಹ ಕಾರ್ಯದಲ್ಲಿ ಕಾಶೀ ಜಗದ್ಗುರುಗಳು ಭಾಗವಹಿಸಿದ್ದಿರಬೇಕು.

ಜಗದ್ಗುರುಗಳ ಜನ್ಮಸ್ಥಳವಾದ ತೋಗುಣಸಿ ಗ್ರಾಮದಲ್ಲಿ ಶ್ರೀ ಅಮರೇಶ್ವರ ಕಲ್ಯಾಣ ಮಂಟಪವನ್ನು 18–2–2003ರಲ್ಲಿ ಉದ್ಘಾಟಿಸಿದರು. ಆ ಸಂದರ್ಭದಲ್ಲಿ ನೂತನವಾಗಿ ಕೇದಾರ ಪೀಠವನ್ನಲಂಕರಿಸಿದ್ದ ಜಗದ್ಗುರು ರಾವಲ್ ಭೀಮಾಶಂಕರ ಶಿವಾಚಾರ್ಯ ಮಹಾಸ್ವಾಮಿಗಳ, ಅಡ್ಡಪಲ್ಲಕ್ಕಿ ಮಹೋತ್ಸವದ ಜೊತೆಗೆ 21 ಜೋಡಿಗಳ ಸಾಮೂಹಿಕ ವಿವಾಹ ಏರ್ಪಡಿಸಲಾಗಿತ್ತು. ಸಾನ್ನಿಧ್ಯ ವಹಿಸಿದ್ದ ಕಾಶೀ ಜಗದ್ಗುರುಗಳು ನೂತನವಾಗಿ ವಿವಾಹವಾದ ಜೋಡಿಗಳನ್ನು ದ್ದೇಶಿಸಿ–ವಿವಾಹ ಸಂಸ್ಕಾರ ಶ್ರೇಷ್ಠವಾದದ್ದು, ಪತಿ–ಪತ್ನಿಯರು ಪರಸ್ಪರ ಪ್ರೀತಿ ವಾತ್ಸಲ್ಯ ದಿಂದ ಬಾಳಿ–ರಾಷ್ಟ್ರಭಕ್ತ, ದೈವಭಕ್ತರಾಗುವಂತಹ ಮಕ್ಕಳನ್ನು ದೇಶಕ್ಕೆ ನೀಡಬೇಕೆಂದು ಉಪದೇಶ ನೀಡಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಕಾಶೀ ಜಗದ್ಗುರುಗಳ ಪೂರ್ವಾಶ್ರಮದ ತಂದೆ–ತಾಯಿಯವರನ್ನು ಸನ್ಮಾನಿಸಲಾಯಿತು.

ವೀರಶೈವ ಮಠಗಳಲ್ಲಿ ಅನೇಕ ಮಠಗಳು ಸಾಮೂಹಿಕ ವಿವಾಹ ಏರ್ಪಡಿಸಲಾರಂಭಿಸಿದರು. ಹೀಗಾಗಿ ಆ ಮಠಗಳಿರುವ ಗ್ರಾಮಗಳಲ್ಲಿ ಬಡತನದ ಮನೆಯವರಿಗೆ ಅನುಕೂಲವಾಗುತ್ತಿತ್ತು.

ಸಂತಾನ ನಿಯಂತ್ರಣ ಕಾನೂನು ಎಲ್ಲ ಧರ್ಮದ ಜನರಿಗೂ ಏಕರೂಪವಾಗಿರಲಿ : ಕಾಶೀಪೀಠ ಶ್ರೀ

ಕನ್ನಡ ಪ್ರಭ 16-3-2003



ಹೊನ್ನಾಳಿ ಹಿರೇಕಲ್ಮಠದಲ್ಲಿ ಶ್ರೀ ಮೃತ್ಯುಂಜಯ ಸ್ವಾಮಿಗಳ 32ನೇ ವಾರ್ಷಿಕ ಪುಣ್ಯಾರಾಧನೆ ನಿಮಿತ್ತ ನಡೆದ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಕಾಶೀ ಜಗದ್ಗುರುಗಳು ಹಾಗೂ ಉಜ್ಜಯಿನಿ ಜಗದ್ಗುರುಗಳೊಂದಿಗೆ ಶ್ರೀ ಷ.ಬ್ರ. ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು 86 ಜೊತೆ ನವವಿವಾಹಿತರಿಗೆ ಅಕ್ಷತೆ ಹಾಕಿ ಆಶೀರ್ವದಿಸಿದರು.

ಹೊನ್ನಾಳ್ಳಿಯಲ್ಲಿರುವ ಹಿರೇಕಲ್ಮಠದ ಶ್ರೀ ಷ॥ಬ್ರ॥ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಹಿಂದಿನ ಸ್ವಾಮಿಗಳ 32ನೇ ಪುಣ್ಯಾರಾಧನೆ ನಿಮಿತ್ತ 86 ಜೋಡಿ ಸಾಮೂಹಿಕ ವಿವಾಹ ಏರ್ಪಡಿಸಿದ್ದರು. ಈ ಸಮಾರಂಭಕ್ಕೆ ಕಾಶೀ ಜಗದ್ಗುರುಗಳನ್ನು ಹಾಗೂ ಉಜ್ಜಯಿನಿ ಜಗದ್ಗುರುಗಳನ್ನು ಸಾನ್ನಿಧ್ಯ ವಹಿಸಲು ಆಹ್ವಾನ ನೀಡಿದ್ದರು. ನವ ವಿವಾಹಿತ ವಧೂವರರಿಗೆ ಜಗದ್ಗುರುಗಳು ಅವರುಗಳ ಬಳಿ ಹೋಗಿ ಅಕ್ಷತೆ ಹಾಕಿ ಆಶೀರ್ವದಿಸಿದರು.

ಕಾಶೀ ಜಗದ್ಗುರುಗಳು ಸಭೆಯಲ್ಲಿ ವೈವಾಹಿಕ ಜೀವನ ಹಾಗೂ ಸಂತಾನ ನಿಯಂತ್ರಣ ಕಾನೂನುಗಳು ಎಲ್ಲಾ ಧರ್ಮದವರಿಗೂ ಏಕರೂಪವಾಗಿರಬೇಕು. ಇಲ್ಲದಿದ್ದರೆ ಧಾರ್ಮಿಕ ಅಸಮತೋಲನ ಸಮಾಜದಲ್ಲಿ ತಲೆದೋರಿ ಅಶಾಂತಿಗೆ ಕಾರಣವಾಗುತ್ತದೆ ಎಂದು ಹೇಳಿದ್ದು ಇವತ್ತಿನವರೆಗೆ ಏಕರೂಪ ಕಾನೂನು ಜಾರಿಗೊಂಡಿಲ್ಲ. ದೂರದೃಷ್ಟಿಯುಳ್ಳ ಗುರುಗಳು ಯುವ ಜನಾಂಗವನ್ನು ಹೆಸರಿಸದೆ, ಯಾರಿಗೂ ನೋಯದಂತೆ ಹೇಳಿರುವ ಈ ಮಾತುಗಳು ಇಂದಿಗೂ ಪ್ರಸ್ತುತವಾಗಿದೆ.

ಲಯನ್ಸ್ ಕ್ಲಬ್ ವತಿಯಿಂದ 11 ಜೋಡಿ ಸಾಮೂಹಿಕ ವಿವಾಹ



ಗದಗ್ ಲಯನ್ಸ್ ಕ್ಲಬ್‌ನವರು ಏರ್ಪಡಿಸಿದ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಜಗದ್ಗುರುಗಳನ್ನು ಆಹ್ವಾನಿಸಿ ನೂತನ ವಧೂವರರಿಗೆ ಆಶೀರ್ವಾದ ಮಾಡಿಸಿದರು.


ಜಗದ್ಗುರುಗಳು ಸಾಮೂಹಿಕ ವಿವಾಹಗಳಲ್ಲಿ ಸಾನ್ನಿಧ್ಯ ವಹಿಸುತ್ತಿದ್ದರಲ್ಲದೆ, ಸಂದರ್ಭಕ್ಕನುಗುಣವಾಗಿ ನವದಂಪತಿಗಳು, ಬಂಧು ಬಾಂಧವರ ಕುರಿತು ಉತ್ತಮ ಕಿವಿಮಾತುಗಳನ್ನು ಹೇಳಿ ಆಶೀರ್ವದಿಸುತ್ತಿದ್ದರು.

5-5-2004 ಕಲಾದಗಿಯಲ್ಲಿ ಸಾಮೂಹಿಕ ವಿವಾಹ ಸಮಾರಂಭ ಮತ್ತು 1010 ಮುತ್ತೈದೆಯರಿಗೆ ಉಡಿ ತುಂಬುವ ವಿಶಿಷ್ಟ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಗುರುಗಳು-ಅತ್ತೆ-ಸೊಸೆ ಪರಸ್ಪರ ಪ್ರೀತಿಯಿಂದ ವಿಶ್ವಾಸದಿಂದ ನಡೆದುಕೊಂಡಲ್ಲಿ ಯಾವುದೇ ಸಮಸ್ಯೆ ಹುಟ್ಟುವುದಿಲ್ಲ ಎಂದು ಹೇಳಿದ್ದಲ್ಲದೆ, ಸ್ತ್ರೀ ಶಕ್ತಿಯನ್ನು ಗೌರವಿಸುವುದೇ ಉಡಿ ತುಂಬುವ ಕಾರ್ಯಕ್ರಮದ ಉದ್ದೇಶ ಎಂದು ಹೇಳಿ ಆಶೀರ್ವಚನ ನೀಡಿದರು. ಇಂದಿಗೂ ಸಮಾಜದಲ್ಲಿ ಬಗೆಹರಿಯದ ಸಂಬಂಧವೆಂದರೆ-ಅತ್ತೆ-ಸೊಸೆಯರದ್ದು. ಜಗದ್ಗುರುಗಳ ಉಪದೇಶದಂತೆ ಅತ್ತೆ-ಸೊಸೆಯಂದಿರು ತಮ್ಮ ಅಹಂಗಳನ್ನು ಬದಿಗಿರಿಸಿದಾಗ ಮಾತ್ರ ಸಾಮರಸ್ಯ ಮೂಡಲು ಸಾಧ್ಯವಾಗುತ್ತದೆ.

ಅತ್ತೆ ಸೊಸೆಯನ್ನು, ಸೊಸೆ ಅತ್ತೆಯನ್ನು ಪರಸ್ಪರ ಪ್ರೀತಿಯಿಂದ ಕಾಣಬೇಕು. ತನ್ನ ಮನೆಗೆ ಬರುವ ಸೊಸೆಯನ್ನು ಅತ್ತೆಯಾದವಳು ತನ್ನ ಸ್ವಂತ ಮಗಳಂತೆ ಪ್ರೀತಿ-ಅಕ್ಕರೆಯಿಂದ ಕಂಡು ಅವಳನ್ನು ಸೊಸೆ ಎನ್ನದೆ ವಂಶೋದ್ಧಾರಕಳು ಎಂದು ತಿಳಿಯಬೇಕು. ಸೊಸೆಯೂ ಅತ್ತೆಯನ್ನು ತಾಯಿಯಂತೆ ಕಾಣಬೇಕು ಎಂದು ಹೇಳಿ ಸುಖವರಿತು ಜೀವನಕ್ಕೆ ಹಾಗೂ ಆದರ್ಶ ಕುಟುಂಬಕ್ಕೆ ಈ ಸೂತ್ರವನ್ನು ಪ್ರತಿಯೊಬ್ಬ

ಅತ್ತೆ-ಸೊಸೆ ಪರಸ್ಪರ ಪ್ರೀತಿಯಿಂದ ನಡೆದುಕೊಳ್ಳಿ : ಕಾಶೀ ಶ್ರೀಗಳು

ಸಂಯುಕ್ತ ಕರ್ನಾಟಕ 6-5-2004



ಕಲಾದಗಿಯಲ್ಲಿ ಸಾಮೂಹಿತ ವಿವಾಹ ಸಮಾರಂಭ ಹಾಗೂ ಮುತ್ತೈದೆಯರ ಉಡಿ ತುಂಬುವ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಕಾಶೀ ಪೀಠದ ಜಗದ್ಗುರುಗಳು ಆಶೀರ್ವಚನ ನೀಡಿದರು. ವೀರಣ್ಣ ಚರಂತಿಮಠ, ಮುಕ್ತಿಮಂದಿರ ಶ್ರೀಗಳು, ಕಲಾದಗಿ ಶ್ರೀಗಳು ಚಿತ್ರದಲ್ಲಿದ್ದಾರೆ.

ವೀರಶೈವರು ಯೋಗ್ಯರ ಸಂಬಂಧ ಬೆಳೆಸಬೇಕು

ಸಂಯುಕ್ತ ಕರ್ನಾಟಕ 4-6-2004



ಬೆಂಗಳೂರಿನಲ್ಲಿ ಜರುಗಿದ ವೀರಶೈವ ವಧೂ-ವರರ ಮಹಾಮೇಳವನ್ನು ಶ್ರೀ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ವಿಭೂತಿಪುರಮಠ, ಶಿವಗಂಗೆ, ಹಿಪ್ಪರಗಿ ಶ್ರೀಗಳನ್ನು ಮತ್ತು ಸಂಘಟಕ ಚಂದ್ರಶೇಖರ ನಾಗರಾಳಮಠ ಇವರನ್ನು ಕಾಣಬಹುದು.

ಮಹಿಳೆ ಅನುಸರಿಸಬೇಕು ಎಂದೂ, ನವ ವಧೂವರರಿಗೆ ಸದಾಚಾರಿಗಳಾಗಿ, ಸಂಪನ್ನರಾಗಿ ಬಾಳಿರಿ ಎಂದೂ ಹಾರೈಸಿ ಗೃಹಸ್ಥ ಜೀವನವನ್ನು ಪ್ರಸನ್ನವಾಗಿ ನಡೆಸುವಂತೆ ಸಲಹೆಯಿತ್ತರು. ಮನೆಗೆ ಬರುವ ಅತಿಥಿಗಳ ಆದರೋಪಚಾರ ಮಾಡಿ ಪುಣ್ಯ ಪಡೆದುಕೊಳ್ಳಬೇಕೆಂದರು.

ಮೇಲಿನ ಈ ಮಾತುಗಳನ್ನು ಕೇಳುತ್ತಿದ್ದರೆ ಮದುವೆಯಾಗಿ ಗಂಡನ ಮನೆಗೆ ಹೊರಟಿರುವ ಮಗಳಿಗೆ ತಾಯಿ ಬುದ್ಧಿವಾದ ಹೇಳಿದಂತಿದೆ. ಮಾತೃಹೃದಯಿ ಜಗದ್ಗುರುಗಳು ಇಲ್ಲಿ ತಾಯಿಯಂತೆ ನುಡಿದಿದ್ದಾರೆ.

ವೀರಶೈವರಲ್ಲಿ ಒಳ ಪಂಗಡಗಳ ನಡುವೆ ಸಂಬಂಧಗಳನ್ನು ಹಿಂದೆ ಮಾಡುತ್ತಿರಲಿಲ್ಲ. ಇದರಿಂದಾಗಿ ವೀರಶೈವರಲ್ಲಿ ಹೊಂದಾಣಿಕೆಯಿಲ್ಲದೆ ಅದರ ಕಾವು ರಾಜಕೀಯಕ್ಕೂ ತಗುಲಿದೆ. ಒಳಪಂಗಡಗಳನ್ನು ಬೆಸೆಯಬೇಕೆಂಬುದೇ ಜಗದ್ಗುರುಗಳ ಆಶಯ. ಸಾಮೂಹಿಕ ವಿವಾಹಗಳಲ್ಲಿ ಇದನ್ನು ವ್ಯಕ್ತ ಪಡಿಸುತ್ತಿದ್ದರು. ಬೆಂಗಳೂರಿನಲ್ಲಿ ವೀರಶೈವ ವಧೂ-ವರ ಮಹಾ ಮೇಳವನ್ನು ವೀರಶೈವ ಕಲ್ಯಾಣಕೇಂದ್ರ ಏರ್ಪಡಿಸಿದ್ದಿತು. ಈ ಮಹಾಮೇಳವನ್ನು ಉದ್ದೇಶಿಸಿ ತಮ್ಮ ಆಶಯವನ್ನು ತಿಳಿಸಿ - ವೀರಶೈವ ಜನಾಂಗದವರು ಸ್ವಜಾತಿಯಲ್ಲಿ ಒಳಪಂಗಡಗಳ ಭೇದ ಬಿಟ್ಟು ಯೋಗ್ಯರಾದವರೊಂದಿಗೆ ಸಂಬಂಧ ಬೆಳೆಸಬೇಕು ಎಂದು ಕರೆನೀಡಿದ್ದಲ್ಲದೆ- ಮೊದಲಿನ ದಿನಗಳಲ್ಲಿ ಸಮಾನ ವೃತ್ತಿ ಮನೆತನದ ಕನ್ಯೆಯರನ್ನು ಸಂಬಂಧ ಚೆನ್ನಾಗಿರಲೆಂದು ಮನೆ ತುಂಬಿಸಿಕೊಳ್ಳಲಾಗುತ್ತಿತ್ತು. ಅವೆಲ್ಲ ಜಾತಿ ಸೂತಕವಾಗಿರಲಿಲ್ಲ. ಈಗ ಶೈಕ್ಷಣಿಕ ಅರ್ಹತೆಯನ್ನು ಆಧರಿಸಿ ಸಂಬಂಧ ನಿರ್ಧರಿಸಲಾಗುತ್ತಿದೆ. ವೀರಶೈವರೆಲ್ಲಾ ಈಗ ಒಳಪಂಗಡ ಮರೆತು ಸಂಬಂಧ ಬೆಳೆಸುವ ಅಗತ್ಯವಿದೆ ಎಂದು ಹೇಳಿದರು. ಸಮಾಜದ ಒಳಿತು ಕೆಡಕುಗಳ ಬಗ್ಗೆ ದೂರದೃಷ್ಟಿ ಉಳ್ಳವರು ಎಲ್ಲರೂ ಒಂದಾಗಿ ಬಾಳಬೇಕೆಂಬುದೇ ಜಗದ್ಗುರುಗಳ ಹಾರೈಕೆ.

बुधवार, २१ मे २०१४ ७
संचार सोलापूर



हत्तुरे नगरातील शिवसमर्थ प्रतिष्ठानतर्फे आयोजित सामुदायिक विवाह सोहळ्यातील वधू-वरांना आशीर्वाद देण्यासाठी काशी पीठाचे जगद्गुरू डॉ. चंद्रशेखर शिवाचार्य महास्वामीजी, आमदार विजयकुमार देशमुख, विश्वनाथ चाकोते, शिवशरण पाटील, आनंद मुस्तारे, बसवराज शास्त्री, श्रीशैल हत्तुरे व अन्य.

'शिवसमर्थ'चा सामाजिक उपक्रम

सामुदायिक विवाह सोहळ्यात नऊ वधू-वरांच्या रेशीमगाठी

संचार प्रतिनिधी

सोलापूर, दि. २०- सनईचे मंगल सूर, बँजोवर शिवभक्तीचा मंत्रोच्चार, वऱ्हाडी मंडळींची लगबग अशा वातावरणात आणि काशीचे जगद्गुरू डॉ. चंद्रशेखर शिवाचार्य महास्वामीजींच्या दिव्य सानिध्यात झालेल्या सामुदायिक विवाह सोहळ्यात नऊ वधू-वरांच्या रेशीमगाठी बांधण्यात आल्या.

स्व. रखमाबाई सिद्रामप्पा हत्तुरे यांच्या ११ व्या पुण्यतिथीनिमित्त हत्तुरे नगरमधील शिवसमर्थ प्रतिष्ठानतर्फे आयोजित करण्यात आलेल्या सर्वधर्मीय सामुदायिक विवाह सोहळा मंगलमय वातावरणात पार पडला. वधू-वरांना शुभाशीर्वाद देण्यासाठी विजापूरचे प.पू. परमानंद महाराज, हुबळीचे प.पू. राजशेखर शिवाचार्य स्वामीजी, शिरवळचे प.पू. सोमनिंग महाराज, वेदमूर्ती बसवराज शास्त्री, आमदार विजयकुमार देशमुख, माजी आमदार विश्वनाथ चाकोते, शिवशरण पाटील, स्वामी समर्थ सूतगिरणीचे अध्यक्ष राजशेखर शिवदारे, सिध्देश्वर बँकेचे अध्यक्ष सुभाष मुनाळे, परिवहन समितीचे सभापती आनंद मुस्तारे, केदार उंबरजे, राजशेखर हिरेहब्बू, इंदुमती अलगोंडा-पाटील, चंद्रकांत रमणशेट्टी, नरेंद्र काळे, रामप्पा चिवडशेट्टी, लोकमंगल कारखान्याचे कार्यकारी संचालक रवी पाटील, शिवगोंडा पाटील आदी उपस्थित होते. या सोहळ्यानिमित्त प्रतिष्ठानतर्फे आयोजित करण्यात आलेल्या रक्तदान शिबिरात २४ जणांनी रक्तदान केले.

माजी नगरसेवक अप्पासाहेब हत्तुरे, वैजीनाथ हत्तुरे यांनी मान्यवरांचे स्वागत केले. शिवसमर्थ प्रतिष्ठानचे संस्थापक श्रीशैल हत्तुरे यांनी आपल्या मातोश्री स्व. रखमाबाई हत्तुरे यांच्या पुण्यतिथीनिमित्त गेल्या वर्षीपासून हा उपक्रम सुरू केला आहे. सुमारे १० हजार वऱ्हाडी मंडळींनी भोजनाचा आस्वाद घेतला. हा सोहळा यशस्वी करण्यासाठी हत्तुरे परिवार, हत्तुरे नगरवासीय व या भागातील विविध उत्सव मंडळांनी परिश्रम घेतले.

सासूचे सुनेशी नाते मुलीसारखे असावे

भारतीय संस्कृतीनुसार माणसाच्या जीवनात विवाह हा महत्त्वाचा संस्कार मानला जातो. विवाह झाल्यानंतर मुलगी एका घरातून दुसऱ्या घरात जाते. तिथे तिचे सासूशी नाते मुलीसारखे असावे तर सासूनेदेखील तिला मुलगी म्हणूनच वागविले पाहिजे. ज्या घरात सासू व सून आई-मुलीसारख्या राहतात ते घर भूलोकातील स्वर्ग मानले जाते, अशा शब्दात काशी जगद्गुरू डॉ. चंद्रशेखर शिवाचार्य महास्वामीजींनी आपल्या आशीर्वचनात एकत्र कुटुंब पध्दतीची महती सांगितली.

21–5–11ರಂದು ವಿ.ಗು. ಶಿವಾಧಾರೆ ಪ್ರತಿಷ್ಠಾನ, ಸೊಲ್ಲಾಪುರ–ಇವರು ಆಯೋಜಿಸಿದ್ದ "ಸರ್ವ ಧರ್ಮೀಯ ಸಾಮೂಹಿಕ ವಿವಾಹ ಮಹೋತ್ಸವ"ವು ಸಾತನ್‌ದೂದನಿ ಗ್ರಾಮದಲ್ಲಿ (ಅಕಲ್‌ಕೋಟ್ ತಾ॥ ಸೊಲ್ಲಾಪುರ ಜಿ॥) ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಕಾಶೀ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿತ್ತು.


५ लोकमत सोलापूर, रविवार, दि. २९ मे २०११

वि.गु.शिवदारे प्रतिष्ठान, सोलापूर. आयोजित

दिव्य सानिध्यात

सर्वधर्मीय सामूहिक विवाह सोहळा

श्री श्री श्री १००८ जगद्‌गुरु डॉ. चंद्रशेखर शिवाचार्य महास्वामीजी, काशी

श्री.ष.ब्र. तपोरत्नं योगीराजेंद्र शिवाचार्य बृहन्मठ होटगी

श्री.ष.ब्र. डॉ.जयसिध्देश्वर शिवाचार्य गौडगांव

श्री.ष.ब्र. श्रीकंठ शिवाचार्य नागणसूर

आज रविवार दि. २९.५.२०११ रोजी दुपारी १२.२३ वाजता श्री मल्लिकार्जून देवस्थान (मल्लयन गुड्ड) सातनदुधनी, ता.अक्कलकोट, जि.सोलापूर

येथे होत आहे तरी या सामुहिक विवाह सोहळ्यास शुभाशिर्वाद देण्यासाठी सर्वांनी उपस्थित रहावे हि विनंती

ಜಗದ್ಗುರುಗಳು ಮೊದಲಿಂದಲೂ 'ಸ್ವಧರ್ಮನಿಷ್ಠೆ, ಪರಧರ್ಮಸಹಿಷ್ಣುತೆ' ಎಂದು ನಡೆದುಕೊಂಡವರು. ಹಾಗಾದಾಗಲೇ ಸಮಾಜದಲ್ಲಿ ಜಾತಿ-ಜಾತಿಗಳ ನಡುವೆ ದ್ವೇಷ ಹುಟ್ಟುವುದಿಲ್ಲ. ಈ ಕಾರ್ಯಕ್ರಮ ಸರ್ವಧರ್ಮೀಯರಿಗೆ ಸೇರಿದ್ದಾದ್ದರಿಂದ ಜಗದ್ಗುರುಗಳು ಸಂತೋಷದಿಂದ ನೆರೆದಿದ್ದ ನವವಿವಾಹಿತರಿಗೆ ಆಶೀರ್ವದಿಸಿದರು.

ಮೂರು ಆಶ್ರಮಗಳ ಸಂರಕ್ಷಣೆಯೇ ಗೃಹಸ್ಥಾಶ್ರಮ

24-6-12

ಕಲಬುರ್ಗಿ, 24 : ಎಲ್ಲ ಆಶ್ರಮಗಳನ್ನು ಸಂರಕ್ಷಿಸುವ ಆಶ್ರಮವೇ ಗೃಹಸ್ಥಾಶ್ರಮ ಎಂದು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನುಡಿದರು.

ಕಲಬುರ್ಗಿಯಲ್ಲಿ ಜಗದ್ಗುರುಗಳು ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಆಶೀರ್ವಚನ ನೀಡುತ್ತಿದ್ದ ಸಂದರ್ಭದಲ್ಲಿ ಉಚಿತ ಸಾಮೂಹಿಕ ವಿವಾಹ ಸಮಾರಂಭವನ್ನು ಹಮ್ಮಿಕೊಂಡಿದ್ದರು. ಈ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು ಬ್ರಹ್ಮಚರ್ಯ ವಾನಪ್ರಸ್ಥಾನ ಹಾಗೂ ಸನ್ಯಾಸಾಶ್ರಮ-ಈ ಮೂರು ಆಶ್ರಮಗಳನ್ನು ಸಂರಕ್ಷಿಸುವುದೇ ಗೃಹಸ್ಥಾಶ್ರಮ ಎಂದು ಅದೇ ತಾನೇ ಗೃಹಸ್ಥಾಶ್ರಮಕ್ಕೆ ಕಾಲಿರಿಸಿದ ನವ ವಧೂವರರಿಗೆ ತಿಳಿಸಿದರು. ಮದುವೆಗಳನ್ನು ಸಾಮಾನ್ಯವಾಗಿ ಪಂಚಾಚಾರ್ಯರನ್ನು ಕರೆಸಿ ಅವರ ಸಾನ್ನಿಧ್ಯದಲ್ಲಿ ಮಾಡಬೇಕೆಂಬುದೇ ಧರ್ಮಶಾಸ್ತ್ರದ ವಿಧಾನ. ಅವರುಗಳು ಪ್ರತೀ ಮದುವೆಗೂ ಬರಲಾಗುವುದಿಲ್ಲ. ಅವರ ಸಂಕೇತವಾಗಿ ಪಂಚಕಲಶಗಳ ಸಾಕ್ಷಿಯಲ್ಲಿ ಈ ಸಂಸ್ಕಾರ ಮಾಡುವ ಪದ್ಧತಿ ರೂಢಿಯಲ್ಲಿದೆ ಎಂದು ಹೇಳುತ್ತಾ ನವ ವಧುವಿಗೆ ದೊರೆತ ಮುತ್ತೈದೆ ಲಕ್ಷಣಗಳಲ್ಲಿ ಹಸಿರುಬಳೆ ರಂಭಾಪುರಿ ಪೀಠ, ಕುಂಕುಮ-ಉಜ್ಜಯನಿಪೀಠ, ಕರಿಮಣಿಸರದ ದಾರ-ಕೇದಾರ ಪೀಠ, ಮುತ್ತು ಮತ್ತು ಕಾಲುಂಗುರ- ಶ್ರೀಶೈಲ ಪೀಠ, ಮಾಂಗಲ್ಯದಲ್ಲಿ ಕಾಶೀ ಪೀಠದ ಮಂಗಲಾಶೀರ್ವಾದವಿದೆ. ಆದ್ದರಿಂದ ಪ್ರತಿಯೊಬ್ಬ ಮುತ್ತೈದೆಯರಿಗೂ ಪಂಚಪೀಠದ ಆಶೀರ್ವಾದವಿದೆ ಎಂಬ ಹೊಸವಿಚಾರವನ್ನು ತಿಳಿಸಿದರು.


ಕಲಬುರ್ಗಿಯಲ್ಲಿ ಭಾನುವಾರ ನಡೆದ ಸಾಮೂಹಿಕ ವಿವಾಹ ಸಮಾರಂಭಕ್ಕೆ ಶ್ರೀ ಕಾಶೀ ಜಗದ್ಗುರುಗಳು ದಿವ್ಯ ಸಾನ್ನಿಧ್ಯ ನೀಡಿದರು. ಕಡಗಂಚಿ ಶ್ರೀಗಳು, ಜೈನಾಪುರ ಶ್ರೀಗಳು, ಶರಣಬಸಪ್ಪಾ ಸಂಕಾಣಿ, ಶಿವಾನಂದ ಮಠಪತಿ, ಈರಯ್ಯ ಸ್ವಾಮಿ ಹಾಗೂ ನಾಗಯ್ಯ ಉಪಸ್ಥಿತರಿದ್ದರು.

ಗೃಹಸ್ಥಾಶ್ರಮ ಸಾಧನೆಗೆ ಸೂಕ್ತ ಮಾರ್ಗ

ವಿಕ ಸುದ್ದಿಲೋಕ 24-6-12

ಹಾಗೆಯೇ ಅತ್ತೆ-ಸೊಸೆಯರಿಗೆ ಬುದ್ಧಿ ಮಾತುಗಳನ್ನು ತಿಳಿಸಿದರು. ಮನೆಗೆ ಬಂದ ಸೊಸೆಯುನ್ನು ಅತ್ತೆ ತನ್ನ ಮಗಳಂತೆ ಪ್ರೀತಿಸಬೇಕು. ಯಾವ ಮನೆಯಲ್ಲಿ ಅತ್ತೆ ಸೊಸೆಯುಂದಿರು ತಾಯಿ ಮಕ್ಕಳಂತೆ ಪ್ರೀತಿಯಿಂದ ಇರುವರೋ ಆ ಮನೆ ಸ್ವರ್ಗವಾಗುತ್ತದೆ ಎಂದರು.

ವಿಜಾಪುರ ಜಿಲ್ಲೆಯ ಬೆಳ್ಳುಬ್ಬಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡ ಮಳೆಸ್ವಾಮಿ ದೇವಾಲಯದ ಉದ್ಘಾಟನೆ ಹಾಗೂ ಉಜ್ಜಯಿನಿ ಜಗದ್ಗುರುಗಳ ಪೀಠಾರೋಹಣ ಪ್ರಥಮ ವರ್ಧಂತಿ ಮಹೋತ್ಸವದ ಕಾರ್ಯಕ್ರಮಗಳ ಜೊತೆಯಲ್ಲಿ ಮತ್ತೊಂದು ವಿಶೇಷವೆಂದರೆ ಸರ್ವಧರ್ಮೀಯರ ಸಾಮೂಹಿಕ ವಿವಾಹವನ್ನು ಏರ್ಪಡಿಸಿದ್ದಿದ್ದು. ಈ ಕಾರ್ಯಕ್ರಮಗಳು ಕಾಶೀ ಜಗದ್ಗುರು, ಉಜ್ಜಯಿನಿ ಜಗದ್ಗುರು ಹಾಗೂ ಶ್ರೀಶೈಲ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಮಂಗಳ ಕಾರ್ಯಗಳೆಲ್ಲವೂ ನಡೆದವು.

ಸರ್ವಧರ್ಮ ಸಾಮೂಹಿಕ ವಿವಾಹದಲ್ಲಿ 23 ಜೋಡಿಗಳು ಹೊಸ ಜೀವನಕ್ಕೆ ನಾಂದಿ ಹಾಡಿದರು.

ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯರ ಪೀಠಾರೋಹಣ ವರ್ಧಂತಿ ಮಹೋತ್ಸವ

ಬೆಳ್ಳುಬ್ಬಿಯಲ್ಲಿ ಸರ್ವಧರ್ಮ ಸಾಮೂಹಿಕ ವಿವಾಹ

ವಿಕ ಸುದ್ದಿಲೋಕ 21-11-12



ವಿಜಾಪುರ ತಾಲೂಕಿನ ಬೆಳ್ಳುಬ್ಬಿ ಗ್ರಾಮದ ಮಳೆಸ್ವಾಮಿ ದೇವಸ್ಥಾನ ಆವರಣದಲ್ಲಿ ನಡೆದ ಉಜ್ಜಯಿನಿ ಶ್ರೀಗಳ ಪ್ರಥಮ ಪೀಠಾರೋಹಣ ವರ್ಧಂತಿ ಮಹೋತ್ಸವ ಹಾಗೂ ಸರ್ವಧರ್ಮ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಕಾಶಿ, ಶ್ರೀಶೈಲ ಜಗದ್ಗುರುಗಳು, ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಎಸ್.ಕೆ. ಬೆಳ್ಳುಬ್ಬಿ, ಮೇಲ್ಮನೆ ಪ್ರತಿಪಕ್ಷನಾಯಕ ಎಸ್.ಆರ್. ಪಾಟೀಲ, ಶಾಸಕ ಎಂ.ಬಿ. ಪಾಟೀಲ ಮತ್ತಿತರರು ಇದ್ದರು.

ಗುಳೇದಗುಡ್ಡ ಮರಡಿಮಠದ 10ನೇ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳ ಅಮೃತ ಮಹೋತ್ಸವದಲ್ಲಿ ಉಚಿತ ಸಾಮೂಹಿಕ ವಿವಾಹ ಸಮಾರಂಭವನ್ನು ಉದ್ಘಾಟಿಸಿ ಕಾಡಸಿದ್ಧೇಶ್ವರ ಸ್ವಾಮಿಗಳು ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವುದಕ್ಕೆ ಇಲ್ಲಿ ಸೇರಿರುವ ಭಕ್ತ ಸಮೂಹವೇ ಸಾಕ್ಷಿ ಎಂದು ಹೇಳಿದ್ದಲ್ಲದೆ ನೂತನ ವಧೂವರರಿಗೆ ಆಶೀರ್ವದಿಸಿ ನಿಮ್ಮ ಮನೆ ನಂದನವಾಗಲಿ, ದೇಶಭಕ್ತ ಮಕ್ಕಳು ಜನನವಾಗಲಿ ಎಂದು ಉಪದೇಶ ಮಾಡಿದರು.

ದೇಶಭಕ್ತ ಮಕ್ಕಳು ಜನಿಸಲಿ ಎಂಬ ಹಾರೈಕೆಯಲ್ಲಿ ಜಗದ್ಗುರುಗಳಿಂದ ರಾಷ್ಟ್ರಪ್ರೇಮ-ರಾಷ್ಟ್ರೋನ್ನತಿ ಬಗ್ಗೆ ಇರುವ ಚಿಂತನೆ ಎದ್ದು ಕಾಣುತ್ತದೆ.

ಬೀಳಗಿಯ ತೋಳಮಟ್ಟಿ ಗ್ರಾಮದಲ್ಲಿ ಸಾಮೂಹಿಕ ವಿವಾಹದ ಏರ್ಪಾಡಿನಲ್ಲಿ ಸರ್ವ ಧರ್ಮೀಯರು ಭಾಗವಹಿಸುವಂತೆ ಏರ್ಪಡಿಸಿದ್ದು ಜಗದ್ಗುರುಗಳಿಗೆ ಸಂತಸ ತಂದಿತ್ತು. ಆ ಗ್ರಾಮದ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ, ಸರ್ವ ಧರ್ಮ ಸಾಮೂಹಿಕ ವಿವಾಹ ಮತ್ತು ಭಾವೈಕ್ಯ ಧರ್ಮ ಸಮ್ಮೇಳನ ಏರ್ಪಡಿಸಲಾಗಿತ್ತು. ಜಗದ್ಗುರುಗಳನ್ನು ಅಡ್ಡಪಲ್ಲಕ್ಕಿಯ ಮೇಲೆ ಅದ್ದೂರಿಯಿಂದ 108 ಸುಮಂಗಲೆಯರು ಕುಂಭ ಹೊತ್ತಿದ್ದು, 250 ಆರತಿ ಹಾಗೂ ಆನೆ ಅಂಬಾರಿ ಮತ್ತು ಸಕಲ ವಾದ್ಯ ವೈಭವಗಳೊಂದಿಗೆ ಸ್ವಾಗತಿಸಲಾಯಿತು. ಅಲ್ಲಿ ಜಗದ್ಗುರುಗಳು ಮಾತನಾಡುತ್ತಾ ಎಲ್ಲಾ ಜಾತಿ ಧರ್ಮದವರನ್ನು ಒಂದೇ ವೇದಿಕೆಯ ಮೇಲೆ ಕರೆತಂದು ಮಾಡುವ ಸಾಮೂಹಿಕ ವಿವಾಹಗಳ ಅಗತ್ಯವಿದೆ. ಬಡ ಬಗ್ಗರ ಆರ್ಥಿಕ ಹೊರೆಯನ್ನು ಇಳಿಸುವ ಇಂತಹ ವಿವಾಹಗಳು ಹೆಚ್ಚು ಹೆಚ್ಚು ನಡೆಯುವಂತಾಗಬೇಕು- ನಮ್ಮ ದೇಶದಲ್ಲಿ ಪರಂಪರೆ, ಜಾನಪದ ಕಲೆಗಳು ಉಳಿದಿರುವುದೇ ಗ್ರಾಮಗಳಿಂದ. ಯುವಕರು ವ್ಯಸನಗಳಿಂದ ಮುಕ್ತರಾಗಿ ಸದೃಢಕಾಯ ಹೊಂದಿ ದೇಶದ ಆಸ್ತಿಯಾಗಿ ಹೊರಹೊಮ್ಮಬೇಕು. ಸಂಪತ್ತು ಒಂದಾಗಿ ದುಶ್ಚಟಗಳಿಗೆ ಬಲಿಯಾಗಿ ಆರೋಗ್ಯಹೀನರಾಗಬೇಡಿ ಎಂದು ಯುವಕರಿಗೆ ಉಪದೇಶ ಮಾಡಿದರು.



16-2-13

ಗುಳೇದಗುಡ್ಡದಲ್ಲಿ ಶುಕ್ರವಾರ ಆಯೋಜಿಸಿದ್ದ ಮರಡಿಮಠದ ಹಿರಿಯ ಕಾಡಸಿದ್ಧೇಶ್ವರ ಶ್ರೀಗಳ ಅಮೃತ ಮಹೋತ್ಸವ ಹಾಗೂ 11ನೇ ನೂತನ ಶ್ರೀಗಳ ಪಟ್ಟಾಧಿಕಾರ ಮತ್ತು ಉಚಿತ ಸಾಮೂಹಿಕ ವಿವಾಹ ಸಮಾರಂಭವನ್ನು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಉಜ್ಜಯಿನಿ ಜಗದ್ಗುರು ಮತ್ತಿತರರು ಚಿತ್ರದಲ್ಲಿದ್ದಾರೆ.

ಹಸೆಮಣೆ ಏರಿದ 18 ಜೋಡಿಗಳಿಗೆ ಜಗದ್ಗುರುಗಳು ಆಶೀರ್ವಾದ ಮಾಡಿದರು. 9-4-2014ರಂದು ಮೂಗನೂರ ಗ್ರಾಮ ಸರ್ವ ಧರ್ಮ ಸಾಮೂಹಿಕ ವಿವಾಹದ ಸಾನ್ನಿಧ್ಯವನ್ನು ಜಗದ್ಗುರುಗಳು ವಹಿಸಿದ್ದರು.

ಜಗದ್ಗುರುಗಳ ಮನಸ್ಸು ಎಂದೋ ಜಾತಿ-ಧರ್ಮ ಎಲ್ಲವನ್ನೂ ಮೀರಿ ಮನುಷ್ಯ ಧರ್ಮ ಒಂದೇ ಎನ್ನುವ ಹಂತಕ್ಕೆ ಈಗಾಗಲೇ ಏರಿರುವುದರಿಂದ ಇಂತಹ ಸರ್ವಧರ್ಮ ಸಾಮೂಹಿಕ ವಿವಾಹದಿಂದ ಸಂತೋಷಗೊಂಡರು.

ಯಾವುದೇ ಜಾತ್ರಾ ಮಹೋತ್ಸವವಿರಲಿ, ಅಡ್ಡಪಲ್ಲಕ್ಕಿ ಮಹೋತ್ಸವವಿರಲಿ, ಸಭೆಯ ಸಾನ್ನಿಧ್ಯ ವಹಿಸಿರಲಿ, ಉದ್ಘಾಟನಾ ಸಮಾರಂಭವೇ ಇರಲಿ, ಸಾಮೂಹಿಕ ವಿವಾಹವೇ ಇರಲಿ-ಎಲ್ಲೇ ಆಗಿರಲಿ ಜಗದ್ಗುರುಗಳ ಆಶೀರ್ವಚನಗಳಲ್ಲಿ ದೇಶದ ಹಿತದ ಬಗ್ಗೆ, ಸಮಾಜದ ಒಳಿತನ್ನು ಕುರಿತು, ಸಂಸ್ಕೃತಿ ಪರಂಪರೆ ಬಗೆಗೆ ಧರ್ಮಾಚರಣೆಯ ಬಗ್ಗೆ ಅತ್ಯಂತ ಅಮೂಲ್ಯವಾದ ಉಪದೇಶ ಮಾಡುತ್ತಾ ಬಂದಿರುವುದನ್ನು ಕಾಣಬಹುದಾಗಿದೆ.

ಸರ್ವ ಧರ್ಮ ಸಾಮೂಹಿಕ ವಿವಾಹ ಹಸೆಮಣೆ ಏರಿದ 18 ಜೋಡಿ

ಉದಯವಾಣಿ 18–11–13



ಬೀಳಗಿ : ತೋಳಮಟ್ಟಿ ಗ್ರಾಮದಲ್ಲಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರುಗಳು ಮಾತನಾಡಿದರು.

9–4–2014 : ಕೊಪ್ಪಳ ಜಿಲ್ಲೆ, ಕುಷ್ಟಗಿ ತಾ॥ ಮೂಗನೂರ ಕ್ಷೇತ್ರದಲ್ಲಿ ಶ್ರೀ ಸದ್ಗುರು ಸಿದ್ಧಾರೂಢ ಸೇವಾ ಸಮಿತಿಯವರು ಕಾಶಿ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಸಿದ್ಧಾರೂಢ ಶಿವಯೋಗಿಗಳ ಜಯಂತ್ಯೋತ್ಸವ ನಿಮಿತ್ತವಾಗಿ ಸರ್ವ ಧರ್ಮ ಸಾಮೂಹಿಕ ವಿವಾಹವನ್ನು ಏರ್ಪಡಿಸಿದ್ದರು. ಮಧ್ಯಾಹ್ನ 12.15ಕ್ಕೆ ಶುಭ ಮುಹೂರ್ತದಲ್ಲಿ ವಿವಾಹ ಜರುಗಿತು.

ಮೂಗನೂರನವರು ತಮ್ಮ ಆಮಂತ್ರಣ ಪತ್ರಿಕೆಯಲ್ಲೇ ಸಮನ್ವಯವನ್ನು ತೋರಿಸಿದ್ದರು.


7–5–2014 : ಬಾದಾಮಿ ತಾಲೂಕಿನ ಹೂಲಗೇರಿ ಗ್ರಾಮದಲ್ಲಿ 5ನೇ ವರ್ಷದ ಶ್ರೀಗುರು ಕಾಡಸಿದ್ಧೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ 1008 ಸುಮಂಗಲೆಯರಿಗೆ ಉಡಿ ತುಂಬುವುದು, ಸಾಮೂಹಿಕ ವಿವಾಹ, ಶಿವದೀಕ್ಷೆ, ಅಯ್ಯಾಚಾರ, ಸಿದ್ಧಾಂತ ಶಿಖಾಮಣಿ ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಅಂದು ಮಧ್ಯಾಹ್ನ 12.59 ಗಂಟೆಗೆ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಸಾಮೂಹಿಕ ವಿವಾಹ ಏರ್ಪಟ್ಟಿತ್ತು.

ಈ ಸಮಾರಂಭದಲ್ಲಿ ಭಾಗವಹಿಸಲು ಅನೇಕ ಗುರು–ವಿರಕ್ತ ಸ್ವಾಮಿಗಳನ್ನು ಆಹ್ವಾನಿಸಿ ಬಹು ದೊಡ್ಡ ಪ್ರಮಾಣದಲ್ಲಿ ವೈಭವದಿಂದ ಕಾರ್ಯಕ್ರಮವನ್ನು ಏರ್ಪಡಿಸಿದ್ದರು.

ವಿರಕ್ತ ಸ್ವಾಮಿಗಳು ಸಿದ್ಧಾಂತ ಶಿಖಾಮಣಿ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿರುವುದು ಜಗದ್ಗುರುಗಳಿಗೆ ಅತಿಯಾದ ಸಂತೋಷ ತಂದಿತು. ಉತ್ತರ ಕರ್ನಾಟಕದ ಕಡೆ ಹೋದೆಡೆಯಲ್ಲೆಲ್ಲ ಗುರು–ವಿರಕ್ತರ ಸಮನ್ವಯ ಕುರಿತಾಗಿ ಹಲವಾರು ವರ್ಷಗಳಿಂದ ಹೇಳುತ್ತಾ ಬಂದಿದ್ದರ ಪರಿಣಾಮವಾಗಿ ಇಂದು ಬಹುದೊಡ್ಡ ಸಂಖ್ಯೆಯಲ್ಲಿ ಎಲ್ಲಾ ಮಠಗಳ ಸ್ವಾಮಿಗಳು ಭಾಗವಹಿಸಿದ್ದರು.

ವಿಚಿತ್ರ ಆದರೂ ಸತ್ಯಘಟನೆಯಲ್ಲಿ–ಕಾಶೀ ಜಗದ್ಗುರುಗಳು

ಸಮಾಧಿಯಿಂದ ಹೊರ ಬಂದ ಶಿವಸಿದ್ಧ ಸೋಮೇಶ್ವರ ಶಿವಾಚಾರ್ಯರಿಂದ ಭಕ್ತರ ದರ್ಶನ



ಬೆಳಗಾವಿ ಸಮೀಪದ ಭೂತರಾಮನಹಟ್ಟಿಯ ಬಳಿಯಲ್ಲಿರುವ ಮುಕ್ತಿ ಮಠದ ಆವರಣದಲ್ಲಿ ಶಿವಸಿದ್ಧ ಸೋಮೇಶ್ವರ ಸ್ವಾಮಿಗಳ ಕಠೋರ ತಪೋನುಷ್ಠಾನಕ್ಕೆ ನಿರ್ಮಿಸಿದ್ದ ಸಮಾಧಿಯನ್ನು ಪಂಚಪೀಠಾಧಿಪತಿಗಳ ಸಮ್ಮುಖದಲ್ಲಿ ಒಡೆಯಲಾಯಿತು.

'ಕಠೋರ ತಪೋನುಷ್ಠಾನ ಅದ್ಭುತ ಪವಾಡ'



ಬೆಳಗಾವಿ ಸಮೀಪದ ಭೂತರಾಮನಹಟ್ಟಿಯ ಬಳಿಯಲ್ಲಿರುವ ಮುಕ್ತಿ ಮಠದ ಆವರಣದಲ್ಲಿ ವಿಶೇಷವಾಗಿ ನಿರ್ಮಿಸಿದ್ದ ಸಮಾಧಿಯಲ್ಲಿ ಕಳೆದ ಒಂದು ವರ್ಷದಿಂದ ಉಪವಾಸ ಕಠೋರ ತಪೋನುಷ್ಠಾನ ಕೈಕೊಂಡಿದ್ದ ಶಿವಸಿದ್ಧ ಸೋಮೇಶ್ವರ ಸ್ವಾಮಿ ಅವರು ಶನಿವಾರ ಸಮಾಧಿಯಿಂದ ಹೊರ ಬಂದು ಭಕ್ತರಿಗೆ ದರ್ಶನ ನೀಡಿದರು.

ಒಂದು ವಿಚಿತ್ರ ಸನ್ನಿವೇಶದಲ್ಲಿ ಕಾಶೀ ಜಗದ್ಗುರುಗಳು ಉಳಿದ ಜಗದ್ಗುರುಗಳಾದ ಶ್ರೀಶೈಲ ಜಗದ್ಗುರುಗಳು, ಉಜ್ಜಯಿನಿ ಜಗದ್ಗುರುಗಳು ಹಾಗೂ ಕೇದಾರ ಜಗದ್ಗುರುಗಳವರ ಜೊತೆಗೂಡಿ ಸಾಕ್ಷಿಯಾಗಿದ್ದರು. ಬೆಳಗಾಂ ನಗರದ ಹೊರವಲಯದ ಭೂತರಾಮನಹಟ್ಟಿಯ ಬಳಿಯಲ್ಲಿರುವ ಮಠದ ಆವರಣದಲ್ಲಿ ವಿಶೇಷವಾಗಿ ನಿರ್ಮಿಸಲಾಗಿದ್ದ ಸಮಾಧಿಯಲ್ಲಿ ಕಳೆದ ಒಂದು ವರ್ಷದಿಂದ ಉಪವಾಸ ಕಠೋರ ತಪೋನುಷ್ಠಾನ ಕೈಗೊಂಡು ಎಲ್ಲರ ಕುತೂಹಲಕ್ಕೆ ಕಾರಣರಾಗಿದ್ದ ಶಿವಸಿದ್ಧ ಸೋಮೇಶ್ವರ ಶಿವಾಚಾರ್ಯರು ಒಂದು ವರ್ಷದನಂತರ ಸಮಾಧಿಯಿಂದ ಹೊರಬಂದರು (ಅಂದರೆ ಜನವರಿ 18–2002 ರಿಂದ 18–1–2003) ಅನ್ನ ನೀರುಗಳಿಲ್ಲದೇ ಶಿವಸಿದ್ಧ ಸೋಮೇಶ್ವರರು ಕೈಗೊಂಡಿದ್ದ ಈ ಅನುಷ್ಠಾನ ಜನರಲ್ಲಿ ಭಾರಿ ಕುತೂಹಲ ಮೂಡಿಸಿತ್ತು.

ಸ್ವಾಮಿಜಿಗಳು ಸಮಾಧಿಯಿಂದ ಹೊರಬರುವುದನ್ನು ನೋಡಲು ಮಹಾರಾಷ್ಟ್ರ, ಗೋವಾ, ಇಲ್ಲಿನ ಇತರೆ ಜಿಲ್ಲೆಗಳಿಂದ ಒಂದು ಲಕ್ಷಕ್ಕೂ ಮಿಕ್ಕಿನ ಜನಸಾಗರ ಹರಿದು ಬಂದಿತ್ತು. ಪಂಚಪೀಠಾಧೀಶ್ವರರ ಸಮಕ್ಷಮದಲ್ಲಿ ಹಾಗೂ ಮಠದ ಪಂಚರು ಅಂದು ಬೆಳಗ್ಗೆ ಉಳಿ ಮತ್ತು ಸುತ್ತಿಗೆಯಿಂದ ಸಮಾಧಿಯ ಗೋಡೆ ಒಡೆದು ಒಳ ಪ್ರವೇಶಿಸಿದರು. ಆಗ ಒಳಗೆ ಸ್ವಾಮಿಗಳು ಅರೆಪ್ರಜ್ಞಾವಸ್ಥೆಯಲ್ಲಿದ್ದ ಕಾರಣ ಕಾಶೀ ಜಗದ್ಗುರುಗಳು ಹಣ್ಣಿನರಸ ಕುಡಿಸಿದರು. ಆದರೆ ರಸ ಒಳಗಿಳಿಯದೇ ಆಚೆಗೆ ಬಂದುಬಿಟ್ಟಿತು. ಜಗದ್ಗುರುಗಳ ಜೊತೆಯಲ್ಲಿ ಅಲ್ಲಿನ ಡಾಕ್ಟರ್ ಪಿ.ವಿ. ಕೋಟಿವಾಲೆ ಅವರು ಸ್ವಾಮಿಗಳನ್ನು ಪರೀಕ್ಷಿಸಿ – ಶೇ. 60ರಷ್ಟು ತೂಕ ಇಳಿದಿರುವುದನ್ನು ತಿಳಿಸಿದರು. ಆದರೆ ಡಾ ಕೋಟಿವಾಲೆಯವರ ವೈದ್ಯಕೀಯ ವೃತ್ತಿಯಲ್ಲೇ ಈ ರೀತಿ ಅನ್ನ ಆಹಾರವಿಲ್ಲದೆ ಒಬ್ಬ ವ್ಯಕ್ತಿ ಜೀವಿಸಿರುವುದನ್ನು ಕಂಡೇ ಇಲ್ಲ, ವಿಸ್ಮಯದ ಸಂಗತಿ, ಇದು ಅಸಾಧ್ಯ ಕೂಡ. ಆದರೆ ಇಂದು ಇದು ಸತ್ಯ–ಸ್ವಾಮೀಜಿ ಬದುಕಿದ್ದಾರೆ. ಅವರ ಹೃದಯ ಬಡಿತ, ನಾಡಿಮಿಡಿತ ಸರಿಯಿದೆ ಎಂದು ಅಚ್ಚರಿಪಟ್ಟರು. ಸ್ವಾಮೀಜಿಗಳಿಗೆ ಹೊರಗಿನ ವಾತಾವರಣಕ್ಕೆ ಹೊಂದಿಕೊಳ್ಳಲು ಒಂದೆರಡು ತಿಂಗಳು ಬೇಕಾಗುವುದೆಂದು ತಿಳಿಸಿದರು. ನೆರೆದಿದ್ದ ಜನರನ್ನು ನಿಯಂತ್ರಿಸಲು ಕೊನೆಗೆ ಪೋಲಿಸರು ಬರಬೇಕಾಯಿತು.

ಧಾರವಾಡದ ಶಿವಗಿರಿಯಲ್ಲಿ ವಾಸವಾಗಿದ್ದ ಬ್ಯಾಹಟ್ಟಿ ಗ್ರಾಮದ ವಿಶ್ವಾರಾಧ್ಯ ಸಿದ್ಧಲಿಂಗಯ್ಯ ಹಿರೇಮಠ (77) ಅವರು ಮೂಲತಃ ಧಾರ್ಮಿಕ ಪ್ರವೃತ್ತಿ ಉಳ್ಳವರಾಗಿದ್ದರು. ಎಸ್.ಎಸ್.ಎಲ್.ಸಿ. ಆದಮೇಲೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕಛೇರಿ ಅಧೀಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು. ಕಳೆದ 55 ವರ್ಷಗಳಿಂದ ತಮ್ಮ 22ನೇ ವಯಸ್ಸಿನಿಂದಲೇ ಬೆಳಗ್ಗೆ ರಾತ್ರಿ ದೇವರಿಗೆ ಪೂಜೆ ಸಲ್ಲಿಸಿ ಕೇವಲ ಪ್ರಸಾದವನ್ನಷ್ಟೇ ಸೇವಿಸುತ್ತಿದ್ದರು. ಅಲ್ಲದೆ ಶ್ರಾವಣಮಾಸದಲ್ಲಿ ತಿಂಗಳ ಪರ್ಯಂತ ಮೌನವ್ರತ ಆಚರಿಸುತ್ತಿದ್ದರು. ಆರೋಗ್ಯವಾಗಿದ್ದ ವಿಶ್ವಾರಾಧ್ಯರು ಒಂದು ದಿನ ತಾವು ಇಚ್ಛಾಮರಣ ಹೊಂದುವುದಾಗಿ ಸಂಕಲ್ಪಿಸಿದರು. ಅವರು ಈ ವಿಷಯವನ್ನು ಮೊದಮೊದಲು ಯಾರ ಗಮನಕ್ಕೂ ತಂದಿರಲಿಲ್ಲ. ಐದು ದಿನಗಳ ಮೊದಲು ಅಂದರೆ ಡಿಸೆಂಬರ್ 20ರಂದು ತಾವು ಇಚ್ಛಾಮರಣ ಹೊಂದುವ ಸಂಕಲ್ಪವನ್ನು ಕುಟುಂಬದ ಸದಸ್ಯರಿಗೆ ತಿಳಿಸಿದರು. ಅವರ್‍ಯಾರೂ ಅಷ್ಟೇನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಸಾವನ್ನು ತಮ್ಮ ಸನಿಹವೇ ಇಟ್ಟುಕೊಂಡು ಕರೆದಾಗ ಬರುವಂತೆ ಆಜ್ಞಾಪಿಸುವಂತೆ – 24ನೇ ತಾರೀಖಿನಂದು–ವಿಶ್ವಾರಾಧ್ಯರು ಇವತ್ತು ಯಾವ ದಿನ ಎಂದು ಪ್ರಶ್ನಿಸಿದರು. ಅಲ್ಲದೆ ಅಂದು ಬೆಳಗ್ಗೆ ಸರಿಯಾಗಿ 10:30ರ ಸಮಯ. ಇನ್ನು ಅರ್ಧತಾಸಿನಲ್ಲಿ ತಮ್ಮ ಪ್ರಾಣ ಹೋಗುತ್ತದೆ. ಕೈಕಾಲು ಮಡಚಬೇಕು ಹಾಗೂ ಬಾಯಿಗೆ ನೀರು ಬಿಡುವಂತೆ ಕುಟುಂಬದ ಸದಸ್ಯರನ್ನು ಕೋರಿದ್ದರು. ಹಠ ಸ್ವಭಾವದವರಾಗಿದ್ದ ವಿಶ್ವಾರಾಧ್ಯರು ಮುಂಜಾನೆ ಸ್ನಾನ ಮಾಡಿ ಆಹಾರ ಸೇವಿಸಿದ್ದರು. 10 ಗಂಟೆಗೆ ಹೊಟ್ಟೆಯಲ್ಲಿ ನೋವು ಕಾಣಿಸುತ್ತಿದೆ ಎಂದಷ್ಟೇ ಹೇಳಿದ ಅವರು ಒಂದು ಗಂಟೆ ಬಳಿಕ ಇಹಲೋಕವನ್ನು ತ್ಯಜಿಸಿದ್ದರು.

ಸಂಯುಕ್ತ ಕರ್ನಾಟಕ, 24–12–2006



ಇಚ್ಛಾಮರಣ ಹೊಂದಿದ ಹುಬ್ಬಳ್ಳಿ ತಾಲೂಕ ಬ್ಯಾಹಟ್ಟಿ ಗ್ರಾಮದ ವಿಶ್ವಾರಾಧ್ಯ ಹಿರೇಮಠ ಅವರ ಅಂತ್ಯ ಸಂಸ್ಕಾರದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಭಾಗವಹಿಸಿ ಅಂತಿಮ ವಿಧಿವಿಧಾನ ನೆರವೇರಿಸಿದರು.

ವಿಶ್ವಾರಾಧ್ಯರಿಗೆ ಕಾಶಿಗೆ ಹೋಗಿ ವಿಶ್ವನಾಥನ ದರ್ಶನ ಮಾಡುವ ಆಸೆ ಬಹಳವಾಗಿತ್ತು. ಆದರೆ ಅದು ಸಾಧ್ಯವಾಗುವುದಿಲ್ಲ ಎಂಬುದನ್ನು ಅರಿತ ಅವರು ಬ್ಯಾಹಟ್ಟಿ ಮಠದಲ್ಲಿ ಕಾಶೀ ವಿಶ್ವನಾಥನ ಮೂರ್ತಿಯನ್ನು ಸ್ಥಾಪಿಸಿದ್ದರು. ಆ ಸಮಯದಲ್ಲಿ ತಾವು ಜೀವಂತಸಮಾಧಿ ಹೊಂದಬೇಕೆಂಬ ಇಚ್ಛೆಯನ್ನು ಕಾಶೀ ಜಗದ್ಗುರುಗಳವರ ಮುಂದೆ ವ್ಯಕ್ತಪಡಿಸಿದಾಗ ಜಗದ್ಗುರುಗಳು ಇದಕ್ಕೆ ಸಮ್ಮತಿ ನೀಡದೆ ಅವರ ನಿರ್ಧಾರ ಬದಲಾಯಿಸುವಂತೆ ಹೇಳಿದ್ದರು. ಈ ನಿರ್ಧಾರವನ್ನು ಜಗದ್ಗುರುಗಳ ಆದೇಶದಂತೆ ತೊರೆದು ಇಚ್ಛಾಮರಣ ಹೊಂದುವ ಸಂಕಲ್ಪ ಮಾಡಿದ್ದರು. ಅವರ ಇಚ್ಛೆಯಂತೆಯೇ ಲಿಂಗೈಕ್ಯರಾದ ವಿಶ್ವಾರಾಧ್ಯರ ಅಂತಿಮ ಕ್ರಿಯೆಯನ್ನು ಅವರು ಇಷ್ಟಪಟ್ಟ ರೀತಿಯಲ್ಲೇ ಧಾರ್ಮಿಕ ವಿಧಿ ವಿಧಾನ ಹಾಗೂ ಮಂತ್ರ ಘೋಷದೊಂದಿಗೆ ಬ್ಯಾಹಟ್ಟಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದ ಕಾಶೀ ಜಗದ್ಗುರುಗಳು ಇಂತಹ ಯೋಗ ಯಾರಿಗೂ ಸಿಗುವುದಿಲ್ಲ. ಅದಕ್ಕೂ ದೇವರ ಅನುಗ್ರಹ ಬೇಕು. ವಿಶ್ವಾರಾಧ್ಯರ ಅಗಲಿಕೆಯಿಂದ ಸಮಾಜಕ್ಕೆ ತುಂಬಲಾಗದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ನೀಡಲೆಂದು ಹಾರೈಸಿದರು. ಅವರ ಅಂತ್ಯಕ್ರಿಯೆಯಲ್ಲಿ ಬ್ಯಾಹಟ್ಟಿಯಲ್ಲಿ ಎಲ್ಲೆಲ್ಲೂ ದುಃಖ ತುಂಬಿದ ವಾತಾವರಣ. ಜನಸಾಗರವೇ ಹರಿದು ಬಂದಿತ್ತು. ಗ್ರಾಮದ ಚೇತನ ಕಣ್ಮರೆಯಾಯಿತಲ್ಲ ಎಂದು ಕಣ್ಣೀರು ಸುರಿಸಿದ್ದರು. ಕಂದಾಯ ಸಚಿವರಾಗಿದ್ದ ಜಗದೀಶ ಶೆಟ್ಟರ್, ಮೋಹನ ಲಿಂಬಿಕಾಯಿ – ಅನೇಕರು ಈ ಸಂದರ್ಭದಲ್ಲಿ ಸೇರಿದ್ದರು.

ಸಂಗೀತ ಹಾಗೂ ಕಾಶೀ ಜಗದ್ಗುರುಗಳು


ಕಾಶಿಯಲ್ಲಿನ ಜುಲೈ ಏಳನೇ ತಾರೀಖಿನಿಂದ ಆರಂಭಗೊಂಡಿರುವ ಕಾಶೀ ಜಗದ್ಗುರುಗಳವರ ಪೀಠಾರೋಹಣದ ರಜತ ಮಹೋತ್ಸವದ ಸಲುವಾಗಿ ಏರ್ಪಡಿಸಿರುವ ದ್ವಾದಶಕೋಟಿ ಮಹಾಮಂತ್ರ ಜಪಯಜ್ಞವೂ ಒಂದು ಪ್ರಮುಖ ಧಾರ್ಮಿಕ ಕಾರ್ಯ. ಈ 12ಕೋಟಿ ಮಹಾಮಂತ್ರ ಜಪಯಜ್ಞ ವೇದಿಕೆಯಲ್ಲಿ ಸಂಜೆ ನಡೆದ ಧರ್ಮ ಜಾಗೃತಿ ಮಹಾಸಭೆಯಲ್ಲಿ ಧಾರವಾಡದ ಸುಪ್ರಸಿದ್ಧ ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶ್ರೀ ಪ್ರಸನ್ನ ಗುಡಿ ಅವರು ತಮ್ಮ ಸುಶ್ರಾವ್ಯ ಕಂಠದಿಂದ ನೆರೆದಿದ್ದ ಸಭಿಕರನ್ನು ಮಂತ್ರಮುಗ್ಧಗೊಳಿಸಿದರು. ಈ ಸಭೆಯಲ್ಲಿ ಕಾಶಿ ಕರ್ನಾಟಕ ಸಂಘದ ಅಧ್ಯಕ್ಷರೂ ಪದಾಧಿಕಾರಿಗಳೂ, ಕಾಶೀ ವೀರಶೈವ ವಿದ್ವತ್ ಸಂಘದ ಎಲ್ಲಾ ಪದಾಧಿಕಾರಿಗಳೂ ಉಪಸ್ಥಿತರಿದ್ದರು.

ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಸಂಗೀತದಲ್ಲಿ ಅಭಿರುಚಿಯುಳ್ಳವರು. ಈ ಕಾರಣದಿಂದಲೇ 1999ರಿಂದಲೂ ಗದಗ್‌ನಲ್ಲಿ ಇಂದಿಗೂ ನಡೆಸಲಾಗುತ್ತಿರುವ ಪಂ. ಪಂಚಾಕ್ಷರ ಗವಾಯಿಗಳವರ ಪುಣ್ಯ ಸ್ಮರಣೋತ್ಸವ ಹಾಗೂ ಜಾತ್ರಾ ಮಹೋತ್ಸವವನ್ನು ಉದ್ಘಾಟಿಸುತ್ತಾ ಬಂದಿದ್ದಾರೆ. ಈ ವೀರಶೈವರ ಪುಣ್ಯಾಶ್ರಮದಲ್ಲಿ ಸಂಗೀತ, ಸಾಹಿತ್ಯ, ಸಾಂಸ್ಕೃತಿಕ, ಚಟುವಟಿಕೆಗಳ ಕೇಂದ್ರವಾಗಿಸಿದ್ದಾರೆ. ಪಂ. ಪಂಚಾಕ್ಷರ ಗವಾಯಿಗಳ ಮತ್ತು ಪಂ. ಡಾ. ಪುಟ್ಟರಾಜ ಕವಿ ಗವಾಯಿಗಳ ಬದುಕು ಸಾಧನೆಗಳ ಬಗ್ಗೆ ಬಹುವಾಗಿ ಶ್ಲಾಘಿಸಿ–ಪುಟ್ಟರಾಜ ಗವಾಯಿಗಳನ್ನು ನಡೆದಾಡುವ ದೇವರೆಂದು ಜಗದ್ಗುರುಗಳು ಬಣ್ಣಿಸಿದ್ದರು. ಇವರು ಸರ್ವರನ್ನು ಸಮಷ್ಟಿಭಾವನೆಯಿಂದ ಸಮಾನವಾಗಿ ನೋಡುತ್ತಾ ಬಂದಿದ್ದಾರೆ. ಗವಾಯಿಗಳು ಸ್ವತಃ ದೃಷ್ಟಿವಿಕಲ ಚೇತನರಾಗಿದ್ದರೂ ತಮ್ಮ ಮೂರನೇ ನೇತ್ರದ ಮೂಲಕ ಸರ್ವರನ್ನು ಸಮಾನವಾಗಿ ಕಾಣುತ್ತಾ ಅಂಧ, ಅನಾಥ ಮಕ್ಕಳಿಗೆ ವಿದ್ಯಾದಾನ ಮಾಡುವ ಮೂಲಕ ಜಗತ್ತಿನ ಕೀರ್ತಿಗೆ ಪಾತ್ರರಾಗಿದ್ದಾರೆ. ಸುವರ್ಣ ಹಾಗೂ ಸುಗಂಧ ಎರಡು ಒಟ್ಟಿಗೆ ಸೇರಿದರೆ ಸಿಗುವ ಗೌರವ ಪುಟ್ಟರಾಜರಿಗೆ ಸಲ್ಲಬೇಕೆಂದು ಜಗದ್ಗುರುಗಳು 20–6–2008ರಲ್ಲಿ ನಡೆದ 64ನೇ ಪುಣ್ಯ ಸ್ಮರಣೋತ್ಸವದ ಸಾನ್ನಿಧ್ಯವಹಿಸಿ ಹೇಳಿದ್ದರು.

ಪುಟ್ಟರಾಜರು ವಿಶ್ವದಲ್ಲಿಯೇ ವಿಶೇಷ ವ್ಯಕ್ತಿ

ಪಂ. ಪಂಚಾಕ್ಷರ ಗವಾಯಿಗಳ 64ನೇ ಪುಣ್ಯಸ್ಮರಣೋತ್ಸವ, ಜಾತ್ರಾಮಹೋತ್ಸವಕ್ಕೆ ಚಾಲನೆ

ವಿಜಯ ಕರ್ನಾಟಕ, 21–6–2008



ಗದಗನಲ್ಲಿ ಪಂ. ಪಂಚಾಕ್ಷರ ಗವಾಯಿಗಳ 64ನೇ ಪುಣ್ಯಸ್ಮರಣೋತ್ಸವ ಹಾಗೂ ಜಾತ್ರಾಮಹೋತ್ಸವ ಶುಕ್ರವಾರ ಕಾಶೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಚಾಲನೆ ನೀಡಿದರು.

'ವಿದ್ಯಾದಾನಿ ಪುಟ್ಟರಾಜ ಗವಾಯಿ ನಡೆದಾಡುವ ದೇವರು'

–ಕಾಶೀ ಚಂದ್ರಶೇಖರ ಶಿವಾಚಾರ್ಯ ಶ್ರೀಗಳ ಬಣ್ಣನೆ

ಕನ್ನಡ ಪ್ರಭ, 20–6–2008



'ಪಂಚಾಕ್ಷರಿ ಗವಾಯಿಗಳು ಸಂಗೀತಲೋಕದ ದಿಗ್ಗಜ'

ಸಂಯುಕ್ತ ಕರ್ನಾಟಕ, 4–7–2008



ಅಮರೇಶ್ವರ ಸೇವಾ ಬಳಗ ಹಮ್ಮಿಕೊಂಡಿದ್ದ ಪಂಚಾಕ್ಷರ ಗವಾಯಿಗಳ 64ನೇ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಸೋನು ಹನಮಂತರಾವ್ ಕೊತ್ವಾಲ ಇವಳಿಗೆ ಪ್ರಶಸ್ತಿ ನೀಡಿ ಗೌರವಿಸಿದರು.



96ರ ಇಳಿ ವಯಸ್ಸಿನ ಪುಟ್ಟರಾಜ ಗವಾಯಿಗಳ ವ್ಯಕ್ತಿತ್ವಕ್ಕೆ ಜಗದ್ಗುರುಗಳು ಬಹುವಾಗಿ ಮೆಚ್ಚಿದ್ದರು. ಆಶ್ರಮದ ಶಿಷ್ಯರಿಂದ ಬರುವ ಕಾಣಿಕೆಯಿಂದ ಅಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ವಿಶ್ವದಲ್ಲೇ ವಿಶೇಷ ವ್ಯಕ್ತಿ ಎನಿಸಿದ್ದಾರೆಂದು ತಿಳಿಸಿದರು. ಹಾಗೆಯೇ ಜಗದ್ಗುರುಗಳು ಪುಟ್ಟರಾಜ ಗವಾಯಿಗಳಿಗೆ ಇದುವರೆವಿಗೂ ನಡೆದಿರುವ ತುಲಾಭಾರ ಕೀರ್ತಿಯನ್ನು ಬೇರೆ ಯಾರೂ ಪಡೆಯಲು ಸಾಧ್ಯವಿಲ್ಲ. ಈ ಇಳಿವಯಸ್ಸಿನಲ್ಲೂ ಅಗಾಧ ಸ್ಮರಣಶಕ್ತಿ ಪಡೆದಿರುವ ವ್ಯಕ್ತಿಗಳು ಸಿಗುವುದು ತೀರ ದುರ್ಲಭ. ಇವರು ನೆಲೆಸಿರುವ ಭೂಮಿ ಕೈಲಾಸವಾಗಿದೆ ಎಂದು ಬಣ್ಣಿಸಿದರು.

ಅಂದು ಪುಟ್ಟರಾಜ ಗವಾಯಿಗಳು ಮಾತನಾಡುತ್ತಾ ಆಶ್ರಮಕ್ಕೆ ಆಗಮಿಸಿರುವ ಕಾಶೀ ಜಗದ್ಗುರುಗಳು ಶ್ರೇಷ್ಠರು, ಇವರು ನಮ್ಮ ಆಶ್ರಮಕ್ಕೆ ಆಗಮಿಸಿದ್ದು ಬಂಗಾರದ ಕಳಸವಿಟ್ಟಂತಾಗಿದೆ ಎಂದು ಹೇಳಿ ಜಗದ್ಗುರುಗಳಿಗೆ ಗೌರವ ವ್ಯಕ್ತಪಡಿಸಿದರು.

ನಮ್ಮ ಸಂಸ್ಕೃತಿಯಲ್ಲಿ ಎಲ್ಲಾ ದಾನಗಳಿಗಿಂತ ವಿದ್ಯಾದಾನ ಶ್ರೇಷ್ಠವಾದುದು. ತಮ್ಮ ಸಂಗೀತ ವಿದ್ಯೆಯನ್ನು ಅಂಧಮಕ್ಕಳಿಗೆ ಧಾರೆ ಎರೆಯುತ್ತಿರುವುದರಿಂದ ಪುಟ್ಟರಾಜ ಗವಾಯಿಗಳು ನಡೆದಾಡುವ ದೇವರೆನ್ನುವುದರಲ್ಲಿ ಎರಡು ಮಾತಿಲ್ಲ–ಎನ್ನುವುದು ಜಗದ್ಗುರುಗಳ ಅಭಿಪ್ರಾಯ. ಸದಾ ಜಗದ್ಗುರುಗಳು ಹೇಳುವುದೇನೆಂದರೆ– ಮುಪ್ಪು ಆವರಿಸಿದಾಗ ದೇಹ ಸೌಂದರ್ಯ ದೂರವಾಗುವುದು. ಆದರೆ ಕಲಿತಿರುವ ವಿದ್ಯೆಯ ಸೌಂದರ್ಯ ದಿನೇ ದಿನೇ ಹೆಚ್ಚುವುದಲ್ಲದೆ, ಬೇರೆಯವರಿಗೆ ಕೊಟ್ಟಷ್ಟೂ ಅದು ಹೆಚ್ಚುತ್ತದೆ ಎಂದು. ಈ ಮಾತುಗಳನ್ನು ಪುಟ್ಟರಾಜ ಗವಾಯಿಗಳು ಮಾಡಿ ತೋರಿಸಿದ್ದಾರೆ.

ಇಳಕಲ್, 03–ಸಂಗೀತ ಲೋಕವನ್ನು ಮತ್ತಷ್ಟು ಶ್ರೀಮಂತವಾಗಿಸಿ ನಾಡಿಗೆ ನೂರಾರು ಕಲಾವಿದರ ಕಾಣಿಕೆ ನೀಡಿರುವ ಪಂಡಿತ ಪಂಚಾಕ್ಷರ ಗವಾಯಿಗಳು ಸಂಗೀತ ದಿಗ್ಗಜರಾಗಿದ್ದಾರೆ. ಅವರಿಂದ ನಾಡು ವಿಶ್ವದಲ್ಲಿಯೇ ಹೆಸರುಮಾಡಿದೆ ಎಂದು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಧರ್ಮಸಭೆ ಹಾಗೂ ಕೀರ್ತನ ಸಮ್ಮೇಳನ

ದಿವ್ಯ ಸನ್ನಿಧಾನ : ಶ್ರೀಮದ್ ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು

ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳವರು, ಜಂಗಮವಾಡಿಮಠ

18–9–2010ರಂದು ಪುಟ್ಟರಾಜಗವಾಯಿಗಳು ತಮ್ಮ ಗುರುಗಳಾದ ಪಂಚಾಕ್ಷರಿಗವಾಯಿಗಳ 66ನೇ ಸ್ವರ ಸಮಾರಾಧನೆ ನಡೆಸಿದ ನಂತರ ಮುಂದಿನ ಮೂರು ತಿಂಗಳಲ್ಲೇ ಗವಾಯಿಗಳ ಅನಾರೋಗ್ಯಕ್ಕೆ ತುತ್ತಾದರು. ಅವರನ್ನು ಭೇಟಿಮಾಡಲು ಕಾಶೀ ಜಗದ್ಗುರುಗಳು ಶ್ರೀಶೈಲ ಜಗದ್ಗುರುಗಳ ಜೊತೆಯಾಗಿ ವೀರೇಶ್ವರ ಪುಣ್ಯಾಶ್ರಮಕ್ಕೆ ಹೋಗಿ ಪಂ. ಪುಟ್ಟರಾಜರ ಆರೋಗ್ಯ ವಿಚಾರಿಸಿದರು. ಗವಾಯಿಗಳನ್ನು ಮಾತನಾಡಿಸಿಕೊಂಡು ಹೊರ ಬಂದಾಗ ಪತ್ರಿಕಾ ವರದಿಗಾರರು ಜಗದ್ಗುರುಗಳನ್ನು ಗವಾಯಿಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಹೇಳಿರೆಂದು ಕೇಳಿದರು. ಜಗದ್ಗುರುಗಳು ಈಗಾಗಲೇ ಅನೇಕ ಸಂದರ್ಭಗಳಲ್ಲಿ ಪುಟ್ಟರಾಜರ ಬಗ್ಗೆ ತಮಗಿದ್ದ ಗೌರವ ಭಾವನೆಗಳನ್ನು ವ್ಯಕ್ತಪಡಿಸಿದ್ದರು. ಸಂಗೀತ ಸಾಮ್ರಾಟರಾಗಿರುವ ಪುಟ್ಟರಾಜ ಗವಾಯಿಗಳು ನಾಡಿನ ಪುಣ್ಯ ಪುರುಷರಲ್ಲಿ ಒಬ್ಬರೆಂದು ಬಣ್ಣಿಸಿದರು. ತಾವೇ ಅಂಧರಾಗಿದ್ದರೂ – ಅಂಧ ಅನಾಥರ ದಾರಿದೀಪವಾಗಿ, ಶಿವಯೋಗಿ ಸಿದ್ಧ ಪುರುಷರಾಗಿದ್ದಾರೆ. ಇವರು ಅನಾರೋಗ್ಯ ಪೀಡಿತರಾಗಿದ್ದಾರೆಂಬ ವಿಷಯ ಕೇಳಿ ವಿಚಲಿತರಾಗಿದ್ದೆ–ಎಂದು ಜಗದ್ಗುರುಗಳು ತಿಳಿಸಿದರು. ಸಂಗೀತ ಮಾನವನ ಮನಕ್ಕೆ ಯಾವ ರೀತಿಯ ಸಂಸ್ಕಾರ ನೀಡುತ್ತದೆ ಎಂದು

ಬಲ್ಲವರಾಗಿದ್ದ ಜಗದ್ಗುರುಗಳಿಗೆ ಪುಟ್ಟರಾಜ ಗವಾಯಿಗಳು ಬೇಗ ಗುಣಮುಖರಾಗರೆಂದು ಹಾರೈಸಿದರು. ಆದರೆ ದೈವೇಚ್ಛೆ ಬೇರೆಯೇ ಆಗಿತ್ತು. ಮುಂದಿನ ಕೆಲವು ದಿನಗಳಲ್ಲೇ ಪಂ.ಪುಟ್ಟರಾಜ ಕವಿ ಗವಾಯಿಗಳು ಲಿಂಗೈಕ್ಯರಾದರು. ಜಗದ್ಗುರುಗಳು ಅಂತ್ಯಕ್ರಿಯೆಯಲ್ಲಿ ಸಾನ್ನಿಧ್ಯವಹಿಸಿದ್ದರು.

ಮುಂದೆ **16–6–2011**ರಂದು 67ನೇ ಲಿಂ. ಪಂ. ಪಂಚಾಕ್ಷರಿ ಗವಾಯಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಧರ್ಮಸಭೆ ಹಾಗೂ ಕೀರ್ತನ ಸಮ್ಮೇಳನ ಉದ್ಘಾಟಿಸಿದ ಜಗದ್ಗುರುಗಳು ಸಂಗೀತ–ಸಾಹಿತ್ಯ–ಕಲೆ ಆರಾಧನೆಯೊಂದಿಗೆ ಸಾವಿರಾರು ಅಂಧ–ಅನಾಥ ಮಕ್ಕಳಿಗೆ ಉಚಿತ ವಸತಿ–ಶಿಕ್ಷಣ, ಸಂಗೀತ ವಿದ್ಯೆಯಿಂದ ಬಾಳಿಗೆ ಬೆಳಕು ಕರುಣಿಸಿದ ಲಿಂ. ಪಂ. ಪಂಚಾಕ್ಷರಿ ಗವಾಯಿಗಳು ಮತ್ತು ಅವರ ಶಿಷ್ಯರಾಗಿದ್ದ ಲಿಂ. ಡಾ. ಪಂ. ಪುಟ್ಟರಾಜ ಗವಾಯಿಗಳು ಇಂದು ನಮ್ಮೊಂದಿಗಿಲ್ಲವಾಗಿದ್ದರೂ, ಭಕ್ತರ, ಶಿಷ್ಯರ ಮನೆ ಮನಗಳಲ್ಲಿ ಚಿರಸ್ಥಾಯಿಯಾಗಿದ್ದಾರೆಂದು ಅವರಿಬ್ಬರನ್ನು ನೆನೆಯುತ್ತಾ ಸಭೆಗೆ ತಿಳಿಸಿದರು. ಒಮ್ಮೆ ಪುಟ್ಟರಾಜ ಗವಾಯಿಗಳು ಕಾಶಿಗೆ ಬಂದು ಸಂಗೀತ ಸೇವೆ ಸಲ್ಲಿಸಿದ್ದನ್ನು ಇಂದು ಸ್ಮರಿಸಿಕೊಂಡರು. ಪುಟ್ಟರಾಜ ಗವಾಯಿಗಳ ಜೀವನ ದರ್ಶನ ಗ್ರಂಥವನ್ನು ಈ ಸಂದರ್ಭದಲ್ಲಿ ಜಗದ್ಗುರುಗಳು ಬಿಡುಗಡೆಗೊಳಿಸಿದರು. ಅಂದು ಸಂಜೆ ಸ್ವರ ಸಮಾರಾಧನೆ ಅಂಗವಾಗಿ ವೀರೇಶ್ವರ ಪುಣ್ಯಾಶ್ರಮದ ಮಕ್ಕಳು ಸಂಗೀತ ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿ ಅಂಧ ಮಕ್ಕಳಿಗೆ ಪ್ರೋತ್ಸಾಹ ನೀಡಿದ್ದರು.

ಉಭಯ ಗವಾಯಿಗಳು ಭಕ್ತರಲ್ಲಿ ಚಿರಸ್ಥಾಯಿ: ಕಾಶೀ ಶ್ರೀಗಳು



ಗದಗಿನ ಪಂಡಿತ ಪಂಚಾಕ್ಷರಿ ಗವಾಯಿಗಳ 67ನೇ ಸ್ವರ ಸಮಾರಾಧನೆ ಹಾಗೂ ಜಾತ್ರಾ ಮಹೋತ್ಸವದಂಗವಾಗಿ ನಡೆದ ಧರ್ಮಸಭೆ ಹಾಗೂ ಕೀರ್ತನ ಸಮ್ಮೇಳನವನ್ನು ಕಾಶೀಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಗುರುವಾರ ರಾತ್ರಿ ಉದ್ಘಾಟಿಸಿದರು. ಮುಕ್ತಿಮಂದಿರದ ವಿಮಲರೇಣುಕ ಮುಕ್ತಿಮನಿ ಶಿವಾಚಾರ್ಯರು, ಅಡ್ನೂರ ದಾಸೋಹಮಠದ ಪಂಚಾಕ್ಷರ ಶಿವಾಚಾರ್ಯರು, ಚಳಗೇರಿ ಹಿರೇಮಠದ ವಿರುಪಾಕ್ಷಲಿಂಗ ಶಿವಾಚಾರ್ಯರು, ತೋರಗಲ್ಲ ಗಚ್ಚಿನಮಠ ಚನ್ನಮಲ್ಲ ಶಿವಾಚಾರ್ಯರು ಪಾಲ್ಗೊಂಡಿದ್ದರು.

ಮುಂದೆ ಇಳಕಲ್‌ನಲ್ಲಿ 15–6–2012 ರಂದು ಪಂಚಾಕ್ಷರಿಗವಾಯಿಗಳ 68ನೇ ಪುಣ್ಯಾರಾಧನೆ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು ಸಂಗೀತ ಕುರಿತು ಹೇಳಿದ ಮಾತುಗಳನ್ನು ಸಂಗೀತ ಪ್ರೇಮಿಗಳು ಇಂದಿಗೂ ಮರೆತಿಲ್ಲ. ಜಗದ್ಗುರುಗಳು ಹೇಳಿದ್ದು ಸಂಗೀತಕ್ಕೆ ಎಲ್ಲರ ಮನ ಸೆಳೆಯುವ ಅಗಾಧವಾದ ಶಕ್ತಿಯಿದೆ. ಸಂಗೀತದಲ್ಲಿ ತನ್ಮಯತೆ ಇದ್ದರೆ ಎಂತಹ ಕಷ್ಟಗಳನ್ನಾದರೂ ಮರೆಯಬಹುದು. ಇಂದಿನ ಯುವ ಜನಾಂಗಕ್ಕೆ ಸಂಗೀತ ಶಿಕ್ಷಣದ ಅವಶ್ಯಕತೆ ಇರುವುದನ್ನು ತಾಯಿ ತಂದೆಗಳು ತಿಳಿದು ಶಿಕ್ಷಣ ಕೊಡಿಸಿ ಉತ್ತಮ ಸಂಸ್ಕಾರವಂತ ಮಕ್ಕಳನ್ನಾಗಿ ಬೆಳೆಸಿ ಎಂದು ಉಪದೇಶ ನೀಡಿದ್ದರು. ಧಾರ್ಮಿಕ ಸಭೆಗಳಲ್ಲಿ ಸಂಗೀತ ವಿದ್ವಾಂಸರನ್ನು ಕರೆಸಿ ಸನ್ಮಾನಿಸಿ ಪ್ರೋತ್ಸಾಹ ನೀಡಬೇಕೆಂದರು.

ಜನವರಿಯಲ್ಲಿ ಕಾಶೀ ಜಗದ್ಗುರುಗಳು ಕಾಶೀ ಪೀಠದ ಲಾವಣಿಯನ್ನು ಕ್ಯಾಸೆಟ್ ಮಾಡಿಸುವ ಸಲುವಾಗಿ ಬೆಂಗಳೂರಿಗೆ ಬಂದಿದ್ದಾಗ ಅಂದು ಖ್ಯಾತರಾಗಿದ್ದ ಜಿ.ವಿ. ಅತ್ರಿಯವರನ್ನು ಕರೆತಂದು ಜಗದ್ಗುರುಗಳಿಗೆ ಪರಿಚಯಿಸಲಾಗಿತ್ತು. ಜಗದ್ಗುರುಗಳು ಜಿ.ವಿ. ಅತ್ರಿಗೆ ಸಂಸ್ಕೃತ ಶ್ಲೋಕಗಳನ್ನು ಓದಲು ಹೇಳಿ ಅವರ ಉಚ್ಚಾರಣೆಯನ್ನು ಪರೀಕ್ಷಿಸಿ ಅವರಿಂದ ಕ್ಯಾಸೆಟ್ ಮಾಡಿಸಲು ಒಪ್ಪಿದರು. ರೆಕಾರ್ಡಿಂಗ್‌ನಂದು ಜಿ.ವಿ.



ಗದಗ್‌ನಲ್ಲಿ ಆಷಾಢಮಾಸದ ಕಾರ್ಯಕ್ರಮದಲ್ಲಿ ಪುಟ್ಟರಾಜಗವಾಯಿಗಳನ್ನು ಜಗದ್ಗುರುಗಳು ಆಶೀರ್ವದಿಸಿ ಸನ್ಮಾನಿಸಿದರು.



ಗಾನಯೋಗಿ ಪುಟ್ಟರಾಜ ಗವಾಯಿಗಳ ಸಂಗೀತವನ್ನು ಆಲಿಸುತ್ತಿರುವ ಜಗದ್ಗುರುಗಳು

ಅತ್ರಿಯವರು ಜಗದ್ಗುರುಗಳನ್ನು ರೆಕಾರ್ಡಿಂಗ್ ಸ್ಟುಡಿಯೋಗೆ ಕರೆದುಕೊಂಡು ಹೋಗಿ ರೆಕಾರ್ಡಿಂಗ್ ರೂಂ– ಎಲ್ಲವನ್ನು ತೋರಿಸಿದರು. ನಂತರ ಲಾವಣಿ ಮುಗಿದ ಮೇಲೆ ಕೊನೆಯಲ್ಲಿ ಕಾಶೀಪೀಠದ ಮಂಗಳಗೀತೆಯನ್ನು ಹಾಡಬೇಕೆಂದರು ಅತ್ರಿಯ ಮುಂದೆ ಜಗದ್ಗುರುಗಳೇ 'ಶ್ರೀ ವಿಶ್ವರಾಧ್ಯಾಯ ಮಂಗಳಂ' ಗೀತೆಯನ್ನು ಶ್ರುತಿ ಬದ್ಧವಾಗಿ ಸ್ವತಃ ಹಾಡಿ ಇದೇ ರಾಗದಲ್ಲಿರಬೇಕೆಂದು – ಹೇಳಿಕೊಟ್ಟರು. ಜಿ.ವಿ. ಅತ್ರಿಯವರು ಜಗದ್ಗುರುಗಳಿಗಿದ್ದ ಸಂಗೀತ ಜ್ಞಾನದ ಬಗ್ಗೆ ಅಚ್ಚರಿಪಟ್ಟಿದ್ದರು. ಜಿ.ವಿ. ಅತ್ರಿ, ಬಿ.ಆರ್. ಛಾಯಾ, ಯಶವಂತ ಹಳಿಬಂಡಿ ಮೂವರೂ ಸೇರಿ ಕಾಶೀ ಪೀಠದ ಲಾವಣಿಯನ್ನು ಮಂಗಳಗೀತೆಯನ್ನು ಬಹಳ ಮಧುರವಾದ ಸ್ವರಸಂಯೋಜನೆ ಮಾಡಿ ರೆಕಾರ್ಡ್ ಮಾಡಿಕೊಟ್ಟರು. ಕ್ಯಾಸೆಟ್ ರೂಪದಲ್ಲಿ ಲಕ್ಷಕ್ಕೂ ಮಿಕ್ಕಿ ಕ್ಯಾಸೆಟ್‌ಗಳೂ, ಇಂದು ಸಿ.ಡಿ ರೂಪದಲ್ಲಿ ಪರಿವರ್ತನೆಗೊಂಡು ಲಕ್ಷಾಂತರ ಭಕ್ತಾದಿಗಳ ಮನೆಗಳನ್ನು ಮುಟ್ಟಿದೆ. ಕಾಶೀ ಜಗದ್ಗುರುಗಳವರ ಯಾವುದೇ ಸಮಾರಂಭವಿರಲಿ ಕೊನೆಯಲ್ಲಿ ಇದೇ ಮಂಗಳ ಗೀತೆಯನ್ನು ಹಾಡಲಾಗುತ್ತದೆ. ಹೀಗೆ ಜಗದ್ಗುರುಗಳು ಸಂಗೀತವನ್ನು ಬಲ್ಲವರಷ್ಟೇ ಅಲ್ಲ, ಅದನ್ನು ಆಸ್ವಾದಿಸುವವರೂ ಆಗಿದ್ದರಿಂದಲೇ ಇಂದು ಕಾಶೀಪೀಠದ ಮಂಗಳಗೀತೆ ಬಹು ಜನಪ್ರಿಯವಾಗಲು ಸಾಧ್ಯವಾಯಿತು.



ಕಾಶೀಪೀಠದಲ್ಲಿ ಕಾಶಿ ಕರ್ನಾಟಕ ಸಂಘದವರು ಏರ್ಪಡಿಸಿದ್ದ ಸಂಗೀತ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು ಸಂಗೀತ ಕೇಳುತ್ತಿರುವುದು.

ಕಾಶೀಪೀಠದಲ್ಲಿ ನಡೆಯುತ್ತಿರುವ 12ಕೋಟಿ ಜಪಯಜ್ಞ ವೇದಿಕೆಯಲ್ಲಿ ಧಾರವಾಡದ ಪ್ರಸನ್ನ ಗುಡಿಯವರು ನಡೆಸಿಕೊಟ್ಟ ಸಂಗೀತ ಕಾರ್ಯಕ್ರಮದ ಸಾನಿಧ್ಯವಹಿಸಿದ್ದ ಜಗದ್ಗುರುಗಳು ಭಾರತೀಯ ಶಾಸ್ತ್ರಗಳ ಪ್ರಕಾರ 64 ಕಲೆಗಳಲ್ಲಿ ಸಂಗೀತವೂ ಒಂದು ಶ್ರೇಷ್ಠ ಕಲೆಯೆಂದು ಪರಿಗಣಿಸಿರುವುದನ್ನು ಸಭೆಗೆ ತಿಳಿಸಿ – ಸಂಗೀತದಿಂದ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿಗೆ ಶಾಂತಿ ಸಮಾಧಾನಗಳು ದೊರೆಯುವುವು. ಆದ್ದರಿಂದ ಸಂಗೀತವು ಒಂದು ರಸಾಯನವಿದ್ದಂತೆ. ಮನಸ್ಸಿನ ಪ್ರಸನ್ನತೆಯಿಂದ ಸರ್ವ ಸಮಸ್ಯೆಗಳೂ ಪರಿಹಾರವಾಗುವುದು. ಈ ಮನಸ್ಸಿನ ಪ್ರಸನ್ನತೆಯನ್ನು ಪಡೆಯಲು ಅನೇಕ ಉಪಾಯಗಳುಂಟು. ಅವುಗಳಲ್ಲಿ ಸಂಗೀತವು ಮಹತ್ವ ಪೂರ್ಣವಾದುದು. ಸಂಗೀತದ ರಸವನ್ನು ಆಸ್ವಾದಿಸಲು ಅತ್ಯಂತ ಬುದ್ಧಿವಂತಿಕೆ ಬೇಕಿಲ್ಲ. ಪಶುಗಳು ಶಿಶುಗಳು ಸಹ ಸಂಗೀತದ ಆನಂದವನ್ನು ಸವಿಯಬಲ್ಲವು. ಅಲ್ಲದೆ ಗಿಡ ಮರಗಳ ಮೇಲೂ ಸಂಗೀತ ಉತ್ತಮ ಪರಿಣಾಮ ಬೀರುವುದರ ಬಗ್ಗೆ ಈಗಾಗಲೇ ಸಸ್ಯಶಾಸ್ತ್ರಜ್ಞರು ತಮ್ಮ ವಿಚಾರವನ್ನು ತಿಳಿಸಿದ್ದಾರೆ. ಆದ್ದರಿಂದ ಸಂಗೀತದಲ್ಲಿ, ಸಾಹಿತ್ಯದಲ್ಲಿ ಅಭಿರುಚಿ ಬೆಳೆಸಿಕೊಳ್ಳಬೇಕೆಂದರು. ಸಾತ್ವಿಕ ಸ್ವಭಾವದವನು ತನ್ನ ಉದ್ಯೋಗದ ಬಿಡುವಿನ ವೇಳೆಯಲ್ಲಿ ಆಧ್ಯಾತ್ಮ ಸಾಹಿತ್ಯದ ಅಧ್ಯಯನ, ಯೋಗಾಭ್ಯಾಸ, ಸಂಗೀತಾಭ್ಯಾಸ ಮಾಡುತ್ತ, ಕೇಳುತ್ತಾ ಮನಸ್ಸನ್ನು ಸದಾ ಪ್ರಸನ್ನವಾಗಿಟ್ಟುಕೊಂಡು ಕೊನೆಗೆ ಜೀವನದ ಪರಮ ಲಕ್ಷ್ಯವನ್ನು ಪಡೆದು ಜೀವನ ಸಾರ್ಥಕಗೊಳಿಸಿಕೊಳ್ಳುತ್ತಾನೆ. ಹೀಗಾಗಿ ಈ ಎಲ್ಲದರಲ್ಲೂ ಅಭಿರುಚಿ ಬೆಳೆಸಿಕೊಳ್ಳಬೇಕೆಂದು ಅಂದು ಸಂಗೀತದಿಂದಾಗುವ ಉಪಯೋಗಗಳನ್ನು ಎಲ್ಲರ ಮನಸ್ಸಿಗೂ ತಾಕುವಂತೆ ಬೋಧನೆಯನ್ನು ಜಗದ್ಗುರುಗಳು ಮಾಡಿದರು.

ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ ವಾರಾಣಸಿ
ಅದರ ಇತರ ಅಂಗ ಸಂಸ್ಥೆಗಳು

ಜ್ಞಾನ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರುಗಳು ಜ್ಞಾನಪೀಠಾಧಿಪತಿಗಳಾದ ಕ್ಷಣದಿಂದಲೇ ಸಮಾಜದ ಏಳಿಗೆಗಾಗಿ ಸದಾ ಚಿಂತಿಸಲಾರಂಭಿಸಿದರು. ಅವರ ಬುದ್ಧಿ, ಹೃದಯ, ಮನಸ್ಸುಗಳು ಈ ಬಗ್ಗೆ ಆಲೋಚಿಸುತ್ತಿತ್ತು. ಸಾಮಾಜಿಕ ಕಾರ್ಯಗಳನ್ನು ಆರಂಭಿಸಲು ಒಂದು ನೋಂದಣಿ ಸಂಸ್ಥೆ ಇರಬೇಕೆಂದು ಯೋಚಿಸಿ 20–8–1993ರಲ್ಲಿ ಅಲಹಾಬಾದ್ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ 5005ರೂಗಳನ್ನು ಕೊಟ್ಟು "ವಿಶ್ವಾರಾಧ್ಯ ಜನ ಕಲ್ಯಾಣ ಪ್ರತಿಷ್ಠಾನ"ವನ್ನು ನೋಂದಾಯಿಸಿದರು. ಮುಖ್ಯ ಕಛೇರಿ ಕಾಶೀ ಜಂಗಮವಾಡಿ ಮಠದಲ್ಲಿದ್ದು, ದೇಶಾದ್ಯಂತ ಅದರ ಕಾರ್ಯ ವ್ಯಾಪಿಸಿದೆ, ಪ್ರತಿಷ್ಠಾನಕ್ಕೆ ಕಾಶೀ ಮಹಾಪೀಠದ ಜಗದ್ಗುರುಗಳೇ ಅಧ್ಯಕ್ಷರಾಗಿರುತ್ತಾರೆ.

ಈ ಪ್ರತಿಷ್ಠಾನದ ಧ್ಯೇಯೋದ್ದೇಶಗಳನ್ನು ಈಡೇರಿಸಲು ಎಲ್ಲಾ ರಾಜ್ಯಗಳಲ್ಲೂ ಶಾಖೆಗಳನ್ನು ಸ್ಥಾಪಿಸುವ ನಿಯಮವಿದೆ. ಪ್ರತಿಯೊಂದು ಶಾಖೆಗೂ ಜಗದ್ಗುರುಗಳೇ ಸಂಸ್ಥಾಪಕ ಅಧ್ಯಕ್ಷರಾಗಿರುತ್ತಾರೆ.

ನಾಗಪುರ

ಅನೇಕ ಉದ್ದೇಶಗಳನ್ನು ಹೊಂದಿರುವ ಈ ಪ್ರತಿಷ್ಠಾನವು ನಾಗಪುರ ಶಾಖೆಯಲ್ಲಿ 1995ರಲ್ಲಿ ಮಹಿಳಾ ಕುಟೀರ ಉದ್ಯೋಗ ಆರಂಭವಾಗಿದ್ದು ದಿನಬಳಕೆಯ ವಸ್ತುಗಳನ್ನು ತಯಾರಿಸಿ ಮಾರುವ ಏರ್ಪಾಡಿದೆ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು, ಅವರ ಬದುಕು ಸುಧಾರಿಸಬೇಕು ಎನ್ನುವುದು ಗುರುಗಳ ಆಶಯ.

ಸೊಲ್ಲಾಪುರ

1997ರಲ್ಲಿ ಸೋಲಾಪುರದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಶಾಖೆ ಆರಂಭಿಸಿ ಅಲ್ಲಿ ವೀರಶೈವ ವಧೂ–ವರರ ಸೂಚನಾ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳ ವೀರಶೈವ ಒಳಪಂಗಡಗಳ ವಧೂ–ವರರ ನೊಂದಣಿಯನ್ನು ಈ ಸಂಸ್ಥೆಯಲ್ಲಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. 14–7–2002ರಂದು ಸೊಲ್ಲಾಪುರದ ಶಿವಾಗಂಬ ಮಂಗಲ ಕಾರ್ಯಾಲಯದಲ್ಲಿ ವಧೂ–ವರರ ಪರಿಚಯ ಸಮಾಗಮ ಕಾರ್ಯಕ್ರಮ ಏರ್ಪಡಿಸಿದ್ದಾರೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಕಾಶೀ ಜಗದ್ಗುರುಗಳು ವಹಿಸಿದ್ದರು. ಸುಮಾರು ಸಾವಿರಕ್ಕೂ ಹೆಚ್ಚು ವಧೂ–ವರರು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡವರಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಮಾಡಲಾಗಿತ್ತು. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಭಾಗವಹಿಸುವ ವಧೂ–ವರರಿಗೆ ಪ್ರವೇಶ ಶುಲ್ಕವಿಡಿಸದೆ ಉಚಿತವಾಗಿ ಎಲ್ಲವನ್ನು ಏರ್ಪಡಿಸಿ–ಬಡ ಕುಟುಂಬಗಳಿಗೆ ಅನುಕೂಲ ಮಾಡಿಕೊಟ್ಟರು.

ಸೊಲ್ಲಾಪುರ : 14ರಂದು ವೀರಶೈವ ವಧು–ವರರ ಸಮಾವೇಶ
12–7–2002 ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಸಮಾಜವೀರ

ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು

ಕನ್ನಡ ಪ್ರಾಚೀನ ವೀರಶೈವ ಗ್ರಂಥಗಳ ಪ್ರಕಟಣೆಗೆ ನಿರ್ಧಾರ
ಮೇ 9 : ವೀರಶೈವ ಅನುಸಂಧಾನ ಸಂಸ್ಥಾನ ಉದ್ಘಾಟನೆ

ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರಾದ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಂಕಲ್ಪದಂತೆ ಸಮಾಜದ ಜನಗಳ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ನಡೆಸುವ ಸಲುವಾಗಿ ಮೇ ತಿಂಗಳ 9ರಂದು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ವಾರಾಣಸಿ ಇದರ ಬೆಂಗಳೂರು ಶಾಖೆಯಾಗಿ ವೀರಶೈವ ಅನುಸಂಧಾನ ಸಂಸ್ಥಾನವು ಉದ್ಘಾಟನೆಯಾಯಿತು.

ಆಶೀರ್ವಾದ



ವಿಚಾರ ಸಂಕಿರಣ



ವೇದಾಗಮಗಳು ಶಿವಶರಣರು ಭಾಗ–1 ವಿಚಾರ ಸಂಕಿರಣ



2001ರಲ್ಲಿ ನಡೆಸಿದ ದತ್ತಿ ಉಪನ್ಯಾಸ



'ಸ್ಕಂದ – ಗೋತ್ರಪುರುಷ' ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನೆಯಲ್ಲಿ ಕರ್ನಾಟಕ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು.



ವೀರಶೈವ ಅನುಸಂಧಾನ ಸಂಸ್ಥಾನದಲ್ಲಿ ನಡೆಸಿದ ಲಕ್ಷ ಬಿಲ್ವಾರ್ಚನೆ

ಕಾಶೀ ಜಂಗಮವಾಡಿ ಮಠದಲ್ಲಿ ಈಗಾಗಲೇ ಪ್ರಕಟಗೊಂಡಿರುವ ಪ್ರಾಚೀನ ಶೈವಾಗಮಗಳನ್ನು ಕನ್ನಡಕ್ಕೆ ಶ್ರೇಷ್ಠ ವಿದ್ವಾಂಸರಿಂದ ಅನುವಾದಿಸಿ ಪ್ರಕಟಿಸುವುದು, ಪ್ರಕಟಕೊಂಡಿರುವ ಆಗಮಗಳನ್ನು ಕುರಿತು ಸಂಕಿರಣಗಳನ್ನು, ವೀರಶೈವ ಧರ್ಮ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ವಿಚಾರ ಸಂಕಿರಣಗಳನ್ನು ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಏರ್ಪಡಿಸುವುದು, ಜಗದ್ಗುರುಗಳ ಇಷ್ಟಲಿಂಗಪೂಜೆ, ಆಧ್ಯಾತ್ಮಿಕ ಪ್ರವಚನವನ್ನು ಬೆಂಗಳೂರಿನಲ್ಲಿ ನಡೆಸುವುದು, ವಿದ್ವಾಂಸರನ್ನು ಸನ್ಮಾನಿಸುವುದು ಹೀಗೆ ಹಲವು ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಲು ಜಗದ್ಗುರುಗಳು ವೀರಶೈವ ಅನುಸಂಧಾನ ಸಂಸ್ಥಾನವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು.

ಮೇಲಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಪೋಷಕ ಮಂಡಲಿ ಮತ್ತು ಸಂಪಾದಕ ಮಂಡಲಿಗಳನ್ನು ರಚಿಸಿ ಪೋಷಕ ಮಂಡಲಿಯ ಅಧ್ಯಕ್ಷರನ್ನಾಗಿ ಶ್ರೀ ಬಿ.ಆರ್.ವಿ. ಗೌಡ್ ಅವರನ್ನು, ಸಂಪಾದಕ ಮಂಡಲಿಯ ಅಧ್ಯಕ್ಷರನ್ನಾಗಿ ಡಾ॥ ಎಂ. ಶಿವಕುಮಾರ ಸ್ವಾಮಿಗಳನ್ನು, ಗೌ॥ ಕಾರ್ಯದರ್ಶಿಯಾಗಿ ಡಾ॥ ಸಿ.ಯು. ಉಮಾದೇವಿ ಉಮಾಶಂಕರ್ ಅವರನ್ನು ನೇಮಿಸಿ ಕಾರ್ಯಕಾರಿ ಸಮಿತಿಯನ್ನು ಆರಂಭಿಸಿದರು. ಕಾರ್ಯದರ್ಶಿಗಳ ಮನೆಯನ್ನೇ ಕಾರ್ಯಾಲಯವನ್ನಾಗಿ ಮಾಡಿದರು.

ಇಂದು ವೀರಶೈವರ ಅನುಸಂಧಾನ ಸಂಸ್ಥಾನವು ಯಾವ ಉದ್ದೇಶಕ್ಕಾಗಿ ಆರಂಭ ಗೊಂಡಿತೊ ಆ ಉದ್ದೇಶಗಳನ್ನು ಯಶಸ್ವಿಯಾಗಿ ನೆರವೇರಿಸಿಕೊಂಡು ಬರುತ್ತಿರುವುದು ಜಗದ್ಗುರುಗಳಿಗೆ ಸಮಾಧಾನ ತಂದಿದೆ.

ಜಗದ್ಗುರುಗಳ ಆದೇಶದಂತೆ ಸಂಪಾದಕ ಮಂಡಲಿ ಅಧ್ಯಕ್ಷರು, ಸದಸ್ಯರು ಸೇರಿ ವಿಚಾರ ಸಂಕಿರಣದ ವಿಷಯಗಳ ಬಗ್ಗೆ ಚರ್ಚಿಸಿ ಮಂಡನೆಗೆ ಸೂಕ್ತ ವಿದ್ವಾಂಸರನ್ನು ಆಯ್ಕೆಮಾಡುತ್ತಿದ್ದರು. ಪೋಷಕ ಮಂಡಳಿ ಅಧ್ಯಕ್ಷರು, ಸದಸ್ಯರುಗಳು ಪ್ರತೀ ವಿಚಾರ ಸಂಕಿರಣದ ಖರ್ಚುವೆಚ್ಚವನ್ನು ನೋಡಿಕೊಳ್ಳುತ್ತಿದ್ದರು.

ವಿಚಾರ ಸಂಕಿರಣಗಳನ್ನು ಏರ್ಪಡಿಸುವ ಮೂಲ ಉದ್ದೇಶ–ವೀರಶೈವ ಸಮಾಜದಲ್ಲಿ ಈಗಾಗಲೇ ಬೆಳೆದು ಬಂದಿರುವ ಭಾವನೆ ಎಂದರೆ–ವೇದಾಗಮೋಪನಿಷತ್‌ಗಳಲ್ಲಿ ಬಂದಿರುವುದು ವೀರಶೈವ ಧರ್ಮ, ವಚನಗಳಲ್ಲಿ ಬಂದಿರುವುದು ಲಿಂಗಾಯತ ಧರ್ಮ ಎಂಬ ಭೇದಭಾವವನ್ನು ಹುಟ್ಟಿಸಿ ಸಮಾಜವನ್ನು ಒಡೆಯುವಂತಹ ಕುಕೃತ್ಯವನ್ನು ಕೆಲವರು ಮಾಡುತ್ತಾ ಬಂದಿದ್ದಾರೆ. ಈ ಭೇದ–ಭಾವವನ್ನು ತೊಳೆದು ಸಮನ್ವಯದ ಸಿದ್ಧಾಂತವನ್ನು ತಿಳಿಸಿ ವೀರಶೈವರನ್ನು ಒಂದು ಮಾಡಬೇಕೆಂಬುದೇ ಜಗದ್ಗುರುಗಳ ಆಶಯ.

ವೀರಶೈವ ಅಂದು–ಇಂದು–ಮುಂದು ಎಂದೆಂದಿಗೂ ಪ್ರಸ್ತುತವಾದ ಧರ್ಮ. ಇಂತಹ ಧರ್ಮವನ್ನು ಕುರಿತು ವಿಚಾರ ಸಂಕಿರಣ, ಸಂವಾದ, ಚರ್ಚೆ ಸಮಾವೇಶಗಳು ಜರುಗಿದಾಗ ಆ ಧರ್ಮದ ನಿಜಸ್ವರೂಪವನ್ನು ಸಮಾಜದ ಜನತೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ವೀರಶೈವ ಭಕ್ತ ಸಮೂಹವು ಧರ್ಮದ ಬಗ್ಗೆ, ಧರ್ಮಾಧೀಶರ ಬಗ್ಗೆ ಅಪಾರವಾದ ವಿಶ್ವಾಸ ನಂಬಿಕೆ ಗೌರವ ಇಟ್ಟುಕೊಂಡಿದೆ. ಜನತೆ ಧರ್ಮದ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳಲು ಹಾತೊರೆಯುತ್ತಿರುತ್ತಾರೆ. ವೀರಶೈವ ಧರ್ಮದ ಅವಲೋಕನ ಮತ್ತು ಪುನರಾವಲೋಕನಗಳು ಮೇಲಿಂದ ಮೇಲೆ ನಡೆಯುತ್ತಿರುವುದು ಈ ಧರ್ಮದ ಜೀವಂತಿಕೆಯ ಲಕ್ಷಣವಾಗಿದೆ. ಆ ಮೂಲಕ ಜನರಲ್ಲಿ ವೀರಶೈವದ ಅರಿವು ಜಾಗೃತಗೊಳಿಸುವ ಉದ್ದೇಶಗಳನ್ನು ಹೊತ್ತು ವಿಚಾರಸಂಕಿರಣಗಳನ್ನು ಏರ್ಪಡಿಸಲಾಗುತ್ತಿದೆ.

ಪರಂಪರೆಯ ವೀರಶೈವಧರ್ಮದ ಮಾನವೀಯ ಮೌಲ್ಯಗಳನ್ನು ಗುರುತಿಸಿ ಸಮಕಾಲೀನ ಸಮಾಜದಲ್ಲಿ ಅವುಗಳ ಅನುಷ್ಠಾನದ ಮಾರ್ಗದರ್ಶಕ ಸೂತ್ರಗಳನ್ನು ಗುರುತಿಸುವುದು. ಶತಶತಮಾನಗಳಿಂದ ಉಳಿದು–ಬೆಳೆದು ಬಂದ ಧರ್ಮ ಗ್ರಂಥಗಳು ಹಾಗೂ ಬಸವಾದಿ ಶಿವಶರಣರ ವಚನ ವಾಙ್ಮಯಗಳು ಪ್ರತಿಪಾದಿಸುತ್ತಾ ಬಂದಿರುವ

ಸಮಾನ ತತ್ವಗಳನ್ನು, ಧರ್ಮ ತತ್ವಗಳನ್ನು, ಸಾಮಾಜಿಕ ನಡವಳಿಕೆಗಳನ್ನು ಪರಿಚಯಿಸುವ ನಿರ್ದಿಷ್ಟ ಉದ್ದೇಶಗಳನ್ನು ವಿಚಾರಸಂಕಿರಣ ಹೊಂದಿದೆ. ಈ ನಿಟ್ಟಿನಲ್ಲಿ 'ವೀರಶೈವ ಸಮಗ್ರತೆ'ಗೆ ಹೊಸ ಬೆಳಕು–ಆಯಾಮ ಲಭಿಸುವುದೆಂಬ ನಂಬಿಕೆಯನ್ನು ವೀರಶೈವ ಅನುಸಂಧಾನ ಸಂಸ್ಥಾನವು ಹೊಂದಿದೆ.

ಪ್ರತೀ ವಿಚಾರಸಂಕಿರಣದ ವಿಷಯಗಳ ಬಗ್ಗೆ ಪ್ರಬಂಧಕಾರರ ಬಗ್ಗೆ ಸಂಪಾದಕ ಮಂಡಲಿ ಚರ್ಚಿಸಿಯಾದ ಮೇಲೆ ಅವೆಲ್ಲವನ್ನು ದೂರವಾಣಿ ಮೂಲಕ ಜಗದ್ಗುರುಗಳಿಗೆ ತಿಳಿಸಿ ಅವರು ಸಂಪೂರ್ಣ ಒಪ್ಪಿಗೆ ಕೊಟ್ಟ ಮೇಲೆ ಮುಂದುವರೆಯಲಾಗುತ್ತಿತ್ತು. ಅವರ ಗಮನಕ್ಕೆ ತಾರದೆ ಯಾವ ನಿರ್ಣಯವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಜಗದ್ಗುರುಗಳ ಮುಖ್ಯ ಉದ್ದೇಶ ವೀರಶೈವ ಧರ್ಮಾನುಯಾಯಿಗಳನ್ನು ಒಂದುಮಾಡುವುದು. ಅದಕ್ಕಾಗಿ ಚಿಂತನ–ಮಂಥನ ನಡೆಸಬೇಕು ಎಂದು ಸದಾ ಹೇಳುತ್ತಿರುತ್ತಾರೆ.

ಇದುವರೆವಿಗೂ ವೀರಶೈವ ಅನುಸಂಧಾನ ಸಂಸ್ಥಾನವು ನಡೆಸಿಕೊಂಡು ಬಂದಿರುವ ವಿಚಾರ ಸಂಕಿರಣಗಳ ವಿವರಗಳು ಹೀಗಿವೆ :


1998–ಬೆಂಗಳೂರು–ಶೈವಾಗಮಗಳಲ್ಲಿ ವೀರಶೈವ, 1999–ಬೆಂಗಳೂರು–ಭಕ್ತಸ್ಥಲ–ಒಂದು ತೌಲನಿಕ ಅಧ್ಯಯನ, 2000–ಹರಪನಹಳ್ಳಿ–ಚಂದ್ರಜ್ಞಾನಾಗಮ, 2001–ರಾಯಚೂರು–ಸೂಕ್ಷ್ಮಾಗಮ, 2002–ಬೆಂಗಳೂರು–ವೇದಾಗಮಗಳು ಮತ್ತು ಶಿವಶರಣರು–ಭಾಗ–1, 2003–ಬಾಗಲಕೋಟೆ–ವೇದಾಗಮಗಳು ಮತ್ತು ಶಿವಶರಣರು–ಭಾಗ–2, 2004–ಧಾರವಾಡ–ವೀರಶೈವ ಧರ್ಮ ಒಂದು ಪುನರಾವಲೋಕನ, 2006–ಮೈಸೂರು–ಆಧುನಿಕ ಜಗತ್ತಿಗೆ ಶ್ರೀ ಸಿದ್ಧಾಂತ ಶಿಖಾಮಣಿ ಕೊಡುಗೆ, 2007–ಬೆಂಗಳೂರು–ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯರು ಬದುಕು ಮತ್ತು ಬರಹ, 2012–ಬೆಂಗಳೂರು–'ಸ್ಕಂದ–ಗೋತ್ರ ಪುರುಷ'–ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ, 2013–ಬೆಂಗಳೂರು–'ಪಂಚ ಸೂತ್ರಗಳು'

2007 ಜಗದ್ಗುರುಗಳವರ ಷಷ್ಟ್ಯಬ್ದಿ ನಿಮಿತ್ತ ವೀರಶೈವ ಅನುಸಂಧಾನ ಸಂಸ್ಥಾನವು ಒಂದು ವರ್ಷದ ಹಿಂದೆಯೇ–ಜಗದ್ಗುರುಗಳ ಉಸಿರೇ ಆಗಿರುವ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥ ಕುರಿತು 'ಆಧುನಿಕ ಜಗತ್ತಿಗೆ ಶ್ರೀ ಸಿದ್ಧಾಂತ ಶಿಖಾಮಣಿಯ ಕೊಡುಗೆ' ಎಂಬ ವಿಷಯ ಕುರಿತು 10 ಜನ ವಿದ್ವಾಂಸರು ವಿವಿಧ ದೃಷ್ಟಿಕೋನಗಳಿಂದ ಸಿದ್ಧಾಂತ ಶಿಖಾಮಣಿಯನ್ನು ವಿಮರ್ಶಿಸುವ ಸಲುವಾಗಿ ವಿಚಾರಸಂಕಿರಣವನ್ನು ಏರ್ಪಡಿಸಿ ಈ ಎಲ್ಲಾ ಪ್ರಬಂಧಗಳನ್ನು, ಉದ್ಘಾಟನಾ ಭಾಷಣಗಳನ್ನು ಗ್ರಂಥ ರೂಪದಲ್ಲಿ ಪ್ರಕಟಿಸಿ–2007ನೇ ವರ್ಷದ ಷಷ್ಟ್ಯಬ್ದಿ ಸಮಾರಂಭದಲ್ಲಿ ಜಗದ್ಗುರುಗಳಿಗೆ ಅರ್ಪಿಸಿದ್ದು ಜಗದ್ಗುರುಗಳು ಬಹು ಸಂತೋಷಪಟ್ಟರು. ವಿಚಾರ ಸಂಕಿರಣಗಳು ಪ್ರತೀ ಬಾರಿಯೂ ಜಗದ್ಗುರುಗಳ ಸಾನ್ನಿಧ್ಯದಲ್ಲೇ ನಡೆಯುತ್ತಿತ್ತು. ಪ್ರಶ್ನೋತ್ತರ ಸಮಯದಲ್ಲಿ ಪ್ರಬಂಧಕಾರರು ಉತ್ತರಿಸಲಾಗದಿದ್ದ ಪ್ರಶ್ನೆಗಳಿಗೆ ಜಗದ್ಗುರುಗಳು ಉತ್ತರ ಕೊಡುತ್ತಿದ್ದರು.



'ಸ್ಕಂದ–ಗೋತ್ರಪುರುಷ' ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಗೋವಿಂದ ಕಾರಜೋಳ ಅವರು.


'ಸ್ಕಂದ–ಗೋತ್ರಪುರುಷ' ರಾಷ್ಟ್ರೀಯ ವಿಚಾರಸಂಕಿರಣದ ಸಾನ್ನಿಧ್ಯ ವಹಿಸಿದ ಶ್ರೀಶೈಲ ಜಗದ್ಗುರುಗಳಿಗೆ ಕಾಶೀ ಜಗದ್ಗುರುಗಳವರಿಂದ ಗೌರವ ಸಮರ್ಪಣೆ.


ಮೈಸೂರಿನಲ್ಲಿ ನಡೆದ "ಆಧುನಿಕ ಜಗತ್ತಿಗೆ ಶ್ರೀ ಸಿದ್ಧಾಂತ ಶಿಖಾಮಣಿಯ ಕೊಡುಗೆ" ವಿಚಾರ ಸಂಕಿರಣದ ಉದ್ಘಾಟನೆಗೆ ಆಗಮಿಸಿದ್ದ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳಿಗೆ ಕಾಶೀ ಜಗದ್ಗುರುಗಳು ಗೌರವ ಸಮರ್ಪಿಸುತ್ತಿರುವುದು.



ಮೈಸೂರಿನಲ್ಲಿ ನಡೆದ "ಆಧುನಿಕ ಜಗತ್ತಿಗೆ ಶ್ರೀ ಸಿದ್ಧಾಂತ ಶಿಖಾಮಣಿಯ ಕೊಡುಗೆ" ವಿಚಾರ ಸಂಕಿರಣದ ಸಮಾರೋಪ ಸಮಾರಂಭಕ್ಕೆ ಆಗಮಿಸಿದ್ದ ಉಜ್ಜಯಿನಿ ಲಿಂ॥ ಜಗದ್ಗುರು ಮರುಳಸಿದ್ಧ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಕಾಶೀ ಜಗದ್ಗುರುಗಳು.


ಮಂಗಳ ಹಾಡುವಾಗ ಸದಸ್ಯೆಯರು ಜಗದ್ಗುರುಗಳಿಗೆ ಆರತಿ ಬೆಳಗುತ್ತಿರುವುದು.



ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಅಂಗಸಂಸ್ಥೆ ವೀರಶೈವ ಅನುಸಂಧಾನ ಸಂಸ್ಥಾನವು ಏರ್ಪಡಿಸಿದ್ದ ಕಾಶೀ ಜಗದ್ಗುರುಗಳವರ ಧನುರ್ಮಾಸದ ಇಷ್ಟಲಿಂಗ ಮಹಾಶಿವಪೂಜೆ ಹಾಗೂ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮ ಉದ್ಘಾಟನೆ ಮಾಡಲು ಆಗಮಿಸಿದ್ದ ಬಾಳೆಹೊನ್ನೂರು ಜಗದ್ಗುರುಗಳು.



ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಬೆಂಗಳೂರು ಶಾಖೆಯಲ್ಲಿ ಏರ್ಪಡಿಸಿದ್ದ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ದಲ್ಲಿ ಬಹು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಬೆಂಗಳೂರಿನ 'ಸ್ನೇಹಾ'ದ ಟ್ರಸ್ಟಿಗಳಿಗೆ ಕಾಶೀ ಜಗದ್ಗುರುಗಳು ಆಶೀರ್ವದಿಸುತ್ತಿರುವುದು.



ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನವು ಏರ್ಪಡಿಸಿದ್ದ ಕಾಶೀ ಜಗದ್ಗುರುಗಳವರ ಇಷ್ಟಲಿಂಗ ಮಹಾಶಿವಪೂಜೆಯ ಅಂಗವಾಗಿ ಕುಂಭಾಭಿಷೇಕದಲ್ಲಿ ಭಾಗವಹಿಸಿದ್ದ ಭಕ್ತರು.

ವೀರಶೈವ ಅನುಸಂಧಾನ ಸಂಸ್ಥಾನದ ಆಡಳಿತ ಮಂಡಳಿ

ಆಡಳಿತ ಮಂಡಳಿ :

ಅಧ್ಯಕ್ಷರು	: ಶ್ರೀ ಕೆ.ಎನ್.ಜಯಲಿಂಗಪ್ಪ
ಉಪಾಧ್ಯಕ್ಷರು	: ಶ್ರೀ ಆರ್.ಬಿ.ಎಸ್. ಚನ್ನಬಸವರಾಧ್ಯ, ಶ್ರೀ ಕೆ.ಜಿ. ಶಶಿಧರ್
ಗೌರವ ಕಾರ್ಯದರ್ಶಿ	: ಡಾ॥ ಸಿ.ಯು. ಉಮಾದೇವಿ ಉಮಾಶಂಕರ್
ಸಹ ಕಾರ್ಯದರ್ಶಿ	: ಶ್ರೀ ಸಿ. ಉಮಾಶಂಕರ್
ಖಜಾಂಚಿ	: ಶ್ರೀ ಬಿ.ಎಸ್. ವಾಗೀಶ್‌ಪ್ರಸಾದ್

ಪೋಷಕ ಮಂಡಳಿ ಸದಸ್ಯರು :

ಶ್ರೀ ಎಸ್.ಎನ್. ವಿನೋದ್
ಶ್ರೀ ಎಂ.ಕೆ. ರಾಜಮಾನೆ
ಶ್ರೀ ಸಿ. ವೀರಭದ್ರಯ್ಯ
ಶ್ರೀ ಶ್ರೀಕಂಠಾರಾಧ್ಯ
ಶ್ರೀ ಬಿ.ವಿ. ಅಜಯ್‌ಗೌಡ್
ಶ್ರೀಮತಿ ಶಾಂತಾ ವಿ.ಗೌಡ್
ಶ್ರೀಮತಿ ಗಾಯತ್ರಿ ಶಶಿಧರ್
ಶ್ರೀಮತಿ ಸ್ವರ್ಣಲತ ಚನ್ನಬಸವಾರಾಧ್ಯ
ಶ್ರೀಮತಿ ನರ್ಮದಾ ರಾಜಮಾನೆ

ಸಂಪಾದಕ ಮಂಡಳಿ ಅಧ್ಯಕ್ಷರು :

ಡಾ॥ ಎಂ. ಶಿವಕುಮಾರ ಸ್ವಾಮಿ

ಸದಸ್ಯರು :

ಶ್ರೀ ಷ॥ ಬ್ರ॥ ಡಾ॥ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು, ವಿಭೂತಿಪುರಮಠ
ಶ್ರೀ ಷ॥ ಬ್ರ॥ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮಿಗಳು, ಮೇಲಣಗವಿಮಠ,ಶಿವಗಂಗಾಕ್ಷೇತ್ರ

ಡಾ. ಎಸ್. ವಿದ್ಯಾಶಂಕರ್
ಶ್ರೀ ಷಣ್ಮುಖಯ್ಯ ಅಕ್ಕೂರಮಠ
ಡಾ॥ ಸಿ. ಶಿವಕುಮಾರಸ್ವಾಮಿ
ವಿದ್ವಾನ್ ಕೋ.ರಂ. ಬಸವರಾಜು
ಡಾ॥ ಎಂ.ಜಿ.ನಾಗರಾಜ

ಪೋಷಕರು : ಶ್ರೀ ಎಂ.ಮಾದಯ್ಯ

ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ದತ್ತಿ ದಾನಿಗಳು

ದಿಬ್ಬೂರು ವೀರಪ್ಪನಂಜಮ್ಮ ಎಂಡೋಮೆಂಟ್ ಟ್ರಸ್ಟ್, ಬೆಂಗಳೂರು.
ದಿ॥ ಐ.ಕೆ. ಅಮಿತ ಸ್ಮಾರಕ ದತ್ತಿ, ಬೆಂಗಳೂರು.
ಶ್ರೀಮತಿ ಸುಜಾತ ನಿರಂಜನ್ ಬನಾವ್, ಯು.ಎಸ್.ಎ.
ಅಥಣಿ ವೀರಣ್ಣ ಮತ್ತು ಸಹೋದರರು, ದಾವಣಗೆರೆ
ಶ್ರೀ ಶಿವಕುಮಾರ ಖೇಣಿ, ಬೆಂಗಳೂರು.



ಕಾಶೀ ಜಗದ್ಗುರುಗಳನ್ನು ವೇದಿಕೆಗೆ ಸ್ವಾಗತಿಸುತ್ತಿರುವುದು




ಬೆಂಗಳೂರಿನ ವಿಭೂತಿಪುರ ಮಠಾಧ್ಯಕ್ಷರಾದ ಡಾ॥ ಮಹಾಂತಲಿಂಗ ಶಿವಾಚಾರ್ಯರ ಪಿಹೆಚ್.ಡಿ. ಪದವಿ ಗಳಿಸಿದಾಗ ಕಾಶೀ ಜಗದ್ಗುರುಗಳು ಆಶೀರ್ವದಿಸುತ್ತಿರುವುದು.




ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ಜಗದ್ಗುರುಗಳು ಸನ್ಮಾನಿಸಿ ಆಶೀರ್ವದಿಸುತ್ತಿರುವುದು





Kashi peetha-Tradition and History
ಗ್ರಂಥ ಬಿಡುಗಡೆ ಸಮಾರಂಭ
















ವೀರಶೈವ ಅನುಸಂಧಾನ ಸಂಸ್ಥಾನದ ಪ್ರಕಟಣೆಗಳು


1998 ಮಕುಟಾಗಮ – ಅನು: ಡಾ॥ ಸಿ. ಶಿವಕುಮಾರಸ್ವಾಮಿ
1998 ಸಿದ್ಧಾಂತ ಶಿಖಾಮಣಿ ವಿಚಾರದೀಪ್ತಿ – ಸಂ : ಡಾ॥ ಎಂ.ಶಿವಕುಮಾರ ಸ್ವಾಮಿ
1999 ಕಾರಣಾಗಮ – ಅನು: ಡಾ॥ ಮಲ್ಲಿಕಾರ್ಜುನ ಪರಡ್ಡಿ
1999 ಶೈವಾಗಮಗಳಲ್ಲಿ ವೀರಶೈವ – ಸಂ : ಡಾ॥ ಎಂ.ಶಿವಕುಮಾರ ಸ್ವಾಮಿ
2000 ಪಾರಮೇಶ್ವರಾಗಮ – ಅನು: ಡಾ॥ ಎಂ. ಶಿವಕುಮಾರ ಸ್ವಾಮಿ
2001 ಸೂಕ್ಷ್ಮಾಗಮ – ಅನು: ಶ್ರೀ ಷಣ್ಮುಖಯ್ಯ ಅಕ್ಕೂರಮಠ
2001 ಚಂದ್ರಜ್ಞಾನಾಗಮ ವಿಚಾರರಶ್ಮಿ– ಸಂ: ಡಾ॥ ಎಂ. ಶಿವಕುಮಾರ ಸ್ವಾಮಿ
2002 ಸೂಕ್ಷ್ಮಾಗಮ ವಿಚಾರಪ್ರಭೆ – ಸಂ: ಡಾ॥ ಎಂ. ಶಿವಕುಮಾರ ಸ್ವಾಮಿ
2003 ಚಂದ್ರಜ್ಞಾನಾಗಮ – ಅನು: ಡಾ॥ ಎಂ. ಶಿವಕುಮಾರ ಸ್ವಾಮಿ
2003 ವೇದಾಗಮಗಳು ಮತ್ತು ಶಿವಶರಣರು ಭಾಗ–1
– ಸಂ: ಡಾ॥ ಎಂ. ಶಿವಕುಮಾರ ಸ್ವಾಮಿ
2004 ವೇದಾಗಮಗಳು ಮತ್ತು ಶಿವಶರಣರು ಭಾಗ–2
– ಸಂ: ಡಾ॥ ಎಂ. ಶಿವಕುಮಾರ ಸ್ವಾಮಿ
2002 ಅನುಭವಸೂತ್ರಂ – ಅನು: ಡಾ॥ ಸಿ. ಶಿವಕುಮಾರಸ್ವಾಮಿ
2005 ವಿದ್ವದ್ವಿಭೂತಿ – ಲೇ: ಡಾ॥ ಶಿವಾನಂದ ಶಿವಾಚಾರ್ಯ ಸ್ವಾಮಿಗಳು
2005 ಶಿವಪಂಚವಿಂಶತಿಲೀಲಾಶತಕಂ – ಅನು: ಪ್ರೊ. ಕೋ.ರಂ. ಬಸವರಾಜು
2005 ಶಿವತತ್ತ್ವಚಿಂತಾಮಣಿ : ಒಂದು ಅಧ್ಯಯನ – ಶೈವಭಾರತಿ ಶೋಧ ಪ್ರತಿಷ್ಠಾನ ವಾರಾಣಸಿಯಿಂದ ಪ್ರಕಟವಾಗಿರುವ ಕನ್ನಡ ಸಂಶೋಧನಾ ಪ್ರಬಂಧ
– ಡಾ॥ ಸಿ.ಯು. ಉಮಾದೇವಿ ಉಮಾಶಂಕರ್
2006 ವೀರಶೈವ ಧರ್ಮ – ಒಂದು ಪುನರವಲೋಕನ
– ಸಂ: ಡಾ॥ ಎಂ. ಶಿವಕುಮಾರ ಸ್ವಾಮಿ
2007 ಆಧುನಿಕ ಜಗತ್ತಿಗೆ ಶ್ರೀ ಸಿದ್ಧಾಂತ ಶಿಖಾಮಣಿಯ ಕೊಡುಗೆ
– ಸಂ: ಡಾ॥ ಎಂ. ಶಿವಕುಮಾರ ಸ್ವಾಮಿ
2008 Sri Kashi Jnanapeetha - Tradition and History
– Dr. K.V. Ramesh
2009 ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶೆ
– ಅನು: ಡಾ॥ ಸಿ. ಶಿವಕುಮಾರಸ್ವಾಮಿ
2011 ತತ್ತ್ವಪ್ರಕಾಶಿಕಾ – ಅನು: ಪ್ರೊ॥ ಬಿ. ರಾಜಶೇಖರಯ್ಯ
























11.1.2007 ಗುರುವಾರ — ಬೆಳಿಗ್ಗೆ 9.30 ಗಂಟೆಗೆ

ಶ್ರೀಮತ್ ಕಾಶೀ ಜ್ಞಾನಸಿಂಹಾಸನಾಧೀಶ್ವರ
ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು
ಬದುಕು ಮತ್ತು ಬರಹ –ಒಂದು ವಿಚಾರ ಸಂಕಿರಣ

ಸಾನಿಧ್ಯ:
ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

ಅಧ್ಯಕ್ಷತೆ:
ಡಾ|| ಎಂ. ಶಿವಕುಮಾರಸ್ವಾಮಿ

ನೇತೃತ್ವ:
ಷ||ಬ್ರ|| ಶ್ರೀ ಮಹಂತಲಿಂಗ ಶಿವಾಚಾರ್ಯ ಸ್ವಾಮಿಗಳು
ವಿಭೂತಿಪುರ ಮಠ, ಬೆಂಗಳೂರು
ಷ||ಬ್ರ|| ಶ್ರೀ ಮಲಯಶಾಂತಮುನಿ ಶಿವಾಚಾರ್ಯ ಸ್ವಾಮಿಗಳು
ಮೇಲಣ ಗವಿಮಠ, ಶಿವಗಂಗಾ ಕ್ಷೇತ್ರ

ಗಂಟೆ		ವಿಷಯ	ಪ್ರಬಂಧಕಾರರು
9.30	1.	ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಜೀವನ-ಸಾಧನೆ	ಷ||ಬ್ರ|| ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಹಿರೇಮಠ, ತುಮಕೂರು
9.50	2.	ಶ್ರೀ ಸಿದ್ಧಾಂತ ಶಿಖಾಮಣಿ ಅಧ್ಯಯನಕ್ಕೆ ಗುರುಗಳ ಕೊಡುಗೆ	ಷ||ಬ್ರ|| ಡಾ. ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಹಿರೇಮಠ, ಹಿಪ್ಪರಗಿ
10.10	3.	ಜಗದ್ಗುರುಗಳ ಪಿಹೆಚ್.ಡಿ. ಮಹಾಪ್ರಬಂಧ "ಶ್ರೀ ಸಿದ್ಧಾಂತ ಶಿಖಾಮಣಿ ಸಮೀಕ್ಷಾ"	ವಿದ್ವಾನ್ ಕೋ.ರಂ. ಬಸವರಾಜು ತುಮಕೂರು
10.30	4.	ಜಗದ್ಗುರುಗಳ ಡಿ.ಲಿಟ್ ಪದವಿ ಮಹಾಪ್ರಬಂಧ ಶಕ್ತಿವಿಶಿಷ್ಟಾದ್ವೈತ ತತ್ತ್ವತ್ರಯ ವಿಮರ್ಶೆ	ಡಾ. ಸಿ. ಶಿವಕುಮಾರಸ್ವಾಮಿ
10.50	5.	ಜಗದ್ಗುರುಗಳ ಇತರ ಕೃತಿಗಳು	ಶ್ರೀ ಷಣ್ಮುಖಯ್ಯ ಅಕ್ಕೂರಮಠ
11.10	6.	ಕಾಶೀ ಜಗದ್ಗುರುಗಳು 'ನಾ ಕಂಡಂತೆ'	ಡಾ|| ಎಸ್. ವಿದ್ಯಾಶಂಕರ

ಈ ಗ್ರಂಥವನ್ನು ಜಗದ್ಗುರುಗಳಿಗೆ ಅರ್ಪಿಸಿದ್ದಲ್ಲದೆ ಆ ಹತ್ತು ದಿನಗಳ ಕಾಲ ಇಷ್ಟಲಿಂಗ ಮಹಾಪೂಜೆಯನ್ನು ವಿಶೇಷ ರೀತಿಯಲ್ಲಿ ಆಚರಿಸಲಾಯಿತು. ಒಂದು ದಿನ ಪಂಚಾಮೃತಾಭಿಷೇಕ, ಎರಡನೆ ದಿನ ಕ್ಷೀರಾಭಿಷೇಕ, ಮೂರನೇ ದಿನ ನಾರಿಕೇಳೋದಕಾಭಿಷೇಕ, ನಾಲ್ಕನೇ ದಿನ ಸುಗಂಧ ತೈಲಾಭಿಷೇಕ, ಐದನೇ ದಿನ ಭಸ್ಮಾರ್ಚನೆ, ಆರನೇ ದಿನ ಬಿಲ್ವಾರ್ಚನೆ ಏಳನೇ ದಿನ ಶ್ವೇತ ಪುಷ್ಪಾರ್ಚನೆ, ಎಂಟನೇ ದಿನ ಸೇವಂತಿಕಾ ಪುಷ್ಪಾರ್ಚನೆ, ಕೊನೆಯ ದಿನ ಕುಂಭಾಭಿಷೇಕವನ್ನು ಬೆಂಗಳೂರಿನ ಭಕ್ತಾದಿಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪಾಲ್ಗೊಂಡು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದ್ದು ಮರೆಯಲಾಗದು.

ಇವೆಲ್ಲಕ್ಕೂ ಕಳಸವಿಟ್ಟಂತೆ ಕಾಶೀ ಜಗದ್ಗುರುಗಳ ಸಾನ್ನಿಧ್ಯದಲ್ಲೇ ಜಗದ್ಗುರುಗಳವರ ಬದುಕು–ಬರಹ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ಜಗದ್ಗುರುಗಳು ತಮ್ಮನ್ನು ಕುರಿತು ಸ್ವಾಮೀಜಿಗಳು, ವಿದ್ವಾಂಸರು ಹೇಳುತ್ತಿದ್ದುದನ್ನೆಲ್ಲಾ ಗಮನವಿಟ್ಟು ಕೇಳಿ ಸಂತೋಷಗೊಂಡರು.

ಅಂದೇ ಸಂಜೆ ಕಾಶೀ ಜಗದ್ಗುರುಗಳ ಷಷ್ಟ್ಯಬ್ದಿ ನಿಮಿತ್ತ ಗುರುವಂದನಾ ಸಮಾರಂಭವನ್ನು ಏರ್ಪಡಿಸಿ ಉಜ್ಜಯನಿ ಜಗದ್ಗುರುಗಳನ್ನು ಸಾನ್ನಿಧ್ಯ ವಹಿಸಲು ಆಹ್ವಾನಿಸಲಾಗಿತ್ತು. ಅಂದು ಸಮಾರಂಭವನ್ನು ದೀಪ ಬೆಳಗುವ ಮೂಲಕ ಉಜ್ಜಯನಿ ಜಗದ್ಗುರುಗಳು ಉದ್ಘಾಟಿಸುವ ಸಮಯಕ್ಕೆ ಸರಿಯಾಗಿ ವೀರಶೈವ ಅನುಸಂಧಾನದ ಎರಡು ಮಂಡಳಿಗಳ ಸದಸ್ಯರು, ಮನೆಯವರು ಎಲ್ಲಾ ಸೇರಿ ಏಕಕಾಲಕ್ಕೆ 60 ತುಪ್ಪದ ದೀಪಗಳನ್ನು ಹಚ್ಚಿ ಬೆಳಗಿಸಿ ಜಗದ್ಗುರುಗಳಿಗೆ ಭಕ್ತಿಯನ್ನು ಸಮರ್ಪಿಸಿದರು. 2004ರಿಂದ ವೀರಶೈವ ಅನುಸಂಧಾನ ಸಂಸ್ಥಾನವು "ಶಿವಕಮಲ ಸಾಹಿತ್ಯ ಪ್ರಶಸ್ತಿ"ಯನ್ನು ಆರಂಭಿಸಿತು. ಅದರ ಪ್ರಾಯೋಜಕರಾದ ಸಂಸ್ಥಾನದ ಖಜಾಂಚಿ ಶ್ರೀ ಬಿ.ಎಸ್. ವಾಗೀಶ್ ಪ್ರಸಾದ್ ಅವರು ತಮ್ಮ ತಂದೆ ದಿ. ಶ್ರೀ ಬಿ.ಎಸ್. ಶಿವಪ್ಪಶೆಟ್ಟಿ ಮತ್ತು ತಾಯಿ ಶ್ರೀಮತಿ ಕಮಲಮ್ಮ (ಈಗ ಶಿವೈಕ್ಯರಾಗಿದ್ದಾರೆ)ನವರ ಹೆಸರಿನಲ್ಲಿ ಪ್ರಶಸ್ತಿಯನ್ನು ಆರಂಭಿಸಿದರು. 2013ರಿಂದ ಸಂಸ್ಥಾನವು 'ಪಂಚಾಚಾರ್ಯ ಶ್ರೀ' ಪ್ರಶಸ್ತಿಯನ್ನು ಸಂಸ್ಥಾನದ ಆಡಳಿತ ಮಂಡಲಿಯಲ್ಲಿ ಪೋಷಕ ಮಂಡಲಿಯ ಸದಸ್ಯೆಯಾದ ಶ್ರೀಮತಿ ಶಾಂತ ವಿ. ಗೌಡ ಅವರು ತಮ್ಮ ಪತಿ ದಿ. ಬಿ.ಆರ್.ವಿ. ಗೌಡ್ (ಪ್ರಥಮ ಅಧ್ಯಕ್ಷರು) ಸ್ಮರಣಾರ್ಥ ಈ ಪ್ರಶಸ್ತಿಯನ್ನು ಕೊಡಲಾರಂಭಿಸಿದ್ದಾರೆ. ಈ ವೀರಶೈವ ಅನುಸಂಧಾನ ಸಂಸ್ಥಾನದಲ್ಲಿ 335 ಆಜೀವ ಸದಸ್ಯರಿದ್ದಾರೆ.

ಶೈವ ಭಾರತಿ ಶೋಧ ಪ್ರತಿಷ್ಠಾನ–ಸಂಸ್ಥಾಪಕರು–ಜಗದ್ಗುರುಗಳು

ಶೈವ ಭಾರತಿ ಶೋಧದ ಹುಟ್ಟು–ಬೆಳವಣಿಗೆ

ಕಾಶೀ ಮಹಾ ಪೀಠಕ್ಕೆ 84ನೇ ಜಗದ್ಗುರುಗಳಾಗಿದ್ದ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ಬಹುಭಾಷಾ ವಿಶಾರದರೂ, ಬಹುಲಿಪಿಗಳ ತಜ್ಞರೂ ಆಗಿದ್ದರು. ಪೀಠದ ಜಗದ್ಗುರುಗಳಾಗುವ ಮೊದಲು ಇವರು ಶ್ರೀ ಚಿದರೇಮಠ ವೀರಭದ್ರ ಶರ್ಮರೆಂದೇ ಪ್ರಖ್ಯಾತರಾಗಿದ್ದರು. ಇವರು ಕಾಶೀ ಜಂಗಮವಾಡಿ ಮಠದಲ್ಲಿ ವಿದ್ಯಾರ್ಥಿಯಾಗಿ ಸುಮಾರು 10–11 ವರ್ಷಗಳ ಕಾಲ ಇದ್ದರು (1931ರಿಂದ 1935). 1935ರಲ್ಲಿ ಮತ್ತೆ ಹೈದರಾಬಾದ್‌ನ ಸಿಕಂದರಾಬಾದ್‌ಗೆ ಹಿಂತಿರುಗಿದಾಗ ಅಲ್ಲಿ ಮಠದ ನಾಗಯ್ಯ ಎಂಬವರು ಸಂಸ್ಕೃತ–ವೇದ ವ್ಯಾಸಂಗ ಶಾಲೆಯನ್ನು ತೆರೆಯಲು ತಮ್ಮ ಒಂದು ಮನೆಯನ್ನೇ ಕೊಟ್ಟರು. ವೀರಭದ್ರ ಶರ್ಮರು ಅಲ್ಲೊಂದು ಗುರುಕುಲವನ್ನು ಸ್ಥಾಪಿಸಿ ಅದೇ ಭವನದಲ್ಲಿ ಶೈವಭಾರತೀ ಭವನ ಎಂಬ ಒಂದು ಗ್ರಂಥಾಲಯವನ್ನು ಸ್ಥಾಪಿಸಿ ತಮ್ಮ ಅಧ್ಯಯನದ ಕಾಲದಲ್ಲಿ ಸಂಗ್ರಹಿಸಿದ ತಾಡೋಲೆ ಮತ್ತು ಗ್ರಂಥಗಳ ಒಂದು ಸಂಗ್ರಹವೇ ಅಲ್ಲಿನ ಗ್ರಂಥಾಲಯದಲ್ಲಿತ್ತು. ಇಲ್ಲಿ ಎಲ್ಲಾ ಭಾಷೆ ಮತ್ತು ಎಲ್ಲಾ ವಿಷಯಗಳ ಸಹಸ್ರಾರು ಗ್ರಂಥಗಳನ್ನು ಸಂಗ್ರಹಿಸಿಡಲಾಗಿತ್ತು.

ವೀರಭದ್ರ ಶರ್ಮರು ಶಿವನ ಸಂಬಂಧ ಸಾಹಿತ್ಯ ಗ್ರಂಥಗಳನ್ನು ಕಲೆಹಾಕುತ್ತಿದ್ದರು. ಹಾಗೂ ತೆಲುಗು ಭಾಷೆಯಲ್ಲಿ ತ್ರೈಮಾಸಿಕ ಪತ್ರಿಕೆ 'ವಿಭೂತಿ'ಯನ್ನು ಆರಂಭಿಸಿ ಅದರಲ್ಲಿ ವಿದ್ವತ್‌ಪೂರ್ಣ ಲೇಖನಗಳನ್ನು ಬರೆದಿದ್ದಾರೆ.

1946ರಲ್ಲಿ ಶ್ರೀ ವೀರಭದ್ರ ಶರ್ಮರು ಕಾಶೀ ಜ್ಞಾನಪೀಠದ ಜಗದ್ಗುರುಗಳಾದ ಮೇಲೆ ಕಾಶೀ ಮಹಾಪೀಠದಲ್ಲಿ ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಬೇಕೆಂಬ ಮುಂದಾಲೋಚನೆಯಿಂದ ಅದಕ್ಕೆ ಪೂರಕವಾಗಿ 1 1/2 ವರ್ಷಗಳಲ್ಲಿ ಗ್ರಂಥಾಲಯದ ಕಟ್ಟಡ ನಿರ್ಮಾಣಮಾಡಿ 'ಜ್ಞಾನ ಮಂದಿರ ಗ್ರಂಥಾಲಯ'ವೆಂದು ಹೆಸರಿಟ್ಟು ತಾವು ಸಂಗ್ರಹಿಸಿದ್ದ ಎಲ್ಲಾ ಗ್ರಂಥಗಳನ್ನು ರೈಲ್ವೆ ವ್ಯಾಗನ್‌ನಲ್ಲಿ ಸಿಕಂದರಾಬಾದ್‌ನಿಂದ ಕಾಶೀಪೀಠಕ್ಕೆ ತರಿಸಿಕೊಂಡು ಎಲ್ಲಾ ಗ್ರಂಥಗಳನ್ನು ವ್ಯವಸ್ಥಿತವಾಗಿ ಜೋಡಿಸಿದರು. ಹೀಗೆ ಕಾಶೀಪೀಠದಲ್ಲೊಂದು ಗ್ರಂಥಾಲಯ ಸ್ಥಾಪನೆಗೊಂಡಿತು.

ಕಾಶೀ ಜಂಗಮವಾಡಿ ಮಠದಲ್ಲಿ ಈಗಾಗಲೇ ಶಿವತತ್ತ್ವ ಗ್ರಂಥಮಾಲೆ ಎಂಬ ಹೆಸರಿನ ಒಂದು ಗ್ರಂಥಮಾಲೆ ಸ್ಥಾಪಿಸಲಾಗಿತ್ತು. ಇದನ್ನೇ ಶಿವಧರ್ಮ ಗ್ರಂಥಮಾಲಾ ಎಂದು ಹೆಸರು ಬದಲಾವಣೆ ಮಾಡಿ ಅನೇಕ ಗ್ರಂಥಗಳನ್ನು ವೀರಭದ್ರ ಜಗದ್ಗುರುಗಳು ಹೊರತಂದರು.

ವೀರಭದ್ರ ಜಗದ್ಗುರುಗಳಿಗೆ ಕಾಶೀ ಪೀಠದಲ್ಲೊಂದು ಸಂಶೋಧನ ಕೇಂದ್ರ ತೆರೆಯಬೇಕೆಂಬ ಸಂಕಲ್ಪ ಮಾಡಿದ್ದರು. ಅವರ ಜೀವಿತಾವಧಿಯಲ್ಲಿ ಅದು ಈಡೇರಲಿಲ್ಲ.


ಕಾಶೀ ಪೀಠದ ಗುರುಕುಲದ ಕಾರ್ಯದರ್ಶಿಯಾಗಿದ್ದ ಗುಳೇದಗುಡ್ಡದ ಅಮರೇಶ್ವರ ಮಠಾಧ್ಯಕ್ಷರಾದ ಷ॥ಬ್ರ॥ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಪೀಠದ ಗ್ರಂಥಾಲಯದಲ್ಲಿ ಗ್ರಂಥವನ್ನು ಹುಡುಕುತ್ತಿರುವಾಗಿನ ದೃಶ್ಯ.

ಎಂ.ಎ. ಆದ ವಿದ್ಯಾರ್ಥಿಗಳು ಇಲ್ಲೇ ಸಂಶೋಧನೆ ಮಾಡಲಿ ಎಂಬ ಉದ್ದೇಶದಿಂದ ಶೈವ ಭಾರತಿ ಶೋಧ ಪ್ರತಿಷ್ಠಾನವನ್ನು ಇಂದಿನ ಕಾಶೀ ಜಗದ್ಗುರುಗಳು ಆರಂಭಿಸಿದರು. ಜಗದ್ಗುರುಗಳಿಗೆ 'ವೀರಶೈವ ಶೋಧ ಪ್ರತಿಷ್ಠಾನ' ಎಂದು ಹೆಸರಿಡಬೇಕೆಂದು ಆಲೋಚಿಸಿ ಶ್ರೀಶೈಲ ಜಗದ್ಗುರುಗಳೊಡನೆ ವಿಷಯವನ್ನು ತಿಳಿಸಿದಾಗ ಅವರು ವೀರಭದ್ರ ಜಗದ್ಗುರುಗಳು ವಿಶಾಲ ಅರ್ಥದಿಂದ ಶಿವಧರ್ಮ ಗ್ರಂಥಮಾಲಾ ಎಂದು ಹೆಸರಿಸಿರುವುದನ್ನು ವೀರಶೈವ ಎಂದು ಹೆಸರಿಸಿದ್ದಕ್ಕೆ ಆ ವಿಶಾಲ ಅರ್ಥವನ್ನು ಕುಬ್ಜಗೊಳಿಸಿದಂತಾಗುತ್ತದೆ. ಶೈವ ಎಂದೇ ಇರಲಿ ಎಂದು ಸಲಹೆ ಕೊಟ್ಟರು. ವೀರಭದ್ರ ಜಗದ್ಗುರುಗಳ ಸಂಕಲ್ಪಕ್ಕೆ ಮೂರ್ತ ರೂಪ ಕೊಟ್ಟ "ಶೈವಭಾರತಿ ಶೋಧ ಪ್ರತಿಷ್ಠಾನ"ವನ್ನು ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಆರಂಭಿಸಿದರು. ಇದೊಂದು ಸಂಶೋಧನಾ ಸಂಸ್ಥೆಯಾಗಿದ್ದು (A Research Centre) ಹೊಸದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದಿಂದ ಮಾನ್ಯತೆ ಪಡೆದುಕೊಂಡಿದೆ. ಪ್ರಾಚೀನ ಶೈವಾಗಮಗಳ ಮೇಲೆ ಸಂಶೋಧನೆ ಮಾಡಬಯಸುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಇಲ್ಲಿ ಅನುಕೂಲಗಳನ್ನು ಒದಗಿಸಲಾಗಿದೆ. ಶಿಷ್ಯವೇತನದ ವ್ಯವಸ್ಥೆಯನ್ನು ಜಗದ್ಗುರುಗಳು ಮಾಡಿದ್ದಾರೆ.

ಹೀಗೆ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಶಾಖೆಯಾಗಿ ಈ ಶೈವಭಾರತಿ ಶೋಧ ಪ್ರತಿಷ್ಠಾನವು ಅಪ್ರಕಟಿತ ಶಿವಾಗಮಗಳನ್ನು ಪ್ರಕಟಿಸಿದೆ. ಅಲ್ಲದೆ ಇತರ ಗ್ರಂಥಗಳನ್ನು ಮುದ್ರಿಸಿ ಶಿವರಾತ್ರಿಯ ಹಿಂದಿನ ದಿನ ನಡೆಸಲಾಗುವ ವಿದ್ವತ್ ಸಭೆಯಲ್ಲಿ ಗ್ರಂಥಗಳ ಬಿಡುಗಡೆ ಮಾಡುತ್ತಾ ಇಲ್ಲಿಯವರೆಗೆ ಸುಮಾರು 64 ಗ್ರಂಥಗಳ ಬಿಡುಗಡೆ ಮಾಡಿದ ಹೆಗ್ಗಳಿಕೆ ಜಗದ್ಗುರುಗಳದ್ದಾಗಿದೆ.

ಶೈವಭಾರತಿ ಭವನ ಮತ್ತು ಶೈವಭಾರತಿ ಶೋಧ ಪ್ರತಿಷ್ಠಾನವು ಇಲ್ಲಿಯವರೆಗೆ ಪ್ರಕಟಿಸಿರುವ ಒಟ್ಟು ಗ್ರಂಥಗಳು ಹೀಗಿವೆ:

ಗ್ರಂಥಗಳ ಹೆಸರು, ಲೇಖಕರು/ಸಂಪಾದಕರು

1. ಲಿಂಗಧಾರಣ ಚಂದ್ರಿಕಾ (ಸಂಸ್ಕೃತ, ಹಿಂದಿ), ನಂದಿಕೇಶ್ವರ ಶಿವಾಚಾರ್ಯ – 2. ಬ್ರಹ್ಮಸೂತ್ರ ಶ್ರೀಕಂಠ ಭಾಷ್ಯಂ (ಸಂ.ಹಿಂ) ಸಂ.ಪಂ. ವ್ರಜವಲ್ಲಭ ದ್ವಿವೇದಿ, 3. ವೀರಶೈವ ಅಷ್ಟಾವರಣ ವಿಜ್ಞಾನ್ (ಸಂ. ಮರಾಠಿ), ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಜೀ – 4. ಸಿದ್ಧಾಂತ ಶಿಖಾಮಣಿ ಸಮೀಕ್ಷಾ (ಸಂಸ್ಕೃತ), ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಜೀ – 5. ನಿಗಮಾಗಮ ಸಂಸ್ಕೃತ (ಸಂಸ್ಕೃತ-ಹಿಂದಿ), ಪಂ. ವ್ರಜವಲ್ಲಭ ದ್ವಿವೇದಿ – 6. ಸೂಕ್ಷ್ಮಾಗಮ (ಸಂಸ್ಕೃತ-ಹಿಂದಿ) ಸಂ.ಪಂ. ವ್ರಜವಲ್ಲಭ ದ್ವಿವೇದಿ – 7. ಚಂದ್ರಜ್ಞಾನಾಗಮ (ಸಂಸ್ಕೃತ-ಹಿಂದಿ), ಸಂ.ಪಂ. ವ್ರಜವಲ್ಲಭ ದ್ವಿವೇದಿ – 8. ಮುಕುಟಾಗಮ (ಸಂಸ್ಕೃತ-ಹಿಂದಿ), ಸಂ.ಪಂ. ವ್ರಜವಲ್ಲಭ ದ್ವಿವೇದಿ, 9. ಕಾರಣಾಗಮ್ (ಸಂಸ್ಕೃತ-ಹಿಂದಿ), ಸಂ.ಪಂ. ರಾಮಚಂದ್ರ ಪಾಂಡೇಯ್ – 10. ನಿಗಮಾಗಮೀಯ ಸಂಸ್ಕೃತ ದರ್ಶನಂ, ಸಂ.ಪಂ. ವ್ರಜವಲ್ಲಭ ದ್ವಿವೇದಿ – 11. ಪಾರಮೇಶ್ವರಾಗಮ (ಸಂಸ್ಕೃತ-ಹಿಂದಿ), ಸಂ.ಪಂ. ರಾಮಚಂದ್ರ ಪಾಂಡೇಯ್ – 12. ಚಂದ್ರಜ್ಞಾನಾಗಮ್ (ಸಂ-ಇಂಗ್ಲಿಷ್), ಅನುವಾದ

ಡಾ॥ ರಾಮಘೋಷ್ – 13. ಈಸವಾಸ್ಯೋಪನಿಷದ್ (ಸಂ–ಹಿಂ), ಸಂ.ಪಂ. ಜಗನ್ನಾಥ್ ಶಾಸ್ತ್ರೀ ತೈಲಂಗ್ – 14. ಕೆಲೋಪನಿಷದ್ (ಸಂ–ಹಿಂ), ಸಂ.ಪಂ. ಜಗನ್ನಾಥ್ ಶಾಸ್ತ್ರೀ ತೈಲಂಗ್ – 15. ಸಿದ್ಧಾಂತ ಪ್ರಕಾಶಿಕ (ಸಂ–ಹಿಂ), ಸಂ.ಪಂ. ವ್ರಜವಲ್ಲಭ ದ್ವಿವೇದಿ – 16. ಮುಕುಟಾಗಮ, ಅನುವಾದ ಡಾ॥ ರಾಮಘೋಷ್ – 17. ಶಕ್ತಿವಿಶಿಷ್ಟಾದ್ವೈತ ತತ್ತ್ವತ್ರಯ ವಿಮರ್ಶೆ (ಸಂ), ಡಾ॥ ಚಂದ್ರಶೇಖರ್ ಶಿವಾಚಾರ್ಯ – 18. ಅನುಭವ ಸೂತ್ರಂ (ಸಂ–ಹಿಂ), ಸಂ.ಪಂ. ಗಜಾನನ ಶಾಸ್ತ್ರೀಮುಸಲ್‌ಗಾಂವಕರ್ – 19. ಸಿದ್ಧಾಂತ ಶಿಖೋಪನಿಷದ್ (ಸಂ–ಹಿಂ), ಸಂ.ಪಂ., ಜಗನ್ನಾಥ್ ಶಾಸ್ತ್ರೀ ತೈಲಂಗ್ – 20. ಬ್ರಹ್ಮಸೂತ್ರ ಶಾಕ್ತವೃತ್ತಿ (ಸಂ–ಹಿಂ), ಸಂ.ಪ. ಕೇದಾರನಾಥ್ ತ್ರಿಪಾಠೀ – 21. ಸಿದ್ಧಾಂತ್ ಸಾರಾವಲಿ (ಸಂ.ಹಿಂ) ಸಂ.ಪಂ. ವ್ರಜವಲ್ಲಭ ದ್ವಿವೇದಿ – 22. ಶ್ರೀಗುರುಗೀತಾ (ಸಂ.ಹಿಂ), ಸಂ.ಪಂ. ವ್ರಜವಲ್ಲಭ ದ್ವಿವೇದಿ – 23. ಶಿವಾದ್ವೈತ್‌ದರ್ಪಣ್ (ಸಂ.ಹಿಂ) ಶಿವಾನುಭವ್ಶಿವಾಚಾರ್ಯ – 24. ಸಿದ್ಧಾಂತ ಶಿಖಾಮಣಿ ಮೀಮಾಂಸ (ಸಂ.ಹಿಂ), ಸಂ.ಪಂ. ವ್ರಜವಲ್ಲಭ ದ್ವಿವೇದಿ – 25. ದೇವಿಕಾಲೋತ್ತರಾಗಮ್ (ಸಂ.ಹಿಂ), ಸಂ.ಪಂ. ವ್ರಜವಲ್ಲಭ ದ್ವಿವೇದಿ – 26. ಪಾರಮೇಶ್ವರಾಗಮ, ಅನುವಾದ ಡಾ॥ ರಾಮಘೋಷ್ – 27. ಸಂಸ್ಕೃತ ವಾಙ್ಮಯ್ ಮೇ ವಿಶೇಷ ಸಾಹಿತ್ಯ (ಸಂ.ಹಿಂ), ಎಸ್. ಅಕ್ಕೂರಮಠ್ ಸಂ.ಪಂ. ವ್ರಜವಲ್ಲಭ ದ್ವಿವೇದಿ – 28. ಋಗ್ವೇದಸ್ಯ ಪ್ರಥಮ ಮಂಡಲಸ್ಯ ಸಾಯಣವೆಂಕಟಮಾಧವ್, ಭಾಷ್ಯಯೋಸ್ತುಲನಾತ್ಮಕ ಮಧ್ಯಯನಮ್ (ಸಂ.ಹಿಂ), ಡಾ. ಪ್ರಮೋದಿನಿ ಪಂಡಾ – 29. ತಂತ್ರಗಾಮೀಯ್ ಧರ್ಮ್–ದರ್ಶನ್ (2 ಭಾಗ) (ಸಂ.ಹಿಂ), ಪಂ. ವ್ರಜವಲ್ಲಭ ದ್ವಿವೇದಿ – 30. ಸಾಮ್ಯಯೋಗಮೀಮಾಂಸ್ (ಸಂ.ಹಿಂ) ಮುಕುಟ ಬಿಹಾರೀಲಾಲ್ – 31. ಭಾರತೀಯ ಸಂಸ್ಕೃತಿ ಸಮಗ್ರ ಸ್ವರೂಪ್ (ಹಿಂ), ಪಂ. ವ್ರಜವಲ್ಲಭ ದ್ವಿವೇದಿ – 32. ಸಂಸ್ಕೃತ್ ವಾಙ್ಮಯ್ ವಲ್ಲರೀ (ಸಂ.ಹಿಂ) – ಡಾ. ಗಂಗಾಧರ್ ಪಂಡಾ ಮತ್ತು ಡಾ. ಪ್ರಮೋದಿನಿ ಪಂಡಾ – 33. ಮುಂಡಕೋಪನಿಷದ್ (ಸಂ.ಹಿಂ), ಸಂ.ಪಂ. ಜಗನ್ನಾಥ್ ಶಾಸ್ತ್ರೀ ತೈಲಂಗ್ – 34. ವಾತುಲ್ ಶುದ್ಧಾಖ್ಯಾ ತಂತ್ರಮ್ (ಸಂ.ಹಿಂ), ಸಂ.ಪಂ. ವ್ರಜವಲ್ಲಭ ದ್ವಿವೇದಿ – 35. Transmigration (ಜನ್ಮಾಂತರವಾದ) (English), ಪಂ. ಕೇದಾರ್‌ನಾಥ್ ತ್ರಿಪಾಠಿ – 36. ಸಾಂಸ್ಕೃತಿಕ ರಾಷ್ಟ್ರವಾದ್ (ಹಿಂ), ಪಂ. ವ್ರಜವಲ್ಲಭ ದ್ವಿವೇದಿ – 37. ಪಾರಮೇಶ್ವರಾಗಮ್ (ತೆಲುಗು), ಡಾ.ಕೆ. ಪ್ರತಾಪ್ – 38. ಪಂಚವಿಂಶತಿಲೀಲಾಶತಕಮ್ (ಸಂ.ಹಿಂ) – ಪಂ. ವ್ರಜವಲ್ಲಭ ದ್ವಿವೇದಿ – 39. ಸಿದ್ಧಾಂತ ಪ್ರಕಾಶಿಕ (ಇಂಗ್ಲಿಷ್), ಅನುವಾದ ಟಿ. ಗಣೇಶನ್ – 40. ಪಂಚವರ್ಣ ಸೂತ್ರಮಹಾಭಾಷ್ಯಂ (ಸಂ.ಹಿಂ) – ಪಂ. ವ್ರಜವಲ್ಲಭ ದ್ವಿವೇದಿ – 41. ತಂತ್ರಾಗಮ್ ಸಾರ–ಸರ್ವಸ್ವ (ಹಿಂ), ಪಂ. ವ್ರಜವಲ್ಲಭ ದ್ವಿವೇದಿ – 42. ತಂತ್ರಾಗಮ್ ರೋಪನಿಷದ್ (ಸಂ.ಹಿಂ) – ಪಂ. ಜಗನ್ನಾಥ್ ಶಾಸ್ತ್ರೀ ತೈಲಂಗ್ – 43. ಸಿದ್ಧಾಂತ ಸಿಖಾಮಣಿ (ಹಿಂ. ವ್ಯಾಖ್ಯಾಯ್) – ಪಂ. ರಾಧೇಶ್ಯಾಂ ಚತುರ್ವೇದಿ – 44. ಜನ್ಮ ಹಾ ಅಖೇರಚ (ಮರಾಠಿ ಗ್ರಂಥ್), ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಜೀ – 45. ವೀರಶೈವ ಸಂತಕವೀ ಬಸವಲಿಂಗ : ಚರಿತ್ರಾವ ವಾಙ್ಮಯ್ (ಮರಾಠಿ) – 46. ಲಕ್ಷ್ಮಣ್ ಮಹಾರಾಜ್ : ವ್ಯಕ್ತಿ ಆಣಿ ವಾಜೇಯ್ (ಮರಾಠಿ), ಡಾ.ಭೀ. ಶಿ. ಸ್ವಾಮಿ – 47. ಶ್ರೀ ಮನ್ಮಥ್ ಸಿವಲಿಂಗಕೃತ ಪರಮರಹಸ್ಯ (ಮರಾಠಿ), ಡಾ.ಶೇ.ದೆ. ಪಸಾರ್‌ಕರ್, 48. ವೀರಶೈವಾಂಚೆ ಮರಾಠಿ–ಹಿಂದೀ ವಾಜೇಯ್ ಏಕ್ ಅಭ್ಯಾಸ್ (ಮರಾಠಿ), ಡಾ. ಶ್ಯಾಮ್ ಘೋಣ್‌ಸೆ – 49. ಮನ್ಮಥಸ್ವಾಮೀ : ವ್ಯಕ್ತಿ ವ ವಜೇಯ್ (ಮರಾಠಿ), ಡಾ. ಚಂದ್ರಕಾಂತ್ ದೇರೂಲ್‌ಗಾವ್‌ಕರ್– 50. ವೀರಶೈವ ಮರಾಠೀ ಅಭಂಗ ಕವಿತಾ : ಏಕ್ ಚಿಕಿತ್ಸಕ್ ಅಭ್ಯಾಸ್ (ಮರಾಠಿ), ಡಾ. ಶೋಭಾ ಕರಾಲೆ – 51. ಮರಾಠೀ ಕಾರ್ಯಾತೀಲ್ ಶಿವಾದ್ವೈತ್–ದರ್ಶನ್ (ಮರಾಠಿ), ಡಾ। ಶಿವಶಂಕರ್ ಉಪಾಸೆ – 52. ವಿದರ್ಬಾತೀಲ್ ವೀರಶೈವ ಸಂಪ್ರದಾಯ್ : ಗ್ರಂಥ್‌ಕಾರ್ ವವಾಜೇಯ್ (ಮರಾಠಿ), ಡಾ. ಅಶೋಕ್ ಮೆನಕುದಲೆ – 53. ವೀರಶೈವ ಸಂತಕವೀ ಶಿವದಾಸ್ : ಏಕ್ ಅಭ್ಯಾಸ್ (ಮರಾಠಿ) – ಡಾ. ವೈಜನಾಥ್ ಘಾಸ್ಕೆ, 54. ಸಿದ್ಧಾಂತ ಶಿಖಾಮಣಿ (English), Dr. M. ShivakumarSwamy - 55. ವೀರಶೈವ ಪಂಚಪೀಠೆ (ಮರಾಠಿ), ಡಾ. ಚಂದ್ರಶೇಖರ್ ಕಪಾಲೆ, 56. ವೀರಶೈವ ಸಂತವಾಣಿ (ಮರಾಠಿ), ಮಗಾಈ/ಹನಗಂಡೀ/ಪಸಾರ್‌ಕರ್ – 57. ಅಷ್ಟಾವರಣ್ (ಮರಾಠಿ), ಡಾ.ಶೆ.ದೆ. ಪಸಾರ್‌ಕರ್ – 58. ವೀರಶೈವ ದರ್ಮಾಚ ಸ್ಥೂಲ ಇತಿಹಾಸ (ಮರಾಠಿ), ಡಾ. ಚಂದ್ರಶೇಖರ್ ಕಪಾಲೆ – 59. ಪಂಚಾಚಾರ್ (ಮರಾಠಿ), ಪಂ. ಶಿವಪ್ಪಖಾಕೆ – 60. ವೀರಶೈವಾಂಚೀ ಸ್ಪುಟ ಕವಿತಾ (ಮರಾಠಿ), ಶಾಂತಿತೀರ್ಥ್‌ಸ್ವಾಮೀ – 61. ಮನ್ಮಥಚರಿತಾಮೃತ (ಮರಾಠಿ), ಡಾ.ಶೆ.ದೆ. ಪಸಾರ್‌ಕರ್ – 62. ಸಂಕ್ಷಿಪ್ತ ಶಿವಪೂಜಾವಿಧಿ (ಮರಾಠಿ), ಡಾ. ಕಾಶೀ ಜಗದ್ಗುರು ಸ್ವಾಮೀಜಿ – 63. ಶಿವಪಾಠ್ (ಮರಾಠಿ), ಡಾ. ಕಾಶೀ ಜಗದ್ಗುರು ಸ್ವಾಮೀಜಿ, 64. ವೀರಶೈವ ರತ್ನ (ಮರಾಠಿ), ಪಂ. ಕಾಶೀನಾಥ ಶಾಸ್ತ್ರೀ – 65. ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ (ಕನ್ನಡ), ಡಾ. ಕಾಶೀ ಜಗದ್ಗುರು ಸ್ವಾಮೀಜಿ

ಗದಗ ನಗರದಲ್ಲಿ ವಾರಾಣಸಿ ಜಂಗಮವಾಡಿ ಮಠದ ಶಾಖೆ
ಶ್ರೀ ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ

4–5–2000 : ಕಾಶೀ ಜಗದ್ಗುರುಗಳು ವಾರಾಣಸಿಯಲ್ಲಿ ಆರಂಭಿಸಿರುವ ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಒಂದು ಶಾಖೆಯನ್ನು 2001ರಲ್ಲಿ ಗದಗ್‌ನಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ವೇದ–ಆಗಮ–ಸಂಸ್ಕೃತ–ಯೋಗ ಪಾಠಶಾಲೆ ಕಟ್ಟಡ ಉದ್ಘಾಟನೆಗೊಂಡಿತು. ಇದರ ಅಧ್ಯಕ್ಷರಾಗಿ ಕಾಶೀ ಜಗದ್ಗುರುಗಳೇ ಇರುತ್ತಾರೆ. ಈ ಶಾಲೆಯನ್ನು ಆರಂಭಿಸಿದ ಮುಖ್ಯ ಉದ್ದೇಶ ಮಕ್ಕಳಿಗೆ ಧರ್ಮ ಸಂಸ್ಕಾರವನ್ನು ಕೊಡುವುದೇ ಆಗಿದೆ. ಜಗದ್ಗುರುಗಳು ಈ ಶಾಲೆಗೆ ಧನಸಹಾಯ ಮಾಡುವ ದಾನಿಗಳಿಗೆ 40ಜಿ ಆದಾಯ ತೆರಿಗೆ ಸಿಗುವ ವ್ಯವಸ್ಥೆಯನ್ನು ಮಾಡಿದ್ದಾರೆ.

ಇಂದು ಉದ್ಘಾಟನೆಗೊಂಡಿರುವ ಶಾಲಾ ಕಟ್ಟಡವು ಗದಗ್ ನಗರದ ಸಭಾಪುರ ರಸ್ತೆಯಲ್ಲಿರುವ ಅಬ್ಬಿಗೇರಿಯವರ ಲೇಔಟ್‌ನಲ್ಲಿ 100X100 ಚದರಡಿ ಜಾಗದಲ್ಲಿ ಬೃಹತ್ ಕಟ್ಟಡ ಕಟ್ಟಲಾಗಿದೆ. ಕೆಳಗೆ ಅಡುಗೆ ಮನೆ, ಊಟದ ಹಾಲ್, ಆಫೀಸ್ ರೂಮು, ಶ್ರೀ ಜಗದ್ಗುರುಗಳ

ವಾಸ್ತವ್ಯ ಕೊಠಡಿ, 1ನೇ ಮಹಡಿಯಲ್ಲಿ ವಿದ್ಯಾರ್ಥಿಗಳಿಗಾಗಿ 6 ಕೊಠಡಿಗಳು, 1 ಶಾಲಾ ಕೊಠಡಿ ಇದೆ. 2ನೇ ಮಹಡಿಯಲ್ಲಿ 35X85 ಅಳತೆಯ ದೊಡ್ಡ ಸಭಾಂಗಣ ಇದ್ದು ಇಲ್ಲಿ ಉಪನ್ಯಾಸ, ಯೋಗ, ಪಾಠಶಾಲೆ ನಡೆಸಲು ವ್ಯವಸ್ಥೆ ಮಾಡಲಾಗಿದೆ. ಶಾಖೆ ಆರಂಭವಾಗಿ ಎರಡೇ ವರ್ಷಗಳಲ್ಲಿ ಇಷ್ಟೊಂದು ಬೃಹತ್ ಕಟ್ಟಡ ತಲೆ ಎತ್ತಿ ನಿಂತಿದ್ದು ನಿಜಕ್ಕೂ ಅಚ್ಚರಿಯ ಸಂಗತಿ.

ಆರಂಭ ದಿನಗಳಲ್ಲಿ 25 ಬಡ ಜಂಗಮ ಮಕ್ಕಳಿಗೆ ಉಚಿತವಾಗಿ ಊಟ, ವಸತಿ ಸೌಕರ್ಯ ಮಾಡಲಾಗಿದೆ. ದಾನಿಗಳಲ್ಲಿ ಯಾರಾದರೂ 1 ಲಕ್ಷ ಅಥವಾ 50 ಸಾವಿರ ರೂ ಠೇವಣಿ ಇಟ್ಟು ಅದರ ಬಡ್ಡಿಯಿಂದ ಸಂಸ್ಥೆ ನಡೆಯಬೇಕೆಂದು ಜಗದ್ಗುರುಗಳವರು ಆದೇಶ ಮಾಡಿದ್ದಾರೆ. ಈ ಕಟ್ಟಡ ಕಟ್ಟಿದ ಇಂಜಿನಿಯರ್ ಉಚಿತ ಸೇವೆ ಸಲ್ಲಿಸಿರುವುದು ಉಲ್ಲೇಖಾರ್ಹ.

ಕಾಶೀ ಜಗದ್ಗುರುಗಳ ಪ್ರವಚನದ ಮಹಾಮಂಗಲೋತ್ಸವ ವೀರಶೈವ ಪರಂಪರೆ ಮುಂದುವರಿಸಲು ಗದಗದಲ್ಲಿ ಮಠ ಸ್ಥಾಪನೆಗೆ ಕಾಶೀ ಜಗದ್ಗುರುಗಳ ಸಂಕಲ್ಪ

ಗದಗ-9 ನಗರದಲ್ಲಿ ಜಗದ್ಗುರು ಪಂಚಾಚಾರ್ಯ ಪೀಠಗಳ ಶುಭಾಶೀರ್ವಾದ ಸಂಕಲ್ಪದಿಂದ ಗದುಗಿನ ಭಕ್ತರ ಪರಮಾಕಾಂಕ್ಷೆಯ ಮೇರೆಗೆ ಜ.ಪಂಚಾಚಾರ್ಯ ಸಂಸ್ಕೃತ ವೇದ ಪಾಠಶಾಲೆಯನ್ನು ವಿಸ್ತರಿಸಿ ತಮ್ಮ ಪೀಠದಿಂದ ಮಠವೊಂದನ್ನು ಸ್ಥಾಪಿಸಿ ಈ ಭಾಗದಲ್ಲಿ ವೀರಶೈವ ಪರಂಪರೆ ಮುಂದುವರೆಸಲು ಒಬ್ಬ ಶ್ರೀಗಳನ್ನು ಪಟ್ಟಾಭಿಷಿಕ್ತರನ್ನಾಗಿಸಲಾಗುವದೆಂದು ಶ್ರೀಮತ್ ಕಾಶೀಜ್ಞಾನ ಸಿಂಹಾಸನಾಧೀಶ್ವರ ಶ್ರೀ ಜ.ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ಶುಭೇಚ್ಛೆಯನ್ನು ವ್ಯಕ್ತಪಡಿಸಿದರು.

ಜ. ಪಂಚಾಚಾರ್ಯ ಸೇವಾ ಸಂಘದ ವತಿಯಿಂದ ಗುರು ಪೌರ್ಣಿಮೆ ನಿಮಿತ್ತ ಶ್ರೀ ಭಗವದ್ಗೀತೆ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ 9 ದಿನಗಳಿಂದ ನಡೆದ ಉಪದೇಶಾಮೃತದ ಮಂಗಲೋತ್ಸವದ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳವರು ಮಾತನಾಡುತ್ತಿದ್ದರು.

ಗದುಗಿನಲ್ಲಿ ಗುರು ಪೌರ್ಣಿಮೆಯ ನಿಮಿತ್ತ 5ನೇ ವರ್ಷದಲ್ಲಿ ನಡೆಯುತ್ತಿರುವ ನಮ್ಮ ಪ್ರವಚನಾಮೃತದ ಕಾರ್ಯವನ್ನು ಗದುಗಿನ ಮಹಾಭಕ್ತ ಜನತೆ ಯಶಸ್ವಿಯಾಗಿ ಸಂಘಟಿಸಿರುವುದು ಹರ್ಷವನ್ನು ತಂದಿದೆ. 'ಶ್ರೀ ಭಗವದ್ಗೀತ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥಗಳು' ಎಂಬ ವಿಷಯ ಕುರಿತ ಉಪದೇಶ ವಚನ ಆಲಿಸಲು ಸಾವಿರಾರು ಸಂಖ್ಯೆಯಲ್ಲಿ ಭಕ್ತ ಸಮೂಹ ಸಮಾವೇಶಗೊಂಡಿರುವುದು ಗದುಗಿನ ವೀರಶೈವ ಪಂಚಾಚಾರ್ಯ ಪರಂಪರೆಯ ಸಾಕ್ಷಿಯಾಗಿದೆ. ಭಕ್ತ ಜನ ಸಮೂಹಕ್ಕಾಗಿ ವೀರಶೈವ ದಿವ್ಯ ಮಾರ್ಗ ದರ್ಶನಕ್ಕಾಗಿ ನಗರಕ್ಕೆ ಮಠದ ಅವಶ್ಯಕತೆಯಿದೆ ಎಂದು ಈ ಭಾಗದ ಆಧ್ಯಾತ್ಮ ಜಿಜ್ಞಾಸುಗಳು, ಸಾತ್ವಿಕರು, ಆಧ್ಯಾತ್ಮದ ಶ್ರೋತೃಗಳಾದ ಶಾಸಕ ಡಿ.ಆರ್. ಪಾಟೀಲರು ಈ ಕಾರ್ಯದಲ್ಲಿ ತಮ್ಮ ಸೇವೆ ಸಲ್ಲಿಸುವ ಇಚ್ಛೆ ವ್ಯಕ್ತಪಡಿಸಿದ್ದನ್ನು ಶ್ರೀಗಳು ಹರ್ಷಚಿತ್ತರಾಗಿ ಸ್ವಾಗತಿಸಿ ತಮ್ಮ ಆಶೀರ್ವಚನಕ್ಕೆ ಮಂಗಳ ಹೇಳಿದರು.

ಧರ್ಮ ಸಂಸ್ಕೃತಿ ಕಾಪಾಡುವ ಬಹುದೊಡ್ಡ ಜವಾಬ್ದಾರಿ ಮಹಿಳೆಯರದು-ಉಜ್ಜಯಿನಿ ಶ್ರೀಗಳು

10-7-2004, ನವೋದಯ



ಗದಗ ನಗರದ ಕೆ.ಎಚ್. ಪಾಟೀಲ ಸಭಾಭವನದಲ್ಲಿ ಜ॥ ಪಂಚಾಚಾರ್ಯ ಸೇವಾ ಸಂಘದಲ್ಲಿ ಗುರು ಪೌರ್ಣಿಮೆ ನಿಮಿತ್ಯ 9 ದಿನಗಳವರೆಗೆ ನಡೆದ ಶ್ರೀ ಭಗವದ್ಗೀತೆ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಕಾರ್ಯಕ್ರಮದ ಮುಕ್ತಾಯ ಸಮಾರಂಭದ ಸಾನ್ನಿಧ್ಯವನ್ನು ಉಜ್ಜಯಿನಿ ಶ್ರೀಗಳು, ಕಾಶೀ ಶ್ರೀಗಳು ವಹಿಸಿದ್ದರು.

ಗದಗ-9 ಭಾರತೀಯ ಸಂಸ್ಕೃತಿ, ಧರ್ಮ ಕಾಪಾಡುವ ಬಹುದೊಡ್ಡ ಜವಾಬ್ದಾರಿ ಮಹಿಳೆಯರದು ಎಂದು ಶ್ರೀಮತ್ ಉಜ್ಜಯಿನಿಯ ಸದ್ಧರ್ಮ ಸಿಂಹಾಸನಾಧೀಶ್ವರ ಜ॥ ಶ್ರೀ ಮರುಳಸಿದ್ಧ ಶಿವಾಚಾರ್ಯ ಭಗವತ್ಪಾದಂಗಳವರು ನುಡಿದರು.

ಅವರು ನಗರದ ಕೆ.ಎಚ್. ಪಾಟೀಲ ಸಭಾ ಭವನದಲ್ಲಿ ಜ॥ ಪಂಚಾಚಾರ್ಯ ಸೇವಾ ಸಂಘದ ಆಶ್ರಯದಲ್ಲಿ ಗುರು ಪೌರ್ಣಿಮೆ ನಿಮಿತ್ಯವಾಗಿ 9 ದಿನಗಳ ಕಾಲ ನಡೆದ ಶ್ರೀ ಭಗವದ್ಗೀತೆ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಪ್ರವಚನದ ಮಂಗಲೋತ್ಸವದ ವಿಶೇಷ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ತಾಯಂದಿರಿಗೆ ಗೌರವ ಸಿಗುವಲ್ಲಿ ಲಕ್ಷ್ಮೀ ವಾಸವಾಗಿರುತ್ತಾಳೆ. ಭಾರತೀಯ ಪರಂಪರೆಯಲ್ಲಿ ಸ್ತ್ರೀಯರಿಗೆ ವಿಶೇಷವಾದ ಗೌರವ ಸ್ಥಾನಮಾನ ನೀಡಲಾಗಿದ್ದು, ನಮ್ಮ ದೇಶ ವಿಶ್ವಕ್ಕೆ ಅನುಕರಣೀಯವಾಗಿದೆ ಎಂದು ನುಡಿದರು.

ಸನಾತನ ಪರಂಪರೆಯ ಉಳಿವಿಗಾಗಿ ಶ್ರೀ ಕಾಶೀ ಪೀಠದ ಶಾಖಾಮಠವನ್ನು ನಗರದಲ್ಲಿ ಪ್ರಾರಂಭಿಸುವ ಕಾಶೀ ಶ್ರೀಗಳ ಕಾರ್ಯ ಶ್ಲಾಘನೀಯ ಎಂದು ನುಡಿದರು.

ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಪ್ರವಚನದ ಕೊನೆಯ ದಿನದ ಕಾರ್ಯಕ್ರಮದಲ್ಲಿ ಕಾಶೀ ಜ॥ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಆಶೀರ್ವಚನ ನೀಡಿ, ರಾಜಕೀಯದಲ್ಲಿ ನೀಡಲಾರದ ಸ್ಥಾನಮಾನವನ್ನು ಸ್ತ್ರೀಯರಿಗೆ ಧರ್ಮ ಕ್ಷೇತ್ರದಲ್ಲಿ ನೀಡುತ್ತಿದ್ದು, ಸ್ತ್ರೀ ಶಕ್ತಿಗೆ ಹೆಚ್ಚಿನ ಶಕ್ತಿ ನೀಡಬೇಕಾದದ್ದು ಸಮಾಜದ ಕಾರ್ಯ. ಕುಟುಂಬದಲ್ಲಿ ಆಚಾರ-ವಿಚಾರ, ಶಿಸ್ತು ಬದ್ಧತೆಯನ್ನು ಮೂಡಿಸುವುದರೊಂದಿಗೆ ಧಾರ್ಮಿಕ ಆಚರಣೆ ಮುಂದುವರೆಸಿಕೊಂಡು ಹೋಗುವಲ್ಲಿ ಸ್ತ್ರೀಯರ ಮೇಲಿನ ಜವಾಬ್ದಾರಿ ಹೆಚ್ಚಿನದು. ನಗರದಲ್ಲಿ ಕಾಶೀ ಶ್ರೀ ಪೀಠದ ಶಾಖಾಮಠವನ್ನು ಪ್ರಾರಂಭಿಸಿ ವೈದಿಕ ಪಾಠಶಾಲೆಯೊಂದಿಗೆ ಹೆಚ್ಚಿನ ವಿದ್ಯಾಭ್ಯಾಸ ನೀಡುವ ಸದುದ್ದೇಶ ಹೊಂದಿರುವುದಾಗಿ ತಿಳಿಸಿದರು.

ಜ್ಞಾನಪೀಠದ ಜ್ಞಾನದಾಸೋಹಿ–
ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

1989ರಲ್ಲಿ ಪಟ್ಟಾಭಿಷೇಕವಾದ ಮೊದಲ ವರ್ಷದಲ್ಲಿ ಬ್ಯಾಡಗಿಯಲ್ಲಿ ಪಂಚಪೀಠಗಳ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವವಿತ್ತು. ಉತ್ಸವ ಸಮಾರಂಭವೆಲ್ಲಾ ಮುಗಿದ ಮೇಲೆ ಕರೆದವರ ಮನೆಗೆ ಪಾದಪೂಜೆಗೆ ಹೋಗುತ್ತಾರೆ. ಪೂಜಾನಂತರ ಉದಾಸಿಮಠ ಅವರ ಮನೆಗೆ ಪಾದಪೂಜೆಗೆ ಹೋದಾಗ 100 ರೂಗಳ ದಕ್ಷಿಣೆ ಕೊಟ್ಟರು. ಕುಳಿತಾಗ ಜಗದ್ಗುರುಗಳು ಅವರ ಮನೆಯ ಯೋಗಕ್ಷೇಮ ವಿಚಾರಿಸಿದಾಗ ತಂದೆ ಅಳಲು ಆರಂಭಿಸಿದರು. ಏಕೆಂದರೆ ಅವರ ಮಗ ಪೇಪರ್ ಮಾರಿ ಹಣಗಳಿಸಿ ಪಿ.ಯು.ಸಿ.ಯಲ್ಲಿ ಪಾಸಾಗಿದ್ದ ಶಿವಕುಮಾರ ಉದಾಸಿಮಠ. ಅವನಿಗೆ ಮೆಡಿಕಲ್‌ನಲ್ಲಿ ಪ್ರವೇಶ ಕೂಡ ಸಿಕ್ಕಿತು. ಆದರೆ ತಂದೆಗೆ ಮೆಡಿಕಲ್ ಓದಿಸುವಷ್ಟು ಆರ್ಥಿಕವಾಗಿ ಸಾಧ್ಯವಿರಲಿಲ್ಲ. ಏಕೆಂದರೆ ಆತ ಕಾರ್ಪೊರೇಶನ್‌ನಲ್ಲಿ ನಿವೃತ್ತ ನೌಕರನಾಗಿದ್ದ, 1000 ಪೆನ್‌ಷನ್. ಅದು ಬಿಟ್ಟರೆ ಬೇರೆ ಆದಾಯವಿರಲಿಲ್ಲ. ಅದರಲ್ಲಿ ಮನೆ ನಡೆಸಬೇಕು. ಮಗನ ಓದಿಗೆ 1000 ಕೊಟ್ಟರೆ ಮನೆಯವರೆಲ್ಲಾ ಉಪವಾಸವಿರಬೇಕು. ಇಂತಹ ದಯನೀಯ ಸ್ಥಿತಿ ಆ ತಂದೆಯದಾಗಿತ್ತು. ನಾನೊಬ್ಬ ಸಾಮಾನ್ಯ ನೌಕರ. ನನಗೆ ಯಾರು ಸಹಾಯ ಮಾಡ್ತಾರೆ ಎಂದು ಗುರುಗಳಲ್ಲಿ ಹೇಳಿಕೊಂಡ. ಜಗದ್ಗುರುಗಳು ಆಗ ತಾನೆ ಪೀಠವನ್ನಲಂಕರಿಸಿದ್ದರು. ಏನು ಮಾಡಬೇಕೆಂದು ಅವರಿಗೂ ತಿಳಿಯಲಿಲ್ಲ. ಆದರೂ ಅವರ ಮನೆವಿಳಾಸ ತೆಗೆದುಕೊಂಡು ಯಾರದಾದರೂ ಫೋನ್ ನಂಬರ್ ಕೊಡಿ ನೋಡೋಣ ಎಂದು ಉದಾಸಿಗೆ ಹೇಳಿ ಅಲ್ಲಿಂದ ಹೊರಟರು. ಗುರುಗಳಿಗೆ ಆಧ್ಯಾತ್ಮಿಕ ಶಿಕ್ಷಣದ ಕಡೆ ಹೆಚ್ಚು ಒಲವಿದ್ದರೂ, ಲೌಕಿಕ ಶಿಕ್ಷಣವು ಜೀವನ ನಡೆಸಲು ಬೇಕು ಎಂದು ಮನಗಂಡಿದ್ದರು. ಹಾಗಾಗಿ ಮೆಡಿಕಲ್, ಇಂಜಿನಿಯರಿಂಗ್ ಓದುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವ ಆಲೋಚನೆ ಹುಟ್ಟಿದ್ದು ಪೂನಾ–ವಾರಣಾಸಿಯ ಪ್ರಯಾಣದ ಸಮಯದಲ್ಲಿ.

ಮುಂದೆ ಪುಣೆಗೆ ಬಂದರು. ಯಾವಾಗ ಗುರುಗಳು ಪುಣೆಗೆ ಬಂದರೂ ಶ್ರೀ ನಿಲಂಕರರಾವ್ ಕಲ್ಯಾಣಿ ಅವರ ಮನೆಯಲ್ಲಿ ಪಾದಪೂಜೆ ಇಟ್ಟುಕೊಳ್ಳುತ್ತಿದ್ದರು. ಈ ಬಾರಿಯೂ ಪೂಜೆ ಆದ ನಂತರ ಗುರುಗಳು ಮಾತನಾಡುತ್ತಾ ನಮ್ಮ ಸಮಾಜದಲ್ಲಿ ಒಂದು ಕಡೆ ಪ್ರತಿಭೆ ಇರುವ ಮಕ್ಕಳಿದ್ದಾರೆ, ಅವನಿಗೆ ಆರ್ಥಿಕ ಬಲವಿಲ್ಲ. ಆರ್ಥಿಕವಾಗಿ ಚೆನ್ನಾಗಿರುವವರ ಮನೆಯಲ್ಲಿ ಮಕ್ಕಳು ಓದುವುದಿಲ್ಲ. ಹೀಗಿರುತ್ತದೆ ಪರಿಸ್ಥಿತಿ ಎಂದರು. ಗುರುಗಳಿಗೆ ಯಾವುದೋ ಚಿಂತೆಯಿದೆ ಎಂದು ದಂಪತಿಗಳಿಗೆ ತಿಳಿಯಿತು. ಅವರ ಮಡದಿ ಬೀದರನವರು ಏನಾಗಿದೆ ಎಂದು ಕೇಳಿದಾಗ ಗುರುಗಳು ಇಳಕಲ್ ವಿಚಾರ ತಿಳಿಸಿದರು. ಅವನಿಗೆ ಏನ್ ಬೇಕು ಎಂದರು. ಹುಡುಗನಿಗೆ ತಿಂಗಳಿಗೆ 1000 ಹಾಸ್ಟಲ್‌ಗೆ ಕೊಡಬೇಕು. ಅವನು 5 ವರ್ಷ ಓದಬೇಕು ಎಂದಾಗ ಅವರುಗಳು 50,000 ರೂ. ಕೊಟ್ಟೇಬಿಟ್ಟರು. ಗುರುಗಳಿಗೆ ಬಹಳ ಸಂತೋಷವಾಯ್ತು. ಪುಣೆಯಿಂದ ಕಾಶಿಗೆ ಬಂದ ಮೇಲೆ ಆ ಹುಡುಗ ಕೊಟ್ಟಿದ್ದ ಫೋನ್ ನಂಬರ್‌ಗೆ ಕರೆಮಾಡಿ ಅವನನ್ನು ಕರೆಸಿಕೊಂಡು ತಿಂಗಳಿಗೆ ಸಾವಿರ ರೂ. ಕೊಡ್ತೀವಿ ಚಿಂತೆ ಮಾಡಬೇಡ ಎಂದು ವಿಚಾರ ತಿಳಿಸಿದರು. ಆಮೇಲೆ ಜಗದ್ಗುರುಗಳಿಗೆ ಮತ್ತೊಂದು ಆಲೋಚನೆ ಬಂತು 50 ಸಾವಿರ ಕೊಡ್ತಾ ಹೋದರೆ ಒಬ್ಬನಿಗೆ ಮಾತ್ರ ಆಗುತ್ತದೆ. ಅದೇ ಹಣ ಡಿಪಾಸಿಟ್ ಮಾಡಿದರೆ ಇವನ ನಂತರ ಮತ್ತೊಬ್ಬರಿಗೆ ಕೊಡಲು ಬರುತ್ತದೆ ಎಂಬುದಾಗಿತ್ತು. ಮತ್ತೆ ಪೂನಾದ ಕಲ್ಯಾಣಿಯವರಿಗೆ ದೂರವಾಣಿ ಕರೆಮಾಡಿ ತಮ್ಮ ವಿಚಾರ ಹೀಗಿದೆ ಎಂದು ತಿಳಿಸಿದರು. ತಕ್ಷಣ ಶ್ರೀಮತಿ ಕಲ್ಯಾಣಿಯವರು ಮತ್ತೆ 50,000 ರೂ.ಗಳನ್ನು ಕಾಶಿಗೆ ಕಳುಹಿಸಿಯೇ ಬಿಟ್ಟರು. ಗುರುಗಳು ಒಂದು ಲಕ್ಷ ರೂಗಳನ್ನು ಬ್ಯಾಂಕ್‌ನಲ್ಲಿ ಠೇವಣಿ ಇರಿಸಿ ಆ ಹುಡುಗನಿಗೆ ಕಳಿಸುವ ವ್ಯವಸ್ಥೆ ಮಾಡಿಯೇಬಿಟ್ಟರು. ಅವನು ಐದು ವರ್ಷ ವೈದ್ಯಕೀಯ ಶಿಕ್ಷಣದ ಓದು ಮುಗಿಸಿದಾಗ ಅವನಿಗೆ ತಕ್ಷಣ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಸಿಕ್ಕಿಯೇಬಿಟ್ಟಿತು. 15,000 ಸಂಬಳ ತಿಂಗಳಿಗೆ. ಡಾ. ಶಿವಕುಮಾರಸ್ವಾಮಿ ಉದಾಸಿಮಠ ಬಹಳ ಸಂತೋಷವಾಗಿ ಗುರುಗಳ ಬಳಿ ಬಂದು–ಐದು ವರ್ಷದ ಕೆಳಗೆ ನೀವು ನನ್ನ ಓದಿಗೆ ಸಹಾಯ ಮಾಡಿರದಿದ್ದರೆ ಇಂದು ನಾನೆಲ್ಲಿ 15,000 ಕಾಣುತ್ತಿದ್ದೆ ಎಂದು ಬಹಳ ಕೃತಜ್ಞತೆಯಿಂದ ನಮಸ್ಕರಿಸಿದ. ಅಷ್ಟೇ ಅಲ್ಲ, ನನ್ನಂತೆ ಇರುವ ಮತ್ತೊರ್ವ ಬಡ ವಿದ್ಯಾರ್ಥಿಗೆ ನಾನೂ ತಿಂಗಳಿಗೆ 1 ಸಾವಿರ ಕೊಡ್ತೀನಿ–ಓದಿಸಿರಿ ಎಂದು ಗುರುಗಳ ಬಳಿ ಹೇಳಿದ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಜನ ಕಲ್ಯಾಣ ಪ್ರತಿಷ್ಠಾನದಿಂದ ಶಿಷ್ಯವೃತ್ತಿ ವೇತನ ಪಡೆದು, ಅಧ್ಯಯನ ಪೂರ್ಣಗೊಳಿಸಿದ ಮೊದಲ ವಿದ್ಯಾರ್ಥಿ



ಡಾ. ಶಿವಕುಮಾರಸ್ವಾಮಿ ಉದಾಸಿಮಠ
ವಿಳಾಸ : ಗಾಂಧೀ ಚೌಕ ಮುಕ್ಕಾಂ–ಬ್ಯಾಡಗಿ ಪೋಸ್ಟ್–ಬ್ಯಾಡಗಿ
ತಾಲೂಕು–ಬ್ಯಾಡಗಿ ಜಿಲ್ಲಾ : ಹಾವೇರಿ (ಕರ್ನಾಟಕ)
ಪದವಿ : ಎಂ.ಬಿ.ಬಿ.ಎಸ್. 1996

ಅಲ್ಲಿಂದ ಎರಡನೇ ವಿದ್ಯಾರ್ಥಿವೇತನ ಆರಂಭವಾಯಿತು.

ಪ್ರತಿ ವರ್ಷ ಕಲ್ಯಾಣಿಯವರಿಗೆ ಇದರ ವರದಿ ಕಳಿಸುತ್ತಿದ್ದರು. ಆ ಹುಡುಗನ ವಿಚಾರ ಅವರಿಗೆ ತಿಳಿಸಿದಾಗ ನಾನೇ ಡಾಕ್ಟರ್ ಆದಂತಾಗಿದೆ ಎಂದು ತುಂಬಾ ಸಂತೋಷಪಟ್ಟರು. ಜೊತೆಗೆ ಇನ್ನೂ ಒಂದು ಮಾತು ಹೇಳಿದರು ನಿಮ್ಮ ಬಳಿ ಜನ ಬರ್‍ತಾ ಇರ್‍ತಾರೆ ನಾವು ಇನ್ನೂ ಹಣ ಕೊಡ್ತೀವಿ ಎಂದು ಮರು ವರ್ಷ ಮತ್ತೊಂದು ಲಕ್ಷ ಕೊಟ್ಟರು. ಮುಂದೆ ಪೀಠದಲ್ಲಿ ದಶಮಾನೋತ್ಸವ ಆಚರಿಸಿದಾಗ ಬಿಲ್ಡಿಂಗ್ ಉದ್ಘಾಟನೆಗೆ ಬಂದಿದ್ದ ಕಲ್ಯಾಣಿ ದಂಪತಿಗಳು ಪೀಠಕ್ಕೆ ಬಂದಿದ್ದರು. ಆಗ 5 ಲಕ್ಷ ಅವರಾಗೇ ಕೊಟ್ಟರು. ವಿದ್ಯಾರ್ಥಿ ವೇತನಕ್ಕಾಗಿಯೇ 15 ಲಕ್ಷಕ್ಕೂ ಹೆಚ್ಚು ಅವರು ಕೊಟ್ಟಿದ್ದಾರೆ. ಶ್ರೀಮತಿ ಕಲ್ಯಾಣಿಯವರು – ನಾನು ಮೆಡಿಕಲ್ ಓದಬೇಕೆಂಬ ಆಸೆ ಇತ್ತು, ಬೇಗ ಮದುವೆ ಮಾಡಿಬಿಟ್ಟರು ಎಂದು ಹೇಳಿದರು. ಈ ಹುಡುಗ ಬ್ಯಾಡಗಿಯಲ್ಲಿ, ಆ ಬಡತನದ ಮನೆಯಲ್ಲಿ ಬಡ ವಿದ್ಯಾರ್ಥಿಯ ಓದಿನ ಹಂಬಲಕ್ಕೆ ಸ್ಪಂದಿಸಿದ್ದಾಗಲಿ, ಬಡ ತಂದೆಯ ಅಸಹಾಯಕ ಪರಿಸ್ಥಿತಿಗೆ ಮರುಗಿದ್ದಾಗಲಿ ಇದು ಆಕಸ್ಮಿಕವಾಗಿ ನಡೆದಿದ್ದರೂ ಮುಖ್ಯ ಕಾರಣ ಜಗದ್ಗುರುಗಳು ತಾವು ಬಾಲ್ಯದಲ್ಲಿ ಓದಿದ ರೀತಿಯನ್ನು ಮರೆತಿರಲಿಲ್ಲ.

ಗುಳೇದಗುಡ್ಡದ ಬಳಿಯ ತೋಗುಣಸಿ ಗ್ರಾಮದಲ್ಲಿ ವೇ.ಮೂ. ಸಿದ್ದಯ್ಯ ಮತ್ತು ಸಾವಂತ್ರಮ್ಮನವರ ಮಗನಾಗಿ ಜನಿಸಿದ್ದರೂ. ಜನ್ಮತಃ ಸರಸ್ವತೀಪುತ್ರರಾಗಿಯೇ ಜನ್ಮತಾಳಿದ್ದರು. ಮನೆಯಲ್ಲಿ ಬಡತನ. ಅಲ್ಲಿ ಪ್ರಾಥಮಿಕ ಹಂತ ಮುಗಿಸಿದ ಮೇಲೆ ಬ್ಯಾಡಗಿಯಲ್ಲಿ ಸೋದರಮಾವನ ಮನೆಯಲ್ಲಿ ಮಾಧ್ಯಮಿಕ ಶಾಲೆಯನ್ನು ಮುಗಿಸಿದರು. ಅಲ್ಲಿ ಸೋದರಮಾವನಿಗೆ ಎಲ್ಲಾ ರೀತಿಯಲ್ಲಿ ಮನೆಗೆಲಸಕ್ಕೆ ನೆರವಾಗುತ್ತ–ಓದಿನತ್ತಲೂ ಗಮನ ನೀಡುತ್ತಿದ್ದರು. ಆ ವಯಸ್ಸಿನಲ್ಲಿಯೇ ಅವರಿಗೆ–ಮನೆಯಲ್ಲಿ ಸ್ವಾಮಿಗಳು ಸಾಧು ಸಂತರು ಬಂದಾಗ ಹೇಳುವ ಕತೆಗಳನ್ನು ಕೇಳಿಸಿಕೊಂಡು ತಮ್ಮ ಸ್ನೇಹಿತರಿಗೆ ಬಹು ಸ್ವಾರಸ್ಯವಾಗಿ ಹೇಳುತ್ತಿದ್ದರು–ಅದ್ಭುತವಾಗಿ ಉಪನ್ಯಾಸ ಮಾಡುವ ಕಲೆ ಅಂದೇ ಅಂಕುರಿಸಿತ್ತು. ಗುರುಗಳ ತಂದೆಯ ಮನಸ್ಸಿನಲ್ಲಿ ಬ್ಯಾಡಗಿಯಲ್ಲಿ ಮಗನ ವಿದ್ಯಾಭ್ಯಾಸ ಮುಗಿದ ನಂತರ ಎಲ್ಲಿಗೆ ಕಳುಹಿಸಬೇಕೆಂಬ ಚಿಂತೆ ಕಾಡಿತ್ತು. ಕೊನೆಗೆ ಗುಳೇದಗುಡ್ಡದ ಅಮರೇಶ್ವರ ಮಠದ ಸ್ವಾಮಿಗಳ ಬಳಿ ಬಂದು ಮಕ್ಕಳ ಬಗ್ಗೆ ಹೇಳಿಕೊಂಡರು. ಸ್ವಾಮಿಗಳು ಇಲ್ಲೇ ಮಠದಲ್ಲಿ ಓದಲಿ ಎಂದು ಒಪ್ಪಿಗೆ ನೀಡಿದ ನಂತರ ಅಲ್ಲಿನ ಮುನಿಸಿಪಲ್ ಹೈಸ್ಕೂಲಿಗೆ ಇವರನ್ನು ಸೇರಿಸಿದರು. ಸ್ವಾಮಿಗಳನ್ನು ಓದಿಸಲು ಒಪ್ಪಿದ ಮೇಲೆ, ಗುರುಗಳಿಗೆ ಓದಿನಲ್ಲಿ ಅತೀವ ಆಸಕ್ತಿಯಿದ್ದ ಕಾರಣದಿಂದಾಗಿ ಮುಂದಿನ ಅವರ ಬದುಕಿನ ಒಂದು ಪ್ರಮುಖವಾದ, ಮಹತ್ತರವಾದ ತಿರುವು ಕಾಣಿಸಿಕೊಂಡಿತೆಂಬುದು ಆ ತಾಯಿ–ತಂದೆಗಳಿಗೆ ಎಣಿಸಿರಲಿಲ್ಲ.

ಗುಳೇದಗುಡ್ಡಕ್ಕೆ ಬಂದ ಮೇಲೆ ಗುರುಗಳ ತಾಯಿ ಬೆಳಗ್ಗೆ 6 ಗಂಟೆಗೆ ಹಾಲು–ಮೊಸರು ಮಾರಲು ಹೋಗುವ ಮುನ್ನ–ಮಠದ ಬಳಿ ಬಂದು ಮಕ್ಕಳಿಬ್ಬರಿಗೂ ಮಧ್ಯಾನ್ಹದ ಬುತ್ತಿಯನ್ನು ಕೊಟ್ಟು ಹೋಗುತ್ತಿದ್ದರು. ಅಣ್ಣ–ತಮ್ಮ ಇಬ್ಬರೂ ಅಕ್ಕರೆಯ ಬುತ್ತಿಯನ್ನು ಶಾಲೆಯಲ್ಲಿ ಉಣ್ಣುತ್ತಿದ್ದುದನ್ನು ಈಗಲೂ ಗುರುಗಳು ನೆನೆಯುತ್ತಾರೆ. ಸಹಜವಾಗಿ ಪ್ರತಿಭಾವಂತರಾದ ಗುರುಗಳು ಸತತಾಭ್ಯಾಸದ ಛಲ, ಬುದ್ಧಿವಂತಿಕೆ ಎಲ್ಲವೂ ಇದ್ದ ಕಾರಣ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಅಮರೇಶ್ವರ ಸ್ವಾಮಿಗಳು ಅವರನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಸೊಲ್ಲಾಪುರಕ್ಕೆ ಕಳುಹಿಸಿಕೊಟ್ಟರು. ಅಲ್ಲಿ ಶ್ರೀಮಠದ ಸಂಸ್ಕೃತ ಪಾಠಶಾಲೆಯಲ್ಲಿ ಪ್ರವೇಶ ಪಡೆದರು. ವಾರದ ಮನೆಗಳನ್ನು ಗೊತ್ತುಮಾಡಿಕೊಂಡು ಊಟ ಮಾಡಿಕೊಂಡು ಸಂಸ್ಕೃತ ಅಭ್ಯಾಸದಲ್ಲಿ ಮುಳುಗಿಬಿಡುತ್ತಿದ್ದರು. ಪರಿಶುದ್ಧ ಮನಸ್ಕರಾದ ಎಳೆವಯಸ್ಸಿನ ಜಂಗಮಮೂರ್ತಿ ಮನೆಗೆ ಪ್ರಸಾದಕ್ಕಾಗಿ ಬರುತ್ತಾರೆಂದು ಮನೆಯ ಜನ ಕಾಯುತ್ತಿದ್ದರು. ಭಕ್ತಿ ಮತ್ತು ಅಕ್ಕರೆಯಿಂದ ಗುರುಗಳಿಗೆ ಉಣಬಡಿಸುತ್ತಿದ್ದರು. ಎಳೆಯ ಪ್ರಾಯದಲ್ಲೇ ಆಧ್ಯಾತ್ಮದ ಕಡೆ ಅತೀವ ಒಲವು. ಪುಸ್ತಕಗಳನ್ನು ಓದುತ್ತಾ ಕುಳಿತರೆ ಹೊರಗೊಂದು ಪ್ರಪಂಚವಿದೆ ಎಂಬುದನ್ನು ಮರೆತುಬಿಡುತ್ತಿದ್ದರು. ಅಷ್ಟಾದರೂ ಗುರುಗಳು ತಮ್ಮ ತಂದೆಯ ಆರ್ಥಿಕ ಪರಿಸ್ಥಿತಿಯನ್ನು ಮರೆಯಲಿಲ್ಲ. ಎಲ್ಲೂ ಅವರಿಗೆ ಹೊರೆಯಾಗದಂತೆ–ಮುಂದುವರೆದರು. 1963ರಿಂದ ಆರು ವರ್ಷಗಳಲ್ಲಿ ಸಂಸ್ಕೃತದಲ್ಲಿ ಕಾವ್ಯ ಆರ್ಟ್ಸ್ (SSLC) ಕಾವ್ಯ ಮಾಧ್ಯಮ (PUC) ಕಾವ್ಯತೀರ್ಥ (ಬಿ.ಎ) ಪರೀಕ್ಷೆಗಳಲ್ಲಿ ಉತ್ತಮ ದರ್ಜೆ ಪಡೆದು ಉತ್ತೀರ್ಣರಾದರು. ಸಂಸ್ಕೃತದಲ್ಲಿ ಅದ್ವಿತೀಯ ಪಂಡಿತರಾಗಬೇಕೆಂಬ ಗುರುಗಳ ಆಸೆಗೆ ನೀರೆರೆದು ಪೋಷಿಸಿ, ಅದನ್ನು ಸಾಕಾರಗೊಳಿಸಲು ಮುಖ್ಯ ಕಾರಣರು ಅಮರೇಶ್ವರ ಸ್ವಾಮಿಗಳು ಎನ್ನುವುದನ್ನು ಮರೆಯುವಂತಿಲ್ಲ.

ಗುಳೇದಗುಡ್ಡದಲ್ಲಿ ಓದುತ್ತಿರುವಾಗಲೇ ಶ್ರೀ ಅಮರೇಶ್ವರ ಸ್ವಾಮಿಗಳು ಚಂದ್ರಶೇಖರಯ್ಯನನ್ನು ತಮ್ಮ ಮಠದ ಉತ್ತರಾಧಿಕಾರಿ– ಯನ್ನಾಗಿ ಮಾಡಿಬಿಟ್ಟರು. ಹೀಗೆ ತಮ್ಮ ಬಾಲ್ಯದಿಂದ ತಾವು ಬೆಳೆದು ಬಂದ ದಾರಿಯನ್ನು ಗುರುಗಳು ಮರೆತಿರಲಿಲ್ಲ. ಹಾಗಾಗಿಯೇ ಬ್ಯಾಡಗಿಯ

ಹುಡುಗನ ಸ್ಥಿತಿ ಕಂಡು ಮರುಗಿ ವ್ಯವಸ್ಥೆ ಮಾಡಿದ್ದು. ಆಗಲೇ ನಿರ್ಧರಿಸಿಬಿಟ್ಟರು. ಹೇಗಾದರೂ ಹಣ ಸಂಗ್ರಹಿಸಿ ಠೇವಣಿ ಇಟ್ಟು ಬಡ ಪ್ರತಿಭಾವಂತ ಮಕ್ಕಳನ್ನು ಓದಿಸಬೇಕೆಂದು. ಪೂಜೆ, ಪ್ರವಚನಗಳಿಗೆ ಹೋದೆಡೆಯೆಲ್ಲಾ ಈ ವಿಷಯವಾಗಿ ಭಕ್ತರಿಗೆ ತಿಳಿಸಲಾರಂಭಿಸಿದರು. ವ್ಯಾಪಕವಾಗಿ ಸಮಾಜದಲ್ಲಿ ಹೇಳುತ್ತಾ ಬಂದರು. ಹೀಗೆ 10 ಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡಲಾರಂಭಿಸಿದರು.

ಮಹಾಚಿಂತಕರಾದ ಗುರುಗಳು ವಿದ್ಯಾರ್ಥಿವೇತನದ ಸಲುವಾಗಿ ಅನೇಕ ಯೋಜನೆಗಳನ್ನು ರೂಪಿಸಿದರು. ಶ್ರಾವಣ ಮಾಸದಲ್ಲಿ ಲಾತೂರಿನಲ್ಲಿ ಗುರುಗಳ ಪೂಜಾನುಷ್ಠಾನವಿತ್ತು. ಅದೇ ಸಮಯದಲ್ಲಿ ಜಗದ್ಗುರುಗಳ ಜನ್ಮದಿನವೂ ಇತ್ತು. ಆ ಸಮಯದಲ್ಲಿ ಸಮಾರಂಭದಲ್ಲಿ ಸೇರುತ್ತಿದ್ದ ಸಹಸ್ರ ಸಹಸ್ರ ಸಂಖ್ಯೆಯ ಭಕ್ತಾದಿಗಳಲ್ಲಿ ಒಂದು ಮಾತು ಹೇಳಿದರು–ನೀವು ನಮ್ಮ ಜನ್ಮದಿನ ಆಚರಣೆಗೆಂದು ಹೂವನ್ನಾಗಲಿ, ಹಾರ, ಹಣ್ಣು ಹಣ, ವಸ್ತ್ರ ಏನನ್ನೂ ತಾರದೆ–ಎಷ್ಟು ಕೊಡಬೇಕೆಂದಿದ್ದಿರೋ ಅದನ್ನು ದಕ್ಷಿಣೆ ರೂಪದಲ್ಲಿ ಕೊಡಿ–ಅದನ್ನು ಬಡ ವಿದ್ಯಾರ್ಥಿಗಳಿಗೆ ಕೊಡುತ್ತೇವೆಂದರು. ಎಂತಹ ಅದ್ಭುತ ಆಲೋಚನೆ ಗುರುಗಳದ್ದು! ಅಪಾರವಾದ ಸಾಮಾಜಿಕ ಕಳಕಳಿಯುಳ್ಳ ಗುರುಗಳು ಯಾವುದೇ ಕಾರ್ಯ ಆರಂಭಿಸಿದರೂ ಅತ್ಯಂತ ಯಶಸ್ವಿಯಾಗಿ ಅದು ಮುಗಿಯುತ್ತಿತ್ತು. ನೀವು ಕೊಡುವ ದುಡ್ಡನ್ನೆಲ್ಲಾ ಸಂಗ್ರಹಿಸಿ ಇಲ್ಲೇ ಠೇವಣಿ ಮಾಡಿ ಈ ಜಿಲ್ಲೆಯ ವಿದ್ಯಾರ್ಥಿಗಳಿಗೆ ಕೊಡುತ್ತೇವೆಂದು ಹೇಳಿದ ಕ್ಷಣದಿಂದ ಎಲ್ಲಾ ಜನರು ದಕ್ಷಿಣೆ ಕೊಡಲಾರಂಭಿಸಿದರು. ಕೆಲವು ಸಂಘ ಸಂಸ್ಥೆಗಳು ಕೊಡಲು ಮುಂದೆ ಬಂದವು, ದಿನಾ ಸಂಗ್ರಹವಾದ ಕಾಣಿಕೆಯನ್ನೆಲ್ಲಾ ಎಣಿಸಿ ಆ ದಿನವೇ ಬ್ಯಾಂಕಿಗೆ ಕಳಿಸಲು ಆರಂಭಿಸಿದರು. ಕಾರ್ಯಕ್ರಮ ಮುಗಿಯುವ ವೇಳೆಗೆ ಹತ್ತು ಲಕ್ಷ ರೂ. ಸಂಗ್ರಹವಾಗಿತ್ತು, ಒಂದು ತಿಂಗಳಲ್ಲಿ. ಹತ್ತು ಲಕ್ಷ ರೂಪಾಯಿಗಳನ್ನು ಅದೇ ಬ್ಯಾಂಕ್‌ನಲ್ಲಿ ಠೇವಣಿ ಇರಿಸಿ ಪ್ರತೀ ತಿಂಗಳೂ ಬಡ್ಡಿ ಬರುವ ವ್ಯವಸ್ಥೆ ಮಾಡಿ, ನಂತರ ಊರಿನ ಪ್ರಮುಖರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಿದರು. 'ಬಡಮಕ್ಕಳ ಅರ್ಜಿ ಕರೆದು 10 ಮಕ್ಕಳನ್ನು ಆರಿಸಿ, ನಾವು ಚೆಕ್ ಕೊಡುತ್ತೇವೆ' ಎಂದು ಸಮಿತಿ ಸದಸ್ಯರಿಗೆ ಗುರುಗಳು ಹೇಳಿದರು. ಮುಂದಿನ ತಿಂಗಳಿಂದ ಅಲ್ಲಿ 10 ಮಕ್ಕಳಿಗೆ ಶಿಷ್ಯವೇತನ ಕೊಡಲಾರಂಭಿಸಿಯೇಬಿಟ್ಟರು.

ಮುಂದೆ ಬಾರಿಮತಿಯಲ್ಲಿ ಗುರುಗಳ ಅನುಷ್ಠಾನವಿದ್ದಿತು. ಅಲ್ಲಿ ಸಮಾಜದವರ ಸಂಖ್ಯೆ ಕಡಿಮೆ ಇತ್ತು. ಬಂದ ಕಾಣಿಕೆ ಎಲ್ಲಾ ಸೇರಿ ಸುಮಾರು 4 ಲಕ್ಷ ಸಂಗ್ರಹವಾಯ್ತು. ಅದಕ್ಕೆ ಗುರುಗಳು ಒಂದು ಲಕ್ಷ ಸೇರಿಸಿ 5 ಲಕ್ಷ ಮಾಡಿ ಠೇವಣಿ ಇಟ್ಟು ಮುಂದಿನ ತಿಂಗಳಿಂದ ಐದು ಮಕ್ಕಳಿಗೆ ವಿದ್ಯಾರ್ಥಿವೇತನ ಶುರುವಾಯ್ತು.

ನಂತರ ಆಂಧ್ರಕ್ಕೆ ಗುರುಗಳು ಕಾಲಿರಿಸಿದರು. ಒಂದು ತಿಂಗಳು ಸಂಚಾರಿ ಶ್ರಾವಣ ಮಾಸ ಅನುಷ್ಠಾನ ಮಾಡಿ ಒಂದೊಂದು ದಿನಕ್ಕೆ ಒಂದೊಂದು ಊರಿನಲ್ಲಿ ಪೂಜೆ ಪ್ರವಚನ ಮಾಡಿ ಸುಮಾರು 10–20 ಜಿಲ್ಲೆಗಳನ್ನು ಸುತ್ತಿದರು. ಅಲ್ಲಿಯೂ 10 ಲಕ್ಷ ಸಂಗ್ರಹವಾಯಿತು. ಅದನ್ನು ಅಲ್ಲಿಯೇ ಠೇವಣಿ ಇಟ್ಟರು. ಹೀಗೆ 3 ವರ್ಷ ಮಾಡಿ ಒಟ್ಟು 30 ಲಕ್ಷ ಸೇರಿತು. ಪ್ರತೀ ವರ್ಷ ವೈಶಾಖಮಾಸದಲ್ಲಿ ಪಂಚಾಚಾರ್ಯ ಯುಗಮಾನೋತ್ಸವ ಮತ್ತು ಬಸವೇಶ್ವರ ಜಯಂತಿ ಆಚರಿಸಲಾಗುತ್ತದೆ. ಬರುವ ಬಡ್ಡಿಯಲ್ಲಿ ಈ ಸಮಯದಲ್ಲಿ ಅರ್ಜಿ ಆಹ್ವಾನ ಮಾಡಿ ಕೆಲವರಿಗೆ ವಿದ್ಯಾರ್ಥಿವೇತನ ಕೊಟ್ಟು, ಮೂರು ಪ್ರಶಸ್ತಿಗಳನ್ನು ಪಂಡಿತರಿಗೆ ಕೊಡಲಾರಂಭಿಸಿದರು.

ಜಗದ್ಗುರುಗಳ 60ನೇ ವರ್ಷದ ಷಷ್ಠ್ಯಬ್ದಿ ಸಮಾರಂಭವನ್ನು ಕಾಶಿಯಲ್ಲಿ 14–8–2007 ರಿಂದ 29–11–2007ರವರೆಗೆ 108 ದಿನಗಳ ಬೃಹತ್ ಧಾರ್ಮಿಕ ಸಮಾರಂಭ ಏರ್ಪಡಿಸಲಾಗಿತ್ತು. 108 ದಿನಗಳೂ ಜಗದ್ಗುರುಗಳ ತುಲಾಭಾರ ಏರ್ಪಡಿಸಲಾಗಿತ್ತು. 15,000ಕ್ಕೆ ಒಂದು ತುಲಾಭಾರ. ಪ್ರತೀ ದಿನ ತಪ್ಪದೆ ತುಲಾಭಾರ ಸೇವೆ ಇರುತ್ತಿತ್ತು. ಕೆಲವೊಮ್ಮೆ 2–3 ಇರುತ್ತಿದ್ದವು. ಈ 108 ದಿನಗಳೊಳಗೆ ಸುಮಾರು ಒಂದು ಕೋಟಿ ರೂಗಳು ಕೂಡಿತು. ಅವೆಲ್ಲವನ್ನು ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸಿ ನೂರು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವ ವ್ಯವಸ್ಥೆಯನ್ನು ಗುರುಗಳು ಮಾಡಿದರು. 60ನೇ ಹುಟ್ಟುಹಬ್ಬಕ್ಕೆ 60 ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡಬೇಕೆಂದು ಗುರುಗಳು ಆಲೋಚಿಸಿದ್ದರು. ಆ ಸಮಾರಂಭದಲ್ಲಿ ಗುರುವು ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ನೆರವು ನೀಡುವುದಾಗಿತ್ತು. ಗುರುಗಳು ಸತತಸಂಕಲ್ಪದಿಂದ ಬಡಮಕ್ಕಳ ಜೀವನವನ್ನು ರೂಪಿಸಿದರೆ, ಅದರಿಂದ ಉತ್ತಮ ಸಮಾಜ ನಿರ್ಮಾಣವಾಗುತ್ತದೆ ಎಂಬುದು ಅವರ ಚಿಂತನೆ.

ಈಗ ಸುಮಾರು ಒಟ್ಟು 200ಕ್ಕೂ ಮೀರಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡಲಾಗುತ್ತಿದೆ. ಇದಲ್ಲದೆ ಯಾವುದೇ ಊರಿನಲ್ಲಿ ಗುರುಗಳ ಕಾರ್ಯಕ್ರಮವಿದ್ದಲ್ಲಿ–ಅಲ್ಲಿ ಯಾರೋ ವಿದ್ಯಾರ್ಥಿಗಳು ಬಂದು ಸ್ಕಾಲರ್‌ಶಿಪ್ ಕೇಳಿದರೆ ಇಲ್ಲ ಎನ್ನದೆ ಒಂದು ವರ್ಷಕ್ಕೆ ಆಗುವಂತೆ ಕೊಟ್ಟು ಕಳುಹಿಸುತ್ತಾರೆ. ವಿದ್ಯಾರ್ಥಿ ಯಾರೇ ಬಂದರೂ ಗುರುಗಳು ಇಲ್ಲ ಎನ್ನುವುದಿಲ್ಲ.

ಈ ಸ್ಕಾಲರ್‌ಶಿಪ್ಪನ್ನು ಬಡ ಪ್ರತಿಭಾವಂತ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಓದುವವರಿಗೆ ಮಾತ್ರ ಕೊಡುವ ವ್ಯವಸ್ಥೆ ಮಾಡಿರುವರು.

ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ಅನುಷ್ಠಾನ ಮಾಡಿದಾಗ ಅಲ್ಲಿ 8 ಲಕ್ಷ ಸಂಗ್ರಹವಾಗಿತ್ತು. ಅದರ ಜೊತೆಗೆ ಗುರುಗಳು 2 ಲಕ್ಷ ಸೇರಿಸಿ 10 ಲಕ್ಷ ಠೇವಣಿ ಇಟ್ಟು ಸೊಲ್ಲಾಪುರ, ಬೀದರ್, ಉತ್ತರ ಕರ್ನಾಟಕ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮಾಡಿದರು.

ವಿದ್ಯಾರ್ಥಿ ಯಾವುದೇ ಜಾತಿಗೆ ಸೇರಿದ್ದರೂ ಜಾತಿಯನ್ನು ಪರಿಗಣಿಸದೆ ಒಂದು ವರ್ಷದ ಫೀ ಕೊಟ್ಟು ಕಳುಹಿಸುತ್ತಿದ್ದ ಕರುಣಾಮಯಿ. ಜಗದ್ಗುರುಗಳು ಒಮ್ಮೆ ಬೆಂಗಳೂರಿನ ಬಳಿ ಗ್ರಾಮಾಂತರ ಜಿಲ್ಲೆಯಾದ ಮಾಗಡಿಯ ಹತ್ತಿರ ತೊರೇಪಾಳ್ಯದಲ್ಲಿರುವ ಪಾರಂಗಾ ವಿದ್ಯಾಸಂಸ್ಥೆಯ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡುವ ಸಲುವಾಗಿ ಮೈತ್ರಿ ಗೃಹಿಣಿಯರ ಸಂಘವು ಹಣ ಸಂಗ್ರಹಕ್ಕಾಗಿ ಒಂದು ಯೋಜನೆ

ರೂಪಿಸಿದ್ದೆವು. 5–6 ಹಳ್ಳಿಗಳಿಂದ ಮಕ್ಕಳು ಅಲ್ಲಿಗೆ ಓದಲು ಬರುತ್ತಿದ್ದರು. ತೀರ ಬಡತನ ಕಾಡುತ್ತಿದ್ದ ಮನೆಯ ಮಕ್ಕಳವರು. ವಿದ್ಯೆ ಕಲಿಯುವ ಆಸಕ್ತಿ ಇದ್ದರೂ ಪ್ರೋತ್ಸಾಹ ಸಿಗದವರು. ಈ ಎಲ್ಲಾ ವಿಚಾರಗಳನ್ನು ಗುರುಗಳಿಗೆ ತಿಳಿಸಿದಾಗ ತಕ್ಷಣ 75000 ರೂ.ಗಳ ಡಿಡಿಯನ್ನು ಆ ಶಾಲೆಗೆ ಕಳುಹಿಸಿದ ಮಹಾತ್ಮರು ಗುರುಗಳು!

ಜಗದ್ಗುರುಗಳಿಗೆ ಯೋಜನೆಗಳನ್ನು ರೂಪಿಸುವುದು ಅದನ್ನು ಕಾರ್ಯರೂಪಕ್ಕೆ ತಂದು ಗುರಿ ಮುಟ್ಟುವುದು ಹೊಸತೇನಲ್ಲ. ವಿದ್ಯಾರ್ಥಿಯಾದಾಗಿನಿಂದ ಅನೇಕ ಯೋಜನೆಗಳನ್ನು ರೂಪಿಸಿ ಅದನ್ನು ಕಾರ್ಯಗತ ಮಾಡುತ್ತಿದ್ದರು.

ಸೊಲ್ಲಾಪುರದಲ್ಲಿ ಬಿ.ಎ. ಆದಮೇಲೆ ಮುಂದಿನ ಓದಿಗೆ ಕಾಶಿಗೆ ಹೋಗಬೇಕಿತ್ತು. ಆದರೆ ಆ ಸಮಯಕ್ಕೆ ಸರಿಯಾಗಿ ಕೆಲವು ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾಯ್ತು. ಜಗದ್ಗುರುಗಳಿಗೆ ಪಿತೃ ಸ್ಥಾನದಲ್ಲಿದ್ದು ಅವರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಿದ್ದ ಅಮರೇಶ್ವರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದುದು ಗುರುಗಳಿಗೆ ಆಘಾತವಾಯ್ತು. ಅಮರೇಶ್ವರ ಶಿವಾಚಾರ್ಯರು ವೀರ ವಿರಾಗಿಗಳಾಗಿ ಮಠಕ್ಕೆ ಯಾವ ಆಸ್ತಿಯನ್ನೂ ಮಾಡಿರಲಿಲ್ಲ. ಯಾವುದೇ ಮಠದ ಕಾರ್ಯಕ್ರಮ ಜರುಗುತ್ತಿದ್ದುದು ಭಕ್ತರಿಂದಲೇ. ಇಂತಹ ಪರಿಸ್ಥಿತಿಯಲ್ಲಿ ಜಗದ್ಗುರುಗಳು ಮಠದ ಅಧಿಕಾರ ವಹಿಸಿಕೊಳ್ಳಬೇಕಾಯ್ತು. ಉನ್ನತ ವ್ಯಾಸಂಗಕ್ಕೆ ಹಣದ ಕೊರತೆ ಅವರನ್ನು ಕಾಡಿತು. ಆದರೂ ಧೃತಿಗೆಡಲಿಲ್ಲ. ಅಮರೇಶ್ವರ ಶಿವಾಚಾರ್ಯರ ಅನುಗ್ರಹ ಕೃಪಾಶೀರ್ವಾದ ಸದಾ ತಮ್ಮ ಮೇಲೆ ಇರುವುದೆಂದೂ ಅದೇ ಎಲ್ಲದರಿಂದ ಪಾರುಮಾಡುವುದೆಂದೂ ಬಲವಾಗಿ ನಂಬಿದ್ದರು.

1980ರಲ್ಲಿ ವಿಧ್ಯುಕ್ತವಾಗಿ ಹುಬ್ಬಳ್ಳಿ ಹನ್ನೆರಡುಮಠದ ಷ॥ಬ್ರ॥ ಶ್ರೀ ಮಡಿವಾಳ ಶಿವಾಚಾರ್ಯರ ನೇತೃತ್ವದಲ್ಲಿ ಅಮರೇಶ್ವರ ಮಠಕ್ಕೆ ಪಟ್ಟಾಧಿಕಾರಿಗಳಾದರು. ಈ ಸಮಯದಲ್ಲಿ ಭಕ್ತರು ಸಲ್ಲಿಸಿದ ಕಾಣಿಕೆಯಲ್ಲಿ ಸ್ವಲ್ಪ ಭಾಗವನ್ನು ಗುರುಗಳ ಉನ್ನತ ವ್ಯಾಸಂಗಕ್ಕೆ ವಿನಿಯೋಗಿಸಲು ಭಕ್ತಾದಿಗಳು ತೀರ್ಮಾನಿಸಿದರು. ಹೆಚ್ಚಿನ ವ್ಯಾಸಂಗಕ್ಕಾಗಿ ಕಾಶಿಗೆ ಹೊರಟಾಗ ಮಠದ ಜವಾಬ್ದಾರಿಯನ್ನು ಅಮರೇಶ್ವರ ಶ್ರೀಗಳ ಪರಮ ಶಿಷ್ಯರಾದ ದೇಶಿಕಮೂರ್ತಿ ಬಸವಯ್ಯ ಸ್ವಾಮಿಗಳು ಹಾಗೂ ಶ್ರೀಮತಿ ಲಕ್ಷ್ಮಿಬಾಯಿ ಅಮ್ಮನವರಿಗೆ ವಹಿಸಿಕೊಟ್ಟರು.

1970ರಲ್ಲಿ ಕಾಶೀಯನ್ನು ತಲುಪಿದ ಶ್ರೀಗಳು ಜಂಗಮವಾಡಿ ಮಠದ "ಜಂಗಮವಾಡಿ ಗುರುಕುಲ"ವನ್ನು ಸೇರಿ–ಸಂಸ್ಕೃತ ವ್ಯಾಸಂಗವನ್ನು ಮುಂದುವರೆಸಿದರು. ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸತತ ಪರಿಶ್ರಮದಿಂದ 1973ರಲ್ಲಿ ಎಂ.ಎ. ಪರೀಕ್ಷೆಯಲ್ಲಿ ಗುರುಗಳಿಗೆ ಪ್ರಥಮ ರ್‍ಯಾಂಕ್ ಲಭಿಸಿತು. ಇದರ ಫಲವಾಗಿ ಗುರುಗಳಿಗೆ 'ವಿವೇಕಾನಂದ ಸ್ವರ್ಣ ಪದಕ' 'ಅನ್ನದಾ ಮುಖರ್ಜಿ ಸ್ವರ್ಣ ಪದಕ' ಮತ್ತು 'ಸಂಪೂರ್ಣಾನಂದ ಸ್ವರ್ಣ ಪದಕ'–ಹೀಗೆ 3 ಚಿನ್ನದ ಪದಕಗಳನ್ನು ಗಳಿಸಿದ ಪ್ರತಿಭಾನ್ವಿತರು, ಮಹಾ ಮೇಧಾವಿಗಳು.

ಗುರುಗಳು ಸಂಸ್ಕೃತದಲ್ಲಿ ಎಂ.ಎ. ಮಾಡುವ ಕಾಲಕ್ಕಾಗಲೇ ಅವರು ಉತ್ತಮ ವಾಗ್ಮಿಗಳೆಂದು ಹೆಸರು ಗಳಿಸಿದ್ದರು. ಕಾಶಿಗೆ ಬರುವ ಪೂರ್ವದಲ್ಲಿಯೇ ಸೊಲ್ಲಾಪುರ, ಉತ್ತರ ಕರ್ನಾಟಕದಲ್ಲಿ ಪ್ರವಚನಕ್ಕೆ ಹೆಸರಾಗಿದ್ದರು. ಗಹನವಾದ ಶಾಸ್ತ್ರೀಯ ವಿಷಯವಿರಲಿ, ಆಧ್ಯಾತ್ಮಿಕ ವಿಷಯವಿರಲಿ, ಧಾರ್ಮಿಕ ವಿಷಯಗಳೇ ಇರಲಿ ಪಂಡಿತರಿಂದ ಪಾಮರರವರೆಗೂ ಸುಲಭವಾಗಿ ಗ್ರಹಿಸುವಂತೆ ಹೇಳುವ ಜಾಣ್ಮೆ ಗುರುಗಳಲ್ಲಿತ್ತು. ಗುರುಗಳ ಪ್ರವಚನವೆಂದರೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನ ಸೇರುತ್ತಿದ್ದರು. ಅದರಲ್ಲಿ ಯುವಕರೇ ಹೆಚ್ಚಾಗಿರುತ್ತಿದ್ದರು– ಈಗ ಲಕ್ಷ ಲಕ್ಷೋಪಾದಿಯಲ್ಲಿ ಜನ ಸೇರುವುದು ಸರ್ವೇಸಾಮಾನ್ಯವಾಗಿದೆ. ಉತ್ತಮ ವಾಗ್ಮಿಗಳೆಂದು ಹೆಸರು ಮಾಡಿದ್ದ ಗುರುಗಳು 1973ರಲ್ಲಿ ಕೇರಳದ ಗುರುವಾಯೂರಿನಲ್ಲಿ ಜರುಗಿದ ಅಖಿಲ ಭಾರತ ವೇದಾಂತ ಶಾಸ್ತ್ರವನ್ನು ಕುರಿತ ಚರ್ಚಾಗೋಷ್ಠಿಯಲ್ಲಿ ಭಾಗವಹಿಸಿದರು. ಉತ್ತರ ಪ್ರದೇಶದ ರಾಜ್ಯದ ಪ್ರತಿನಿಧಿಯಾಗಿ ಗುರುಗಳು ಆಯ್ಕೆಯಾಗಿ ಕೇರಳಕ್ಕೆ ಹೋಗಿ ಆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ದೊರೆತದ್ದಲ್ಲದೆ ಕೇಂದ್ರ ಸರ್ಕಾರದ ಪ್ರಥಮ ಪುರಸ್ಕಾರ ದೊರೆತದ್ದು ಅವರ ವಾಕ್ಚಾತುರ್ಯಕ್ಕೆ ದೊರೆತ ಗೌರವವೆನ್ನಬಹುದು.

ವಿದ್ವತ್ ಸಂಘದ ಕಾರ್ಯದರ್ಶಿಯಾಗಿದ್ದಾಗ 15 ದಿನಕ್ಕೊಮ್ಮೆ ಬೇರೆ ಬೇರೆ ವಿಷಯ ಕುರಿತು ಚರ್ಚೆ ಏರ್ಪಡಿಸುತ್ತಿದ್ದರು. ಜೊತೆಗೆ ಪೀಠದ ಜಗದ್ಗುರುಗಳಾಗಿದ್ದ ವಿಶ್ವೇಶ್ವರ ಶಿವಾಚಾರ್ಯರ ಪತ್ರ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ಪೀಠದಿಂದ ಪ್ರಕಟವಾಗುವ ಗ್ರಂಥಗಳ ಜವಾಬ್ದಾರಿ ಸಂಪೂರ್ಣವಾಗಿ ಇವರದಾಗಿತ್ತು. ಯಾವುದೇ ಲಿಂಗೈಕ್ಯ ಜಗದ್ಗುರುಗಳ ಪುಣ್ಯತಿಥಿ ಬಂದಾಗ ಆ ಜಗದ್ಗುರುಗಳನ್ನು ಕುರಿತು ಪತ್ರಿಕೆಗೆ ಲೇಖನ ಬರೆಯುವುದು, ಆ ಕಾರ್ಯಕ್ರಮದ ಆಯೋಜನೆ, ಯಾತ್ರಿಗಳಿಗೆ ಸಂಬಂಧಪಟ್ಟ ಕೆಲಸ, ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರು ಪ್ರವಾಸ ಹೊರಟಾಗ, ಮಠದ ಸಂಪೂರ್ಣ ಜವಾಬ್ದಾರಿ–ಹೀಗೆ ಮೇಲಿನ ಎಲ್ಲಾ ಜವಾಬ್ದಾರಿಗಳನ್ನು ಸಮರ್ಪಕವಾಗಿ ಯೋಜನಾಬದ್ಧವಾಗಿ ಮಾಡುತ್ತಿದ್ದರು, ಮತ್ತು ಅವುಗಳ ಜೊತೆಗೆ ತಮ್ಮ ವ್ಯಾಸಂಗವನ್ನೂ ಮುಂದುವರೆಸುತ್ತಿದ್ದರು.

ಷ॥ಬ್ರ॥ ಚಂದ್ರಶೇಖರ ಶಿವಾಚಾರ್ಯ ಗುರುಗಳ ಪ್ರತಿಭೆ, ಕಾರ್ಯನಿಷ್ಠೆ, ವ್ಯಾಸಂಗದಲ್ಲಿನ ಅತೀವ ಆಸಕ್ತಿ, ಸಂಸ್ಕೃತದ ಮೇಲಿದ್ದ ಅಭಿಮಾನ–ಇವೆಲ್ಲವನ್ನು ಗಮನಿಸಿದ್ದ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಜಗದ್ಗುರುಗಳು ಅವರಿಗೆ ಮತ್ತೆ ವಿದ್ಯಾಭ್ಯಾಸದಲ್ಲಿ ಮುಂದುವರೆಯಲು ಅಪ್ಪಣೆ ಮಾಡಿದರು. ಆ ಪ್ರಕಾರ ಗುರುಗಳು "ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ಷಡ್ದರ್ಶನಗಳು ಇವುಗಳ ತೌಲನಿಕ ಅಧ್ಯಯನ" ಎಂಬ

ವಿಷಯ ಕುರಿತು ಸಂಶೋಧನೆಯನ್ನು 1974ರಲ್ಲಿ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದ ಡಾ॥ ದೇವಸ್ವರೂಪ ಮಿಶ್ರ ಅವರ ಮಾರ್ಗದರ್ಶನದಲ್ಲಿ ಆರಂಭಿಸಿ–ಏಳು ವರ್ಷಗಳ ಕಾಲ ಎಲ್ಲಾ ಚಟುವಟಿಕೆಗಳನ್ನು ಬದಿಗಿಟ್ಟು ಅಧ್ಯಯನದಲ್ಲಿ ತೊಡಗಿಸಿಕೊಂಡರು. ಆ ದಿನಗಳಲ್ಲಿ ದಿನಕ್ಕೆ 18 ಗಂಟೆಗಳ ಕಾಲ ಓದಿನಲ್ಲಿ ಮುಳುಗಿಬಿಡುತ್ತಿದ್ದರು. 1981ರಲ್ಲಿ ಆ ಪ್ರಬಂಧಕ್ಕೆ 'ವಿದ್ಯಾವಾರಿಧಿ' ಪಿಹೆಚ್.ಡಿ. ಪದವಿ ಪ್ರಧಾನವಾಗಿ ಗುರುಗಳು ಡಾ॥ ಚಂದ್ರಶೇಖರ ಶಿವಾಚಾರ್ಯರಾದರು.

ಪಿಹೆಚ್.ಡಿ. ಪದವಿ ಪಡೆದ ನಂತರ ಮತ್ತೊಮ್ಮೆ ಜಗದ್ಗುರುಗಳ ಆದೇಶದಂತೆ 1982ರಲ್ಲಿ ಅದೇ ವಿಶ್ವವಿದ್ಯಾನಿಲಯದಲ್ಲಿ ಡಿ.ಲಿಟ್ ಪದವಿಗಾಗಿ "ಶಕ್ತಿ ವಿಶಿಷ್ಟಾದ್ವೈತ ತತ್ತ್ವತ್ರಯ ವಿಮರ್ಶೆ" ಎಂಬ ವಿಷಯ ಕುರಿತು ಉನ್ನತ ವ್ಯಾಸಂಗ ಆರಂಭಿಸಿದರು. ಆರು ವರ್ಷಗಳ ಕಾಲ ಆಳವಾದ ಅಧ್ಯಯನ ನಡೆಸಿ ತಮ್ಮ ಸಂಶೋಧನ ಪ್ರಬಂಧವನ್ನು 1988ರಲ್ಲಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದರು. ವ್ಯಾಸಂಗದಲ್ಲಿ ತೊಡಗಿದ್ದಾಗಲೇ ತಮ್ಮೆಲ್ಲ ಇತರ ಚಟುವಟಿಕೆಗಳನ್ನು ಪ್ರಾರಂಭಿಸಿದರು.

ಜಂಗಮವಾಡಿ ಮಠದಲ್ಲಿ ಈ ಮೊದಲೇ ಸ್ಥಾಪಿತವಾಗಿದ್ದ ವಿದ್ವತ್ ಸಂಘದ ಕಾರ್ಯದರ್ಶಿಯಾಗಿ 1988ರಿಂದಲೇ ಅನೇಕ ಪತ್ರಿಕೆಗಳಿಗೆ ಲೇಖನಗಳನ್ನು ಕಳುಹಿಸುತ್ತಿದ್ದರು.

ಕೂಡಲ ಸಂಗಮಕ್ಷೇತ್ರದಲ್ಲಿ ಜರುಗಲಿರುವ ಶರಣ ಮೇಳದ ಅಧ್ವರ್ಯುಗಳಿಗೆ ಕಾಶೀ ವೀರಶೈವ ವಿದ್ವತ್ ಸಂಘದ ಪ್ರತಿಭಟನೆ

ಸಮಸ್ತ ವೀರಶೈವ ಮಾನ್ಯರೇ! ಕೂಡಲಸಂಗಮ ಕ್ಷೇತ್ರದಲ್ಲಿ ಮಹಾತ್ಮ ಬಸವಣ್ಣನವರ ಅಧಿಕೃತ ಅನುಯಾಯಿಗಳೆಂದೆನಿಸಿದ ಮಾತೆ ಮಹಾದೇವಿ ಹಾಗೂ ಕೆಲವು ಜನ ಸ್ವಾಮಿಗಳು ಅವರ ಶಿಷ್ಯರೂ ಕೂಡಿಕೊಂಡು ಮಾಡಿದ ಉತ್ಸವ ಸಮಿತಿ ಟ್ರಸ್ಟಿನ ಹೆಸರಿನಲ್ಲಿ ಮುಗ್ಧ ಭಕ್ತರಿಂದ ಲಕ್ಷಾಂತರ ಹಣ ಕಲೆಹಾಕಿ ಒಂದು ಮೇಳ ಕೂಡಿಸಲಿದ್ದಾರೆ. ಅದುವೆ ಮುಂಬರುವ ಸಂಕ್ರಾಂತಿ ದಿನದ ಶರಣಮೇಳ. ಕಾರಣ ನಾಡಿನ ವೀರಶೈವ ಬಾಂಧವರೇ ಕೂಡಲಸಂಗಮದಲ್ಲಿ ಕೂಡಲಿರುವ ಶರಣಮೇಳ ಹಾಗೂ ಆ ಮೇಳವನ್ನು ಕರೆದಿರುವ ಬಸವಾನುಯಾಯಿಗಳು ನಡೆಸಿರುವ ಅವಾಂತರಗಳನ್ನು ಕುರಿತು ಸಾವಧಾನವಾಗಿ ಹಾಗೂ ಕೂಲಂಕಷವಾಗಿ ವಿಶ್ಲೇಷಿಸೋಣ.

ಶರಣ ಮೇಳವೆಂಬ ಹೆಸರು ಉಚಿತವೇ?

ವೀರಶೈವರಾದವರೆಲ್ಲ ಸೇರುವ ಈ ಮೇಳ ಬರೀ ಶರಣಮೇಳ ಹೇಗೆ? ಮತ್ತು ಏಕೆ? ಭಕ್ತ ಮಹೇಶ್ವರ ಪ್ರಸಾದಿಗಳು ಈ ಮೇಳಕ್ಕೆ ಬರಬಾರದೆ? ವೀರಶೈವ ಸಿದ್ಧಾಂತತ್ರಯಗಳಲ್ಲಿ ಒಂದಾದ ಷಟ್‌ಸ್ಥಲದಲ್ಲಿ ಶರಣಸ್ಥಲ ಐದನೆಯದು. ಇದೊಂದು ಮಾನ್ಯತೆಯೇ? ಅದು ಅತ್ಯಂತ ಶರಣ ಸ್ಥಳವಾವಾಗಿದೆಯಷ್ಟೇ, ಬಸವಾದಿ ಪ್ರಮಥರಲ್ಲೊಬ್ಬರಾದ ಚನ್ನಬಸವಣ್ಣನವರು "ಕೋಟಿಗೊಬ್ಬ ಶರಣ"ನೆಂದು ಹೇಳಿರುವಾಗ ಅದೆಷ್ಟು ಜನ ಈ ಕಾಲದಲ್ಲಿ ಸತ್ಯ ಶರಣರು ಲಭಿಸುವರು? ಶರಣರಾಗದವರು ಸೇರುವ ಈ ಮೇಳ ಶರಣಮೇಳ ಹೇಗಾದೀತು? ಈ ಎಲ್ಲ ದೃಷ್ಟಿಯಿಂದ ಈ ಶರಣಮೇಳವೆಂಬ ಹೆಸರು ತೀರ ಸಂಕುಚಿತ ಹಾಗೂ ಅನುಚಿತವಾದುದು. ಕಾರಣ ಸರ್ವಸಮಾನತೆಯುಳ್ಳ ಸರ್ವಮಾನ್ಯವಾದ ವೀರಶೈವ ಮೇಳವೆಂದು ಹೆಸರಿಸಿದ್ದರೆ ಉಚಿತವೆನಿಸುತ್ತಿರಲಿಲ್ಲವೇ? ಈ ಮೇಳ ಕೂಡಲಸಂಗಮ ದಲ್ಲಿಯೇ ಏಕೆ? ಕೂಡಲಸಂಗಮವು ಬಸವಣ್ಣನವರ ಅಧಿಕೃತ ಐಕ್ಯ ಸ್ಥಳವೇ?

ಎರಡು ನದಿಗಳು ಒಂದುಗೂಡಿದ ಸ್ಥಾನ ಕೂಡಲಸಂಗಮವೆನಿಸುವುದು, ಕಾರಣ ಅಲ್ಲೊಂದು ಸಂಗಮೇಶ್ವರಲಿಂಗ ಸ್ಥಾಪನೆಯಾಯಿತು. ದೇವಸ್ಥಾನ ನಿರ್ಮಾಣಗೊಂಡಿತು. ಅಲ್ಲಿ ವೀರಶೈವರ ಆದಿ ಪಂಚಪೀಠಗಳಲ್ಲೊಂದಾದ ಶ್ರೀಮದ್ ಉಜ್ಜಯಿನಿ ಸದ್ಧರ್ಮಪೀಠ ಪರಂಪರೆಗೆ ಸಂಬಂಧಿಸಿದ ಮಠದ ಪಟ್ಟಾಧ್ಯಕ್ಷರಾದ ಪೂಜ್ಯ ಜಾತವೇದಮುನಿ ಶಿವಾಚಾರ್ಯ ಸ್ವಾಮಿಗಳವರು 12ನೇ ಶತಮಾನದಲ್ಲಿ ಗುರುಕುಲ ನಡೆಸುತ್ತಿದ್ದರು. ಅವರ ಬಳಿ ಬಾಲ ಬಸವೇಶ್ವರರು ವಿದ್ಯಾರ್ಥಿಯಾಗಿ ಬಂದು ದೀಕ್ಷೆ ಪಡೆದು ವೀರಶೈವ ಧರ್ಮ ಸ್ವೀಕರಿಸಿ ಧರ್ಮಶಾಸ್ತ್ರ ಪಾರಂಗತರಾಗಿ ತಾನು ಸ್ವೀಕರಿಸಿದ ಧರ್ಮದ ಪ್ರಸಾರ ಹಾಗೂ ಪ್ರಚಾರಕ್ಕಾಗಿ ಕಲ್ಯಾಣಕ್ಕೆ (ಬೀದರ ಜಿಲ್ಲೆ ಬಸವಕಲ್ಯಾಣ) ಹೋದರು, ಮುಂದೆ ಇಂದಿನ ಬಸವಾನುಯಾಯಿಗಳು ಹೇಳುವಂತೆ ಕಲ್ಯಾಣ ಕ್ರಾಂತಿಯ ನಂತರ ಅವರು ಕೂಡಲಸಂಗಮದಲ್ಲಿ ಐಕ್ಯವಾದರಂತೆ, ಕಾರಣ ಇದು ಬಸವೇಶ್ವರರ ಐಕ್ಯ (ನಿರ್ವಾಣ) ಸ್ಥಾನವಂತೆ.

ಯಾವ ರೀತಿ ಮುಸಲ್ಮಾನರಿಗೆ ಮಕ್ಕಾ ಇದೆಯೋ ಅದೇ ರೀತಿ ವೀರಶೈವರಿಗೆ (ಬಸವಾನುಯಾಯಿಗಳಿಗೆ) ಕೂಡಲಸಂಗಮವು ಒಂದು ತೀರ್ಥಕ್ಷೇತ್ರ.

ಆದರೆ ಕೂಡಲಸಂಗಮ ಬಸವೇಶ್ವರರ ಐಕ್ಯಸ್ಥಾನವೆಂದು ಹೇಳಲಿಕ್ಕೆ ಗಟ್ಟಿಯಾದ ಆಧಾರಗಳೇನಿವೆ? ಕೆಲವು ಇತಿಹಾಸ ತಜ್ಞರು ಉಪರೋಕ್ತ ಸಂಗತಿಯನ್ನು ಅಲ್ಲಗಳೆಯುತ್ತಿರುವಾಗ ಕೂಡಲಸಂಗಮ ಬಸವೇಶ್ವರರ ಅಧಿಕೃತ ಐಕ್ಯಸ್ಥಾನವೆನಿಸಲಾರದು. ಉದಾಹರಣೆಗಾಗಿ ಬಸವಣ್ಣನವರು ಕೂಡಲಸಂಗಮದಲ್ಲಿ ಐಕ್ಯವಾಗಿಲ್ಲ ವೆನ್ನುವುದಕ್ಕೆ ಖ್ಯಾತ ಇತಿಹಾಸಕಾರ ಎಡ್ವರ್ಡ್ ಪಿ. ರೈಸ್ ಅವರು ಬರೆದ ಗ್ರಂಥ "ಕನ್ನಡ ಸಾಹಿತ್ಯ ಚರಿತ್ರೆ"ಯ ಪುಟ 60ರಲ್ಲಿ ಉಲ್ಲೇಖಿಸಲ್ಪಟ್ಟ ಸಂಗತಿಯೇ ಸಾಕ್ಷಿಯಾಗಿದೆ. ಎಡ್ವರ್ಡ್ ಪಿ. ರೈಸ್ ಅವರ ಪ್ರಕಾರ ಕಲ್ಯಾಣಕ್ರಾಂತಿಯ ಕಾಲಕ್ಕೆ ಅರಸನ ಮಗನ ಆಕ್ರಮಣದಿಂದ ಸರೋಪಾಯನಾಗಿ ಬಸವಣ್ಣನು ಅಲ್ಲಿಯೇ ಭೀಮಾನದಿಯ ಪರಿಸರದಲ್ಲಿದ್ದ ಭಾವಿಯೊಂದರಲ್ಲಿ ಧುಮುಕಿ ಮುಳುಗಿಹೋದನೆಂದು ಹೇಳಲಾಗುತ್ತಿದೆ. ಕಾರಣ ಕೂಡಲಸಂಗಮ ಬಸವಣ್ಣ ನವರ ಅಧಿಕೃತ ಐಕ್ಯಭೂಮಿಯಲ್ಲ. ಅಂಥಲ್ಲಿ ಈ ಮೇಳ ಅಪ್ರಸ್ತುತ.

ಬಸವ ಕ್ರಾಂತಿಗೂ ಕೂಡಲಸಂಗಮಕ್ಕೂ ಸಂಬಂಧವೇನು?

ಜ್ಯೋತಿಷ್ಯಶಾಸ್ತ್ರ ಪ್ರಕಾರ ಪ್ರತಿ ವರ್ಷ ಜನವರಿ ತಿಂಗಳ ಮಧ್ಯದಲ್ಲೊಂದು ದಿನ ಸಾಮಾನ್ಯವಾಗಿ 14 ಅಥವಾ 15ನೇ ತಾರೀಖಿನಂದು ಸೂರ್ಯ ಮಕರರಾಶಿಯಿಂದ ಧನುರಾಶಿಯತ್ತ ತನ್ನ ಪಯಣ ಆರಂಭಿಸುತ್ತಾನೆ. ಅದು ಉತ್ತರಾಯಣದ ಆರಂಭ. ಆ ದಿನಕ್ಕೆ ಮಕರ ಸಂಕ್ರಾಂತಿಯೆಂದು ಹಿಂದುಗಳು ತಿಳಿಯುತ್ತಾರೆ. ಅದೇ ದಿನ ಕೂಡಲಸಂಗಮದಲ್ಲಿ ಶರಣಮೇಳ ಕೂಡುವುದಿದೆ. ಆದ್ದರಿಂದ ಆ ದಿನಕ್ಕೆ ಸಂಕ್ರಾಂತಿ ಬದಲು ಬಸವಕ್ರಾಂತಿಯೆಂದು ಹೆಸರಿಸಿದ್ದಾರೆ. ಮಾತೆ ಮಹಾದೇವಿ ಹಾಗೂ ಇತರ ಬಸವಾನುಯಾಯಿಗಳಲ್ಲಿ ಇದಕ್ಕೇನು ತಥ್ಯಾಧಾರವಿದೆ? ಇದೆಂಥ ವಿಪರ್ಯಾಸ?

ಅದೇ ಪ್ರಕಾರ ಬಸವಕ್ರಾಂತಿ ದಿನಾಚರಣೆ ಕೂಡಲಸಂಗಮದಲ್ಲಿ ನಡೆಯುತ್ತಿರುವುದು ಇನ್ನೊಂದು ವಿಪರ್ಯಾಸ. ಏಕೆಂದರೆ ಬಸವೇಶ್ವರರ ಕ್ರಾಂತಿ ಸಾಮಾಜಿಕವಾಗಲಿ ಧಾರ್ಮಿಕವಾಗಲಿ ನಡೆದದ್ದು ಬೀದರ ಜಿಲ್ಲೆಯ ಕಲ್ಯಾಣದಲ್ಲಿಯೇ ಹೊರತು ಕೂಡಲಸಂಗಮದಲ್ಲಿ ಅಲ್ಲವೇ ಅಲ್ಲ. ಆದ್ದರಿಂದ ಬಸವಕ್ರಾಂತಿ ದಿನವನ್ನು ಕಲ್ಯಾಣದಲ್ಲಿ ಆಚರಿಸುವದು ಉಚಿತವಲ್ಲವೇ?

ಬಸವಣ್ಣನವರು ಕೂಡಲಸಂಗಮದಲ್ಲಿಯೇ ಕ್ರಾಂತಿ ಮಾಡಿದ್ದಾರೆಂದು ತಿಳಿಯುವುದಾದರೆ ಅವರು ಚಿಕ್ಕ ವಯಸ್ಸಿನಲ್ಲಿ ಮಾಡಿದ ಕ್ರಾಂತಿಯನ್ನು ಪರಿಗಣಿಸುವುದು ವಿಹಿತವಾದುದು. ಬಾಲಕಬಸವರು ತಮ್ಮ ಪೂರ್ವಾ ಶ್ರಮದ ಬ್ರಾಹ್ಮಣಧರ್ಮವನ್ನು ತ್ಯಜಿಸಿ ಜಾತವೇದ ಮುನಿ ಶಿವಾಚಾರ್ಯರಿಂದ ದೀಕ್ಷೆಪಡೆದು ವೀರಶೈವಧರ್ಮದಲ್ಲಿ ಪ್ರವೇಶಿಸಿದರು. ತನ್ನ ಇಡೀ ಜೀವನವನ್ನೇ ವೀರಶೈವ ಧರ್ಮಕ್ಕಾಗಿ ಸಮರ್ಪಿಸಿಕೊಂಡದ್ದು ಸಾಮಾನ್ಯ ಕ್ರಾಂತಿಯೇ? ಇದೇ ಕ್ರಾಂತಿಯನ್ನು ಶರಣಮೇಳದವರು ಒಪ್ಪುವುದಾದರೆ ಕೂಡಲಸಂಗಮದಲ್ಲಿ ಬಸವಕ್ರಾಂತಿ ದಿನ ಆಚರಿಸುವುದು ಸೂಕ್ತವೆನಿಸೀತು.

ಶರಣ ಮೇಳ ಆಹ್ವಾನಪತ್ರಿಕೆಗಳಲ್ಲಿ ಬಸವಭಕ್ತರು ಬಸವ ತತ್ತ್ವಾಭಿಮಾನಿಗಳು ಹಾಗೂ ಬಸವ ಧರ್ಮೀಯರು ಶರಣ ಮೇಳಕ್ಕೆ ಆಗಮಿಸಿರಿ ಎಂದು ಕರೆ ಕೊಡಲಾಗಿದೆ. ಏನು ಈ ನಾಡಿನಲ್ಲಿ ಬರೀ ಬಸವತತ್ತ್ವಾನುಯಾಯಿಗಳೇ ಇರುವರೇ? ಏನು ಮೇಳದಲ್ಲಿ ಬಸವಾನುಯಾಯಿಗಳಲ್ಲದವರಿಗೆ ಪ್ರವೇಶವಿಲ್ಲವೇ? ಬಸವಣ್ಣನವರ ಸಮಕಾಲೀನರಾದ ಅವರಿಗಿಂತಲೂ ವಿವೇಕ ವೈರಾಗ್ಯ ಅನುಭವಗಳಲ್ಲಿ ಮಿಗಿಲಾದಂಥ ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಮೊದಲಾದ ಪ್ರಭೃತಿಗಳನ್ನು ಮೆಚ್ಚಿಕೊಂಡವರು ಅವರ ಘನ ವ್ಯಕ್ತಿತ್ವಕ್ಕೆ ಮಾರು ಹೋದವರು ತಮ್ಮ ತಮ್ಮ ಆರಾಧ್ಯವ್ಯಕ್ತಿಯ ಹೆಸರಿನಲ್ಲಿ ಒಂದೊಂದು ಪ್ರತ್ಯೇಕ ಧರ್ಮವನ್ನು ಕಟ್ಟಿಕೊಂಡರೆ ಏನೂ ತಪ್ಪಿಲ್ಲ ತಾನೆ.

ಕೂಡಲಸಂಗಮ ಕ್ಷೇತ್ರ ಮುಳುಗಲಿದೆ ಉಳಿಸೋಣ ಬನ್ನಿ ಎಂಬ ಕೂಗು "ತೋಳ ಬಂತಲೇ ತೋಳ" ಎಂಬ ಜಾನಪದ ಕಥೆಯಲ್ಲಿ ಬರುವ ಕುರುಬನ ಕೂಗಿನಂತೆ ನಾಡಿನ ಜನರ ಗಮನ ಸೆಳೆದಿದೆಯಷ್ಟೇ. ಈ ಒಂದು ಧಾರ್ಮಿಕ ಭಾವಾವೇಶದ ಗಾಳಿಯ ದುರ್ಲಾಭ ಪಡೆದು ಹಲವು ಹದಿನೆಂಟು ಕುಯುಕ್ತಿಗಳಿಂದ ಮುಗ್ಧಭಕ್ತರ ಹಣ ಸುಲಿದು ಶಿವಾಚಾರ್ಯ ಧಾರ್ಮಿಕ ಸಾಂಸ್ಕೃತಿಕ ಕೇಂದ್ರವಾದ ಶ್ರೀ ಜಾತವೇದಮುನಿ ಶಿವಾಚಾರ್ಯರ ಪ್ರಭಾವಪೂರ್ಣ ಪುಣ್ಯಕ್ಷೇತ್ರವಾದ ಕೂಡಲಸಂಗಮವನ್ನು ತಮ್ಮದನ್ನಾಗಿ ಮಾಡಿಕೊಳ್ಳುವ ಕುತ್ಸಿತನೆಪದಲ್ಲಿ ಸ್ವಂತಕ್ಕೆ, ಸ್ವಾರ್ಥಕ್ಕೆ ಅಲ್ಲಿ ಬಂದು ಆಸ್ತಿಯನ್ನು ಸಂಪಾದಿಸುವ ಯತ್ನವನ್ನು ಸಕಲ ವೀರಶೈವರೆಲ್ಲರೂ ಖಂಡಿಸಬೇಕು.

ಕಾಶೀ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಶಕ್ತಿವಿಶಿಷ್ಟಾದ್ವೈತ ವಿದ್ಯಾರ್ಥಿಗಳ ಪ್ರಗತಿ

ಪಂಚಾಚಾರ್ಯ ಪ್ರಭಾ 6–1–1986

ಭಾರತದಲ್ಲೇ ಅತಿ ದೊಡ್ಡ ವಿದ್ಯಾಕೇಂದ್ರವಾದ ಶ್ರೀ ಕಾಶೀಕ್ಷೇತ್ರದಲ್ಲಿ "ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯುವು" ಅತ್ಯಂತ ಪ್ರಸಿದ್ಧವಾಗಿದೆ. ಭಾರತೀಯ ಸಕಲ ಧರ್ಮದರ್ಶನಗಳ ಅಧ್ಯಯನವು ಇಲ್ಲಿ ಸಂಸ್ಕೃತ ಭಾಷೆಯ ಮಾಧ್ಯಮದಿಂದ ನಡೆಯುತ್ತಿದೆ. 1983ನೇ ಇಸ್ವಿಯಿಂದ ಈ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ ವೀರಶೈವ ದರ್ಶನವಾದ "ಶಕ್ತಿವಿಶಿಷ್ಟಾದ್ವೈತ" ಸಿದ್ಧಾಂತದ "ಶಾಸ್ತ್ರಿ" (ಬಿ.ಎ.) "ಆಚಾರ್ಯ" (ಎಂ.ಎ.) ವರ್ಗಗಳ ಅಧ್ಯಯನ ಹಾಗೂ ಪರೀಕ್ಷೆಗಳು ಪ್ರಾರಂಭ ವಾದ ವಿಷಯವು ಅನೇಕ ಪತ್ರಿಕೆಗಳ ಮುಖಾಂತರ ತಿಳಿಯಪಡಿಸಿದ್ದೇವೆ. ಅಭೂತಪೂರ್ವವೂ, ಗೌರವಾಸ್ಪದವೂ ಆದ ಈ ಕಾರ್ಯವು ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಕೃಪೆಯಿಂದ ನೆರವೇರಿದೆ.

ಪ್ರತಿ ವರ್ಷದ ಪದ್ಧತಿಯಂತೆ 1985ನೇ ಇಸ್ವಿಯ ಪರೀಕ್ಷೆಯಲ್ಲಿ ಶಕ್ತಿವಿಶಿಷ್ಟಾದ್ವೈತ ವೇದಾಂತದ ಶಾಸ್ತ್ರಿ ಮತ್ತು ಆಚಾರ್ಯ ಕ್ಲಾಸುಗಳ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ನೂರಕ್ಕೆ 70ಕ್ಕೂ ಹೆಚ್ಚು ಗುಣಗಳನ್ನು ಪಡೆದು ವಿಶ್ವವಿದ್ಯಾಲಯದಲ್ಲಿ ಈ ವಿಭಾಗದ ಗೌರವವನ್ನು ಬೆಳೆಸಿದ್ದಾರೆ. 1985–86ನೇ ಇಸ್ವಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪರಿಚಯವಿಂತಿದೆ.

ಆಚಾರ್ಯ ಮೂರನೇ ವರ್ಷದ ವಿದ್ಯಾರ್ಥಿಗಳು–

1. ಶ್ರೀ ಷ.ಬ್ರ. ಷಡಕ್ಷರಶಿವಾಚಾರ್ಯರು, ಶಿರಾಡೋಣಕರ

2. ಶ್ರೀ ಷ.ಬ್ರ. ಮಹಾದೇವಶಿವಾಚಾರ್ಯರು, ಬಬಲೇಶ್ವರ

ಆಚಾರ್ಯ ದ್ವಿತೀಯ ವರ್ಷದ ವಿದ್ಯಾರ್ಥಿಗಳು

3. ಶ್ರೀ ಚನ್ನಬಸವದೇವರು, ಜಮಖಂಡಿ

4. ಶ್ರೀ ಶಂಕರಾನಂದ ಬ್ರಹ್ಮಚಾರಿ

ಆಚಾರ್ಯ ಪ್ರಥಮ ವರ್ಷದ ವಿದ್ಯಾರ್ಥಿಗಳು

5. ಶ್ರೀ ಷ.ಬ್ರ. ಮುಕ್ತೇಶ್ವರ ಶಿವಾಚಾರ್ಯ, ಬಾರ್ಶಿ

6. ಶ್ರೀ ಚನ್ನವೀರಸ್ವಾಮಿ, ಕುಮ್ಮೂರ

7. ಶ್ರೀ ಕುಮಾರದೇವರು, ಹುಕ್ಕೇರಿ

ಶಾಸ್ತ್ರಿ ದ್ವಿತೀಯ ವರ್ಷದ ವಿದ್ಯಾರ್ಥಿ

8. ಶ್ರೀ ಪಂಡಿತಾರಾಧ್ಯ, ಹಿರೇಮಠ, ಮುತ್ತಗಿ.

ಈ ರೀತಿಯಾಗಿ ಎಂಟು ಜನ ವಿದ್ಯಾರ್ಥಿಗಳು ಈ ವರ್ಷ "ಶಕ್ತಿವಿಶಿಷ್ಟಾದ್ವೈತ ವೇದಾಂತ" ವಿಷಯವನ್ನು ತೆಗೆದುಕೊಂಡು ಅಭ್ಯಾಸ ಮಾಡುತ್ತಲಿದ್ದಾರೆ.

ಕಾಶಿಯಲ್ಲಿ ಈ ವಿಷಯವನ್ನು ತೆಗೆದುಕೊಂಡು ಸಂಸ್ಕೃತಾಧ್ಯಯನವನ್ನು ಮಾಡುವ ವಿದ್ಯಾರ್ಥಿಗಳ ಉತ್ತೇಜನಕ್ಕಾಗಿ ಶ್ರೀ ಸದಾಶಿವಯ್ಯನವರು ವಸ್ತ್ರದ ತಿರುಚನಾಪಲ್ಲಿ ಇವರು ಪ್ರತಿ ವರ್ಷ 1500ರೂ.ಗಳನ್ನು ಅದರಂತೆ ಶ್ರೀ ಎಸ್. ಜಿ. ಶಿವಶಂಕರಯ್ಯನವರು, ಭದ್ರಾವತಿ ಇವರು ಪ್ರತಿ ವರ್ಷ 1824 ರೂ.ಗಳನ್ನು ಕೊಡುತ್ತಿದ್ದಾರೆ. ಇವರ ಈ ಹಣವನ್ನು ಶಾಸ್ತ್ರಿ (ಬಿ.ಎ.) ತರಗತಿಯ ಇಬ್ಬರು ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು 50ರೂ.ಗಳಂತೆ ಮತ್ತು ಆಚಾರ್ಯ (ಎಂ.ಎ.) ತರಗತಿಯ ಇಬ್ಬರು ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು 100ರೂ.ಗಳಂತೆ ಸ್ಕಾಲರ್‌ಶಿಪ್ ಕೊಡಮಾಡಲಾಗುತ್ತಿದೆ.

ಇನ್ನೊಂದು ಸಂತೋಷದ ಸಂಗತಿಯೆಂದರೆ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಿಗೆ ಈ ವಿಷಯವನ್ನು ತಿಳಿಸಲಾಗಿ ಕಾಶಿಯಲ್ಲಿ ವೀರಶೈವ ಅಧ್ಯಯನ ಪ್ರಾರಂಭವಾದದ್ದನ್ನು ತಿಳಿದು ಅವರು ಸಂತೋಷಗೊಂಡು 1985–86ನೇ ಇಸ್ವಿಯಿಂದ ಶಾಶ್ವತವಾಗಿ ಶಾಸ್ತ್ರಿ ಮತ್ತು ಆಚಾರ್ಯ ವರ್ಗದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು 50ರೂ. ಹಾಗೂ 100 ರೂಗಳಂತೆ ವೀರಶೈವ ವಿದ್ಯಾವರ್ಧಕ ಸಂಘ ಬಳ್ಳಾರಿಯ ವತಿಯಿಂದ ಸ್ಕಾಲರ್‌ಶಿಪ್ ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ.

ಇದೇ ಪ್ರಕಾರವಾಗಿ "ವೀರಶೈವ ವಿದ್ಯಾ ಸಂವರ್ಧಿನೀ" ಮಂಡಲಿ ಬಾರ್ಶಿ ಜಿಲ್ಲಾ ಸೊಲ್ಲಾಪೂರ (ಮಹಾರಾಷ್ಟ್ರ) ಇವರಾದರೂ ತಮ್ಮ ಸಂಸ್ಥೆಯಿಂದ ಪ್ರತಿ ತಿಂಗಳು 50ರೂ.ಗಳನ್ನು ಶಾಸ್ತ್ರಿ ತರಗತಿಯ ವಿದ್ಯಾರ್ಥಿಗೆ ಸ್ಕಾಲರಶಿಪ್ ರೂಪವಾಗಿ ಕೊಡುವುದಾಗಿ ಸ್ವತಃ ತಾವೇ ಪತ್ರ ಬರೆದು ನಮಗೆ ತಿಳಿಸಿದ್ದಾರೆ.

ಇದರಂತೆ ಕರ್ನಾಟಕ ಹಾಗೂ ಮಹಾರಾಷ್ಟ್ರ ಪ್ರದೇಶಗಳಲ್ಲಿರುವ; ವೀರಶೈವ ಸಂಘ ಸಂಸ್ಥೆಯವರು ಮತ್ತು ಶ್ರೀಮಂತ ಮಠಾಧಿಕಾರಿಗಳು ಇತ್ತ ಲಕ್ಷ್ಯವಹಿಸಿ ತಮ್ಮ ಸಂಘ ಸಂಸ್ಥೆಗಳ ವತಿಯಿಂದಲೂ ಸ್ಕಾಲರ್‌ಶಿಪ್ ಕೊಡಮಾಡಿದಲ್ಲಿ ನಿಮಗೆ ವಿದ್ಯಾದಾನದ ಶ್ರೇಯಸ್ಸು ಬರುವುದಲ್ಲದೇ ಉತ್ತರಭಾರತದಲ್ಲಿ ವೀರಶೈವ ಧರ್ಮದ ತತ್ವಗಳನ್ನು ಪ್ರಚಾರಗೊಳಿಸಲು ಸಹಕರಿಸದಂತಾಗುತ್ತದೆ.

ಇನ್ನು ವೀರಶೈವ ವಿದ್ಯಾರ್ಥಿಗಳಿಗೆ ಸೂಚಿಸುವುದೇನೆಂದರೆ ನಮ್ಮ ವೀರಶೈವ ಪ್ರಾಚೀನ ಸಾಹಿತ್ಯವು ಸಂಸ್ಕೃತದಲ್ಲಿಯೇ ಇರುವುದರಿಂದ ಸಂಸ್ಕೃತ ಭಾಷೆಯ ಅಧ್ಯಯನವಿಲ್ಲದೇ ನಾವು ನಮ್ಮ ಧರ್ಮದ ನಿಜವಾದ ತತ್ತ್ವಗಳನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಇತ್ತೀಚಿನ ವೀರಶೈವ ಮಠಾಧಿಪತಿಗಳು, ಶಾಸ್ತ್ರಿಗಳು, ಕಾಲೇಜು ಮತ್ತು ವಿಶ್ವವಿದ್ಯಾಲಯದ ಮಟ್ಟದ ವಿದ್ವಾಂಸರು ಸಂಸ್ಕೃತವನ್ನು ಆಳವಾಗಿ ಅಭ್ಯಾಸ ಮಾಡಿಲ್ಲದರ ಮೂಲಕ ಅನೇಕ ವೈಚಾರಿಕ ಗೊಂದಲಗಳನ್ನು ಎಬ್ಬಿಸಿ ಸಮಾಜದಲ್ಲಿ ಸಂಶಯಗಳನ್ನು ಹುಟ್ಟಿಸುತ್ತಲಿದ್ದಾರೆ. ಈ ವಿಷಮಸ್ಥಿತಿಯು ದೂರಾಗಲು ಗಂಭೀರವಾದ ಅಧ್ಯಯನದವಶ್ಯಕತೆ ಇದೆ.

ಹೀಗೆ ಅಧ್ಯಯನ ಮಾಡಲು ಅಪೇಕ್ಷೆಯುಳ್ಳ ವಿದ್ಯಾರ್ಥಿಗಳಿಗೆ ಕಾಶಿಯ ಜಂಗಮವಾಡಿ ಮಠದಲ್ಲಿ ಉಚಿತವಾದ ಪ್ರಸಾದ ಮತ್ತು ವಸತಿಯ ಸೌಕರ್ಯವು ಮೊದಲಿನಿಂದಲೂ ಇದೆ. ಕಾರಣ ಪಿ.ಯು.ಸಿ.ಯಲ್ಲಿ ಸಂಸ್ಕೃತ ತೆಗೆದುಕೊಂಡು ಪಾಸಾದ ವಿದ್ಯಾರ್ಥಿಗಳಿಗೆ ಕಾಶಿಯಲ್ಲಿ "ಶಾಸ್ತ್ರಿ" (ಬಿ.ಎ.) ಪರೀಕ್ಷೆಯಲ್ಲಿ ಮತ್ತು ಸಂಸ್ಕೃತ ತೆಗೆದುಕೊಂಡು ಬಿ.ಎ. ಪಾಸಾದ ವಿದ್ಯಾರ್ಥಿಗಳಿಗೆ ಆಚಾರ್ಯ (ಎಂ.ಎ.) ಪರೀಕ್ಷೆಯಲ್ಲಿ ಪ್ರವೇಶ ದೊರೆಯುತ್ತದೆ. ಆದ್ದರಿಂದ ಜಿಜ್ಞಾಸು ವಿದ್ಯಾರ್ಥಿಗಳು ಈ ಸದವಕಾಶದ ಉಪಯೋಗವನ್ನು ಪಡೆದು ವೀರಶೈವ ಸಂಸ್ಕೃತ ಸಾಹಿತ್ಯವನ್ನು ಅಭ್ಯಾಸಮಾಡಿ ಸಮಾಜದಲ್ಲಿ ಪಕ್ಷಪಾತರಹಿತವಾದ, ನಿರ್ಮಲವಾದ ವೀರಶೈವ ತತ್ವಜ್ಞಾನವನ್ನು ಪ್ರಚಾರಗೊಳಿಸುವವರಾಗಿರೆಂದು ಸಂತೋಷ ಪೂರ್ವಕವಾಗಿ ಆಮಂತ್ರಿಸುತ್ತೇವೆ.

ಶಕ್ತಿವಿಶಿಷ್ಟಾದ್ವೈತ ವೇದಾಂತ ಆಚಾರ್ಯ ಪಾಸಾದ ವಿದ್ಯಾರ್ಥಿಗಳು ಶೋಧ ಪ್ರಬಂಧಗಳನ್ನು ಬರೆದು ಪಿಹೆಚ್.ಡಿ. ಹಾಗೂ ಡಿ.ಲಿಟ್. ಉಪಾಧಿಗಳನ್ನು ಪಡೆಯಲು ಅವಕಾಶವಿದೆ. ಕಾರಣ ಭಾವೀ ವೀರಶೈವ ಮಠಾಧಿಪತಿಗಳು ಇತ್ತ ಲಕ್ಷ್ಯವಹಿಸಿ ತಮ್ಮ ಜ್ಞಾನಸಂಪತ್ತನ್ನು ಹೆಚ್ಚಿಸಿಕೊಳ್ಳುವರಾಗಿ ನಂಬಿರುತ್ತೇವೆ.

ಡಾ॥ ಚಂದ್ರಶೇಖರ ಶಿವಾಚಾರ್ಯರು
ರಿಸರ್ಚ್ ಅಸೋಸಿಯೇಟ್,
ವೇದಾಂತ ವಿಭಾಗ,
ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ,
ವಾರಣಾಸಿ

ಜಂಗಮವಾಡಿ ಮಠದಲ್ಲಿ ವಿದ್ಯಾರ್ಥಿಯಾಗಿ ಗುರುಕುಲದಲ್ಲಿದ್ದರೂ ಗುಳೇದಗುಡ್ಡದ ಅಮರೇಶ್ವರ ಮಠದ ಸ್ವಾಮಿಗಳೆಂದೇ ಪ್ರಖ್ಯಾತರಾಗಿದ್ದ ಚಂದ್ರಶೇಖರ ಶಿವಾಚಾರ್ಯರು 11–12–1987 ರಿಂದ 13–12–1987ರವರೆವಿಗೆ ಬೆಂಗಳೂರಿನಲ್ಲಿ ಮೂರು ದಿನಗಳ ಕಾಲ ನಡೆದ ಶಿವಯೋಗಿ ಶಿವಾಚಾರ್ಯರ ದ್ವಾದಶ ಶತಮಾನೋತ್ಸವ, ಅವರ ಗ್ರಂಥ ಸಿದ್ಧಾಂತ ಶಿಖಾಮಣಿಯ ವಿಚಾರ ಸಂಕಿರಣದ ಎರಡನೇ ದಿನ 12–12–1987 ನಾಲ್ಕನೇಗೋಷ್ಠಿ "ವೀರಶೈವ ಸಿದ್ಧಾಂತ ಗ್ರಂಥಗಳ ಮೇಲೆ ಸಿದ್ಧಾಂತ ಶಿಖಾಮಣಿಯ ಪ್ರಭಾವ" ಎನ್ನುವ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿ ವಿದ್ವತ್‌ಪೂರ್ಣವಾಗಿ ಅಧ್ಯಕ್ಷೀಯ ಭಾಷಣ ಮಾಡಿದ್ದನ್ನು ಇವತ್ತಿಗೂ ಅನೇಕರು ನೆನಪಿಸಿಕೊಳ್ಳುತ್ತಾರೆ.

ಇಷ್ಟೇ ಅಲ್ಲದೆ 1988ರಲ್ಲಿ ಕಲಕತ್ತೆಯ ವಂಗೀಯ ಶಿಕ್ಷಾ ಪರಿಷತ್ತಿನ "ಅಖಿಲ ಭಾರತ ಮಟ್ಟದ ಸರ್ವದರ್ಶನತೀರ್ಥ" ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದ ಶ್ರೀಗಳನ್ನು ಪಶ್ಚಿಮ ಬಂಗಾಲ ಸರಕಾರವು "ಶರದಿಂದು ನಾರಾಯಣ ಸ್ವರ್ಣ ಪದಕ"ವನ್ನು ನೀಡಿ ಗೌರವಿಸಿತು. ಈ ಪದಕ ಗುರುಗಳಿಗೆ ಬಂದಿರುವುದು–ಇಡೀ ವೀರಶೈವ ಜನಾಂಗಕ್ಕೆ ಸಿಕ್ಕ ಚಿನ್ನದ ಪದಕವೆಂದು ಹೇಳಿದರೆ ತಪ್ಪಾಗಲಾರದು.

ಪರಮ ವಿರಾಗಿ, ಆದರೆ ವ್ಯಾಸಂಗದುದ್ದಕ್ಕೂ ಗಳಿಸಿದ್ದು ಸ್ವರ್ಣ ಪದಕಗಳನ್ನು! ಸ್ವರ್ಣ ಪದಕಗಳನ್ನು ಗಳಿಸುವುದು ಗುರಿಯಾಗಿರಲಿಲ್ಲ. ಓದಿನಲ್ಲಿ ಆಸಕ್ತಿ, ತನ್ಮಯತೆ, ಗ್ರಹಣಶಕ್ತಿ, ನೆನಪಿನಶಕ್ತಿ ಎಲ್ಲವನ್ನು ಪಡೆದಿದ್ದ ಗುರುಗಳನ್ನು ಪ್ರಶಸ್ತಿ ಪದಕಗಳೇ ಹುಡುಕಿಕೊಂಡು ಬಂದವು. ಅದರ ನೆನಪಿಗಾಗಿ ಗುರುಗಳಿಗೆ ಒಂದು ಸತ್ಕಾರ ಸಮಾರಂಭವನ್ನು ಸೋಲಾಪುರದಲ್ಲಿ ಏರ್ಪಡಿಸಿ, ರಂಭಾಪುರಿ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಅವರನ್ನು ಸತ್ಕರಿಸಲಾಯಿತು.

ಅಂದಿನ ಪತ್ರಿಕೆಗಳಾದ ಮರಾಠಿಯ ಸಂಚಾರ್, ತರುಣ್ ಭಾರತ್, ಕನ್ನಡದಲ್ಲಿ ಕನ್ನಡಮ್ಮ, ನವನಾಡು ಈ ಪತ್ರಿಕೆಗಳಲ್ಲಿ ಗುರುಗಳನ್ನು ಸನ್ಮಾನಿಸಿದ ವಿಚಾರಗಳು ಪ್ರಕಟಗೊಂಡಿದ್ದವು.

ಸೊಲ್ಲಾಪುರದಲ್ಲಿ ಡಾ॥ ಚಂದ್ರಶೇಖರ ಶಿವಾಚಾರ್ಯರ ಸತ್ಕಾರ
ಕನ್ನಡಮ್ಮ 31–8–1988



सोलापूर येथील वीरशैव युवक संघटनेच्यावतीने रंभापुरीचे जगद्गुरू रूद्रमुनीदेव हे गुळेदगुडचे जगद्गुरू डॉ. चंद्रशेखर शिवाचार्य यांचा सत्कार करतानांचे छायाचित्र. छायाचित्र- माळगे, सोलापूर.

ಸೊಲ್ಲಾಪುರದ ವೀರಶೈವರಿಗೆ ಗುಳೇದಗುಡ್ಡದ ಸ್ವಾಮಿಗಳಾದ ಡಾ॥ ಚಂದ್ರಶೇಖರ ಶಿವಾಚಾರ್ಯರ ಸಿದ್ಧಾಂತ ಶಿಖಾಮಣಿಯನ್ನು ಕುರಿತು ಪ್ರವಚನವೆಂದರೆ ಸಾವಿರಾರು ಜನ ಸೇರುತ್ತಿದ್ದರು. 1988ರ ವೇಳೆಗಾಗಲೇ ಉತ್ತರಕರ್ನಾಟಕ, ಮಹಾರಾಷ್ಟ್ರದಲ್ಲಿ ಗುರುಗಳು ತಮ್ಮ ಉಪನ್ಯಾಸಗಳ ಮೂಲಕ ಬಹಳ ಪ್ರಸಿದ್ಧಿ ಪಡೆದಿದ್ದರು. 1988ರ ಜುಲೈ ತಿಂಗಳ 19ನೇ ತಾರೀಖಿನಿಂದ 6–8–1988ರವರೆಗೆ ಡಾ॥ ಚಂದ್ರಶೇಖರ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿ ಪ್ರವಚನವನ್ನು ಅಲ್ಲಿನ ಮೀಟಗಲ್ಲಿಯ ಶಿವಾನುಭವ ಮಂಗಲ ಕಾರ್ಯಾಲಯದಲ್ಲಿ ನಡೆಸಿಕೊಟ್ಟರು. 7ನೇ ದಿನಾಂಕ ಶ್ರೀ ಶಿವಯೋಗಿ ಶಿವಾಚಾರ್ಯರ ದ್ವಾದಶ ಶತಮಾನೋತ್ಸವವನ್ನು ಆಚರಿಸುವ ಸಲುವಾಗಿ ಸಿದ್ಧಾಂತ ಶಿಖಾಮಣಿಯನ್ನು ಕುರಿತು ವಿಚಾರ ಸಂಕಿರಣ ಮತ್ತು 8ನೇ ದಿನಾಂಕದಂದು ಪಶ್ಚಿಮ ಬಂಗಾಲ ಸರಕಾರದ ಸ್ವರ್ಣ ಪದಕ ಪಡೆದ ಗುಳೇದಗುಡ್ಡದ ಅಮರೇಶ್ವರ ಮಠದ ಮಠಾಧ್ಯಕ್ಷರಾದ ಡಾ॥ ಚಂದ್ರಶೇಖರ ಶಿವಾಚಾರ್ಯರ ಸತ್ಕಾರ ಸಮಾರಂಭವನ್ನು ಶ್ರೀ ರಂಭಾಪುರಿ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಅತ್ಯಂತ ವೈಭವದಿಂದ ಆಚರಿಸಲಾಯಿತು.

ಈ ಸಮಯದಲ್ಲಿ ಡಾ॥ ಚಂದ್ರಶೇಖರ ಶಿವಾಚಾರ್ಯರು ಬರೆದ ಶ್ರೀ ವೀರಭದ್ರ ಜಗದ್ಗುರುಗಳು ಎಂಬ ಕನ್ನಡ ಪುಸ್ತಕದ ಮರಾಠಿ ಅನುವಾದವನ್ನು ರಂಭಾಪುರಿ ಶ್ರೀಗಳು ಬಿಡುಗಡೆ ಮಾಡಿದರು. ವೀರಭದ್ರ ಜಗದ್ಗುರುಗಳ ಬಗ್ಗೆ ಪುಸ್ತಕ ಬರೆಯಲು ಕಾರಣ ವೀರಭದ್ರ ಜಗದ್ಗುರುಗಳು ಉದ್ದಾಮ ಪಂಡಿತರೂ ಸಾರಸ್ವತ ಪ್ರಪಂಚದಲ್ಲಿ ತನ್ಮಯರಾಗಿರುವವರೂ, ಶಿವಾದ್ವೈತ ಸಿದ್ಧಾಂತ ಪ್ರಕಾಶನದಲ್ಲಿ ಉತ್ಸಾಹವುಳ್ಳವರೂ ಆಗಿದ್ದರಿಂದಲೇ ಡಾ॥ ಚಂದ್ರಶೇಖರ ಶಿವಾಚಾರ್ಯರು ಅವರನ್ನು ಕುರಿತು ಕನ್ನಡದಲ್ಲಿ ಪುಸ್ತಕ ಬರೆದದ್ದು. 8ನೇ ತಾ.ನಂದು ಸಂಜೆ ಪಶ್ಚಿಮ ಬಂಗಾಲ ಸರಕಾರದ ಸ್ವರ್ಣ ಪದಕ ಪಡೆದ ಪೂಜ್ಯ ಡಾ॥ ಚಂದ್ರಶೇಖರ ಶಿವಾಚಾರ್ಯರಿಗೆ ಮಾನಪತ್ರ ಹಾಗೂ ಬೆಳ್ಳಿಯ ಶ್ರೀ ಸಿದ್ಧೇಶ್ವರ ಪ್ರತಿಮೆಯನ್ನು ಕೊಟ್ಟು ರಂಭಾಪುರಿ ಜಗದ್ಗುರುಗಳು ಸತ್ಕಾರ ಮಾಡಿದರು.

ಸತ್ಕಾರ ಸ್ವೀಕರಿಸಿ ಉತ್ತರಿಸುತ್ತಾ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ **ಸಮಾಜಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಳ್ಳುವುದಾಗಿ ತಿಳಿಸಿದರು**. ಈ ಮಾತುಗಳನ್ನು ಸ್ವಾಮೀಜಿ ಹೇಳಿದ್ದು 1988ರಲ್ಲಿ. 26 ವರ್ಷಗಳಿಂದ ಈ ಗಳಿಗೆಯವರೆವಿಗೂ (2014) ಅಂದು ತಾವಾಡಿದ ಮಾತಿನಂತೆ ಪ್ರತೀಕ್ಷಣ ತಮ್ಮನ್ನು ತಾವು ಸಮಾಜಕ್ಕೆ ಸಂಪೂರ್ಣವಾಗಿ ಸಮರ್ಪಿಸಿಕೊಂಡುಬಿಟ್ಟಿದ್ದಾರೆ.

ಡಿ.ಲಿಟ್ ಪದವಿಗಾಗಿ ಅಧ್ಯಯನ ಮಾಡುವಾಗ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವೇದಾಂತ ವಿಭಾಗದ ರಿಸರ್ಚ್ ಅಸೋಸಿಯೇಟ್ ಆಗಿದ್ದ ಡಾ॥ ಚಂದ್ರಶೇಖರ ಶಿವಾಚಾರ್ಯರು ವಿದ್ವತ್ ಸಂಘದ ಕಾರ್ಯದರ್ಶಿಯಾಗಿದ್ದಾಗ ಪತ್ರಿಕೆಗೆ ಕೊಟ್ಟ ಲೇಖನ 6–1–1986 ಮತ್ತು 12–1–1986ರಲ್ಲಿ 'ಪಂಚಾಚಾರ್ಯ ಪ್ರಭಾ'ದಲ್ಲಿ ಪ್ರಕಟಗೊಂಡಿತು.

ಕಾಶೀ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಶಕ್ತಿವಿಶಿಷ್ಟಾದ್ವೈತ ವಿದ್ಯಾರ್ಥಿಗಳ ಅಧ್ಯಯನದ ಸಲುವಾಗಿ ತಿರುಚನಾಪಲ್ಲಿ, ಭದ್ರಾವತಿ ಈ ಊರುಗಳಿಂದ ಸ್ಕಾಲರ್‌ಶಿಪ್ ಸಿಗುವಂತೆ ಮಾಡಿದರು. ಹಾಗೆಯೇ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದಿಂದ 8–5–1986ನೇ ವರ್ಷದಿಂದ ಇಬ್ಬರು ವಿದ್ಯಾರ್ಥಿಗಳಿಗೆ 150ರೂ.ಗಳ ಸ್ಕಾಲರ್‌ಶಿಪ್ಪನ್ನು ಶಾಶ್ವತವಾಗಿ ಕೊಡುವಂತೆ ಮಾಡಿದರು. ಈ ಎರಡು ಲೇಖನಗಳಿಂದ ನಮಗೆ ತಿಳಿಯುವು–ದೇನೆಂದರೆ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಗೆ ಓದಿನಲ್ಲಿ ಆಸ್ತೆಯಿದ್ದ ಬಡ ವಿದ್ಯಾರ್ಥಿಗಳಿಗೆ ನೆರವು ನೀಡಬೇಕೆಂಬ ಹಂಬಲ–ಅವರು ಓದಲಾರಂಭಿಸಿದಾಗಿನಿಂದಲೇ ಇದ್ದುದ್ದು ಕಂಡುಬರುತ್ತದೆ.

15–7–1989

ಚಂದ್ರಶೇಖರ ಶ್ರೀಗಳಿಗೆ ತರ್ಲಘಟ್ಟದಲ್ಲಿ ಸತ್ಕಾರ

ಬ. ತರ್ಲಘಟ್ಟ 14– ಕಾಶೀ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ಬಬಲೇಶ್ವರದ ಮಹಾದೇವ ಶಿವಾಚಾರ್ಯರಿಗೆ ಹಾಗೂ ಗುಳೇದಗುಡ್ಡದ ಡಾ. ಚಂದ್ರಶೇಖರ ಶಿವಾಚಾರ್ಯರಿಗೆ ಕುಂದಗೋಳ ತಾಲೂಕಿನ ತರ್ಲಘಟ್ಟದಲ್ಲಿ ಸತ್ಕರಿಸಲಾಯಿತು.

समाजाला जीवन समर्पण म्हणजेच समाजकार्य होय



सोलापूर - सोलापूर शिवानुभव मंगल कार्यालय मीठ गल्ली येथे सिद्धांत सिखामणी या ग्रंथाच्या चर्चासत्राची यशस्वी सांगता सोमवार रोजी झाली. १९ जुलै पासून ७ ऑगस्टपर्यंत श्री. ष. ब्र. डॉ. चंद्रशेखर शिवाचार्य गुळेदगुड यांनी या संपूर्ण ग्रंथाचा सारांश वीरशैवांना दिला. डॉ. चंद्रशेखर यांचा सत्कार रंभापुरीचे जगद्गुरु यांच्या शुभ हस्ते मोठ्या थाटाने पार पडला. हा कार्यक्रम पार पाडण्यासाठी वीरशैव युवक संघटना व श्री. बसवराज शास्त्री यांनी खूप परिश्रम घेतले. या प्रसंगी त्यांना रंभापूरीच्या जगद्गुरुंच्या हस्ते चांदीची सिद्धेश्वर प्रतिमा व मानपत्र प्रदान करण्यात आले.

या सत्काराला उत्तर देताना डॉ. चंद्रशेखर शिवाचार्य यांनी म्हटले की, माझा आज जो सत्कार केला जात आहे, त्यामध्ये एक शाल मला पांघरण्यात आली तर त्याचा अर्थ असा नाही की, माझी विद्वत्ता ही या शालीमध्येच अडकून रहावी. तरी समाजाने अशा या शालीमध्ये अडकून न राहता समाजप्रबोधनपर कार्य करावेत. आपली विद्वत्ता व सामाजिक कार्य मोठ्या प्रमाणात व जिद्दीने तडीस नेले पाहिजे.

याच दिवशी सकाळी श्री कुंभ मिरवणूक काढण्यात आली होती. यामध्ये अग्रभागी चौघडा, घोडा, भजनी मंडळ व हजारो कुंभ घेवून महिला व शेवटी सिद्धेश्वर महाराजांचा फोटो अशी ही मिरवणूक शिवानुभव मंगल कार्यालयापासून निघाली. सिद्धेश्वर मंदिरातील योगीनाथाच्या समाधीला त्या सर्व कुंभाचा अभिषेक करण्यात आला. त्यानंतर दुपारी शिवानुभव मंगल कार्यालय येथे चार ते पाच हजार भाविकांना प्रसाद वाटपाचा कार्यक्रम पार पडला.

याप्रसंगी जगद्गुरु यांचे हस्ते वीरशैव युवक संघटनेचे अध्यक्ष श्री. नंदु मुस्तारे यांचा शाल घालून सत्कार करण्यात आला. तसेच मान्यवर व्यक्तींचा व कलाकारांचाही सत्कार करण्यात आला. याही पुढे बसवराज शास्त्री यांनी समाज प्रबोधनासाठी कुठलाही कार्यक्रम या युवक संघटनेला सांगावेत व युवक संघटनेचे सर्वजण त्यांना जरुर ती मदत करुन व आजच्या सोहळ्याचे सर्व श्रेय श्री. बसवराज शास्त्री यांनाच जाते. असे युवक संघटनेचे श्री. जगदीश पाटील यांनी आपल्या भाषणात सांगितले. हा सर्व मोठा सोहळा पार पाडण्यासाठी सर्वश्री नंदु मुस्तारे, रमेश पाटील, रमेश दुलंगे, चिदानंद वनारोटे, सिद्धारुढ निंबाळे, कल्याणी बिराजदार, शिवलिंग माळगे, आप्पासाहेब कोरपें, सुनील गुंगे, जगदीश पाटील, हिरे हब्बू, मल्लिनाथ गुरव, अजीत कोनापूरे, शंकर गवळी, अनील परमशेट्टी यांनी खूप परिश्रम घेतले.

ಆಶೀರ್ವಾದ

ಶ್ರೀಗಳು ಕಾಶೀ ಪೀಠದ ಗುರುಕುಲದಲ್ಲಿ ಅಧ್ಯಯನವನ್ನು ಮಾಡುತ್ತಿರುವಾಗ ಅಂದರೆ 1971ರಿಂದ 72ರಲ್ಲಿ ಕಾಶೀ ವೀರಶೈವ ವಿದ್ವತ್ ಸಂಘದ ಕಾರ್ಯದರ್ಶಿಯಾಗಿದ್ದರಷ್ಟೆ. ಆಗ ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ ವೀರಶೈವ ಅಧ್ಯಯನ ಪೀಠವನ್ನು ಸ್ಥಾಪಿಸುವ ಉದ್ದೇಶದಿಂದ ಸಂಘದ ಸದಸ್ಯರೊಂದಿಗೆ ವಿಚಾರ ಮಾಡಿ 11–1–72ರಲ್ಲಿ ಬೆಂಗಳೂರಿನಲ್ಲಿ ನಡೆಯುವ ಜಗದ್ಗುರು ಪಂಚಾಚಾರ್ಯ ಸಮ್ಮೇಳನಕ್ಕೆ ಇಲ್ಲಿನ ಪ್ರತಿನಿಧಿಯನ್ನು ಕಳಿಸಿ ಅದಕ್ಕೆ ಬೇಕಾಗುವ ಧನಸಂಗ್ರಹಕ್ಕಾಗಿ ಯೋಜನೆಯನ್ನು ಸಿದ್ಧಪಡಿಸಿದರು. ಆ ಸಮ್ಮೇಳನದಲ್ಲಿ ಕಾಶಿ ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾ ಸನ್ನಿಧಿಯವರ ವಿಶೇಷ ಪ್ರಯತ್ನದ ಫಲವಾಗಿ ದಾನಿಗಳಿಂದ ಸ್ವಲ್ಪ ಹಣ ಸಂಗ್ರಹವಾಯಿತು. ಆದರೆ ಪೀಠ ಸ್ಥಾಪನೆಗೆ ಬೇಕಾದ ಒಂದು ಲಕ್ಷ ರೂ.ಗಳು ಸಂಗ್ರಹವಾಗಲಿಲ್ಲ.

ಡಾ॥ ಚಂದ್ರಶೇಖರ ಶಿವಾಚಾರ್ಯರು ಧೃತಿಗೆಡದೆ ತಮ್ಮ ಪ್ರಯತ್ನವನ್ನು ಮುಂದುವರೆಸಿದರು. ಸಂಪೂರ್ಣಾನಂದ ಸಂಸ್ಕೃತ ವಿದ್ಯಾಲಯದ ವೇದಾಂತ ವಿಭಾಗಾಧ್ಯಕ್ಷರಾದ ಪಂ. ದೇವಸ್ವರೂಪ ಮಿಶ್ರ ಈಗಾಗಲೇ ಶ್ರೀಗಳ ಪಿಎಚ್.ಡಿ. ಹಾಗೂ ಡಿ.ಲಿಟ್ ಪದವಿಗಳಿಗೆ ಮಾರ್ಗದರ್ಶಕರಾಗಿದ್ದ ಕಾರಣ ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ಗೌರವ ಭಾವಗಳು ಉದಯಿಸಿದ್ದವು. ಶ್ರೀಗಳು ತಮ್ಮ ಮಾರ್ಗದರ್ಶಕರೊಂದಿಗೆ ಚರ್ಚಿಸಿ, ಅವರ ಮನವೊಲಿಸಿ ಯಾವ ನಿಧಿಯನ್ನೂ ವಿಶ್ವವಿದ್ಯಾಲಯಕ್ಕೆ ಕೊಡದೆ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ 'ಶಕ್ತಿವಿಶಿಷ್ಟಾದ್ವೈತ ವೇದಾಂತ ಪೀಠ'ವನ್ನು ತಮ್ಮ ಪರಿಶ್ರಮದ ಮೂಲಕ ಸ್ಥಾಪಿಸುವಲ್ಲಿ ಸಫಲರಾಗಿ ಒಂದು ಇತಿಹಾಸವನ್ನೇ ನಿರ್ಮಿಸಿಬಿಟ್ಟರು. ಇವರು ಈ ಕಾರ್ಯವನ್ನು ಮಾಡುವಾಗ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರ ಆಶೀರ್ವಾದ ಸಂಪೂರ್ಣವಾಗಿ ಇವರ ಮೇಲೆ ಇತ್ತು.

ದೂರದ ಉತ್ತರಪ್ರದೇಶದ ವಾರಣಾಸಿಯಲ್ಲಿ ತಮ್ಮ ಧರ್ಮದ ಜನರ ಬೆಂಬಲವಿಲ್ಲದೆ, ಧನ ಬೆಂಬಲವಿಲ್ಲದೆ ಯಾವ ರಾಜಕಾರಣಿಗಳ ನೆರವೂ ಇಲ್ಲದೆ 200 ವರ್ಷಗಳಿಗೂ ಹಳೆಯದಾದ ಸಂಪೂರ್ಣಾನಂದ ಸಂಸ್ಕೃತ ವಿದ್ಯಾಲಯದಲ್ಲಿ ಶಕ್ತಿವಿಶಿಷ್ಟಾದ್ವೈತಪೀಠ ಸ್ಥಾಪನೆಗೊಂಡದ್ದು ಶ್ರೀ ಷ.ಬ್ರ. ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಜ್ಞಾನ ಬೆಂಬಲದಿಂದ. ನಿಜಕ್ಕೂ ಇದೊಂದು ಐತಿಹಾಸಿಕ ಘಟನೆಯಾಗಿ ಅವರು ಇತಿಹಾಸವನ್ನೇ ನಿರ್ಮಿಸಿಬಿಟ್ಟರು. ಜನಬಲಕ್ಕಿಂತ ಜ್ಞಾನಬಲ ಹೆಚ್ಚಿನದೆಂದು ತೋರಿಸಿಕೊಟ್ಟ ಜ್ಞಾನಿಗಳು ಇವರು.

1984ರಲ್ಲಿ ಸಂಪೂರ್ಣಾನಂದ ಸಂಸ್ಕೃತ ವಿದ್ಯಾಲಯದಲ್ಲಿ ಶಕ್ತಿವಿಶಿಷ್ಟಾದ್ವೈತ ವೇದಾಂತ ಪೀಠ ಸ್ಥಾಪನೆಗೊಂಡಿತು. ಆ ಸಮಯದಲ್ಲಿ ಈ ವಿಷಯಗಳನ್ನು ಬೋಧಿಸುವ ಅಧ್ಯಾಪಕರು ಇಲ್ಲದೆ ಇದ್ದ ಕಾರಣ ಶ್ರೀ ಷ.ಬ್ರ. ಡಾ॥ ಚಂದ್ರಶೇಖರ ಶಿವಾಚಾರ್ಯರೇ ಗೌರವ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಾ ಜೊತೆ ಜೊತೆಯಲ್ಲೇ ಡಿ.ಲಿಟ್ ಪದವಿಗಾಗಿ ಸಂಶೋಧನೆ ಮುಂದುವರೆಸಿದರು. 1984ರಿಂದ 89ರವರೆಗೆ 5 ವರ್ಷಗಳ ಕಾಲ ವೇದಾಂತ ವಿಭಾಗದಲ್ಲಿ ವೇದಾಂತದ ಪಾಠಗಳನ್ನು ಹೇಳುವುದರ ಜೊತೆಗೆ ದೇವನಾಗರಿ ಲಿಪಿಗೆ ರೂಪಾಂತರಗೊಳಿಸಿ ಕಾಶೀಪೀಠದ ಶಿವಧರ್ಮ ಗ್ರಂಥಮಾಲೆಯಿಂದ ಎಲ್ಲಾ ಪುಸ್ತಕಗಳನ್ನು ಮುದ್ರಿಸಿ ಪ್ರಕಾಶಗೊಳಿಸುವ ಬಹುದೊಡ್ಡ ಕಾರ್ಯವನ್ನು ಸ್ಥಳೀಯ ವಿದ್ವಾಂಸರ ಸಹಾಯದಿಂದ ಸಹಜವಾಗಿ ಮಾಡಿದರು. ಈ ರೀತಿಯಾಗಿ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರು ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವೀರಶೈವ ಧರ್ಮದರ್ಶನಗಳ ಅಧ್ಯಯನ ವ್ಯವಸ್ಥೆಯನ್ನು ಮಾಡಿ, ಮಠದ ವೀರಶೈವ ವಿದ್ವತ್ ಸಂಘದ ಬಹುದಿನಗಳ ಸ್ವಪ್ನವನ್ನು ಸಾಕಾರಗೊಳಿಸಿದ ಧೀಮಂತರು.

ಕಾಶೀ ಹಿಂದೂ ವಿ.ವಿ.ಯಲ್ಲಿ ವೀರಶೈವ ಆಗಮ ಅಧ್ಯಯನ ಪೀಠ ಸ್ಥಾಪನೆ

21–9–1998

ವಾರಣಾಸಿ 20, ಕಾಶೀ ಹಿಂದೂ ವಿಶ್ವವಿದ್ಯಾಲಯವು ಎಲ್ಲ ವಿಧ ಪ್ರಾಚೀನ ಹಾಗೂ ಆಧುನಿಕ ವಿದ್ಯೆಗಳ ಅಧ್ಯಯನ ಕೇಂದ್ರವಾಗಿದೆ. ವಿಶ್ವದ ಎಲ್ಲೆಡೆಯಿಂದಲೂ ಅಧ್ಯಯನಕ್ಕಾಗಿ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿರುತ್ತಾರೆ. ಇಲ್ಲಿರುವ ಅನೇಕ ವಿಭಾಗಗಳಲ್ಲಿ "ಸಂಸ್ಕೃತ ವಿದ್ಯಾ ಧರ್ಮ ವಿಜ್ಞಾನ ಸಂಕಾಯ"ವೂ ಒಂದು ವಿಭಾಗವಾಗಿದೆ. ಇಲ್ಲಿ ವೇದ, ವೇದಾಂತ, ನ್ಯಾಯ, ವ್ಯಾಕರಣ, ಮೀಮಾಂಸಾ ನಡೆಯುತ್ತ ಬಂದಿದೆ. ಇತ್ತೀಚೆಗೆ "ಧರ್ಮಾಗಮ" ಎಂಬ ವಿಷಯದ ಅಧ್ಯಯನವು ಪ್ರಾರಂಭವಾಗಿದ್ದು ಅದರಲ್ಲಿ "ವೀರಶೈವ ಆಗಮ"ದ ಒಂದು ಸ್ವತಂತ್ರ ಶಾಖೆಯು ಸ್ಥಾಪಿತವಾಗಿರುವುದು ಅತ್ಯಂತ ಸ್ವಾಗತಾರ್ಹವಾದ ವಿಷಯವು.

ದಿ. 10–8–98 ರಂದು ನಡೆದ ಅಧ್ಯಯನ ಬೋರ್ಡ್ ಮೀಟಿಂಗ್‌ನಲ್ಲಿ ವೀರಶೈವ ಆಗಮಗಳ ಅಧ್ಯಯನ ಧರ್ಮಾಗಮ ವಿಭಾಗದ ಅಧ್ಯಕ್ಷರಾದ ಕಮಲೇಶದತ್ತ ತ್ರಿಪಾಠಿಯವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗ್‌ನಲ್ಲಿ ಪ್ರೊ. ಕೃಷ್ಣಕಾಂತ ಚತುರ್ವೇದಿ, ಪ್ರೊ. ಸುಧಾಂಶು ಶೇಖರ ಶಾಸ್ತ್ರಿ, ಪ್ರೊ. ರಾಮನಿವಾಸ ತಿವಾರಿ, ಡಾ॥ ಕಮಲೇಶ ಝಾ, ಡಾ॥ ಕೃಷ್ಣಕಾಂತ ಶರ್ಮಾ ಮುಂತಾದ ವಿದ್ವಾಂಸರು ಉಪಸ್ಥಿತರಿದ್ದು, ಈ ಅಧ್ಯಯನ ಪೀಠ ಸ್ಥಾಪನೆಗೆ ಸಮ್ಮತಿಸಿದ್ದಾರೆ.

ಈ ಪೀಠದಲ್ಲಿ ಶಾಸ್ತ್ರಿ (ಬಿ.ಎ.) ಆಚಾರ್ಯ (ಎಂ.ಎ.) ಕಕ್ಷೆಗಳಿಗಾಗಿ 5 ವರ್ಷ ಅಧ್ಯಯನ ಮಾಡಬೇಕಾಗುವುದು. ಪಿ.ಯು.ಸಿ.ಯಲ್ಲಿ ಸಂಸ್ಕೃತ ವಿಷಯವನ್ನು ತೆಗೆದು ಕೊಂಡು ಪಾಸಾದವರಿಗೆ ಇಲ್ಲಿ ಪ್ರವೇಶಾವಕಾಶವಿದೆ. ವಿಭಾಗಾಧ್ಯಕ್ಷರಾದ ಡಾ॥ ಕಮಲೇಶ ದತ್ತ ತ್ರಿಪಾಠಿ ಮತ್ತು ವಿಭಾಗೀಯ ರೀಡರ್ ಆದ ಡಾ। ಕಮಲೇಶ ಝಾ ಇವರುಗಳು ಕಾಶೀ ಜಗದ್ಗುರುಗಳ ಮಾರ್ಗದರ್ಶನದಲ್ಲಿ ಪಠ್ಯಗ್ರಂಥಗಳನ್ನು ನಿರ್ಣಯಿಸಿದ್ದಾರೆ. ಆ ನಿರ್ಣಯದ ಪ್ರಕಾರ ಪಾರಮೇಶ್ವರಾಗಮ, ಚಂದ್ರಜ್ಞಾನಾಗಮ, ಕಾರಣಾಗಮ, ಸೂಕ್ಷ್ಮಾಗಮ, ಮಕುಟಾಗಮ, ಸಿದ್ಧಾಂತ ಶಿಖಾಮಣಿ, ಅನುಭವಸೂತ್ರ, ಲಿಂಗಧಾರಣ ಚಂದ್ರಿಕಾ, ಶ್ರೀಕರಭಾಷ್ಯ ಅಲ್ಲದೇ ಜಗದ್ಗುರುಗಳ ಪಿಎಚ್.ಡಿ. ಶೋಧ ಪ್ರಬಂಧವಾದ ಸಿದ್ಧಾಂತ ಶಿಖಾಮಣಿ ಸಮೀಕ್ಷಾ ಮತ್ತು ಡಿ.ಲಿಟ್ ಪ್ರಬಂಧವಾದ ಶಕ್ತಿ ವಿಶಿಷ್ಟಾದ್ವೈತ ತತ್ತ್ವತ್ರಯ ವಿಮರ್ಶೆ ಎಂಬ ಶ್ರೇಷ್ಠ ಕೃತಿಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಗಿದೆ. ಆಚಾರ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಸಂಶೋಧನೆಗೂ ಅವಕಾಶವಿದೆ. ಅಧ್ಯಯನಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ಕಾಶೀ ಜಂಗಮವಾಡಿ ಮಠದಲ್ಲಿ ಉಚಿತ ವಸತಿ ಹಾಗೂ ಪ್ರಸಾದದ ವ್ಯವಸ್ಥೆಯಿದೆ ಎಂದು ಕಾಶೀ ಜಗದ್ಗುರುಗಳವರು ಸಂದೇಶ ಕೊಟ್ಟಿರುವುದಾಗಿ ಡಾ॥ ಪಂಚಾಚಾರ್ಯ ವಾರ್ತಾಧಿಕಾರಿ ಬೆಟ್ಟದಯ್ಯ ಹಿರೇಮಠ ತಿಳಿಸಿದ್ದಾರೆ.

ಕಾಶೀ ವಿಶ್ವವಿದ್ಯಾಲಯದಲ್ಲಿ ವೀರಶೈವ ಆಗಮ ಅಧ್ಯಯನ ಪೀಠ ಸ್ಥಾಪನೆ

ಬಡಿದ ಸಿಡಿಲು ವಾರಪತ್ರಿಕೆ, 23-9-1998

ವಾರಣಾಸಿ ಆ-10 ಭಾರತದಲ್ಲಿ ಸುಪ್ರಸಿದ್ಧವಾದ ಕಾಶೀ ಹಿಂದೂ ವಿಶ್ವವಿದ್ಯಾಲಯದ "ಸಂಸ್ಕೃತ ವಿದ್ಯಾಧರ್ಮ ವಿಜ್ಞಾನ ಸಂಚಾಲಯ"ದಲ್ಲಿ ಇತ್ತೀಚೆಗೆ ವೀರಶೈವ ಆಗಮದ ಅಧ್ಯಯನ ಶಾಖೆಯು ಸ್ವೀಕೃತವಾಗಿದೆ.

ಇಂದು ನಡೆದ ಅಧ್ಯಯನ ಬೋರ್ಡ್ ಮೀಟಿಂಗಿನಲ್ಲಿ ಸರ್ವಾನುಮತದಿಂದ ಈ ಅಧ್ಯಯನಕ್ಕೆ ಮಂಜುರಾತಿ ದೊರೆತಿದೆ.

ಧರ್ಮಾಗಮ ವಿಭಾಗಾಧ್ಯಕ್ಷ ಪ್ರೊ. ಕಮಲೇಶದತ್ತ ತ್ರಿಪಾಠಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರೊ. ಕೃಷ್ಣಕಾಂತ ಚತುರ್ವೇದಿ, ಪ್ರೊ. ಸುಧಾಂಶು ಶೇಖರ ಶಾಸ್ತ್ರಿ, ಡಾ. ಕಮಲೇಶ ಝಾ, ಡಾ. ರಾಮ ನಿವಾಸ ತಿವಾರಿ ಮುಂತಾದ ವಿದ್ವಾಂಸರು ಉಪಸ್ಥಿತರಿದ್ದರು.

ವೀರಶೈವ ಆಗಮ ಪಠ್ಯಕ್ರಮವನ್ನು ತಯಾರಿಸಲು ಈ ವಿದ್ವಾಂಸರು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನವನ್ನು ಪಡೆದಿದ್ದಾರೆ. ಕಾಶೀ ಜಂಗಮವಾಡಿಮಠದ ಶೈವಭಾರತೀ ಶೋಧ ಪ್ರತಿಷ್ಠಾನದಿಂದ ಪ್ರಕಟಗೊಂಡ ಪಾರಮೇಶ್ವರಾಗಮ ಸೂಕ್ಷ್ಮಾಗಮ ಕಾರಾಣಾಗಮ ಮಕುಟಾಗಮ ಶ್ರೀ ಸಿದ್ಧಾಂತ ಶಿಖಾಮಣಿ ಅನುಭವಸೂತ್ರ ಲಿಂಗಧಾರಣ ಚಂದ್ರಿಕಾ ಶ್ರೀಕರಭಾಷ್ಯ ಸಿದ್ಧಾಂತಶಿಖಾಮಣಿ ಸಮೀಕ್ಷ ಮತ್ತು ಶಕ್ತಿವಿಶಿಷ್ಟಾದ್ವೈತ ತತ್ತ್ವತ್ರಯ ವಿಮರ್ಶ ಮುಂತಾದ ಗ್ರಂಥಗಳನ್ನುಳ್ಳ ಪಠ್ಯ ಗ್ರಂಥಗಳನ್ನಾಗಿ ಸ್ವೀಕರಿಸಲಾಗಿದೆ.

ಶಾಸ್ತ್ರಿ ಬಿ.ಎ.; ಆಚಾರ್ಯ ಎಂ.ಎ. ಹೀಗೆ ಐದು ವರ್ಷಗಳಲ್ಲಿ ಈ ಅಧ್ಯಯನವು ಪೂರ್ಣವಾಗುವುದು. ಪಿ.ಯು.ಸಿ.,ಯಲ್ಲಿ ಸಂಸ್ಕೃತ ವಿಷಯ ತೆಗೆದುಕೊಂಡು ಪಾಸಾದವರಿಗೆ ಇಲ್ಲಿ ಪ್ರವೇಶ ದೊರೆಯುವುದು.

ಈ ಅಧ್ಯಯನಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ಕಾಶೀ ಜಂಗಮವಾಡಿ ಮಹಾಮಠದಲ್ಲಿ ಉಚಿತವಾಗಿ ವಸತಿ ಹಾಗೂ ಪ್ರಸಾದದ ವ್ಯವಸ್ಥೆ ಇದೆ ಎಂದು ಕಾಶೀ ಶ್ರೀ ಜಗದ್ಗುರುಗಳವರು ತಿಳಿಯಪಡಿಸಿದ್ದಾರಲ್ಲದೆ ಅಪೇಕ್ಷಿತರು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ.

ಕಾಶೀ ವಿ.ವಿ.ದಲ್ಲಿ ಹೊಸ ಅಧ್ಯಯನ ಶಾಖೆ ತೆರೆಯಲು ಅನುಮತಿ

ಸಂಯುಕ್ತ ಕರ್ನಾಟಕ 23-9-1998

ಕೂಡ್ಲಿಗಿ, 22-ಪ್ರಸಿದ್ಧ ಉತ್ತರ ಭಾರತದ ಕಾಶೀ ವಿಶ್ವವಿದ್ಯಾಲಯದ 'ಸಂಸ್ಕೃತ ವಿದ್ಯಾಧರ್ಮ ವಿಜ್ಞಾನ ಸಂಕಾಯ'ದಲ್ಲಿ ಇತ್ತೀಚೆಗೆ ವೀರಶೈವ ಆಗಮದ ಅಧ್ಯಯನ ಶಾಖೆ ತೆರೆಯಲು ಅನುಮತಿ ಸಿಕ್ಕಿದೆ ಎಂದು ಕಾಶಿ ಜಂಗಮವಾಡಿ ಮಠದ ಮೂಲಗಳು ಪ್ರಕಟಣೆಯಲ್ಲಿ ತಿಳಿಸಿವೆ. ಇತ್ತೀಚೆಗೆ ವಿಶ್ವವಿದ್ಯಾಲಯದಲ್ಲಿ ನಡೆದ ಅಧ್ಯಯನ ಬೋರ್ಡ್ ಸಭೆಯಲ್ಲಿ ಈ ಅಧ್ಯಯನಕ್ಕೆ ಮಂಜೂರಾತಿ ದೊರೆತಿದೆ. ಧರ್ಮಾಗಮ ವಿಭಾಗಾಧ್ಯಕ್ಷರಾದ ಪ್ರೊ. ಕಮಲೇಶದತ್ತ ತ್ರಿಪಾಠಿಯವರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಕೃಷ್ಣಕಾಂತ ಚತುರ್ವೇದಿ, ಸುಧಾಂಶು ಶೇಖರಶಾಸ್ತ್ರಿ, ಡಾ. ಕಮಲೇಶ ಝಾ, ಡಾ, ರಾಮನಿವಾಸ ತಿವಾರಿ ಮುಂತಾದ ವಿದ್ವಾಂಸರು ಉಪಸ್ಥಿತರಿದ್ದರು.

ವೀರಶೈವ ಆಗಮದ ಪಠ್ಯಕ್ರಮ ತಯಾರಿಸಲು ವಿದ್ವಾಂಸರು ಕಾಶೀ ಜಗದ್ಗುರುಗಳಾದ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಮಾರ್ಗದರ್ಶನ ಪಡೆದಿದ್ದಾರೆ. ಕಾಶೀ ಜಂಗಮವಾಡಿ ಮಠದ 'ಶೈವಭಾರತಿ ಶೋಧ ಪ್ರತಿಷ್ಠಾನದಿಂದ ಪ್ರಕಟಗೊಂಡ ಪಾರಮೇಶ್ವ ರಾಗಮ, ಚಂದ್ರಜ್ಞಾನಾಗಮ, ಸೂಕ್ಷ್ಮಾಗಮ, ಕಾರಾಣಾಗಮ, ಮಕುಟಾಗಮ, ಸಿದ್ಧಾಂತ ಶಿಖಾಮಣಿ, ಅನುಭವ ಸೂತ್ರ, ಲಿಂಗಧಾರಣ ಚಂದ್ರಿಕಾ, ಶ್ರೀಕರಭಾಷ್ಯ' ಮುಂತಾದ ಗ್ರಂಥಗಳನ್ನು ಪಠ್ಯಗಳನ್ನಾಗಿ ಸ್ವೀಕರಿಸಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ವೀರಶೈವ ಪೀಠ ಸ್ಥಾಪನೆಯಾದ ನಂತರ ಅಲ್ಲಿ ಓದುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಶ್ರೀ ಷ.ಬ್ರ. ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಸಮಾಜದ ಗಣ್ಯವ್ಯಕ್ತಿಗಳೊಂದಿಗೆ ಮತ್ತು ಮಠಾಧೀಶರುಗಳೊಂದಿಗೆ ಸಂಪರ್ಕಮಾಡಿ ಅವರಿಂದ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿ ದೊರೆಯುವಂತೆಯೂ ಮಾಡಿದರು. ಹೀಗೆ ಆ ವಿದ್ಯಾರ್ಥಿಗಳ ಉತ್ಸಾಹ ಹೆಚ್ಚುವಂತೆ ಮಾಡಿದರು.

ಹೀಗೆ ಡಾ॥ ಚಂದ್ರಶೇಖರ ಶಿವಾಚಾರ್ಯರ ಪರಿಶ್ರಮದಿಂದಾಗಿ ಅಂದಿನ ವಿದ್ಯಾರ್ಥಿಗಳಿಗೆ ದೇಶದ ನಾನಾ ಭಾಗದಿಂದ ಧನಸಹಾಯ ಮಾಡಲು ಮುಂದೆ ಬಂದರು. ಶಕ್ತಿವಿಶಿಷ್ಟಾದ್ವೈತ ವೇದಾಂತ ವಿಭಾಗದ ಮುಖ್ಯಸ್ಥರಾಗಿದ್ದಾಗ ಅತ್ಯಂತ ಜನಪ್ರಿಯತೆಗಳಿಸಿ ಆದರ್ಶ ಉಪನ್ಯಾಸಕರಾಗಿದ್ದರು. ಆಗ ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ವಿದ್ಯಾರ್ಥಿಗಳು, ಅಧ್ಯಾಪಕರು, ಉಪಕುಲಪತಿಗಳು ಹಾಗೂ ಕುಲಪತಿಗಳು ಡಾ॥ ಚಂದ್ರಶೇಖರ ಶಿವಾಚಾರ್ಯ ಗುರುಗಳನ್ನು ಗೌರವಾಭಿಮಾನದಿಂದ ಕಾಣುತ್ತಿದ್ದರು.

1988ರಲ್ಲಿ ತಮ್ಮ ಅಧ್ಯಯನವು ಅತ್ಯುನ್ನತ ಮಟ್ಟವನ್ನು ತಲುಪಿದಾಗ ಗುರುಗಳಿಗೆ ಅನೇಕ ಊರುಗಳಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸುತ್ತಿದ್ದರು. ಮೊಟ್ಟ ಮೊದಲಿಗೆ ಗುಳೇದಗುಡ್ಡದ ಜನತೆ ತಮ್ಮ ಅಮರೇಶ್ವರ ಮಠದ ಸ್ವಾಮಿಗಳಿಗೆ ಪಶ್ಚಿಮ ಬಂಗಾಲ ಸರಕಾರದ ಸ್ವರ್ಣ ಪದಕ ಲಭ್ಯವಾದ ಕಾರಣಕ್ಕಾಗಿ ಅಲ್ಲಿನ ವಿವಿಧ ಸಂಘ ಸಂಸ್ಥೆಗಳೆಲ್ಲಾ ಸೇರಿ ಸತ್ಕಾರ ಸಮಾರಂಭವನ್ನು ಏರ್ಪಡಿಸಿದರು. 9-6-88ರಲ್ಲಿ ಗುಳೇದಗುಡ್ಡದಲ್ಲಿ ಶ್ರೀ ಶಿವಯೋಗಿ ಶಿವಾಚಾರ್ಯರ ದ್ವಾದಶ ಶತಮಾನೋತ್ಸವ ಹಾಗೂ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಗೆ ಸನ್ಮಾನ ಏರ್ಪಡಿಸಿ-ಸಮಾರಂಭದ ಸಾನ್ನಿಧ್ಯವನ್ನು ಡಾ॥ ಜ.ಚ.ನಿ. ವಹಿಸಿದ್ದರು. ಈ ಸಮಾರಂಭದ ವಿವರಣೆ ಪಂಚಚಾರ್ಯ ಪ್ರಭಾದಲ್ಲಿದೆ. ಅಲ್ಲಿನ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ.

ಪಂಚಾಚಾರ್ಯ ಪ್ರಭಾ

ತಾ॥ 9–6–1988 ರಂದು ಗುಳೇದಗುಡ್ಡದ
ಪಂಚಾಯತವಾಡದಲ್ಲಿ ನಡೆದ
ಶ್ರೀ ಶಿವಯೋಗಿ ಶಿವಾಚಾರ್ಯರ ದ್ವಾದಶ
ಶತಮಾನೋತ್ಸವ
ಹಾಗೂ

ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಸನ್ಮಾನ ಸಮಾರಂಭ

ಡಾ॥ ಚಂದ್ರಶೇಖರ ಶಿವಾಚಾರ್ಯರ ಕೃತಿ ಶ್ರೇಣಿಗಳಾದ ಸಿದ್ಧಾಂತ ಶಿಖಾಮಣಿಯ "ಪ್ರವಚನಪ್ರಭೆ ಕಿರಣ–5" ಮತ್ತು "ಕಾಶಿ ವಿಶ್ವಾರಾಧ್ಯ ಪೀಠದ ಶ್ರೀ ವೀರಭದ್ರ ಜಗದ್ಗುರುಗಳು" ಎಂಬ ಗ್ರಂಥಗಳು ಡಾ॥ ಜ.ಚ.ನಿ. ಅವರ ಅಮೃತಹಸ್ತದಿಂದ ಬಿಡುಗಡೆಯಾದವು. ಇದೇ ಸಂದರ್ಭದಲ್ಲಿ "ವೀರಶೈವ ಅಷ್ಟಾವರಣ ವಿಜ್ಞಾನ"ದ ಇಂಗ್ಲಿಷ್ ಅನುವಾದಕರು ಶ್ರೀ ವ್ಹಿ.ಆರ್. ಧೋಪೇಶ್ವರ ಮತ್ತು ಶ್ರೀ ಆರ್.ಎಸ್. ಪುರಾಣಮಠ ಇವರಿಗೆ ಶ್ರೀ ಸರಸ್ವತಿ ವಿದ್ಯಾಸಂಸ್ಥೆ, ವಿಶ್ವಸ್ಥಮಂಡಳದ ಅಧ್ಯಕ್ಷರು, ಸದಸ್ಯರುಗಳಿಗೆ ಹಾಗೂ ದಾನಿಗಳಿಗೆ ಶ್ರೀ ಅಮರೇಶ್ವರ ಮಠದ ಪರವಾಗಿ ಪೂಜ್ಯ ಡಾ॥ ಜ.ಚ.ನಿ. ಅವರ ಅಮೃತಹಸ್ತದಿಂದ ಸತ್ಕಾರ ಮಾಡಲಾಯಿತು.

ಪಶ್ಚಿಮ ಬಂಗಾಲ ಸರಕಾರದ ಸ್ವರ್ಣಪದಕ ವಿಜೇತರಾದ ಶ್ರೀ ಅಮರೇಶ್ವರಮಠದ ಪೂಜ್ಯ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಗೆ ಡಾ॥ ಜ.ಚ.ನಿ. ಅವರ ಅಮೃತ ಹಸ್ತದಿಂದ ವಿಶ್ವಸ್ಥಮಂಡಳ ಹಾಗೂ ಸರಸ್ವತಿ ವಿದ್ಯಾಸಂಸ್ಥೆಯ ಪರವಾಗಿ, ವಿವಿಧ ಸಂಘ ಸಂಸ್ಥೆಗಳ ಪರವಾಗಿ ಸನ್ಮಾನ ಪಟ್ಟ ಸಮರ್ಪಣೆ ಮಾಡಲಾಯಿತು. ಶ್ರೀ ಮನೋಹರ ಶೆಟ್ಟರ್ ಸನ್ಮಾನ ಪತ್ರ ವಾಚನ ಮಾಡಿದರು.

ಸನ್ಮಾನಿತ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರು ಈ ಎಲ್ಲ ಕಾರ್ಯಕ್ರಮದ ಸಂಯೋಜಕರಾದ ಶ್ರೀ ವಿಶ್ವಸ್ಥ ಮಂಡಳ ಹಾಗೂ ಸರಸ್ವತಿ ವಿದ್ಯಾಸಂಸ್ಥೆಯನ್ನು ಗೌರವ ಅಭಿಮಾನಪೂರ್ವಕ ಸ್ಮರಿಸಿ ತಮ್ಮನ್ನು ತಾವು ಸಮಾಜದ ಹಿತಕ್ಕೆ ಸಮರ್ಪಿಸಿಕೊಂಡಿದ್ದಾಗಿಯೂ ತಮ್ಮಿಂದಾಗಬಹುದಾದ ಪ್ರತಿ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸುವುದಾಗಿ ತಿಳಿಸಿದರು. ಶ್ರೀ ಶಿವಯೋಗಿ ಶಿವಾಚಾರ್ಯರ ದ್ವಾದಶ ಶತಮಾನೋತ್ಸವ ಮತ್ತು ಗ್ರಂಥ ಬಿಡುಗಡೆ ಸಮಾರಂಭದ ಔಚಿತ್ಯವನ್ನು ಅವರು ವಿವರಿಸಿದರು.

ಡಾ॥ ಜ.ಚ.ನಿ. ಅವರು ತಮ್ಮ ಶುಭಾಶೀರ್ವಾದ ಸಂದೇಶದಲ್ಲಿ ತ್ರಿವೇಣಿ ಸಂಗಮದಂತಿರುವ ಈ ಸಮಾರಂಭವನ್ನು ತುಂಬು ಹೃದಯದಿಂದ ಹರಸಿದರು. ಯೋಜಿತ ಕಾರ್ಯಗಳ ಮೂಲಕ ಸಮಾಜಕ್ಕೆ ಸರಿಯಾದ ಮಾರ್ಗದರ್ಶನದ ಅವಶ್ಯಕತೆಯನ್ನು ಸತ್ಯ, ಶ್ರದ್ಧೆ, ವ್ಯಷ್ಟಿ ಸಮಷ್ಟಿ ಜೀವನದಲ್ಲಿ ಮನುಕುಲದ ಉದ್ಧಾರ ಎಂದು ವಿವರಿಸುತ್ತ ಶಿವಯೋಗಿ ಶಿವಾಚಾರ್ಯರ ಕೊಡುಗೆಯನ್ನು ಶಿವಾಚಾರ್ಯ ಸಂಸ್ಕೃತಿಯನ್ನು ಮತ್ತು ಡಾ॥ ಚಂದ್ರಶೇಖರ ಶಿವಾಚಾರ್ಯರ ಮಹೋನ್ನತ ಸಾಧನಕ್ರಮವನ್ನು ಪ್ರಶಂಸಿಸಿದರು.

ಕಾರ್ಯಕ್ರಮದ ನಿರ್ವಹಣೆ ಡಾ॥ ಎಂ.ವ್ಹಿ. ಉಮರ್ಜಿ ಮಾಡಿದರೆ ವೀರಭದ್ರಪ್ಪ ಬಳಿಗೇರ ಇವರು ಮಹಾಮಂಗಲ ಮಾಡಿದರು.

ಶ್ರೀ ಷ.ಬ್ರ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
ಡೋಣ್ಣೂರು ಎಂ.ಎ., ತಾ॥ ಬಾಗೇವಾಡಿ
ಜಿಲ್ಲಾ ವಿಜಾಪೂರ

1988ರಲ್ಲಿ ತಮ್ಮ ಡಿ.ಲಿಟ್ ಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದಾಗ ಗುರುಗಳ ವಿದ್ಯಾರ್ಥಿಜೀವನ ಅಂತಿಮವಾಯಿತು. ಆ ವೇಳೆಗಾಗಲೇ ಅನೇಕ ಬಡ ವಿದ್ಯಾರ್ಥಿಗಳು ಸಂಪೂರ್ಣಾನಂದ ವಿಶ್ವವಿದ್ಯಾಲಯದಲ್ಲಿ ಓದಲು ಮಾರ್ಗದರ್ಶನ ನೀಡುತ್ತಿದ್ದರಲ್ಲದೆ, ಅನೇಕರಿಗೆ ಸ್ಕಾಲರ್‌ಶಿಪ್ ಸಿಗುವ ಏರ್ಪಾಡೂ ಮಾಡಿದ್ದು–ವಿದ್ಯೆಯ ಬಗೆಗೆ ಅವರಿಗಿರುವ ಒಲವು ಎಷ್ಟೆಂಬುದು ತಿಳಿಯುತ್ತದೆ.

ಈ ಸಂದರ್ಭದಲ್ಲಿ ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯರು ಶಿವೈಕ್ಯರಾದರು. ಅವರ ಉತ್ತರಾಧಿಕಾರಿಯಾಗಿ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳನ್ನು ಆಯ್ಕೆ ಮಾಡಿ 17–11–1989ರಲ್ಲಿ ಶ್ರೀ ಕಾಶೀ ಜ್ಞಾನಸಿಂಹಾಸನಾರೋಹಣ ಮಾಡಿ ಅಂದಿನಿಂದ ಶ್ರೀ ಶ್ರೀ ಶ್ರೀ 1008 ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರೆನಿಸಿದರು. ಪೀಠಕ್ಕೆ 86ನೇ ಜಗದ್ಗುರುಗಳು ಇವರಾದರು. ವಿದ್ವತ್, ಸಕಲ ಶಾಸ್ತ್ರ ಪಾರಂಗತರೂ, ತಪಃಶಕ್ತಿ ವಾಗ್ಭೂಷಣಶಕ್ತಿ, ಪರಿಪೂರ್ಣಜ್ಞಾನ, ಸಮಾಜದ ಬಗ್ಗೆ ಕಾಳಜಿ, ಬಡ ವಿದ್ಯಾರ್ಥಿಗಳ ಬಗ್ಗೆ ಕರುಣೆ–ಹೀಗೆ ಸರ್ವಗುಣಗಳ ಗಣಿಯೇ ಆಗಿದ್ದ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳನ್ನು ಜ್ಞಾನಪೀಠಕ್ಕೆ ಅಧಿಪತಿಯನ್ನಾಗಿ ಆರಿಸಿದ್ದು–ಸರ್ವ ವೀರಶೈವ ಜನತೆಯೇ ಹೆಮ್ಮೆ ಪಡುವಂತಾಯ್ತು. ಅದನ್ನು ಸೌಭಾಗ್ಯವೆಂದರೂ ತಪ್ಪಲ್ಲ. ಸರಸ್ವತಿಯ ಜ್ಞಾನ ಭಂಡಾರವೇ ಜಗದ್ಗುರುಗಳ ರೂಪ ತಾಳಿ ನಿಂತಿದೆ!

ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯರು ಪೀಠವನ್ನಲಂಕರಿಸಿದ ನಂತರ ಮಾಡಿದ ಮೊದಲ ಕೆಲಸ ವಿದ್ವತ್ ಸಭೆ ಕರೆದದ್ದು. ದಿನಾಂಕ 20–1–1989ರಲ್ಲಿ ಜಂಗಮವಾಡಿ ಮಠದ ಜ್ಞಾನಮಂದಿರದಲ್ಲಿ ವಿದ್ವತ್ ಸಭೆ ಕರೆದರು. ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾನಿಲಯದ ನಿರ್ದೇಶಕರು ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರೂ, ಬ್ರಹ್ಮಮಹಾವಿದ್ಯಾಲಯದ ಅಧ್ಯಾಪಕರು, ತಿಬ್ಬತೀ ಸಂಸ್ಥೆಯವರು, ಸಂಪೂರ್ಣಾನಂದದ ಪೂರ್ವಕುಲಪತಿಗಳು, ಕಾಶೀ ಪಂಡಿತಸಭಾ ಮುಖ್ಯಸ್ಥರುಗಳು ಹೀಗೆ ಎಲ್ಲಾ ಪ್ರಮುಖ ವಿದ್ಯಾಲಯಗಳಿಂದ, ವಿದ್ವಾಂಸರು ಈ ಸಭೆಗೆ ಆಗಮಿಸಿದ್ದರು. ಅವರನ್ನೆಲ್ಲಾ ಉದ್ದೇಶಿಸಿ ಜಗದ್ಗುರುಗಳು ಆಶೀರ್ವಚನ ನೀಡಿ ತಮ್ಮ ವಿದ್ಯಾಭ್ಯಾಸಕ್ಕಾಗಿ ನೆರವು ನೀಡಿದ್ದ ಎಲ್ಲಾ ಗುರುಗಳಿಗೂ ಪೀಠದ ಘನತೆಗೆ ತಕ್ಕಂತೆ ಸನ್ಮಾನಿಸಿ ಗೌರವ ನೀಡಿ, ಸತ್ಕಾರ ಮಾಡಿ ವಿದ್ಯೆ ನೀಡಿದ ಗುರುಗಳ ಋಣವನ್ನು ಈ ರೀತಿ ಕೃತಜ್ಞತೆಯಿಂದ ಸಲ್ಲಿಸಿದುದನ್ನು ಗಮನಿಸಿದರೆ ವಿದ್ಯಾಗುರುಗಳ ಬಗ್ಗೆ ಅವರಿಗಿರುವ ಅಭಿಮಾನ, ಗೌರವ ಎಷ್ಟೆಂಬುದು ತಿಳಿಯುತ್ತದೆ. ಈ ಗುಣ ಪ್ರತೀ ವಿದ್ಯಾರ್ಥಿಯಲ್ಲೂ ಇದ್ದರೆ–ಗುರು ಶಿಷ್ಯರ ಸಂಬಂಧ ಎಷ್ಟೊಂದು ಹಸನಾಗಿರುತ್ತದೆ! ವಿದ್ಯಾರ್ಥಿಗಳಿಗೆ ಈ ಸಮಾರಂಭ ಒಂದು ರೀತಿಯಲ್ಲಿ ಮಾರ್ಗದರ್ಶಕವಾಗಿದೆ.

ಡಾ। ಚಂದ್ರಶೇಖರ ಶಿವಾಚಾರ್ಯರು ಜಗದ್ಗುರುಗಳಾಗುವ ಮುನ್ನ ಅಂದರೆ 1988ರಲ್ಲಿ ಡಿ.ಲಿಟ್‌ಗಾಗಿ ಸಿದ್ಧಪಡಿಸಿದ್ದ ಸಂಶೋಧನಾ ಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ್ದರಷ್ಟೆ. ಅವರು ಪೀಠಾಧಿಪತಿಗಳಾದ ನಂತರ ಅವರನ್ನು ಮೌಖಿಕ ಪರೀಕ್ಷೆಗೆ ಒಳಪಡಿಸಬೇಕಿತ್ತು. ಅವರನ್ನು ಸಾಮಾನ್ಯ ವಿದ್ಯಾರ್ಥಿಯಂತೆ ಪರಿಗಣಿಸದೆ ಒಂದು ಧರ್ಮದ ಅತ್ಯುನ್ನತ ಪದವಿಗೇರಿ ಜಗದ್ಗುರುಗಳಾಗಿದ್ದ ತಮ್ಮ ವಿದ್ಯಾರ್ಥಿಗೆ ವಿಶ್ವವಿದ್ಯಾಲಯದ ಈ ವಿಭಾಗದಲ್ಲಿ ವಿಶೇಷ ಪೀಠದ ವ್ಯವಸ್ಥೆ ಮಾಡಿ ಬಹಳ ಗೌರವದಿಂದ ಗುರುಗಳನ್ನು ಅದರ ಮೇಲೆ ಕುಳ್ಳಿರಿಸಿ ಸುತ್ತಲೂ ನೆರೆದಿದ್ದ ವಿದ್ವಾಂಸರನ್ನು ಕೂಡಿಸಿ ಮೌಖಿಕ ಪರೀಕ್ಷೆ ನಡೆಸಿದರು.

ಬ್ರಾಹ್ಮಣ ವಿದ್ವಾಂಸರುಗಳು ಜಗದ್ಗುರುಗಳಿಗೆ ಕೇಳಿದ ಪ್ರಶ್ನೆಗಳಿಗೆಲ್ಲಾ ಸಮರ್ಪಕವಾದ ರೀತಿಯಲ್ಲಿ ಉತ್ತರಿಸಿದ್ದನ್ನು ಕಂಡು ವಿದ್ವಾಂಸರು ನಿಜವಾಗಿ ಭಕ್ತಿಯಿಂದ ತಲೆದೂಗಿದ್ದು ಅವಿಸ್ಮರಣೀಯ. ಡಿ.ಲಿಟ್ ಪದವಿಯನ್ನು ಸ್ವತಃ ಅಧ್ಯಯನದಿಂದ ಸಂಸ್ಕೃತದಲ್ಲಿ ಗಳಿಸಿರುವ ಏಕೈಕ

ವೀರಶೈವ ಜಗದ್ಗುರುಗಳು ಎಂದು ವೀರಶೈವರೆಲ್ಲರೂ ಹೆಮ್ಮೆಪಡಬಹುದಾಗಿದೆ,.

ಹೀಗೆ ಜಂಗಮವಾಡಿ ಮಠದ ಗುರುಕುಲಕ್ಕೆ ವಿದ್ಯಾರ್ಥಿಯಾಗಿ 1970ರಲ್ಲಿ ಪ್ರವೇಶ ಮಾಡಿದ ಗುರುಗಳು 1973ರಲ್ಲಿ ವೇದಾಂತಾಚಾರ್ಯ ಪದವಿ (ಎಂ.ಎ.), 1981ರಲ್ಲಿ ವಿದ್ಯಾವಾರಿಧಿ (ಪಿಎಚ್.ಡಿ) ಪದವಿ, 1989ರಲ್ಲಿ ಡಿ.ಲಿಟ್ ಪದವಿ ಪಡೆದುದರ ಜೊತೆಜೊತೆಗೆ ಅನೇಕ ಸ್ವರ್ಣಪದಕಗಳನ್ನು ಪಡೆದುದಲ್ಲದೆ 1989ರ ನವೆಂಬರ್ ತಿಂಗಳ 17 ತಾ.ನಂದು ಜ್ಞಾನಪೀಠದ ಪದವಿಯನ್ನು ಪಡೆದದ್ದು. ಅವರ ವಿದ್ಯಾಭ್ಯಾಸದ ಸತತ ಪರಿಶ್ರಮ, ನಿಷ್ಠೆ, ಆಸಕ್ತಿಯಿಂದ ಅವರು ಕ್ರಮಿಸಿದ ಹಾದಿ ಎಲ್ಲರಿಗೂ ಮಾರ್ಗದರ್ಶಕವಾಗಿದೆ. ದಕ್ಷ ಶಿಕ್ಷಣತಜ್ಞ ಹಾಗೂ ಆದರ್ಶ ಪ್ರಾಧ್ಯಾಪಕ ಎಂದು ಹೆಸರುಗಳಿಸಿ ವಿಶ್ವವಿದ್ಯಾಲಯದಿಂದ ಮಹಾಪೀಠಕ್ಕೆ ಆಗಮಿಸಿದರು.

ಡಿ.ಲಿಟ್ ಪದವಿ ಪಡೆದ ವಿಚಾರ 1992 ಪ್ರಜಾವಾಣಿಯಲ್ಲಿ ಪ್ರಕಟಗೊಂಡಿತ್ತು.

ಕಾಶೀ ಜಗದ್ಗುರುಗಳಿಗೆ ಡಿ.ಲಿಟ್ ಪ್ರಶಸ್ತಿ

ವಾರಣಾಸಿ, ಮೇ 24. ಕಾಶಿಯ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಗೆ ಕಾಶೀ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ಡಾಕ್ಟರ್ ಆಫ್ ಲಿಟರೇಚರ್ ('ವಿದ್ಯಾವಾಚಸ್ಪತಿ') ಪ್ರಶಸ್ತಿ ಸಿಕ್ಕಿದೆ.


ಸಂಯುಕ್ತ ಕರ್ನಾಟಕ

ಮಾನವ ಧರ್ಮಕ್ಕೆ ಜಯವಾಗಲಿ! ॥ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು ॥ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ !!

ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರ ಜಯಂತ್ಯೋತ್ಸವ ನಿಮಿತ್ತ

ಸರ್ವಧರ್ಮ ಸಭೆ :

ಆಮಂತ್ರಣಪತ್ರಿಕೆ

ದಿನಾಂಕ : 28.4.1998 ರ ಮಂಗಳವಾರ

ಶ್ರೀ ಜಗದ್ಗುರು ರೇಣುಕಾಚಾರ್ಯರು

ಲಿಂ.ಜ. ಶ್ರೀ ವೀರಗಂಗಾಧರ ಶಿವಾಚಾರ್ಯರು

ಸರ್ವಧರ್ಮಸಭೆ

ಸಾಯಂಕಾಲ 5.30 ಘಂಟೆಗೆ
ಸ್ಥಳ ಇಂದಿರಾ ಗಾಜಿನ ಮನೆ
"ಮಾನವ ಧರ್ಮಮಹಾಮಂಟಪ" ಹುಬ್ಬಳ್ಳಿ

ಸಾನಿಧ್ಯ :

ಕಾಶಿ ಪೀಠದ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಶ್ರೀ ಶೈಲ ಪೀಠದ ಶ್ರೀ ಶ್ರೀ ಶ್ರೀ 1008 ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು.

"ಶಾಂಕರಾ ಪ್ರಶಸ್ತಿ" ಗಳಿಸಿದ ಶ್ರೀ ಕಾಶಿ ಜಗದ್ಗುರುಗಳವರಿಗೆ ಭಕ್ತಿ ಸಮರ್ಪಣೆ, ಶ್ರೀ ಜಗದ್ಗುರು ರೇಣುಕ ಕೋ ಆಪ್ ಕ್ರೆಡಿಟ್ ಸೊಸಾಯಿಟಿಯ ಪ್ರಥಮ ವಾರ್ಷಿಕೋತ್ಸವ, ಉಭಯ ಜಗದ್ಗುರುಗಳಿಂದ ಜ್ಯೋತಿ ಬೆಳಗಿಸುವದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಧಾರವಾಡ ಇವರ ಪ್ರಾಯೋಜಿತ ರಥಗ್ರಹಣ ಉಪನ್ಯಾಸ ಕಾರ್ಯಕ್ರಮ ಹಾಗೂ ಗಣ್ಯರಿಗೆ ಸನ್ಮಾನ ಸಮಾರಂಭ ಮತ್ತು ಸರ್ವಧರ್ಮ ಉಪನ್ಯಾಸ.

ಇಂದಿರಾ ಗಾಜಿನ ಮನೆಯಲ್ಲಿ ನಿರ್ಮಾಣಗೊಂಡ ಮಾನವ ಧರ್ಮಮಹಾ ಮಂಟಪದಲ್ಲಿ ಪ್ರಸಾದ ವಿತರಣೆ ವ್ಯವಸ್ಥೆ ಮಾಡಲಾಗಿದ್ದು ಸದ್ಭಕ್ತರು ಸ್ವೀಕರಿಸಬೇಕಾಗಿ ವಿನಂತಿ.

★ ಸರ್ವರಿಗೂ ಸುಸ್ವಾಗತ ★

ಬಯಸುವವರು :- ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯೋತ್ಸವ ಸಮಿತಿಯವರು ಹಾಗೂ ಶ್ರೀ ಜಗದ್ಗುರು ರೇಣುಕ ಕೋ ಆಪ್ ಕ್ರೆಡಿಟ್ ಸೊಸಾಯಿಟಿ ಲಿ. ಹುಬ್ಬಳ್ಳಿ ಸಂಸ್ಥಾಪಕರು, ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರು.

ಕಾಶೀ ಪೀಠದ ಜಗದ್ಗುರು ಸ್ಥಾನ, ಸ್ವೀಕರಿಸುವ ಮೊದಲು ಅವರು ಮಂಡಿಸಿದ್ದ ವೀರಶೈವ ತತ್ತ್ವತ್ರಯ ವಿಮರ್ಶೆ ಎಂಬ ಸಂಸ್ಕೃತ ಪ್ರಬಂಧಕ್ಕೆ ಈ ಪ್ರಶಸ್ತಿ ಸಂದಿದೆ. ಪ್ರಬಂಧ ಸದ್ಯದಲ್ಲೇ ಸಂಸ್ಕೃತ ವಿಶ್ವವಿದ್ಯಾಲಯದಿಂದ ಪ್ರಕಟವಾಗುವ ನಿರೀಕ್ಷೆ ಇದೆ. ಅಲ್ಲದೆ ಕನ್ನಡ ಹಾಗೂ ಮರಾಠಿ ಭಾಷೆಗೆ ಈ ಪ್ರಬಂಧವನ್ನು ಅನುವಾದಿಸುವ ಆಶಯವನ್ನೂ ಜಗದ್ಗುರುಗಳು ವ್ಯಕ್ತಪಡಿಸಿದ್ದಾರೆ.

ಈ ಪದವಿ ಪ್ರಶಸ್ತಿ ಪದಕಗಳನ್ನು ಗಳಿಸಿ ಹತ್ತು ವರ್ಷಗಳಾದರೂ ಹೋದೆಡೆಯೆಲ್ಲಾ ಗುರುಗಳಿಗೆ ಇದಕ್ಕಾಗಿ ವಿಶೇಷವಾಗಿ ಗೌರವ ಸಮರ್ಪಣೆ ಮಾಡಲಾಗುತ್ತಿತ್ತು.

ಜಗದ್ಗುರುಗಳು ಪೀಠವನ್ನಲಂಕರಿಸಿದಾಗಿನಿಂದ ಎಲ್ಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನಾಗಲಿ, ಬಹುಮಾನಗಳನ್ನಾಗಲಿ–ಕೊಡಲು ಏರ್ಪಾಡು ಮಾಡುತ್ತಿದ್ದರೋ, ಆ ಊರಿನವರು ಕಾಶಿ ಜಗದ್ಗುರುಗಳನ್ನು ಆಮಂತ್ರಿಸಿ ಅವರಿಂದ ಬಹುಮಾನವನ್ನು ಕೊಡಿಸಿ ಆಶೀರ್ವದಿಸಲು ಏರ್ಪಡಿಸುತ್ತಿದ್ದರು. ಪ್ರತಿಭಾವಂತ ವಿದ್ಯಾರ್ಥಿ ಇಂತಹ ಜ್ಞಾನಿಗಳಿಂದ ಬಹುಮಾನ ಸ್ವೀಕರಿಸಿ ಆಶೀರ್ವಾದ ಪಡೆಯಲು ಕಾತುರದಿಂದ ಕಾಯುತ್ತಿದ್ದರು.

ಸತತ ಪರಿಶ್ರಮ ಅಭ್ಯಾಸದಿಂದ ಭವಿಷ್ಯ ಉಜ್ವಲಗೊಳಿಸಿಕೊಳ್ಳಲು ಕರೆ

ಜಂಗಮಾಭಿವೃದ್ಧಿ ಸಂಘದಿಂದ ವಿದ್ಯಾರ್ಥಿಗಳಿಗೆ–ಗಣ್ಯರಿಗೆ ಸನ್ಮಾನ

ನವೋದಯ
4–8–1999

ಗದಗ 3. ಗದಗ ಜಿಲ್ಲಾ ಜಂಗಮಾಭಿವೃದ್ಧಿ ಸಂಘ ಹಾಗೂ ವೀರಶೈವ ವಧು–ವರರ ಅನ್ವೇಷಣಾ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ 1998–99ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ 7ನೆಯ ತರಗತಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿ ಪಾಸಾದ ಗದಗ ತಾಲ್ಲೂಕಿನ ಪ್ರತಿಭಾವಂತ ಜಂಗಮ ವಿದ್ಯಾರ್ಥಿಗಳಿಗೆ ಹಾಗೂ ರೋಟರಿ ಗದಗ ಮಿಡ್‌ಟೌನ್ ಕ್ಲಬ್‌ಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುವ ನಗರದ ಪುಸ್ತಕ ವ್ಯಾಪಾರಿ ಬಾಬಣ್ಣ ಶಾಬಾದಿಮಠ ಹಾಗೂ ಗದಗ ಜಿಲ್ಲಾ ಆರೋಗ್ಯ ಮತ್ತು ವೈದ್ಯಕೀಯ ಇಲಾಖೆಯ ಲಿಪಿಕ ನೌಕರರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ರಾಜಶೇಖರ ಹಿರೇಮಠ ಅವರನ್ನು ಶಾಲು ಹೊದಿಸಿ ಫಲ ಪುಷ್ಪ ನೀಡಿ ಸನ್ಮಾನಿಸಲಾಯಿತು.

ಗದುಗಿನ ಎ.ಪಿ.ಎಂ.ಸಿ. ಆವರಣದಲ್ಲಿರುವ ಕೃಷಿ ಕ್ಷೇಮಾಭಿವೃದ್ಧಿ ಕೇಂದ್ರದಲ್ಲಿ ನಡೆದ ಈ ಸರಳ ಸಮಾರಂಭದಲ್ಲಿ ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ವಿದ್ಯಾರ್ಥಿ ಹಾಗೂ ಗಣ್ಯರನ್ನು ಸನ್ಮಾನಿಸಿ ಪ್ರಾಸ್ತಾವಿಕವಾಗಿ ಮಾತಾಡಿ, ದೇಶದ ಯುವ ಭಾರೀ ನಾಗರಿಕರಾಗಿರುವ ಇಂದಿನ ವಿದ್ಯಾರ್ಥಿಗಳು, ಯುವಕರು ಸತತ ಪರಿಶ್ರಮ ಹಾಗೂ ಅಭ್ಯಾಸ ಮಾಡಿ ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕೆಂದು ಉಪದೇಶ ನೀಡಿದರು.

ಜಂಗಮಾಭಿವೃದ್ಧಿ ಸಂಘವು ಜಂಗಮ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುತ್ತಿರುವ ಕಾರ್ಯ ನಿಜಕ್ಕೂ ಸ್ತುತ್ಯರ್ಹ ಎಂದು ನುಡಿದ ಕಾಶೀ ಜಗದ್ಗುರುಗಳು ಇಂದಿನ ಶಿಕ್ಷಣದ ಪದ್ಧತಿಯ ಬಗ್ಗೆ ವಿವರಿಸುತ್ತಾ, ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಇಂದು ಕಾರ್ಗಿಲ್ ಯುದ್ಧಕ್ಕೆ ಹೊರಟ ಯೋಧರಂತೆ ತಮ್ಮ ಬೆನ್ನಿಗೆ ಪುಸ್ತಕದ ಹೊರೆಯನ್ನು ಹೊತ್ತುಕೊಂಡು ಹೋಗುವುದು ಎಂತಹ ವಿಪರ್ಯಾಸ ಎಂದು ನುಡಿದರು.


ಸಮಾರಂಭದಲ್ಲಿ ವಿದ್ಯಾರ್ಥಿಗಳಾದ ಕುಮಾರಿ ಸುಮನಾ ಕಬ್ಬಿಣಕಂತಿಮಠ, ಶಿವಕುಮಾರ ಚಿಕ್ಕಮಠ, ಸಿದ್ಧಲಿಂಗೇಶ್ವರ ಪಾಟೀಲ ಹಿರೇಮಠ, ಕುಮಾರಿ ಕವಿತಾ ಹಿರೇಮಠ, ವಿನಯಕುಮಾರ ಹಿರೇಮಠ, ಕುಮಾರಿ ಪೂರ್ಣಿಮಾ ಮುರಗಿಮಠ ಅವರಿಗೆ ಕಾಶೀ ಜಗದ್ಗುರುಗಳು ಬಹುಮಾನ ವಿತರಣೆ ಮಾಡಿದರು.

ಗದಗ್‌ನಲ್ಲಿ ವೈದಿಕ ಸಂಸ್ಕೃತ ಪಾಠಶಾಲೆ ಹಾಗೂ ಯೋಗ ಕೇಂದ್ರಗಳ ಕಟ್ಟಡದ ಅಡಿಗಲ್ಲಿನ ಸಮಾರಂಭ

18–3–1999

ಶ್ರೀ ಪಂಚಾಚಾರ್ಯ ಸಂಸ್ಕೃತ ಪಾಠಶಾಲೆ ಉದ್ಘಾಟನೆ

ಎಲ್ಲ ವಿದ್ಯೆಗಳಿಗೆ ಮೂಲವಾಗಿರುವ ಸಂಸ್ಕೃತ ಭಾಷೆಯ ಸಮೃದ್ಧಿ ಅತ್ಯವಶ್ಯ



ಇತ್ತೀಚಿನ ದಿನಗಳಲ್ಲಿ ಪ್ರಾಚೀನ ಸಂಸ್ಕೃತಿ ಹಾಗೂ ವೈದಿಕ ವಿದ್ಯೆಯು ಮರೆಯಾಗುತ್ತಾ ಹೋಗುತ್ತಿರುವುದನ್ನು ಪರಿಗಣಿಸಿ–ಇವೆಲ್ಲವೂ ಸಶಾಸ್ತ್ರೀಯವಾಗಿ ನಡೆಯಬೇಕಾದರೆ ಮತ್ತು ವೀರಶೈವ ಸಿದ್ಧಾಂತ ತತ್ವಗಳನ್ನು ತಿಳಿಯಬೇಕಾದರೆ–ಸಂಸ್ಕೃತ ಭಾಷೆಯ ಅತ್ಯಗತ್ಯವಾಗಿ ಬೇಕಾಗಿದೆ. ಹಾಗೆಯೇ ಮಾನವ ಮಾನಸಿಕವಾಗಿ, ದೈಹಿಕವಾಗಿ ಆರೋಗ್ಯವಂತನಾಗಿರ 'ಬೇಕಾದರೆ ಯೋಗಾಭ್ಯಾಸವೂ ಬಹು ಮುಖ್ಯವಾಗಿದೆ. ಇದೆಲ್ಲದರ ಬಗೆಗೆ ಚಿಂತಿಸಿ ಪರಮಪೂಜ್ಯ ಕಾಶೀಸನ್ನಿಧಾನವು ದಿನಾಂಕ 18–3–1999 ಯುಗಾದಿಯ ದಿನದಂದು ಗದಗ್ ಕಾಟನ್ ಸೇಲ್ ಸೊಸೈಟಿ ಪಕ್ಕದಲ್ಲಿ ಸಂಭಾಪುರ ರಸ್ತೆಗೆ ಹೊಂದಿರುವ ಜಾಗದಲ್ಲಿ ಪಾಠಶಾಲೆಯ ಕಟ್ಟಡದ ಅಡಿಗಲ್ಲನ್ನು ನೆಟ್ಟು ಸಮಾರಂಭವನ್ನು ನೆರವೇರಿಸಿ ಶ್ರೀಪೀಠದಿಂದ 1,00,000ರೂಗಳನ್ನು ನೀಡಿ ಆಶೀರ್ವದಿಸಿದರು.

ಪಾಠಶಾಲೆಯಲ್ಲಿ ಅಭ್ಯಾಸ ಮಾಡಲು ಬರುವ ವಿದ್ಯಾರ್ಥಿಗಳಿಗೆ ಉಚಿತ ವಸತಿ ಕಲ್ಪಿಸಿ–ವೇದ–ಮಂತ್ರ ಪಠಣ, ಸಂಸ್ಕೃತ ಭಾಷಾಧ್ಯಯನ ಮಾಡುವುದು, ಜೊತೆಯಲ್ಲಿ ಯೋಗಾಭ್ಯಾಸವೂ ನಿರಂತರವಾಗಿ ನಡೆಸುವ ಬೃಹತ್ ಯೋಜನೆಯನ್ನು ಗುರುಗಳು ರೂಪಿಸಿದರು.

ಉದ್ಘಾಟನೆಯಾದ ನಂತರ ರಂಭಾಪುರಿ ಜಗದ್ಗುರು ವೀರಸೋಮೇಶ್ವರ ದೇಶಿಕೇಂದ್ರ ಶಿವಾಚಾರ್ಯರು, ಶ್ರೀ ಜ॥ ಪಂಚಾಚಾರ್ಯ ವೇದ ಆಗಮ ಸಂಸ್ಕೃತ ಪಾಠಶಾಲೆ ಶ್ರೀ ಕಾಶೀ ಪೀಠದ ಕೊಡುಗೆಯೆಂದೂ, ಉಜ್ಜಯಿನಿ ಜಗದ್ಗುರುಗಳು, ಗದಗ್ ಪಂಚಪೀಠಗಳ ತವರುಮನೆಯಾಗಿದೆ. 21ನೇ ಶತಮಾನದಲ್ಲಿ ಸಂಸ್ಕೃತ ಪಾಠಶಾಲೆಗಳ ಅವಶ್ಯಕತೆ ಇದೆ ಎಂದೂ, ಶ್ರೀ ಶೈಲ ಪೀಠಾಧೀಶರು, ಸಂಸ್ಕೃತದ ಉಳಿವಿಗಾಗಿ ಪೀಠಾಭಿಮಾನಿಗಳು ಶ್ರಮಿಸುವುದು ಅತ್ಯವಶ್ಯವಾಗಿದೆ ಎಂದೂ; ಕೇದಾರ ಜಗದ್ಗುರುಗಳು, ನಗರದಲ್ಲಿ ಶ್ರೀ ಪಂಚಾಚಾರ್ಯ ಸಂಸ್ಕೃತ ಪಾಠಶಾಲೆ ಆರಂಭಗೊಂಡಿದ್ದು ಯೋಗ್ಯ ಕಾರ್ಯವಾಗಿದೆ ಎಂದೂ; ಕಾಶೀ ಜಗದ್ಗುರುಗಳು ವೈದಿಕರ ಕೊರತೆ ನೀಗಲು ಮಕ್ಕಳಿಗೆ ವೇದ, ಯೋಗ ಶಿಕ್ಷಣಗಳನ್ನು ಕೊಡುವ ಬಗ್ಗೆ ವಿವರಿಸಿ ಸಿದ್ಧಾಂತ ಶಿಖಾಮಣಿ ಗ್ರಂಥ ಮಾರಾಟದ ಲಾಭಾಂಶವನ್ನು ಈ ನೂತನ ಪಾಠಶಾಲೆ ಅಭಿವೃದ್ಧಿಗೆ ಮೀಸಲಾಗಿಟ್ಟಿದೆ ಎಂದೂ; ಪಂಚ ಪೀಠಾಧೀಶ್ವರರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಯಾವುದೇ ಸಂಸ್ಥೆ ಕಟ್ಟಲಿ ಅದು ವ್ಯವಸ್ಥಿತವಾಗಿ, ಆರ್ಥಿಕವಾಗಿ, ಸುಸ್ಥಿತಿಯಲ್ಲಿ ನಿರಂತರವಾಗಿ ನಡೆಯಬೇಕೆಂದು ಕಾಶೀ ಜಗದ್ಗುರುಗಳು ಗ್ರಂಥ ಮಾರಾಟದ ಲಾಭಾಂಶವನ್ನು ಇದಕ್ಕೆ ಮೀಸಲಿಟ್ಟುದು ಅವರ ದೂರಾಲೋಚನೆ ಬಗೆಗೆ ಎಲ್ಲರೂ ಕಲಿಯಬೇಕಾಗಿದೆ.

ಹೀಗೆ ಸಂಸ್ಕೃತ–ಶಾಸ್ತ್ರಗಳ ಅಧ್ಯಯನಕ್ಕೆ ಗುರುಗಳು ಆರಂಭಿಸಬೇಕೆಂದಿದ್ದ ಪಾಠಶಾಲೆಯನ್ನು ಶಂಕುಸ್ಥಾಪನೆಯಾದ ಒಂದು ವರ್ಷ ಎರಡು ತಿಂಗಳೊಳಗೆ ಕಟ್ಟಡ ನಿರ್ಮಾಣಗೊಂಡು–ಉದ್ಘಾಟನೆ ಆಗಿದ್ದು ಜಗದ್ಗುರುಗಳ ಸಂಕಲ್ಪ ಶಕ್ತಿಯ ಪ್ರಭಾವವನ್ನು ಕಾಣಬಹುದಾಗಿದೆ.

ಕಾಶೀ ಪೀಠದಿಂದ ಶಿಷ್ಯವೃತ್ತಿ ಅರ್ಜಿ ಆಹ್ವಾನ

ಕಾಶಿ ಜಗದ್ಗುರುಗಳು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ದಿನಾಂಕ 28–8–1998 ರಂದು "ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ" ಎಂಬ ವಿಶ್ವಸ್ಥ ಸಂಸ್ಥೆಯನ್ನು ಪ್ರತಿಷ್ಠಾಪಿಸಿದರು. ಈ ಸಂಸ್ಥೆಯಿಂದ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಓದುವ ಪ್ರತಿಭಾವಂತ ಬಡಮಕ್ಕಳಿಗೆ ಶಿಷ್ಯವೇತನ ಕೊಡುವ ಒಂದು ಯೋಜನೆ ರೂಪಿಸಿದರು. ಆ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆಯೆಂದು ಕಾಶೀ ಪೀಠದಿಂದ ಜುಲೈ 2002ರಲ್ಲಿ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಅದರ ನಿಯಮಗಳೇನೆಂದರೆ ವಿದ್ಯಾರ್ಥಿಗಳು ಮೆರಿಟ್‌ನಲ್ಲಿ ಪಿ.ಯು.ಸಿ. ಪಾಸಾಗಿರಬೇಕು. ಮೆಡಿಕಲ್ ಇಲ್ಲವೇ ಇಂಜಿನೀಯರಿಂಗ್ ಕಾಲೇಜಿನಲ್ಲಿ ಪ್ರವೇಶ ಪಡೆದಿರಬೇಕು, ಆರ್ಥಿಕವಾಗಿ ಹಿಂದುಳಿದವರಾಗಿರಬೇಕು. ಅರ್ಹ ವೀರಶೈವ ವಿದ್ಯಾರ್ಥಿಗಳಿಗೆ ಈ ಶಿಷ್ಯವೇತನ ನೀಡಲಾಗುವುದು. ಅಂತಹ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣ ಪೂರ್ತಿಯಾಗುವವರೆಗೆ ಪ್ರತೀ ತಿಂಗಳು ಸಾವಿರ ರೂ. ಶಿಷ್ಯವೇತನ ನೀಡಲಾಗುವುದೆಂದು ಪ್ರಕಟಣೆಯಲ್ಲಿ ತಿಳಿಸಿದರು.


ಸಂಯುಕ್ತ ಕರ್ನಾಟಕ 8–7–2002

ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನ

ಹೀಗೆ 2002ರಿಂದ ಆರಂಭಗೊಂಡ ಶಿಷ್ಯ ವೃತ್ತಿವೇತನ 2006ರ ವೇಳೆಗೆ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಈ ಶಿಷ್ಯ ವೇತನ ಪಡೆದು ಈಗಾಗಲೇ ಅಂತಿಮ ವರ್ಷಗಳಲ್ಲಿ ಕೆಲವರಿರುವುದು ಸಂತೋಷದ ವಿಷಯ. ಜಗದ್ಗುರುಗಳಿಗೆ ತಮ್ಮ ಷಷ್ಟ್ಯಬ್ದಿಯ ಸಮಯದೊಳಗೆ 61 ವಿದ್ಯಾರ್ಥಿಗಳಿಗೆ ಕೊಡಮಾಡಬೇಕೆಂಬ ಆಕಾಂಕ್ಷೆ ಹೊಂದಿದ್ದಾರೆ. ಹೀಗಾಗಿ ತಮ್ಮ ಕಾರ್ಯಕ್ರಮ ಇರುವೆಡೆಯೆಲ್ಲಾ ಪತ್ರಿಕಾಗೋಷ್ಠಿ ನಡೆಸಿ ಶಿಷ್ಯವೇತನ ಪ್ರಕಟಣೆ ತಾವೇ ಸ್ವತಃ ಕೊಡಲಾರಂಭಿಸಿದರು.

ಬಡ ಮಕ್ಕಳ ಶಿಕ್ಷಣಕ್ಕಾಗಿ ಕಾಶೀ ಪೀಠದ ಯೋಜನೆ


ಪ್ರಜಾವಾಣಿ ವಾರ್ತೆ 21–12–06



ಶಿಗ್ಗಾಂವದಲ್ಲಿ ಮಂಗಳವಾರ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರ ತುಲಾಭಾರ ಕಾರ್ಯಕ್ರಮ ನಡೆಯಿತು.

ಕಾಶಿ ಜಗದ್ಗುರುಗಳು ಪ್ರಕಟ ಕಾಶಿ ಪೀಠದಿಂದ ಶಿಷ್ಯ ವೇತನ

ಸುದ್ದಿಮೂಲ ಡಿ.16, 2007



ರಾಯಚೂರು ನಗರದ ಶ್ರೀ ನೀಲಕಂಠೇಶ್ವರ ನಗರದಲ್ಲಿ ನಡೆದ ಧರ್ಮ ಸಭೆಯಲ್ಲಿ ಕಾಶೀ ಪೀಠದ ಜಗದ್ಗುರುಗಳು ಆಶೀರ್ವಚನ ನೀಡಿದರು.

ಕೊಡುಗೆ : ಕಾಶೀ ಜಗದ್ಗುರುಗಳು ಹಮ್ಮಿಕೊಂಡಿರುವ ಈ ಯೋಜನೆಗೆ ಕಡಗಂಚಿ ಮಠದ ವೀರಭದ್ರ ಸ್ವಾಮೀಜಿಗಳು ತಮ್ಮ ಮಠದ ಪರವಾಗಿ 1.25 ಲಕ್ಷ ರೂ. ದೇಣಿಗೆಯನ್ನು ಸಮರ್ಪಿಸಿದ್ದಾರೆ. ಅದೇ ರೀತಿ ದಾನಿಗಳು ಕಾಣಿಕೆಯನ್ನು ಸಮರ್ಪಿಸಬಹುದಾಗಿದೆ.

ತುಲಾಭಾರದ ಹಣ ವಿದ್ಯಾರ್ಥಿಗಳಿಗೆ ವಿನಿಯೋಗ : ಶ್ರೀ ಕಾಶೀ ಜಗದ್ಗುರುಗಳು ಸಂಜೆವಾಣಿ 24–12–2007

ಕಾಶೀ ಪೀಠ : ಬಡವರಿಗೆ ಶಿಷ್ಯವೇತನ ಪ್ರಜಾವಾಣಿ ವಾರ್ತೆ 24–12–07

ತುಲಾಭಾರದ ಹಣ ಪ್ರತಿಭಾವಂತರ ಶಿಕ್ಷಣಕ್ಕೆ : ಶ್ರೀಗಳು ಕಲಬುರ್ಗಿ 24–12–2007

2006 ರಿಂದ ಬಡಮಕ್ಕಳ ಶಿಕ್ಷಣಕ್ಕಾಗಿ ಕಾಶಿ ಪೀಠದ ಯೋಜನೆ

ಬಡಮಕ್ಕಳ ಶಿಕ್ಷಣಕ್ಕೆ ತುಲಾಭಾರದ ಹಣ : ಕಾಶಿ ಶ್ರೀ



ಶಿಗ್ಗಾವಿ ಶ್ರೀ ರೇಣುಕಾಚಾರ್ಯ ಮಂದಿರದಲ್ಲಿ ತಮ್ಮ ಷಷ್ಯಬ್ದಿ ನಿಮಿತ್ತ ಏರ್ಪಡಿಸಲಾಗಿದ್ದ ತುಲಾಭಾರ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಕಾಶೀ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ಆಶೀರ್ವಚನ ನೀಡಿದರು.

18–11–06 ಬೆಳಗಾವಿ (ಹುಕ್ಕೇರಿ ತಾ॥)ದ ಸಿದ್ಧಾರೂಢರ ಮಠದಲ್ಲಿ ನಡೆದ ಷಷ್ಟ್ಯಬ್ಧಿ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ ಸಾನಿಧ್ಯ ವಹಿಸಿದ್ದ ಕಾಶಿ ಜಗದ್ಗುರುಗಳು ತಮ್ಮ ತುಲಾಭಾರದಿಂದ ಸಂಗ್ರಹವಾದ ಹಣವನ್ನು ಬಡಮಕ್ಕಳ ಶಿಕ್ಷಣಕ್ಕಾಗಿ ಮೀಸಲಿಡುತ್ತಿದ್ದು ಅದಕ್ಕಾಗಿ ಯೋಜನೆಯೊಂದನ್ನು ರೂಪಿಸಲಾಗಿದೆ ಎಂದರು. (ವಿಜಯ ಕರ್ನಾಟಕ 19–11–2006) 2008ರ ಏಪ್ರಿಲ್‌ನಿಂದ ಈ ಯೋಜನೆಯನ್ನು ಜಾರಿಗೆ ತರುವುದಾಗಿ ಹೇಳಿದರು.

ಪಂಚ ಪೀಠದ ಜಗದ್ಗುರುಗಳು ಎಂದೂ ತುಲಾಭಾರ ಮಾಡಿಸಿಕೊಳ್ಳುವ ಪರಂಪರೆ ಹೊಂದಿಲ್ಲ. ಆದರೆ ಕಾಶೀ ಜಗದ್ಗುರುಗಳು ಇಂದು ಬಡ ಪ್ರತಿಭಾವಂತ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಒಂದು ಹೊಸ ಪರಂಪರೆಯನ್ನೇ ಸೃಷ್ಟಿಸಿದ್ದಾರೆ. ದೇಶದ ಉತ್ತಮ ಪರಂಪರೆ ನಿರ್ಮಿಸುವ ದಿಶೆಯಲ್ಲಿ ಮಠಗಳು ಉತ್ತಮ ತಳಪಾಯವನ್ನು ಹಾಕಿ ಸಂಸ್ಕಾರ ನೀಡುವ ಕೇಂದ್ರಗಳಾಗಿವೆ. ವೀರಶೈವ ಮಠಗಳು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಮಾಡುತ್ತಿವೆ.

ಇಂದಿನ ದಿನಮಾನಗಳಲ್ಲಿ ಜನರಲ್ಲಿ ವಿದ್ಯಾಭ್ಯಾಸದ ಬಗೆಗೆ ಜಾಗೃತಿ ಮೂಡಿ ಎಲ್ಲರೂ ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಲು ಮುಂದಾಗಿದ್ದಾರೆ. ಆಟೋ ಚಾಲಕರಿರಬಹುದು, ಮನೆ ಕೆಲಸದಳಿರಬಹುದು, ಎಲ್ಲಾ ವರ್ಗದ ಜನರಲ್ಲೂ ಈ ಬಗ್ಗೆ ಅರಿವು ಮೂಡಿದೆ. ಆಸ್ತಿ ಮಾಡುವ ಬದಲು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತಮ್ಮ ದುಡಿಮೆಯನ್ನು ವ್ಯಯಿಸುತ್ತಿದ್ದಾರೆ. ಆದರೆ ಶಿಕ್ಷಣ ಕ್ಷೇತ್ರ ಇಂದು ತುಂಬಾ ದುಬಾರಿಯಾಗಿ

ಸುದ್ದಿಮೂಲ ವಾರ್ತೆ

ರಾಯಚೂರು : ಡಿ.15 ಕಾಶೀ ಪೀಠದಿಂದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡುವ ಮೂಲಕ ಶೈಕ್ಷಣಿಕ ಸೇವೆಗೆ ಮುಂದಾಗಿದ್ದೇವೆ ಎಂದು ಕಾಶಿ ಜಗದ್ಗುರುಗಳಾದ ಡಾ. ಚಂದ್ರಶೇಖರ ಶಿವಾಚಾರ್ಯರು ತಿಳಿಸಿದರು.

ತಮ್ಮ ಪೀಠಾರೋಹಣದಿಂದ 18 ವರ್ಷಗಳ ಕಾಲಾವಧಿಯಲ್ಲಿ ಭಕ್ತ ಮಹಾಜನತೆ ಸುಮಾರು 2 ಕೆ.ಜಿ. ಬಂಗಾರ ಸಮರ್ಪಣೆ ಮಾಡಿದ್ದಾರೆ. ಇವೆಲ್ಲವನ್ನು ಸಮಾಜದ ಸಾಮಾಜಿಕ ರಚನಾತ್ಮಕ ಕಾರ್ಯಗಳಿಗಾಗಿ ಬಳಸಲಾಗುವುದಾಗಿ ತಿಳಿಸಿದ ಅವರು, ಈ ಸೌಲಭ್ಯವನ್ನು ಪಡೆದವರು. ಮುಂದಿನ ದಿನಗಳಲ್ಲಿ ತಮ್ಮ ಗಳಿಕೆಯ ಸಂದರ್ಭದಲ್ಲಿ ಈ ಯೋಜನೆಯಲ್ಲಿ ಇನ್ನೂ ಹೆಚ್ಚಿನವರಿಗೆ ಸೌಲಭ್ಯ ವಿಸ್ತರಣೆಗಾಗಿ ತಮ್ಮ ಪಾಲಿನ ಧನವನ್ನು ನೀಡಬಹುದಾಗಿದೆ ಎಂದು ಹೇಳಿದರು.

– ಕರ್ನಾಟಕ ಸಂಧ್ಯಾಕಾಲ

ಸಾಮಾನ್ಯನ ಕೈಗೆ ಎಟುಕದಂತಾಗಿರುವುದನ್ನು ಜಗದ್ಗುರುಗಳು ಗಮನಿಸಿ–ಬಡ ಪ್ರತಿಭಾವಂತ ಮಕ್ಕಳಿಗೆ–ಜಾತಿ ಭೇದವೆಣಿಸದೆ ಅವರ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಯೋಜನೆಯೊಂದನ್ನು ರೂಪಿಸಿದ್ದಾರೆ. ಈ ಸಲುವಾಗಿ ತಮ್ಮ ತುಲಾಭಾರದಿಂದ ಬರುವ ಹಣವನ್ನು, ಜೊತೆಗೆ ಕೊಡುಗೆಯ ರೂಪದಲ್ಲಿ ಬರುವ ಚಿನ್ನ, ಬೆಳ್ಳಿ ಎಲ್ಲವನ್ನು ಪ್ರತಿಭಾವಂತ ಬಡಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮೀಸಲಾಗಿಡುವೆವು ಎಂದು ನಿರ್ಧರಿಸಿ ಆ ದಿಸೆಯಲ್ಲಿ ಕಾರ್ಯತತ್ಪರರಾಗಿದ್ದಾರೆ– ಜಗದ್ಗುರುಗಳು. ಅನಾದಿ ಕಾಲದಿಂದಲೂ ಕಾಶೀ ವಿದ್ಯಾಪೀಠ ಮಾಡುತ್ತಿರುವ ಸೇವೆ ಜೊತೆಗೆ ಇಂದು ಮತ್ತೊಂದು ರೀತಿ, ಒಂದು ಸಣ್ಣ ಪ್ರಯೋಗ ಪ್ರಾರಂಭಿಸಿದೆ ಎಂದು ಜಗದ್ಗುರುಗಳು ಜಮಖಂಡಿಯಲ್ಲಿ ಜಗದ್ಗುರುಗಳ ಷಷ್ಟ್ಯಬ್ದಿ ತುಲಾಭಾರ ಸಮಾರಂಭದ ಸಭೆ ತಿಳಿಸಿದ್ದರು.

ತಮ್ಮ ಪೀಠಾರೋಹಣದಿಂದ ಪ್ರಾರಂಭಿಸಿ 18 ವರ್ಷಗಳ ಕಾಲಾವಧಿಯಲ್ಲಿ ಭಕ್ತರು ಸುಮಾರು 2ಕೆ.ಜಿ. ಬಂಗಾರ ಸಮರ್ಪಿಸಿದ್ದು ಇದನ್ನು ಸಮಾಜದ ಸಾಮಾಜಿಕ ಹಾಗೂ ರಚನಾತ್ಮಕ ಕಾರ್ಯಗಳಿಗಾಗಿ ಬಳಸಲಾಗುವುದೆಂದು ಜಗದ್ಗುರುಗಳು 24–12–2007ರಲ್ಲಿ ನಡೆದ ಒಂದು ಸಮಾರಂಭದಲ್ಲಿ ತಿಳಿಸಿ, ಆರಂಭದಲ್ಲಿ 61 ವಿದ್ಯಾರ್ಥಿಗಳಿಗೆ ನೀಡಲಾಗಿ ಮುಂದಿನ ದಿನಗಳಲ್ಲಿ ಈ ಸೌಲಭ್ಯ ಪಡೆದು ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಂದ ಹಾಗೂ ಭಕ್ತರ ದಾನಗಳಿಂದ 200 ಜನ ವಿದ್ಯಾರ್ಥಿಗಳಿಗೆ ವಿಸ್ತರಿಸುವ ತಮ್ಮ ಆಲೋಚನೆಯನ್ನು ತಿಳಿಸಿದರು.

ಕಲ್ಬುರ್ಗಿ. ಧರ್ಮ ಕಾರ್ಯಾರ್ಥವಾಗಿ ಭಕ್ತರು ತಮಗೆ ನೀಡುವ ಧನ–ಕನಕಾದಿಗಳನ್ನು ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಖರ್ಚು ಮಾಡಲು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನಿರ್ಧರಿಸಿದ್ದಾರೆ ಎಂದು ಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಭಕ್ತರು ನೀಡಿದ ಕಾಣಿಕೆ ಹಾಗು ತುಲಾಭಾರದಿಂದ ಬಂದ ಹಣವನ್ನು ಪ್ರತಿಭಾವಂತ ಬಡವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಪ್ರತಿ ತಿಂಗಳು 1000 ರೂ. ಶಿಷ್ಯವೇತನ ನೀಡುವುದಾಗಿ ತಿಳಿಸಿದರು.

9–6–1988ರಂದು ಜಗದ್ಗುರುಗಳಾಗುವ ಮುನ್ನ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ತಮಗಾಗಿ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಗುಳೇದಗುಡ್ಡದಲ್ಲಿ ಸೇರಿದ್ದ ಸಮಸ್ತ ಸಭಿಕರೆದುರು–ಒಂದು ಮಾತನ್ನು ನುಡಿದಿದ್ದರು : "ತಮ್ಮನ್ನು ತಾವು ಸಮಾಜದ ಹಿತಕ್ಕೆ ಸಮರ್ಪಿಸಿಕೊಂಡಿದ್ದಾಗಿಯೂ, ತಮ್ಮಿಂದಾಗಬಹುದಾದ ಪ್ರತೀ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸುವುದಾಗಿ" ಹೇಳಿದ್ದನ್ನು ಇಲ್ಲಿ ಮತ್ತೆ ಸ್ಮರಿಸುವಂತಾಗಿದೆ. ಅಂದು ಗುರುಗಳ ಬಾಯಿಂದ ಈ ವಾಗ್ದಾನದ ನುಡಿಗಳು ಹೊರಹೊಮ್ಮಿದ್ದು ಅಲ್ಲಿ ನೆರೆದಿದ್ದ ಭಕ್ತರನ್ನು ಮೆಚ್ಚಿಸುವ ಸಲುವಾಗಿಯಲ್ಲ. ಅವು ಅವರ ಹೃದಯಾಂತರಾಳದಿಂದ ಹೊರಹೊಮ್ಮಿದ ನುಡಿಗಳು. ಅಂದು ನುಡಿದಂತೆ ಇಂದು ನಡೆಯುತ್ತಿರುವುದನ್ನು ನೋಡಿದಾಗ "ನುಡಿದರೆ ಮುತ್ತಿನ ಹಾರದಂತಿರಬೇಕು.... ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮನೆಂತೊಲಿವನಯ್ಯ....." ಎಂಬ ವಚನ ನೆನೆಯುವಂತಾಗಿದೆ.

ಪ್ರತಿಭೆ ರಾಷ್ಟ್ರದ ಸಂಪತ್ತು – ಮಹಾರಾಷ್ಟ್ರದಲ್ಲಿ ಕಾಶೀ ಜಗದ್ಗುರುಗಳು

"ಈ ಜಗತ್ತಿನಲ್ಲಿ ಪವಿತ್ರವಾದ ವಸ್ತುವೇ ಜ್ಞಾನ."

"ಪ್ರತಿಭಾ ಸಂಪನ್ನರಿಂದಲೇ ಅದರಲ್ಲೂ ವಿದ್ಯಾರ್ಥಿಗಳಿಂದಲೇ ರಾಷ್ಟ್ರದ ಏಳ್ಗೆ ಸಾಧ್ಯ."

"ಸರ್ವ ಕ್ಷೇತ್ರದಲ್ಲೂ ಪ್ರತಿಭೆಗಳನ್ನು ಗೌರವಿಸಬೇಕು."–ಹೀಗೆಂದು ಉತ್ತಮ ವಿಚಾರವನ್ನು ಸಮಾಜದ ಮುಂದಿಟ್ಟವರು

–ಕಾಶೀ ಜಗದ್ಗುರುಗಳು.

ವಿದ್ಯಾರ್ಥಿಗಳಿಗೆ ಕೊಡಮಾಡಲಾಗಿರುವ ಶಿಷ್ಯವೇತನ ಹಾಗೂ ಬೇರೆ ಬೇರೆ ಕ್ಷೇತ್ರದಲ್ಲಿ ಪ್ರತಿಭೆಯನ್ನು ಗುರುತಿಸಿ ಪುರಸ್ಕಾರ ನೀಡುವ ಕೆಲಸವನ್ನು ಜಗದ್ಗುರುಗಳು ಮಹಾರಾಷ್ಟ್ರ, ಹೈದರಾಬಾದ್ ರಾಜ್ಯಗಳಿಗೂ ವಿಸ್ತರಿಸಿ ಕಾರ್ಯ ಆರಂಭಿಸಿಯೇಬಿಟ್ಟರು.

ಜಗದ್ಗುರುಗಳು ಮಹಾರಾಷ್ಟ್ರ ರಾಜ್ಯದಲ್ಲಿ ವಿವಿಧ ಜಿಲ್ಲೆ, ತಾಲ್ಲೂಕು, ಗ್ರಾಮಗಳಲ್ಲಿ ಕಾರ್ಯಕ್ರಮದ ಸಲುವಾಗಿ ಪ್ರವಾಸ ಮಾಡುವಾಗ– ಸಭೆಗಳಲ್ಲಿ ಪ್ರತಿಭಾವಂತರನ್ನು ಗುರುತಿಸಿ ವಿದ್ಯಾರ್ಥಿವೇತನ ಹಾಗೂ ಪ್ರತಿಭಾ ಪುರಸ್ಕಾರ ಕೊಡಲಾರಂಭಿಸಿದರು.

ತಾಸಗಾಂವ (ಸಾಂಗ್ಲಿ ಜಿಲ್ಲೆ) ನಗರದಲ್ಲಿರುವ ಕೋಳೆಕರ ಮಠದಲ್ಲಿ ಮಹಾರಾಷ್ಟ್ರ ಬೋರ್ಡ್ ನಡೆಸಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಸತ್ಕರಿಸುವ ಸಲುವಾಗಿ ಒಂದು ಕಾರ್ಯಕ್ರಮ ಏರ್ಪಡಿಸಿ ಸಾನ್ನಿಧ್ಯ ವಹಿಸಲು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಆಹ್ವಾನಿಸಿದ್ದರು. ಜಗದ್ಗುರುಗಳು 15 ಜನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುಷ್ಪಗುಚ್ಛ ಮತ್ತು ಶ್ರೀಫಲಗಳನ್ನು ಕೊಟ್ಟು ಆಶೀರ್ವದಿಸಿ ಈ ಮಕ್ಕಳಿಗೆ ಅಗತ್ಯ ಮಾರ್ಗದರ್ಶನ ನೀಡಿದರು.

ಈ ಜಗತ್ತಿನಲ್ಲಿ ಪವಿತ್ರವಾದ ವಸ್ತುವೇ ಜ್ಞಾನ ಎಂದು ಹೇಳಿದರು. ಈ ಮಾತುಗಳು ಜಗದ್ಗುರುಗಳ ಬಾಯಿಂದ ಬರಬೇಕಾದರೆ ತಾವೇ ಸ್ವತಃ ಜ್ಞಾನಿಗಳು–ಪ್ರತಿಭಾವಂತರು. ಹಂತಹಂತವಾಗಿ ಬೆಳೆಯುತ್ತಾ ಇಂತಹ ಇನ್ನೂ ಅನೇಕ ಪ್ರತಿಭಾ ಪುರಸ್ಕಾರಗಳನ್ನೂ ಚಿನ್ನದ ಪದಕಗಳನ್ನೂ ಪಡೆಯುತ್ತಾ ಬಿ.ಎ., ಎಂ.ಎ., ಪಿಹೆಚ್.ಡಿ., ಡಿ.ಲಿಟ್ ಪದವಿಗಳನ್ನು ಪಡೆದು ಇಂದು ವೀರಶೈವ ಪಂಚಪೀಠಗಳಲ್ಲಿ ಒಂದಾದ ಕಾಶೀ ಜ್ಞಾನಸಿಂಹಾಸನವೇರಿದ್ದರಿಂದ ಜಗದ್ಗುರುಗಳಿಗಲ್ಲದೆ ಬೇರಿನ್ನಾರಿಗೆ ಜ್ಞಾನದ ಪಾವಿತ್ರ್ಯ ತಿಳಿಯಲು ಸಾಧ್ಯ. ಹಾಗೆಂದೇ ಅಂತಹ ಜ್ಞಾನಿಗಳಿಂದ ಈ ಹೇಳಿಕೆ ಬಂದಿದೆ.

ಜಗದ್ಗುರುಗಳು ಮುಂದುವರೆದು ಜ್ಞಾನಿಯು ತನ್ನ ಜ್ಞಾನದ ಬಲದಿಂದ ಎಲ್ಲರಿಂದ ಸನ್ಮಾನಿಸಲ್ಪಡುತ್ತಾನೆ. ಯಾವುದೇ ರಾಷ್ಟ್ರವಿರಲಿ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಬೇಕಾದರೆ ಆಯಾ ವಿಷಯಗಳನ್ನು ಓದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಸಾಧ್ಯವೆಂದು ಹೇಳುತ್ತಾ, ವಿದ್ಯಾರ್ಥಿಗಳಿಗೊಂದು ಅಮೂಲ್ಯವಾದ ಸಲಹೆ ನೀಡಿದರು–ಪ್ರತಿಭೆಯು ಪರಿಶ್ರಮದ ಫಲ. ಪ್ರತಿಯೊಬ್ಬ ವಿದ್ಯಾರ್ಥಿಯೂ ವಿದ್ಯಾರ್ಥಿಯಾಗಿರುವವರೆಗೂ ಪ್ರತಿ ಕ್ಷಣಕ್ಕೂ ಮಹತ್ವ ಕೊಟ್ಟು ಅಧ್ಯಯನ ಮಾಡಬೇಕು ಎಂದರು.

ಅಮೆರಿಕ ಮುಂತಾದ ರಾಷ್ಟ್ರಗಳ ದೃಷ್ಟಿಯಿಂದ ಭಾರತ ಆರ್ಥಿಕವಾಗಿ ಬಡತನದಲ್ಲಿರಬಹುದು. ಆದರೆ ಬೌದ್ಧಿಕ ಪ್ರತಿಭೆಯಿಂದ ಭಾರತವು ಜಗತ್ತಿನಲ್ಲಿ ಪ್ರಥಮ ದರ್ಜೆಯಲ್ಲಿರುವುದಕ್ಕೆ ಈ ದೇಶದ ಪ್ರತಿಭಾಸಂಪನ್ನ ವಿದ್ಯಾರ್ಥಿಗಳೇ ಕಾರಣ. ತಂತ್ರಜ್ಞಾನದ ಕ್ಷೇತ್ರದಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಜಗತ್ತಿನೆಲ್ಲೆಡೆ ಬೇಡಿಕೆ ಇರುವುದು ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು. ನಂತರ ಉನ್ನತ ವೈದ್ಯಕೀಯ ಹಾಗೂ ತಂತ್ರಜ್ಞಾನ ಶಿಕ್ಷಣಕ್ಕಾಗಿ ಕಾಶೀ ಪೀಠದಿಂದ ಶಿಷ್ಯವೇತನ ಕೊಡುವುದಾಗಿ ಪ್ರಕಟಿಸಿದರು.

ಪ್ರತಿಭಾ ಸಂಪನ್ನರಿಂದ ರಾಷ್ಟ್ರದ ಏಳ್ಗೆ : ಕಾಶಿ ಶ್ರೀ



ಸಾಂಗ್ಲಿ ಜಿಲ್ಲೆಯ ತಾಸಂಗಾವ ಕೋಳಿಕರಮಠದಲ್ಲಿ ಮಹಾರಾಷ್ಟ್ರ ಬೋರ್ಡ್‌ನಿಂದ ಎಸ್ಸೆಸ್ಸಲ್ಸಿಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಕಾಶೀ ಜಗದ್ಗುರುಗಳು ಪುಷ್ಪಗುಚ್ಛ ಮತ್ತು ಶ್ರೀಫಲಗಳನ್ನು ನೀಡಿ ಆಶೀರ್ವದಿಸಿದರು.

ಮಹಾರಾಷ್ಟ್ರದ ಪುಣೆ ಜಿಲ್ಲೆಯ ಬಾರಾಮತಿ ನಗರದಲ್ಲಿ ಕಾಶೀ ಪೀಠದಿಂದ ಕೊಡಮಾಡಿದ ಶಿಷ್ಯವೇತನ ವಿತರಣಾ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು ರಾಷ್ಟ್ರದ ಸರ್ವಾಂಗೀಣ ಉತ್ಥಾನಕ್ಕೆ, ಮಕ್ಕಳಲ್ಲಿರುವ ವಿವಿಧ ವಿಷಯಗಳ ಪ್ರತಿಭೆಯೇ ಕಾರಣ. ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳತ್ತ ಸರಕಾರವು ಗಮನ ಹರಿಸಬೇಕು. ಅವರು ಯಾವ ಜಾತಿಯಲ್ಲಿದ್ದರೂ ಸರಕಾರ ಅವರನ್ನು ಪ್ರೋತ್ಸಾಹಿಸಬೇಕು. ಕಳೆದ 60 ವರ್ಷಗಳಿಂದ ಜಾತಿ ಆಧಾರದ ಮೇಲೆ ಮೀಸಲಾತಿಯನ್ನು ಸರಕಾರ ಕೊಡುತ್ತಲೇ ಬಂದಿದೆ. ಆದರೆ ಉಚ್ಛ ಜಾತಿಯಲ್ಲಿನ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೂ ಸರ್ವವಿಧದ ಸಹಾಯ ನೀಡಬೇಕೆಂದು ಶ್ರೀಗಳವರು ರಾಜ್ಯ ಮತ್ತು ಕೇಂದ್ರ ಸರಕಾರಗಳಿಗೆ ಒತ್ತಾಯಿಸಿದರು.

9–9–2008ಕ್ಕೂ ಮುಂಚಿನಿಂದ ಅಂದರೆ ಏಪ್ರಿಲ್‌ನಿಂದ ಜಗದ್ಗುರುಗಳ ಷಷ್ಠ್ಯಬ್ದಿ ಮಹೋತ್ಸವ ನಿಮಿತ್ತ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶಗಳ 61 ಜನ ವಿದ್ಯಾರ್ಥಿಗಳಿಗೆ ಹೊಸ ಶಿಷ್ಯವೇತನ ಪ್ರಾರಂಭಿಸಲಾಗಿದೆ ಎಂದು ಜಗದ್ಗುರುಗಳು ತಿಳಿಸಿದರು. ಈಗ ಕಾಶೀ ಪೀಠದಿಂದ 75 ವಿದ್ಯಾರ್ಥಿಗಳು ಶಿಷ್ಯವೇತನ ಪಡೆಯುತ್ತಿರುವುದನ್ನು ಹೇಳಿದರು.

ಬಡ ಪ್ರತಿಭೆಗಳತ್ತ ಸರಕಾರ ಗಮನ ನೀಡಲಿ : ಕಾಶಿ ಜಗದ್ಗುರುಗಳು

ಸಂಯುಕ್ತ ಕರ್ನಾಟಕ 9–9–2008

ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಜಗದ್ಗುರುಗಳು ತುಲಾ ಭಾರದಿಂದ ಬರುವ ಹಣವನ್ನು ವಿದ್ಯಾರ್ಥಿ ವೇತನದ ಸಲುವಾಗಿ ಮೀಸಲಾಗಿಡುವ ವಿಚಾರವನ್ನು 8–12–2008ರ ಅಲ್ಲಿಗೆ ದಯಮಾಡಿಸಿದಾಗ ಹೇಳಿದರು.



ಉನ್ನತ ಶಿಕ್ಷಣ ಪಡೆಯುತ್ತಿರುವ ಬಡ ವಿದ್ಯಾರ್ಥಿಗಳಿಗೆ ಕಾಶೀ ಪೀಠದ ವತಿಯಿಂದ ಮಹಾರಾಷ್ಟ್ರದ ಬಾರಾಮತಿ ನಗರದಲ್ಲಿ ಶಿಷ್ಯವೇತನ ವಿತರಿಸಲಾಯಿತು. ಕಾಶೀ ಜಗದ್ಗುರುಗಳು ಮತ್ತಿತರರು ಉಪಸ್ಥಿತರಿದ್ದರು.

सोलापूर शहर



वाराणसी (उत्तर प्रदेश) : येथे काशी पीठाचे जगद्गुरू डॉ. चंद्रशेखर शिवाचार्य महास्वामी यांच्या एकसष्टीनिमित्त तुलाभार कार्यक्रम आयोजित केला होता. त्यानंतर त्यांना सोन्याचा मुकुट अर्पण करण्यात आला. यावेळी (डावीकडून) गृहराज्यमंत्री सिद्धाराम म्हेत्रे, रंभापुरीचे जगद्गुरू वीरसोमेश्वर शिवाचार्य, उज्जयिनीचे जगद्गुरू मरुळसिद्ध शिवाचार्य, केदारचे जगद्गुरू रावल भीमाशंकरलिंग शिवाचार्य, श्रीशैलचे जगद्गुरू उमापती पंडिताराध्य शिवाचार्य आदी.

ಮಕ್ಕಳಲ್ಲಿರುವ ವಿವಿಧ ವಿಷಯಗಳ ಪ್ರತಿಭೆಯೇ ಕಾರಣ. ಪ್ರತಿಭೆ ಎಂಬುದು ರಾಷ್ಟ್ರದ ಸಂಪತ್ತು. ಅದು ಯಾವುದೇ ಜಾತಿಯಲ್ಲಿದ್ದರೂ ಸರಕಾರ ಅದನ್ನು ಪೋಷಿಸಿ ಬೆಳೆಸಬೇಕು. – ಕಾಶೀ ಜಗದ್ಗುರು

ಹೈದರಾಬಾದ್‌ನಲ್ಲಿ ಶಿಷ್ಯವೇತನ ಪ್ರದಾನ ಜಗದ್ಗುರುಗಳಿಂದ



ಹೈದರಾಬಾದ್‌ನಲ್ಲಿ ಆಯೋಜಿಸಿದ್ದ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವದಲ್ಲಿ ಕಾಶೀ ಜಗದ್ಗುರುಗಳು ಆಂಧ್ರದ ವಿದ್ವಾಂಸರಿಗೆ ಪುರಸ್ಕಾರ ಹಾಗೂ ಪ್ರತಿಭಾ ಸಂಪನ್ನ ವಿದ್ಯಾರ್ಥಿಗಳಿಗೆ ಕಾಶೀ ಪೀಠದಿಂದ ಶಿಷ್ಯವೇತನ ವಿತರಿಸಿದರು. ಶ್ರೀಶೈಲ ಜಗದ್ಗುರುಗಳು ಉಪಸ್ಥಿತರಿದ್ದರು.

ಜಗದ್ಗುರು ವಿಶ್ವಾರಾಧ್ಯ ಚಾರಿಟೇಬಲ್ ಟ್ರಸ್ಟ್, ಪುಣೆ ಮತ್ತು ವೀರಶೈವ ಧರ್ಮ ಪ್ರಚಾರ ಸಂಘ ಹೈದರಾಬಾದ್ ಇವರ ಸಂಯುಕ್ತಾಶ್ರಯದಲ್ಲಿ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಹಾಗೂ ಬಸವ ಜಯಂತಿ ಕಾರ್ಯಕ್ರಮವನ್ನು 24-6-2010ರಲ್ಲಿ ಹೈದರಬಾದ್‌ನಲ್ಲಿ ಆಯೋಜಿಸಲಾಗಿತ್ತು. ಅದೇ ವೇಳೆಯಲ್ಲಿ ಆಂಧ್ರಪ್ರದೇಶದ 65 ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಲಾಯಿತು. ಸಮಾರಂಭದ ಸಾನ್ನಿಧ್ಯವನ್ನು ಕಾಶೀ ಜಗದ್ಗುರುಗಳು ಮತ್ತು ಶ್ರೀಶೈಲ ಜಗದ್ಗುರುಗಳು ವಹಿಸಿದ್ದರು.

ಕಾಶೀ ಪೀಠದಿಂದ
ವಿದ್ಯಾರ್ಥಿಗಳಿಗೆ ಶಿಷ್ಯವೇತನ
ವಿಜಯ ಕರ್ನಾಟಕ, 29-6-2010

2010ರ ಶ್ರಾವಣ ಮಾಸದಲ್ಲಿ ಒಂದು ತಿಂಗಳು ಪ್ರತೀ ದಿನ ಒಂದೊಂದು ಊರಿನಲ್ಲಿ ಜಗದ್ಗುರುಗಳ ಕಾರ್ಯಕ್ರಮದ ಏರ್ಪಾಡು ಮಾಡಿದ್ದರು. ಆ ಸಮಯದಲ್ಲಿ ಸಂಗ್ರಹವಾದ ಭಕ್ತರು ಅರ್ಪಿಸಿದ್ದ ಕಾಣಿಕೆಯೆಲ್ಲವನ್ನು ಕಾಶೀ ಜಗದ್ಗುರುಗಳು ಠೇವಣಿ ರೂಪದಲ್ಲಿ ಇರಿಸಿ ಶಿಷ್ಯವೇತನ ಕೊಡುವ ಏರ್ಪಾಡು ಮಾಡಿದರು.

ಶಿಷ್ಯ ವೇತನ ನಿಧಿಗೆ 10 ಲಕ್ಷ ರೂ.

ವಿಜಯ ಕರ್ನಾಟಕ, 13–9–2010

ಶ್ರಾವಣ ಮಾಸದಲ್ಲಿ ಭಕ್ತರು ಅರ್ಪಿಸಿದ ಕಾಣಿಕೆಯನ್ನು ಜಗದ್ಗುರುಗಳು ಕಲ್ಯಾಣ ಕರ್ನಾಟಕ ಭಾಗದ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳ ಶೈಕ್ಷಣಿಕ ಸಹಾಯಾರ್ಥ ವಾಗಿ ಸ್ಥಾಪಿಸಿದ್ದ ನಿಧಿಗೆ ನೀಡುವುದಾಗಿ ಘೋಷಿಸಿದರು. ಭಕ್ತರು ಅರ್ಪಿಸಿದ 8 ಲಕ್ಷ (50 ಗ್ರಾಂ ಚಿನ್ನದೊಂದಿಗೆ)ಕ್ಕೆ ತಮ್ಮ ಪೀಠದಿಂದ 2 ಲಕ್ಷ ಸೇರಿಸಿ 10 ಲಕ್ಷ ರೂ. ಶಿಷ್ಯ ವೇತನ ನಿಧಿಗೆ ನೀಡಿದರು. ಬೀದರ್‌ನಲ್ಲಿ ಸ್ವತಂತ್ರ ಆಶ್ರಮ ಸ್ಥಾಪಿಸಲು ಶ್ರೀ ಕಾಶೀ ಜಗದ್ಗುರುಗಳು ಡಾ. ಗೋರಟಾ ರಾಜಶೇಖರ ಸ್ವಾಮಿಗಳಿಗೆ 5 ಲಕ್ಷ ರೂ. ನೀಡಿದರು.



ಹುಮನಾಬಾದ್‌ನಲ್ಲಿ ನಡೆದ ಶ್ರೀ ಸಿದ್ಧಾಂತ ಶಿಖಾಮಣಿಯ ಅಧ್ಯಾತ್ಮ ಆಶೀರ್ವಚನ ಕಾರ್ಯಕ್ರಮ ಮಂಗಲ ಮಹೋತ್ಸವದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು, ಮತ್ತಿತರರು ಉಪಸ್ಥಿತರಿದ್ದರು.

ಜಾತಿ–ಮತ ವರ್ಗ–ವರ್ಣಭೇದವಿಲ್ಲದೆ ಕಾಶೀ ಪೀಠದಿಂದ ಶಿಷ್ಯವೇತನ

ಪ್ರತಿಭಾವಂತರು ರಾಷ್ಟ್ರದ ಸಂಪತ್ತು ಎನ್ನುವ ಉದಾತ್ತ ಚಿಂತನೆಯೊಂದಿಗೆ ಯಾವ ಭೇದವಿಲ್ಲದೆ ಪೀಠದ ವತಿಯಿಂದ ಶಿಷ್ಯವೇತನ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು 4–1–2011ರಂದು ಇಳಕಲ್‌ನ ಆಧ್ಯಾತ್ಮ ಮಂಡಲಿ ಹಾಗೂ ಅಮರೇಶ್ವರ ಸೇವಾ ಸಮಿತಿಯವರು ಆಯೋಜಿಸಿದ್ದ ಜೇಷ್ಠಮಾಸದ ಜ್ಞಾನಯಜ್ಞ ಮುಕ್ತಾಯ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದಾಗ ಕಾಶಿ ಜಗದ್ಗುರುಗಳು ಹೇಳಿದರು. ಈ ಸಮಯದಲ್ಲಿ ನಗರದ ಮೂವರು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ ವಿತರಿಸಿದರು.

ಶಿಕ್ಷಣ ಮತ್ತು ಸಂಸ್ಕಾರಗಳು ದೇಶವನ್ನು ಅಭಿವೃದ್ಧಿ ಪಥದಲ್ಲಿ ಒಯ್ಯುತ್ತದೆ. ಆದ್ದರಿಂದ ಪಾಲಕರು ಆಸ್ತಿ ಸಂಗ್ರಹಿಸುವ ಕಡೆ ಚಿತ್ತ ಹರಿಸುವುದಕ್ಕಿಂತ ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡುವ ಕಡೆಗೆ ಗಮನ ಹರಿಸಬೇಕೆಂದು ಜಗದ್ಗುರುಗಳು ಪಾಲಕರಿಗೆ ತಿಳಿಹೇಳಿದರು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಶಿಕ್ಷಣ ಹಾಗೂ ಸಾಧನೆಗೆ ಕೊನೆಯಿಲ್ಲ. ಅಂತಹ ಸಾಧಕ, ಪ್ರತಿಭಾನ್ವಿತರ ಪ್ರಯತ್ನಕ್ಕೆ ಪ್ರೋತ್ಸಾಹ ದೊರೆಯಬೇಕಿದೆ ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಹೇಳಿದರು.

ಕಾಶಿ ಪೀಠದಿಂದ ಆರ್ಥಿಕ ನೆರವು

ವಿಜಯ ಕರ್ನಾಟಕ, 3–7–2011



ಇಳಕಲ್‌ನಲ್ಲಿ ನಡೆದ ವಿಶೇಷ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಉನ್ನತ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ತಲಾ 10 ಸಾವಿರ ರೂ.ಚೆಕ್ ವಿತರಿಸಿದರು.

'ವಿದ್ಯಾರ್ಥಿ ವೇತನಕ್ಕೆ ಗುರು ಕಾಣಿಕೆಯ ನಿಧಿ'
ಪ್ರಜಾವಾಣಿ

'ತುಲಾಭಾರದ ಹಣ ಶಿಷ್ಯವೇತನಕ್ಕೆ'
ಪ್ರಜಾವಾಣಿ

2014ರ ಜುಲೈ 7ನೇ ತಾರೀಕಿನಂದು ನವೆಂಬರ್ 11ನೇ ತಾ.ನವರೆಗೆ ಕಾಶೀ ಪೀಠದಲ್ಲಿ ಶ್ರೀ 1008 ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸನ್ನಿಧಿಯವರ ಪೀಠಾರೋಹಣ ರಜತಮಹೋತ್ಸವ ಆರಂಭವಾಗಿದೆ. ಬಡ ಹಾಗೂ ಬುದ್ಧಿವಂತ ಮಕ್ಕಳ ಉಚ್ಚ ಶಿಕ್ಷಣಕ್ಕಾಗಿ ಯೋಜನೆಯನ್ನು ಹಮ್ಮಿಕೊಂಡು ಈಗಾಗಲೇ 200ಕ್ಕೂ ಹೆಚ್ಚು ಮೆಡಿಕಲ್, ಇಂಜಿನಿಯರಿಂಗ್ ಓದುತ್ತಿರುವ ಬಡಮಕ್ಕಳಿಗೆ ತಿಂಗಳಿಗೆ 1000 ರೂ.ನಂತೆ ಕೊಡಲಾಗುತ್ತಿದೆ.

ಆದಾಯದಲ್ಲಿ ಒಂದಷ್ಟು ದಾನ ಮಾಡಿ **ವಿಜಯ ಕರ್ನಾಟಕ, 3–1–2011**



ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶಂಕರ ಬಿದರಿ, ಎಚ್.ಕೆ. ಶಿವಾನಂದ, ರೇವಣಸಿದ್ಧಯ್ಯ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರಿನ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆಯವರು ರಾಜ್ಯಾದ್ಯಂತ ನೂರಾರು ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಶಿಷ್ಯ ವೇತನ ಕೊಡುತ್ತಾ ಬಂದಿರುವರು. ಈ ಬಾರೀ ಈ ಕಾರ್ಯಕ್ರಮದ ಸಮಯದಲ್ಲಿ ಜಗದ್ಗುರುಗಳು ಬೆಂಗಳೂರಿನಲ್ಲಿದ್ದರು. ಅವರನ್ನು ಅಂದಿನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿಕೊಳ್ಳಲು ಬರಮಾಡಿಕೊಂಡಿದ್ದರು. ಜಗದ್ಗುರುಗಳು ವಿದ್ಯಾಪ್ರೇಮಿಗಳು. ಅದರಲ್ಲೂ ಹಳ್ಳಿಗಳಿಂದ ಓದಲು ಬರುವ ಪ್ರತಿಭಾವಂತ ಮಕ್ಕಳನ್ನು ಕಂಡರೆ ಎಲ್ಲಿಲ್ಲದ ವಾತ್ಸಲ್ಯ. ಇಲ್ಲೂ ತಮ್ಮ ಆಶೀರ್ವಚನದಲ್ಲಿ ಸಂಸ್ಥೆಯ ಸಾಮಾಜಿಕ ಸೇವಾ ಕಾರ್ಯವನ್ನು ಬಹುವಾಗಿ ಶ್ಲಾಘಿಸಿ–ಕಾಶೀ ಪೀಠದಿಂದ 1 ಲಕ್ಷರೂ.ಗಳನ್ನು ವಿದ್ಯಾರ್ಥಿ ವೇತನಕ್ಕಾಗಿ ದಾನಮಾಡಿದ್ದು ಸಂಸ್ಥೆಯ ಟ್ರಸ್ಟಿಗಳಿಗೆ ಬಹಳ ಸಂತೋಷವಾಯಿತು.

ಮಕ್ಕಳಿಗೆ ಯೋಧ, ಯೋಗಿ ಸಂಸ್ಕಾರ ನೀಡಿ

30–6–2011 : ಇಳಕಲ್ಲಿನ ಜೇಷ್ಠ ಮಾಸದ ಜ್ಞಾನಯಜ್ಞದ ವಿಶೇಷ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು ಯೋಧ ಹಾಗೂ ಯೋಗಿ ದೇಶಕ್ಕಾಗಿ ಸಮಾಜಕ್ಕಾಗಿ ದುಡಿಯುತ್ತಾರೆ. ಜಗತ್ತು ಒಂದು ಮಾರುಕಟ್ಟೆ. ಅದರಲ್ಲಿ ಕೊಡುವ ಮತ್ತು ಕೊಳ್ಳುವ ವ್ಯಾಪಾರದಲ್ಲಿ ಎಲ್ಲರೂ ವ್ಯಾಪಾರಿಗಳೆ, ಗ್ರಾಹಕರೆ, ಸಮಾಜಕ್ಕೆ ಮಾಡುವ ದಾನ ನಮ್ಮನ್ನು ದೊಡ್ಡವರನ್ನಾಗಿ ಮಾಡುತ್ತದೆ. ಮಕ್ಕಳಿಗೆ ಯೋಧ ಹಾಗೂ ಯೋಗಿಯ ಸಂಸ್ಕಾರದ ಬಗ್ಗೆ ತಿಳಿಸಬೇಕು. ಸಂಪತ್ತು ಗಳಿಸುವುದು ಶ್ರೀಮಂತಿಕೆಯಲ್ಲ. ಗಳಿಸಿದ ಸಂಪತ್ತು ಅಸಹಾಯಕರಿಗೆ, ದೀನ ದಲಿತರಿಗೆ ದಾನ ಮಾಡಿದಾಗ ಶ್ರೀಮಂತರೆನಿಸಿಕೊಳ್ಳುತ್ತಾರೆ ಎಂದು ಉಪದೇಶ ನೀಡಿದರು.


ವೈದ್ಯ–ಶಿಕ್ಷಕ ಸಮಾಜದ ಎರಡು ಕಣ್ಣು : ಕಾಶಿ ಶ್ರೀ

1–7–11 : ಜಗದ್ಗುರುಗಳ ದೃಷ್ಟಿಯಲ್ಲಿ ವೈದ್ಯ ಮತ್ತು ಶಿಕ್ಷಕ ಸಮಾಜದ ಎರಡು ಕಣ್ಣುಗಳು ಎಂದು ಹೇಳಿ–ಸಮುದಾಯದ ಉತ್ತಮ ಆರೋಗ್ಯಕ್ಕೆ ವೈದ್ಯ ಬೇಕು, ಉತ್ತಮ ಶಿಕ್ಷಣಕ್ಕೆ ಶಿಕ್ಷಕ ಬೇಕು. ಹೀಗಾಗಿ ಇವರಿಬ್ಬರೂ ಸಮಾಜದ ಎರಡು ಕಣ್ಣುಗಳಿದ್ದಂತೆ ಎಂದು ಅರ್ಥಪೂರ್ಣವಾಗಿ ವಿವರಿಸಿದರು.

ವೈದ್ಯರ ನಿಸ್ವಾರ್ಥ ಸೇವೆಯಿಂದ ಸಮಾಜ ಅವರನ್ನು ಗೌರವಿಸುತ್ತದೆ. ಮಕ್ಕಳ ಶ್ರೇಯೋಭಿವೃದ್ಧಿಗೆ ನಿರಂತರ ಶ್ರಮಿಸುವ ಶಿಕ್ಷಕರನ್ನು ಸಮಾಜ ಗೌರವಿಸುತ್ತದೆ. ಇಂತಹ ವೈದ್ಯರನ್ನು, ಶಿಕ್ಷಕರನ್ನು ಗುರುತಿಸುವುದು ಸಮಾಜಬಾಂಧವರ, ಸಾಮಾಜಿಕ ಸಂಸ್ಥೆಗಳ ಕರ್ತವ್ಯವೆಂದರು.

ಶಿಕ್ಷಕ ಬಾಲಕೃಷ್ಣ ಗಜೇಂದ್ರಗಡ ಹಾಗೂ ಡಾ.ಡಿ. ಜೆ ಮಾಳಗಿ ಅವರ ನಿಸ್ವಾರ್ಥ ಸೇವೆಯನ್ನು ಶ್ಲಾಘಿಸಿ ಸನ್ಮಾನಿಸಿದರು.

ಕಾಶೀ ಪೀಠದ ಶ್ರೀ ವಿಶ್ವಾರಾಧ್ಯ ಗುರುಕುಲ ಅಮೃತ ಮಹೋತ್ಸವ



28–11–2007 : ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು 1989ರಲ್ಲಿ ಕಾಶೀ ಪೀಠದ ಜಗದ್ಗುರುಗಳಾಗಿ ಉತ್ತರಾಧಿಕಾರವನ್ನು ಸ್ವೀಕರಿಸಿದ ನಂತರ ಸ್ವತಃ ಮೊದಲಿನಿಂದಲೂ ಸಂಶೋಧಕ ಪ್ರವೃತ್ತಿಯವರಾದ್ದರಿಂದ ಪೀಠದಲ್ಲಿರುವ ಪ್ರಾಚೀನ ದಾಖಲೆಗಳನ್ನು ಪರಿಶೀಲಿಸಲಾರಂಭಿಸಿದಾಗ ವಿಶ್ವಾರಾಧ್ಯ ಗುರುಕುಲ ಸ್ಥಾಪನೆಯಾಗುವ ಮೊದಲೇ ಓದಿ ಹೋದ ವಿದ್ಯಾರ್ಥಿಗಳ ವಿವರಣೆಗಳು ಮತ್ತು ಗುರುಕುಲ ಸ್ಥಾಪನೆಯ ನಂತರ ಓದಿದ ವಿದ್ಯಾರ್ಥಿಗಳ ಒಂದು ದೊಡ್ಡ ಹೊತ್ತಿಗೆ ಜಗದ್ಗುರುಗಳಿಗೆ ಸಿಕ್ಕಿತು. ಆ ಹೊತ್ತಗೆಯನ್ನು ಆಮೂಲಾಗ್ರವಾಗಿ ಪರಿಶೀಲಿಸಿದಾಗ ಎಷ್ಟೊಂದು ಮಹನೀಯರು ಇಲ್ಲಿದ್ದುಕೊಂಡು ಓದಿ ಹೋಗಿರುವ ವಿಚಾರ ಯಾರಿಗೂ ತಿಳಿದಿರುವುದಿಲ್ಲ ಎಂದು ಅದನ್ನು ವ್ಯವಸ್ಥಿತವಾಗಿ ವರ್ಷಗಳನುಕ್ರಮವಾಗಿ ಬರೆಸಿ ಪ್ರಕಟಗೊಳಿಸಬೇಕೆಂಬ ಉತ್ತಮ ವಿಚಾರ ಜಗದ್ಗುರುಗಳ ಮನಸ್ಸಿನಲ್ಲಿ ಮೂಡಿತು. ಕೂಡಲೇ ಈ ದಿಶೆಯಲ್ಲಿ ಕಾರ್ಯತತ್ಪರರಾದರು.

ಮಠದಲ್ಲಿ ಹಿರಿಯ ಸಂಶೋಧಕ ವಿದ್ಯಾರ್ಥಿಯಾಗಿದ್ದ ಷ॥ಬ್ರ॥ ಡಾ॥ ಶಿವಾನಂದ ಸ್ವಾಮಿಗಳಿಗೆ (ಇಂದಿನ ತುಮಕೂರಿನ ಹಿರೇಮಠದ ಡಾ. ಶಿವಾನಂದ ಶಿವಾಚಾರ್ಯ ಸ್ವಾಮಿಗಳಿಗೆ) ಈ ಜವಾಬ್ದಾರಿ ಕೊಟ್ಟು ಹಳೆಯ ವಿದ್ಯಾರ್ಥಿಗಳೊಂದಿಗೆ ಪತ್ರ ವ್ಯವಹಾರ ಮಾಡಿ ವಿಷಯ ಸಂಗ್ರಹಿಸಲು ಆದೇಶ ನೀಡಿದರು. ಸ್ವಾಮಿಗಳು ಸಾಕಷ್ಟು ಸಂಪರ್ಕ ಮಾಡಿ ವಿಷಯ ಕಲೆಹಾಕುತ್ತಿದ್ದರು. ಆ ಸಮಯದಲ್ಲಿ ಅವರು ತುಮಕೂರಿನ ಹಿರೇಮಠದ ಸ್ವಾಮಿಗಳಾಗಿ ನೇಮಕಗೊಂಡು ಅಲ್ಲಿಗೆ ಹೋದ ನಂತರ ಈ ಕೆಲಸ ಸ್ಥಗಿತಗೊಂಡಿತು. ಜಗದ್ಗುರುಗಳು ಈ ಪೀಠದಲ್ಲಿದ್ದು ಪಿಹೆಚ್.ಡಿ. ಮಾಡಿದ್ದ ಮತ್ತೋರ್ವ ಸ್ವಾಮಿಗಳು ಷ॥ಬ್ರ॥ ಬಬಲೇಶ್ವರ ಬೃಹನ್ಮಠದ ಡಾ॥ ಮಹಾದೇವ ಶಿವಾಚಾರ್ಯರಿಗೆ ಈ ಕೆಲಸ ಕೊಟ್ಟರು. ಸುಮಾರು ಎರಡು ವರ್ಷಗಳ ಕಾಲ ನಿರಂತರ ಶ್ರಮವಹಿಸಿ ಎಲ್ಲಾ ದಾಖಲೆಗಳನ್ನು ಸಂಗ್ರಹಿಸಿ ಜಗದ್ಗುರುಗಳ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳ ಪರಿಚಯಗಳನ್ನು ಸಿದ್ಧಗೊಳಿಸಲಾಯಿತು.

2007ರ ನವೆಂಬರ್ 29ರಂದು ಜಗದ್ಗುರುಗಳ ಷಷ್ಟ್ಯಬ್ದಿ ಮಹೋತ್ಸವದ ಸಂದರ್ಭದಲ್ಲಿ ಅದರ ಹಿಂದಿನ ದಿನ ವಿಶ್ವಾರಾಧ್ಯ ಗುರುಕುಲದ ಅಮೃತ ಮಹೋತ್ಸವ ಏರ್ಪಡಿಸಿ ಆ ಶುಭ ಗಳಿಗೆಯಲ್ಲಿ ಗುರುಕುಲದ ವಿದ್ಯಾರ್ಥಿಗಳ ದಾಖಲಾತಿ ಗ್ರಂಥವನ್ನು 'ಜ್ಞಾನಗಂಗಾ' ಹೆಸರಿನಲ್ಲಿ ಬಿಡುಗಡೆ ಮಾಡಲಾಯಿತು.

23–3–1918ರಂದು ಜಗದ್ಗುರು ಪಂಚಾಚಾರ್ಯರ ಸಮ್ಮೇಳನದ ಸ್ಮಾರಕವಾಗಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲವನ್ನು ಅಂದಿನ 82ನೇ ಜಗದ್ಗುರುಗಳಾಗಿದ್ದ ಶ್ರೀ 1008 ಜಗದ್ಗುರು ಶಿವಲಿಂಗ ಶಿವಾಚಾರ್ಯರಿಂದ ಸ್ಥಾಪಿಸಲ್ಪಟ್ಟಿತು. 1918 ಶಿವರಾತ್ರಿಯಂದು ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಥಮ ಸಮ್ಮೇಳನದ ಕಾರ್ಯದರ್ಶಿಯಾಗಿದ್ದ ನಾಗನೂರು ಬೃಹನ್ಮಠದ ಪಂ. ಕಾಶೀನಾಥ ಶಾಸ್ತ್ರಿಗಳು ಇಂದಿನ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಸೋದರಮಾವನವರಾಗಿದ್ದರು.

ಕಾಶೀ ಪೀಠ ಪ್ರಾಚೀನ ಶ್ರೇಷ್ಠ ಗುರುಕುಲ

ವಿಜಯ ಕರ್ನಾಟಕ



ವಾರಣಾಸಿಯ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದ ಅಮೃತ ಮಹೋತ್ಸವದಲ್ಲಿ ಶ್ರೀ ಪಂಚಪೀಠಾಧೀಶ್ವರರು ಹಾಗೂ ಶಿವಾಚಾರ್ಯರು ಪಾಲ್ಗೊಂಡಿದ್ದರು.

'ಶ್ರೀ ಕಾಶೀ ಪೀಠ ಜ್ಞಾನಗಂಗಾ' ಗ್ರಂಥದಲ್ಲಿ 1918ನೇ ವರ್ಷದ ಹಿಂದಕ್ಕೆ ಓದಿದ ವಿದ್ಯಾರ್ಥಿಗಳ ಮತ್ತು 1918ರಲ್ಲಿ ಗುರುಕುಲ ಸ್ಥಾಪನೆ ಆದ ನಂತರ ಓದಿಹೋದ ವಿದ್ಯಾರ್ಥಿಗಳ ವಿವರಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಲಾಗಿದೆ.

ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮಗೆ ದೊರೆತ ಹೊತ್ತಗೆಯ ಜೊತೆಗೆ ಸಾಧ್ಯವಾದಷ್ಟು ಗುರುಕುಲದ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಿಸಿ ಈ ರೀತಿ ಪುಸ್ತಕದ ರೂಪದಲ್ಲಿ ಪ್ರಕಟಿಸಿದ್ದರಿಂದ ಇಂದು ಈ ವಿಚಾರ ಎಲ್ಲ ಮಠಾಧೀಶರುಗಳಿಗೂ ಜನಸಾಮಾನ್ಯರಿಗೂ ತಿಳಿಯುವಂತಾಗಿದೆ.

ಗುರುಕುಲ ಸ್ಥಾಪಿತಗೊಳ್ಳುವ ಮೊದಲೇ ಜಂಗಮವಾಡಿ ಮಠದಲ್ಲಿ ಅಧ್ಯಯನ ಮಾಡುವ ವ್ಯವಸ್ಥೆಯಿತ್ತು. ವಿದ್ಯಾರ್ಥಿಗಳಿಗೆ ಉಚಿತ ಊಟ–

ವಸತಿಯ ವ್ಯವಸ್ಥೆಯೂ ಇದ್ದಿತು. ಗುರು–ವಿರಕ್ತ ಎನ್ನುವ ಭೇದ ಭಾವವಿಲ್ಲದೆ ಎಲ್ಲಾ ವೀರಶೈವರಿಗೂ ಸಂಸ್ಕೃತ ವಿದ್ಯಾದಾನ ಮಾಡುತ್ತಾ ಜ್ಞಾನಸಿಂಹಾಸನದ ಹೆಸರನ್ನು ಸಾರ್ಥಕಪಡಿಸಿದೆ. ಗುರುಕುಲದ ಕುತೂಹಲಕಾರಿ ಇತಿಹಾಸವನ್ನು ತಿಳಿಯಬೇಕೆಂದರೆ ಶ್ರೀ ಕಾಶೀಪೀಠ 'ಜ್ಞಾನ ಸಿದ್ಧಗಂಗಾ'ವನ್ನು ಒಳ ಹೊಕ್ಕು ಓದಬೇಕು. ಅನೇಕ ರಾಜ್ಯಗಳಲ್ಲಿ ಸಂಸ್ಕೃತ ಪಾಠಶಾಲೆಗಳು ಆರಂಭಗೊಂಡಿರುವುದು ಇಲ್ಲಿ ಓದಿ ಹೋದ ವಿದ್ವಾಂಸರುಗಳಿಂದ.

ಇವತ್ತಿಗೂ ಈ ಪರಂಪರೆಯನ್ನು ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯರು ಇನ್ನೂ ವ್ಯವಸ್ಥಿತವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ವಿದ್ಯಾರ್ಥಿಗಳ ಕೊಠಡಿಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಿರುವುದಲ್ಲದೆ ಪ್ರಸಾದದ ವ್ಯವಸ್ಥೆಯೂ ರುಚಿಕಟ್ಟಾಗಿದೆ. ಇಂದಿನ ವಿದ್ಯಾರ್ಥಿಗಳು ಹಿಂದಿನ ವಿದ್ಯಾರ್ಥಿಗಳಿಗಿಂತ ಹೆಚ್ಚು ಅನುಕೂಲ ಪಡೆದ ಭಾಗ್ಯವಂತರಾಗಿದ್ದಾರೆ.

ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಜಗದ್ಗುರುಗಳ ಹಿತವಚನಗಳು

17–1–2008ರಲ್ಲಿ ಶಾಖಾಪುರ ಶ್ರೀ ವಿಶ್ವಾರಾಧ್ಯ ತಪೋವನ ಮಠದಲ್ಲಿ ಆರಂಭಗೊಂಡ ಶ್ರೀ ಸಿದ್ಧರಾಮ ಗುರುಕುಲ ವಸತಿ ಶಾಲೆಯಲ್ಲಿ ಆಶೀರ್ವಚನ ನೀಡಿದಾಗ "ಉತ್ತಮ ಶಿಕ್ಷಣ ನೀಡಿ ಸುಸಂಸ್ಕೃತ ಸಮಾಜ ನಿರ್ಮಿಸಬೇಕು" ಎಂದು ಶಿಕ್ಷಕರಿಗೆ ಕರೆ ನೀಡಿದರು. ಅಲ್ಲಿನ ಗುರುಕುಲದ ವಿದ್ಯಾರ್ಥಿಗಳಿಗೆ ನೂತನ ಹೈಸ್ಕೂಲ್ ಕಟ್ಟಡ ನಿರ್ಮಾಣದ ಕಾಮಗಾರಿಗೆ ಕಾಶೀ ಜಗದ್ಗುರುಗಳು ಅಡಿಗಲ್ಲು ಹಾಕಿದರು.



ಶಾಖಾಪೂರ : ಕಾಶೀ ಜಗದ್ಗುರುಗಳಿಂದ ಹೈಸ್ಕೂಲ್ ಕಟ್ಟಡಕ್ಕೆ ಅಡಿಗಲ್ಲು

ಪುಣೆಯಲ್ಲಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ವಿದ್ಯಾರ್ಥಿ ವಸತಿ ನಿಲಯವು ಕಾಶೀ ಪೀಠದ ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು 50 ವರ್ಷಗಳ ಹಿಂದೆ ನಗರದ ಸದಾಶಿವನಪೇಟೆಯಲ್ಲಿ ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆ ವಸತಿ ನಿಲಯ ಸ್ಥಾಪಿಸಿದ್ದರು. ಈ ವಸತಿ ಶಾಲೆಯಲ್ಲಿ ವಾಸ್ತವ್ಯ ಮಾಡಿ ಅಧ್ಯಯನ ಮಾಡಿದವರಲ್ಲೊಬ್ಬರಾದ ಡಾ. ಈರೇಶ ಸ್ವಾಮಿ ಅವರು ಸೋಲಾಪುರ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾಗಿದ್ದರು. ಇನ್ನು ಕೆಲವರು ಶ್ರೇಷ್ಠ ಸಂಶೋಧಾಧಿಕಾರಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ವಿದ್ಯಾರ್ಥಿ ವಸತಿ ನಿಲಯದ ಸುವರ್ಣ ಮಹೋತ್ಸವದಲ್ಲಿ ಸಾನ್ನಿಧ್ಯ ವಹಿಸಿದ ಜಗದ್ಗುರುಗಳು ಪ್ರತಿಭಾ ಸಂಪನ್ನರಾದ ವಿದ್ಯಾರ್ಥಿಗಳೇ ರಾಷ್ಟ್ರದ ಉಜ್ವಲ ಸಂಪತ್ತು ಎಂದು ಹೇಳಿ–ಮಠಮಾನ್ಯಗಳು ಸಾಮಾಜಿಕ ಸಂಘಟನೆಗಳು,

ಶಿಕ್ಷಣದಿಂದ ಉತ್ತಮ ಸಮಾಜ ನಿರ್ಮಾಣ : ಕಾಶಿ ಶ್ರೀಗಳು

ವಿಜಯ ಕರ್ನಾಟಕ 17–1–08



ಶಾಖಾಪುರ ವಿಶ್ವಾರಾಧ್ಯ ತಪೋವನ ಮಠದ ಸಿದ್ಧರಾಮ ಗುರುಕುಲ ವಸತಿ ಶಾಲೆಗೆ ಭೇಟಿ ನೀಡಿದ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರನ್ನು ಶ್ರೀ ಸಿದ್ಧರಾಮ ಶಿವಾಚಾರ್ಯರು ಸತ್ಕರಿಸಿದರು.

ವಿದ್ಯಾರ್ಥಿಗಳೇ ರಾಷ್ಟ್ರದ ನೈಜ ಸಂಪತ್ತು

ವಿಜಯ ಕರ್ನಾಟಕ, 28–5–2009



ಪುಣೆ ನಗರದಲ್ಲಿ ಕಾಶೀ ಪೀಠದ ವತಿಯಿಂದ ನಡೆಯುತ್ತಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ವಿದ್ಯಾರ್ಥಿ ವಸತಿನಿಲಯದ ಸುವರ್ಣ ಮಹೋತ್ಸವವನ್ನು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು.

'ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಿ'
ಸಂಯುಕ್ತ ಕರ್ನಾಟಕ, 11–06–2009




ಜಮಖಂಡಿ ರಾಮ ಟೇಕಡಿ ವಿಠ್ಠಲ ಮಂದಿರದಲ್ಲಿ ಶ್ರೀ ವಿಶ್ವಾರಾಧ್ಯ ಪೂರ್ವ ಪ್ರಾಥಮಿಕ ವಿದ್ಯಾಲಯದ ಪ್ರಾರಂಭೋತ್ಸವವನ್ನು ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನೆರವೇರಿಸಿದರು. ಹಿಪ್ಪರಗಿ ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು, ಉದ್ಯಮಿ ಜಗದೀಶ ಗುಡಗಂಟಿ, ಸುಶೀಲಕುಮಾರ ಬೆಳಗಲಿ, ನಾಗಪ್ಪ ಸನದಿ, ಕಾಡು ಮಾಳಿ, ವೀಣಾಪಾಣಿ ಇನ್ನಿತರರನ್ನು ಕಾಣಬಹುದು.

ವಿವಿಧ ವಿದ್ಯಾ ಕೇಂದ್ರಗಳಲ್ಲಿ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಓದಲು ಅನುಕೂಲ ಕಲ್ಪಿಸಿದರೆ ಅವರು ಬುದ್ಧಿವಂತರಾದ ಮಕ್ಕಳಾಗಿ ರಾಷ್ಟ್ರ ನಿರ್ಮಾಣದಲ್ಲಿ ಕಾರಣೀಭೂತರಾಗುವರು ಎಂದರು.

ಜಮಖಂಡಿಯಲ್ಲಿ ವಿಶ್ವಾರಾಧ್ಯ ಪೂರ್ವ ಪ್ರಾಥಮಿಕ ವಿದ್ಯಾಲಯಗಳ ಪ್ರಾರಂಭೋತ್ಸವದ ಸಾನ್ನಿಧ್ಯ ವಹಿಸಿ ಶಾಲೆಯ ಉದ್ಘಾಟನೆ ಮಾಡಿ ಜಗದ್ಗುರುಗಳು ಮಕ್ಕಳಿಗೆ ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರವನ್ನು ಕೊಟ್ಟು ಅವರ ಬಾಳನ್ನು ಉಜ್ವಲಗೊಳಿಸಬೇಕು. ವಿದ್ಯಾಮಂದಿರಗಳು ವ್ಯಾಪಾರ ಕೇಂದ್ರಗಳಾಗದೆ ವಿದ್ಯೆ ನೀಡುವ ದೇಗುಲಗಳಾಗಬೇಕೆಂದು ತಮ್ಮ ಆಶಯವನ್ನು ವ್ಯಕ್ತಪಡಿಸಿದರು.

ಮಹಾರಾಷ್ಟ್ರ ಕರಾಡ ನಗರದ ವೀರಶೈವ ಲಿಂಗಾಯತ ಮಠ ಸಂಸ್ಥಾನದಲ್ಲಿ ಪಂಚಾಚಾರ್ಯ ಆಗಮ ಮಾಧ್ಯಮ ಶಾಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ನಾಡಿನ ಮಠ ಮಂದಿರಗಳು ಸಮಾಜದ ಸರ್ವವರ್ಗಗಳ ಸಂಸ್ಕಾರ ಕೇಂದ್ರಗಳಾಗಿ ಪ್ರಾಚೀನ ಕಾಲದಿಂದಲೂ ಉತ್ತಮ ಸಂಸ್ಕಾರದ ಜತೆಗೆ ವಿದ್ಯೆಯನ್ನು ದಾನ ಮಾಡುತ್ತಾ ಬಂದಿವೆ. ಈ ಮಠ ಮಂದಿರಗಳು ಇರದೇ ಹೋಗಿದ್ದರೆ

ನವೋದಯ 19–3–10



ಸಂಭಾಪೂರ ರಸ್ತೆಯಲ್ಲಿರುವ ಜ. ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ ಇದರ ಅಂಗಸಂಸ್ಥೆ ಜ. ಪಂಚಾಚಾರ್ಯ ವೇದಾಗಮ ಪಾಠಶಾಲಾ ಆವರಣದಲ್ಲಿರುವ ಕಾಶೀ ವಿಶ್ವನಾಥ ದೇವಾಲಯಕ್ಕೆ ದಾನಿಗಳಾದ ಸಂಗಪ್ಪ ರೂಡಗಿ ಇವರು ಕೊಡಮಾಡಿದ ಪಂಚ ಕಳಸಾರೋಹಣ ಕಾರ್ಯಕ್ರಮವು ಪೂಜ್ಯ ಜ. ಕಾಶೀ ಪೀಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ಮಂಗಳವಾರ ನೆರವೇರಿಸಿದರು. ವೇ.ಮೂ. ಬೆಟದಯ್ಯ ಹಿರೇಮಠ, ಪಂಚಾಚಾರ್ಯ ಸೇವಾ ಸಂಘದ ಮಂಜಣ್ಣ ಬೇಲೇರಿ, ಸಿದ್ಧಲಿಂಗಪ್ಪ ಚಳಗೇರಿ, ಹಿರೇಮಠ ಮುಂತಾದ ಗಣ್ಯರನ್ನು ಕಾಣಬಹುದು.

ವಿಜಯ ಕರ್ನಾಟಕ, 21–2–2010



ಮಹಾರಾಷ್ಟ್ರದ ಕರಾಡದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಶೀ ಶ್ರೀಗಳು ಆಶೀರ್ವಚನ ನೀಡಿದರು.

ಆರ್ಥಿಕವಾಗಿ ಹಿಂದುಳಿದವರಿಗೆ ವಿದ್ಯೆಯೆಂಬುದು ಕೈಗೆಟುಕದ ಕನಸಾಗಿರುತ್ತಿತ್ತು ಎಂದು ಸಾನ್ನಿಧ್ಯ ವಹಿಸಿದ್ದ ಕಾಶೀ ಜಗದ್ಗುರುಗಳು ತಿಳಿಸಿದರು. 21–2–2010

ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಮಾಳಕವಠಾ ಗ್ರಾಮದಲ್ಲಿ ಪ್ರೌಢಶಾಲೆಯ ನೂತನ ಭವನ ಉದ್ಘಾಟನೆ ಮಾಡಿ ಕಾಶೀ ಜಗದ್ಗುರುಗಳು ಭಾರತೀಯ ನಾಗರಿಕರೆಲ್ಲರಿಗೂ ಅನ್ವಯಿಸುವಂತಹ ಮಾತುಗಳನ್ನಾಡಿದರು.

ಮಿತಸಂತಾನ, ಉತ್ತಮ ಶಿಕ್ಷಣ ಸಂಸ್ಕಾರದಿಂದ ಭಯೋತ್ಪಾದನೆ ನಿಯಂತ್ರಿಸಲು ಸಾಧ್ಯವೆಂದು ಆಗ ತಾನೇ ಮುಂಬಯಿನಲ್ಲಿ ನಡೆದ ಉಗ್ರರ ದಾಳಿಯನ್ನು ನೆನೆದು ಹೇಳಿದ ಮಾತುಗಳಿವು.

ಮಕ್ಕಳಿಂದ ರಾಷ್ಟ್ರ ನಿರ್ಮಾಣ ಶಿಕ್ಷಣ, ಸಂಸ್ಕಾರದಿಂದ ಭಯೋತ್ಪಾದನೆ ನಿಗ್ರಹ : ಕಾಶಿ ಶ್ರೀ

ವಿಜಯ ಕರ್ನಾಟಕ, 10–12–2008



ಸೊಲ್ಲಾಪುರ ಜಿಲ್ಲೆಯ ಮಾಳಕವಠಾ ಗ್ರಾಮದಲ್ಲಿ ಶ್ರೀ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳ ಪಟ್ಟಾಭಿಷೇಕದ ರಜತಮಹೋತ್ಸವ ಮತ್ತು ಪ್ರೌಢಶಾಲೆಯ ನೂತನ ಭವನದ ಉದ್ಘಾಟನೆ ಅಂಗವಾಗಿ ಹಮ್ಮಿಕೊಂಡಿದ್ದ ಧರ್ಮ ಸಭೆಯಲ್ಲಿ ಶ್ರೀ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಯಾವುದೇ ಪರಿವಾರದಲ್ಲಿ ಮಿತಿ ಮೀರಿದ ಸಂತಾನವಿದ್ದಾಗ ಎಲ್ಲಾ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಕೊಡಲಾಗುವುದಿಲ್ಲ. ಆಗ ಮಕ್ಕಳು ಅನಿವಾರ್ಯವಾಗಿ ವಾಮವಾರ್ಗದಲ್ಲಿ ನಡೆಯುತ್ತಾರೆಂದು ಜಗದ್ಗುರುಗಳು ಹೇಳುತ್ತಾ ಇದಕ್ಕೆ ಒಂದು ಉದಾಹರಣೆ ಎಂದರೆ ಇಂದು ಜೀವಂತವಾಗಿ ಸಿಕ್ಕಿರುವ ಪಾಕಿಸ್ತಾನ ಮೂಲದ ಉಗ್ರವಾದಿಯು ತನ್ನ ಆತ್ಮಕಥೆಯನ್ನು ಹೇಳುವಾಗ "ತಂದೆ–ತಾಯಿ, ಅಣ್ಣ ತಮ್ಮಂದಿರು ತನ್ನ ಶಿಕ್ಷಣದತ್ತ ಗಮನ ಕೊಡದ ಕಾರಣ ನಾನು ಮೊದಲು ಕಳ್ಳತನದಲ್ಲಿ ತೊಡಗಿದೆ. ನಂತರ ಈ ಭಯೋತ್ಪಾದಕರ ಗುಂಪಿಗೆ ಸೇರಿದೆ" ಎಂದು ಹೇಳಿಕೆ ಕೊಟ್ಟಿರುವುದನ್ನು ಇಲ್ಲಿ ಹೇಳಿ–ಇದರಿಂದ ಮಿತಿಮೀರಿದ ಸಂತಾನ ಮತ್ತು ಅಶಿಕ್ಷಣವೇ ಕಠಿಣವೆನ್ನುವುದನ್ನು ಅರಿಯಬೇಕು. ಆದ್ದರಿಂದ ಎಲ್ಲಾ ಧರ್ಮದವರು ರಾಷ್ಟ್ರದ ಹಿತ ದೃಷ್ಟಿಯಿಂದ ಮಿತಿ ಸಂತಾನದ ಪರಿವಾರ ನಿಯೋಜನೆ ಅನುಸರಿಸಬೇಕು. ಹಿಂದಿನ ಕಾಲದಲ್ಲಿ ಧರ್ಮಗುರುಗಳು "ಅಷ್ಟಪುತ್ರ ಸೌಭಾಗ್ಯವತೀಭವ" ಎಂದು ಆಶೀರ್ವದಿಸುತ್ತಿದ್ದರು. ಆದರೀಗ ರಾಷ್ಟ್ರದ ಹಿತದೃಷ್ಟಿಯಿಂದ 'ಇಷ್ಟಪುತ್ರ ಸೌಭಾಗ್ಯವತೀಭವ' ಎಂದು ಆಶೀರ್ವದಿಸಬೇಕಾಗಿದೆ. ಮಕ್ಕಳಿಂದ ರಾಷ್ಟ್ರ ನಿರ್ಮಾಣವಾಗಬೇಕಲ್ಲದೆ, ರಾಷ್ಟ್ರಕ್ಕೆ ಹಾನಿಯಾಗಬಾರದೆಂದು ಜನತೆಗೆ ತಮ್ಮ ಜವಾಬ್ದಾರಿಯನ್ನು ತಿಳಿಸಿ ಹೇಳಿದರು.

ಕಾಶೀ ಜಗದ್ಗುರುಗಳಿಂದ ಆರಂಭಿಸಲ್ಪಟ್ಟ ಶಿಕ್ಷಣ ಸಂಸ್ಥೆಗಳು–ಉಚಿತ ಊಟ–ವಸತಿ ಕೇಂದ್ರಗಳು

ಜಗದ್ಗುರುಗಳು ಬಡಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡಬೇಕೆಂಬ ಉದ್ದೇಶದಿಂದ ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು.

1. ವಿಶ್ವೇಶ್ವರ ಬಾಲವಿದ್ಯಾಲಯ, ಸಾಂಗ್ಲಿ, ಪುಣೆ, ಮಹಾರಾಷ್ಟ್ರ
2. ಶ್ರೀ ಜಗದ್ಗುರು ವಿಶ್ವೇಶ್ವರ ಎಜ್ಯುಕೇಶನಲ್ ಚಾರಿಟೇಬಲ್ ಟ್ರಸ್ಟ್, ಪುಣೆ ಇದರಡಿಯಲ್ಲಿ
   ಎ. ಕಾಶೀ ವಿಶ್ವೇಶ್ವರ ಇಂಗ್ಲಿಷ್ ಮಾಧ್ಯಮ ಶಾಲೆ, ಪುಣೆ
   ಬಿ. ಜಗದ್ಗುರು ಪಂಚಾಚಾರ್ಯ ವೇದ ಪಾಠಶಾಲೆ, ಶಾದನಗರ, ಮೆಹಬೂಬನಗರ, ಆಂಧ್ರಪ್ರದೇಶ ಉಚಿತ ಊಟ ವಸತಿ ನಿಲಯ.
3. ಶ್ರೀ ಜಗದ್ಗುರು ವಿಶ್ವಾರಾಧ್ಯ ಶಿಕ್ಷಣ ಸಮಿತಿ, ವಾರಣಾಸಿ
4. ವೇದಾಗಮ ಯೋಗ ಸಂಸ್ಕೃತ ಪಾಠಶಾಲೆ–ಗದಗ್, ಕರ್ನಾಟಕ, ಉಚಿತ ಊಟ ಮತ್ತು ವಸತಿನಿಲಯ
5. ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಲಾತೂರು; 100 ವಿದ್ಯಾರ್ಥಿಗಳಿಗೆ–ಉಚಿತ ವಸತಿನಿಲಯ
6. ಜಂಗಮವಾಡಿ ಮಠ, ವಾರಣಾಸಿ
   ಎ. ಜಗದ್ಗುರು ವಿಶ್ವಾರಾಧ್ಯ ಗುರುಕುಲ ವಾರಣಾಸಿ, ಉಚಿತ ಊಟ ಮತ್ತು ವಸತಿನಿಲಯ–ಹೆಚ್ಚಿನ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗಾಗಿ. ಈಗ ಇಲ್ಲಿ 50 ಜನ ವಿದ್ಯಾರ್ಥಿಗಳಿದ್ದಾರೆ.
   ಬಿ. ಸಂಸ್ಕೃತ ವೈದಿಕ ಪಾಠಶಾಲೆ ಪೆಹವಾ, ಕುರುಕ್ಷೇತ್ರ, ಹರಿಯಾಣ ರಾಜ್ಯ.

ಹೀಗೆ ದೇಶದ ವಿವಿಧ ರಾಜ್ಯಗಳಲ್ಲಿ ಶಾಲೆಗಳನ್ನು, ಉಚಿತ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ಆ ಊರಿನ ಪ್ರಮುಖರನ್ನು ಕೆಲವು ನಿಷ್ಠಾವಂತರನ್ನು ಸೇರಿಸಿ ಟ್ರಸ್ಟ್ ಮಾಡಿ ಅಲ್ಲಿ ಗುರುಕಾಣಿಕೆಯಾಗಿ ಬಂದ ಕಾಣಿಕೆಯೆಲ್ಲವನ್ನು ಅಲ್ಲಿನ ಬ್ಯಾಂಕ್‌ಗಳಲ್ಲಿ ಠೇವಣಿಮಾಡಿ ಅದರಿಂದ ಬರುವ ಬಡ್ಡಿಹಣದಿಂದ ನಡೆಸುವ ವ್ಯವಸ್ಥೆ ಮಾಡುತ್ತಿದ್ದಾರೆ.

19–5–2012

ಸಂಸ್ಕೃತ ಪಾಠಶಾಲೆ ಉದ್ಘಾಟನೆ ಜಗದ್ಗುರುಗಳಿಂದ

ಜಗದ್ಗುರುಗಳು 43 ವರ್ಷಗಳಿಂದ ನಡೆಸಿಕೊಂಡು ಬಂದಿರುವ ಲಿಂ. ಶ್ರೀ ಗುರು ಅಮರೇಶ್ವರ ಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಗುಳೇದಗುಡ್ಡದ ಶ್ರೀ ಅಮರೇಶ್ವರ ಸಂಸ್ಕೃತ ಪಾಠಶಾಲೆಯನ್ನು 19–5–2012ರಲ್ಲಿ ಉದ್ಘಾಟಿಸಿದರು. ಆಗ ತಮ್ಮ ಆಶೀರ್ವಚನದಲ್ಲಿ ಸಂಸ್ಕೃತ ಎಲ್ಲ ಭಾಷೆಗಳ ಜನನಿ. ಅದನ್ನು ರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಹೇಳಿದರು. ಈ ಹಿಂದೆ ದೇಶದೆಲ್ಲೆಡೆ ಸಂಸ್ಕೃತವೇ ಆಡುಭಾಷೆಯಾಗಿತ್ತು. ವೇದ ಆಗಮ ಉಪನಿಷತ್‌ಗಳಲ್ಲದೇ ರಾಮಾಯಣ, ಮಹಾಭಾರತ, ಭಾರತೀಯ ತತ್ತ್ವ ಸಿದ್ಧಾಂತಗಳು, ಯೋಗ ಹಾಗೂ ಆಯುರ್ವೇದ ಗ್ರಂಥಗಳೆಲ್ಲಾ ಸಂಸ್ಕೃತದಲ್ಲಿಯೇ ಇವೆ.

ಈ ಎಲ್ಲಾ ಗ್ರಂಥಗಳು ಮನುಷ್ಯನ ಲೌಕಿಕ ಬದುಕಿಗೆ ಸಂಬಂಧಿಸಿದ ವಿಚಾರಗಳು ಮತ್ತು ಆಧ್ಯಾತ್ಮಿಕ ಬದುಕಿನ ಸಾಧನೆಗಳನ್ನು ಪ್ರತಿಪಾದಿಸಿವೆ. ಭಾರತೀಯ ಸಂಸ್ಕೃತಿಯಲ್ಲಿ ಭೋಗ–ವಿಲಾಸಗಳಿಗಿಂತ, ತ್ಯಾಗ–ತಪಸ್ಸುಗಳಿಗೆ ಆದ್ಯತೆ ಕೊಡಲಾಗಿದೆ. ಭಾರತೀಯರು ಇಂದು ಸಂಸ್ಕೃತ ಹಾಗೂ ಸಂಸ್ಕೃತಿಯನ್ನು ಮರೆತು ಪಾಶ್ಚಾತ್ಯ ಭೋಗವಿಲಾಸದ ಕಡೆಗೆ ಆಸಕ್ತಿ ಬೆಳೆಸಿಕೊಂಡು ದೈಹಿಕ ಹಾಗೂ ಮಾನಸಿಕ ಆರೋಗ್ಯ ಹಾಳುಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ರಾಷ್ಟ್ರ ನಿರ್ಮಾಣಕ್ಕೆ ವಿದ್ಯಾರ್ಥಿಗಳು ಸಹಕರಿಸಲಿ
ನೆಟ್‌ಲೋಕ ಮೆಹಬೂಬನಗರ,
16–6–2011, ಬಾಗಲಕೋಟೆ

ಅನ್ನ ಕೊಡುವ ರೈತರ ಮಕ್ಕಳಲ್ಲಿ ಅಕ್ಷರದ ಬೆಳಕು ಮೂಡಲಿ
ಪ್ರಜಾವಾಣಿ, 27–3–2011



ಶಹಾಪುರ ತಾಲ್ಲೂಕಿನ ಮುಡಬೂಳ ಗ್ರಾಮದಲ್ಲಿ ಶುಕ್ರವಾರ ಕಡಕೋಳ ಶಾಖಾಮಠದ 17ನೇ ಜಾತ್ರಾ ಮಹೋತ್ಸವದ ಅಡ್ಡಪಲ್ಲಕ್ಕಿ ಉತ್ಸವದ ಸಾನ್ನಿಧ್ಯ ವಹಿಸಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ಮಾತನಾಡಿದರು.

ನೂತನವಾಗಿ ಆರಂಭಗೊಂಡ ಸಂಸ್ಕೃತ ಪಾಠಶಾಲೆಗೆ ಕಾಶೀಪೀಠದಿಂದ ಒಂದು ಲಕ್ಷ ರೂ. ಸ್ಥಾಯೀ ನಿಧಿಯನ್ನು ಜಗದ್ಗುರುಗಳು ಸಮರ್ಪಿಸಿದರು.

ಬಾಲ್ಯದಲ್ಲಿ ಓದಿದ ವಾರದ ಸಂಸ್ಕೃತ ಪಾಠಶಾಲೆಯ ಸವಿನೆನಪು–ಜಗದ್ಗುರುಗಳಿಂದ

ವಾರದ ಮಲ್ಲಪ್ಪನವರ ಸೇವೆ ಅಪಾರ : ಕಾಶೀ ಶ್ರೀ



ಸೊಲ್ಲಾಪುರದ ಶ್ರೀ ಮದ್ವೀರಶೈವ ವಾರದ ಸಂಸ್ಕೃತ ಪಾಠಶಾಲೆಯಲ್ಲಿ ಹಮ್ಮಿಕೊಂಡಿದ್ದ ಸಂಸ್ಕೃತ ವಿದ್ವಾಂಸರಾದ ಪಂ. ಗುಲಾಮ ದಸ್ತಗೀರ ಮತ್ತು ಡಾ. ಮುರಲೀಧರ ನಾಯಕ ಸನ್ಮಾನ ಸಮಾರಂಭದಲ್ಲಿ ಕಾಶೀಶ್ರೀಗಳು ಆಶೀರ್ವಚನ ನೀಡಿದರು.

__ಸೊಲ್ಲಾಪುರ :__ ಸಂಸ್ಕೃತ ಭಾಷೆ ಹಾಗೂ ಭಾರತೀಯ ಸಂಸ್ಕೃತಿಯ ಉತ್ಥಾನದಲ್ಲಿ ಸೊಲ್ಲಾಪುರದ ಪುಣ್ಯಶ್ಲೋಕ ವಾರದ ಮಲ್ಲಪ್ಪನವರ ಸೇವೆ ಅಪಾರ, ಅಮರವಾದುದು ಎಂದು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಇಲ್ಲಿಯ ಶ್ರೀಮದ್ವೀರಶೈವ ವಾರದ ಸಂಸ್ಕೃತ ಪಾಠಶಾಲೆಯಲ್ಲಿ ಹಮ್ಮಿಕೊಂಡಿದ್ದ ಪಂ. ಗುಲಾಮ ದಸ್ತಗೀರ ಮತ್ತು ಡಾ. ಮುರಲೀಧರ ನಾಯಕ ಉಭಯ ಸಂಸ್ಕೃತ ವಿದ್ವಾಂಸರ ವಿಶೇಷ ಸನ್ಮಾನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಅಂದಿನ ಭಾವೀ ಮಠಾಧಿಪತಿಗಳಿಗೆ, ಶಾಸ್ತ್ರಿಗಳಿಗೆ ಸಂಸ್ಕೃತ ಭಾಷೆ ಹಾಗೂ ಶಾಸ್ತ್ರಗಳ ಅಧ್ಯಯನಕ್ಕೆ ಸ್ವತಂತ್ರ ವ್ಯವಸ್ಥೆ ಇಲ್ಲದ ಸಮಯದಲ್ಲಿ 1878ರಲ್ಲಿ ವಾರದ ಮಲ್ಲಪ್ಪನವರು ಶ್ರೀಮದ್ವೀರಶೈವ ಸಂಸ್ಕೃತ ಪಾಠಶಾಲೆಯನ್ನು ಸೊಲ್ಲಾಪುರದಲ್ಲಿ ಸ್ಥಾಪಿಸಿದರು. ಈ ಪಾಠಶಾಲೆಯಲ್ಲಿ ಪಂಚಪೀಠಗಳ ಜಗದ್ಗುರುಗಳು, ನಿರಂಜನ ಪೀಠಾಧಿಪತಿಗಳು, ಶಿವಾಚಾರ್ಯರು, ನಿರಂಜನ ಮೂರ್ತಿಗಳು, ಸಾವಿರಾರು ವೀರಶೈವ ವಿದ್ವಾಂಸರು ಅಭ್ಯಾಸ ಮಾಡಿದ್ದು ಮಲ್ಲಪ್ಪನವರು ಎಲ್ಲರಿಗೂ ಊಟ, ವಸತಿ, ಬಟ್ಟೆ ಮತ್ತು ಪುಸ್ತಕಾದಿಗಳ ಅನುಕೂಲತೆ ಮಾಡಿಕೊಟ್ಟಿದ್ದರು. ಪ್ರತಿಭಾ ಸಂಪನ್ನರನ್ನು ತಮ್ಮ ಖರ್ಚಿನಲ್ಲಿಯೇ ಉನ್ನತ ವ್ಯಾಸಂಗಕ್ಕೆ ಕಾಶಿಗೂ ಕಳಿಸುತ್ತಿದ್ದರು. ಒಂದು ವಿಶ್ವವಿದ್ಯಾಲಯ ಮಾಡಬೇಕಾದ ಕಾರ್ಯವನ್ನು ಅವರೊಬ್ಬರೆ ಅಂದು ಮಾಡಿದ್ದರು ಎಂದರು.

ಪಂ. ಗುಲಾಮ ದಸ್ತಗೀರ ಅವರು ಇಸ್ಲಾಮ್ ಧರ್ಮೀಯರಾಗಿದ್ದರೂ ಬಹು ದೊಡ್ಡ ಸಂಸ್ಕೃತ ವಿದ್ವಾಂಸರಾಗಿದ್ದಾರೆ. ತಮ್ಮ ತಮ್ಮ ಜಾತಿ ಹಾಗೂ ಭಾಷೆಗಳ ಬಗ್ಗೆ ಕಠೋರ ಭಾವನೆಗಳನ್ನು ಬೆಳೆಸಿಕೊಳ್ಳುತ್ತಿರುವ ಇಂದಿನ ಕಾಲದಲ್ಲಿ ಗುಲಾಮ ದಸ್ತಗೀರ ಅವರು ಆದರ್ಶ ವ್ಯಕ್ತಿಯಾಗಿದ್ದಾರೆ. ಇವರು ಬಾಲ್ಯದಲ್ಲಿಯೇ ವಾರದ ಮಲ್ಲಪ್ಪನವರ ಸಂಸ್ಕೃತ ಪಾಠಶಾಲೆಯಲ್ಲಿಯೇ ಸಂಸ್ಕೃತ ಅಧ್ಯಯನ ಮಾಡಿರುವುದು ವಿಶೇಷವಾಗಿದೆ ಎಂದರು. ತಾವೂ ಕೂಡ ಪ್ರಾಥಮಿಕ ಸಂಸ್ಕೃತ ಅಧ್ಯಯನವನ್ನು ವಾರದ ಸಂಸ್ಕೃತ ಪಾಠಶಾಲೆಯಲ್ಲಿ ಮಾಡಿದ್ದು. ಈ ಪಾಠಶಾಲೆಯ ಅಭಿವೃದ್ಧಿಗೆ ಕಾಶೀಪೀಠವು ನೆರವು ನೀಡುವುದಾಗಿ ಭರವಸೆ ನೀಡಿದರು.

ಸಂಸ್ಕೃತಿ, ಸಂಸ್ಕೃತಕ್ಕೆ ವಾರದ ಮಲ್ಲಪ್ಪನವರ ಸೇವೆ ಅಪಾರ

ಪುಣ್ಯಶ್ಲೋಕ ವಾರದ ಮಲ್ಲಪ್ಪನವರು "ವೀರಶೈವ ಲಿಂಗೀ ಬ್ರಾಹ್ಮಣ ಗ್ರಂಥಮಾಲೆ"ಯನ್ನು ಸ್ಥಾಪಿಸಿ ಸಿದ್ಧಾಂತ ಶಿಖಾಮಣಿ ಹಾಗೂ ನೂರಾರು ಪ್ರಾಚೀನ ಸಂಸ್ಕೃತ ಗ್ರಂಥಗಳನ್ನು ಮರಾಠಿಗೆ ಅನುವಾದದೊಂದಿಗೆ ಪ್ರಕಟಿಸಿದರು. ಅತ್ಯಂತ ಕಡಿಮೆ ಬೆಲೆಗೆ ವಿತರಿಸಿ ಸಾಹಿತ್ಯಸೇವೆ ಮಾಡಿದ್ದಾರೆ. ಒಂದು ವಿಶ್ವವಿದ್ಯಾಲಯ ಮಾಡಬೇಕಾಗಿದ್ದ ಕಾರ್ಯವನ್ನು ಅವರೋರ್ವರೇ ಮಾಡಿದರು. ಅಂತೆಯೇ ಅವರಿಗೆ "ಪುಣ್ಯಶ್ಲೋಕ" ಎಂಬ ಬಿರುದು ದೊರೆಯಿತೆಂದು ಅವರು ಹೇಳಿದರು.

ಸದ್ಗತಿ ಪಡೆಯಲು ಶಾಸ್ತ್ರಜ್ಞರ ಮಾರ್ಗ ಅನುಸರಿಸಿ




ವಾರಣಾಸಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಖಿಲ ಭಾರತೀಯ ಶಾಸ್ತ್ರಾರ್ಥ ಪರಿಷತ್‌ನ್ನು ಡಾ. ಚಂದ್ರಶೇಖರ ಶಿವಾಚಾರ್ಯರು ಉದ್ಘಾಟಿಸಿದರು.

ಭಾರತೀಯ ತತ್ವಶಾಸ್ತ್ರಗಳು ಮಾನವ ಜೀವನದ ಮಾರ್ಗದರ್ಶಿಗಳಾಗಿವೆ ಎಂದು ಕಾಶೀ ಜಗದ್ಗುರು ಡಾ. ಚಂದಶೇಖರ ಶಿವಾಚಾರ್ಯರು ಹೇಳಿದರು. ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಸಂಸ್ಕೃತ ವಿದ್ಯಾಧರ್ಮ ವಿಜ್ಞಾನ ಸಭಾಭವನದಲ್ಲಿ ಅಖಿಲ ಭಾರತೀಯ ಶಾಸ್ತ್ರಾರ್ಥ ಪರಿಷತ್ ಉದ್ಘಾಟಿಸಿ ಈ ಲೋಕದಲ್ಲಿ ಸರಿಯಾಗಿ ಬದುಕಿ ಸದ್ಗತಿ ಪಡೆಯಬೇಕಾದರೆ ಎಲ್ಲರೂ ಶಾಸ್ತ್ರಗಳ ಅಧ್ಯಯನ ಮಾಡಬೇಕು, ಇಲ್ಲವೇ ಶಾಸ್ತ್ರಜ್ಞರಿಂದ ಮಾರ್ಗದರ್ಶನ ಪಡೆಯಬೇಕು ಎಂದರು.

ಪ್ರೊ. ನರೇಂದ್ರನಾಥ ಪಾಂಡೆಯ, ಕಮಲೇಶದತ್ತ ತ್ರಿಪಾಠಿ, ರಾಮಚಂದ್ರ ಪಾಂಡೆಯ, ರಮೇಶಚಂದ್ರ ಪಂಡಾ ಮತ್ತಿತರರು ಅನುಭವ ಹಂಚಿಕೊಂಡರು. ಪತಂಜಲಿ ಮಿಶ್ರಾ ಮತ್ತು ಡಾ. ಶಂಕರ ಮಿಶ್ರಾ ವೈದಿಕ ಹಾಗೂ ಪೌರಾಣಿಕ ಮಂಗಳಾಚರಣೆ ಮಾಡಿದರು. ರಾಜಾರಾಮ ಶುಕ್ಲ ನಿರೂಪಿಸಿದರು. ಮೂರು ದಿನಗಳವರೆಗೆ ನಡೆಯುವ ಗೋಷ್ಠಿಗಳಿಗೆ ಕಾಶೀ ಕ್ಷೇತ್ರ ಮತ್ತು ಕರ್ನಾಟಕ, ಆಂಧ್ರ, ತಮಿಳುನಾಡು, ಬಿಹಾರ ಗಳಿಂದ ನೂರಾರು ಮಂದಿ ವಿದ್ವಾಂಸರು ಆಗಮಿಸಿದ್ದಾರೆ.

ಸೊಲ್ಲಾಪುರ ವಿ.ವಿ.ಗೆ ಶ್ರೀ ಶ್ರೀ ಸಿದ್ಧರಾಮೇಶ್ವರರ ನಾಮಕರಣಕ್ಕೆ ಕಾಶೀ ಶ್ರೀಗಳ ಸಲಹೆ

ಉದಯವಾಣಿ, **31-5-2013**



ಸೊಲ್ಲಾಪುರ : ಇಲ್ಲಿನ ವಿಶ್ವವಿದ್ಯಾಲಯಕ್ಕೆ ಶ್ರೀ ಸಿದ್ಧರಾಮೇಶ್ವರ ಎಂದು ಹೆಸರಿಡಲು ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಸಲಹೆ ನೀಡಿದರು. ಮಾಜಿ ಶಾಸಕ ಮಹಾದೇವ ಪಾಟೀಲ ಅವರ ಅಕ್ಕಲಕೋಟದ ನಿವಾಸದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸ್ವಾಮೀಜಿ ಆಗಸ್ಟ್ 2004ರಲ್ಲಿ ಸೊಲ್ಲಾಪುರ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಅದೇ ಸಮಯದಲ್ಲೇ ಶ್ರೀ ಸಿದ್ಧರಾಮೇಶ್ವರರ ಹೆಸರಿಡುವಂತೆ ಜಿಲ್ಲಾಧಿಕಾರಿಗಳಿಗೆ ಕಾಶೀಪೀಠದ ವತಿಯಿಂದ ಮನವಿ ಮಾಡಲಾಗಿತ್ತು. ಅಲ್ಲದೇ ಕಾಶೀಪೀಠದ ನೇತೃತ್ವದಲ್ಲಿ ಡಿಸೆಂಬರ್ 2004ರಲ್ಲಿ ಲಾತೂರ ನಗರದಲ್ಲಿ ನಡೆದ ಅಖಿಲ ಭಾರತ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿಯೂ ಸೊಲ್ಲಾಪುರ ವಿ.ವಿ.ಗೆ ಶ್ರೀ ಸಿದ್ಧರಾಮೇಶ್ವರರ ಹೆಸರಿಡಲು ಸಲಹೆ ನೀಡಲಾಗಿತ್ತು ಎಂದು ತಿಳಿಸಿದರು. ಶರಣರ ಸಂಗದಿಂದ ಶಿವಯೋಗಿ ಎನಿಸಿದ ಸಿದ್ಧರಾಮನೇ ಸೊಲ್ಲಾಪುರಕ್ಷೇತ್ರದ ದಿವ್ಯಶಕ್ತಿ. ಸಿದ್ಧರಾಮೇಶ್ವರರು ಕೆರೆ, ಬಾವಿ, ಹೂದೋಟ, ಚೌಕ ಛತ್ರಗಳನ್ನು ಮಾಡುವ ಮೂಲಕ ಜೀವಂಗಳ ಮೇಲೆ ಕೃಪೆ ತೋರಿದವರು. ಸಿದ್ಧರಾಮನು ಸರ್ವರಿಗೂ ಸಮಾನ. ಯಾವುದೇ ಜಾತಿಭೇದ ಮಾಡದೆ ಸೊಲ್ಲಾಪುರ ವಿಶ್ವವಿದ್ಯಾಲಯಕ್ಕೆ ಸಿದ್ಧರಾಮೇಶ್ವರನ ಹೆಸರಿಡಲು ಎಲ್ಲರೂ ಮುಂದಾಗಬೇಕು ಎಂದು ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಸಲಹೆ ನೀಡಿದರು.

ಸಂಸ್ಕೃತ ಸಂವರ್ಧನೆಗೆ ಕಾಶಿ ಕೊಡುಗೆ ಅಪಾರ ಉದಯವಾಣಿ 20-3-2013



ಸೊಲ್ಲಾಪುರ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ವೆಂಕಟೇಶ ಮತ್ತು ಸಂಸ್ಕೃತ ನಿರ್ದೇಶನಾಲಯದ ನಿರ್ದೇಶಕ ಡಾ. ಶ್ರೀನಿವಾಸ ವರಖೇಡ ಅವರನ್ನು ಕಾಶೀ ಜಗದ್ಗುರುಗಳು ಸನ್ಮಾನಿಸಿದರು.

ಸೊಲ್ಲಾಪುರ : ಸಂಸ್ಕೃತವು ವಿಶ್ವದ ಅತ್ಯಂತ ಪ್ರಾಚೀನವಾದ ಭಾಷೆಯಾಗಿದ್ದು ಅದರ ಸಂವರ್ಧನೆಯಲ್ಲಿ ಕಾಶೀ ಜ್ಞಾನಪೀಠದ ಕೊಡುಗೆ ಅಪಾರವಾದದ್ದು ಎಂದು ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ವೆಂಕಟೇಶ ಮತ್ತು ಸಂಸ್ಕೃತ ನಿರ್ದೇಶನಾಲಯದ ನಿರ್ದೇಶಕ ಡಾ॥ ಶ್ರೀನಿವಾಸ ವರಖೇಡ ಅವರು, ಜಂಗಮವಾಡಿ ಮಠಕ್ಕೆ ಭೇಟಿನೀಡಿ ಜಗದ್ಗುರುಗಳ ಆಶೀರ್ವಾದ ಪಡೆದು ಸಮಾಲೋಚನೆ ನಡೆಸಿದರು. 'ಕಾಶ್ಯತೆ ಪ್ರಕಾಶ್ಯತೆ ಇತಿ ಕಾಶಿ' ಅಂದರೆ ಜ್ಞಾನ ಪ್ರಕಾಶವನ್ನು ಅನುಗ್ರಹಿಸುವ ಜಗತ್ತಿನ ಪ್ರಾಚೀನವಾದ ಕಾಶೀನಗರ ಎಂದರ್ಥ. ಇಲ್ಲಿ ಸಂಸ್ಕೃತ ಮೂಲದ ವೇದ-ಆಗಮಗಳೇ ಮೊದಲಾದ ಭಾರತೀಯ ಧರ್ಮ-ದರ್ಶನಗಳನ್ನು ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಹಾಗೂ ಅದಕ್ಕೆ ಸಂಬಂಧಿಸಿದ ನೂರಾರು ಸಂಸ್ಕೃತ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಮಾಧ್ಯಮದಿಂದಲೇ ಓದಿಸುತ್ತಾರೆ ಎಂದು ಕಾಶೀ ಶ್ರೀಗಳು ವಿವರಿಸಿದರು.

ಸಂಸ್ಕೃತ ಭಾಷೆ ಹಾಗೂ ಶಾಸ್ತ್ರಗಳ ಅಧ್ಯಯನಕ್ಕೆ ದಕ್ಷಿಣಭಾರತದಿಂದ ಬರುವ ಎಲ್ಲ ಸಂಪ್ರದಾಯದ ವಿದ್ಯಾರ್ಥಿಗಳಿಗೆ ಅನ್ನ-ಆಶ್ರಯ ನೀಡುವ ಮೂಲಕ ಸಂಸ್ಕೃತದ ಅಭಿವೃದ್ಧಿಗೆ ಅಪೂರ್ವ ಕೊಡುಗೆ ಕೊಟ್ಟ ಸ್ಥಾನವೇ ಕಾಶೀ ಜ್ಞಾನಸಿಂಹಾಸನ ಮಹಾಪೀಠದ್ದು ಎಂದು ಕಾಶೀ ಜಗದ್ಗುರು ಹೇಳಿದರು. ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ಪಂಚಪೀಠಗಳ ಜಗದ್ಗುರುಗಳು, ಶಾಖಾಮಠದ ಶಿವಾಚಾರ್ಯರು ಅಲ್ಲದೇ ವಿರಕ್ತ ಪರಂಪರೆಯ ಗರಗದ ಮಡಿವಾಳ ಶಿವಯೋಗಿಗಳು, ಚಿತ್ರದುರ್ಗದ ಜಯದೇವ ಸ್ವಾಮೀಜಿ, ಹುಬ್ಬಳ್ಳಿ ಮೂರು ಸಾವಿರ ಮಠದ ವೈಯಾಕರಣಿ ಗಂಗಾಧರ ಸ್ವಾಮೀಜಿ, ಹಾವೇರಿ ಹುಕ್ಕೇರಿ ಮಠದ ಶಿವಬಸವ ಸ್ವಾಮೀಜಿ, ಆನಂದಪುರ ಮುರುಘಾಮಠದ ಶ್ರೀಲಿಂಗ ಸ್ವಾಮೀಜಿ, ಕೋಟಿಕಲ್ಲ ಹುಚ್ಚೇಶ್ವರ ಸ್ವಾಮೀಜಿ, ಕೊಪ್ಪಳ ಗವಿಮಠದ ಮರಿಶಾಂತವೀರ ಸ್ವಾಮೀಜಿ, ಮೈಸೂರ ಗವಿಮಠದ ಗೌರೀಶಂಕರ ಸ್ವಾಮೀಜಿ, ಶಿವಾನಂದ ಸಂಪ್ರದಾಯದ ಸದಾಶಿವ ಸ್ವಾಮೀಜಿ, ಅಂಕಲಗಿ ಅಡವಿಸಿದ್ಧೇಶ್ವರ ಮಠದ ಸಿದ್ಧರಾಮ ಸ್ವಾಮೀಜಿ, ನಿಡಸೋಸಿ ಸಿದ್ಧಸಂಸ್ಥಾನ ಮಠದ ಚತುರ್ಥ ಶಿವಲಿಂಗ ಸ್ವಾಮೀಜಿ, ಕಿತ್ತೂರ ಕಲ್ಮಠದ ಗುರುಸಿದ್ಧ ಸ್ವಾಮೀಜಿ ಸೇರಿದಂತೆ ಸಾವಿರಾರು ಶ್ರೀಗಳಿಗೆ, ಪಂಡಿತರಿಗೆ, ಕವಿ-ಕಲಾವಿದರಿಗೆ ಕಾಶೀಪೀಠ ಆಶ್ರಯ ಕೊಟ್ಟಿದ್ದನ್ನು ಜಗದ್ಗುರುಗಳು ತಿಳಿಸಿದರು, ಶ್ರೀಪೀಠದ ಶೈವಭಾರತಿ ಪ್ರತಿಷ್ಠಾನದಿಂದ ಪ್ರಕಾಶಗೊಂಡ ಗ್ರಂಥಗಳನ್ನು ಕುಲಪತಿ ಪ್ರೊ. ಮಲ್ಲೇಪುರಂ ವೆಂಕಟೇಶ ಮತ್ತು ಸಂಸ್ಕೃತ ನಿರ್ದೇಶನಾಲಯದ ನಿರ್ದೇಶಕ ಡಾ॥ ಶ್ರೀನಿವಾಸ ವರಖೇಡ ವೀಕ್ಷಿಸಿದರು.

ಜಗದ್ಗುರು ವಿಶ್ವಾರಾಧ್ಯ ವೀರಶೈವ ವಿದ್ಯಾಪೀಠ ಸ್ಥಾಪನೆ–ಜಗದ್ಗುರುಗಳಿಂದ

ವೀರಶೈವ ಧರ್ಮ ಸಿದ್ಧಾಂತ ಪರೀಕ್ಷಾ ಪದ್ಧತಿ ಕರ್ನಾಟಕದಲ್ಲಿ ಆರಂಭ

ನಾಗರಿಕ 2–7–1997

ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಜನರಲ್ಲಿ ಧಾರ್ಮಿಕ ಜಾಗೃತಿ ಮೂಡಿಸುವ ಸಲುವಾಗಿ 1997ರಲ್ಲಿ ಕಾಶೀ ಜಂಗಮವಾಡಿ ಮಠದಲ್ಲಿ ಜಗದ್ಗುರು ವಿಶ್ವಾರಾಧ್ಯ ವೀರಶೈವ ವಿದ್ಯಾಪೀಠವನ್ನು ಸಂಸ್ಥಾಪಿಸಿ ಅದರ ಮುಖಾಂತರ ವೀರಶೈವ ಧರ್ಮದ ಪರೀಕ್ಷೆಗಳನ್ನು ಈಗಾಗಲೇ ಮಹಾರಾಷ್ಟ್ರ ರಾಜ್ಯದಲ್ಲಿ ಆರಂಭಿಸಿ ಕಳೆದ ಏಪ್ರಿಲ್‌ನಲ್ಲಿ ಪರೀಕ್ಷೆಗಳು ನಡೆದವು. ಈಗ ಪ್ರಬೋಧ ಪರೀಕ್ಷೆ ನಡೆದಿದೆ. ಸೊಲ್ಲಾಪುರ, ಬಾರ್ಶಿ, ಪುಣೆ, ನಾಗಪುರ, ಕೊಲ್ಲಾಪುರ, ಮುಂಬಯಿ ಮುಂತಾದ ಪ್ರಮುಖ ಸ್ಥಾನಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ತೆರೆದಿದ್ದಾರೆ.

ಈ ರೀತಿ ವೀರಶೈವ ವಿದ್ಯಾಪೀಠ ಸ್ಥಾಪಿಸಿರುವುದು ಪೀಠ ಪರಂಪರೆಯಲ್ಲೇ ವೈಶಿಷ್ಟ್ಯಪೂರ್ಣವಾದದು. ಈ ಪೀಠದ ಮುಖಾಂತರ ವೀರಶೈವ ಸಿದ್ಧಾಂತ ಪ್ರಬೋಧ, ವೀರಶೈವ ಸಿದ್ಧಾಂತ ಪ್ರವೀಣ ಮತ್ತು ವೀರಶೈವ ಸಿದ್ಧಾಂತ ಪಂಡಿತ ಎಂಬ ಮೂರು ಪರೀಕ್ಷೆಗಳನ್ನು ತೆಗೆದುಕೊಳ್ಳಲಾಗುವುದು ಎಂದು ಕಾಶೀ ಜಗದ್ಗುರುಗಳು ಗುಳೇದಗುಡ್ಡದಲ್ಲಿನ ಅಮರೇಶ್ವರ ಮಠದಲ್ಲಿ ಸುದ್ದಿಗಾರರೊಂದಿಗೆ ತಿಳಿಸಿದರು.

ಈ ಭಾರಿ ಪುನಃ ಡಿಸೆಂಬರ್ ತಿಂಗಳಲ್ಲಿ ಮಹಾರಾಷ್ಟ್ರದಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು. ಈ ಬಾರಿ ಸಹಸ್ರಾರು ವಿದ್ಯಾರ್ಥಿಗಳು ಭಾಗಿಯಾಗುವ ನಿರೀಕ್ಷೆಯಿದೆ ಎಂದರು. ಆಗಾಗ ನಡೆಯುವ ಧಾರ್ಮಿಕ ಸಮಾರಂಭದಲ್ಲಿ ಜನರು ಪ್ರವಚನಾದಿಗಳನ್ನು ಕೇಳಿ ಮರೆತುಬಿಡುತ್ತಾರೆ. ಆ ಸಲುವಾಗಿ ವೀರಶೈವ ಧರ್ಮ, ಇತಿಹಾಸ, ತತ್ತ್ವಜ್ಞಾನ ಮತ್ತು ಧರ್ಮಾಚರಣೆಗಳ ಪರಿಕಲ್ಪನೆ ಎಲ್ಲರಲ್ಲೂ ಮೂಡಿಬರಬೇಕು ಮತ್ತದು ಸ್ಥಾಯಿಯಾಗಿ ಉಳಿಯಬೇಕೆಂಬ ಉದ್ದೇಶದಿಂದ ಈ ಪರೀಕ್ಷಾ ಪದ್ಧತಿಯನ್ನು ಪ್ರಾರಂಭಿಸಲಾಗಿದೆ. ಆದಷ್ಟು ಬೇಗನೆ ಉಳಿದ ರಾಜ್ಯಗಳಿಗೆ ಆಯಾ ಪ್ರಾಂತೀಯ ಭಾಷೆಗಳಲ್ಲಿ ಪಠ್ಯಪುಸ್ತಕ ರಚಿಸಿ ಪರೀಕ್ಷೆಗಳನ್ನು ಪ್ರಾರಂಭಿಸಲಾಗುವುದು. ಕರ್ನಾಟಕದಲ್ಲೂ ಪರೀಕ್ಷಾ ಕೇಂದ್ರಗಳನ್ನು ನಡೆಸುವ ಅಪೇಕ್ಷೆಯುಳ್ಳವರು ಕಾಶೀಪೀಠಕ್ಕೆ, ಪತ್ರ ಮುಖೇನ ಸಂಪರ್ಕಿಸಬಹುದೆಂದು ಜಗದ್ಗುರುಗಳು ತಿಳಿಸಿದರು.

ಕರ್ನಾಟಕದಲ್ಲಿ ಇಷ್ಟರಲ್ಲಿಯೇ ಆರಂಭ ವೀರಶೈವ ಧರ್ಮಸಿದ್ಧಾಂತ ಪರೀಕ್ಷಾ ಪದ್ಧತಿ

ಸಂಯುಕ್ತ ಕರ್ನಾಟಕ 4–6–1997

ಪರೀಕ್ಷೆಗಳಿಗೆ ಯಾವುದೇ ವಯೋಮಿತಿ ಇರುವದಿಲ್ಲ. ಸರ್ವರೂ ಕೂಡಬಹುದು. ಕರ್ನಾಟಕದಲ್ಲೂ ಪರೀಕ್ಷಾ ಕೇಂದ್ರಗಳನ್ನು ನಡೆಸುವ ಅಪೇಕ್ಷೆಯುಳ್ಳವರು ಕಾಶೀಪೀಠಕ್ಕೆ ಪತ್ರಮುಖೇನ ಅಥವಾ ಸಮಕ್ಷಮ ಅರಿಕೆ ಮಾಡಿಕೊಳ್ಳಬೇಕು. ಪತ್ರಿಕಾ ಪರಿಷತ್ತಿನಲ್ಲಿ ಕರ್ನಾಟಕದ ಪ್ರಮುಖರು ಗದುಗಿನ ಬಸಣ್ಣ ಮಲ್ಲಾಡದ, ಎಸ್.ವ್ಹಿ. ಕೂಗೂ ಮಾಸ್ತರ, ಬಟದಯ್ಯಾ ಹಿರೇಮಠ ಇವರೂ ಇದ್ದರು. ಈ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಈ ವಿದ್ಯಾಪೀಠದ ಕುಲಪತಿಗಳಾದ ತಮ್ಮ ಹಸ್ತಾಕ್ಷರ ಹಾಗೂ ಶ್ರೀ ಪೀಠದ ಮುದ್ರಾಂಕಿತವಾದ ಪ್ರಮಾಣಪತ್ರವನ್ನು ಕೊಡಲಾಗುವುದು ಎಂದರು.

ಹೀಗೆ ಕಾಶೀ ಜಗದ್ಗುರುಗಳು 1997ರಲ್ಲಿ ಕರ್ನಾಟಕದಲ್ಲಿ ಆರಂಭಿಸಬೇಕೆಂದಿದ್ದ ವೀರಶೈವ ವಿದ್ಯಾಪೀಠಕ್ಕೆ ಮತ್ತೆ ಚಾಲನೆ ದೊರೆತದ್ದು 26–3–2004ರಲ್ಲಿ

ರಾಜ್ಯದಲ್ಲಿ ವೀರಶೈವ ವಿದ್ಯಾಪೀಠ ಸ್ಥಾಪನೆ :

ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವವನ್ನು **26–3–2004**ರಲ್ಲಿ ಕಿತ್ತೂರಿನಲ್ಲಿ ಏರ್ಪಡಿಸಲಾಗಿತ್ತು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ಸಂಗಮೇಶ ಸವದತ್ತಿಮಠ ಅವರು ತಮ್ಮ ಭಾಷಣದಲ್ಲಿ ವೀರಶೈವ ಧರ್ಮ ಛಿದ್ರವಾಗಿ ಹೋಗದಂತೆ ಬಲವಾದ ಕೆಲವು ಕ್ರಮಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುವಂತಾಗಬೇಕು ಎಂದು ಕೆಲವು ಸುಧಾರಣಾ ವಿಚಾರಗಳನ್ನು ಪಂಚಪೀಠಗಳ ಮುಂದೆ ಇಟ್ಟರು. ವೀರಶೈವ ಧರ್ಮವನ್ನು ಸಮರ್ಥವಾಗಿ ಮುನ್ನಡೆಸಲು ಸ್ವಾಯತ್ತ ವೀರಶೈವ ವಿಶ್ವವಿದ್ಯಾನಿಲಯದ ಸ್ಥಾಪನೆಯಾಗಬೇಕು ಎಂದು ಹೇಳಿದರು.

2004ರಲ್ಲಿ ವೀರಶೈವ ವಿದ್ಯಾಪೀಠ ಸ್ಥಾಪಿಸಬೇಕೆಂಬ ಆಶಯ ಎಲ್ಲಾ ಜಗದ್ಗುರುಗಳ ಮನದಲ್ಲೂ ಆಳವಾಗಿ ನೆಲೆಸಿತ್ತು.

ವೀರಶೈವ ವಿಶ್ವವಿದ್ಯಾನಿಲಯ ಸ್ಥಾಪನೆ ಅಗತ್ಯ : ಡಾ. ಸಂಗಮೇಶ ಸವದತ್ತಿಮಠ



ಕಿತ್ತೂರಲ್ಲಿ ಯುಗಮಾನೋತ್ಸವವನ್ನು ಕೆಳದಿ ರಾಜಗುರು ಡಾ. ಶಿವಾಚಾರ್ಯ ಸ್ವಾಮಿಗಳು ದೀಪ ಬೆಳಗಿಸಿ ಉದ್ಘಾಟಿಸಿದರು. ಪಂಚಪೀಠಾಧೀಶರಾದ ಶ್ರೀ 1008 ರಂಭಾಪುರಿ ಜಗದ್ಗುರುಗಳು, ಉಜ್ಜಯಿನಿ, ಕೇದಾರ, ಶ್ರೀಶೈಲ, ಕಾಶೀ ಜಗದ್ಗುರುಗಳು, ಮುರಗೋಡ ಶ್ರೀಗಳು, ಬೈಲಹೊಂಗಲದ ಶ್ರೀಗಳು, ಹುಕ್ಕೇರಿ ಶ್ರೀಗಳು ಹಾಗೂ ಡಾ. ಸಂಗಮೇಶ ಸವದತ್ತಿಮಠ ಉಪಸ್ಥಿತರಿದ್ದರು.

ಇದು ಒಂದು ಸ್ವರೂಪ ತಾಳಿದ್ದು 7–4–2006ರಲ್ಲಿ, ಕಾಶೀ ಜಗದ್ಗುರುಗಳು ಹುಬ್ಬಳ್ಳಿಯಲ್ಲಿ ಪತ್ರಿಕಾಗೋಷ್ಠಿ ಕರೆದು–ಹೊನ್ನಾಳಿಯಲ್ಲಿ ಮಾನವಧರ್ಮ ಸಂಸ್ಥೆ ಅಧೀನದಲ್ಲಿ ವೀರಶೈವ ವಿದ್ಯಾಪೀಠವೆಂಬ ಧಾರ್ಮಿಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿ ಇನ್ನಷ್ಟು ವಿವರಗಳನ್ನು ಹೇಳಿದರು. ವಿವರಗಳೆಲ್ಲಾ ಅಂದಿನ ದಿನಪತ್ರಿಕೆಗಳಾದ ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ವಿಜಯ ಕರ್ನಾಟಕ, ಸಂಜೆದರ್ಪಣಗಳಲ್ಲಿ ಪ್ರಕಟಗೊಂಡು ಇಡೀ ಕರ್ನಾಟಕಕ್ಕೆ ವಿಷಯ ತಿಳಿಯುವಂತಾಯಿತು.

ಧಾರ್ಮಿಕ ವಿ.ವಿ ಕಾರ್ಯಕ್ಕೆ ಚಾಲನೆ : ಕಾಶೀ ಜಗದ್ಗುರು
ಪ್ರಜಾವಾಣಿ ವಾರ್ತೆ

ಈ ಹಿಂದೆ ಹೊನ್ನಾಳಿಯಲ್ಲಿ ನಡೆದ ಯುಗಮಾನೋತ್ಸವದಲ್ಲಿ ತೆಗೆದುಕೊಂಡ ನಿರ್ಣಯಗಳ ಪ್ರಕಾರ ವಿಶ್ವವಿದ್ಯಾಲಯ ಸ್ಥಾಪನೆಗೆ ಚಾಲನೆ ನೀಡಿರುವುದಾಗಿ ಕಾಶೀ ಜಗದ್ಗುರುಗಳು ತಿಳಿಸುತ್ತಾ ಮುಂದೆ ಅದರ ರೂಪುರೇಷೆಗಳನ್ನು ವಿವರಿಸಿದರು. ಧರ್ಮ ಸಂಸ್ಕೃತಿಗಳ ಸಂಘರ್ಷದ ಕಾಲದಲ್ಲಿ ನಮ್ಮ ಧರ್ಮ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದರ ಜೊತೆಗೆ ಸ್ವಧರ್ಮನಿಷ್ಠೆ ಹಾಗೂ ಪರಧರ್ಮ ಸಹಿಷ್ಣುತೆಯೂ ಆವಶ್ಯಕವಾಗಿದೆ. ಈ ಸದುದ್ದೇಶದಿಂದಲೇ ಧಾರ್ಮಿಕ ವಿಶ್ವವಿದ್ಯಾಲಯ ಆರಂಭಿಸಲಾಗಿದೆ.

ಇದಕ್ಕೆ ಸಂಬಂಧಿಸಿದಂತೆ ಇನ್ನು 2–3 ತಿಂಗಳಲ್ಲಿ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಲಾಗುವುದು. ಶಿವಾಗಮ, ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯಗಳನ್ನು ಆಧರಿಸಿ ಪಠ್ಯಪುಸ್ತಕ ರಚಿಸುವ ಸಲುವಾಗಿ ವಿದ್ವಾಂಸರ ಸಮಿತಿಯೊಂದನ್ನು ರೂಪಿಸಲಾಗುವುದೆಂದು ಹೇಳಿದರು. ಈ ವಿಶ್ವವಿದ್ಯಾಲಯಕ್ಕೆ ವೀರಶೈವ ಪಂಚಪೀಠಾಧೀಶ್ವರರೇ ಐದು ವರ್ಷಕ್ಕೊಮ್ಮೆ ಕ್ರಮವಾಗಿ ಕುಲಪತಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. 2006ರಿಂದ 2011ರವರೆಗೆ ತಾವೇ ಪ್ರಥಮ ಕುಲಪತಿಗಳಾಗಿ ಕಾರ್ಯಭಾರ ವಹಿಸಿಕೊಂಡಿರುವುದನ್ನು ತಿಳಿಸಿದರು.

ಹೊನ್ನಾಳಿಯ ಹಿರೇಕಲ್ಮಠದಲ್ಲಿ ವಿದ್ಯಾಪೀಠದ ಕಚೇರಿಯನ್ನು ಸ್ಥಾಪಿಸಿ ಈಗ ಅಲ್ಲಿನ ಷ॥ಬ್ರ॥ ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳನ್ನು ಕುಲಸಚಿವರನ್ನಾಗಿ ಮಾಡಲಾಗಿದೆ. ಕರ್ನಾಟಕದ ಪ್ರತಿ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಈ ವಿಶ್ವವಿದ್ಯಾಲಯಗಳನ್ನು ತೆರೆಯಲಾಗುವುದು. ಆಯಾ ಜಿಲ್ಲೆಗಳು ವೀರಶೈವ ಮಠಾಧಿಪತಿಗಳನ್ನು ಸಹಾಯಕ ಕುಲಸಚಿವರಾಗಿ ಹಾಗೂ ಆಯಾ ಭಾಗದ ಶಾಲಾ ಶಿಕ್ಷಕರನ್ನು ಪರೀಕ್ಷಾ ಕೇಂದ್ರದ ಸಂಚಾಲಕರನ್ನಾಗಿ ಮಾಡಿ, ವೀರಶೈವ ಸಂಘ–ಸಂಸ್ಥೆಗಳ ಮತ್ತು ಶಿಕ್ಷಣ ಸಂಸ್ಥೆಗಳ ಸಹಯೋಗದಿಂದ ಪರೀಕ್ಷೆಗಳನ್ನು ನಡೆಸಲಾಗುವುದೆಂದು ಹೇಳಿ ಇದರಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ವ್ಯವಸ್ಥೆ ಮಾಡಲಾಗುವುದು. ಪರೀಕ್ಷೆ ತೆಗೆದುಕೊಳ್ಳಲು ವಯಸ್ಸಿನ ನಿರ್ಬಂಧವಿಲ್ಲ. ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ವೀರಶೈವ ಪ್ರಭೇದ, ವೀರಶೈವ ಪ್ರವೀಣ ಹಾಗೂ ವೀರಶೈವ ರತ್ನ ಪ್ರಮಾಣ ಪತ್ರ ನೀಡಿ, ರಾಜ್ಯಮಟ್ಟದಲ್ಲಿ ಮೊದಲ ಮೂರು ರ್‍ಯಾಂಕ್ ಗಳಿಸಿದವರಿಗೆ ವಿಶೇಷ ಬಹುಮಾನ ನೀಡಲಾಗುವುದೆಂದು ವೀರಶೈವ ವಿಶ್ವವಿದ್ಯಾಲಯದ ಸಂಪೂರ್ಣ ಆಡಳಿತ ವೈಖರಿಯನ್ನು ಪತ್ರಕರ್ತರಿಗೆ ಕಾಶೀ ಜಗದ್ಗುರುಗಳು ವಿವರಿಸಿದ್ದು ಆಸಕ್ತರಿಗೆಲ್ಲಾ ತಿಳಿಯುವಂತೆ ಮಾಡಿದ್ದರು.

ಈ ಮೊದಲು ಪೀಠಾಧಿಪತಿಗಳಾಗುವ ಮುನ್ನ ಕಾಶೀ ಜಗದ್ಗುರುಗಳು ಗೌರವ ಪ್ರಾಧ್ಯಾಪಕರಾಗಿ, ಹೊಸದಾಗಿ ಇವರ ಮುಂದಾಳುತನದಿಂದ ಸ್ಥಾಪಿತಗೊಂಡಿದ್ದ ವೀರಶೈವ ಪೀಠದಲ್ಲಿ ಕಾರ್ಯ ನಿರ್ವಹಿಸಿದ ಅನುಭವದಿಂದ ಈಗ ಈ ವಿಶ್ವವಿದ್ಯಾಲಯದ ಸಂಪೂರ್ಣ ಚಿತ್ರಣ ಕೊಡಲು ಸಾಧ್ಯವಾಯಿತು.

ಹೊನ್ನಾಳಿಯಲ್ಲಿ ಧಾರ್ಮಿಕ ವೀರಶೈವ ವಿದ್ಯಾಪೀಠದ ಸ್ಥಾಪನೆ – ಧಾರ್ಮಿಕ ವಿ.ವಿ ಸ್ಥಾಪನೆಗೆ ನಿರ್ಧಾರ
ವಿಜಯ ಕರ್ನಾಟಕ 8–4–2000

ವೀರಶೈವ ಮಠ, ಶಿಕ್ಷಣ ಸಂಸ್ಥೆಗಳಿಂದ ಗಣನೀಯ ಸಾಧನೆ–ಕಾಶೀ ಶ್ರೀಗಳು 15–6–2006

ಪಂಚಪೀಠಾಧೀಶ್ವರರಿಂದ ವೀರಶೈವ ವಿದ್ಯಾಪೀಠ ಸ್ಥಾಪನೆ–ಕಾಶೀ ಶ್ರೀಗಳು ಪ್ರಜಾವಾಣಿ 15–6–06

ವೀರಶೈವ ವಿದ್ಯಾಪೀಠ ಸ್ಥಾಪನೆ, ರಾಜ್ಯದಲ್ಲಿ ಧಾರ್ಮಿಕ ಪರೀಕ್ಷೆ : ಕಾಶೀ ಶ್ರೀಗಳು
ಕನ್ನಡಪ್ರಭ ವಾರ್ತೆ 7–2006

ವಿದ್ವಾಂಸರ ಸಮಿತಿಯಲ್ಲಿ ಡಾ. ಸಂಗಮೇಶ ಸವದತ್ತಿಮಠ, ಡಾ. ಮಲ್ಲಿಕಾರ್ಜುನ, ಡಾ. ಹಿರೇಮಠ ಅವರುಗಳು ಕಾರ್ಯತತ್ಪರರಾಗಿರುವ ಸಂಗತಿ ತಿಳಿಸಿದರು.

2009ರಲ್ಲಿ ಮಹಾರಾಷ್ಟ್ರದ ಸೋಲಾಪುರದಲ್ಲಿ ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ವೀರಶೈವ ಸಿದ್ಧಾಂತ ಪ್ರಭೇದ, ಸಿದ್ಧಾಂತ ಪ್ರವೀಣ ಸಿದ್ಧಾಂತ ಪಂಡಿತ ಪರೀಕ್ಷೆಗಳಲ್ಲಿ ಮೊದಲ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸತ್ಕಾರ ಸಮಾರಂಭ ಏರ್ಪಡಿಸಿ ಜಗದ್ಗುರುಗಳಿಂದ ಪ್ರಮಾಣ ಪತ್ರವನ್ನು ವಿತರಿಸಲಾಯ್ತು.

ಮಹೇಶ್ವರ ವೈದಿಕ ಮಂಡಲಿಯವರು ಗುರುಪೂರ್ಣಿಮೆಯ ಪ್ರಯುಕ್ತ ಶಿವಾನುಭವ ಮಂಗಲ ಕಾರ್ಯಾಲಯದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮಗಳಲ್ಲಿ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಬಂದಿದ್ದ ಶಿಲ್ಪಾ ಹೀರೇಮಠಗೆ ಕಾಶೀ ಜಗದ್ಗುರುಗಳು ಬಹಳ ಸಂತೋಷಪಟ್ಟು ಅವಳಿಗೆ 5000 ರೂ.ಗಳನ್ನು ಕೊಟ್ಟು ಆಶೀರ್ವದಿಸಿದ್ದು–ಪ್ರತಿಭೆಯುಳ್ಳ ಮಕ್ಕಳನ್ನು ಕಂಡರೆ ಅವರಿಗೆಷ್ಟು ಪ್ರೀತಿ ಎಂಬುದನ್ನು ತೋರಿಸುತ್ತದೆ.

ಇದಲ್ಲದೆ ಮಹೇಶ್ವರ ವೈದಿಕ ಮಂಡಲಿಯವರು 1000 ರೂ. ಕೊಟ್ಟು ಸತ್ಕರಿಸಿದರು.

ಇದಾದ ನಂತರ ವೀರಶೈವ ಸಿದ್ಧಾಂತ, ಪ್ರಭೇದ, ಪ್ರವೀಣ, ಪಂಡಿತ ಪರೀಕ್ಷೆಗಳಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನಗಳನ್ನು ಗಳಿಸಿದ ಮಹಾರಾಷ್ಟ್ರ ರಾಜ್ಯದ ವಿದ್ಯಾರ್ಥಿಗಳನ್ನು ಗೌರವಿಸಿದಾಗ ಮಹಾರಾಷ್ಟ್ರ ದಿನಪತ್ರಿಕೆಗಳಿಂದ ಸಕಾಲ ವಾರ್ತಾ ಸೇವಾ, ತರುಣ್ ಭಾರತ್, ಸಂಚಾರ್ ಪತ್ರಿಕೆಗಳಲ್ಲಿ ವಿಷಯಗಳು ಪ್ರಕಟಗೊಂಡವು.



श्री काशी विद्यापीठाच्यावतीने जगद्गुरू डॉ. चंद्रशेखर शिवाचार्य महास्वामीजी यांच्या हस्ते दहावीच्या परीक्षेत राज्यात प्रथम क्रमांक पटकाविणाऱ्या उमरग्याच्या शिल्पा हिरेमठचा सत्कार करण्यात आला. यावेळी गौडगाव मठाचे डॉ. जयसिध्देश्वर शिवाचार्य व शिल्पाचे आई-वडील उपस्थित होते.

वीरशैव सिद्धांत परीक्षांचा निकाल जाहीर

ಎಸ್.ಎಸ್.ಸಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ಶಿಲ್ಪಾ ಹಿರೇಮಠರಿಗೆ ಕಾಶೀ ಶ್ರೀಗಳು ಬಹುಮಾನ ನೀಡುತ್ತಿರುವುದು.

ಜಗದ್ಗುರುಗಳು ಪ್ರವಾಸ ಮಾಡುವ ಕಾಲದಲ್ಲಿ ಯಾವ ಊರಿನಲ್ಲೇ ಅವರ ಕಾರ್ಯಕ್ರಮವಿರಲಿ, ಯಾವ ರಾಜ್ಯವೇ ಆಗಿರಲಿ, ಯಾವ ಜಾತಿ ಧರ್ಮಕ್ಕೆ ಸೇರಿರುವ ವಿದ್ಯಾರ್ಥಿಯೇ ಆಗಿರಲಿ ಅವರ ಮುಂದಿನ ಓದಿಗೆ ಧನಸಹಾಯ ಕೇಳಿದರೆ, ಸಂಪೂರ್ಣವಾಗಿ ಆ ವಿದ್ಯಾರ್ಥಿಯ ಅಂಕಪಟ್ಟಿ ಎಲ್ಲವನ್ನು ಪರಿಶೀಲಿಸಿ ನಿಜ ಎಂದು ತಿಳಿದ ತಕ್ಷಣ ಒಂದು ವರ್ಷಕ್ಕೆ ಆಗುವಂತೆ ಹಣ ಸಹಾಯ ಮಾಡಿರುವುದು ಲೆಕ್ಕವಿಲ್ಲ. ಅದು ಈ ವಿದ್ಯಾರ್ಥಿವೇತನದ ಪಟ್ಟಿಗೆ ಬರುವುದೇ ಇಲ್ಲ ಲೆಕ್ಕವಿಲ್ಲದ ಹಾಗೇ ಕೊಟ್ಟಿರುವುದು ಅವರಿಗಿರುವ ವಿದ್ಯೆಯ ಮೇಲಿರುವ ಪ್ರೀತಿ, ಗೌರವವನ್ನು ಕಾಣಬಹುದಾಗಿದೆ.

ವೇದಾಗಮ ಪಾಠಶಾಲೆ ಉದ್ಘಾಟನೆ

ಹರಿಯಾಣ ರಾಜ್ಯದ ಕುರುಕ್ಷೇತ್ರ ಜಿಲ್ಲೆಯ ಪೇಹವಾ ಕ್ಷೇತ್ರದಲ್ಲಿ ಪವಿತ್ರ ನದಿ ಸರಸ್ವತಿ ಪ್ರಕಟವಾಗಿದ್ದು, ಫಾಲ್ಗುಣ ಅಮಾವಾಸ್ಯೆ ದಿನದಂದು ಇಲ್ಲಿನ ಪ್ರಾಚಿ ಘಾಟದಲ್ಲಿ ಸ್ನಾನಮಾಡಲು ಲಕ್ಷಾಂತರ ಜನರು ಆಗಮಿಸುತ್ತಾರೆ. ಇಂತಹ ಪುಣ್ಯ ಕ್ಷೇತ್ರದಲ್ಲಿ ಕಾಶಿ ಜಂಗಮವಾಡಿ ಮಠದ ಪ್ರಾಚೀನ ಶಾಖಾ ಜಂಗಮವಾಡಿ ಮಠದಲ್ಲಿ ಕಾಶೀ ಜಗದ್ಗುರುಗಳು 'ಪಂಚಾಚಾರ್ಯ ವೇದಾಗಮ ಪಾಠಶಾಲೆ'ಯನ್ನು ಉದ್ಘಾಟಿಸಿ ಸುಮಾರು 25 ಮಕ್ಕಳಿಗೆ ವಿಧಿವತ್ತಾಗಿ ಅಯ್ಯಾಚಾರ ಮಾಡಿ ಅವರಿಗೆ ವೈದಿಕ ಶಿವಪೂಜೆಯ ವಿಧಿಯನ್ನು ತಿಳಿಸಿ ಪ್ರತೀ ಮಗುವಿಗೂ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ನೀಡಿ ಆಶೀರ್ವದಿಸಿದರು.

ಉದಯವಾಣಿ, 6–1–2013



ಹರಿಯಾಣ ರಾಜ್ಯದ ಕುರುಕ್ಷೇತ್ರ ಜಿಲ್ಲೆಯ ಪೇಹವಾ ಕ್ಷೇತ್ರದಲ್ಲಿಯ ಅತ್ಯಂತ ಪ್ರಾಚೀನವಾದ ಕಾಶೀ ಶಾಖಾ ಜಂಗಮವಾಡಿ ಮಠದಲ್ಲಿ ಪಂಚಾಚಾರ್ಯ ವೇದಾಗಮ ಪಾಠಶಾಲೆಯ ಮಕ್ಕಳೊಂದಿಗೆ ಕಾಶೀ ಜಗದ್ಗುರುಗಳು.

ಆಶೀರ್ವಚನದಲ್ಲಿ ವೇದಾಗಮಗಳ ಬಗ್ಗೆ ಕಿರುಪರಿಚಯ ಮಾಡುತ್ತಾ ಇವುಗಳು ಶಿವನಿಂದ ದೊರೆತ ಅಪೂರ್ವ ಜ್ಞಾನರಾಶಿ. ಶಿವನ ಈಶಾನ್ಯಮುಖದಿಂದ 28 ಶಿವಾಗಮಗಳು ಪ್ರಕಟಗೊಂಡಿವೆ ಎಂದು ಶಾಸ್ತ್ರಗಳು ಪ್ರತಿಪಾದಿಸಿರುವ ವಿಚಾರವನ್ನು ತಿಳಿಸುತ್ತಾ ವೇದದ ಕರ್ಮಕಾಂಡ, ಉಪಾಸನಾಕಾಂಡ ಮತ್ತು ಜ್ಞಾನಕಾಂಡಗಳಲ್ಲಿ ಹಾಗೂ ಆಗಮಗಳ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ ಮತ್ತು ಜ್ಞಾನಪಾದಗಳಲ್ಲಿ ಮನುಷ್ಯನ ಕಲ್ಯಾಣ ಮಾರ್ಗವನ್ನು ಪ್ರತಿಪಾದಿಸಿವೆ. ಅಂತೆಯೇ ಪ್ರತಿಯೊಬ್ಬ ದಾರ್ಶನಿಕರು ಈ ವೇದಾಗಮಗಳನ್ನೇ ಆಧಾರವಾಗಿ ಇಟ್ಟುಕೊಂಡು ದಾರ್ಶನಿಕರ ಗ್ರಂಥಗಳನ್ನು ರಚಿಸಿರುವ ವಿಚಾರವನ್ನು ತಿಳಿಸಿದರು.

ಸನಾತನ ವೀರಶೈವ ಧರ್ಮದ ದಾರ್ಶನಿಕ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಈ ವೇದಾಗಮಗಳನ್ನು ಆಧಾರವಾಗಿಸಿಕೊಂಡು ರಚಿಸಿರುವ ಗ್ರಂಥ. ಪ್ರತಿ ವೀರಶೈವರೂ ವೇದಾಗಮಗಳನ್ನು ಅಧ್ಯಯನ ಮಾಡಬೇಕೆಂದು ಜಗದ್ಗುರುಗಳು ಹೇಳಿದರು. ಈ ಕಾರಣದಿಂದಾಗಿಯೇ ವೀರಶೈವ ಮಠಗಳು, ಪೀಠಗಳು ವೇದಾಗಮಗಳ ಅಧ್ಯಯನಕ್ಕಾಗಿ ದೇಶಾದ್ಯಂತ ಪಾಠಶಾಲೆಗಳನ್ನು ತೆರೆದು ಪುರಾತನ ಕಾಲದಿಂದಲೂ ಇವುಗಳ ಅಧ್ಯಯನಕ್ಕೆ ವ್ಯವಸ್ಥೆ ಮಾಡಿರುವುದನ್ನು ಚರಿತ್ರೆಯೇ ಹೇಳುತ್ತದೆ.

ಜಗದ್ಗುರುಗಳು ಹರಿಯಾಣ, ಪಂಜಾಬ್, ಗುಜರಾತ್, ರಾಜಸ್ತಾನ, ಜಮ್ಮು, ಕಾಶ್ಮೀರ ರಾಜ್ಯಗಳಲ್ಲಿ ಕಾಶೀ ಪೀಠದ ಶಾಖಾ ಜಂಗಮವಾಡಿ ಮಠಗಳು ಅನಾದಿಕಾಲದಿಂದಲೂ ಇರುವ ವಿಚಾರವನ್ನು ತಿಳಿಸುತ್ತಾ –ಇಲ್ಲೆಲ್ಲಾ ಲಕ್ಷಾಂತರ ವೀರಶೈವರು ವಾಸವಾಗಿದ್ದಾರೆ. ಅವರುಗಳ ಮಕ್ಕಳಿಗೆ ಅಯ್ಯಾಚಾರ ನೀಡಿ ಶ್ರೀ ಸಿದ್ಧಾಂತ ಶಿಖಾಮಣಿ ಕಲಿಸುವುದಕ್ಕೆ ಈ ರಾಜ್ಯಗಳಲ್ಲಿ ಪಾಠಶಾಲೆಗಳನ್ನು ಸ್ಥಾಪಿಸುವುದಾಗಿ ಅಂದು ನೆರೆದಿದ್ದ ಸಾವಿರಾರು ವೀರಶೈವರಿಗೆ ತಿಳಿಸಿದ್ದು ಒಂದು ಮಹತ್ಕಾರ್ಯ ಮಾಡಿದಂತಾಗಿದೆ.

ಅಲ್ಲೆಲ್ಲಾ ಇರುವ ವೀರಶೈವರು ಶಿವನ ಉಪಾಸನೆ ಬಿಟ್ಟು ಬೇರೇನನ್ನೂ ಮಾಡುವುದಿಲ್ಲ. ಶಿವಕಥೆಗಳನ್ನು ಗಂಟೆಗಟ್ಟಲೆ ರಾಗ ಬದ್ಧವಾಗಿ ಹೇಳುವ ಅವರ ಕಲೆ ವಿಶಿಷ್ಟವಾದುದು. ಇವರೆಲ್ಲಾ ವೀರಶೈವರೇ ಎನ್ನುವುದಕ್ಕೆ ಮರಣ ಹೊಂದಿದಾಗ ಮಣ್ಣಿನಲ್ಲಿ ಹೂಳುವ ಪದ್ಧತಿಯನ್ನು ಅನುಸರಿಸುತ್ತಾರೆಯೇ ವಿನಃ ಸುಡುವ ಸಂಪ್ರದಾಯ ಅವರಲ್ಲಿಲ್ಲ. ಅನೇಕ ವೀರಶೈವದ ಆಚಾರಗಳನ್ನು ತಿಳಿಸುವವರಿಲ್ಲದ ಅವರುಗಳಿಗೆ ಅವು ಗೊತ್ತಿಲ್ಲ. ಜಗದ್ಗುರುಗಳು ಅಲ್ಲೆಲ್ಲಾ ಪ್ರವಾಸ ಮಾಡುವಾಗ ಲಕ್ಷಾಂತರ ಜನರು ಅವರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದನ್ನು ನೋಡಿದಾಗ ಅವರುಗಳಿಗೆ ವೀರಶೈವದ ಆಚಾರ–ವಿಚಾರ, ಪೂಜಾಪದ್ಧತಿ ಎಲ್ಲವನ್ನು ತಿಳಿಯುವ ಆಸೆಯನ್ನು ಗುರುಗಳ ಮುಂದೆ ವ್ಯಕ್ತಪಡಿಸಿದಾಗ ಎಲ್ಲೆಡೆ ವೇದಾಗಮ ಪಾಠಶಾಲೆಗಳನ್ನು ತೆರೆಯಬೇಕೆಂದು ನಿರ್ಧರಿಸಿ ಈ ದಿಶೆಯಲ್ಲಿ ಕಾರ್ಯತತ್ಪರರಾಗಿದ್ದಾರೆ.

ಸಂಸ್ಕೃತ ಭಾಷೆ–ಸಂಸ್ಕೃತ ವಿಶ್ವವಿದ್ಯಾಲಯ–ಜಗದ್ಗುರುಗಳು

ಹೈಸ್ಕೂಲ್, ಕಾಲೇಜುಗಳಲ್ಲಿ ಸಂಸ್ಕೃತವೇ ಮುಖ್ಯ ಭಾಷಾ ಮಾಧ್ಯಮದಲ್ಲಿ ವಿದ್ಯಾಭ್ಯಾಸದಲ್ಲಿ ತೊಡಗಿದ ಕಾಶೀ ಜಗದ್ಗುರುಗಳು ಮುಂದೆ ಕಾಶೀಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೋದ ಮೇಲೆ ಸಂಪೂರ್ಣವಾಗಿ ಸಂಸ್ಕೃತದಲ್ಲೇ ವಿದ್ಯಾಭ್ಯಾಸವನ್ನು ಮುಂದುವರೆಸಿದ್ದು ತಿಳಿದ ಮಾತೇ ಆಗಿದೆ. ಎಂ.ಎ.ನಲ್ಲಿ ಸಂಸ್ಕೃತದಲ್ಲೇ ಪ್ರಥಮ ರ‍್ಯಾಂಕ್ ವಿದ್ಯಾರ್ಥಿಯಾಗಿ ಚಿನ್ನದ ಪದಕವನ್ನು ಗಳಿಸಿದವರು ಜಗದ್ಗುರುಗಳು. ಮುಂದೆ ಪಿಹೆಚ್.ಡಿ., ಡಿ.ಲಿಟ್ ಪದವಿಗಳನ್ನು ಗಳಿಸಿದರು. ಜಗದ್ಗುರುಗಳು ಈ ಎಲ್ಲಾ ಪದವಿಗಳನ್ನು ಗಳಿಸಿದ್ದು ಸಂಸ್ಕೃತ ಭಾಷಾ ಪ್ರೇಮದಿಂದ. ಇಂದವರು ನಿರರ್ಗಳವಾಗಿ ಸಂಸ್ಕೃತ ಮಾತನಾಡಬಲ್ಲರು. ವಾರಾಣಸಿಯಲ್ಲಿ ಬೇರೆಲ್ಲಾ ವಿಶ್ವವಿದ್ಯಾನಿಲಯಗಳ ಎಲ್ಲಾ ವಿದ್ವಾಂಸರು ಮೆಚ್ಚುವಂತಹ ವಿದ್ಯಾರ್ಥಿಗಳಾಗಿದ್ದರು. ಅಷ್ಟು ಅಭಿಮಾನ ಜಗದ್ಗುರುಗಳ ಮೇಲೆ ಇದ್ದುದರಿಂದಲೇ ಪ್ರತೀ ಶಿವರಾತ್ರಿಯ ಮುನ್ನಾದಿನ ನಡೆಸಲಾಗುವ ವಿದ್ವತ್ ಸಭೆ, ಆ ಸಮಯದಲ್ಲಿ ಕೊಡಮಾಡಲಾಗುವ 'ವಿಶ್ವಭಾರತಿ ಪುರಸ್ಕಾರ' ಸಮಾರಂಭದಲ್ಲಿ ವಾರಾಣಸಿಯ ವಿದ್ವಾಂಸರೆಲ್ಲರೂ ಉಪಸ್ಥಿತರಿರುತ್ತಾರೆ. ಈ ಸಂಪ್ರದಾಯ ೧೯೮೯ರಿಂದ ಇವತ್ತಿನವರೆಗೂ ಕಾಶೀ ಜಂಗಮವಾಡಿ ಮಹಾಮಠದಲ್ಲಿ ನಡೆದುಬಂದಿದೆ.

ಸಂಸ್ಕೃತ ಭಾಷೆಯ ಮಹತ್ವ ಅರಿತಿರುವ ಜಗದ್ಗುರುಗಳಿಗೆ ಭಾಷೆಯನ್ನು ಉಳಿಸಿ ಬೆಳೆಸುವ ಮಹತ್ತರ ಆಸೆ ಹೊತ್ತು ಆ ದಿಶೆಯಲ್ಲಿ ಅನೇಕ ಕಾರ್ಯ ಕೈಗೊಂಡಿದ್ದಾರೆ. ಜಗದ್ಗುರುಗಳ ದೃಷ್ಟಿಯಲ್ಲಿ ಸಂಸ್ಕೃತಭಾಷೆಯ ಸಂರಕ್ಷಣೆ ಮಾಡುವ ಮೂಲಕ ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬರಬಹುದು. ಈ ದಿಶೆಯಲ್ಲಿ ವೀರಶೈವ ಪಂಚಪೀಠಗಳ ಪಾತ್ರ ಅದರಲ್ಲೂ ಕಾಶೀ ಪೀಠವು ಸಂಸ್ಕೃತ ಭಾಷೆಯ ಬೆಳವಣಿಗೆಗೆ ನೀಡಿರುವ ಕೊಡುಗೆ ಅಮೋಘವಾದುದು.

ನೂರಾರು ವರ್ಷಗಳಿಂದ ವೀರಶೈವ ಪಂಚಪೀಠಗಳು ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ ಮತ್ತು ಉತ್ತರ ಭಾರತದ ಅನೇಕ ಕಡೆಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿ ಅಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ, ಬಟ್ಟೆ, ಪುಸ್ತಕ, ವಸತಿಸಹಿತ ಸಂಸ್ಕೃತ ಶಿಕ್ಷಣವನ್ನು ಶಿಷ್ಯವೇತನಗಳನ್ನು ಕೊಡುವುದರ ಮೂಲಕ ಸಂಸ್ಕೃತ ಭಾಷಾ ಬೆಳವಣಿಗೆಗೆ ಆದ್ಯತೆ ನೀಡುತ್ತಾ ಬಂದಿವೆ.

ಸಂಸ್ಕೃತ ಭಾಷೆ, ಸಾಹಿತ್ಯ ಇಂದಿಗೂ ತೀರ ಅವಶ್ಯ ಎಂಬುದು ಜಗದ್ಗುರುಗಳ ಅಭಿಮತ. ಅವರೇ ಹೇಳಿದಂತೆ ಸಂಸ್ಕೃತ ಭಾಷೆಯು ಭಾರತೀಯ ಎಲ್ಲ ಭಾಷೆಗಳ ಜನನಿ. ಹಿಂದೆ ಒಂದು ಕಾಲದಲ್ಲಿ ಈ ದೇಶದ ಎಲ್ಲಾ ಭಾಗಗಳಲ್ಲೂ ಸಂಸ್ಕೃತವೇ ಆಡುಭಾಷೆಯಾಗಿತ್ತು. ಆದ್ದರಿಂದಲೇ ವೇದಾಗಮಗಳಲ್ಲದೆ ಪ್ರಾಚೀನ ಇತಿಹಾಸ ಮಹಾಕಾವ್ಯಗಳಾದ ರಾಮಾಯಣ ಮಹಾಭಾರತಗಳು, ಕಾಳಿದಾಸಾದಿ ಮಹಾಕವಿಗಳೆಲ್ಲರೂ ಸಂಸ್ಕೃತದಲ್ಲೇ ಕಾವ್ಯರಚನೆ ಮಾಡಿದ್ದಾರೆ. ಲೋಕರಂಜನ ನಾಟಕಗಳು, ಬದುಕನ್ನು ರೂಪಿಸುವ ಸಿದ್ಧಾಂತಗಳು, ಯೋಗ, ಆಯುರ್ವೇದಗಳು ವಾಸ್ತುಶಿಲ್ಪ ಮೊದಲಾದ ಗ್ರಂಥಗಳು ಸಂಸ್ಕೃತ ಭಾಷೆಯಲ್ಲೇ ರಚಿಸಲಾಗಿದೆ. ಈ ಎಲ್ಲಾ ಗ್ರಂಥಗಳಲ್ಲಿ ಮನುಷ್ಯನ ಲೌಕಿಕ ಬದುಕಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳೂ, ಆಧ್ಯಾತ್ಮಿಕ ಬದುಕಿಗೆ ಬೇಕಿರುವ ಎಲ್ಲಾ ಸಾಧನಾಮಾರ್ಗಗಳು ಈ ಗ್ರಂಥಗಳಲ್ಲೇ ಪ್ರತಿಪಾದಿಸಲಾಗಿದೆ ಎನ್ನುವುದು ಜಗದ್ಗುರುಗಳ ಅಭಿಪ್ರಾಯ. ಅವರು ಹೇಳುವುದು ಭಾರತೀಯ ಸಂಸ್ಕೃತಿಯಲ್ಲಿ ಭೋಗ–ವಿಲಾಸಗಳಿಗಿಂತಲೂ ತ್ಯಾಗ–ತಪಸ್ಸುಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು.

ಇಂತಹ ಗಟ್ಟಿ ಹಿನ್ನೆಲೆಯಿಂದ ಬಂದಿರುವ ಜಗದ್ಗುರುಗಳು ಸಂಸ್ಕೃತ ಭಾಷೆಯ ಬೆಳವಣಿಗೆಗಾಗಿ ಅನೇಕ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುತ್ತಿದ್ದಂತಹ ಕಾಲದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ೨೦೦೮ರಲ್ಲಿ ಸಂಸ್ಕೃತ ವಿ.ವಿ. ತೆರೆಯಲು ಹೊರಟಿರುವ ವಿಚಾರ ತಿಳಿದು ಜಗದ್ಗುರುಗಳು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಇದರಿಂದ ಸಂಸ್ಕೃತ ಕಾಲೇಜುಗಳನ್ನು ತೆರೆಯಲು ಅವಕಾಶ ದೊರೆಯಲಿದೆ ಎಂದು ಅವರೇ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಇತ್ತೀಚಿನ ದಿನಗಳಲ್ಲಿ ಸಂಸ್ಕೃತ ಪಾಠಶಾಲೆಗಳು ಸಂಖ್ಯೆ ಗಣನೀಯವಾಗಿ

ಕಡಿಮೆಯಾಗಿರುವುದನ್ನು ತಿಳಿಸುತ್ತಾ ಕಾಶೀಪೀಠದ ವತಿಯಿಂದ ಕರ್ನಾಟಕದ ಗದಗ್, ಮಹಾರಾಷ್ಟ್ರದ ಲಾತೂರ್, ಆಂಧ್ರಪ್ರದೇಶದ ಶಾದ ನಗರಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ತಾವು ತೆರೆದಿರುವುದಾಗಿ ಪತ್ರಿಕೆಯವರಿಗೆ ತಿಳಿಸಿದರು.

ಪಂಚಪೀಠಗಳಲ್ಲಿ ಒಂದಾದ ಕಾಶೀ ಜ್ಞಾನಸಿಂಹಾಸನ ಪೀಠವು ರಾಷ್ಟ್ರೀಯ ಭಾವೈಕ್ಯತೆಯ ಧರ್ಮಪೀಠವೆಂದು ಪ್ರಸಿದ್ಧವಾಗಿದೆ. ವಾರಾಣಸಿಯಲ್ಲಿರುವ ಸುಮಾರು ೩೦೦ ವಿವಿಧ ಸಂಪ್ರದಾಯಗಳ ಮಠಗಳಲ್ಲಿ ಕಾಶೀಪೀಠವೇ ಪುರಾತನವಾದುದು ಎಂದು ಹೇಳುತ್ತಾ ೬ನೇ ಶತಮಾನದಲ್ಲಿದ್ದ ಕಾಶೀರಾಜನಿಂದ ಕಾಶೀಪೀಠಕ್ಕೆ ಭೂದಾನ ಮಾಡಿದ ದಾನಪತ್ರ ಇಂದಿಗೂ ಪೀಠದಲ್ಲಿರುವುದನ್ನು ತಿಳಿಸಿ, ಇದಲ್ಲದೆ ಮೊಗಲ್ ಚಕ್ರವರ್ತಿಗಳೂ ಪೀಠಕ್ಕೆ ಫರ್ಮಾನ್‌ಗಳನ್ನು ಕೊಟ್ಟಿರುವ ದಾಖಲೆಗಳಿವೆ. ಹಿಂದೂ ಹಾಗೂ ಮುಸ್ಲಿಂ ರಾಜರಿಂದ ಸಮಾನ ಮಾನ್ಯತೆ ಪಡೆದಿರುವ ಕಾಶೀ ಮಹಾಪೀಠವು ರಾಷ್ಟ್ರೀಯ ಭಾವೈಕ್ಯತೆಯ ಸಂಕೇತವಾಗಿದೆ ಎಂದರು.

ಕಾಶೀಪೀಠದಲ್ಲಿ ೧೯೧೮ರಲ್ಲಿ ಸ್ಥಾಪಿತವಾದ ವಿಶ್ವಾರಾಧ್ಯ ಗುರುಕುಲವು ಅಧ್ಯಯನಕ್ಕಾಗಿ ಬಂದ ಎಲ್ಲಾ ಸಂಪ್ರದಾಯಗಳ ಮಠಾಧಿಪತಿಗಳ ವಸತಿ, ಪ್ರಸಾದ ಮತ್ತು ವಿದ್ಯಾದಾನ ಮಾಡಿದ ಹೆಗ್ಗಳಿಕೆ ಕಾಶೀಪೀಠದ್ದಾಗಿದೆ. ವಿರಕ್ತ ಸ್ವಾಮಿಗಳಾದ ಚಿತ್ರದುರ್ಗದ ಬೃಹನ್ಮಠದ ಶ್ರೀ ಜಯದೇವಸ್ವಾಮಿಗಳು, ಹುಬ್ಬಳ್ಳಿಯ ಮೂರುಸಾವಿರ ಮಠದ ಗಂಗಾಧರ ಸ್ವಾಮಿಗಳು, ಸಿರಿಗೆರೆಯ ಶ್ರೀ ಶಿವಕುಮಾರ ಸ್ವಾಮಿಗಳು ಸೇರಿದಂತೆ ಅನೇಕ ಸ್ವಾಮಿಗಳು ಇಲ್ಲಿ ಅಭ್ಯಾಸ ಮಾಡಿರುವುದು ಹೆಮ್ಮೆಯ ಸಂಗತಿ ಎಂದು ಜಗದ್ಗುರುಗಳು ಹೇಳಿದರು.

ಜಗದ್ಗುರುಗಳು ಸಂಸ್ಕೃತ ಪಾಠಶಾಲೆಗಳನ್ನು ತೆರೆದಿರುವುದನ್ನು ಗೋಷ್ಠಿಯಲ್ಲಿ ತಿಳಿಸಿದ್ದಲ್ಲದೆ ಬೆಂಗಳೂರಿನ ಶಾಖೆ ವೀರಶೈವ ಅನುಸಂಧಾನ ಸಂಸ್ಥಾನದಲ್ಲಿ ಸಂಸ್ಕೃತ ವಿದ್ವಾಂಸರಿಂದ ಆಗಮಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿರುವ ವಿಷಯ ಕುರಿತು ಹೇಳಿದರು. ಸಂಸ್ಕೃತ, ಮರಾಠಿ ಮತ್ತು ಕನ್ನಡ ಭಾಷೆಯ ವಿದ್ವಾಂಸರನ್ನು ಪ್ರತೀ ವರ್ಷ ವಿವಿಧ ಪ್ರಶಸ್ತಿಗಳನ್ನು ಶ್ರೀಪೀಠದಿಂದ ನೀಡಿ ಗೌರವಿಸಲಾಗುತ್ತಿರುವುದನ್ನು ತಿಳಿಸಿದರು.

ಸರಕಾರ ತೆರೆಯ ಹೊರಟಿರುವ ಕರ್ನಾಟಕದ ಸಂಸ್ಕೃತ ವೇದ ವಿಶ್ವವಿದ್ಯಾಲಯಕ್ಕೆ ಉಪಕುಲಪತಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಕರ್ನಾಟಕದ ಅನೇಕ ಸಂಸ್ಕೃತ ವಿದ್ವಾಂಸರುಗಳನ್ನು ಪರಿಗಣಿಸಬೇಕೆಂದು ಹೇಳಿ ಪಟ್ಟಿಯನ್ನೇ ಗೋಷ್ಠಿಯಲ್ಲಿ ತಿಳಿಸಿದರು. ಖ್ಯಾತ ವಿದ್ವಾಂಸರಾದ ಡಾ॥ ಎಂ. ಶಿವಕುಮಾರಸ್ವಾಮಿ, ಬೆಂಗಳೂರು; ಡಾ॥ ಮಲ್ಲಿಕಾಜುನ ಪರಡ್ಡಿ, ಧಾರವಾಡ; ಡಾ॥ ಕೆ. ಪ್ರತಾಪ್, ತಿರುಪತಿ; ಶ್ರೀ ಕೋ.ರಂ. ಬಸವರಾಜು, ತುಮಕೂರು; ಎಂ.ಆರ್. ವೀರಭದ್ರಸ್ವಾಮಿ, ಮೈಸೂರು; ಡಾ॥ ಬಿ.ಎಸ್. ಮಹದೇವಯ್ಯ, ಶಿವಮೊಗ್ಗ; ಡಾ॥ ಸಿ. ಶಿವಕುಮಾರಸ್ವಾಮಿ, ಬೆಂಗಳೂರು; ಶ್ರೀ ಮ.ನಿ.ಪ್ರ. ಶಾಂತವೀರ ಸ್ವಾಮಿಗಳು ಕೊಳದಮಠ, ಬೆಂಗಳೂರು; ಡಾ॥ ಪ್ರಭುಲಿಂಗದೇವರು, ಬೆಂಗಳೂರು ಮುಂತಾದವರು ಸಂಸ್ಕೃತ ಭಾಷೆಯ ಬೆಳವಣಿಗೆಗೆ ತಮ್ಮ ಬದುಕನ್ನೇ ಸಮರ್ಪಿಸಿರುವುದಾಗಿ ಜಗದ್ಗುರುಗಳು ತಿಳಿಸಿದರು. ಪತ್ರಿಕಾಗೋಷ್ಠಿ ಮೂಲಕ ಸರ್ಕಾರವನ್ನು ಒತ್ತಾಯಿಸಿದರು.

ಸರಕಾರ ಸ್ಥಾಪಿಸಲಿರುವ ಕರ್ನಾಟಕ ಸಂಸ್ಕೃತ ವೇದ ವಿಶ್ವವಿದ್ಯಾಲಯದ ಹೆಸರು ಬದಲಾಯಿಸಬೇಕು ಎಂಬ ಸಲಹೆ ನೀಡಿರುವ ಡಾ॥ ಎಂ.ಎಂ. ಕಲ್ಬುರ್ಗಿಯವರ ಅಭಿಪ್ರಾಯವನ್ನು ಪತ್ರಿಕೆಗಳಲ್ಲಿ ಓದಿ ತಿಳಿದ ದಿನವೇ ತಾವೊಂದು ಪತ್ರಿಕಾಗೋಷ್ಠಿ ಕರೆದು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದು ಅಂದಿನ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು.

ಹೀಗೆ ಜಗದ್ಗುರುಗಳು ಸಂಸ್ಕೃತದ ಬಗ್ಗೆ ತಮಗಿರುವ ಆಳವಾದ ಜ್ಞಾನವನ್ನು ಎಲ್ಲರಿಗೂ ತಲುಪುವಂತೆ ಸಂಸ್ಕೃತ ಪಾಠಶಾಲೆಗಳನ್ನು ತೆರೆದಿರುವುದಲ್ಲದೆ–ಗ್ರಂಥಗಳನ್ನು ಪ್ರಕಟಿಸಿ, ಅನೇಕ ಭಾರತೀಯ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸುತ್ತಾ ಬಂದಿರುವುದರಿಂದಲೇ ತಿಳಿಯಬಹುದು ಜಗದ್ಗುರುಗಳಿಗಿರುವ ಸಂಸ್ಕೃತಾಭಿಮಾನವನ್ನು.



ಸಂಸ್ಕೃತ ವೇದ ವಿವಿ: ಡಾ. ಕಲಬುರ್ಗಿ ಸಲಹೆಗೆ ಕಾಶಿ ಜಗದ್ಗುರುಗಳ ಆಕ್ಷೇಪ

ವಿಕ ಸುದ್ದಿಲೋಕ

ಗುಲ್ಬರ್ಗ: ರಾಜಧಾನಿ ಬೆಂಗಳೂರಲ್ಲಿರಾಜ್ಯ ಸರಕಾರ ಸ್ಥಾಪಿಸಲು ಉದ್ದೇಶಿಸಿರುವ ಸಂಸ್ಕೃತ ವೇದ ವಿಶ್ವವಿದ್ಯಾಲಯದ ಹೆಸರು ಬದಲಿಸಬೇಕು ಎಂಬ ವಿಶ್ರಾಂತ ಕುಲಪತಿ ಮತ್ತು ಸಂಶೋಧಕ ಡಾ. ಎಂ. ಎಂ ಕಲಬುರ್ಗಿ ಅವರ ಸಲಹೆ ಸೂಕ್ತವಾದುದಲ್ಲ ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಅಭಿಪ್ರಾಯ ಪಟ್ಟಿದ್ದಾರೆ. ಇಲ್ಲಿಗೆ ಸಮೀಪದ ತಾಜ ಸುಲ್ತಾನಪುರದಲ್ಲಿ ಸಂಸ್ಕೃತ ವೇದ ಪಾಠ ಶಾಲೆಗೆ ಎರಡು ಎಕರೆ ಜಮೀನು ದಾನ ಮಾಡಿರುವ ಶರಣಗೌಡ ಪಾಟೀಲ್‌ರು ಏರ್ಪಡಿಸಿದ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದ ಸ್ವಾಮೀಜಿ ವಿವಿ ಹೆಸರನ್ನು ಈಗಿನ ಹೆಸರನ್ನು ಬದಲಿಸುವ ಅಗತ್ಯತೆ ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

ಸಂಸ್ಕೃತ ದೇಶದ ಅತ್ಯಂತ ಪ್ರಾಚೀನ ಭಾಷೆ, ಭಾರತೀಯ ಸಂಸ್ಕೃತಿಯ ಎಲ್ಲ ಆಯಾಮಗಳ ಪ್ರಶಿಕ್ಷಣ ಮೂಲತಃ ಸಂಸ್ಕೃತದಲ್ಲಿ ಇರುವುದರಿಂದ ಪಂಡಿತರು ಭಾಷಾ ಮಾತ್ಸರ್ಯವನ್ನು ತ್ಯಜಿಸಿ ಸಂಸ್ಕೃತಾಧ್ಯಯನಕ್ಕೆ ಮುಂದಾಗಬೇಕು. ಸಂಗಣಕೀಕರಣಕ್ಕೆ ಸಂಸ್ಕೃತ ಭಾಷೆಯೇ ಯೋಗ್ಯ ಎಂಬ ಬಗ್ಗೆ ಈಗಾಗಲೇ ವಿದ್ವಾಂಸರು ತೀರ್ಮಾನಿಸಿದ್ದಾರೆ. ಆದ್ದರಿಂದ ಸಂಸ್ಕೃತವನ್ನು ಪ್ರೋತ್ಸಾಹಿಸಬೇಕೆಂದು ಅವರು ಕರೆ ಕೊಟ್ಟಿದ್ದಾರೆ. ಸಂಸ್ಕೃತ ಭಾಷೆಯ ವೇದಾಗಮಗಳು ನಮ್ಮ ದೇಶದ ಮೂಲ ವಾಙ್ಮಯವಾಗಿದೆ. ಸನಾತನಗಳಾದ ಎಲ್ಲ ಧರ್ಮದರ್ಶನಗಳು ವೇದಾಗಮಗಳನ್ನು ಮೂಲವಾಗಿಟ್ಟುಕೊಂಡಿವೆ. ಹೀಗಿರುವಾಗ ಅವುಗಳ ಅಧ್ಯಯನ ಮತ್ತು ಸಂಶೋಧನಗಳು ಇಂದು ಅವಶ್ಯವಾಗಿವೆ. ವೀರಶೈವ ಪರಂಪರೆ, ಬಸವಾದಿ ಶರಣರು ತಮ್ಮ ವಚನ ಸಾಹಿತ್ಯದಲ್ಲಿ ವೇದಾಗಮಗಳ ಸೂಕ್ತಿಗಳನ್ನು ಹೇರವಾಗಿ ಬಳಸಿದ್ದಾರೆ.

ವಚನ ಸಾಹಿತ್ಯದ ಬಗ್ಗೆ ಜೀವನದುದ್ದಕ್ಕೂ ಅಧ್ಯಯನ ಮಾಡಿರುವ ಕಲಬುರ್ಗಿಯವರಿಗೆ ಇದೇನು ತಿಳಿಯದ ವಿಷಯವಲ್ಲ. ಹೀಗಿರುವಾಗ ಈಗಾಗಲೇ ನಾಮಕರಣಗೊಂಡಿರುವ ಕಾರ್ಯಪ್ರವೃತ್ತವಾಗಲಿರುವ ಸಂಸ್ಕೃತ ವೇದ ವಿಶ್ವವಿದ್ಯಾಲಯದ ಹೆಸರನ್ನು ಬದಲಾಯಿಸಲು ಸಲಹೆ ಮಾಡಿರುವುದು ಸೂಕ್ತ ವಿಚಾರವಾಗುವುದಿಲ್ಲವೆಂದು ಸ್ವಾಮೀಜಿ ನುಡಿದಿದ್ದಾರೆ. ವಿನಾಕಾರಣ ವಿವಾದ ಸೃಷ್ಟಿ ಮಾಡಿ ಆಗುವ ಕಾರ್ಯಕ್ಕೆ ಅಡ್ಡಿ ಮಾಡುವುದು ವಿದ್ವಾಂಸರಿಗೆ ಭೂಷಣವಲ್ಲ ಎಂದು ಸ್ವಾಮೀಜಿ ಸಲಹೆ ಮಾಡಿದ್ದಾರೆ. ಶರಣಗೌಡ ಪಾಟೀಲ್‌ರು ದಾನ ನೀಡಿರುವ ಎರಡು ಎಕರೆ ಜಮೀನಿನಲ್ಲಿ ಸಂಸ್ಕೃತ ವೇದ ಅಧ್ಯಯನಕ್ಕೆ ಕ್ರಮ ಕೈಕೊಳ್ಳಲಾಗುವುದು ಎಂದು ಸ್ವಾಮೀಜಿ ಹೇಳಿದ್ದಾರೆ.


ಸಂಸ್ಕೃತ ದೇಶದ ಅತ್ಯಂತ ಪ್ರಾಚೀನ ಭಾಷೆ, ಭಾರತೀಯ ಸಂಸ್ಕೃತಿಯ ಎಲ್ಲ ಆಯಾಮಗಳ ಪ್ರಶಿಕ್ಷಣ ಮೂಲತ: ಸಂಸ್ಕೃತದಲ್ಲಿ ಇರುವುದರಿಂದ ಪಂಡಿತರು ಭಾಷಾ ಮಾತ್ಸರ್ಯವನ್ನು ತ್ಯಜಿಸಿ ಸಂಸ್ಕೃತಾಧ್ಯಯನಕ್ಕೆ ಮುಂದಾಗಬೇಕು.

–ಕಾಶಿ ಜಗದ್ಗುರು

ರಾಜ್ಯಪಾಲರುಗಳು, ಕರ್ನಾಟಕ ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿಗಳು, ಸಚಿವರುಗಳು, ಕೇಂದ್ರ ಸರಕಾರದ ಮಂತ್ರಿಗಳು ನ್ಯಾಯಾಧೀಶರು, ಪ್ರಖ್ಯಾತ ಉದ್ಯಮಿಗಳು – ಕಾಶೀ ಜಗದ್ಗುರುಗಳಿಂದ ಆಶೀರ್ವಾದ ಪಡೆಯುತ್ತಿರುವುದು.



ಮಹಾರಾಷ್ಟ್ರ ವೀರಶೈವ ಪ್ರಥಮ ಅಧಿವೇಶನ ದಿನಾಂಕ 17ನೇ ನವೆಂಬರ್ 1985 ಸೊಲ್ಲಾಪುರ ಶಂಕರರಾವ ಚವ್ಹಾಣ್, ಕೇಂದ್ರ ಗೃಹ ಸಚಿವರು, ಧಾರವಾಡ ತಪೋವನದ ಕುಮಾರಸ್ವಾಮಿಗಳು ಮತ್ತು ಬಿ.ಡಿ. ಜತ್ತಿ



1985ರಲ್ಲಿ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮಹಾರಾಷ್ಟ್ರ ವೀರಶೈವ ಸಭಾ – ಪ್ರಥಮ ಅಧಿವೇಶನದಲ್ಲಿ, 16, 17–11–1985



ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಕಾಶೀಪೀಠಕ್ಕೆ ಭೇಟಿ ನೀಡಿದ್ದರು.




ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಕಾಶೀ ಜಗದ್ಗುರುಗಳಿಂದ ಆಶೀರ್ವಾದ ಪಡೆಯುತ್ತಿರುವುದು.



ಲಾತೂರಿನಲ್ಲಿ ಕಾಶೀ ಜಗದ್ಗುರುಗಳು ಆರಂಭಿಸಿರುವ ಹಾಸ್ಟೆಲ್‌ನಲ್ಲಿ ಭೂಮಿ ಪೂಜೆಯಲ್ಲಿ ಯು.ಪಿ.ಎ. ಸರಕಾರದಲ್ಲಿ ಸಹ ಮಂತ್ರಿಗಳಾಗಿದ್ದ ಶ್ರೀ ಶಿವರಾಜ ಪಾಟೀಲ್ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶ್‌ಮುಖ್ ಅವರು ಭೂಮಿಪೂಜೆ ನೆರವೇರಿಸಿದರು. ಸಾನ್ನಿಧ್ಯ : ಕಾಶೀ ಜಗದ್ಗುರುಗಳು



ಹರಿಯಾಣ ರಾಜ್ಯಪಾಲರಾದ ಘನತೆವೆತ್ತ ಶ್ರೀ ಶಿವರಾಜ ಪಾಟೀಲ್ ಅವರು



ಹರಿಯಾಣ ರಾಜಭವನದಲ್ಲಿ ಜಗದ್ಗುರುಗಳು



ಹರಿಯಾಣ ರಾಜ್ಯಪಾಲರಿಂದ ಕಾಶೀ ಜಗದ್ಗುರುಗಳಿಗೆ ರಾಜಭವನದಲ್ಲಿ ಗೌರವ ಸಮರ್ಪಣೆ



ಕರ್ನಾಟಕ ರಾಜ್ಯ ಸರಕಾರದ ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣ



ಕಾಶೀ ಪೀಠಕ್ಕೆ ಭೇಟಿ ನೀಡಿದ ಕೇಂದ್ರ ಸಚಿವ ಮಲ್ಲಿಕಾರ್ಜುನ ಖರ್ಗೆ ಅವರನ್ನು ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯರು ಸನ್ಮಾನಿಸಿದರು.



ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್



ಭಗವದ್ಗೀತೆ ಹಾಗೂ ಸಿದ್ಧಾಂತ ಶಿಖಾಮಣಿ ಆಶೀರ್ವಚನದ ಸಮಾರೋಪ ಸಮಾರಂಭಕ್ಕೆ ಆಗಮಿಸಿದ್ದ ಪೇಜಾವರದ ಶ್ರೀಗಳು



ಮಹಾರಾಷ್ಟ್ರ ಮಂತ್ರಿಗಳಾದ ಶ್ರೀ ವಿಲಾಸ್‌ರಾವ್ ದೇಶ್‌ಮುಖ್



ಮುಂಬೈನಲ್ಲಿ ನಡೆದ ವೀರಶೈವ ರಾಷ್ಟ್ರೀಯ ಭಾವೈಕ್ಯ ಸಮ್ಮೇಳನದಲ್ಲಿ ಪಂಚಾಪೀಠಾಧೀಶ್ವರರು



ಕಾಶೀ ಜಗದ್ಗುರುಗಳ ದ್ವಾದಶ ಶತಮಾನೋತ್ಸವದಲ್ಲಿ ಶ್ರೀ ಶೈಲ ಹಾಗೂ ಕೇದಾರ ಜಗದ್ಗುರುಗಳು



ಬಾಳೆಹೊನ್ನೂರಿನಲ್ಲಿ ಬಾಳೆಹೊನ್ನೂರು ಜಗದ್ಗುರುಗಳಿಂದ ಕಾಶೀ ಜಗದ್ಗುರುಗಳಿಗೆ ಗೌರವ ಸಮರ್ಪಣೆ



ಬಾಳೆಹೊನ್ನೂರು ಜಗದ್ಗುರುಗಳ ದ್ವಾದಶ ಶತಮಾನೋತ್ಸವಕ್ಕೆ ಬಾಳೆಹೊನ್ನೂರಿಗೆ ಆಗಮಿಸಿದ್ದ ಪಂಚಪೀಠಾಧೀಶ್ವರರು ಕಾಫಿ ತೋಟದಲ್ಲಿ ಕಾಫಿ ಹೂ ನೋಡಿ ಆನಂದಿಸುತ್ತಿರುವುದು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ರಾಣಿ ಸತೀಶ್



"Kashi Peeta - Traditional & History" ಗ್ರಂಥ ಬಿಡುಗಡೆ ಮಾಡುತ್ತಿರುವವರು ಶ್ರೀಮತಿ ಉಷಾ ಸುರೇಶ್, ನಿರ್ದೇಶಕರು, ಕರ್ನಾಟಕ ಪ್ರತ್ರಾಗಾರ ಇಲಾಖೆ



ಕರ್ನಾಟಕ ರಾಜ್ಯ ಸರಕಾರದ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ



ಕಾಶೀಪೀಠದ ವೆಬ್‌ಸೈಟ್ ಬಿಡುಗಡೆ ಮಾಡುತ್ತಿರುವ ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರು ಅವರು.



ಬೆಂಗಳೂರಿನ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಶಾಖೆ ಏರ್ಪಡಿಸಿದ್ದ 'ಸ್ಕಂದ ಗೋತ್ರಪುರುಷ' ಅಖಿಲ ಭಾರತ ಮಟ್ಟದ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿರುವ ಗಣ್ಯರು



ಮುಖ್ಯಮಂತ್ರಿ ಶ್ರೀ ಜಗದೀಶ ಶೆಟ್ಟರು



ವೀರಶೈವ ವಿದ್ಯಾಭಿವೃದ್ಧಿ ನಿಧಿ ಸಂಸ್ಥೆ ಅಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ



ಕರ್ನಾಟಕ ರಾಜ್ಯದ ಸರಕಾರದಲ್ಲಿ ಬೃಹತ್ ಕೈಗಾರಿಕೆ ಸಚಿವರಾಗಿದ್ದ ಶ್ರೀ ಮುರಗೇಶ ನಿರಾಣಿ ಅವರಿಗೆ ಜಗದ್ಗುರುಗಳು ಆಶೀರ್ವದಿಸುತ್ತಿರುವುದು.



ಮಾಜಿ ಸಚಿವರಾದ ವಿ. ಸೋಮಣ್ಣ



ಅಖಿಲ ಭಾರತ ವೀರಶೈವ ಮಹಾಸಭೆ ಅಧ್ಯಕ್ಷರಾದ ಶ್ರೀ ಭೀಮಣ್ಣ ಖಂಡ್ರೆಯವರಿಗೆ ಜಗದ್ಗುರುಗಳಿಂದ ಆಶೀರ್ವಾದ



ಭಾರತ ಸರಕಾರದ ಯೋಜನಾ ರಾಜ್ಯಮಂತ್ರಿಗಳಾದ ಶ್ರೀ ಎಂ.ವಿ. ರಾಜಶೇಖರನ್



ಮಾಜಿ ಸಚಿವ ಶ್ರೀ ಬಸವರಾಜ ಬೊಮ್ಮಾಯಿ



ಘನತೆವೆತ್ತ ಶ್ರೀ ರಾಮಾಜೋಯಿಸ್ ದಂಪತಿಗಳು ಪಂಜಾಬ್ ರಾಜ್ಯ ರಾಜ್ಯಪಾಲರು



ದೂರದರ್ಶನದ ನಿರ್ದೇಶಕರಾದ ಮಹೇಶ್ ಜೋಶಿ



ಬಾಗಲಕೋಟೆ ಬಸವೇಶ್ವರ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವೀರಣ್ಣ ಚರಂತಿಮಠ ಅವರು ಜಗದ್ಗುರುಗಳಿಂದ ಆಶೀರ್ವಾದ ಪಡೆಯುತ್ತಿರುವುದು.




ಕೇರಳ ಹೈಕೋರ್ಟ್ ಮುಖ್ಯ ನ್ಯಾಯಾಧೀಶರಾದ ಡಾ॥ ವಿ.ಎಸ್. ಮಳಿಮಠ



ನೈಸ್ ಸಂಸ್ಥೆಯ ಡೈರೆಕ್ಟರ್ ಶ್ರೀ ಅಶೋಕ್ ಖೇಣಿ



ವಿಜಯವಾಣಿ ದಿನಪತ್ರಿಕೆ, ವಿ.ಆರ್.ಎಲ್. ಸಮೂಹದ ಸಂಸ್ಥಾಪಕರಾದ
ಶ್ರೀ ವಿಜಯಸಂಕೇಶ್ವರ ದಂಪತಿಗಳು



ಲುಫ್ತಾನ್ಸದ ಮ್ಯಾನೇಜಿಂಗ್ ಡೈರೆಕ್ಟರ್ ಆದ ಶ್ರೀ ವಿ.ಎಸ್. ಬೊಬ್ಬ ದಂಪತಿಗಳು



ಖ್ಯಾತ ಸಂಶೋಧಕರಾದ ಡಾ॥ ಎಂ. ಚಿದಾನಂದಮೂರ್ತಿಯವರು
ಜಗದ್ಗುರುಗಳಿಂದ ಆಶೀರ್ವಾದ ಪಡೆಯುತ್ತಿರುವುದು.



ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನವು ನಡೆಸಿದ ಧರ್ನುಮಾಸದ
ಮಹಾಶಿವಪೂಜೆ, ಹಾಗೂ ಆಧ್ಯಾತ್ಮಿಕ ಆಶೀರ್ವಚನ. ಸಮಾರಂಭದ ಉದ್ಘಾಟನೆ
ಬಾಳೆಹೊನ್ನೂರು ಜಗದ್ಗುರುಗಳು ನೆರವೇರಿಸಿದರು.



ಪುಣೆಯ ಕಲ್ಯಾಣಿ ಫೋರ್ಜ್ ಕಂಪನಿ ಮಾಲೀಕರಾದ ಪದ್ಮಶ್ರೀ ಬಾಬಾ ಕಲ್ಯಾಣ
ದಂಪತಿಗಳು

ಸಮನ್ವಯದ ಹರಿಕಾರರಾಗಿ ಜಗದ್ಗುರುಗಳು

ಪಶ್ಚಿಮ ದಿಕ್ಕಿನಲ್ಲಿ ಸೂರ್ಯ ಕಣ್ಮರೆಯಾದ ಮೇಲೆ ನಿಧಾನವಾಗಿ ಗಾಡಾಂಧಕಾರ ಕವಿಯುವ ಕಾಲದಲ್ಲಿ ಹುಣ್ಣಿಮೆಯ ಚಂದಿರ ಉದಯಿಸಿ ಶಾಂತವಾದ, ಆಹ್ಲಾದಕರವಾದ ಬೆಳಕನ್ನು ಎಲ್ಲೆಡೆ ಬೀರುವಂತೆ ಡಾ. ಚಂದ್ರಸಶೇಖರ ಶಿವಾಚಾರ್ಯರು ವೀರಶೈವ ಧರ್ಮದ ಪವಿತ್ರ ಗ್ರಂಥ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಕುರಿತು ದೇಶ–ವಿದೇಶಗಳಲ್ಲಿ ಉಪದೇಶಾಮೃತ ನೀಡುತ್ತಾ ಮಾನವನ ಮನದಲ್ಲಿ ಕವಿದಿರುವ ಅಜ್ಞಾನಾಂಧಕಾರವನ್ನು ಸರಿಸುತ್ತಾ ಜ್ಞಾನದೀವಿಗೆ ಹಿಡಿದು ಎಲ್ಲೆಡೆ ಸಂಚರಿಸುತ್ತಾ ಸಾಗಿದ್ದಾರೆ.

ವೀರಶೈವ ಸಿದ್ಧಾಂತವನ್ನು ಬೋಧಿಸುವ ಗ್ರಂಥ ಸಿದ್ಧಾಂತ ಶಿಖಾಮಣಿಯಲ್ಲಿ ಬೇರ್‍ಯಾವ ಧರ್ಮಗಳ ಸಿದ್ಧಾಂತವನ್ನು ಖಂಡಿಸದೆ ಸಕಲ ಮಾನವ ಜೀವಕೋಟಿಯ ಉದ್ಧಾರಕ್ಕಾಗಿ ಬೋಧನೆ ಮಾಡಿರುವ ಗ್ರಂಥ. ಯುವಕರಾಗಿನಿಂದಲೂ ಈ ಗ್ರಂಥವನ್ನೇ ಅಧ್ಯಯನ ಮಾಡಿ, ಅದನ್ನೇ ಕುರಿತು ಆಲೋಚಿಸುತ್ತಾ ಕರೆದೆಡೆಯೆಲ್ಲಾ ಅದರ ಕುರಿತೇ ಉಪನ್ಯಾಸ ನೀಡುತ್ತಾ ಇಡೀ ಸಿದ್ಧಾಂತವನ್ನೇ ಮೈಗೂಡಿಸಿಕೊಂಡು ಅದೇ ಸಿದ್ಧಾಂತವೇ ಅವರ ಉಸಿರಾಗಿರುವಾಗ ಜಗದ್ಗುರುಗಳ ಮನದಲ್ಲಿ ಮೈಮನಗಳಲ್ಲಿ ವಿರಸ ಮೂಡುವ ಸಂದರ್ಭವೇ ಅತೀ ವಿರಳ. ಗ್ರಂಥದ ತತ್ತ್ವಗಳನ್ನೇ ಬದುಕಿಗೆ ಅಳವಡಿಸಿಕೊಂಡಿರುವ ಗುರುಗಳಲ್ಲಿ ಸಮನ್ವಯದ ಹೊರತಾಗಿ ಬೇರೇನು ಇರಲು ಸಾಧ್ಯ? ಹಾಗಾಗಿಯೇ ಜಗದ್ಗುರುಗಳು ಇಡೀ ಸಮಾಜದ ಒಳಿತನ್ನೇ ಬಯಸುವವರಾದ್ದರಿಂದಲೇ ಅವರಲ್ಲಿ ಗುರು–ವಿರಕ್ತರೆಂದಾಗಲಿ, ರೇಣುಕ–ಬಸವ ಎಂದಾಗಲಿ, ಬಡವ–ಶ್ರೀಮಂತ ಎಂದಾಗಲಿ, ಜ್ಞಾನಿ–ಅಜ್ಞಾನಿ ಎಂದಾಗಲಿ, ಯಾವ ತಾರತಮ್ಯ ಭಾವವೂ ಇಲ್ಲದೆ ಸಮನಾಗಿ ಎಲ್ಲರನ್ನೂ ಕಾಣುವ ಹೃದಯ ವೈಶಾಲ್ಯ ಉಳ್ಳವರಾಗಿದ್ದಾರೆ.

ಇದೆಲ್ಲಕ್ಕೂ ಕಳಶವಿಟ್ಟಂತೆ ಕಾಶೀ ಜ್ಞಾನಪೀಠದ ಗುರುಕುಲವು ಆರಂಭವಾದಾಗಿನಿಂದ ಅಧ್ಯಯನದ ಸಲುವಾಗಿ ಬಂದವರಿಗೆಲ್ಲಾ ಸದಾ ತೆರೆದಿತ್ತು. ಎಷ್ಟೋ ವಿರಕ್ತ ಮಠಾಧಿಪತಿಗಳು ಇಲ್ಲಿ ವಿದ್ಯಾರ್ಥಿಯಾಗಿದ್ದ ದಾಖಲೆಗಳಿವೆ. ಸಂಸ್ಕೃತದ ಹೆಚ್ಚಿನ ಅಧ್ಯಯನಕ್ಕಾಗಿ ಕಾಶಿಗೇ ಬರಬೇಕಾಗಿದ್ದಿತು. ಹಿಂದಿನ ಕಾಲದಲ್ಲಿ ಬಂದವರೆಲ್ಲರಿಗೂ ತಾರತಮ್ಯವಿಲ್ಲದೆ ಊಟ ವಸತಿ ನೀಡಿ ವಿದ್ಯೆ ಕಲಿಯಲು ಅನುವು ಮಾಡಿದೆ. ಇಂತಹ ಪೀಠದ ಜಗದ್ಗುರುಗಳಾಗಿ ಡಾ॥ ಚಂದ್ರಶೇಖರ ಶಿವಾಚಾರ್ಯರು ಇಂದಿಗೂ ತಮ್ಮ ಪೂರ್ವಜರ ಮಾರ್ಗದಂತೆ ಎಲ್ಲರನ್ನು ಸ್ವಾಗತಿಸುತ್ತಾರೆ.

ಕರ್ನಾಟಕ ಹೊರತುಪಡಿಸಿ ಬೇರಾವ ರಾಜ್ಯದಲ್ಲೂ ಗುರು–ವಿರಕ್ತ ಎಂಬ ಭೇದವಿಲ್ಲದೆ ವೀರಶೈವರಾಗಿರುವುದನ್ನು ಕಂಡಿರುವ ಜಗದ್ಗುರುಗಳು ಇಬ್ಬರ ನಡುವಿನ ಕಂದರವನ್ನು ಅವಕಾಶ ಸಿಕ್ಕಾಗಲೆಲ್ಲಾ ಹೋಗಲಾಡಿಸಲು ಪ್ರಯತ್ನಿಸುತ್ತಿದ್ದಾರೆ. ಬುದ್ಧಿಜೀವಿಗಳೆನಿಸಿಕೊಂಡವರು ಇಲ್ಲಸಲ್ಲದ ಹೇಳಿಕೆಗಳನ್ನು ನೀಡಿ ಜನರನ್ನು ತಪ್ಪು ಹಾದಿಗೆಳೆದು ಸಮಾಜದ ಆರೋಗ್ಯವನ್ನು ಹಾಳುಮಾಡುವುದನ್ನು ಕಂಡು ಬೇಸರಿಸಿದ್ದಾರೆ, ಕೆಲವೊಮ್ಮೆ ಖಂಡಿಸಿಯೂ ಇದ್ದಾರೆ.

ಸದಾಕಾಲ ಮನುಕುಲದ ಹಿತವನ್ನೇ ಬಯಸುತ್ತಾ ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸಿದರೂ ಸಾಮಾನ್ಯ ಜನತೆಯ ಬದುಕನ್ನು ಗಮನಿಸುತ್ತಾ ಸಮಾಜದಲ್ಲಿ ನಡೆಯುತ್ತಿದ್ದ ಘಟನೆಗಳಿಗೆ ಸ್ಪಂದಿಸುತ್ತಾ–ಸಮನ್ವಯದ ಹಾದಿಯಲ್ಲೇ ಸಾಗಿ ಬರುತ್ತಿರುವವರು ಕಾಶೀ ಜಗದ್ಗುರುಗಳು.

ಸೊಲ್ಲಾಪುರದಲ್ಲಿ ಕನ್ನಡ ಮಿತ್ರ ಸಮಾಜದವರು ನಾಡಹಬ್ಬವನ್ನು 24–10–88ರಲ್ಲಿ ಏರ್ಪಡಿಸಿ ಅದರ ಉದ್ಘಾಟನೆ ಮಾಡಲು ಕಲಬುರ್ಗಿಯ ಸುಪ್ರಸಿದ್ಧ ಮಹಾದಾಸೋಹ ಪೀಠಾಧಿಪತಿ ಪೂಜ್ಯ ಶರಣಬಸವಪ್ಪ ಅಪ್ಪ ಅವರನ್ನು ಅಧ್ಯಕ್ಷತೆ ವಹಿಸಲು, ಹಾಲಕೆರೆ ಮಠಾಧೀಶರಾದ ರಾಜೇಂದ್ರ ಸ್ವಾಮಿಗಳನ್ನು ಮುಖ್ಯ ಅತಿಥಿಗಳಾಗಿ, ಗುಳೇದಗುಡ್ಡದ ಅಮರೇಶ್ವರ ಮಠಾಧೀಶ್ವರ ಷ॥ಬ್ರ॥ ಡಾ॥ ಚಂದ್ರಶೇಖರ ಶಿವಾಚಾರ್ಯರನ್ನು ಆಹ್ವಾನಿಸಿದ್ದರು. ಒಂದು ರೀತಿಯಲ್ಲಿ ಸಮನ್ವಯದ ವೇದಿಕೆಯನ್ನು ಏರ್ಪಡಿಸಿದ್ದರೆನ್ನಬಹುದು.

ಜಗದ್ಗುರುಗಳಾಗುವ ಮುನ್ನವೇ ಡಾ॥ ಚಂದ್ರಶೇಖರ ಶಿವಾಚಾರ್ಯರು ಸಮಾಜದ ಬಗ್ಗೆ ಮನುಷ್ಯ ಸಂಬಂಧಗಳ ಬಗ್ಗೆ ರಾಷ್ಟ್ರದ ಏಕತೆ ಬಗ್ಗೆ ಅನೇಕ ರೀತಿಯಲ್ಲಿ ಆಲೋಚನೆ ಮಾಡುತ್ತಿದ್ದುದು ಅವರ ಪ್ರವಚನಗಳಲ್ಲಿ ಕಾಣಬರುತ್ತಿತ್ತು.

ಆಶೀರ್ವಾದ

ಮೇಲಿನ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಧರ್ಮವಿರುವುದು ಮಾನವನ ಕಲ್ಯಾಣಕ್ಕಾಗಿಯೇ ಹೊರತು ಅಹಂಕಾರಕ್ಕಲ್ಲ ಎಂದು ಈಗ ಸುಮಾರು 26 ವರ್ಷಗಳ ಹಿಂದೆಯೆ ಹೇಳಿದ ಮಾತುಗಳಲ್ಲಿ ಸಮಾಜದ ಬಗ್ಗೆ, ಧಾರ್ಮಿಕಾಚರಣೆಗಳ ಬಗ್ಗೆ ಗುರುಗಳಿಗಿರುವ ಕಾಳಜಿಯನ್ನು ಕಾಣಬಹುದು.

'ಧರ್ಮ ಸಮನ್ವಯ, ಭಾವೈಕ್ಯ ಅಗತ್ಯ'

ಪ್ರಜಾವಾಣಿ, 31–5–1991

ಧಾರವಾಡದ ಬಳಿ ಚಂದನವಟ್ಟೆ ಗ್ರಾಮದಲ್ಲಿ ಒಂದು ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರುಗಳು ಧರ್ಮೋಪದೇಶ ಮಾಡುತ್ತಾ ದೇವರು ಕೇವಲ ಮಂದಿರ–ಮಸೀದಿಗಳಿಗೆ ಮಾತ್ರ ಸೀಮಿತವಾಗಿರಬಾರದು. ಅವನು ಮಾನವನ ದೇಹವೆಂಬ ದೇವಾಲಯದಲ್ಲಿ ಪ್ರವೇಶ ಪಡೆದು ಪ್ರತಿಷ್ಠಾಪಿಸಲ್ಪಡಬೇಕು. ದೇವರು ನಿರಂತರ ನಿವಾಸ ಮಾಡುವ ತಾಣಗಳೇ ಕ್ಷೇತ್ರಗಳು. ಈ ದಿಶೆಯಲ್ಲಿ ಪ್ರತಿಯೊಬ್ಬ ಮಾನವನ ಒಂದೊಂದು ದೇಹವೂ ಪುಮ್ಯಕ್ಷೇತ್ರಗಳಾಗಬೇಕೆಂದು ಹೇಳಿ ಸಮಾಜದ ಆರೋಗ್ಯ ಸುಧಾರಿಸಬೇಕು. ಮನುಷ್ಯ ಮನುಷ್ಯರ ನಡುವೆ ಸಾಮರಸ್ಯ ಬೆಳೆಯಬೇಕು. ರಾಷ್ಟ್ರೀಯ ಭಾವೈಕ್ಯ ಮತ್ತು ಧರ್ಮ ಸಮನ್ವಯಗಳ ಸೌಹಾರ್ದಪೂರ್ಣ ಭಾವನೆಗಳೆಲ್ಲಕ್ಕೂ ಸ್ಪಂದಿಸುವಂತಹ ವಿಶಾಲ ಮನೋಭಾವನೆಯನ್ನು ಹೊಂದಬೇಕೆನ್ನುವುದೇ ಇಂದಿನ ನಮ್ಮ ದರ್ಮ ಪ್ರಸಾರ ಕಾರ್ಯಕ್ರಮದ ಪ್ರಮುಖ ಆದ್ಯತೆಯಾಗಿದೆ ಎಂದರು. ಮುಖ್ಯ ಅತಿಥಿಯಾಗಿದ್ದ ಪೂಜ್ಯ ಡಾ. ಚಂದ್ರಶೇಖರ ಶಿವಾಚಾರ್ಯರು ಧರ್ಮವಿರುವುದು ಮಾನವನ ಕಲ್ಯಾಣಕ್ಕಾಗಿಯೇ ಹೊರತು ಅಹಂಕಾರಕ್ಕಲ್ಲ ಎಂದರು.

ಆದರ್ಶಪ್ರಾಯವಾದ ರಾಷ್ಟ್ರೀಯ ಭಾವೈಕ್ಯ ಮತ್ತು ಧರ್ಮ ಸಮನ್ವಯಗಳ ಸೌಹಾರ್ದಪೂರ್ಣ ಭಾವನೆಗಳ ಜೊತೆ ಜನತೆ ಸ್ಪಂದಿಸುವಂತಹ ವಿಶಾಲ ಮನೋಭಾವನೆಯನ್ನು ಹೊಂದಬೇಕೆನ್ನುವುದೇ ಇಂದಿನ ನಮ್ಮ ಧರ್ಮ ಪ್ರಸಾರ ಕಾರ್ಯಕ್ರಮದ ಪ್ರಮುಖ್ಯ ಆದ್ಯತೆಯಾಗಿದೆ ಎಂದು ಕಾಶೀ ಜ್ಞಾನಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

22–5–2002 : ಗದಗ್‌ನಲ್ಲಿ ವಟುಗಳ ದೀಕ್ಷಾ ಸಮಾರಂಭ ಶಾಸ್ತ್ರೋಕ್ತವಾಗಿ ನೆರವೇರಿದ ನಂತರ ತಮ್ಮ ಆಶೀರ್ವಚನದಲ್ಲಿ ವೀರಶೈವ ಶಾಸ್ತ್ರ ಗ್ರಂಥಗಳಲ್ಲಿ (ಆಗಮಗಳಲ್ಲಿ) ಹೇಳಿರುವ ಎಲ್ಲಾ ರೀತಿಯ ಸಂಸ್ಕಾರಗಳನ್ನು–ಲಿಂಗಧಾರಣೆ, ದೀಕ್ಷೆ, ಪೂಜಾ ವಿಧಾನಗಳು–ಮಂತ್ರಗಳು, ವಿವಾಹ, ಅಂತ್ಯೇಷ್ಠಿ, ಹೀಗೆ ಎಲ್ಲಾ ಸಂಸ್ಕಾರಗಳ ಬಗ್ಗೆ ವಿವರಿಸಿದ್ದಲ್ಲದೆ ವೀರಶೈವ ಧರ್ಮ ತತ್ತ್ವನಿಷ್ಠವಾದ ಧರ್ಮವೇ ಹೊರತು ವ್ಯಕ್ತಿನಿಷ್ಠವಾಗಿಲ್ಲ ಎಂದು ಸುದ್ದಿಗಾರರೊಂದಿಗೆ ಮಾತಾಡಿದರು.

ಬಸವಣ್ಣ ಬೋಧಿಸಿದ್ದು ವೀರಶೈವ ಧರ್ಮ, ಬಸವಧರ್ಮವಲ್ಲ : ಕಾಶೀ ಶ್ರೀಗಳು

ವಿಜಯ ಕರ್ನಾಟಕ, 23–5–2002

ಗದಗ, ಮೇ22–ಬಸವಣ್ಣ ಬೋಧಿಸಿದ್ದು, ವೀರಶೈವ ಧರ್ಮವೇ ವಿನಃ ಬಸವಧರ್ಮವಲ್ಲ. ವೀರಶೈವ ಧರ್ಮವು ತತ್ವಕ್ಕೆ ಪ್ರಾಧಾನ್ಯತೆ ಕೊಟ್ಟಿದೆಯೇ ಹೊರತು ವ್ಯಕ್ತಿ ವಿಶೇಷಕ್ಕೆ ಮಹತ್ವ ಕೊಟ್ಟಿಲ್ಲ. ಒಂದು ವೇಳೆ ನಿತ್ಯ ವ್ಯಕ್ತಿಯ ವಿಶೇಷದ ಮೇಲೆ ಧರ್ಮವನ್ನು ಕಟ್ಟುತ್ತಾ ಹೋದರೆ ಆ ಧರ್ಮವು ಛಿದ್ರ ಛಿದ್ರವಾಗಿ ಹೋಗುವುದು ನಿಶ್ಚಿತ ಎಂದು ಕಾಶೀ ಪೀಠದ ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ಹೇಳಿದರು.

ಅವರು ನಗರದ ಸಂಸ್ಕೃತ ವೇದ, ಆಗಮ ಪಾಠಶಾಲೆಯಲ್ಲಿ ನಡೆದ ವಟುಗಳ ದೀಕ್ಷಾ ಸಮಾರಂಭದ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು.

ವೀರಶೈವ ಧರ್ಮವನ್ನು ಸಂಸ್ಥಾಪಿಸಿದ ಜಗದ್ಗುರು ಪಂಚಾಚಾರ್ಯರಾಗಲೀ, ಆ ಧರ್ಮದ ಉದ್ಧಾರಕರಾದ ಬಸವಾದಿ ಶರಣರಾಗಲಿ ಎಲ್ಲಿಯೂ ತಮ್ಮ ಹೆಸರಿನಿಂದ ಧರ್ಮವನ್ನು ಉಲ್ಲೇಖಿಸಿಲ್ಲ. ಹೀಗಿರುವಾಗ ಬೇರೆ ಬೇರೆ ಶರಣರ ಹೆಸರಿನಿಂದ ಧರ್ಮಕ್ಕೆ ಹೆಸರಿವುದು ಕಪೋಲಕಲ್ಪಿತವೇ ವಿನಃ ಇದೊಂದು ಸಂವಿಧಾನವಲ್ಲ ಎಂದವರು ಹೇಳಿದರು.

ಶರಣರು ಬರೆದಿರುವ ವಚನವೆಂದರೆ ಅವು ಅವರ ಅನುಭಾವ ಸಾಹಿತ್ಯವಾಗಿವೆ. ಯಾವುದೇ ವಿಧಿ ವಿಧಾನಗಳನ್ನು ನೆರವೇರಿಸುವದಕ್ಕಾಗಿ ಅವರು ವಚನಗಳನ್ನು ಬರೆದಿಟ್ಟಿಲ್ಲ ಎಂದು ತಿಳಿಸಿದ ಅವರು, ಈಗಾಗಲೇ ವಿಶ್ವವಿದ್ಯಾನಿಲಯ ಮಟ್ಟದ ವಿದ್ವಾಂಸರು, ಸಂಶೋಧನೆ ಮಾಡಿ ಸಂಪಾದಿಸಿದ ವಚನಗಳನ್ನು ನೋಡಿದಾಗ, ಅವು ಸ್ಥಲಕಟ್ಟಿನ ಮೇಲೆ ಇರುವಂತಹವುಗಳಾಗಿವೆಯೇ ವಿನಃ ವಿಧಿ ವಿಧಾನ ಬೋಧಿಸುವ ವಚನಗಳೆಂದು ಎಲ್ಲಿಯೂ ಬೋಧಿಸಿದ್ದನ್ನು ನೋಡಲು ಸಾಧ್ಯವಿಲ್ಲ ಎಂದು ಅವರು ವಿವರಿಸಿದರು.

ಹಾಗೇನಾದರೂ ವಚನಕಾರರು ಬರೆದಿಟ್ಟಿದ್ದೇ ಆದಲ್ಲಿ ಅವುಗಳ ಶೀರ್ಷಿಕೆಯನ್ನು 'ಪೂಜಾ ವಿಧಾನದ ವಚನಗಳು' ಎಂಬುದಾಗಿ ಬೇರ್ಪಡಿಸಬೇಕಿತ್ತು. ಇಂದು ಮೌಲ್ಯವಿರುವ ಯಾವ ವಚನ ಗ್ರಂಥವನ್ನು ತೆಗೆದುಕೊಂಡರೂ ಎಲ್ಲಿಯೂ ಗ್ರಂಥವನ್ನು ಪೂಜಾವಿಧಾನದ ವಚನ ಎಂದು ಕಂಡು ಬರುವುದಿಲ್ಲ. ಅಲ್ಲಿ ಬರುವ ವಿಭಾಗವು ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರ ಹೇಯಸ್ಥಲ ಮುಂತಾದ 101 ಆಧ್ಯಾತ್ಮಿಕ ನಿಲುವುಗಳನ್ನು ಹೇಳಿದವುಗಳಾಗಿವೆಯೇ ವಿನಃ ಬೇರೆ ಲೌಕಿಕ ವಿಧಿ ವಿಧಾನಗಳನ್ನು ಅವು ಬೋಧಿಸುವದಿಲ್ಲ ಎಂದು ಕಾಶೀ ಶ್ರೀಗಳು ವಿವರಿಸಿದರು.

ಶರಣರ ಹೆಸರನ್ನು ಹೇಳಿ ಅವರು ಕಟ್ಟಿ ಹೇಳಿದ ಯಾವುದೇ ವಚನವನ್ನು ಆಚಾರ ವಿಚಾರ ಹಾಗೂ ವಿಧಾನಗಳಿಗೆ ಹೊಂದಿಸಿ ಹೇಳುತ್ತಿರುವ ಪ್ರಯತ್ನ ಶಾಸ್ತ್ರ ವಿರುದ್ಧವಾದ ಪ್ರಯತ್ನ. ಇದರಿಂದ ಸಮಾಜವನ್ನು ಒಗ್ಗೂಡಿಸುವ ಬದಲು ಅದನ್ನು ಒಡೆಯಲು ಯತ್ನಿಸಿದಂತಾಗುತ್ತದೆ ಎಂದು ಹೇಳಿದ ಅವರು, ಇತ್ತೀಚೆಗೆ ತಮ್ಮನ್ನು ಬಹಳಷ್ಟು ಸುಧಾರಿಸಿದವರೆಂದು ಹೇಳಿಕೊಳ್ಳುವ ಕೆಲ ಮಠಾಧೀಶರು ಸಮಾಜವನ್ನು ತಪ್ಪು ದಾರಿಗೆ ಎಳೆಯುತ್ತಿರುವದು ಸ್ಪಷ್ಟವಾಗಿ ಕಾಣುತ್ತಿದೆ ಎಂದು ತಿಳಿಸಿದರು.

ನಮ್ಮ ದೇಶದಲ್ಲಿ ಪರಿಸರದ ಸಮತೋಲನೆಗಾಗಿ ಕಾಲ ಕಾಲಕ್ಕೆ ಅನೇಕ ವಿಧವಾದ ಹೋಮ ಹವನಗಳನ್ನು ಮಾಡುತ್ತ ಬಂದಿರುವ ಪದ್ಧತಿ ರೂಢಿಯಲ್ಲಿದೆ. ಯಜ್ಞಗಳು ವಿಧಾನಗಳೆಂಬುದಾಗಿ ಅನೇಕ ವೈದಿಕ ವಿದ್ವಾಂಸರು ಇದನ್ನು ಸಾಬೀತು ಪಡಿಸಿದ್ದಾರೆ. ಸುಗಂಧ ದ್ರವ್ಯಗಳನ್ನು ಹಾಗೂ ತೇಗ ಮುಂತಾದ ಪದಾರ್ಥಗಳನ್ನು ಅಗ್ನಿಯಲ್ಲಿ ಸುಡುವುದರಿಂದ ಅವು ಸುಟ್ಟು ಭಸ್ಮವಾಗಿ ಹಾಳಾಗುತ್ತವೆ ಎಂಬ ಪ್ರಚಾರ ಸರಿಯಾದುದಲ್ಲ ಎಂದು ಶ್ರೀಗಳು ಹೇಳಿದರು.

ಅಗ್ನಿಗೆ ಅರ್ಪಿಸಿದ ವಸ್ತುವನ್ನು ಅಗ್ನಿ ತಾನು ಸ್ವೀಕರಿಸಿ ಅದರ ಸುಗಂಧತೆಯನ್ನು ವಾಯುವಿಗೆ ಕೊಟ್ಟು, ಈ ವಾಯು ಮಂಡಲವನ್ನು ಪರಿಶುದ್ಧಗೊಳಿಸುವ ಕಾರ್ಯ

ಮಾಡುತ್ತದೆ. ಆದ್ದರಿಂದ ಯಜ್ಞಗಳು ಕಂದಾಚಾರವಲ್ಲ, ಅದೊಂದು ವೈಜ್ಞಾನಿಕವಾದ ಪರಿಸರ ನಿರ್ಮಲಗೊಳಿಸುವ ಪದ್ಧತಿ ಎಂಬುದನ್ನು ಇಂದಿನ ಆಧುನಿಕ ಮಠಾಧೀಶರು ತಿಳಿದುಕೊಳ್ಳಬೇಕೆಂದು ಕಾಶೀ ಶ್ರೀಗಳು ಎಚ್ಚರಿಸಿದರು.

ಇಂದು ಯಜ್ಞಕ್ಕೆ ವಿರೋಧ ಮಾಡುವ ಮಠಾಧಿಪತಿಗಳು ತಮ್ಮ ಇಷ್ಟಲಿಂಗ ಪೂಜೆಯಲ್ಲಿ ತುಪ್ಪದ ದೀಪ ಹಚ್ಚುವದಿಲ್ಲವೇ? ಅಗ್ನಿಯಲ್ಲಿ ಧೂಪವನ್ನು ಹಾಕುವದಿಲ್ಲವೇ? ಅದು ಒಂದು ತರಹದ ಯಜ್ಞವೇ. ಪ್ರಮಾಣದಲ್ಲಿ ಯಜ್ಞ ದೊಡ್ಡದಾದರೆ ಪೂಜೆಯಲ್ಲಿ ಯಜ್ಞ ಸಣ್ಣದು. ಹೀಗಿರುವಾಗ ಅನಾವಶ್ಯಕವಾಗಿ ವಿವಾದವನ್ನೆಬ್ಬಿಸುವ ಹೇಳಿಕೆ ಹೇಳುವ ಮೂಲಕ ಸಮಾಜದಲ್ಲಿ ಗೊಂದಲ ಎಬ್ಬಿಸುವ ಕಾರ್ಯವನ್ನು ಯಾರೂ ಮಾಡಬಾರದು ಎಂದವರು ಹೇಳಿದರು.

ವೀರಶೈವ ಧರ್ಮ ಹಿಂದೂ ಧರ್ಮದ ಅವಿಭಾಜ್ಯ ಅಂಗವಾಗಿದ್ದು, ಈ ಧರ್ಮದ ವಿವಾಹ ಸಮಾರಂಭಗಳಲ್ಲಿ ವಧೂವರರಿಗೆ ಶುಭ ಕೋರಿ ಅಕ್ಷತೆ ಹಾಕುವ ಪದ್ಧತಿ ರೂಢಿಯಲ್ಲಿದೆ. ಈ ಅಕ್ಷತೆ ಹಾಕುವ ಹಿಂದಿನ ಭಾವನೆ ನೂತನ ವಧೂ–ವರರ ಭಾವೀ ಗೃಹಸ್ಥ ಜೀವನ ಅಕ್ಷತವಾಗಿ, ಅಖಂಡವಾಗಿ ಜೀವನದುದ್ದಕ್ಕೂ ಸಾಗಲೆಂಬುದರ ಶುಭ ಹಾರೈಕೆ ಹಾಗೂ ಸಂಕೇತವಾಗಿದೆ ಎಂದು ಅವರು, ವಧೂ–ವರರ ಮಸ್ತಕದ ಮೇಲೆ ಹಾಕುವ ಅಕ್ಷತೆಕಾಳು ನೆಲಕ್ಕೆ ಬಿದ್ದರೂ ಆ ಸಮಾರಂಭದಲ್ಲಿ ಪಾಲ್ಗೊಂಡಿರುವ ಆಯಾ ಕುಟುಂಬದ ಆಯಗಾರರು ಅವುಗಳನ್ನು ಆರಿಸಿಕೊಂಡು ತಮ್ಮ ನಿತ್ಯ ಜೀವನದಲ್ಲಿ ಉಪಯೋಗಿಸುತ್ತಾರೆ ಎಂದರು.

ಒಂದು ವೇಳೆ ಅಕ್ಷತೆ ಅನ್ನದ ಪ್ರತೀಕ, ಇದನ್ನು ಯಾರೂ ತುಳಿಯಬಾರದು ಎಂಬುವ ವಿಚಾರ ಹೇಳುವುದಾದರೆ, ಯಾವುದೇ ಆಹಾರ ಧಾನ್ಯಗಳು ತುಳಿಸಿಕೊಳ್ಳದೇ ನಮ್ಮ ಜೀವನಕ್ಕೆ ಉಪಯೋಗಕ್ಕೆ ಬರುವುದಿಲ್ಲ. ರೈತ ತನ್ನ ಎತ್ತುಗಳ ಕಾಲುಗಳ ಮೂಲಕ ರಾಶಿ ಮಾಡುತ್ತಾನೆ. ಇಂದು ಅದೇ ಪರಂಪರೆ ಮುಂದುವರಿದು ವಾಹನಗಳ ಮೂಲಕ, ಯಂತ್ರಗಳ ಮೂಲಕ ಆಹಾರಧಾನ್ಯ ತುಳಿಸಿಕೊಂಡೇ ಸಿದ್ಧಗೊಳ್ಳುತ್ತಿದೆ ಎಂದವರು ವಿವರಿಸಿದರು.

ರೈತರ ಎತ್ತುಗಳು ಹಾಗೂ ವಾಹನಗಳ ತುಳಿತದಿಂದ ಸಿದ್ಧಗೊಳ್ಳುವ ಆಹಾರ ಧಾನ್ಯವನ್ನೇ ತೊಳೆದುಕೊಂಡು ಪ್ರಸಾದ ಮಾಡುವ ಪದ್ಧತಿ ಇದೆ. ಆದಕಾರಣ ವಿವಾಹ ಸಮಾರಂಭದಲ್ಲಿ ಹಾಕುವ ಅಕ್ಷತೆಗಳು ತುಳಿಯಲ್ಪಟ್ಟರೂ ಅವು ಇನ್ನೊಬ್ಬರ ದೈನಂದಿನ ಜೀವನಕ್ಕೆ ಉಪಯೋಗವಾಗುತ್ತವೆ ಎಂದು ಕಾಶೀಶ್ರೀಗಳು ಹೇಳಿದರು.

ಇದಕ್ಕೆ ವ್ಯತಿರಿಕ್ತವಾಗಿ ವಿವಾಹ ಸಮಾರಂಭದಲ್ಲಿ ವಧೂ–ವರರ ಮಸ್ತಕದ ಮೇಲೆ ಪತ್ರಿ–ಪುಷ್ಪಗಳನ್ನು ಹಾಕಿದಾಗ, ಆ ಪತ್ರಿ ಪುಷ್ಪಗಳು ಸಮಾರಂಭದಲ್ಲಿ ಪಾಲ್ಗೊಂಡವರ ತುಳಿತಕ್ಕೊಳಗಾಗುತ್ತವೆ. ಹೀಗೆ ತುಳಿಯಲ್ಪಟ್ಟ ಆ ಪತ್ರಿ–ಪುಷ್ಪಗಳು ಯಾವ ಕಾರಣಕ್ಕೂ ಉಪಯೋಗಕ್ಕೆ ಬರುವದಿಲ್ಲ. ಪತ್ರಿ–ಪುಷ್ಪಗಳನ್ನು ದೇವರ ಪೂಜೆಗಾಗಿ ಉಪಯೋಗಿಸುವ ಪದ್ಧತಿ ಸನಾತನ ಕಾಲದಿಂದ ರೂಢಿಯಲ್ಲಿದೆಯೇ ವಿನಃ, ವಧೂ–ವರರ ಮಸ್ತಕದ ಮೇಲೆ ಹಾಕಬೇಕೆಂಬ ಸಂವಿಧಾನ ಯಾವುದೇ ವೀರಶೈವ ಗ್ರಂಥಗಳಲ್ಲಿ ಇಲ್ಲ ಎಂದು ಕಾಶಿ ಶ್ರೀಗಳು ಸ್ಪಷ್ಟಪಡಿಸಿದರು.

ಇತ್ತೀಚೆಗೆ ಕೆಲವು ಮಠಾಧಿಪತಿಗಳು ಬಸವ ಧರ್ಮದ ಪ್ರಕಾರ ವಿವಾಹ ಮಾಡಬೇಕೆಂಬ ಹಿನ್ನೆಲೆಯಲ್ಲಿ ವಧು–ವರರ ಮಸ್ತಕದ ಮೇಲೆ ಪತ್ರಿ–ಪುಷ್ಪಗಳನ್ನು ಹಾಕಬೇಕೆಂದು ಬೋಧಿಸುತ್ತಿರುವುದು ಅತ್ಯಂತ ಸೋಜಿಗದ ವಿಷಯ ಎಂದು ತಿಳಿಸಿದ ಕಾಶೀ ಜಗದ್ಗುರುಗಳು, ಆಧುನಿಕ ಮರಿಬಸವಣ್ಣನವರಂತೆ ಸಮಾಜದಲ್ಲಿ ವರ್ತಿಸುವ ಇಂದಿನ ಕೆಲ ಮಠಾಧೀಶರು ಇದನ್ನು ಅರಿತು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕೆಂದರು.

27–7–2012

ಬೆಳಗಾಂ ನಗರದಲ್ಲಿ ವೀರಶೈವದ ಒಳಪಂಗಡವಾದ ಪಂಚಮಸಾಲಿಗಳ ಅಧಿವೇಶನ ನಡೆಯಿತು. ಸಮಾಜದ ಮುಖಂಡ ಎಸ್.ಬಿ.ಸಿದ್ನಾಳ ಅವರು ಪಂಚಮಸಾಲಿ ಪಂಗಡವನ್ನು ವೀರಶೈವದಿಂದ ಪ್ರತ್ಯೇಕಿಸುವುದಾಗಿ 2002ರಲ್ಲಿ ಘೋಷಿಸಿದ್ದರು. ಸಮನ್ವಯದ ಹಾದಿಯಲ್ಲಿ ಸಮಾಜವನ್ನು ಒಂದುಗೂಡಿಸುವ ಪ್ರಯತ್ನದಲ್ಲಿ ತೊಡಗಿರುವ ಕಾಶೀ ಜಗದ್ಗುರುಗಳು ಈ ಹೇಳಿಕೆಯನ್ನು ದಿನಪತ್ರಿಕೆಯಲ್ಲಿ ಓದಿ ವಿಷಾದಪಟ್ಟರು. ಇದಕ್ಕೆ ತಕ್ಷಣವೇ ಚಿಕಿತ್ಸೆ ನೀಡಬೇಕೆಂಬ ಆಲೋಚನೆಯಿಂದ ಗದಗ್‌ನಲ್ಲಿ ಆಷಾಢ ಮಾಸದ ಕಾರ್ಯಕ್ರಮದ ನಡುವೆ 27–7–2002ರಂದು ಲಿಖಿತ ಹೇಳಿಕೆಯನ್ನು ತಯಾರಿಸಿ ಒಂದು ಪತ್ರಿಕಾಗೋಷ್ಠಿಯನ್ನು ಕರೆದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಜಗದ್ಗುರುಗಳ ಈ ಲಿಖಿತ ಹೇಳಿಕೆಯು ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟಗೊಂಡು ಒಂದು ಎಚ್ಚರಿಕೆಯ ಗಂಟೆ ಬಾರಿಸಿದರು. ಜಗದ್ಗುರುಗಳು ಲಿಖಿತ ಹೇಳಿಕೆಯನ್ನು ಯಥಾವತ್ತಾಗಿ ಕೊಡಲಾಗಿದೆ.

ವೀರಶೈವ ಪಂಚಮಸಾಲಿ ಪಂಗಡದ ಪ್ರತ್ಯೇಕ ಮನೋಭಾವನೆ ಸಲ್ಲ–ಕಾಶೀ ಶ್ರೀಗಳು

ಗದಗ 27–7–03 ಸನಾತನವಾದ ವೀರಶೈವ ಧರ್ಮದ ಒಂದು ಬೃಹತ್ ಒಳಪಂಗಡವಾದ ಪಂಚಮಸಾಲಿ ಸಮಾಜವು ಪ್ರತ್ಯೇಕತೆಯ ಮನೋಭಾವನೆಯನ್ನು ತಾಳುವುದು ಆರೋಗ್ಯಕರವಾದ ಬೆಳವಣಿಗೆ ಅಲ್ಲ ಎಂಬ ವಿಚಾರವನ್ನು ಶ್ರೀ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ಇಂದು ಗದಗ ನಗರದಲ್ಲಿ ಏರ್ಪಡಿಸಿದ ಪತ್ರಿಕಾ ಗೋಷ್ಠಿಯಲ್ಲಿ ವ್ಯಕ್ತಪಡಿಸಿದರು.

ಇತ್ತೀಚೆಗೆ ಬೆಳಗಾಂವ ನಗರದಲ್ಲಿ ನಡೆದ ಪಂಚಮಸಾಲಿ ಸಮಾಜದ ಅಧಿವೇಶನದಲ್ಲಿ ಸಮಾಜದ ಮುಖಂಡರಾದ ಮಾಜಿ ಸಂಸದ ಎಸ್.ಬಿ. ಸಿದ್ನಾಳ ಅವರು ಪಂಚಮಸಾಲಿ ಸಮಾಜವನ್ನು ಪ್ರತ್ಯೇಕಿಸುವುದಾಗಿ ಘೋಷಿಸಿದರೆನ್ನಲಾದ ಹೇಳಿಕೆಯು ದಿನಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವುದನ್ನು ಕಂಡು ವಿಷಾದ ವ್ಯಕ್ತಪಡಿಸಿದ ಶ್ರೀ ಜಗದ್ಗುರುಗಳವರು, ಈ ರೀತಿ ತಮ್ಮ ವಿಚಾರ ವ್ಯಕ್ತಪಡಿಸಿದ್ದಾರೆ.

ವೀರಶೈವ ಮಠಾಧಿಪತಿಗಳಾಗಲಿ ಮತ್ತು ಅಖಿಲ ಭಾರತ ವೀರಶೈವ ಮಹಾಸಭೆ ಆಗಲಿ ವೀರಶೈವರ ಒಳಪಂಗಡಗಳನ್ನು ತೊಡೆದುಹಾಕಿ ಸಮಗ್ರ ವೀರಶೈವರ ಒಕ್ಕೂಟಕ್ಕಾಗಿ ಪ್ರಯತ್ನಿಸುತ್ತಿರುವ ಈ ಸೂಕ್ಷ್ಮ ಕಾಲದಲ್ಲಿ ಒಂದು ಜವಾಬ್ದಾರಿ ಸ್ಥಾನದಲ್ಲಿರುವ ಎಸ್.ಬಿ. ಸಿದ್ನಾಳ ಅವರು ವೀರಶೈವ ಮಠಾಧಿಪತಿಗಳಿಗೆ ಹಾಗೂ ವೀರಶೈವ ಮಹಾಸಭೆಗೆ ಹಗುರವಾಗಿ ಮಾತನಾಡಿರುವುದು ಎಲ್ಲರಿಗೂ ನೋವನ್ನುಂಟುಮಾಡಿದೆ.

ವೀರಶೈವ ಮಠಾಧಿಪತಿಗಳೆಲ್ಲರೂ ಬಡವ, ಬಲ್ಲಿದ ಎಂಬ ಮನೋಭಾವನೆಯನ್ನು ತಾಳಲಾರದೇ ಅಪೇಕ್ಷಪಟ್ಟ ಪ್ರತಿಯೊಬ್ಬ ವೀರಶೈವರ ಮನೆಗೆ ಹೋಗಿ ತಮ್ಮ ಪೂಜಾದಿಗಳನ್ನು ಪೂರೈಸಿ ಭಕ್ತಾದಿಗಳಿಗೆ ಆಶೀರ್ವದಿಸುತ್ತಿರುವುದು ಸರ್ವರಿಗೂ ವಿಧಿತವಾದ ವಿಷಯ. ಹೀಗಿರುವಾಗ ಸರ್ವ ಮಠಾಧಿಪತಿಗಳಿಗೆ ಸಾಮೂಹಿಕವಾಗಿ ದೋಷಾರೋಪಣೆ ಮಾಡುತ್ತಿರುವುದು ಅಸಮಂಜಸ.

ಜನಗಣತಿಯಲ್ಲಿ ವೀರಶೈವ, ಲಿಂಗಾಯತ ಎಂಬುದಕ್ಕೆ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆಯಲು ಸುಮಾರು ವರ್ಷಗಳಿಂದ ಸಮಸ್ತ ವೀರಶೈವ ಮಠಾಧಿಪತಿಗಳು ಹಾಗೂ ಅಖಿಲ ಭಾರತ ವೀರಶೈವ ಮಹಾಸಭೆಯವರು ಪ್ರಯತ್ನಿಸುತ್ತಿದ್ದರೂ ಇನ್ನೂ ಸಫಲತೆ ದೊರೆಯದ ಈ ಕಾಲದಲ್ಲಿ ಪಂಚಮಸಾಲಿ ಒಳಪಂಗಡಕ್ಕೆ

ಪ್ರತ್ಯೇಕವಾದ ಮಾನ್ಯತೆಯನ್ನು ದೊರಕಿಸಿಕೊಳ್ಳುವುದು ಅಷ್ಟೊಂದು ಸುಲಭವಾದದ್ದಲ್ಲ ಎಂಬ ವಿಚಾರವನ್ನು ಮಾಜಿ ಸಂಸದರು ತಿಳಿದುಕೊಂಡರೆ ಸಾಕು.

ವೀರಶೈವ ಮಠಾಧಿಪತಿಗಳು ವೀರಶೈವ ಧರ್ಮದ ಒಳಪಂಗಡದ ಸರ್ವ ಭಕ್ತರನ್ನು ಸಮಾನ ದೃಷ್ಟಿಯಿಂದ ನೋಡುತ್ತ ಬಂದಿದ್ದಾರೆ ಹಾಗೂ ವೀರಶೈವ ಸಮಾಜಕ್ಕೆ ಆಗುತ್ತಿರುವ ರಾಜಕೀಯ ಅನ್ಯಾಯವನ್ನು ಯಾವ ಮಠಾಧೀಶ್ವರರೂ ಸಹಿಸಲಾರರು. ವೀರಶೈವ ಮಠಾಧಿಪತಿಗಳಲ್ಲಿ ಸೈದ್ಧಾಂತಿಕವಾದ ಅನೇಕ ಅಭಿಪ್ರಾಯಗಳು ಇದ್ದರೂ, ಸಮಗ್ರ ಸಮಾಜದ ಹಿತದೃಷ್ಟಿಯಿಂದ ನಾವು ನಮ್ಮೆಲ್ಲ ಭಿನ್ನ ವಿಚಾರಗಳನ್ನು ಬದಿಗಿಟ್ಟು ಒಂದುಗೂಡಿ ಸಮಾಜಕ್ಕೆ ಮಾರ್ಗದರ್ಶನ ಮಾಡಲು ಸದಾ ಸಿದ್ಧರಾಗಿದ್ದೇವೆ ಎಂಬ ವಿಚಾರವನ್ನು ಶ್ರೀಗಳು ವ್ಯಕ್ತಪಡಿಸಿದರು.


ಕಾರಣ ಸಿದ್ನಾಳ ಅವರು ತಮ್ಮ ಪ್ರತ್ಯೇಕತೆಯ ಮನೋಭಾವನೆಯನ್ನು ಕೈಬಿಟ್ಟು ಮೂಲ ಪ್ರವಾಹದಲ್ಲಿಯೇ ಹೊಂದಿಕೊಂಡು ಪಂಚಮಸಾಲಿ ಸಮಾಜದ ಅಭಿವೃದ್ಧಿಯ ಜೊತೆಗೆ ಸಮಸ್ತ ವೀರಶೈವ ಸಮಾಜದ ಅಭಿವೃದ್ಧಿಗೆ ಉದಾತ್ತ ಮನೋಭಾವನೆಯನ್ನು ತಾಳಬೇಕು. ಈ ವಿಚಾರವಾಗಿ ಸಮಾಜದ ಮುಖಂಡರೊಂದಿಗೆ ಚರ್ಚಿಸಲು ತಾವು ಸದಾ ಸಿದ್ಧರೆಂಬ ವಿಚಾರವನ್ನು ಜಗದ್ಗುರುಗಳವರು ವ್ಯಕ್ತಪಡಿಸಿದರು.

ಧಾರವಾಡದಲ್ಲಿರುವ ಮುರುಘಾಮಠ ವಿರಕ್ತ ಪರಂಪರೆಗೆ ಸೇರಿದ್ದು. ಈ ಮಠದ ಸ್ವಾಮಿಗಳಾದ ಶ್ರೀ ಮಹಾಂತ ಸ್ವಾಮಿಗಳು ತಮ್ಮ ಎಂಬತ್ತೊಂದನೆಯ ವರ್ಷದಲ್ಲಿ 25–6–1993ರಲ್ಲಿ ಧಾರವಾಡದಲ್ಲಿ ಲಿಂಗೈಕ್ಯರಾದರು. ಇವರಿಗೆ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಮೇಲೂ ಅಪಾರ ಶ್ರದ್ಧಾಭಾವನೆಗಳಿತ್ತು. ಈ ರೀತಿಯ ಸ್ವಭಾವದವರೆಂದು ಕಾಶೀ ಜಗದ್ಗುರುಗಳು ತಿಳಿದಿದ್ದರಿಂದಲೇ ಅವರು ಲಿಂಗೈಕ್ಯರಾದ ವಿಷಯ ತಿಳಿದ ಕೂಡಲೆ ಶ್ರೀ ಮುರುಘಾಮಠಕ್ಕೆ ತೆರಳಿ ಸಂತಾಪ ವ್ಯಕ್ತಪಡಿಸಿದರು. ಮನುಷ್ಯನ ಒಳ್ಳೆಯ ಗುಣಗಳನ್ನು ಗುರುತಿಸುವಲ್ಲಿ ಜಗದ್ಗುರುಗಳು ಮೊದಲಿಗರಾಗಿರುವರು.



ಶ್ರೀ ರಂಭಾಪುರಿ ಶ್ರೀಗಳು | ಶ್ರೀ ಉಜ್ಜಯಿನಿ ಶ್ರೀಗಳು | ಶ್ರೀ ಕೇದಾರ ಶ್ರೀಗಳು | ಶ್ರೀಶೈಲ ಶ್ರೀಗಳು | ಶ್ರೀ ಕಾಶಿ ಶ್ರೀಗಳು

ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವವನ್ನು ಭಕ್ತರು ಏರ್ಪಡಿಸುವಾಗ ಯಾವುದೇ ಗ್ರಾಮವಾಗಿರಬಹುದು ಅಥವಾ ನಗರವಾಗಿರಬಹುದು–ಅದರ ಏಳ್ಗೆಗಾಗಿ ಸಾಮಾಜಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಇದಕ್ಕೆ ಜಗದ್ಗುರುಗಳೈವರ ಸಮ್ಮತಿಯನ್ನು ಭಕ್ತರು ಪಡೆದುಕೊಳ್ಳುತ್ತಿದ್ದರು. ಅದೇ ರೀತಿ ಹುಬ್ಬಳ್ಳಿ ಬಳಿಯ ನೂಲ್ವಿ ಗ್ರಾಮದಲ್ಲಿ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವದ ಅಂಗವಾಗಿ 11–4–1993ರಂದು ಪೇಜಾವರ ಮಠದ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳವರನ್ನು ಮಾನವ ಧರ್ಮ ಮಹಾಮಂಟಪ ಉದ್ಘಾಟನೆ ಹಾಗೂ ವೀರಶೈವ ಧರ್ಮಗೋಷ್ಠಿ ಉದ್ಘಾಟನೆ ಮಾಡಲು ಆಹ್ವಾನಿಸಿದ್ದು, ಮರುದಿನ



ತಾ॥ 11-4-93 ನೇ ರವಿವಾರ ಬೆಳಿಗ್ಗೆ 10 ಘಂ.ಗೆ

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ

ಉದ್ಘಾಟನೆ

ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ

ಮಾಜೀ ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ, ಬೆಂಗಳೂರು. ಇವರಿಂದ

ಅತಿಥಿಗಳು

ಡಾ॥ ಜೀವರಾಜ ಆಳ್ವ ಶಾಸಕರು

ಕಾರ್ಯಾಧ್ಯಕ್ಷರು, ಕರ್ನಾಟಕ ಪ್ರದೇಶ ಜನತಾ ದಳ, ಬೆಂಗಳೂರು.

ಸಾಯಂಕಾಲ 7.00 ಘಂಟೆಗೆ

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ದಿವ್ಯ ಸನ್ನಿಧಾನದಲ್ಲಿ

ಮಾನವ ಧರ್ಮ ಮಹಾ ಮಂಟಪದ ಉದ್ಘಾಟನೆ

ಹಾಗೂ

ವೀರಶೈವ ಧರ್ಮ ಗೋಷ್ಠಿ


ಮಾನವ ಧರ್ಮ ಮಹಾಮಂಟಪದ ಉದ್ಘಾಟನೆ :

ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳವರು,

ಪೇಜಾವರಮಠ ಉಡುಪಿ

ಪೇಜಾವರ ಶ್ರೀಗಳು | ಸರ್ಧಾರ ನಾರಾಯಣ ಸಿಂಗ್

12–4–1993ರಂದು ಪಂಚಪೀಠಾಧೀಶ್ವರರ ದಿವ್ಯ ಸಾನ್ನಿಧ್ಯದಲ್ಲಿ ಸರ್ವ ಧರ್ಮ ಸಮ್ಮೇಳನ ರಾಷ್ಟ್ರೀಯ ಭಾವೈಕ್ಯ ಗೋಷ್ಠಿ ಏರ್ಪಡಿಸಿದ್ದರು. ಮುಸ್ಲಿಂ ಧರ್ಮ ಕುರಿತು ಡಾ. ಏಜಾಸುದ್ದೀನ ಅಶ್ರಫಿ ಅವರು, ಕ್ರಿಶ್ಚಿಯನ್ ಧರ್ಮ ಕುರಿತು ರೆ. ಬಿಷಪ್ ವಸಂತ ದಂಡಿನ ಅವರು, ಸಿಕ್ ಧರ್ಮ ಕುರಿತು ಸರ್ದಾರ್ ನಾರಾಯಣಸಿಂಗ್ ಅವರು ಮಾತನಾಡಿದ್ದು–ಇಂತಹ ಕಾರ್ಯಕ್ರಮಗಳೆಲ್ಲಾ ಸಮಾಜದಲ್ಲಿನ ಸಮನ್ವಯತೆಯನ್ನು ಕಾಯುವ ಕಾರ್ಯಕ್ರಮಗಳಾಗಿದ್ದವು. ಈ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರುಗಳು ಪಾಲ್ಗೊಂಡಿದ್ದರು.


ತಾ॥ 12-4-1993 ನೇ ಸೋಮವಾರ

ಸಾಯಂಕಾಲ 6.00 ಘಂಟೆಗೆ

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ದಿವ್ಯ ಸನ್ನಿಧಾನದಲ್ಲಿ

ಸರ್ವಧರ್ಮ ಸಮ್ಮೇಳನ : ರಾಷ್ಟ್ರೀಯ ಭಾವೈಕ್ಯ ಗೋಷ್ಠಿ

ಸರ್ವಧರ್ಮ ಗುರುಗಳಿಂದ ಉಪನ್ಯಾಸ :

ಶ್ರೀ ಷ. ಬ್ರ. ಡಾ॥ ಮಹಾಂತ ಶಿವಾಚಾರ್ಯರು, ಹಿರೇಮಠ, ಮನಗೂಳಿ. - ವೀರಶೈವ ಧರ್ಮ

ಡಾ॥ ಐಜಾಸುದ್ದೀನ ಆಶ್ರಫಿ, ಬೆಂಗಳೂರು. - ಮುಸ್ಲಿಂ ಧರ್ಮ

ರೆ. ಬಿಷಪ್ ವಸಂತ ದಂಡಿನ, ಮಹಾ ಅಧ್ಯಕ್ಷರು, ದಕ್ಷಿಣ ಭಾರತ ಚರ್ಚುಗಳ ಮಹಾ ಮಂಡಳ ಮದ್ರಾಸ - ಕ್ರಿಶ್ಚಿಯನ್ ಧರ್ಮ

ಸರ್ಧಾರ ನಾರಾಯಣ ಸಿಂಗ್, ಅಧ್ಯಕ್ಷರು, ಗುರುನಾನಕ ಮಿಷನ್ ಕಮೀಟಿ, ಹುಬ್ಬಳ್ಳಿ

ರೆ. ಬಿಷಪ್ ವಸಂತ ದಂಡಿನ | ಡಾ॥ ಐಜಾಸುದ್ದೀನ ಆಶ್ರಫಿ

ಕೂಡಲಸಂಗಮದಲ್ಲಿ ಸರ್ವಧರ್ಮ ಸಮ್ಮೇಳನ

ಮನುಕುಲದ ಭಾವೈಕ್ಯತೆಗೆ ಕರೆ

ಸಂಯುಕ್ತ ಕರ್ನಾಟಕ 15–1–1195

14–1–1995ರಲ್ಲಿ ಕೂಡಲ ಸಂಗಮದಲ್ಲೊಂದು ಸರ್ವಧರ್ಮ ಸಮ್ಮೇಳನವನ್ನು ಹಾಗೂ ಭಾವೈಕ್ಯತಾ ಸಮಾವೇಶ ನಡೆದಾಗ ಪಂಚಪೀಠಾಧೀಶ್ವರರೂ ಅದರಲ್ಲಿ ಭಾಗಿಯಾಗಿದ್ದರು. ಆ ಸಂದರ್ಭದಲ್ಲಿ ಕಾಶೀ ಜಗದ್ಗುರುಗಳು ಈ ಸಮ್ಮೇಳನದ ಅಗತ್ಯತೆ, ಮನುಷ್ಯ ಮನುಷ್ಯರ ನಡುವೆ ಮೂಡಬೇಕಾಗಿರುವ ಭಾವೈಕ್ಯತೆಯ ಬಗ್ಗೆ ತಮ್ಮ ಆಶೀರ್ವಚನದಲ್ಲಿ ತಿಳಿಸುತ್ತಾ ಮನುಕುಲದ ಶಾಂತಿಯ ಅಗತ್ಯವನ್ನು ವಿವರಿಸಿದರು. ಬಹುದೊಡ್ಡ ಸಮಾವೇಶ, ಚಿತ್ರ ನಟ ಅಂಬರೀಷ, ರಾಜಕಾರಣಿಗಳು, ವಿದ್ವಾಂಸರು ಅನೇಕ ಮಠಗಳ ಸ್ವಾಮಿಜಿಗಳು ತುಂಬಿ ತುಳುಕುತ್ತಿದ್ದ ಸಭಾಂಗಣದಲ್ಲಿ ಜಗದ್ಗುರುಗಳು ಸಮನ್ವಯ ಭಾವೈಕ್ಯತೆ ಕುರಿತು ಮಾತನಾಡಿದ್ದು ಗಮನ ಸೆಳೆಯುವಂತಿತ್ತು.

ಜಾತಿ ಆಧಾರವಾಗಿರಿಸಿಕೊಂಡು ಜನತೆಯನ್ನು ಒಗ್ಗೂಡಿಸುವುದು ಅಸಾಧ್ಯ–ಕಾಶೀ ಶ್ರೀಗಳು

1–4–2002ರಲ್ಲಿ ಇದೇ ಆಧ್ಯಾತ್ಮಿಕ ವೇದಿಕೆಯಿಂದ ಜಗದ್ಗುರುಗಳು ಆಧ್ಯಾತ್ಮ ಮಾರ್ಗದಿಂದ ಹೊರತು ಜಾತಿ ಆಧಾರದ ಮೇಲೆ ಜನರನ್ನು ಒಂದುಗೂಡಿಸಲು ಸಾಧ್ಯವಿಲ್ಲ. ಮತೀಯ ಭಾವನೆಯನ್ನು ಬಿಟ್ಟು ರಾಷ್ಟ್ರೀಯ ಮನೋಭಾವನೆಯನ್ನು ಮೈಗೂಡಿಸಿಕೊಳ್ಳಲು ಕರೆ ನೀಡಿದರು. ಇಲ್ಲಿ ಜಗದ್ಗುರುಗಳು ಮಕರ ಸಂಕ್ರಾಂತಿಯಂದು ಸಂಗಮದ ಸ್ನಾನಕ್ಕೆ ವೀರಶೈವ ಧರ್ಮದಲ್ಲಿ ಆದ್ಯತೆ ಕೊಟ್ಟಿರುವ ಕಾರಣವನ್ನು ವಿವರಿಸಿ–ಬೇರೆ ಬೇರೆ ಕಡೆಗಳಿಂದ ಹರಿದು ಬಂದು ಒಂದುಗೂಡುವ ಸ್ಥಳವೇ ಸಂಗಮ. ಒಂದುಗೂಡಿದ ನಂತರ ಎಂದಿಗೂ ನದಿಗಳು ಬೇರ್ಪಡುವುದಿಲ್ಲ. ಅಂತೆಯೇ ಇಂತಹ ಸಂಗಮಗಳಲ್ಲಿ ಮಿಂದೇಳುವವರು ಮತೀಯ, ಧರ್ಮೀಯ ಭಾವನೆಯ ಕಿತ್ತಾಟದಿಂದ ಹೊರಬಂದು ಭಾವೈಕ್ಯತೆಯನ್ನು ರೂಢಿಸಿಕೊಳ್ಳಬೇಕೆಂದು ಸಂಗಮ ಸ್ನಾನದ ಮಹತ್ವವನ್ನು ಅದರಲ್ಲಿ ಸ್ನಾನ ಮಾಡುವವನು ತದನಂತರ ಹೇಗಿರಬೇಕೆಂದು ಬಹು ಮಾರ್ಮಿಕವಾಗಿ ಜನತೆಗೆ ತಿಳಿ ಹೇಳಿದರು.

15–3–2003

ಬಾಳೆಹೊನ್ನೂರಿನಲ್ಲಿ ಪೀಠಪರಂಪರೆಯಂತೆ ಪ್ರತೀವರ್ಷ ರೇಣುಕ ಜಯಂತಿಯನ್ನು ಬಹು ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸುತ್ತಾ ಬಂದಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭೆಯವರು ವೀರಶೈವ ಸಮಾಜದ ಒಳಪಂಗಡಗಳ ನಡುವೆ ಇರುವ ವೈಮನಸ್ಸುಗಳಿಂದಾಗಿ ವೀರಶೈವರ ಸಮಗ್ರತೆಗೆ ಧಕ್ಕೆ ಉಂಟಾಗುತ್ತಿರುವುದನ್ನು ಗಮನಿಸಿ ಬಾಳೆಹೊನ್ನೂರು ಜಗದ್ಗುರುಗಳಲ್ಲಿ ಗುರು–ವಿರಕ್ತರ ಸಮಾವೇಷವನ್ನು ರೇಣುಕ ಜಯಂತಿಯಂದು ನಡೆಸಿಕೊಡಬೇಕೆಂದು ಮನವಿ ಮಾಡಿಕೊಂಡರು. ಈ ಮನವಿಗೆ ಬಾಳೆಹೊನ್ನೂರು ಜಗದ್ಗುರುಗಳು ಸ್ಪಂದಿಸಿ ಗುರು–ವಿರಕ್ತ ಜಗದ್ಗುರುಗಳ ಮೊದಲ ಬಹಿರಂಗ ಸಮಾವೇಶಕ್ಕೆ ಒಪ್ಪಿಗೆ ನೀಡಿದರು.

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಸಮಾರಂಭವನ್ನು ಉದ್ಘಾಟಿಸಿದರು. ಪಂಚಪೀಠಾಧೀಶ್ವರರ ಜೊತೆಗೆ ತುಮಕೂರು ಸಿದ್ಧಗಂಗಾಕ್ಷೇತ್ರದ ತ್ರಿವಿಧ ದಾಸೋಹಿ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳು, ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಡಾ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು, ಗದಗದ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳು, ಮೈಸೂರಿನ ಸುತ್ತೂರು ವೀರಸಿಂಹಾಸನಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಚಿತ್ರದುರ್ಗ ಬೃಹನ್ಮಠದ ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಶರಣರು ಸಾನ್ನಿಧ್ಯವಹಿಸಿದ್ದರು. ಇವರೆಲ್ಲರೂ ಸಮಾನ ವೇದಿಕೆಯಲ್ಲಿ ಉಪಸ್ಥಿತರಿದ್ದುದು ಚರಿತ್ರಾರ್ಹ ಸಂಗತಿ.



ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಬಾಳೆಹೊನ್ನೂರಿನಲ್ಲಿ ಭಾನುವಾರ ಶ್ರೀಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವ ಉದ್ಘಾಟಿಸಿದರು.

ಸಂಘಟನೆಯಿಂದ ಸಾಮಾಜಿಕ ಉನ್ನತಿ : ಕೃಷ್ಣ

ಬಾಳೆಹೊನ್ನೂರು ಮಾ. 16 : ಸಮಾಜದ ಐಕ್ಯತೆ, ಸಂಘಟನೆಗೆ ಹೆಚ್ಚಿನ ಬಲ ನೀಡಬೇಕಾದ ಅಗತ್ಯವಿದ್ದು, ಸಮಷ್ಠಿಯ ಹಿತದಲ್ಲಿ ಎಲ್ಲ ಒಂದುಗೂಡುವುದು ನಾಡಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಉತ್ಕೃಷ್ಟತೆಗೆ ಸಹಕಾರಿಯಾಗುತ್ತದೆಂದು ಮುಖ್ಯ ಮಂತ್ರಿ ಎಸ್.ಎಂ. ಕೃಷ್ಣ ಅಭಿಪ್ರಾಯಪಟ್ಟರು.

ರಂಭಾಪುರಿ ಪೀಠದಲ್ಲಿಂದು ಶ್ರೀ ಜಗದ್ಗುರು ರೇಣುಕಾಚಾರ್ಯಾ ಜಯಂತಿ ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾ ರಥೋತ್ಸವದ ಅಂಗವಾಗಿ ನಡೆದ ಧರ್ಮ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಇಂದು ಧರ್ಮ ಸಾಹಿತ್ಯ ಸಮ್ಮೇಳನವು ಸಂಕ್ರಮಣದ ಸಂದಿಗ್ಧತೆಯನ್ನು ಎದುರಿಸುತ್ತಿದ್ದು, ಇಂತಹ ಸಂದರ್ಭದಲ್ಲಿ ನಾಡಿನ ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಗುರುಪೀಠಗಳ ಕೊಡುಗೆ ಸರ್ವಶ್ರೇಷ್ಠವಾದುದಾಗಿದೆ ಎಂದರು. ಇದನ್ನು ರಾಜಕೀಯ ಸಮಾವೇಶ ಎಂದು ಅರ್ಥೈಸಲಾಗದು. ಸಮಾಜದ ವಾದ, ವಿವಾದಗಳೇನೇ ಇದ್ದರೂ ಅದನ್ನು ಬಗೆಹರಿಸಿ ಪರಿಹಾರ ಕಂಡುಕೊಳ್ಳುವ ಮೂಲಕ ಸಮಾಜದ ಎಲ್ಲರು ಸಂಘಟಿತರಾಗುವಲ್ಲಿ ಯತಿವರ್ಯರ ಸಮಾಗಮ ಎಂದು ಬಣ್ಣಿಸಿದ ಅವರು, ಸಮಾಜದ ಈ ಉದ್ದೇಶ ಈಡೇರಲೆಂದು ಹಾರೈಸಿದರು.

ಗುರು–ವಿರಕ್ತರ ಸಂಯೋಗ ಹೊಸ ಮನ್ವಂತರಕ್ಕೆ ನಾಂದಿ : ಕೃಷ್ಣ
ಸಂಯುಕ್ತ ಕರ್ನಾಟಕ, 17–3–2003

ಅಪೂರ್ವ ಮಿಲನ

ರಂಭಾಪುರಿಯಲ್ಲಿ ರೇಣುಕಾಚಾರ್ಯರ ಜಯಂತಿ, ಪಂಚಾಚಾರ್ಯರ ಹಾಗೂ ಗುರುಗಣ್ಯರ ಸಮಾಗಮ














ಸಮಾರಂಭದ ಸಾನ್ನಿಧ್ಯ ವಹಿಸಿದ್ದ ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಮಾತನಾಡಿ, ಆದಿಯಿಂದಲೂ ಪಂಚಪೀಠಗಳು, ಸೈದ್ಧಾಂತಿಕ ತಳಹದಿಯ ಮೇಲೆ ಕಾರ್ಯ ಮಾಡುತ್ತ ಬಂದಿವೆ. ಯಾರನ್ನೂ ಬೊಟ್ಟುಮಾಡಿ ತೋರಿಸದೇ ಸಮಾಜಕ್ಕೆ ಮಾರ್ಗದರ್ಶನ ಮಾಡಿವೆ. ಪ್ರಸ್ತುತ ಒಳಪಂಗಡಗಳ ಹಾವಳಿಯಿಂದಾಗಿ ವೀರಶೈವ ಸಮಾಜದ ಸಮಗ್ರತೆಗೆ ಧಕ್ಕೆ ಉಂಟಾಗಿರುವುದನ್ನು ಮನಗಂಡು ಅಖಿಲಭಾರತ ವೀರಶೈವ ಮಹಾಸಭೆಯ ಮನವಿಗೆ ಸ್ಪಂದಿಸುವ ಮೂಲಕ, ರಂಭಾಪುರಿ ಪೀಠದ ಈ ಪರಿಸರದಲ್ಲಿಯೇ ಗುರು–ವಿರಕ್ತ ಜಗದ್ಗುರುಗಳ ಮೊದಲ ಬಹಿರಂಗ ಸಮಾವೇಶಕ್ಕೆ ತಾವು ಮುಂದಾಗಿ ಸಮಾಜ ಕಟ್ಟುವ ಕೆಲಸಕ್ಕೆ ಹಸಿರು ಬಾವುಟ ತೋರಿಸಲಾಗಿದೆ ಎಂದರು.



ಹುಬ್ಬಳ್ಳಿ ಮೂರುಸಾವಿರ ಮಠದ ಡಾ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮಾತನಾಡಿ ಹಾನಗಲ್ ಕುಮಾರಸ್ವಾಮಿಗಳ ಅಂತರಾಳದ ಬಯಕೆ ಇಂದು ಸಾಕಾರಗೊಂಡಿದೆ ಎಂದರು.

ಉಜ್ಜಯಿನಿ ಪೀಠದ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ "ವೀರಶೈವ ಸಮಾಜವನ್ನು ಸಮಗ್ರವಾಗಿ ಕಟ್ಟಬೇಕೆನ್ನುವಲ್ಲಿ ಪಂಚಪೀಠಗಳ ಜಗದ್ಗುರುಗಳೇ ಹಿಂದೇಟು ಹಾಕುತ್ತಿದ್ದಾರೆ." ಎಂಬ ಕಟ್ಟುಕತೆ ಇಂದು ಇನ್ನಿಲ್ಲವಾಗಿದೆ ಎಂದ ಅವರು, ಈ ಮಾತಿಗೆ ವ್ಯತಿರಿಕ್ತವಾಗಿ ರಂಭಾಪುರಿ ಜಗದ್ಗುರುಗಳು ತಮ್ಮ ಪೀಠದ ಪರಿಸರದಲ್ಲಿಯೇ ಎಲ್ಲರನ್ನು ಒಂದೇ ವೇದಿಕೆಯಲ್ಲಿ ತಂದು ಶ್ರೇಷ್ಠತೆಯನ್ನು ಮೆರೆದಿದ್ದಾರೆ ಎಂದರು.



ಗದಗ ತೋಂಟದಾರ್ಯ ಮಠದ ಡಾ. ಸಿದ್ಧಲಿಂಗಸ್ವಾಮೀಜಿ ಮಾತನಾಡಿ, ಸರಳತೆ ಮತ್ತು ಸಹೃದಯತೆ ಭಗವಂತನಿಗೆ ಪ್ರೀತಿ. ಈ ನಿಟ್ಟಿನಲ್ಲಿ ರಂಭಾಪುರಿ ಜಗದ್ಗುರುಗಳ ಸಹೃದಯತೆ, ಹಿರಿಭಾವ, ಹೃದಯ ವೈಶಾಲ್ಯತೆಗಳು ನಮ್ಮನ್ನಿಲ್ಲಿ ಸಂಗಮಿಸಿವೆ. ಬಹುದೊಡ್ಡ ಭಾವಸಮನ್ವಯದ ಕೆಲಸವನ್ನು ರಂಭಾಪುರಿ ಪೀಠದಿಂದಲೇ ಅವರು ಆರಂಭಿಸಿ ದಾಖಲೆ ನಿರ್ಮಿಸಿದ್ದಾರೆ ಎಂದರು.

ಸಮಾಜಮುಖಿಯಾಗಿ ಸರ್ವರೂ ಶ್ರಮಿಸುವ ನಿಟ್ಟಿನಲ್ಲಿ ರಂಭಾಪುರಿ ಜಗದ್ಗುರುಗಳು ತಮ್ಮ ಪೀಠದ ಪರಿಸರದಲ್ಲಿ ಪಂಚಾಚಾರ್ಯರೊಂದಿಗೆ ಸಮಾನ ವೇದಿಕೆಯಲ್ಲಿ ವಿರಕ್ತ ಪರಂಪರೆಯ ಎಲ್ಲ ಹಿರಿಯ ಮಠಾಧೀಶರನ್ನು ಸೇರಿಸಲು ಮಾಡಿರುವ ಪ್ರಯತ್ನ ಐತಿಹಾಸಿಕವಾದದ್ದು ಎಂದರು.



ಸಿದ್ಧಗಂಗಾಮಠದ ಡಾ. ಶಿವಕುಮಾರ ಸ್ವಾಮಿಗಳು, ವೀರಶೈವ ಧರ್ಮ ಜಾಗೃತಿಯನ್ನು ಮೂಡಿಸಿದ ಈ ಸಮಾವೇಶದ ಮೊದಲ ಶ್ರೇಯಸ್ಸನ್ನು ರಂಭಾಪುರಿ ಜಗದ್ಗುರುಗಳು ಪಡೆದುಕೊಂಡಿದ್ದಾರೆ ಎಂದು ಹೇಳಿದರು.



ಚಿತ್ರದುರ್ಗ ಬೃಹನ್ಮಠದ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಮಾತನಾಡಿ, ಎಲ್ಲರೂ ಏಕತೆಗೆ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ವೀರಶೈವ ಸಮಾಜ ಒಡೆದು ಹೋಗದಂತೆ ಅದರ ಸಮಗ್ರತೆಗೆ ಇಂಬುನೀಡಲು ರಂಭಾಪುರಿ ಜಗದ್ಗುರುಗಳು ಮುಂದಾದಾಗ ನಾವು ಎಲ್ಲರೂ ಅವರ ಕರೆಗೆ ಓಗೊಟ್ಟು ಇಂದು ಈ ಐತಿಹಾಸಿಕ ಸಮಾವೇಶದಲ್ಲಿ ಭಾಗವಹಿಸಿದ್ದೇವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮತ್ತು ಬಸವಾದಿ ಶಿವಶರಣರ ತತ್ವ ಸಂದೇಶಗಳ ಧನಾತ್ಮಕ ಅಂಶಗಳ ಪ್ರತಿಪಾದನೆಯೊಂದಿಗೆ ಎಲ್ಲರೂ ಶಿಥಿಲಗೊಂಡಿರುವ ವೀರಶೈವರ ಮಹಾಮನೆಯನ್ನು ಗಟ್ಟಿಗೊಳಿಸೋಣ ಎಂದರು.

ಕಾಶೀ ಜ್ಞಾನಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ವೀರಶೈವ ಸಿದ್ಧಾಂತದ ಮೂಲ ಆಶಯ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲ ಇವುಗಳನ್ನು ಶಿವಾಗಮಗಳು ಸೇರಿದಂತೆ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯದಲ್ಲಿ ಕಾಣುತ್ತಿದ್ದು, ಈ ನಿಟ್ಟಿನಲ್ಲಿ ವೀರಶೈವ ಸಮಾಜಕ್ಕೆ ಒಂದು 'ಸಮನ್ವಯ ಸಿದ್ಧಾಂತ'ವನ್ನು ಸ್ವೀಕರಿಸಲು ಈ ಸಮಾವೇಶದಲ್ಲಿ ಪಾಲ್ಗೊಂಡ ಎಲ್ಲ ಜಗದ್ಗುರುಗಳು ಚಿಂತನೆ ನಡೆಸಬೇಕು ಎಂದರು.



ಮೈಸೂರಿನ ಸುತ್ತೂರುಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಮಾತನಾಡಿ, ರಾಗ–ದ್ವೇಷಗಳಿಲ್ಲದ, ಗೊಂದಲಗಳಿಲ್ಲದ, ದ್ವಂದ್ವದ ಕಿತ್ತಾಟಗಳಿಲ್ಲದ, ಹಸಿರುಸಿರಿಯ ಸಮೃದ್ಧಿಯ ಈ ರಂಭಾಪುರಿ ಪೀಠದಲ್ಲಿ ಪಂಚಪೀಠಗಳ ಜಗದ್ಗುರುಗಳೊಂದಿಗೆ ವಿರಕ್ತ ಮತ್ತು ಶರಣ ಸಂಪ್ರದಾಯದ ಎಲ್ಲ ಹಿರಿಯ ಜಗದ್ಗುರುಗಳನ್ನು ಒಂದೇ ವೇದಿಕೆಯಲ್ಲಿ ತರುವ ರಂಭಾಪುರಿ ಜಗದ್ಗುರುಗಳ ಹೆಬ್ಬಯಕೆ ನಮ್ಮಲ್ಲಿ ಆನಂದವನ್ನು ತುಂಬಿ ತಂದಿದೆ. ಅನೇಕತೆಯಲ್ಲಿ ಏಕತೆಯನ್ನು ಬಯಸುವ ಭಾರತೀಯರ ಮನೋಭಾವಕ್ಕೆ ಈ ಹೊಸ ಇತಿಹಾಸದ ಐಕ್ಯತಾ ಸಮಾವೇಶ ಪೂರಕವಾಗಿದೆ ಎಂದ ಅವರು ಅಖಿಲಭಾರತ ವೀರಶೈವ ಮಹಾಸಭಾದ ಈ ಕನಸು ಸಮಾಜ ಒಗ್ಗೂಡುವ ದೃಷ್ಟಿಯಿಂದ ಮಹತ್ವದ್ದು ಎಂದು ಹೇಳಿದರು.

ಗದುಗಿನ ತೋಂಟದಾರ್ಯ ಶ್ರೀಗಳಿಗೆ 'ಕೋಮು ಸೌಹಾರ್ದತಾ' ಪ್ರಶಸ್ತಿ : ಕಾಶೀ ಶ್ರೀಗಳ ಸಂತಸ

ಕಮತಗಿ, 27–3–2003

ಕಾಶಿ ಜಗದ್ಗುರುಗಳ ಹೃದಯ ವೈಶಾಲ್ಯತೆಯನ್ನು ತಿಳಿಯುವ ಒಂದು ಘಟನೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಗದುಗಿನ ತೋಂಟದಾರ್ಯ ಮಠದ ಶ್ರೀ ಮ.ನಿ. ಜಗದ್ಗುರು ಡಾ. ಸಿದ್ಧಲಿಂಗ ಸ್ವಾಮಿಗಳು ತಮ್ಮ ಬದುಕಿನಲ್ಲಿ ಸಮನ್ವಯತೆಯ ಹಾಗೂ ಸೌಹಾರ್ದತೆಯ ಗುಣಗಳನ್ನು ಮೈಗೂಡಿಸಿಕೊಂಡು ಅವುಗಳನ್ನೇ ಜನರಿಗೆ ಬಹುಕಾಲದಿಂದ ಬೋಧಿಸುತ್ತಾ ಬಂದಿದ್ದಾರೆ. ಭಾರತ ದೇಶ ಸರ್ವ ಧರ್ಮದ ಸಮನ್ವಯದ ರಂಗಭೂಮಿ ಆಗಿದ್ದರೂ ಕೆಲವು ಬಾರಿ ಭಾಷೆಯ, ಜಾತಿಯ ಹಾಗೂ ಧರ್ಮದ ಹೆಸರಿನಲ್ಲಿ ಗೊಂದಲಗಳು ಏಳುತ್ತಲೇ ಇರುತ್ತವೆ. ಇಂತಹ ಗೊಂದಲಗಳು ಏಳದೇ ಸರ್ವರೂ ಕೂಡಿ ಬದುಕುವ ರೀತಿಯನ್ನು ಮಠಾಧಿಪತಿಗಳು ಬೋಧಿಸುವುದು ತೀರ ಅವಶ್ಯಕವಾಗಿದೆ. ಅದೂ ಅಲ್ಲದೆ ವೀರಶೈವ ಧರ್ಮವು ಸಮನ್ವಯ ಸಿದ್ಧಾಂತದ ಭದ್ರ ಬುನಾದಿಯ ಮೇಲೆ ನಿಂತಿರುವ ಧರ್ಮ. ಇಂತಹ ಅದ್ಭುತ ಸಮನ್ವಯದ ಕೆಲಸಗಳನ್ನು ತೋಂಟದಾರ್ಯ ಮಠದ ಶ್ರೀಗಳು ಮಾಡಿರುವುದನ್ನು ಗಮನಿಸಿ ಭಾರತಸರ್ಕಾರ ಅವರಿಗೆ "ಕೋಮು ಸೌಹಾರ್ದತಾ ಪ್ರಶಸ್ತಿ"ಯನ್ನು ಘೋಷಿಸಿದೆ. ಅದನ್ನು 31–3–2003ರಂದು ರಾಷ್ಟ್ರಪತಿಯವರಿಂದ ಕೊಡಲಾಗುವುದು ಎಂಬ ವಿಚಾರವನ್ನು ಪತ್ರಿಕೆಯಲ್ಲಿ ಓದಿದ ಕಾಶೀ ಜಗದ್ಗುರುಗಳು ಸಂತಸವನ್ನು ವ್ಯಕ್ತಪಡಿಸಿ–ಈ ಪ್ರಶಸ್ತಿ ಕೇವಲ ವೀರಶೈವ ಮಠಾಧಿಪತಿಗಳಿಗಷ್ಟೇ ಅಲ್ಲ ದಕ್ಷಿಣ ಭಾರತದ ಸರ್ವಧರ್ಮಗಳ ಮಠಾಧಿಪತಿಗಳಿಗೆ, ಸದ್ಭಕ್ತ ಸಮೂಹಕ್ಕೆ ಅತ್ಯಂತ ಸಂತೋಷವನ್ನು ತಂದಿದೆ ಎಂದು ಹೇಳಿದರಲ್ಲದೆ ತೋಟದಾರ್ಯ ಮಠದ ಶ್ರೀಗಳ ಈ ಸೌಹಾರ್ದತಾಪೂರ್ಣವಾದ ವಿಚಾರಧಾರೆಯ ಮುಂದೆ ಸರ್ವ ಸಮಾಜದ ಮೇಲೆ ಉತ್ತಮ ಪರಿಣಾಮವನ್ನು ಬೀರುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿಕೊಂಡರು. ಕೆಲವೇ ದಿನಗಳ ಹಿಂದೆ ಬಾಳೆಹೊನ್ನೂರಿನಲ್ಲಿ ನಡೆದ ಗುರು–ವಿರಕ್ತರ ಸಮಾವೇಶದಲ್ಲಿ ತೋಂಟದಾರ್ಯ ಮಠದ ಶ್ರೀಗಳು ಹೇಳಿದ ಕೆಲವು ಉತ್ತಮ ವಿಚಾರಗಳಿಂದ ಈ ಐಕ್ಯತೆ ನಿರಂತರ ಸಾಗುವಂತೆ ನಾಂದಿಯನ್ನು ಹಾಡಿದ್ದರು ಎಂದು ನೆನಪಿಸಿಕೊಂಡರು.

ಗುರು ಪೀಠದವರಿರಲಿ–ವಿರಕ್ತ ಪೀಠದವರಾಗಿರಲಿ ಸಮಾನವಾಗಿ ಕಾಣುತ್ತಾ ಅವರಲ್ಲಿ ಕಂಡುಬರುವ ಒಳ್ಳೆಯತನವನ್ನು ಕಂಡು ಮೆಚ್ಚುವಂತಹ ವಿಶಾಲ ಮನೋಭಾವವನ್ನು ಕಾಶಿ ಜಗದ್ಗುರುಗಳಲ್ಲಿ ಕಾಣಬಹುದಾಗಿದೆ.

ಶ್ರೀಗಳವರಿಗೆ ಈ 'ಕೋಮು ಸೌಹಾರ್ದತಾ' ಪ್ರಶಸ್ತಿಯನ್ನು ಕಾಶೀ ಪೀಠದ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ವೈಯಕ್ತಿಕವಾಗಿ ಅಭಿನಂದಿಸಿ ಶುಭ ಹಾರೈಕೆಯನ್ನು ಕೋರಿದ್ದಾರೆ.

ಪ್ರವಚನವು ಭಕ್ತಿಯ ಬೆಳಕನ್ನು ಪಸರಿಸುತ್ತದೆ–ಸಂಗನಬಸವ ಸ್ವಾಮೀಜಿ

ಸಂಜೆವಾಣಿ, 29–4–2003



ಬಳ್ಳಾರಿಯ ಶೆಟ್ಟರ ಗುರುಶಾಂತಪ್ಪ ಕಾಲೇಜಿನ ಆವರಣದಲ್ಲಿ ನಿನ್ನೆ ಸಂಜೆ ಏರ್ಪಡಿಸಿದ್ದ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಮಹಾಸ್ವಾಮಿಗಳವರ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮವನ್ನು ಕೊಟ್ಟೂರು ಸಂಸ್ಥಾನ ಮಠದ ಶ್ರೀ ಸಂಗನಬಸವ ಸ್ವಾಮಿಗಳು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಸಿದ್ಧರಾಮ ಶಿವಾಚಾರ್ಯ ಸ್ವಾಮೀಜಿ, ನಗರಸಭೆ ಅಧ್ಯಕ್ಷೆ ಪದ್ಮಾವತಿ ಮತ್ತಿತರರನ್ನು ಕಾಣಬಹುದು.

ಜಗದ್ಗುರುಗಳು ತಮ್ಮ ಕಾರ್ಯಕ್ರಮಗಳು ಎಲ್ಲೇ ಇರಲಿ ಅದರಲ್ಲಿ ವಿರಕ್ತ ಗುರುಗಳು ಭಾಗವಹಿಸುವಂತೆ ಅವರುಗಳನ್ನು ಆಮಂತ್ರಿಸಲು ಕಾರ್ಯಕ್ರಮ ಏರ್ಪಾಡು ಮಾಡುವ ಸಮಿತಿಯವರಿಗೆ ಹೇಳುತ್ತಿದ್ದರು. ಒಂದೇ ವೇದಿಕೆಯಲ್ಲಿ ಕುಳಿತು ಪರಸ್ಪರ ವಿಚಾರಗಳನ್ನು ವಿನಿಮಯ ಮಾಡಿಕೊಂಡಾಗಲೇ ಗೌರವ ಮೂಡಲು ಸಾಧ್ಯ ಎಂದೇ ಗುರುಗಳ ಆಲೋಚನೆ. ಸಮನ್ವಯದ ಹಾದಿಯಲ್ಲಿ ನಡೆವವರು ಎಂದೂ ಒಂದು ಹೆಜ್ಜೆ ಮುಂದಿಡಬೇಕು.

ಬಳ್ಳಾರಿಯ ಜನರು ಜಗದ್ಗುರುಗಳ ಆಧ್ಯಾತ್ಮಿಕ ಪ್ರವಚನವು ಅಲ್ಲಿನ ಶೆಟ್ಟರ ಕಾಲೇಜಿನ ಆವರಣದಲ್ಲಿ **28–4–2003**ರಿಂದ ಆರಂಭಗೊಂಡಿತು. ಸಾವಿರಾರು ಸಂಖ್ಯೆಯಲ್ಲಿ ಜನ ಸೇರುತ್ತಿದ್ದುದರಿಂದ ದೊಡ್ಡ ಪ್ರದೇಶವನ್ನೇ ಆರಿಸಿದ್ದರು. ಈ ಕಾರ್ಯಕ್ರಮವನ್ನು ಉದ್ಘಾಟಿಸಿದ್ದು ಕೊಟ್ಟೂರುಸ್ವಾಮಿಮಠದ ಶ್ರೀ ಸಂಗನಬಸವ ಸ್ವಾಮಿಗಳು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೊಟ್ಟೂರುಸ್ವಾಮಿ ಮಠದ ಶ್ರೀ ಸಂಗನಬಸವ

ಮಹಾಸ್ವಾಮಿಗಳು ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಪ್ರವಚನವು ಭಕ್ತಿಯ ಬೆಳಕನ್ನು ಎಲ್ಲೆಡೆ ಪಸರಿಸುತ್ತದೆ. ಗುರು–ವಿರಕ್ತರ ಸಂಗಮದಿಂದ ವೀರಶೈವ ಸಮಾಜ ಇನ್ನಷ್ಟು ಬಲಗೊಳ್ಳುತ್ತದೆ ಎಂದರು.

ಪ್ರವಚನ ನೀಡಿದ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಸ್ವಾಮಿಗಳು ಸಿದ್ಧಾಂತ ಶಿಖಾಮಣಿಯ ಆರಂಭದ ಭಾಗಗಳನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಿದರು. ವೀರಶೈವ ಧರ್ಮದ ಸೂಕ್ಷ್ಮ ವಿಷಯಗಳನ್ನು ಅಂತರ್ಗತ ಮಾಡಿಕೊಂಡಿರುವ ಈ ಗ್ರಂಥ ಭಕ್ತರ ಪಾಲಿಗೆ ಸಂಜೀವಿನಿ ಎಂದು ಬಣ್ಣಿಸಿದರು.

ಕಾರ್ಯಕ್ರಮ ಉದ್ಘಾಟಿಸಲು ಆಗಮಿಸಿದ್ದ ಕೊಟ್ಟೂರುಸ್ವಾಮಿ ಮಠದ ಸ್ವಾಮಿಗಳು ಜಗದ್ಗುರುಗಳನ್ನು ತಮ್ಮ ಊರಿಗೆ ತಮ್ಮ ಮಠಕ್ಕೆ ಆಹ್ವಾನ ನೀಡಿದ್ದಲ್ಲದೆ–ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಕೈಗಾರಿಕಾ ತರಬೇತಿ ಕೇಂದ್ರ ಹಾಗೂ ಶ್ರೀಮತಿ ವದಗಾ ಗುರುಶಾಂತಮ್ಮ ಪ್ರಾಥಮಿಕ ಶಾಲೆಯ ಕಟ್ಟಡ ಉದ್ಘಾಟನೆಯನ್ನು ಜಗದ್ಗುರುಗಳಿಂದ ಮಾಡಿಸಿದ್ದು ಒಂದು ವಿಶೇಷವಾಗಿತ್ತು.

ಹೀಗೆ ಪರಸ್ಪರರಲ್ಲಿ ಹೊಂದಾಣಿಕೆಯಿದ್ದಲ್ಲಿ ಮಾತ್ರ ಒಂದಾಗಲು ಸಾಧ್ಯವೆಂದು ಜಗದ್ಗುರುಗಳು ಸದಾ ನಂಬಿದ್ದರು.



ಬಳ್ಳಾರಿ : ಪ್ರವಚನ ಕಾರ್ಯಕ್ರಮಕ್ಕೆಂದು ನಗರಕ್ಕೆ ಆಗಮಿಸಿದ್ದ ಕಾಶೀಪೀಠದ ಡಾ. ಚಂದ್ರಶೇಖರ ಶಿವಾಚಾರ್ಯರು, ಕೊಟ್ಟೂರು ಮಠದ ಸಂಗನಬಸವ ಸ್ವಾಮಿಗಳು ಮತ್ತು ಜಂಗಮವಾಡಿ ಮಠದ ಸ್ವಾಮಿಗಳು ಕೊಟ್ಟೂರು ಮಠಕ್ಕೆ ಭೇಟಿ ನೀಡಿದ್ದರು.



ಬಳ್ಳಾರಿಯಲ್ಲಿ ಏರ್ಪಡಿಸಿದ್ದ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಕೈಗಾರಿಕಾ ತರಬೇತಿ ಕೇಂದ್ರ ಹಾಗೂ ಶ್ರೀಮತಿ ವದಗಾ ಗುರುಶಾಂತಮ್ಮ ಪ್ರಾಥಮಿಕ ಶಾಲೆಯ ಕಟ್ಟಡದ ಉದ್ಘಾಟನೆಯನ್ನು ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ರಿಬ್ಬನ್ ಕತ್ತರಿಸುವುದರ ಮೂಲಕ ನೆರವೇರಿಸಿದರು. ಚಿತ್ರದಲ್ಲಿ ಶ್ರೀ ಸಂಗನಬಸವ ಸ್ವಾಮೀಜಿ, ಶಾಸಕ ಅಲ್ಲಂ ವೀರಭದ್ರಪ್ಪ, ಅಖಿಲ ಭಾರತ ವೀರಶೈವ ಮಹಾಸಭೆಯ ಉಪಾಧ್ಯಕ್ಷ ಎನ್. ತಿಪ್ಪಣ್ಣ ಮತ್ತಿತರರನ್ನು ಕಾಣಬಹುದು.

ಗುರು ಜ್ಞಾನದ ಬೆಳಕು ನೀಡುವರು : ಕಾಶೀ ಶ್ರೀಗಳು



ಹುಬ್ಬಳ್ಳಿ ನವನಗರದಲ್ಲಿರುವ ಚಿಕೇನಕೊಪ್ಪದ ಚನ್ನವೀರ ಶರಣರ ಅಂಧರ ಕಲ್ಯಾಣ ಆಶ್ರಮದಲ್ಲಿ ನಡೆದ ಉಚಿತ ಆರೋಗ್ಯ, ನೇತ್ರ ಶಸ್ತ್ರ ಚಿಕಿತ್ಸಾ ಸಮಾರಂಭದಲ್ಲಿ ಕಾಶೀ ಜಗದ್ಗುರುಗಳು ಮಾತನಾಡಿದರು. ಶ್ರೀ ಚನ್ನವೀರ ಶರಣರು, ವಿರೂಪಕ್ಷ ಸ್ವಾಮೀಜಿ ಉಪಸ್ಥಿತರಿದ್ದರು

ಹುಬ್ಬಳ್ಳಿಯಲ್ಲಿ ಕಾಶೀ ಜಗದ್ಗುರುಗಳು ಚಿಕೇನಕೊಪ್ಪದ ಚನ್ನವೀರ ಶರಣರ ಅಂಧರ ಕಲ್ಯಾಣ ಆಶ್ರಮದಲ್ಲಿ ಏರ್ಪಡಿಸಿದ್ದ ನೇತ್ರ ಶಸ್ತ್ರ ಚಿಕಿತ್ಸೆ ಕಾರ್ಯಕ್ರಮದಲ್ಲಿ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಆತ್ಮದೃಷ್ಟಿ ಅರಿಯಲು ಗುರು ಜ್ಞಾನಚಕ್ಷುವನ್ನು ನೀಡುತ್ತಾರೆ ಎಂದು ಹೇಳಿದರು. ಈ ಚನ್ನವೀರ ಶರಣರು ವಿರಕ್ತ ಪರಂಪರೆಯವರು. ಆದ್ದರಿಂದಲೇ ಸಮರಸತೆಯನ್ನು ಸಾಧಿಸಲು ಈ ಸಮಾರಂಭಕ್ಕೆ ಬರಲು ಜಗದ್ಗುರುಗಳು ಒಪ್ಪಿಗೆ ನೀಡಿದ್ದಾರೆ.

ವೀರಶೈವ ಮಠಾಧೀಶರ ರಾಷ್ಟ್ರೀಯ ಸಮಾವೇಶ

ಜೂನ್ 1ನೇ 2003ರಂದು ಅಖಿಲ ಭಾರತ ವೀರಶೈವ ಲಿಂಗಾಯತ ಧರ್ಮ ಗುರುಗಳ ರಾಷ್ಟ್ರೀಯ ಸಮಾವೇಶವನ್ನು ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದ ಶ್ರೀ ಭೀಮಣ್ಣ ಖಂಡ್ರೆಯವರ ಮುಖಂಡತ್ವದಲ್ಲಿ ಏರ್ಪಡಿಸಲಾಗಿತ್ತು.

ಸಮಾವೇಶದ ಮುಖ್ಯ ಉದ್ದೇಶ–ಗುರು–ವಿರಕ್ತರು ಒಂದುಗೂಡಿದರೆ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುತ್ತಿರುವ ಅಧಃಪತನವನ್ನು ತಡೆಗಟ್ಟಲು ಸಾಧ್ಯ ಎಂದಾಗಿದೆ. ಧರ್ಮಗುರುಗಳು ಸಮಾಜಕ್ಕೆ ಧಾರ್ಮಿಕ, ನೈತಿಕ ಸಂಸ್ಕಾರ ನೀಡಲು ಗುರು–ವಿರಕ್ತರು ಒಂದಾಗುವುದು ಅವಶ್ಯವಿದೆ ಎಂದು ಅಧ್ಯಕ್ಷ ಭೀಮಣ್ಣ ಖಂಡ್ರೆಯವರು ಹೇಳಿದರು.

ಪಂಚಪೀಠಾಧೀಶ್ವರರೂ–ವಿರಕ್ತ ಪೀಠದ ಅನೇಕ ಜಗದ್ಗುರುಗಳೂ–ಸಾವಿರ ಸಾವಿರ ಸಂಖ್ಯೆಯಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಮಠಾಧೀಶ್ವರರೂ, ಸ್ವಾಮಿಗಳೂ ಮತ್ತು ಲಕ್ಷಾಂತರ ಭಕ್ತಾದಿಗಳೂ ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.



ಕೂಡಲಸಂಗಮದಲ್ಲಿ ನಡೆದ ಧಾರ್ಮಿಕ ಮಠಾಧಿಪತಿಗಳ ಸಮಾವೇಶವನ್ನು ರಂಭಾಪುರಿ ಜಗದ್ಗುರುಗಳು ಉದ್ಘಾಟಿಸಿದರು. ಚಿತ್ರದಲ್ಲಿ ಕಾಶಿ, ಉಜ್ಜಯನಿ ಶ್ರೀಗಳವರು, ಶಿವಕುಮಾರ ಸ್ವಾಮಿಗಳು, ಸುತ್ತೂರು ಶ್ರೀಗಳು ಮುಂತಾದ ಮಹಾಸ್ವಾಮಿಗಳು, ಧುರೀಣರು ಇದ್ದಾರೆ.

ಈ ಸಮಾವೇಶದಲ್ಲಿ ನಡೆದ ಬಹುಮುಖ್ಯವಾದ ಚರ್ಚೆ ಎಂದರೆ ಬಸವಣ್ಣನನ್ನು ಧರ್ಮ ಗುರು–ಎಂದು ಒಪ್ಪಿಕೊಳ್ಳಬೇಕು ಎಂಬ ವಿಷಯ ಕುರಿತದ್ದು. ಆ ವಿಷಯ ಬಂದಾಗ ಕಾಶಿ ಜಗದ್ಗುರುಗಳ ಪ್ರತಿಕ್ರಿಯೆ ನೀಡಿದ್ದು ಹೀಗಿದೆ.

ಬಸವಣ್ಣ ಧರ್ಮಗುರು ಅಲ್ಲ, ಧರ್ಮದ ಉದ್ಧಾರಕ

ಬಸವಣ್ಣ ಧರ್ಮಗುರು : ಸಮಾವೇಶದಲ್ಲಿ ಮತ್ತೆ ವಿವಾದ

ಶ್ರೀಕ್ಷೇತ್ರ ಕೂಡಲಸಂಗಮ, 1–ಬಸವಣ್ಣನವರನ್ನು ಧರ್ಮಗುರು ಎಂದು ವೀರಶೈವ ಸಮಾಜ ಒಪ್ಪಿಕೊಳ್ಳಬೇಕು ಎಂದು ಗದುಗಿನ ಜಗದ್ಗುರುಗಳು ಆಗ್ರಹಿಸಿದರೆ, ಪಂಚಪೀಠದ ಕಾಶೀ ಜಗದ್ಗುರುಗಳು ಇದು ಸಾಧ್ಯವಿಲ್ಲ ಎಂದು ಹೇಳಿದ ಘಟನೆ ಮಠಾಧಿಪತಿಗಳ ರಾಷ್ಟ್ರೀಯ ಸಮಾವೇಶದಲ್ಲಿಂದು ನಡೆಯಿತು.

ಹಲವು ಹತ್ತು ಗುರುಗಳ ಹೆಸರು ಹೇಳುವ ಬದಲು ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪಿಕೊಳ್ಳಬೇಕು. 'ಓಂ ಶ್ರೀ ಗುರು ಬಸವ ಲಿಂಗಾಯ ನಮಃ" ಎಂಬ ಮಂತ್ರ ಪಠಿಸಬೇಕೆಂದು ಗದುಗಿನ ತೋಂಟದಾರ್ಯ ಜಗದ್ಗುರುಗಳು ಹೇಳಿದರು.

ಬಸವಣ್ಣನವರನ್ನು ಪಂಚಪೀಠಗಳು ಸ್ವೀಕರಿಸಲು ಯಾವುದೇ ಹಿಂಜರಿತ ಇಲ್ಲ, ಆದರೆ ಅವರನ್ನೇ ಧರ್ಮಗುರು ಎಂದು ಒಪ್ಪಲು ಸಾಧ್ಯವಿಲ್ಲ ಎಂದು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಸಮುದಾಯದಲ್ಲಿ ಸಾಮೂಹಿಕ ಚಿಂತನೆ ನಡೆಸುವಾಗ ವ್ಯಕ್ತಿನಿಷ್ಠೆ ತೋರಿಸಿ ವೈಭವೀಕರಣ ಮಾಡುವ ಪ್ರವೃತ್ತಿ ಉದ್ದೇಶಕ್ಕೆ ಧಕ್ಕೆ ತರುತ್ತದೆ ಎಂದೂ ಅವರು ಸ್ಪಷ್ಟವಾಗಿ ಹೇಳಿದರು.

ದಲಿತರನ್ನು ವೀರಶೈವರನ್ನಾಗಿಸುವ ಅಗತ್ಯವನ್ನು ಶ್ರೀಶೈಲ ಜಗದ್ಗುರುಗಳು ವ್ಯಕ್ತಪಡಿಸಿದರು. ಕಾಶೀ ಜಗದ್ಗುರುಗಳು ವೀರಶೈವರನ್ನು ಮೊದಲು ವೀರಶೈವರನ್ನಾಗಿಸುವ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದರು.

ಕಾಶೀ ಜಗದ್ಗುರುಗಳು ಕೆಲವು ವಿಷಯಗಳ ಕುರಿತು ಭಿನ್ನಾಭಿಪ್ರಾಯ ವ್ಯಕ್ತಪಡಿಸಿ ವಿರಕ್ತರು ಕೇವಲ ಕನ್ನಡ ವಚನ ಓದುವುದು ಬಿಟ್ಟು ಸಂಸ್ಕೃತ ಆಗಮಗಳನ್ನು ಓದಬೇಕು. ಅಂತೆಯೇ ತಾವು ಪಂಚಾಚಾರ್ಯರು ವಚನಗಳನ್ನು ತಿಳಿದುಕೊಳ್ಳುವುದಾಗಿ ಹೇಳಿದರು.

ಸಾರ್ಥಕವಾದ ಗುರುವಿರಕ್ತರ ಸಮಾವೇಶ

ಈ ಸಮಾವೇಶದ ನಂತರ ನವೋದಯ ಪತ್ರಿಕೆಯಲ್ಲಿ ಜಗದ್ಗುರುಗಳ ಸಂದರ್ಶನ ಪ್ರಕಟಗೊಂಡಿತ್ತು. ಅನೇಕ ಅಮೂಲ್ಯ ಚಿಂತನೆಗಳು ಪ್ರಶ್ನೆಗೆ ಉತ್ತರಗಳಾಗಿ ಹೊರಹೊಮ್ಮಿರುವುದನ್ನು ಇಲ್ಲಿ ಹಾಗೆಯೇ ಕೊಡಲಾಗಿದೆ.

ಕಾಶಿ ಪೀಠದ ಶ್ರೀಗಳೊಂದಿಗೆ ಸಂದರ್ಶನ

11–7–2003

ಗುರು–ವಿರಕ್ತರ ಸಮಾಗಮ ಶತಮಾನದ ಶುಭೋದಯ

ಪ್ರಶ್ನೆ : ಆಧ್ಯಾತ್ಮಿಕ ಪ್ರವಚನದ ಪ್ರಯೋಜನವೇನು?

ಉತ್ತರ : ಪ್ರವಚನ ಸ್ವಾಧ್ಯಾಯಗಳು ಸ್ವಂತಕ್ಕಾಗಿ, ಆತ್ಮಕಲ್ಯಾಣಕ್ಕಾದರೆ; ಪ್ರವಚನ ಲೋಕಕಲ್ಯಾಣಕ್ಕಾಗುತ್ತದೆ. ಈ ಲೋಕಕಲ್ಯಾಣ ಭಾವನೆಯಿಟ್ಟುಕೊಂಡೇ ದೇಶದಲ್ಲಿ ನಾವು ಯಾವಾಗಲೂ ಇಂತಹ ಕಾರ್ಯಕ್ರಮಗಳನ್ನು ಸದಾ ನಡೆಸುತ್ತಲೇ ಇರುತ್ತೇವೆ. ಇಂತಹ ಪ್ರವಚನ ನಡೆದಾಗ ಸಮಾಜದಲ್ಲಿಯ ಎಲ್ಲ ಕೋಮು ವರ್ಗದ ಜನಗಳು ಒಂದೇ ವೇದಿಕೆಯಲ್ಲಿ ಒಂದು ಸಮಾನ ವಿಚಾರದ ಚಿಂತನೆಗೆ ಒಂದು ಒಳ್ಳೆಯ ಅವಕಾಶವಿರುತ್ತದೆ. ಹೀಗೆ ಆಧ್ಯಾತ್ಮ ಚಿಂತನೆಯ ಮೂಲಕ ಕೋಮು ಸೌಹಾರ್ದತೆ ಸಹ ಜೀವನದ ಉತ್ತಮ ವಿಚಾರಗಳು ಜನರ ಮನಸ್ಸಿನಲ್ಲಿ ಬಿಂಬಿಸುತ್ತವೆ. ಸಮಾಜದಲ್ಲಿ ಶಾಂತಿಯು ನೆಲೆಸಲು ಒಂದು ಒಳ್ಳೆಯ ಅವಕಾಶವಿರುತ್ತದೆ. ಅಂತೆಯೇ ನಾವು ಪ್ರವಚನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ.

ಪ್ರಶ್ನೆ : ಸದ್ಯದ ವಾತಾವರಣದಲ್ಲಿ ಗುರು ವಿರಕ್ತರು ಒಂದಾಗಿದ್ದಾರೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆ ಭಕ್ತರಲ್ಲಿ ಕಾಡುತ್ತಿದೆ. ಅದರ ಬಗ್ಗೆ ತಮ್ಮ ನಿಲುವೇನು?

ಉತ್ತರ : ಇತ್ತೀಚೆಗೆ ಬೆಂಗಳೂರು, ಬಾಳೆಹೊನ್ನೂರು, ಕೂಡಲಸಂಗಮ ಕ್ಷೇತ್ರದಲ್ಲಿ ಗುರು ವಿರಕ್ತರು ಒಂದೇ ವೇದಿಕೆಯಲ್ಲಿ ಬಂದು ಸಾಮಾಜಿಕ ಚಿಂತನೆಯನ್ನು ನಡೆಸಿರುವುದು ಈ ಶತಮಾನದ ಶುಭೋದಯವೆಂದೇ ಭಾವಿಸಬೇಕು. ಅಖಿಲ ಭಾರತ ವೀರಶೈವ ಮಹಾಸಭೆಯವರು ಬಹಳಷ್ಟು ಶ್ರಮವಹಿಸಿ ಸಾಮಾಜಿಕ ಹಿತದೃಷ್ಟಿಯಿಂದ ಈ ಸಮಾವೇಶಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಸಮಾವೇಶದಲ್ಲಿ ಪಾಲ್ಗೊಂಡಿರುವ ಪಂಚಪೀಠದ ಜಗದ್ಗುರುಗಳು ಹಾಗೂ ವಿರಕ್ತ ಪರಂಪರೆಯ, ಶರಣ ಪರಂಪರೆಯ ಅನೇಕ ಪೀಠಾಧಿಪತಿಗಳು ಅನೇಕ ವರ್ಷಗಳ ನಂತರ ಸಮಾನ ವೇದಿಕೆಯಲ್ಲಿ ಬಂದು ಪರಸ್ಪರರನ್ನು ಪ್ರತ್ಯಕ್ಷವಾಗಿ ಕಂಡು ತಮಗಾದ ಸಂತೋಷವನ್ನು ಇಬ್ಬರೂ ಹಂಚಿಕೊಂಡಿದ್ದಾರೆ. ಸದ್ಯ ಕೂಡಿರುವ ಈ ಸಮಾಗಮದಲ್ಲಿ ಸಾಮಾಜಿಕ ಚಿಂತನೆಯೇ ಪ್ರಮುಖವಾದದ್ದು. ಸಮಾಜದಲ್ಲಿಯ ಒಳಜಾತಿಗಳು ಹೋಗಬೇಕು. ಸಮಾಜ ಸಂಘಟನೆಯಾಗಿ ಸಬಲವಾಗಿ ಬೆಳೆಯಬೇಕು. ಸಂಘಟಿತವಾದ ಈ ಸಮಾಜವು ತಮ್ಮ ಮೂಲಭೂತ ಸಾಮಾಜಿಕ ಹಕ್ಕುಗಳನ್ನು ಪಡೆದುಕೊಳ್ಳುವುದರ ಜೊತೆಗೆ ರಾಷ್ಟ್ರೀಯ ಮೂಲವಾಹಿನಿಯಲ್ಲಿ ಸಮರಸಗೊಂಡು ರಾಷ್ಟ್ರಹಿತದ ಚಿಂತನೆಯನ್ನು ಮಾಡುವುದು ಈ ಸಮಾಗಮದ ಉದ್ದೇಶವಾಗಿದೆ. ಈ ಸಾಮಾಜಿಕ ಚಿಂತೆಯಲ್ಲಿ ವೀರಶೈವ ಸಮಸ್ತ ಪೀಠ ಮಠಾಧೀಶರಲ್ಲಿ ಯಾವುದೇ ಭಿನ್ನಾಭಿಪ್ರಾಯಗಳು ಇರುವುದಿಲ್ಲ. ಆದ್ದರಿಂದ ಸಾಮಾಜಿಕ ಸಂಘಟನೆಗಳಿಗೆ ನಾವೆಲ್ಲರೂ ಸಮರಸರಾಗಿದ್ದೇವೆ. ಇನ್ನು ಧರ್ಮದ ಸೈದ್ಧಾಂತಿಕ ವಿಚಾರದಲ್ಲಿ ಕೆಲವೊಂದು ಭಿನ್ನಾಭಿಪ್ರಾಯಗಳಿವೆ. ಅವುಗಳ ಬಗ್ಗೆಯೂ ಪರಸ್ಪರರು ಕೂಡಿ ಚಿಂತಿಸಿ ಒಂದು ಸಮನ್ವಯ ಮಾರ್ಗವನ್ನು ಕಂಡುಹಿಡಿಯುವುದು ಕಠಿಣವಾದ ವಿಷಯವೇನಲ್ಲ. ಅದಕ್ಕಾಗಿ ಉಭಯತರರು ಸಹೃದಯದಿಂದ ಸಹಕರಿಸಬೇಕಾಗುವುದು. ಅದೂ ಸಹ ಕೈಗೂಡಬಹುದು ಎಂಬ ಆಸೆ ನಮ್ಮದಾಗಿದೆ. ಯಾವುದೇ ವಿಷಯಕ್ಕೆ ನಿರಾಶೆ ಮನೋಭಾವನೆಯನ್ನು ತಾಳುವುದು, ಪ್ರಯತ್ನ ಅಪರಿಪೂರ್ಣತೆ ಎನಿಸಿಕೊಳ್ಳುವುದು. ಆದ್ದರಿಂದ ನಾವು ನಿರಾಶರಾಗುವುದು ಬೇಡ.

ಪ್ರಶ್ನೆ : ಮನುಷ್ಯನೆಷ್ಟೇ ಪ್ರಯತ್ನ ಮಾಡಿದರೂ ನೆಮ್ಮದಿ, ತಾಳ್ಮೆ ಇಲ್ಲ ಯಾಕೆ?

ಉತ್ತರ : ಲೌಕಿಕವಾದ ಭೋಗ ಐಶ್ವರ್ಯಗಳು ಮನುಷ್ಯನಿಗೆ ಕ್ಷಣಿಕವಾದ ತೃಪ್ತಿಯನ್ನು ಕೊಡುತ್ತವೆ. ಇವು ಸರ್ವರ ಅನುಭವಸಿದ್ಧವಾದ ವಿಷಯವಾಗಿದೆ. ಆದರೆ ಆಧ್ಯಾತ್ಮ ಚಿಂತನೆಯಿಂದ ದೊರೆಯುವ ಆನಂದವು ಶಾಶ್ವತವಾದದ್ದು. ಅಂತೆಯೇ ನಮ್ಮ ದೇಶದ ದಾರ್ಶನಿಕರು ಈ ಎರಡರ ಬಗ್ಗೆ ಕೂಲಂಕಷವಾಗಿ ಚಿಂತಿಸಿ, ಮನುಷ್ಯನ ಮಾನಸಿಕ ಶಾಂತಿಗೆ ಆಧ್ಯಾತ್ಮ ಜ್ಞಾನವೇ ಮುಖ್ಯ ಎಂಬುದಾಗಿ ಪ್ರತಿಪಾದಿಸಿದ್ದಾರೆ.

ಲೌಕಿಕವಾದ ಭೋಗಭಾಗ್ಯಗಳು ಅವು ಎಷ್ಟೇ ಇದ್ದರೂ ಅವು ಬಹಿರಂಗದಲ್ಲಿಯೇ ಇರುವುದರಿಂದ ಅವುಗಳು ನಮ್ಮ ಅಂತರಂಗವನ್ನು ಪ್ರವೇಶಿಸುವುದಿಲ್ಲವಾದ್ದರಿಂದ ಅವುಗಳಿಂದ ನಮಗೆ ತೃಪ್ತಿ ಸಮಾಧಾನಗಳು ದೊರೆಯುವುದಿಲ್ಲ.

ಪ್ರಶ್ನೆ : ನಮ್ಮ ದೇಶವು ಬುದ್ಧಿವಂತರಿಂದ ಮತ್ತು ಕಾವಿ, ಕಾಕಿ ಖಾದಿಯಿಂದ ಹಾಳಾಗುತ್ತಿದೆ ಎಂದು ಬಹಳ ಜನ ಆಡಿಕೊಳ್ಳುತ್ತಾರೆ. ಅದರ ಬಗ್ಗೆ ತಮ್ಮ ವಿಚಾರವೇನು?

ಉತ್ತರ : ಯಾವುದೇ ದೇಶವು ಅಭಿವೃದ್ಧಿ ಯಾಗಬೇಕಾದರೆ ಜನರಲ್ಲಿ ಆ ದೇಶದ ಬಗ್ಗೆ ಸ್ವಾಭಿಮಾನ ಬೇಕಾಗುತ್ತದೆ. ಇನ್ನು ದೇಶದಲ್ಲಿಯ ಜನರ ದೇಶಾಭಿಮಾನ ಕಡಿಮೆಯಾಗಿ ಸ್ವಾರ್ಥ ಬೆಳೆಯ ತೊಡಗಿದರೆ ಆ ದೇಶ ವಿನಾಶವಾಗುತ್ತದೆ. ಅದಕ್ಕಾಗಿ ದೇಶದ ವಿನಾಶಕ್ಕೆ ವೇಷ, ಭೂಷಣಗಳು ಕಾರಣವಲ್ಲ, ಮತ್ತು ಬುದ್ಧಿವಂತರೂ ಸಹ ಕಾರಣರಲ್ಲ. ಪರಸ್ಪರ ಅಸಹಕಾರ ಮನೋಭಾವನೆ ಹಾಗೂ ಸ್ವಾರ್ಥ ಪರತೆಯಿಂದ ದೇಶ ಹಾಳಾಗುತ್ತದೆ. ದೇಶಾಭಿಮಾನ ವಿಲ್ಲದ ಸ್ವಾರ್ಥಪರರಾದ ಮನುಷ್ಯರು ಎಲ್ಲಾ ಕ್ಷೇತ್ರದಲ್ಲಿ ಇದ್ದೇ ಇರುತ್ತಾರೆ. ಆದಕಾರಣ ದೇಶದ ಅಧೋಗತಿಗೆ ಅಥವಾ ದುರ್ಗತಿಗೆ ಹೋಗುತ್ತಿದೆ ಎಂದು ಕಂಡು ಬಂದರೆ ಅದರ ಕಾರಣ ದೇಶಾಭಿಮಾನ, ಮಾನ್ಯತೆ ಹಾಗೂ ಸ್ವಾರ್ಥಪರ ನಿಷ್ಠೆ ಎಂದು ಹೇಳಬೇಕಾಗುತ್ತದೆ.

ಆದ್ದರಿಂದ ಈ ದೇಶದೊಳಗೆ ವಾಸಿಸುವ ಪ್ರತಿಯೊಂದು ಧರ್ಮದ ಜನರು ತಮ್ಮ ತಮ್ಮ ಧರ್ಮಗಳಲ್ಲಿ ನಿಷ್ಠೆಯನ್ನು ಹೊಂದುವುದರ ಜೊತೆಗೆ ರಾಷ್ಟ್ರಧರ್ಮದ ಸ್ವಾಭಿಮಾನ ಇಟ್ಟುಕೊಳ್ಳಬೇಕು. ನಮ್ಮಲ್ಲಿ ಭಿನ್ನ ಭಿನ್ನ ದರ್ಮಗಳಿಗಿಂತ ರಾಷ್ಟ್ರ ಧರ್ಮ ಶ್ರೇಷ್ಠವಾದುದು. ರಾಷ್ಟ್ರವಿದ್ದಾಗ ಮಾತ್ರ ನಾವು ನಮ್ಮ ನಮ್ಮ ಧರ್ಮಗಳನ್ನು ಆಚರಿಸಬಹುದು. ಆದ್ದರಿಂದ ದೇಶದಲ್ಲಿ ಆದ ಯಾವುದೇ ಅಧೋಗತಿಯ ಬಗ್ಗೆ ಯಾರ ಮೇಲೂ ದೋಷಾರೋಪ ಮಾಡದೇ ನಮ್ಮ ನಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದರೆ ಈ ರಾಷ್ಟ್ರವನ್ನು ಇನ್ನೂ ಸುಭದ್ರವಾಗಿ ಕಟ್ಟಲು ಸಾಧ್ಯವಾಗುತ್ತದೆ. ಅಂತೆಯೇ ಮಕ್ಕಳಲ್ಲಿ ಕೋಮುವಾದವನ್ನು ಬೆಳೆಸುವುದನ್ನು ಬಿಟ್ಟು ರಾಷ್ಟ್ರಪ್ರೇಮವನ್ನು ಬೆಳೆಸಲು ಯತ್ನಿಸಬೇಕು. ಇನ್ನು ಈ ದೇಶ ಆಳುವ ರಾಜಕೀಯ ಪಕ್ಷಗಳು ಸಹ ತಮ್ಮ ಪಕ್ಷಕ್ಕಿಂತಲೂ ರಾಷ್ಟ್ರಪ್ರೇಮ ದೊಡ್ಡದೆಂಬ ಭಾವನೆಯನ್ನು ತಾಳಿ ರಾಷ್ಟ್ರಹಿತಕ್ಕಾಗಿಯೇ ದುಡಿಯಬೇಕೇ ವಿನಃ ಪಕ್ಷದ ಹಿತಕ್ಕಾಗಿ ಮಾತ್ರ ದುಡಿಯುವ ಸಣ್ಣತನ ಕೈಬಿಡಬೇಕು. ಪಕ್ಷವನ್ನು ಕಟ್ಟಿಕೊಂಡಿರುವವನು ರಾಷ್ಟ್ರದ ರಕ್ಷಣೆಯ ವಿಚಾರವನ್ನು ಸದಾ ಮೆಲುಕು ಹಾಕುವಂತಿದ್ದರೆ ನಮ್ಮ ರಾಷ್ಟ್ರವನ್ನು ಈ ಪಥದ ಮಾರ್ಗದಿಂದ ಸದಾ ಸಂರಕ್ಷಿಸಬಹುದಾಗಿದೆ.

ಪ್ರಶ್ನೆ : ಪರಂಪರಾಗತವಾಗಿ ಬಂದ ಕಂದಾಚಾರ ಮೂಢನಂಬಿಕೆಗಳ ಬಗ್ಗೆ ತಮ್ಮ ಅಭಿಪ್ರಾಯವೇನು?

ಉತ್ತರ : ಪರಂಪರಾಗತ ಆಚಾರ–ವಿಚಾರಗಳು ವೈಜ್ಞಾನಿಕ ಹಿನ್ನೆಲೆಯನ್ನು ಹೊಂದಿದವುಗಳಾಗಿರುತ್ತವೆ. ಉದಾ : ವೃಕ್ಷ ಪೂಜಿಸುವುದು, ಅವುಗಳಿಗೆ ಪ್ರದಕ್ಷಿಣೆ ಹಾಕುವುದು, ಸಂತಾನ ಪ್ರಾಪ್ತಿಗಾಗಿ ವೃಕ್ಷ ಪೂಜಿಸುವುದು ಪರಂಪರಾಗತ ಪರಂಪರೆ ಎಂದು ಹೇಳಿರುವುದು ನಿಜ. ಈ ವೃಕ್ಷ ಪೂಜೆಯು ಸಂತಾನ ಪ್ರಾಪ್ತಿಗಾಗಿ ಒಂದು ವೈಜ್ಞಾನಿಕ ತಳಹದಿಯನ್ನು ಹೊಂದಿರುವಂತಾಗಿದೆ. ಪ್ರಾತಃಕಾಲದಲ್ಲಿ ವೃಕ್ಷವನ್ನು ದಂಪತಿಗಳು ಪೂಜಿಸಿದರೆ ಅಥವಾ ಪ್ರದಕ್ಷಿಣೆ ಹಾಕಿದರೆ ಆ ವ್ಯಕ್ತಿಗಳಿಗೆ ಪರಿಶುದ್ಧವಾದ ಹವೆ ಪ್ರಾಪ್ತಿಯಾಗುತ್ತದೆ. ಆ ಹವೆಯ ಸೇವನೆಯಿಂದ ಆರೋಗ್ಯ ಸುಧಾರಿಸಿ ಪ್ರಾಪ್ತಿಯ ಭಾಗ್ಯವನ್ನು ಪಡೆದುಕೊಳ್ಳುವುದು ಆಶ್ಚರ್ಯ ಜನ್ಯವಲ್ಲ. ಇನ್ನು ವೃಕ್ಷವನ್ನು ಪೂಜಿಸಿದರೂ ಸಂತಾನವಾಗದಿದ್ದರೆ ನಿರಾಶೆ ಹೊಂದುವ ಅವಶ್ಯಕತೆಯೂ ಇರುವುದಿಲ್ಲ. ಒಂದು ವೃಕ್ಷವೆಂದರೆ 10 ಮಕ್ಕಳಿಗೆ ಸಮಾನವೆಂಬುದು ಮಹರ್ಷಿ ವ್ಯಾಸರು ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ವವಿಧ ಉಪಚಾರಗಳಿಂದ ಸಂತಾನವಾಗದೇ ಇದ್ದಾಗ ಒಂದು ವೃಕ್ಷವನ್ನು ಹಚ್ಚಿ, ಅದನ್ನು ತಮ್ಮ ಸಂತೋಷೋಪಾದಿಯಲ್ಲಿ ಬೆಳೆಸಿದರೆ ಅದು ಅವನ ಬದುಕಿನುದ್ದಕ್ಕೂ ನೆಮ್ಮದಿ, ಸಮಾಧಾನ ಕೊಡಬಲ್ಲುದು. ಇದೊಂದು ವೈಜ್ಞಾನಿಕ ಸತ್ಯ ಸಂಗತಿ. ಇದರಂತೆ ಯಾವುದಕ್ಕೆ ನಾವು ಮೂಢನಂಬಿಕೆ ಅಥವಾ ಕಂದಾಚಾರ ಎಂದು ಕರೆಯುತ್ತೇವೆಯೋ ಅವುಗಳ ಹಿನ್ನೆಲೆಯ ಬಗ್ಗೆ ಶಾಂತ ಮನಸ್ಕರಾಗಿ ಚಿಂತಿಸಿದರೆ ನಮಗೆ ಒಂದಲ್ಲಾ ಒಂದು ವೈಜ್ಞಾನಿಕ ಹಿನ್ನೆಲೆ ವಿಚಾರ ಅವಶ್ಯವಾಗಿ ದೊರೆತೇ ದೊರೆಯುತ್ತದೆ. ಒಂದು ವೇಳೆ ಅಂತಹ ವೈಜ್ಞಾನಿಕ ಹಿನ್ನೆಲೆ ಇರಲಾರದ ಯಾವುದೇ ಕಂದಾಚಾರಗಳನ್ನು ಬಿಟ್ಟುಬಿಡುವಲ್ಲಿ ಯಾವ ದೋಷವೂ ಇರಲಾರದು.

ಸಂದರ್ಶಕರು : ***ಎಸ್.ಎಂ ಯಲಬುರ್ಗಿ***
ಶಿಕ್ಷಕರು, ಸಾ॥ ಅಡ್ನೂರ

ಎಲ್ಲ ನದಿಗಳು ಕೊನೆಗೆ ಸಮುದ್ರವನ್ನೇ ಸೇರುವಂತೆ
ಎಲ್ಲ ಧರ್ಮಗಳೂ ಮನುಷ್ಯನನ್ನು ಸನ್ಮಾರ್ಗದತ್ತ ಒಯ್ಯುತ್ತವೆ
– ಶ್ರೀ ಕಾಶೀ ಜಗದ್ಗುರುಗಳು

ರಾಣಿಬೆನ್ನೂರ 20–9–2003

ರಾಣಿಬೆನ್ನೂರಿನಲ್ಲಿ ಜಗದ್ಗುರುಗಳ ಕಾರ್ಯಕ್ರಮವನ್ನು ಪ್ರತೀ ವರ್ಷ ಏರ್ಪಡಿಸಿಕೊಂಡು ಬಂದಿದ್ದಾರೆ. ಮೂರನೇ ದಿನದ ಆಶೀರ್ವಚನ ಕಾರ್ಯಕ್ರಮದಲ್ಲಿ ಒಂದು ವಿಶೇಷತೆಯಿತ್ತು. ಶ್ರೀ ಮ.ನಿ.ಪ್ರ. ದಿಂಗಾಲೇಶ್ವರ ಸ್ವಾಮಿಗಳು ಬಾಲೆಹೊಸೂರ ಮತ್ತು ಮಣಕೂರಿನ ಶ್ರೀ ಮ.ನಿ.ಪ್ರ ಹಾಲಸ್ವಾಮಿಗಳನ್ನು ಆಹ್ವಾನಿಸಿದ್ದು, ಜಗದ್ಗುರುಗಳ ಆಶೀರ್ವಚನ ಕಾರ್ಯಕ್ರಮದಲ್ಲಿ ಈ ಇಬ್ಬರು ವಿರಕ್ತ ಸ್ವಾಮಿಗಳು ಭಾಗವಹಿಸಿ ತಾವುಗಳು ಮಾತನಾಡಿದರು.

ಇದನ್ನು ನೋಡಿದರೆ ಜಗದ್ಗುರುಗಳು ನಿಧಾನವಾಗಿ ಗುರುವಿರಕ್ತರನ್ನು ಒಂದಾಗಿಸುವ ಪ್ರಯತ್ನದಲ್ಲೇ ಮುಂದುವರೆಯುತ್ತಿರುವುದನ್ನು ಕಾಣಬಹುದಾಗಿದೆ.

ಸಮಾಜದಲ್ಲಿ ವಿರೋಧರಹಿತ ಪರಿಸರ ನಿರ್ಮಾಣಕ್ಕೆ ಕಾಶೀ ಜಗದ್ಗುರುಗಳ ಕರೆ


ಬಾಳೆಹೊನ್ನೂರಲ್ಲಿ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಸಂಸ್ಥಾನ ಮಹಾಪೀಠದಲ್ಲಿ **19–9–03**ರಲ್ಲಿ 3 ದಿನಗಳ ಕಾಲ ಮಠಾಧೀಶರ ಪುನಶ್ಚೇತನ ಶಿಬಿರದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಕಾಶೀ ಜಗದ್ಗುರುಗಳು ರಾಜ್ಯದೆಲ್ಲೆಡೆಯಿಂದ ಶಿಬಿರದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಮಠಾಧೀಶರನ್ನು ಕುರಿತು ಸಿದ್ಧಾಂತ ಶಿಖಾಮಣಿಯಲ್ಲಿ ಬೋಧಿಸಿರುವ ತತ್ವಗಳನ್ನು, ಶರಣರ ವಿಚಾರಗಳನ್ನು ಮನೆಮನೆಗೆ ಮುಟ್ಟಿಸುವ ಕಾರ್ಯ ಮಾಡಿದಲ್ಲಿ ವಿರೋಧರಹಿತ ಸಮಾಜವನ್ನು ಕಾಣಲು ಸಾಧ್ಯವೆಂದೂ, ವೀರಶೈವ ಸಿದ್ಧಾಂತದಲ್ಲಿ ಖಂಡನೆ–

ಮಂಡನೆಗಳಿಗೆ ಆದ್ಯತೆ ನೀಡದೆ ಆಕ್ರೋಶ ಭಾವನೆಗಳಿಗೆ ಎಡೆ ಮಾಡಿಕೊಡದೆ ಶಾಂತಿಯನ್ನು ಬಯಸುತ್ತದೆ. ಈ ಕಡೆಗೆ ಎಲ್ಲರೂ ಗಮನಿಸಬೇಕೆಂದು ಸಮನ್ವಯದ ಮಾರ್ಗವನ್ನು ತಿಳಿಸಿಕೊಟ್ಟರು.

ಪ್ರತೀ ಊರುಗಳಲ್ಲಿ ಗ್ರಾಮಗಳಲ್ಲಿ ವೀರಶೈವ ಮಠಗಳಿವೆ. ಮಠದ ಸ್ವಾಮಿಗಳಿಗೆ ಊರಿನ ಜನರ ಸಂಪರ್ಕ ನೇರವಾಗಿರುತ್ತದೆ. ಮಠದ ಸ್ವಾಮಿಗಳು ಸಮನ್ವಯದ ದೃಷ್ಟಿಯಿಂದ ಕೆಲಸ ಮಾಡಿದಲ್ಲಿ ಜನರಲ್ಲಿ ತಿಳುವಳಿಕೆ ಮೂಡಿಸಲು ಸಾಧ್ಯ ಎಂಬುದೇ ಜಗದ್ಗುರುಗಳ ಆಶಯ. ಜಾತಿ, ಮತ ಪಂಥಗಳನ್ನು ಬದಿಗೊತ್ತಿ ದೀಪದಂತೆ ಎಲ್ಲರೂ ಸಮಾಜದ ಒಳಿತಿಗಾಗಿ ಹಾಗೂ ಉನ್ನತಿಗಾಗಿ ಕಾರ್ಯತತ್ಪರರಾಗಬೇಕೆಂಬುದೇ ಜಗದ್ಗುರುಗಳ ಆಶಯ.

ಯಾವುದೇ ಕಾರ್ಯಕ್ರಮವಿರಲಿ ಗುರುವರ್ಗ ಮತ್ತು ವಿರಕ್ತವರ್ಗದ ಸ್ವಾಮಿಗಳು ಸಮಾಜದ ಎರಡು ಕಣ್ಣುಗಳಿದ್ದಂತೆ. ಈ ಎರಡೂ ವರ್ಗಗಳು ಒಂದಾಗುವುದು ತೀರ ಅವಶ್ಯಕ. ಎರಡೂ ವರ್ಗದ ಸ್ವಾಮಿಗಳ ಐಕ್ಯತೆಯಲ್ಲಿಯೇ ಸಮಾಜದ ಐಕ್ಯತೆ, ಅಭಿವೃದ್ಧಿ ಅಡಗಿದೆ ಎಂದು ತಪ್ಪದೆ ಹೇಳುತ್ತಾ ಬರುತ್ತಿದ್ದಾರೆ.

ಮಠಗಳು ನಿಜವಾದ ಸಾಂಸ್ಕೃತಿಕ ಕೇಂದ್ರಗಳು



ಬೆಳಗಾವಿ **21–1–2004** ಬೆಳಗಾವಿಯಲ್ಲಿರುವ ಶಿವಬಸವ ನಗರದ ಕಾರಂಜಿಮಠಕ್ಕೆ ಕಾಶೀ ಜಗದ್ಗುರುಗಳು 2004ರ ಜನವರಿ 21ನೇ ತಾರೀಖಿನಂದು ಅಲ್ಲಿನ ವಿರಕ್ತ ಸ್ವಾಮಿಗಳ ಆಹ್ವಾನವನ್ನು ಮನ್ನಿಸಿ ಭೇಟಿ ನೀಡಿ ಸ್ವಾಮಿಜೀಗಳು ಮಾಡುತ್ತಿರುವ ಸಾರ್ವಜನಿಕರ ಸೇವೆಯನ್ನು ಮೆಚ್ಚಿ ಮಠಗಳಿರುವುದು ಸಮಾಜದಲ್ಲಿರುವ ಸಾಮಾನ್ಯ ಭಕ್ತರ ಒಳಿತಿಗಾಗಿ, ಜನರ ನಡುವೆ ಇರುವ ಸಂಕುಚಿತ ಭಾವನೆಗಳನ್ನು ದೂರ ಮಾಡಲು ಎಂದು ಸ್ವಾಮಿಜಿಯವರನ್ನು ಶ್ಲಾಘಿಸಿದರು. ಕಾರಂಜಿ ಮಠವು ಉತ್ಕೃಷ್ಟಜ್ಞಾನ ಬೋಧನೆ ಮಾಡುವ ಕೇಂದ್ರವನ್ನಾಗಿಸಿ ವೀರಶೈವ ಮತ ಪ್ರಚಾರ ಮಾಡಿ ಆಚಾರಗಳನ್ನು ಕಲಿಸುತ್ತಿದ್ದಾರೆ ಎಂದು ಸಂತೋಷದಿಂದ ಹೇಳಿದರು. ಕಾರಂಜಿಮಠದ ಸ್ವಾಮಿಗಳೂ ಜಗದ್ಗುರುಗಳಿಗೆ ಭಕ್ತಿಪೂರ್ವಕ ಪೂಜೆ ಸಲ್ಲಿಸಿದ್ದು ಗುರು–ವಿರಕ್ತರ ಹೃದಯಗಳು ಇಲ್ಲಿ ಒಂದಾಗಿ ಸ್ಪಂದಿಸಿರುವುದು ಮರೆಯಲಾಗದ್ದು.

6–5–2004 ಹೋದೆಡೆಯೆಲ್ಲಾ ಗುರು–ವಿರಕ್ತರ ಸಮನ್ವಯದ ಮಂತ್ರವನ್ನು ಬಿತ್ತುತ್ತಾ ಸಾಗುತ್ತಿರುವ ಸಮಯದಲ್ಲಿ ಮತ್ತೊಂದು ಅಪಸ್ವರದ ದನಿ ಸಮಾಜದಲ್ಲಿ ತಲೆ ಎತ್ತಿತ್ತು. 2003ನೇ ವರ್ಷವನ್ನು ಸಮನ್ವಯದ ಸಂಕ್ರಾಂತಿ ವರ್ಷ ಎಂದು ಆ ನಿಟ್ಟಿನಲ್ಲಿ ಅನೇಕ ಮಠಾಧೀಶರು ಕಾರ್ಯತತ್ಪರರಾಗಿರುವ ವೇಳೆಯಲ್ಲಿ ಚಿತ್ರದುರ್ಗದ ಮುರುಘಾ ಮಠದ ಶ್ರೀ ಶಿವಮೂರ್ತಿ ಶರಣರು 'ಬಸವಧರ್ಮ' ಎಂಬುದಾಗಿ ಸ್ಥಾಪಿಸ ಹೊರಟಿರುವ ಹೇಳಿಕೆಯನ್ನು ಓದಿದ ತಕ್ಷಣ ನಾಡಿನಾದ್ಯಂತ ಅನೇಕ ಮಠಾಧೀಶರು, ವಿದ್ವಾಂಸರು, ಶಾಸನತಜ್ಞರು–ಎಲ್ಲರೂ ಅದನ್ನು ವಿರೋಧಿಸಿ ಪತ್ರಿಕಾ ಹೇಳಿಕೆಗಳನ್ನು ಕೊಡಲಾರಂಭಿಸಿದ ಸಂದರ್ಭದಲ್ಲಿ ಕಾಶೀ ಜಗದ್ಗುರುಗಳು ಬಳ್ಳಾರಿಯ ಆಧ್ಯಾತ್ಮಿಕ ವೇದಿಕೆ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನದಲ್ಲಿ ತೊಡಗಿದ್ದರು. ಕಳೆದ ವರ್ಷದಂತೆ ಈ ಬಾರಿಯೂ 6–5–2004ರಂದು ಕೊಟ್ಟೂರುಸ್ವಾಮಿ ಮಠಾಧೀಶ ಸಂಗನಬಸವ ಸ್ವಾಮಿಗಳು ಉದ್ಘಾಟಿಸಿದರು. ಸ್ವಾಮಿಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ವೀರಶೈವದ ಪ್ರಾಚೀನತೆ ಕುರಿತು ಈ ಧರ್ಮಕ್ಕೆ

ಸನಾತನರಾದ ವೀರಶೈವ ಧರ್ಮವಿರುವಾಗ
ಹೊಸಧರ್ಮದ ಅವಶ್ಯಕತೆ ಇಲ್ಲ : ಸಂಗನ ಬಸವ ಶ್ರೀಗಳು



ಬಳ್ಳಾರಿಯ ಶೆಟ್ರ ಗುರುಶಾಂತಪ್ಪ ಪದವಿಪೂರ್ವ ಕಾಲೇಜ್‌ನಲ್ಲಿ ಆಯೋಜಿಸಿರುವ ಕಾಶೀ ಜಗದ್ಗುರುಗಳ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಪ್ರವಚನವನ್ನು ಕೊಟ್ಟೂರು ಸ್ವಾಮಿಮಠದ ಸಂಗನಬಸವ ಸ್ವಾಮಿಗಳು ಉದ್ಘಾಟಿಸಿದರು. ಚಿತ್ರದಲ್ಲಿ ಕಾಶಿ ಜಗದ್ಗುರುಗಳು, ಜಾನುಕೋಟಮಠದ ಶ್ರೀಗಳು ಇತರರನ್ನು ಕಾಣಬಹುದು.

ಬಸವಾದಿ ಶರಣರೂ ಪಂಚಪೀಠಾಚಾರ್ಯರೂ ಕೊಟ್ಟಿರುವ ಅಪಾರ ಕೊಡುಗೆಯ ಬಗ್ಗೆಯೂ ವಿವರಿಸುತ್ತಾ ಭಕ್ತಾದಿಗಳೆಲ್ಲಾ ವೀರಶೈವ ದರ್ಮಾಚಾರಣೆಯಲ್ಲಿ ನಂಬಿಕೆ ಇಟ್ಟು ಪಾಲಿಸುತ್ತಿರುವಲ್ಲಿ ಬಸವಣ್ಣನವರ ಹೆಸರಿನಲ್ಲಿ ಹೊಸ ಧರ್ಮದ ಹುಟ್ಟು ಹಾಕುವುದು ನಿರರ್ಥಕ. ಈ ಧರ್ಮದ ನಿಯಮಗಳಲ್ಲಿ ಆಹಾರದ ಬಗ್ಗೆ ಯಾವ ನಿರ್ಬಂಧ ಇಲ್ಲವೆಂದು ಮಾಂಸಾಹಾರಿಗಳಾಗಿದ್ದರೂ ಅಂಗೀಕಾರಾರ್ಹ ಎಂದು ಹೇಳಿರುವುದನ್ನು ಬಲವಾಗಿ ಖಂಡಿಸಿದರು.

ಈ ಧರ್ಮದ ಅನುಯಾಯಿಗಳನ್ನು ಅಧರ್ಮ ಕೂಪದಲ್ಲಿ ನೂಕುತ್ತಿರುವ ಸ್ವಾಮಿಗಳಿಂದ ಭಕ್ತರು ಎಚ್ಚೆತ್ತುಕೊಳ್ಳಬೇಕಾಗಿದೆ ಎಂದು ಹೇಳಿದರು.

ಚಿತ್ರದುರ್ಗದ ಶರಣರಾಗಲೀ ಅಥವಾ ಗದಗ ಹಾಗೂ ಇಳಕಲ್ಲಿನ ಶ್ರೀಗಳಾಗಲೀ ಇಂಥ ವೀರಶೈವ ಧರ್ಮ ವಿರೋಧಿ ಹೊಸ ಧರ್ಮವನ್ನು ಸ್ಥಾಪಿಸುವುದೇ ಆದಲ್ಲಿ ಈಗಿರುವ ವೀರಶೈವ ಪರಂಪರೆ ಇರುವ ಮಠಗಳಿಗೆ ರಾಜೀನಾಮೆ ನೀಡಿ ಅಲ್ಲಿಂದ ಹೊರಬಂದು ಹೊಸ ಧರ್ಮ ಸ್ಥಾಪಿಸಿ ತೋರಿಸಲಿ ಎಂದು ಅವರು ಸವಾಲು ಹಾಕಿದರು.

ವೀರಶೈವ ಧರ್ಮದ ಮಠಗಳ ಆಸ್ತಿ-ಪಾಸ್ತಿಯನ್ನು ಉಪಭೋಗಿಸುತ್ತ ಆ ಧರ್ಮಕ್ಕೆ ಅಪಚಾರ ಮಾಡಿರುವುದು ಸೂಕ್ತವಲ್ಲ. ಅದಕ್ಕಾಗಿ ಈ ವಿಷಯದಲ್ಲಿ ಅವರು ಮರುಚಿಂತನೆ ಮಾಡಿ ಹೊಸ ಧರ್ಮ ಸ್ಥಾಪಿಸುವ ವಿಚಾರವನ್ನು ಕೈಬಿಡುವುದೇ ಸೂಕ್ತ ಎಂದು ಸಂಗನಬಸವ ಶ್ರೀಗಳು ಹೇಳಿದರು.

ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವು ವೀರಶೈವ ಧರ್ಮದ ಅತ್ಯಂತ ಪ್ರಾಚೀನ ಸಿದ್ಧಾಂತ ಗ್ರಂಥವಾಗಿದ್ದು ಈ ಗ್ರಂಥದ ಕಾಲಮಾನದ ನೆಪದಲ್ಲಿ ಕೆಲವರು ಇದರ ಬಗ್ಗೆ ಹಗುರವಾಗಿ ಮಾತನಾಡುವುದು ಸರಿಯಲ್ಲ ಎಂದರು.

ಕಾಶೀ ಜಗದ್ಗುರುಗಳು ಮೊದಲ ದಿನದ ಆಶೀರ್ವಚನದಲ್ಲಿ ಇದೇ ವಿಚಾರವನ್ನು ಪ್ರಸ್ತಾಪಿಸಿ ಶಿವಮೂರ್ತಿ ಶರಣರು ಸ್ಥಾಪಿಸಲು ಹೊರಟಿರುವ ಹೊಸ ಧರ್ಮವು ಅತ್ಯಂತ ಅಶಾಸ್ತ್ರೀಯವಾದುದು. ಮನುಷ್ಯರೆಲ್ಲರೂ ಸಸ್ಯಾಹಾರಿಗಳೇ ಆಗಬೇಕೆಂದು ವೈದ್ಯರು ಸಲಹೆ ನೀಡುತ್ತಿರುವಾಗ ಧರ್ಮ ಗುರುಗಳು ಮಾಂಸಾಹಾರಕ್ಕೆ ಪ್ರಚೋದನೆ ಕೊಡುತ್ತಿರುವುದು ಅಧರ್ಮ, ಅವೈಜ್ಞಾನಿಕವಾದುದು ಎಂದು ಹೇಳಿದ್ದಲ್ಲದೆ-ಬಸವಾದಿ ಶರಣರು ದಯವೇ ಧರ್ಮದ ಮೂಲವಯ್ಯ ಎಂದು ಅಭಿಪ್ರಾಯ ಹಾಕಿದ್ದಾರೆ. ಸಿದ್ಧಾಂತ ಶಿಖಾಮಣಿಯಲ್ಲಿ ದಶವಿಧ ಧರ್ಮಗಳ ಬಗ್ಗೆ ಹೇಳುವಾಗ ಅಹಿಂಸೆಗೆ ಆದ್ಯತೆ ಕೊಟ್ಟಿರುವುದನ್ನು ತಿಳಿಸಿ-ಇಂತಹ ಅಧರ್ಮೀಯ ಹೇಳಿಕೆಗಳಿಗೆ ಕಿವಿಕೊಡಬಾರದೆಂದೂ ಎಚ್ಚರಿಸಿದರು. ಎಲ್ಲಾ ಮಠಾಧಿಪತಿಗಳು ಶಿವಮೂರ್ತಿ ಶರಣರ ವಿಚಾರಗಳನ್ನು ತೀವ್ರವಾಗಿ ವಿರೋಧಿಸಿ ಜನಜಾಗೃತಿಗೊಳಿಸಬೇಕೆಂದು ಹೇಳಿದರು.

ಅದೇ ಕಾರ್ಯಕ್ರಮದಲ್ಲಿ ಒಂದು ದಿನ 13-5-04ರಲ್ಲಿ ಜಗದ್ಗುರುಗಳು ಪತ್ರಿಕಾಗೋಷ್ಠಿ ಕರೆದು ಈ ವಿಚಾರವಾಗಿ ತಮ್ಮ ನಿಲುವನ್ನು ಸ್ಪಷ್ಟಡಿಸಿದರು.

'ಹೊಸ ಧರ್ಮದ ಸ್ಥಾಪನೆ ಯತ್ನ ನಿರರ್ಥಕ' ಕಾಶೀ ಜಗದ್ಗುರುಗಳ ನಿಲುವು **ನಾಗರಿಕ, 14-5-2014**

ಬಳ್ಳಾರಿ ಮೇ 13-ಚಿತ್ರದುರ್ಗದ ಮುರುಘಾಮಠದ ಶ್ರೀ ಶಿವಮೂರ್ತಿ ಶರಣರು ಬಸವ ಧರ್ಮದ ಹೆಸರಿನಲ್ಲಿ ಹೊಸ ಧರ್ಮವನ್ನು ಸ್ಥಾಪಿಸಲು ಹೊರಟಿರುವ ನಿರ್ಧಾರವನ್ನು ವೀರಶೈವ ಧರ್ಮದ ಪಂಚಪೀಠಗಳಲ್ಲಿ ಒಂದಾದ ಕಾಶೀಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಧರ್ಮ ಎಂಬುದು ಯಾರು ಬೇಕಾದರೂ ಯಾವಾಗ ಬೇಕಾದರೂ ಸ್ಥಾಪಿಸುವ ವಿಚಾರವಲ್ಲ. ವೀರಶೈವ ಧರ್ಮ ಸನಾತನ ಧರ್ಮವಾಗಿದ್ದು ಹಲವು ನೂರು ವರ್ಷಗಳಿಂದ ಆಚರಣೆಯಲ್ಲಿ ಇದೆ. ಹೀಗಾಗಿ ಹೊಸ ಧರ್ಮ ಸ್ಥಾಪಿಸುವುದು ನಿರರ್ಥಕ ಪ್ರಯತ್ನ ಎಂದು ಹೇಳಿದರು.

ಹೊಸ ಧರ್ಮ ಸ್ಥಾಪಿಸುವುದು ಅಪ್ರಸ್ತುತ. ಅವರಿಗೆ ಇಂಥ ಹೊಸ ಧರ್ಮ ಸ್ಥಾಪಿಸುವ ಅಧಿಕಾರವಿಲ್ಲ ಎಂದು ಹೇಳಿದ ಅವರು ಬೇಕಿದ್ದರೆ ನಿಮ್ಮ ಹೆಸರಿನಲ್ಲೇ ಒಂದು ಹೊಸ ಧರ್ಮ ಸ್ಥಾಪಿಸಿ. ಬಸವಣ್ಣನವರ ಹೆಸರಿನಲ್ಲಿ ಏಕೆ ಧರ್ಮ ಸ್ಥಾಪಿಸಲು ಹೊರಟಿರುವಿರಿ ಎಂದು ಪ್ರಶ್ನಿಸಿದ ಅವರು ನಿಮ್ಮ ಹೆಸರಿನಲ್ಲಿಯೇ ಧರ್ಮ ಸ್ಥಾಪಿಸಿ, ಆಮೇಲೆ ಅದಕ್ಕೆ ಎಷ್ಟು ಜನರ ಬೆಂಬಲ ಸಿಗುತ್ತದೆ ಎಂಬುದನ್ನು ನೋಡೋಣ ಎಂದು ಅವರು ಖಾರವಾಗಿ ನುಡಿದರು.

ಒಂದು ವೇಳೆ ಬಸವಣ್ಣ ಅವರಿಗೆ ಹೊಸ ಧರ್ಮ ಸ್ಥಾಪಿಸಬೇಕೆಂದು ಅನಿಸಿದ್ದರೆ ಅವರೇ ಆ ಕಾರ್ಯ ಮಾಡಬಹುದಿತ್ತು. ಆದರೆ ಹೊಸ ಧರ್ಮಕ್ಕೆ ಬದಲಾಗಿ ವೀರಶೈವ ಧರ್ಮದ ಪ್ರಚಾರ, ಪ್ರಸಾರದಲ್ಲಿ ಅವರು ಮುಂದಾದರು. ವೀರಶೈವ ಧರ್ಮದಲ್ಲಿ ತತ್ವವೇ ಪ್ರಧಾನ, ವ್ಯಕ್ತಿ ಪ್ರಧಾನವಲ್ಲ ಎಂದು ಡಾ. ಚಂದ್ರಶೇಖರ ಸ್ವಾಮಿಗಳು ಹೇಳಿದರು.

ಹೊಸ ಧರ್ಮದ ಹೆಸರಿನಲ್ಲಿ ಇಂಥ ಅನಾವಶ್ಯಕ ಗೊಂದಲಗಳನ್ನು ಎಬ್ಬಿಸುವ ಅಗತ್ಯ ಇರಲಿಲ್ಲ ಎಂದು ಅವರು ಅಭಿಪ್ರಾಯ ಪಟ್ಟರು.

ಧರ್ಮಾಚಾರ್ಯರು ರಾಜಕೀಯ ಪ್ರವೇಶಿಸುವ ಇತ್ತೀಚಿನ ಬೆಳವಣಿಗೆಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ ಅವರು ಧರ್ಮ ಗುರುಗಳು ಮಠದಲ್ಲೇ ಇದ್ದುಕೊಂಡು ಸಮಾಜಕ್ಕೆ, ರಾಜಕೀಯ ವ್ಯಕ್ತಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡಬೇಕು. ಒಂದು ವೇಳೆ ಅವರೂ ರಾಜಕೀಯ ಸೇರಿದರೆ ಅವರೂ ಕೂಡ ಅದೇ ಗುಂಪಿನಲ್ಲಿ ಸೇರುವ ಸಾಧ್ಯತೆ ಹೆಚ್ಚು ಎಂದು ಅವರು ಹೇಳಿದರು.

ಎಂ. ಚಿದಾನಂದಮೂರ್ತಿ ಅವರ ಪ್ರತಿಕ್ರಿಯೆ :

ವೀರಶೈವ, ಲಿಂಗಾಯತ ಪದಗಳು ಬೇರೆ ಬೇರೆ ವರ್ಗ ಸೂಚಕ ಎಂದು ಹೇಳುವವರಿಗೆ ಆವೇಶ ಮತ್ತು ತಪ್ಪು ಕಲ್ಪನೆಗಳನ್ನು ಬಿಟ್ಟರೆ ಬೇರೆ ಆಧಾರಗಳಿಲ್ಲ. ಗುರುಪೀಠ, ವಿರಕ್ತ ಪೀಠಗಳಿಗೆ ಮುಸುಕಿನ ಗುದ್ದಾಟ ಹಿಂದೆ ಇದ್ದು ಅದು ಬಹಿರಂಗವಾಗಿಯೇ ವ್ಯಕ್ತವಾಗುತ್ತಿರುವುದು ಸ್ಪಷ್ಟವಾಗಿದೆ. ಆದರೆ ಲಿಂಗಾಯತ ಸಮಾಜದ ಇತಿಹಾಸವನ್ನು ಗಮನಿಸಿದರೆ ಅವೆರಡಕ್ಕೂ ಕೆಲವು ಕರ್ತವ್ಯ ಭೇದವಿರಬಹುದೇ ಹೊರತು ಅವೆರಡರ ಅಂತಿಮ ಉದ್ದೇಶ ಸಾಮಾಜಿಕ ಒಳಿತು ಮತ್ತು ಆಧ್ಯಾತ್ಮಿಕ ಪ್ರಗತಿ ಎಂಬಲ್ಲಿ ಎರಡು ಮಾತುಗಳಿಲ್ಲ. ನಾನು ನನ್ನ "ಪರಸ್ಪರ 'ಬಾ' 'ಬಾ' ಎಂದು ಕರೆಯುತ್ತಿರುವ ಬಸವ ಕಲ್ಯಾಣ ಮತ್ತು ಬಾಳೆಹೊನ್ನೂರು" ಎಂಬ ಕಿರು ಪುಸ್ತಿಕೆಯಲ್ಲಿ ತೋರಿಸಿರುವಂತೆ ಎರಡೂ ವರ್ಗದ ಪೀಠಾಧ್ಯಕ್ಷರು ಉದ್ದಕ್ಕೂ ಪರಸ್ಪರ ಸಮಾನ ಗೌರವಗಳಿಂದ ನಡೆದುಕೊಂಡಿರುವುದಲ್ಲದೆ ಹಿಂದಿನ ಲಿಂಗಾಯತ ಸಮಾಜ ಇಬ್ಬರನ್ನೂ ಸಮಾನ ಗೌರವದಿಂದ ಕಂಡಿದೆ. ಆ ಎರಡೂ ಬಗೆಯ ಮಠಗಳು ಲಿಂಗಾಯತ ಸಮಾಜದ ಎರಡು ಕಣ್ಣುಗಳು.

ಪೀಠ ತ್ಯಜಿಸಲು ಆಗ್ರಹ :

ಬಸವಣ್ಣನವರ ಹೆಸರಿನಲ್ಲಿ ಮಾಂಸಾಹಾರಕ್ಕೆ ಅವಕಾಶ ಕಲ್ಪಿಸುವ ನಿರ್ಣಯ ಸ್ವೀಕರಿಸುವ ಮಠ–ಪೀಠಾಧಿಪತಿಗಳು, ತಮ್ಮ ಮಠಾಧಿಕಾರ–ಪೀಠಾಧಿಕಾರ ಸ್ವೀಕರಿಸುವ ಸಂದರ್ಭದಲ್ಲಿ ಇಂಥ ವಿಚಾರಧಾರೆ ಹೊಂದಿರಲಿಲ್ಲವೆಂಬ ಕಾರಣದಿಂದ ಇವರನ್ನು ಪೀಠಾಧಿಕಾರಿಯನ್ನಾಗಿ ಸಮಾಜ ಒಪ್ಪಿಕೊಂಡಿದೆ. ಈಗ ಏಕಾಏಕಿಯಾಗಿ ಬಸವಾದಿ ಶರಣರ ತತ್ವಗಳಿಗೆ ವಿರುದ್ಧವಾದ ನಿಲವು ತಳೆದಿರುವುದರಿಂದ ಇವರು ಮೊದಲು ತಮ್ಮ ಮಠ–ಪೀಠಗಳನ್ನು ತ್ಯಜಿಸಿ ಹೊರಗೆ ಬರಬೇಕೆಂದು ಕಲ್ಯಾಣ ನಾಡಿನ ಶರಣ ಪರಿಷತ್ತಿನ ಸಂಸ್ಥಾಪಕರಾದ ನೀಲಗುಂದ ಶ್ರೀಗಳು ಆಗ್ರಹಿಸಿದ್ದಾರೆ.

'ಬಸವಧರ್ಮ' ಸ್ಥಾಪನೆ : ವೀರಶೈವ ಮಹಾಸಭೆ ಪ್ರಶ್ನೆ

ಬೆಂಗಳೂರು ಮೇ–4 ವೀರಶೈವ ಲಿಂಗಾಯತ ಧರ್ಮದ ಜೊತೆಗೆ ಬಸವಣ್ಣನವರ ಹೆಸರಿನಲ್ಲಿ 'ಬಸವಧರ್ಮ' ಎಂಬ ಮತ್ತೊಂದು ಧರ್ಮ ಸ್ಥಾಪಿಸುವ ನಿಲುವನ್ನು ಅಖಿಲ ಭಾರತ ವೀರಶೈವ ಮಹಾಸಭೆ ಪ್ರಶ್ನಿಸಿದೆ.

ಈ ಕುರಿತು ಕೂಡಲಸಂಗಮ ಸಮಾವೇಶದಲ್ಲಿ ಕೈಗೊಂಡ ನಿರ್ಣಯಗಳನ್ನು ಕೂಲಂಕಷವಾಗಿ ಮಹಾಸಭೆಯ ವರಿಷ್ಠರ ಸಭೆಯಲ್ಲಿ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಇಂದು ನಡೆದ ಮಹಾಸಭಾದ ಕೇಂದ್ರ ಸಮಿತಿಯ ಪದಾಧಿಕಾರಿಗಳ ತುರ್ತು ಸಭೆ ತೀರ್ಮಾನಿಸಿದೆ.

'ಬಸವಣ್ಣನ ಹೆಸರಿನಲ್ಲಿರುವ ಬಸವ ಧರ್ಮದ ಅನುಯಾಯಿಗಳು ವೈಯಕ್ತಿಕವಾಗಿ ಮಾಂಸಾಹಾರಿಗಳು ಆಗಿದ್ದರೂ ಅಂಗೀಕಾರಾರ್ಹ ಎಂಬ ನಿರ್ಣಯವು ಅತ್ಯಂತ ಗಂಭೀರ ಮತ್ತು ಖಂಡನಾರ್ಹ' ಎಂದು ಮಹಾಸಭಾದ ಮಹಾ ಪ್ರಧಾನ ಕಾರ್ಯದರ್ಶಿ ಎಚ್.ವಿ. ನಾಗೇಂದ್ರಪ್ಪ ಹೇಳಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು ಇತ್ತೀಚೆಗೆ ಕೂಡಲಸಂಗಮದಲ್ಲಿ ನಡೆದ 'ಬಸವಧರ್ಮ' ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯವನ್ನು ಪತ್ರಿಕೆಗಳಲ್ಲಿ ಓದಿಯೇ ಬಸವಾಭಿಮಾನಿಗಳು ಬೇಸರಗೊಂಡಿದ್ದಾರೆ. ಈ ನಿರ್ಣಯವೇ ಅತ್ಯಂತ ಅಸಂಗತವಾದುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಹೊಸ ಧರ್ಮದ ಸ್ಥಾಪನೆ ಹಕ್ಕು ನೀಡಿದವರಾರು? ಪಂಚ ಪೀಠಾಧೀಶರ ಪ್ರಶ್ನೆ

ಕುಷ್ಟಗಿ, ಮೇ–4–ವೀರಶೈವ ಧರ್ಮವನ್ನು ಸ್ವತಃ ಬಸವಣ್ಣನವರೆ ಒಪ್ಪಿಕೊಂಡಿದ್ದರೂ ಅವರ ಹೆಸರಿನಲ್ಲಿ ಹೊಸ ಧರ್ಮ ಸ್ಥಾಪಿಸಲು ಹೊರಟಿರುವ ಈ ಸ್ವಾಮೀಜಿಗಳಿಗೆ ಹಕ್ಕು ನೀಡಿದವರಾರು ಎಂದು ಪಂಚ ಪೀಠಾಧೀಶರು ಪ್ರಶ್ನಿಸಿದ್ದಾರೆ.

ಈ ಕುರಿತು ಸೋಮವಾರ ಇಲ್ಲಿ ನೀಡಿರುವ ಪತ್ರಿಕಾ ಹೇಳಿಕೆ ಮತ್ತು ಚಳಗೇರಿ ಗ್ರಾಮದ ಶ್ರೀಗಳ ವಜ್ರಮಹೋತ್ಸವ ಸಮಾರಂಭದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಪಂಚಾಚಾರ್ಯರು, ಬಸವಧರ್ಮ ಕಟ್ಟಲು ಹೊರಟಿರುವ ಸ್ವಾಮೀಜಿಗಳ ನಿಲುವನ್ನು ಖಂಡಿಸಿ ಇದು ಧರ್ಮ ಮತ್ತು ಸಮಾಜವನ್ನು ಒಡೆಯುವ ಕುತಂತ್ರವಾಗಿದೆ ಎಂದು ಕಟುವಾಗಿ ಟೀಕಿಸಿದರು.

ಬಹಿರಂಗ ಸಭೆಯಲ್ಲಿ ಮಾತನಾಡಿದ ರಂಭಾಪುರಿ, ಉಜ್ಜಯಿನಿ, ಶ್ರೀಶೈಲ ಮತ್ತು ಕಾಶೀ ಪೀಠದ ಶ್ರೀಗಳು, ಧರ್ಮವೆಂದರೆ ಯಾರು ಯಾವಾಗ ಬೇಕಾದರೂ ಸ್ಥಾಪನೆ ಮಾಡುವಂತಹದ್ದಲ್ಲ, ಅದನ್ನು ಹಿಂದೆಯೇ ಕಟ್ಟಲಾಗಿದ್ದು ಈಗ ಅದರ ತತ್ವಗಳನ್ನು ಆಚರಣೆ ಮಾಡುವುದಷ್ಟೇ ನಮ್ಮ ಕೆಲಸವಾಗಿದ್ದು ಯಾರದೋ ಹೆಸರು ಕೆಡಿಸಿ ಹೊಸದರ್ಮ ಸ್ಥಾಪನೆ ಮಾಡುವಂತಹ ಅವಶ್ಯಕತೆ ಇಲ್ಲ ಎಂದರು.

ಮಾಂಸಾಹಾರ ನಿರ್ಣಯ : ಶರಣ ಸಾಹಿತ್ಯ ಪರಿಷತ್ತು ವಿರೋಧ

ತಾವು ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಒಂದು ಮಠದ ಮುಖ್ಯಸ್ಥರಾಗಿ ಈ ಹಿಂದೆ ನಡೆಸಿರುವ ಕೆಲವು ಸೇವಾ ಚಟುವಟಿಕೆಗಳ ಬಗೆಗೆ ಪತ್ರಿಕೆಗಳಲ್ಲಿ ದೊರೆತ ಪ್ರಚಾರವೇ ಇಂತಹ 'ದಿಟ್ಟ ಕ್ರಾಂತಿಕಾರಕ' ನಿರ್ಧಾರಕ್ಕೆ ಸ್ಫೂರ್ತಿಯಾಗಿರ ಬಹುದು.

ಇದು ಎಂತಹ ಧಾರ್ಮಿಕ ನೀತಿ? ಒಂದು ಕಡೆ ಪಾನನಿಷೇಧ ಚಳವಳಿ ನಡೆಸುತ್ತ ಮತ್ತೊಂದು ಕಡೆ ಮಾಂಸಾಹಾರಕ್ಕೆ ಉತ್ತೇಜನ ನೀಡುವುದೆಂದರೇನು? ಮಾಂಸಾಹಾರ ಶರಣಧರ್ಮದಲ್ಲಿ ಸ್ವೀಕೃತ ಎಂದು ತಮಗೆ ಹೇಳಿದವರು ಯಾರು?

ಆಹಾರ ಸೇವನೆ ವೈಯಕ್ತಿಕ ಅಭಿರುಚಿ, ಅದರ ಮೇಲೆ ನಿರ್ಬಂಧ ಹೇರುವುದು ಸರಿಯಲ್ಲ ಎಂಬ ತಮ್ಮ ಮಾತು ಸರಿ ಇರಬಹುದು. ಹಾಗಂತ ವ್ಯಕ್ತಿಗೆ ಇನ್ನೂ ಅನೇಕ ಅಭಿರುಚಿ–ಹವ್ಯಾಸ– ಅಭ್ಯಾಸಗಳಿರುತ್ತವೆ. ಅವುಗಳಿಗೂ ಇದೇ ಮಾತು ಅನ್ವಯವಾಗಬಹುದೇ? ಬಹುಶಃ ಚಾರ್ವಾಕರನ್ನು ಬಿಟ್ಟರೆ ಜಗತ್ತಿನ ಯಾವ ಧರ್ಮವೂ ತಾಮಸ ಆಹಾರ ಮತ್ತು ಮಾದಕ ವಸ್ತುಗಳ ಸೇವನೆಗೆ ಮುಕ್ತದ್ವಾರ ತೆರೆದಿಲ್ಲ.

ಹೀಗಿರುವಾಗ ಬಸವಧರ್ಮದಲ್ಲಿ ಇವುಗಳಿಗೆ ಮುಕ್ತ ಅವಕಾಶ ಕಲ್ಪಿಸಲು ತಮಗೆ ಅಧಿಕಾರ ನೀಡಿದವರ್‍ಯಾರು?

'ಧರ್ಮಸ್ಥಾಪಕರ ಸಾಲಿನಲ್ಲಿ ಸೇರಬೇಕೆಂದು ತಮ್ಮ ಪ್ರಬಲ ಸಂಕಲ್ಪವಾಗಿದ್ದರೆ ಅದಕ್ಕೆ ನಮ್ಮಡ್ಡಿಯಿಲ್ಲ.' ಆದರೆ ಬಸವಣ್ಣನ ಹೆಸರಿನಲ್ಲಿ ಮತ್ತೊಂದು ಧರ್ಮ ಸ್ಥಾಪನೆಗೆ ಮಾತ್ರ ವಿರೋಧವಿದೆ.

ಬಸವಾನುಯಾಯಿಗಳ ಭಾವನಾತ್ಮಕ ಸಂಬಂಧ ಗಳಿಗೆ ಭಂಗವುಂಟುಮಾಡುವ ಕೆಲಸ ನಿಲ್ಲಿಸಿ ಎಂದು ಗೊ.ರು.ಚ. ಅವರು ಮನವಿ ಮಾಡಿದ್ದಾರೆ.

ಸಮಾಜದ ಒಟ್ಟಾರೆ ಹಿತದೃಷ್ಟಿಯಿಂದ ಗುರು–ವಿರಕ್ತರ ಸಂಗಮ ಅತ್ಯಗತ್ಯ ಎಂದು ಪ್ರತಿಪಾದಿಸಿದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಕಳೆದ ವರ್ಷ ಜೂನ್ ಒಂದರಂದು ಕೂಡಲಸಂಗಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಆಶ್ರಯದಲ್ಲಿ ನಡೆದ ಗುರು–ವಿರಕ್ತರ ಸಮಾಗಮ ಒಂದು ಒಳ್ಳೆಯ ಬೆಳವಣಿಗೆ ಎಂದರು.

ಗುರು–ವಿರಕ್ತರ ಮಧ್ಯೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಇವೆ. ಆದರ ಸಮಾಜದ ಸಮಗ್ರ ಒಳಿತಿನ ಹಿನ್ನೆಲೆಯಲ್ಲಿ ಈ ಬಿನ್ನಾಭಿಪ್ರಾಯಗಳನ್ನು ಬದಿಗಿರಿಸಿ ಒಟ್ಟಿಗೆ ಸೇರೋಣ ಎಂದು, ಒಂದಾಗಿರುವುದು ಉತ್ತಮ ಬೆಳವಣಿಗೆ ಎಂದು ಅವರು ಬಣ್ಣಿಸಿದರು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮತದಾನ ಪವಿತ್ರ ಕಾರ್ಯ. ಮತದಾರರು ಪ್ರಜ್ಞಾವಂತರಾಗಿ ಮತ್ತು ವಿವೇಕದಿಂದ ಮತ ಚಲಾಯಿಸಬೇಕು. ಅಂದಾಗ ಮಾತ್ರ ಉತ್ತಮ ಜನಪ್ರತಿನಿಧಿಗಳು ಆಯ್ಕೆಯಾಗಿ ಉತ್ತಮ ಆಡಳಿತ ವ್ಯವಸ್ಥೆ ಜಾರಿಗೆ ಬರುವ ಸಾಧ್ಯತೆಗಳಿವೆ ಎಂದು ಅವರು ಹೇಳಿದರು. 14–5–2004

ಒಟ್ಟಾರೆ ವೀರಶೈವ ಧರ್ಮವನ್ನು ಕೆಲವರು ತಮ್ಮ ವೈಯಕ್ತಿಕ ಪ್ರತಿಷ್ಠೆಗಾಗಿ ತುಂಡರಿಸುತ್ತಿರುವುದನ್ನು ಕಂಡು ಜಗದ್ಗುರುಗಳು ವಿಷಾದ ವ್ಯಕ್ತಪಡಿಸಿರುವುದು ಈ ಪತ್ರಿಕಾಗೋಷ್ಠಿಯಿಂದ ತಿಳಿಯುತ್ತಿದೆ. ಸಮಗ್ರ ಸಮಾಜದ ಹಿತಕ್ಕಾಗಿ ಸಮನ್ವಯದತ್ತ ಹೆಜ್ಜೆ ಇಟ್ಟು ಸ್ಪಂದಿಸುತ್ತಿರುವಾಗ ಕೆಲವರು ಸದಾಕಾಲ ಸಮಾಜವನ್ನು ಒಡೆಯುವ ಕಾರ್ಯದಲ್ಲಿ ತೊಡಗಿರುವುದರ ಬಗ್ಗೆ ಮತ್ತೊಮ್ಮೆ ಭಕ್ತಾದಿಗಳಿಗೆ ಎಚ್ಚರಿಕೆ ನೀಡಿದರು.

5–8–2004 : ಕಾಶೀಪೀಠದಿಂದ ಕೊಡುತ್ತಿರುವ ಚಂದ್ರಶೇಖರ ಕಪಾಳೆ ಸಾಹಿತ್ಯ ಪುರಸ್ಕಾರವನ್ನು 2004ರಲ್ಲಿ ಕಾಶೀ ಜಗದ್ಗುರುಗಳು–ಇಸ್ಲಾಂ ಧರ್ಮೀಯರಾದ ಡಾ॥ ಯು.ಎಂ. ಪಠಾಣ ಅವರನ್ನು ಈ ಪುರಸ್ಕಾರಕ್ಕಾಗಿ ಆರಿಸಿದರು. ಕಾರಣ ಪಠಾಣರು ವೀರಶೈವ ಸಾಹಿತ್ಯದಲ್ಲಿ ಸಾಕಷ್ಟು ಕೃತಿ ರಚಿಸಿದ್ದಾರೆ. ಅಖಿಲ ಭಾರತ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಪಠಾಣರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಆಗಿಹೋದ ಶರಣರ ಸಂತರ ಸಾಹಿತ್ಯದ ಬಗೆಗೆ ಅತ್ಯಂತ ಗೌರವಾಗಿ ಉಲ್ಲೇಖಗಳನ್ನು ಮಾಡಿ ಸಮಸ್ತ ಮರಾಠಿಗರ ಗಮನವನ್ನು ವೀರಶೈವ ಸಾಹಿತ್ಯದ ಕಡೆಗೆ ಹರಿಯುವಂತೆ ಮಾಡಿತು. ಇವರು ವಿಶ್ವವಿದ್ಯಾಲಯದಲ್ಲಿ ಮರಾಠಿವಿಭಾಗದ ಮುಖ್ಯಸ್ಥರಾಗಿದ್ದಾಗ 1975ರಲ್ಲಿ ಲಾತೂರಿನ ಚಂದ್ರಕಾಂತ ದೇವೂಳ ಗಾಂವಕರ್ ಎಂಬ ಬ್ರಾಹ್ಮಣ ವಿದ್ವಾಂಸರು ಸಂಶೋಧನೆ ಮಾಡುವ ಸಲುವಾಗಿ ಇವರ ಮಾರ್ಗದರ್ಶನಕ್ಕಾಗಿ ಬಂದಾಗ ಮರಾಠಿ ಸಂತ ಕವಿಯಾದ ಶ್ರೀ ಮನ್ಮಥಸ್ವಾಮಿಯವರ ಪರಮರಹಸ್ಯ ಎಂಬ ವೀರಶೈವ ಗ್ರಂಥದ ಬಗೆಗೆ ಬರೆಯಲು ಸಲಹೆ ನೀಡಿದರು. ಇದೊಂದು ಐತಿಹಾಸಿಕ ದಾಖಲೆ ಎನಿಸಿದೆ. ಪರಮರಹಸ್ಯದ ಮೇಲೆ ಸಂಶೋಧನಾತ್ಮಕ ಪ್ರಬಂಧ ಬರೆದು ಔರಂಗಾಬಾದ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿ ಪಡೆದರು. ಅವರ ಈ ಪ್ರಬಂಧವನ್ನು 2003ರಲ್ಲಿ ಜಗದ್ಗುರುಗಳು ಕಾಶೀ ಪೀಠದಿಂದ ಪ್ರಕಟಗೊಳಿಸಿ ಸಮನ್ವಯದ ಹಾದಿಯಲ್ಲಿ ಸಾಗುವಾಗ ಸಾಹಿತ್ಯ ಲೋಕವನ್ನು ತಮ್ಮೊಡನೆ ಸಾಗುವಂತೆ ಮಾಡಿದ್ದು ನಿಜಕ್ಕೂ ಹೆಮ್ಮೆ ತರುವಂಥದ್ದಾಗಿದೆ.


'ಧರ್ಮ ಪೀಠಾಧಿಪತಿಗಳೆಡೆ ಸಂಶಯ ದೃಷ್ಟಿ ಬೇಡ'
(ಸ್ವಂತ ಸುದ್ದಿಗಾರರಿಂದ)

24–11–04 : ಬಸವ ಕಲ್ಯಾಣ ತಾಲ್ಲೂಕಿನ ತಡೋಳಾ ಗುರುಕುಲಾಶ್ರಮದ ರಾಜೇಶ್ವರ ಶಿವಾಚಾರ್ಯರು 121 ದಿನಗಳ ಕಾಲ ಅತಿರುದ್ರ ಮಹಾಪೂಜೆ ನಡೆಸಿ ಅದರ ಮಂಗಲ ಕಾರ್ಯಕ್ರಮದಲ್ಲಿ ವಿಶ್ವಶಾಂತಿ ಹಾಗೂ ಮಾನವಧರ್ಮ ಗೋಷ್ಠಿಯಲ್ಲಿ ಜಗದ್ಗುರುಗಳು ಪಾಲ್ಗೊಂಡ ಸಮಯದಲ್ಲಿ ಕಂಚಿ ಕಾಮಕೋಟಿ ಜಗದ್ಗುರುಗಳನ್ನು ಬಂಧಿಸಿದ್ದರು. ಆ ಬಗ್ಗೆ ಪತ್ರಕರ್ತರು ಜಗದ್ಗುರುಗಳನ್ನು ಸಂಪರ್ಕಿಸಿ ಈ ಬಗ್ಗೆ ಗುರುಗಳ ಅಭಿಪ್ರಾಯ ಕೇಳಿದರು.

ಕಂಚಿಶ್ರೀಗಳ ಬಂಧನವನ್ನು ಖಂಡಿಸಿ ಅತ್ಯಂತ ದೊಡ್ಡ ಸ್ಥಾನದಲ್ಲಿರುವ ಅವರನ್ನು ಹೀಗೆ ಬಂಧಿಸಿ ಅವಮಾನ ಮಾಡಿದೆ. ಬಿ.ಜೆ.ಪಿ. ನಾಯಕಿ ಉಮಾಭಾರತಿ ಅವರನ್ನು ಗೃಹಬಂಧನದಲ್ಲಿರಿಸಿದಂತೆ ಕಂಚಿ ಶ್ರೀಗಳನ್ನು ಅಲ್ಲಿಯ ಸರ್ಕಾರ ಅದೇ ರೀತಿ ಮಾಡಬೇಕಿತ್ತು. ಹೀಗೆ ಕೇವಲ ಸಂಶಯದ ಆಧಾರದ ಮೇಲೆ ಬಂಧಿಸುವುದು ಸರಿಯಲ್ಲ. ಕಾನೂನಿನ ಮುಂದೆ ಎಲ್ಲರೂ ಸಮಾನರು. ನ್ಯಾಯಾಲಯದಲ್ಲಿ ಅಪರಾಧ ಸಿದ್ಧವಾದರೆ ಬೇಕಾದರೆ ಶಿಕ್ಷೆ ಕೊಡಲಿ ಎಂದು ತಮ್ಮ ಅಭಿಪ್ರಾಯವನ್ನು ಜನತೆಗೆ ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಮೊದಲಾದ ಪತ್ರಿಕೆಯ ಮಾಧ್ಯಮದ ಮೂಲಕ ಸ್ಪಷ್ಟವಾಗಿ ತಿಳಿಸಿದರು.

ಪತ್ರಕರ್ತರ ಮತ್ತೊಂದು ಪ್ರಶ್ನೆಗೆ ಜಗದ್ಗುರುಗಳು ಶರಣರ ಜೀವನಕ್ಕೆ ಸಂಬಂಧಿಸಿದ ವಿಷಯಗಳನ್ನು ಕೆದಕಿ ವಿವಾದ ಸೃಷ್ಟಿಸುವುದಕ್ಕಿಂತ ಅವರ ತತ್ವಗಳ ಪ್ರಚಾರ–ಪ್ರಸಾರದ ಕಡೆ ಹೆಚ್ಚು

ಶರಣರ ಬಗ್ಗೆ ವಿವಾದ ಸಲ್ಲದು–ಕಾಶೀ ಶ್ರೀಗಳು
ಪ್ರಜಾವಾಣಿ 24–11–04



ಬಸವಕಲ್ಯಾಣ ತಾಲ್ಲೂಕಿನ ತಡೋಳಾ ಗುರುಕುಲಾಶ್ರಮದಲ್ಲಿ ಮಂಗಳವಾರ ನಡೆದ ಅತಿರುದ್ರಯಾಗ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಪಸುಸಂಗೋಪನೆ ಸಚಿವ ಮೆರಾಜುದ್ದೀನ್ ಪಟೇಲ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ರಾಜೇಶ್ವರ ಶಿವಾಚಾರ್ಯ ಹಾಗೂ ಇತರರು ಚಿತ್ರದಲ್ಲಿದ್ದಾರೆ.

ಗಮನ ಹರಿಸಿ ವಿವಾದಾತ್ಮಕ ವಿಷಯಗಳಿಗೆ ಮಹತ್ವ ನೀಡಿ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡದೆ ಇದ್ದಲ್ಲಿ ಸಮಾಜದಲ್ಲಿ ನೆಮ್ಮದಿ ಇರುತ್ತದೆ. ಇಲ್ಲಸಲ್ಲದ ವಿಚಾರಗಳಿಂದ ಸಮಾಜದ ಶಾಂತಿಯನ್ನು ಕೆದಕಬಾರದೆಂದರು.

ಇಲ್ಲಿ ಜಗದ್ಗುರುಗಳು ಕಂಚಿ ಶ್ರೀಗಳ ಸ್ಥಾನಮಾನವನ್ನು ಕುರಿತು ಹೇಳುವಾಗ ಕಾನೂನಿಗೆ ತಲೆ ಬಾಗಿರುವುದನ್ನು ಕಾಣಬಹುದು ಅಂತೆಯೇ ಶರಣರ ಕುರಿತು ತಮಗಿರುವ ಗೌರವವನ್ನು ಕಾಣಬಹುದಾಗಿದೆ. ಇಂತಹ ಸಮಚಿತ್ತದ ಆಲೋಚನೆಗಳನ್ನು ಮಾಡುತ್ತಿರುವುದರಿಂದಲೇ ಜಗದ್ಗುರುಗಳು ಸಮನ್ವಯದ ಹಾದಿಯಲ್ಲಿ ಸಾಗಲು ಸಾಧ್ಯವಾಗಿರುವುದು.

ವಿಚಾರ ಸಂಕಿರಣಗಳು–ಜಗದ್ಗುರುಗಳ ಉದ್ದೇಶ

ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಅಂಗಸಂಸ್ಥೆಯಾದ ಬೆಂಗಳೂರಿನ ವೀರಶೈವ ಅನುಸಂಧಾನದ ಸಂಸ್ಥಾನವನ್ನು ಸಮಾಜದಲ್ಲಿ ಸಮನ್ವಯ ಹಾಗೂ ಸದ್ಭಾವನೆ ಮೂಡಿಸುವ ಸಲುವಾಗಿ ಕಾಶೀ ಜಗದ್ಗುರುಗಳಿಂದ 1998ರಲ್ಲಿ ಮಾಡಲಾಯಿತು. ಇದರ ಪ್ರಮುಖವಾದ ಎರಡು ಕಾರ್ಯಗಳೆಂದರೆ–ಸಂಸ್ಕೃತದಲ್ಲಿರುವ ವೀರಶೈವಾಗಮಗಳನ್ನು ಕನ್ನಡಕ್ಕೆ ಅನುವಾದಿಸುವುದು ಮತ್ತು ಪ್ರಕಟಿಸುವುದು. ವೀರಶೈವ ಆಗಮಗಳ, ವೀರಶೈವ ಧರ್ಮ ಕುರಿತು ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು ಒಂದಾದರೆ, ಪ್ರತೀ ವರ್ಷ ಜನವರಿ 1ನೇ ತಾರೀಖಿನಿಂದ 10ನೇ ತಾನವರೆಗೆ ಜಗದ್ಗುರುಗಳ ಇಷ್ಟಲಿಂಗ ಮಹಾಶಿವಪೂಜಾ ಮತ್ತು ಆಧ್ಯಾತ್ಮಿಕ ಆಶೀರ್ವಚನಗಳನ್ನು ಏರ್ಪಡಿಸುವುದಾಗಿದೆ. ಈಗಾಗಲೇ ಜಂಗಮವಾಡಿ ಮಠದಲ್ಲಿ ಜಗದ್ಗುರುಗಳ ನೇತೃತ್ವದಲ್ಲಿ ಪ್ರಕಟಗೊಂಡಿರುವ ಸಂಸ್ಕೃತಾಗಮಗಳಾದ ಸೂಕ್ಷ್ಮಾಗಮ, ಕಾರಣಾಗಮ, ಮಕುಟಾಗಮ, ಚಂದ್ರಜ್ಞಾನಾಗಮ ಮತ್ತು ಪರಮೇಶ್ವರಾಗಮಗಳು ಕನ್ನಡದಲ್ಲಿ ಅನುವಾದಗೊಂಡು ಪ್ರಕಟವಾಗಿ ಕನ್ನಡಿಗರ, ಅದರಲ್ಲೂ ಅನೇಕ ಕನ್ನಡ ವಿದ್ವಾಂಸರ ಕೈಸೇರಿ ವಚನ ಸಾಹಿತ್ಯವೇ ವೀರಶೈವ ಸಾಹಿತ್ಯ ಎಂಬ ನಂಬಿಕೆಯನ್ನು ಬಲವಾಗಿ ಅಲ್ಲಾಡಿಸುವಂತಾಗಿದೆ. ಬೇರಾವ ರಾಜ್ಯಗಳಲ್ಲೂ ಇಲ್ಲದ ಗುರು–ವಿರಕ್ತರ ನಡುವಿನ ಭಿನ್ನಾಭಿಪ್ರಾಯಗಳನ್ನು ಕರ್ನಾಟಕದಲ್ಲಿ ಮಾತ್ರ ಕಂಡಿದ್ದ ಜಗದ್ಗುರುಗಳು ಆಚಾರ್ಯ ಸಾಹಿತ್ಯಗಳನ್ನು ಶರಣರ ಸಾಹಿತ್ಯಗಳನ್ನು ಒಂದುಗೂಡಿಸುವ ದಿಸೆಯಲ್ಲಿ ಆಲೋಚಿಸುತ್ತಿದ್ದರು. ಶೈವಾಗಮಗಳನ್ನು ಹಾಗೂ ಶಿವಶರಣರ ವಚನಗಳನ್ನು ಒಂದು ವೈಚಾರಿಕ ನೆಲೆಗಟ್ಟಿನಿಂದ ಒಂದು ಗೂಡಿಸುವ ದೃಷ್ಟಿಯಿಂದ "ವೇದಾಗಮಗಳು ಮತ್ತು ಶಿವಶರಣರು" ಎಂಬ ವಿಷಯ ಕುರಿತು 3 ಮತ್ತು 4ನೇ ಆಗಸ್ಟ್ 2002ರಲ್ಲಿ ಬೆಂಗಳೂರಿನಲ್ಲೊಂದು ವಿಚಾರ ಸಂಕಿರಣವನ್ನು ಏರ್ಪಡಿಸಿ ವೇದಾಗಮಗಳನ್ನು ಶಿವಶರಣರು ತಮ್ಮ ವಚನಗಳಲ್ಲಿ ಉಲ್ಲೇಖಿಸಿರುವುದನ್ನು ಸಮಾಜಕ್ಕೆ ತಿಳಿಸುವುದೇ ಮುಖ್ಯ ಕಾರಣವಾಗಿದೆ ಎಂದು ಜಗದ್ಗುರುಗಳು ಹೇಳಿದ್ದರು.

ಇದು ಬಹಳ ಕಠಿಣ ಕೆಲಸವೆಂದು ಜಗದ್ಗುರುಗಳಿಗೆ ತಿಳಿದಿದ್ದರೂ ಪ್ರಯತ್ನ ಬಿಡಬಾರದೆಂಬ ಛಲ ಅವರದ್ದು. ಏಕೆಂದರೆ ಶರಣರು ತಮ್ಮ ವಚನಗಳಲ್ಲಿ ಸಂದರ್ಭಕ್ಕನುಗುಣವಾಗಿ ವೇದಾಗಮಗಳ, ಉಪನಿಷತ್ತುಗಳ ಉಕ್ತಿಗಳನ್ನು ತಮ್ಮ ಮಾತನ್ನು ಸಮರ್ಥಿಸುವ ಸಲುವಾಗಿ ಬಳಸಿರುವುದು ಸರ್ವ ವಿದಿತ. ಹಾಗಾಗಿ ಶರಣರಿಗೂ ವೇದಾಗಮಗಳು ಮಾನ್ಯವಾಗಿದ್ದವು ಎಂಬುದನ್ನು ಜನಸಾಮಾನ್ಯರಿಗೆ ತಿಳಿಸುವುದೇ ಇಂತಹ ವಿಚಾರ ಸಂಕಿರಣಗಳ ಉದ್ದೇಶವಾಗಿತ್ತು. ಭಾರತೀಯ ಧರ್ಮದರ್ಶನಗಳಿಗೆ ವೇದ ಆಗಮಗಳೇ ಮೂಲ ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ಪ್ರತಿಯೊಂದು ಧರ್ಮದವರು ತಮ್ಮ ಸಿದ್ಧಾಂತವನ್ನು ಬರೆದಾಗ ವೇದಾಗಮಗಳನ್ನೇ ಆಧಾರವಿಟ್ಟುಕೊಂಡು ಬರೆದಿದ್ದಾರೆ. ಅಂತೆಯೇ ಶಿವಯೋಗಿ ಶಿವಾಚಾರ್ಯರು ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥದ ಕೊನೆಯಲ್ಲಿ "ಶ್ರೀ ವೇದಾಗಮ ವೀರಶೈವ ಸರಣಿ"ಯನ್ನು ಅನುಸರಿಸಿ ಈ ಸ್ಥಲಗಳನ್ನು ಪ್ರತಿಪಾದನೆ ಮಾಡಿದೆ ಎಂದೂ, ಮತ್ತೊಂದು ಶ್ಲೋಕದಲ್ಲಿ ಆಗಮಗಳನ್ನು, ಉಪನಿಷತ್, ಪುರಾಣಗಳಲ್ಲಿನ ಅಂಶಗಳನ್ನು ಸಂಗ್ರಹಿಸಿ ಅಲ್ಲಲ್ಲಿ ಜೋಡಿಸಿ 101 ಸ್ಥಲಗಳನ್ನು ರಚಿಸಿರುವುದಾಗಿ ಹೇಳಿರುವುದರಿಂದ ವೀರಶೈವಕ್ಕೆ ವೇದಾಗಮಗಳ ಸಂಬಂಧವಿರುವುದು ಸ್ಪಷ್ಟವಾಗಿದೆ ಎಂದು ಜಗದ್ಗುರುಗಳು ಹೇಳಿದ್ದನ್ನು ಕೇಳಿದಾಗ–ಹೇಗೆ ಜ್ಯಾಮಿಟ್ರಿಯಲ್ಲಿ ಒಂದು ಲೆಕ್ಕವನ್ನು ಬಿಡಿಸುವಾಗ ಬಳಸುವ ಕ್ರಮದಂತೆ ಇಲ್ಲಿ ವೀರಶೈವಕ್ಕೂ ವೇದಾಗಮಗಳಿಗೂ ಇರುವ ಸಂಬಂಧವನ್ನು ಸಾದರಪಡಿಸಿದಂತೆ ಕಾಣುತ್ತದೆ.

ಈ ವಿಚಾರ ಸಂಕಿರಣದಲ್ಲಿ ಪ್ರಸ್ತುತಪಡಿಸಬೇಕಾದ ವಿಷಯಗಳನ್ನು ಸಂಪಾದಕ ಮಂಡಳಿ ಆಯ್ಕೆ ಮಾಡಿದ್ದನ್ನು ಜಗದ್ಗುರುಗಳು ಪರಿಶೀಲಿಸಿದ ಮೇಲೆಯೇ ಮುಂದುವರೆಯುವುದಾಗಿತ್ತು. ಮೊದಲ ಬಾರಿಗೆ ವೇದಾಗಮಗಳು–ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಉರಿಲಿಂಗಪೆದ್ದಿ, ಆದಯ್ಯ, ಬಾಲಸಂಗಯ್ಯ, ಶಿವಶರಣೆಯರು–ಎಂಬ 8 ವಿಷಯಗಳನ್ನು 'ವೇದಾಗಮಗಳು ಶಿವಶರಣರು' ಎಂಬ ವಿಚಾರ ಸಂಕಿರಣಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಅಲ್ಲಿನ ಪ್ರತಿಯೊಂದು ಪ್ರಬಂಧವೂ ವಿದ್ವತ್‌ಪೂರ್ಣವಾಗಿದ್ದವು.

2003ರ ಜುಲೈ 26 ಮತ್ತು 27ರಂದು ಬಾಗಲಕೋಟೆಯಲ್ಲಿ 'ವೇದಾಗಮಗಳು ಮತ್ತು ಶಿವಶರಣರು' ಎಂಬ ವಿಚಾರ ಸಂಕಿರಣದ ಮುಂದುವರೆದ ಭಾಗವಾಗಿ ಇನ್ನೂ ಕೆಲವು ಶರಣರನ್ನು ಕುರಿತು ಪ್ರಬಂಧಗಳನ್ನು ಮಂಡಿಸಿ ಶಿವಶರಣರು ವೇದಾಗಮಗಳನ್ನು ವಿರೋಧಿಸದೆ ತಮ್ಮ ವಚನಗಳಲ್ಲಿ ಹೇಗೆ ಬಳಸಿಕೊಂಡಿದ್ದಾರೆ ಎಂದು ಜನತೆಗೆ ತಿಳಿಸುವ ಸಲುವಾಗಿ–ಎರಡನೇ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

'ಶರಣರ ವಚನಗಳ ಮೇಲೆ ವೇದಗಳ ಪ್ರಭಾವ'

ಸಂಯುಕ್ತ ಕರ್ನಾಟಕ, 27–7–2003



ಕಾಶೀ ಪೀಠದ ಅಂಗ ಸಂಸ್ಥೆ ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನವು ಬಾಗಲಕೋಟೆಯಲ್ಲಿ ಶ್ರೀ ಬಿ.ವಿ.ವ. ಸಂಘದ ಸಹಯೋಗದೊಂದಿಗೆ ಏರ್ಪಡಿಸಿರುವ "ವೇದಾಗಮಗಳು–ಶಿವಶರಣರು" ಕುರಿತಾದ ಎರಡು ದಿನಗಳ ವಿಚಾರ ಸಂಕಿರಣವನ್ನು ಶನಿವಾರ ಬೆಳಿಗ್ಗೆ ಶಾಸಕ ಎಸ್.ಆರ್. ಪಾಟೀಲ ಉದ್ಘಾಟಿಸಿದರು. ಕಾಶೀ ಜಗದ್ಗುರುಗಳು, ಮುಂಡರಗಿ ಜಗದ್ಗುರುಗಳು, ಕೆರೂರ ಚರಂತಿಮಠ ಶ್ರೀಗಳು, ಬಿ.ವಿ.ವ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ವೀರಣ್ಣ ಹಲಕುರ್ಕಿ, ಡಾ. ಶಿವಕುಮಾರ ಸ್ವಾಮಿ ಮತ್ತಿತರರು ಚಿತ್ರದಲ್ಲಿದ್ದಾರೆ.

ಈ ಬಾರಿ ವೇದಾಗಮಗಳು–ಚನ್ನಬಸವಣ್ಣನವರು–2, ಅಕ್ಕಮಹಾದೇವಿ, ಹಡಪದ ಅಪ್ಪಣ್ಣನವರು, ಪ್ರಸಾದಿ ಭೋಗಣ್ಣ, ನಿಜಾನಂದಿ ಪ್ರಸಾದಿ ಚಂದಿಮರಸ, ಸಕಳೇಶ ಮಾದರಸ ಮತ್ತು ಮಡಿವಾಳ ಮಾಚಿದೇವ–ಶರಣರನ್ನು ಕುರಿತು ಪ್ರಬಂಧಗಳನ್ನು ಪ್ರಸ್ತುತಪಡಿಸಲಾಗಿತ್ತು. ಪ್ರಶ್ನೋತ್ತರಗಳೂ ನಡೆದು ವಿಚಾರ ಸಂಕಿರಣದ ಮಹತ್ವ ಹೆಚ್ಚಿದಂತಾಗಿತ್ತು. ಎಷ್ಟೋ ಪ್ರಶ್ನೆಗಳಿಗೆ ಜಗದ್ಗುರುಗಳೇ ಸಮಂಜಸವಾದ ಉತ್ತರಗಳನ್ನು ಹೇಳಿದ್ದು ವಿದ್ವಾಂಸರು ಒಪ್ಪಿಕೊಳ್ಳುವಂತಿರುತ್ತಿತ್ತು.

ಎರಡನೇ ಬಾರಿ ಇದೇ ವಿಚಾರಗಳ ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರ ಉದ್ದೇಶವೇನೆಂದರೆ, ಜ್ಞಾನಭಂಡಾರವಾದ ವೇದ, ಆಗಮ–ಉಪನಿಷತ್, ಪುರಾಣಗಳಲ್ಲಿ ಅಂತರ್ಗತವಾಗಿರುವ ಸಂಸ್ಕೃತ ಶ್ಲೋಕಗಳನ್ನು 12ನೇ ಶತಮಾನದ ಶಿವಶರಣರು ತಮ್ಮ ವಚನಗಳಲ್ಲಿ ಧಾರಾಳವಾಗಿ ಬಳಸಿರುವುದನ್ನು ಚಿಂತಿಸಿ, ಇಂದು ಸಮಾಜದಲ್ಲಿ ಗೊಂದಲಕ್ಕೀಡುಮಾಡುತ್ತಿರುವ ಕೆಲವು ಪಂಡಿತರ ಹೇಳಿಕೆಯನ್ನು ಸರಿಪಡಿಸುವುದೆ ಮುಖ್ಯವಾಗಿರುತ್ತದೆ ಎಂದು ಜಗದ್ಗುರುಗಳು ಸಭೆಯಲ್ಲಿ ತಿಳಿಸಿದರು. ಜನಸಾಮಾನ್ಯರೂ ಚರ್ಚೆಯಲ್ಲಿ ಭಾಗವಹಿಸಿ ಪ್ರಶ್ನೆಗಳನ್ನು ಕೇಳಿದ್ದು ಗುರುಗಳಿಗೆ ಬಹಳ ಸಂತೋಷವಾಯಿತು.

ಜಗದ್ಗುರುಗಳು ಮತ್ತೊಂದು ಮಹತ್ವದ ವಿಚಾರ ತಿಳಿಸಿದರು. ಶಿವಾಗಮ ಸಾಹಿತ್ಯವೇ ಆಗಲಿ, ಆಚಾರ್ಯ ಸಾಹಿತ್ಯವೇ ಇರಲಿ, ಶಿವಶರಣರ ವಚನ ವಾಙ್ಮಯವೇ ಇರಬಹುದು, ಇವೆಲ್ಲವನ್ನು ಸಮನ್ವಯ ದೃಷ್ಟಿಯಿಂದ ನೋಡುವಂಥ ಒಂದು ಹೊಸ ಪ್ರವೃತ್ತಿಯ ಹೊಸ ಚಿಂತನೆಯ ಪರಂಪರೆ ಸಮಾಜದಲ್ಲಿ ಬೆಳೆಯಬೇಕೆನ್ನುವುದೇ ಇಂತಹ ಗೋಷ್ಠಿಗಳ ಉದ್ದೇಶ. ಅದು ಎರಡು ವರ್ಷಗಳಿಂದ ಸಫಲವಾಗುತ್ತ ಬಂದಿರುವುದು ಬಹು ಮಹತ್ವದ ಸಂಗತಿಯಾಗಿದೆ ಎಂದರಲ್ಲದೆ ವೀರಶೈವ ಸಿದ್ಧಾಂತ, ಸಾಹಿತ್ಯ ಯಾವುದೇ ಭಾಷೆಯಲ್ಲಿರಲಿ ಅದನ್ನು ನಮ್ಮದೆಂದು ಅಪ್ಪಿಕೊಳ್ಳುವ ಒಂದು ಸ್ವಭಾವವನ್ನು ಎಲ್ಲರೂ ರೂಢಿಸಿಕೊಳ್ಳುವ ಅವಶ್ಯವಿದೆ ಎಂದು ಪಂಡಿತರಿಂದ ಹಿಡಿದು, ಸಾಹಿತಿಗಳು ಹಾಗೂ ಜನಸಾಮಾನ್ಯರಿಗೆಲ್ಲಾ ಸಮನ್ವಯ ಮೂಡಬೇಕಾದರೆ ಏನು ಮಾಡಬೇಕೆಂದು ಮಾರ್ಗದರ್ಶನ ಮಾಡಿದರು.

ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಮಂಡರಗಿ ಸಂಸ್ಥಾನ ಮಠದ ಶ್ರೀ ಮ.ನಿ.ಪ್ರ. ಅನ್ನದಾನೀಶ್ವರ ಸ್ವಾಮಿಗಳನ್ನು, ಗೋಷ್ಠಿಗಳ ಅಧ್ಯಕ್ಷತೆಗೆ ಕೊಟ್ಟೂರಿನ ಶ್ರೀ ನಿ.ಪ್ರ.ಸ್ವ. ಸಂಗನಬಸವಸ್ವಾಮಿಗಳನ್ನು, ನಿಡುಸೋಸಿ ಸಂಸ್ಥಾನಮಠದ ಶ್ರೀ ನಿ.ಪ್ರ.ಸ್ವ ಪಂಚಮ ಶಿವಲಿಂಗೇಶ್ವರ ಸ್ವಾಮಿಗಳನ್ನು ಆಹ್ವಾನಿಸಿದ್ದು ಒಂದು ರೀತಿಯಲ್ಲಿ ಗುರು–ವಿರಕ್ತರ ಸಮಾಗಮವೇ ನಡೆದಿತ್ತು. ಎದುರು–ಬದುರು ಕುಳಿತು ಸಂವಾದ ನಡೆಸಿದಾಗಲೇ ವಿವಾದಗಳು ತಿಳಿಯಾಗುತ್ತಾ ಪರಸ್ಪರರಲ್ಲಿ ಗೌರವ ಮೂಡಲು ಸಾಧ್ಯ ಎಂಬ ನಿಟ್ಟಿನಿಂದ ಜಗದ್ಗುರುಗಳು ಬಹಳ ಮುಂದೆ ಸಾಗಿರುವುದು ಕಾಣುತ್ತದೆ.

10–7–2004

ಈ ಸಮನ್ವಯದ ಸೂತ್ರದ ಮುಂದುವರಿಕೆಯಾಗಿ ಧಾರವಾಡದಲ್ಲಿ 2004ರ ಜುಲೈ ತಿಂಗಳ 10 ಮತ್ತು 11ನೇ ತಾರೀಖಿನಂದು 'ವೀರಶೈವ ಧರ್ಮ ಒಂದು ಪುನರಾವಲೋಕನ' ಎಂಬ ವಿಷಯ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಧಾರವಾಡ ಜಿಲ್ಲಾ ಘಟಕದ ಶ್ರೀ ಜಗದ್ಗುರು ಪಂಚಾಚಾರ್ಯ ಮಾನವ ಧರ್ಮ ಸಂಸ್ಥೆ ಮತ್ತು ಬೆಂಗಳೂರಿನ ವೀರಶೈವ ಅನುಸಂಧಾನ ಸಂಯುಕ್ತಾಶ್ರಯದಲ್ಲಿ ವೀರಶೈವ ಧರ್ಮದ ಕೆಲವು ವಿಚಾರಗಳನ್ನು ಮರುಪರಿಶೀಲನೆಗೆ ಒಳಪಡಿಸಿ ಇಂದಿನ ಭಕ್ತರಿಗೆ–ವೀರಶೈವ ಸಮಾಜಕ್ಕೆ ತಿಳಿಸುವ ಉದ್ದೇಶದಿಂದ ಈ ವಿಚಾರ ಸಂಕಿರಣ ಏರ್ಪಾಡಾಗಿತ್ತು.

ವಿಚಾರ ಸಂಕಿರಣದ ಉದ್ಘಾಟನೆಯನ್ನು ಕೇರಳ ರಾಜ್ಯದ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ವಿ.ಎಸ್. ಮಳೀಮಠ ಅವರು ಮಾಡಿದರು. ಈ ವಿಚಾರ ಸಂಕಿರಣದ ಗೋಷ್ಠಿಗಳ ಅಧ್ಯಕ್ಷತೆಗೆ ಮುಂಡರಗಿ ಸಂಸ್ಥಾನದ ಅನ್ನದಾನೀಶ್ವರ ಸ್ವಾಮಿಗಳನ್ನು, ಕೊಟ್ಟೂರು ಸಂಸ್ಥಾನ ಮಠದ ಸ್ವಾಮಿಗಳನ್ನು ಆಹ್ವಾನಿಸಿ ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ತಾವೂ ಚರ್ಚೆಗಳಲ್ಲಿ ಪಾಲ್ಗೊಂಡರು. ಸಮಾರೋಪ ಸಮಾರಂಭಕ್ಕೆ ಕೇದಾರ ಜಗದ್ಗುರುಗಳು, ಶ್ರೀಶೈಲ ಜಗದ್ಗುರುಗಳು ಆಗಮಿಸಿ ಆಶೀರ್ವಚನ ನೀಡಿದರು.

ಕಾಶೀ ಜಗದ್ಗುರುಗಳು ವೇದಿಕೆಯ ಮೇಲೆಯಿದ್ದ ರೇಣುಕ ಬಸವಣ್ಣನವರ ಭಾವಚಿತ್ರಗಳನ್ನು ನೋಡಿ ಅವರಿಬ್ಬರನ್ನು ಸಾಕ್ಷಿಯಾಗಿಟ್ಟುಕೊಂಡು ಈ ವಿಚಾರ ಸಂಕಿರಣ ಮಾಡುವ ಮುಖ್ಯ ಉದ್ದೇಶವೇನೆಂದರೆ ಇವರ ಅಭಿಮಾನಿಗಳು ಅವರ ಅಭಿಮಾನಿಗಳು ಎಂದು ಜಗಳಾಡದೆ ಸಮನ್ವಯದಿಂದ ಮುಂದೆ ಹೋಗಲು ಇರಿಸಿದ್ದಾರೆ ಎಂದು ಆರಂಭಿಸಿ ಯಾರ ಮನಸ್ಸಿನಲ್ಲಿ ಯಾವ ಸಂಶಯಗಳಿವೆಯೋ ಅವೆಲ್ಲವೂ ಇಲ್ಲಿ ನಿವಾರಣೆಯಾಗಲಿ. ಅನೇಕ ಪ್ರಶ್ನೆಗಳಿಗೆ ಜಗದ್ಗುರುಗಳೇ ಉತ್ತರಿಸಿದರು (ಆಸಕ್ತರು 'ವೀರಶೈವ ಧರ್ಮ : ಒಂದು ಪುನರಾವಲೋಕನ' ಸಂ.ಡಾ.ಎಂ. ಶಿವಕುಮಾರಸ್ವಾಮಿ ಪ್ರಕಟಣಾ ವರ್ಷ 2005 ನೋಡಬಹುದು.)


ವಿರಕ್ತರು, ಪಂಚಾಚಾರ್ಯರು ಒಂದೇ : ನ್ಯಾ. ಮಳೀಮಠ



ಧಾರವಾಡದಲ್ಲಿ ಶನಿವಾರ ಆರಂಭವಾದ 'ವೀರಶೈವ ಧರ್ಮ–ಒಂದು ಪುನರಾವಲೋಕನ' ವಿಚಾರ ಸಂಕಿರಣವನ್ನು ರಾಜ್ಯ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಎಸ್. ಮಳೀಮಠ ಉದ್ಘಾಟಿಸಿದರು. ಮಲಯ ಶಾಂತಮುನಿ ಸ್ವಾಮೀಜಿ, ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಡಾ.ಎಂ. ಶಿವಕುಮಾರಸ್ವಾಮಿ, ಎಸ್.ಎಲ್.ಪಾಟೀಲ ಮತ್ತು ಎಸ್.ಎಚ್. ಪೂಜಾರ ಮುಂತಾದವರು ಭಾಗವಹಿಸಿದ್ದರು.

ಸಂಸ್ಕೃತದ ಬಗ್ಗೆ ಮಡಿವಂತಿಕೆ ಬೇಡ : ಅನ್ನದಾನೀಶ್ವರ ಶ್ರೀಗಳು


11–7–2004



ಧಾರವಾಡದಲ್ಲಿ ಶನಿವಾರ ನಡೆದ ವೀರಶೈವ ಧರ್ಮ ಕುರಿತ ವಿಚಾರ ಸಂಕಿರಣದ 2ನೇ ಗೋಷ್ಠಿಯಲ್ಲಿ ಅನ್ನದಾನೀಶ್ವರ ಸ್ವಾಮಿಗಳು ಮಾತನಾಡಿದರು. ಕಾಶೀ ಜಗದ್ಗುರುಗಳು, ಡಾ. ಸಿ. ಶಿವಕುಮಾರಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಧಾರವಾಡ, 11. "ಜಗದ್ಗುರು ಪಂಚಾಚಾರ್ಯರ ಹಾಗೂ ಅಲ್ಲಮ ಬಸವಾದಿ ಶಿವಶರಣರ ತತ್ವ–ಸಿದ್ಧಾಂತ ಹಾಗೂ ವಿಚಾರಗಳನ್ನು ಸಮನ್ವಯದೊಂದಿಗೆ ಸ್ವೀಕರಿಸಿದಾಗ ವೀರಶೈವ ಧರ್ಮವು ಎಲ್ಲ ದ್ವಂದ್ವ–ಗೊಂದಲ–ವೈರುಧ್ಯಗಳಿಂದ ಮುಕ್ತವಾಗುತ್ತದೆ" ಎಂದು ಮುಂಡರಗಿ ಸಂಸ್ಥಾನಮಠದ ಅನ್ನದಾನೀಶ್ವರ ಸ್ವಾಮಿಗಳು ಹೇಳಿದ್ದಾರೆ.

ಮಂದಿರಗಳನ್ನು ಮೂರ್ತಿಪೂಜೆಗಾಗಿ ಮಾತ್ರ ಬಳಸದೇ ಆ ದೇವಾಲಯ ಸಂಸ್ಕೃತಿ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಚಟುವಟಿಕೆಗಳನ್ನು ಒಳಗೊಂಡಿರಬೇಕು ಎಂದರು. ಬಸವಪೂರ್ವಯುಗದಲ್ಲಿ 'ವೀರಶೈವ' ಇತ್ತು, ಈ ಧರ್ಮ ಅತ್ಯಂತ ಪ್ರಾಚೀನವಾದುದು ಎಂಬಲ್ಲಿ ಎರಡು ಮಾತಿಲ್ಲ ಎಂದ ಅವರು, ಪೂರ್ವಾಗ್ರಹಪೀಡಿತ ನೆಲೆಯಿಂದ ಹೊರಬಂದು ಧರ್ಮ, ತತ್ವ, ಇತಿಹಾಸ, ಚರಿತ್ರೆಯ ಚಿಂತನೆಯನ್ನು ನಡೆಸಿದಾಗ 'ಸತ್ಯಾಸತ್ಯತೆ' ಗೋಚರಿಸುತ್ತದೆ ಎಂದರು.



ಧಾರವಾಡದಲ್ಲಿ ಜರುಗಿದ 'ವೀರಶೈವ ಧರ್ಮ ಒಂದು ಪುನರಾವಲೋಕನ' ಎಂಬ ವಿಷಯ ಕುರಿತು ವಿಚಾರ ಸಂಕಿರಣದ ದ್ವಿತೀಯ ದಿನವಾದ ರವಿವಾರ ತೃತೀಯ ಗೋಷ್ಠಿಯಲ್ಲಿ ಶ್ರೀ ಕಾಶೀ ಜಗದ್ಗುರುಗಳು, ಹೊಸಪೇಟೆ ಕೊಟ್ಟೂರ ಸಂಸ್ಥಾನಮಠದ ಶ್ರೀಗಳು, ಡಾ. ಮಲ್ಲಿಕಾರ್ಜುನ ಪರಡ್ಡಿ, ಡಾ.ಎಂ. ಶಿವಕುಮಾರಸ್ವಾಮಿ, ಡಾ.ವಿ.ಜಿ. ಪೂಜಾರ, ರಾಜಶೇಖರ ಸ್ವಾಮಿ ಗೋರಟಾ, ಡಾ.ಎಸ್.ಆರ್. ರಾಮನಗೌಡರ, ಡಾ.ಸಿ.ಯು. ಉಮಾದೇವಿ ಉಮಾಶಂಕರ ಚಿತ್ರದಲ್ಲಿದ್ದಾರೆ.

ಲಿಂಗಾಯತ, ಲಿಂಗವಂತ ಗೊಂದಲ ಬೇಡ : ಕಾಶೀ ಶ್ರೀಗಳು



ನವನಗರದಲ್ಲಿ ಜರುಗಿದ ವಿಶ್ವಶಾಂತಿ ಭಾವೈಕ್ಯ ಧರ್ಮ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಶ್ರೀ ಕಾಶಿ ಪೀಠದ ಜಗದ್ಗುರುಗಳು ಮಾತನಾಡಿದರು. ಶ್ರೀಶೈಲ ಪೀಠದ ಸ್ವಾಮಿಗಳು ಹಾಗೂ ಕೇದಾರ ಪೀಠದ ಸ್ವಾಮಿಗಳು ಉಪಸ್ಥಿತರಿದ್ದರು.

15-7-2005 : ಹುಬ್ಬಳ್ಳಿ : ವೀರಶೈವ ಧರ್ಮ ಹೊಂದಿರುವ ಪ್ರಾಚೀನತೆ, ಐತಿಹಾಸಿಕ ಮಹತ್ವ ಮತ್ತು ಶ್ರೇಷ್ಠ ಗುರು ಪರಂಪರೆಯಿಂದಾಗಿ ಅದು ವಿಶ್ವಧರ್ಮವಾಗಿ ರೂಪುಗೊಂಡಿದೆ ಎಂದು ಕಾಶೀ ಜ್ಞಾನಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ಹಿಮವತ್ಕೇದಾರ ಪೀಠದ ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮಿಗಳು ಇಷ್ಟಲಿಂಗ ಪೂಜೆಯ ಮಹತ್ವವನ್ನು ವಿವರಿಸಿದರು.

ಸಮಾರೋಪ ಭಾಷಣ ಮಾಡಿದ ಶ್ರೀಶೈಲ ಸೂರ್ಯಸಿಂಹಾಸನಪೀಠದ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ವೀರಶೈವ ಧರ್ಮವು ಸಮರ್ಪಣಾ ಮನೋಭಾವವನ್ನು ಹೊಂದಿದೆ. ಇದು ಸಮಗ್ರತೆಯೊಂದಿಗೆ ಬೆಳೆದುಬಂದ ಪ್ರಬಲ ಧರ್ಮವಾಗಿದೆ ಎಂದರು.

22-7-2006

ಜುಲೈ ತಿಂಗಳ 22 ಮತ್ತು 23, 2006ರಂದು ಮೈಸೂರಿನಲ್ಲಿ 'ಆಧುನಿಕ ಜಗತ್ತಿಗೆ ಶ್ರೀ ಸಿದ್ಧಾಂತ ಶಿಖಾಮಣಿಯ ಕೊಡುಗೆ' ವಿಷಯ ಕುರಿತು ಎರಡು ದಿನಗಳ ವಿಚಾರ ಸಂಕಿರಣವನ್ನು ಮೈಸೂರಿನ ಜಪದಕಟ್ಟೆ ಮಠ ಮತ್ತು ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿತ್ತು. ಹಿಂದಿನ ವಿಚಾರ ಸಂಕಿರಣಗಳಿಗಿಂತ ಈ ವರ್ಷದ ವಿಚಾರ ಸಂಕಿರಣ ವಿಭಿನ್ನವಾಗಿತ್ತು. ವಿಷಯಗಳ ಆಯ್ಕೆಯಲ್ಲಿ ಸಿದ್ಧಾಂತ ಶಿಖಾಣಿಯನ್ನೇ, ಕೇಂದ್ರವಾಗಿಸಿಕೊಂಡು ಅದನ್ನು ಭಾರತೀಯ ಸಿದ್ಧಾಂತಗಳೊಂದಿಗೆ, ಜಾಗತಿಕ ಧರ್ಮಗಳೊಂದಿಗೆ, ತುಲನಾತ್ಮಕವಾಗಿ ನೋಡುವ ವಿಷಯಗಳಿದ್ದರೆ, 3 ಮತ್ತು 4ನೇ ಗೋಷ್ಠಿಗಳಲ್ಲಿ ಆಧುನಿಕ ಜಗತ್ತಿಗೆ ಸಿದ್ಧಾಂತ ಶಿಖಾಮಣಿಯ ಸಂದೇಶ ಮತ್ತು ಸಿದ್ಧಾಂತ ಶಿಖಾಮಣಿಯಲ್ಲಿ ಮಾನವೀಯ ಮೌಲ್ಯಗಳನ್ನು ಕುರಿತಾದ ಪ್ರಬಂಧಗಳಿದ್ದವು.

ಸಮನ್ವಯದ ಸೂತ್ರವನ್ನೇ ಹಿಡಿದು ಇಲ್ಲೂ ಜಗದ್ಗುರುಗಳು ಈ ವಿಚಾರವಾಗಿಯೇ ತಮ್ಮ ಆಶೀರ್ವಚನಗಳಲ್ಲಿ ತಿಳಿಸಿದ್ದಾರೆ. ಈ ವಿಚಾರ ಸಂಕಿರಣದ ಅವಶ್ಯಕತೆ ಏನು ಎಂಬುದನ್ನು ಒಂದು ಸಣ್ಣಕತೆಯ ಮೂಲಕ ಹೇಳಿದರು.

ಒಬ್ಬ ತಾಯಿ ತನ್ನ ಮಗುವಿಗೆ ಹಾಲುಣಿಸಿ ತೊಟ್ಟಿಲಲ್ಲಿ ಮಲಗಿಸಿದ್ದಳು. ಅದು ಅಲ್ಲಿ ಹಾಯಾಗಿ ಮಲಗಿತ್ತು. ತಾಯಿ ತನ್ನ ಮನೆಗೆಲಸಗಳಲ್ಲಿ ತೊಡಗಿದ್ದಳು. ಸ್ವಲ್ಪ ಹೊತ್ತಿಗೆಲ್ಲಾ ಮಗು ಜೋರಾಗಿ ಅಳಲಾರಂಭಿಸಿತು. ಅಲ್ಲೇ ಇದ್ದ ತಾಯಿ ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಮಗುವಿನ ಬಳಿ ಬಂದು ಪುನಃ ಮಲಗಿಸಲು ತೊಟ್ಟಿಲನ್ನು ತೂಗಲಾರಂಭಿಸಿದಳು. ಎಷ್ಟು ತೂಗಿದರೂ ಮಗು ಅಳುವುದನ್ನೆ ನಿಲ್ಲಿಸಲಿಲ್ಲ. ಹಸಿವಾಗಿರಬಹುದೆಂದೆಣಿಸಿ ಹಾಲು ಕುಡಿಸಲು ಪ್ರಯತ್ನಿಸಿದರೂ ಮಗು ಕುಡಿಯಲೊಲ್ಲದು-ಏನು ಮಾಡಬೇಕೆಂದು ತಿಳಿಯದೆ ಪಕ್ಕದ ಮನೆಯಲ್ಲಿರುವ ಅನುಭವಿ ಅಜ್ಜಿಯನ್ನು ಕಂಡು ಮಗುವಿನ ಅಳುವಿನ ಬಗ್ಗೆ ಹೇಳಿದಳು. ಆ ಅಜ್ಜಿ ತೊಟ್ಟಿಲ ಬಳಿ ಬಂದು ಅದನ್ನು ಪರೀಕ್ಷಿಸಿ ಅಲ್ಲಿ ಸಣ್ಣ ಇರುವೆಗಳಿರುವುದನ್ನು ಕಂಡು ಮಗುವಿನ ಅಳುವಿಗೆ ಕಾರಣ ತಿಳಿದಳು. ಕಚ್ಚುವ ಇರುವೆಗಳನ್ನು ದೂರ ಮಾಡದೆ ತೊಟ್ಟಿಲು ತೂಗಿದರೇನು, ಹಾಲನ್ನುಣಿಸಿದರೇನು ಆ ಮಗುವಿಗೆ ಹೇಗೆ ಸಮಾಧಾನವಾದೀತು? ಆದ್ದರಿಂದ ಜಗದ್ಗುರುಗಳು ಹೇಳಿದರು-ಅಳುವಿನ ಕಾರಣ ತಿಳಿಯಲು ಉಪಚಾರ ಮಾಡಬೇಕೇ ವಿನಃ ನಮ್ಮ ನಮ್ಮ ತಿಳಿವಳಿಕೆಯಂತೆ ಉಪಚಾರ ಮಾಡಿದರೆ ಮಗುವಿನ ಅಳು ನಿಲ್ಲುವುದಿಲ್ಲ ಎಂದು ಹೇಳಿ ಈ ಸಮಾಜವೂ ಒಂದು ಮಗುವಿನಂತೆ. ದೊಡ್ಡ ದೊಡ್ಡ ವಿದ್ವಾಂಸರು ಶ್ರೀ ಸಿದ್ಧಾಂತ ಶಿಖಾಮಣಿಯ ಕರ್ತೃ, ಕಾಲಗಳನ್ನೇ ಸಭೆ ಸಮಾರಂಭಗಳಲ್ಲಿ ಚರ್ಚಿಸಿ ಕಲಹವನ್ನು ಉಂಟುಮಾಡುತ್ತಿರುವುದನ್ನು ನೋಡಿ ನೋಡಿ ತತ್ವದ ಹಸಿವೆಯುಳ್ಳ ಮುಮುಕ್ಷು ಸಮಾಜವೆಂಬ ಕೂಸು ಅದೆಷ್ಟೋ ದಿನಗಳಿಂದ ಅಳುತ್ತಲೇ ಇದೆ. ಆದರೆ ಮಗುವಿನ ಅಳುವಿಕೆಯ ಕಾರಣವೇನೆಂದು ತಿಳಿದು ಶ್ರೀ ಸಿದ್ಧಾಂತ ಶಿಖಾಮಣಿಯ ಅಂತರ್ಗತವಾದ ತತ್ತ್ವ ಸಿದ್ಧಾಂತದ ಬಗ್ಗೆ ಚರ್ಚಿಸಿ ಸಮಾಜಕ್ಕೆ ತಿಳಿಸಿಕೊಡುವುದೇ ಈ ವಿಚಾರ ಸಂಕಿರಣದ ಮೂಲ ಉದ್ದೇಶವಾಗಿರುತ್ತದೆ ಎಂದು ತಿಳಿಸಿದರು.

ಇಂದಿನ ಈ ವಿಚಾರ ಸಂಕಿರಣದ ವಿಚಾರಗಳೆಲ್ಲವೂ ಪರಸ್ಪರ ಪೂರಕವಾಗಿಯೇ ಹೊರತು ವಿರೋಧಿಗಳಲ್ಲ ಎಂಬುದು ಸಿದ್ಧವಾಗುತ್ತದೆ. ಯಾರು ಬೌದ್ಧಿಕ ಬಲವನ್ನು ಬೆಳಸಿಕೊಂಡು ಜೊತೆಗೆ ಪರಸ್ಪರ ಸಮನ್ವಯದ ಭಾವನೆ ಮೂಡಿಸಿಕೊಳ್ಳುವರೋ ಅಂತಹ ಬೌದ್ಧಿಕ ಬಲದಿಂದ ಸಮಾಜಕ್ಕೆ ಉಪಯೋಗವಾಗುವುದು. ಇಲ್ಲದಿದ್ದರೆ ಸಾಕ್ಷರರೇ ರಾಕ್ಷಸರಾಗುವರೆಂಬ ಉಕ್ತಿ ಸತ್ಯವಾಗುವುದು. ಸಮಾಜದಲ್ಲಿ ಒಳ್ಳೆಯದಕ್ಕೂ ಕೆಡಕಿಗಾಗಲಿ ಎಲ್ಲದಕ್ಕೂ ಬುದ್ಧಿವಂತರೇ ಕಾರಣರು. ಅವರಿಗೆ ಸಮನ್ವಯದ ಸಂಸ್ಕಾರ ಕೊಟ್ಟರೆ ಒಳ್ಳೆಯದನ್ನು ಮಾಡಲು ಸಾಧ್ಯ ಎಂದು ವಿಚಾರ ಸಂಕಿರಣದ ಉದ್ದೇಶ, ಆಶಯಗಳನ್ನು ಬಹು ಮಾರ್ಮಿಕವಾಗಿ ತಿಳಿಸಿದರು.



ಮೈಸೂರಿನಲ್ಲಿ ನಡೆದ "ಆಧುನಿಕ ಜಗತ್ತಿಗೆ ಶ್ರೀ ಸಿದ್ಧಾಂತ ಶಿಖಾಮಣಿಯ ಕೊಡುಗೆ" ವಿಚಾರ ಸಂಕಿರಣದ ಉದ್ಘಾಟನೆಗೆ ಆಗಮಿಸಿದ್ದ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳಿಗೆ ಕಾಶೀ ಜಗದ್ಗುರುಗಳು ಗೌರವ ಸಮರ್ಪಿಸುತ್ತಿರುವುದು.

ಈ ವಿಚಾರ ಸಂಕಿರಣದ ಉದ್ಘಾಟನೆಯನ್ನು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನೆರವೇರಿಸಿ ಬಹು ಅಮೂಲ್ಯವಾದ ವಿಚಾರಗಳನ್ನು ತಿಳಿಸಿದರು.

ವಿಚಾರ ಸಂಕಿರಣದ ಈ ಗ್ರಂಥವನ್ನು 2007 ಜನವರಿ 1ನೇ ತಾರೀಖಿನಂದು ಜಗದ್ಗುರುಗಳ ಷಷ್ಠ್ಯಬ್ದಿ ನಿಮಿತ್ತ ಮುದ್ರಿಸಿ ಬಿಡುಗಡೆ ಮಾಡಿ ಜಗದ್ಗುರುಗಳಿಗೆ ಸಮರ್ಪಿಸಲಾಯ್ತು. ಪುಸ್ತಕ ರೂಪದಲ್ಲಿ ಹೊರತಂದದ್ದು ಸನ್ನಿಧಿಗೆ ಆನಂದವನ್ನುಂಟುಮಾಡಿದೆ ಎಂದು ಜಗದ್ಗುರುಗಳೇ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಆ ವಿಚಾರ ಸಂಕಿರಣ ಸಮಾಜಮುಖಿಯಾಗಿ ಯಾವುದೇ ಮತಗ್ರಂಥಗಳು ಸಂಕುಚಿತ ಭಾವನೆಗಳನ್ನು ತಾಳಿರುವುದಿಲ್ಲ ಎಂದು ಹೇಳಿದರು.

21–5–2006

ಧಾರ್ಮಿಕ ಮಠಗಳು ಭಾವೈಕ್ಯದ ಸಂಕೇತಗಳಾಗಲಿ : ಕಾಶೀ ಜಗದ್ಗುರುಗಳು



ಮುದಗಲ್ ಸಮೀಪದ ಅಂಕಲಿಮಠದಲ್ಲಿ ಶನಿವಾರ ಜರುಗಿದ 50ನೇ ಜ್ಞಾನದಾಸೋಹವನ್ನು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಮಹಾಸ್ವಾಮೀಜಿ ಉದ್ಘಾಟಿಸಿದರು. ಅಂಕಲಿಮಠದ ವೀರಭದ್ರ ಮಹಾಸ್ವಾಮೀಜಿ ಉಪಸ್ಥಿತರಿದ್ದರು.

ಲಿಂಗಸುಗೂರು ತಾಲೂಕಿನ ಅಂಕಲಿಮಠದ 50ನೇ ಸುವರ್ಣ ಮಾಸಿಕ ಜ್ಞಾನ ದಾಸೋಹ, ಸದ್ಗುರು ಶ್ರೀ ನಿರುಪಾಧೀಶ್ವರರು ರಚಿಸಿದ ಅಪರಾಧಿ ಸ್ತೋತ್ರ ಗ್ರಂಥ ಬಿಡುಗಡೆ ಹಾಗೂ ಜಾತ್ರಾ ಮಹೋತ್ಸವದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಕಾಶೀ ಜಗದ್ಗುರುಗಳಿಗೆ ರಾಷ್ಟ್ರದ ಭಾವೈಕ್ಯತೆಯನ್ನು ತಂದು ದೇಶದಲ್ಲಿ ಶಾಂತಿ ನೆಲೆಸಬೇಕೆಂಬ ನಿಟ್ಟಿನಲ್ಲಿ ಆಲೋಚಿಸುತ್ತಿರುವ ಈ ಸಮಯದಲ್ಲಿ ಅವರಿಂದ ಹೊರಟನುಡಿಗಳಲ್ಲಿ ಭಾವೈಕ್ಯತೆಯನ್ನು ಮಠಗಳಿಗೆ ಬೋಧಿಸಿದ್ದು ಗಮನಾರ್ಹ.

ಯಾವುದೇ ಜಾತಿ ಮತ ಭೇದಗಳನ್ನು ಮರೆತು ಯಾವುದೇ ಧರ್ಮದ ಮಠಗಳು ಸಮಾಜದ ಉದ್ಧಾರಕ್ಕೆ ಮುಂದಾಗಬೇಕು. ಜೊತೆಗೆ ರಾಷ್ಟ್ರೀಯ ಭಾವೈಕ್ಯತೆಯ ಸಂಕೇತಗಳಾಗಿ ಹೊರಹೊಮ್ಮಬೇಕಾಗಿದೆ. ಕಾಶೀಪೀಠ ವಾರಾಣಸಿಯಲ್ಲಿ ಅನಾದಿ ಕಾಲದಿಂದಲೂ ರಾಷ್ಟ್ರೀಯ ಭಾವೈಕ್ಯತೆಯ ಸಂಕೇತಗಳಲ್ಲಿ ಒಂದು ಮಠವೆಂದು ಮುಸ್ಲಿಂ ಸಾಮ್ರಾಟರು ಮಠಕ್ಕೆ ಕೊಟ್ಟಿರುವ ಫರ್ಮಾನ್‌ಗಳನ್ನು ತಿಳಿಸಿದರು. ಗುರು–ವಿರಕ್ತರೆನ್ನದೆ ಜ್ಞಾನಾಕಾಂಕ್ಷಿಗಳಿಗೆ ತೆರೆದ ಬಾಗಿಲಾಗಿತ್ತು ಕಾಶೀಪೀಠದ ಗುರುಕುಲವೆಂದರು.

ಇಂದು ವಿಜ್ಞಾನ ಮುಂದುವರೆದ ಕಾರಣ ಅಡುಗೆ ಇಂಧನದ ಆವಿಷ್ಕಾರದಿಂದ ಅಡುಗೆ ಮನೆಯಲ್ಲಿ ಆಡುತ್ತಿದ್ದ ಹೊಗೆ ಮಾಯವಾಗಿದೆ. ಆದರೆ ಸೋದರ–ಸೋದರಿಯರ ಸಂಬಂಧಿಗಳ ಹಗೆತನ ಮೊದಲಿಗಿಂತ ಹೆಚ್ಚಾಗಿ ಮುಂದುವರೆದಿದೆ. ಮಠಗಳು ಮನುಷ್ಯರ ನಡುವಿನ ಭಿನ್ನಾಭಿಪ್ರಾಯಗಳನ್ನು ಕಳೆಯುವ ನಿಟ್ಟಿನಲ್ಲಿ ಕಾರ್ಯಮಾಡಬೇಕಾಗಿದೆ. ಧಾರ್ಮಿಕ ಭಿನ್ನಾಭಿಪ್ರಾಯಗಳನ್ನು ಮರೆತು ಕೋಮುಗಲಭೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ಮಠಗಳದ್ದಾಗಿದೆ ಎಂದು ಮಠಗಳ ಧಾರ್ಮಿಕ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಭಾವೈಕ್ಯತೆ ಕಡೆಗೆ ಗಮನ ಹರಿಸಬೇಕೆಂದು ಸಲಹೆ ನೀಡಿದರು.

ಅಂಕಲಿಮಠ ಈಗಾಗಲೇ ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸ್ತುತ್ಯಾರ್ಹ. ನಾಡಿನ ಎಲ್ಲಾ ಮಠಗಳು ಇಂತಹ ಭಾವೈಕ್ಯತೆಯನ್ನು ಸೂಚಿಸಿದರೆ ನಾಡಿನ ಜನತೆಗೆ ಒಳ್ಳೆಯದಾಗುವುದು. ಸಮಾಜದ ಹಿತಕ್ಕೆ ಹಿತವಾದ ಮಾತುಗಳನ್ನು ಯಾರು ಹೇಳುವರೋ ಅಂಥವರನ್ನು ಗೌರವದಿಂದ ಕಾಣಿ. ಸಮಾಜ ಒಡೆಯುವವರನ್ನು ದೂರವಿಡಿ. ಹೀಗಿದ್ದಲ್ಲಿ ಸಮಾಜ ಉದ್ಧಾರವಾಗುವುದೆಂದು ಅಮೂಲ್ಯ ಸಲಹೆಗಳನ್ನು ಕಾಶೀ ಜಗದ್ಗುರುಗಳು ನೀಡಿದರು.

ಸರ್ವಧರ್ಮ ಸಮಾಗಮ ಅಗತ್ಯ : ಕಾಶೀ ಶ್ರೀಗಳು

ವಿಜಯ ಕರ್ನಾಟಕ, 3–6–2005



ಸಿಂಧಗಿಯ ಅಸ್ಕಿ ಗ್ರಾಮದಲ್ಲಿ ಹಮ್ಮಿಕೊಂಡ ಮಾನವಧರ್ಮ ಚಿಂತನ ಸಭೆಯಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿದರು. ಶಾಸಕ ಅಶೋಕ ಶಾಬಾದಿ ಮತ್ತಿತರರು ಉಪಸ್ಥಿತರಿದ್ದರು.

ಸಿಂದಗಿ, ಮೇ–2 ದೇಶದೆಲ್ಲೆಡೆ ಸಂಘರ್ಷ, ಕೋಮು ಗಲಭೆಗಳು ತಾಂಡವವಾಡುತ್ತಿರುವ ಇಂದಿನ ದಿನಮಾನಗಳಲ್ಲಿ ಹಜರತ್ ಸೈಯ್ಯದ ಬಡೇಸಾಬ ಖಾದ್ರಿ ಉರುಸಿನ ಅಂಗವಾಗಿ ಇಸ್ಲಾಂ ಸಮುದಾಯ ಅಡ್ಡಪಲ್ಲಕ್ಕಿ ಉತ್ಸವ ಮಾನವ ಧರ್ಮ ಚಿಂತನ ಸಭೆ ಹಮ್ಮಿಕೊಂಡ ವಿಶಿಷ್ಟ ಕಾರ್ಯಕ್ರಮವೊಂದು ತಾಲೂಕಿನ ಅಸ್ಕಿ ಗ್ರಾಮದಲ್ಲಿ ಇತ್ತೀಚೆಗೆ ಜರುಗಿತು.

ಮಳಖೇಡ ಗ್ರಾಮದ ಸಜ್ಜಾದ ನಸೀನ್ ಹಜರತ್ ಅಲ್‌ಹಾಜ್ ಸೈಯ್ಯದ ಶಹಾ ನೇಮತ ಉಲ್ಲಾ ಖಾದ್ರಿ ಹಾಗೂ ಹಜರತ ಸಯ್ಯದ ಮುಸ್ತಾಫಾ ಖಾದ್ರಿ ನೇತೃತ್ವದಲ್ಲಿ ನಡೆದ ಧರ್ಮ ಚಿಂತನೆ ಸಭೆಯಲ್ಲಿ ಕಾಶೀಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಮಾತನಾಡಿ ವಿವಿಧ ಧರ್ಮ–ಧರ್ಮಗಳ ಸಮಾಗಮ ಇಂದು ಅಪರೂಪವಾಗುತ್ತಿವೆ. ಹೀಗಾಗಿ ಎಲ್ಲ ಧರ್ಮಗಳ ಸಮಾಗಮ ಮೇಲಿಂದ ಮೇಲೆ ನಡೆಯಬೇಕು. ಏನೇ ಹೇಳಿದರೂ ಉಪದೇಶಗಳು ಕಾರ್ಯಾಚರಣೆಯಲ್ಲಿ ಬರುತ್ತಿಲ್ಲ. ಹೀಗಾಗಿ ಸಂಘರ್ಷಗಳು ಹೆಚ್ಚಿವೆ.

ಸಮಾನತೆ ಹಾಗೂ ಅನ್ಯ ಧರ್ಮದ ಚಿಂತನೆಗಳನ್ನು ಗೌರವಿಸುವ ಮನೋಭಾವನೆ ಎಲ್ಲರಲ್ಲಿ ಒಡಮೂಡಿ ಬರಬೇಕು. ಈ ದಿಶೆಯಲ್ಲಿ ಅಸ್ಕಿ ಗ್ರಾಮದ ಇಸ್ಲಾಂ ಸಮುದಾಯ ಮಾಡಿರುವ ಕಾರ್ಯವನ್ನು ಎಲ್ಲರೂ ಅನುಸರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಶಾಸಕ ಅಶೋಕ ಶಾಬಾದಿ ಮಾತನಾಡಿ ಆಚರಣೆಗಳು ಬೇರೆ–ಬೇರೆ ಇರಬಹುದು ಆದರೆ ಜಗತ್ತಿನ ಎಲ್ಲ ಧರ್ಮಗಳ ತಿರುಳು ಒಂದೇ. ಕಳೆದ ಎಂಟು ವರ್ಷಗಳಿಂದ ಕೋಮು ಸಾಮರಸ್ಯ ಕುರಿತು ಈ ಗ್ರಾಮದ ಜನತೆ ಮಾಡಿರುವ ಕಾರ್ಯ ಅತ್ಯಂತ ಅಭಿನಂದನಾರ್ಹ ಎಂದರು.

ವಿಜಾಪೂರ ಮಹಿಳಾ ವಿಶ್ವವಿದ್ಯಾಲಯದ ಎಂ.ಬಿ.ದಿಲ್‌ಶಾದ, ಇಲಕಲ್ಲಿನ ಪ್ರೊ. ಲಾಲಹುಸೇನ ಕಂದಗಲ್ ಉಪನ್ಯಾಸ ನೀಡಿದರು.

ಶಾಖಾಪೂರಿನ ಶ್ರೀ ಸಿದ್ಧರಾಮ ಮಹಾಸ್ವಾಮಿಗಳು, ಶ್ರೀ ಪ್ರಣವಾನಂದ ಮಹಾಸ್ವಾಮಿಗಳು, ಶ್ರೀ ಚೆನ್ನಮಲ್ಲ ಮಹಾಸ್ವಾಮಿಗಳು, ಶ್ರೀ ವಿರುಪಾಕ್ಷ ಶಿವಾಚಾರ್ಯರು, ಹಜರತ ಸಯ್ಯದಶಾ ಖಾಸಿಂ ಹುಸೇನ, ಹಜರತ ಸಯ್ಯದಶಹಾ ಮೈನುಲ್ಲಾ ಹುಸೇನಿ, ಮೌಲಾನಾ ಅಬ್ದುಲ್‌ಹಕಿಂ ವಿಖಾರ ಅಶರಫಿ, ಮೌಲಾನಾ ಗಯಾಸುದ್ದಿನ್ ಕಾಜಿ ಹಾಗೂ ಜಿಲ್ಲಾ ಜನತಾದಳದ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಪಾಟೀಲ ಗಣಿಹಾರ, ಮಾಜಿ ಜಿ.ಪಂ. ಉಪಾಧ್ಯಕ್ಷ ಎಂ.ಎಚ್. ಸಿಪಾಯಿ, ಮಾಜಿ ತಾ.ಪಂ. ಉಪಾಧ್ಯಕ್ಷ ಬಾಪುಗೌಡ ಪಾಟೀಲ, ಗ್ರಾಮ ಪಂಚಾಯತ ಅಧ್ಯಕ್ಷ ಬಸನಗೌಡ ಯಾಳವಾರ, ಮಾನವ ಧರ್ಮ ಸೇವಾ ಸಮಿತಿ ಅಧ್ಯಕ್ಷ ನಿಂಗಪ್ಪ ಬೂದಿ, ಕಾರ್ಯದರ್ಶಿ ಜನ್ನಾ ಸರಕಾರ ಹುಣಶಾಳ, ಶಂಕರಗೌಡ ನಾಗರಡ್ಡಿ ಮತ್ತಿತರರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಗ್ರಾಮದ ಗಣ್ಯರಾದ ಎಸ್.ಎಸ್. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಉತ್ಸವ ಸಮಿತಿ ಅಧ್ಯಕ್ಷ ಶಂಕರಶಾಸ್ತ್ರಿ ಕೋರಿ ಕಾರ್ಯಕ್ರಮ ನಿರೂಪಿಸಿದರು.

ಬಾಲಕೃಷ್ಣ ವಂದಿಸಿದರು. ಹೊನ್ನಮ್ಮ ಹಿರೇಮಠ ಪ್ರಾರ್ಥಿಸಿದರು.

ಮಾನವಧರ್ಮ ಚಿಂತನೆ ಸಭೆಯ ಆರಂಭಕ್ಕೆ ಕುರಾನ್ ಪಠಣ, ವೇದಘೋಷ, ನಾತಪಠಣ ಸೇರಿದಂತೆ ಹಿಂದು ಹಾಗೂ ಮುಸ್ಲಿಂ ಧಾರ್ಮಿಕ ವಿಧಿವಿಧಾನಗಳು ಈ ಸಂದರ್ಭದಲ್ಲಿ ನಡೆದವು.

ಮೆರವಣಿಗೆ : ಅಂದು ಮಧ್ಯಾಹ್ನ ಗ್ರಾಮಕ್ಕೆ ಆಗಮಿಸಿದ ಕಾಶೀ ಜಗದ್ಗುರುಗಳು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವ ಮಾನವ ಧರ್ಮ ಸೇವಾ ಸಮಿತಿ ಆಶ್ರಯದಲ್ಲಿ ವಿವಿಧ ವಾದ್ಯವೈಭವಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಿತು.

ಕೋಮು ಸೌಹಾರ್ದತೆಯಿಂದ ಶಾಂತಿ ಧರ್ಮಗಳು ಅನೇಕ–ದಿವ್ಯದೃಷ್ಟಿ ಏಕ



ಮಹಾಲಿಂಗಪುರದಲ್ಲಿ ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರ 17ನೇ ಪಟ್ಟಾಭಿಷೇಕ ವರ್ಧಂತಿ ಸಂದರ್ಭದಲ್ಲಿ ಜೈನ ಸಮಾಜದ ಡಾ. ಜಯಪಾಲ ಯಲ್ಲಟ್ಟಿಯವರು ಶ್ರೀಗಳ ಪ್ರಪ್ರಥಮ ತುಲಾಭಾರ ನೆರವೇರಿಸಿದರು. ಶ್ರೀ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಸಂಗಪ್ಪ ಹಲ್ಲಿ, ಮಲ್ಲಪ್ಪ ಭಾವಿಕಟ್ಟಿ, ಹುಕ್ಕೇರಿ, ಹಿಪ್ಪರಗಿ, ರಾಯಚೂರು, ಗುಲಬರ್ಗಾ, ನರೇಗಲ್ ಶ್ರೀಗಳು ಚಿತ್ರದಲ್ಲಿದ್ದಾರೆ.

23–11–2005 : ಮಹಾಲಿಂಗ ಪುರದಲ್ಲಿ ಜಗದ್ಗುರುಗಳ 17ನೇ ವರ್ಷದ ಪಟ್ಟಾಭಿಷೇಕದ ವರ್ಧಂತಿ ಮಹೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಅಲ್ಲಿನ ವಿವಿಧ ಸಮುದಾಯದವರು ಸೇರಿ ಸಂಭ್ರಮದಿಂದ ಆಚರಿಸಿದ್ದು ಒಂದು ರೀತಿಯಲ್ಲಿ ಸಮನ್ವಯದ ಪತಾಕೆಯನ್ನು ಎಲ್ಲಾ ಸಮುದಾಯದವರೂ ಎತ್ತಿ ಹಿಡಿದು ಸೌಹಾರ್ದತೆಯನ್ನು ಮೆರೆದರು.

ಈ ಸಮಾರಂಭವನ್ನು ಶ್ರೀ ಚನ್ನಗಿರೀಶ್ವರ ದೇವಾಲಯ ಸಮುದಾಯದ ಸದ್ಭಕ್ತರು, ಗುರುವರ್ಗ, ವಿರಕ್ತ ಪರಂಪರೆ, ಅದ್ವೈತ ಸಂಪ್ರದಾಯ, ಇಸ್ಲಾಂ, ಜೈನ ಮುಂತಾದ ಮತಬಾಂಧವರು ಒಂದೇ ವೇದಿಕೆಯಲ್ಲಿ ಜಗದ್ಗುರುಗಳ 17ನೇ ವರ್ಧಂತಿ ಮಹೋತ್ಸವನ್ನಾಚರಿಸಿದ್ದು ಜಗದ್ಗುರುಗಳಿಗೆ ಅತ್ಯಂತ ಸಂತೋಷದಾಯಕವಾಗಿದ್ದಿತು.

ಬೇರೆ ಬೇರೆ ಮೂಲಗಳಿಂದ ಹರಿಯುವ ನದಿಗಳು ಸಮುದ್ರದಲ್ಲಿ ಸಂಗಮಿಸುವಂತೆ ಭಾರತದಲ್ಲಿ ಧರ್ಮ, ಸಂಸ್ಕೃತಿಗಳು ಬೇರೆಯಾದರೂ ಅವುಗಳ ದಿವ್ಯದೃಷ್ಟಿ ಒಂದೇ ಆಗಿದೆ. ಇದಕ್ಕೆ ಇಂದಿನ ಈ ಮಹಾಲಿಂಗಪುರವೇ ಸಾಕ್ಷಿಯಾಗಿ ದಕ್ಷಿಣದ ಭಾವೈಕ್ಯ ಕಾಶೀ ಎಂದು ಬಣ್ಣಿಸಿದರು ಜಗದ್ಗುರುಗಳು.

ಜೈನಧರ್ಮೀಯರಾದ ಡಾ. ಜಯಪಾಲ ಯಲ್ಲಟ್ಟಿ ದಂಪತಿಗಳ ಪ್ರೀತಿಪೂರ್ವಕ ಒತ್ತಾಯದ ಮೇರೆಗೆ ಜಗದ್ಗುರುಗಳು ಎಂದೂ ತುಲಾಭಾರ ಮಾಡಿಸಿಕೊಂಡವರಲ್ಲ, ಆದರೂ ಇಂದು ಒಪ್ಪಿ ಮಹಾಲಿಂಗಪುರದ ಜನತೆಯ ಪ್ರೀತಿಗೆ ತಾವು ಸೋತಿರುವುದಾಗಿ ತಿಳಿಸಿ ತುಲಾಭಾರವನ್ನು ಮಾಡಿಸಿಕೊಂಡಿದ್ದು ಒಂದು ವಿಶೇಷ. ಪಟ್ಟಣದ ಮುಸ್ಲಿಂ ಬಾಂಧವರು ಪ್ರಸಾದದ ವ್ಯವಸ್ಥೆ ಮಾಡಿದ್ದು ಮತ್ತೊಂದು ಭಾವೈಕ್ಯದ ವಿಶೇಷ ಸಂಕೇತವಾಗಿತ್ತು.

ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ತೇರದಾಳದ ಮಹಂತಿ ದೇವರು ಉಪಸ್ಥಿತರಿದ್ದ ಈ ಸಮಾರಂಭದಲ್ಲಿ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮಿಗಳು ಕಾರ್ಯಕ್ರಮವನ್ನು ನೆರವೇರಿಸಿದ್ದು ಗುರು–ವಿರಕ್ತರ ಸಮಾಗಮದ ಸಂಕೇತವಾಗಿತ್ತು.

ಒಟ್ಟಿನಲ್ಲಿ ಜಗದ್ಗುರುಗಳ ಸಮನ್ವಯದ ತೋಟದಲ್ಲಿಂದು ಅನೇಕ ಹೂಗಳು ಅರಳಿದ್ದವು. ಒಂದೇ ವೇದಿಕೆಯಡಿ ಎಲ್ಲಾ ಸಮುದಾಯದವರು ಒಂದುಗೂಡಿ ವರ್ಧಂತ್ಯುತ್ಸವ, ತುಲಾಭಾರ ಪ್ರವಚನಗಳ ಸಮಾರಂಭವನ್ನು ಸಾಮರಸ್ಯದಿಂದ ನಡೆಸಿಕೊಟ್ಟರು.

ಇಂದು ಜಗತ್ತಿನಲ್ಲಿ ಎಲ್ಲೆಡೆ ಶಾಂತಿ ನೆಲೆಸಬೇಕಾದರೆ ಸ್ವಧರ್ಮನಿಷ್ಠೆ ಹಾಗೂ ಪರಧರ್ಮ ಸೌಹಾರ್ದತೆ ಇಂದಿನ ಅಗತ್ಯವಾಗಿದೆ. ಕೋಮು ಸೌಹಾರ್ದತೆಯಿಂದಲೇ ವಿಶ್ವದಲ್ಲಿ ಶಾಂತಿ ಎಂದು ಜಗದ್ಗುರುಗಳು ಸಾರಿದರು.



ಲಿಂಗೈಕ್ಯರಾದ ಮೂರುಸಾವಿರ ಮಠದ ಡಾ. ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು
ವಿಜಯ ಸಂದೇಶ, **29–5–2006**

29–5–2006

ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮೇ 29–2006ರಂದು ಲಿಂಗೈಕ್ಯರಾದರು. ಪೀಠಾಧಿಪತಿಗಳಾಗಿ 45 ವರ್ಷಗಳ ಕಾಲ ಸಮಾಜ ಸೇವೆ ಸಲ್ಲಿಸಿದ್ದರು. ಶಿಕ್ಷಣ ಪ್ರೇಮಿಗಳು, ಆಧುನಿಕ ವಚನಕಾರರೂ ಆಗಿದ್ದ ಅವರು 'ಪೂರ್ಣಜ್ಞ' ಎಂಬ ಅಂಕಿತದಲ್ಲಿ ಸಹಸ್ರಾರು ವಚನಗಳನ್ನು ರಚಿಸಿದ್ದರು. ಪಂಚಪೀಠಗಳ ಬಗ್ಗೆ ಅಪಾರ ಗೌರವವುಳ್ಳವರಾಗಿದ್ದರು. ಅವರು ಲಿಂಗೈಕ್ಯರಾದ ಸುದ್ದಿ ತಿಳಿಯುತ್ತಿದ್ದಂತೆ ಬಾಳೆಹೊನ್ನೂರು, ಶ್ರೀಶೈಲ, ಕಾಶೀ ಪೀಠದ ಜಗದ್ಗುರುಗಳು ಹುಬ್ಬಳ್ಳಿಗೆ ಆಗಮಿಸಿ ಮೂಜಗಂ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಕಾಶೀ ಜಗದ್ಗುರುಗಳು ಮೂಜಗಂ ಅವರ ಬಗೆಗೆ ಹೇಳುತ್ತಾ ಮೂಜಗಂ ಅವರು ಲಿಂಗೈಕ್ಯರಾಗಿದ್ದು ವೀರಶೈವ ಸಮಾಜಕ್ಕೆ ತುಂಬಲಾರದ ಹಾನಿಯಾಗಿದೆ. ಅವರು ಬಹಳ ಸಮನ್ವಯವಾದಿಗಳೂ, ಸಮನ್ವಯ ಪ್ರೇಮಿಗಳೂ ಆಗಿದ್ದನ್ನು ನೆನಪಿಸಿಕೊಳ್ಳುತ್ತಾ ಮೂಜಗಂ ಅವರು ತಮ್ಮ ಜೀವಮಾನದಲ್ಲಿ ಅನೇಕ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಸೇವೆಗಳನ್ನು ಮಾಡಿದ್ದರು. ಗುರು–ವಿರಕ್ತರ ಸಮಾಗಮ ಆಗಲಿಲ್ಲವೆಂಬ ಕೊರಗು ಅವರಿಗೆ ಕಾಡುತ್ತಿತ್ತು. ರಂಭಾಪುರಿ ಪೀಠದಲ್ಲಿ 2003ರಲ್ಲಿ ನಡೆದ ಗುರು–ವಿರಕ್ತರ ಸಮಾವೇಶದಿಂದ ಅಂದು ಅವರು ಮೌನರಾಗಿದ್ದರೂ ಸಂತೃಪ್ತಿಯನ್ನು ವ್ಯಕ್ತಪಡಿಸಿದ್ದನ್ನು ಜಗದ್ಗುರುಗಳು ತಿಳಿಸಿದರು. ಕೋಮು ಸೌಹಾರ್ದತೆಯ ಬಗ್ಗೆ ಪ್ರಜ್ಞಾವಂತರಾಗಿರುವವರನ್ನು ಸಮಾಜ ಕಳೆದುಕೊಂಡಿದೆ. ಅವರಿಲ್ಲದೆ ಕೂಡಲಸಂಗಮದಲ್ಲಿ ನಡೆಯುವ ಒಂದನೆಯ ತಾರೀಖಿನ ಎಲ್ಲಾ ವೀರಶೈವ ಮಠಾಧಿಪತಿಗಳ ಸಮ್ಮೇಳನದಲ್ಲಿ ಅವರ ಅನುಪಸ್ಥಿತಿ ಎಲ್ಲರಿಗೂ ನೋವನ್ನುಂಟು ಮಾಡುವುದೆಂಬ ಮಾತನ್ನು ಒತ್ತಿ ಹೇಳಿವೆ. ಅವರ ದಿವ್ಯ ಆತ್ಮ ಪುನಃ ಪುನಃ ಈ ಜಗತ್ತಿಗೆ ಬಂದು ಮತ್ತು ಮತ್ತೆ ಸಮನ್ವಯದ ಕಾರ್ಯ ಮಾಡಬೇಕೆಂಬುದೇ ನಮ್ಮ ಸದಾಶಯವಾಗಿದೆ ಎಂದು ಹೇಳಿದರು. ಮೂಜಗಂ ಸಾವಿನಿಂದಾಗಿ ಸಾಮರಸ್ಯದ ಕಾರ್ಯ ಕುಂಠಿತವಾದುದನ್ನು ಜಗದ್ಗುರುಗಳು ಮನನೊಂದು ಈ ಮಾತುಗಳನ್ನು ಹೇಳಿದ್ದರು.



ಪಂಚಪೀಠದ ಕಾಶಿಯ ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ರಂಭಾಪುರಿ ಶ್ರೀ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹಾಗೂ ಶ್ರೀಶೈಲದ ಉಮಾಪತಿ ಪಂಡಿತಾರಾಧ್ಯ ಭಗವತ್ಪಾದರು ಹುಬ್ಬಳ್ಳಿಗೆ ಆಗಮಿಸಿ ಮೂಜಗಂ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಪಂಚಪೀಠ ಧರ್ಮಗುರುಗಳಿಂದ ಶಿವಕುಮಾರ ಶ್ರೀಗಳ ಭೇಟಿ



ಪಂಚಪೀಠದ ಯತಿಗಳಾದ ರಂಭಾಪುರಿ ಶ್ರೀ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಕಾಶೀಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉಜ್ಜಯಿನಿ ಮರುಳಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ತುಮಕೂರಿನ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ ಆರೋಗ್ಯ ವಿಚಾರಿಸಿದರು. ಶ್ರೀ ಸಿದ್ಧಲಿಂಗ ಸ್ವಾಮೀಜಿ ಹಾಜರಿದ್ದರು.

25–6–2007 : ಶತಾಯುಷಿಗಳಾಗಿರುವ ತುಮಕೂರಿನ ಸಿದ್ಧಗಂಗಾ ಮಠದ ಸ್ವಾಮೀಜಿ ತ್ರಿವಿಧ ದಾಸೋಹಿ, ಕರ್ನಾಟಕರತ್ನ ಡಾ. ಶಿವಕುಮಾರ ಸ್ವಾಮಿಗಳ ಅನಾರೋಗ್ಯದ ವಿಷಯ ತಿಳಿದಾಗ ಪಂಚಪೀಠದ ಜಗದ್ಗುರುಗಳಾದ ರಂಭಾಪುರಿ, ಉಜ್ಜಯನಿ, ಕಾಶೀಪೀಠದ ಜಗದ್ಗುರುಗಳು ಮೂವರೂ ಸಿದ್ಧಗಂಗೆಗೆ ಸಂಜೆ ಆರುಗಂಟೆಗೆ ಭೇಟಿನೀಡಿ ಹಳೇಮಠದಲ್ಲಿ ತಂಗಿರುವ ಸ್ವಾಮೀಜಿಯವರ ಆರೋಗ್ಯ ವಿಚಾರಿಸಿ ಶೀಘ್ರ ಗುಣಮುಖರಾಗಲೆಂದು ಹಾರೈಸಿದರು. ಮೂವರು ಜಗದ್ಗುರುಗಳು ಹಳೇಮಠದ ಒಳಗೆ ಬಂದಕೂಡಲೇ ಡಾ. ಶಿವಕುಮಾರ ಸ್ವಾಮೀಜಿ ಅವರು ಸ್ವತಃ ಎದ್ದು ನಿಂತು ಧರ್ಮಗುರುಗಳನ್ನು ನಗುಮುಖದಿಂದ ಸ್ವಾಗತಿಸಿದರು. ಸುಮಾರು ಅರ್ಧಗಂಟೆಗೂ ಮಿಕ್ಕಿ ಮೂವರು ಜಗದ್ಗುರುಗಳೊಡನೆ ಲವಲವಿಕೆಯಿಂದ ಸ್ವಾಮೀಜಿಯವರು ಮಾತನಾಡಿದರು.

ಸಿದ್ಧಗಂಗಾ ಮಠದ ಸುದೀರ್ಘ ಇತಿಹಾಸದಲ್ಲಿ ಮೊದಲ ಬಾರಿಗೆ ಪಂಚಪೀಠಕ್ಕೆ ಸೇರಿದ ಧರ್ಮಗುರುಗಳು ಭೇಟಿ ನೀಡಿ ಹೊಸ ಚರಿತ್ರೆಯನ್ನು ಬರೆದ ಸಂದರ್ಭ ಇದಾಗಿತ್ತು. ಉಜ್ಜಯನಿ ಜಗದ್ಗುರುಗಳಾದ ಶ್ರೀ ಮರುಳಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಸಿದ್ಧಗಂಗೆ ಮಠದಲ್ಲಿ ತಾವು ಓದಿದ್ದನ್ನು, ಅಲ್ಲಿನ ವಿದ್ಯಾರ್ಥಿಯಾಗಿದ್ದನ್ನು ನೆನಪಿಸಿಕೊಂಡರು. ಪಂಚಪೀಠಾಧೀಶ್ವರರು ಸಿದ್ಧಗಂಗಾ ಮಠಕ್ಕೆ ಭೇಟಿ ಇತ್ತ ಸಂದರ್ಭದಲ್ಲಿ ಮಠದ ಕಿರಿಯ ಸ್ವಾಮೀಜಿ ಶ್ರೀ ಸಿದ್ಧಲಿಂಗ ಸ್ವಾಮೀಜಿಗಳು, ಸಚಿವ ಸೊಗಡು ಶಿವಣ್ಣ, ಶಾಸಕ ವಿ. ಸೋಮಣ್ಣ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾದ ಭೀಮಣ್ಣ ಖಂಡ್ರೆ, ಅರವಿಂದ ಜತ್ತಿ, ಬಿ.ಎಸ್. ಮುದ್ದಪ್ಪ, ಎನ್.ಆರ್. ಜಗದೀಶಾರಾಧ್ಯ ಮೊದಲಾದವರು ಉಪಸ್ಥಿತರಿದ್ದರು.

ಜಾತಿ, ಮತ, ಪಂಥ ಯಾವುದನ್ನೂ ಪರಿಗಣಿಸದೆ ಎಲ್ಲಾ ವರ್ಗದ ಬಡ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿರುವರಲ್ಲದೆ–ಸಮನ್ವಯದ ಹಾದಿಯಲ್ಲಿ ಸಾಗಿರುವ ಹಿರಿಯರಾದ, ಪೂಜ್ಯರಾದ ಸಿದ್ಧಗಂಗಾ ಮಠಾಧೀಶರಾದ, ತ್ರಿವಿಧ ದಾಸೋಹಿಗಳಾದ ಡಾ|| ಶಿವಕುಮಾರ ಸ್ವಾಮೀಜಿಯವರನ್ನು ಈ ಕಾರಣಗಳಿಂದಾಗಿ ಜಗದ್ಗುರುಗಳು ಅವರಲ್ಲಿಗೆ ತಾವಾಗಿಯೇ ಬಂದು ತಮ್ಮ ಗೌರವ ಭಾವವನ್ನು ಸಮರ್ಪಿಸಿದರು.



ಮಹಾರಾಷ್ಟ್ರದ ಕರಾಡ ನಗರದ ಯಶವಂತರಾವ ಚವ್ಹಾಣ ಸ್ಮೃತಿ ಭವನದಲ್ಲಿ ಏರ್ಪಡಿಸಿದ್ದ ಅಖಿಲ ಮಹಾರಾಷ್ಟ್ರ ವೀರಶೈವ ವಧೂ–ವರರ ಪರಿಚಯ ಸಮಾವೇಶವನ್ನು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು.

ಒಳಪಂಗಡಗಳಿಗೆ ಮಹತ್ವಬೇಡ


ಕಾಶೀ ಜಗದ್ಗುರುಗಳು ಸಮನ್ವಯದ ಹಾದಿಯಲ್ಲಿ ತಮ್ಮ ಧರ್ಮಯಾತ್ರೆಯನ್ನು ಮುಂದುವರೆಸುತ್ತಾ ಮಹಾರಾಷ್ಟ್ರದ ಕರಾಡ ನಗರವನ್ನು **8–6–2008**ರಂದು

ಸೇರಿದರು. ಅಲ್ಲಿ ಶ್ರೀ ಯಶವಂತರಾವ್ ಚವ್ಹಾಣ ಸ್ಮೃತಿ ಭವನದಲ್ಲಿ ಅಖಿಲ ಮಹಾರಾಷ್ಟ್ರ ವೀರಶೈವ ವಧೂ–ವರರ ಪರಿಚಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಜಗದ್ಗುರುಗಳು ವಧೂ–ವರರಿಗೆ ಅವರ ತಾಯಿ ತಂದೆ ಅವರ ಕುಟುಂಬಗಳಿಗೆ ಕೆಲವು ಸಮನ್ವಯದ ಸಂದೇಶವನ್ನು ನೀಡಿದರು. ಮದುವೆ ಕಾರ್ಯಗಳಲ್ಲಿ ಸಂಬಂಧ ಬೆಳೆಸುವಾಗ ಒಳಪಂಗಡಗಳನ್ನು ಪರಿಗಣಿಸಬೇಡಿ. ಒಳಪಂಗಡಗಳು ಜಾತಿ ಸಂಕೇತಗಳಲ್ಲ. ಅವು ಅವರವರು ಮಾಡುತ್ತಿರುವ ವಿಭಿನ್ನ ಉದ್ಯೋಗದಿಂದ ಬಂದ ಹೆಸರುಗಳೇ ವಿನಃ ಬೇರೆ ಜಾತಿಗಳಲ್ಲ. ಹಾಗಾಗಿ ಒಳಪಂಗಡಗಳಿಗೆ ಮಹತ್ವ ನೀಡಬೇಡಿರೆಂದು ಕರೆ ನೀಡಿದರು.

ಸಂವಿಧಾನದಲ್ಲಿ ಸುಮಾರು 39 ಒಳಪಂಗಡಗಳನ್ನು ಗುರುತಿಸಿದ್ದಾರೆ. ಅವೆಲ್ಲವೂ ಅವರವರು ಮಾಡುತ್ತಿರುವ ಉದ್ಯೋಗ ಸೂಚಕವೇ ಹೊರತು ಜಾತಿ ಸೂಚಕಗಳಲ್ಲ ಎಂದು ಎಚ್ಚರಿಸುತ್ತ ಜಗದ್ಗುರುಗಳು ವೀರಶೈವರ ಸಮಗ್ರತೆಗಾಗಿ ಸರ್ವರೂ ಒಳಪಂಗಡಗಳ ಭೇದ ಮಾಡದೇ ಒಗ್ಗೂಡಲು ರೋಟಿ–ಬೇಟಿ ವ್ಯವಹಾರ ಅತ್ಯಂತ ಸೂಕ್ತ ಎಂದು ವೀರಶೈವದ ಸಂಘಟನೆಗಾಗಿ ನೆರೆದಿದ್ದವರಲ್ಲಿ ಉಪದೇಶ ನೀಡಿದರು.

27–2–2009ರಂದು ವಾರಾಣಸಿಗೆ ರಾಜಸ್ಥಾನ ರಾಜ್ಯದ ಕರೋಟಿ ಜಿಲ್ಲೆಯ 50 ಜನ ಜಂಗಮ ಸಮಾಜದ ಸ್ತ್ರೀ ಪುರುಷರು ಕಾಶೀ ಜಂಗಮವಾಡಿ ಮಠದ ಜಗದ್ಗುರುಗಳಿಂದ ಲಿಂಗದೀಕ್ಷೆ ಪಡೆಯಲೆಂದು ಆಗಮಿಸಿದ್ದರು. ಅವರೆಲ್ಲರಿಗೂ ಲಿಂಗದೀಕ್ಷೆ ನೀಡಿ ಅವರಿಗಾಗಿ ಏರ್ಪಡಿಸಿದ್ದ ಧರ್ಮಸಭೆಯಲ್ಲಿ ಉತ್ತರ ಭಾರತದಲ್ಲಿ ಅನೇಕ ರಾಜ್ಯಗಳಲ್ಲಿ ಹರಡಿಕೊಂಡಿರುವ ಜಂಗಮ ಸಮಾಜಕ್ಕೆ ಸಂಸ್ಕಾರ ನೀಡಿ ವೀರಶೈವ ಧರ್ಮದ ಮೂಲವಾಹಿನಿಯಲ್ಲಿ ಅವರೆಲ್ಲರೂ ಒಂದಾಗಬೇಕೆಂಬುದೇ ಜಗದ್ಗುರುಗಳ ಇಚ್ಛೆಯಾಗಿದೆ.

ಜಂಗಮ ಸಮಾಜ ಒಂದಾಗಲಿ



ರಾಜಸ್ಥಾನದ ಜಂಗಮ ಸಮಾಜ ಬಾಂಧವರು ಉತ್ತರಪ್ರದೇಶದ ಕಾಶೀ ಜಂಗಮವಾಡಿ ಮಠಕ್ಕೆ ತೆರಳಿ ಜಗದ್ಗುರುಗಳ ದರ್ಶನಾಶೀರ್ವಾದ ಪಡೆದರು.

ಈ ಸಮಸ್ತ ಸಮಾಜಕ್ಕೆ ಸಂಸ್ಕಾರ ಕೊಡುವುದಕ್ಕೆ ಕೇದಾರ, ಕಾಶೀ, ಉಜ್ಜಯಿನಿ, ಶ್ರೀಶೈಲ ಮತ್ತು ರಂಭಾಪುರಿಗಳಲ್ಲಿ ವೀರಶೈವ ಸಮಾಜದ ರಾಷ್ಟ್ರೀಯ ಪಂಚಪೀಠಗಳು ಸ್ಥಾಪಿತಗೊಂಡಿವೆ.

ವೀರಶೈವದ ಅನುಯಾಯಿಗಳು ಹಿಮಾಲಯದಿಂದ ಕನ್ಯಾಕುಮಾರಿವರೆಗೆ ಭಾರತದ ವಿವಿಧ ರಾಜ್ಯಗಳಲ್ಲಿ ವಾಸವಾಗಿದ್ದಾರೆ. ವೀರಶೈವ ಧರ್ಮದ ಒಂದು ಪ್ರಮುಖ ವರ್ಗದ ಜಂಗಮ ಸಮಾಜವು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಹೆಚ್ಚಾಗಿ ಕೇರಳ ರಾಜ್ಯಗಳಲ್ಲಿ ಇರುವಂತೆ ಉತ್ತರಭಾರತದ ರಾಜಸ್ಥಾನ, ಹರಿಯಾಣ, ದಿಲ್ಲಿ, ಕಾಶ್ಮೀರಗಳಲ್ಲಿಯೂ ಜಂಗಮರು ವಾಸವಾಗಿರುವ ವಿಷಯವನ್ನು ತಿಳಿಸಿದರು. ಆದರೆ ಇವರೆಲ್ಲಾ ಮೂಲವಾಹಿನಿಯಿಂದ ದೂರವಾಗಿರುವುದರಿಂದ ಧರ್ಮದ ಸಂಸ್ಕಾರ ಹೊಂದಿರುವುದಿಲ್ಲಎಂದು ಹೇಳಿದರು. ರಾಜಸ್ಥಾನದ ಜಯಪುರ, ದೋಸಾರ, ಸವಾಯಿ, ಮಾಧವಾಪುರ, ಕೆರೋಲಿ, ಇಂಡೋನ, ಕೋಟಾ, ಸಿಕಂದರಾ, ದೌಲಪುರ, ಬಾರಾ, ಚಿತ್ತೋಡಗಡ, ಅಲ್ವರ ಮತ್ತು ಬಿಕಾನೇರ್ ಜಿಲ್ಲೆಗಳಲ್ಲಿ ಐವತ್ತು ಸಾವಿರಕ್ಕೂ ಹೆಚ್ಚು ಜಂಗಮರಿರುವ ವಿಚಾರವನ್ನು ತಿಳಿಸಿ ಅವರಲ್ಲಿ ಕೆಲವರು ಹೆಚ್ಚಿನ ಭಿಕ್ಷೆ ಬೇಡಿ ಜೀವನ ನಡೆಸುವುದನ್ನು, ಕೆಲವರು ಕಲ್ಲಿನ ಉದ್ಯೋಗ ಮಾಡುವುದನ್ನು, ಹೆಚ್ಚಿನ ಸಂಖ್ಯೆಯ ಜನರು ಚಿನ್ನ, ಬೆಳ್ಳಿಯ ಆಭರಣಗಳನ್ನು ದಾರದಲ್ಲಿ ಪೋಣಿಸುವ ಕಾರ್ಯ ಮಾಡುತ್ತಿರುವ ವಿವರಗಳನ್ನು ತಿಳಿಸಿ ಇವರೆಲ್ಲರನ್ನೂ ಪಟವಾ ಎಂದು ಕರೆಯುತ್ತಾರೆ. ಇವರೆಲ್ಲರಿಗೂ ವೀರಶೈವ ಧರ್ಮದ ಲಿಂಗದೀಕ್ಷಾ ಸಂಸ್ಕಾರ ನೀಡಿ ಧರ್ಮದ ಮೂಲವಾಹಿನಿಯಲ್ಲಿ ಮುಂದುವರೆಯುವಂತೆ ಮಾಡುವುದಾಗಿ ಸಂಕಲ್ಪ ಮಾಡಿರುವುದನ್ನು ತಿಳಿಸಿದರು.

ರಾಜಸ್ಥಾನದ ಜಂಗಮರ ಜೀವನವನ್ನು ಅಧ್ಯಯನ ಮಾಡಿರುವ ಜಗದ್ಗುರುಗಳ ಧೀಶಕ್ತಿಗೆ ಮಣಿಯಲೇಬೇಕು.

4–5–2009ರಲ್ಲಿವಂತೆ ಕರ್ನಾಟಕದೆಡೆಗೆ ಜಗದ್ಗುರುಗಳು ಆಗಮಿಸಿ ಈ ಬಾರಿ ಹಿರೋಳಿ ಗ್ರಾಮದಲ್ಲಿರುವ ಬಸವೇಶ್ವರ ವಿರಕ್ತಮಠಕ್ಕೆ ಭೇಟಿನೀಡಿ ಆ ಮಠದ ನೂತನ ಸ್ವಾಮಿಗಳಾದ ರವಿಕುಮಾರ ದೇವರ ನಿರಂಜನ ಪಟ್ಟಾಧಿಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ–ವೀರಶೈವ ಧರ್ಮದ ಗುರು–ವಿರಕ್ತ ಮಠಗಳು ವಿಭಿನ್ನವಾಗಿದ್ದೂ ಅವುಗಳ ಧೋರಣೆ, ಗುರಿ ಒಂದೇ ಆಗಿರುವ ಹಿನ್ನೆಲೆಯಲ್ಲಿ ಈ ಪರಂಪರೆಯನ್ನು ಸಮನ್ವಯತೆಯಿಂದ ಕಾಯ್ದುಕೊಳ್ಳಬೇಕೆಂದರು.

ಸಮನ್ವಯ ಸಾಧಿಸುವಲ್ಲಿ ಒಂದು ಸಣ್ಣ ಅವಕಾಶವನ್ನು ಜಗದ್ಗುರುಗಳು ನಿರ್ಲಕ್ಷಿಸುತ್ತಿರಲಿಲ್ಲ. ಉಪದೇಶ ಮಾತ್ರವಲ್ಲ ಅವರ ನಡವಳಿಕೆಯೂ ಸಮನ್ವಯವನ್ನು ಸಾರುವಂತಿದೆ.


ಜಗದ್ಗುರುಗಳ ಈ ನಡೆಯನ್ನು ಅನುಸರಿಸುವುದರಲ್ಲಿ ಅನೇಕ ಕಿರಿಯ ಮಠಾಧೀಶ್ವರರೂ ಕಾರ್ಯತತ್ಪರರಾಗಿರುವುದು ಜಗದ್ಗುರುಗಳ ಪ್ರಭಾವವೆಂದೇ ಹೇಳಬಹುದು.

28–5–2009 ಹರ್ಲಾಪುರದಲ್ಲಿ ಜಗದ್ಗುರು

ಹರ್ಲಾಪುರ ಧವಳೇಶ್ವರ ಮಠದ ಶ್ರೀ ಶಿವಯೋಗಿದೇವರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ವಚನ ಚಿಂತನ ಗೋಷ್ಠಿಯನ್ನು ಏರ್ಪಡಿಸಿ ಅದರ ಸಾನ್ನಿಧ್ಯ ವಹಿಸಲು ಜಗದ್ಗುರುಗಳನ್ನು ಆಹ್ವಾನಿಸಿದಾಗ ಸಂತೋಷದಿಂದ ಅದರಲ್ಲಿ ಪಾಲ್ಗೊಂಡಿದ್ದರು. ವಿರಕ್ತ ಸ್ವಾಮಿಗಳು ಮುಂದೆ ಬಂದು ತಮ್ಮನ್ನು ಆಹ್ವಾನಿಸಿದಾಗ ಸಮನ್ವಯ ಸಾಧಿಸುವ ನಿಟ್ಟಿನಲ್ಲಿರುವ ಜಗದ್ಗುರುಗಳು ಅಲ್ಲಿಗೆ ಆಗಮಿಸಿ ಆಶೀರ್ವಚನ ನೀಡಿದರು.

ಎಲ್ಲ ಧರ್ಮಗಳ ತಿರುಳು ಒಂದೇ

ಚಿಂತನಗೋಷ್ಠಿಯಲ್ಲಿ ಕಾಶೀ ಜಗದ್ಗುರುಗಳ ಅಭಿಮತ



ರಾಮದುರ್ಗ ತಾಲೂಕಿನ ಹರ್ಲಾಪುರ ಧವಳೇಶ್ವರ ಮಠದ ಶ್ರೀ ಶಿವಯೋಗಿದೇವರ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ನಡೆದ ವಚನ ಚಿಂತನಗೋಷ್ಠಿಯನ್ನು ಕಾಶೀ ಜಗದ್ಗುರುಗಳು ಉದ್ಘಾಟಿಸಿದರು.

ಧರ್ಮ ಬೇರೆ ಬೇರೆಯಾಗಿದ್ದರೂ ಅಲ್ಲಿರುವ ತತ್ವ ಸಿದ್ಧಾಂತಗಳು ಒಂದೇ. ಒಬ್ಬರನ್ನು ಅರಿತು ಜೀವಿಸಿದರೆ ಮಾತ್ರ ನೆಮ್ಮದಿ ಜೀವನ ಪ್ರಾಪ್ತಿಯಾಗುತ್ತದೆ. ವೀರಶೈವ ಧರ್ಮವು ಸಿದ್ಧಾಂತಗಳನ್ನು ಒಂದುಗೂಡಿಸುವ ಧರ್ಮವಾಗಿದೆ.

ವಿರಕ್ತ ಮಠಾಧೀಶರು ಪಂಚಪೀಠದವರನ್ನು ಕರೆತಂದು ಕಾರ್ಯಕ್ರಮ ನಡೆಸುತ್ತಿರುವುದು ಸಮನ್ವಯದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ನಾಡಿನಲ್ಲಿ ಕಾಣಬರುತ್ತಿದೆ ಎಂದು ಜಗದ್ಗುರುಗಳು ಸಂತಸ ವ್ಯಕ್ತಪಡಿಸಿದರು.

ಭಿನ್ನಾಭಿಪ್ರಾಯ ಮರೆತು ಒಂದಾಗಿ ಬಾಳಿ : ಕಾಶೀ ಶ್ರೀಗಳು



ದಾಂಡೇಲಿಯ ವೀರಭದ್ರೇಶ್ವರ ದೇವಸ್ಥಾನದಲ್ಲಿ ವೀರಶೈವ ಸಮಾಜ ಏರ್ಪಡಿಸಿದ್ದ ಹೃದಯ ಸಂಗಮ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಮಾತನಾಡಿದರು.

ಪ್ರೀತಿ ವಾತ್ಸಲ್ಯದಿಂದ ಜಾತಿಭೇದ ಒಳಪಂಗಡದ ಭಿನ್ನಾಭಿಪ್ರಾಯ ಮರೆತು ಸಮಾಜಬಾಂಧವರೆಲ್ಲ ಒಂದಾಗಿ ಬಾಳಬೇಕೆಂದು ಕಾಶೀಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಹೇಳಿದರು.

ಪಂಚಮಸಾಲಿ ಪೀಠ ರಾಜಕೀಯ ಪ್ರೇರಿತ

ಶುಕ್ರವಾರ 02 ಏಪ್ರಿಲ್ 2010

ಜಾತಿ ಆಧರಿತ ಮೀಸಲು ಜಾತ್ಯತೀತ ಭಾವನೆಗೆ ಹಿನ್ನಡೆ

2–4–2010

ಸರಕಾರವು ಜಾತಿ ಆಧಾರದ ಮೇಲೆ ಮೀಸಲಾತಿಯನ್ನು ಜಾರಿಗೆ ತಂದಿರುವ ಸಂದರ್ಭದಲ್ಲಿ ಶಿವಮೊಗ್ಗಾದಲ್ಲಿ ಜಗದ್ಗುರುಗಳು ಪತ್ರಿಕಾಗೋಷ್ಠಿ ನಡೆಸಿ–ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಈ ರೀತಿಯ ಮೀಸಲಾತಿ ಜಾತಿಯಿಂದ ಜಾತ್ಯತೀತ ಭಾವನೆಗೆ ಹಿನ್ನೆಡೆಯಾಗಿದೆ. ಏಕೆಂದರೆ ಸಮಾಜದಲ್ಲಿ ಆರ್ಥಿಕವಾಗಿ ಹಿಂದಿರುವ ಜನರಿಗೆ ಅಡ್ಡಬರುವುದು ಜಾತಿ ಅಲ್ಲ, ಬದಲಿಗೆ ಅವರ ಆರ್ಥಿಕ ಪರಿಸ್ಥಿತಿ. ಹೀಗಾಗಿ

ಯಾವುದೇ ಜಾತಿಯ ಆರ್ಥಿಕವಾಗಿ ಹಿಂದುಳಿದ ವ್ಯಕ್ತಿಗೆ ಸರಕಾರ ಆದ್ಯತೆ ನೀಡಬೇಕು. ಆದರೆ ಇವತ್ತಿಗೂ ಇದು ಸಾಧ್ಯವಾಗದ ಕಾರಣ ದೇಶದಲ್ಲಿ ಜಾತ್ಯತೀತ ವ್ಯವಸ್ಥೆ ಮುಂದುವರೆದಿದೆ ಎಂದು ಹೇಳಿದರು.

ವಿರಕ್ತಮಠ ಪಂಚಪೀಠಗಳಲ್ಲಿ ಸಮನ್ವಯ ಬೆಳೆಯಲಿ

ಇದೇ ಸಂದರ್ಭದಲ್ಲಿ ಹೊಸದಾಗಿ ಸ್ಥಾಪನೆಗೊಂಡಿರುವ ಪಂಚಮಸಾಲಿ ಪೀಠವು ರಾಜಕೀಯದಿಂದ ಪ್ರೇರೇಪಿತಗೊಂಡಿದೆ. ಪೀಠ ಸ್ಥಾಪಿತವಾಗಿದ್ದರೂ ಇವತ್ತಿಗೂ ಆ ಜನಾಂಗದ ಭಕ್ತರೆಲ್ಲರೂ ಪಂಚಪೀಠಕ್ಕೆ ನಡೆದುಕೊಳ್ಳುತ್ತಿದ್ದಾರೆ. ವೀರಶೈವ ಲಿಂಗಾಯತ ಬೇರೆ ಬೇರೆಯಲ್ಲ, ಎರಡೂ ಒಂದೇ. ವೀರಶೈವ ಶಾಸ್ತ್ರೀಯವಾಗಿದ್ದರೆ, ಲಿಂಗಾಯತ ಎಂಬುದು ರೂಢಿಯಲ್ಲಿ ಬಂದಿದೆ ಎಂದು ಜಗದ್ಗುರುಗಳು ಹೇಳಿದರು. ವೀರಶೈವ ಧರ್ಮ ಬೇರೆ ಆಗಿದ್ದರೂ, ಹಿಂದೂ ಸಂಪ್ರದಾಯ ಬಿಟ್ಟಿರಲು ಸಾಧ್ಯವಿಲ್ಲ ಎಂದೂ ಹೇಳಿದರು.

ಜಗದ್ಗುರುಗಳು ತಾವೇ ಸ್ವತಃ ಜ್ಞಾನಿಗಳಾಗಿ ವಿದ್ಯಾವಂತರಿಗೆ, ವಿದ್ಯಾರ್ಥಿಗಳಿಗೆ ಸದಾ ಪ್ರೋತ್ಸಾಹಿಸುತ್ತಾ ಬಂದಿರುವುದು ಜನಜನಿತ. ಜಾತಿ ಮತ ಧರ್ಮ ಲಿಂಗಭೇದವಿಲ್ಲದೆ ಜ್ಞಾನಿಗಳನ್ನು ಅನೇಕ ವರ್ಷಗಳಿಂದ ಸನ್ಮಾನಿಸುತ್ತಾ ಬಂದಿದ್ದಾರೆ. ಅದೇ ರೀತಿ ಪಿಎಚ್.ಡಿ. ಪದವಿ ಪಡೆದ ಸ್ವರೂಪಾನಂದ ಸ್ವಾಮೀಜಿಗಳಿಗೆ ಜಗದ್ಗುರುಗಳು ಸನ್ಮಾನ ನೀಡಿ ಆಶೀರ್ವದಿಸಿದರು.

ಪಂಡಿತ ವ್ರಜವಲ್ಲಭ ದ್ವಿವೇದಿ ಅವರ ಮಾರ್ಗದರ್ಶನದಲ್ಲಿ 'ಶೈವಾಗಮೀಯ ವಿದ್ಯಾಯೋಗ ಪಾದಯೋಃ ಸಾಂಖ್ಯ ಯೋಗ ದರ್ಶನಾಭ್ಯಾಂ ತುಲನಾತ್ಮಕ ಸಮೀಕ್ಷಣಂ' ವಿಷಯವಾಗಿ ಸಂಸ್ಕೃತ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿಯನ್ನು ಸ್ವರೂಪಾನಂದ ಸ್ವಾಮೀಜಿ ಪಡೆದಿದ್ದಾರೆ.


ಪಿಎಚ್.ಡಿ. ಪಡೆದ ಸ್ವರೂಪಾನಂದ ಸ್ವಾಮೀಜಿಗೆ ಸನ್ಮಾನ



12–7–10, ಡಾಕ್ಟರೇಟ್ ಪದವಿ ಪಡೆದಿರುವ ಇಂಡಿಯ ಓಂಕಾರಾಶ್ರಮದ ಸ್ವರೂಪಾನಂದ ಸ್ವಾಮೀಜಿ ಅವರನ್ನು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಇಳಕಲ್‌ನ ಅಮರೇಶ್ವರ ಜ್ಯೋತಿರ್ಭವನದಲ್ಲಿ ಅಧ್ಯಾತ್ಮ ಮಂಡಳಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸನ್ಮಾನಿಸಿದರು.

19–4–2011 ಅಖಿಲ ಭಾರತ ವೀರಶೈವ ಮಹಾಸಭೆ 22ನೇ ಮಹಾ ಅಧಿವೇಶನ

ಏಪ್ರಿಲ್ ತಿಂಗಳ 17ರಿಂದ ಮೂರು ದಿನಗಳ ಕಾಲ ನಂಜನಗೂಡು ತಾ॥ ಸುತ್ತೂರಿನಲ್ಲಿ ಆರಂಭಗೊಂಡ ಮಹಾ ಅಧಿವೇಶನದ ಸಮಾರೋಪ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಲು ಕಾಶೀ ಜಗದ್ಗುರುಗಳನ್ನು ಆಹ್ವಾನಿಸಿದ್ದರು.



ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಸುತ್ತೂರಿನಲ್ಲಿ ಮಂಗಳವಾರ ಮುಕ್ತಾಯವಾದ ಅಖಿಲ ಭಾರತ ವೀರಶೈವ ಮಹಾಸಭಾದ 22ನೇ ಮಹಾ ಅಧಿವೇಶನದ ಸಮಾರೋಪ ಸಮಾರಂಭದಲ್ಲಿ ಮಹಾಸಭಾದ ಅಧ್ಯಕ್ಷ ಭೀಮಣ್ಣ ಖಂಡ್ರೆ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಾರಣಾಸಿ ಕಾಶೀ ಮಹಾಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಆಂಧ್ರಪ್ರದೇಶ ಶ್ರೀಶೈಲ ಮಹಾಪೀಠದ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಹೊಸಪೇಟೆ ಕೊಟ್ಟೂರುಸ್ವಾಮಿ ಮಠದ ಸಂಗನಬಸವಸ್ವಾಮೀಜಿ ಭಾಗವಹಿಸಿದ್ದರು.

ಕಾಶೀ ಜಗದ್ಗುರುಗಳು ಯಶಸ್ವಿಯಾಗಿ 3 ದಿನಗಳ ಕಾಲ ಸುತ್ತೂರಿನಲ್ಲಿ ನಡೆದ ಮಹಾ ಅಧಿವೇಶನದಲ್ಲಿ ಸಾಮರಸ್ಯದ ಹೊನಲು ಹರಿಸಿದ ಸಮಾವೇಶವೆಂದು ಬಣ್ಣಿಸಿದರು. ಸುತ್ತೂರು ಸ್ವಾಮಿಗಳು ತಮ್ಮನ್ನು ಆಹ್ವಾನಿಸಿ ಗೌರವ ತೋರಿದ್ದಾರೆ ಎಂದು ಹೇಳಿ ವೀರಶೈವ ಧರ್ಮದಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿದವರೆಂದರೆ ಅದು ಸುತ್ತೂರು ಶ್ರೀಗಳು ಮಾತ್ರ. ಇಂತಹ ಕಾರ್ಯಗಳಿಗೆ ಹೆಚ್ಚಾಗಿ ಯುವಕರು ಪಾಲ್ಗೊಳ್ಳಬೇಕೆಂದು ತಿಳಿಸಿದರು.

ಪ್ರತಿಯೊಬ್ಬರಲ್ಲಿ ಜ್ಞಾನದ ಜ್ಯೋತಿ ಬೆಳಗಲಿ



20–12–2011 : ಜಮಖಂಡಿಯಲ್ಲಿ ವಿಶ್ವಶಾಂತಿಗಾಗಿ ನಡೆದ ಲಕ್ಷದೀಪೋತ್ಸವವನ್ನು ಕಾಶೀ ಜಗದ್ಗುರು, ಪೇಜಾವರ ಶ್ರೀಗಳು ಉದ್ಘಾಟಿಸಿದರು.

20–12–2011

ಜಮಖಂಡಿಯ ತಾಲ್ಲೂಕು ಕ್ರೀಡಾಂಗಣದಲ್ಲಿ ಅಖಿಲ ಕರ್ನಾಟಕ ಅಯ್ಯಪ್ಪಸ್ವಾಮಿ ಸೇವಾ ಸಮಿತಿಯವರು 18ನೇ ವರ್ಷದ ಮಹಾಪೂಜೆ ಹಾಗೂ ವಿಶ್ವಶಾಂತಿಗಾಗಿ ಲಕ್ಷದೀಪೋತ್ಸವ ಕಾರ್ಯಕ್ರಮಕ್ಕೆ ಕಾಶೀ ಜಗದ್ಗುರುಗಳನ್ನು ಉದ್ಘಾಟಿಸಲು ಆಹ್ವಾನ ನೀಡಿದ್ದರು. ಮುಖ್ಯ ಅತಿಥಿಗಳಾಗಿ ಸಾನ್ನಿಧ್ಯವನ್ನು ಉಡುಪಿ ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿಗಳು ವಹಿಸಿದ್ದರು. ಕಾಶೀ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಪ್ರತಿಯೊಬ್ಬರ ಹೃದಯಾಂತರಾಳದಲ್ಲಿ ಮನೆ ಮಾಡಿರುವ ಅಜ್ಞಾನದ ಕತ್ತಲೆ ದೂರಾಗಿ ಸುಜ್ಞಾನದ ಬೆಳಕು ಸೂಸಬೇಕಾದರೆ ಜ್ಞಾನದ ಜ್ಯೋತಿ ಬೆಳಗಬೇಕು. ಜ್ಞಾನಕ್ಕಿಂತ ಪವಿತ್ರವಾದದ್ದು ಬೇರೊಂದಿಲ್ಲ. ನಿಷ್ಠೆಯಿಂದ ವ್ರತಾಚರಣೆ ಮಾಡಿದರೆ ಆತ್ಮಶುದ್ಧಿ ಸಿದ್ಧಿಸಿಕೊಳ್ಳಲು ಸಾಧ್ಯವೆಂದರು. ಹಲವು ನಾಮಗಳಿದ್ದರೂ ದೇವರು ಒಬ್ಬನೇ ಎಂಬ ಸಮನ್ವಯಭಾವ ನಮ್ಮಲ್ಲಿ ತುಂಬಿರಬೇಕು. ಆಗಲೇ ಸಮಾಜದಲ್ಲಿ ಸದ್ಭಾವನೆ ತುಂಬುವುದು ಎಂದು ಹೇಳಿದರು. ಉಡುಪಿ ಶ್ರೀಗಳು ಮಾತನಾಡಿ ಹಿಂದೂ ಸಮಾಜ ಮತ್ತು ಧರ್ಮದ ಮೇಲೆ ಅನೇಕ ಧರ್ಮಗಳು ಒಂದಾಗಿ ದಬ್ಬಾಳಿಕೆಗೆ ಬಂದರೆ ನಾವು ಜಾಗೃತರಾಗಬೇಕು. ಲೌಕಿಕ ಭಿನ್ನತೆ ಮರೆತು ಏಕತೆ ನಮ್ಮಲ್ಲಿರಬೇಕು. ಹೃದಯದಲ್ಲಿ ಬೆಳಕು ಇದ್ದರೆ ಕೆಟ್ಟಬುದ್ಧಿ ಪ್ರವೇಶ ಮಾಡದು ಎಂದು ತಿಳಿಸಿದರು.

ಭಾವೈಕ್ಯತೆಯ ಮುಂಚೂಣಿಯಲ್ಲಿ ಕೋಹಳ್ಳಿ ಅಲ್ಲಮಪ್ರಭು ಮಂದಿರ

ಸಂಯುಕ್ತ ಕರ್ನಾಟಕ 16–11–12



ಕೋಹಳ್ಳಿ ಗ್ರಾಮದ ಅಲ್ಲಮಪ್ರಭು ದೇವಸ್ಥಾನದ ಮಹಾದ್ವಾರ ಹಾಗೂ ಪ್ರತಿಷ್ಠಾಪನೆಗೊಳ್ಳಲಿರುವ ರೇಣುಕಾಚಾರ್ಯರ ಮೂರ್ತಿ. (ಒಳಚಿತ್ರದಲ್ಲಿ ನಾರಾಯಣ ದೇವಋಷಿ).

16–11–2012

ಅಥಣಿ ತಾಲೂಕಿನ ಐಗಳಿ ಸಮೀಪದ ಕೋಹಳ್ಳಿ ಹೊರವಲಯದಲ್ಲಿರುವ ನಾರಾಯಣ ದೇವಋಷಿ ಅವರ ಜಮೀನಿನಲ್ಲಿ ಅಲ್ಲಮಪ್ರಭು ಮಂದಿರದ ವಿಶೇಷತೆಯೆಂದರೆ ಈ ಮಂದಿರದಲ್ಲಿ ಸರ್ವಧರ್ಮ ದೇವತೆಗಳ ಮೂರ್ತಿಗಳಿದ್ದು ಭಾವೈಕ್ಯತೆಗೆ ಹೆಸರಾಗಿದೆ. ಹಿಂದೂ ಮುಸ್ಲಿಮರೆಲ್ಲರೂ ಕೂಡಿ ಆಚರಿಸುವ ಮೊಹರಂ ಹಬ್ಬವನ್ನು ನೋಡಲು ಕರ್ನಾಟಕ, ಮಹಾರಾಷ್ಟ್ರ ಸೇರಿದಂತೆ ವಿವಿಧ ಕಡೆಗಳಿಂದ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನ ಅಲ್ಲಿಗೆ ಆಗಮಿಸುತ್ತಾರೆ. ಪ್ರತಿ ಅಮವಾಸ್ಯೆ, ಹುಣ್ಣಿಮೆಯಂದು ಭಕ್ತರು ಇಲ್ಲಿಗೆ ಬಂದು ತಮ್ಮ ತೊಂದರೆ ತಾಪತ್ರಯಗಳನ್ನು ನಿವೇದನೆ ಮಾಡಿಕೊಂಡು ಪರಿಹಾರ ಕಂಡುಕೊಂಡಿರುವುದಾಗಿ ಹೇಳುತ್ತಾರೆ.

ಈ ದೇವಾಲಯದಲ್ಲಿ ಅಲ್ಲಮಪ್ರಭು ದೇವರ ಜೊತೆಗೆ ಹನುಮ–ಗಣಪತಿ, ಹುಸೇನ–ಹಸನ, ಈಶ್ವರಲಿಂಗ, ಐದು ಪಂಚ ದೇವರುಗಳ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ.

ಇಂತಹ ಸರ್ವಧರ್ಮ ಸಮನ್ವಯದ ಈ ದೇವಾಲಯದಲ್ಲಿ ರೇಣುಕಾ ಚಾರ್ಯರ ಲಿಂಗೋದ್ಭವಮೂರ್ತಿ ಪ್ರತಿಷ್ಠಾಪನೆಗಾಗಿ ಕಾಶೀ ಜಗದ್ಗುರುಗಳನ್ನು ಮತ್ತು ಉಜ್ಜಯಿನಿ ಜಗದ್ಗುರುಗಳನ್ನು ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿಸಿ ಮೂರ್ತಿ ಪ್ರತಿಷ್ಠಾಪನೆ ಮಾಡಿದರು.



ಕೋಹಳ್ಳಿ ಗ್ರಾಮದ ನಾರಾಯಣ ಸೂರ್ಯವಂಶಿಯವರ ತೋಟದಲ್ಲಿ ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಅಡ್ಡಪಲ್ಲಕ್ಕಿ ಉತ್ಸವ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಸ್ವಾಮೀಜಿ ಮಾತನಾಡಿದರು. ಉಜ್ಜಯನಿ ಜಗದ್ಗುರುಗಳು ಉಪಸ್ಥಿತರಿದ್ದರು.

ಭಾರತೀಯ ಸಂಸ್ಕೃತಿಗೆ ವಿಶಿಷ್ಟ ಸ್ಥಾನವಿದೆ. ಭಾಷೆ, ಧರ್ಮ, ಪೂಜಿಸುವ ದೇವರ ವೇಷ ಭೂಷಣಗಳಲ್ಲಿ ಭಿನ್ನವಾಗಿದ್ದರೂ ನಾವೆಲ್ಲಾ ಒಂದೇ ಎನ್ನುವ ಭಾವೈಕ್ಯತೆಯೇ ಇದಕ್ಕೆ ಪ್ರಮುಖ ಕಾರಣ. ಯಾರೂ ಮತ್ತೊಂದು ಧರ್ಮವನ್ನು ಖಂಡಿಸಬಾರದು. ಎಲ್ಲ ಧರ್ಮದ ತಿರುಳು ಒಂದೇ. ಧರ್ಮವನ್ನು ಗೌರವಿಸಬೇಕು. ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ರೇಣುಕಾಚಾರ್ಯರು ಪ್ರತಿಪಾದಿಸಿರುವುದನ್ನು ತಮ್ಮ ಆಶೀರ್ವಚನದಲ್ಲಿ ಜಗದ್ಗುರುಗಳು ತಿಳಿಸಿದರು. ಬೇರೆ ಬೇರೆ ಹೆಸರಿನಿಂದ ಕರೆಯುವ ನದಿಗಳು ಹರಿದು ಸೇರುವುದು ಸಮುದ್ರವನ್ನು. ಅದೇ ರೀತಿ ನಾವೆಲ್ಲರೂ ಬೇರೆ ಬೇರೆ ದೇವರನ್ನು ಪೂಜಿಸಿದರೆ ಆ ಪೂಜೆ ಸಲ್ಲುವುದು ಪರಮಾತ್ಮನಿಗೆ. ಪರಸ್ಪರ ಸೌಹಾರ್ದದಿಂದ ಇರದೆ ಒಂದನೊಂದು ಖಂಡಿಸತೊಡಗಿದರೆ ಎರಡೂ ಧರ್ಮಗಳು ನಾಶವಾಗುತ್ತವೆ ಎಂದು ವಿವೇಕದ ಮಾತುಗಳನ್ನಾಡಿ ತಮ್ಮ ಮನಸ್ಸಿಗೆ ಸಂತೋಷವಾದದ್ದನ್ನು ವ್ಯಕ್ತಪಡಿಸಿದರು.

'ವೀರಶೈವರು ಒಳಪಂಗಡ ಮರೆತು ಒಂದಾಗಬೇಕು'

ವಿಜಯವಾಣಿ 20–4–2013

ಹಾವೇರಿಯಲ್ಲಿ ಜಗದ್ಗುರುಗಳಿಂದ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮವನ್ನು ಉಜ್ಜಯಿನಿ, ಶ್ರೀಶೈಲ, ಕಾಶೀ ಜಗದ್ಗುರುಗಳ ಸಾನ್ನಿಧ್ಯದಲ್ಲಿ– ಬಾಳೇಹೊಸೂರಿನ ದಿಂಗಾಲೇಶ್ವರ ಸ್ವಾಮೀಜಿ ಉದ್ಘಾಟಿಸಿ ತಮ್ಮ ಉದ್ಘಾಟನಾ ಭಾಷಣದಲ್ಲಿ ಗುರು ವಿರಕ್ತರು ಒಂದಾಗಿ ಹೋದರೆ ಇದೇ ವೀರಶೈವ ಸಮಾಜದ ಸುಧಾರಣೆ ಮಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.



20–4–2013 : ನಗರದ ಶಿವಲಿಂಗೇಶ್ವರ ಮಹಿಳಾ ವಿದ್ಯಾಲಯದಲ್ಲಿ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮವನ್ನು ಬಾಳೇಹೊಸೂರಿನ ದಿಂಗಾಲೇಶ್ವರ ಸ್ವಾಮೀಜಿ ಉದ್ಘಾಟಿಸಿದರು.

ವೀರಶೈವ ಧರ್ಮದಿಂದ ಸಮನ್ವಯ ಸಂದೇಶ

ವಿಜಯ ಕರ್ನಾಟಕ, 13–5–2013



ಧಾರವಾಡದಲ್ಲಿ ನಂದಿಕೋಲ ಬಸವೇಶ್ವರ ಮಂಗಲಭವನವನ್ನು ಕಾಶೀಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಸೋಮವಾರ ಉದ್ಘಾಟಿಸಿದರು. ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ, ರವೀಂದ್ರ ವಸ್ತ್ರದ, ಡಾ.ಎಸ್.ಎಂ. ವೃಷಭೇಂದ್ರಸ್ವಾಮಿ, ಶಿವು ಹಿರೇಮಠ ಮತ್ತಿತರರಿದ್ದರು.

ಕಾಶೀ ಜಗದ್ಗುರುಗಳು ತಮ್ಮ ಪ್ರವಚನದಲ್ಲಿ ಶಿವಶರಣರು ವೇದಾಗಮಗಳ ವಿರೋಧಿಗಳಲ್ಲ ಅವುಗಳನ್ನು ಗೌರವಿಸಿದ್ದಾರಲ್ಲದೆ ತಮ್ಮ ವಚನಗಳಲ್ಲಿ ಅವುಗಳನ್ನು ಪ್ರಮಾಣ ರೂಪದಲ್ಲಿ ಬಳಸಿರುವುದನ್ನು ತಿಳಿಸುತ್ತಾ ಇತ್ತೀಚೆಗೆ ವಿದ್ವಾಂಸರು ಸಂಪಾದಿಸಿದ ಮತ್ತು ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರ ಮುದ್ರಿಸಿರುವ ಸಮಗ್ರ ವಚನ ಸಂಪುಟ ತೆರೆದು ನೋಡಿದಾಗ ಬಸವಾದಿ ಶರಣರು ತಮ್ಮ ವಚನಗಳಲ್ಲಿ ವೇದಾಗಮಗಳಲ್ಲಿಯ ಮೂಲಸಂಸ್ಕೃತ ಮಂತ್ರಗಳನ್ನೇ ಯಥಾವತ್ತಾಗಿ ಪ್ರಮಾಣ ರೂಪದಲ್ಲಿ ಉದಾಹರಿಸಿರುವುದನ್ನು ಎಲ್ಲರೂ ಪ್ರತ್ಯಕ್ಷವಾಗಿ ನೋಡಬಹುದೆಂದು ಹೇಳಿ ಬಸವಣ್ಣನವರು ತಮ್ಮ ವಚನವೊಂದರಲ್ಲಿ ವೇದಾಗಮಗಳಿಗೆ ಗೌರವ ನೀಡಿ "ಅಲ್ಲಿ ಹೇಳಿದ ಹಾಗೆ ನುಡಿಯಬೇಕು, ನಡೆಯಬೇಕು ಅದಕ್ಕೆ ಮೀರಿ ನಡೆದು ಅಪಹಾಸ್ಯಕ್ಕೆ ಗುರಿಯಾಗ ಬಾರದು" ಎಂಬ ಎಚ್ಚರಿಕೆಯ ಮಾತನ್ನು ಸಹ ಅವರು ಹೇಳಿದ್ದಾರೆ ಎಂದು ಸಭೆಗೆ ಜಗದ್ಗುರುಗಳು ತಿಳಿಸಿದರು.

ಶಿವಶರಣರು ವೇದಾಗಮಗಳ ವಿರೋಧಿಗಳಲ್ಲ : ಕಾಶೀ ಶ್ರೀಗಳು

ಸಂಯುಕ್ತ ಕರ್ನಾಟಕ 23–4–2013

ಧಾರವಾಡದಲ್ಲಿ ನಂದಿಕೋಲ ಸಂದೇಶವನ್ನು ಮಂಗಲಭವನವನ್ನು ಕಾಶೀ ಜಗದ್ಗುರುಗಳು ಉದ್ಘಾಟಿಸಿ ಸಮನ್ವಯದ ಸಂದೇಶವನ್ನು ಇಲ್ಲಿ ಮತ್ತೊಮ್ಮೆ ಸಾರಿದರು. ಯಾರ ಬಗ್ಗೆಯೂ ವಿರೋಧ ಭಾವನೆ ವ್ಯಕ್ತಪಡಿಸದೆ ಭಾವೈಕ್ಯದ ನೆಲೆಯಲ್ಲಿ ವಿಶ್ವಕ್ಕೆ ಸಮನ್ವಯ ಸಂದೇಶ ಸಾರಿದ ಹಿರಿಮೆ ವೀರಶೈವ ಧರ್ಮಕ್ಕಿದೆ–ಎಂದು ಖಚಿತವಾಗಿ ತಿಳಿಸಿದರು. ಶಿವಶರಣರು ವೀರಶೈವ ಧರ್ಮ ಸಿದ್ಧಾಂತದ ಮೌಲಿಕ ವಿಚಾರಗಳನ್ನು ವಚನ ರೂಪದಲ್ಲಿ ಜನಸಾಮಾನ್ಯರಿಗೆ ತಿಳಿಸಿ ಧರ್ಮದ ಜನಪ್ರಿಯತೆ ಹೆಚ್ಚಿಸಿದ್ದಾರೆಂದು ಶರಣರನ್ನು ಗೌರವಭಾವದಿಂದ ಗುರುಗಳು ನೆನೆದರು. ಎಲ್ಲರೂ ಬಸವ ಜಯಂತಿಯ ಜೊತೆಯಲ್ಲೇ ಶ್ರೀ ಏಕೋರಾಮಾರಾಧ್ಯರ ಜಯಂತಿಯನ್ನು ನಡೆಸಲು ಮುಂದಾಗಬೇಕೆಂದು ಸಲಹೆ ನೀಡಿದರು.

ಮುರುಘಾಮಠದ ಶ್ರೀ ಮಲ್ಲಿಕಾರ್ಜುನಸ್ವಾಮಿಗಳು ಮಾತನಾಡಿ ಕಳಂಕರಹಿತವಾದ ವ್ಯಕ್ತಿತ್ವ ನಿರ್ಮಾಣವಾಗುವಲ್ಲಿ ಎಲ್ಲರ ಗಮನ ಕೇಂದ್ರೀಕೃತವಾಗಬೇಕು. ಪ್ರಾಮಾಣಿಕ ದೃಷ್ಟಿ, ಪಾರದರ್ಶಕ ಬದುಕು, ಪರೋಪಕಾರದ ಗುಣ ಮಾನವನಿಗೆ ಶ್ರೇಷ್ಠತೆಯನ್ನು ತರುತ್ತದೆ ಎಂದು ತಿಳಿಸಿದರು.

ಗುರು ವಿರಕ್ತರು ಒಂದೇ ವೇದಿಕೆಯಲ್ಲಿ ಸಮಾಜದ ಚಿಂತನೆ ನಡೆಸುವಂತಾಗಿರುವುದು ಜಗದ್ಗುರುಗಳ ಅನೇಕ ವರ್ಷಗಳ ಉಪದೇಶವೇ ಕಾರಣವಾಗಿದೆ.

ಬೃಹನ್ಮಠದ ಉತ್ತರಾಧಿಕಾರಿ ಪುರ ಪ್ರವೇಶ ಇಂದು

ಪ್ರಜಾವಾಣಿ ವಾರ್ತೆ 4–6–2013

ಕಾಶೀಪೀಠದ ಶಾಖಾಮಠ ಕೊಣ್ಣೂರು ಹಿರೇಮಠ (ಬೃಹನ್ಮಠ)ದ ಉತ್ತರಾಧಿಕಾರಿಯಾಗಿ ನೇಮಕಗೊಂಡಿರುವ ವಿರುಪಾಕ್ಷ ದೇವರ ಪುರಪ್ರವೇಶ ಸಮಾರಂಭದಲ್ಲಿ ಕಾಶೀ ಜಗದ್ಗುರುಗಳು ಧರ್ಮಸಭೆಯ ಸಾನ್ನಿಧ್ಯ ವಹಿಸಿದ್ದರು. ವಿಶೇಷವೆಂದರೆ ಗುರು ಮಠದ ಸಮಾರಂಭದಲ್ಲಿ ವಿರಕ್ತಮಠದ ಡಾ॥ ಶಿವಕುಮಾರ ಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು.

ಜಗದ್ಗುರುಗಳ ಸತತ ಪ್ರಯತ್ನದಿಂದಾಗಿ ವಿರಕ್ತ ಸ್ವಾಮಿಗಳು ಗುರುಗಳ ಸಮಾರಂಭಕ್ಕೆ ಆಗಮಿಸಿ–ಗುರುಗಳಿಗೆ ಗೌರವ ಸಲ್ಲಿಸುವುದು, ಗುರುಗಳು ಅವರನ್ನು ಸನ್ಮಾನಿಸುವುದು ನಡೆಯುತ್ತಲಿರುವುದು ಶುಭಸೂಚನೆ ಎಂದು ಭಾವಿಸಬೇಕು.

ಹೀಗೆ ಜಗದ್ಗುರುಗಳು ಕರ್ನಾಟಕದಲ್ಲಿನ ದೊಡ್ಡ ಪಟ್ಟಣ, ನಗರಗಳಿರಬಹುದು, ಗ್ರಾಮವಾಗಿರಬಹುದು–ಅಥವಾ ತೀರ ಸಣ್ಣ ಹಳ್ಳಿಯಾಗಿರಬಹುದು ಎಲ್ಲೆಡೆ ಸಂಚರಿಸುತ್ತಾ ಸಮನ್ವಯದ ಸಂದೇಶವನ್ನು ಸಾರುತ್ತ ನಡೆದಿದ್ದಾರೆ.

ಸಿದ್ಧಾಂತ ಶಿಖಾಮಣಿ ಭಗವದ್ಗೀತೆ–ಜಗದ್ಗುರುಗಳು

ಕಾಶೀ ಜಗದ್ಗುರುಗಳಿಗೆ ಮಾನವನ ಒಳಿತಿಗಾಗಿ ಸೃಷ್ಟಿಮಾಡಿರುವ ಗ್ರಂಥಗಳನ್ನು ಪವಿತ್ರ ಗ್ರಂಥಗಳೆಂದು ಪರಿಗಣಿಸಿದ್ದರು. ಜಗದ್ಗುರುಗಳು ಭಾರತೀಯ ದರ್ಶನಶಾಸ್ತ್ರಗಳನ್ನು ಬಹು ಆಸಕ್ತಿಯಿಂದ ತಮ್ಮ ಪಿಹೆಚ್.ಡಿ. ಹಾಗೂ ಡಿ.ಲಿಟ್ ಪದವಿಗಾಗಿ ಅಧ್ಯಯನ ಮಾಡಿದ್ದರು. ದರ್ಶನಗಳಾದ ದ್ವೈತ–ಅದ್ವೈತ–ವಿಶಿಷ್ಟಾದ್ವೈತ–ಭೇದದಿಂದ ವಿದ್ವಾಂಸರು ಪರಸ್ಪರ ಜಗಳವಾಡುತ್ತಿರುವುದು ಸರ್ವವಿಧಿತ. ಆದರೆ ಇದರಿಂದ ಶಾಂತಿ ಸಿಗದು. ಆದ್ದದರಿಂದಲೇ ವೀರಶೈವ ಆಚಾರ್ಯರು ಶಕ್ತಿವಿಶಿಷ್ಟಾದ್ವೈತ ಸಮನ್ವಯ ಸಿದ್ಧಾಂತವನ್ನು ಸ್ಥಾಪಿಸಿದರು. ಇಲ್ಲಿ ಯಾವುದೇ ಮತಸಿದ್ಧಾಂತಗಳನ್ನು ವಿರೋಧಿಸದೆ ಎಲ್ಲ ಶ್ರುತಿಗಳ ಸಮನ್ವಯ ಬೋಧಕವಾದುದೇ ವೀರಶೈವ ಎನಿಸಿದೆ. "ರಾಗ–ದ್ವೇಷಗಳಾದಿಯಾಗಿ ಸರ್ವ ದೋಷಗಳಿಲ್ಲದ, ಆತ್ಮತತ್ತ್ವ ವಿಚಾರವುಳ್ಳ, ಸಂಶಯ, ಅನಿಶ್ಚಯಗಳಿಲ್ಲದಿರುವುದೇ ವೀರಶೈವ" ಎಂದು ಆಗಮದಲ್ಲಿ ಹೇಳಲಾಗಿದೆ. ಇಂತಹ ಸಮನ್ವಯ ಸಿದ್ಧಾಂತವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿರುವ ಜಗದ್ಗುರುಗಳು ಸಮನ್ವಯದ ಹಾದಿಯಲ್ಲೇ ಸಮಾಜದಲ್ಲಿ ಶಾಂತಿ ಮೂಡಲು ಸಾಧ್ಯ ಎಂದು ನಿರ್ಧರಿಸಿ ಆ ದಿಶೆಯಲ್ಲೇ ನಡೆಯುತ್ತಿದ್ದಾರೆ. ಇಂತಹ ಮನೋಭಾವವಿರುವುದರಿಂದಲೇ ಎಲ್ಲಾ ಸಿದ್ಧಾಂತಗಳನ್ನು, ಗ್ರಂಥಗಳನ್ನು ಗೌರವಿಸುತ್ತಾರೆ.

ಜಗದ್ಗುರುಗಳಿಗೆ ಸಿದ್ಧಾಂತ ಶಿಖಾಮಣಿಯನ್ನು ಬಿಟ್ಟರೆ–ಭಗವದ್ಗೀತೆಯೆ ಬಹು ಪ್ರಿಯವಾದ ಗ್ರಂಥ. ಅನೇಕ ಊರುಗಳಲ್ಲಿ ಭಕ್ತರ ಕೋರಿಕೆ ಮೇರೆಗೆ ಭಗವದ್ಗೀತೆ ಕುರಿತು ಉಪನ್ಯಾಸಗಳನ್ನು ನೀಡಿರುವುದು ವಿಶೇಷವಾಗಿದೆ.

ಶ್ರೀ ಕಾಶೀ ಜಗದ್ಗುರುಗಳಿಂದ ಗದಗ್ ನಗರದಲ್ಲಿ ಪುನಃ ಆಷಾಢ ಮಾಸದಲ್ಲಿ 20 ದಿನಗಳ ಕಾಲ ಸಿದ್ಧಾಂತ ಶಿಖಾಮಣಿ ಪ್ರವಚನ ಏರ್ಪಡಿಸಿರುವ ಕಾರ್ಯ ತುಂಬಾ ಸ್ತುತ್ಯ, ಸ್ವಾಗತಾರ್ಹ. ಈ ಕಾರ್ಯಕ್ರಮದ ಸಂಘಟಕರೆಲ್ಲರೂ ಅಭಿನಂದನಾರ್ಹರೆ ಆಗಿದ್ದಾರೆ.

ಕಾಶೀ ಜಗದ್ಗುರುಗಳವರಿಂದ ಭಗವದ್ಗೀತೆಯೆಂಬ ಸಾಂಖ್ಯಯೋಗ ವೇದಗಳಲ್ಲಿ ಜ್ಞಾನಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ.

– ಕಾಶೀ ಶ್ರೀಗಳು

ನಾಗರಿಕ 18–7–1999

ಮಹಾಭಾರತದಲ್ಲಿ ಯಾವುದು ಇಲ್ಲವೋ ಅದು ಭಾರತದಲ್ಲಿಯೂ ಇಲ್ಲ.

– ಕಾಶೀ ಶ್ರೀಗಳು

ನಾಗರಿಕ 19–7–1999

ಕಾಶೀ ಜಗದ್ಗುರುಗಳ ಪ್ರವಚನ ಸ್ತುತ್ಯ

19–7–1999

ಈಗಿನ ಟಿ.ವಿ. ದಿನಮಾನಗಳಲ್ಲಿ ಮಾನವನಿಗೆ ಲೌಕಿಕ ಜಗತ್ತಿನ ಸರ್ಕಸ್ಸೇ ಮುಖ್ಯವಾಗಿ ಮಾನಸಿಕ ನೆಮ್ಮದಿ, ದೈಹಿಕ ನೆಮ್ಮದಿ ಕನಸಿನ ಮಾತಾಗುತ್ತಿದೆ. ಇದಕ್ಕೆ ಆತ್ಮ ಹಾಗೂ ಆಧ್ಯಾತ್ಮ ಜ್ಞಾನ ಪರಿಹಾರ ನೀಡಬಲ್ಲುದಾಗಿದೆ. ಕಾರಣ ಪೂಜ್ಯ ಕಾಶೀ ಜಗದ್ಗುರುಗಳ ಅಮೃತವಾಣಿ ಕಾರ್ಯಕ್ರಮ ತುಂಬಾ ಸಕಾಲಿಕ ಕೂಡಾ ಆಗಿದೆ.

ಸಿದ್ಧಾಂತ ಶಿಖಾಮಣಿಯ ಜೊತೆಗೆ ಪೂಜ್ಯ ಕಾಶೀ ಜಗದ್ಗುರುಗಳು ಈ ಸಲ ಬೆಳಿಗ್ಗೆ ಭಗವದ್ಗೀತೆಯ ಸಾಂಖ್ಯ ಯೋಗದ ಬಗ್ಗೆ ಪ್ರವಚನ ನೀಡಲಿರುವುದು ತುಂಬಾ ವಿಶೇಷವಾಗಿದೆ.

ಭಗವದ್ಗೀತೆ ಜಗತ್ತಿಗೆ ಭಾರತದೇಶ ನೀಡಿದ ಉತ್ಕೃಷ್ಟ ಗ್ರಂಥವೆಂದೇ ಪ್ರತೀತಿ ಇದೆ. ಆದರೆ ಭಾರತದಲ್ಲಿ ಭಗವದ್ಗೀತೆ ಓದಿದವರು, ಓದಿ ತಿಳಿದವರು, ತಿಳಿದು ಅದನ್ನು ಆಚರಣೆಗೆ ತಂದು ಜೀವನ ನಡೆಸುವವರು ತುಂಬಾ ವಿರಳವೆಂದೇ ಹೇಳಬಹುದು. ಪೂಜ್ಯ ಕಾಶೀ ಜಗದ್ಗುರುಗಳ ಜ್ಞಾನಶಿಖರಸ್ವರೂಪಿಗಳು. ಅವರ ದಿವ್ಯ ಸಂದೇಶ ಸರ್ವರೂ ಆಲಿಸುವಂತಾಗಲಿ.

– ಸಂಜು ಎಚ್.

ಗದಗ–ಬೆಟಗೇರಿ, 1998

3–11–1988

ಶರಣರ ಕಾಯಕ ಯೋಗ; ಗೀತೆಯ ಕರ್ಮಯೋಗ ಎರಡೂ ಒಂದೇ : ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು

ಸಂಯುಕ್ತ ಕರ್ನಾಟಕ 3–11–88

ದಾಂಡೇಲಿ ವಿಶ್ವ ಹಿಂದೂ ಪರಿಷತ್‌ನವರು ಭಗವದ್ಗೀತಾ ಪ್ರವಚನವನ್ನು 3–11–1988ರಲ್ಲಿ ಏರ್ಪಡಿಸಿ ಅದರಲ್ಲಿ ಕರ್ಮಯೋಗದ ಬಗ್ಗೆ ಪ್ರವಚನ ಮಾಡಬೇಕೆಂದೂ ಅಂದಿನ ಅಮರೇಶ್ವರ ಮಠಾಧ್ಯಕ್ಷರೂ, ಬನಾರಸ್ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ಗೌರವ ಅಧ್ಯಾಪಕರೂ ಆಗಿದ್ದ ಡಾ. ಚಂದ್ರಶೇಖರ ಶಿವಾಚಾರ್ಯರನ್ನು (ಇಂದಿನ ಕಾಶೀ ಜಗದ್ಗುರುಗಳು) ಆಹ್ವಾನಿಸಿದ್ದರು. ಅಲ್ಲಿ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು–ಪತಂಜಲಿ ಮಹರ್ಷಿಗಳು 'ಚಿತ್ತವೃತ್ತಿ ನಿರೋಧ : ಯೋಗ'–ಎಂದು ಹೇಳಿರುವುದನ್ನು ಹೇಳಿ ಏಕಾಗ್ರವಾದ ಮನಸ್ಸಿನಿಂದ ಮಾಡಿದ ಪ್ರತಿಯೊಂದು ಕರ್ಮವೂ ಕರ್ಮಯೋಗವಾಗುವುದು. ಶ್ರದ್ಧೆ, ಭಕ್ತಿ, ಪ್ರೀತಿಯಿಂದ ಕರ್ಮ ಮಾಡುವುದೊಂದೇ ನಮಗಿರುವ ಅಧಿಕಾರವೇ ಹೊರತು ಕರ್ಮದ ಫಲವನ್ನು ಅಪೇಕ್ಷಿಸುವುದು ನಮ್ಮಧೀನವಲ್ಲ ಎಂದು ಹೇಳಿ ಗೀತೆಯ ಕರ್ಮಯೋಗ ಅದೊಂದು ಜೀವನಯೋಗವಿದ್ದಂತೆ. ಕೇವಲ ತನ್ನ ಹಾಗೂ ತನ್ನವರ ಹೊಟ್ಟೆಗಾಗಿ ದುಡಿಯುವುದು ಕಾಯಕವಾಗುವುದಿಲ್ಲ. ತನ್ನ ದುಡಿಮೆಯಿಂದ ಬಂದದ್ದರಲ್ಲಿ ಮೊದಲು ಸತ್ಪಾತ್ರರಿಗೆ ನೀಡಿ ಉಳಿದದ್ದನ್ನು ಪ್ರಸಾದ ಬುದ್ಧಿಯಿಂದ ಸ್ವೀಕರಿಸಿದಾಗ ಅದು ಕಾಯಕಯೋಗ, ಕರ್ಮಯೋಗವಾಗುತ್ತದೆ. 'ಕಾಯಕವೇ ಕೈಲಾಸ' 'ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ ತನು ಮನ ಧನವಲಸಂದಂತೆ ಮಾಡಯ್ಯ' ಎಂದು ಹಲವಾರು ವೀರಶೈವರ ಶರಣರ ವಚನಗಳನ್ನು ಉದಾಹರಿಸಿ ಕಾಯಕದ ವಿನಿಯೋಗದ ಬಗ್ಗೆ ತಿಳಿಸಿದರು. ಕರ್ಮಭೂಮಿಯಲ್ಲಿ ಜನಿಸಿದ ಪ್ರತಿಯೊಬ್ಬನೂ ಕರ್ಮಯೋಗಿ ಅಥವಾ ಕಾಯಕ ಯೋಗಿಯಾದರೆ ಈ ಭೂಮಂಡಲವೇ ಮುಕ್ತಿಯ ಧಾಮವಾಗಬಲ್ಲುದು ಎಂದೂ ಹಿತೋಪದೇಶ ನೀಡಿದರು.

ಒಮ್ಮೆ 1999ರ ಆಷಾಢ ಮಾಸದಲ್ಲಿ ಗದಗ್‌ನಲ್ಲಿ 20 ದಿನಗಳ ಕಾಲ ಬೆಳಗಿನ ಹೊತ್ತು ಭಗವದ್ಗೀತೆ ಕುರಿತು ಉಪನ್ಯಾಸ ಆನಂತರ ಸಾಮೂಹಿಕ ಇಷ್ಟಲಿಂಗ ಪೂಜೆ. ಸಂಜೆ ಸಿದ್ಧಾಂತ ಶಿಖಾಮಣಿಯ ಆಶೀರ್ವಚನ ಏರ್ಪಡಿಸಿದ್ದರು.

ಹೇಗೆ ಸರ್ವ ಶಿವಾಗಮಗಳ ಸಾರವೇ ಸಿದ್ಧಾಂತ ಶಿಖಾಮಣಿಯಾಗಿದೆಯೋ ಹಾಗೆಯೇ ಸರ್ವ ಉಪನಿಷತ್ತುಗಳ ಸಾರ ಭಗವದ್ಗೀತೆ ಎಂದು ಜಗದ್ಗುರುಗಳು ತಿಳಿಸುತ್ತಾ ಸಾಂಖ್ಯಯೋಗ ಕುರಿತು ಉಪನ್ಯಾಸ ಕೊಟ್ಟಿದ್ದನ್ನು ಅಲ್ಲಿನ ಭಕ್ತರು ಮರೆಯಲಾರರು. ಜ್ಞಾನಕ್ಕೆ ಸಮಾನ ಯಾವುದೂ ಇಲ್ಲ. ಆದ್ದರಿಂದಲೇ ವೇದಗಳಲ್ಲಿ ಜ್ಞಾನಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ ಎಂದು ಹೇಳುತ್ತಾ ಜ್ಞಾನದಿಂದ ಸರ್ವ ಕರ್ಮಗಳೂ ಭಸ್ಮವಾಗಿರುವುದರಿಂದ ಶಾಸ್ತ್ರದಲ್ಲಿ ಜ್ಞಾನಕ್ಕೆ ಅಗ್ನಿರೂಪ ಕೊಡಲಾಗಿದೆ ಎಂದು ಹೇಳಿದರು. ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ಕ್ಷತ್ರಿಯಧರ್ಮದ ಬೋಧನೆ ಮಾಡಿ ದೇಶರಕ್ಷಣೆ ಮಾಡುವ ಬಗ್ಗೆ ಬೋಧಿಸಿ ಯುದ್ಧದಿಂದ ಪಲಾಯನ ಮಾಡಿದರೆ ಕೀರ್ತಿಯಾಗಲಿ, ಸ್ವರ್ಗವಾಗಲಿ, ಅನುಭವ ಹಾಗೂ ಮುಕ್ತಿ ಯಾವುವೂ ಸಿಗುವುದಿಲ್ಲ ಎಂದು ಹೇಳಿ ಅರ್ಜುನನನ್ನು ಮಾನಸಿಕವಾಗಿ ಯುದ್ಧ ಸನ್ನದ್ಧನಾಗುವಂತೆ ಮಾಡಿದ್ದನ್ನು ವಿವರಿಸಿದ್ದಾರೆ. ದೇವರು ಮಾನವನಿಗೆ 100 ವರ್ಷ ಸುದೀರ್ಘ, ಆಯುಷ್ಯವನ್ನು ಕೊಟ್ಟಿದ್ದಾನೆ. ಅದನ್ನು ಅಂತಃಕರಣ ಲೀಲೆಗಾಗಿ ಬಳಸಬೇಕು ಎಂದು ಶ್ರೀ ಕೃಷ್ಣನು ಅರ್ಜುನನಿಗೆ ತಿಳಿಸಿದ್ದನ್ನು ಹೇಳುತ್ತಾ ಜಗದ್ಗುರುಗಳು ಮನುಷ್ಯನಿಗೆ 5 ಪಂಚೇಂದ್ರಿಯಗಳು, 5 ಜ್ಞಾನೇಂದ್ರಿಯಗಳು

ಹಾಗೂ ಒಂದು ಮನಸ್ಸು ಹೀಗೆ ಒಟ್ಟು ಹನ್ನೊಂದು ಇಂದ್ರಿಯಗಳಿರುವುದರಿಂದ ಅದರ ವ್ಯವಹಾರವನ್ನು ಅರಿತುಕೊಳ್ಳಲು ಮೊದಲು ಮನಸ್ಸನ್ನು ಸ್ಥಿರಗೊಳಿಸಬೇಕು. ಮನಸ್ಸು ಸ್ಥಿರಗೊಳ್ಳಬೇಕಾದರೆ ಆತ್ಮದ ಅರಿವು ಅವಶ್ಯ ಎಂದು ಉಪದೇಶ ನೀಡಿದರು.

ಆತ್ಮವನ್ನರಿಯಲು ಮನಸ್ಸನ್ನು ಸಿದ್ಧಗೊಳಿಸಬೇಕು–ಶ್ರೀ ಕಾಶೀ ಜಗದ್ಗುರುಗಳು
ನಾಗರಿಕ 24–7–1999

19–6–1992 : ಬಾಗಲಕೋಟೆಯ ಬಳಿಯ ಆಲಮಟ್ಟಿ ಡ್ಯಾಮ್ ಸೈಟಿನ ರಾಮಲಿಂಗೇಶ್ವರ ಮಂದಿರದ ಪರಿಸರದಲ್ಲಿ ಬೃಹತ್ ಧಾರ್ಮಿಕ ಮಹಾಸಭೆಯನ್ನು ಕಾಶೀ ಜಗದ್ಗುರುಗಳ ಭಗವದ್ಗೀತೆ ಮತ್ತು ಸಿದ್ಧಾಂತ ಶಿಖಾಮಣಿ ಸಮನ್ವಯ ಸಿದ್ಧಾಂತದ ಬಗ್ಗೆ ಉಪನ್ಯಾಸವನ್ನೇರ್ಪಡಿಸಿದ್ದರು. ಅಲ್ಲಿ ಜಗದ್ಗುರುಗಳು–ತೀರ್ಥಸ್ನಾನ ಹಾಗೂ ಕ್ಷೇತ್ರದರ್ಶನಕ್ಕಾಗಿ ದೇಶ ಸುತ್ತುವುದನ್ನು ಬಿಟ್ಟು ತಮ್ಮ ಕಾಯವನ್ನೇ ಕ್ಷೇತ್ರವಾಗಿಸಿಕೊಳ್ಳಬೇಕೆಂದು ಹೇಳಿ, ಭಾವುಕನಾದ ಭಕ್ತನು ಭಗವಂತನ ದರ್ಶನಕ್ಕಾಗಿ ಅನೇಕ ಕಡೆ ಸಂಚರಿಸುತ್ತಾನೆಯೇ ಹೊರತು ತನ್ನಲ್ಲಿಯೇ ದೇವರಿದ್ದಾನೆ, ತನ್ನ ಶರೀರವೇ ದೇವಾಲಯವನ್ನಾಗಿಸಿಕೊಳ್ಳಬಹುದೆಂಬ ಜ್ಞಾನವೇ ಇಲ್ಲವಾಗಿ ತನ್ನ ದೇಹವನ್ನೇ ಕ್ಷೇತ್ರವನ್ನಾಗಿಸಿಕೊಳ್ಳಲು ಅಸಾಧ್ಯವಾಗುತ್ತದೆ ಎಂದು ಉಪದೇಶ ನೀಡಿದರು.

ನಗರದಲ್ಲಿ ಕಾಶೀ ಜಗದ್ಗುರುಗಳಿಂದ ಭಗವದ್ಗೀತೆ–ಸಿದ್ಧಾಂತ ಶಿಖಾಮಣಿ ಪ್ರವಚನಾರಂಭ
ನವೋದಯ 16–7–1999

ಅಂದು ಗುರುಪೂರ್ಣಿಮೆ. ಇದರ ಅಂಗವಾಗಿ ಗದಗಿನ ಭಕ್ತಾದಿಗಳ ಅಪೇಕ್ಷೆ ಮೇರೆಗೆ ಭಗವದ್ಗೀತೆಯ ಸಾಂಖ್ಯಯೋಗ, ಸಿದ್ಧಾಂತ ಶಿಖಾಮಣಿಯ ಭಕ್ತಸ್ಥಲವನ್ನು ಕುರಿತು ಜಗದ್ಗುರುಗಳು ಸುಮಾರು 15 ದಿನಗಳ ಕಾಲ ಉಪನ್ಯಾಸ ನೀಡಿದ್ದರು.

ಬೆಳಗಿನ 6.30ರಿಂದ 7.30ರವರೆಗೆ ಭಗವದ್ಗೀತೆಯ ಸಾಂಖ್ಯಯೋಗ ಪ್ರವಚನದ ಏರ್ಪಾಡಾಗಿತ್ತು. ಮೊದಲದಿನ ಬೆಳಗ್ಗೆ ಕಾರ್ಯಕ್ರಮವನ್ನು ಶ್ರೀ ನಾರಾಯಣಾಚಾರ್ಯ ಹುಲಗಿ ಅವರು ಭಗವದ್ಗೀತೆ ಒಂದು ಶ್ರೇಷ್ಠ ಗ್ರಂಥ; ಭಕ್ತರಿಗೆ ಭಗವಂತನ ಚಿಂತನೆಗೆ ಸಂಜೀವಿನಿಯಾಗಿದೆ, ಜೀವನ ಮುಕ್ತಿಗೆ ಉಪದೇಶನೀಡುವ ಗ್ರಂಥವಾಗಿದೆ ಎಂದರು. ಸಂಜೆ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನವನ್ನು ಉಜ್ಜಯಿನಿ ಜಗದ್ಗುರುಗಳು ಉದ್ಘಾಟಿಸಿದರು.

ಸಂಸಾರ ಬಂಧಿತ ದುಃಖಹರಣಕ್ಕೆ ಆತ್ಮಜ್ಞಾನ ಅವಶ್ಯಕ
ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯರು
16–7–1999, ನವೋದಯ



ಜೀವನ ಮರಣದ ವಿಷಚಕ್ರದಿಂದ ಬಿಡುಗಡೆ ಹೊಂದಲು ಇರುವ ದಾರಿಯೇ ಮೋಕ್ಷಸಾಧನವಾಗಿದೆ. ಅದರ ಸಾಧನೆಯಲ್ಲಿ ಭಕ್ತಿ, ಜ್ಞಾನಗಳು ಮಹತ್ವದ್ದಾಗಿವೆ. ಭಕ್ತಿಯೆಂಬುದು ಸರಳವಲ್ಲ–ಎಂದು ಬಸವಣ್ಣನವರ ಹಲವು ವಚನಗಳನ್ನು ಉಲ್ಲೇಖಿಸಿ, ಭಕ್ತಿಯೆಂಬುದು ಭವದ ಮುಕ್ತಿಗೆ ಸೋಪಾನವಾಗಿದೆ. ಭಕ್ತನಾಗಲು ಸಾಧನೆಯ ಮಾರ್ಗ ಅನುಸರಿಸಬೇಕೆಂದು ಹೇಳಿ, ಅಂದು ನೆರೆದಿದ್ದ ಸಹಸ್ರಾರು ಭಕ್ತಾದಿಗಳಿಗೆ ಭಗವದ್ಗೀತೆ, ಸಿದ್ಧಾಂತ ಶಿಖಾಮಣಿಯಂತಹ ಅಭೂತಪೂರ್ವ ಗ್ರಂಥಗಳಿಂದ ಜ್ಞಾನದಾಸೋಹ ನಡೆಸಿದರು.

2–7–2000 : ಗದಗ್‌ನಲ್ಲಿ ಈ ವರ್ಷವೂ ಭಗವದ್ಗೀತೆ ಹಾಗೂ ಸಿದ್ಧಾಂತ ಶಿಖಾಮಣಿಯ ಸಮನ್ವಯಾತ್ಮಕ ವೇದಿಕೆಯಿಂದ ಕಾಶಿ ಜಗದ್ಗುರುಗಳು ಉಪದೇಶಾಮೃತವನ್ನು ಕೇಳಲು ಸಹಸ್ರಾರು ಶ್ರೋತೃಗಳು ಕಾದಿದ್ದರು.

ಈ ಬಾರಿ ಭಗವದ್ಗೀತೆಯ ಸಾಂಖ್ಯಯೋಗದ ಶ್ಲೋಕಗಳನ್ನು ಕುರಿತು ಪೂರ್ವಭಾವಿಯಾಗಿ ಸೂಡಿ ಜುಕ್ತಿ ಹಿರೇಮಠದ ಶ್ರೀ ಷ||ಬ್ರ|| ಕೊಟ್ಟೂರ ಬಸವೇಶ್ವರ ಶಿವಾಚಾರ್ಯರು ಒಳ್ಳೆಯ ವಿವರಣೆ ಕೊಡುತ್ತಿದ್ದರು. ನಂತರ ಕಾಶೀ ಜಗದ್ಗುರುಗಳ ವಿಶ್ಲೇಷಣೆಯ ಶೈಲಿ, ವಿವರಣೆಯ ಕೌಶಲ್ಯ ಹಾಗೂ ಸಮಯೋಚಿತವಾಗಿ ಕೊಡುತ್ತಿದ್ದ ಉದಾಹರಣೆಗಳಿಂದ ಜನರ ಮನ ಬುದ್ಧಿ ಹೃದಯಗಳಿಗೆ ಪರಿಣಾಮಕಾರಿಯಾಗಿದ್ದುದನ್ನು ಇಂದೂ ಅಲ್ಲಿನ ಭಕ್ತರು ಮರೆತಿಲ್ಲ.

ಅಲ್ಲಿನ ಭಕ್ತರು ಜಗದ್ಗುರುಗಳಿಗೆ ಮುಂದಿನ ವರ್ಷ ಕರ್ಮಯೋಗ ಕುರಿತು ಬೋಧನೆ ಮಾಡಿದರೆ ಪ್ರಸ್ತುತ ಸಾಮಾಜಿಕ, ರಾಜಕೀಯ, ಆರ್ಥಿಕ ಸ್ಥಿತಿಗೆ ಒಳ್ಳೆ ಲೋಕಶಿಕ್ಷಣದ ಪಾಠವಾದಂತೆ ಆಗುವುದು ಎಂಬ ಬೇಡಿಕೆಯನ್ನಿಟ್ಟರು.

ಎಂದಿನಂತೆ ಆಷಾಢ ಮಾಸದಲ್ಲಿ ಕಾಶೀ ಜಗದ್ಗುರುಗಳ ಆಧ್ಯಾತ್ಮ ಚಿಂತನ ಕಾರ್ಯಕ್ರಮವನ್ನು ಗದಗ್‌ನ ಆಧ್ಯಾತ್ಮ ವೇದಿಕೆ ಸದಸ್ಯರು ಹಮ್ಮಿಕೊಂಡಿದ್ದರು. ಈ ಬಾರಿ ಭಗವದ್ಗೀತೆ ಮತ್ತು ಸಿದ್ಧಾಂತ ಶಿಖಾಮಣಿ ಕಾರ್ಯಕ್ರಮವನ್ನು 1-7-2003ರಂದು ಉದ್ಘಾಟಿಸಲು ಹುಬ್ಬಳ್ಳಿ ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳನ್ನು ಆಹ್ವಾನಿಸಿ ಗುರು-ವಿರಕ್ತರ ಸಮನ್ವಯದ ವೇದಿಕೆಯನ್ನಾಗಿ ಮಾಡಿದ್ದು, ಗದಗಿನ ಜನರ ಮನದಲ್ಲಿ ವೀರಶೈವರೆಲ್ಲಾ ಒಂದಾಗಬೇಕೆಂಬ ಹಂಬಲ ಎದ್ದು ಕಾಣುವಂಥದ್ದು.

'ಶಾಂತಿ ನೆಮ್ಮದಿಗೆ ಆಧ್ಯಾತ್ಮ ಚಿಂತನೆ ಅಗತ್ಯ'



ಕಾಶಿ ಜಗದ್ಗುರುಗಳ ಆಧ್ಯಾತ್ಮ ವೇದಿಕೆ ಗದಗನಲ್ಲಿ ಹಮ್ಮಿಕೊಂಡ ಭಗವದ್ಗೀತೆ ಹಾಗೂ ಸಿದ್ಧಾಂತ ಶಿಖಾಮಣಿ ಪ್ರವಚನ ಕಾರ್ಯಕ್ರಮವನ್ನು ಹುಬ್ಬಳ್ಳಿ ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳು ಉದ್ಘಾಟಿಸಿದರು.

ಸಮನ್ವಯದ ವೇದಿಕೆ ಎಂದಾಕ್ಷಣ ಅದರ ಸಾನ್ನಿಧ್ಯವಹಿಸಲು ಸದಾ ಸಿದ್ಧರಿರುತ್ತಿದ್ದರು. ಇಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ವೇದಿಕೆಗಳ ಮೂಲಕ ನೆರೆದಿರುವ ಸಹಸ್ರಾರು ಭಕ್ತಾದಿಗಳಿಗೆ ಸಮನ್ವಯದ ಸಂದೇಶ ತಲುಪುವಂಥದ್ದು ಎಂದು ಅವರು ಚೆನ್ನಾಗಿ ಬಲ್ಲರು. ಜಗದ್ಗುರುಗಳು ಹೋದೆಡೆಯಲ್ಲೆಲ್ಲಾ ಯಾವುದೇ ವಾದ ವಿವಾದಗಳು ಬಗೆಹರಿಯಬೇಕಿದ್ದರೆ ಪರಸ್ಪರ ಎದುರಾಗಿ ಕುಳಿತು ಚರ್ಚಿಸಬೇಕೇ ಹೊರತು ಸಮಾಜದ ಶಾಂತಿ ಕೆಡುವಂತಹ ಹೇಳಿಕೆಗಳನ್ನು ಯಾರೂ ನೀಡಬಾರದು ಎಂದು ಜನತೆಗೆ ಹೇಳುತ್ತಿದ್ದರು. ಇಂತಹ ಚರ್ಚೆಗಳಿಂದ ಸಮಾಜದಲ್ಲಿ ಸಾಮರಸ್ಯ ಮೂಡುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಹೇಳುತ್ತಿದ್ದರು.

ವೀರಶೈವ ಧರ್ಮ ಸಿದ್ಧಾಂತವು ಯೋಗದ ಆಧಾರದ ಮೇಲೆ ರಚನೆಯಾಗಿದೆ. ಜಾತಿಮುಕ್ತ ರಚನೆಯಾಗಿರುವ ಈ ಸಿದ್ಧಾಂತವು ವೀರಶೈವ ಧರ್ಮದ ಆಧಾರಸ್ತಂಭರಾಗಿದೆ ಎಂದು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಗದಗ, ಜು.1 ಈಚಿನ ದಿನಗಳಲ್ಲಿ ಒಡೆದುಹೋಗುತ್ತಿರುವ ಸಮಾಜವನ್ನು ಒಗ್ಗೂಡಿಸಲು ಗುರು-ವಿರಕ್ತರ ಸಮಾಗಮ ಅಗತ್ಯ ಎಂದು ಕಾಶೀಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಅಭಿಪ್ರಾಯಪಟ್ಟರು.

ಧಾರ್ಮಿಕ ಚಿಂತನೆಗೆ ಮೊದಲು ವ್ಯಕ್ತಿ ತನ್ನನ್ನು ತಾನು ತಿಳಿದುಕೊಳ್ಳುವ ಅವಶ್ಯಕತೆ ಇದೆ. ಈ ದಿಶೆಯಲ್ಲಿ ಏಕಾಗ್ರತೆ ಸಾಧನೆ ಮೂಲಕ ಸಂಸ್ಕಾರ ಪಡೆಯಬಹುದು ಎಂದ ಅವರು ಸಾತ್ವಿಕ ಸಜ್ಜನರಿಂದ ಆಧ್ಯಾತ್ಮಿಕ ಸಾಧನೆ ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟನೆ ಮಾಡಿದ ಹುಬ್ಬಳ್ಳಿಯ ಮೂರುಸಾವಿರ ಮಠದ ಸ್ವಾಮೀಜಿಗಳು ಜೀವನದಲ್ಲಿ ಶಾಂತಿ, ನೆಮ್ಮದಿ, ಸಹೃದಯತೆ, ಸೌಹಾರ್ದ ಭಾವನೆ ಬೆಳೆಸಿಕೊಳ್ಳಲು ಆಧ್ಯಾತ್ಮ ಚಿಂತನೆ ತೀರಾ ಅಗತ್ಯ. ಅದಕ್ಕೂ ಮೊದಲು ವ್ಯಕ್ತಿ ತನ್ನನ್ನು ತಾನು ತಿಳಿದುಕೊಳ್ಳುವ ಅವಶ್ಯಕತೆ ಇದೆ ಎಂದು ತಿಳಿಸಿದರು.

2003 ಸಂಕ್ರಮಣದ ವರ್ಷ-ಒಂದು ಅಭೂತಪೂರ್ವ ಸಂದರ್ಭ

ಗದಗ್‌ನ ಭಕ್ತಾದಿಗಳ ಕೋರಿಕೆ ಮೇರೆಗೆ-ಗದಗ್ ಬೆಟಗೇರಿ ಕಾಶೀ ಜಗದ್ಗುರುಗಳ ಆಧ್ಯಾತ್ಮಿಕ ವೇದಿಕೆ ಸಮಿತಿಯವರು ಭಗವದ್ಗೀತೆಯ ಹಾಗೂ ಸಿದ್ಧಾಂತ ಶಿಖಾಮಣಿಯ ಪ್ರವಚನವನ್ನು 2003ರ ಆಷಾಢಮಾಸದಲ್ಲಿ ಏರ್ಪಡಿಸಿದ್ದರು. 9ನೆಯ ದಿನದಂದು ಉಡುಪಿಯ ಪೇಜಾವರ ಮಠದ ವಿಶ್ವೇಶತೀರ್ಥ ಭಗವತ್ಪಾದರನ್ನು ಆಹ್ವಾನಿಸಿದ್ದರು. ಅವರು ಭಗವದ್ಗೀತೆಯಲ್ಲಿ ಹೇಳಿರುವ ನಿಷ್ಕಾಮಕರ್ಮ ಯೋಗವನ್ನು ಪ್ರತಿಯೊಬ್ಬರೂ ತಮ್ಮ ವೃತ್ತಿಗಳಲ್ಲಿ ಮಾಡಬೇಕೆಂದು ಹೇಳುತ್ತಾ 'ಭಕ್ತಿ ಮತ್ತು ಕರ್ತವ್ಯದ ಸಾರಾಂಶವನ್ನು ಸಮಸ್ತ ಮಾನವರ ಕುಲಕ್ಕೆ ಸಾರಿದ ಭಗವದ್ಗೀತೆ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಗಳನ್ನು ಎಲ್ಲರೂ ಪಾಲಿಸಿದರೆ ವೈಯಕ್ತಿಕ ಜೀವನ ಸುಂದರವಾಗಿ ನಿರ್ಮಿತವಾಗುವುದು.....' ಎಂದು ಹೇಳಿದರು.

ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ತಮ್ಮ ಆಶೀರ್ವಚನದಲ್ಲಿ ವೀರಶೈವ ಮಠಾಧೀಶರು ಹಾಗೂ ವೈಷ್ಣವ ಸಮಾಜದ ಮಠಾಧೀಶರು ಒಂದೇ ವೇದಿಕೆಯಲ್ಲಿ ಕುಳಿತು ಆಧ್ಯಾತ್ಮಿಕ ಪ್ರವಚನ ನೀಡಿರುವುದು ಒಂದು ಅಭೂತಪೂರ್ವ ಸಂದರ್ಭವಾಗಿದೆ. 16-3-03ರಲ್ಲಿ ಕೂಡಲಸಂಗಮದಲ್ಲಿ ಜರುಗಿದ ಗುರು-ವಿರಕ್ತ ಮಠಾಧೀಶರ ಸಮಾವೇಶವನ್ನು ನೆನಪಿಸಿಕೊಂಡ ಜಗದ್ಗುರುಗಳು 'ಇಂದು ಒಂದು ಸಂಕ್ರಮಣದ ವರ್ಷ' ಎಂದು ತಿಳಿಸಿದರು. ಸದಾಕಾಲ ಸಮಾಜದ ಶಾಂತಿಯನ್ನು ಬಯಸುವ ಜಗದ್ಗುರುಗಳ ವೀರಶೈವ ಸಿದ್ಧಾಂತ ಹಾಗೂ ಮಾಧ್ವ ಸಿದ್ಧಾಂತಗಳು ಕೂಡಿಕೊಂಡಲ್ಲಿ ಸಮಾಜದಲ್ಲಿರುವ ಭೇದವನ್ನು ತೆಗೆದುಹಾಕಲು ಸಾಧ್ಯ ಎಂದು ಹೇಳಿದರು.



8–7–2003: ಹಿಪ್ಪರಗಿ ಡಾ॥ ಸಿದ್ಧರಾಮ ಶಿವಾಚಾರ್ಯ ಮಹಾಸ್ವಾಮಿಗಳು ಪಿಎಚ್.ಡಿ. ಪದವಿ ಪಡೆದ ನಿಮಿತ್ತವಾಗಿ ಪೇಜಾವರ ಮಠದ ವಿಶ್ವೇಶತೀರ್ಥ ಭಗವತ್ಪಾದಂಗಳವರು ಸನ್ಮಾನಿಸಿದರು. ಚಿತ್ರದಲ್ಲಿ ಕಾಶೀ ಜಗದ್ಗುರು ಡಾ। ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ಇದ್ದಾರೆ.

ಈ ಸಮಾರಂಭದ ಮತ್ತೊಂದು ವೈಶಿಷ್ಟ್ಯವೆಂದರೆ ಭಗವದ್ಗೀತೆಯ ಹಾಗೂ ಶ್ರೀ ಸಿದ್ಧಾಂತ ಸಿಖಾಮಣಿ ಗ್ರಂಥಗಳ ಕುರಿತು ತುಲನಾತ್ಮಕವಾಗಿ ಬರೆದ ಪ್ರಬಂಧಕ್ಕೆ ಪಿಹೆಚ್.ಡಿ. ಪದವಿ ಪಡೆದಿದ್ದ ಹಿಪ್ಪರಗಿಯ ಡಾ॥ ಸಿದ್ಧರಾಮ ಪಂಡಿತ ಶಿವಾಚಾರ್ಯ ಸ್ವಾಮಿಗಳನ್ನು (ಇಂದಿನ ಶ್ರೀಶೈಲ ಪೀಠದ ಜಗದ್ಗುರುಗಳು) ಪೇಜಾವರ ಮಠದ ವಿಶ್ವೇಶ್ವರ ತೀರ್ಥ ಸ್ವಾಮಿಗಳು ಬಹು ಆತ್ಮೀಯವಾಗಿ ಸನ್ಮಾನಿಸಿದ್ದು ನಿಜಕ್ಕೂ ಇದೊಂದು ಸಮನ್ವಯದವೇದಿಕೆಯಾಗಿದ್ದಲ್ಲದೆ– ಜಗದ್ಗುರುಗಳು ತಿಳಿಸಿದಂತೆ ಸಂಕ್ರಮಣದ ವರ್ಷವೂ ಹೌದು.

9ನೇ ದಿನದ ಸಿದ್ಧಾಂತ ಶಿಖಾಮಣಿ ಪ್ರವಚನ

ನಿತ್ಯದ ಕರ್ಮಾದಿಗಳೆಲ್ಲವೂ ಭಗವಂತನ ಪೂಜೆ : ಪೇಜಾವರ ಶ್ರೀಗಳು

ಭಕ್ತಿಯಲ್ಲಿ ಮುಕ್ತಿಯನ್ನು ಕಂಡುಕೊಳ್ಳುವ ಸತ್ಯಸಂಗತಿಯನ್ನು ತಿಳಿಹೇಳುವ ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳಲೇಬೇಕೆಂದು ಹೇಳಿದ ಶ್ರೀಗಳು, ಇಂದು ಶೈವ ಹಾಗೂ ವೈಷ್ಣವ ಮಠಾಧೀಶರು ಒಂದೇ ವೇದಿಕೆಯಲ್ಲಿರುವುದು ನಮಗೆ ಬಹಳಷ್ಟು ಸಂತಸ ತಂದಿದೆ.

ಮರುವರ್ಷ ಅಂದರೆ 2004ರ ಆಷಾಢ ಮಾಸದಲ್ಲಿ ಕಳೆದ ವರ್ಷದಂತೆ ಈ ಬಾರಿಯೂ ಜಗದ್ಗುರುಗಳವರಿಂದ ಭಗವದ್ಗೀತೆ ಹಾಗೂ ಸಿದ್ಧಾಂತ ಶಿಖಾಮಣಿ ಕಾರ್ಯಕ್ರಮ ಏರ್ಪಡಿಸಿದ್ದರು. ಈ ಬಾರಿ ಕಾರ್ಯಕ್ರಮದ ಉದ್ಘಾಟನೆಗೆ ಜಗದ್ಗುರು ಪಂಚಾಚಾರ್ಯ ಸೇವಾ ಸಂಘದವರು ವಿರಕ್ತ ಪರಂಪರೆಗೆ ಸೇರಿದ ಮುಂಡರಗಿ ಅನ್ನದಾನ ಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಮ.ನಿ.ಪ್ರ. ಅನ್ನದಾನೀಶ್ವರ ಮಹಾಸ್ವಾಮಿಗಳನ್ನು ಕರೆಸಿದ್ದರು. ಅನ್ನದಾನೀಶ್ವರ ಸ್ವಾಮಿಗಳು ಸಂಸ್ಕೃತ, ಕನ್ನಡ ಭಾಷೆ ಪಾಂಡಿತ್ಯ ಹೊಂದಿ ಸಮಾಜದಲ್ಲಿ ಸಮನ್ವಯ ಸಾಧಿಸುವ ವಿಚಾರವಾದಿಗಳಾಗಿ ಮುಂದಿನ ಪೀಳಿಗೆಗೆ ನಿರ್ವಿವಾದ ಗ್ರಂಥಗಳನ್ನು ಕೊಡುವ ವಿದ್ವಾಂಸರು. ಅವರಿಂದ ತಮ್ಮ ಪ್ರವಚನ ಕಾರ್ಯಕ್ರಮ ಉದ್ಘಾಟನೆಗೊಂಡಿದ್ದು ಕಾಶೀ ಸನ್ನಿಧಾನಕ್ಕೆ ಮೆಚ್ಚುಗೆ ಆಗಿತ್ತು.

ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ವೇದಾಗಮ ಸಾಹಿತ್ಯವನ್ನು ವಚನ ಸಾಹಿತ್ಯ ಖಂಡಿಸುವುದಾಗಲಿ, ವಚನ ಸಾಹಿತ್ಯವನ್ನು ವೇದಾಗಮ ಸಾಹಿತ್ಯ ಖಂಡಿಸುವುದಾಗಲಿ ಹೇಯ ಪರವಾದದ್ದು. ವೀರಶೈವ ಸಿದ್ಧಾಂತ ಸಮನ್ವಯ ಸಿದ್ಧಾಂತ. ಯಾವುದೇ ಖಂಡನೆ–ಮಂಡನೆ ವಿಚಾರಗಳನ್ನು ಬಿಟ್ಟು ಸಮನ್ವಯದ ಹಾದಿಯಲ್ಲಿ ಹೋದಾಗ ಮಾತ್ರ ವೀರಶೈವರಾಗಲು ಸಾಧ್ಯ ಎಂದು ಖಚಿತವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಗದಗ, ಜು–1 ವೇದ–ಆಗಮಗಳನ್ನು ಅಧ್ಯಯನ ಮಾಡಿಯೇ ಬಸವಾದಿ ಶರಣರು ವಚನಗಳನ್ನು ಸೃಷ್ಟಿಸಿದ್ದಾರೆ. ಈ ಕುರಿತು ಯಾವುದೇ ವಾದ ವಿವಾದ ಅನಗತ್ಯ ಎಂದು ಮುಂಡರಗಿ ಸಂಸ್ಥಾನಮಠದ ಶ್ರೀ ಜಗದ್ಗುರು ಅನ್ನದಾನ ಮಹಾಸ್ವಾಮಿಗಳು ಹೇಳಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಕಾಶೀಜ್ಞಾನ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ಮಾತನಾಡಿ ವಿವಿಧ ಧರ್ಮಗ್ರಂಥಗಳಂತೆಯೇ ವೀರಶೈವರಿಗೆ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವು ಧರ್ಮಗ್ರಂಥವಾಗಿದೆ. ಇದು ವೇದ, ಆಗಮ, ಉಪನಿಷತ್ ಜೀವನಾನುಭವಿಕ ತತ್ವಗಳಿಂದ ರೂಪಿಸಲ್ಪಟ್ಟಿದೆ.

ಶ್ರೀಗಳು, ಸಮಾಜದಲ್ಲಿ ಎಲ್ಲರಿಂದ ಮನ್ನಣೆ ಪಡೆಯಬೇಕಾದರೆ ಆಚಾರ, ವಿಚಾರ, ನೀತಿ, ನಿಬಂಧನೆಯೊಂದಿಗೆ ಸಚ್ಚಾರಿತ್ರ್ಯ ಕಾಪಾಡಬೇಕು. ಬಸವಣ್ಣನವರು ಹೇಳಿದಂತೆ ಕಾಯಕದಲ್ಲಿ ನಿಷ್ಠೆ ಇಟ್ಟು, ಸಂಪಾದನೆಯೊಂದಿಗೆ ದಾಸೋಹ, ಸತ್ಪಾತ್ರಕ್ಕೆ ದಾನ ಮಾಡಬೇಕು. ಶಿವಭಕ್ತರಾದವರು ನಾವೆಲ್ಲರೂ ಒಂದೇ ಎಂದು ಹೇಳಿದರು.

ಮುಂಡರಗಿ ಅನ್ನದಾನ ಮಹಾಸ್ವಾಮಿಗಳು ಆಗಮ ಸಾಹಿತ್ಯದಲ್ಲಿದ್ದ ಅಂಶಗಳನ್ನು ವಚನ ಸಾಹಿತ್ಯದಲ್ಲಿ ನಾವು ಕಾಣಬಹುದು. ಆಗಮದ ತಳಹದಿಯೊಂದಿಗೆ ಬಸವಾದಿ ಶರಣರು ವಚನಗಳನ್ನು ರಚಿಸಿದ್ದಾರೆ. ಇದಕ್ಕೆ ಯಾವ ವಾದ ವಿವಾದವನ್ನು ಬೆಳೆಸದೆ ಜ್ಞಾನದ ಮೂಲವನ್ನು ಗಳಿಸಬೇಕಾಗಿದೆ ಎಂದು ಸಂದರ್ಭೋಚಿತ ಮಾತುಗಳನ್ನು ಹೇಳಿದರು.

ಕೇವಲ ವಚನ ಸಾಹಿತ್ಯವನ್ನು ಮಾತ್ರ ಅಧ್ಯಯನ ಮಾಡಿ ಸಂಸ್ಕೃತದಲ್ಲಿರುವ ವೇದ ಆಗಮಗಳನ್ನು ನೋಡದಿರುವ ಹೆಸರಾಂತ ವ್ಯಕ್ತಿಗಳು–ಇಲ್ಲಸಲ್ಲದ ಹೇಳಿಕೆಗಳನ್ನು ನೀಡಿ ನಂಬಿದ ಜನರ ಮನದಲ್ಲಿ ಗೊಂದಲ ಎಬ್ಬಿಸುತ್ತಿರುವುದರಿಂದ ಸಮಾಜದ ಶಾಂತಿಗೆ ಮುಳ್ಳಾಗಿರುವುದನ್ನು

ಇಂದಿಗೂ ನಾವು ನೋಡುತ್ತಿದ್ದೇವೆ. ಏಕೆಂದರೆ ಮೇಲಿನ ಈ ಕಾರ್ಯಕ್ರಮಕ್ಕೆ ಪ್ರತೀ ದಿನವೂ ಸಾವಿರಾರು ಸಂಖ್ಯೆಯಲ್ಲಿ ಗುರು–ವಿರಕ್ತರ ಪೀಠದ ಭಕ್ತರೆನ್ನದೆ ಸರ್ವರೂ ಜೊತೆಗೆ ಅನ್ಯಧರ್ಮೀಯರೂ ಭಾಗವಹಿಸುತ್ತಿದ್ದುದು ಸಾಕ್ಷಿಯಾಗಿದೆ.

ಭಗವದ್ಗೀತೆ, ಸಿದ್ಧಾಂತ ಶಿಖಾಮಣಿ ಜೀವನದ ಮೌಲ್ಯ ತಿಳಿಸುವ ಮಹಾಕೃತಿಗಳು

ಶ್ರೀ ಭಗವದ್ಗೀತೆ ಹಾಗೂ ಸಿದ್ಧಾಂತ ಶಿಖಾಮಣಿ ಉಪದೇಶಾಮೃತ ಉದ್ಘಾಟನೆ
ವಚನಗಳು ವೇದ ಆಗಮ ಉಪನಿಷತ್‌ಗಳ ಸಾರ ಹೊಂದಿವೆ : ಶ್ರೀ ಅನ್ನದಾನ ಶ್ರೀಗಳು



ಗದಗನಲ್ಲಿ ಗುರುಪೌರ್ಣಿಮೆಯ ಅಂಗವಾಗಿ ಏರ್ಪಡಿಸಿರುವ ಕಾಶೀ ಶ್ರೀಗಳ ಶ್ರೀ ಭಗವದ್ಗೀತೆ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ ಕಾರ್ಯಕ್ರಮವನ್ನು ಮುಂಡರಗಿ ಸಂಸ್ಥಾನಮಠದ ಶ್ರೀ ಅನ್ನದಾನ ಮಹಾಸ್ವಾಮಿಗಳು ಉದ್ಘಾಟಿಸಿದರು. ಕಾಶೀ ಶ್ರೀಗಳು, ಸಿ.ಎಸ್. ಮುತ್ತಿನಪೆಂಡಿಮಠ ಇತರರಿದ್ದಾರೆ.

ಗುರು–ವಿರಕ್ತರಲ್ಲಿರುವ ಕೆಲವು ಸೈದ್ಧಾಂತಿಕ ವಾದ ಮತಬೇಧಗಳನ್ನು ನಿವಾರಿಸಿಕೊಂಡು ಸಮನ್ವಯತೆ ಸಾಧಿಸುವ ಚಟುವಟಿಕೆಗಳು ನಿರಂತರ ನಡೆಯುತ್ತಿವೆ. ಕೂಡಲಸಂಗಮದಲ್ಲಿ ಈ ಹಿಂದೆ ನಡೆದ ಗುರು–ವಿರಕ್ತರ ಸಮಾಗಮ ಸಮಾವೇಶದ ನಂತರ ಮತ್ತೆ ಅಂತಹ ಸಮ್ಮೇಳನ ನಡೆಯದಿದ್ದರೂ ಗುರು – ವಿರಕ್ತರು ಒಂದೇ ವೇದಿಕೆ ಹಂಚಿಕೊಳ್ಳುವ ಧಾರ್ಮಿಕ ಕಾರ್ಯ ಕ್ರಮಗಳು ಅನೇಕ ಕಡೆಗಳಲ್ಲಿ ನಡೆದಿವೆ. ವೀರಶೈವರಿಗೆ ಲಿಂಗದೀಕ್ಷೆ ನೀಡುವ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ.

– ಶ್ರೀ ಡಾ. ಚಂದಶೇಖರ ಶಿವಾಚಾರ್ಯ ಸ್ವಾಮೀಜಿ
–ಕಾಶೀ ಜಂಗಮವಾಡಿಮಠ

ಆಧ್ಯಾತ್ಮ ಜ್ಞಾನದಿಂದ ನೆಮ್ಮದಿ : ಕಾಶಿ ಶ್ರೀ
ಇಷ್ಟಲಿಂಗ ಪೂಜೆ–ಭಗವದ್ಗೀತೆ ಉಪನ್ಯಾಸ

ಭಗವದ್ಗೀತೆ ಮತ್ತು ಸಿದ್ಧಾಂತ ಶಿಖಾಮಣಿ ಎರಡೂ ಗ್ರಂಥಗಳ ಜ್ಞಾನ ಭಂಡಾರಗಳಾಗಿವೆ. ಅನ್ನ–ನೀರಿನಿಂದ ಹೊಟ್ಟೆ ತುಂಬಿದರೆ, ಗ್ರಂಥಗಳ ಅಧ್ಯಯನದಿಂದ ಜ್ಞಾನ, ಮಾನಸಿಕ ನೆಮ್ಮದಿ ಲಭಿಸುತ್ತದೆ ಎಂದು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ನುಡಿದರು.



'ಭಗವದ್ಗೀತೆಯ ಸಾರ ಸರ್ವಕಾಲಕ್ಕೂ ಅನ್ವಯ'

2–8–1999

ಗುರುಪೌರ್ಣಿಮೆ ನಿಮಿತ್ತ ಗದುಗಿನಲ್ಲಿ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಚಂದ್ರಶೇಖರ ಶಿವಾಚಾರ್ಯರಿಂದ ಭಗವದ್ಗೀತೆಯ ಸಾಂಖ್ಯಯೋಗ ಪ್ರವಚನದ ಕಾರ್ಯಕ್ರಮವನ್ನು ಈಚೆಗೆ ಮಾಜಿ ಶಾಸಕ ಡಿ.ಆರ್. ಪಾಟೀಲ ಉದ್ಘಾಟಿಸಿದರು. ವೇದಿಕೆ ಮೇಲೆ ಇತರರು ಹಾಜರಿದ್ದರು.

ಭಗವದ್ಗೀತೆ ಒಂದು ಶ್ರೇಷ್ಠ ಗ್ರಂಥ, ಭಗವಂತನ ಚಿಂತನೆ ಮಾಡುವವರಿಗೆ ಶ್ರೇಷ್ಠ ಗ್ರಂಥ. ನೈತಿಕ–ಸಂಪ್ರದಾಯಕ, ದಾರ್ಶನಿಕ ಅಂಶಗಳನ್ನು ಒಳಗೊಂಡಿರುವುದರಿಂದ ಮಾನವನನ್ನು ಪರಮಾತ್ಮನೆಡೆಗೆ ಕೊಂಡೊಯ್ಯುವ ಗ್ರಂಥ ಇದಾಗಿದೆ ಎಂದರು.

ಯಜ್ಞವೆಂದರೆ ದೇವರಪೂಜೆಯ ಮಾರ್ಗವಾಗಿದೆ : ಕಾಶೀ ಶ್ರೀಗಳು

ನವೋದಯ 4–7–2004

ಯಜ್ಞವೆಂದರೆ ಕೇವಲ ಕುಂಡ ನಿರ್ಮಿಸಿ ಹವನ ಮಾಡುವುದಾಗಿರದೆ ದೇವರನ್ನು ಪೂಜಿಸುವ ಎಲ್ಲಾ ಮಾರ್ಗಗಳಿಗೂ ಯಜ್ಞವೆನ್ನುತ್ತಾರೆಂದು ಜಗದ್ಗುರುಗಳು ತಿಳಿಸಿ, ದೇವರ ಪೂಜೆಯನ್ನು ಶರೀರ ತಪಸ್ಸು, ವಾಣಿಯ ತಪಸ್ಸು, ಮನ ತಪಸ್ಸುಗಳ ಮೂಲಕ ಮಾಡಬೇಕೆಂದರು.

ಅಜ್ಞಾನವನ್ನು ತೊಡೆದುಹಾಕಿ ಸುಜ್ಞಾನದ ಬೆಳಕನ್ನು ನೀಡುವವನೇ ಗುರು–ಕಾಶೀ ಶ್ರೀಗಳು

3–7–2014

2ನೇ ತಾರೀಖಿನಂದು ಗುರುಪೌರ್ಣಿಮೆ ಬಂದದ್ದರಿಂದ ಅಂದು ಗುರುವಿನ ಮಹಾತ್ಮೆ, ಗುರುವಿನ ಕರ್ತವ್ಯ ಕುರಿತು ಜಗದ್ಗುರುಗಳು ಮಾನವನ ಅಜ್ಞಾನವನ್ನು ಹೋಗಲಾಡಿಸಿ ಜ್ಞಾನದ ಬೆಳಕು ನೀಡುವವನೇ ಗುರು. ಹೇಗೆ ಪ್ರಕೃತಿ ಯಾವ ಫಲಾಪೇಕ್ಷೆ ಇಲ್ಲದೆ ಮನುಷ್ಯನಿಗೆ ಪರೋಪಕಾರಿಯಾಗಿ ಕೆಲಸ ಮಾಡುವುದೋ ಅದೇ ರೀತಿ ಗುರುವಾದವನು ಸಮಾಜದ ಹಿತಕ್ಕಾಗಿ, ಸನ್ಮಾರ್ಗಕ್ಕಾಗಿ, ಪರೋಪಕಾರಾರ್ಥವಾಗಿ ಜೀವನವನ್ನೇ ಧಾರೆಯೆರೆದು ಭಕ್ತರನ್ನು ಉದ್ಧರಿಸುತ್ತಾನೆ. ಹೀಗಾಗಿ ಗುರುಪೌರ್ಣಿಮೆಯಿಂದ ನಾಲ್ಕು ತಿಂಗಳ ಕಾಲದಲ್ಲಿ ಎಂದರೆ ಚಾತುರ್ಮಾಸದಲ್ಲಿ ಗುರುವು ಸಾಕ್ಷಾತ್ ಭಗವಂತನ ಸ್ಥಾನದಲ್ಲಿ ನಿಂತು ಉಪದೇಶ ಮಾಡುತ್ತಾನೆ. ಅದಕ್ಕಾಗಿಯೇ ಈ ಗುರುಪೂರ್ಣಿಮೆ ಮಹತ್ವ ಪಡೆದಿದೆ ಎಂದು ಗುರುವಿನ ಮಹತ್ವ, ಗುರುಪೂರ್ಣಿಮೆ ಆಚರಿಸುವ ಉದ್ದೇಶವನ್ನು ತಿಳಿಸಿದರು.

21–7–2010 : ಸುಮಾರು 12 ವರ್ಷಗಳ ಕಾಲ ಗದಗ್‌ನಲ್ಲಿ ಕಾಶೀ ಜಗದ್ಗುರುಗಳು ನಡೆಸಿಕೊಂಡು ಬಂದಿರುವ ಆಷಾಢ ಮಾಸದ ಶ್ರೀ ಭಗವದ್ಗೀತೆ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಪ್ರವಚನವು ಈ ಭಾಗದಲ್ಲಿ ಅತ್ಯಂತ ಸಕಾರಾತ್ಮಕವಾದ ಪರಿಣಾಮ ಬೀರುತ್ತಿರುವುದರಲ್ಲಿ ಅನುಮಾನವಿಲ್ಲ.

ಈ ಹಿಂದೆ ಅನೇಕ ಸಂದರ್ಭಗಳಲ್ಲಿ ಹಿಪ್ಪರಿಗೆಯ ಡಾ. ಸಿದ್ಧರಾಮ ಪಂಡಿತ ಶಿವಾಚಾರ್ಯರು ಮತ್ತು ಕಾಶೀ ಜಗದ್ಗುರುಗಳು ಭಗವದ್ಗೀತೆಯ ಉಪನ್ಯಾಸಗಳನ್ನು ಬಹು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದರು. ಈಗ ಶ್ರೀಶೈಲ ಪೀಠಾಧಿಪತಿಗಳಾಗಿದ್ದಾರೆ.

2010 ಮತ್ತು 2011 ಆಷಾಢದ ಪ್ರವಚನದ ಕಾರ್ಯಕ್ರಮದ ಮಂಗಲೋತ್ಸವಕ್ಕೆ ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಆಗಮಿಸಿದ್ದು ಒಂದು ವಿಶೇಷವಾಗಿತ್ತು.

ಸಿದ್ಧಾಂತ ಶಿಖಾಮಣಿ ಮತ್ತು ಭಗವದ್ಗೀತೆಗಳು ಅಂತರರಾಷ್ಟ್ರೀಯ ದಾರ್ಶನಿಕ ಗ್ರಂಥಗಳಾಗಿವೆ



ಗದಗ : ಕೆ.ಎಚ್. ಪಾಟೀಲ ಸಭಾಭವನದಲ್ಲಿ ಆಷಾಢ ಮಾಸ ಪ್ರಯುಕ್ತ ಕಾಶಿ ಜಗದ್ಗುರುಗಳ ಸಿದ್ಧಾಂತ ಶಿಖಾಮಣಿ ಕುರಿತ ಪ್ರವಚನ ಕಾರ್ಯಕ್ರಮವನ್ನು ಮಾಜಿ ಶಾಸಕ ಸಿ.ಎಸ್. ಮುತ್ತಿನಪೆಂಡಿಮಠ ಉದ್ಘಾಟಿಸಿದರು.

2012ರಲ್ಲಿ ರಷ್ಯನ್ ಬಾಷೆಗೆ ಅನುವಾದಗೊಂಡ ಶ್ರೀ ಸಿದ್ಧಾಂತ ಶಿಖಾಮಣಿ ಮಾಸ್ಕೋ ರಾಜಧಾನಿಯಲ್ಲಿ ಬಿಡುಗಡೆಗೊಂಡು ಅಂತರರಾಷ್ಟ್ರೀಯ ದಾರ್ಶನಿಕ ಗ್ರಂಥಗಳ ಸಾಲಿಗೆ ಸೇರಿದ ಮಹತ್ವದ ವಿಷಯವನ್ನು ಜಗದ್ಗುರುಗಳು ಗದಗ್ ಭಕ್ತಾದಿಗಳಿಗೆ ತಿಳಿಸಿದರು. ಭಗವದ್ಗೀತೆ ಹಾಗೂ ಸಿದ್ಧಾಂತ ಶಿಖಾಮಣಿ ಗ್ರಂಥಗಳು ಯೋಗದ ಜೊತೆಗೆ ಶ್ರೇಷ್ಠವಾದ ಆಧ್ಯಾತ್ಮ ವಿದ್ಯೆಯು ಪ್ರತಿಪಾದಿತವಾಗಿರುವುದರಿಂದ ವಿದೇಶಗಳಲ್ಲಿ ಬಹುಜನಪ್ರಿಯವಾಗಿದೆ. ಸಿದ್ಧಾಂತ ಶಿಖಾಮಣಿಯಲ್ಲಿ ಬರುವ ಶಿವಯೋಗದ ಬಗ್ಗೆ ರಷ್ಯಾದ ಯೋಗ ಶಿಕ್ಷಕರು ಹೆಚ್ಚು ಹೆಚ್ಚು ಆಕರ್ಷಕರಾಗುತ್ತಿರುವ ವಿಷಯವನ್ನು ತಿಳಿಸಿದರು.

ಯೋಗ ಆಧ್ಯಾತ್ಮದಿಂದ ಮನಸ್ಸಿನ ತರಂಗಗಳ ನಿಯಂತ್ರಣ ಸಾಧ್ಯ

ಇಂದ್ರಿಯಗಳನ್ನು ನಿಯಂತ್ರಿಸುವ ಶಕ್ತಿ ಮನಸ್ಸಿಗಿದೆ. ಮನಸ್ಸಿನಲ್ಲಿ ತೃಪ್ತಿ ಇರದಿದ್ದರೆ ಇಂದ್ರಿಯಗಳ ಬಯಕೆ ಹೆಚ್ಚುತ್ತದೆ. ಈ ಕಾರಣದಿಂದ ಮನುಷ್ಯನ ದೇಹ ಅನೇಕ ರೋಗಗಳಿಗೆ ತುತ್ತಾಗುವುದರಿಂದ ಭತೃಹರಿಯು 'ಭೋಗೆ ರೋಗಭಯಾ' ಎಂದಿದ್ದಾನೆ–ಈ ರೋಗಗಳಿಂದ ಶರೀರವನ್ನು ರಕ್ಷಿಸಲು ಜೀವನದಲ್ಲಿ ಆಧ್ಯಾತ್ಮ ಮತ್ತು ಯೋಗಮಾರ್ಗವನ್ನು ಅನುಸರಿಸಬೇಕು. ಈ ಮಾರ್ಗಗಳನ್ನು ವಿವರವಾಗಿ ಭಗವದ್ಗೀತೆ ಮತ್ತು ಸಿದ್ಧಾಂತ ಶಿಖಾಮಣಿಯಲ್ಲಿ ತಿಳಿಸಿರುವುದರಿಂದ ಇವೆರಡೂ ಅಮೂಲ್ಯ ಗ್ರಂಥಗಳಾಗಿವೆ ಎಂದು ಮನೋನಿಗ್ರಹದ ಬಗ್ಗೆ ವಿವರಿಸಿದರು.

ಯೋಗ ಸಾಧನೆಯಿಂದ
ಮನಸ್ಸು ಸ್ಥಿರ : ಕಾಶಿ ಶ್ರೀಗಳು



ಶ್ರೀಗಳು 'ವಿಜಯವಾಣಿ' ಪತ್ರಿಕೆ ಓದುವುದರಲ್ಲಿ ತಲ್ಲೀನರಾಗಿರುವುದು.

ಭಗವದ್ಗೀತೆಯ 6ನೇ ಅಧ್ಯಾಯ ಆತ್ಮಸಂಯಮಯೋಗದಲ್ಲಿ ಮನಸ್ಸು ಸ್ಥಿರಗೊಳಿಸಿಕೊಳ್ಳಲು ಏನೆಲ್ಲಾ ಮಾಡಬೇಕೆಂಬ ವಿವರಣೆ ಇದೆ. ಭಗವಂತನು 'ಸಮಂ ಕಾಯ ಶಿರೋಗ್ರೀ' ಎಂಬ ಶ್ಲೋಕದಲ್ಲಿ ಸುಖಾಸನ ಸ್ಥಿತಿಯನ್ನು ಮಾಡಿಕೊಂಡು ತನ್ನ ಕುತ್ತಿಗೆ ತಲೆ ಮತ್ತು ಬೆನ್ನ ಹುರಿಯನ್ನು ಒಂದೇ ಸರಳ ರೇಖೆಯಲ್ಲಿ ಬರುವಂತೆ ಸುಖಾಸನದಲ್ಲಿ ಸ್ವಲ್ಪವೂ ಅಲುಗಾಡದ ರೀತಿಯಲ್ಲಿ ಕುಳಿತು ತನ್ನ ಮೂಗಿನ ತುದಿಯನ್ನು ನೋಡುತ್ತಾ ದೃಷ್ಟಿಯೋಗದ ಸಾಧನೆಯನ್ನು ಮಾಡುತ್ತಾ ಹೋದರೆ ಮನಸ್ಸು ಸ್ಥಿರಗೊಳ್ಳುತ್ತಾ ಹೋಗುವುದು. ಸ್ಥಿರವಾದ ಮನಸ್ಸಿನಿಂದ ಧ್ಯಾನವನ್ನು ಸಾಧಿಸಬಹುದು ಎಂದು ಶಿವಯೋಗದಲ್ಲಿನ ಧ್ಯಾನಯೋಗದ ವಿವರಣೆಯನ್ನು ನೀಡಿದರು.

'ಜನ್ಮಾಂತರಗಳ ಸಂಗ್ರಹವೇ ಚಿತ್ತ'
6–7–12

ಮನಸ್ಸು,. ಬುದ್ಧಿ, ಚಿತ್ತ ಮತ್ತು ಅಹಂಕಾರಗಳೆಂಬ ಅಂತಃಕರಣಗಳು ನಮ್ಮ ಎಲ್ಲಾ ವ್ಯವಹಾರಗಳಿಗೆ ಮುಖ್ಯವಾಗುತ್ತವೆ ಎಂದು ಭಗವದ್ಗೀತೆಯಲ್ಲಿನ ಆಧ್ಯಾತ್ಮಿಕ ವಿಷಯವನ್ನು ವಿವರಿಸುತ್ತಾ ಜಗದ್ಗುರುಗಳು ಚಿತ್ತವು ನಮ್ಮ ಜನ್ಮಾಂತರಗಳ ಎಲ್ಲಾ ಸಂಸ್ಕಾರಗಳನ್ನು ಸೂಕ್ತರೂಪದಲ್ಲಿ ಸಂಗ್ರಹಿಸಿಕೊಳ್ಳುತ್ತದೆ. ಇಂದು ವಿಜ್ಞಾನಿಗಳು ಹಾರ್ಡ್‌ಡಿಸ್ಕ್‌ನಲ್ಲಿ ಹೇಗೆ ಶಬ್ದಗಳನ್ನು, ಚಿತ್ರಗಳನ್ನು ಸಂಗ್ರಹಿಸುವುದನ್ನು ಸಂಶೋಧಿಸಿದ್ದಾರೋ ಅದೇ ರೀತಿಯಲ್ಲಿ ನಮ್ಮ ಚಿತ್ತ ಕೂಡ ಅನೇಕ ಜನ್ಮಗಳಲ್ಲಿ ನಾವು ನೋಡಿದ, ಕೇಳಿದ, ಮುಟ್ಟಿದ, ವಾಸನೆ ಗ್ರಹಿಸಿದ ಎಲ್ಲಾ ಸಂಸ್ಕಾರಗಳು ಇದರಲ್ಲಿ ಇರುತ್ತವೆ. ಹಾಗಾಗಿ ಈಗ ನಾವು ಏನೇ ಮಾಡುತ್ತಿದ್ದರೂ ಹಿಂದಿನ ಈ ಸಂಸ್ಕಾರಬಲದಿಂದಲೇ. ಬುದ್ಧ ಮಹಾವೀರರು ಧ್ಯಾನದ ಮೂಲಕ ಚಿತ್ತವನ್ನು ಪ್ರವೇಶಿಸಿ ಅಲ್ಲಿಯ ಸಂಸ್ಕಾರಗಳನ್ನು ನೋಡಿ ಹಿಂದಿನ ಜನ್ಮಗಳನ್ನು ನೆನಪಿಸಿಕೊಂಡರು. ಈ ಚಿತ್ತದಲ್ಲಿ ಸಂಗ್ರಹವಾಗಿರುವ ದೂಷಿತ ಸಂಸ್ಕಾರಗಳನ್ನು ಶುಭಕರ್ಮಗಳ ಮೂಲಕ ನಿವಾರಣೆ ಮಾಡಿ, ಜನ್ಮವನ್ನು ಪಾವನ ಮಾಡಿಕೊಳ್ಳಬಹುದು. ಪ್ರತಿಯೊಬ್ಬರೂ ಧ್ಯಾನ, ಧಾರಣಾ, ಚಿತ್ತಶುದ್ಧಿಯ ಕ್ರಿಯೆಗಳಿಂದ ಸಂಸ್ಕಾರ ಹೊಂದಬೇಕೆಂದು ಬಹು ಸ್ವಾರಸ್ಯಪೂರ್ಣವಾಗಿ ಚಿತ್ತಶುದ್ಧಿಯ ಬಗ್ಗೆ ಹೇಳಿದ್ದು ಮನಮುಟ್ಟುವಂತಿತ್ತು.

ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮ ಪ್ರವಚನ
ಶಿವನು ಎಲ್ಲ ದೇವತೆಗಳಿಂದ ಪೂಜಿಸಲ್ಪಟ್ಟವನು : ಜ. ಕಾಶೀ ಶ್ರೀಗಳು
6–7–12

ಸಂಜೆ ಜಗದ್ಗುರುಗಳು ಶರಣಸ್ಥಲದ ಬಗ್ಗೆ ತಿಳಿಸುತ್ತಾ ಶಿವನು ಆದಿದೇವನಾಗಿದ್ದು, ಬ್ರಹ್ಮ, ವಿಷ್ಣು, ಲಕ್ಷ್ಮೀ ಮೊದಲಾದ ದೇವತೆಗಳು ತಮ್ಮ ಮಸ್ತಕದಲ್ಲಿ ಇಷ್ಟಲಿಂಗವನ್ನು ಧರಿಸಿರುವುದನ್ನು ತಿಳಿಸಿ ಸರ್ವಾರಾಧ್ಯನಾದ ಶಿವನನ್ನೇ ಶರಣನಾದವನು ಬೇರೆ ದೇವರಿಗೆ ಶರಣಾಗುವುದು ಬೇಕಿಲ್ಲ. ಹೇಗೆಂದರೆ ಗಂಗಾಜಲಮಾತ್ರದಿಂದ ತೃಪ್ತನಾದವನು ಮೃಗಜಲವನ್ನು ಅಪೇಕ್ಷಿಸುವುದಿಲ್ಲ, ಸೂರ್ಯನ ಬೆಳಕಿರುವಾಗ ದೀಪದ ಅವಶ್ಯಕತೆ ಇರುವುದಿಲ್ಲ. ಅದೇ ರೀತಿ ಸರ್ವಶಕ್ತನಾದ ಸರ್ವರನ್ನು ಅನುಗ್ರಹಿಸಿದ ಶಿವನೇ ಪ್ರಸನ್ನನಾಗಿರುವಾಗ ಶರಣನು ಬೇರೆ ದೇವರ ಕಡೆ ಹೋಗುವ ಪ್ರಶ್ನೆಯೇ ಇರುವುದಿಲ್ಲ. ಶರಣಸ್ಥಲದ ಸಾಧಕನು ಶಿವನಲ್ಲಿಯೆ ದತ್ತ ಚಿತ್ತನಾಗಿ ಯಾವ ಅಪೇಕ್ಷೆಯೂ ಇಲ್ಲದೆ ಶಿವಾನಂದವನ್ನು ಅನುಭವಿಸುತ್ತಾನೆ ಎಂದು ಸುದೀರ್ಘವಾಗಿ ಶರಣಸ್ಥಲವನ್ನು ವಿವರಿಸಿದರು.

ಸಿದ್ಧಾಂತ ಶಿಖಾಮಣಿ, ಭಗವದ್ಗೀತೆ ಪ್ರವಚನ : ಎಲ್ಲರನ್ನು ಸಮನಾಗಿ ನೋಡುವವನು ಶಿವನು......
ಸಂಯುಕ್ತ ಕರ್ನಾಟಕ 7–7–2012

ಮರುದಿನ ಮತ್ತೆ ಚಿತ್ತವನ್ನು ಕುರಿತು ಜಗದ್ಗುರುಗಳು ಮಾತನಾಡಿದರು. ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ ಆವರಣ ಮತ್ತು ವಿಕ್ಷೇಪಗಳೆಂಬ ಎರಡು ದೋಷಗಳಿರುತ್ತವೆ. ಇದನ್ನು ಇನ್ನೂ ಅರ್ಥಮಾಡಿಸುವ ಸಲುವಾಗಿ ಗುರುಗಳು ಒಂದು ಉದಾಹರಣೆಯನ್ನು ಹೇಳಿದರು. ಇಬ್ಬರು ವ್ಯಕ್ತಿಗಳ ನಡುವೆ ಒಂದು ಪರದೆ ಇದ್ದಾಗ ಸಮೀಪದಲ್ಲಿದ್ದರೂ ಒಬ್ಬರನ್ನೊಬ್ಬರು ನೋಡಲು ಸಾಧ್ಯವಿಲ್ಲವಾದಂತೆ ಶಿವ-ಜೀವರಿಬ್ಬರೂ ಒಂದೇ ಹೃದಯದಲ್ಲಿ ವಾಸವಾಗಿದ್ದರೂ ಜೀವನಿಗೆ ಶಿವನ ಸಾಕ್ಷಾತ್ಕಾರವಾಗುವುದಿಲ್ಲ. ಇದಕ್ಕೆ ಆವರಣದೋಷ ಎಂದು ಹೇಳಿದರು.

ಚಂಚಲತೆ ದೂರವಾದಾಗ ಮನಸ್ಸಿಗೆ ಶಾಂತಿ : ಕಾಶೀ ಶ್ರೀಗಳು

7–7–2012

ವಿಕ್ಷೇಪದೋಷಕ್ಕೆ ಚಿತ್ತ ಚಾಂಚಲ್ಯಕ್ಕೆ ಕಾರಣಗಳು ನಾವು ಅನೇಕ ಜನ್ಮಗಳಲ್ಲಿ ಮಾಡಿರುವ ನಿಷಿದ್ಧ ವ್ಯವಹಾರಗಳಿಂದಾದ ಪಾಪವೇ ಆಗಿದೆ. ಈ ಪಾಪ ನಿವೃತ್ತಿಗೆ ಪುಣ್ಯ ಕರ್ಮಗಳನ್ನು ಮಾಡಬೇಕು. ಹೇಗೆಂದರೆ ಸತ್ಸಂಗಿಯು ತೀರ್ಥಯಾತ್ರೆ, ಕ್ಷೇತ್ರ ದರ್ಶನ, ದಾನಾದಿಗಳನ್ನು ಮಾಡುವುದರಿಂದ ವಿಶೇಷ ಪುಣ್ಯಗಳು ಚಿತ್ತದಲ್ಲಿಯ ಪಾಪ ಸಂಸ್ಕಾರಗಳನ್ನು ದೂರಮಾಡುತ್ತದೆ. ಆಗ ಮನಸ್ಸಿನ ಏಕಾಗ್ರತೆ ಸಾಧ್ಯ. ಈ ಏಕಾಗ್ರತೆಯೇ ಶಾಂತಿಗೆ ಮೂಲ ಎಂದು ಹೇಳುತ್ತಾ ಧ್ಯಾನಮಾರ್ಗದಲ್ಲಿ ಮುನ್ನಡೆಯುವ ಕ್ರಮವನ್ನು ಸುವಿಸ್ತಾರವಾಗಿ ತಿಳಿಸಿದರು.

ಸಾಧಕನಿಗೆ ನಿರ್ಭೀತ ಮನೋಸ್ಥಿತಿ ಅಗತ್ಯ

ಉದಯವಾಣಿ 8–7–2012

ಮನಸ್ಸಿನ ಏಕಾಗ್ರತೆಗೆ ವೈರಾಗ್ಯ ಮತ್ತು ಅಭ್ಯಾಸಗಳು ಮುಖ್ಯವಾದವುಗಳು. ಸಾಧಕನು ಸಂಸಾರದಲ್ಲಿದ್ದರೂ ಅದರ ಮೇಲಿನ ಮೋಹ ಮಮಕಾರಗಳನ್ನು ಕಡಿಮೆ ಮಾಡಿಕೊಂಡರೆ ನಿರ್ಭೀತನಾಗಲು ಸಾಧ್ಯ. ಎಲ್ಲವೂ ಈಶ್ವರನಿಗೆ ಸೇರಿದ್ದು-ನನ್ನದೆನ್ನುವುದು ಬರೀ ಮಿಥ್ಯೆ ಎಂಬ ಭಾವ ಹುಟ್ಟಿ ಅರಿವು ಮೂಡಿದಾಗ ಭಯದಿಂದ ಮುಕ್ತನಾಗಲು ಸಾಧ್ಯವೆಂದು ಗುರುಗಳು ವಿವರಿಸುತ್ತಾ ಸಾಧಕನಿಗೆ ನಿರ್ಭೀತ ಮನೋಸ್ಥಿತಿ ಅಗತ್ಯ ಎಂದು ತಿಳಿಸಿದರು. ಉದರಪೋಷಣೆಗೆ ಲೌಕಿಕಜ್ಞಾನ ಅಗತ್ಯವಾದರೆ ಅಂತರಂಗ ಶುದ್ಧಿಗೆ ಧರ್ಮಗ್ರಂಥಗಳ ಪಾರಾಯಣ, ಅಧ್ಯಯನ ಅವಶ್ಯವಾಗಿದೆ. ಮಾನವನು ಜನನ-ಮರಣಗಳ ಚಕ್ರದಲ್ಲಿ ಸಿಲುಕಿ ಭವಬಂಧನದಲ್ಲಿ ಬಿದ್ದು ಒದ್ದಾಡುತ್ತಿರುವಾಗ ಆಧ್ಯಾತ್ಮಜ್ಞಾನ ಹಾಗೂ ಲಿಂಗಪೂಜೆಯಿಂದ ಇವುಗಳಿಂದ ಮುಕ್ತನಾಗಲು ಸಾಧ್ಯ ಎಂದು ದಾರಿ ತೋರಿಸಿದರು.

2012ರ ಈ ಸಮನ್ವಯ ವೇದಿಕೆಯಿಂದ ಜಗದ್ಗುರುಗಳು ನಡೆಸಿಕೊಟ್ಟ ಭಗವದ್ಗೀತೆ ಹಾಗೂ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಉಪದೇಶಗಳು ಸರಳವಾಗಿ, ಮನಸ್ಸಿಗೆ ಮುಟ್ಟುವಂತೆ, ಬುದ್ಧಿಗೆ ಅರಿವಾಗುವಂತೆ ತಿಳಿಸಿ ನಮ್ಮ ಆಚಾರ-ವಿಚಾರಗಳ ಶುದ್ಧಿಗೆ ಮನಸ್ಸು ಮಾಡುವಂತೆ ಮಾಡಿರುವರು.

ಸಿದ್ಧಾಂತ ಶಿಖಾಮಣಿ ಭಗವದ್ಗೀತೆಗಳು
ದಿವ್ಯದೃಷ್ಟಿ ಅನುಗ್ರಹಿಸುವ ಅಪೂರ್ವ ಗ್ರಂಥಗಳು : ಕಾಶೀ ಜಗದ್ಗುರುಗಳು

19–7–2013, ವಿಜಯವಾಣಿ



ಧರ್ಮ ಗ್ರಂಥಗಳ ಅಧ್ಯಯನ ಮತ್ತು ಶ್ರವಣದಿಂದ ಭೋಗ-ಮೋಕ್ಷಗಳನ್ನು ಪಡೆದುಕೊಳ್ಳಬಹುದು

ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದರು

ಗದಗ : ನಗರದ ಜಗದ್ಗುರು ಪಂಚಾಚಾರ್ಯ ಸೇವಾ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಆಷಾಢ ಮಾಸದ ಗುರುಪೂರ್ಣಿಮೆಯ ನಿಮಿತ್ಯ ಹಮ್ಮಿಕೊಂಡಿದ್ದ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮವನ್ನು ಮಾಜಿ ಶಾಸಕ ಡಿ.ಆರ್. ಪಾಟೀಲ ಉದ್ಘಾಟಿಸಿದರು

ಈ ಪ್ರಪಂಚವನ್ನು ನೋಡಲು ಭಗವಂತ ಚರ್ಮ ಚಕ್ಷುಗಳನ್ನು ಕೊಟ್ಟಿದ್ದಾನೆ. ಆದರೆ ಈ ಕಣ್ಣುಗಳಿಂದ ಪರಮಾತ್ಮನನ್ನು ಕಾಣಲು ಸಾಧ್ಯವಿಲ್ಲ. ಅವನನ್ನು ನೋಡಲು ದಿವ್ಯದೃಷ್ಟಿ ಬೇಕಾಗಿದೆ. ಅಂತಹ ದಿವ್ಯದೃಷ್ಟಿಯನ್ನು ಅನುಗ್ರಹಿಸುವ ದಿವ್ಯಗ್ರಂಥಗಳೇ ಸಿದ್ಧಾಂತ ಶಿಖಾಮಣಿ ಹಾಗೂ ಭಗವದ್ಗೀತೆ ಎಂದು ಹೇಳುತ್ತಾ 18–7–2013ರಲ್ಲಿ ಗದಗ್‌ನಲ್ಲಿನ ಆಧ್ಯಾತ್ಮ ಆಶೀರ್ವಚನವನ್ನು ಜಗದ್ಗುರುಗಳು ಆರಂಭಿಸಿದರು. ಶಿವನ ನಾಲ್ಕು ಮುಖಗಳಿಂದ ನಾಲ್ಕು ವೇದಗಳು ಐದನೇ ಮುಖವಾದ ಈಶಾನ್ಯಮುಖದಿಂದ 28 ಶಿವಾಗಮಗಳನ್ನು ಉಪದೇಶಿಸಿದ್ದಾನೆ. ವೇದಗಳ ಕೊನೆಯ ಭಾಗವಾದ ಉಪನಿಷತ್‌ಗಳನ್ನು ಆಧರಿಸಿ ವ್ಯಾಸ ಮಹರ್ಷಿಯು ಶ್ರೀಮದ್ ಭಗವದ್ಗೀತೆಯನ್ನು ರಚಿಸಿದ್ದಾನೆ. ಅದರಂತೆ 28 ಆಗಮಗಳನ್ನು ಆಧರಿಸಿ ಸಿದ್ಧಾಂತ ಶಿಖಾಮಣಿಯನ್ನು ಶಿವಯೋಗಿ ಶಿವಾಚಾರ್ಯರು ರಚಿಸಿದ್ದಾರೆ. ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನ ಸಂವಾದವಿರುವಂತೆ, ಸಿದ್ಧಾಂತ ಶಿಖಾಮಣಿಯಲ್ಲಿ ಶ್ರೀ ರೇಣುಕ ಅಗಸ್ತ್ಯ ಮಹರ್ಷಿಯರ ಸಂವಾದವಿದೆ. ಈ ಎರಡು ಗ್ರಂಥಗಳ ಮೂಲಾಧಾರ ವೇದಾಗಮಗಳೇ ಆಗಿವೆ. ಇಂತಹ ಗ್ರಂಥಗಳ ಪಠಣ, ಅಧ್ಯಯನ, ಆ ಕುರಿತು ನಡೆಯುವ ಪ್ರವಚನ ಕೇಳುವುದರಿಂದ ದಿವ್ಯ ದೃಷ್ಟಿ ಪ್ರಾಪ್ತವಾಗುವುದೆಂದು ಎರಡೂ ಗ್ರಂಥಗಳಲ್ಲಿನ ಸಾಮ್ಯತೆಯನ್ನು ಜಗದ್ಗುರುಗಳು ತಿಳಿಸಿದರು.

ಪ್ರವಚನ ಉದ್ಘಾಟನಾ ವಿಷಯವನ್ನು ಗದಗ್ ದಿನಪತ್ರಿಕೆಗಳಾದ ಕಿತ್ತೂರ ಕರ್ನಾಟಕ, ವಿಜಯವಾಣಿ, ಉದಯವಾಣಿ, ನಾಗರಿಕ, ಪ್ರಜಾವಾಣಿ, ನವೋದಯ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಕನ್ನಡ ಪ್ರಭ ಪತ್ರಿಕೆಗಳಲ್ಲಿ ಪ್ರಮುಖ ಸುದ್ದಿಯಾಗಿ ಚಿತ್ರಗಳ ಸಹಿತ ಪ್ರಕಟವಾಗಿರುವುದನ್ನು ನೋಡಿದರೆ ಜಗದ್ಗುರುಗಳ ಈ ಕಾರ್ಯಕ್ರಮದ ಜನಪ್ರಿಯತೆ ಕಾಣಬಹುದಾಗಿದೆ. ಅಲ್ಲದೆ ಪ್ರತಿದಿನದ ಉಪದೇಶವನ್ನು ಚಾಚೂ ತಪ್ಪದೆ ಪ್ರಕಟಿಸಿರುವುದು ಪತ್ರಿಕಾಪ್ರಚಾರದ ಮಹತ್ವದ ಅರಿವಾಗುತ್ತದೆ.

ಪರಮ ತತ್ವ ತಿಳಿಸಿಕೊಡುವವನೇ ಸದ್ಗುರು
20–7–13

ಎಂದಿನಂತೆ ಪ್ರಾತಃಕಾಲದಲ್ಲಿ ಜಗದ್ಗುರುಗಳು ಭಗವದ್ಗೀತೆಯ ಧ್ಯಾನಯೋಗದ ಬಗ್ಗೆ ವಿವರಿಸುತ್ತಾ ಪರಬ್ರಹ್ಮತತ್ವವನ್ನು ಅನುಭವಿಸಿ ಆನಂದಿಸಲು ಧ್ಯಾನವು ಶ್ರೇಷ್ಠ ಉಪಾಯವೆಂದು ಈಗಾಗಲೇ ತಿಳಿಸಿದ್ದ ಗುರುಗಳು–ಮುಂದೆ ಧ್ಯಾನಕ್ಕೆ ಯಾವ ರೀತಿಯಲ್ಲಿ ಕುಳಿತಿರಬೇಕೆಂದು ಹೇಳುವಲ್ಲಿ ನಿರ್ವಾತ ದೀಪದಂತೆ ತನ್ನ ಚಿತ್ತವು ವಾಸನೆಗಳೆಂಬ ಗಾಳಿಯ ಹೊಡೆತಕ್ಕೆ ಮನಸ್ಸು ಚಂಚಲವಾಗದಂತೆ ಕಾಳಜಿ ವಹಿಸಬೇಕೆಂದರು.

ಸಂಜೆಯ ಆಶೀರ್ವಚನದಲ್ಲಿ ನಿರ್ದೇಶಸ್ಥಲದ ಬಗ್ಗೆ ವಿವರಿಸುತ್ತಾ ಶಿಷ್ಯನ ಚಿತ್ತವನ್ನು ತನ್ನ ಬೋಧನೆಗಳಿಂದ ಶುದ್ಧಗೊಳಿಸಿ ಶಿಷ್ಯನಿಗೆ ಪರಮ ತತ್ತ್ವವನ್ನು ನಿರ್ದೇಶಿಸುವುದರಿಂದ ಸಿದ್ಧಾಂತ ಶಿಖಾಮಣಿಯಲ್ಲಿ ಗುರುವಿಗೆ ನಿರ್ದೇಶನ ಎಂದು ಕರೆಯಲಾಗಿರುವ ವಿಷಯ ತಿಳಿಸಿ ಗುರುವಿನ ಮಹತ್ವವನ್ನು ತಿಳಿಸುವ ಸ್ಥಲವೇ ನಿರ್ದೇಶನ ಸ್ಥಲವೆಂದು ವಿವರಿಸಿದರು.

ಸಾಧಕನು ನಿರಂತರ ಅಭ್ಯಾಸದಿಂದ ಮಾತ್ರ ಚಿತ್ತವನ್ನು ನಿರೋಧಿಸುವ ಶಕ್ತಿ ಗಳಿಸುತ್ತಾನೆ. ಆಗ ಅವನ ಮನಸ್ಸು ದ್ವಂದ್ವಾತೀತವಾಗಿ ಉದಾಸೀನ ಸ್ಥಿತಿಗೆ ಬರುವನು. ಹೀಗೆ ದ್ವಂದ್ವ ಮುಕ್ತವಾದ ಏಕಾಗ್ರಚಿತ್ತವು ಅಂತರ್ಮುಖವಾಗಿ ಆತ್ಮಸುಖವನ್ನು ಪಡೆದುಕೊಳ್ಳಲು ಸಾಧ್ಯವೆಂದು ಧ್ಯಾನಯೋಗದ ಬಗ್ಗೆ ವಿವರಿಸಿದರು.

ಮೂರನೇ ದಿನದ ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ
ಶ್ರೀ ಗುರುವು ಭವರೋಗ ವೈದ್ಯನು : ಶ್ರೀ ಕಾಶೀ ಜಗದ್ಗುರುಗಳು
21–7–2013

ಶರೀರಕ್ಕೆ ಬರುವ ರೋಗಗಳಿಗೆ ವೈದ್ಯರ ಬಳಿ ಹೋದರೆ ಅವರ ಔಷದೋಪಚಾರಗಳಿಂದ ರೋಗ ಗುಣವಾಗುವುದು. ಆದರೆ ಜನನ ಮರಣ ರೂಪವಾದ ಭವರೋಗವನ್ನು ಕಳೆಯಲು ಪರಮಾತ್ಮತತ್ವವನ್ನು ಸಾಕ್ಷಾತ್ಕರಿಸಿಕೊಂಡ ಶ್ರೀ ಗುರುವಿನ ಬಳಿಗೆ ಹೋದರೆ ಅವರ ಉಪದೇಶಾಮೃತದಿಂದ ಅಜ್ಞಾನ ಅಳಿದು ಭವರೋಗದಿಂದ ಪಾರಾಗಬಹುದು. ಆದ್ದರಿಂದಲೇ ಶ್ರೀ ಗುರುವನ್ನು 'ಭವರೋಗ ವೈದ್ಯ'ನೆಂದು ಕರೆಯಲಾಗಿದೆ ಎಂದು ಸಿದ್ಧಾಂತ ಶಿಖಾಮಣಿಯ ನಿರ್ದೇಶನ ಸ್ಥಲವನ್ನು ಜಗದ್ಗುರುಗಳು ವಿವರಿಸಿದರು.

ನಾಲ್ಕನೇ ದಿನದ ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ
ಶಿವನನ್ನು ತಿಳಿದುಕೊಳ್ಳಬೇಕೆಂಬ ಉತ್ಕಟವಾದ ಬಯಕೆಯೇ ಶೀಲ : ಶ್ರೀ ಕಾಶೀ ಜಗದ್ಗುರುಗಳು
22–7–2013

ಇಂದು ಜಗದ್ಗುರುಗಳ ಶರಣಸ್ಥಲದಲ್ಲಿರುವ ಅವಾಂತರ ಸ್ಥಲವಾದ ಶೀಲಸಂಪಾದನ ಸ್ಥಲದ ಕುರಿತು ವಿವರಿಸಿದರು. ವೀರಶೈವ ಸಿದ್ಧಾಂತದಲ್ಲಿ ಪ್ರತಿಪಾದಿತವಾಗಿರುವ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳಲ್ಲಿ ಗಣಾಚಾರದಲ್ಲಿ ಬರುವ 64 ಶೀಲಗಳ ಬಗ್ಗೆ ಚಂದ್ರಜ್ಞಾನಾಗಮದಲ್ಲಿ ವಿವರಿಸಲ್ಪಟ್ಟಿದೆ. ಶೀಲವೆಂದರೆ ಉತ್ತಮ ಆಚರಣೆಗಳು. ಉತ್ತಮ ಆಚರಣೆಗಳಿಂದ ಮನಸ್ಸು ಪರಿಶುದ್ಧವಾಗುವುದು. ಶಿವತತ್ವವನ್ನು ತಿಳಿದುಕೊಳ್ಳಬೇಕೆಂಬ ಉತ್ಕಟವಾದ ಬಯಕೆಯೇ ಶೀಲವೆನ್ನಲಾಗಿದೆ. ಶೀಲಗಳನ್ನು ಆಚರಿಸಿ ಮನಸ್ಸನ್ನು ಶುದ್ಧಗೊಳಿಸಿಕೊಂಡು ಕೊನೆಗೆ ಶಿವತತ್ವವನ್ನು ಪಡೆದುಕೊಂಡು ಜೀವನ ಸಾರ್ಥಕಮಾಡಿಕೊಳ್ಳಬೇಕೆಂಬ ಉಪದೇಶವನ್ನು ನೀಡಿದರು.

ಶ್ರೀಮದ್ ಭಗವದ್ಗೀತೆ ಪ್ರವಚನ

ಮನಸ್ಸಿನ ಸ್ಥಿರತೆಯಿಂದ ಪರಮ ಸುಖಪ್ರಾಪ್ತಿ : ಶ್ರೀ ಕಾಶೀ ಜಗದ್ಗುರುಗಳು

23–7–2013

ಮನಸ್ಸು ಚಂಚಲವಾದದ್ದು. ಕಾರಣ ಸದಾ ಬಹಿರ್ಮುಖವಾಗಿ ವಿಷಯ ಸಂಗ್ರಹಿಸುತ್ತದೆ. ಇದರಿಂದ ಅಂತಿಮವಾಗಿ ದುಃಖಗಳನ್ನು ಅನುಭವಿಸಬೇಕಾಗುವುದು. ಇದರಿಂದ ಪಾರಾಗುವ ಮಾರ್ಗವನ್ನು ಭಗವದ್ಗೀತೆಯಲ್ಲಿ ಎಲ್ಲಾ ಕಾಮನೆಗಳನ್ನು ತ್ಯಜಿಸಿ ಮನಸ್ಸು ಹಾಗೂ ಇಂದ್ರಿಯಗಳನ್ನು ಶಮೆ, ದಮೆಗಳಿಂದ ನಿಗ್ರಹಿಸಿ ಮನಸ್ಸನ್ನು ಆತ್ಮತತ್ವದಲ್ಲಿ ಸ್ಥಿರಗೊಳಿಸಿದರೆ ಪರಮ ಸುಖ ಪ್ರಾಪ್ತಿಯಾಗುವುದು. ಆತ್ಮವೇ ಪರಮ ಸುಖರೂಪ. ಆದ್ದರಿಂದಲೇ ನಾವು ಗಾಢ ನಿದ್ರೆಯಲ್ಲಿರುವಾಗ ಮನಸ್ಸು ಎಲ್ಲಾ ವಿಷಯಗಳಿಂದ ವಿಮುಕ್ತವಾಗಿ ಆತ್ಮದಲ್ಲಿ ಲೀನವಾಗಿರುತ್ತದೆ. ಆಗ ಎಲ್ಲಾ ಜೀವಿಗಳು ಪರಮಸುಖವನ್ನು ಅನುಭವಿಸುತ್ತಾರೆ ಎಂದು ವಿವರಿಸಿ ಇದು ಸಾಧ್ಯವಾಗುವುದು ಧ್ಯಾನದಿಂದ ಎಂದು ಹೇಳಿ ಅದರ ಮಹತ್ವವನ್ನು ತಿಳಿಸಿದರು. ಧ್ಯಾನವು ಚಿತ್ತವನ್ನು ಏಕಾಗ್ರಗೊಳಿಸಿ ನೂತನ ಆವಿಷ್ಕಾರಕ್ಕೆ ನಾಂದಿಯಾಗುತ್ತದೆ. ಶಿವನು ಜ್ಞಾನಸಾಗರನು. "ಜ್ಞಾನ ಮಿಚ್ಛೇತ್ತು ಶುಕರಾತ್" ಎಂಬ ಉಕ್ತಿಗನುಸಾರವಾಗಿ ಜ್ಞಾನ ಪ್ರಾಪ್ತಿಗೆ ಶಿವಧ್ಯಾನವೇ ಮೂಲವೆಂದು ತಿಳಿಸಿದರು.

ಸ್ತ್ರೀ ಸಮಾನತೆಯ ಹರಿಕಾರ ಶಿವ : ಕಾಶಿ ಶ್ರೀಗಳು



ಗದಗ ನಗರದ ಕೆ.ಎಚ್. ಪಾಟೀಲ ಸಭಾಭವನದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಪ್ರವಚನ ಕಾರ್ಯಕ್ರಮದಲ್ಲಿ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯಸ್ವಾಮೀಜಿ ಮಾತನಾಡಿದರು.

24–7–2013 ಗದಗ : ಸ್ತ್ರೀಸಮುದಾಯಕ್ಕೆ ಸಮಾನತೆಯ ಹಕ್ಕು ದಯಪಾಲಿಸಿದ ಹರಿಕಾರನೇ ಶಿವ ಎಂದು ಕಾಶೀಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪ್ರಾಚೀನ ಕಾಲದಲ್ಲಿ ಸರಸ್ವತಿಯು ಪತಿಯಲ್ಲಿ ತನ್ನ ಹಕ್ಕನ್ನು ಬೇಡಿದಾಗ ಬ್ರಹ್ಮನು ತನ್ನ ತುದಿನಾಲಿಗೆಯಲ್ಲಿ ಅವಳಿಗೆ ಸ್ಥಾನ ಕೊಟ್ಟನು. ಲಕ್ಷ್ಮೀದೇವಿಯು ವಿಷ್ಣುವಿನಲ್ಲಿ ತನ್ನ ಹಕ್ಕನ್ನು ಕೇಳಿದಾಗ ವಿಷ್ಣು ಭಗವಂತನು ಅವಳಿಗೆ ತನ್ನ ಎದೆಯಲ್ಲಿ ಸ್ಥಾನವನ್ನು ಅನುಗ್ರಹಿಸಿದನು. ಪಾರ್ವತಿಯು ಶಿವನಲ್ಲಿ ತನ್ನ ಹಕ್ಕನ್ನು ಕೇಳಿದಾಗ ಶಿವನು ಉದಾರವಾಗಿ ತನ್ನ ಅರ್ಧ ದೇಹವನ್ನೇ ಕೊಡುವುದರ ಮೂಲಕ ಸ್ತ್ರೀಯು ಪುರುಷನಿಗೆ ಸಮಾನಳೆಂಬ ಸಂದೇಶವನ್ನು ಜಗತ್ತಿಗೆ ಸಾರಿ ಹೇಳಿದ್ದಾನೆ. ಅಂತೆಯೇ ಶಿವನು ಸ್ತ್ರೀ ಸಮಾನತೆಯ ಹರಿಕಾರ ಎಂದರು.

'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರದೇವತಾಃ' ಎಂಬ ಉಕ್ತಿಗನುಸಾರವಾಗಿ ಯಾವ ಸ್ಥಾನದಲ್ಲಿ ಸ್ತ್ರೀಯರಿಗೆ ಮಾನ ಮರ್ಯಾದೆಗಳು ದೊರೆಯುವುದೊ ಅಲ್ಲಿಯೇ ದೇವತೆಗಳು ವಾಸವಿರುತ್ತಾರೆ. ಆದ ಕಾರಣ ಜಗತ್ತಿನಲ್ಲಿ ಪ್ರತಿಯೊಬ್ಬರು ತಾಯಿ, ತಂಗಿ, ಅಕ್ಕ ಮತ್ತು ಮಡದಿಯ ರೂಪದಲ್ಲಿರುವ ಪ್ರತಿಯೊಬ್ಬ ಸ್ತ್ರೀಯನ್ನೂ ಗೌರವಿಸುವ ಜಾಯಮಾನ ಬೆಳೆಸಿಕೊಳ್ಳಬೇಕು ಎಂದರು.

ಪ್ರಾಚೀನ ಸಂಸ್ಕೃತಿಯು ಮರೆಯಾಗುತ್ತಿರುವುದರಿಂದ ದೇಶದಲ್ಲಿ ಅನೇಕ ಅಪ್ರಿಯ ಘಟನೆಗಳು ನಡೆದು ದೇಶಕ್ಕೆ ಅವಮಾನದ ಪ್ರಸಂಗಗಳು ಎದುರಾಗುತ್ತಿವೆ ಎಂದು ಶ್ರೀಗಳು ಕಳವಳ ವ್ಯಕ್ತಪಡಿಸಿದರು.

ಸನಾತನ ವೀರಶೈವ ಧರ್ಮದಲ್ಲಿ ಮೊದಲಿನಿಂದಲೂ ಸ್ತ್ರೀಯರಿಗೆ ಸಾಮಾಜಿಕ ಮತ್ತು ಧಾರ್ಮಿಕ ಸಮಾನತೆಯ ಹಕ್ಕು ಕೊಡಲಾಗಿದೆ. ಸಿದ್ಧಾಂತ ಶಿಖಾಮಣಿಯಲ್ಲಿ ಲಿಂಗಧಾರಿಗಳೆಲ್ಲರೂ ಇಷ್ಟಲಿಂಗ ಪೂಜೆಯಲ್ಲಿ ವೇದದ ಪ್ರಮುಖ ಭಾಗವಾಗಿರುವ ಶ್ರೀರುದ್ರವನ್ನು ಪಠಿಸಬೇಕು. ಪಂಚಾಕ್ಷರ ಮಹಾಮಂತ್ರವನ್ನು ಜಪಮಾಡುವಂತೆ ಶ್ರೀ ರುದ್ರದ ಪಠಣವೂ ಜಪವೆಂದು ಹೇಳಿದರು.

ಶ್ರೀರುದ್ರವನ್ನು ಕಲಿಯುವುದರೊಂದಿಗೆ ಶ್ರೀಸಿದ್ಧಾಂತ ಶಿಖಾಮಣಿಯ ಸಂಸ್ಕೃತ ಶ್ಲೋಕಗಳನ್ನು ಕಲಿತು ಹಾಡಬೇಕು. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಹೊಣೆ ಹೆಣ್ಣುಮಕ್ಕಳ ಮೇಲೆ ಇರುತ್ತದೆ. ಕಾರಣ ಎಲ್ಲ ತಾಯಂದಿರು ತಾವು ಲಿಂಗಪೂಜೆಯನ್ನು ಮಾಡಿಕೊಳ್ಳುವಾಗ ತಮ್ಮ ಚಿಕ್ಕ ಚಿಕ್ಕ ಮಕ್ಕಳನ್ನು ಜೊತೆಗೆ ಕರೆದುಕೊಳ್ಳಬೇಕು. ಇದರಿಂದ ಬಾಲಕರ ಮನಸ್ಸಿಗೆ ಒಳ್ಳೆಯ ಸಂಸ್ಕಾರ ನೀಡಿದಂತಾಗುತ್ತದೆ. ಎಲ್ಲ ತಾಯಂದಿರೂ ತಮ್ಮ ಹೊಣೆಯನ್ನು ಸರಿಯಾಗಿ ನಿರ್ವಹಿಸಿದರೆ ಭಾರತದ ಗತಸಾಂಸ್ಕೃತಿಕ ವೈಭವವನ್ನು ಮರಳಿ ತರಬಹುದು ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

ಹೊಸ ಆವಿಷ್ಕಾರಗಳ ಬಗ್ಗೆ ವಿವರಿಸುತ್ತಾ ಯಾರು ಪ್ರಥಮ ಬಾರಿಗೆ ಅಪೂರ್ವವಾದದ್ದನ್ನು ಕಂಡುಹಿಡಿಯುವರೋ ಅವರಿಗೆ ಋಷಿಗಳೆಂದು ನಮ್ಮ ಭಾರತೀಯ ದರ್ಶನಗಳಲ್ಲಿ ಹೇಳಲಾಗಿದೆ. ಪತಂಜಲಿ ಋಷಿ–ಯೋಗ ಶಾಸ್ತ್ರವನ್ನು, ಕಪಿಲಋಷಿ–ಸಂಖ್ಯಾ ಶಾಸ್ತ್ರವನ್ನು, ಕಣಾದಋಷಿ ನ್ಯಾಯ ಶಾಸ್ತ್ರವನ್ನು, ಜೈಮಿನಿ ಮೀಮಾಂಸಾ ಶಾಸ್ತ್ರವನ್ನು ಜ್ಞಾನಗಳ ಮಾರ್ಗದರ್ಶನದಿಂದಲೇ ಇವುಗಳನ್ನು ಆವಿಷ್ಕಾರಮಾಡಿ ಜಗತ್ತಿಗೆ ಕೊಟ್ಟಿರುವುದನ್ನು ಹೇಳಿ, ಸಕಲ ಜ್ಞಾನಗಳ ಕೇಂದ್ರವಾಗಿರುವ ಶಿವನೊಂದಿಗೆ ಈ ಋಷಿಗಳು ಜ್ಞಾನಮಾರ್ಗದಿಂದ ಸಂಬಂಧಗೊಳಿಸಿದಾಗ ವಿವಿಧ ಶಾಸ್ತ್ರಗಳ ಆವಿಷ್ಕಾರಗಳಾದವು. ವಿಜ್ಞಾನಿಗಳ ಏಕಾಗ್ರತೆಗೆ ಮನಸ್ಸೇ ಕಾರಣ–ಏಕಾಗ್ರ ಮನಸ್ಸಿನಿಂದ ಇಂದಿನ ತಂತ್ರಜ್ಞಾನದ ಆವಿಷ್ಕಾರಗಳು ನಡೆದಿರುವುದನ್ನು ವಿವರಿಸಿದರು. ವಿಜ್ಞಾನಿಗಳು ಋಷಿಗಳಂತೆಯೇ ಎಂದೂ ತಿಳಿಸಿದರು.

ಏಕಾಗ್ರತೆಯನ್ನು ಸಾಧಿಸಿ ಲೋಕಕಲ್ಯಾಣದ ಹೊಸ ಹೊಸ ಆವಿಷ್ಕಾರಗಳನ್ನು ಮಾಡುವುದರ ಜೊತೆಗೆ ಆತ್ಮಸುಖವನ್ನು ಪಡೆದು ಕೃತಾರ್ಥರಾಗಬೇಕೆಂದು ಆಶೀರ್ವದಿಸಿದರು.

ಗದಗ್ ನಗರದ ಈ ಆಧ್ಯಾತ್ಮ ವೇದಿಕೆಯಿಂದ ಮಹಿಳೆಯರಿಗೆ ಉಡಿ ತುಂಬುವ ಸಮಾರಂಭವನ್ನು ಸಂಪೂರ್ಣವಾಗಿ ಮಹಿಳೆಯರೇ ನಡೆಸಿಕೊಟ್ಟರು. ಕಾರ್ಯಕ್ರಮದ ಪ್ರಾರ್ಥನೆ, ವೇದಘೋಷ, ಸ್ವಾಗತ, ನಿರೂಪಣೆ, ವಂದನಾರ್ಪಣೆ ಎಲ್ಲವನ್ನು ಮಹಿಳೆಯರೇ ನಡೆಸಿಕೊಟ್ಟಿದ್ದಲ್ಲದೆ ವೇದಿಕೆಯ ಮೇಲೆ ಕೂಡ ಮಹಿಳೆಯರೇ ಆಸೀನರಾಗಿದ್ದರು. ಇದೆಲ್ಲವನ್ನು ಗಮನಿಸಿದ ಜಗದ್ಗುರುಗಳು ಸ್ತ್ರೀಸಮಾನತೆಯ ಬಗ್ಗೆ ಮನೋಜ್ಞವಾಗಿ ತಿಳಿಯ ಹೇಳಿದರು.

ನೂತನ ಆವಿಷ್ಕಾರಕ್ಕೆ ಧ್ಯಾನವೇ ಮೂಲ.

ವಿ.ಕ ಸುದ್ದಿಲೋಕ 24–7–13

ಶ್ರೀ ಸಿದ್ಧಾಂತ ಶಿಖಾಮಣಿ–ಶೂನ್ಯಸಂಪಾದನೆ ಕರ್ತೃಗಳು ಸಮನ್ವಯಕಾರರು : ಕಾಶೀ ಜಗದ್ಗುರುಗಳು

ಕಾಶೀ ಶ್ರೀಗಳವರ ಸಮನ್ವಯದ ಹರಿಕಾರರಾಗಿ ಸಮನ್ವಯದ ತೋಟ ನಿರ್ಮಿಸಿ ಅದರಲ್ಲಿ ಅದೆಷ್ಟೋ ಬಗೆಯ ಸಸಿ ನೆಡುತ್ತಾ ಬಂದರು. 2005ರ ನವೆಂಬರ 15ರಂದು ಶೂನ್ಯಸಂಪಾದನೆ ಸಸಿಯನ್ನು ನೆಟ್ಟು ಹತ್ತು ದಿನಗಳ ಕಾಲ ಅದನ್ನು ರಕ್ಷಿಸಿ–ಪೋಷಿಸಿ ಬೆಳೆಸಿದರು. ಇದು ನಡೆದದ್ದು ಮಹಾಲಿಂಗಪುರದಲ್ಲಿ, ನಿಜವಾದ ಅರ್ಥದಲ್ಲಿ ಈ ಸಮಾರಂಭ ಸಮನ್ವಯಾತ್ಮಕವಾಗಿತ್ತು. ದೀಪ ಬೆಳಗಿಸಿ ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ಶೂನ್ಯಸಂಪಾದನೆ ಕುರಿತು 10 ದಿನಗಳ ಪ್ರವಚನ ಕಾರ್ಯವನ್ನು ಉದ್ಘಾಟಿಸಿದ್ದು ಕೆರೂರ ಚರಂತಿಮಠದ ಡಾ. ಶಿವಕುಮಾರ ಸ್ವಾಮಿಗಳಾದರೆ, ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಶ್ರೀ ಸಹಜಾನಂದ ಸ್ವಾಮೀಜಿಗಳು. ಅತಿಥಿಯಾಗಿ ಆಗಮಿಸಿದ್ದವರು ಇಬ್ರಾಹಿಂ ಸುತಾರ. ಸಾನ್ನಿಧ್ಯ–ಕಾಶೀ ಜಗದ್ಗುರುಗಳದ್ದು. ಪೀಠದಾಳದ ಶ್ರೀ ಮಹಾಂತ ದೇವರು ಸಭೆಯನ್ನುದ್ದೇಶಿಸಿ ಮಾತನಾಡಿದ್ದು ಎಲ್ಲವೂ ವಿಶೇಷ ರೀತಿಯಲ್ಲಿ ಏರ್ಪಡಿಸಿ ಸರ್ವ ಧರ್ಮ ಸಮನ್ವಯದ ವೇದಿಕೆಯನ್ನಾಗಿಸಿದ್ದು ಜಗದ್ಗುರುಗಳಿಗೆ ಬಹು ಸಂತೋಷ ತಂದಿತು.

‘ಧರ್ಮ, ಪರಂಪರೆಗಳಿಗೆ ವೇದ ಆಗಮಗಳೇ ಮೂಲ.’

ಪ್ರಜಾವಾಣಿ, 16–11–2005



ಮಹಾಲಿಂಗಪುರದ ಶ್ರೀ ಚನ್ನಗಿರೀಶ್ವರ ಗಡಾದಲ್ಲಿ ಕಾಶೀ 1008 ಜಗದ್ಗುರು, ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ 17ನೇ ಪಟ್ಟಾಭಿಷೇಕ ವರ್ಧಂತಿ ಮಹೋತ್ಸವ ಮತ್ತು ಶ್ರೀ ಸಿದ್ಧಾಂತ ಶಿಖಾಮಣಿ, ಶೂನ್ಯ ಸಂಪಾದನೆ ಕುರಿತು 10 ದಿನಗಳ ಪ್ರವಚನ, ಲಿಂಗದೀಕ್ಷಾ ಕಾರ್ಯಕ್ರಮವನ್ನು ಕೆರೂರ ಚರಂತಿಮಠದ ಡಾ. ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಸಹಜಾನಂದ ಸ್ವಾಮೀಜಿ, ಶರಣ ಇಬ್ರಾಹಿಂ, ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು, ಲಕ್ಕಪ್ಪ ಚಮಕೇರಿ, ಮಲ್ಲಪ್ಪ ಬಾವಿಕಟ್ಟಿ ಇದ್ದಾರೆ.

ಈ ಉದ್ಘಾಟನಾ ಸಭೆಯಲ್ಲಿ ಜಗದ್ಗುರುಗಳು ಹೇಳಿದ್ದು ಭಾರತೀಯ ಸಂಸ್ಕೃತಿಗೆ ಯಾವುದೇ ಧರ್ಮ ಪರಂಪರೆಗಳಿಗೆ ವೇದ ಆಗಮಗಳೇ ಮೂಲ, ವೇದ ಆಗಮ ಉಪನಿಷತ್ತು, ಪುರಾಣ, ದ್ವೈತ, ವಿಶಿಷ್ಟಾದ್ವೈತ, ಅದ್ವೈತ–ಹೀಗೆ ಎಲ್ಲವನ್ನೂ ಸ್ವೀಕರಿಸಿ ತನ್ನದಾಗಿಸಿಕೊಂಡು ತನ್ನದೇ ರೀತಿಯಲ್ಲಿ ಸೃಷ್ಟಿಯಾದ ಸಮನ್ವಯ ಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿ–ಈ ಗ್ರಂಥ ವೀರಶೈವ– ಲಿಂಗಾಯತರಿಗೆ ಅಧಿಕೃತ ಧರ್ಮ ಗ್ರಂಥವಾಗುವುದು ಎಂದು ಸಮನ್ವಯ ಆಶೀರ್ವಚನ ವೇದಿಕೆಯಲ್ಲಿ ತಿಳಿಸಿದರು.

ತ್ಯಾಗದಿಂದಲೇ ಜೀವನು ದೇವನಾಗುವನು ಕಾಶೀ ಶ್ರೀಗಳು

ಸಂ.ಕ. 19–11–05

ಹತ್ತು ದಿನಗಳ ಕಾಲ ಸಿದ್ಧಾಂತ ಶಿಖಾಮಣಿಯಲ್ಲಿ ಹಾಗೂ ಶೂನ್ಯಸಂಪಾದನೆಯಲ್ಲಿ ಬರುವ ವಿಷಯಗಳಲ್ಲಿ ಯಾವುದೇ ದ್ವಂದ್ವಗಳಿಲ್ಲ ಎಂದು ಹೇಳಿ 'ಸಂಸಾರ ಹೇಯ' ಸ್ಥಲದ ಬಗ್ಗೆ ವಿವರಣೆ ನೀಡಿ ಈ ಮೋಹ ತ್ಯಾಗಕ್ಕೆ, ಶೂನ್ಯಸಂಪಾದನೆಯಲ್ಲಿ 'ಮಾಯಾ ವಿಲಾಸ ವಿಡಂಬನೆ' ಅಥವಾ 'ಜೀವ ಭ್ರಾಂತಿ ನಿರಸನ' ಸ್ಥಲ ಎಂದು ಹೇಳಲಾಗಿರುವುದನ್ನು ವಿವರಣಾತ್ಮಕವಾಗಿ ತಿಳಿಸಿದರು. ಸಂಸಾರ ಹೇಯಸ್ಥಲದ ಬಗ್ಗೆ 17–7–1999ರಲ್ಲೇ ಗದಗ್‌ನಲ್ಲಿ ಆಶೀರ್ವಚನ ನೀಡಿದ್ದರು. ಕ್ಷಣಿಕ ಸುಖಗಳು ಕ್ಷಣಮಾತ್ರ ಇರುವಂತಹದ್ದು, ವಿವೇಕಿಯಾದವರು ಇಹಲೋಕ ಪರಲೋಕ ಸುಖ ಬಯಸದೆ ತನ್ನದೇ ಆದ ಆತ್ಮಸುಖವನ್ನು ಬಯಸಬೇಕು ಎಂದು ಹೇಳಿದ್ದರು.

ಮಮಕಾರ, ಅಹಂಕಾರ ತ್ಯಜಿಸುವುದೇ ಸಂಸಾರ ಹೇಯಸ್ಥಲ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

ನಾಗರಿಕ, 17–7–1999



ಗದಗಿನಲ್ಲಿ ಕಾಶೀ ಜಗದ್ಗುರುಗಳವರಿಂದ ಸಿದ್ಧಾಂತ ಶಿಖಾಮಣಿಯ ಭಕ್ತಸ್ಥಲ ಆಧ್ಯಾತ್ಮಿಕ ಆಶೀರ್ವಚನ ನೀಡಿದರು. ಚಿತ್ರದಲ್ಲಿ ಪಂ. ಪುಟ್ಟರಾಜ ಕವಿ ಗವಾಯಿಗಳವರು, ಹಿಪ್ಪರಗಿಯ ಶ್ರೀ ಸಿದ್ಧರಾಮ ದೇವರು, ಹಿರೇವಡ್ಡಟ್ಟಿ ಹಾಗೂ ಆಡ್ನೂರ ಪಟ್ಟಾಧ್ಯಕ್ಷರು, ಹಾಗೂ ಎಸ್.ವ್ಹಿ. ಕೂಗು ಅವರನ್ನು ಕಾಣಬಹುದು.


ಗದಗ, 16– ನಮ್ಮನ್ನು ಯಾವುದು ಕಟ್ಟಿ ಹಾಕುವುದೋ ಅದೇ ಸಂಸಾರ. ಅಲ್ಲಿ ಮಮಕಾರ ಬರುತ್ತದೆ. ಜೀವಾತ್ಮನಿಗೆ ಯಾವಾಗ ನನ್ನದು ಎಂಬ ಸ್ವಾರ್ಥ ಬರುತ್ತದೆಯೋ ಅದೇ ಬಂಧನ. ಮಮಕಾರವೇ ಬಂಧನ. ಇಂತಹ ಸಂಸಾರದಲ್ಲಿದ್ದರೂ ಮಮಕಾರ, ಅಹಂಕಾರವನ್ನು ತ್ಯಜಿಸುವುದೇ ಸಂಸಾರದ ಹೇಯಸ್ಥಲ ಎಂದು ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ಜ.ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಅವರು ಇಲ್ಲಿಯ ಎ.ಪಿ.ಎಂ.ಸಿ. ಯಾರ್ಡಿನಲ್ಲಿರುವ ಕೃಷಿ ಕ್ಷೇಮಾಭಿವೃದ್ಧಿ ಕೇಂದ್ರದಲ್ಲಿ ಸಿದ್ಧಾಂತ ಶಿಖಾಮಣಿಯ ಭಕ್ತಸ್ಥಲ ಆಧ್ಯಾತ್ಮಿಕ ಆಶೀರ್ವಚನದಲ್ಲಿ ಸಂಸಾರ ಹೇಯಸ್ಥಲದ ಬಗ್ಗೆ ಮಾತನಾಡುತ್ತ, 101 ಸ್ಥಲಗಳಲ್ಲಿ ಸಂಸಾರ ಹೇಯಸ್ಥಲವೇ ಮೂರನೆಯದು ಎಂದು ನುಡಿದರಲ್ಲದೇ ಮನುಷ್ಯ ಸಂಸಾರವೆಂದರೆ ಹೆಂಡತಿ, ಮಕ್ಕಳು ಹಾಗೂ ವ್ಯಾಪಾರವೆಂದು ತಿಳಿದಿದ್ದರಿಂದಲೇ ತನ್ನ ಆಧ್ಯಾತ್ಮ ಶಕ್ತಿಯನ್ನು ಕಳೆದುಕೊಂಡಿದ್ದಾನೆ ಎಂದರು.

ಉಪನಿಷತ್–ಪೂರ್ಣತ್ವದ ಪ್ರಾಪ್ತಿ ಹೇಳಿದರೆ, ಶಿವಾಗಮಗಳು ಶೂನ್ಯತ್ವದ ಪ್ರಾಪ್ತಿ ಬಗ್ಗೆ ಪ್ರತಿಪಾದಿಸಿವೆ. ಎರಡೂ ಬೇರೆಯಲ್ಲ. ವೀರಶೈವ ಧರ್ಮ–ದರ್ಶನಗಳಿಗೆ ಶಿವಾಗಮಗಳೇ ಮೂಲ ಸಾಹಿತ್ಯ, ಹೀಗಾಗಿ ಸಿದ್ಧಾಂತ ಶಿಖಾಮಣಿಯಾಗಲಿ, ಶೂನ್ಯ ಸಂಪಾದನೆಯಾಗಲಿ ಎರಡಕ್ಕೂ ಶಿವಾಗಮಗಳೇ ಮೂಲವೆಂದು ತಿಳಿಸಿದರು. ಈ ಎರಡೂ ಕೊನೆಯಲ್ಲಿ ಶೂನ್ಯಸಿದ್ಧಾಂತವನ್ನೇ ಪ್ರತಿಪಾದಿಸುವುದರಿಂದ ಸಾಧಕರು ಎರಡನ್ನು ಸಮಾನ ದೃಷ್ಟಿಯಿಂದ ಗ್ರಹಿಸಬೇಕಾಗಿದೆ ಎಂದು ಉಪದೇಶ ನೀಡಿದರು.

19–11–2005 : ಪ್ರಥಮ ಬಾರಿಗೆ ಸಿದ್ಧಾಂತ ಶಿಖಾಮಣಿ ಹಾಗೂ ಶೂನ್ಯಸಂಪಾದನೆಗಳೆರಡೂ ಒಂದೇ ಎಂದೂ, ಎರಡೂ ಗ್ರಂಥಗಳ ಸಮನ್ವಯ ಸಾರವನ್ನು ಧರ್ಮ ವೇದಿಕೆಯ ಪ್ರವಚನಗಳ ಮೂಲಕ ಮಾಡುತ್ತಿದ್ದಾರೆ ಜಗದ್ಗುರುಗಳು. ಆಚಾರ್ಯರು ಸಂಸ್ಕೃತ ಭಾಷೆ ಬಳಸಿ ತತ್ತ್ವ ಹೇಳಿದರೆ ಶರಣರು ಆಡುಭಾಷೆಯಲ್ಲಿ ಹೇಳಿದ್ದಾರೆ–ಎರಡರ ಸಾರವೂ ಒಂದೇ ಎಂದು ತಿಳಿಸಿ–ಇಂದು ಶೂನ್ಯಸಂಪಾದನೆಯ ರಚನೆಯ ಬಗ್ಗೆ ಅಲ್ಲಿನ ಸ್ಥಲಕಟ್ಟಿನ ಬಗೆಗೆ ಕೃತಿ ರಚನಾಕಾರರ ಬಗ್ಗೆ ವಿವರಿಸುತ್ತಾ ಈ ರೀತಿ ಎರಡೂ ಧಾರ್ಮಿಕ ಗ್ರಂಥಗಳ ಬಗ್ಗೆ ಒಬ್ಬರೇ ಪ್ರವಚನ ಮಾಡಿದಾಗ ಭಿನ್ನತೆ ದೂರವಾಗುತ್ತದೆ. ಸಿದ್ಧಾಂತ ಶಿಖಾಮಣಿ ಸಿದ್ಧಾಂತ ಗ್ರಂಥವಾದರೆ, ಶೂನ್ಯಸಂಪಾದನೆ ಅನುಭವ ಗ್ರಂಥವಾಗಿದೆ. ಸಂಶೋಧಕರು ಈ ನಿಟ್ಟಿನಲ್ಲಿ ಕಾರ್ಯಮಾಡಿ ಗೊಂದಲಗಳನ್ನು ನಿವಾರಿಸಿದಲ್ಲಿ ನಿಜ ಸ್ವರೂಪದ ಮೇಲೆ ಬೆಳಕು ಚೆಲ್ಲಿ ಸಮಾಜದಲ್ಲಿ ಶಾಂತಿ, ನೆಮ್ಮದಿ ಮೂಡುತ್ತದೆ ಎಂಬ ಆಶಯ ವ್ಯಕ್ತಪಡಿಸಿದರು.

ತ್ಯಾಗದಿಂದಲೇ ಜೀವನು ದೇವನಾಗುವನು– ಕಾಶೀ ಶ್ರೀಗಳು



ಮಹಾಲಿಂಗಪುರ, 18–ತ್ಯಾಗ ಗುಣದಿಂದಲೇ ಜೀವಾತ್ಮನು ದೇವ ನಾಗುವನು ಎಂಬ ವಿಚಾರವನ್ನು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಆಶೀರ್ವಚನದಲ್ಲಿ ಅಪ್ಪಣೆ ಕೊಡಿಸಿದರು.


ಶ್ರೀ ಕಾಶೀ ಜಗದ್ಗುರುಗಳವರ ಪೀಠಾರೋಹಣದ ಹದಿನೇಳನೇ ವರ್ಷದ ವರ್ಧಂತಿ ಮಹೋತ್ಸವದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ಶೂನ್ಯ ಸಂಪಾದನೆಗಳ ಸಮನ್ವಯ ಆಶೀರ್ವಚನ ವೇದಿಕೆಯಲ್ಲಿ "ಸಂಸಾರಹೇಯ" ಸ್ಥಲವನ್ನು ಕುರಿತು ಶ್ರೀ ಜಗದ್ಗುರುಗಳವರು ಉಪನ್ಯಾಸ ನೀಡುತ್ತಾ 'ತ್ಯಾಗ'ದ ಮಹತಿಯನ್ನು ಜನರಿಗೆ ತಿಳಿಯಪಡಿಸಿದರು.

ಮನುಷ್ಯನಲ್ಲಿ ಇರಬೇಕಾದ ಅನೇಕ ಸದ್ಗುಣಗಳಲ್ಲಿ 'ತ್ಯಾಗ'ವು ಸರ್ವ ಶ್ರೇಷ್ಠವಾದದ್ದು. ತ್ಯಾಗದಿಂದಲೇ ಪಶು, ಪಾಷಾಣ, ವೃಕ್ಷ, ನದಿ ಮುಂತಾದವುಗಳು ದೇವರಂತೆ ಪೂಜೆಗೊಳ್ಳುತ್ತವೆ. ಆದ್ದರಿಂದ ಮನುಷ್ಯನು ಜೀವತ್ವವನ್ನು ತೊರೆದು ದೇವತ್ವವನ್ನು ಪಡೆಯಬೇಕಾದರೆ ಸಂಸಾರದಲ್ಲಿಯ ಮೋಹವನ್ನು ತ್ಯಾಗಮಾಡಬೇಕಾಗುವುದು. ಈ ಮೋಹ ತ್ಯಾಗಕ್ಕೇನೆ "ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ "ಸಂಸಾರ ಹೇಯ" ಸ್ಥಲವೆಂದು ಕರೆದರೆ "ಶೂನ್ಯ ಸಂಪಾದನೆಯಲ್ಲಿ" ಅದನ್ನೇ "ಮಾಯಾ ವಿಲಾಸ ವಿಡಂಬನೆ" ಅಥವಾ "ಜೀವ ಭ್ರಾಂತಿ ನಿರಸನ" ಸ್ಥಲವೆಂಬುದಾಗಿ ಹೇಳಲಾಗಿದೆ.

ಉಪನಿಷತ್ತುಗಳು ಸಾಧಕರಿಗೆ ಪೂರ್ಣತ್ವದ ಪ್ರಾಪ್ತಿಯನ್ನು ಉಪದೇಶಿಸಿದೆ. ಶಿವಾಗಮಗಳು ಶೂನ್ಯತ್ವದ ಪ್ರಾಪ್ತಿಯ ಬಗ್ಗೆ ಪ್ರತಿ ಪಾದಿಸಿವೆ. ಉಪನಿಷತ್ತಿನ ಆ ಪೂರ್ಣತೆಯು ಮತ್ತು ಶಿವಾಗಮಗಳ ಆ ಶೂನ್ಯ ಸ್ಥಿತಿಯು ಎರಡೂ ಒಂದೇ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ವೀರಶೈವ ಧರ್ಮದರ್ಶನಗಳಿಗೆ ಶಿವಾಗಮಗಳೇ ಮೂಲಸಾಹಿತ್ಯವಾಗಿವೆ. ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ಶರಣರ ಅನುಭಾವ ಸಾಹಿತ್ಯವಾದ ಶೂನ್ಯ ಸಂಪಾದನೆಗಳಿಗೆ ಶಿವಾಗಮಗಳೇ ಮೂಲವಾದ್ದರಿಂದ ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ಶೂನ್ಯಸಂಪಾದನೆಗಳು ಶಿವಾಗಮಗಳ ಆ ಕೊನೆಯ 'ಶೂನ್ಯಸಿದ್ಧಾಂತ'ವನ್ನೇ ಪ್ರತಿಪಾದಿಸುತ್ತವೆ. ಆದ್ದರಿಂದ ಇವೆರಡೂ ಸಾಹಿತ್ಯವನ್ನು ಸಾಧಕರು ಸಮಾನ ದೃಷ್ಟಿಯಿಂದಲೇ ಗ್ರಹಿಸಬೇಕು. ಇವೆರಡೂ ಗ್ರಂಥಗಳಲ್ಲಿ ಜೀವನು ಶಿವನಾಗಬೇಕಾದರೆ ತ್ಯಾಗವೇ ಪ್ರಧಾನವೆಂಬುದನ್ನು ಪ್ರತಿಪಾದಿಸಿದೆ.

ಆದ್ದರಿಂದ ಸಾಂಸಾರಿಕಮೋಹ ತ್ಯಾಗದಿಂದಲೇ ಜೀವನು ಶಿವನಾಗುವನೆಂಬ ಸಮನ್ವಯ ವಿಚಾರವನ್ನು ಅವರು ವ್ಯಕ್ತಪಡಿಸಿದರು.

ಸಿದ್ಧಾಂತ ಶಿಖಾಮಣಿ, ಶೂನ್ಯಸಂಪಾದನೆಗಳ ಸಮನ್ವಯತೆಗೆ ಯತ್ನ



22–11–05ರಂದು ಜಗದ್ಗುರುಗಳ 17ನೇ ಪಟ್ಟಾಭಿಷೇಕದ ವರ್ಧಂತಿ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸಲಾಯ್ತು. ಜಗದ್ಗುರುಗಳ ತುಲಾಭಾರವನ್ನು ಜೈನಧರ್ಮದ ಮುಖಂಡರಾದ ಡಾ॥ ಜಯಪಾಲ ಯಲ್ಲಟ್ಟಿ ನೆರವೇರಿಸಿದ್ದು ಒಂದು ವಿಶೇಷವಾದರೆ, ಸಾಮೂಹಿಕ ಲಿಂಗಪೂಜೆಗಾಗಿ ಪರಸ್ಥಳದಿಂದ ಬರುವ ಭಕ್ತಾದಿಗಳಿಗೆ ಇಸ್ಲಾಂ ಧರ್ಮದವರು ಉಚಿತ ಪ್ರಸಾದದ ವ್ಯವಸ್ಥೆ ಮಾಡಿದ್ದುದು ಮತ್ತೊಂದು ವಿಶೇಷ ಸಂಗತಿಯಾಗಿತ್ತು. ಕಾಶೀ ಜಗದ್ಗುರುಗಳ 17ನೇ ವರ್ಧಂತಿ ಉತ್ಸವದಂಶವಾಗಿ ತುಲಾಭಾರವನ್ನು ಜೈನ ಧರ್ಮೀಯರಾದ ಜಯಪಾಲ ಯಲ್ಲಟ್ಟಿ ದಂಪತಿಗಳು ನೆರವೇರಿಸಿಕೊಟ್ಟರು. ತುಲಾಭಾರ ಸ್ವೀಕರಿಸಿದ ಜಗದ್ಗುರುಗಳು ಆಶೀರ್ವಚನದಲ್ಲಿ ಕೋಮು ಸೌಹಾರ್ದತೆಯಿಂದ ವಿಶ್ವಶಾಂತಿ ಸಾಧ್ಯ. ಇಂದು ಜಗತ್ತಿನಲ್ಲಿ ಅಶಾಂತಿ, ಗೊಂದಲಗಳು ವ್ಯಾಪಿಸಿದ್ದು ಇದರ ನಿವಾರಣೆಗೆ ಸೂಕ್ತ ಮದ್ದೆಂದರೆ ಸ್ವಧರ್ಮನಿಷ್ಠೆ ಹಾಗೂ ಪರಧರ್ಮ ಸಹಿಷ್ಣುತೆ ಆಗಿದೆ. ಪರಸ್ಪರ ಸೌಹಾರ್ದ ಇಂದು ತೀರ ಅನಿವಾರ್ಯವೆಂದು ತಿಳಿಸಿದರು.

ಕೋಮು ಸೌಹಾರ್ದತೆಯಿಂದ ವಿಶ್ವ ಶಾಂತಿ ಸಾಧ್ಯ : ಕಾಶೀ ಜಗದ್ಗುರುಗಳು

ಉಷಾಕಿರಣ, 23–11–2005



ಜೈನರು, ಮುಸ್ಲಿಮರು, ವೀರಶೈವರು ಎಲ್ಲರೂ ಸೇರಿರುವುದನ್ನು ಕಂಡು ಅಲ್ಲಿನವರೆಲ್ಲರನ್ನು ಶ್ಲಾಘಿಸಿ–ಹಿಂದು ಮುಸ್ಲಿಂ ಭಾವೈಕ್ಯತೆಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ ಎಂದು ಕೇಳಿದರು.

ಮಹಾಲಿಂಗಪುರದಿಂದಲೇ ಭಾವೈಕ್ಯತಾ ಕ್ರಾಂತಿ ಆರಂಭವಾಗಲಿ : ಡಾ. ಚಂದ್ರಶೇಖರ ಶಿವಾಚಾರ್ಯರು

ಪ್ರಜಾವಾಣಿ 22–11–2005

ತ್ಯಾಗದಿಂದಲೇ ದೇವತ್ವ ಲಭ್ಯ : ಕಾಶೀ ಜಗದ್ಗುರು

ಮೇಲಿನ ಎರಡೂ ಗ್ರಂಥಗಳಲ್ಲಿ ಬರುವ ಸಂಸಾರ ಹೇಯಸ್ಥಲ ಮತ್ತು ಮಾಯಾವಿಲಾಸ ವಿಡಂಬನೆ ಕುರಿತು ಇನ್ನಷ್ಟು ವಿವರಿಸುತ್ತಾ ವಿವೇಕರಹಿತನು ವಿಷಯಗಳಲ್ಲಿ ಆಸಕ್ತನಾಗಿ ಮನಸ್ಸಿಗೆ ಮೇಲಿಂದ ಮೇಲೆ ವಿಷಯಗಳನ್ನು ಒದಗಿಸಿದರೂ ಅದು ತೃಪ್ತವಾಗುವುದಿಲ್ಲ. ಮನಸ್ಸನ್ನು ತೃಪ್ತಿಪಡಿಸುವ ಸಲುವಾಗಿ ಜೀವಾತ್ಮನು ಅನೇಕ ಸ್ಥೂಲ ಶರೀರಗಳನ್ನು ಹಾಳುಮಾಡಿಕೊಳ್ಳಬೇಕಾಗುತ್ತದೆ. ಈ ವಿಷಯವಾಗಿ ಪ್ರಭುದೇವರು ಶೂನ್ಯಸಂಪಾದನೆಯಲ್ಲಿ ಮನಸ್ಸನ್ನು ಉದಕವೆಂದು ಸಂಕೇತಿಸಿ ಅದು ಯಾವಾಗಲೂ ಬಾಯಾರಿಕೆಯಿಂದ ಬಳಲುತ್ತಿರುತ್ತದೆ. ಅದನ್ನು ತೀರಿಸಲು ಅರಗಿನ ಪುತ್ಥಳಿಯೋಪಾದಿಯಲ್ಲಿ ಅದೆಷ್ಟು ಸ್ಥೂಲದೇಹಗಳು ಕರಗಿ ಹೋಗಿವೆಯೋ ಎಂದು ಚಿಂತಿಸಿದ್ದಾರೆ.

ಮನಸ್ಸನ್ನು ತೃಪ್ತಿಪಡಿಸಬೇಕಾದರೆ ಸಾಧಕರು ವಿಷಯಗಳಿಂದ ವಿರಕ್ತಿ ಹೊಂದಿ ಆತ್ಮರತಿಯಾಗಿ ಭಗವಂತನಲ್ಲಿ ಭಕ್ತಿ ಇರಿಸಬೇಕೆಂದು ವಿವರಣೆ ನೀಡಿದರು.

ದೀಕ್ಷೆಯಿಂದಲೇ ಸಾಧನೆ ಆರಂಭ

ಕರ್ನಾಟಕ ಟೈಮ್ಸ್ 26–11–05

ಮನುಷ್ಯ ಮಲತ್ರಯಗಳಿಂದ (ಆಣವ, ಮಾಯಾ, ಕಾರ್ಮಿಕ) ಆವೃತ್ತನಾಗಿರುವುದರಿಂದ ಸಂಸಾರದಲ್ಲಿ ಮುಳುಗಿ ದುಃಖಿತನಾಗುತ್ತಾನೆ. ಶಿವನ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳು ಸಂಕೋಚಗೊಂಡಾಗ ಮಲತ್ರಯ ಉಂಟಾಗುವುದು. ಜೀವಾತ್ಮನಿಗೆ ಅಪೂರ್ಣತಾಭಾವ ಉಂಟಾಗಲು ಕಾರಣ ಆಣವಮಲ; ಮನುಷ್ಯನಲ್ಲಿ ಭೇದಬುದ್ಧಿಯನ್ನು ಹುಟ್ಟಿಸಿ ಅವನ ಜೀವನದಲ್ಲಿ ಅಶಾಂತಿ ಮೂಡಲು ಕಾರಣ 'ಮಾಯಾಮಲ'; ಜೀವಾತ್ಮನನ್ನು ಕರ್ಮಗಳಿಗೆ ನೂಕಿ ಶುಭಾಶುಭವಾಗಲು ಕಾರಣ 'ಕಾರ್ಮಿಕಮಲ' ಈ ಮಲತ್ರಯಗಳನ್ನೇ ಪಾಶವೆನ್ನಲಾಗಿದೆ. ಪಾಶದಿಂದಲೇ ಮಾನವ ಪಶುವಿನಂತೆ ವ್ಯವಹರಿಸುತ್ತಾನೆ. ಅನೇಕ ಜನ್ಮಗಳಲ್ಲಿ ಮಾಡಿರುವ ಶುಭ ಕರ್ಮ ಫಲಗಳಿಂದ ಮನಸ್ಸು ಪವಿತ್ರವಾಗಿ ನಿತ್ಯಾನಿತ್ಯದ ವಿವೇಕ ಹುಟ್ಟಿ ಭಕ್ತಿ ಹುಟ್ಟಿದಾಗ ಸಂಸಾರದ ಬಗ್ಗೆ ಹೇಯಬುದ್ಧಿ ಹುಟ್ಟುವುದು. ಶಿವನಲ್ಲಿ ಭಕ್ತಿಗೇ ಶಕ್ತಿಪಾತವೆನ್ನಲಾಗಿದೆ. ಶಕ್ತಿಪಾತವಾದ ಮನಸ್ಸು ಯೋಗ್ಯ ಗುರುವನ್ನು ಅರಸಿ ಶರಣಾಗುವುದು. ಮೇಲಿನ ಮೂರು ಮಲಗಳಿಂದ ಮುಕ್ತನಾಗಲು ಜೀವಿಗೆ 'ವೇಧಾ ದೀಕ್ಷೆ' 'ಮಂತ್ರ ದೀಕ್ಷೆ' 'ಕ್ರಿಯಾ ದೀಕ್ಷೆ'ಯನ್ನು ಗುರುವು ಅನುಗ್ರಹಿಸುತ್ತಾನೆ.

ಸದ್ಗುರುವು ತನ್ನ ಬಲಹಸ್ತವನ್ನು ಶಿಷ್ಯನ ಮಸ್ತಕದ ಮೇಲಿರಿಸಿ ಕೃಪಾದೃಷ್ಟಿಯಿಂದ ಅವನನ್ನು ನೋಡುತ್ತಾ 'ನೀನು ಸಾಕ್ಷಾತ್ ಶಿವಸ್ವರೂಪವೇ ಆಗಿರುವಿ' ಎಂದು ಶಿವತ್ವವನ್ನು ಸಮಾವೇಶಗೊಳಿಸುವುದೇ 'ವೇಧಾ ದೀಕ್ಷೆ' ಅದರಂತೆ ಪಂಚಾಕ್ಷರ ಮಹಾಮಂತ್ರ ಬೋಧಿಸಿ ಮಂತ್ರಾರ್ಥವನ್ನು ತಿಳಿಸಿ ಜಪವಿಧಾನವನ್ನು ತಿಳಿಸುವುದೇ 'ಮಂತ್ರ ದೀಕ್ಷೆ' ಇನ್ನು ಪಂಚಸೂತ್ರ ನಿರ್ಮಿತವಾದ ಇಷ್ಟಲಿಂಗವನ್ನು ಶುದ್ಧೀಕರಿಸಿ ಶಿಷ್ಯನನ್ನು ಪ್ರೋಕ್ಷಣಾದಿಗಳಿಂದ ಪವಿತ್ರಗೊಳಿಸಿ ಇಷ್ಟಲಿಂಗವೇ ತನ್ನ ಆತ್ಮರೂಪವೆಂದು ಹೇಳಿ ಪೂಜಿಸುವ ವಿಧಾನವನ್ನು ತಿಳಿಸುವುದೇ 'ಕ್ರಿಯಾ ದೀಕ್ಷೆ'.

ಸಾಧನೆಗೆ ದೀಕ್ಷಾ ಸಂಸ್ಕಾರ ಬೇಕು

ವಿಜಯ ಕರ್ನಾಟಕ 24–11–05

ಆದ್ದರಿಂದ ಶಿವಾಗಮಗಳು ಸಿದ್ಧಾಂತ ಶಿಖಾಮಣಿ ಮತ್ತು ಶೂನ್ಯಸಂಪಾದನೆಗಳು ಶಿಷ್ಯನ ಶಕ್ತಿಪಾತವನ್ನು ಪರೀಕ್ಷಿಸಿಯೇ ದೀಕ್ಷೆ ಅನುಗ್ರಹಿಸಬೇಕೆಂದೂ ಯೋಗ್ಯನಾದ ವ್ಯಕ್ತಿ ಯಾವುದೇ ವರ್ಗ, ವರ್ಣ, ಜಾತಿ, ಲಿಂಗ ಭೇದಗಳಿದ್ದರೂ ಅವನು ದೀಕ್ಷೆಗೆ ಅರ್ಹನೆಂದು ವೀರಶೈವ ಧರ್ಮದಲ್ಲಿ ಪ್ರತಿಪಾದಿಸಿರುವ ಕ್ರಮವನ್ನು ಸರಳವಾಗಿ ಸಾಮಾನ್ಯ ಜನರಿಗೂ ತಿಳಿಯುವಂತೆ ಅರ್ಥೈಸಿ ಜಗದ್ಗುರುಗಳು ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ಶೂನ್ಯಸಂಪಾದನೆಗಳಲ್ಲಿರುವ ಸಮನ್ವಯ ವಿಚಾರವನ್ನು ತಿಳಿಸಿದರು. ಈ ಕಾರಣದಿಂದಲೇ ಎಂದರೆ ಭಾವೈಕ್ಯ ಹಾಗೂ ಸಿದ್ಧಾಂತಗಳ ಸಮನ್ವಯಕಾರರಾಗಿ ಜಗದ್ಗುರುಗಳು ಭಕ್ತರನುರಾಗಿಯಾಗಿದ್ದಾರೆ.

ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಸರಿಯಾಗಿ ಅಧ್ಯಯನ ಮಾಡದೆ ಅದರ ಕುರಿತು ವಿಮರ್ಶಾತ್ಮಕವಾದ ಹೇಳಿಕೆಗಳನ್ನು ಪ್ರಚಾರದ ಸಲುವಾಗಿಯೋ ರಾಜಕೀಯ ಒತ್ತಡದಿಂದಲೋ ಪತ್ರಿಕೆಗಳಲ್ಲಿ ನೀಡುತ್ತಾ ಬಂದಿರುವುದನ್ನು ನೋಡಿದರೆ ಈ ಗ್ರಂಥದಲ್ಲಿರುವ ಸಿದ್ಧಾಂತ ತತ್ತ್ವಗಳು ಅವರಿಗೆ ಅರ್ಥವಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಕೃತಿಯನ್ನು ವಿಮರ್ಶೆ ಮಾಡುವಾಗ ಕೃತಿಯ ನಿಜವಾದ ಸತ್ವದ ವಿಚಾರದಲ್ಲಿ ಸತ್ಯವನ್ನು ತಿಳಿಸಲು ವಿಮರ್ಶಕರ ಮನಃಸ್ಥಿತಿ ಆರೋಗ್ಯವಾಗಿರಬೇಕು. ಕೃತಿಯಲ್ಲಿ ಕವಿ ಹೇಳಹೊರಟಿರುವ ಆಶಯವನ್ನು ಗ್ರಹಿಸುವ, ಕೃತಿಯ ಸೊಗಸನ್ನು ಅದರ ಕಾಣ್ಕೆಯನ್ನು ವ್ಯಾಖ್ಯಾನಿಸುವಲ್ಲಿ ತುಲನಾತ್ಮಕವಾಗಿ ನೋಡುವಾಗ ಅವುಗಳ ಬೆಲೆಯನ್ನು ನಿರ್ಣಯಿಸುವ ಸಾಮರ್ಥ್ಯ

ಉಳ್ಳವನಾಗಿರಬೇಕು. ಇಲ್ಲದಿದ್ದಲ್ಲಿ ಸಮಾಜದಲ್ಲಿ ಗೊಂದಲ ಸೃಷ್ಟಿಸಿ–ಅವಹಾಯಕರನ್ನು ತಪ್ಪುದಾರಿಗೆಳೆಯುವ ಪ್ರಯತ್ನವೆನಿಸುತ್ತದೆ. ವಿಮರ್ಶಕರು ನಿಷ್ಪಕ್ಷಪಾತ ದೃಷ್ಟಿಯಿಂದ ಒಂದು ಗ್ರಂಥವನ್ನು ಓದಿ ಆಸ್ವಾದಿಸುವುದನ್ನು ಮೊದಲು ಕಲಿಯಬೇಕಾಗುತ್ತದೆ.

ಇದುವರೆವಿಗೂ ಬಂದಿರುವ ಎಲ್ಲಾ ಶೂನ್ಯಸಂಪಾದನೆಗಳನ್ನು ಹಲವಾರು ವರ್ಷಗಳಿಂದ ಆಳವಾಗಿ ತಲಸ್ಪರ್ಶಿಯಾಗಿ ಅಧ್ಯಯನ ಮಾಡುತ್ತಾ ಆ ಕುರಿತು ಅನೇಕ ಕೃತಿಗಳನ್ನು ರಚಿಸಿರುವ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷರೂ, ಕಾಲೇಜು ಶಿಕ್ಷಣ ನಿರ್ದೇಶನಾಲಯದ ಡೈರೆಕ್ಟರ್ ಆಗಿ ನಿವೃತ್ತಿ ಹೊಂದಿರುವ ಹೆಸರಾಂತ ವಿದ್ವಾಂಸರಾದ ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯನವರು ಸಿದ್ಧಾಂತ ಶಿಖಾಮಣಿಯನ್ನು ಕುರಿತು ವಿಮರ್ಶೆ ಮಾಡಿರುವುದು ವಿಜಯ ಕರ್ನಾಟಕದಲ್ಲಿ 3–7–2005ರಲ್ಲಿ ಬಂದಿದೆ. ಶೂನ್ಯಸಂಪಾದನೆಯನ್ನು ಕುರಿತು ಅಧಿಕಾರಯುತವಾಗಿ ಹೇಳಬಲ್ಲವರಾದ ಅವರ ಅಭಿಪ್ರಾಯಗಳು ಮನನೀಯವಾಗಿವೆ.

ಕಾಶೀ ಜಗದ್ಗುರುಗಳ ಈ ಸಮನ್ವಯದ ನಿಲುವನ್ನು ಗುರು–ವಿರಕ್ತರೆನ್ನದೆ, ಎಲ್ಲಾ ಮಠಾಧಿಪತಿಗಳು, ವೀರಶೈವ ವಿದ್ವಾಂಸರು ತಾಳಿದಲ್ಲಿ ವೀರಶೈವ ಧರ್ಮಕ್ಕೆ ಸುವರ್ಣಯುಗ ಪ್ರಾಪ್ತವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

‘ಸಿದ್ಧಾಂತ ಶಿಖಾಮಣಿ’

ವೀರಶೈವ ಧರ್ಮದ ತತ್ತ್ವ ಸಿದ್ಧಾಂತಗಳ ಬಗ್ಗೆ ಹೇಳುವ ಶಿವಯೋಗಿ ಶಿವಾಚಾರ್ಯ ಸಂಪಾದಿಸಿರುವ ‘ಸಿದ್ಧಾಂತ ಶಿಖಾಮಣಿ’ ಎಂಬ ಧಾರ್ಮಿಕ ಗ್ರಂಥವನ್ನು ನಾನು ಇತ್ತೀಚೆಗೆ ಓದಿದೆ. ಈ ಗ್ರಂಥದಲ್ಲಿ 21 ಪರಿಚ್ಛೇದಗಳು ಹಾಗೂ 1382 ಶ್ಲೋಕಗಳು ಇವೆ. ಕೈಲಾಸದಲ್ಲಿ ದ್ವಾರಪಾಲಕರಾಗಿದ್ದ ರೇಣುಕರು ಲಿಂಗೋದ್ಭವರಾಗಿ ಭುವಿಯಲ್ಲಿ ಜನಿಸಿ ಪ್ರಸಿದ್ಧರಾದವರು.

ಕಾಲಾಂತರದಲ್ಲಿ ಅಗಸ್ತ್ಯಮುನಿ ‘ಸಾಕ್ಷಾತ್ ಶಿವನಂತಿರುವ ನೀವು ಶಿವಾಗಮದ ಬಗ್ಗೆ ಉಪದೇಶ ಮಾಡಿ’ ಎಂದು ರೇಣುಕರಲ್ಲಿ ಹೇಳುತ್ತಾರೆ. ಅಲ್ಲಿಂದಾಚೆಗೆ ರೇಣುಕರು ವೀರಶೈವ ಧರ್ಮ, ಆಚಾರ, ರೀತಿ–ನೀತಿ, ತತ್ವಗಳ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಾರೆ. ಅವರ ಉಪದೇಶಾಮೃತದ ಅಮೃತಧಾರೆ ಈ ಕೃತಿಯ ಶ್ಲೋಕ ಮತ್ತು ಸಾರಾಂಶಗಳಲ್ಲಿ ಅಡಕವಾಗಿದೆ.

ವೀರಶೈವ ಧರ್ಮದ ಮೂಲ ತತ್ತ್ವಗಳಾದ ಪಂಚಾಚಾರ, ಅಷ್ಟಾವರಣ ಹಾಗೂ ಷಟ್‌ಸ್ಥಲಗಳನ್ನು ಇಲ್ಲಿ ವಿವರಿಸಲಾಗಿದೆ. ಇವುಗಳನ್ನು ಆಚರಿಸಿದರೆ ಮಾತ್ರ ವೀರಶೈವನಾದವನು ಶಿವನನ್ನು ಸೇರಬಲ್ಲ ಎನ್ನುವುದು ರೇಣುಕರ ಅಭಿಪ್ರಾಯ. ಶಿವನನ್ನು ಸೇರಲು ಭಕ್ತ ಅನುಸರಿಸಬೇಕಾದ ಧಾರ್ಮಿಕ ಆಚರಣೆಗಳ ಬಗ್ಗೆ ಸಂದರ್ಭಕ್ಕೆ ಅನುಗುಣವಾಗಿ ಕೃತಿಯುದ್ದಕ್ಕೂ ವಿವರಿಸಲಾಗಿದೆ.

ಇಡೀ ಕೃತಿಯಲ್ಲಿ ಕಾಲುಭಾಗದಷ್ಟು ಕೈಲಾಸ ವರ್ಣನೆ ಹಾಗೂ ಮುಕ್ಕಾಲು ಭಾಗದಷ್ಟು ಸಿದ್ಧಾಂತ ವಿಚಾರಗಳಿವೆ. ಷಟ್‌ಸ್ಥಲಗಳನ್ನು ವಿಂಗಡಿಸಿ ವಿವರಿಸಿರುವುದು ಈ ಕೃತಿಯ ವಿಶೇಷ. ಶಿವಯೋಗಿ ಶಿವಾಚಾರ್ಯರು ಸಂಪಾದಿಸಿರುವ ಈ ಕೃತಿಯ ಕಾಲದ ಬಗ್ಗೆ ಒಮ್ಮತದ ಅಭಿಪ್ರಾಯವಿಲ್ಲ. ಕೆಲವು ವಿದ್ವಾಂಸರು ಇದನ್ನು 12ನೇ ಶತಮಾನದ್ದು ಎಂದು ಅಭಿಪ್ರಾಯಪಡುತ್ತಾರೆ. ಈ ಗ್ರಂಥದ ಕಾಲದ ಬಗ್ಗೆ ಏನೇ ವಿವಾದಗಳಿದ್ದರೂ ಇದೊಂದು ಉತ್ಕೃಷ್ಟ ವೀರಶೈವ ಧಾರ್ಮಿಕ ಕೃತಿ ಎಂಬ ಬಗ್ಗೆ ಯಾವ ವಿವಾದವೂ ಇಲ್ಲ.



– ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ

ಶ್ರೀ ಸಿದ್ಧಾಂತ ಶಿಖಾಮಣಿ–ವಚನ ಸಾಹಿತ್ಯ ಸಮನ್ವಯ ಸ್ಥಾಪಿಸುವ ಕೃತಿಗಳು–ಜಗದ್ಗುರುಗಳು


ಸಮಾಜದಲ್ಲಿ ಸಮನ್ವಯತೆಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ಜಗದ್ಗುರುಗಳು ಹೋದೆಡೆಯೆಲ್ಲಾ ಸನಾತನ ವೀರಶೈವ ಧರ್ಮದೊಳಗಿನ ತತ್ತ್ವ ಸಿದ್ಧಾಂತಗಳ ಕುರಿತು ಸಾಕಷ್ಟು ವಾದ, ವಿವಾದ, ಅಪಸ್ವರ ಕೇಳಿ ಬರುತ್ತಿತ್ತು. ಅಂತಹ ಕುಹಕಿಗಳ ಮಾತಿಗೆ ಕಿವಿಗೊಡಬಾರದೆಂದು ಧರ್ಮಾಭಿಮಾನಿಗಳಿಗೆ ತಿಳಿ ಹೇಳುತ್ತಿದ್ದರು.

ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯದೊಳಗಿನ ಭಾವನೆ ಒಂದೇ : ಕಾಶೀ ಜಗದ್ಗುರುಗಳು

ಜೈ ಭೀಮ 1–1–2006

ಈ ಸಲ **1–1–2006**ರಲ್ಲಿ ಬೆಂಗಳೂರಿನಲ್ಲಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಅಂಗ ಸಂಸ್ಥೆ ವೀರಶೈವ ಅನುಸಂಧಾನ ಸಂಸ್ಥಾನವು ಜಗದ್ಗುರುಗಳ 8ನೇ ವರ್ಷದ ಆಧ್ಯಾತ್ಮಿಕ ಪ್ರವಚನಮಾಲೆಯ ಉದ್ಘಾಟನೆಯ ದಿವಸವೇ ವೀರಶೈವ ಗ್ರಂಥವಾದ ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯಗಳೆರಡರ ಭಾಷೆಗಳು ಬೇರೆಯೇ ಹೊರತು ಅದರೊಳಗಿನ ಭಾವವೊಂದೆ. ಸಿದ್ಧಾಂತ ಶಿಖಾಮಣಿ ಮತ್ತು ವಚನಗಳಲ್ಲಿ ಒಂದೇ ಅರ್ಥ ಬರುವ ವಚನಗಳು ಮತ್ತು ಶ್ಲೋಕಗಳು ಸಾಕಷ್ಟಿದ್ದು ಆ ಬಗ್ಗೆ ಮುಂದಿನ ದಿನಗಳಲ್ಲಿ ಉದಾಹರಣೆ ಕೊಡುವುದಾಗಿ ತಿಳಿಸುತ್ತಾ ಸಮನ್ವಯದ ಘೋಷಣೆಯನ್ನು ಮಾಡುತ್ತಾ ಉಳಿದ 9 ದಿನಗಳಲ್ಲಿ ಇವೆರಡರಲ್ಲಿರುವ ಸಾಮ್ಯತೆ ಸಾಕಷ್ಟು ತಿಳಿಸುತ್ತಾ ಸಾಗಿದರು.

ಶಿವಾಚಾರ್ಯರು, ವಚನಕಾರರು ಒಂದೇ : ಕಾಶೀ ಶ್ರೀಗಳು **23–8–2006**



ಶಹಾಬಾದ್‌ನ ಶರಣಬಸವೇಶ್ವರ ದೇವಸ್ಥಾನದಲ್ಲಿ ಆಶೀರ್ವಚನ ನೀಡುತ್ತಿರುವ ಕಾಶೀ ಶ್ರೀಗಳು

ಆಗಸ್ಟ್ ತಿಂಗಳ ಶ್ರಾವಣಮಾಸ ನಿಮಿತ್ತ ಶಹಾಬಾದ್‌ನ ಶರಣಬಸವೇಶ್ವರ ದೇವಸ್ಥಾನದ ಸಮಿತಿ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ವಚನೋತ್ಸವ ಸಮಿತಿಯವರ ಸಂಯುಕ್ತಾಶ್ರಯದಲ್ಲಿ **23–8–2006**ರಲ್ಲಿ ಏರ್ಪಡಿಸಲಾಗಿದ್ದ ಕಾಶೀ ಜಗದ್ಗುರುಗಳ ಆಶೀರ್ವಚನದಲ್ಲಿ ವೀರಶೈವ ಧರ್ಮ ಗ್ರಂಥಗಳಾದ ಶಿವಾಗಮಗಳು ಹಾಗೂ ಸಿದ್ಧಾಂತ ಶಿಖಾಮಣಿ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿದ್ದು ಅದನ್ನು 12ನೇ ಶತಮಾನದ ವಚನಕಾರರು ಸರಳವಾದ ಕನ್ನಡ ಭಾಷೆಯಲ್ಲಿ ರೂಪಾಂತರ ಮಾಡಿದ್ದರಿಂದ ವೀರಶೈವ ಶಿವಾಚಾರ್ಯರು ಮತ್ತು ವಚನಕಾರರು ಒಂದೇಯಾಗಿದ್ದು ವೀರಶೈವ ಸಾಹಿತ್ಯದಲ್ಲಿ ಹಾಗೂ ವೀರಶೈವ ಧರ್ಮದಲ್ಲಿ ಎರಡು ಕಣ್ಣು ಇದ್ದಹಾಗೆ ಎಂದ ಎರಡರಲ್ಲೂ ಇರುವ ಸಾಮ್ಯತೆಯನ್ನು ಎತ್ತಿ ತೋರಿಸಿದರು.

ಶಿವರಾತ್ರಿ ಹಾಗೂ ನವರಾತ್ರಿ ಸಂದರ್ಭವನ್ನು ಹೊರತುಪಡಿಸಿ ವರ್ಷದ ಉಳಿದೆಲ್ಲಾ ತಿಂಗಳುಗಳಲ್ಲಿ ದೇಶಾದ್ಯಂತ ಆಶೀರ್ವಚನಗಳು ಏರ್ಪಾಡಾಗಿರುತ್ತಿದ್ದವು. ಕರ್ನಾಟಕಕ್ಕೆ ಬಂದಾಗ ಆಗಾಗ ಇಲ್ಲಿ ಏಳುತ್ತಿದ್ದ ವಾದ–ವಿವಾದಗಳಿಗೆ ತೆರೆ ಎಳೆಯಬೇಕೆಂದು ನಿರ್ಧರಿಸಿ ತಮ್ಮ ಜೊತೆಗೆ ಇಡೀ ಸಮುದಾಯವನ್ನೇ ಸಮನ್ವಯದತ್ತ ಸಾಗುವಂತೆ ಮಾಡಬೇಕೆಂದು ವ್ಯವಸ್ಥಾಪಕರಿಗೆ ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ವಚನಸಾಹಿತ್ಯ ಸಮನ್ವಯಾತ್ಮಕ ಆಧ್ಯಾತ್ಮಿಕ ಪ್ರವಚನ ಎಂದು ಹೆಸರಿಡುವಂತೆ ಆದೇಶ ನೀಡುತ್ತಿದ್ದರು.

ಪ್ರವಚನ ಸಮಾರೋಪ ವಿಜಯ ಕರ್ನಾಟಕ, 16–5–08



ಧಾರವಾಡದ ಉಳವಿ ಬಸವೇಶ್ವರ ದೇವಾಲಯದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನದ ಸಮಾರೋಪ ಸಮಾರಂಭದಲ್ಲಿ ಡಾ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳು ಉಪಸ್ಥಿತರಿದ್ದರು.

16–5–2008 ಧಾರವಾಡದ ಪಂಚಾಚಾರ್ಯ ಮಾನವ ಧರ್ಮಸಂಸ್ಥೆ, ಶ್ರೀ ಉಳವಿ ಚನ್ನಬಸವೇಶ್ವರ ಧರ್ಮಫಂಡ್ ಸಂಸ್ಥೆ ಮತ್ತು ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಸಂಸ್ಥೆಗಳ ಸಂಯುಕ್ತಾಶ್ರದಲ್ಲಿ ಕಾಶೀ ಜಗದ್ಗುರುಗಳ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯದ ಸಮನ್ವಯಾತ್ಮಕ ಆಧ್ಯಾತ್ಮಿಕ ಆಶೀರ್ವಚನದ ಸಮಾರೋಪ ಸಮಾರಂಭ ದಲ್ಲಿ ಜಗದ್ಗುರುಗಳು ವಿಶ್ವದಲ್ಲಿರುವ ಸರ್ವಧರ್ಮಗಳ ಶಾಸ್ತ್ರ ಸಿದ್ಧಾಂತಗಳು, ಧರ್ಮ ಸಂವಿಧಾನಗಳು ಮನುಕುಲದ ವಿಕಾಸಕ್ಕಾಗಿ, ಏಳಿಗೆಗಾಗಿ ಸೃಷ್ಟಿಸಲ್ಪಟ್ಟಿವೆ. ಆದರೆ ಮಾನವನ ಮನಸ್ಸು ವಿಕಾರಗೊಳಿಸಿಕೊಂಡು ಸರ್ವನಾಶ ಮಾಡಲು ಪ್ರವೃತ್ತರಾಗಿದ್ದರಿಂದ ವಿಶ್ವಕ್ಕೆ ಭೀತಿ ಆವರಿಸಿದೆ. ಭಯೋತ್ಪಾದನೆಗೆ ಪ್ರಶಿಕ್ಷಣ ನಡೆಯುತ್ತಿರುವುದು ಕಳವಳಕಾರಿ. ಉತ್ತಮ ಮೌಲ್ಯಭರಿತ ಪ್ರಶಿಕ್ಷಣದಿಂದ ರಚನಾತ್ಮಕ ಕಾರ್ಯಗಳು ಸಾಧ್ಯವೆಂದರು. ಮನುಷ್ಯ ತಾನು ಸುಖವಾಗಿರಲು ಮತ್ತು ಇತರರನ್ನು ಸುಖವಾಗಿರಲು ಬಿಡಬೇಕೆನ್ನುವುದೇ ಪ್ರಕೃತಿ ನಿಯಮ. ಮನುಷ್ಯನ ಹೊರತು ಎಲ್ಲಾ ಪ್ರಾಣಿಗಳೂ ಈ ನಿಯಮಕ್ಕೆ ಬದ್ಧವಾಗಿವೆ. ದೈಹಿಕ ಸ್ವಾಸ್ಥ್ಯಕ್ಕೆ ಮಾನಸಿಕ ಸ್ವಾಸ್ಥ್ಯವೇ ಮೂಲ ಕಾರಣ. ಆಚಾರ್ಯರ, ಸಂತರ, ಶರಣರ ಈ ಅಂತರ್ಮುಖೀ ಸಾಧನೆ ಪ್ರವೃತ್ತಿಗೆ ವಿವಿಧ ಮಜಲುಗಳನ್ನು ಬೋಧಿಸಿದ್ದಾರೆ. ಅದನ್ನು ಭಾವಲಿಂಗಾನುಸಂಧಾನವೆಂದೇ ಉಲ್ಲೇಖಿತಗೊಂಡಿದೆ ಎಂದರು. ಅಹಂಭಾವವನ್ನು ಹೋಗಲಾಡಿಸಿ, ಶಿವೋಹಂ ಭಾವದಿಂದ ಶಿವಸ್ವರೂಪ ಪಡೆದುಕೊಳ್ಳುವುದೇ ಭಾವಲಿಂಗಾನುಸಂಧಾನ. ಆಗಲೇ ಸಾಧಕನು ಅಂತರ್ಮುಖಿಯಾದಾಗ ವಿಶ್ವ ಶಿವಮಯವಾಗುವುದು ಎಂದು ಉಪದೇಶ ನೀಡಿದರು.

ಭಯೋತ್ಪಾದನೆಗೆ ಪ್ರಶಿಕ್ಷಣ : ಕಳವಳ
ವಿಜಯ ಕರ್ನಾಟಕ

ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರುಗಳು ರಾಷ್ಟ್ರದ ಸರ್ವಾಂಗ ಸುಂದರ ಬೆಳವಣಿಗೆಗೆ ಪ್ರಜೆಗಳೇ ಕಾರಣ. ಆಧ್ಯಾತ್ಮ ಉನ್ನತಿಯಿಂದ ರಾಷ್ಟ್ರದ ಉನ್ನತಿ ಸಾಧ್ಯ. ವೀರಶೈವ ಧರ್ಮ ಸಿದ್ಧಾಂತವು ಶರಣರ ಅನುಭಾವವನ್ನು ಒಳಗೊಂಡಿದೆ ಎಂದು ನುಡಿದು ತಮಗೂ ಗುರು–ವಿರಕ್ತರ ಸಮನ್ವಯದ ಬಗ್ಗೆ ಕಾಳಜಿ ಇರುವುದನ್ನು ಈ ರೀತಿ ವ್ಯಕ್ತಪಡಿಸಿದರು.

ಆತ್ಮಜ್ಞಾನ ಸಾಮರಸ್ಯದ ಸಂಕೇತ : ಕಾಶೀ ಜಗದ್ಗುರುಗಳು
ವಿಜಯ ಕರ್ನಾಟಕ, 12–7–09


ಕಲ್ಬುರ್ಗಿ 2009ರ ಜುಲೈ 11ರಿಂದ 21ರವರೆಗೆ ಕಾಶೀ ಸನ್ನಿಧಾನದ ಸಮನ್ವಯಾತ್ಮಕ ಆಶೀರ್ವಚನವನ್ನು ಏರ್ಪಡಿಸಿದ್ದರು. ಮಾಜಿ ಸಚಿವರಾದ ಶ್ರೀ ಬಸವರಾಜ ಪಾಟೀಲ್ ಅನ್ವರಿಯವರು ಉದ್ಘಾಟಿಸಿದರು. ಈ ಹಿಂದಿನಂತೆ ಇಲ್ಲಿಯೂ ಜಗದ್ಗುರುಗಳು ಭೇದ ಭಾವಗಳನ್ನು ದೂರಮಾಡುವ ಆತ್ಮಜ್ಞಾನವು ಸಮಸ್ತ ಮಾನವ ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಸಂಕೇತವಾಗಿದೆ ಎಂದು ಸಾಮರಸ್ಯದ ಘಂಟೆ ಭಾರಿಸಿದರು.

ಎಲ್ಲ ಪಂಥಗಳಲ್ಲಿ ಭಕ್ತಿ ಪಂಥವೇ ಪ್ರಮುಖ : ಕಾಶೀ ಜಗದ್ಗುರುಗಳು
ಕ್ರಾಂತಿ 13–7–09

ಸಿದ್ಧಾಂತ ಶಿಖಾಮಣಿ ಗ್ರಂಥ ಮತ್ತು ಶರಣರ ಅನುಭವ ಸಾಹಿತ್ಯದಲ್ಲಿ ಆಧ್ಯಾತ್ಮಿಕ ಮಹತ್ವವನ್ನು ತಿಳಿಸಿರುವುದರಿಂದ ಇವೆರಡೂ ಸಮನ್ವಯಾತ್ಮಕ ವಿದ್ಯೆಗಳಾಗಿವೆ. ಅಜ್ಞಾನಿಗಳಿಗೆ ಭೂಮಿ, ಧನ, ಕನಕಾದಿಗಳು ಸಂಪತ್ತಾಗಿದ್ದರೆ ಜ್ಞಾನಿಗಳ ದೃಷ್ಟಿಯಲ್ಲಿ ಅವು ವಿಪತ್ತುಗಳೆ, ಆಗಿವೆ. ಸದಾ ಶಾಶ್ವತವಾಗಿರುವ ಆತ್ಮಜ್ಞಾನ ಸಂಪಾದನೆ ಅಗತ್ಯವೆಂದು ಕಾಶೀ ಶ್ರೀಗಳು ಸಭೆಗೆ ತಿಳಿಸಿದರು. ಇದೇ ಮಾತುಗಳು ಅಲ್ಲಮಪ್ರಭುಗಳು ತಮ್ಮ ಒಂದು ವಚನದಲ್ಲಿ ಹೇಮ, ಭೂಮಿ ಕಾಮಿನಿ ಇವುಗಳು ನಿನ್ನದಲ್ಲ–ಎಂಬ ವಚನದಲ್ಲಿ (ಹೇಮ ನಿನ್ನದಲ್ಲ.....) ಲೌಕಿಕ ಸಂಪತ್ತನ್ನು ತಿರಸ್ಕರಿಸಿ ಆಧ್ಯಾತ್ಮಿಕ ಸಂಪತ್ತಿಗೆ ಮಹತ್ವ ನೀಡಿರುವುದನ್ನು ಹೇಳಿದರು.

ನಿಶ್ಚಲ ಭಕ್ತಿಯಿಂದ ಮಾತ್ರ ಪರಮಾತ್ಮನ ಕೃಪೆ ಪ್ರಾಪ್ತವಾಗುತ್ತದೆ. ಭಗವಂತನಲ್ಲಿ ಭಕ್ತಿ ಮೂಡಲು ಯಾವ ವರ್ಣಾಶ್ರಮವೂ ಅಡ್ಡಿ ಬರುವುದಿಲ್ಲ ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಬರುವ ಭಕ್ತಿಮಾರ್ಗ ಕ್ರಿಯಾಸ್ಥಲದ ಬಗ್ಗೆ ವಿವರಿಸುತ್ತಾ ಮನುಷ್ಯನನ್ನು ದೊಡ್ಡವನನ್ನಾಗಿಸುವುದು ಭಕ್ತಿಯೆ. ಅಂತೆಯೇ ಬಸವಣ್ಣನವರು ನಾದಪ್ರಿಯನಲ್ಲ, ವೇದಪ್ರಿಯನಲ್ಲ–ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವಾ ಎಂದ ಪ್ರತಿಪಾದಿಸಿದ್ದಾರೆ. ಹೀಗೆ ಭಕ್ತಿಯೇ ಭಗವಂತನಿಗೆ ಪ್ರಿಯ ಎಂಬ ವಿಷಯದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನಗಳ ಅಭಿಪ್ರಾಯ ಸಮನ್ವಯಾತ್ಮಕ ಆಗಿದೆ ಎಂದು ಜಗದ್ಗುರುಗಳು ವಿವರವಾಗಿ ವಿಶ್ಲೇಷಣೆ ಮಾಡಿದರು.

'ಆಧ್ಯಾತ್ಮ ಜ್ಞಾನ ನಿಜವಾದ ಸಂಪತ್ತು'
ಶಾಂತಿ 13–7–09



ಗುಲಬರ್ಗಾದಲ್ಲಿ ಶನಿವಾರ ಸಿದ್ಧಾಂತ ಶಿಖಾಮಣಿ ಪ್ರವಚನದ ಉದ್ಘಾಟನೆಯನ್ನು ಮಾಜಿ ಸಚಿವ ಬಸವರಾಜ್ ಪಾಟೀಲ್ ಅನ್ವರಿ ನೆರವೇರಿಸಿದರು. ಕಾಶೀ ಜಗದ್ಗುರುಗಳು, ಮಾಜಿ ಸಚಿವ ಸಂಸದ ಡಾ. ಜವಳಿ ಚಿತ್ರದಲ್ಲಿದ್ದಾರೆ

ಭಕ್ತಿಯ ಪ್ರಗತಿಗೆ ಶಿವಾನುಗ್ರಹವೇ ಕಾರಣ

ಶಿವನ ಅನುಗ್ರಹವೇ ಭಕ್ತಿಯ ವೃದ್ಧಿಗೆ ಕಾರಣ ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಶಿವಯೋಗಿ ಶಿವಾಚಾರ್ಯರು ಹೇಳಿದ್ದಾರೆ, 'ನೀನೊಲಿಯಿತ್ತೆ ಪುಣ್ಯ ನೀನೊಲ್ಲದುದೇ ಪಾಪ' ಎಂಬ ವಚನದಲ್ಲಿ ಭಕ್ತನ ಅಭಿವೃದ್ಧಿಗೆ ಶಿವಾನುಗ್ರಹವೇ ಕಾರಣವೆಂದು ಬಸವಣ್ಣನವರೂ ಸಮರ್ಥಿಸಿದ್ದಾರೆ ಎಂದು ಹೇಳುತ್ತಾ ಪತಂಜಲಿ ಮಹರ್ಷಿಗಳು, ಶ್ರೀ ಪುರಂದರದಾಸರೂ ಇದನ್ನೇ ಹೇಳಿರುವರು. ಶಿವಾನುಗ್ರಹವೇ ಎಲ್ಲದಕ್ಕೂ ಕಾರಣ ಎನ್ನುತ್ತಾ ಶ್ವೇತಾಶ್ವತರೋಪನಿಷತ್‌ನಲ್ಲಿಯೂ ಸಹ ಶಿವನ ಅನುಗ್ರಹವಿಲ್ಲದೇ ದುಃಖವನ್ನು ನೀಗಿಸಿಕೊಳ್ಳುವ ಪ್ರಯತ್ನವು ಆಕಾಶವನ್ನು ಚಾಪೆಯಂತೆ ಸುತ್ತುವೆನೆಂಬ ವ್ಯರ್ಥ ಪ್ರಯತ್ನವೆಂದು ಹೇಳಲಾಗಿದೆ. ಒಟ್ಟಿನಲ್ಲಿ ಮನುಷ್ಯನ ಪ್ರಗತಿಗೆ ಶಿವಾನುಗ್ರಹವೇ ಪ್ರಮುಖ ಕಾರಣವೆಂದು ಸೋದಾಹರಣವಾಗಿ ವಿವರಿಸಿದರು.

ತ್ರಿಕರಣ ಶುದ್ಧವಿಲ್ಲದವನೇ ಅಸ್ಪೃಶ್ಯ : ಕಾಶೀ ಜಗದ್ಗುರುಗಳು

16–7–09 : ಭಕ್ತ ಮಾಹೇಶ್ವರ ಕ್ರಿಯಾಸ್ಥಲದ ಬಗ್ಗೆ ತಿಳಿಸುತ್ತಾ ಜಗದ್ಗುರುಗಳು ತನು, ಮನ, ಧನ, ವಾಣಿಗಳನ್ನು ಪರಿಶುದ್ಧವಾಗಿಟ್ಟುಕೊಂಡು ಭಗವತ್ಕ್ರಿಯೆಯನ್ನು ಮಾಡಿ ಮುಕ್ತಿ ಪಡೆದಾಗಲೇ ಜೀವನ ಸಾರ್ಥಕವಾಗುತ್ತದೆ. ಸಿದ್ಧಾಂತ ಶಿಖಾಮಣಿಯಲ್ಲಿ ತ್ರಿಕರಣ ಶುದ್ಧಿಗಾಗಿ ತ್ರಿವಿಧ ಭಕ್ತಿಯನ್ನು ಹೇಳಲಾಗಿದೆ. ಶರೀರದ ಮೇಲೆ ಇಷ್ಟಲಿಂಗ ಧರಿಸಿ ಪ್ರತಿನಿತ್ಯ ಮನಃಪೂರ್ವಕವಾಗಿ ಪೂಜಿಸಿದಲ್ಲಿ ತನು ಶುದ್ಧಿ, ಪಂಚಾಕ್ಷರಿ ಮಂತ್ರವನ್ನು ಪ್ರಣವ ಹಾಗೂ ಮಂತ್ರ ಜಪಿಸಿದಲ್ಲಿ ವಾಣಿ ಶುದ್ಧಿ, ಮನದಲ್ಲಿ ಶಿವ ಸ್ವರೂಪವನ್ನು ಧ್ಯಾನಿಸಿದಲ್ಲಿ–ಮನಃಶುದ್ಧಿಯಾಗುವುದೆಂದು ತಿಳಿಸಿ ಹೀಗೆ ತ್ರಿಕರಣ ಶುದ್ಧಿಯಾದವನಿಗೆ ಶಿವಕೃಪೆ ದೊರೆಯುವುದು. ತ್ರಿಕರಣಶುದ್ಧಿಯಿಲ್ಲದವನು ಯಾರೇ ಆಗಿರಲಿ ಅಸ್ಪೃಶ್ಯನೇ, ಅಪೂಜ್ಯನೇ. ಅದನ್ನೇ ಬಸವಣ್ಣನವರು 'ಕೊಲ್ಲುವವನೆ ಮಾದಿಗ ಹೊಲಸು ತಿಂಬುವನೇ ಹೊಲೆಯ' ಎಂದು ಹೇಳಿದ್ದಾರೆ. ಇದನ್ನು ನಿವಾರಿಸಿಕೊಳ್ಳಲು ಭಕ್ತಿ ಮಾರ್ಗವನ್ನೇ ಆಚರಿಸಬೇಕಾಗುವುದೆಂದು ತಿಳಿಸಿದರು.

ಇಷ್ಟಲಿಂಗಪೂಜೆ ವೀರಶೈವರಿಗೆ ನಿತ್ಯಕರ್ಮ : ಕಾಶೀ ಜಗದ್ಗುರು

ಅನೇಕ ಮಹನೀಯರು ತಮ್ಮ ಕ್ಷೇತ್ರಗಳಲ್ಲಿ ಸಾಧಿಸಿದ ಸಿದ್ಧಿಯನ್ನು ನೋಡಿದಾಗ ಇವರೆಲ್ಲ ಆಯಾ ಕ್ಷೇತ್ರಗಳ ತಪಸ್ವಿಗಳೇ ಎನ್ನಬಹುದು. ದೇಶದ ನಾಯಕರಿರಬಹುದು (ಗಾಂಧೀಜಿ, ತಿಲಕ್, ವಲ್ಲಭಭಾಯಿ ಪಟೇಲ್) ವಿಜ್ಞಾನಿಗಳಿರಬಹುದು, ಕಲಾವಿದರಿರಬಹುದು ಯಾರೇ ಇದ್ದರೂ ಅವರ ಕ್ಷೇತ್ರದಲ್ಲಿ ಸಂಪೂರ್ಣ ಮಗ್ನರಾಗಿ ಯಶಸ್ಸನ್ನು ಕಂಡಿದ್ದಾರೆ–ಇದನ್ನೇ ತಪಸ್ಸೆನ್ನುವುದು. ತಪ, ಕರ್ಮ, ಜಪ ಧ್ಯಾನ ಮತ್ತು ಜ್ಞಾನವೆಂಬ 5 ಅನುಷ್ಠಾನಗಳನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿದೆ. ಶಿವನಿಗಾಗಿ ದೇಹ ದಂಡಿಸಿಕೊಳ್ಳುವುದೇ ತಪಸ್ಸು. ದೇಹ ದಂಡನೆಯಿಂದಾಗುವ ನೋವನ್ನು ಸಹಿಸಿಕೊಳ್ಳುವುದೇ ತಪಸ್ಸು ಎಂದು ಯಶಸ್ಸಿನ ಗುಟ್ಟನ್ನು ಜಗದ್ಗುರುಗಳು ತಿಳಿಸಿಕೊಟ್ಟರು.

ಇಷ್ಟಲಿಂಗ ಪೂಜೆಯೇ ವೀರಶೈವರಿಗೆ ನಿತ್ಯ ಕರ್ಮವಾಗಿರುವುದರಿಂದ ಇಷ್ಟಲಿಂಗ ಪೂಜೆಯನ್ನು ನಿತ್ಯವೂ ಮಾಡಬೇಕು. ದೇಹದ ಮೇಲೆ ಸದಾ ಧರಿಸಿಕೊಂಡು ಜೊತೆಯಲ್ಲೇ ಇರುವುದರಿಂದ ನಿತ್ಯಕರ್ಮಕ್ಕೆ ಅಡೆತಡೆಗಳಿರುವುದಿಲ್ಲ. ಸ್ತ್ರೀಯರು ಸದಾ ಧರಿಸುವುದರಿಂದ ಅವರಿಗೆ ರಜಸೂತಕ, ಪ್ರಸೂತಿ ಸೂತಕಗಳು ಇರುವುದಿಲ್ಲ. ಬಸವಣ್ಣನವರ ಒಂದು ವಚನದಲ್ಲಿ ಇದನ್ನೇ ಹೇಳಿದ್ದಾರೆ. 'ಸುಪ್ರಭಾತ ಸಮಯದಲ್ಲಿ ಲಿಂಗವ ನೆನೆದಡೆ ತಪ್ಪುವುದು ಅಪಮೃತ್ಯು ಕಾಲಕರ್ಮಗಳಯ್ಯ' ಎಂದು. ಇಷ್ಟಲಿಂಗ ಮಹತ್ವವನ್ನು ಇಲ್ಲಿ ತಿಳಿಸಿದ್ದಾರೆ ಎಂದು ತುಲನಾತ್ಮಕವಾಗಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಮುಂದೆ ಧ್ಯಾನಮಾರ್ಗದ ಬಗ್ಗೆ ಅಷ್ಟಾಂಗಯೋಗದ ಮೂಲಕ ಮನಸ್ಸನ್ನು ನಿಯಂತ್ರಿಸಲು ಸಾಧ್ಯ. ಧ್ಯಾನದಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಪ್ರಾಣಾಯಾಮದಿಂದ ದೇಹ ಮನಸ್ಸನ್ನು ನಿಯಂತ್ರಿಸಿ, ಧಾರಣಮಾರ್ಗದಿಂದ ಧ್ಯಾನಾವಸ್ಥೆಯನ್ನು ಪ್ರವೇಶಿಸುತ್ತಾನೆ. ಮನಸ್ಸಿನ ಏಕಾಗ್ರತೆ ಬೆಳೆದಂತೆ ಧ್ಯಾನವೆನಿಸಿಕೊಳ್ಳುತ್ತದೆ. ಹೀಗೆ ಧ್ಯಾನಮಾರ್ಗದಿಂದ ತನ್ನ ಎಲ್ಲ ಸಮಸ್ಯೆಗಳನ್ನು ದೂರೀಕರಿಸಿಕೊಂಡು ಸುಖವಾಗಿರಬಹುದೆಂದು ಆಶೀರ್ವಚನದಲ್ಲಿ ತಿಳಿಸಿದರು.

ಇನ್ನು ಜಪಯಜ್ಞದ ಬಗ್ಗೆ ಜಗದ್ಗುರುಗಳು ವಿವರಿಸುತ್ತಾ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರಣವಸಹಿತ ಪಂಚಾಕ್ಷರಿಮಂತ್ರದ ಆವರ್ತನವೆ ಜಪಯಜ್ಞ, ಇದಕ್ಕೆ ಯಾವುದೇ ಬಾಹ್ಯ ಉಪಕರಣ ಬೇಕಿಲ್ಲ. ಇದನ್ನೇ ಬಸವಣ್ಣನವರು 'ಓಂ ನಮಃ ಶಿವಾಯ ಎಂಬುದೇ ಮಂತ್ರ, ಓಂ ನಮಃ ಶಿವಾಯ ಎಂಬುದೇ ತಂತ್ರ' ಎಂದು ಹೇಳಿರುವುದನ್ನು ಇಲ್ಲಿ ತಿಳಿಸಿದರು.

ಸಾಹಿತ್ಯ ದ್ವೇಷಕ್ಕೆ : ಕಾಶಿ ಜಗದ್ಗುರುಗಳ ಪರಿಹಾರ

ದಾವಣಗೆರೆ ಡಿ.26. ಶಿವಾಗಮಗಳು, ಶರಣರ ವಚನಸಾಹಿತ್ಯ, ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿ ಈ ಮೂರು ವೀರಶೈವ ಧರ್ಮದ ಪ್ರಸ್ಥಾನತ್ರಯಗಳು ಎಂದು ಶ್ರೀ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ನುಡಿದರು.

ಅವರು ಅಭಿನವ ರೇಣುಕ ಮಂದಿರದಲ್ಲಿ ಶ್ರೀ ಜಗದ್ಗುರು ರೇಣುಕ ಸಾಂಸ್ಕೃತಿಕ ಸಂಘದವರು ಏರ್ಪಡಿಸಿದ್ದ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರ 27ನೇ ವರ್ಷದ ಲಿಂಗೈಕ್ಯ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ನೀಡುತ್ತ ಪ್ರಸ್ಥಾನತ್ರಯಗಳು ಅಂದರೆ ದೇವರೆಡೆಗೆ ಹೋಗುವ ಮಾರ್ಗವೆಂದರು.

ಶಿವಾಗಮಗಳು, ಶರಣರ ವಚನಸಾಹಿತ್ಯ, ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿ ಈ ಮೂರು ವೀರಶೈವ ಧರ್ಮದ ಪ್ರಸ್ಥಾನತ್ರಯಗಳು

ವೀರಶೈವ ಧರ್ಮಕ್ಕೆ ಮೂಲವಾಹಿನಿ ಎಂದರೆ 28 ಶಿವಾಗಮಗಳು, ಆ ಶಿವಾಗಮಗಳಲ್ಲಿಯ ಉತ್ತರಭಾಗದಲ್ಲಿ ಇರುವ ವೀರಶೈವ ಸಿದ್ಧಾಂತವನ್ನು ಶ್ರೀ ಶಿವಯೋಗಿ ಶಿವಾಚಾರ್ಯರು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಶಾಸ್ತ್ರೀಯವಾಗಿ ಪ್ರತಿಪಾದಿಸಿದ್ದಾರೆ. ಇದೊಂದು ಕ್ರಮಬದ್ಧವಾದ ವೀರಶೈವ ಶಾಸ್ತ್ರಾರಂಭ. 12ನೇ ಶತಮಾನದ ಶಿವಶರಣರ ವಚನಸಾಹಿತ್ಯವು ಅನುಭಾವ ಸಾಹಿತ್ಯವೆಂಬುದಾಗಿ ಕರೆಯುತ್ತಾರೆ ಎಂದರು.


ಚಿತ್ರ : ಇಂದಿನ ಸುದ್ದಿ

ಮೇಲಿನ ಮೂರು ಗ್ರಂಥಗಳು ಸಮಾಜಕ್ಕೆ ಮಾರ್ಗದರ್ಶನ ನೀಡುವ ಗ್ರಂಥಗಳಾಗಿವೆ. ಸನಾತನ ಹಿಂದೂ ಧರ್ಮದ ದಾರ್ಶನಿಕರು ಉಪನಿಷತ್ತು ಬ್ರಹ್ಮಸೂತ್ರ ಮತ್ತು ಭಗವದ್ಗೀತಾ ಇವುಗಳಿಗೆ ಪ್ರಸ್ಥಾನ ತ್ರಯವೆಂದು ಕರೆದಿದ್ದಾರೆ. ಎಲ್ಲಾ ಮತಾಚಾರ್ಯರು ಅವುಗಳಿಗೆ ತಮ್ಮ ತಮ್ಮ ಸಿದ್ಧಾಂತಪರವಾದ ಭಾಷ್ಯಗಳನ್ನು ಬರೆದಿದ್ದಾರೆ. ಅದರಂತೆ ಅವುಗಳಿಗೆ ವೀರಶೈವ ಭಾಷ್ಯಗಳೂ ಇರುತ್ತವೆ ಎಂದು ನುಡಿದರು.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಶಿವಾಗಮಗಳ ಸೂಕ್ತಿಗಳನ್ನು ಉದಾಹರಿಸಿರುವಂತೆ ವಚನ ಸಾಹಿತ್ಯದಲ್ಲಿಯೂ ಶಿವಶರಣರು ಶಿವಾಗಮಗಳ ಸೂಕ್ತಿಗಳನ್ನು ಪ್ರಮಾಣವಾಗಿ ಉದಾಹರಿಸಿದ್ದನ್ನು ಕಾಣಬಹುದು. ಆದ್ದರಿಂದ ಶಿವಶರಣರು ವೇದಾಗಮಗಳ ವಿರೋಧಿಗಳಲ್ಲವೆಂಬುದನ್ನು ಸರ್ವರೂ ತಿಳಿದು ಕೊಳ್ಳಬೇಕೆಂದರು.

ವೀರಶೈವರು ಈ ಮೂರೂ ಸಾಹಿತ್ಯವನ್ನು ಗೌರವಿಸಿದಾಗ ಇಂದು ಸಮಾಜದಲ್ಲಿ ಸಾಹಿತ್ಯ ದ್ವೇಷವನ್ನು ಕಡಿಮೆ ಮಾಡಲು ಸಹಾಯವಾಗುವುದು. ಆದ್ದರಿಂದ ಶಿವನ ಸಾಹಿತ್ಯ-ಶಿವಾಚಾರ್ಯ ಸಾಹಿತ್ಯ ಮತ್ತು ಶಿವಶರಣ ಸಾಹಿತ್ಯದಲ್ಲಿ ಸರ್ವರೂ ಸಾಮರಸ್ಯವನ್ನು ಸಾಧಿಸಬೇಕು ಎಂಬುದಾಗಿ ನುಡಿದರು.

ಕಲಬುರ್ಗಿಯಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನಸಾಹಿತ್ಯದ ಕೆಲವು ಭಾಗಗಳನ್ನು ತೆಗೆದುಕೊಂಡು ಸಮನ್ವಯಾತ್ಮಕ ರೀತಿಯಲ್ಲಿ ಒಂದು ವಾರ ಕಾಲ ಆಶೀರ್ವಚನದ ಉಪದೇಶವನ್ನು ನೀಡಿದ ಜಗದ್ಗುರುಗಳು ಶರಣರ ವಚನಗಳನ್ನು, ಸಿದ್ಧಾಂತ ಶಿಖಾಮಣಿಯನ್ನು ಸಮನ್ವಯದ ದೃಷ್ಟಿಯಿಂದ ಅಧ್ಯಯನ ಮಾಡಿ ಪರಿಪೂರ್ಣ ಶಿವತತ್ವವನ್ನು ಅರಿತಲ್ಲಿ ಬದುಕಿನ ಮೌಲ್ಯಗಳನ್ನು ತಿಳಿದಂತಾಗುತ್ತದೆ ಎಂದು ಕೊನೆಯಲ್ಲಿ ಭಕ್ತಾದಿಗಳಿಗೆ ಉಪದೇಶದ ಮೂಲಕ ಸಮನ್ವಯದ ಬೀಜವನ್ನು ಬಿತ್ತಿ ಮುಂದೆ ಸಾಗಿದರು.

20–6–2012 ರಿಂದ 26–6–2012ವರೆವಿಗೆ ಕಲ್ಬುರ್ಗಿಯಲ್ಲಿ 5ನೇ ವರ್ಷದ ಆಷಾಢಮಾಸದ ಕಾರ್ಯಕ್ರಮದಲ್ಲಿ ಜಗದ್ಗುರುಗಳಿಂದ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಸಮನ್ವಯಾತ್ಮಕ ಆಧ್ಯಾತ್ಮಿಕ ಆಶೀರ್ವಚನವನ್ನು ಏರ್ಪಡಿಸಿದ್ದರು.

ಜಗದ್ಗುರುಗಳು ಉದ್ಘಾಟನೆ ಮಾಡಿ ಇಂದು ವಿಜ್ಞಾನವು ಇಡೀ ವಿಶ್ವವನ್ನು ಒಂದು ಗ್ರಾಮವನ್ನಾಗಿಸಿದರೆ–ಆಧ್ಯಾತ್ಮವು ಸಂಪೂರ್ಣ ವಿಶ್ವವನ್ನು ಒಂದು ಕುಟುಂಬವನ್ನಾಗಿಸುತ್ತದೆ ಎಂದು ಆಧ್ಯಾತ್ಮದ ಮಹತ್ವವನ್ನು ಹೇಳಿದರು.

ಪಂಚಪೀಠದಿಂದ ವಚನ ಸಾಹಿತ್ಯ ಪ್ರಕಟ

25–1–2011, ಸಂಕ

ಬಳ್ಳಾರಿ ಜು. 24 : ಪಂಚಪೀಠದಿಂದ ವಚನ ಸಾಹಿತ್ಯ ಪ್ರಚಾರಕ್ಕೂ ಆದ್ಯತೆ ನೀಡುವುದಾಗಿ ಕಾಶಿಯ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯರು ಹೇಳಿದ್ದಾರೆ.



ಪಂಚಪೀಠಗಳು ಮಾನವ ಕುಲದ ಉದ್ಧಾರಕ್ಕೆ ಮೀಸಲಿವೆ. ವೀರಶೈವ ಧರ್ಮಗ್ರಂಥ 'ಸಿದ್ಧಾಂತ ಶಿಖಾಮಣಿ' ಪಾರಾಯಣವಷ್ಟೇ ಅಲ್ಲ; ಇನ್ನು ಮುಂದೆ ವಚನ ಸಾಹಿತ್ಯ ಪ್ರಕಟಣೆ ಕಾರ್ಯ ಕೈಗೆತ್ತಿಕೊಳ್ಳುವುದಾಗಿ ತಿಳಿಸಿದರು.

ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯರ 75ನೇ ಲಿಂಗಬೆಳಗಿನ ಪುಣ್ಯತಿಥಿ ಅಂಗವಾಗಿ ನಗರದಲ್ಲಿ ಆಯೋಜಿಸಿರುವ ಒಂದು ವಾರ ಕಾಲದ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ್ದ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತಾಡಿ, ವೀರಶೈವ ಧರ್ಮದ ಸಿದ್ಧಾಂತ ಶಿಖಾಮಣಿಯ ಆಶಯಕ್ಕೂ ವಚನ ಸಾಹಿತ್ಯದ 'ಶೂನ್ಯಸಂಪಾದನೆ' ಕೃತಿಯ ಆಶಯಕ್ಕೂ ಸಾಮ್ಯವಿದೆ. ಈ ಅಂಶಗಳನ್ನು ಪ್ರಮುಖವಾಗಿ ಎತ್ತಿಕೊಂಡು ವಚನ ಸಾಹಿತ್ಯ ಪ್ರಕಟಣೆಗೆ ಕಾಶೀ ಪೀಠವು ಮುಂದಾಗಲಿದೆ. 'ವಚನ ಸಾಹಿತ್ಯವನ್ನು ಪೀಠವು ಎಂದಿಗೂ ನಿರ್ಲಕ್ಷಿಸಿಲ್ಲ.' ವೀರಶೈವ ಆಚಾರ್ಯರ ಹಾಗೂ ಶರಣರ ವಿಚಾರಗಳು ಒಂದೇ ಆಗಿವೆ ಎಂದರು.

ವೀರಶೈವ ಧರ್ಮ ಪ್ರತಿಪಾದನೆಯ 'ಸಿದ್ಧಾಂತ ವೀರಶೈವ ಹಾಗೂ ಲಿಂಗಾಯತ ಪದಗಳಲ್ಲಿ ವ್ಯತ್ಯಾಸವಿಲ್ಲ. ಅವು ಪರ್ಯಾಯ ಪದಗಳು.' 'ವೀರಶೈವ/ಲಿಂಗಾಯತ' ಎಂದು ನಮೂದಿಸಲು ಭಕ್ತರಲ್ಲಿ ಕೋರಿದ್ದೇವೆ. ಇದು ಮುಗಿದ ಅಧ್ಯಾಯ. ಈ ಬಗ್ಗೆ ಅನಗತ್ಯ ಗೊಂದಲ ಬೇಡ. 'ವೀರಶೈವ' ಪರಿಕಲ್ಪನೆ ಪ್ರಾಚೀನವಾಗಿದೆ, ಲೋಕರೂಢಿಯಲ್ಲಿದೆ. 'ಲಿಂಗಾಯತ' ಎಂಬುದೂ ಚಾಲ್ತಿಯಲ್ಲಿದೆ. ಒಳಪಂಗಡಗಳ ಸೃಷ್ಟಿಗೆ ಕಡಿವಾಣ ಹಾಕಬೇಕು. 'ಮಾನವ ಧರ್ಮ'ದಡಿ ಸೇವೆ ಸಲ್ಲಿಸುತ್ತಿರುವ 'ವೀರಶೈವ' ಧರ್ಮ ಬಲಪಡಿಸಬೇಕಿದೆ ಎಂದರು. 'ಸಿದ್ಧಾಂತ ಶಿಖಾಮಣಿ'ಯ ಪ್ರಚಾರವು ಅಷ್ಟೇ ಅಗತ್ಯ. ಆದ್ದರಿಂದ, 600 ಪುಟಗಳ ಈ ಕೃತಿಯ ಒಂದು ಲಕ್ಷ ಪ್ರತಿಗಳ ಮುದ್ರಣಕ್ಕೆ ಕಾಶೀ ಪೀಠವು ಮುಂದಾಗಿದ್ದು, ಏಪ್ರಿಲ್ ಒಳಗಾಗಿ ಪ್ರಕಟಣಾ ಕಾರ್ಯ ಪೂರ್ಣಗೊಳ್ಳಲಿದೆ. ಒಂದು ಸಾವಿರ ಕೃತಿ ಖರೀದಿಸುವ ಸ್ಥಳಗಳಲ್ಲಿ ಕೃತಿಯ ಬಿಡುಗಡೆ ಮಾಡುವ ಉದ್ದೇಶವಿದೆ. ವ್ಯವಹಾರಿಕವಾಗಿ ಈ ಅಂಶ ಪ್ರಮುಖವಾಗಿದ್ದು, ಸುಮಾರು 1010 ಸ್ಥಳಗಳಲ್ಲಿ ಕೃತಿ ಬಿಡುಗಡೆಯ ಯೋಚನೆ ಇದೆ. ಜನಸಾಮಾನ್ಯರಿಗೂ ಸಿದ್ಧಾಂತ ಶಿಖಾಮಣಿಯ ಮಹತ್ವ ತಿಳಿಯಲು ಅನುಕೂಲವಾಗುವಂತೆ ಕೆಲ ಭಾಗಗಳನ್ನು ಸಿ.ಡಿ. ಮೂಲಕವೂ ಜನಮನಕ್ಕೆ ತಲುಪಿಸುವ ಯೋಜನೆ ಇದೆ. ದೇಶದ ಎಲ್ಲ ಭಾಷೆಗಳಲ್ಲಿ ಕೃತಿಯ ಅನುವಾದ ಸಿ.ಡಿ.ಯಲ್ಲಿ ದೊರೆಯಲಿದೆ. ಮೊದಲಬಾರಿಗೆ ವಿದೇಶೀ ಭಾಷೆಗಳ ಪೈಕಿ ರಷ್ಯನ್‌ಭಾಷೆಯಲ್ಲಿ ಕೃತಿ ಪ್ರಕಟಿಸಲಾಗುತ್ತಿದೆ ಎಂದರು.

ಜಗದ್ಗುರುಗಳು ಮೊನ್ನೆತಾನೆ ರಶಿಯಾ ದೇಶದಲ್ಲಿ ರಷ್ಯನ್ ಭಾಷೆಗೆ ಅನುವಾದಿಸಿದ ಸಿದ್ಧಾಂತ ಶಿಖಾಮಣಿಯನ್ನು ಬಿಡುಗಡೆಗೊಳಿಸಿದ್ದನ್ನು ಸಭೆಗೆ ತಿಳಿಸುತ್ತಾ ಅಲ್ಲಿನ ಕೆಲವು ಘಟನೆಗಳನ್ನು ಹೇಳಿದರು.

ದೀಕ್ಷಾ ಸಂಸ್ಕಾರವನ್ನು ಹೊಂದಿದ ಸಾಧಕರು ದಿನವೂ ಇಷ್ಟಲಿಂಗದಲ್ಲಿ ದೃಷ್ಟಿಯೋಗವನ್ನು ಸಾಧಿಸಿ ಅದೇ ಆಕಾರದ ಜ್ಯೋತಿಯನ್ನು ತನ್ನ ಹೃದಯದಲ್ಲಿ ಭ್ರೂಮಧ್ಯ ದಲ್ಲಿ ಧ್ಯಾನಿಸುತ್ತಾ ಸಾಧನೆ ಮಾಡಬೇಕೆಂದರು.

ಜೀವನನ್ನು ಶಿವನನ್ನಾಗಿಸುವುದೇ ಶಿವಯೋಗ

ವಿಜಯ ಕರ್ನಾಟಕ, 22–6–12

ಶಿವಜಪ, ತಪ, ಶಿವಧ್ಯಾನ ಹೀಗೆ ಮಾಡುತ್ತಲೇ ಜೀವನನ್ನು ಶಿವನನ್ನಾಗಿಸುವುದೇ ಶಿವಯೋಗವಾಗಿದೆ ಎಂದು ಕಾಶೀ ಜಗದ್ಗುರುಗಳಾದ ಡಾ. ಚಂದ್ರಶೇಖರ ಶಿವಾಚಾರ್ಯರು ಹೇಳಿದರು.

'ಮನಸ್ಸಿಗೆ ಶಾಂತಿ ಬೇಕು'

ಗುಲ್ಬರ್ಗ : ಮನುಷ್ಯನ ಶಾಂತಿ ಸಮಾಧಾನಗಳಿಗೆ ಅಂತರ್ಮುಖತ್ವವೇ ಶ್ರೇಷ್ಠ ಸಾಧನ ಎಂದು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ನಗರದ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತಾಡಿದರು.

ಮನುಷ್ಯನು ಅಂತರ್ಮುಖಿಯಾಗಿ ಸಾಧನೆ ಮಾಡಲು ವಿವೇಕ, ಕ್ಷಮೆ, ವೈರಾಗ್ಯ, ಸತ್ಯನುಡಿ ಮುಂತಾದ ಸದ್ಗುಣಗಳನ್ನು ತನ್ನಲ್ಲಿ ಬೆಳೆಸಿಕೊಳ್ಳಬೇಕು. ಅಂದಾಗಲೇ ಇಷ್ಟಲಿಂಗದ ಜೊತೆಗೆ ಪ್ರಾಣಲಿಂಗಾರ್ಚನೆಯನ್ನು ಮಾಡಲು ಸಾಧ್ಯವಾಗುವುದು. ಪ್ರಾಣಲಿಂಗಾರ್ಚನೆಯು ವ್ಯಕ್ತಿಯನ್ನು ಅಂತರ್ಮುಖಿಯನ್ನಾಗಿ ಮಾಡುತ್ತದೆ ಎಂದರು.

ಪ್ರಜಾವಾಣಿ 23–6–12

ಅಂತರಂಗದಿಂದ ದೊರೆಯುವ ಆನಂದ ನೂರು ವರ್ಷಗಳ ಭೋಗದಿಂದ ದೊರೆಯುವುದಿಲ್ಲ ಎಂದು ಸಿದ್ಧಾಂತ ಶಿಖಾಮಣಿ ಪ್ರತಿಪಾದಿಸಿರುವುದನ್ನು ತಿಳಿಸಿದರು.

ಪ್ರಾಣಲಿಂಗಾರ್ಚನ ಸ್ಥಲದ ಬಗ್ಗೆ ಜಗದ್ಗುರುಗಳು ತಿಳಿಸುತ್ತಾ ಒಬ್ಬ ಶಿವಯೋಗಿ ತನ್ನ ಅಂತರಂಗದಲ್ಲಿ ಪ್ರಾಣಲಿಂಗಾರ್ಚನೆ ಮಾಡಬೇಕಾದರೆ ಸದ್ಗುಣಗಳೆಂಬ ಉಪಚಾರಗಳಿಂದ ಪೂಜೆ ಮಾಡಬೇಕು. ಹೇಗೆ ಬಹಿರಂಗ ಪೂಜೆಯಲ್ಲಿ ನೀರು, ಭಸ್ಮ, ಗಂಧ, ಪತ್ರೆ, ಪುಷ್ಪ, ಧೂಪ, ದೀಪ, ನೈವೇದ್ಯ, ನಮಸ್ಕಾರ ಎಂಬ ಉಪಚಾರ ಸಾಮಗ್ರಿಗಳನ್ನು ಬಳಸುವಂತೆ ಅಂತರಂಗ ಪೂಜೆಗೆ ಶಿವನಿಗೆ ಪ್ರಿಯವಾಗುವ ಸದ್ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂಬ ಉಪದೇಶ ನೀಡಿದರು.

ಕಾಶೀ ಜಗದ್ಗುರುಗಳ 6ನೇ ವರ್ಷದ ಆಷಾಢ ಮಾಸ ಕಾರ್ಯಕ್ರಮಕ್ಕೆ ಚಾಲನೆ



12–7–2013 : ಗುಲ್ಬರ್ಗ ನಗರದ ಸೊಗಸನಕೇರಿ (ಶೇಖರೋಜಾ) ಶಾಂತಲಿಂಗೇಶ್ವರ ಕಲ್ಯಾಣಮಂಟಪದಲ್ಲಿ ವೀರಶೈವ ಧರ್ಮಗ್ರಂಥ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಪ್ರವಚನಕ್ಕೆ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಅವರ ಸಾನ್ನಿಧ್ಯದಲ್ಲಿ ಶಾಸಕ ಬಿ.ಆರ್. ಪಾಟೀಲ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅನೇಕ ಶ್ರೀಗಳು ಉಪಸ್ಥಿತರಿದ್ದರು.

2013ರಲ್ಲಿ ಕಲ್ಬುರ್ಗಿಯಲ್ಲಿ ಆಷಾಢ ಮಾಸದಲ್ಲಿ ಜಗದ್ಗುರುಗಳ 6ನೇ ವರ್ಷದ ಸಮನ್ವಯದ ಆಶೀರ್ವಚನವನ್ನು ಏರ್ಪಡಿಸಿದ್ದರು.

ಸದ್ಧರ್ಮದಲ್ಲಿ ನಿಷ್ಠೆ ಪರಧರ್ಮ ಸಹಿಷ್ಣುತೆಯ ಕೊರತೆಯಿಂದಾಗಿ ಇಂದು ಪವಿತ್ರವಾದ ಧರ್ಮಕ್ಷೇತ್ರಗಳ ಮೇಲೆ ಬಾಂಬ್ ದಾಳಿ, ದುರಂತ ಹಾನಿಕೃತ್ಯಗಳು ನಡೆಯುತ್ತಿವೆ. ಇಂತಹ ಘಟನೆಗಳು ಮರುಕಳಿಸದಂತೆ ಸರ್ವ ಧರ್ಮೀಯರು ಎಚ್ಚರ ವಹಿಸಬೇಕೆಂದು ಹೇಳಿದರು.

ಸ್ವಧರ್ಮ ನಿಷ್ಠೆ ಪರಧರ್ಮ ಸಹಿಷ್ಣುತೆ, ನಮ್ಮ ದೇಶದ ಸಂಸ್ಕೃತಿಯಾಗಬೇಕು : ಕಾಶೀ ಶ್ರೀಗಳು

ಕರ್ನಾಟಕ ಸಂಧ್ಯಾ 2013–7–13

ಧರ್ಮದ ಅರಿವು ಆಚರಣೆಗಳು ಜೀವನದ ಗುರಿಯಾಗಬೇಕಾಗಿದೆ. ಅದಕ್ಕಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮಗ್ರಂಥಗಳ ಅಧ್ಯಯನ ಮಾಡಬೇಕು. ಈ ದಿನಗಳಲ್ಲಿ ಶಾಲೆಗಳಲ್ಲಿ ಇಂತಹ ಗ್ರಂಥದ ಪಠ್ಯಗಳಿಲ್ಲವಾಗಿವೆ. ಮಕ್ಕಳಿಗೆ ಮನೆಯಲ್ಲಿ ಪ್ರತಿಯೊಬ್ಬರೂ ಧರ್ಮ ಶಿಕ್ಷಣ ಕೊಡಬೇಕೆಂದು ಕರೆ ನೀಡಿದರು.

ಮಾನಸಿಕ ಸಾತ್ವಿಕತೆ ಹೆಚ್ಚಿದ ಹಾಗೆ ಅಂತರಂಗ ಬಹಿರಂಗಗಳ ಸಮಸ್ಯೆಗಳು ಪರಿಹಾರವಾಗುತ್ತವೆ. ಮನುಷ್ಯನಲ್ಲಿರುವ ರಜೋ ತಮೋ ಗುಣಗಳಿಂದಲೇ ಮನಸ್ಸಿನಲ್ಲಿ ರಾಗ–ದ್ವೇಷಗಳು ಹುಟ್ಟುವವು. ಈ ರಾಗ ದ್ವೇಷಗಳ ಸುಳಿಯಿಂದ ಆಚೆ ಬರಲು ದಿನನಿತ್ಯ ಶಾಂತಮನದಿಂದ ಇಷ್ಟಲಿಂಗಪೂಜೆ, ಪಂಚಾಕ್ಷರಮಂತ್ರ ಜಪ, ಪಾರಾಯಣ ಗ್ರಂಥ ಸ್ವಾಅಧ್ಯಾಯ ಮಾಡುವುದರಿಂದ ಸಾತ್ವಿಕ ಗುಣ ಹೆಚ್ಚಾಗುತ್ತದೆ ಎಂದು ಹೇಳಿದರು.

'ಶಿವಪೂಜೆ ಮಾಡಲು ಭಾವನೆಯೇ ಮುಖ್ಯ'

ಭಕ್ತಿಭಾವದಿಂದ ಪೂಜೆ ಮಾಡಲು ಮನಸ್ಸಿನ ಭಾವನೆ, ಏಕಾಗ್ರತೆ ಮುಖ್ಯ. ಇದನ್ನು ಕಂಡು ಬಸವಣ್ಣನವರು 'ಅತ್ತಲಿತ್ತ ಚಲಿಸದಂತೆ ಹೆಳವನ ಮಾಡಯ್ಯ ತಂದೆ' ಎಂದು ಹಲುಬಿದ್ದಾರೆ–ಎಂದು ತಿಳಿಸಿದರು.

ಚಂದ್ರಜ್ಞಾನಾಗಮದಲ್ಲಿ ಬರುವ 64 ಶೀಲಗಳ ಬಗ್ಗೆ ಸೂಕ್ಷ್ಮವಾಗಿ ತಿಳಿಸಿ, ಅದರಲ್ಲಿ ಶಿವಧ್ಯಾನ ಭಾವವೇ ಶೀಲವೆಂದರು.

ಜಗದ್ಗುರುಗಳ ಆಶೀರ್ವಚನ ಸಮಾರಂಭದ ನಡುವೆ 16–7–13ರಂದು ಸುಮಾರು 100 ಜನರು ದೀಕ್ಷಾ ಸಂಸ್ಕಾರ ಪಡೆದುಕೊಂಡರು.

ಈ ಹಿಂದೆ "ಸಿದ್ಧಾಂತ ಶಿಖಾಮಣಿ–ಶೂನ್ಯಸಂಪಾದನೆ" ಎಂಬ ಅಧ್ಯಾಯದಲ್ಲಿ ಈ ದೀಕ್ಷೆಯ ಮಹತ್ವವನ್ನು ವಿವರಿಸಲಾಗಿದೆ. ಹಾಗಾಗಿ ಇಲ್ಲಿ ಆ ಬಗ್ಗೆ ವಿವರಿಸುವುದಿಲ್ಲ.

'ಪಾಶ ಬಂಧನಗಳ ಕಳೆದು ಶಿವಜ್ಞಾನ ಕೊಡುವುದೇ ಸಂಸ್ಕಾರ ದೀಕ್ಷೆ'
ಸಂಯುಕ್ತ ಕರ್ನಾಟಕ, 16–7–2013



ಕಲಬುರ್ಗಿಯ ಶ್ರೀ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ, ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಬಹಿರಂಗ ಇಷ್ಟಲಿಂಗ ಮಹಾಪೂಜೆಯಲ್ಲಿ ಲಿಂಗದೀಕ್ಷೆ, ಅಯ್ಯಾಚಾರ ಕಾರ್ಯಕ್ರಮದಲ್ಲಿ ಕಡಗಂಚಿಯ ವೀರಭದ್ರ ಶಿವಾಚಾರ್ಯರು, ಹಾಗರಗಿಯ ರೇವಣಸಿದ್ಧ ಶಿವಾಚಾರ್ಯರು ಇದ್ದರು.

ದೀಕ್ಷಾವಿಧಿಯನ್ನು ಅಕ್ಕಮಹಾದೇವಿಯು "ಸದ್ಗುರುಸ್ವಾಮಿ ಶಿಷ್ಯಂಗೆ ಅನುಗ್ರಹ ಮಾಡುವಲ್ಲಿ, ತಚ್ಛಿಷ್ಯನ ಮಸ್ತಕದ ಮೇಲೆ ಹಸ್ತವನಿರಿಸಿದಡೆ ಲೋಹದ ಮೇಲೆ ಪರುಷ ಬಿದ್ದಂತಾಯಿತ್ತಯ್ಯ" ಎಂಬ ವಚನದಲ್ಲಿ ವಿವರಿಸುವುದನ್ನು ಕಾಣಬಹುದಾಗಿದೆ ಎಂದು ಜಗದ್ಗುರುಗಳು ತಿಳಿಸಿದರು.

2014ರ ಆಷಾಢಮಾಸದ ಕಾರ್ಯಕ್ರಮವು ಈ ಬಾರಿ ಕಲಬುರ್ಗಿಯಲ್ಲಿ ನಡೆಸಲಾಗಿದ್ದ ಕಾರಣ ಜಗದ್ಗುರುಗಳ ಪೀಠಾರೋಹಣದ ರಜತ ಮಹೋತ್ಸವ ಕಾಶಿಯಲ್ಲಿ 7–7–2014 ರಿಂದ 11–11–2014 ರವರೆಗೆ ಕಾಶೀ ಪೀಠದಲ್ಲಿ ಹಮ್ಮಿಕೊಂಡಿದೆ.

ಸಮನ್ವಯದ ಬಗ್ಗೆ ನಾಡಿನ ಅನೇಕ ಹೆಸರಾಂತ ಸಾಹಿತಿ ಸಂಶೋಧಕರು ಈ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆ ಕೊಡುತ್ತಲೇ ಬಂದಿದ್ದರು. ಡಾ.ಎಂ. ಚಿದಾನಂದ ಮೂರ್ತಿಗಳು ಲಿಂಗಾಯತರೇ ಬೇರೆ. ವೀರಶೈವರೇ ಬೇರೆ ಎಂಬ ವ್ಯವಸ್ಥಿತ ಪ್ರಚಾರ ಅಪಾಯಕಾರಿ ಎಂದು ತಿಳಿಸಿದರು. ಚೆನ್ನಬಸವಣ್ಣನಿಂದ ವೀರಶೈವ ಪದ ಪರಿಚಯವಾದ ಮೇಲೆ 'ಶೈವಮಾರ್ಗ'ವನ್ನು 'ವೀರಶೈವ ಮಾರ್ಗ' ಎಂದು ಅನುಸರಿಸಿದ್ದಾಗಿ ಬಸವಣ್ಣನವರೇ ಹೇಳಿಕೊಂಡಿದ್ದಾರೆ. 12–13ನೇ ಶತಮಾನದಲ್ಲಿ ಗುರುವಿನಿಂದ ಇಷ್ಟಲಿಂಗದೀಕ್ಷೆ ಸ್ವೀಕರಿಸುವ ಕ್ರಿಯೆಗೆ 'ಲಿಂಗಾಯತ' ಎಂಬ ಹೆಸರಿತ್ತು ನಂತರ ಅದನ್ನು ಪಡೆದವರು ಲಿಂಗಾಯತರು ಎಂದಾಯ್ತು. 'ವೀರಶೈವರಿಗೂ ಲಿಂಗಾಯತರಿಗೂ ಯಾವುದೇ ಭೇದವಿಲ್ಲ ಎಂದು ಹೇಳಿದರು.

'ವೀರಶೈವ-ಲಿಂಗಾಯತ ಬೇರೆ ಬೇರೆಯಲ್ಲ'

ಪ್ರಜಾವಾಣಿ, 29-11-2005

ಬೆಂಗಳೂರು : 'ವೀರಶೈವರು' ಹಾಗೂ 'ಲಿಂಗಾಯತ'ರನ್ನು ಪ್ರತ್ಯೇಕ ಪಂಗಡವಾಗಿ ಉತ್ತರ ಮತ್ತು ಮಧ್ಯ ಕರ್ನಾಟಕದಲ್ಲಿ ಪರಿಗಣಿಸುತ್ತಿರುವ ಬಗ್ಗೆ ಹಿರಿಯ ಸಂಶೋಧಕ ಚಿದಾನಂದಮೂರ್ತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು.

'ವೀರಶೈವರು ಪಂಚಪೀಠಗಳ ಅನುಯಾಯಿಗಳು, ಲಿಂಗಾಯತರು ಬಸವಣ್ಣನ ಅನುಯಾಯಿಗಳು ಎಂದು ವ್ಯವಸ್ಥಿತ ಪ್ರಚಾರ ಮಾಡಲಾಗುತ್ತಿದೆ. ಇದಕ್ಕೆ ಕೆಲವು ಮಠಾಧೀಶರು ಹಾಗೂ ವ್ಯಕ್ತಿಗಳು ಬೆಂಬಲ ನೀಡುತ್ತಿದ್ದಾರೆ. ಇದರಿಂದ ಆ ಭಾಗದಲ್ಲಿ ಭಾರೀ ಅಲ್ಲೋಲಕಲ್ಲೋಲ ಉಂಟಾಗಿದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಕಳವಳ ವ್ಯಕ್ತಪಡಿಸಿದರು.

'ವೀರಶೈವರು ಮತ್ತು ಲಿಂಗಾಯತರು ಬೇರೆ ಬೇರೆ ಅಲ್ಲ ಎಂಬುದು ಸಂಶೋಧನೆಯಿಂದ ಸ್ಪಷ್ಟವಾಗಿದೆ. ಅಲ್ಲದೆ, ತಾವು ವೀರಶೈವರೇ ಎಂದು ಬಸವಣ್ಣನವರೇ ಸ್ಪಷ್ಟಪಡಿಸಿದ್ದಾರೆ. 'ವೀರಶೈವ' ಪದ ಗ್ರಂಥೋಕ್ತ ವಾಗಿದ್ದರೂ, ಶಿವನಿಗೆ ನಿಷ್ಠರಾಗಿರುವವರು ಎಂದು ಅರ್ಥವಿದ್ದರೂ ಹಾಗೆಯೇ ದೀಕ್ಷೆಯ ವಿಧಾನವನ್ನು ಸೂಚಿಸುವ ಲಿಂಗಾಯತವನ್ನು ಜನಾಂಗ ಅಥವಾ ಪಂಥ ಎಂದು ಅರ್ಥೈಸಲಾಗುತ್ತಿದೆ. ಆದರೆ ಆಡುಭಾಷೆಯಲ್ಲಿನ ಈ ಬಳಕೆ ಏನೇ ಇದ್ದರೂ ಲಿಂಗಾಯತ ಮತ್ತು ವೀರಶೈವ ಎರಡೂ ಒಂದೇ ಹೊರತು ಭಿನ್ನವಲ್ಲ' ಎಂದು ವಿವರಿಸಿದರು

***ಮಠಾಧೀಶರ ಬೆಂಬಲಕ್ಕೆ ಆತಂಕ :** 'ಪ್ರಸ್ತುತ ತಲೆದೋರಿರುವ ಈ ಭೇದಕ್ಕೆ ಗದಗ ಮತ್ತು ಚಿತ್ರದುರ್ಗದ ಮಠಾಧೀಶರೂ ಬೆಂಬಲ ಸೂಚಿಸಿರುವುದು ಆತಂಕಕಾರಿಯಾಗಿದೆ. ತಮ್ಮದು 'ಬಸವ ಧರ್ಮ', 'ಲಿಂಗಾಯತ ಧರ್ಮ' ಎಂದು ಅವರು ಹೇಳುತ್ತಿರುವುದು ಸರಿಯಲ್ಲ. ಚಿತ್ರದುರ್ಗ ಮಠದ ಸ್ಥಾಪಕ ಗುರುಗಳಾದ ಇಮ್ಮಡಿ ಮುರುಘಾ ಗುರುಸಿದ್ಧರು ವೀರಶೈವರಾಗಿದ್ದರು. ಹಾಗಿರುವಾಗ ಮಠದ ಪರಂಪರೆಗೆ ಸೇರಿದ ಎಲ್ಲಾ ಸ್ವಾಮೀಜಿಗಳೂ ವೀರಶೈವರೇ ಆಗಿರುತ್ತಾರೆ' ಎಂದು ಚಿ.ಮೂ. ಪ್ರತಿಪಾದಿಸಿದರು.*

'ಗುರುಪೀಠ ಮತ್ತು ವಿರಕ್ತ ಮಠಗಳು ವೀರಶೈವ ಸಮಾಜದ ಎರಡು ಕಣ್ಣುಗಳಿದ್ದಂತೆ. ಆದರೆ ಈಗ ಅವುಗಳ ಮಧ್ಯ ತಲೆದೋರಿರುವ ವಿರಸದಿಂದ ಅನೇಕ ಲಿಂಗಾಯತರು ದಿಕ್ಕು ತೋಚದಂತಾಗಿದ್ದಾರೆ. ಇದರಿಂದ ಸಮಾಜದ ಸ್ವಾಸ್ಥ್ಯ ಕೆಡುವ ಲಕ್ಷಣ ಕಾಣುತ್ತಿರುವ ಹಿನ್ನೆಲೆಯಲ್ಲಿ ಲಿಂಗಾಯತ, ವೀರಶೈವ ಎಂಬ ಭೇದವನ್ನು ಬಿಟ್ಟು ಎಲ್ಲರೂ ಲಿಂಗಾಯತ ಸಮಾಜದ ನಾಡಿನ ಒಳಿತಿಗಾಗಿ ಶ್ರಮಿಸಬೇಕು' ಎಂದು ಅವರು ಕಳಕಳಿಯಿಂದ ಮನವಿ ಮಾಡಿದರು.

ಗುರು-ವಿರಕ್ತರ ಭೇದಗಳನ್ನಳಿಸಿ ಸಮನ್ವಯದತ್ತ ಸಾಗುತ್ತಿದ್ದ ಜಗದ್ಗುರುಗಳಿಗೆ ಡಾ॥ ಚಿದಾನಂದ ಮೂರ್ತಿಗಳ ಹೇಳಿಕೆ ಬಹಳ ಸಂತೋಷ ಕೊಟ್ಟಿದೆ.

ಚಿ.ಮೂ. ಹೇಳಿಕೆಗೆ ಕಾಶಿ ಜಗದ್ಗುರುಗಳ ಸ್ವಾಗತ

ಸಂಕ, 2-12-2005

ತೇರದಾಳ (ತಾ. ಜಮಖಂಡಿ), ಡಿ.1.ವೀರಶೈವ ಎನ್ನುವ ಪದದಲ್ಲಿ ಧರ್ಮ ಹಾಗೂ ತತ್ವಜ್ಞಾನವನ್ನು ತಿಳಿಸುವ ಗೂಡಾರ್ಥ ಅಡಗಿದೆ. ಡಾ. ಚಿದಾನಂದ ಮೂರ್ತಿ ನಾಡಿನ ಶ್ರೇಷ್ಠ ಸಂಶೋಧಕರಾಗಿದ್ದು, ವೀರಶೈವ ಲಿಂಗಾಯತ ಪದಗಳ ಬಗ್ಗೆ ಉಂಟಾಗಿರುವ ಗೊಂದಲವನ್ನು ದೂರ ಮಾಡಲು ಅವರು ನೀಡಿರುವ ಹೇಳಿಕೆ ಸ್ವಾಗತಾರ್ಹ, ಸರ್ವಮಾನ್ಯ ಎಂದು ಕಾಶೀ ಜ್ಞಾನಸಿಂಹಾಸನಾಧೀಶ್ವರ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಇಂದಿಲ್ಲಿ ಹೇಳಿದರು.

'ವಿ' ಎಂದರೆ ವಿದ್ಯೆಯೆಂತಲು 'ರ' ಎಂದರೆ ರಮಿಸು ಎಂತಲು ಹೀಗೆ ಶಿವಜೀವರ ಐಕ್ಯತೆಯನ್ನು ಬೋಧಿಸುವ ವಿದ್ಯೆಯಲ್ಲಿ ಸದಾ ರಮಿಸುವ ಶಿವಭಕ್ತರಿಗೆ ವೀರಶೈವರೆಂದು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಲಾಗಿದೆ.

ಶ್ರೀ ನೀಲಕಂಠ ಶಿವಾಚಾರ್ಯರು 'ಕ್ರಿಯಾಸಾರ' ಎಂಬ ಗ್ರಂಥದಲ್ಲಿ 'ವಿ' ಎಂದರೆ ವಿರೋಧ ಎಂತಲು, 'ರ' ಎಂದರೆ ರಹಿತ ಎಂತಲು ಬೇರೆ ಧರ್ಮದವರೊಂದಿಗೆ ಎಂದಿಗೂ ವಿರೋಧ ಭಾವನೆ ತಾಳದ ಶಿವಭಕ್ತನೇ ವೀರಶೈವನೆಂದು ಹೇಳಲಾಗಿದೆ. ವಿಕಲ್ಪರಹಿತನಾದ ಶಿವಭಕ್ತನೇ ವೀರಶೈವನು. ಹೀಗೆ ವೀರಶೈವ ಪದವು ಅನೇಕ ಗೂಡಾರ್ಥಗಳನ್ನೊಳಗೊಂಡಿದೆ.

12ನೇ ಶತಮಾನದ ಬಸವಾದಿ ಶಿವಶರಣರು ವಚನ ಸಾಹಿತ್ಯದಲ್ಲಿ ಧರ್ಮವಾಚಕವಾಗಿ ವೀರಶೈವ ಪದವನ್ನೇ ಬಳಸಿದ್ದಾರೆ. 'ಲಿಂಗಾಯತ' ಎನ್ನುವ ಪದವು 'ದೀಕ್ಷಾ ಸಂಸ್ಕಾರವನ್ನು ಪಡೆಯುವಾಗ, ಗುರುವಿನಿಂದ ಲಿಂಗವನ್ನು ಆಯಾತ ಮಾಡಿಕೊಳ್ಳುವುದು' ಎಂಬರ್ಥ ಸೂಚಿಸುವ ಪದವೇ ಹೊರತು, ಸಂಪೂರ್ಣವಾಗಿ ಧರ್ಮದ ವ್ಯಾಪ್ತಿಯನ್ನು ಒಳಗೊಂಡಿಲ್ಲ. ಆದರೂ ರೂಢಿಯಲ್ಲಿ ಲಿಂಗಾಯತ ಪದವನ್ನು ಧರ್ಮವಾಚಕವಾಗಿ ಬಳಸುತ್ತ ಬಂದಿದ್ದಾರೆ. ಹೀಗೆಂದ ಮಾತ್ರಕ್ಕೆ ವೀರಶೈವವೇ ಬೇರೆ ಲಿಂಗಾಯತವೇ ಬೇರೆ ಎಂದು ಕಂದಕ ನಿರ್ಮಾಣ ಮಾಡುವುದು ಧರ್ಮದ್ರೋಹದ ಕೆಲಸ ಎಂದು ಕಾಶೀ ಜಗದ್ಗುರುಗಳು ಹೇಳಿದರು.

ವೀರಶೈವ ಲಿಂಗಾಯತ ಇವೆರಡು ಒಂದೇ ಎಂಬ ಹೇಳಿಕೆಯನ್ನು ನೀಡುವುದರ ಮೂಲಕ ಡಾ. ಚಿ.ಮೂ. ಆ ಕಂದಕವನ್ನು ತುಂಬುವ ಕಾರ್ಯ ಮಾಡಿದ್ದಾರೆ. ಇದನ್ನು ಎಲ್ಲರೂ ಒಪ್ಪಿಕೊಂಡು ಸ್ವಾಗತಿಸಬೇಕೆಂದು ಡಾ. ಚಂದ್ರಶೇಖರ ಭಗವತ್ಪಾದರು ಮಠಾಧೀಶರರಿಗೆ ಕರೆ ನೀಡಿದ್ದಾರೆ. ಕೊಕಟನೂರಿನ ಶ್ರೀ ಗುರು ಶಾಂತಲಿಂಗ ದೇಶಿಕೇಂದ್ರ ಸ್ವಾಮಿಗಳು ಉಪಸ್ಥಿತರಿದ್ದರು.

ಶಿವಜ್ಞಾನದ ಸಂಸ್ಕಾರವೇ ದೀಕ್ಷೆ

2-12-2005

ಕಾಶೀ ಜಗದ್ಗುರುಗಳ ಪವಿತ್ರ ಹಸ್ತದಿಂದಾದ ಉದ್ಘಾಟನೆಗಳು


सोलापूर महानगरपालिका

सोलापूर महानगरपालिकेने - - -
कोंतम चौकात बसविणेंत आलेल्या
पूज्य श्री महात्मा बसवेश्वर
यांचें अश्वारुढ पुतळ्याचा - - -

★ अनावरण समारंभ ★

मान्यवर परमपूज्य
श्री ष. ब्र. डॉ. चंद्रशेखर
शिवाचार्य
अमरेश्वर मठ (गुळेदगुड)
यांच्या शुभहस्ते

मा. नामदार
सुशीलकुमारजी शिंदे
अर्थमंत्री, महाराष्ट्र राज्य
यांचे अध्यक्षतेखाली

प्रमुख पाहुणें
श्री. शरदरावजी पवार
माजी मुख्यमंत्री
यांच्या उपस्थितीमध्ये

रविवार दिनांक १५–५–८८, २५ वैशाख शके १९१०
रोजी सायंकाळी ६–३० वाजता संपन्न होणार आहे.
या समारंभास उपस्थित राहून सहकार्य करावे
ही विनंती.

– आपले विनीत –

थॉमस चे. बेंजामिन (आय. ए. एस.)
आयुक्त
मनोहर सपाटे
माजी सभापती स्थायी समिती

बंडप्पाअण्णा मुनाळे
महापौर
विश्वनाथ कंदकुरे
माजी सभापती परिवहन समिती

नारायणराव कोनापुरे
उपमहापौर
विठ्ठलराव ननवरे
सभापती स्थापत्य समिती

ಕಾಶೀ ಜಂಗಮವಾಡಿ ಮಠವು ಕಾಶಿಯಲ್ಲೇ ಅತ್ಯಂತ ಪುರಾತನ ಮಠವಾಗಿ ಬಹು ಪ್ರಸಿದ್ಧಿಪಡೆದ ಮಠವಾಗಿದೆ. ವೇದಾಧ್ಯಯನಕ್ಕಾಗಿ, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ಯಾವ ಭೇದವೆಣಿಸದೆ ಶ್ರೀಮಠವು ಆಶ್ರಯವಿತ್ತು ಬೆಳೆಸಿದೆ. ಕಾಲದಿಂದ ಕಾಲಕ್ಕೆ ಆಗಿಹೋದ ಪೂಜನಿಯ ಜಗದ್ಗುರುಗಳೆಲ್ಲರೂ ಶ್ರೀಮಠದ ಏಳ್ಗೆಗೆ ಶ್ರಮಿಸಿರುವರಲ್ಲದೆ ವೀರಶೈವ ಸಂಸ್ಕೃತಿ–ಸಂಸ್ಕಾರಗಳ ಕುರಿತು ದೇಶದೆಲ್ಲೆಡೆ ಸಂಚರಿಸಿ ಧರ್ಮ ಪ್ರಚಾರ ನಡೆಸಿದ್ದಾರೆ. ಶ್ರೀಮಠ ಹಾಗೂ ಕ್ಷೇತ್ರವು ರಾಷ್ಟ್ರೀಯ ಮಹಾ ಪೀಠವಾಗಿದೆ. ತನ್ನದೇ ಆದ ಪರಂಪರೆ ಮತ್ತು ಐತಿಹಾಸಿಕ ದಾಖಲೆಗಳುಳ್ಳ ಈ ಪೀಠವು ನೇಪಾಳ, ಕಾಶೀ, ಮೈಹರ, ಮೈಸೂರು, ಕೊಡಗು ಮತ್ತು ಕೆಳದಿ ಅರಸರಿಂದ ಗೌರವಾನ್ವಿತವಾದ ಈ ಪೀಠಕ್ಕೆ ಮೊಗಲ್ ಚಕ್ರವರ್ತಿಗಳಾದ ಹುಮಾಯೂನ್, ಶಹಜಹಾನ್, ಬಾಬರ್, ಅಕಬರ, ಔರಂಗಜೇಬ ಮುಂತಾದವರು ಫರ್ಮಾನುಗಳನ್ನು ಕೊಟ್ಟು ಗೌರವಿಸಿದ್ದಾರೆ. ಇಂದಿಗೂ ಪೀಠದಲ್ಲಿ ದೇಶದ ಹಲವೆಡೆಯಿಂದ ಬಂದ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಇಂತಹ ಪವಿತ್ರವೂ ಪುರಾತನವೂ, ಆದ ಕಾಶೀ ಪೀಠದ ಇಂದಿನ ಜಗದ್ಗುರುಗಳಾದ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ವೀರಶೈವ ಧರ್ಮದ, ಕೀರ್ತಿ ಪತಾಕೆಯನ್ನು ದೇಶ ವಿದೇಶಗಳಲ್ಲಿ ಹಾರಿಸಿದ್ದಾರೆ. ಜ್ಞಾನದ ಭಂಡಾರವೇ ಆಗಿರುವ ಜ್ಞಾನಪೀಠಾಧಿಪತಿಗಳಾದ ಜಗದ್ಗುರು ಚಂದ್ರಶೇಖರ ಶಿವಾಚಾರ್ಯರು ಸುಮಾರು 40 ವರ್ಷಗಳಿಂದ ವೀರಶೈವದ ಧರ್ಮಗ್ರಂಥವಾದ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಕುರಿತು ನಾನಾ ದೃಷ್ಟಿಕೋನಗಳಿಂದ ಅಭ್ಯಾಸಮಾಡಿ ಸನ್ಯಾಸಿಗಳ ಜೊತೆಗೆ ಗೃಹಸ್ಥರಿಗೂ ನಿತ್ಯ ಬದುಕನ್ನು ಸುಂದರವಾಗಿಸಿಕೊಂಡು ಬಾಳ್ವೆ ಮಾಡುವ ತತ್ವಗಳನ್ನು ಬೋಧಿಸಿತ್ತಾ ಸಾಗಿದ್ದಾರೆ.

ಅಂದು ಸಂಸ್ಕೃತದಲ್ಲಿ ರೇಣುಕರು ಅಗಸ್ತ್ಯರೊಬ್ಬರಿಗೆ ಮಾತ್ರ ಬೋಧಿಸಿದ ಸಿದ್ಧಾಂತವನ್ನು ಇಂದು ಕಾಶೀ ಜಗದ್ಗುರುಗಳು ಸಿದ್ಧಾಂತಕ್ಕೆ ಯಾವುದೇ ಲೋಪ ಬಾರದಂತೆ ಬಹು ಸರಾಗವಾಗಿ ಆಡುಭಾಷೆಯಲ್ಲಿ ಕರ್ನಾಟಕಕ್ಕೆ ಬಂದಾಗ ಕನ್ನಡದಲ್ಲಿ, ಆಂಧ್ರ, ತೆಲಂಗಾಣದಲ್ಲಿ ತೆಲುಗಿನಲ್ಲಿ, ಮಹಾರಾಷ್ಟ್ರ, ಗುಜರಾತ್‌ನಲ್ಲಿ ಮರಾಠಿಯಲ್ಲಿ, ಉತ್ತರಭಾರತದ ರಾಜ್ಯಗಳಿಗೆ ಭೇಟಿ ನೀಡಿದಾಗ ಹಿಂದಿಯಲ್ಲಿ ಆಶೀರ್ವಚನ ರೂಪದಲ್ಲಿ ಲಕ್ಷಲಕ್ಷ ಜನ ಭಕ್ತರಿಗೆ

ಬೋಧಿಸುವ ಮಹಾಮಹಿಮಾಶಾಲಿಗಳಾಗಿದ್ದಾರೆ. ಸಿದ್ಧಾಂತ ಶಿಖಾಮಣಿಯಲ್ಲಿನ ತತ್ವಗಳನ್ನೆಲ್ಲಾ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುವ ಪರಿಣಾಮವಾಗಿ ಹೋದೆಡೆಯಲ್ಲೆಲ್ಲಾ ಅನುಭವದ ತತ್ವಾಮೃತವೇ ಹರಿದುಬರುತ್ತದೆ. ಇಂತಹ ಪರಮಪೂಜ್ಯರೂ, ದಾರ್ಶನಿಕರೂ ಸ್ಥಿತಪ್ರಜ್ಞರೂ ಸಮನ್ವಯದ ಹರಿಕಾರರೂ ಆಗಿರುವ ಕಾಶೀ ಜಗದ್ಗುರುಗಳವರ ಅಮೃತ ಹಸ್ತದಿಂದ ಮಂದಿರಗಳು, ಮೂರ್ತಿಗಳೂ, ಕಳಸಾರೋಹಣ, ವಿದ್ಯಾ ಸಂಸ್ಥೆಗಳೂ ಉದ್ಘಾಟನೆಗೊಂಡಿವೆ. ಕಾಶೀ ಜಗದ್ಗುರುಗಳನ್ನು ಈ ಸಮಾರಂಭಗಳಿಗೆ ಆಹ್ವಾನಿಸುತ್ತಿದ್ದಾರೆ.

24–4–1988 : ಕಾಶೀ ಜಗದ್ಗುರುಗಳು ಸೊಲ್ಲಾಪುರದಲ್ಲಿ ಸುಮಾರು 8–10 ವರ್ಷಗಳ ಕಾಲ ಕಾಶೀ ಪೀಠದ ಜಗದ್ಗುರುಗಳಾಗುವ ಮುನ್ನ–ಓದುತ್ತಿದ್ದ ಕಾಲದಲ್ಲೇ ತಮ್ಮ ಪ್ರವಚನ ಕೌಶಲ್ಯದಿಂದ ಅಪಾರ ಜನಮನ್ನಣೆ ಗಳಿಸಿ ಬಹುಜನಪ್ರಿಯರಾದ ಸ್ವಾಮೀಜಿಗಳಾಗಿದ್ದರು. ಈ ಜನಪ್ರಿಯತೆಯ ಕಾರಣದಿಂದಲೇ ಸೊಲ್ಲಾಪುರದಲ್ಲಿ ಕೊಂತಮ ಚಾಕಾದಲ್ಲಿ ಅಲ್ಲಿನ ನಗರಪಾಲಿಕೆಯವರು ಅಂದಾಜು ಐದು ಲಕ್ಷರೂಪಾಯಿ ಖರ್ಚುಮಾಡಿ ನಿರ್ಮಿಸಿದ ಅಶ್ವಾರೂಢ ಬಸವೇಶ್ವರರ ಬೃಹತ್‌ಮೂರ್ತಿಯ ಅನಾವರಣ ಸಮಾರಂಭಕ್ಕೆ ಗುಳೇದಗುಡ್ಡದ ಅಮರೇಶ್ವರ ಮಠದ ಸ್ವಾಮಿಗಳಾದ ಡಾ. ಚಂದ್ರಶೇಖರ ಶಿವಾಚಾರ್ಯರ ಶುಭಹಸ್ತದಿಂದ ಅನಾವರಣಗೊಳಿಸಲು ಆಮಂತ್ರಣ ನೀಡಿದ್ದರು. ಮಹಾರಾಷ್ಟ್ರ ರಾಜ್ಯ ಸರಕಾರದ ಹಣಕಾಸು ಸಚಿವರಾದ ಮಾನ್ಯ ಶ್ರೀ ಸುಶೀಲಕುಮಾರ ಶಿಂಧೆ ಅವರ ಅಧ್ಯಕ್ಷತೆಯಲ್ಲಿ ಈ ಸಮಾರಂಭ ಜರುಗಿತು. ಆ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಶರದ್ ಪವಾರ್ ಅವರೂ ಉಪಸ್ಥಿತರಿದ್ದರು.

ಷ.ಬ್ರ. ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರು (ಇಂದಿನ ಜಗದ್ಗುರುಗಳು) ವೇದಿಕೆ ಮೇಲೆ ಬರುತ್ತಿದ್ದಂತೆ ಕಿಕ್ಕಿರಿದಿದ್ದ ಅಪಾರ ಜನಸ್ತೋಮ ಚಪ್ಪಾಳೆ ತಟ್ಟಿ ಹರ್ಷೋದ್ಗಾರ ಮಾಡಿ ಸ್ವಾಮೀಜಿಗಳಿಗೆ ತಮ್ಮ ಗೌರವ ಹಾಗೂ ಅಭಿಮಾನವನ್ನು ವ್ಯಕ್ತಪಡಿಸಿದರು. ಅಲ್ಲಿಯ ಜನತೆಗೆ ಈಗಾಗಲೇ ಸ್ವಾಮೀಜಿಗಳ ಮೇಲೆ ಅಪಾರ ಗೌರವವಿದ್ದಿತು. ಜೊತೆಗೆ ಇತ್ತೀಚೆಗಷ್ಟೇ ಪಶ್ಚಿಮ ಬಂಗಾಲ ಸರ್ಕಾರ ಸ್ವರ್ಣಪದಕ ಕೊಟ್ಟು ಗೌರವಿಸಿದ್ದು–ಜನತೆಯ ಅಭಿಮಾನಕ್ಕೆ ಕಾರಣವಾಗಿತ್ತು.

> ಅರ್ಥಮಂತ್ರಿ ಶಿಂಧೆಯವರು ಮಾತನಾಡಿ ಶ್ರೀ ಬಸವೇಶ್ವರರು ತಮ್ಮ ಎಂಟನೆಯ ವಯಸ್ಸಿನಲ್ಲಿಯೇ ಬಂಡಾಯ ಮಾಡಿದ ಕ್ರಾಂತಿಕಾರಿ ಎಂದರಲ್ಲದೆ ವೀರಶೈವ ಧರ್ಮ ವಿಚಾರಗಳನ್ನು ಪುನರುಜ್ಜೀವನಗೊಳಿಸಿ ಕಟ್ಟಾ ಏಕೀಕರಣವಾದವನ್ನು ಪ್ರತಿಪಾದಿಸಿದರೆಂದರು. ಮಂತ್ರಿಗಳು ಬಸವೇಶ್ವರರ ಕನ್ನಡ ವಚನವನ್ನು ಹೇಳಿದಾಗ ಜನ ಹರ್ಷೋದ್ಗಾರ ಮಾಡಿದರು.

ನಾವಿಂದು ಪರಿಪೂರ್ಣ ಮನುಷ್ಯರಾಗಿಲ್ಲ

ಅಂದು ಸ್ವಾಮೀಜಿಗಳು ತಮ್ಮ ಆಶೀರ್ವಚನದಲ್ಲಿ – ಪರಿಪೂರ್ಣ ಮನುಷ್ಯನೆಂದರೆ ಹೇಗಿರಬೇಕು ಎನ್ನುವುದನ್ನು ಬಹು ಸ್ವಾರಸ್ಯಕರವಾಗಿ ವಿವರಿಸಿದರು. ಮನುಷ್ಯ ಕೇವಲ ಮನುಷ್ಯ ರೂಪ ಧರಿಸಿದ ಮಾತ್ರಕ್ಕೆ ಮನುಷ್ಯನಾಗುವುದಿಲ್ಲ. ಅಂತರಂಗದಲ್ಲಿಯೂ ಮನುಷ್ಯನಾಗಿರಬೇಕು. ಪ್ರಾಣಿಗಳು ಪರಿಪೂರ್ಣ ಪ್ರಾಣಿಗಳಾಗಿರುತ್ತವೆ. ಆದರೆ ಮನುಷ್ಯರಲ್ಲಿ ಹಲವಾರು ಪಶು ಪ್ರವೃತ್ತಿ ಇರುವುದರಿಂದ ಅವರನ್ನು ಪರಿಪೂರ್ಣ ಮನುಷ್ಯರೆನ್ನಲಾಗದು. ಮನುಷ್ಯರೂಪದ ಮೃಗಗಳಾಗಿದ್ದೇವೆಯೇ ವಿನಃ ಮನುಷ್ಯರಾಗಿಲ್ಲ. 800 ವರ್ಷಗಳ ಹಿಂದೆ ಮಹಾತ್ಮ ಬಸವೇಶ್ವರರು ಮಹಾನ್ ಮಾನವತಾವಾದಿಗಳಾಗಿದ್ದರಲ್ಲದೆ ಪರಿಪೂರ್ಣ ಮನುಷ್ಯರಾಗಿದ್ದರು. ಮಹಾತ್ಮ ಬಸವೇಶ್ವರರು ಸಮಾಜಕ್ಕೆ ಮಾಡಿದ ಮಹದುಪಕಾರವನ್ನು ನಾವಿನ್ನೂ ತೀರಿಸಿಲ್ಲ. ಅವರೊಬ್ಬ ಶ್ರೇಷ್ಠ ದಾರ್ಶನಿಕರೂ, ಸಮಾಜ ಸುಧಾರಕರೂ ಆಗಿದ್ದರು. ವಿಶಾಲ ಹೃದಯ ಉಳ್ಳವರಿಗೆ ಮಾತ್ರ ಮಹಾತ್ಮರೆನ್ನುತ್ತಾರೆಯೇ ವಿನಃ ಸಂಕುಚಿತ ಮನೋಭಾವದವರಿಗಲ್ಲ. ಮನುಷ್ಯ ನಿಷ್ಠೆಯಿಂದ ಸಾಧನೆ ಮಾಡಿದರೆ ಮಹಾತ್ಮನಾಗಬಹುದು ಎಂದು ಬಸವೇಶ್ವರರು ನಮಗೆ ತೋರಿಸಿಕೊಟ್ಟಿದ್ದಾರೆ. ಅವರ ವಚನ ಅಂತರಂಗ ಹಾಗೂ ಬಹಿರಂಗ ಶುದ್ಧಿಯ ಅವಶ್ಯಕತೆಯನ್ನು ಹೇಳುತ್ತದೆ ಎಂದು ಸ್ವಾಮೀಜಿಯವರು ಅನೇಕ ವಚನಗಳ ಸಂಸ್ಕೃತ ಶ್ಲೋಕಗಳನ್ನು ಉದಾಹರಿಸಿ ಮನಮುಟ್ಟುವಂತೆ ಹೇಳಿದ್ದು ಕೇಳಿದರೆ– ಜಗದ್ಗುರುಗಳಿಗೆ ಬಸವೇಶ್ವರರ ಬಗ್ಗೆ ಇರುವ ಗೌರವ ಎದ್ದುಕಾಣುತ್ತದೆ. ಸಮನ್ವಯದ ದೃಷ್ಟಿ ಹಾಗೂ ಮನೋಭಾವವಿದ್ದುದರಿಂದಲೇ ಬಸವೇಶ್ವರರ ಮೂರ್ತಿ ಅನಾವರಣ ಗೊಳಿಸಿದರು,

7–8–1989



ಶ್ರೀ ಗಜಾನನ ಮಂದಿರ, ಬಸವೇಶ್ವರ ಮಾರ್ಕೆಟ್ ಯಾರ್ಡ್, ಮಹಾಲಿಂಗಪೂರ

ಸೋಮವಾರ ದಿನಾಂಕ 7–8–1989ರಂದು ಬೆಳಿಗ್ಗೆ 10 ಘಂಟೆಗೆ
ಕಾವ್ಯ ದರ್ಶನ ತೀರ್ಥ, ಸಾಹಿತ್ಯ ಶಾಸ್ತ್ರಿ, ಲಬ್ಧ ಸ್ವರ್ಣ ಪದಕ

ಶ್ರೀ ಷ. ಬ್ರ. ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಗುಳೇದಗುಡ್ಡ
ಇವರಿಂದ ದೇವಾಲಯದ ಉದ್ಘಾಟನೆ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ

ಮಹಲಿಂಗಪುರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ಗಜಾನನ ದೇವಾಲಯದ ಉದ್ಘಾಟನೆ ಮತ್ತು ಶ್ರೀ ಗಜಾನನ ಮೂರ್ತಿ ಪ್ರತಿಷ್ಠಾಪನೆಗಾಗಿ ಗುಳೇದಗುಡ್ಡ ಸ್ವಾಮೀಜಿಗಳಾದ ಷ.ಬ್ರ.ಶ್ರೀ. ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು (ಇಂದಿನ ಕಾಶೀ ಜಗದ್ಗುರುಗಳು) ತಮ್ಮ ಪವಿತ್ರ ಹಸ್ತಗಳಿಂದ ಉದ್ಘಾಟನೆ ಮಾಡಿದ್ದಲ್ಲದೆ ಗಜಾನನ ಮೂರ್ತಿ ಪ್ರತಿಷ್ಠಾಪನೆಯನ್ನು ಕಳಸಾರೋಹಣವನ್ನು ನೆರವೇರಿಸಿದರು.

ಮಹಲಿಂಗಪುರದಲ್ಲಿ ಇಂದಿಗೂ ಜಗದ್ಗುರುಗಳು ವರ್ಷಕ್ಕೊಮ್ಮೆ ಹತ್ತು ದಿನಗಳ ಕಾಲ ಶ್ರೀ ಸಿದ್ಧಾಂತ ಶಿಖಾಮಣಿ ಕುರಿತು ಆಧ್ಯಾತ್ಮ ಆಶೀರ್ವಚನ ನೀಡುತ್ತಲೇ ಬಂದಿದ್ದಾರೆ. ಅಲ್ಲಿನ ಭಕ್ತಾದಿಗಳಿಗೆ ಜಗದ್ಗುರುಗಳ ಬಗ್ಗೆ 1989ರಿಂದಲೂ ಅಪಾರ ಭಕ್ತಿ, ಗೌರವ ತುಂಬಿದೆ.

12–4–1993ರಲ್ಲಿ ಹುಬ್ಬಳ್ಳಿ ಬಳಿ ನೂಲ್ವಿ ಗ್ರಾಮದಲ್ಲಿ ಪಂಚಪೀಠಗಳಾದ ರಂಭಾಪುರಿ, ಉಜ್ಜಯಿನಿ, ಶ್ರೀಶೈಲ ಮತ್ತು ಕಾಶೀ ಪೀಠದ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ, ಕಲ್ಯಾಣ ಮಂಟಪದ ಭೂಮಿಪೂಜೆ ರಜತಮಹೋತ್ಸವ ಉದ್ಘಾಟನೆ, ಮುಂತಾದ ಕಾರ್ಯಕ್ರಮಗಳು ವೈಭವದಿಂದ ನಡೆದವು.

12-4-93 ಬೆಳಿಗ್ಗೆ 9.00 ಘಂಟೆಗೆ
ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಮೃತ ಹಸ್ತದಿಂದ
ಶ್ರೀ ಜಗದ್ಗುರು ರೇಣುಕಾಚಾರ್ಯರರ
ಹಾಗೂ
ಶ್ರೀ ಮುಕ್ತಿಮಂದಿರ ಮಹರ್ಷಿಗಳೂ ಆದ ಶ್ರೀ ಮದ್ ರಂಭಾಪುರಿ
ಲಿಂ. ಜಗದ್ಗುರು ಶ್ರೀ ವೀರ ಗಂಗಾಧರ ಶಿವಾಚಾರ್ಯ
ಭಗವತ್ಪಾದರ ಮೂರ್ತಿಗಳ ಪ್ರತಿಷ್ಠಾಪನ ಮತ್ತು ಕಳಸಾರೋಹಣ

12-4-93 ಬೆಳಿಗ್ಗೆ 11.00 ಘಂಟೆಗೆ
ಶ್ರೀ ಜಗದ್ಗುರು ಪಂಚ ಪೀಠಾಧೀಶ್ವರರ ಅಮೃತ ಹಸ್ತದಿಂದ
ಶ್ರೀ ರೇಣುಕಾಚಾರ್ಯ ಕಲ್ಯಾಣ ಮಂಟಪದ ಭೂಮಿ ಪೂಜೆ

ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರೌಢ ಶಾಲೆಯ
ರಜತಮಹೋತ್ಸವ ಉದ್ಘಾಟನೆ
ಡಾ|| ಎಚ್.ಡಿ. ಲಮಾಣಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಸಚಿವರು,
ಸರಕಾರಿ ಕನ್ನಡ ಗಂಡು ಮಕ್ಕಳ ಶಾಲೆಯ
ಶತಮಾನೋತ್ಸವ ಉದ್ಘಾಟನೆ
ಮಾನ್ಯ ಶ್ರೀ ಎಚ್.ಕೆ. ಪಾಟೀಲ ಜವಳಿ ಸಚಿವರು, ಕರ್ನಾಟಕ . ಇವರಿಂದ
ಸರಕಾರಿ ಕನ್ನಡ ಹೆಣ್ಣುಮಕ್ಕಳ ಶಾಲೆಯ ಅಮೃತ
ಮಹೋತ್ಸವ ಉದ್ಘಾಟನೆ

॥ ಶ್ರೀ ಜಗದ್ಗುರು ಪಂಚಾಚಾರ್ಯಃ ಪ್ರಸೀದತು ॥




ಶ್ರೀರಂಭಾಪುರಿ ಜಗದ್ಗುರುಗಳವರು ಮತ್ತು
ಶ್ರೀಕಾಶೀ ಜಗದ್ಗುರುಗಳವರಿಂದ
ಮಂದಿರಗಳ ಉದ್ಘಾಟನೆ ಹಾಗೂ ಮಹಾ ಶಿವಪೂಜಾ
ಸಮಾರಂಭ, ತುಮಕೂರು
ಈ ಉಭಯ ಜಗದ್ಗುರುಗಳವರ ಅಮೃತ ಹಸ್ತದಿಂದ
25–ಫೆಬ್ರವರಿ 1997 ಮಂಗಳವಾರದಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರ
ಶ್ರೀ ಕಾಶೀ ವಿಶ್ವನಾಥ ಮಂದಿರ, ಶ್ರೀ ಮಾತಾ ಅನ್ನಪೂರ್ಣೇಶ್ವರಿ ಮಂದಿರ
ಈ ತ್ರಿವಳಿ ಮಂದಿರಗಳ ಉದ್ಘಾಟನಾ ಸಮಾರಂಭ
ಉಭಯ ಜಗದ್ಗುರುಗಳ ಮಹಾಪೂಜೆ, ಧರ್ಮ–ಜಾಗೃತಿ ಸಮಾರಂಭ

25–2–1997 ಈ ವೇಳೆಗಾಗಲೆ ಕಾಶೀ ಪೀಠದ ಜಗದ್ಗುರುಗಳಾಗಿ ಪೀಠಾಧಿಕಾರವನ್ನು ವಹಿಸಿಕೊಂಡಿದ್ದ ಗುಳೇದಗುಡ್ಡದ ಅಮರೇಶ್ವರ ಮಠಾಧ್ಯಕ್ಷರಾಗಿದ್ದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಕರ್ನಾಟಕದಲ್ಲಿ ತಮ್ಮ ವಿದ್ವತ್ತಿನಿಂದಾಗಿ ಬಹು ಪ್ರಸಿದ್ಧಿ ಪಡೆದಿದ್ದರು. ಚಿನ್ನದ ಪದಕಗಳನ್ನು ಗಳಿಸಿ, ಡಾಕ್ಟರೇಟ್ ಪದವಿ ಪಡೆದು, ಡಿ.ಲಿಟ್‌ಗಾಗಿ ಮಹಾಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಮೊದಲ ಜಗದ್ಗುರುಗಳು ಇವರೆಂದು ವೀರಶೈವರೆಲ್ಲಾ ಹೆಮ್ಮೆಪಡುತ್ತಿದ್ದರು. ಬೆಂಗಳೂರು, ತುಮಕೂರು ಈ ಕಡೆ ಜನತೆಗೆ ಇನ್ನೂ ಅವರ ಆಶೀರ್ವಚನಗಳನ್ನು ಕೇಳುವ ಸೌಭಾಗ್ಯ ದೊರೆತಿರಲಿಲ್ಲ.

ಇಂತಹ ಸಮಯದಲ್ಲಿ ತುಮಕೂರಿನ ಮಾಜಿ ಶಾಸಕರೂ, ಶ್ರೀ ರೇಣುಕ ರೋಲರ್ ಪ್ಲೋರ್ ಮಿಲ್‌ನ ಮಾಲಿಕರೂ ಆದ ಶ್ರೀ ಸಿ. ವೀರಭದ್ರಯ್ಯನವರು ತಮ್ಮ ಮಿಲ್ಲಿನ ಆವರಣದಲ್ಲಿ ತ್ರಿವಳಿ ದೇವಸ್ಥಾನಗಳನ್ನು ಕಟ್ಟಿಸಿದರು. ಶ್ರೀ ಜಗದ್ಗುರು ರೇಣುಕರ ಮಂದಿರದ ಜೊತೆಗೆ, ಶ್ರೀ ಕಾಶೀ ವಿಶ್ವನಾಥ ಲಿಂಗವನ್ನು ಮತ್ತು ಅನ್ನಪೂರ್ಣೇಶ್ವರಿ ಮಂದಿರವನ್ನು ಕಟ್ಟಿಸಿ – ಈ ಮೂರು ದೇವಾಲಯಗಳ ಉದ್ಘಾಟನೆಗಾಗಿ ರಂಭಾಪುರಿ ಜಗದ್ಗುರುಗಳನ್ನು, ಕಾಶೀ ಜಗದ್ಗುರುಗಳನ್ನು ಆಹ್ವಾನಿಸಿ ಬಹು ವಿಜೃಂಭಣೆಯಿಂದ ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಿದರು. ಕಾಶೀ ಪೀಠದ ಜಗದ್ಗುರುಗಳಾಗಿದ್ದರಿಂದ ಕಾಶೀ ವಿಶ್ವನಾಥ ಅನ್ನಪೂರ್ಣೇಶ್ವರಿ ದೇವಾಲಯಗಳ ಉದ್ಘಾಟನೆಯನ್ನು ಜಗದ್ಗುರುಗಳ ಪೂಜ್ಯಹಸ್ತದಿಂದ ಮಾಡಲು ಆಹ್ವಾನಿಸಿದ್ದರು.



15-4-2002 : ಯಾದಗಿರಿ ತಾಲೂಕಿನ ಸುಕ್ಷೇತ್ರ ಅಬ್ಬೆ ತುಮಕೂರಿನಲ್ಲಿ ಸೋಮವಾರ ಪ್ರತಿಷ್ಠಾಪಿಸಿದ ಶ್ರೀ ಗುರು ವಿಶ್ವಾರಾಧ್ಯರ ಪ್ರತಿಮೆಗೆ ಕಾಶೀ, ಶ್ರೀಶೈಲ ಮತ್ತು ಕೇದಾರ ಜಗದ್ಗುರುಗಳು ಸ್ವರ್ಣಕಿರೀಟ ತೊಡಿಸಿದರು.



ಶ್ರೀ ವಿಶ್ವಾರಾಧ್ಯರ ಮೂರ್ತಿಸ್ಥಾಪನೆಗೆ ಅಬ್ಬೆತುಮಕೂರಿನಲ್ಲಿ ಸಿದ್ಧವಾಗಿರುವ ಭವ್ಯವಾದ ನೂತನ ಶಿಲಾಮಂಟಪ

ಯಾದಗಿರಿ ತಾ. ಬಳಿಯ ಅಬ್ಬೆ ತುಮಕೂರಿನಲ್ಲಿ ಸುಮಾರು ಐದು ಎಕರೆ ಜಮೀನಿನ ಮಧ್ಯದಲ್ಲಿ ಸಿದ್ಧಕುಲ ಸಾಮ್ರಾಟ, ಸದ್ಗುರು ವಿಶ್ವಾರಾಧ್ಯರ ಮೂರ್ತಿ ಪ್ರತಿಷ್ಠಾಪನೆ ಹಾಗೂ ನೂತನ ಶಿಲಾಮಂಟಪದ ಉದ್ಘಾಟನಾ ಕಾರ್ಯಕ್ರಮವನ್ನು ಅಬ್ಬೆ ತುಮಕೂರಿನ ವಿಶ್ವಾರಾಧ್ಯರ ಮಠದ ಮಠಾಧಿಪತಿ ಪೂಜ್ಯ ಗಂಗಾಧರ ಸ್ವಾಮಿಗಳು ಏರ್ಪಡಿಸಿದ್ದರು.

ಈ ಸಮಾರಂಭಕ್ಕೆ ಶ್ರೀಶೈಲ, ಕೇದಾರ ಹಾಗೂ ಕಾಶೀ ಜಗದ್ಗುರುಗಳನ್ನು ಆಹ್ವಾನಿಸಿದ್ದರು. ಮೂವರು ಜಗದ್ಗುರುಗಳು ಅಬ್ಬೆತುಮಕೂರಿಗೆ ಆಗಮಿಸುತ್ತಿದ್ದಂತೆ ತೆರೆದ ಜೀಪಿನಲ್ಲಿ ಮೆರವಣಿಗೆ ಮೂಲಕ ಕರೆತಂದರು. ಜಗದ್ಗುರುಗಳೆಲ್ಲರೂ ಧಾರ್ಮಿಕ ಕಾರ್ಯಕ್ರಮಗಳನ್ನು ವಿಧಿವಿಧಾನಗಳೊಂದಿಗೆ ಮೂರ್ತಿ ಪ್ರತಿಷ್ಠಾಪನೆ ಮಾಡಿ ಮೂರ್ತಿಗೆ ಸುವರ್ಣ ಕಿರೀಟಧಾರಣೆ ಮಾಡಿದ್ದನ್ನು ನೋಡಲು ವಿವಿಧ ಜಿಲ್ಲೆಗಳಿಂದ, ನೆರೆ ಆಂಧ್ರಪ್ರದೇಶ, ಮಹಾರಾಷ್ಟ್ರ ರಾಜ್ಯಗಳಿಂದ ಬಂದ ಲಕ್ಷಾಂತರ ಭಕ್ತರು ಸೇರಿದ್ದು ಆ ಊರಿನ ಇತಿಹಾಸದಲ್ಲೇ ಹಿಂದೆಂದೂ ನಡೆದಿರಲಿಲ್ಲ.

24-4-2002

ಭವಾನಿ ಮಂದಿರಕ್ಕೆ ಕಳಸಾರೋಹಣ; ಹೆಲಿಕ್ಯಾಪ್ಟರ್‌ನಿಂದ ಪುಷ್ಪವೃಷ್ಟಿ.

ಬೀದರ ಜಿಲ್ಲೆ ಭಾಲ್ಕಿ ತಾಲೂಕಿನ ಕಪಲಾಪುರದಲ್ಲಿ ವಿಶಿಷ್ಟ ರೀತಿಯಲ್ಲಿ ಭವಾನಿ ಮಂದಿರದ ಕಳಸಾರೋಹಣ ಸಮಾರಂಭವನ್ನು ಆಚರಿಸಲಾಯಿತು, ಅಲ್ಲಿ ಪಂಚಾಚಾರ್ಯರ ಯುಗಮಾನೋತ್ಸವ ರಾಷ್ಟ್ರೀಯ ಭಾವೈಕ್ಯತೆ-ವಿಶ್ವಶಾಂತಿ ಧರ್ಮಸಮ್ಮೇಳನದ ಕಾರ್ಯಕ್ರಮದಲ್ಲಿ - ಕಂಚಿಯ ಕಾಮಕೋಟಿ ಶಂಕರಾಚಾರ್ಯ ಪೀಠದ ಶ್ರೀ ಜಯೇಂದ್ರ ಸರಸ್ವತಿ ಅವರು ಕಳಸಾರೋಹಣ ಮಾಡುತ್ತಿರುವ ಸಮಯಕ್ಕೆ ಸರಿಯಾಗಿ ಮೇಲೆ ಹೆಲಿಕ್ಯಾಪ್ಟರ್‌ನಿಂದ 10 ಕ್ವಿಂಟಲ್ ಹೂಗಳನ್ನು ಪಂಚಪೀಠದ ಶ್ರೀಗಳಾದ ರಂಭಾಪುರಿ, ಉಜ್ಜಯಿನಿ, ಕೇದಾರ, ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಮಳೆಗೈದಿದ್ದೊಂದು ವಿಶೇಷವಾಗಿತ್ತು. ಇದನ್ನು ನೋಡಲು ಸಹಸ್ರಾರುಸಂಖ್ಯೆಯಲ್ಲಿ ಭಕ್ತರು ನೆರೆದಿದ್ದರು.

ಯುಗಮಾನೋತ್ಸವ ನಿಜಕ್ಕೂ ಭಾವೈಕ್ಯತೆಯ ಸಮಾಗಮವಾಗಿತ್ತು. ಪಂಚಪೀಠದ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಗೆ ಧಾರ್ಮಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆ ತಂದ ಶ್ರೇಯಸ್ಸು ಸಲ್ಲುತ್ತದೆ. ಆಚಾರ್ಯರು ಯುಗಪುರುಷರಾದರೆ ಬಸವಾದಿ ಶರಣರು ಶತಮಾನದ ಪುರುಷರಾಗಿ ಅಮೂಲ್ಯ ಮಾರ್ಗದರ್ಶನ ನೀಡಿದ್ದಾರೆಂದು ಸಮನ್ವಯತೆಯನ್ನು ಸಾರಿದ್ದು ಮರೆಯುವಂತಿಲ್ಲ.

23-5-2002

ಬಾಗಲಕೋಟೆಯಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಘದವರು ನಿರ್ಮಿಸಿದ ಸಾಂಸ್ಕೃತಿಕ ಭವನವನ್ನು ಕಾಶೀ ಜಗದ್ಗುರುಗಳು ಉದ್ಘಾಟಿಸಿ ತಮ್ಮ ಆಶೀರ್ವಚನದಲ್ಲಿ ಬಿ.ವಿ.ವಿ. ಸಂಘ ಅಕ್ಕನ ಬಳಗ ಸುತ್ತಮುತ್ತಲಿನ 60 ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಿ ಹೆಣ್ಣು ಮಕ್ಕಳು ಮತ್ತು ತಾಯಂದಿರಲ್ಲಿ ಧಾರ್ಮಿಕ ಮತ್ತು ವೈಚಾರಿಕ ಅರಿವು ಮೂಡಿಸಲು ಮಾಡಿರುವ ಪ್ರಯತ್ನವನ್ನು ಬಹುವಾಗಿ ಶ್ಲಾಘಿಸಿ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಅಗ್ರಸ್ಥಾನವಿದೆ. ಆದರೆ ವೀರಶೈವ ಧರ್ಮ ಶೇ.50 ಸ್ಥಾನಮಾನ ನೀಡಿದೆ ಎಂದು ಇಂದಿನ ಆಶೀರ್ವಚನದಲ್ಲಿ ತಿಳಿಸಿದ್ದಾರೆ.

ವೀರಭದ್ರೇಶ್ವರ ಸಾಂಸ್ಕೃತಿಕ ಭವನದ ಉದ್ಘಾಟನೆ



23-5-2002 : ಬಸವೇಶ್ವರ ವಿದ್ಯಾವರ್ಧಕ ಸಂಘದ ಶ್ರೀ ಕಣವಿ ವೀರಭದ್ರೇಶ್ವರ ಟ್ರಸ್ಟ್ ವತಿಯಿಂದ ಬಾಗಲಕೋಟೆಯಲ್ಲಿ ನಿರ್ಮಿಸಲಾಗಿರುವ ಶ್ರೀ ವೀರಭದ್ರೇಶ್ವರ ಸಾಂಸ್ಕೃತಿಕ ಭವನವನ್ನು ವಾರಣಾಸಿ ಜಂಗಮವಾಡಿ ಮಠದ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಗುರುವಾರ ಉದ್ಘಾಟಿಸಿ ಆಶೀರ್ವಚನ ನೀಡಿದರು.



3–6–2002 : ಬೆಂಗಳೂರಿನ ರಾಜಾಜಿನಗರದ ಪ್ರವೇಶದ್ವಾರ (Entrence)ಕ್ಕೆ ಇಂದು ರೇಣುಕಾಚಾರ್ಯ ವೃತ್ತ ಎಂದು ನಾಮಕರಣ ಮಾಡಲಾಯಿತು. ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆಯವರು ಏರ್ಪಡಿಸಿದ ಈ ಸಮಾರಂಭದಲ್ಲಿ ಬೆಂಗಳೂರಿನ ಮೇಯರ್ ಕೆ. ಚಂದ್ರಶೇಖರ, ಪಾಲಿಕೆ ಸದಸ್ಯರಾದ ಶ್ರೀನಿವಾಸ ಅವರುಗಳ ಸಮಕ್ಷಮದಲ್ಲಿ ಕಾಶೀ ಜಗದ್ಗುರುಗಳು ನಾಮಫಲಕವನ್ನು ಅನಾವರಣಗೊಳಿಸಿದರು.

ದೇವಾಲಯದ ವಾಸ್ತು ಪೂಜಾ ಕಾರ್ಯಕ್ರಮ



7–2–2002 : ಗದಗ ನಗರದ ಸಂಭಾಪೂರ ರಸ್ತೆಯಲ್ಲಿರುವ ಪಂಚಾಚಾರ್ಯ ಸಂಸ್ಕೃತ ಪಾಠಶಾಲೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಕಾಶೀ ವಿಶ್ವನಾಥ ದೇವಾಲಯದಲ್ಲಿಂದು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ವಿಶೇಷಪೂಜೆ ಸಲ್ಲಿಸಿದರು.

ಕಾಶೀ ಜಗದ್ಗುರುಗಳು ಈಗಾಗಲೆ ಗದಗ್‌ನಲ್ಲಿ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಶಾಖೆಯನ್ನು ತೆರೆದು ಅದರ ಮೂಲಕ ಪಂಚಾಚಾರ್ಯ ಸಂಸ್ಕೃತ ವೇದಾಗಮ ಜ್ಯೋತಿಷ್ಯ ಯೋಗ ಪಾಠಶಾಲೆಯನ್ನು ಆರಂಭಿಸಿದ್ದರು. ಈ ಶಾಲೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಕಾಶೀ ವಿಶ್ವನಾಥ ದೇವಾಲಯದ ವಾಸ್ತುಪೂಜೆ ಹಾಗೂ ವಿಶ್ವನಾಥಲಿಂಗದ ಪ್ರಾಣ ಪ್ರತಿಷ್ಠಾಪನೆಯನ್ನು ಕಾಶೀ ಜಗದ್ಗುರುಗಳು ನೆರವೇರಿಸಿ ವಿಶೇಷಪೂಜೆಯನ್ನು ಸಲ್ಲಿಸಿದರು.

25–11–2002 : ರಾಯಚೂರು ಜಿಲ್ಲೆ ಇಡಪನೂರಿನಲ್ಲಿ ಜಗದ್ಗುರುಗಳು 25ನೇ ತಾರೀಖಿನಂದು ಬೆಳಗ್ಗೆ 6ಗಂಟೆಯಿಂದ 8 ಗಂಟೆಯವರೆಗೆ ಶ್ರೀರಾಮಲಿಂಗೇಶ್ವರ, ಶ್ರೀ ಚನ್ನಕೇಶವ, ಶ್ರೀ ವಿಘ್ನೇಶ್ವರ, ಶ್ರೀನಂದಿ ಹಾಗೂ ಶ್ರೀ ಪಾರ್ವತೀದೇವಿ ಮೂರ್ತಿ ಪ್ರತಿಷ್ಠಾಪನೆಯನ್ನು ತಮ್ಮ ಅಮೃತಹಸ್ತದಿಂದ ನೆರವೇರಿಸಿದರು.

14–2–2003

ಗುಳೇದಗುಡ್ಡದಲ್ಲಿಂದು ಕಲ್ಯಾಣ ಮಂಟಪ ಉದ್ಘಾಟನೆ ಸಾಮೂಹಿಕ ವಿವಾಹ



ಗುಳೇದಗುಡ್ಡ ವಸ್ತ್ರದ ಕಲ್ಯಾಣ ಮಂಟಪದ ಉದ್ಘಾಟನೆಯನ್ನು ಕಾಶೀಪೀಠದ ಡಾ. ಚಂದ್ರಶೇಖರ ಶಿವಾಚಾರ್ಯರು ಮಾಡಿದರು. ವೀರಣ್ಣ ಚರಂತಿಮಠ, ಮಾಜಿ ಸಚಿವ ಎಚ್. ವೈ. ಮೇಟಿ, ಕೇದಾರಪೀಠದ ಭೀಮಾಶಂಕರ ಶ್ರೀಗಳು ಉಪಸ್ಥಿತರಿದ್ದರು.

ಗುಳೇದಗುಡ್ಡದಲ್ಲಿ ಯಾವುದೇ ಕಾರ್ಯಕ್ರಮವಿರಲಿ ಜಗದ್ಗುರುಗಳನ್ನು ಆಹ್ವಾನಿಸದೆ ಅಲ್ಲಿನ ಭಕ್ತ ಸಮೂಹ ನಡೆಸುತ್ತಿರಲಿಲ್ಲ. ಗುಳೇದಗುಡ್ಡದ ಭಕ್ತರ ಕರೆಗೆ ಕಾಶೀ ಜಗದ್ಗುರುಗಳೂ ಓಗೊಡದೆ ಇರುತ್ತಿರಲಿಲ್ಲ. ನೂತನವಾಗಿ ಕಟ್ಟಿರುವ ವಸ್ತ್ರದ ಕಲ್ಯಾಣ ಮಂಟಪವನ್ನು ಕಾಶೀ ಜಗದ್ಗುರುಗಳು ಹಾಗೂ ಕೇದಾರ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಉದ್ಘಾಟನಾ ಸಮಾರಂಭದ ಪ್ರಯುಕ್ತ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಿತ್ತು. ನೂತನ ವಿವಾಹಿತರಿಗೆ ಜಗದ್ಗುರುಗಳು ವೈವಾಹಿಕ ಜೀವನದಲ್ಲಿ ಪತಿ–ಪತ್ನಿಯರು ಪರಸ್ಪರ ಅರ್ಥೈಸಿಕೊಂಡು ಬದುಕು ಸಾಗಿಸಬೇಕೆಂದು ಹಿತವಚನ ನೀಡಿದರು.

'ಸಂಪಾದಿತ ಹಣ ಧರ್ಮಕಾರ್ಯಕ್ಕೂ ಬಳಸಿ'

5–4–2003 : ಕಲಬುರ್ಗಿ ಸಮೀಪದ ಮುತ್ತ್ಯಾನ ಬಬಲಾದಲ್ಲಿ ಲಿಂ. ಚನ್ನವೀರ ಮಹಾಶಿವಯೋಗಿಗಳ ಮಹಾದ್ವಾರ ಉದ್ಘಾಟನೆಯನ್ನು ಕಾಶೀ ಜಗದ್ಗುರುಗಳು ಮುತ್ತ್ಯಾನ ಬಬಲಾದ ವಿರಕ್ತಮಠದ ಗುರುಪಾದಲಿಂಗ ಸ್ವಾಮಿಗಳ ಆಹ್ವಾನದ ಮೇರೆಗೆ ನೆರವೇರಿಸಿ ತಮ್ಮ ಆಶೀರ್ವಚನದಲ್ಲಿ ಈ ಸ್ವಾಮಿಗಳು ವಿರಕ್ತ ಪರಂಪರೆಗೆ ಸೇರಿದ್ದಾಗ್ಯೂ ಪಂಚಪೀಠದ ಜಗದ್ಗುರುಗಳಾದ ಕಾಶೀ ಮತ್ತು ಕೇದಾರ ಉಭಯ ಜಗದ್ಗುರುಗಳಿಗೆ ಆಹ್ವಾನ ನೀಡಿ ಉದ್ಘಾಟನೆ ಮಾಡಿಸಿದ್ದು ವೀರಶೈವ ಧರ್ಮದ ಘನತೆ, ಗೌರವದ ಪ್ರತೀಕವಾಗಿದೆ. ಎಂದರು. ಭಕ್ತರು ತಾವು ಸಂಪಾದನೆ ಮಾಡಿದ ಹಣದಲ್ಲಿ ಸ್ವಲ್ಪ ಭಾಗ ಧಾರ್ಮಿಕಕ್ಕಾಗಿ, ರಾಷ್ಟ್ರಕ್ಕಾಗಿ ಹಣ ಖರ್ಚು ಮಾಡುವುದು ಅವಶ್ಯವಾಗಿದೆ ಎಂದು ಉಪದೇಶ ನೀಡಿದರು.

ಇಂಡಿ: ಬಸವೇಶ್ವರ ಮುತ್ಥಳಿ ಪ್ರತಿಷ್ಠಾಪನೆ



20–3–2004 : ಇಂಡಿ ಪಟ್ಟಣದಲ್ಲಿ ಬಸವೇಶ್ವರ ವೃತ್ತದಲ್ಲಿ ಪ್ರತಿಷ್ಠಾಪನೆಗೊಂಡಿರುವ ಬಸವೇಶ್ವರ ಮುತ್ಥಳಿ

20–3–2004

ಇಂಡಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ಮುತ್ಥಳಿ ಸ್ಥಾಪನೆಗೆ ಮುನ್ನ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆದು ಬಸವೇಶ್ವರ ವೃತ್ತ ತಲುಪಿದ ಮೇಲೆ 7–8 ಶಿವಾಚಾರ್ಯರುಗಳಿಂದ, ಸೊಲ್ಲಾಪುರದ ಬಸವರಾಜ ಶಾಸ್ತ್ರಿಗಳು ಮಂತ್ರಘೋಷಗಳೊಂದಿಗೆ ಕಾಶೀ ಜಗದ್ಗುರುಗಳು ಮಂತ್ರಪಠಣಗಳ ನಂತರ ಮುತ್ಥಳಿಗೆ ಹೂಮಾಲೆ ಹಾಗೂ ಧ್ವಜಾರೋಹಣ ನೆರವೇರಿಸಿದ ನಂತರ ಬಸವೇಶ್ವರರ ತತ್ವಗಳನ್ನು ಕುರಿತು ಜನರಿಗೆ ಜಗದ್ಗುರುಗಳು ಆಶೀರ್ವಚನ ನೀಡಿದರು.

2–5–2004

ಹುಮನಾಬಾದ ತಾಲೂಕಿನ ಚಾಂಗ್ಲೆರಾ ಗ್ರಾಮದ ಐತಿಹಾಸಿಕ ಪ್ರಸಿದ್ಧ ವೀರಭದ್ರೇಶ್ವರ ದೇವಾಲಯದಲ್ಲಿ ನೂತನವಾಗಿ ನಿರ್ಮಿಸಲಾದ ಗೋಪುರಕ್ಕೆ ಕಳಸಾರೋಹಣದ ಕಾರ್ಯಕ್ರಮಕ್ಕೆ ಕಾಶೀ ಮತ್ತು ಉಜ್ಜಯಿನಿ ಉಭಯ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವವನ್ನು ಮುನ್ನಾದಿನ ಏರ್ಪಡಿಸಿ, ಅದ್ಧೂರಿಯಾಗಿ ಸ್ವಾಗತಿಸಿ, ಮರುದಿನ ಬೆಳಗ್ಗೆ 7 ಘಂಟೆಗೆ ಗೋಪುರಕ್ಕೆ ಕಳಸಾರೋಹಣವನ್ನು ಉಭಯ ಜಗದ್ಗುರುಗಳಿಂದ ಮಾಡಿಸಲಾಯಿತು.

ಚಾಂಗ್ಲೆರಾ: ವೀರಭದ್ರೇಶ್ವರ ಗೋಪುರಕ್ಕೆ ಕಳಸಾರೋಹಣ

ಪ್ರಜಾವಾಣಿ, 2–5–2004



ಹುಮನಾಬಾದ ತಾಲೂಕಿನ ಚಾಂಗ್ಲೆರಾದ ಐತಿಹಾಸಿಕ ಪ್ರಸಿದ್ಧ ಶ್ರೀವೀರಭದ್ರೇಶ್ವರ ದೇವಾಲಯದ ನೂತನ ಗೋಪುರದ ಕಳಸಾರೋಹಣ ಕಾರ್ಯಕ್ರಮದ ಪೂರ್ವ ದಿನವಾದ ಶನಿವಾರ ಉಜ್ಜಯಿನಿ ಹಾಗೂ ಕಾಶೀ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ ನಡೆಯಲಿದೆ.

5–5–2005

ಶಾಖಾಪುರ ತಪೋಭೂಮಿಯಲ್ಲಿಂದು ಮೂರ್ತಿ ಸ್ಥಾಪನೆ

ಜೇವರ್ಗಿ ತಾ. ಶಾಖಾಪುರದಲ್ಲಿ ಪವಾಡಪುರುಷ ಸದ್ಗುರು ವಿಶ್ವಾರಾಧ್ಯರು ತಪಸ್ಸು ಮಾಡಿ ತಾಯಿ ಜಗನ್ಮಾತೆಯನ್ನು ಒಲಿಸಿಕೊಂಡ ತಪೋಭೂಮಿ ಈ ಶಾಖಾಪುರದ ಮಠ. ಸದ್ಗುರು ವಿಶ್ವಾರಾಧ್ಯರ ಧರ್ಮಪತ್ನಿ ಬಸವಾಂಬೆ ತಾಯಿಯವರು ಲಿಂಗೈಕ್ಯವಾದ ಪುಣ್ಯತಾಣ. ಜೊತೆಗೆ ಲಿಂಗೈಕ್ಯ ಸಿದ್ಧರಾಮ ಶಿವಯೋಗಿಗಳ ಕಾರ್ಯಸ್ಥಾನವೂ ಹೌದು. ಸದ್ಯದ ಶ್ರೀಗಳು ಈ ತಪೋವನದಲ್ಲಿ ಸುಂದರ ದೇವಾಲಯವನ್ನು ನಿರ್ಮಿಸಿದ್ದಾರೆ. ಇದಲ್ಲದೆ ಶಾಖಾಪುರ ಗ್ರಾಮದ ಅಗಸಿಯಲ್ಲಿ ಬೃಹತ್ ದೇವಾಲಯ ನಿರ್ಮಿಸಿ, ಅಲ್ಲಿ ವಿಶ್ವಾರಾಧ್ಯ–ಬಸವಾಂಬೆಯರ ಹಾಗೂ ಲಿಂಗೈಕ್ಯ ಸಿದ್ಧರಾಮ ಶಿವಯೋಗಿಗಳ ಮೂರ್ತಿಗಳ ಸ್ಥಾಪನೆ, ಕಳಸಾರೋಹಣದ ಬಹುದೊಡ್ಡ ಧಾರ್ಮಿಕ ಕಾರ್ಯಕ್ರಮಕ್ಕೆ ಪಂಚಪೀಠಗಳಲ್ಲಿ ಒಂದಾಗಿರುವ ಕಾಶೀ ಹಾಗೂ ಉಜ್ಜಯಿನಿ ಜಗದ್ಗುರುಗಳಿಂದ ಬೆಳಗ್ಗೆ 6ಗಂಟೆಗೆ ಬ್ರಾಹ್ಮೀ ಮುಹೂರ್ತದಲ್ಲಿ ಮೂರ್ತಿಗಳ ಸ್ಥಾಪನೆ ಮಾಡಿಸಿದರು.

12–11–2005 : ಚನ್ನಗಿರಿ ತಾಲೂಕಿನ ತಾವರೆಕೆರೆ ಗ್ರಾಮದ ಶ್ರೀ ಶಿಲಾಮಠದ ನೂತನ ಗುರುಗಳ ಪಟ್ಟಾಧಿಕಾರ ಹಾಗೂ ಶ್ರೀ ನೀಲಕಂಠೇಶ್ವರ ಸ್ವಾಮಿ ಪ್ರತಿಷ್ಠಾಪನೆಗಾಗಿ ಪಂಚಪೀಠಗಳು ರಂಭಾಪುರಿ, ಶ್ರೀಶೈಲ ಹಾಗೂ ಕಾಶೀ ಪೀಠದ ಜಗದ್ಗುರುಗಳನ್ನು ಆಹ್ವಾನಿಸಿದ್ದರು. ಬೆಳಗ್ಗಿನ ಬ್ರಾಹ್ಮೀ ಮುಹೂರ್ತದಲ್ಲಿ ಪ್ರತಿಷ್ಠಾಪನೆ ಮಾಡಿ ಜನಜಾಗೃತಿ ಭಾವೈಕ್ಯ ಧರ್ಮ ಸಮಾವೇಶದಲ್ಲಿ ರಂಭಾಪುರಿ ಹಾಗೂ ಶ್ರೀಶೈಲ ಜಗದ್ಗುರುಗಳು ಆಶೀರ್ವಚನ ನೀಡಿದ ನಂತರ ಕಾಶೀ ಜಗದ್ಗುರುಗಳು ದೇವರ ಆಕಾರವನ್ನು ಶಿಲ್ಪಿಗಳು ಮಾಡಿದರೆ, ಗುರುಗಳು ಅದಕ್ಕೆ ದೈವತ್ವವನ್ನು ಕೊಡುತ್ತಾರೆ. ಶಿವಾಚಾರ್ಯರು ಶಿಷ್ಯರನ್ನು ತಿದ್ದಿ ಸನ್ಮಾರ್ಗದಲ್ಲಿ ನಡೆಯುವಂತೆ ದಾರಿ ತೋರಿಸುತ್ತಾರೆ ಎಂದು ಹೇಳುತ್ತಾ–ಮಠ ಕಟ್ಟುವ ಮೊದಲು ಮನಸುಕಟ್ಟುವ ಕೆಲಸ ಮಾಡಬೇಕೆಂದು ಆಶೀರ್ವಚನದಲ್ಲಿ ತಿಳಿಸಿದರು.

12–11–2005 : ದಾವಣಗೆರೆಯಲ್ಲಿ ವಿನೋಬ ನಗರದಲ್ಲಿರುವ ಶ್ರೀ ಜಡೇಸಿದ್ಧ ಶಿವಯೋಗಿಗಳ ಗುರುಶಾಂತಾಶ್ರಮದಲ್ಲಿ ಶ್ರೀ ಶಿವಯೋಗಿಗಳ ಅಮೃತಶಿಲಾಮೂರ್ತಿಯ ಪ್ರತಿಷ್ಠಾಪನೆಯನ್ನು ಕಾಶೀ ಪೀಠದ ಜಗದ್ಗುರುಗಳು ನೆರವೇರಿಸಿದರು. ಬೆಳಗ್ಗೆ 8.30 ರಿಂದ 10.30ರವರೆಗೆ ಜಗದ್ಗುರು ಸಾನ್ನಿಧ್ಯವಹಿಸಿ ಸಂಜೆ 6:30ಕ್ಕೆ ಜಗದ್ಗುರುಗಳು ಶ್ರೀ ಜಡೇಸಿದ್ದೇಶ್ವರ ಮಠದ ಶ್ರೀ ಶಿವಾಗಮ ಸ್ವಾಮಿಗಳು ರಚಿಸಿರುವ ಜ್ಞಾನಗ್ರಂಥವನ್ನು ಬಿಡುಗಡೆ ಮಾಡಿದರು.

ಶಿವನ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ

ಪ್ರಜಾವಾಣಿ, 10–2–2006



ವಿಜಾಪುರದ ಉಕ್ಕಲಿ ರಸ್ತೆಯಲ್ಲಿರುವ ಬಸಂತವನದಲ್ಲಿ ನಿರ್ಮಿಸಿರುವ ದೇಶದ ಎರಡನೇ ಬೃಹತ್ ಶಿವಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯನ್ನು ಕಾಶಿಯ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ಶುಕ್ರವಾರ ನೆರವೇರಿಸಿದರು. ಚಿತ್ರದಲ್ಲಿ ಬಸಂತಕುಮಾರ ಪಾಟೀಲ, ಶ್ರೀಮತಿ ಬಸಂತಕುಮಾರ ಪಾಟೀಲ, ಬಬಲೇಶ್ವರದ ಡಾ. ಮಹಾದೇವ ಶಿವಾಚಾರ್ಯರು ಇದ್ದಾರೆ.

10–2–2006

ಅತ್ತ ಶ್ರವಣಬೆಳಗೊಳದಲ್ಲಿ ವಿರಾಟ್‌ವಿರಾಗಿ ಬಾಹುಬಲಿಗೆ ಈ ಶತಮಾನದ ಮೊದಲ ಮಹಾ ಮಸ್ತಕಾಭಿಷೇಕ ಸಂಭ್ರಮದಿಂದ ನಡೆಯುತ್ತಿದ್ದರೆ ಇತ್ತ ವಿಜಾಪುರದಲ್ಲಿರುವ ರಾಷ್ಟ್ರದ 2ನೇ ಅತೀ ಎತ್ತರದ ಶಿವನ ಮೂರ್ತಿಯ ಪ್ರಾಣಪ್ರತಿಷ್ಠಾಪನೆಯ ಕಾರ್ಯ ಧಾರ್ಮಿಕ ವಿಧಿ ವಿಧಾನಗಳಿಂದ ನಡೆಯಿತು.

ನಗರದ ಹೊರವಲಯದ ಬಸಂತವನದಲ್ಲಿ ನಿರ್ಮಿಸಿರುವ ಶಿವನ ವಿಗ್ರಹ 85 ಅಡಿ ಎತ್ತರವಿದ್ದು ರಾಷ್ಟ್ರದಲ್ಲೇ 2ನೇ ಅತೀ ಎತ್ತರದ ಶಿವನಮೂರ್ತಿ ಎನಿಸಿಕೊಂಡಿದೆ. ಮುರುಡೇಶ್ವರದಲ್ಲಿರುವ 120 ಅಡಿಯ ಮೂರ್ತಿ ಅತೀ ಎತ್ತರದ ಮೂರ್ತಿ ಎನಿಸಿದೆ.

ಅತಿ ಎತ್ತರವಿರುವ ಈ ಶಿವನಿಗೆ ಪೂಜೆ ಸಲ್ಲಿಸಲು ಭಕ್ತರ ಪೂಜೆಗೆ ಅನುಕೂಲವಾಗಲೆಂದು ಕೆಳಭಾಗದಲ್ಲಿ ಕಾಶೀ ಜಗದ್ಗುರುಗಳು ಸಕಲ ಪೂಜಾವಿಧಿ ವಿಧಾನದೊಂದಿಗೆ ಶಿವಲಿಂಗ ಹಾಗೂ ನಂದೀಶ್ವರನಿಗೆ ಪ್ರಾಣಪ್ರತಿಷ್ಠಾಪನೆ ನೆರವೇರಿಸಿದರು. ಮೂರ್ತಿಯ ಮುಂದೆ ನಿರ್ಮಿಸಿದ್ದ ಪೂಜಾ ಮಂಟಪದಲ್ಲಿ ಸೊಲ್ಲಾಪುರದ ವೈದಿಕರುಗಳ ನೇತೃತ್ವದಲ್ಲಿ ನವಗ್ರಹಪೂಜೆ, ಸ್ವಸ್ತಿ ಪುಣ್ಯಾವಾಚಕ, ಅಂಕುರಾರ್ಪಣೆ ಸರ್ವತೋಭದ್ರಮಂಡಲ, ಸರ್ವದೇವತಾವಿಧಿ ರುದ್ರಯಾಗಾದಿ ಪೂಜೆಗಳು ನಡೆದವು.

ಜಗದ್ಗುರುಗಳು ಬಸಂತ ಕುಮಾರ ಪಾಟೀಲ ದಂಪತಿಗಳನ್ನೂ, ಅವರ ಸೋದರರನ್ನೂ ಅವರ ಈ ಮಹಾತ್ಕಾರ್ಯವನ್ನೂ ಶ್ಲಾಘಿಸಿ ಆಶೀರ್ವದಿಸಿದರು.

ಸಂಡೂರು: ವೀರಶೈವ ಕಲ್ಯಾಣ ಮಂಟಪ ಉದ್ಘಾಟನೆ

ಪ್ರಜಾವಾಣಿ, 23–4–2006



ವೀರಶೈವ ಕಲ್ಯಾಣ ಮಂಟಪವನ್ನು ಪಂಚಪೀಠಾಧಿಪತಿಗಳು ಉದ್ಘಾಟಿಸಿದರು.

23–4–2006

ಸಂಡೂರಿನಲ್ಲಿ ನೂತನವಾಗಿ ನಿರ್ಮಿಸಿರುವ ವೀರಶೈವ ಕಲ್ಯಾಣ ಮಂಟಪದ ಉದ್ಘಾಟನೆಗಾಗಿ ಐವರು ಜಗದ್ಗುರುಗಳನ್ನು ಆಹ್ವಾನಿಸಿ ಉದ್ಘಾಟನೆ ನೆರವೇರಿಸಿದರು. ಜನರ ಕಲ್ಯಾಣವೇ ಜಗತ್ತಿನ ಕಲ್ಯಾಣ. ಹಲವು ವರ್ಷಗಳ ಕನಸು ನನಸಾಗಿದೆ. ಸಮಾಜದ ಅಭಿವೃದ್ಧಿಯಾಗಬೇಕಿದ್ದರೆ ಭಕ್ತರು ಶ್ರದ್ಧೆ ವಹಿಸಿ ದುಡಿದು ಸೇವಾ ಮನೋಭಾವನೆ ಬೆಳಸಿಕೊಳ್ಳಬೇಕೆಂದು ಜಗದ್ಗುರುಗಳೆಲ್ಲರು ಆಶೀರ್ವಚನದಲ್ಲಿ ತಿಳಿಸಿದರು.

ಆರ್ಥಿಕ ಆಧಾರಿತ ಮೀಸಲಾತಿ ಜಾರಿ ಅವಶ್ಯ: ಕಾಶೀ ಜಗದ್ಗುರು



8–5–2006 : ಚೌಡೇಶ್ವರಿದೇವಿ ಹಾಗೂ ಬನಶಂಕರಿದೇವಿಯವರ ಮಂದಿರಗಳ ಅಡಿಗಲ್ಲು ಹಾಕುವ ಸಮಾರಂಭ

8–5–2006

ಸಿಂದಗಿಯಲ್ಲಿ ಚೌಡೇಶ್ವರಿದೇವಿ ಹಾಗೂ ಬನಶಂಕರಿದೇವಿಯ ನಿಯೋಜಿತ ಮಂದಿರಗಳ ಅಡಿಗಲ್ಲು ಹಾಕಲು ಹಾಗೂ ಕಲ್ಯಾಣ ಮಂಟಪದ ಉದ್ಘಾಟನೆಯನ್ನು ಮಾಡಲು ರಂಭಾಪುರಿ ಹಾಗೂ ಕಾಶಿಯ ಜಗದ್ಗುರುಗಳನ್ನು ಆಹ್ವಾನಿಸಿದ್ದರು. ಉದ್ಘಾಟನೆ ನಂತರ ತಮ್ಮ ಆಶೀರ್ವಚನದಲ್ಲಿ ಕಾಶೀ ಜಗದ್ಗುರುಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾತಿ ಆಧಾರದ ಮೇಲೆ ಮೀಸಲಾತಿ

ಪರಿಗಣಿಸದೆ ಆರ್ಥಿಕ ಆಧಾರದ ಮೇಲೆ ಮೀಸಲಾತಿಯನ್ನು ಜಾರಿಗೊಳಿಸಬೇಕು, ಎಲ್ಲಾ ಪಂಗಡಗಳಲ್ಲಿಯೂ ಹಲವರು ಆರ್ಥಿಕವಾಗಿ ಹಿಂದುಳಿದಿದ್ದಾರೆ, ಇಂಥವರಿಗೆ ಆರ್ಥಿಕ ಮೀಸಲಾತಿ ಬಂದರೆ ಪ್ರಗತಿ ಹೊಂದಲು ಸಾಧ್ಯವೆಂದರು.

ಉದಯವಾಣಿ, **28–10–2006** **ಅಂಬರನಾಥ : ಮಂಜುನಾಥ ದೇವಾಲಯದ ವರ್ಧಂತ್ಯುತ್ಸವ**



ಅಂಬರನಾಥ ಶ್ರೀ ಮಂಜುನಾಥ ದೇವಾಲಯದ ವರ್ಧಂತಿ ಮಹೋತ್ಸವವನ್ನು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಉದ್ಘಾಟಿಸುತ್ತಿರುವುದು (ಚಿತ್ರ 1), ಸೇರಿದ ಭಕ್ತವೃಂದ (ಚಿತ್ರ 2).

ಅಂಬರ್‌ನಾಥ್ (ಮುಂಬಯಿ)ದಲ್ಲಿ ಶ್ರೀ ಮಂಜುನಾಥ ದೇವಾಲಯದ 14ನೇ ವರ್ಧಂತಿ ಮಹೋತ್ಸವವು ಕಾಶೀ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರಾತಃಕಾಲ ಮುಂಬಯಿ, ಮತ್ತು ಪೂಣೆ ವೈದಿಕ ವೃಂದದವರಿಂದ ಮಂಜುನಾಥ ಶಿವಲಿಂಗಕ್ಕೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ದೀಕ್ಷಾ ಕಾರ್ಯಕ್ರಮ ಏರ್ಪಡಿಸಿದ್ದರು. ಸಂಜೆ ಧಾರ್ಮಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದ ಕಾಶೀ ಜಗದ್ಗುರುಗಳು ಪ್ರತಿಯೊಬ್ಬರು ತಮ್ಮ ತಮ್ಮ ಜೀವನದಲ್ಲಿ ಧರ್ಮಾಚರಣೆಗಾಗಿ ಸಮಯವನ್ನು ಮೀಸಲಾಗಿರಿಸಬೇಕು. ಜಗತ್ತಿನ ಶಾಂತಿಗೆ ಧರ್ಮವೇ ಮೂಲ. ಪ್ರತೀ ವರ್ಷವೂ ಇಲ್ಲಿ ಈ ಕಾರ್ಯಕ್ರಮವನ್ನು ಏರ್ಪಡಿಸುತ್ತಿರುವ ರಾಶೇಠ ಹೆಬ್ಬಳ್ಳಿ ಇವರು ತಮ್ಮ ಪರಿಶ್ರಮದ ಹಣದಿಂದ ಮಾಡುತ್ತಿರುವುದು ಸರ್ವರಿಗೂ ಆದರ್ಶರಾಗಿದ್ದಾರೆ.

ಸರ್ವರೂ ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ಕೊಡಿಸುವಲ್ಲಿ ಮುಂದಾಗಬೇಕು. ಸಂಪತ್ತಿಗಿಂತಲೂ ಸಂಸ್ಕಾರ ಮುಖ್ಯ ಎಂದು ನೆರೆದಿದ್ದ ಭಕ್ತರಿಗೆ ಉಪದೇಶ ಮಾಡಿದರು.

10–4–2007

ರಾಣಿಬೆನ್ನೂರು ತಾಲೂಕಿನ ದಕ್ಷಿಣ ಕಾಶಿ ಸಂಕೇತ ಚೌಡಯ್ಯ ದಾನಪುರದಲ್ಲಿ ಒಡೆಯರ ಸಂಸ್ಥಾನ ಮಠದ ನೂತನ ಕಟ್ಟಡ ಉದ್ಘಾಟನಾ ಸಲುವಾಗಿ ಪಂಚ ಪೀಠಾಧೀಶ್ವರರನ್ನು ಆಹ್ವಾನಿಸಿ ಉದ್ಘಾಟನೆಯನ್ನು ನೆರವೇರಿಸಿದರು. ಸಂಜೆ ಧರ್ಮ ಸಮಾವೇಶವನ್ನು ಏರ್ಪಡಿಸಿದ್ದರು. ರಂಭಾಪುರಿ, ಉಜ್ಜಯಿನಿ, ಕೇದಾರ, ಶ್ರೀಶೈಲ ಮತ್ತು ಕಾಶೀ ಜಗದ್ಗುರುಗಳು ಆಶೀರ್ವಚನ ನೀಡಿದರು.



ಬಿಜಾಪುರ: ಬೃಹನ್ಮಠ ಕಟ್ಟಡಕ್ಕೆ ಭೂಮಿ ಪೂಜೆ
ಕನ್ನಡ ಪ್ರಭ, 23–4–2007



ನಗರದ ಇಬ್ರಾಹಿಂಪುರ ಬಡಾವಣೆಯಲ್ಲಿ ಬಬಲೇಶ್ವರ ಬೃಹನ್ಮಠ ಶಾಖೆಯ ಕಟ್ಟಡದ ಭೂಮಿಪೂಜೆ, ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಕಾಶೀ ಜಗದ್ಗುರುಗಳ ತುಲಾಭಾರ ಕಾರ್ಯಕ್ರಮಗಳು ಸೋಮವಾರ ಭಕ್ತಿ, ಶ್ರದ್ಧೆಯಿಂದ ಜರುಗಿದವು.

ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ನಗರದಲ್ಲಿ ಬಬಲೇಶ್ವರ ಬೃಹನ್ಮಠದ ಶಾಖಾ ಮಠವನ್ನು ಪ್ರಾರಂಭಿಸುವ ಜತೆಗೆ ಅಡ್ಡಪಲ್ಲಕ್ಕಿ ಕಾರ್ಯಕ್ರಮ ಆಯೋಜಿಸಿರುವುದು ಸಂತಸ ತಂದಿದೆ ಎಂದರು. ಇಬ್ರಾಹಿಂಪುರ ಬಡಾವಣೆಯಲ್ಲಿ ನೂತನ ಮಠದ ಆರಂಭಕ್ಕೆ ಭೂಮಿದಾನ ನೀಡಿದ ಸೂರ್ಯಕಾಂತ ಗಡಗಿ ಅವರನ್ನು ಸನ್ಮಾನಿಸಲಾಯಿತು. ಭಕ್ತಾದಿಗಳು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ತುಲಾಭಾರವನ್ನು ಇದೇ ಸಂದರ್ಭದಲ್ಲಿ ನೆರವೇರಿಸಿದರು.

ನಗರದ ಶಿವಬಸವ ಆಶ್ರಮದ ಶಂಭುಲಿಂಗ ಮಹಾಸ್ವಾಮಿಗಳು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬಬಲೇಶ್ವರ ಬೃಹನ್ಮಠದ ಡಾ. ಮಹಾದೇವ ಶಿವಾಚಾರ್ಯರು ನೇತೃತ್ವ ವಹಿಸಿದ್ದರು.



ಲೋಕಪ್ರಭ, ಕನ್ನಡ ದಿನಪತ್ರಿಕೆ 2-05-2007 ನೇ ಬುಧವಾರ ಪುಟ - 2

ಮಾನವ ಧರ್ಮಕ್ಕೆ ಜಯವಾಗಲಿ

ಧರ್ಮದಿಂದಲೇ ವಿಶ್ವಕ್ಕೆ ಶಾಂತಿ

ಶ್ರೀ ಶ್ರೀ ಶ್ರೀ 1008 ಜಗದ್ಗುರು ಕಾಶೀ ಜ್ಞಾನ ಸಿಂಹಾಸನಾಧೀಶ್ವರ
ಡಾ|| ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ
ಷಷ್ಠಿ ಪೂರ್ತಿ ಮತ್ತು ತುಲಾಭಾರ ಭಕ್ತಿ ಸಮರ್ಪಣೆ
ಲಿಂಗೈಕ್ಯ ಚನ್ನವೀರ ಶಿವಾಚಾರ್ಯ ಮಹಾಸ್ವಾಮೀಗಳು ಮತ್ತು ಲಿಂಗೈಕ್ಯ ಷ||ಬ್ರ|| ಶ್ರೀ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯಾರಾಧನ ಕಾರ್ಯಕ್ರಮ
ಶಿಕಾರಿಪುರ ತಾಲ್ಲೂಕು ಸಾಲೂರು ಹಿರೇಮಠದ ನೂತನ ಗುರುಮಠ ಗೃಹ ಪ್ರವೇಶ ಉದ್ಘಾಟನೆ

2–5–2007

ಸಾಲೂರಿನಲ್ಲಿ ಕಾಶೀ ಜಗದ್ಗುರುಗಳ ಆಗಮನವೇ ಒಂದು ದೊಡ್ಡ ಸಂಭ್ರಮದ ವಿಷಯವೆನಿಸಿರುವುದು ಅನೇಕ ದಿನ ಪತ್ರಿಕೆಗಳಲ್ಲಿ ದೊಡ್ಡದಾಗಿ ಪ್ರಕಟಗೊಂಡಿರುವುದರಿಂದಲೇ ತಿಳಿಯುತ್ತದೆ. ಶಿಕಾರಿಪುರ ತಾ. ಸಾಲೂರಿನ ಹಿರೇಮಠ ಕಾಶೀ ಜಂಗಮವಾಡಿ ಮಠದ ಶಾಖಾಮಠವಾಗಿದೆ. ಅಲ್ಲಿ ನೂತನವಾಗಿ ನಿರ್ಮಿಸಿರುವ ಗುರುಮಠದ ಉದ್ಘಾಟನೆ ಜೊತೆಯಲ್ಲಿಯೇ ಅರವತ್ತು ಸಂವತ್ಸರಗಳನ್ನು ಪೂರೈಸಿರುವ ಸಂದರ್ಭದಲ್ಲಿ ಕಾಶೀ ಜಗದ್ಗುರುಗಳಿಗೆ ತುಲಾಭಾರದ ಮೂಲಕ ಗೌರವ ಸಮರ್ಪಣೆ ನೆರವೇರಿಸಿದ್ದು ವಿಶೇಷವಾಗಿತ್ತು.

ಮುಖ್ಯ ಅತಿಥಿಗಳಾಗಿ ರಾಜ್ಯದ ಉಪಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

19–7–2007 : ಬಾಗಲಕೋಟೆಯ ಚಿತ್ತರಗಿ ಗ್ರಾಮದಲ್ಲಿ ನಿರ್ಮಿಸಲಾಗಿರುವ ನೂತನ ಮಂಟೇಸ್ವಾಮಿ ದೇವಸ್ಥಾನವನ್ನು ಉದ್ಘಾಟಿಸಲು ಉಜ್ಜೈನಿ, ಶ್ರೀಶೈಲ ಹಾಗೂ ಕಾಶೀ ಪೀಠದ ಜಗದ್ಗುರುಗಳನ್ನು ಆಮಂತ್ರಿಸಿದ್ದರು. ಮೂವರು ಜಗದ್ಗುರುಗಳು ನೂತನ ಕಟ್ಟಡವನ್ನು ಉದ್ಘಾಟಿಸಿದ ನಂತರ ಧರ್ಮ ಸಭೆಯಲ್ಲಿ ಕಾಶೀ ಜಗದ್ಗುರುಗಳು ಶಿವನು ಎಷ್ಟು ಪ್ರಾಚೀನನೋ ವೀರಶೈವ ಧರ್ಮವೂ ಅಷ್ಟೇ ಪ್ರಾಚೀನವಾಗಿದೆ. ಮಹಾನುಭಾವಿ ಬಸವೇಶ್ವರರು ವೀರಶೈವ ಧರ್ಮ ದೀಕ್ಷೆ ಪಡೆದಿದ್ದಕ್ಕೆ ಸಾಕಷ್ಟು ಐತಿಹಾಸಿಕ ದಾಖಲೆಗಳಿವೆ. ಶೈವದಿಂದ ಬಂದು ವೀರಶೈವದೀಕ್ಷೆ ಪಡೆದದ್ದನ್ನು ತಿಳಿದುಕೊಳ್ಳದ ಕೆಲ ಜನ ಸಮಾಜದಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂಬ ಸತ್ಯ ಸಂಗತಿಯನ್ನು ಭಕ್ತರಿಗೆ ತಿಳಿಸಿದರು.


ಮಂಟೇಸ್ವಾಮಿ ದೇವಸ್ಥಾನ ಉದ್ಘಾಟನೆ



ಬಾಗಲಕೋಟೆಯ ಚಿತ್ತರಗಿ ಗ್ರಾಮದ ಮಂಟೇಸ್ವಾಮಿ ದೇವಸ್ಥಾನದ ಉದ್ಘಾಟನೆ.

ದಿಗ್ಗಿ ಸಂಗಮೇಶ್ವರ ತಾಣದಲ್ಲಿ ಆಧ್ಯಾತ್ಮದ ಸಾಕ್ಷಾತ್ಕಾರ

15–4–2008 : ಐತಿಹಾಸಿಕ ಧಾರ್ಮಿಕ ಶ್ರದ್ಧಾಕೇಂದ್ರವಾದ ದಿಗ್ಗಿ ಸಂಗಮನಾಥನ ನೂತನ ಮಹಾದ್ವಾರ ಉದ್ಘಾಟನೆ ನೆರವೇರಿಸಿ ಕಾಶೀ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಮಾನವಜನ್ಮದ ಮೂಲ ಉದ್ದೇಶ ಆತ್ಮಸಾಕ್ಷಾತ್ಕಾರ. ಅದಕ್ಕೆ ಗುರುವಿನ ಮಾರ್ಗದರ್ಶನದಲ್ಲಿ



ಶಹಾಪುರದ ದಿಗ್ಗಿ ಸಂಗಮೇಶ್ವರ ದೇವಸ್ಥಾನ ಮಹಾದ್ವಾರವನ್ನು ಅಡ್ಡಪಲ್ಲಕ್ಕಿ ಮಹೋತ್ಸವದೊಂದಿಗೆ ಕಾಶೀ ಜಗದ್ಗುರು ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು.

ಸಾರ್ಥಕತೆ ಪಡೆಯಬೇಕೆಂದು ಹೇಳಿ ಸನಾತನ ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ನಮ್ಮಲ್ಲಿರುವ ಅರಿವಿಗೆ ಗುರುವಿನ ಪ್ರೇರಣೆ ಅವಶ್ಯವೆಂದು ತಿಳಿಸಿದರು.

'ಲಿಂಗಾಂಗ ಸಾಮರಸ್ಯವೇ ವೀರಶೈವ ಸಿದ್ಧಾಂತ'

ಪ್ರಜಾವಾಣಿ, 22–7–2008

ಗುಲ್ಬರ್ಗದ ಶೇಖ್ ರೋಜಾದಲ್ಲಿ ಇರುವ ಕಡಗಂಚಿ ಸಂಸ್ಥಾನ ಕಟ್ಟಿಮಠ ಹಿರೇಮಠದ ಶಾಖಾಮಠದಲ್ಲಿ 30 ಅಡಿ ಎತ್ತರದ ದಾರುಕಾಚಾರ್ಯರ ಪ್ರತಿಮೆ ಅನಾವರಣ ಹಾಗೂ ಮೂರು ಅಂತಸ್ಥಿನ ಕಲ್ಯಾಣ ಮಂಟಪ ಉದ್ಘಾಟನೆಯನ್ನು ಕಾಶೀ ಜಗದ್ಗುರುಗಳು ಮಾಡಿದ ನಂತರ ಸಿದ್ಧಾಂತ ಶಿಖಾಮಣಿ ಕುರಿತು ಆಧ್ಯಾತ್ಮ ಆಶೀರ್ವಚನ ನೀಡುತ್ತ ಲಿಂಗವೆಂದರೆ ಅಖಂಡವಾದ ಪರಶಿವ ಚೈತನ್ಯ, ಅಂಗವೆಂದರೆ ಮುಖ್ಯವಾದ ಚೈತನ್ಯ. ಈ ಎರಡು ಅಂಶಗಳ ಸಾಮರಸ್ಯವೇ ಲಿಂಗಾಂಗ ಸಾಮರಸ್ಯ ಎಂದು ತಿಳಿಸಿದರು.

ಸಂಸ್ಕೃತಿ ರಕ್ಷಣೆಗೆ ಗುರುಕುಲ ಅಗತ್ಯ



ಹೈದ್ರಾಬಾದ್ ಸಮೀಪದ ಸಾದ ನಗರದಲ್ಲಿ ವೀರಶೈವ ಗುರುಕುಲದ ಶಿಲಾನ್ಯಾಸವನ್ನು ಕಾಶೀ ಜಗದ್ಗುರು ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನೆರವೇರಿಸಿದರು. ಮಾಜಿ ಉಪಮುಖ್ಯಮಂತ್ರಿ ಎಂ.ಪಿ. ಪ್ರಕಾಶ್, ಬಸವರಾಜ ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

16–8–2008 : ಹೈದರಾಬಾದ್‌ನಲ್ಲಿ ಜಗದ್ಗುರುಗಳ 62ನೇ ಜನ್ಮದಿನೋತ್ಸವ ನಿಮಿತ್ತ ಹಮ್ಮಿಕೊಂಡಿದ್ದ ಗುರುಕುಲದ ಶಿಲಾನ್ಯಾಸ ನೆರವೇರಿಸಿ ಭಾರತದೇಶದ ಪ್ರಾಚೀನ ಸಂಸ್ಕೃತಿ ಕ್ಷೀಣಿಸುತ್ತಿರುವ ಬಗ್ಗೆ ತಿಳಿಸಿ ಅದರ ಸಂರಕ್ಷಣೆಗೆ ಗುರುಕುಲ ಪದ್ಧತಿಯ ಶಿಕ್ಷಣ ಇಂದು ಮತ್ತೆ ಬರಬೇಕಾಗಿದೆ. ವಿಶ್ವದಲ್ಲೇ ಭಾರತೀಯ ಸಂಸ್ಕೃತಿ ಶ್ರೇಷ್ಠವಾದುದು. ವ್ಯಕ್ತಿತ್ವವನ್ನು ಉತ್ತಮ ರೀತಿಯಲ್ಲಿ ನಿರ್ಮಿಸಿಕೊಳ್ಳಲು ಬೇಕಾದ ಎಲ್ಲಾ ನೀತಿಬೋಧನೆಗಳು ಈ ಸಂಸ್ಕೃತಿಯಲ್ಲಿದೆ ಎಂದು ಜಗದ್ಗುರುಗಳು ಹೇಳಿ ಮನುಷ್ಯ ತಾನು ಜನಿಸಿದ ನಾಡು, ಜನ್ಮಕೊಟ್ಟ ತಾಯಿ–ತಂದೆ, ಜ್ಞಾನಕೊಟ್ಟ ಗುರುಗಳು ಇವರೆಲ್ಲರ ಬಗ್ಗೆ ಆದರಣೀಯ ಭಾವ ಹೊಂದಿರಬೇಕೆಂದು ಹೇಳಿ ಇಲ್ಲಿ ಪ್ರಾರಂಭಿಸುವ ವೀರಶೈವ ಗುರುಕುಲದಲ್ಲಿ ಸಂಸ್ಕೃತ, ವೇದ ಮತ್ತು ಆಗಮಗಳ ಜೊತೆಗೆ ಆಧುನಿಕ ಶಿಕ್ಷಣ ಕಲಿಸಬೇಕೆಂದು ತಿಳಿಸಿದರು.

17–11–2008



ಮಹಾರಾಷ್ಟ್ರದ ಸಾಂಗಲಿ ಜಿಲ್ಲಾ ಜತ್ ನಗರದ ಶ್ರೀ ಮಲ್ಲಿಕಾರ್ಜುನ ಕಳಸಾ ರೋಹಣ ಮಹೋತ್ಸವವನ್ನು ಶ್ರೀ ಕಾಶೀಜಗದ್ಗುರುಗಳವರು ನೇರವೇರಿಸು ತ್ತಿರುವುದು. ಜೊತೆಗೆ ಶ್ರೀ ಷ। ಬ್ರ। ಶಿವಲಿಂಗಾಚಾರ್ಯರು, ಬೆಳ್ಳಂಕಿ ಇದ್ದಾರೆ.

14–1–2009 : ಸೊಲ್ಲಾಪುರದಲ್ಲಿ ನಡೆದ ನಂದಿಕೋಲ ಉತ್ಸವದ ಮೇಲೆ ಹೆಲಿಕಾಪ್ಟರ್ ಮುಖಾಂತರ ಪುಷ್ಪವೃಷ್ಟಿಯನ್ನು ಕಾಶೀ ಜಗದ್ಗುರುಗಳು ಮಾಡುವಂತೆ ಏರ್ಪಾಡಾಗಿತ್ತು. ಹೆಲಿಕಾಪ್ಟರ್ ಮುಖಾಂತರ ಪುಷ್ಪವೃಷ್ಟಿ ಮಾಡುವುದನ್ನು ನೋಡಲು ಲಕ್ಷಾಂತರ ಭಕ್ತಾದಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಅಂದು ಮಕರ ಸಂಕ್ರಾಂತಿ ದಿನ. ಆ ಕುರಿತು ತಮ್ಮ ಆಶೀರ್ವಚನದಲ್ಲಿ ಸರ್ವಧರ್ಮೀಯರಲ್ಲಿ ಸದ್ಭಾವನೆ ಹಾಗೂ ಸಾಮರಸ್ಯ ಬೆಳೆಯಬೇಕು ಮಕರ ಸಂಕ್ರಮಣ ದಂದು ಉತ್ತರಾಯಣ ಪರ್ವಕಾಲ ಆರಂಭವಾಗುತ್ತದೆ. ಅಂದು ಪವಿತ್ರ ಸಂಗಮ ಕ್ಷೇತ್ರಗಳಲ್ಲಿ ಜನರು ಮಂಗಲಸ್ನಾನ ಮಾಡಿ ಪರಸ್ಪರ ಎಳ್ಳುಬೆಲ್ಲ ವಿನಿಮಯ ಮಾಡಿಕೊಳ್ಳುವುದರ ಮೂಲಕ ಸದ್ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ಎಳ್ಳಿನಲ್ಲಿಯ ಸ್ನೇಹ, ಬೆಲ್ಲದಲ್ಲಿಯ ಮಾಧುರ್ಯ ಗುಣಗಳು ಎಲ್ಲರ ಮನಸ್ಸಿನಲ್ಲಿ ಮೂಡಿ ದ್ವೇಷ, ಅಸೂಯೆ ಭಾವನೆಗಳು ಅಳಿಯ ಬೇಕೆಂಬುದೇ ಮಕರ ಸಂಕ್ರಮಣದ ಉದ್ದೇಶ ಎಂದರು. ಬೇರೆ ಬೇರೆ



श्री सिद्धरामेश्वरांच्या नंदीध्वजांचा अक्षता सोहळा मंगळवारी लाखो भाविकांच्या उपस्थितीत सिद्धेश्वर मंदिराजवळील संमती कट्ट्यावर पार पडला. यावेळी सावरकर विचार मंचच्या वतीने हेलिकॉप्टरमधून पुष्पवृष्टी करण्यात आली.
(छाया : भूदत्त फोटो स्टुडिओ, सोलापूर)





ನದಿಗಳು ಸಮುದ್ರ ಸೇರಿ ಒಂದಾಗುವಂತೆ ಧರ್ಮ, ಜಾತಿ, ಭಾಷೆ, ಪ್ರಾಂತ ಮತ್ತು ಪಕ್ಷಗಳಿಂದ ಒಡೆದಿರುವ ಮಾನವ ಸಮಾಜ ಸಂಗಮದಲ್ಲಿ ಕೂಡುವ ನದಿಗಳಂತೆ ಭೇದಭಾವ ಮರೆತು ಕೂಡಿಕೊಂಡು ಹೋಗಲು ಕಲಿಯಬೇಕೆಂಬ ಉದ್ದೇಶದಿಂದಲೇ ಸಂಕ್ರಾಂತಿಯಂದು ಸಂಗಮಸ್ನಾನಕ್ಕೆ ಮಹತ್ವ ನೀಡಲಾಗಿದೆ ಎಂದು ಅರ್ಥಪೂರ್ಣವಾಗಿ ಮಕರಸಂಕ್ರಾಂತಿಯ ಮಹತ್ವವನ್ನು ತಿಳಿಸಿದರು. ಮಹಾರಾಷ್ಟ್ರದ ಪ್ರಮುಖ ಪತ್ರಿಕೆಗಳಲ್ಲಿ ಪುಷ್ಪವೃಷ್ಟಿಯ ಹಲವಾರು ಚಿತ್ರಗಳನ್ನು ತೋರಿಸಿದ್ದರು. ಸಕಾಲ್, ಕೇಸರಿ, ತರುಣಭಾರತ ಮುಂತಾದ ಪತ್ರಿಕೆಗಳ ದೃಶ್ಯಗಳು ಕಣ್ಮನ ಸೆಳೆಯುವಂತಿವೆ.

17–2–2009

ಪರ್ವತ ಶಿಖರಗಳು ದೇವಭೂಮಿಗಳು ಅರಾವಲಿಯಲ್ಲಿ ದುರ್ಗಾದೇವಿ ಮೂರ್ತಿ ಪ್ರತಿಷ್ಠಾಪನೆ

ವಿಜಯ ಕರ್ನಾಟಕ, 17–2–2009



ಹರಿಯಾಣದ ಅರಾವಲೀ ಪರ್ವತಶಿಖರದ ನೂತನ ಮಂದಿರದಲ್ಲಿ ನಡೆದ ದುರ್ಗಾದೇವಿಯ ಮೂರ್ತಿಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಕೇಂದ್ರದ ಮಾಜಿ ಸಚಿವ ಶಿವರಾಜ ಪಾಟೀಲ ಅವರು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ದರ್ಶನ ಪಡೆದರು.


ಮನಸ್ಸನ್ನು ಉದಾತ್ತ ಭಾವನೆಗಳಿಂದ ತುಂಬಿಕೊಳ್ಳಬೇಕು. ಆಗ ನಾವು ಇದ್ದಲ್ಲಿಯೇ ನಮ್ಮ ಮನಸ್ಸಿನ ಮೂಲಕ ಭಗವಂತನನ್ನು ಹೊಂದಬಹುದು. ಕಾಶೀ ಶ್ರೀಗಳು

ಹರಿಯಾಣ ಪ್ರದೇಶದ ಗುರಗಾಂವ ಸಮೀಪದ ಅರಾವಲೀ ಪರ್ವತಶಿಖರದ ಮೇಲೆ ಹೊಸದಿಲ್ಲಿಯ ಅತುಲ ಕುಮಾರ ಸಕ್ಸೇನಾ ಅವರು ತಮ್ಮ ತಾಯಿಯ ಸ್ಮರಣಾರ್ಥ ನಿರ್ಮಿಸಿದ ನೂತನ ಮಂದಿರದಲ್ಲಿ ದುರ್ಗಾದೇವಿಯ ಮೂರ್ತಿ ಪ್ರತಿಷ್ಠಾಪನೆ ಮಾಡಲೆಂದು ಪೂಜ್ಯ ಕಾಶೀ ಜಗದ್ಗುರುಗಳನ್ನು ಆಹ್ವಾನಿಸಿದ್ದರು. ಪ್ರತಿಷ್ಠಾಪನೆ ಮಾಡಿದ ನಂತರ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಪರ್ವತ ಶಿಖರಗಳು ದೇವತೆಗಳ ನಿತ್ಯನಿವಾಸದ ಭೂಮಿಗಳು ಹಾಗಾಗಿ ಅವುಗಳು ಪವಿತ್ರ ಸ್ಥಾನಗಳಾಗಿದೆ. ನಮ್ಮ ದೇಶದ ಋಷಿ ಮಹರ್ಷಿಗಳು, ಕಾಳಿದಾಸಾದಿ ಕವಿಗಳು ಕೈಲಾಸ, ಮಂದಾರ, ಮೇರು, ಹಿಮಾಲಯ ಮತ್ತು ಶ್ರೀಶೈಲ ಮುಂತಾದ ಪರ್ವತ ಶಿಖರಗಳನ್ನು ದೇವಭೂಮಿ ಎಂದು ಹೇಳಿದ್ದಾರೆ. ನಿಸರ್ಗರಮ್ಯತೆ, ಪ್ರಶಾಂತತೆಯಿಂದಿರುವುದು ಇಲ್ಲಿ ಸಾಧಕರು ಸಹಜವಾಗಿ ಅನನ್ಯ ಏಕಾಗ್ರತೆ ಸಾಧಿಸಿ ಸಿದ್ಧಿಪಡೆಯಬಲ್ಲರು.

ಪರ್ವತ ಶಿಖರಗಳು ಉನ್ನತ ವಿಚಾರದ ಮನಸ್ಸಿನ ಸಂಕೇತಗಳು. ದೇಶಕಲ್ಯಾಣದ ಉನ್ನತ ವಿಚಾರಗಳನ್ನು ಹೊಂದಿರುವ ಭಕ್ತರ ಹೃದಯದಲ್ಲಿ ಭಗವಂತನು ವಾಸಿಸಿರುತ್ತಾನೆ ಎಂಬ ವಿಚಾರವನ್ನು ಸಿದ್ಧಾಂತ ಶಿಖಾಮಣಿಯೂ

18–6–2009

ವಿಜಯ ನಿರ್ವಹಣಾ ಸಂಸ್ಥೆ ಉದ್ಘಾಟನೆ



18–6–2009 : ಮೈಸೂರಿನ ಶ್ರೀರಾಂಪುರದ ವೀರಶೈವ ಸಾರ್ವಜನಿಕ ಸೇವಾ ಸಂಸ್ಥೆಯ ವಿಜಯ ನಿರ್ವಹಣಾ ಸಂಸ್ಥೆಯನ್ನು ವಾರಣಾಸಿಯ ಜಂಗಮವಾಡಿ ಮಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಶಾಸಕರಾದ ಎಸ್.ಎ. ರಾಮದಾಸ್, ತೋಂಟದಾರ್ಯ, ಪಾಲಿಕೆ ಸದಸ್ಯ ಕೆಂಪಣ್ಣ ಇದ್ದಾರೆ.

ವೀರಶೈವ ಸಾರ್ವಜನಿಕ ಸೇವಾ ಸಂಸ್ಥೆಯ ವಿಜಯ ನಿರ್ವಹಣಾ ಸಂಸ್ಥೆಯ ಬಿಬಿಎಂ ಮತ್ತು ಬಿಕಾಂ ಕಾಲೇಜನ್ನು ಗುರುವಾರ ನಗರದ ಶ್ರೀರಾಂಪುರ ಬಡಾವಣೆಯಲ್ಲಿ ವಾರಣಾಸಿಯ ಜಂಗಮವಾಡಿ ಮಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಅನೇಕ ಉತ್ತಮ ಸಂಸ್ಥೆಗಳ ಪೈಕಿ ಸಾಕಷ್ಟು ರಾಜ್ಯದಲ್ಲೇ ಇದ್ದು, ಮೈಸೂರು ಈ ಪೈಕಿ ದಾಪುಗಾಲು ಇಡುತ್ತಿರುವುದು ಸಂತಸದ ಸಂಗತಿ. ಅದರಲ್ಲೂ ವೀರಶೈವ ಸಾರ್ವಜನಿಕ ಸೇವಾ ಸಂಸ್ಥೆ ಮಹತ್ತರ ಸಾಧನೆ ಮಾಡಿದೆ ಎಂದರು.

ಮ್ಯಾನೇಜ್‌ಮೆಂಟ್ ಕಾಲೇಜು ಕಟ್ಟಡ ಆರಂಭ



ಮೈಸೂರಿನಲ್ಲಿ ವೀರಶೈವ ಸಾರ್ವಜನಿಕ ಸೇವಾ ಸಂಸ್ಥೆಯ ವಿಜಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ನೂತನ ಕಟ್ಟಡವನ್ನು ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಗುರುವಾರ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯ ತೋಂಟದಾರ್ಯ, ಶಾಸಕ ಎಸ್.ಎ.ರಾಮದಾಸ್, ಮಹಾನಗರಪಾಲಿಕೆ ಸದಸ್ಯ ಕೆಂಪಣ್ಣ, ಮುಖಂಡರಾದ ತಾಯೂರು ವಿಠಲಮೂರ್ತಿ, ಕೆ.ಎಸ್.ನಾಗಸುಂದರ, ಎಸ್.ಎ.ವೀರಭದ್ರಸ್ವಾಮಿ ಇದ್ದರು.

3–11–2009



ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ 'ಶಕ್ತಿ ವಿಶಿಷ್ಟಾದ್ವೈತ ತತ್ವತ್ರಯ ವಿಮರ್ಶೆ' ಗ್ರಂಥವನ್ನು ರಾಜ್ಯ ಪತ್ರಾಗಾರ ಇಲಾಖೆ ನಿರ್ದೇಶನಾಲಯದ ನಿರ್ದೇಶಕಿ ಉಷಾ ಸುರೇಶ್ ಗುರುವಾರ ಬಿಡುಗಡೆ ಮಾಡಿದರು. ಕೇಂದ್ರ ಶಾಸನ ಇಲಾಖೆ ಮಾಜಿ ನಿರ್ದೇಶಕ ಕೆ.ವಿ.ರಮೇಶ್, ವಿದ್ವಾನ್ ಶಿವಕುಮಾರಸ್ವಾಮಿ, ವೀರಶೈವ ಅನುಸಂಧಾನ ಸಂಸ್ಥಾನದ ಉಮಾದೇವಿ, ಗ್ರಂಥದ ಅನುವಾದಕ ಡಾ. ಸಿ. ಶಿವಕುಮಾರಸ್ವಾಮಿ, ಹಲಗೂರು ಮಠದ ರುದ್ರಮುನಿ ಸ್ವಾಮೀಜಿ, ಕಾಶಿ ಜಂಗಮವಾಡಿ ಮಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಇದ್ದಾರೆ.

ಕಳಸಾರೋಹಣವು ಮಂದಿರದ ಪರಿಪೂರ್ಣತೆಯ ಸಂಕೇತ




3–11–2009 : ಶ್ರೀ ಜ.ಪಂಚಾಚಾರ್ಯ ವೇದ ಆಗಮ ಸಂಸ್ಕೃತ ಮತ್ತು ಯೋಗ ಪಾಠಶಾಲೆಯ ಪ್ರಾಂಗಣದಲ್ಲಿರುವ ಶ್ರೀ ಕಾಶೀವಿಶ್ವೇಶ್ವರ ಮಂದಿರದ ಕಳಸಾರೋಹಣವು ಕಾಶೀ ಜಗದ್ಗುರುಗಳವರಿಂದ ನೆರವೇರಿತು.

15–1–2010

ಮಹಾದ್ವಾರ ಉದ್ಘಾಟನೆ

ವಿಜಯ ಕರ್ನಾಟಕ, 15–1–2010



ಜಗದ್ಗುರುಗಳ ಜನ್ಮಸ್ಥಳ ತೋಗುಣಸಿಯಲ್ಲಿ ನಿರ್ಮಿಸಲಾಗಿರುವ ಮಹಾದ್ವಾರವನ್ನು ಬಹು ಸಂತೋಷದಿಂದ ಜಗದ್ಗುರುಗಳ ಉದ್ಘಾಟಿಸಿದರು.

ಸರಕಾರ ತೋಗುಣಸಿಯಲ್ಲಿ ಹೈಸ್ಕೂಲು ಮಂಜೂರು ಮಾಡಿದರೆ ಜಾಗ ಖರೀದಿಸಲು ಮಠದಿಂದ 1 ಲಕ್ಷ ರೂ. ದೇಣಿಗೆ ನೀಡುವುದಾಗಿ ವಿದ್ಯಾಪ್ರೇಮಿಗಳಾದ ಜಗದ್ಗುರುಗಳು ತಿಳಿಸಿದರು. ಮಾಧ್ಯಮಿಕ, ಹೈಸ್ಕೂಲು, ಶಿಕ್ಷಣ ಪಡೆಯಲು ತಾವು ಗುಳೇದಗುಡ್ಡ, ಬ್ಯಾಡಗಿ ಸೊಲ್ಲಾಪುರಗಳಲ್ಲಿ ಓದಿದ್ದು ನೆನಪಿನಲ್ಲಿದ್ದು ಇಂದಿನ ಮಕ್ಕಳಿಗೆ ಆ ತೊಂದರೆ ಆಗಬಾರದೆಂದು ಹೈಸ್ಕೂಲ್ ಆರಂಭಿಸಲು ಅಲ್ಲಿನ ಶಾಸಕರಿಗೆ ತಿಳಿಸಿದರು.

ಹೇಳುತ್ತದೆ. ಆದ್ದರಿಂದ ಮನಸ್ಸನ್ನು ಉದಾತ್ತ ಭಾವನೆಗಳಿಂದ ತುಂಬಿಕೊಳ್ಳಬೇಕು. ಆಗ ನಾವು ಇದ್ದಲ್ಲಿಂದಲೇ ನಮ್ಮ ಮನಸ್ಸಿನ ಮೂಲಕ ಭಗವಂತನನ್ನು ಸೇರಬಹುದೆಂದರು.

ಕಳಸಾರೋಹಣವು ದೇವಾಲಯದ ಪರಿಪೂರ್ಣತೆಯ ಸಂಕೇತವಾಗಿದೆ. ದೇವಸ್ಥಾನದ ಗರ್ಭಗುಡಿಯಲ್ಲಿರುವ ದೇವರ ದರ್ಶನದಿಂದ ಯಾವ ಫಲ ಪ್ರಾಪ್ತವಾಗುವುದೋ ಅದು ಮಂದಿರದ ಕಳಸದ ದರ್ಶನದಿಂದಲೂ ಪ್ರಾಪ್ತವಾಗುವುದೆಂದು ಕಾಶೀ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

19–2–2010 : ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಸಂಸ್ಕೃತ ವಿದ್ಯಾಧರ್ಮ ವಿಜ್ಞಾನ ಸಭಾಭವನದಲ್ಲಿ ಅಖಿಲ ಭಾರತೀಯ ಶಾಸ್ತ್ರಾರ್ಥ ಪರಿಷತ್ ಉದ್ಘಾಟಿಸಲು ಕಾಶೀ ಜಗದ್ಗುರುಗಳಿಗೆ ಆಹ್ವಾನ ನೀಡಿದ್ದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಜಗದ್ಗುರುಗಳು ಈ ಲೋಕದಲ್ಲಿ ಸರಿಯಾಗಿ ಬದುಕಿ ಸದ್ಗತಿ ಪಡೆಯಬೇಕಾದರೆ ಎಲ್ಲರೂ ಶಾಸ್ತ್ರಗಳ ಅಧ್ಯಯನ ಮಾಡಬೇಕು ಇಲ್ಲವೇ ಶಾಸ್ತ್ರಜ್ಞರಿಂದ ಮಾರ್ಗದರ್ಶನ ಪಡೆಯಬೇಕು. ಭಾರತೀಯ ತತ್ತ್ವ ಶಾಸ್ತ್ರಗಳು ಮಾನವ ಜೀವನ ಮಾರ್ಗದರ್ಶಿಗಳಾಗಿವೆ ಎಂದು ಉದ್ಘಾಟನಾ ಆಶೀರ್ವಚನದಲ್ಲಿ ತಿಳಿಸಿದರು.

भारतीय शास्त्रे ही मानवी जीवनाचे मार्गदर्शक : काशी जगद्गुरू



बनारस हिंदू विश्व विद्यालयाच्या संस्कृतविद्या धर्म विज्ञान सभागृहात आयोजित अखिल भारतीय शास्त्रार्थ परिषदेचे उद्घाटन श्री काशी जगद्गुरू डॉ. चंद्रशेखर शिवाचार्य महास्वामीजी यांच्या अमृतहस्ते झाले.

ಕ್ರಿಯಾಮೂರ್ತಿಗಳ ಸಮುದಾಯ ಭವನ ಸ್ಥಾಪನೆ ಸ್ತುತ್ಯ: ಕಾಶಿ ಜಗದ್ಗುರುಗಳು



17–3–2010 : ಗದಗ್‌ನ ನಿಸರ್ಗ ಬಡಾವಣೆಯಲ್ಲಿ ಡಾ.ಪಂ. ಪುಟ್ಟರಾಜ ಗವಾಯಿಗಳ ಕ್ರಿಯಾಮೂರ್ತಿಗಳ ಸಮುದಾಯ ಭವನ ನಿರ್ಮಾಣ ಸಮಿತಿಯಿಂದ ನಿರ್ಮಾಣಗೊಂಡಿರುವ ಕ್ರಿಯಾಮೂರ್ತಿಗಳ ಸಮುದಾಯ ಭವನವನ್ನು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದ ಕಾಶೀ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಗುರುಪೀಠ ಪರಂಪರೆ ದೊಡ್ಡದು, ಗದಗ್‌ನಗರದಲ್ಲಿ ಕ್ರಿಯಾಮೂರ್ತಿಗಳ ಸಮುದಾಯ ಭವನ ಸ್ಥಾಪಿಸಿದ್ದು ಈ ಭಾಗದ ಜನರಲ್ಲಿ ಆಧ್ಯಾತ್ಮಿಕ ಧಾರ್ಮಿಕ ಜಾಗೃತಿಗೆ ಹೆಚ್ಚಿನ ಅನುಕೂಲ ಮಾಡಿದಂತಾಗಿದೆ ಎಂದು ತಿಳಿಸಿ ಭವನ ನಿರ್ಮಾಣದ ದಾನಿಗಳನ್ನು ಸತ್ಕರಿಸಿದರು.

'ಪಂಚಪೀಠಗಳು ಮನುಕುಲಕ್ಕೆ ಸಂದೇಶ ನೀಡುತ್ತವೆ'

ವಿಜಯ ಕರ್ನಾಟಕ, 21–3–2010



ಹಿಪ್ಪರಗಿಯಲ್ಲಿ ಹಮ್ಮಿಕೊಂಡಿದ್ದ ಸದ್ವಿಚಾರ ಚಿಂತನ ಧರ್ಮಸಭೆಯನ್ನು ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು. ಶ್ರೀಶೈಲದ ನೂತನ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು, ಶಾಸಕ ಸಿದ್ದು ಸವದಿ, ಜಿ.ಎಸ್.ನ್ಯಾಮಗೌಡ ಚಿತ್ರದಲ್ಲಿದ್ದಾರೆ.

21–3–2010 : ಜಮಖಂಡಿ ತಾಲೂಕಿನ ಹಿಪ್ಪರಗಿಯಲ್ಲಿರುವ ಹಿರೇಮಠದ ಲಿಂ. ಶ್ರೀಗುರು ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳ 40ನೇ ಚಿರಲಿಂಗಾಂಗ ಸಾಮರಸ್ಯ ದಿನೋತ್ಸವದಂಗವಾಗಿ ಹಮ್ಮಿಕೊಂಡಿದ್ದ ಸದ್ವಿಚಾರ ಚಿಂತನ ಧರ್ಮಸಭೆಯನ್ನು ಉದ್ಘಾಟಿಸಿದ ಕಾಶೀ ಜಗದ್ಗುರುಗಳು ಪಂಚಪೀಠಗಳ ಪಂಚವರ್ಣಗಳ ಸಂದೇಶಗಳ ಬಗ್ಗೆ ಸ್ವಾರಸ್ಯಕರವಾಗಿ ವಿವರಿಸಿದರು. ಹಸಿರುಕ್ರಾಂತಿಯ ಸಂದೇಶವನ್ನು ರಂಭಾಪುರಿ ಪೀಠ ತ್ಯಾಗವನ್ನು, ಉಜ್ಜಯನಿ ಪೀಠ, ಆಕಾಶದಷ್ಟು ವಿಶಾಲ ಸಮುದ್ರದಷ್ಟು ಗಂಭೀರ ಮನಸ್ಸು ಹೊಂದಿರುವ ಸಂದೇಶವನ್ನು ಕೇದಾರ ಪೀಠ, ಸಾತ್ವಿಕತೆಯ ಸಂದೇಶವನ್ನು ಶ್ರೀಶೈಲ ಪೀಠ, ಮನಸ್ಸು ಪಕ್ವವಾಗುವ ಸಂದೇಶವನ್ನು ಕಾಶೀ ಪೀಠ ನೀಡುವುದರಿಂದ ಸರ್ವರೂ ಸಮಾನರು ಎಂಬ ಸಂದೇಶವನ್ನು ನೀಡುತ್ತವೆ ಎಂದರು. ಅಸಾಧ್ಯವನ್ನು ಸಾಧ್ಯ ಮಾಡುವ ಶಕ್ತಿ ಗುರುವಿನಲ್ಲಿದೆ ಎಂದು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

23–3–2010

कलशारोहणाने पौराणिक वारसा जतन

मोहोळला डॉ. चंद्रशेखर शिवाचार्य महाराजांचे प्रतिपादन

मोहोळ, ता. २२ : मोहोळ येथील पुरातन महादेव मंदिराचा जीर्णोद्धार व कलशारोहण करून भाविक व पंचसमितीने पौराणिक वारसा जतन केला आहे, असे कौतुकोद्गार काशीपीठाचे जगद्गुरू डॉ. चंद्रशेखर शिवाचार्य महाराज यांनी काढले.

मोहोळ येथे महादेव मंदिर, विठ्ठल-रुक्मिणी मंदिर व भिकलिंप्पा महाराज मंदिराचा कलशारोहण समारंभ डॉ. चंद्रशेखर शिवाचार्य महाराज व महंत शिपलागिरी महाराजांच्या हस्ते धार्मिक व उत्साहाच्या वातावरणात आज झाला. यावेळी त्यांनी भाविकांना मार्गदर्शन केले. पौराणिक काळात चंद्रमौळीनगर असे नाव व श्री नागनाथाच्या रूपाने प्रत्यक्ष महादेवाचे वास्तव्य असलेल्या मोहोळचा पौराणिक वारसा तरुण पिढीला माहीत होणे गरजेचे आहे. त्यासाठी चंद्रमौळी नगराचा उल्लेख वारंवार करण्याचे आवाहन त्यांनी केले.

यावेळी जगद्गुरू रेणुक शिवाचार्य महाराज, राजेंद्र खर्गे महाराज, वडवळचे गुरूनाथ व नागाबुवा खर्गे महाराज, देगावचे शिवशंकर खर्गे महाराज, मार्डीचे परमेश्वर खर्गे महाराज, प्रभुदेव शिवाचार्य महाराज माढेकर, नागनाथ देवस्थानचे पंच समितीचे अध्यक्ष सुरेश घोंगडे, मानकरी, महिला वर्ग उपस्थित होता. काशी विश्वेश्वर धर्तीवर महादेव मंदिर व शिखराचे कोरीव काम करणाऱ्या नांदेड जिल्ह्यातील शिल्पकार परमेश्वर कागणे व जालिंदर कागणे व कलशाचे काम करणाऱ्या अशोक राऊल यांचा सत्कार करण्यात आला. पौरोहित्य वेदमूर्ती बाजीराव जोशी यांनी केले.

करमाळ्यात आरपीआयची बैठक

करमाळा, ता. २२ : रिडलोसच्या वतीने मुंबई येथे होणाऱ्या मोर्चाचे नियोजन करण्यासाठी करमाळा तालुक्यातील आरपीआयच्या कार्यकर्त्यांची बैठक २६ मार्च रोजी जुना डाकबंगला येथे आयोजित केली आहे, अशी माहिती आरपीआयचे तालुकाध्यक्ष अर्जुनराव गाडे यांनी दिली आहे. ३० मार्च रोजी मुंबई येथे मोठ्या प्रमाणात मोर्चा निघणार आहे. या नियोजनाची बैठक आरपीआयचे जिल्हाध्यक्ष रमेश कांबळे यांच्या अध्यक्षतेखाली २६ मार्चला दुपारी साडेबारा वाजता होणार आहे.

23–3–2010 : ಮೊಹೋಲಾ ಪುರಾತನ ಮಹದೇವ ಮಂದಿರದ ಜೀರ್ಣೋದ್ಧಾರವಾದ ನಂತರ ಕಳಸಾರೋಹಣವನ್ನು ಕಾಶೀ ಜಗದ್ಗುರುಗಳಿಂದ ಮಾಡಿಸಿದರು.



मोहोळ : येथे श्री महादेव मंदिर, विठ्ठल रुक्मिणी मंदिर व भिकलिंगप्पा मंदिराच्या कळसाची विधिवत पूजा काशीपीठाचे जगद्गुरू डॉ. चंद्रशेखर शिवाचार्य महाराज यांच्या हस्ते झाली. यावेळी रेणुक शिवाचार्य हिरेमठ महाराज मंद्रूपकर, बसवराज शास्त्री, राजेंद्र खर्गे महाराज, सुरेश घोंगडे उपस्थित होते. (छायाचित्र : मस्त डिजिटल, मोहोळ)

5–4–2010 **ಭೂಮಿಪೂಜೆ...**



ಶಿವಮೊಗ್ಗಾದಲ್ಲಿ ಇತ್ತೀಚೆಗಷ್ಟೇ ಜಂಗಮ ಪುರೋಹಿತ ಅರ್ಚಕರ ಸಮಾವೇಶ ನಡೆದಿತ್ತು. ಆಗ ಶಿವಮೊಗ್ಗಾ ಜಿಲ್ಲಾ ವೀರಶೈವ ಜಂಗಮ ಪುರೋಹಿತರ ಮತ್ತು ಅರ್ಚಕರ ಕ್ಷೇಮಾಭಿವೃದ್ಧಿ ಸಂಘದ ಸ್ಥಾಪನೆಗೊಂಡು ಇಂದು ಅವರಿಗಾಗಿ ನಿರ್ಮಿಸಲಾಗುವ ಸಮುದಾಯ ಭವನದ ಶಿಲಾನ್ಯಾಸವನ್ನು ಕಾಶೀ ಜಗದ್ಗುರುಗಳು ನೆರವೇರಿಸಿದಾಗ.

5–4–2010

ಸನಾತನ ಕಾಲದಿಂದಲೂ ಜಂಗಮ ಸಮುದಾಯ ಸಮಾಜದಲ್ಲಿನ ಎಲ್ಲಾ ವರ್ಗಗಳ ಜನರ ಹಿತವನ್ನೇ ಬಯಸುತ್ತಾ ಪ್ರತಿಯೊಬ್ಬರ ಮನೆಯ ಜನನ, ವಿವಾಹ, ಗೃಹಪ್ರವೇಶ, ಮುಂತಾದ ಶುಭಾರಂಭ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಈಗ ನಿರ್ಮಾಣವಾಗಲಿರುವ ಸಮುದಾಯ ಭವನದಲ್ಲಿ ಈ ಭಾಗದ ಮಕ್ಕಳ ಅಧ್ಯಯನಕ್ಕಾಗಿ ಶ್ರೀ ಜಗದ್ಗುರು ಪಂಚಾಚಾರ್ಯ ವೇದ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಹೇಳಿದ್ದಲ್ಲದೆ ಪಾಠಶಾಲೆಗಾಗಿ ಕಾಶೀ ಮಹಾಪೀಠದಿಂದ ಒಂದು ಲಕ್ಷ ರೂ. ನೀಡುವುದಾಗಿ ತಿಳಿಸಿದರು.

ಜಗದ್ಗುರುಗಳು ಎಲ್ಲೇ ಸಂಚರಿಸಲಿ ಬಡಮಕ್ಕಳ ವಿದ್ಯಾಭ್ಯಾಸದ ಬಗೆಗೆ ಸದಾ ಚಿಂತನೆ ನಡೆಸಿ ಸಾಧ್ಯವಾದಷ್ಟು ಸಲಹೆಗಳನ್ನು ನೀಡಿ ಮಾರ್ಗದರ್ಶನ ಮಾಡುತ್ತಿದ್ದರಲ್ಲದೆ ಆರ್ಥಿಕ ನೆರವನ್ನು ನೀಡುತ್ತಾ ಬಂದಿದ್ದಾರೆ.



परळी येथील वैजनाथ देवस्थानच्या दर्शन मंडपाच्या उद्घाटन प्रसंगी बोलताना केंद्रीय भारी उद्योगमंत्री विलासराव देशमुख. व्यासपीठावर जगद्गुरु डॉ. चंद्रशेखर शिवाचार्य महास्वामी, खा. गोपीनाथ मुंडे, जयदत्त क्षीरसागर आदी.

13–5–2010

ಪರಳಿಯಲ್ಲಿ 12 ಜ್ಯೋತಿರ್ಲಿಂಗಗಳಲ್ಲಿ ಒಂದಾದ ವೈದ್ಯನಾಥ ಜ್ಯೋತಿರ್ಲಿಂಗ ದೇವಸ್ಥಾನದ ದರ್ಶನ ಮಂಟಪದ ಉದ್ಘಾಟನೆಯನ್ನು ಕಾಶೀ ಜಗದ್ಗುರುಗಳು ನೆರವೇರಿಸಿದರು. ಈ ಕಾರ್ಯಕ್ರಮಕ್ಕೆ ಕೇಂದ್ರಿಯ ಭಾರಿ ಉದ್ಯೋಗ ಮಂತ್ರಿಗಳಾದ ಶ್ರೀ ವಿಲಾಸ್‌ರಾವ್ ದೇಶಮುಖ್ ಆಗಮಿಸಿದ್ದರು. ವೈದ್ಯನಾಥ ದೇವಸ್ಥಾನದ ಟ್ರಸ್ಟಿನವರಿಂದ ದರ್ಶನ ಮಂಟಪ ನಿರ್ಮಾಣಗೊಂಡಿತ್ತು.

7–9–2010

ಶ್ರೀ ರಾಚೋಟೇಶ್ವರ ಕಲ್ಯಾಣ ಮಂಟಪದ ಅಡಿಗಲ್ಲು ಸಮಾರಂಭದ ಅಂಗವಾಗಿ

ದಿನಾಂಕ : 02-09-2010 ರಿಂದ 07-09-2010ರ ವರೆಗೆ

ಮಹಾ ದಾಸೋಹಿ ಶ್ರೀ ಶರಣಬಸವೇಶ್ವರರ ಪುರಾಣಕಾರ್ಯಕ್ರಮ

ದಿನಾಂಕ 7–9–2010ರಂದು ಪುರಾಣದ ಮಹಾಮಂಗಲ ಹಾಗೂ ಶ್ರೀ ರಾಚೋಟೇಶ್ವರ ಕಲ್ಯಾಣ ಮಂಟಪದ ಅಡಿಗಲ್ಲು ಸಮಾರಂಭದ ನಿಮಿತ್ಯ **ಶ್ರೀಮದ್ ಕಾಶಿ ಜ್ಞಾನಸಿಂಹಾಸನಾಧೀಶ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಭಗವತ್ಪಾದಂಗಳವರ** ಶುಭಾಗಮನ.

ಕಾರ್ಯಕ್ರಮದ ವಿವರ

ದಿನಾಂಕ 7–9–2010ರಂದ ಬೆಳಿಗ್ಗೆ

ಶ್ರೀ ರಾಚೋಟೇಶ್ವರ ಮೂರ್ತಿಗೆ ಮಹಾರುದ್ರಾಭಿಷೇಕ ಹಾಗೂ ಬಿಲ್ವಾರ್ಚನೆ ಕಾರ್ಯಕ್ರಮ.

ದಿವ್ಯ ಸಾನಿಧ್ಯ : **ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಭಗವತ್ಪಾದಂಗಳ**

ಶ್ರೀಮದ್ ಕಾಶಿ ಜ್ಞಾನಸಿಂಹಾಸನಾಧೀಶ ಜಗದ್ಗುರುಗಳು, ಇವರ ಅಮೃತ ಹಸ್ತದಿಂದ

ಶ್ರೀ ರಾಚೋಟೇಶ್ವರ ಕಲ್ಯಾಣ ಮಂಟಪದ ಅಡಿಗಲ್ಲು ಸಮಾರಂಭ

27–2–2011


ಶೈವಾಗಮಗಳ ಶಾಸ್ತ್ರ ಸಂಗೋಷ್ಠಿ ಇಂದಿನಿಂದ

ವಾರಾಣಸಿಯ ಹಿಂದು ವಿಶ್ವವಿದ್ಯಾಲಯದ ಧರ್ಮಾಗಮ ವಿಭಾಗದಲ್ಲಿ 5 ದಿನಗಳ ಅಂದರೆ ಫೆ. 27ರಿಂದ ಮಾರ್ಚ್ 1 ರವರೆಗೆ ಶೈವಾಗಮಗಳ ಶಾಸ್ತ್ರ ಸಂಗೋಷ್ಠಿ ಕಾರ್ಯಕ್ರಮವನ್ನು ಕಾಶೀ ಜಗದ್ಗುರುಗಳು ಉದ್ಘಾಟಿಸಿದರು.

ಶಿವಾಗಮಗಳು, ವೀರಶೈವ, ದಕ್ಷಿಣಶೈವ ಮತ್ತು ಕಾಶ್ಮೀರಶೈವ ದರ್ಶನಗಳ ಕುರಿತು ದೇಶ ವಿದೇಶಗಳ ವಿದ್ವಾಂಸರು ಪ್ರಬಂಧಗಳನ್ನು ಮಂಡಿಸಲಿದ್ದಾರೆ. ಗೋಷ್ಠಿಯಲ್ಲಿ ಕಾವ್ಯ, ಶಾಸ್ತ್ರ, ವ್ಯಾಕರಣಶಾಸ್ತ್ರ, ಭಾಷಾವಿಜ್ಞಾನ, ಶಿಕ್ಷಾಶಾಸ್ತ್ರ, ಜ್ಯೋತಿಷ್ಯ, ವೈದಿಕದರ್ಶನ, ಜೈನದರ್ಶನ, ಪುರಾಣೇತಿಹಾಸ ಮತ್ತು ಸಮಾಜಶಾಸ್ತ್ರಗಳ ತುಲನಾತ್ಮಕ ಅಧ್ಯಯನದ ವಿಷಯಗಳೆಲ್ಲವೂ ಚರ್ಚೆಯಾಗಲಿದೆ.

'ಗಳಿಕೆಯಲ್ಲಿ ಸಮಾಜಕ್ಕೂ ವ್ಯಯ ಮಾಡಿ'

ವಿಜಯ ಕರ್ನಾಟಕ, 5–6–2010



ಭಾಸಲೇಗಾವದಲ್ಲಿ ಗ್ರಾಮದೇವತೆ ಸಿದ್ಧರಾಮೇಶ್ವರ ನೂತನ ಮಂದಿರದ ಕಳಸಾರೋಹಣ ಮೆರವಣಿಗೆ ಸಂದರ್ಭದಲ್ಲಿ ಕಾಶೀ ಜಗದ್ಗುರುಗಳು ಭಾಗವಹಿಸಿದ್ದರು.

5–6–2010 ಅಕ್ಕಲಕೋಟೆ ತಾಲೂಕಿನ ಭಾಸಲೇಗ್ರಾಮದಲ್ಲಿ ಗ್ರಾಮದ ದೇವತೆ ಸಿದ್ಧರಾಮೇಶ್ವರರ ನೂತನ ಮಂದಿರದ ಕಳಸಾರೋಹಣವನ್ನು ಕಾಶೀ ಜಗದ್ಗುರುಗಳ ಪವಿತ್ರ ಹಸ್ತಗಳಿಂದ ನೆರವೇರಿಸಿದ ನಂತರ ಧರ್ಮಸಭೆಯಲ್ಲಿ ಭಕ್ತಾದಿಗಳಿಗೆ ದೇಹವನ್ನು ದಂಡಿಸಬೇಡ ಮನಸ್ಸನ್ನು ಶಾಂತವಾಗಿಟ್ಟುಕೊಳ್ಳಬೇಕು, ದುಡಿದು ಗಳಿಸಿದ ಹಣದಲ್ಲಿ ಶಕ್ತ್ಯಾನುಸಾರ ಸಮಾಜಕ್ಕೆ ವ್ಯಯಮಾಡಬೇಕು ಎಂದು – ಉಪದೇಶಿಸಿದರು. ವಾಮಮಾರ್ಗದಿಂದ ಎಂದೂ ಹಣ ಗಳಿಸಬಾರದೆಂದೂ, ಸನ್ಮಾರ್ಗದಿಂದ ಗಳಿಸಿದ ಧನವನ್ನು ಸತ್ಕಾರ್ಯಕ್ಕೆ ಬಳಸಬೇಕೆಂದೂ ಅವಕಾಶ ಸಿಕ್ಕೆಡೆಯಲ್ಲೆಲ್ಲಾ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ತಿಳಿಸುತ್ತಲೇ ಬರುತ್ತಿದ್ದಾರೆ.

ಜ್ಞಾನಕ್ಕಿಂತಲೂ ಪವಿತ್ರ ಬೇರೊಂದಿಲ್ಲ: ಶ್ರೀಗಳು

ಕ್ರಾಂತಿ, 17–7–2010



ಈ ಜಗತ್ತಿನಲ್ಲಿ ಜ್ಞಾನವೇ ಪವಿತ್ರವಾದದ್ದು, ಅಂತೆಯೇ ಉಪನಿಷತ್ತಿನಲ್ಲಿ 'ನಹಿ ಜ್ಞಾನೇನ ಸದೃಶ್ಯಂ ಪವಿತ್ರಮಿಹವಿದ್ದತೇ' ಎಂದು ಹೇಳಿದ ಕಾರಣ, ಪ್ರತಿಯೊಬ್ಬರ ಲೌಕಿಕ ಜ್ಞಾನದ ಜೊತೆಗೆ ಆತ್ಮಜ್ಞಾನರೂಪವಾದ ಅಧ್ಯಾತ್ಮ ಜ್ಞಾನವನ್ನು ಪಡೆದುಕೊಳ್ಳಬೇಕೆಂದು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದ್ದಾರೆ.

ನಗರದ ಶ್ರೀ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಸಮನ್ವಯಾತ್ಮಕ ಧರ್ಮ ಸಮಾರಂಭದಲ್ಲಿ ಶ್ರೀ ಗುರು ಶಾಂತಲಿಂಗೇಶ್ವರ ಪದವಿಪೂರ್ವ ಮಹಾವಿದ್ಯಾಲಯ ಉದ್ಘಾಟಿಸಿ ಮಾತನಾಡಿದ ಅವರು, ಪರಮಾತ್ಮನು ನಮಗೆಲ್ಲ ಬುದ್ಧಿ ಎಂಬ ಶ್ರೇಷ್ಠವಾದ ಅಂತರಿಂದ್ರಿಯವನ್ನು ದಯಪಾಲಿಸಿದ್ದಾನೆ. ಉಳಿದ ಎಲ್ಲ ಇಂದ್ರಿಯಗಳ ಮೇಲೆ ಬುದ್ಧಿಯ ನಿಯಂತ್ರಣವಿರುತ್ತದೆ. ಆ ಬುದ್ಧಿಯಲ್ಲಿ ಉತ್ತಮ ಜ್ಞಾನವಿದ್ದರೆ ಆತನ ಎಲ್ಲ ವ್ಯವಹಾರಗಳು ಉತ್ತಮವಾಗಿರುತ್ತವೆ. ಒಂದು ವೇಳೆ ಬುದ್ಧಿಯಲ್ಲಿ ಉತ್ತಮ ಜ್ಞಾನ ಇರದಿದ್ದರೆ, ಮನುಷ್ಯನ ಆಚರಣೆಗಳು ಸರಿಯಾಗಿ ಇರಲಾರವು. ಕಾರಣ ಬುದ್ಧಿಯನ್ನು ಶುದ್ಧವಾಗಿ ಇಟ್ಟುಕೊಳ್ಳಲು ಆತ್ಮಜ್ಞಾನವನ್ನು ಪಡೆದುಕೊಳ್ಳಬೇಕು ಎಂದು ಅವರು ವಿವರಿಸಿದರು. ಸ್ನಾನದಿಂದ ಶರೀರ ಶುದ್ಧಿ, ದಾನದಿಂದ ಧನಶುದ್ಧಿ, ಜ್ಞಾನದಿಂದ ಬುದ್ಧಿಶುದ್ಧಿ ಮತ್ತು ತಪಸ್ಸಿನಿಂದ ಆತ್ಮಶುದ್ಧಿ ಆಗುತ್ತದೆ. ಯಾರ ಬದುಕಿನಲ್ಲಿ ಇವು ಶುದ್ಧಗೊಂಡಿರುತ್ತವೆಯೋ ಅವರ ಜೀವನವೇ ಸಾರ್ಥಕ ಜೀವನ ಎಂದು ಅವರು ನುಡಿದರು.

ಪಂಚಾಚಾರ್ಯ ಕಲ್ಯಾಣ ಮಂಟಪಕ್ಕೆ ಶಿಲಾನ್ಯಾಸ



ದೇವರ ಹಿಪ್ಪರಗಿ : ಪಂಚಾಚಾರ್ಯ ಕಲ್ಯಾಣ ಮಂಟಪದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಕಾಶೀ ಶ್ರೀಗಳು ಆಶೀರ್ವಚನ ನೀಡಿದರು.

11–7–2011 : ದೇವರ ಹಿಪ್ಪರಗಿಯಲ್ಲಿ ಪಂಚಾಚಾರ್ಯ ಕಲ್ಯಾಣ ಮಂಟಪಕ್ಕೆ ಶಿಲಾನ್ಯಾಸ ನೆರವೇರಿಸಿ ಕಾಶೀ ಜಗದ್ಗುರುಗಳು ಹಿಂದೆ ಹೇಳಿದಂತೆ ಸಮಾಜಕ್ಕೆ ತಮ್ಮ ದುಡಿಮೆಯ ಕೆಲ ಅಂಶ ಕೊಡಬೇಕೆಂದು ಮಲ್ಲಿಕಾರ್ಜುನ ಮಠ ಬಸಯ್ಯನವರು ಕಲ್ಯಾಣ ಮಂಟಪ ಕಟ್ಟಿಸಿ 501 ಸಾಮೂಹಿಕ ವಿವಾಹ ಮಾಡಿಸಿರುವುದನ್ನು ಜಗದ್ಗುರುಗಳು ತಿಳಿದು ಅವರಿಗೆ ಒಂದು ಮಾತು ಹೇಳುತ್ತಾ, 501 ದಂಪತಿಗಳಿಗೆ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಉಚಿತವಾಗಿ ನೀಡಿ ಪಠಣ ಮಾಡುವುದನ್ನು ಕಲಿಸಿ ಎಂದು ಹೇಳಿ ಗ್ರಂಥವನ್ನು ನೀಡಿದರು.

ಜಗದ್ಗುರುಗಳ ಈ ಆಲೋಚನೆಗೆ, ದೂರದರ್ಶಿತ್ವಕ್ಕೆ ತಲೆಬಾಗಲೇ ಬೇಕು. 501 ದಂಪತಿಗಳಲ್ಲಿ 50 ಜನರಲ್ಲಿ ಭಕ್ತಿ ಮೂಡಿ ಪಾರಾಯಣ ಮಾಡಿದರೆ ಜಗದ್ಗುರುಗಳ ಸಂಕಲ್ಪ ಈಡೇರಿಸಿದಂತೆ ಆಗುವುದು.

23–1–2012 : ಇಂದಿನ ಶ್ರೀಶೈಲ ಪೀಠದ ಜಗದ್ಗುರುಗಳು ಪೀಠಕ್ಕೆ ಬರುವ ಮುನ್ನ ಚಿಕ್ಕೋಡಿ ತಾಲ್ಲೂಕಿನ ಯಡೂರ ಕ್ಷೇತ್ರವನ್ನು ಅನೇಕ ರೀತಿಯಲ್ಲಿ ಅಭಿವೃದ್ಧಿಗೊಳಿಸಿದ ಕೀರ್ತಿ ಅವರದ್ದಾಗಿದೆ. ಅದರ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ಸದಾ ಬೆಂಬಲಿಸುತ್ತಾ ಬಂದವರು. ಖ್ಯಾತ ಶಿಕ್ಷಣತಜ್ಞರೂ ರಾಜ್ಯಸಭಾ ಸದಸ್ಯರೂ ಆದ ಶ್ರೀ ಪ್ರಭಾಕರ್ ಕೋರೆಯವರ ಸಹಾಯ ಹಸ್ತ ಸದಾ ಇರುತ್ತಿತ್ತು.

ವಿಜಯ ಕರ್ನಾಟಕ, 23–1–2012



ಚಿಕ್ಕೋಡಿ ತಾಲೂಕು ಯಡೂರದ ಶ್ರೀ ವೀರಭದ್ರೇಶ್ವರ ಮಂದಿರದ ಆವರಣದಲ್ಲಿ ನಿರ್ಮಿಸಿದ ಧರ್ಮಕಟ್ಟಡಗಳನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಂಗಳವಾರ ಉದ್ಘಾಟಿಸಿದರು, ಶ್ರೀಶೈಲ, ಕಾಶೀ ಜಗದ್ಗುರುಗಳು, ಪ್ರಭಾಕರ ಕೋರೆ ಉಪಸ್ಥಿತರಿದ್ದರು.



ಚಿಕ್ಕೋಡಿ ತಾಲ್ಲೂಕಿನ ಸುಕ್ಷೇತ್ರ ಯಡೂರದ ವೀರಭದ್ರ ದೇವಸ್ಥಾನದ ಆವರಣದಲ್ಲಿ ನಿರ್ಮಿಸಿರುವ ಧಾರ್ಮಿಕ ಕಟ್ಟಡಗಳ ಉದ್ಘಾಟನಾ ಸಮಾರಂಭದಲ್ಲಿ ರಾಜ್ಯಸಭೆ ಸದಸ್ಯ ಡಾ. ಪ್ರಭಾಕರ ಕೋರೆ ಅವರಿಗೆ 'ದಾಸೋಹ ಶಿಖಾಮಣಿ' ಪ್ರಶಸ್ತಿಯನ್ನು ಪ್ರದಾನ ಮಾಡಿ ಕೋರೆ ದಂಪತಿಗಳನ್ನು ಕಾಶೀ ಮತ್ತು ಶ್ರೀಶೈಲ ಶ್ರೀಗಳು ಗೌರವಿಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಂಸದ ರಮೇಶ ಕತ್ತಿ, ವಿಧಾನ ಪರಿಷತ್ ಸದಸ್ಯ ಮಹಾಂತೇಶ ಕವಟಗಿಮಠ, ಮಾಜಿ ಸಚಿವ ಶಶಿಕಾಂತ ನಾಯಿಕ ಮತ್ತಿತರರು ಚಿತ್ರದಲ್ಲಿದ್ದಾರೆ.

ಇಂದು ಈ ಕ್ಷೇತ್ರದಲ್ಲಿ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಸಿದ್ಧತೀರ್ಥ ಯಾತ್ರಿ ನಿವಾಸ, ಕಾಡ ಸಿದ್ಧೇಶ್ವರ ಕಲ್ಯಾಣ ಮಂಟಪ ಮತ್ತು ಮಾತೃಶ್ರೀ ಶಾರದಾಕೋರೆ ಪ್ರಸಾದ ನಿಲಯಗಳನ್ನು ನೂತನವಾಗಿ ಕಟ್ಟಲಾಗಿದ್ದು ಅವುಗಳ ಉದ್ಘಾಟನೆಗೆ ರಾಜ್ಯದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಂದ ಉದ್ಘಾಟನೆ ಮಾಡಿಸಲಾಯಿತು. ಶ್ರೀಶೈಲ ಮತ್ತು ಕಾಶೀ ಜಗದ್ಗುರುಗಳು ಸಾನ್ನಿಧ್ಯ ವಹಿಸಿದ್ದರು. ಇದೇ ಸಂದರ್ಭದಲ್ಲಿ ಉಭಯ ಜಗದ್ಗುರುಗಳು ಪ್ರಭಾಕರ ಕೋರೆ ದಂಪತಿಗಳನ್ನು ಸನ್ಮಾನಿಸಿ ಆಶೀರ್ವದಿಸಿ 'ದಾಸೋಹ ಶಿಖಾಮಣಿ' ಎಂಬ ಪ್ರಶಸ್ತಿಯನ್ನು ನೀಡಿದರು.

20-2-2012 **ಉದಯವಾಣಿ**


ವಿದ್ಯೆಯೇ ಶ್ರೇಷ್ಠ ಸಂಪತ್ತು: ಕಾಶೀ ಶ್ರೀ

ವಾರಣಾಸಿ: ಬಳಸಿದಷ್ಟು ಬೆಳೆಯುವ, ಕಳ್ಳರು ಕದಿಯಲಾರದ ಸಂಪತ್ತು ಎಂದರೆ ವಿದ್ಯೆ. ಇದರಿಂದ ಸರ್ವತ್ರ ಪೂಜ್ಯತೆ ದೊರೆಯುವುದು. ಹಾಗಾಗಿ ವಿದ್ಯೆಯೇ ಶ್ರೇಷ್ಠ ಸಂಪತ್ತು ಎಂದು ಕಾಶೀ ಜಗದ್ಗುರು ಡಾ। ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ತಿಳಿಸಿದರು.

ಇಲ್ಲಿನ ಕಾಶೀ ಮಹಾಪೀಠದ ಜಂಗಮವಾಡಿಮಠದಲ್ಲಿ ನಡೆದ ವಿದ್ವತ್ ಸಭೆಯಲ್ಲಿ ಆಶೀರ್ವಚನ ನೀಡಿದ ಅವರು, ಎಲ್ಲ ವಿದ್ಯೆಯಲ್ಲಿ ಆತ್ಮಜ್ಞಾನವನ್ನುಮಾಡಿಕೊಡುವಅಧ್ಯಾತ್ಮ ವಿದ್ಯೆಯೇ ಶ್ರೇಷ್ಠ. ಅಧ್ಯಾತ್ಮ ವಿದ್ಯಾ ವಿದ್ಯಾನಾಂ ಎಂಬ ಗೀತೋಕ್ತಿಯಲ್ಲಿ ಅಧ್ಯಾತ್ಮ ಜ್ಞಾನವು ಸಾಕ್ಷಾತ್ ಪರಬ್ರಹ್ಮ ಸ್ವರೂಪವಾದುದು ಎಂಬುದಾಗಿ ಹೇಳಲಾಗಿದೆ ಎಂದರು.

ಈ . ಜಗತ್ತೆಲ್ಲವೂ ಶಿವಮಯವಾದುದು. ಶಿವನಿಗಿಂತಲೂ ಭಿನ್ನವಾದುದು ಬೇರೊಂದಿಲ್ಲ, ನಾನು ಸಹ ಶಿವಸ್ವರೂಪನಾಗಿದ್ದೇನೆ ಎಂಬ ಜ್ಞಾನವೇ ಉತ್ತಮ ಜ್ಞಾನವೆಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಲಾಗಿದೆ. ಕಾರಣ ಪ್ರತಿಯೊಬ್ಬರು ತಮ್ಮ ಬದುಕಿನಲ್ಲಿ ಲೌಕಿಕ ವಿದ್ಯೆಯನ್ನು ಪ್ರಾಪ್ತಿ ಮಾಡುಕೊಳ್ಳುವುದರ ಜತೆಗೆ ಅಧ್ಯಾತ್ಮ ವಿದ್ಯೆಯನ್ನು ಸಹ ಸಂಪಾದಿಸಿಕೊಳ್ಳಬೇಕೆಂದರು.

ಇಂದು ವಿವಿಧ ವಿಷಯಗಳ ವಿದ್ವಾಂಸರನ್ನು ಈ ಪೀಠದಲ್ಲಿ ಗೌರವಿಸುತ್ತಿರುವುದು ನಮಗೆ ಸಂತೋಷವನ್ನು ತಂದಿದೆ. ಅಧ್ಯಾತ್ಮ ವಿದ್ಯೆಯಲ್ಲಿ ನಿಷ್ಣಾತರಾದ ಈ ಎಲ್ಲ ವಿದ್ವಾಂಸರು ಶಿವನ ಸಾಕಾರ ಮೂರ್ತಿಗಳು.



ವಾರಾಣಸಿ: ಕಾಶೀ ಪೀಠದ ಜಂಗಮವಾಡಿಯ ಮಠಕ್ಕೆ ಭೇಟಿ ನೀಡಿದ್ದ ಯಡಿಯೂರಪ್ಪ, ಸಚಿವರಾದ ಸೋಮಣ್ಣ, ಶೋಭಾ ಕರಂದ್ಲಾಜೆ, ಸಂಸದ ಸುರೇಶ ಅಂಗಡಿ ಜತೆ ಕಾಶೀ ಹಾಗೂ ಕೋಡಿಮಠ ಶ್ರೀಗಳು.


ಶಿವನು ನಿರ್ಗುಣ, ನಿರಾಕಾರನಾಗಿದ್ದರೂ ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ, ಸೂರ್ಯ, ಚಂದ್ರ ಮತ್ತು ಆತ್ಮಜ್ಞಾನಿಯ ರೂಪದಲ್ಲಿ ಪ್ರತ್ಯಕ್ಷವಾಗಿ ತೋರುತ್ತಿರುತ್ತಾನೆ ಎಂದು ತಿಳಿಸಿದರು.

ಭೂಮ್ಯಾದಿ ಈ ಅಷ್ಟ ತನುಗಳು ಶಿವನ ಸಾಕಾರ ರೂಪಗಳೆಂದು ಶಾಸ್ತ್ರಗಳಲ್ಲಿ ಪ್ರತಿಪಾದಿಸಲಾಗಿದೆ. ಅಂತೆಯೇ ಭಾರತೀಯ ಸಂಸ್ಕೃತಿಯಲ್ಲಿ ಇವುಗಳು ಪೂಜ್ಯನೀಯಗಳೆಂದು ಹೇಳಲಾಗಿದೆ. ಪ್ರತಿಯೊಬ್ಬ ಭಾರತೀಯರು ವಿವಿಧ ಪ್ರಸಂಗಗಳಲ್ಲಿ ಇವುಗಳ ಪೂಜೆಯನ್ನು ವಿಧಿವತ್ತಾಗಿ ಮಾಡುತ್ತ ಬಂದಿದ್ದಾರೆ ಎಂದು ಜ್ಞಾನದ ಹಾಗೂ ಜ್ಞಾನಿಯ ಮಹತ್ವ ತಿಳಿಸಿಕೊಟ್ಟರು.

ಶ್ರೀ ಪೀಠದಲ್ಲಿ ಪ್ರತಿವರ್ಷ ಪ್ರದಾನ ಮಾಡುವ ರಾಷ್ಟ್ರ ಮಟ್ಟದ ಶ್ರೀ ಜಗದ್ಗುರು ವಿಶ್ವಾರಾಧ್ಯ ವಿಶ್ವ ಭಾರತೀ ಪುರಸ್ಕಾರವನ್ನು ಮಹಾರಾಷ್ಟ್ರದ ಪರಭಣಿ ಜಿಲ್ಲೆಯ ಚಾರಠಾಣ ಗ್ರಾಮದ ಶ್ರೀಮತಿ ಮಹಾನಂದಾ ಶಿವಪ್ಪ ಖಿಕೆ ಅವರಿಗೆ ಕಾಶೀ ಶ್ರೀಗಳು ಪ್ರದಾನ ಮಾಡಿದರು. ಪ್ರಶಸ್ತಿಯು 25,000 ರೂ. ನಗದು, ಶಾಲು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿತ್ತು.

ಹಾರನಹಳ್ಳಿ ಕೋಡಿಮಠದಿಂದ ಕೊಡಮಾಡುವ ಸಾಹಿತ್ಯ ಪುರಸ್ಕಾರವನ್ನು ಶ್ರೇಷ್ಠ ವಿದ್ವಾಂಸ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ ಆಗಮ ವಿಭಾಗದ ಶೀತಲಾ ಪ್ರಸಾದ ಉಪಾಧ್ಯಯ ಅವರಿಗೆ ಪ್ರದಾನ ಮಾಡಲಾಯಿತು.

ಕಾಶಿ ಹಿಂದೂ ವಿಶ್ವವಿದ್ಯಾಲಯದ ಮಹಾಮಹೋಪಾಧ್ಯಾಯ ಪಂ। ರೇವಾಪ್ರಸಾದ ದ್ವಿವೇದಿ, ಪಂ। ಸದಾಶಿವ ಶಾಸ್ತ್ರಿ ದ್ವಿವೇದಿ, ಪಂ। ಕಮಲೇಶ ಝಾ, ಪಂ। ಗುರುಚರಣ, ಕಾಶೀ ವಿದ್ಯಾಪೀಠದ ಪಂ। ಅಮರನಾಥ ಪಾಂಡೆ, ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ಪಂ। ಜಗನಾಥ ಶಾಸ್ತ್ರಿ ತೈಲಂಗ, ಪಂ। ಸುಧಾಕರ ಮಿಶ್ರಾ, ಪಂ। ಶೀತಲಾ ಪ್ರಸಾದ ಉಪಾಧ್ಯಾಯ, ಪಂ। ಗಿರೀಶ ಪಾಂಡೆ ಮತ್ತು ವಿವಿಧ ಮಹಾವಿದ್ಯಾಲಯಗಳ 200 ಹೆಚ್ಚು ವಿದ್ವಾಂಸರು ಸಭೆಯಲ್ಲಿ ಪಾಲ್ಗೊಂಡು ಸಂಸ್ಕೃತ ಮತ್ತು ಹಿಂದಿ ಭಾಷೆಯಲ್ಲಿ ವಿಚಾರ ಮಂಡಿಸಿದರು.



ವಾರಾಣಸಿ: ಕಾಶೀ ಪೀಠದ ಜಂಗಮವಾಡಿಮಠದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಕಾಶೀ ಜಗದ್ಗುರು ಡಾ। ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಸತ್ಕರಿಸಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಚಿವರಾದ ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಸಂಸದ ಸುರೇಶ ಅಂಗಡಿಯವರು ಎಲ್ಲ ವಿದ್ವಾಂಸರಿಗೆ ಮಾಲಾರ್ಪಣೆ ಮಾಡಿ ಫಲ-ತಾಂಬೂಲ ದಕ್ಷಿಣೆ ಕೊಟ್ಟು ಗೌರವಿಸಿದರು.

ಹಾರನಹಳ್ಳಿ ಕೋಡಿಮಠದ ಶ್ರೀ ಶಿವಾನಂದ ರಾಜೇಂದ್ರ ಸ್ವಾಮಿಗಳು, ವಿದ್ವತ್ ಸಂಘದ ವಿದ್ಯಾರ್ಥಿಗಳು, ಬೆಂಗಳೂರು ವಿಭೂತಿಪುರಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯರು ಇದ್ದರು.

20–2–12 : ಮಹಾಶಿವರಾತ್ರಿಯಂದು ಬೆಳಗ್ಗೆ ವಾರಣಾಸಿ ಜಂಗಮವಾಡಿ ಮಠದಲ್ಲಿ ಶ್ರೀ ಕಾಶೀ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ, ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ನಡೆದ ನಂತರ ಬೆಳಿಗ್ಗೆ 10.30ಕ್ಕೆ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಗಳಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ನೂತನವಾಗಿ ನಿರ್ಮಿಸಲಾಗಿರುವ ಭಕ್ತನಿವಾಸ ವನ್ನು ಉದ್ಘಾಟಿಸಿದರು. ಜಗದ್ಗುರುಗಳು ಅವರನ್ನು ಕಾಶಿಗೆ ಆಹ್ವಾನಿಸಿದ್ದರು. ಭಕ್ತನಿವಾಸವನ್ನು ನಿರ್ಮಿಸಲು ಜಗದ್ಗುರುಗಳಿಗೆ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕರ್ನಾಟಕ ಮುಖ್ಯಮಂತ್ರಿಗಳಾಗಿದ್ದಾಗ ಧನ ಸಹಾಯ ನೀಡಿದ್ದರು. ಇಂದು ಭಕ್ತನಿವಾಸ ಉದ್ಘಾಟನೆ ಗೊಂಡ ಕಾರಣ ಕಾಶೀ ಪೀಠಕ್ಕೆ ಬರುವ ಭಕ್ತರಿಗಾಗಿ ಸುಸಜ್ಜಿತವಾದ ಭಕ್ತನಿವಾಸ ಕಟ್ಟಿಸಿ ಏಕಕಾಲಕ್ಕೆ 2000ಜನ ಉಳಿದುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ ಎಂದು ಜಗದ್ಗುರುಗಳು ತಿಳಿಸಿದರು.



ಉತ್ತರಪ್ರದೇಶದ ವಾರಾಣಸಿಯಲ್ಲಿ ಕಾಶೀಪೀಠ ನಿರ್ಮಿಸಿರುವ ನೂತನ ಭಕ್ತಭವನವನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೋಮವಾರ ಉದ್ಘಾಟಿಸಿದರು. ಕಾಶೀ ಶ್ರೀಗಳು, ವಸತಿ ಸಚಿವ ವಿ. ಸೋಮಣ್ಣ ಮತ್ತಿತರರು ಇದ್ದರು.

ಉದಯವಾಣಿ, 21–2–2012



ಕಾಶೀ ಕ್ಷೇತ್ರದಲ್ಲಿ ವೀರಶೈವ ಪಂಚಪೀಠಗಳಲ್ಲಿ ಒಂದಾದ ಕಾಶೀ ಜ್ಞಾನಪೀಠದ ಜಂಗಮವಾಡಿ ಮಠದಲ್ಲಿ ಆಯೋಜಿಸಲಾಗಿದ್ದ ಸಂಸ್ಕೃತ ಪಂಡಿತರ ವಿದ್ವನ್‌ಮಣಿ ಪರಿಷತ್‌ನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪಾಲ್ಗೊಂಡಿದ್ದರು. ಜಗದ್ಗುರು ಚಂದ್ರಶೇಖರ ಸ್ವಾಮೀಜಿ, ಕೋಡಿಮಠದ ಸ್ವಾಮೀಜಿ, ಸಚಿವರಾದ ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಸಂಸದ ಸುರೇಶ್ ಅಂಗಡಿ ಮೊದಲಾದವರು ಉಪಸ್ಥಿತರಿದ್ದರು.

ತಂದೆ ತಾಯಂದಿರಲ್ಲಿ ದೇವರನ್ನು ಕಾಣಲು ಸಲಹೆ

ಪ್ರಜಾವಾಣಿ, 21–05–2012



ಗುಳೇದಗುಡ್ಡದಲ್ಲಿ ಶನಿವಾರ ಶೆಟ್ಟರ ಸಮಾಜದ ಕಲ್ಯಾಣ ಮಂಟಪದಲ್ಲಿ ನಿರ್ಮಿಸಿದ ವಸತಿ ನಿಲಯ ಕಟ್ಟಡ ಉದ್ಘಾಟನಾ ಸಮಾರಂಭವನ್ನು ಕಾಶೀ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಸಂಜೆವಾಣಿ, 26–6–2012



ಚಿತ್ತಾಪುರ: ತಾಲ್ಲೂಕಿನ ಲಕ್ಷ್ಮೀಪುರ ವಾಡಿಯಲ್ಲಿ ಹಮ್ಮಿಕೊಂಡಿದ್ದ ವೆಂಕಟೇಶ್ವರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಧರ್ಮಸಭೆಯನ್ನು 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಉದ್ಘಾಟಿಸಿದರು. ಮುಗಳನಾಗಾಂವ ಕಟ್ಟಿಮನಿ ಹಿರೇಮಠದ ಅಭಿನವ ಸಿದ್ಧಲಿಂಗ ಶಿವಾಚಾರ್ಯರು, ರಾವೂರ ವಿರಕ್ತ ಮಠದ ಸಿದ್ಧಲಿಂಗ ಮಹಾಸ್ವಾಮಿಗಳು, ಕೋಬಾಳದ ಮಲ್ಲಿಕಾರ್ಜುನ ತಾತನವರು, ಆಂದೋಲಾ ಕರುಣೇಶ್ವರ ಮಠದ ಸಿದ್ಧಲಿಂಗ ಮಹಾಸ್ವಾಮಿಗಳು, ಈರಮ್ಮ ಸುಭಾಷ ಪವಾರ, ಗಣಪತಿ ಪವಾರ, ಗಿಡ್ಡಪ್ಪ ಪವಾರ, ರಾಮಸ್ವಾಮಿ ಪವಾರ, ಸೂರ್ಯಕಾಂತ ಕಟ್ಟಿಮನಿ ಸೇರಿದಂತೆ ಮತ್ತಿತರರು ಇದ್ದರು.

21–5–2012 : ಗುಳೇದಗುಡ್ಡದ ಅಮರೇಶ್ವರ ಮಠದ ಲಿಂ. ಅಮರೇಶ್ವರ ಸ್ವಾಮಿಗಳವರ ಆಶೀರ್ವಾದ ಅನುಗ್ರಹದಿಂದ ಧಾರ್ಮಿಕ ಕ್ಷೇತ್ರದಲ್ಲಾಗಲಿ, ಸಾಮಾಜಿಕ ಕ್ಷೇತ್ರದಲ್ಲಾಗಲಿ ಪ್ರಗತಿ ಸಾಧಿಸುತ್ತಾ ಇಟ್ಟ ಹೆಜ್ಜೆಯನ್ನು ಹಿಂತೆಗೆಯದೆ – ಮುನ್ನಡೆಯುತ್ತಿರುವ ಕಾಶೀ ಜಗದ್ಗುರುಗಳಿಗೆ ಗುಳೇದಗುಡ್ಡದ ಕಾರ್ಯಗಳಲ್ಲಿ ಭಾಗಿಯಾಗುವುದೆಂದರೆ ಅಪಾರ ಸಂತೋಷ. ಊರಿನ ಜನತೆಗೂ ಅಷ್ಟೆ – ಜಗದ್ಗುರುಗಳೆಂದರೆ ಅಪಾರಭಕ್ತಿ, ಅಭಿಮಾನ.

ಈ ಭಾರಿ ಸ್ಥಳೀಯ ಶೆಟ್ಟರ ಸಮಾಜದ ಬಸಮ್ಮ ಮಂಗಳಗುಡ್ಡ ಕಲ್ಯಾಣ ಮಂಟಪದಲ್ಲಿ ನೂತನವಾಗಿ ನಿರ್ಮಿಸಿದ ವಸತಿ ನಿಲಯದ ಕಟ್ಟಡ ಉದ್ಘಾಟಿಸಲು ಜಗದ್ಗುರುಗಳನ್ನು ಆಹ್ವಾನಿಸಿದ್ದರು.

ಇಂದಿನ ಆಶೀರ್ವಚನದಲ್ಲಿ ಜಗದ್ಗುರುಗಳು ದೇವರ ಸ್ವರೂಪದಲ್ಲಿರುವ ತಂದೆತಾಯಿಗಳಲ್ಲಿ ಪರಮಾತ್ಮನನ್ನು ಕಾಣಬೇಕೆಂದು, ಅವರನ್ನು ಪ್ರೀತಿಯಿಂದ ಕಾಣಬೇಕೆಂದು ತಿಳಿಸುತ್ತಾ ಯುವ ಜನಾಂಗದ ಬಗೆಗೆ ಕಾಳಜಿ ಹೊಂದಿರುವ ಜಗದ್ಗುರುಗಳು – ಕೆಟ್ಟ ಅಭ್ಯಾಸಗಳಿಗೆ ಬಲಿಯಾಗದೇ ಸದೃಢ ವ್ಯಕ್ತಿಗಳಾಗಿ ಉತ್ತಮ ಜೀವನ ನಡೆಸಿರೆಂದು ಆಶೀರ್ವಚನದಲ್ಲಿ ತಿಳಿಸಿದರು.

ನವಗ್ರಹಗಳ ದರ್ಶನದಿಂದ ಸಂಕಷ್ಟಗಳು ಮಾಯ

ವಿಜಯ ಕರ್ನಾಟಕ, 28–6–2012

ಅಳಂದ ತಾಲ್ಲೂಕಿನ ಭೂಸನೂರ ಗ್ರಾಮದಲ್ಲಿ ಗ್ರಾಮಸ್ಥರೆಲ್ಲಾ ಸೇರಿ ಹನುಮಾನ ಮಂದಿರದಲ್ಲಿ ನವಗ್ರಹಗಳ ಪ್ರತಿಷ್ಠಾಪನೆಯನ್ನು ಜಗದ್ಗುರುಗಳಿಂದ ನೆರವೇರಿಸಿದರು ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಮನುಷ್ಯನಿಗೆ ಹಲವಾರು ರೀತಿಯ ತಾಪತ್ರಯಗಳು ಬರುವುದು ಸಹಜ ಇವುಗಳ ನಿವಾರಣೆಗೆ ನವಗ್ರಹ ದರ್ಶನದಿಂದ ಸಂಕಷ್ಟಗಳು ಮಾಯವಾಗುತ್ತವೆ. ಮನುಷ್ಯನ ಬದುಕಿಗೆ ಗಾಳಿ, ನೀರು, ಆಹಾರದಷ್ಟೇ ದಾನ, ಧರ್ಮ ಅವಶ್ಯ. ಸಂಸಾರದ ಜೂಜಾಟದಲ್ಲಿಯೂ ಧರ್ಮಾಭಿಮಾನವನ್ನು ಮೈಗೂಡಿಸಿಕೊಳ್ಳಬೇಕು, ಸಂಕಷ್ಟಕ್ಕೆ ಒಳಗಾದವರ ಕಣ್ಣೊರೆಸುವ ಕೆಲಸ ನಡೆಯಬೇಕು. ವೀರಶೈವ ಸಿದ್ಧಾಂತದಲ್ಲಿರುವಂತೆ ಕಾಯಕ ಯೋಗಿಗಳಾಗಿ ಅರಿತು ಆಚರಿಸಬೇಕು ಎಂದು ಉಪದೇಶ ನೀಡಿದರು.

ಗ್ರಂಥಗಳ ಅಧ್ಯಯನದಿಂದ ಸಂಶಯ ನಿವಾರಣೆ

ವಿಜಯ ಕರ್ನಾಟಕ, 4–11–2012



ಹೊಸದಿಲ್ಲಿಯಲ್ಲಿ ಸಂಶಯ ತದುಚ್ಛೇದವಾದ ಗ್ರಂಥದ ಕುರಿತು ಹಮ್ಮಿಕೊಂಡಿದ್ದ ಭಾರತೀಯ ಶಾಸ್ತ್ರ ಸಂವಾದ ಗೋಷ್ಠಿ ಉದ್ಘಾಟಿಸಿ ಕಾಶೀ ಶ್ರೀಗಳು ಮಾತನಾಡಿದರು.

4–11–2012 : ಹೊಸ ದೆಹಲಿಯ ಶಂಕರ ಶಿಕ್ಷಾಯತನ ಮತ್ತು ಕಾಶೀ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ ವೇದಾಂತ ವಿಭಾಗಗಳ ಸಂಯುಕ್ತಾಶ್ರಯದಲ್ಲಿ ಸಂಶಯ ತದುಚ್ಛೇದವಾದ ಗ್ರಂಥದ ಕುರಿತು ಏರ್ಪಡಿಸಿದ್ದ ಭಾರತೀಯ ಶಾಸ್ತ್ರ ಸಂವಾದ ಗೋಷ್ಠಿಯನ್ನು ಕಾಶೀ ಜಗದ್ಗುರುಗಳು ಉದ್ಘಾಟಿಸಿ ದೇವರು ಇದ್ದಾನೆ ಎಂದರೆ ಕೆಲವರು ದೇವರಿಲ್ಲ ಎಂದೂ, ಈ ಜಗತ್ತಿನ ಮಿಥ್ಯ–ಸತ್ಯ ಎಂಬ ವಿಷಯ ಕುರಿತು ಪರಸ್ಪರ ವಿರೋಧಿ ವಿಚಾರಗಳನ್ನು ಕೇಳಿದಾಗ, ಕೇಳುಗರ ಮನಸ್ಸಿನಲ್ಲಿ ಸಂಶಯ ಮೂಡುವುದು ಸಹಜ. ಸಂಶಯ ತುಂಬಿದ ಮನುಷ್ಯನಿಗೆ ಸುಖ ಸಮಾಧಾನಗಳು ದೊರೆಯುವುದಿಲ್ಲ ದಾರ್ಶನಿಕ ಗ್ರಂಥಗಳ ಅಧ್ಯಯನದಿಂದ ಮನಸ್ಸಿನ ಸಂಶಯಗಳು ನಿವಾರಣೆಗೊಳ್ಳುತ್ತವೆ ಎಂದು ತಿಳಿಸಿದರು. ಪಾರ್ವತಿಯ ಮನಸ್ಸಿನ ಸಂಶಯ ದೂರಮಾಡಲು ಶಿವನು ಶಿವಾಗಮಗಳನ್ನು ಉಪದೇಶಿಸಿದನು, ಅಗಸ್ತ್ಯನ ಸಂಶಯ ದೂರ ಮಾಡಲು ರೇಣುಕರು ಮಾಡಿದ ಉಪದೇಶವೇ ಶ್ರೀ ಸಿದ್ಧಾಂತ ಶಿಖಾಮಣಿ, ಅರ್ಜುನನ ಸಂಶಯ ದೂರೀಕರಿಸಲು ಶ್ರೀಕೃಷ್ಣನು ಮಾಡಿದ ಉಪದೇಶವೇ ಭಗವದ್ಗೀತೆ, ಜನಕ ಮಹಾರಾಜನ ಸಂಶಯ ದೂರಮಾಡಲು ಅಷ್ಟಾವಕ್ರ ಮಹರ್ಷಿ ಮಾಡಿದ ಉಪದೇಶವೇ ಅಷ್ಟಾವಕ್ರ ಗೀತೆ. ಹೀಗೆ ದೇಶದಲ್ಲಿ ಅನೇಕ ದಾರ್ಶನಿಕ ಗ್ರಂಥಗಳು ರಚನೆಗೊಂಡಿವೆ. ಇವೆಲ್ಲವೂ ಸಾರ್ವಕಾಲಿಕವೂ ಸಾರ್ವಜನಿಕವೂ ಆದ್ದರಿಂದ ಎಲ್ಲರ ಸಂಶಯಗಳನ್ನು ನಿವಾರಿಸುತ್ತವೆ ಎಂದು ಹೇಳಿದರು.

* * * * *

ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ

ವಿಜಯ ಕರ್ನಾಟಕ, 16–11–2012



ಕೋಹಳ್ಳಿ ಗ್ರಾಮದ ಅಲ್ಲಮಪ್ರಭು ದೇವಸ್ಥಾನದ ಮಹಾದ್ವಾರ ಹಾಗೂ ಪ್ರತಿಷ್ಠಾಪನೆಗೊಳ್ಳಲಿರುವ ರೇಣುಕಾಚಾರ್ಯರ ಮೂರ್ತಿ. (ಒಳಚಿತ್ರದಲ್ಲಿ ನಾರಾಯಣ ದೇವಋಷಿ)

ಅಲ್ಲಮಪ್ರಭು ದೇವಸ್ಥಾನದಲ್ಲಿ ಸ್ಥಾಪಿಸಲಾದ ಮುಸ್ಲಿಂ ಪಂಜಾಗಳು

16–11–2012 :

ಅಥಣಿ ತಾಲ್ಲೂಕಿನಲ್ಲಿನ ಕೋಹಳ್ಳಿ ಗ್ರಾಮದ ಅಲ್ಲಮಪ್ರಭು ಮಂದಿರ ನಿಜವಾಗಿ ಸರ್ವಧರ್ಮಗಳ ಏಕತೆಯ ಮಂದಿರ ಎನಿಸಿದೆ. ಈ ಮಂದಿರದಲ್ಲಿ ಹನುಮ–ಗಣಪತಿ, ಹುಸೇನ–ಹಸನ, ಈಶ್ವರಲಿಂಗ ಮುಂತಾದ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವ ಏಕೈಕ ದೇವಾಲಯವೆನಿಸಿದೆ. ನಾರಾಯಣ ದೇವಋಷಿ (ಸೂರ್ಯವಂಶಿ) ಅವರ ತೋಟದಲ್ಲಿರುವ ಭವ್ಯಕಟ್ಟಡ ಹೊಂದಿರುವ ಅಲ್ಲಮಪ್ರಭು ದೇವಾಲಯವಿದೆ. ಅಲ್ಲಮಪ್ರಭುವಿನ ದೇವರಮೂರ್ತಿಯೊಂದಿಗೆ ಈ ಎಲ್ಲಾ ಮೂರ್ತಿಗಳನ್ನು ಅಲ್ಲಿ ಪ್ರತಿಷ್ಠಾಪಿಸಿ–ಹಿಂದೂ ಮುಸ್ಲಿಮರು ಭಾವೈಕ್ಯದಿಂದಿರುವ ಗ್ರಾಮವೆಂದೇ ಹೆಸರಾಗಿದೆ ಈ ಹಳ್ಳಿ.



ಕೋಹಳ್ಳಿಯ ಶ್ರೀ ಅಲ್ಲಮಪ್ರಭು ಮಂದಿರ ಮಹಾದ್ವಾರದ ಮೇಲ್ಭಾಗದಲ್ಲಿ ಶ್ರೀ ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ ಅಂಗವಾಗಿ ಜರುಗಿದ ಅಡ್ಡಪಲ್ಲಕ್ಕಿ, ಅದ್ದೂರಿ ಕುಂಭಮೇಳದಲ್ಲಿ ಭಾಗಿಯಾದ ಜನಸಾಗರ

ದೈವಭಕ್ತಿ, ಗುರುಬಲ ಸಾಧನೆಗೆ ಸಹಕಾರಿ



20–11–2012 : ಬೆಳ್ಳುಬ್ಬಿ ಗ್ರಾಮದಲ್ಲಿ ಮಳೇಸ್ವಾಮಿ ದೇವಸ್ಥಾನದ ಉದ್ಘಾಟನೆ ಸಮಾರಂಭವನ್ನು ಉಜ್ಜಯಿನಿ ಜಗದ್ಗುರುಗಳು ನೆರವೇರಿಸಿದರು. ಕಾಶೀ ಜಗದ್ಗುರು, ಶ್ರೀಶೈಲ ಜಗದ್ಗುರು, ಕಲಾದಗಿ ಚಂದ್ರಶೇಖರ ಶ್ರೀ ಮತ್ತಿತರರು ಇದ್ದರು.

ಚಿಕ್ಕಸಂಗಮ ಕ್ಷೇತ್ರಕ್ಕೆ 'ಧರ್ಮ ಸಂಗಮ' ನಾಮಕರಣ



26–11–2012 ಬೀಳಗಿ: ಸೋಮವಾರ ಜರುಗಿದ ಚಿಕ್ಕಸಂಗಮ ದೇವಸ್ಥಾನದ ಲೋಕಾರ್ಪಣೆ ಸಮಾರಂಭದ ಸಾನ್ನಿಧ್ಯ ವಹಿಸಿ ಕಾಶೀ ಜಗದ್ಗುರುಗಳು ಮಾತನಾಡಿದರು.

ಇಂದು ಈ ಮಂದಿರದ ಮೇಲ್ಭಾಗದಲ್ಲಿ 4 ಲಕ್ಷರೂ ವೆಚ್ಚದಲ್ಲಿ ನಿರ್ಮಾಣಮಾಡಿರುವ ರೇಣುಕಾಚಾರ್ಯ ಲಿಂಗೋದ್ಭವ ಮೂರ್ತಿ ಪ್ರತಿಷ್ಠಾಪನೆಗಾಗಿ ಕಾಶೀ ಜಗದ್ಗುರುಗಳನ್ನು ಹಾಗೂ ಉಜ್ಜಯಿನಿ ಜಗದ್ಗುರುಗಳನ್ನು ಅಡ್ಡಪಲ್ಲಕ್ಕಿ ಕರೆಯಿಸಿ, ಉತ್ಸವ ನೆರವೇರಿಸಿ ಅವರುಗಳು ಪವಿತ್ರ ಹಸ್ತಗಳಿಂದ ಪ್ರತಿಷ್ಠಾಪನೆ ನೆರವೇರಿಸಿದರು. ಹಾಗಾಗಿ ಗುರುಪರಂಪರೆ ವಿರಕ್ತಪರಂಪರೆಯ ಭಾವೈಕ್ಯ ಸಂಕೇತವಾಗಿ ಈ ದೇವಾಲಯ ಇನ್ನು ಒಂದು ಹೆಜ್ಜೆ ಮುಂದಿರುವುದನ್ನು ಕಂಡು ಕಾಶೀ ಜಗದ್ಗುರುಗಳು ಬಹಳ ಸಂತೋಷಪಟ್ಟರು. ಈ ಉಭಯ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ 2000 ಸುಮಂಗಲಿಯರು ಕುಂಭಮೇಳದಲ್ಲಿ ಭಾಗಿಯಾಗಿ ಮಾಡಿದ 'ಓಂ ನಮಃ ಶಿವಾಯ' ಎನ್ನುವ ಮಂತ್ರಘೋಷಣೆ ಮುಗಿಲುಮುಟ್ಟಿತ್ತು ಎನ್ನುತ್ತಾರೆ ಜಗದ್ಗುರುಗಳು. ಹೋದೆಡೆಯಲ್ಲೆಲ್ಲಾ ಸಮನ್ವಯದ ಬೀಜವನ್ನು ಬಿತ್ತುತ್ತಾ ಸಾಗಿರುವ ಜಗದ್ಗುರುಗಳಿಗೆ ಈ ಗ್ರಾಮದ ಜನತೆ ನಾರಾಯಣ ದೇವಋಷಿಗಳ ನೇತೃತ್ವದಲ್ಲಿ ಅದ್ಭುತ ರೀತಿಯ ಸಮನ್ವಯ ಸಾಧಿಸಿರುವುದನ್ನು ಜಗದ್ಗುರುಗಳು ಶ್ಲಾಘಿಸಿದರು.

20–11–2012 : ವಿಜಾಪುರ ಜಿಲ್ಲೆಯ ಬೆಳ್ಳುಬ್ಬಿ ಗ್ರಾಮಸ್ಥರೆಲ್ಲಾ ಸೇರಿ ಮಳೇಸ್ವಾಮಿ ನೂತನ ದೇವಾಲಯ ಉದ್ಘಾಟನೆ ಹಾಗೂ ಮಳೇಸ್ವಾಮಿ ಮೂರ್ತಿಪ್ರತಿಷ್ಠಾಪನೆಗಾಗಿ ಉಜ್ಜಯಿನಿ, ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳನ್ನು ಆಮಂತ್ರಿಸಿ ಈ ಸಮಾರಂಭವನ್ನು ಅದ್ದೂರಿಯಾಗಿ ನೆರವೇರಿಸಿದರು.

ಕಾಶೀ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಮಾತನಾಡುತ್ತ ಮನುಷ್ಯನಿಗೆ ಗುರುಸ್ಥಾನ ದೊಡ್ಡದು. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂದರೆ ಒಳ್ಳೆಯ ಗುರುವಿನ ಶಿಷ್ಯನಾಗಬೇಕು ಹಾಗೂ ದೈವಭಕ್ತನಾಗಬೇಕು. ನಮ್ಮ–ನಿಮ್ಮೆಲ್ಲರ ಭಾಗ್ಯ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಹಳೆಯ ದೇವಾಲಯ ಮುಳುಗಿದರೂ ಅದೇ ಮಾದರಿಯ ದೇವಸ್ಥಾನವನ್ನು ಪುನರ್‌ವಸತಿ ಕೇಂದ್ರದಲ್ಲಿ 12 ವರ್ಷಗಳ ಸತತ ಪರಿಶ್ರಮದಿಂದ ನಿರ್ಮಿಸಿರುವ ಭಕ್ತರ ಕಾರ್ಯವನ್ನು ಪ್ರಶಂಸಿಸಿದರು. ಇಲ್ಲಿಯ ಜನ ಗುರುಭಕ್ತಿ ಸಂಪನ್ನರು. ಈ ಜನರ ಭಕ್ತಿ ಕಂಡು ಮಳೆಸ್ವಾಮಿಯವರು ತಮ್ಮ ಕೃಪಾಶೀರ್ವಾದವನ್ನು ಈ ಭಾಗದ ಜನತೆಗೆ ಸದಾ ನೀಡುತ್ತಾ ಬಂದಿದ್ದಾರೆ ಈ ಭಾಗ ಇನ್ನು ಹೆಚ್ಚು ಹೆಚ್ಚು ಅಭಿವೃದ್ಧಿ ಹೊಂದಲಿ ಅವರೆಲ್ಲರಿಗೂ ಪಂಚಾಚಾರ್ಯರ ಆಶೀರ್ವಾದವು ಸದಾ ಇರುತ್ತದೆ– ಎಂದು ಆಶೀರ್ವಚಿಸಿದರು.

ಕಾಶೀ ಜಗದ್ಗುರುಗಳು ಯಾವುದೇ ಸಮಾರಂಭಕ್ಕೆ ದಯಮಾಡಿಸಿದರೂ ಆ ಜಾಗೆಯ ಬಗ್ಗೆ, ಆ ಕಾರ್ಯದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡು ಆಶೀರ್ವಚನ ಮಾಡುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ದೇವಸ್ಥಾನದ ಉದ್ಘಾಟನೆ

26–11–2012



ಚಿಕ್ಕಸಂಗಮದ ದೇವಸ್ಥಾನ ಲೋಕಾರ್ಪಣೆ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿ ಜಗದೀಶ ಶೆಟ್ಟರ ಉದ್ಘಾಟಿಸಿದರು. ಉಜ್ಜಯನಿಯ ಜಗದ್ಗುರು ಪ್ರಸನ್ನ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ಶ್ರೀಶೈಲದ ಜಗದ್ಗುರು ಡಾ. ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ಸಚಿವರಾದ ಮುರಗೇಶ ನಿರಾಣಿ, ಬಸವರಾಜ ಬೊಮ್ಮಾಯಿ, ಗೋವಿಂದ ಕಾರಜೋಳ, ಎಸ್.ಕೆ. ಬೆಳ್ಳುಬ್ಬಿ, ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಎಸ್.ಆರ್.ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಜಿ.ಎಸ್. ನ್ಯಾಮಗೌಡ, ನಾರಾಯಣಸಾ ಭಾಂಡಗೆ, ಆಡಳಿತ ಪಕ್ಷದ ಮುಖ್ಯ ಸಚೇತಕ ಸಿದ್ದು ಸವದಿ ಉಪಸ್ಥಿತರಿದ್ದರು.

ಬೀಳಗಿ ತಾಲ್ಲೂಕಿನ ಐತಿಹಾಸಿಕ ಶ್ರದ್ಧಾಕೇಂದ್ರವಾಗಿರುವ ಚಿಕ್ಕ ಸಂಗಮದಲ್ಲಿ ನೂತನವಾಗಿ ನಿರ್ಮಿಸಿರುವ ಸಂಗಮೇಶ್ವರ ದೇವಾಲಯ ಲೋಕಾರ್ಪಣೆ ಮಾಡುವುದರ ಜೊತೆ ಜೊತೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಮಾನ್ಯ ಶ್ರೀ ಜಗದೀಶ ಶೆಟ್ಟರ ಮಾಡಿದರು ಸಮಾರಂಭದಲ್ಲಿ ಉಜ್ಜೈನಿ, ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳು ಸಾನ್ನಿಧ್ಯ ವಹಿಸಿದ್ದರು.

ಕಾಶೀ ಜಗದ್ಗುರುಗಳು ಈ ಸ್ಥಳವೇಕೆ ಪವಿತ್ರವಾಗಿದೆ ಎಂಬುದನ್ನು ನೆರೆದಿದ್ದ ಅಪಾರ ಜನಸ್ತೋಮಕ್ಕೆ ತಿಳಿಸಿದರು. ವಿಶ್ವಮಾನ್ಯ ರೀತಿಯಲ್ಲಿ ಚಿಕ್ಕ ಸಂಗಮ ದೇವಸ್ಥಾನ ಪುನರ್ ನಿರ್ಮಿಸಿದ್ದು ಐತಿಹಾಸಿಕ ಕಾರ್ಯ. ಈ ಪುಣ್ಯಸ್ಥಳದಲ್ಲಿ ಹಿಂದೆ ಇಲ್ಲಿ ಗುರುಕುಲ ನಡೆಯಿಸಿ ಜಾತಿ, ಮತ, ಭೇದವೆಣಿಸದೆ ವೇದಾಗಮಗಳ ಅಧ್ಯಯನಾಸಕ್ತರು ಯಾರೇ ಬಂದರೂ ತೆರೆದ ಬಾಗಿಲಂತಿತ್ತು. ಇದೇ ಗುರುಕುಲ ನಡೆಸಿ ಬಸವಣ್ಣಾದಿ ಪ್ರಮುಖ ವಟುಗಳಿಗೆ ವಿದ್ಯಾದಾನ ಮಾಡಿದ ಜಾತವೇದಮುನಿ ಶಿವಾಚಾರ್ಯರ ಹೆಸರಿನಲ್ಲಿ ಅಧ್ಯಯನ ಕೇಂದ್ರ ಸ್ಥಾಪಿಸಿ ಇಲ್ಲಿನ ವಿದ್ಯಾರ್ಥಿಗಳಿಗೆ ಶರಣತತ್ತ್ವದ ಮಹತ್ವಗಳನ್ನು ಅಭ್ಯಾಸ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕಾಶೀ ಜಗದ್ಗುರುಗಳು ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರಿಗೆ ಸಲಹೆ ನೀಡಿದರು. ಉಜ್ಜೈನಿಯ ಜಗದ್ಗುರುಗಳು ಚಿಕ್ಕಸಂಗಮದ ಸಂಗಮೇಶ್ವರ ದೇವಸ್ಥಾನವನ್ನು ಧರ್ಮಸಂಗಮವೆಂದು ಘೋಷಿಸಿದರು.



21–1–2013 ಕುಳಗೇರಿ ಕ್ರಾಸ್: ಶ್ರೀ ಕಾಶೀ ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಬ್ರಹ್ಮಾನಂದ ಪರಮಹಂಸರ ನೂತನ ಗಡ್ಡಿ ತೇರಿನ ರಥೋತ್ಸವಕ್ಕೆ ಚಾಲನೆ ನೀಡಿದರು.

21–1–2013

ಗೋವನಕೊಪ್ಪದಲ್ಲಿ ರಥೋತ್ಸವ

ಕುಳಗೇರಿ ಕ್ರಾಸ್ : ಸುಕ್ಷೇತ್ರ ಗೋವನಕೊಪ್ಪ ಗ್ರಾಮದಲ್ಲಿ ಶ್ರೀ ಬ್ರಹ್ಮಾನಂದ ಪರಮಹಂಸರ ಜಾತ್ರೆ ನಿಮಿತ್ತ ನಡೆದ ಗಡ್ಡಿ ತೇರಿನ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ಗುಲಾಲಿನಲ್ಲಿ ಮಿಂದೆದ್ದ ಭಕ್ತರು ಗ್ರಾಮದ ತುಂಬೆಲ್ಲ ಗುಲಾಲು ಎರಚಿ ಮುಂದೆ ಸಾಗುತ್ತ ನೀರಿನಿಂದ ಮಡೆ ಮಾಡುವ ಯುವಕರು, ಪೂರ್ಣಕುಂಭ ಹೊತ್ತ ಮಹಿಳೆಯರು ಆರತಿ ಹಿಡಿದು ಸ್ವಾಗತ ಕೋರುತ್ತ ನೂತನ ಗಡ್ಡಿ ತೇರಿನ ಕಳಸವನ್ನು ಶ್ರೀಮಠಕ್ಕೆ ಸ್ವಾಗತಿಸಿ ಸಂಭ್ರಮಿಸಿದರು. ಪ್ರತಿ ಮನೆ–ಮನೆಯಲ್ಲಿ ಹರ್ಷದ ಹೊನಲು. ಮಠದ ಆವರಣದಲ್ಲಿ ಭೋಜನದ ಸವಿರುಚಿ ಸವಿದು ರಥೋತ್ಸವದಲ್ಲಿ ಪಾಲ್ಗೊಂಡ ಬಂಧುಗಳು, ಸ್ನೇಹಿತರು, ಹಳ್ಳಿಗಳಿಂದ ಆಗಮಿಸಿದ್ದ ಭಕ್ತರು ಜಾತ್ರೆಗೆ ಮೆರಗು ತಂದರು.

ಜಾತ್ರೆಯ ಮೊದಲೇ ಆರು ದಿನಗಳ ಕಾಲ ಶ್ರೀ ಶಾಂತಲಿಂಗ ಸ್ವಾಮೀಜಿ ನೇತೃತ್ವದಲ್ಲಿ ನೂತನ ರಥಕ್ಕೆ ಶಾಸ್ತ್ರೋಕ್ತವಾಗಿ ಹೋಮ–ಹವನಗಳಿಂದ ಪೂಜೆ, ಬ್ರಹ್ಮಾನಂದರ ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಧರ್ಮಸಭೆ, ಪ್ರವಚನ, ಗರುಡಪಟ ಕಟ್ಟುವುದು, ಪಲ್ಲಕ್ಕಿ ಉತ್ಸವದಲ್ಲಿ ಹರಕೆ ತೀರಿಸುವ ಕಾರ್ಯಕ್ರಮಗಳು ವಿಧಿವತ್ತಾಗಿ ನಡೆದವು. ಶ್ರೀ ಕಾಶೀ ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಧರ್ಮಸಭೆ ಸಾನ್ನಿಧ್ಯವನ್ನು ವಹಿಸಿದ್ದರು. ಅವರಾದಿಯ ಮೃತ್ಯುಂಜಯ ಸ್ವಾಮೀಜಿ, ಕೊಣ್ಣೂರಿನ ಡಾ। ಶಿವಕುಮಾರ ಶಿವಾಚಾರ್ಯರು, ಗುಳೇದಗುಡ್ಡದ ನೀಲಕಂಠ ಶಿವಾಚಾರ್ಯರು, ಭೈರನಹಟ್ಟಿ ಶಾಂತಲಿಂಗ ಸ್ವಾಮೀಜಿ, ಹೊಳೆ ಆಲೂರಿನ ಯಚ್ಚರೇಶ್ವರ ಸ್ವಾಮೀಜಿ, ಬೆಳಗಾವಿ ರುದ್ರಾಕ್ಷಿಮಠದ ಶಿವಯೋಗಿ ದೇವರು, ಬಾಗಲಕೋಟೆ ಸಂಸದ ಪಿ.ಸಿ. ಗದ್ದಿಗೌಡರ ವೇದಿಕೆಯಲ್ಲಿದ್ದರು. ಸಿ.ಗಿ. ಹಿರೇಮಠ ಕಾರ್ಯಕ್ರಮ ನಡೆಸಿಕೊಟ್ಟರು.

16–2–2013 : ಗುಳೇದಗುಡ್ಡದ ಮರಡಿಮಠದ 10ನೇ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳ ಅಮೃತ ಮಹೋತ್ಸವ ಹಾಗೂ 11ನೇ ನೂತನ ಶ್ರೀಗಳ ಪಟ್ಟಾಧಿಕಾರ ಕಾರ್ಯಕ್ರಮದ ಉದ್ಘಾಟನೆ ಮಾಡಿದ ಕಾಶೀ ಜಗದ್ಗುರುಗಳು – ಪ್ರತಿಯೊಬ್ಬರಿಗೂ ಇಂದು ಗುರುವಿನ ಮಾರ್ಗದರ್ಶನ, ಸಂಸ್ಕೃತಿ ಮತ್ತು ಸಂಸ್ಕಾರದ ಅಗತ್ಯತೆ ಇದೆ. ಕಾಡಸಿದ್ಧೇಶ್ವರ ಶ್ರೀಗಳವರು ಧಾರ್ಮಿಕ ಕ್ಷೇತ್ರವಲ್ಲದೆ ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದಕ್ಕೆ ಇಲ್ಲಿ ಸೇರಿರುವ ಭಕ್ತ ಸಮೂಹವೇ ಸಾಕ್ಷಿ ಎಂದರು.

18–2–2013 **ಶಿವಲಿಂಗ ಹಸ್ತ ಸ್ಪರ್ಶ** ಉದಯವಾಣಿ



ಬಾಗಲಕೋಟೆ : ನೂತನ ಶಿವಾಲಯದಲ್ಲಿ ಪ್ರತಿಷ್ಠಾಪಿಸಿದ ಶಿವಲಿಂಗಕ್ಕೆ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಹಾಗೂ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಹಸ್ತಸ್ಪರ್ಶ ಮಾಡಿದರು.



Kashi Jagadguru Chandrashekara Shivacharya and Sri Gangadhar Swamiji offering pooja at the valedictory of Maharudrayaga organised at Vishwaradhya Siddasamsthan at Abbe Tumkur in Yadgir taluk.

14–4–2013



ಅಬ್ಬೆತುಮಕೂರಿನ ಸಿದ್ಧ ಸಂಸ್ಥಾನದಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿರುವ ಮಹಾರುದ್ರಯಾಗದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಆಶೀರ್ವಚನ ನೀಡಿದರು.

ಜಗವನ್ನು ಬೆಳಗುವ ಸೂರ್ಯ, ಶೀತಲ ಕಿರಣವನ್ನು ನೀಡುವ ಚಂದ್ರ, ಮಳೆಯನ್ನು ಸುರಿಸುವ ಮೇಘಗಳು, ಪರೋಪಕಾರದ ಪ್ರತೀಕಗಳಾಗಿವೆ. ಮನುಷ್ಯರು ಸಹ ಸೂರ್ಯ, ಚಂದ್ರ, ಮೇಘಗಳಂತೆ ಪರೋಪಕಾರಿಗಳಾಗಬೇಕು. ಕಾಶೀ ಜಗದ್ಗುರು

ಯಾದಗಿರಿ ತಾ. ಅಬ್ಬೆತುಮಕೂರಿನ ಸಿದ್ಧಸಂಸ್ಥಾನ ಮಠದಲ್ಲಿ ಡಾ. ಗಂಗಾಧರ ಸ್ವಾಮೀಜಿ ನೇತೃತ್ವದಲ್ಲಿ ನಡೆದ 770 ಅಮರ ಗಣಂಗಳ ಮಂಟಪ ಪೂಜೆ, ಮಹಾರುದ್ರಯಾಗ ಮೂರು ದಿನಗಳ ಕಾಲ ನೆರವೇರಿಸಿದರು. ಮೂರನೆ ದಿನ ಕಾಶೀ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಭಕ್ತಿಭಾವದೊಂದಿಗೆ ಮಹಾರುದ್ರಯಾಗ ಸಂಪನ್ನಗೊಂಡಿತು. ಮಹಾರುದ್ರಯಾಗದ ಋತ್ವಿಜರು ಗಂಗಾಪೂಜೆ ಅಖಂಡ ಧರ್ಮದೀಪ ಪ್ರಜ್ವಲನ, ಗೌರೀಗಣಪತಿ ಪೂಜೆ, ರಕ್ಷಾಕಂಕಣ ಧಾರಣೆ, ಸಪ್ತದೇವತಾಪೂಜೆ, ಏಕಾದಶರುದ್ರ ಕಲಶಪೂಜೆ, ಮಹಾರುದ್ರಾಭಿಷೇಕ ನೆರವೇರಿಸಿ ಮಹಾಮಂಗಳಾರತಿ ಮಾಡಲಾಯಿತು.

27–4–2013



ಮಹಾರಾಷ್ಟ್ರದಲ್ಲಿ ಜಗದ್ಗುರುಗಳು ಕಳಸಾರೋಹಣಕ್ಕಾಗಿ ದೇವಸ್ಥಾನದ ತುಟ್ಟ ತುದಿಯಲ್ಲಿ ನಿಂತಿದ್ದಾರೆ.

ಹಿಂದಿನ ಕಾಲದಲ್ಲಿ ಮಹಾರಾಜರು ರಾಜ್ಯದಲ್ಲಿ ಸುಭಿಕ್ಷೆ ನೆಲಸಲಿ ಎಂದು ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ಈಗ ಅಬ್ಬೆತುಮಕೂರಿನ ಪೀಠಾಧಿಪತಿ ಡಾ. ಗಂಗಾಧರ ಶ್ರೀಗಳು ಮನುಕುಲದ ಉದ್ಧಾರಕ್ಕಾಗಿ, ಲೋಕ ಕಲ್ಯಾಣಕ್ಕಾಗಿ ಮೂರು ದಿನಗಳ ಮಹಾರುದ್ರಯಾಗ ಕೈಗೊಂಡಿರುವುದು ಸ್ತುತ್ಯರ್ಹ ಎಂದು ಹೇಳಿದರಲ್ಲದೆ ವಿಶ್ವಾರಾಧ್ಯರು ಪಂಡಿತರಲ್ಲೇ ಘನಪಂಡಿತರಾಗಿದ್ದರು ಎಂದು ಹೇಳಿದರು. ಯಾಗಗಳು ವ್ಯರ್ಥವೆಂದು ಭಾವಿಸಬಾರದು. ಯಾಗಗಳು ಕೈಗೊಳ್ಳುವುದರಿಂದ ಪರಿಸರದಲ್ಲಿ ಪಾವಿತ್ರತೆ, ಮನಸ್ಸಿನ ಕಲ್ಮಷಗಳು ದೂರವಾಗುತ್ತವೆ. ಅಜ್ಞಾನ ಅಳಿಸಿ ಜ್ಞಾನದ ಬೆಳಕು ಮೂಡಿಸಲು ಇದರಿಂದ ಸಾಧ್ಯವಾಗುತ್ತದೆ. ರುದ್ರಯಾಗ ರೋಗ, ರುಜಿನ, ದುಃಖ ದುಮ್ಮಾನ ದೂರಮಾಡುತ್ತದೆ. ಒಂದೇ ವೇದಿಕೆಯಲ್ಲಿ ಅಸಂಖ್ಯಾತ ಜನರು ಸೇರುವುದರಿಂದ ಸೌಹಾರ್ದತೆ ಮೂಡಲು ಸಾಧ್ಯವಾಗುತ್ತದೆ. ಭೇದಭಾವ ಮರೆತು ಐಕ್ಯಭಾವ ಹೊಂದಬೇಕು. ಕಾಯಕದಿಂದ ಗಳಿಸಿದ ಹಣ ಧರ್ಮಕಾರ್ಯಕ್ಕೆ ದಾಸೋಹ ಮಾಡಿ ಪುಣ್ಯಾತ್ಮರಾಗಬೇಕೆಂಬ ಉಪದೇಶ ನೀಡಿದರು. ಒಂದು ಕಾರ್ಯದಲ್ಲಿ ಏನೆಲ್ಲಾ ಅಡಗಿದೆ ಎಂಬುದನ್ನು ಬಿಡಿಬಿಡಿಯಾಗಿ ಬಿಡಿಸಿ ಹೇಳುವ ಕಲೆ ಕಾಶೀ ಜಗದ್ಗುರುಗಳಿಗೆ ಮಾತ್ರ ಸಾಧ್ಯ.

'ಭಾವೈಕ್ಯತೆಯ ಸೇತುವೆ ಹುಕ್ಕೇರಿ ಹಿರೇಮಠ'



8-5-2013 : ಹುಕ್ಕೇರಿ ಗುರುಶಾಂತೇಶ್ವರ ನೂತನ ಸಂಸ್ಥಾನ ಹಿರೇಮಠದ ನೂತನ ಕಟ್ಟಡ ಲೋಕಾರ್ಪಣೆಯ ಪೂರ್ವಭಾವಿಯಾಗಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರನ್ನು ಮೂರ್ತಿಗಳ ಉತ್ಸವದೊಂದಿಗೆ ಸ್ವಾಗತಿಸಲಾಯಿತು.


8-5-2013 : ಅನ್ನಪೂರ್ಣೇಶ್ವರಿ, ವಿಘ್ನೇಶ್ವರ ಹಾಗೂ ನಂದಿಮೂರ್ತಿ ಗಳನ್ನು ಪೂರ್ಣಕುಂಭಗಳೊಂದಿಗೆ ವಿವಿಧ ವಾದ್ಯ ವೈಭವದಿಂದ ಮೆರವಣಿಗೆಯಲ್ಲಿ ಹುಕ್ಕೇರಿಯ ಶ್ರೀ ಗುರು ಶಾಂತೇಶ್ವರ ಸಂಸ್ಥಾನ ಹಿರೇಮಠದ ನೂತನ ಕಟ್ಟಡಕ್ಕೆ ತರಲಾಯಿತು. ಮೆರವಣಿಗೆಯಲ್ಲಿ ಕಾಶೀ ಜಗದ್ಗುರುಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮದ ಸಾನ್ನಿಧ್ಯವಹಿಸಿದ ಜಗದ್ಗುರುಗಳು ಹುಕ್ಕೇರಿ ಹಿರೇಮಠ ಗುರು-ವಿರಕ್ತರು, ಅದ್ವೈತಿಗಳು ಒಂದೆಡೆ ಕೂಡಿ ಸಾಮರಸ್ಯದ ಸಂದೇಶ ಸಾರುವ ಸಮನ್ವಯ ಕೇಂದ್ರವಾಗಿದೆ ಎಂದು ಸಂತೋಷದಿಂದ ತಿಳಿಸಿದರು.

13-5-2013 : ಕಾಶಿ ಜಗದ್ಗುರುಗಳು ಯಾರಲ್ಲಿಯೂ ವಿರೋದ ಭಾವನೆ ವ್ಯಕ್ತಪಡಿಸದೇ ಭಾವೈಕ್ಯ ನೆಲೆಯಲ್ಲಿ ವಿಶ್ವಕ್ಕೆ ಸಮನ್ವಯ ಸಂದೇಶ ಸಾರಿದ ಹಿರಿಮೆ ವೀರಶೈವ ಧರ್ಮಕ್ಕಿದೆ ಎಂದು ಹೇಳಿದರು. ಮರುಘಾಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದು ಕಾಶೀ ಜಗದ್ಗುರುಗಳಿಗೆ ಗುರು ವಿರಕ್ತರ ಸಮನ್ವಯದ ಕಾಲ ದೂರವಿಲ್ಲ ಎಂಬ ಭಾವ ತಲೆದೋರಿತು.

ಮಂಗಲ ಭವನ ಉದ್ಘಾಟನೆ



13-5-2013 : ಧಾರವಾಡದ ಶುಕ್ರವಾರಪೇಟೆಯ ಶ್ರೀ ನಂದಿಕೋಲ ಬಸವೇಶ್ವರ ದೇವಸ್ಥಾನದ ಮಂಗಲ ಭವನವನ್ನು ಸೋಮವಾರ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು.




ಸೊಲ್ಲಾಪುರದ ಕುಮಠಾ ನಗರದ ಸ್ವಾಗತ ನಗರ ಪರಿಸರದ ರಾಮಗೊಂಡಪ್ಪ ಕೇಂಗನಾಳಕರ ಶಾಲೆಯ ಆವರಣದಲ್ಲಿ ಗುರುವಾರ ಮಾಜಿ ಉಪಮಹಾಪೌರ ದಿ. ಸಂಗಪ್ಪ ಕೇಂಗನಾಳಕರರ ಅರ್ಧಮೂರ್ತಿಯನ್ನು ಕಾಶೀಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಅನಾವರಣ ಮಾಡಿದರು. ಗೌಡಗಾವದ ಡಾ.ಜಯಸಿದ್ಧೇಶ್ವರ ಶಿವಾಚಾರ್ಯರು, ವಿಶ್ವನಾಥ ಚಾಕೋತೆ, ಸಾತಲಿಂಗಪ್ಪ ಮೇತ್ರೆ ಇದ್ದರು.

9-2-2014 : ಬ್ಯಾಡಗಿ ತಾಲೂಕಿನ ಕೊಲ್ಲಾಪುರ ಗ್ರಾಮದಲ್ಲಿ ಬ್ರಾಹ್ಮೀಮುಹೂರ್ತದಲ್ಲಿ ಕಾಶೀ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಈಶ್ವರ ದೇವಸ್ಥಾನದಲ್ಲಿ ಗಾನಯೋಗಿ ಲಿಂ. ಡಾ. ಪಂ. ಪುಟ್ಟರಾಜರ ಅಮೃತ ಶಿಲಾಮೂರ್ತಿ, ಶ್ರೀ ವಿಘ್ನೇಶ್ವರ, ಶ್ರೀ ಶಾರದಾದೇವಿ ಶಿಲಾಮೂರ್ತಿಗಳ ಪ್ರಾಣಪ್ರತಿಷ್ಠಾಪನೆಯು ನೆರವೇರಿತು. ಬೆಳಿಗ್ಗೆ 10.30ಕ್ಕೆ ಮಂದಿರದ ಕಳಸಪ್ರತಿಷ್ಠಾಪನೆಯನ್ನು ಕಾಶೀ ಜಗದ್ಗುರುಗಳು ನೆರವೇರಿಸಿದರು.

16-4-2014 : ಉಸ್ಮಾನಾಬಾದ್ ಜಿಲ್ಲೆಯ ಲೋಹಾರಾ ತಾಲ್ಲೂಕಿನ ದಸ್ತಾಪುರ ಗ್ರಾಮದಲ್ಲಿ ಶ್ರೀ ಸಾಯಿ ವಿಠಲ ಮಂದಿರದಲ್ಲಿ ಶ್ರೀ ಸಾಯಿ ಶ್ರೀ ವಿಠಲ-ರುಕ್ಮಿಣಿಮೂರ್ತಿ ಪ್ರಾಣಪ್ರತಿಷ್ಠಾಪನಾ ಮತ್ತು ಕಲಶಾರೋಹಣ ಕಾರ್ಯಕ್ರಮವನ್ನು ಕಾಶೀ ಜಗದ್ಗುರುಗಳ ಶುಭಹಸ್ತದಿಂದ ನೆರವೇರಿತು.






सप्रेम नमस्कार!

मराठवाडा, म्हणजे साधुसंताच्या पदस्पर्शाने पावन झालेली पुण्यभूमी. वारकरी सांप्रदायाची मुहूर्तमेढ रोवणारे संतशिरोमणी एकनाथ, जनाबाई, गोरोबा, संत श्री. जगन्मित्र नागा यांची जन्मभूमी व तपोभूमी, मराठीचे आद्यकवि दासोपंत मराठवाड्यातलेच, शककर्ते शकांची राजधानी. मराठवाड्यातीलच, ज्यास आपण पैठण नावाने ओळखतो, मोगल काळात मराठवाड्यातील दौलताबादला देशाची राजधानी होण्याचा बहुमान देखील मिळालेला आहे.

महाराष्ट्राचे आराध्यदैवत, छत्रपति शिवरायांचे पित्रवंश यादव घराणे देखील मराठवाड्यातलेच, बारा ज्योतिर्लिंगापैकी तीन ज्योतिर्लिंग या भूमित वसलेली आहेत. छत्रपति शिवाजी महाराजांना भवानी तलवारीच्या रुपाने आशिर्वाद देणाऱ्या आई तुळजाभवानीचं शक्तिपीठ श्री. क्षेत्र तुळजापूर मराठवाड्यातच आहे. भक्तीपंथांच्या चळवळीचे माहेरघर असणाऱ्या भागातच मुंबई – हैद्राबाद राष्ट्रीय महामार्गावर वसलेलं एक छोटसं खेडं आहे. ज्याचं नाव आहे **दस्तापूर.**

दस्तापूर पासून १०० कि.मी. परिघामध्येच आई भवानी मातेचं तुळजापूर, श्री. स्वामी समर्थांचे अक्कलकोट, श्री. दत्त महाराजांचे गाणगापूर, विठ्ठल रखुमाईचे पंढरपूर, परळीचा परळी वैजनाथ ही तिर्थक्षेत्र आहेत. अस मोक्याचं स्थान लाभलेल्या दस्तापूर येथे भक्तांना विठ्ठल रखुमाई व साईबाबांच्या दर्शनाची सोय व्हावी, यासाठी एक भव्य मंदिर उभारण्याच्या दृष्टीने दत्त सांप्रदायाची पताका खांद्यावर घेवून अहोरात्र जनसेवेचं, व्रत घेतलेल्या उस्मानाबाद जिल्ह्यातील रुईभर येथील श्री. दत्त मंदिर संस्थानाचे परमपूज्य श्रीमंत सदगुरु दत्त महाराज रुईकर उर्फ आप्पा बाबा महाराज ह्यांच्या शुभहस्ते अक्षय तृतीयेच्या शुभमुहूर्तावर दिनांक १६ मे २०१० रोजी मंदिराचा शिलान्यास करण्यात आला आहे.

मला परमेश्वर स्थानी असणारी माझी आई श्रीमती वत्सलाबाई यांच्या प्रेरणेतुन व आशिर्वादाने दस्तापूर येथे श्री साई विठ्ठल मंदिराची स्थापना करण्याची कल्पनाशक्ती आम्हाला सुचली.

मंदिरासाठी मंदिराचे ट्रस्टी श्री. प्रतिक दिलीप माने यांनी स्वत:ची दोन एकर जमीन दान रुपात दिलेली आहे.

संकल्प आणि सिध्दी यांच्या मध्ये परमेश्वरी इच्छा उभी असते असे म्हणतात. संकल्प केलेला होताच आणि परमेश्वर इच्छेने तो पूर्णही झालेला आहे.


श्रींची प्राणप्रतिष्ठापणा व कलशारोहण सोहळ्यास आपली उपस्थिती प्रार्थनीय आहे.

विनीत

श्री. दिलीप माने
अध्यक्ष
श्री साई विठ्ठल मंदिर ट्रस्ट
मो :९८१९३३८४९४ / ७७३८०२५५५५

1–5–2014 : ಉಜ್ಜಯಿನಿ, ಶ್ರೀಶೈಲ ಹಾಗೂ ಕಾಶೀ ಜಗದ್ಗುರುತ್ರಯರಿಂದ ಮೊಳಕಾಲ್ಮೂರು ತಾಲ್ಲೂಕಿನ ಚಿಕ್ಕೇಬನಹಳ್ಳಿ ಗ್ರಾಮದಲ್ಲಿರುವ ಶ್ರೀ ಬಸವೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ನೂತನ ಗಣಪತಿ, ನವಗ್ರಹ ವಿಗ್ರಹಗಳ ಪ್ರತಿಷ್ಠಾಪನೆ, ದೇವಾಲಯದ ನೂತನ ವಿಮಾನಗೋಪುರ ಕಳಸಪ್ರತಿಷ್ಠಾಪನೆ, ಬಸವೇಶ್ವರಮೂರ್ತಿಗೆ ರಜತಕವಚಧಾರಣೆ, ಮಹಾದ್ವಾರ ಮತ್ತು ಗರುಡಗಂಬ ಉದ್ಘಾಟನೆಗಾಗಿ ಆಮಂತ್ರಣ ನೀಡಿದ್ದ ಕಾರಣ ಜಗದ್ಗುರುತ್ರಯರು ವಿವಿಧ ರೀತಿಯ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ ಅಮೃತ ಹಸ್ತದಿಂದ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಬಹು ವಿಜೃಂಭಣೆಯಿಂದ ನೆರವೇರಿಸಿದರು.

2–5–2014


॥ ಶ್ರೀ ಕಲ್ಮೇಶ್ವರ ಪ್ರಸನ್ನ ॥

ಶ್ರೀ ಕಲ್ಮೇಶ್ವರ ಟ್ರಸ್ಟ್ ಕಮಿಟಿ, ಕೆಲಗೇರಿ ಧಾರವಾಡ

ಶ್ರೀ ಕಲ್ಮೇಶ್ವರ ದೇವಸ್ಥಾನ — ಶ್ರೀ ಹಾದಿ ಬಸವಣ್ಣ ದೇವಸ್ಥಾನ

ಶ್ರೀ ಕ್ಷೇತ್ರ ಕೆಲಗೇರಿಯಲ್ಲಿ ನೂತನವಾಗಿ ನಿರ್ಮಿಸಿದ
ಶ್ರೀ ಕಲ್ಮೇಶ್ವರ ದೇವಸ್ಥಾನ ಹಾಗೂ ಶ್ರೀ ಹಾದಿ ಬಸವಣ್ಣ ದೇವಸ್ಥಾನದ
ಉದ್ಘಾಟನೆ ಮತ್ತು ಮೂರ್ತಿ ಪ್ರತಿಷ್ಠಾಪನೆ ಸಮಾರಂಭ


ದಿವ್ಯ ಸಾನಿಧ್ಯ ಹಾಗೂ ಉದ್ಘಾಟನೆ

ಶ್ರೀಶ್ರೀಶ್ರೀ 1008 ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಜಗದ್ಗುರು
ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಶ್ರೀಕ್ಷೇತ್ರ ವಾರಣಾಸಿ

ದಿನಾಂಕ–2–5–2014, ಶುಕ್ರವಾರ, ಬಸವ ಜಯಂತಿಯಂದು

ಸ್ಥಳ : ಸಮುದಾಯ ಭವನ, ಕೆಲಗೇರಿ — ಬೆಳಿಗ್ಗೆ– 11:00 ಘಂ.

1–5–2014


ಕಾರ್ಯಕ್ರಮ ವಿವರ

01–05–2014 ರಿಂದ ದಿನಾಂಕ: 5–5–2014 ರಿಂದ 01–05–2014 ರಂದು ಬೆಳಿಗ್ಗೆ 9–00 ಘಂಟಗೆ ತೇರಿನ ಕಳಸಾರೋಹಣ ಮತ್ತು ಶ್ರೀ ಕಲ್ಮೇಶ್ವರ ಹಾಗೂ ಹಾದಿಬಸವಣ್ಣ ದೇವಸ್ಥಾನದ ಕಳಸಾರೋಹಣ ನಂತರ ಸಂಜೆ 4–00 ಗಂಟೆಗೆ ಉಚ್ಚಾಯ ಕಾರ್ಯಕ್ರಮ.

02–05–2014 ಬೆಳಿಗ್ಗೆ 6–00 ಗಂಟೆಗೆ ಶ್ರೀ ಕಲ್ಮೇಶ್ವರ ದೇವಸ್ಥಾನ ಮೂರ್ತಿ ಪ್ರತಿಷ್ಠಾಪನೆ ನಂತರ ರುದ್ರಾಭಿಷೇಕ ಪುರವಂತರಿಂದ ಅಗ್ನಿ ಪೂಜೆ.

11–30 ಗಣ್ಯರಿಗೆ ಸನ್ಮಾನ ಕಾರ್ಯಕ್ರಮ

ಮಧ್ಯಾಹ್ನ 12–30 ಕ್ಕೆ ಸಾಮೂಹಿಕ ವಿವಾಹ ನಡೆಯುವುದು. ಸಂಜೆ 4–30 ಕ್ಕೆ ಮಹಾರಥೋತ್ಸವ ಜರುಗುವುದು.

ರಾತ್ರಿ 10–30 ಕ್ಕೆ ಸಂಗ್ಯಾ–ಬಾಳ್ಯಾ ಎಂಬ ಬಯಲಾಟ ಜರುಗುವುದು.

03–05–2014 ರಂದು ದೇವಸ್ಥಾನದಲ್ಲಿ ಭಜನಾ ಹಾಗೂ ಡೊಳ್ಳಿನ ಕಾರ್ಯಕ್ರಮ ಜರುಗುವುದು.

04–05–2014 "ಹುಬ್ಬಳ್ಳಿ ಹುಲಿ" ಸಾಮಾಜಿಕ ನಾಟಕ ರಾತ್ರಿ 10–30 ಕ್ಕೆ ಜರುಗುತ್ತದೆ.


05–05–2014 ಸಂಜೆ 6–00 ಗಂಟೆಗೆ ಕಡುಬಿನ ಕಾಳಗ ನಡೆಯುವುದು.

ಈ ಕಾರ್ಯಕ್ರಮಕ್ಕೆ ಎಲ್ಲ ಭಕ್ತಾಧಿಗಳು ತನು–ಮನ–ಧನದಿಂದ ಕಾರ್ಯಕ್ರಮಕ್ಕೆ ಆಗಮಿಸಿ ಶ್ರೀ ಕಲ್ಮೇಶ್ವರ ಹಾಗೂ ಹಾದಿಬಸವಣ್ಣ ದೇವರುಗಳ ಕೃಪೆಗೆ

ಸದಸ್ಯರು, ಮಹಿಳಾ ಮಂಡಳ ಸದಸ್ಯರು.

2–5–2014 : ಧಾರವಾಡದಿಂದ 2 ಕಿ.ಮೀ. ದೂರದಲ್ಲಿರುವ ಕೆಲಗೇರಿ ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ ದೇವಸ್ಥಾನದ ಟ್ರಸ್ಟಿಯವರು ನೂತನವಾಗಿ ನಿರ್ಮಿಸಿರುವ ಶ್ರೀ ಕಲ್ಮೇಶ್ವರ ದೇವಸ್ಥಾನ ಹಾಗೂ ಹಾದಿ ಬಸವಣ್ಣ ದೇವಸ್ಥಾನಗಳ ಉದ್ಘಾಟನೆ ಮತ್ತು ಮೂರ್ತಿಪ್ರತಿಷ್ಠಾಪನೆ ಕಾರ್ಯಕ್ಕೆ ಕಾಶೀ ಜಗದ್ಗುರುಗಳನ್ನು ಆಮಂತ್ರಿಸಿ ಅವರ ಅಮೃತಹಸ್ತದಿಂದ ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಿದರು.

8–5–2014


सोमवार दि. ५/५/१४ स. १० वा. श्री.श्री.श्री.१००८ जगद्गुरु डॉ. चन्नसिध्दाराम पंडिताराध्य शिवाचार्य महास्वामीजी, श्रीशैलपीठ व श्री.श्री.श्री.१००८ जगद्गुरु डॉ. चंद्रशेखर शिवाचार्य महास्वामीजी, काशीपीठ अमृतहस्ते श्री शिवयोगी सिध्देश्वर लिंग प्राणप्रतिष्ठापना, अन्नपूर्णेश्वरीदेवी मुर्ती प्राणतिष्ठापना, कळसारोहण, आशीर्वचन व महाप्रसाद.


कळसारोहण कार्यक्रमाचे दीपप्रज्ज्वलन करताना श्रीशैल जगद्गुरू चन्नसिध्दाराम पंडिताराध्य शिवाचार्य काशीचे जगद्गुरु डॉ. चंद्रशेखर शिवाचार्य, राजशेखर शिवाचार्य, आमदार सिद्रामप्पा पाटील व अन्य.

ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯ ದಕ್ಷಿಣ ಸೊಲ್ಲಾಪುರ ತಾಲೂಕಿನಲ್ಲಿರುವ ಶ್ರೀಕ್ಷೇತ್ರ ವಡಗಾವ್‌ನಲ್ಲಿ ಶ್ರೀ ಶಿವಯೋಗಿ ಸಿದ್ಧೇಶ್ವರಲಿಂಗಕ್ಕೆ, ಅನ್ನಪೂರ್ಣೇಶ್ವರಿದೇವಿ ಮೂರ್ತಿಗಳಿಗೆ ಪ್ರಾಣಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯವನ್ನು ತಮ್ಮ ಅಮೃತ ಹಸ್ತಗಳಿಂದ ನೆರವೇರಿಸಲು ಕಾಶೀ ಜಗದ್ಗುರುಗಳನ್ನು ಶ್ರೀಶೈಲ ಜಗದ್ಗುರುಗಳನ್ನು ಆಮಂತ್ರಿಸಿದ್ದರು. ಕಾರ್ಯಕ್ರಮ ನೆರವೇರಿದ ಮೇಲೆ ಕಾಶೀ ಜಗದ್ಗುರುಗಳ ಆಶೀರ್ವಚನವಿದ್ದಿತು.

14–05–2014 : ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಅಂಬಿಕಾನಗರದ ಶ್ರೀಜಗದ್ಗುರು ಪಂಚಾಚಾರ್ಯರ ಮಂದಿರ, ವಿಶ್ವಧರ್ಮ ಸೇವಾಸಂಸ್ಥೆಯವರು ಏರ್ಪಡಿಸಿರುವ ಪಂಚಲಿಂಗೋದ್ಭವ ಮೂರ್ತಿಗಳ ಪ್ರತಿಷ್ಠಾಪನೆ, ಶ್ರೀ ಗುರುಕುಲಧಾಮ ನೂತನ ಕಟ್ಟಡ ಉದ್ಘಾಟನೆ ಕಾರ್ಯಗಳಲ್ಲಿ ಉಜ್ಜಯಿನಿ, ಶ್ರೀಶೈಲ ಹಾಗೂ ಕಾಶೀ ಜಗದ್ಗುರುತ್ರಯರು ತಮ್ಮ ಪವಿತ್ರ ಹಸ್ತಗಳಿಂದ ಎಲ್ಲಾ ಕಾರ್ಯಕ್ರಮಗಳನ್ನು ಸುಗಮವಾಗಿ ನೆರವೇರಿಸಿಕೊಟ್ಟರು.



ಕಲಾದಗಿಯಲ್ಲಿ ನಡೆದ ಜನ್ಮಶತಮಾನೋತ್ಸವ, ಮಹಾದ್ವಾರ ಉದ್ಘಾಟನೆ ಶ್ರೀ ಗುರುಲಿಂಗೇಶ್ವರ ವಿದ್ಯಾಸಂಸ್ಥೆಯ ಸುವರ್ಣ ಮಹೋತ್ಸವಕ್ಕೆ ಶ್ರೀ ಕಾಶೀ, ಶ್ರೀ ಉಜ್ಜಯಿನಿ, ಶ್ರೀ ಶ್ರೀಶೈಲ ಜಗದ್ಗುರುತ್ರಯರು ಆಗಮಿಸಿ ಉದ್ಘಾಟನಾ ಕಾರ್ಯವನ್ನು ನೆರವೇರಿಸಿದರು.

ಅನ್ನಪೂರ್ಣೇಶ್ವರಿ ವಿವಿಧೋದ್ದೇಶಗಳ ಸಹಕಾರಿ ಸಂಘ ಉದ್ಘಾಟನೆ ಎಲ್ಲ ರಂಗಗಳಲ್ಲೂ ಮಹಿಳೆಯರು ಮುಂದೆ ಬರಲಿ

ಎಲ್ಲ ವಿದ್ಯೆಗಳಲ್ಲಿ ಅಧ್ಯಾತ್ಮ ವಿದ್ಯೆಯೇ ಶ್ರೇಷ್ಠ: ಕಾಶೀ ಚಂದ್ರಶೇಖರ ಶ್ರೀ

25–6–2014

ವಿಜಯ ಕರ್ನಾಟಕ, 25–6–2014



ವಿದ್ಯೆಯನ್ನು ಎಲ್ಲಿಯವರೆಗೆ ರಕ್ಷಣೆ ಮಾಡುತ್ತೀರೋ ಅಲ್ಲಿಯವರೆಗೆ ಅದು ನಿಮ್ಮನ್ನು ರಕ್ಷಿಸುತ್ತದೆ. ಅದೇ ರೀತಿ ಎಲ್ಲಿಯವರೆಗೆ ಇನ್ನೊಬ್ಬರಿಗೆ ಸಹಾಯವಾಡುವ ಮನೋಭಾವ ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಇಂಥ ಸಹಕಾರಿ ಸಂಘಗಳು ಹುಟ್ಟುವುದಿಲ್ಲ.

–ಚಂದ್ರಶೇಖರ ಶಿವಾಚಾರ್ಯರು

ಮಹಾಲಿಂಗಪುರದ ಬನಶಂಕರಿದೇವಿ ಸಾಂಸ್ಕೃತಿಕ ಭವನದಲ್ಲಿ ನಡೆದ ಅನ್ನಪೂರ್ಣೇಶ್ವರಿ ಮಹಿಳಾ ನೇಕಾರರ ವಿದ್ಯುತ್‌ಚಾಲಿತ ಮಗ್ಗಗಳ ಹಾಗೂ ವಿವಿಧೋದ್ದೇಶಗಳ ಸಹಕಾರಿ ಸಂಘದ ಉದ್ಘಾಟನೆಯನ್ನು ಕಾಶೀ ಜಗದ್ಗುರು ಚಂದ್ರಶೇಖರ ಶಿವಾಚಾರ್ಯರು ನೆರವೇರಿಸಿದರು



मनशुध्दीसाठी नामजप आवश्यक: डॉ. चंद्रशेखर शिवाचार्य



बाळे येथील श्रीकृष्णाश्रमात सद्गुरू श्री अण्णा महाराज पवार यांच्या मूर्तीची प्राणप्रतिष्ठा काशीपीठाचे जगद्गुरू डॉ. चंद्रशेखर शिवाचार्य महास्वामी यांच्या हस्ते करण्यात आली. त्याप्रसंगी सुशीलामाता पवार उपस्थित होत्या. (छाया- अप्पा)

प्रतिनिधी

सोलापूर, दि. २३- मनशुध्दीसाठी नामजप आवश्यक असून प्रत्येकांनी कार्यमग्न काळातही नामजपाची तपश्चर्या करावी. नामजप केले तर जीवन सार्थक होते. सद्गुरू अण्णा महाराज पवार यांनी पन्नास वर्षापेक्षा जास्त काळ नामजपाचे महात्म्य वाढविले म्हणूनच त्यांचे कार्य अलौकिक ठरले असल्याचे प्रतिपादन काशीपीठाचे जगद्गुरू डॉ. चंद्रशेखर शिवाचार्य महास्वामी यांनी केले.

श्री सद्गुरू अण्णा महाराज सेवा मंडळाच्यावतीने पुणे रस्त्यावरील बाळे येथील श्रीकृष्णाश्रमात सोमवारी श्री सद्गुरू अण्णा महाराज पवार यांच्या मूर्तीची प्राणप्रतिष्ठा डॉ. चंद्रशेखर महास्वामीजींच्या हस्ते करण्यात आली. त्यावेळी ते बोलत होते. यावेळी व्यासपीठावर सुशीलामाता पवार, मुंबईच्या सीकेपी बँकेचे अध्यक्ष शाम देशमुख, संत साहित्याचे गाढे अभ्यासक दा. का. थावरे, बेळगावचे काकासाहेब आंबेवाडीकर, वेदमूर्ती बसवराजशास्त्री हिरेमठ, उपस्थित होते.

संत महात्म्यांचा सहवास मिळणे महत्वाचा असून त्यामुळे दुर्लभ गोष्टीही सुलभ होतात. थोर संत अण्णा महाराज पवार हे व्यक्तिविकासाचा मार्ग दाखविणारे संत होते. त्यांचा सहवास ज्यांना ज्यांना मिळाला त्यांचे जीवन सफल झाले आहे. अण्णा महाराज सदैव नामस्मरणात मग्न असायचे. ते आत्मरुपाने शाश्वत, निरंतर आहेत. अण्णा महाराजांचा कृष्णाश्रम हे भक्तांना ऊर्जा देणारे केंद्र आहे. भक्तांनी अण्णा महाराजांची साधना साध्य करून घ्यावी, असेही ते म्हणाले. या कार्यक्रमात योगीराज श्री दत्तात्रय प्रभूंच्या मूर्तीचीही प्राणप्रतिष्ठापना करण्यात आली. तसेच दा. का. थावरे रचित श्री सद्गुरू अण्णा महाराज पवार यांच्या स्तवन स्तोत्रावलीच्या पुस्तकाचे प्रकाशनही डॉ. चंद्रशेखर शिवाचार्य महास्वामी यांच्या हस्ते करण्यात आले. मूर्तीकार सिध्दप्पा पत्थार, वास्तूरचनाकार मोनीका सावंत व प्रशांत सावंत यांचा यावेळी महास्वामींजींच्या हस्ते सत्कार करण्यात आला. प्रारंभी प्रास्ताविक व स्वागत मुंबईचे मोहनभाई अजगावकर यांनी केले. आरती लोहार हिने म्हटलेल्या ईशस्तवनाने कार्यक्रमास सुरुवात झाली. या कार्यक्रमास महाराष्ट्र प्रदेश महिला काँग्रेसच्या अध्यक्षा कमल व्यवहारे, वालचंद अभियांत्रिकी महाविद्यालयाचे प्राचार्य डॉ. शशिकांत हलकुडे, श्री सिध्देश्वर देवस्थानचे पंच गं. नी. कुमठेकर, महाराष्ट्र नवनिर्माण सेनेचे सरचिटणीस संजय चित्रे, डॉ. नारायणदास चंडक, माजी न्यायाधीश शेटे, डॉ. वासंती मुनोत, डॉ. डी.ई. मिस्त्री, दिलीप कुडाळकर, जगदीश राजे, नगरसेवक उमेश मामड्याल, भारतरत्न इंदिरा गांधी कॉलेजचे रवी गायकवाड, लछमणदास हर्दवानी, तात्या देशपांडे, सोलापूर चेंबर ऑफ कॉमर्सचे आनंदराम टहेलयानी आदी उपस्थित होते. नागेश, पुरुषोत्तम व दीपक पवार बंधू, प्रकाश नरोटे आदींनी सोहळ्याचे आयोजन नेटकेपणाने केले होते.

विजेच्या लपंडावामुळे शेतकरी हैराण

संचार वृत्त सेवा

अक्कलकोट, दि. २३ - अनियमित व कमी दाबाने होणाऱ्या वीज पुरवठ्यामुळे अक्कलकोट तालुक्यातील उन्हाळी पिके धोक्यात आल्याने शेतकरी हैराण झाले आहेत. याबरोबरच ग्रामीण भागातील खराब रस्त्यांची समस्याही भेडसावत आहे.

सध्या तालुक्यातील वीजपुरवठा आणि रस्त्यांची समस्या भीषण बनली आहे. भारनियमन वगळताही मोठ्या प्रमाणात वीजपुरवठा खंडित होत असल्याने उन्हाळी पिके धोक्यात आली आहेत. विजेअभावी पाणी देता येत नसल्याने पिके करपण्याचा धोका निर्माण झाला आहे. ऐन उन्हाळ्यात विजेचा प्रश्न गंभीर बनला आहे. यासंदर्भात वीज कंपनीच्या अधिकाऱ्यांकडे वारंवार तक्रारी करूनही त्याची दखल घेतली जात नसल्याचे शेतकऱ्यांचे म्हणणे आहे. शेतकऱ्यांनी थकबाकी भरूनही त्यांना सुरळीत वीजपुरवठा होताना दिसत नाही. तसेच सिंगल फेजींगची कामे अतिशय मंद गतीने सुरू आहेत. तालुक्यातील अनेक ठिकाणचे ट्रान्स्फॉर्मर नादुरुस्त असून अनेक ठिकाणी विजेचा ज्यादा भार असल्याने ते नादुरुस्त होण्याचे प्रमाण वाढले आहे.

संचार स्पेशल

हीच का स्वच्छ, सुंदर शहराची संकल्पना

रवींद्र केसकर

उस्मानाबाद, दि. २३ -कचऱ्यांचे ढीग, गटारांची दुर्गंधी, ठिकठिकाणी फुटलेली जलवाहिनी आणि रस्त्यांवर जागोजागी खड्डे हे चित्र आहे एका 'स्वच्छ आणि सुंदर शहराचे(!).' शहरातील नागरिकांना मूलभूत सुविधा, शहराची स्वच्छता आणि इतर सर्व समस्या सोडवून सहा महिन्यात स्वच्छ आणि सुंदर करण्याची वल्गना करणाऱ्या उस्मानाबाद नगरपालिकेतील सत्ताधाऱ्यांच्या दृष्टीने 'स्वच्छ आणि सुंदर' शहराची संकल्पना हीच आहे काय, असा प्रश्न नागरिकांना पडू लागला आहे.

उस्मानाबाद नगरपालिका तशी नेहमीच या ना त्या कारणाने वादग्रस्त ठरलेली आहे. उजनीचे पाणी उस्मानाबादला आणून दररोज पाणीपुरवठा करू, अशी वल्गना करीत राष्ट्रवादी काँग्रेसने सत्ता मिळविली. एवढेच नव्हे तर शहरातील आरक्षित जागेवरील व्यापारी संकुल नाट्यगृह, स्वच्छता, पावसाळ्यापूर्वी भोगावती नदीची स्वच्छता, नियमित घंटागाड्या यासारखी आश्वासने देऊन सत्तेत आल्यानंतर मात्र याचा विसर पडला आहे. खुद्द सत्ताधारी गटाच्या वॉर्डांमध्येच मोठ्या प्रमाणावर तुंबलेल्या गटारी, कचऱ्याचे ढीग आणि त्यावर फिरणारी मोकाट जनावरे असे चित्र दररोज पाहावयास मिळते. मूलभूत सुविधा तरी मिळतील, या आशेने ज्यांना निवडून दिले, तेच आता ठेकेदारी मिळविण्यात मग्न आहेत. परिणामी अस्वच्छतेचे प्रमाण दिवसेंदिवस शहरात वाढत आहे. शहरातील अंतर्गत रस्त्यांचीदेखील मोठी दुरवस्था आहे. एक वर्षातच खड्डे पडावेत, अशा दर्जाचे काम करण्याचा विक्रम अपवादात्मकच म्हणावा लागेल.

शहरातील जनता बँकेसमोरील जागेत बांधण्यात आलेल्या व्यापारी संकुलातील गाळ्यांचे बांधकाम देखील निकृष्ट दर्जाचे झालेले आहे. उचकटलेले शटर, उखडलेल्या फरशा आणि तडे अशा अवस्थेतील या गाळ्यांमध्ये व्यापार सुरू करण्यास देखील व्यापारी अनुत्सुक दिसत आहेत.

एवढेच नव्हे तर दीड वर्षापूर्वी सुरू केलेली उजनी धरणातून शहराला पाणीपुरवठ्याची योजनादेखील रखडलेल्या अवस्थेत आहे. त्यामुळे दररोज पाणी मिळण्याचे आश्वासनही अधांतरीच आहे. नगर पालिकेच्यावतीने यापूर्वी जनता दरबार भरवून नागरिकांच्या अडचणी जाणून घेऊन त्या सोडविण्याचे काम वर्षभर केले गेले. त्यानंतर हा दरबार देखील बारगळला. आता पालिकेत मुजोर अधिकारी आणि बेफिकिर पदाधिकारी अशी परिस्थिती झाल्याने एका कामासाठी किमान आठ-दहा वेळेस चकरा मारण्याशिवाय गत्यंतर राहिलेले नाही. पालिकेच्या कारभारात सुधारणा न झाल्यामुळे नागरिकांमधून तीव्र संताप व्यक्त केला जात आहे. त्यामुळे दाद तरी कोणाकडे मागायची, हा प्रश्न देखील सतावत आहे.

ಇತರ ರಾಜ್ಯಗಳಲ್ಲಿ ಕಾಶೀ ಜಗದ್ಗುರು
ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

ಮಧ್ಯಪ್ರದೇಶ – 1994

ಮಧ್ಯಪ್ರದೇಶದ ಪಾಂಡುರ್ಣಾ ಮತ್ತು ಸೌಂಸರಗಳಲ್ಲಿ ಶ್ರೀ ಕಾಶೀ ಜಗದ್ಗುರುಗಳ ಧರ್ಮ ಜಾಗೃತಿ ಸಮಾರಂಭ

ವೀರಶೈವಧರ್ಮ ಭಾರತದ ಎಲ್ಲಾ ರಾಜ್ಯಗಳಲ್ಲಿ ವ್ಯಾಪಿಸಿದೆ. ಕೆಲವು ರಾಜ್ಯಗಳಲ್ಲಿ ವೀರಶೈವರು ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಕೆಲವು ರಾಜ್ಯಗಳಲ್ಲಿ ಕಡಿಮೆ ಇರಬಹುದು ಆದರೂ ದೇಶದೆಲ್ಲೆಡೆ ವೀರಶೈವ ಜನಾಂಗದವರು ಹರಡಿದ್ದಾರೆ.



ಮಧ್ಯ ಪ್ರದೇಶದಲ್ಲಿ ಛೀದವಾಡು ಜಿಲ್ಲೆಯ ಪಾಂಡುರ್ಣಾ ನಗರದಲ್ಲಿ ಅತ್ಯಂತ ಪ್ರಾಚೀನ ಪ್ರಸಿದ್ಧವಾದ ವೀರಶೈವ ಮಠವಿರುವುದು ಹೆಮ್ಮೆಯ ವಿಷಯವಾಗಿದೆ. ಈ ಮಠಕ್ಕೆ ಕೇವಲ ವೀರಶೈವರಲ್ಲದೆ ಬೇರೆ ಜನಾಂಗದವರೂ ಅತ್ಯಂತ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ.

1994ರಲ್ಲಿ ಕಾಶೀ ಜಗದ್ಗುರುಗಳು ಈ ಗ್ರಾಮಕ್ಕೆ ದಯಮಾಡಿಸಿದಾಗ ಈ ಮಠದಲ್ಲಿ ಮಠಾಧಿಪತಿ ಇಲ್ಲದ್ದನ್ನು ಕಂಡು, ಆ ಮಠಕ್ಕೆ ಬಸವನ ಬಾಗೇವಾಡಿ ತಾ. ಮುತ್ತಗಿ ಗ್ರಾಮದ ಶ್ರೀ ಪಂಡಿತಾರಾಧ್ಯ ಎಂಬ ವಟುವನ್ನು ಈ ಮಠಕ್ಕೆ ಪಟ್ಟಾಧಿಕಾರಿಯನ್ನಾಗಿ ಮಾಡಿ ಅವರಿಗೆ ಷ॥ ಬ್ರ॥ ವೀರರುದ್ರಮುನಿ ಶಿವಾಚಾರ್ಯ ಎಂದು ನೂತನ ನಾಮಕರಣ ಮಾಡಿ ಅನಾಥವಾದ ಮಠವನ್ನು ಸನಾಥಗೊಳಿಸಿದ್ದರು. ಷ॥ ಬ್ರ॥ ವೀರರುದ್ರಮುನಿ ಶಿವಾಚಾರ್ಯರು ಎಲ್ಲಾ ಸಮಾಜದ ಜೊತೆಗೆ ಮಧುರ ಸಂಬಂಧವನ್ನು ಹೊಂದಿದ್ದಾರೆ.

10–7–1997ರಲ್ಲಿ ಪಾಂಡುರ್ಣಾದಲ್ಲಿ ಅಲ್ಲಿನ ಎಲ್ಲಾ ಸಮಾಜ ಬಾಂಧವರೊಡಗೂಡಿ ಶ್ರೀ ಕಾಶೀ ಜಗದ್ಗುರುಗಳನ್ನು ಆಹ್ವಾನಿಸಿ ಬಹು ದೊಡ್ಡ ಪ್ರಮಾಣದ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು. ಈ ಸಭೆಯಲ್ಲಿ ಪೂಜ್ಯ ಜಗದ್ಗುರುಗಳವರು ವೀರಶೈವಧರ್ಮದಲ್ಲಿ ಹೇಳಿರುವ



ಪಾಂಡುರ್ಣನಗರದಲ್ಲಿ ಶ್ರೀ ಶೈಲ ಕಾಶೀ ಜಗದ್ಗುರುಗಳು ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥದ ಪಲ್ಲಕ್ಕಿ ಉತ್ಸವದಲ್ಲಿ ಪಾದಯಾತ್ರೆ ಕೈಗೊಂಡರು.



ಮಧ್ಯಪ್ರದೇಶ ಪಾಂಡುರ್ಣ ನಗರದಲ್ಲಿ ಪಾರಾಯಣ ಗ್ರಂಥ ಹಾಗೂ ಸಿಡಿ ಬಿಡುಗಡೆ ಮಾಡಿದ ಜಗದ್ಗುರುದ್ವಯರು.


ಸರ್ವಧರ್ಮ ಸಮನ್ವಯ ಭಾವನೆಗಳನ್ನು ಕುರಿತು ಆಶೀರ್ವಚನವನ್ನು ಮಾಡಿದರು. ಈ ಧರ್ಮಸಭೆಯಲ್ಲಿ ಅಮರಾವತಿಯ ಎಂ.ಪಿ. ಆದ ಶ್ರೀಯುತ ಗುಡೆ ಹಾಗೂ ನಗರಾಧ್ಯಕ್ಷರಾದ ಶ್ರೀ ಕಾಶೀಕರ ಇವರನ್ನು ಶಾಲು ಹೊದಿಸಿ ಸನ್ಮಾನಮಾಡಿ ಫಲತಾಂಬೂಲವನ್ನಿತ್ತು ಆಶೀರ್ವದಿಸಿದರು.

ನಾಗಪುರದಿಂದ ಪಾಂಡುರ್ಣಾ ನಗರಕ್ಕೆ ಹೋಗುವ ದಾರಿಯಲ್ಲಿ ಸೌಂಸರ ಗ್ರಾಮದಲ್ಲಿ ಶ್ರೀ ಜಗದ್ಗುರುಗಳ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಗಿತ್ತು ಅಲ್ಲಿನ ಜೈನ-ಬ್ರಾಹ್ಮಣ ಮತ್ತು ಮಾರ್ವಾಡಿ ಸಮಾಜದವರು ಈ ಸಭೆಯಲ್ಲಿ ಭಾಗವಹಿಸಿದ್ದರು. ಸಾಮೂಹಿಕ ಪಾದಪೂಜೆಯನ್ನು ಏರ್ಪಡಿಸಲಾಗಿತ್ತು. ಪಾಂಡುರ್ಣಾದ ಷ॥ ಬ್ರ॥ ಶ್ರೀ ವೀರರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮತ್ತು ನೇರ ಪಿಂಗಳಾಯಿಯ ಶ್ರೀ ಷ॥ ಬ್ರ॥ ಶಿವಾರಕ ಶಿವಾಚಾರ್ಯರು ಉಪದೇಶ ಮಾಡಿದರು. ಜಗದ್ಗುರುಗಳು ಇಲ್ಲೂ ಕೂಡ ಸರ್ವ ಸಮನ್ವಯದ ಸಂದೇಶವನ್ನು ಆಶೀರ್ವಚನದಲ್ಲಿ ತಿಳಿಸಿದರು.

ಹರಿಯಾಣದ ಗುಡಗಾಂವದಲ್ಲಿ ಶ್ರೀಕಾಶೀ ಜಗದ್ಗುರುಗಳವರ ಧರ್ಮಸಂದೇಶ

ಹರಿಯಾಣರಾಜ್ಯ ಹಾಗೂ ಪಂಜಾಬ್ ರಾಜ್ಯಗಳಲ್ಲಿ ಜಗದ್ಗುರುಗಳು

6-2-97 : ಹರಿಯಾಣ ರಾಜ್ಯದಲ್ಲಿರುವ ಗುಡಗಾಂವದಲ್ಲಿರುವ ಪ್ರಕಾಶಪುರಿಯವರ ಆಶ್ರಮದಲ್ಲಿ ಕಾಶೀ ಜಗದ್ಗುರುಗಳವರ ಧರ್ಮ ಸಂದೇಶ ಕಾರ್ಯಕ್ರಮವನ್ನು ಅಂದು ಸಂಜೆ 5 ಗಂಟೆಗೆ ಏರ್ಪಡಿಸಿದ್ದರು.


ಎಡಗಡೆ ಕುಳಿತಿರುವವರು ಪ್ರಕಾಶಪುರಿ ಬಾಬು ಅವರು

ಆಚಾರ್ಯ ದ್ರೋಣಾಚಾರ್ಯರ ಗುರುಕುಲದಿಂದ ಗುರುಗಾಂವ ಎಂದೇ ಪ್ರಸಿದ್ಧಿಯಾಗಿರುವ ಇತಿಹಾಸ ಪ್ರಸಿದ್ಧ ಗುಡಗಾಂವದ ಪರಮ ತಪಸ್ವಿಗಳು, ವೀರವೈರಾಗ್ಯ ಮೂರ್ತಿಗಳು ಆದ ಶ್ರೀ ಪರಮಹಂಸ ಪ್ರಕಾಶಪುರಿಯವರ ವಿಶೇಷ ಆಮಂತ್ರಣದ ಮೇರೆಗೆ ದಿಲ್ಲಿಯಿಂದ ಇಲ್ಲಿಗೆ ಕಾಶೀ ಜಗದ್ಗುರುಗಳು ತಮ್ಮ ವಿಶೇಷ ಸಿಬ್ಬಂದಿಯೊಂದಿಗೆ ದಯಮಾಡಿಸಿದರು. ಅಲ್ಲಿಯ ಆಶ್ರಮದ ಸಕಲ ಮರ್ಯಾದೆಯೊಂದಿಗೆ ಜಗದ್ಗುರುಗಳನ್ನು ಪ್ರಕಾಶಪುರಿಯವರು ಭವ್ಯವಾಗಿ ಸ್ವಾಗತಿಸಿದ ನಂತರ ವಿಧಿವತ್ತಾಗಿ ಜಗದ್ಗುರುಗಳ ಪಾದಪೂಜೆಯನ್ನು ನೇರವೇರಿಸಿದರು. ಶ್ರೀ ಪ್ರಕಾಶಪುರಿ ಬಾಬಾ ಅವರು ತಮ್ಮ ಆಶ್ರಮದ ವ್ಯವಸ್ಥೆ ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ ಅರಿಕೆ ಮಾಡಿಕೊಂಡು ಪುನಃ ದಯಮಾಡಿಸಲು ವಿನಂತಿಸಿಕೊಂಡರು. ಪೂಜ್ಯ ಜಗದ್ಗುರುಗಳು ಭಾರತಭೂಮಿಯ ಮಹತ್ವವನ್ನು ವಿವರಿಸುತ್ತಾ, ದೇವ ಹಾಗೂ ಗುರುಗಳಲ್ಲಿಯ ತಾರತಮ್ಯವನ್ನು ಸಾರವತ್ತಾಗಿ ವಿವರಿಸಿ 'ಗುರು ಸಾಕ್ಷಾತ್ ಪರಬ್ರಹ್ಮ' ಎಂದು ಹೇಳಿದರು.

ಕಾಶೀಪೀಠದ ಜಗದ್ಗುರುಗಳು ಹೊರ ರಾಜ್ಯಗಳಲ್ಲೂ ಸಂಚರಿಸಿ ಧರ್ಮ ಪ್ರಚಾರ ಗೈಯುತ್ತಿರುವುದು ಒಂದು ವೈಶಿಷ್ಟ್ಯವಾಗಿದೆ. ಇದರಿಂದ ಹೊರನಾಡಿನಲ್ಲಿ ವೀರಶೈವ ತತ್ವಗಳ ಪ್ರಚಾರಕ್ಕೆ ಹೊಸ ನಾಂದಿಯಾಗಿದೆ.

ಕರ್ನಾಟಕದ ಸಂತನಿಗೆ ಹರಿಯಾಣದಲ್ಲಿ ಶ್ರದ್ಧಾಂಜಲಿ

6-10-2011 : ಕಾಶೀ ಜಗದ್ಗುರುಗಳು ಮತ್ತೊಮ್ಮೆ ಗುಡಗಾಂವ್‌ನಲ್ಲಿರುವ ಪ್ರಕಾಶಪುರಿ ಬಾಬಾ ಅವರ ಆಶ್ರಮಕ್ಕೆ ಭೇಟಿ ನೀಡಿದ್ದು, ಪ್ರಕಾಶಪುರಿ ಬಾಬಾರ 5ನೇ ಪುಣ್ಯಸ್ಮರಣೋತ್ಸವ ಸಂದರ್ಭದಲ್ಲಿ. 5ನೇ ತಾರೀಖಿನಂದು ಕಾಶೀ ಸನ್ನಿಧಿಯವರ ಸ್ವಾಗತ ಹಾಗೂ ಪ್ರತಿಷ್ಠಾಪನೆ ಗೊಳ್ಳಬೇಕಾದ ಮೂರ್ತಿಯ ಮೆರವಣಿಗೆ ನಡೆಯಿತು.

ಜಗದ್ಗುರುಗಳ ಅಮೃತಹಸ್ತದಿಂದ ವೈದಿಕ ಮಂತ್ರಘೋಷ ಹಾಗೂ ಭಕ್ತರ ಜಯಘೋಷದ ನಡುವೆ ಪಂಚಲೋಹದ ಮೂರ್ತಿಯನ್ನು ವಿಧಿವತ್ತಾಗಿ ಸ್ಥಾಪಿಸಲ್ಪಟ್ಟಿತು. ಈ ಸಮಾರಂಭಕ್ಕೆ ಉತ್ತರಭಾರತದ ಸುಮಾರು 10,000ಕ್ಕೂ ಹೆಚ್ಚಿನ ಸಂಖ್ಯೆಯ ಸಾಧುಸಂತರು ಆಗಮಿಸಿದ್ದಲ್ಲದೆ ಸುಮಾರು 50 ಸಾವಿರಕ್ಕೂ ಹೆಚ್ಚಿನ ಪ್ರಕಾಶಪುರಿಬಾಬಾರ ಭಕ್ತರು ಪಾಲ್ಗೊಂಡಿದ್ದು ಪ್ರಕಾಶಪುರಿಯವರ ಖ್ಯಾತಿಗೆ ದ್ಯೋತಕವಾಗಿತ್ತು.


ಶ್ರೀ ಕಾಶೀ ಜಗದ್ಗುರುಗಳ ಅಮೃತ ಹಸ್ತದಿಂದ ಮೂರ್ತಿ ಪ್ರತಿಷ್ಠಾಪನೆಯಾಗುತ್ತಿರುವುದು



ರವಿಪುರಿ ಬಾಬಾ ಅವರು ಕಾಶೀ ಜಗದ್ಗುರುಗಳನ್ನು ಸ್ವಾಗತಿಸುತ್ತಿರುವುದು.

ಶ್ರೀ ಪ್ರಕಾಶಪುರಿ ಬಾಬಾ ಮೂಲತಃ ಧಾರವಾಡ ಜಿಲ್ಲೆಯ ಒಂದು ಗ್ರಾಮದವರು. ವೀರಶೈವರಾದ ಇವರು ಬಾಲ್ಯದಲ್ಲೇ ಗೃಹತ್ಯಾಗ ಮಾಡಿದವರು 1960ರಲ್ಲಿ ಇಲ್ಲಿಗೆ ಬಂದು ಆಶ್ರಮ ಸ್ಥಾಪಿಸಿದರು. ಪಾಂಡವರ ಕಾಲದ ಒಂದು ಪ್ರಾಚೀನ ಶಿವದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಜನವರಿ ಒಂದನೇ ತಾ. 1999ರಂದು ಪಂಚಪೀಠದ ಜಗದ್ಗುರುಗಳನ್ನು ಗುಡಗಾಂವಕ್ಕೆ ಬರಮಾಡಿಕೊಂಡು ಶಿವಲಿಂಗಕ್ಕೆ ಪ್ರಾಣಪ್ರತಿಷ್ಠಾಪನೆ ಮಾಡಿಸಿದ್ದು – ಅವರಿಗೆ ವೀರಶೈವ ಪಂಚಪೀಠಗಳ ಮೇಲೆ ಅದರಲ್ಲೂ ಕಾಶೀಪೀಠದ ಮೇಲೆ ವಿಶೇಷ ಭಕ್ತಿ ಇದ್ದುದು ಕಾಣಬಹುದು. ಪಂಚಪೀಠಾಧೀಶ್ವರರನ್ನು ನೋಡಲೆಂದು ಅಂದು 25 ಸಾವಿರಕ್ಕೂ ಹೆಚ್ಚು ಸಾಧು ಸಂತರೂ, ಒಂದು ಲಕ್ಷಕ್ಕೂ ಹೆಚ್ಚು ಭಕ್ತಾದಿಗಳು ಪಾಲ್ಗೊಂಡಿದ್ದರು.

ಸುಮಾರು 39 ವರ್ಷಗಳ ಕಾಲ ಹರಿಯಾಣ ಪ್ರಾಂತದಲ್ಲಿ ಧರ್ಮಕ್ರಾಂತಿಯನ್ನು ಮಾಡಿದ ಬಾಬಾ ಅವರು 6–10–1999ರಲ್ಲಿ ಲಿಂಗೈಕ್ಯರಾದರು.



ಹರಿಯಾಣದ ಜಂಗಮರು ಜಗದ್ಗುರುಗಳನ್ನು ಭೇಟಿ ಮಾಡಿದ್ದರು.

ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಮೇಲಿನ ಎಲ್ಲಾ ಸಂಗತಿಗಳನ್ನು ತಿಳಿಸಿದರು. ಶ್ರೀ ಪ್ರಕಾಶಪುರಿ ಬಾಬಾ ಅವರು ಕರ್ನಾಟದವರು ಎಂಬ ಸ್ಮರಣೆ ಇಲ್ಲಿಯ ಜನರಿಗೆ ಸದಾ ಇರಲೆಂದು ತಮ್ಮ ಓರ್ವ ಶಿಷ್ಯನಿಗೆ ಕರ್ನಾಟಕಪುರಿ ಎಂದು ನಾಮಕರಣ ಮಾಡಿದ್ದನ್ನು ಹೇಳಿದರು.

ಈ ಪುಣ್ಯಸ್ಮರಣೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ವಿವಿಧ ಸಂಪ್ರದಾಯದ ಸಾಧು ಸಂತರಲ್ಲಿ ವಿಲಕ್ಷಣ ವೇಷ ಭೂಷಣ ಧಾರಿಗಳಾದ 5 ಜನ ಶಿವಕಥಾಕಾರರು ಜಗದ್ಗುರುಗಳ ದರ್ಶನಕ್ಕೆ ಬಂದರು. ಅವರ ಹೆಸರುಗಳನ್ನು ಕೇಳಿ ಜಗದ್ಗುರುಗಳಿಗೆ ಪರಮಾಶ್ಚರ್ಯವಾಯಿತು. ಸುಭಾರಾಮ್ ಜಂಗಮ್, ಧೀರರಾಮ್ ಜಂಗಮ್, ಕಜಾನರಾಮ್ ಜಂಗಮ್, ಕಾಲಾರಾಮ್ ಜಂಗಮ್, ವಿಜೇಂದ್ರ ಜಂಗಮ್ ಎಂದಾಗಿತ್ತು. ಇವರೆಲ್ಲರೂ ಹರಿಯಾಣ ರಾಜ್ಯದ ಕರ್ನಾಲ ಜಿಲ್ಲೆಯ ಪೋಪಡ ಗ್ರಾಮ ವಾಸಿಗಳು.

ಹರಿಯಾಣ ಮತ್ತು ಪಂಜಾಬ್‌ನಲ್ಲಿರುವ ಈ ಜಂಗಮರು ಶಿವಕಥೆಯನ್ನು ಹೇಳಿಕೊಂಡು ಊರಿಂದೂರಿಗೆ ಸಂಚರಿಸುತ್ತಾರೆ. ಇವರುಗಳು ಮಸ್ತಕದ ಮೇಲೆ ನಾಗಾಭರಣದ ಅಲಂಕಾರ ಮಾಡಿಕೊಂಡು ಅಲ್ಲಿ ಒಂದು ಸಣ್ಣಗಾತ್ರದ ಶಿವಲಿಂಗವನ್ನು ಧರಿಸಿಕೊಂಡಿರುತ್ತಾರೆ. ಉಳಿದ ಸಮಯದಲ್ಲಿ ಆ ಲಿಂಗವನ್ನು ಜಗುಲಿಯ ಮೇಲಿಟ್ಟು ಪೂಜಿಸುತ್ತಾರೆ. ಇಡೀ ಮನೆಯವರಿಗೆಲ್ಲಾ ಒಂದೇ ಲಿಂಗವಿರುತ್ತದೆ. ಇಂತಹ ಜಂಗಮ ಎನ್ನುವ ಅಡ್ಡ ಹೆಸರುಳ್ಳವರು ಸುಮಾರು 2000 ಸಂಖ್ಯೆಯಲ್ಲಿದ್ದಾರೆಂದು ಈ ಐವರು ತಿಳಿಸಿದರು.

ಜಗದ್ಗುರುಗಳ ದರ್ಶನ ಮಾಡಿದಾಗ ಅನೇಕ ವರ್ಷಗಳಿಂದ ಅಗಲಿದ ತಾಯಿಯನ್ನು ಕಂಡ ಮಗುವಿನಂತೆ ಅತ್ಯಂತ ಸಂತೋಷಪಟ್ಟಿದ್ದನ್ನು ಜಗದ್ಗುರುಗಳು ನೆನೆಯುತ್ತಾರೆ. ಹರಿಯಾಣ ಹಾಗೂ ಪಂಜಾಬ್ ರಾಜ್ಯಗಳಲ್ಲಿರುವ ಎಲ್ಲಾ ಜಂಗಮ ಕುಟುಂಬಗಳಿಗೆ ಸಂಸ್ಕಾರ ಕೊಡಬೇಕೆಂದು ಇವರು ಅರಿಕೆ ಮಾಡಿಕೊಂಡರು. ಇವರೆಲ್ಲರೂ ಶುದ್ಧ ಶಾಖಾಹಾರಿಗಳಾಗಿದ್ದು ಸದಾ ಶಿವಕಥೆಗಳನ್ನು ಹೇಳುತ್ತಾ ಶಿವಭಕ್ತಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಆ ಎಲ್ಲಾ ಜಂಗಮ ಸಮಾಜಕ್ಕೆ ವೀರಶೈವ ಧರ್ಮದ ಪರಂಪರೆಯನ್ನು, ಜಂಗಮರಿಗೆ ಇರುವ ಮಹತ್ವವನ್ನು ಅವರಿಗೆ ವಿವರಿಸಿದ ಜಗದ್ಗುರುಗಳು ಅವರನ್ನೆಲ್ಲಾ ಕಾಶೀ ಜಂಗಮವಾಡಿ ಮಠಕ್ಕೆ ಬಂದು ಹೋಗಬೇಕೆಂದು ಹೇಳಿದರು.

ಇಷ್ಟಲಿಂಗ ಧಾರಣೆಗೆ ವರ್ಣಭೇದ ಬೇಡ

ವಿಜಯ ಕರ್ನಾಟಕ, 17–8–2011



ಹರಿಯಾಣದ ಪಾನಿಪತ್ ಜಿಲ್ಲೆಯ ಅದಿಯಾನಾದಲ್ಲಿ ನಡೆದ ಇಷ್ಟಲಿಂಗ ದೀಕ್ಷೆ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರುಗಳು ಪಾಲ್ಗೊಂಡಿದ್ದರು.

ವೀರಶೈವರು ಧರಿಸುತ್ತಿರುವ ಇಷ್ಟಲಿಂಗ ಧಾರಣೆ ಐದು ಸಾವಿರ ವರ್ಷಗಳಿಗಿಂತಲೂ ಪುರಾತನ ವಾದುದು ಎಂದು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಹರಿಯಾಣಾದ ಪಾನಿಪತ್ ಜಿಲ್ಲೆಯ ಅದಿಯಾನ ಗ್ರಾಮದಲ್ಲಿ ಧರ್ಮಪ್ರಚಾರಾರ್ಥ ಹಮ್ಮಿಕೊಂಡಿರುವ ಇಷ್ಟಲಿಂಗದೀಕ್ಷೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶ್ರೀ ಸಿದ್ಧಾಂತ ಶಿಖಾಮಣಿಯ ಪ್ರಕಾರ ಇಷ್ಟಲಿಂಗಧಾರಣೆ ಸನಾತನವಾದುದು. ದೇವತೆಗಳೂ ಸಹ ಮಸ್ತಕದಲ್ಲಿ ಇಷ್ಟಲಿಂಗವನ್ನು ಧರಿಸಿರುತ್ತಾರೆ. ಅದರ ಸಂಕೇತಗಳು ಇಂದಿಗೂ ಪಂಢರಪುರದ ವಿಠಲ, ಕೊಲ್ಲಾಪುರದ ಮಹಾಲಕ್ಷ್ಮಿ, ಬಾರ್ಶಿಯ ಭಗವಂತ ಮತ್ತು ತುಳಜಾಪುರದ ಭವಾನಿ ಮೂರ್ತಿಗಳ ಮಸ್ತಕದಲ್ಲಿ ಕಂಡುಬರುತ್ತವೆ ಎಂದರು.

ಹರಪ್ಪಾ ಮೊಹೊಂಜೊದಾರೊ ಕಾಲದ ಉತ್ಖನನದಲ್ಲಿ ಮನುಷ್ಯ ಶರೀರದ ಅವಶೇಷಗಳೊಂದಿಗೆ ಚಿಕ್ಕಗಾತ್ರದ ಪಂಚಸೂತ್ರ ಲಿಂಗಗಳು ದೊರೆತಿರುವುದರಿಂದ ದೇಹದ ಮೇಲೆ ಇಷ್ಟಲಿಂಗ ಧರಿಸುವ ಪದ್ಧತಿ ಐದು ಸಾವಿರ ವರ್ಷಕ್ಕಿಂತಲೂ ಪ್ರಾಚೀನವಾದುದು ಎಂಬುದನ್ನು ಇತಿಹಾಸ ತಜ್ಞರು ಒಪ್ಪಿಕೊಂಡಿದ್ದಾರೆ. ಹರಿಯಾಣ ಪ್ರಾಂತದ ರಾಖಿಗಡಿ ಗ್ರಾಮದಲ್ಲಿಯೂ ಆ ಪ್ರಕಾರ ಪಂಚಸೂತ್ರ ಲಿಂಗಗಳು ಮತ್ತು ಮಾನವ ಶರೀರದ ಅವಶೇಷಗಳು ದೊರೆತಿರುವುದರಿಂದ ಇಲ್ಲಿಯೂ ಇಷ್ಟಲಿಂಗಧಾರಿ ವೀರಶೈವರು ಅನಾದಿಕಾಲದಿಂದ ಇದ್ದರೆಂಬುದು ತಿಳಿದುಬರುತ್ತದೆ ಎಂದರು.

ಹರಿಯಾಣಾದ ಅನೇಕ ಜಂಗಮರು ಮಸ್ತಕದ ಮೇಲೆ ಇಷ್ಟಲಿಂಗ ಧರಿಸಿಕೊಂಡು ಶಿವನ ವೇಷ ಭೂಷಣದೊಂದಿಗೆ ಶಿವಕೀರ್ತನೆ ಮಾಡಲು ಲಾಹೋರ, ಪೇಶಾವರ, ಕಾಬೂಲ, ಕಂದಹಾರ, ಕರಾಚಿ, ನಗರಗಳಿಗೆ ಹೋಗಿಬರುತ್ತಿದ್ದರು. ಇಲ್ಲಿ ವೀರಶೈವ ಜಂಗಮ ಮಠಗಳು ಸ್ಥಾಪಿಸಲ್ಪಟ್ಟಿದ್ದವು. ಭಾರತ, ಪಾಕಿಸ್ತಾನ ವಿಭಜನೆ ನಂತರ ಅಲ್ಲಿಯ ಮಠಗಳು ನಿಲಕ್ಷ್ಯಕ್ಕೊಳಗಾಗಿವೆ. ಸದ್ಯ ಈ ಶಿವಕಥೆ ಜಂಗಮರು ಪಂಜಾಬ, ಹರಿಯಾಣ, ಗುಜರಾತ್, ಹಿಮಾಚಲ ಪ್ರದೇಶ ಮತ್ತು ಜಮ್ಮು ಕಾಶ್ಮೀರಗಳಲ್ಲಿ ಸಂಚರಿಸಿ ಶಿವಕಥೆಗಳನ್ನು ಹೇಳುತ್ತಿದ್ದಾರೆ. ಇಂದಿಗೂ ಕುರುಕ್ಷೇತ್ರ, ಕೈಥಲ್, ಪಾಣಿಪತ್ ಮತ್ತು ಜೀಂದ ಜಿಲ್ಲೆಗಳಲ್ಲಿ ಅಲ್ಲಲ್ಲಿ ವೀರಶೈವ ಮಠಗಳು ಇವೆ. ಇಲ್ಲಿ ಶಿವಕಥೆ ಹೇಳುವ ಜಂಗಮರು ಪರಿವಾರಸಹಿತರಾಗಿ ವಾಸಮಾಡುತ್ತಿದ್ದಾರೆ ಎಂದು ಕಾಶಿ ಶ್ರೀಗಳು ಹೇಳಿದರು.

ಜಗದ್ಗುರು ಪಂಚಾಚಾರ್ಯರು ಮನುಕುಲದ ಉದ್ಧಾರಕ್ಕಾಗಿ ಸರ್ವರಿಗೂ ಇಷ್ಟಲಿಂಗಧಾರಣೆ ಅಧಿಕಾರ ಅನುಗ್ರಹಿಸಿದ್ದಾರೆ. ವರ್ಣ, ವರ್ಗ ಭೇದ ಮಾಡದೇ ದೀಕ್ಷಾಪೂರ್ವಕ ಇಷ್ಟಲಿಂಗಧಾರಣೆ ಮಾಡಿಕೊಳ್ಳುವಂತೆ ಶ್ರೀಗಳು ಹೇಳಿದರು.

ಹರಿಯಾಣದ ಜೀಂದ ಜಿಲ್ಲೆಯ ಬರಾಹಕಲಾ, ಸುಂದರಪುರ, ಉಚಾನಾ, ಪಾನಿಪತ್ ಜಿಲ್ಲೆಯ ಆದಿಯಾನಾ, ಮತಲೋದಾ, ಕುರುಕ್ಷೇತ್ರ ಜಿಲ್ಲೆಯ ಪೆಹುವಾ, ಕರ್ನಾಲ ಜಿಲ್ಲೆಯ ನಿಲೋಖೇಡಿ ಗ್ರಾಮಗಳ ಬ್ರಾಹ್ಮಣ, ಜಾಟ, ಜಂಗಮ, ಶೈನಿ ಸಮಾಜದ ಸಾವಿರಾರು ಜನ ಸ್ತ್ರೀ, ಪುರುಷರು, ಬಾಲ ವೃದ್ಧರು, ಶ್ರದ್ಧೆಯಿಂದ ಇಷ್ಟಲಿಂಗದೀಕ್ಷೆ ಪಡೆದರು.

ಇಲ್ಲಿ ನಡೆದ ಇಷ್ಟಲಿಂಗ ದೀಕ್ಷೆ ಕಾರ್ಯಕ್ರಮದಲ್ಲಿ ಪಂ. ವಿಶ್ವನಾಥ ಶಾಸ್ತ್ರಿ ವೈದಿಕ ವಿಧಿವಿಧಾನ ನೆರವೇರಿಸಿದರು. ಶಾಂತವೀರಲಿಂಗ ಶಿವಾಚಾರ್ಯರು ದೀಕ್ಷೆ ಸಂಸ್ಕಾರ ನೀಡಿದರು. ಡಾ. ರಾಮನಿವಾಸ ಜಂಗಮ, ರಾಮಕುಮಾರ, ಗೌತಮ, ಡಾ. ಶ್ರೀಪಾಲ ಗೌತಮ, ರಾಕೇಶ ಗೌತಮ ಮತ್ತಿತರರಿದ್ದರು.

ಐಕ್ಯತೆ ರಾಷ್ಟ್ರದ ಮಹಾಶಕ್ತಿ: ಕಾಶೀ ಶ್ರೀಗಳು

ಉದಯವಾಣಿ, 11–11–2011



ಹರಿಯಾಣ : ಕಾಶೀ ಜಗದ್ಗುರುಗಳು ಹಿಂದಿ ಭಾಷೆಯಲ್ಲಿ ರಚಿಸಿದ ವೀರಶೈವ ಅಷ್ಟಾವರಣ ವಿಜ್ಞಾನ ಗ್ರಂಥವನ್ನು ಶಾಸಕ ವೀರಣ್ಣ ಚರಂತಿಮಠ ಬಿಡುಗಡೆ ಮಾಡಿದರು.

ಹರಿಯಾಣಾ : *ಐಕ್ಯತೆಯಿಂದ ಅಖಂಡತೆ ಕಾಪಾಡಿಕೊಂಡು ಬರಲು ಸಾಧ್ಯವೆಂದು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು. ಹರಿಯಾಣಾ ಪ್ರಾಂತದ ಕುರುಕ್ಷೇತ್ರ ಜಿಲ್ಲೆಯ ಪೆಹವಾ ಧರ್ಮಕ್ಷೇತ್ರದಲ್ಲಿ ಜೀರ್ಣೋದ್ಧಾರಗೊಂಡ ಅತ್ಯಂತ ಪ್ರಾಚೀನ ಜಂಗಮವಾಡಿಮಠದಲ್ಲಿ ಹಮ್ಮಿಕೊಂಡಿದ್ದ ಉತ್ತರಭಾರತ ವೀರಶೈವ ಮಹಾಸಮ್ಮೇಳನದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.*

ಸನಾತನ ವೀರಶೈವ ಧರ್ಮದ ಸಂಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು ಈ ರಾಷ್ಟ್ರದ ಅಖಂಡತೆ ಕಾಪಾಡುವ ದೃಷ್ಟಿಯಿಂದಲೇ ರಾಷ್ಟ್ರೀಯ ಪಂಚಪೀಠಗಳನ್ನು ಸಂಸ್ಥಾಪಿಸುವುದರ ಜೊತೆಗೆ ಪ್ರತಿಯೊಂದು ಪ್ರಾಂತ್ಯದಲ್ಲಿ ಆ ಪೀಠಗಳ ಶಾಖಾಮಠಗಳನ್ನು ಸ್ಥಾಪಿಸಿದ್ದಾರೆ. ಅವುಗಳ ಮೂಲಕ ಧರ್ಮ ಸಂಸ್ಕಾರ ಜೊತೆಗೆ ಬಹುಜನ ಸಮಾಜದಲ್ಲಿ ಅಖಂಡತೆಯ ಮಂತ್ರ ಬೋಧಿಸುತ್ತಾ ಬಂದಿದ್ದಾರೆ. ಅಂತೆಯೇ ವೀರಶೈವ ಧರ್ಮವು ಒಂದು ಪ್ರಾಂತ ಅಥವಾ ಒಂದು ಭಾಷೆಗೆ ಸೀಮಿತವಾಗದೆ ಆಸೇತು ಹಿಮಾಚಲದ ವರೆಗೆ ಸರ್ವಪ್ರಾಂತಗಳಲ್ಲಿ ವ್ಯಾಪಿಸಿಗೊಂಡಿದೆ ಎಂದರು. ಕಾಶೀ ಮಹಾಪೀಠದ ಪೂರ್ವಾಚಾರ್ಯರು ದಕ್ಷಿಣ ಭಾರತದ ಜೊತೆಗೆ ಉತ್ತರ ಭಾರತದ ವಿವಿಧ ಪ್ರಾಂತಗಳಲ್ಲಿ ಸಂಚರಿಸಿ ಅಲ್ಲಲ್ಲಿ ಶಾಖಾಮಠಗಳನ್ನು ಸ್ಥಾಪಿಸಿದ್ದಾರಲ್ಲದೆ ನೇಪಾಳ ದೇಶದವರೆಗೂ ಹೋಗಿ ಅಲ್ಲಿಯೂ ಶಾಖಾಮಠ ಸ್ಥಾಪಿಸಿ ವೀರಶೈವ ಧರ್ಮವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಅಂತೆಯೇ ಇಂದು ಉತ್ತರ ಭಾರತದ ಹರಿಯಾಣ, ಪಂಜಾಬ, ರಾಜಸ್ಥಾನ, ಕಚ್ಛ, ಗುಜರಾತ್ ಮತ್ತು ಜಮ್ಮು–ಕಾಶ್ಮೀರಗಳಲ್ಲಿಯೂ ಸಹ ಜಂಗಮವಾಡಿ ಮಠಗಳಿವೆ ಎಂದರು.

ಬೆಂಗಳೂರು ವಿಭೂತಿಪುರ ಮಠದ ಡಾ. ಮಹಾಂತಲಿಂಗ ಶಿವಾಚಾರ್ಯರು, ಮಹಾರಾಷ್ಟ್ರ ಔಸಾ ಹಿರೇಮಠದ ಶ್ರೀ ಶಾಂತವೀರಲಿಂಗ ಶಿವಾಚಾರ್ಯರು ಧರ್ಮ ಸಂದೇಶ ನೀಡಿದರು. ಶಾಸಕ ವೀರಣ್ಣ ಚರಂತಿಮಠರು ಕಾಶೀ ಜಗದ್ಗುರುಗಳು ಹಿಂದಿ ಭಾಷೆಯಲ್ಲಿ ರಚಿಸಿದ ವೀರಶೈವ ಅಷ್ಟಾವರಣ ವಿಜ್ಞಾನ ಗ್ರಂಥ ಬಿಡುಗಡೆ ಮಾಡಿದರು.

ಹರಿಯಾಣ ವೀರಶೈವ ಸಮಾಜ ಅಧ್ಯಕ್ಷ ಶಿವಚರಣ ಜಂಗಮ್, ಮುಂಬಯಿ ಅಂಬರನಾಥ ವೀರಶೈವ ಸಮಾಜದ ಅಧ್ಯಕ್ಷ ರಾಮೂ ಸೇಟ್ ಹೆಬ್ಬಳ್ಳಿ, ಮುಂಬೈ ಜಂಗಮ ಸಮಾಜದ ಅಧ್ಯಕ್ಷ ಭೀಮಾಶಂಕರ್ ಜಂಗಮ್, ದಿಲ್ಲಿ ಛತ್ರಪುರ ಮಂದಿರದ ವಿಜಯ್ ಶಂಕರ್ ಗೌಡ್, ಮುಖೇಶ್ ತ್ಯಾಗಿ, ಡಾ. ಓಂಪ್ರಕಾಶಸ್ವಾಮಿ, ಡಾ. ರಾಮ್‌ಕುಮಾರ್ ಜಂಗಮ್, ಡಾ. ರವೀಂದ್ರ ಜಂಗಮ್, ಮೌನೀ ಬಾಬಾ, ಡಾ. ಚಂದ್ರಶೇಖರ ಸ್ವಾಮಿಜಿ ಬರ್ಗಿ ಮತ್ತಿತರರು ಭಾಗವಹಿಸಿದ್ದರು. ಡಾ.ರಾಮ್ ನಿವಾಸ ಜಂಗಮ್ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಪಂಜಾಬ, ರಾಜಸ್ಥಾನ, ಗುಜರಾತ ಮತ್ತು ಜಮ್ಮೂ–ಕಾಶ್ಮೀರ ಪ್ರಾಂತಗಳ ವೀರಶೈವರು ಸೇರಿದಂತೆ ಉಕ್ರೇನ್ ದೇಶದ ಕುಮಾರಿ ಗೌರಿ ಮತ್ತು ಹ್ಯಾಂಡ್ರಿ ಪಾಲ್ಗೊಂಡಿದ್ದರು.

ಚಂಡೀಗಢ್‌ದಲ್ಲಿ ಕಾಶಿ ಶ್ರೀಗೆ ಸ್ವಾಗತ

ವಿಜಯ ಕರ್ನಾಟಕ, 12–11–2011




ಚಂಡೀಗಢ್ ರಾಜಭವನದಲ್ಲಿ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರಿಗೆ ರಾಜ್ಯಪಾಲ ಶಿವರಾಜ್ ಪಾಟೀಲ ಅದ್ದೂರಿ ಸ್ವಾಗತ ಕೋರಿದರು.



ಕಾಶೀ ಜಗದ್ಗುರುಗಳು ಪಂಜಾಬ್ ಮತ್ತು ಹರಿಯಾಣದಲ್ಲಿ ಧರ್ಮ ಪ್ರಚಾರ ಅಭಿಯಾನ ಹಮ್ಮಿಕೊಂಡಿದ್ದರು. ಹರಿಯಾಣದ ಕುರುಕ್ಷೇತ್ರದ ಸಮೀಪದ ಪೆಹವಾಬಾ ಧರ್ಮ ಕ್ಷೇತ್ರದಲ್ಲಿ ಅತ್ಯಂತ ಪ್ರಾಚೀನ ಜಂಗಮವಾಗೆ ಮಠದ ಉದ್ಘಾಟನೆ, ಪಂಚಾಚಾರ್ಯ ಮೂರ್ತಿ ಪ್ರತಿಷ್ಠಾಪನೆ, ಶಿವದೀಕ್ಷೆ ಮತ್ತು ಉತ್ತರ ಭಾರತದ ವೀರಶೈವ ಧರ್ಮಸಮ್ಮೇಳನ ಮುಂತಾದ ಕಾರ್ಯಕ್ರಮವನ್ನು ಹಮ್ಮಿಕೊಂಡು, ಮಠದ ಉದ್ಘಾಟನೆಗಾಗಿ ಅಲ್ಲಿನ ರಾಜ್ಯಪಾಲರನ್ನು ಆಹ್ವಾನಿಸಿದ್ದರು ಅನಿವಾರ್ಯಕ್ಕಾಗಿ ರಾಜ್ಯಪಾಲರು ಕಾರ್ಯಕ್ರಮಕ್ಕೆ ಬರಲಾಗಲಿಲ್ಲ. ಆ ಕಾರಣದಿಂದ ರಾಜ್ಯಪಾಲ ಶ್ರೀ ಶಿವರಾಜ್ ಪಾಟೀಲರು ಕಾಶೀ ಜಗದ್ಗುರುಗಳನ್ನೇ ರಾಜಭವನಕ್ಕೆ ಭೇಟಿ ನೀಡಿರೆಂದು ಆಹ್ವಾನ ಕಳುಹಿಸಿದ್ದರು.

ಜಗದ್ಗುರುಗಳು ಪೆಹವಾ ಧರ್ಮಾ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಎಲ್ಲಾ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ಚಂಡೀಗಡ್‌ಗೆ ತೆರಳಿದ್ದರು. ರಾಜ್ಯಪಾಲ ಶಿವರಾಜ್ ಪಾಟೀಲರು ಜಗದ್ಗುರುಗಳಿಗೆ ಭವ್ಯಸ್ವಾಗತ ನೀಡಿದರು, ರಾಜಭವನದಲ್ಲಿ ಜಗದ್ಗುರುಗಳು ಇಷ್ಟಲಿಂಗ ಪೂಜೆಯಲ್ಲಿ ರಾಜ್ಯಪಾಲರೂ ಭಾಗವಹಿಸಿದರು.



ಕುರುಕ್ಷೇತ್ರದಲ್ಲಿ ಉದ್ಘಾಟನೆ



ಕುರುಕ್ಷೇತ್ರದ ಜಂಗಮರು ಏರ್ಪಡಿಸಿದ್ದ ಧರ್ಮವೇದಿಕೆಯಲ್ಲಿ ಜಗದ್ಗುರುಗಳು

ರಾಜಸ್ಥಾನದಲ್ಲಿ ವೀರಶೈವ ಧರ್ಮಪ್ರಚಾರ ಜಗದ್ಗುರುಗಳಿಂದ
1–8–2011 ರಿಂದ 12–8–2011

ರಾಜಸ್ಥಾನ ರಾಜ್ಯದ ಕಕಾಲ ಜಿಲ್ಲೆಯ ಹಿಂಡೋನ್‌ಸಿಟಿಯ ಗೋಪಾಲ ಪ್ಯಾಲೆಸ್‌ನಲ್ಲಿ ನಿತ್ಯ ಬೆಳಗ್ಗೆ ಶಿವಯೋಗ ಶಿಬಿರ, ಸಾಮೂಹಿಕ ಇಷ್ಟಲಿಂಗಪೂಜೆ, ಲಿಂಗದೀಕ್ಷೆ ಹಾಗೂ ಸಂಜೆ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಮತ್ತು ಆಗಸ್ಟ್ 11ರಂದು ಕಾಶೀ ಜಗದ್ಗುರುಗಳ 65ನೇ ವರ್ಷದ ಜನ್ಮೋತ್ಸವ ನಿಮಿತ್ತ ರಾಷ್ಟ್ರೀಯ ವೀರಶೈವ ಮಹಾಸಮ್ಮೇಳನವನ್ನು ರಾಜಸ್ಥಾನದ ವೀರಶೈವ ಜಂಗಮ ಸಮಾಜವು ಏರ್ಪಡಿಸಿತ್ತು.

ಶಿವಾರಾಧನೆಯಿಂದ ಆಯುಷ್ಯ ವೃದ್ಧಿ: ಕಾಶೀ ಜಗದ್ಗುರು

ಉದಯವಾಣಿ, 4–8–2011



ಜಗದ್ಗುರುಗಳು ರಾಜಸ್ಥಾನ ರಾಜ್ಯದಲ್ಲಿ ಪ್ರವಾಸ ಮಾಡುವಾಗ ತಮ್ಮೊಂದಿಗೆ ದೀಕ್ಷಾ ಸಂಸ್ಕಾರ ನೀಡಲು ಮಹಾರಾಷ್ಟ್ರದ ಜೌಸಾ ಹಿರೇಮಠದ ಶಾಂತವೀರಲಿಂಗ ಶಿವಾಚಾರ್ಯರು, ಬೆಳ್ಳಂಕಿಯ ಶಿವಲಿಂಗ ಶಿವಾಚಾರ್ಯರನ್ನು, ಶಿವಯೋಗ ಶಿಬಿರದಲ್ಲಿ ಯೋಗವನ್ನು ಹೇಳಿಕೊಡಲು ಗುಳೇದಗುಡ್ಡದ ಶ್ರೀಕೃಷ್ಣಯೋಗಾಶ್ರಮದ ಡಾ. ಬಸವರಾಜ ಹಡಗಲಿ ಅವರನ್ನು ಕರೆದೊಯ್ದಿದ್ದರು.

ರಾಜಾಸ್ಥಾನದ ಹಿಂಡೋನ್ ಸಿಟಿಯಲ್ಲಿ ಶ್ರಾವಣಮಾಸದ 12 ದಿನಗಳ ಕಾಲದ ಅನುಷ್ಠಾನ ಕಾರ್ಯಕ್ರಮವನ್ನು ಉದ್ಘಾಟಿಸಿ ತಮ್ಮ ಆಶೀರ್ವಚನದಲ್ಲಿ – ಚಾತುರ್ಮಾಸದಲ್ಲಿ ಬರುವ ಶ್ರಾವಣಮಾಸ ಅತ್ಯಂತ ಪವಿತ್ರ. ಈ ಮಾಸದಲ್ಲಿ ಶಿವನ ಆರಾಧನೆ ಮಾಡುವುದರಿಂದ ಆಯಸ್ಸು ವೃದ್ಧಿಯಾಗುವುದೆಂದು ಮಾರ್ಕಂಡೇಯನ ಕಥೆಯನ್ನು ಹೇಳಿ ಶಿವನ ಆರಾಧನೆಯಿಂದ ಮೃತ್ಯುವನ್ನು ಜಯಿಸಿ ಚಿರಂಜೀವಿಯಾದದ್ದನ್ನ ತಿಳಿಸಿ ಯಾರು ಎಷ್ಟು ಸಮಯವನ್ನು ಶಿವಪೂಜೆ, ಶಿವನಾಮ ಜಪ, ಶಿವ ರೈತ ಮಾಡುವುದರಲ್ಲಿ ಕಳೆಯುವವರೋ ಅಷ್ಟು ಸಮಯ ಅವರ ಆಯಸ್ಸು ವೃದ್ಧಿಯಾಗುವುದೆಂದು ತಿಳಿಸಿದರು.



ಶ್ರಾವಣಮಾಸ ಅನುಷ್ಠಾನ ಮುಗಿದ ಮೇಲೆ ಜಗದ್ಗುರುಗಳಿಗೆ ಸಾರೋಟ ಉತ್ಸವ ಮಾಡಿ ಗೌರವ ಸಲ್ಲಿಸಿದರು.

ಉದ್ಘಾಟನಾ ಸಮಾರಂಭಕ್ಕೆ ಕಕಾಲಿಯಾ ಮಹಾರಾಣಿ ಮತ್ತು ಶಾಸಕಿ ರೋಹಿಣಿದೇವಿ, ರಾಜಪರಿವಾರದ ರಮೇಶ ರಾಜೋರಿಯಾ, ಅಶೋಕ ಪಾಠಕ್, ರಾಣಾಕುಮಾರಿ, ರಾಜಸ್ಥಾನ ವೀರಶೈವ ಜಂಗಮ ಸಮಾಜದ ಅಧ್ಯಕ್ಷ ಶಿವಪ್ರಕಾಶ್ ಜಂಗಮ್, ಕಕಾಲಿ ಜಿಲ್ಲಾ ಜಂಗಮ ಸಮಾಜದ ಅಧ್ಯಕ್ಷ ರಮೇಶ ಚಂದ್ರ ಜಂಗಮ್, ಜೈಪುರದ ಕಮಲೇಶ ಜಂಗಮ್, ಮುಂತಾದವರು ಭಾಗವಹಿಸಿದ್ದರು.

ಪ್ರಾತಃಕಾಲದ 12 ಗಂಟೆಗೆ ಕಾಶೀ ಜಗದ್ಗುರುಗಳ ಸ್ವಾಗತಕ್ಕಾಗಿ ರಥೋತ್ಸವ ನಡೆಸಲಾಯಿತು. ಉತ್ಸವದಲ್ಲಿ ಹಿಂಡೋನ್‌ಸಿಟಿ ಮತ್ತು ಸುತ್ತಮುತ್ತಲಿನ ಭಾಗದ ಸುಮಾರು 2000ಕ್ಕೂ ಹೆಚ್ಚು ಜನರು ಶ್ರದ್ಧೆಯಿಂದ ಭಾಗವಹಿಸಿದ್ದರು. ಇಲ್ಲಿಯ ಮಹಿಳೆಯರು ರಾಜಸ್ಥಾನದ ಪಾರಂಪರಿಕ ವೇಷ ಭೂಷಣ ಧರಿಸಿ ಕುಂಭಗಳನ್ನು ಹೊತ್ತು ಮೆರವಣಿಗೆಯಲ್ಲಿ ಭಾಗವಹಿಸಿದ್ದು ಕಣ್ಮನ ಸೆಳೆಯುವಂತಿತು.

ಶ್ರಾವಣ ಮಾಸದ ಅನುಷ್ಠಾನ ಮುಗಿಯುವುದರೊಳಗೆ ಸುಮಾರು 10,000 ಜನ ಲಿಂಗದೀಕ್ಷೆ ಪಡೆಯುವ ನಿರೀಕ್ಷೆಯನ್ನು ಸಂಚಾಲಕರು ನಿರೀಕ್ಷಿಸಿದ್ದಾರೆ.

ದೀಕ್ಷೆಯಿಂದಲೇ ಪೂಜಾಧಿಕಾರ ಪ್ರಾಪ್ತಿ



ರಾಜಸ್ಥಾನದ ಹಿಂಡೋನ್ ಸಿಟಿಯಲ್ಲಿ ನಡೆದ ಶಿವದೀಕ್ಷೆ ಸಮಾರಂಭದಲ್ಲಿ ಕಾಶೀ ಜಗದ್ಗುರುಗಳು ಭಕ್ತರಿಗೆ ಲಿಂಗದೀಕ್ಷೆ ನೀಡಿದರು.

ದೀಕ್ಷೆಯ ಬಗ್ಗೆ ಅಲ್ಲಿನ ಭಕ್ತಾದಿಗಳಿಗೆ ವಿವರಿಸುತ್ತಾ ವೀರಶೈವ ಧರ್ಮದಲ್ಲಿ ಗರ್ಭಧಾರಣೆಯಿಂದ ಅಂತ್ಯೋಷ್ಠಿಯವರೆಗೆ 16 ಸಂಸ್ಕಾರಗಳನ್ನು ಪ್ರತಿಪಾದಿಸಲಾಗಿದೆ. ಇವುಗಳಲ್ಲಿ ದೀಕ್ಷಾಸಂಸ್ಕಾರವೂ ಒಂದು. ಮಗುವಿನ 8ನೇ ವರ್ಷದಲ್ಲಿ ದೀಕ್ಷಾ ಸಂಸ್ಕಾರವನ್ನ ಮಾಡಿಸಬೇಕು. ಆಗ ಪಡೆಯದಿದ್ದರೆ ಮುಂದೆಯೂ ಪಡೆಯಬಹುದು. ದೀಕ್ಷೆ ಒಂದು ಪವಿತ್ರ ಸಂಸ್ಕಾರ, ಗುರುವಿನಿಂದ ದೀಕ್ಷೆ ಪಡೆದಾಗ ಮಾತ್ರ ಶಿವಪೂಜೆಗೆ ಅರ್ಹನಾಗುತ್ತಾನೆ. ಪ್ರಪಂಚದಲ್ಲಿ ದೀಕ್ಷಾ ಧಾರ್ಮಿಕ ಸಂಸ್ಕಾರಗಳನ್ನು ಯಾರು ಪಡೆದುಕೊಳ್ಳುವರೋ ಅವರನ್ನ ಶುದ್ಧರೆನ್ನುವರು. ಯಾರು ದೀಕ್ಷಾಹೀನರೋ ಅವರನ್ನು ಪ್ರಾಕೃತರೆನ್ನುವರು. ಪಶು ಪಕ್ಷಿಗಳು ಪ್ರಾಕೃತ ಜೀವಿಗಳು. ಮನುಷ್ಯ ಸಹ ಈ ರೀತಿ ಪ್ರಾಕೃತ ಜೀವಿಯಾಗಬಾರದೆಂದು ವೀರಶೈವ ಆಚಾರ್ಯರು ಮಗು ಗರ್ಭದಲ್ಲಿರುವ 8ನೇ ತಿಂಗಳಿಗೆ ಗರ್ಭಕ್ಕೆ ಲಿಂಗಧಾರಣೆ ಮಾಡುತ್ತಿದ್ದರು. ಹೀಗೇ ಮಾಡುವುದರಿಂದ ಮನುಕುಲ ಶುದ್ಧವಾಗುತ್ತದೆ ಎಂದು ತಮ್ಮ ಆಶೀರ್ವಚನದಲ್ಲಿ ಅನೇಕ ಉದಾಹರಣೆಗಳನ್ನು ಹೇಳಿ ಬಹು ಸ್ವಾರಸ್ಯಕರವಾಗಿ ದೀಕ್ಷೆಯ ಬಗ್ಗೆ ವಿವರಿಸಿದರು. ಅದನ್ನು ಕೇಳಿ ಮೊದಲ ದಿನವೇ ರಾಜಸ್ಥಾನದ ನೂರುಮಂದಿ ಲಿಂಗದೀಕ್ಷೆ ಪಡೆದರು. ಅವರಲ್ಲಿ ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಮತ್ತು ಜಂಗಮರೂ ಸೇರಿದ್ದರು. ಜಗದ್ಗುರುಗಳು ರಾಜಸ್ಥಾನದ ಗಂಗಾಪುರ ನಗರದಲ್ಲಿ ಧರ್ಮಸಭೆ ನಡೆಸಿದರು.

ದೇಶದ ಏಕತೆಯಲ್ಲಿ ವೀರಶೈವರ ಪಾತ್ರ ಹಿರಿದು — ವಿಜಯ ಕರ್ನಾಟಕ, 8-8-2011

ಜಗದ್ಗುರುಗಳು-ದೇಶದ ಅಖಂಡತೆ ಕಾಪಾಡುವುದರಲ್ಲಿ ವೀರಶೈವರ ಪಾತ್ರ ಹಿರಿದು, ಏಕೆಂದರೆ ಪಂಚಾಚಾರ್ಯರು ಕರ್ನಾಟಕ, ಉತ್ತರಾಂಚಲ, ಉತ್ತರಪ್ರದೇಶ, ಮಧ್ಯಪ್ರದೇಶ, ಆಂಧ್ರಪ್ರದೇಶದಲ್ಲಿ ರಾಷ್ಟ್ರೀಯ ಪಂಚಪೀಠಗಳನ್ನು ಸ್ಥಾಪಿಸಿ-"ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ" ಎಂದು ಸಾರಿದ್ದಾರೆ. ಶಿವಾದ್ವೈತ ಸಿದ್ಧಾಂತ ಬೋಧಿಸಿ ಎಲ್ಲರಿಗೂ ಇಷ್ಟಲಿಂಗ ಧರಿಸುವಂತೆ ಪ್ರೇರಣೆ ನೀಡುವ ಮೂಲಕ ಸಮಾನತೆಯ ಸಂದೇಶ ಸಾರಿದ್ದಾರೆ. ವೀರಶೈವ ಧರ್ಮೀಯರು ಭಾಷೆ, ಪ್ರಾಂತಗಳ ಸಂಕುಚಿತ ಭಾವನೆ ತೊರೆದು ಅಖಂಡ ಭಾರತದ ಸ್ವಾಭಿಮಾನ ಬೆಳೆಸಿಕೊಳ್ಳಲು ಕರೆ ನೀಡಿದರು.

ರಾಜಸ್ಥಾನ್, ಹರಿಯಾಣ ಪಂಜಾಬ, ಉತ್ತರಪ್ರದೇಶ, ಗುಜರಾತ್ ಪ್ರಾಂತಗಳಲ್ಲಿನ ವೀರಶೈವ ಜಂಗಮ ಸಮಾಜ ಬಾಂಧವರಿಗೆ ದೀಕ್ಷೆಕೊಟ್ಟು ವೀರಶೈವ ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಈ ರಾಜ್ಯಗಳಲ್ಲಿ ಧರ್ಮಪ್ರಚಾರದಲ್ಲಿ ತೊಡಗಿರುವುದಾಗಿ ಜಗದ್ಗುರುಗಳು ತಿಳಿಸಿದರು.

ಜಂಗಮ ಸಾಕ್ಷಾತ್ ಶಿವಸ್ವರೂಪಿ : ಕಾಶೀ ಶ್ರೀಗಳು

ವಿಜಯ ಕರ್ನಾಟಕ, 10-8-2011



ರಾಜಸ್ಥಾನದ ಹಿಂಡೋನ್ ಸಿಟಿಯಲ್ಲಿ ನಡೆದ ಜಂಗಮ ವಟುಗಳ ಅಯ್ಯಾಚಾರ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಇದ್ದರು.

ವೀರಶೈವ ಧರ್ಮದಲ್ಲಿ ಗುರು, ಲಿಂಗ ಮತ್ತು ಜಂಗಮರನ್ನು ಶಿವನ ಮೂರು ರೂಪಗಳು ಎಂದು ಪರಿಗಣಿಸಲಾಗಿದೆ. ಹಾಗಾಗಿ ಜಂಗಮನು ಶಿವ ಸ್ವರೂಪ ಎಂದು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಹೇಳಿದರು.

ಹಿಂಡೋನ ಸಿಟಿಯಲ್ಲಿ ಹಮ್ಮಿಕೊಂಡಿದ್ದ ಜಂಗಮ ವಟುಗಳು ಅಯ್ಯಾಚಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಕಾಶೀ ಶ್ರೀಗಳು ಮಾತನಾಡಿದರು.

ವೀರಶೈವ ಧರ್ಮದಲ್ಲಿ ಜಂಗಮನ ಪಾತ್ರ ಮಹತ್ವದ್ದಾಗಿದೆ. ಜಂಗಮನೆಂದರೆ ಶಿವನನ್ನು ತನ್ನ ಆತ್ಮರೂಪವಾಗಿ ತಿಳಿದುಕೊಂಡ ಶಿವಜ್ಞಾನಿ ಎಂದರ್ಥ. ಸ್ವಯಂ ಜಂಗಮ, ಚರ ಜಂಗಮ ಮತ್ತು ಪರಜಂಗಮ ಎಂಬುದು ಶಿವಜ್ಞಾನಿಯ ಮೂರು ಅವಸ್ಥೆಗಳು ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಇಂತಹ ಉತ್ಕೃಷ್ಟ ಸ್ಥಿತಿಯನ್ನು ಪಡೆದ ಜಂಗಮನು ಸಾಕ್ಷಾತ್ ಶಿವಸ್ವರೂಪಿಯೇ ಆಗಿರುತ್ತಾನೆ. ಇಂತಹ ಜ್ಞಾನಿಗಳ ವಂಶವೇ ಇಂದು ಜಂಗಮ ವಂಶವೆಂದು ಕರೆಯಲ್ಪಡುತ್ತಿದೆ ಎಂದರು. ಜಂಗಮ ವಂಶದಲ್ಲಿ ಜನಿಸಿದ 8 ವರ್ಷದ ಬ್ರಹ್ಮಚಾರಿ ವಟುಗಳಿಗೆ ವಿಧಿವತ್ತಾಗಿ ಅಯ್ಯಾಚಾರ ಸಂಸ್ಕಾರ ಮಾಡಲಾಗುತ್ತದೆ. ನಂತರ ಸಂಸ್ಕೃತ ಭಾಷೆಯ ಜತೆಗೆ ಧರ್ಮಶಾಸ್ತ್ರವನ್ನು ಸಹ ಅಭ್ಯಾಸ ಮಾಡಿಸಲಾಗುವುದು. ಧರ್ಮ ಹಾಗೂ ಆಧ್ಯಾತ್ಮ ವಿದ್ಯೆಯಲ್ಲಿ ಪಾರಂಗತರಾದ ಇವರೇ ಸಮಾಜಕ್ಕೆ ಧರ್ಮ ಬೋಧನೆ ಮಾಡುತ್ತ ಮುಂದೆ ಜಗತ್ತಿನಲ್ಲಿ ಪೂಜ್ಯತೆ ಪಡೆದುಕೊಳ್ಳುತ್ತಾರೆ. ವೀರಶೈವ ಧರ್ಮದಲ್ಲಿ ಇಂತಹ ಜ್ಞಾನಿ ಜಂಗಮರಿಂದಲೇ ಎಲ್ಲ ಧಾರ್ಮಿಕ ವಿಧಿ-ವಿಧಾನಗಳನ್ನು ಮಾಡಿಸುವ ಪರಂಪರೆ ನಡೆದುಬಂದಿದೆ ಎಂದು ಅವರು ತಿಳಿಸಿದರು.

ಅಯ್ಯಾಚಾರ ಸಂಸ್ಕಾರವನ್ನು ಪಡೆದ ವಟುಗಳಿಗೆ ಧರ್ಮದಂಡ ಮತ್ತು ಜೋಳಿಗೆ ಅನುಗ್ರಹಿಸಿ, ಸಮಾಜದಿಂದ ದಾನವಾಗಿ ಬಂದ ಧನ, ಧಾನ್ಯಗಳನ್ನು ಜಂಗಮನು ತನ್ನ ಮತ್ತು ಪರಿವಾರದ ಉದರ ನಿರ್ವಹಣೆಗಾಗಿ ಬಳಸದೇ ಸಮಾಜದ ದುರ್ಬಲ ವರ್ಗದ ಜನರ ಕಲ್ಯಾಣಕ್ಕಾಗಿ ಬಳಸಬೇಕು. ಅಂದಾಗ ಜೋಳಿಗೆಗೆ ಮಹತ್ವ ಬರುವುದು ಎಂದು ಶ್ರೀಗಳು ಹೇಳಿದರು.

ಅಯ್ಯಾಚಾರ ಸಂಸ್ಕಾರದಲ್ಲಿ 21 ಜನ ರಾಜಸ್ಥಾನದ ಬ್ರಹ್ಮಚಾರಿ ವಟುಗಳಿಗೆ ಶಾಂತವೀರಲಿಂಗ ಶಿವಾಚಾರ್ಯರು ಇಷ್ಟಲಿಂಗವನ್ನು ಧಾರಣೆಮಾಡಿ ಪಂಚಾಕ್ಷರ ಮಂತ್ರೋಪದೇಶ ಮಾಡಿದರು.





ಜಂಗಮ ವಟುಗಳಿಗೆ ಅಯ್ಯಾಚಾರ

ಮತ್ತೊಂದು ದಿನ ಹಿಂಡೋನ್ ಸಿಟಿಯಲ್ಲಿ ಹಮ್ಮಿಕೊಂಡಿದ್ದ ಅಯ್ಯಾಚಾರ ಕಾರ್ಯದಲ್ಲಿ ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು – ವೀರಶೈವ ಧರ್ಮದಲ್ಲಿ ಗುರು–ಲಿಂಗ–ಜಂಗಮರನ್ನು ಶಿವನ ಮೂರು ರೂಪಗಳು ಎಂದು ಪರಿಗಣಿಸಲಾಗಿದೆ. ಹಾಗಾಗಿ ಜಂಗಮರೆನಿಸಿದ ನೀವುಗಳು ಸಾಕ್ಷಾತ್ ಶಿವನ ಸ್ವರೂಪಿಗಳು. ವೀರಶೈವ ಧರ್ಮದಲ್ಲಿ ಜಂಗಮರ ಪಾತ್ರ ಮಹತ್ವದ್ದಾಗಿದೆ. ಜಂಗಮನೆಂದರೆ ಶಿವನನ್ನು ತನ್ನ ಆತ್ಮರೂಪ ಎಂದು ತಿಳಿದಿರುವ ಶಿವಜ್ಞಾನಿ ಎಂದರ್ಥ. ಇಂತಹ ಉತ್ಕೃಷ್ಟ ಸ್ಥಿತಿಯನ್ನು ಪಡೆದ ಜಂಗಮನು ಸಾಕ್ಷಾತ್ ಶಿವರೂಪಿ ಆಗಿರುತ್ತಾನೆ. ಇಂತಹ ಜ್ಞಾನಿಗಳ ವಂಶವೇ ಇಂದು ಜಂಗಮ ವಂಶವೆಂದು ಕರೆಯಲ್ಪಟ್ಟಿದೆ. 8ನೇ ವರ್ಷಕ್ಕೆ ದೀಕ್ಷಾಸಂಸ್ಕಾರ ಮಾಡಿ ಸಂಸ್ಕೃತ ಭಾಷೆಯ ಜೊತೆಗೆ ಧರ್ಮಶಾಸ್ತ್ರವನ್ನು ಸಹ ಅಭ್ಯಾಸ ಮಾಡಿಸಲಾಗುವುದು. ಧರ್ಮ ಹಾಗೂ ಆಧ್ಯಾತ್ಮ ವಿದ್ಯೆಯಲ್ಲಿ ಪಾರಂಗತರಾದವರೇ ಸಮಾಜಕ್ಕೆ ಧರ್ಮಭೋಧನೆ ಮಾಡುತ್ತಾ ಪೂಜ್ಯರೆನಿಸಿಕೊಳ್ಳುತ್ತಾರೆ. ಇಂತವರಿಂದಲೇ ಎಲ್ಲಾ ಧಾರ್ಮಿಕ ವಿಧಿವಿಧಾನಗಳನ್ನು ಮಾಡಿಸುವ ಪರಂಪರೆ ನಡೆದುಬಂದಿದೆ – ಎಂದು ಜಂಗಮ ಅರ್ಥದಿಂದ ಹಿಡಿದ ಜಂಗಮರ ಕರ್ತವ್ಯದವರೆಗೂ ಅವರಿಗಿರುವ ಮಹತ್ವವನ್ನು ಮನಮುಟ್ಟುವಂತೆ ವಿವರಿಸಿದ್ದನ್ನು ಸಾವಿರಾರು ಜಂಗಮ ವಂಶಸ್ಥರು ಶ್ರದ್ಧೆಯಿಂದ ಆಲಿಸಿದರು.



ಜಯಪುರದ ವಿಮಾನ ನಿಲ್ದಾಣದಲ್ಲಿ ಜಗದ್ಗುರುಗಳನ್ನು ರಾಜಾಸ್ಥಾನದ ಮಹಿಳೆಯರು ಕುಂಭ ಹೊತ್ತು ಸ್ವಾಗತಿಸುತ್ತಿರುವುದು.



ಜಗದ್ಗುರುಗಳು ಜಯಪುರಕ್ಕೆ ಆಗಮಿಸಿದಾಗ ಸಾರೋಟಿನಲ್ಲಿ ಮೆರವಣಿಗೆ ಮಾಡಿದರು.



ರಾಜಾಸ್ಥಾನ ರಾಜ್ಯದ ಜಯಪುರಕ್ಕೆ ಜಗದ್ಗುರುಳು ಪ್ರಥಮವಾಗಿ ಆಗಮಿಸಿದಾಗ ಸಾರೋಟ್‌ನಲ್ಲಿ ಕುಳ್ಳಿರಿಸಿ ಮೆರವಣಿಗೆಯಲ್ಲಿ ಸಾಗಿದಾಗಿನ ದೃಶ್ಯ



ಜಯಪುರದಲ್ಲಿ ಜಗದ್ಗುರುಗಳು ಸಭೆಗೆ ಆಗಮಿಸುತ್ತಿರುವುದು.



ರಾಜಾಸ್ಥಾನದ ಮಹಿಳೆಯರು ಇಷ್ಟಲಿಂಗ ಮಹಾಶಿವಪೂಜೆಯಲ್ಲಿ ಪಾಲ್ಗೊಂಡಿದ್ದರು.



ಹಿಂಡೋನಸಿಟಿಯಲ್ಲಿ ಧರ್ಮಸಭೆಯಲ್ಲಿ ಕಾಶೀ ಜಗದ್ಗುರುಗಳು ಭಕ್ತರನ್ನು ಆಶೀರ್ವದಿಸುತ್ತಿರುವುದು.



ಜಗದ್ಗುರುಗಳು ತುಲಾಭಾರ ನಡೆದಾಗ 56 ಬಗೆಯ ತಿಂಡಿ ತಿನಿಸುಗಳನ್ನು ತಯಾರಿಸಿ ಜಗದ್ಗುರುಗಳಿಗೆ ಅರ್ಪಿಸಿದರು

ಈ ಮೊದಲೇ ಏರ್ಪಡಿಸಿದಂತೆ 11–8–2011ರಂದು ಜಗದ್ಗುರುಗಳ ಜನ್ಮೋತ್ಸವದ ಅಂಗವಾಗಿ ಏರ್ಪಡಿಸಿದ್ದ ರಾಷ್ಟ್ರೀಯ ವೀರಶೈವ ಮಹಾಸಮ್ಮೇಳನವನ್ನು ಜಗದ್ಗುರುಗಳು ಉದ್ಘಾಟಿಸಿದರು

ದೇವರು, ಧರ್ಮ ರಾಷ್ಟ್ರ ಪ್ರೀತಿಸಿ

ವಿಜಯ ಕರ್ನಾಟಕ, 13–8–2011



ರಾಜಸ್ಥಾನದ ಹಿಂಡೋನ್ ಸಿಟಿಯಲ್ಲಿ ನಡೆದ ರಾಷ್ಟ್ರೀಯ ವೀರಶೈವ ಮಹಾಸಮ್ಮೇಳನ ಉದ್ಘಾಟನೆ ಸಮಾರಂಭದಲ್ಲಿ ಕಾಶೀ ಜಗದ್ಗುರುಗಳು ಇದ್ದಾರೆ.

ಇದುವರೆಗೂ ಜಗದ್ಗುರುಗಳು ವೀರಶೈವದ ದೀಕ್ಷೆ, ಶಿವಪೂಜೆ, ಜಂಗಮರ ಬಗ್ಗೆ ತಮ್ಮ ಆಶೀರ್ವಚನದಲ್ಲಿ ತಿಳಿಸುತ್ತಾ ಬಂದವರು–ಇಂದು ನೆರೆದಿದ್ದ ಭಕ್ತರನ್ನು ಕುರಿತು. ಭಾರತ ಧರ್ಮಭೂಮಿ, ಇಲ್ಲಿ ಪ್ರಜೆಗಳು ತಮ್ಮ ದೇವರು ಮತ್ತು ಧರ್ಮವನ್ನು ಪ್ರೀತಿಸುತ್ತಾರೆ. ಅದೇ ರೀತಿ ರಾಷ್ಟ್ರವನ್ನು ಪ್ರೀತಿಸಬೇಕು ಎಂದು ಹೇಳುತ್ತಾ ಈ ಭಾರತ ಎಲ್ಲಾ ಧರ್ಮಗಳನ್ನು ಸಮಾನ ಗೌರವದಿಂದ ಕಂಡಿದೆ. ಸರ್ವಧರ್ಮೀಯರು ಸಮಾನವಾಗಿ ರಾಷ್ಟ್ರವನ್ನೇ ಪ್ರೀತಿಸಬೇಕು ಎಂದರು.

ಈ ಸಮಯದಲ್ಲಿ ಭ್ರಷ್ಟಾಚಾರ ನಿರ್ಮೂಲನಕ್ಕಾಗಿ ಪ್ರಾಣಾರ್ಪಣೆ ಮಾಡಲು ಹೋರಾಡಿರುವ ಅಣ್ಣಾಹಜಾರೆಯ ಬಗ್ಗೆ ತಿಳಿಸುತ್ತಾ – ಪ್ರತಿಯೊಬ್ಬರಲ್ಲೂ ರಾಷ್ಟ್ರಭಕ್ತಿಯನ್ನು ಬೆಳೆಸಬೇಕೆಂದು ಕಳಕಳಿಯಿಂದ ಮನವಿಮಾಡಿದರು. ಸಂಕುಚಿತ ಭಾವನೆ ತೊರೆದು ಸರ್ವರೂ ಸರ್ವರನ್ನು ಪ್ರೀತಿಸುವ ಮೂಲಕ ರಾಷ್ಟ್ರವನ್ನು ಪ್ರೀತಿಸಿ ರಾಷ್ಟ್ರದ ಅಖಂಡತೆ ಕಾಪಾಡಬೇಕೆಂದರು.

ಈ ಸಮಾರಂಭಕ್ಕೆ ರಾಜಸ್ಥಾನದ ರಾಜ್ಯಪಾಲರ ಪುತ್ರ ಶೈಲೇಶ ಪಾಟೀಲ ಆಗಮಿಸಿದ್ದರು. ಐದು ಸಾವಿರಕ್ಕೂ ಹೆಚ್ಚು ಜನರು ಉತ್ಸವ ಮತ್ತು ಸಭೆಯಲ್ಲಿ ಪಾಲ್ಗೊಂಡಿದ್ದರೆಂದು ವರದಿಯಾಗಿತ್ತು.

ಗುಜರಾತ್ ಹಾಗೂ ಮಹಾರಾಷ್ಟ್ರಗಳಲ್ಲಿ ಜಗದ್ಗುರುಗಳ ಪ್ರವಾಸ

ಹಿಂದೆ ಮಹಾರಾಷ್ಟ್ರ ಮತ್ತು ಗುಜರಾತ್ ಎರಡು ಬೇರೆ ಬೇರೆ ರಾಜ್ಯಗಳಾಗುವ ಮುನ್ನ ಒಂದೇ ಮಹಾರಾಷ್ಟ್ರ ರಾಜ್ಯವಾಗಿತ್ತು. ಆಗಿನಿಂದಲೂ ಮಹಾರಾಷ್ಟ್ರಕ್ಕೂ ಕಾಶೀಪೀಠಕ್ಕೂ ನಿಕಟ ಸಂಬಂಧವಿದ್ದಿತು. ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರು 14–11–48 ರಿಂದ 2–10–1989 ರವರೆಗೆ ಒಟ್ಟು 41 ವರ್ಷಗಳವರೆಗೆ ಪೀಠಾಧ್ಯಕ್ಷರಾಗಿದ್ದರು. ಆಗಿನಿಂದಲೇ ಮಹಾರಾಷ್ಟ್ರದಲ್ಲಿ ಸಂಚರಿಸಿ ಧರ್ಮಜಾಗೃತಿಯ ಜೊತೆಗೆ ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ಮಾಡುತ್ತಾ ಬಂದಿದ್ದರು. ಇವರ ಕಾಲದಲ್ಲೇ ಮಹಾರಾಷ್ಟ್ರದ ಅಮರಾವತಿ ನಗರದಲ್ಲಿ ಮಹಾರಾಷ್ಟ್ರ ರಾಜ್ಯ ವೀರಶೈವ ಪರಿಷತ್‌ನ ಅಧಿವೇಶನವು 28–12–1963 ರಿಂದ 30–12–1963ರ ವರೆಗೆ ಮೂರು ದಿನಗಳಕಾಲ ಹಮ್ಮಿಕೊಳ್ಳಲಾಗಿತ್ತು. ಮಹಾರಾಷ್ಟ್ರದಲ್ಲಿ ಅಲ್ಪಸಂಖ್ಯಾತರಾಗಿರುವ ವೀರಶೈವ ಸಮಾಜದ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಅಭ್ಯುದಯದ ಬಗ್ಗೆ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿತ್ತು.

ಇದೇ ಹಾದಿಯಲ್ಲಿ ಇಂದಿನ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಮಹಾಸ್ವಾಮಿಗಳು ಸಾಗಿ–ಹಿಂದಿನ ಜಗದ್ಗುರುಗಳ ಎಲ್ಲಾ ಯೋಜನೆಗಳಿಗೆ ಮರುಹುಟ್ಟು ನೀಡಿ–ಹೆಚ್ಚು ಹೆಚ್ಚು ವ್ಯಾಪಕವಾಗಿ ವೀರಶೈವ ಧರ್ಮ ಪ್ರಚಾರ ಕೈಗೊಂಡಿದ್ದು. ಅನುಷ್ಠಾನಗೊಳಿಸಿದರು.

ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಕಾಶೀಪೀಠದ ಅಧಿಕಾರ ಸ್ವೀಕರಿಸಿದ ನಂತರ 48 ದಿನಗಳವರೆಗೆ ಒಂದು ಮಂಡಲಾನುಷ್ಠಾನವನ್ನು ಕೈಗೊಂಡಿದ್ದರು. ಈ ಸಂದರ್ಭದಲ್ಲಿ ಡಾ. ಚಂದ್ರಶೇಖರ ಕಪಾಳೆಯವರನ್ನು ತಮ್ಮ ಜೊತೆ ಶ್ರೀಪೀಠದಲ್ಲಿರಿಸಿಕೊಂಡು

ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥಕ್ಕೆ ಮರಾಠಿ ವಾಕ್ಯವನ್ನು ಸಿದ್ಧಪಡಿಸಿದರು. ಹಿಂದೆ 1905ರಲ್ಲಿ ವಾರದ ಮಲ್ಲಪ್ಪನವರು ಇದೇ ಮರಾಠಿ ವಾಕ್ಯವನ್ನು ದೆ॥ ಮಲ್ಲಿಕಾಜುನ ಶಾಸ್ತ್ರಿಗಳವರಿಂದ ಬರೆಯಿಸಿ ಪ್ರಕಟಿಸಿದ್ದರು. ಆದರೆ ಇಂದಿನ ಕಾಶೀಜಗದ್ಗುರುಗಳು ಶ್ರೀ ಸಿದ್ಧಾಂತ ಶಿಖಾಮಣಿ ಮೂಲ ಗ್ರಂಥ ಹಾಗೂ ಶ್ರೀಮರಿತೋಂಟದಾರ್ಯರ ಸಂಸ್ಕೃತ ವ್ಯಾಖ್ಯಾನ ಇವೆರಡಕ್ಕೂ ಮರಾಠೀ ಭಾವಾನುವಾದವನ್ನು ಮಾಡಿಸಿ ಡಾ. ಚಂದ್ರಶೇಖರ ಕಪಾಳೆಯವರ ಸಹಯೋಗದೊಂದಿಗೆ ಹೊಸ ಪರಿಷ್ಕರಣ ತಯಾರಿಸಿದರು.



ಸೊಲ್ಲಾಪುರದಲ್ಲಿ 1990ರಲ್ಲಿ ಕಾಶೀಜಗದ್ಗುರುಗಳು ಶ್ರಾವಣ ಮಾಸದಲ್ಲಿ ಪ್ರಥಮ ಅನುಷ್ಠಾನ

ಜಗದ್ಗುರುಗಳು ಮಹಾರಾಷ್ಟ್ರಕ್ಕೆ ಪಾದಾರ್ಪಣ ಮಾಡಿದ್ದು – ಶ್ರೀ ಸಿದ್ಧಾಂತ ಶಿಖಾಮಣಿ ಮರಾಠಿ ಗ್ರಂಥದೊಂದಿಗೆ – ಎನ್ನುವುದನ್ನು ಮರೆಯುವಂತಿಲ್ಲ. 1990ರ ಶ್ರಾವಣ ಮಾಸದಲ್ಲಿ ಸೊಲ್ಲಾಪುರದಲ್ಲಿ ಬಾಳೆಹೊನ್ನೂರು ಜಗದ್ಗುರು ಪ್ರಸನ್ನ ರೇಣುಕ ವೀರರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳವರ ಹಾಗೂ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಮರಾಠಿಗೆ ಅನುವಾದಗೊಂಡಿದ್ದ 'ಶ್ರೀ ಸಿದ್ಧಾಂತ ಶಿಖಾಮಣಿ' ಗ್ರಂಥವನ್ನು ಆನೆಮೇಲಿರಿಸಿ ವೈಭವದಿಂದ ಉತ್ಸವಮಾಡಿ – ಗ್ರಂಥದ ಉದ್ಘಾಟನೆ ಮಾಡಲಾಯಿತು. ಉದ್ಘಾಟನೆ ಆದ ದಿನವೇ ಗ್ರಂಥ ಮಾರಾಟ ದಾಖಲೆಯನ್ನು ನಿರ್ಮಿಸಿತು. ಕಾಶೀ ಜಗದ್ಗುರುಗಳವರ 48 ದಿನಗಳ ಅನುಷ್ಠಾನದ ಫಲವೇ 'ಶ್ರೀ ಸಿದ್ಧಾಂತ ಶಿಖಾಮಣಿ'ಯ ಮರಾಠಿ ಗ್ರಂಥ. ಇಂದು ಈ ಗ್ರಂಥವು ಮಹಾರಾಷ್ಟ್ರದ ಸಹಸ್ರಾರು ವೀರಶೈವರ ಮನೆಮನೆಗಳಲ್ಲಿ ರಾರಾಜಿಸುತ್ತಿದೆ.

ಕಾಶೀ ಜಗದ್ಗುರುಗಳವರು ಪ್ರೌಢ ಶಿಕ್ಷಣವನ್ನು ಸೊಲ್ಲಾಪುರದಲ್ಲೇ ಮಾಡಿದ್ದರು. ಅನೇಕ ವರ್ಷಗಳು ಸೊಲ್ಲಾಪುರದಲ್ಲೇ ಇದ್ದ ಕಾರಣ – ತಮ್ಮ ಅದ್ವಿತೀಯ ವಾಕ್ ಚಾತುರ್ಯದಿಂದ ಅಲ್ಲಿನ ಜನಮನ ಗೆದ್ದಿದ್ದರು. ಕಾಶೀ ಜಗದ್ಗುರುಗಳವರ ಶ್ರೀ ಸಿದ್ಧಾಂತ ಶಿಖಾಮಣಿ' ಅಧ್ಯಾತ್ಮ ಪ್ರವಚನವೆಂದು ತಿಳಿದರೆ ಸಾಕು–ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನ ಸೇರುತ್ತಿದ್ದರು. ಹೀಗಿರುವಾಗ ತಮ್ಮೆಲ್ಲರ ಪ್ರೀತಿಗೆ ಪಾತ್ರರಾದ ಸ್ವಾಮಿಗಳು ಇಂದು ಕಾಶೀ ಜಗದ್ಗುರುಗಳಾಗಿ ಅಧಿಕಾರ ಸ್ವೀಕರಿಸಿದ ನಂತರ ಮೊಟ್ಟಮೊದಲ ಬಾರಿಗೆ ಸೊಲ್ಲಾಪುರಕ್ಕೆ ಅಗಮಿಸುವ ಸುದ್ದಿಯೇ ವಿದ್ಯುತ್ ಸಂಚಾರವಾದಂತೆ ಆಗಿ–ಇಡೀ ಸೊಲ್ಲಾಪುರವೇ ಸಿಂಗರಿಸಿಕೊಂಡು ಕಾಶೀ ಜಗದ್ಗುರುಗಳನ್ನು ಭವ್ಯವಾದ ರೀತಿಯಲ್ಲಿ ಸ್ವಾಗತಿಸಿದ್ದನ್ನು ಜಗದ್ಗುರುಗಳು ಬೆಂಗಳೂರಿಗೆ ಎಂಟು ವರ್ಷಗಳ ನಂತರ ಬಂದಾಗ ನಮ್ಮೆಲ್ಲರ ಬಳಿ ಹೇಳಿದ್ದರು.

ಮಹಾರಾಷ್ಟ್ರದ ಪ್ರಮುಖ ದಿನ ಪತ್ರಿಕೆಗಳಲ್ಲೆಲ್ಲಾ ಈ ವಿಷಯ ಪ್ರಕಟಗೊಂಡಿತು. ಕಾಶೀ ಜಗದ್ಗುರುಗಳು ಸಂಗ್ರಹಿಸಿರುವ ಪತ್ರಿಕೆಗಳಲ್ಲಿ – ಮರಾಠಿ ಪತ್ರಿಕೆಗಳು ತೀರ ಕಡಿಮೆ ಸಂಖ್ಯೆಯಲ್ಲಿದೆ. ಕರ್ನಾಟಕದಲ್ಲಿ ಎಷ್ಟು ಪತ್ರಿಕೆಗಳನ್ನು ಈ 25 ವರ್ಷಗಳಲ್ಲಿ ಸಂಗ್ರಹಿಸಿರುವರೋ ಅಷ್ಟೇ ಪ್ರಮಾಣದಲ್ಲಿ ಮರಾಠಿ ಪತ್ರಿಕೆಗಳನ್ನು ಸಂಗ್ರಹಿಸಿದ್ದಾರೆ– ಜಗದ್ಗುರುಗಳು. ಇಲ್ಲಿ ದೊರೆತಿರುವ ಕೆಲವೇ ಪತ್ರಿಕೆಗಳ ಆಧಾರದಿಂದ ಮಹಾರಾಷ್ಟ್ರ ಗುಜರಾತ್ ರಾಜ್ಯಗಳಲ್ಲಿ ಜಗದ್ಗುರುಗಳ ಧಾರ್ಮಿಕ ಶೈಕ್ಷಣಿಕ, ಸಾಮಾಜಿಕ ಕಾರ್ಯಗಳ ಬಗ್ಗೆ ಸಂಗ್ರಹಿಸಿಕೊಡಲಾಗಿದೆ.

28-12-2007

दै.झुंजार नेता शुक्रवार, दि २८ डिसेंबर २००७

ಈ ಪತ್ರಿಕೆಯಲ್ಲಿ ಅಂಬಾಜೋಗಾಯಿನಲ್ಲಿ ತಿಳಿಸಿರುವಂತೆ ನಾಲ್ವರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿತು. ಜಗದ್ಗುರು ಮರುಳಾರಾಧ್ಯ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು, ಜಗದ್ಗುರು ರಾವಲ್ ಭೀಮಾಶಂಕರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ



चार जगद्गुरुच्या आडव्या पालखी सोहळयास प्रारंभ


आज मुख्यमंत्र्यांची उपस्थिती

शंभूलिंग शिवाचार्य यांच्या द्वादश पट्टाभिषेक सोहळ्या निमित्त पाच जगद्गुरुंच्या आडवी पालखी मध्ये जमलेल्या भाविकासोबत अंबाजोगाईचे नगराध्यक्ष राजकिशोर मोदी व शंभुलिंग शिवाचार्यजी महाराज (छाया : भारत फोटो, अंबा)

ಮಹಾಸ್ವಾಮಿಗಳು ಹಾಗೂ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಭಾಗಿಯಾಗಿ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿದ್ದರು. ಸಂಜೆಯ ಧಾರ್ಮಿಕ ಸಭೆ ಮಹಾರಾಷ್ಟ್ರ ಮುಖ್ಯಮಂತ್ರಿ ಶ್ರೀ ವಿಲಾಸರಾವ್ ದೇಶಮುಖರು ಉಪಸ್ಥಿತರಿದ್ದರು. 40,000ಕ್ಕೂ ಹೆಚ್ಚು ಭಕ್ತಾದಿಗಳು ಭಾಗವಹಿಸಿದ್ದರು.

ಮೋಹಲ್‌ತಾಳಿ ನಾರಖೇಡದಲ್ಲಿ ಅನುರಾಧಾ ದೇವಿ ದೇಶಮುಖ ಅವರ 25 ವರ್ಷಗಳ ಆಧ್ಯಾತ್ಮಸೇವೆ ಪೂರ್ಣವಾದ ಕಾರಣ 'ಅನುರಾಧದೇವಿ ಆಣಿ ದಿವ್ಯ' ಎಂಬ ಗ್ರಂಥಗಳನ್ನು ಜಗದ್ಗುರುಗಳು ಬಿಡುಗಡೆಗೊಳಿಸಿದರು.

राजकारणाच्या शुद्धीकरणासाठी धर्मकारणाची गरज: आ. देशमुख



मसले चौधरीत अनुराधा देशमुख यांच्या अध्यात्म सेवेची २५ वर्षे पूर्ण झाल्याबद्दल 'अनुराधादेवी आणि दिव्या' या ग्रंथाच्या प्रकाशनप्रसंगी काशीचे जगद्गुरु डॉ. चंद्रशेखर शिवाचार्य, आ. दिलीपराव देशमुख, मुख्यमंत्री विलासराव देशमुख यांच्या पत्नी वैशाली देशमुख, गहिनीनाथ महाराज, आ. पाशा पटेल, आ. धनाजी साठे, सुवर्णा देशमुख आदी.

29-6-2009

आई-वडिलांची सेवा करणाराच यशस्वी



अक्कलकोट येथे आयोजित व्याख्यानमालेत जगद्गुरु डॉ. चंद्रशेखर शिवाचार्य महास्वामीजींनी मार्गदर्शन केले. यावेळी रेणूक शिवाचार्य महास्वामीजी, श्रीकंठ शिवाचार्य महास्वामीजी उपस्थित होते.

ಅಕ್ಕಲಕೋಟ್‌ನಲ್ಲಿ ಶಂಕರ್ ಪ್ರತಿಷ್ಠಾನವು ಏರ್ಪಡಿಸಿದ್ದ ಗಣೇಶ ಉತ್ಸವದಲ್ಲಿ ಜಗದ್ಗುರುಗಳು ಗಣೇಶ ಉತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ವಿಚಾರ ಸಂಕಿರಣದ ಸಾನ್ನಿಧ್ಯವಹಿಸಿ, ತಂದೆ-ತಾಯಿ ಮಕ್ಕಳ ಸಂಬಂಧ ಶಿವ ಪಾರ್ವತಿ ಗಣೇಶನಂತಿರಬೇಕು. ಯಾರು ತಾಯಿ ತಂದೆಯರ ಸೇವೆ ಮಾಡುವರೋ ಅವರು ಜೀವನದಲ್ಲಿ ಯಶಸ್ಸು ಕಾಣುತ್ತಾರೆ. ಗಣೇಶ-ತಂದೆ ತಾಯಿಯ ಪ್ರದಕ್ಷಿಣೆ ಮೂರು ಬಾರಿ ಮಾಡಿ ಇಡೀ ಭೂಮಂಡಲವನ್ನೇ ಸುತ್ತಿದೆ ಎಂದು ಹೇಳಿದ ಉದಾಹರಣೆಯನ್ನು ಜಗದ್ಗುರುಗಳು ಹೇಳಿ ತಂದೆ ಮಕ್ಕಳ ಸಂಬಂಧದ ಎಳೆ ತೆಳುವಾಗಲು ಮುಖ್ಯ ಕಾರಣ ಮಕ್ಕಳನ್ನು ಚಿಕ್ಕಂದಿನಲ್ಲಿ day care centreಗೆ ಬಿಡುತ್ತಾರೆ. ದೊಡ್ಡವರಾದ ಮೇಲೆ ಅದೇ ಮಕ್ಕಳು ವೃದ್ಧರಾದ ತಾಯಿ ತಂದೆಯರನ್ನು ವೃದ್ಧಾಶ್ರಮಕ್ಕೆ ಕಳುಹಿಸುತ್ತಾರೆ. ಗಣೇಶ ಉತ್ಸವ ಮಾಡಿ, ಅದರಂತೆ ತಾಯಿ-ತಂದೆ ಮಕ್ಕಳ ಬಾಂಧವ್ಯ ಹೆಚ್ಚು ಹೆಚ್ಚು ಬೆಸೆದರೆ ಇಂತಹ ಉತ್ಸವದ ಆಚರಣೆ ಸಾರ್ಥಕವಾಗುತ್ತದೆ ಎಂದು ಗಣೇಶೋತ್ಸವದ ಮಹತ್ವವನ್ನು ತಿಳಿಸಿದರು.

2-7-2009 ರಿಂದ 10-7-2009 ರವರೆಗೆ ಸೊಲ್ಲಾಪುರದಲ್ಲಿ ಜಗದ್ಗುರುಗಳವರ ಇಷ್ಟಲಿಂಗ ಮಹಾ ಶಿವಪೂಜೆ ಸಂಜೆ ಆಧ್ಯಾತ್ಮಿಕ ಪ್ರವಚನ ಏರ್ಪಡಿಸಲಾಗಿತ್ತು. ಸಮಾರಂಭವನ್ನು ವೀರಶೈವ ಮಹೇಶ್ವರ ವೇದಿಕೆ ಮಂಡಲಿಯವರು ಏರ್ಪಡಿಸಿದ್ದರು.

2-3-2010 ರಿಂದ 9-3-2010ರವರೆಗೆ ಕಂಬಲವಾಡಿಯಲ್ಲಿ ಏರ್ಪಡಿಸಲಾಗಿದ್ದ ನಾಥ್ ಷಷ್ಠಿ ಮಹೋತ್ಸವದಲ್ಲಿ ಏರ್ಪಡಿಸಲಾಗಿದ್ದ ಚಕ್ರಿಭಜನ್‌ಗಳನ್ನು ಕೇಳಿ ಸಾನ್ನಿಧ್ಯವಹಿಸಿದ್ದ ಜಗದ್ಗುರುಗಳು ಬಹಳ ಸಂತೋಷಪಟ್ಟರು. ಸಂಸಾರವೆಂಬ ಚಕ್ರದಿಂದ ಪಾರಾಗಬೇಕಿದ್ದರೆ ಇಂತಹ ಭಜನೆಗಳನ್ನು ಭಕ್ತಿಯಿಂದ ಹಾಡುತ್ತಾ, ಕೇಳುತ್ತಾ ಇದ್ದಲ್ಲಿ ಮೋಕ್ಷ ದೊರಕುವುದೆಂದು ಜಗದ್ಗುರುಗಳು ತಿಳಿಸಿದರು.

11-3-2010ರಲ್ಲಿ ಲಾತೂರ್‌ನಲ್ಲಿ ಕಾಶೀ ವಿಶ್ವ ಹಿಂದೂ ವಿದ್ಯಾಲಯವು 3 ದಿನಗಳ ಅಖಿಲ ಭಾರತೀಯ ಶಾಸ್ತ್ರಾರ್ಥ ಪರಿಷತ್ ವಿಚಾರಸಂಕಿರಣ ಏರ್ಪಡಿಸಿದ್ದಿತು. ಕಾಶೀ ಜಗದ್ಗುರುಗಳು ಸಾನ್ನಿಧ್ಯವಹಿಸಿ ತಮ್ಮ ಆಶೀರ್ವಚನದಲ್ಲಿ ಶಾಸ್ತ್ರಗಳನ್ನು ತಿಳಿಯುವುದರಿಂದ ಕರ್ತವ್ಯ ಮತ್ತು ಅಕರ್ತವ್ಯಗಳ ಬಗ್ಗೆ ಅರಿವು ಮೂಡುತ್ತದೆ. ಲೌಕಿಕ ಹಾಗೂ ಪಾರಲೌಕಿಕ ಬದುಕನ್ನು ತಿಳಿದುಕೊಳ್ಳಲು ಶಾಸ್ತ್ರಗಳನ್ನು ಅಭ್ಯಾಸ ಮಾಡಬೇಕೆಂದರು.

ಎಲ್ಲಾ ಶಾಸ್ತ್ರಗಳೂ ವೇದಗಳೂ ಆಗಮಗಳೂ ಒಂದೇ. ಅವುಗಳ ನಡುವೆ ಯಾವ ವಿರೋಧಗಳೂ ಇಲ್ಲ. ಪ್ರತಿಯೊಂದೂ ಪರಸ್ಪರ ಪೂರಕವಾಗಿವೆ. ವಿದ್ವಾಂಸರು ಯಾರನ್ನು ಯಾವುದನ್ನು ಟೀಕಿಸಬಾರದೆಂದರು.

ಈ ಮೂರು ದಿನಗಳಲ್ಲಿ ಚರ್ಚಿಸಲಾದ ವಿಷಯಗಳು ವೇದಗಳು, ವ್ಯಾಕರಣ, ಸಾಹಿತ್ಯ, ನ್ಯಾಯ, ಮೀಮಾಂಸ, ಸಾಂಖ್ಯ, ಯೋಗ, ಧರ್ಮಶಾಸ್ತ್ರ, ಜ್ಯೋತಿಷ್ಯ, ಚಾರ್ವಾಕ, ಜೈನ, ಬುದ್ಧತತ್ವ, ಆಗಮ ಮತ್ತು ವೇದಾಂತದ ವಿವಿಧ ಶಾಖೆಗಳು. ಈ ಎಲ್ಲಾ ಶಾಖೆಗಳೂ ಮಾನವನ

ಬದುಕಿನ ಮಾರ್ಗದರ್ಶನಗಳು ಎಂದು ಹೇಳಿದರು. ಒಂದೊಂದು ಶಾಖೆಯನ್ನು ಒಂದೊಂದೇ ವಾಕ್ಯದಲ್ಲಿ ವಿವರಿಸಿದ ರೀತಿ ಬಹು ಸ್ವಾರಸ್ಯಕರವಾಗಿತ್ತು. ವ್ಯಾಕರಣಶಾಸ್ತ್ರವು ಭಾಷೆಯ ಬೆಳವಣಿಗೆಗೆ, ನ್ಯಾಯ ಶಾಸ್ತ್ರವು ತೀಕ್ಷ್ಣ ಬುದ್ಧಿಮತ್ತೆಗೆ, ಸಾಂಖ್ಯ ಮತ್ತು ಯೋಗವು ಬುದ್ಧಿ ಮತ್ತು ಮನಸ್ಸಿನ ಹೊಂದಾಣಿಕೆಗೆ, ಮೀಮಾಂಸ ಮತ್ತು ಧರ್ಮಶಾಸ್ತ್ರಗಳು ಧಾರ್ಮಿಕ ಕ್ರಿಯಾಕಲ್ಪ (ಧಾರ್ಮಿಕ ಚಟುವಟಿಕೆಗಳು), ಜೈನ ಮತ್ತು ಬೌದ್ಧಶಾಸ್ತ್ರಗಳು ಸಂಸಾರ ಅಪಾರ ಅಂದರೆ ಸಂಸಾರದಿಂದ ವೈರಾಗ್ಯ ತಿಳುವಳಿಕೆಗೆ, ವೇದಾಂತವು ಶಿವ ಜೀವರ ಐಕ್ಯತೆಗೆ.

ಈ ಎಲ್ಲಾ ದರ್ಶನಗಳೂ ಸಾರುವ ಸಂದೇಶ ಒಂದೇ ಎಂದು ತಿಳಿಸಿದ ಜಗದ್ಗುರುಗಳು ಎಲ್ಲವೂ ಮಾನವನಿಗೆ ಸರಿಯಾದ ಮಾರ್ಗದಲ್ಲಿ ಸಾಗುವಂತೆ ತಿಳಿಸುತ್ತವೆ ಎಂದರು. ಈ ವಿಚಾರಸಂಕಿರಣದಲ್ಲಿ 100ಕ್ಕೂ ಹೆಚ್ಚು ವಿದ್ವಾಂಸರು ಪಾಲ್ಗೊಂಡಿದ್ದರು. ಕರ್ನಾಟಕ, ಆಂಧ್ರ, ತಮಿಳುನಾಡು, ಬಿಹಾರ ಮತ್ತು ಕಾಶೀ ಕ್ಷೇತ್ರದಿಂದ ವಿದ್ವಾಂಸರು ಆಗಮಿಸಿದ್ದರು.



वसमत येथे आडवी पालखी मिरवणुकीत सहभागी झालेला जनसमुदाय. तर दुसऱ्या छायाचित्रात धर्मसभेस उपस्थित जनसमुदायाचे दृश्य. छाया/ आशीष फोटो

24–3–2010ರಂದು ವಾಸ್‌ಮತದಲ್ಲಿ ಅಲ್ಲಿನ ವೀರಶೈವ ಸಮಾಜವು ಕಾಶಿ ಹಾಗೂ ಶ್ರೀಶೈಲ ಉಭಯ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವವನ್ನು ತೊರಿಯ ಸಂಸ್ಥಾನ ಮಠದ ನೂತನ ಪಟ್ಟಾಧಿಕಾರ ಮಹೋತ್ಸವದ ಸಲುವಾಗಿ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ತಮ್ಮ ಆಶೀರ್ವಚನದಲ್ಲಿ ಗುರುಗಳ ಆಶೀರ್ವಾದ ಮತ್ತು ಉತ್ತಮ ಗುರಿಯನ್ನು ಹೊಂದಿದಾಗ ಮನುಷ್ಯ ಏನನ್ನು ಬೇಕಾದರೂ ಸಾಧಿಸಬಹುದೆಂದರು.

13–4–2010 ಕೊಲ್ಲಾಪುರದಲ್ಲಿ ಭಕ್ತ ಗೋರಕುಂಬಾರನ ಪುಣ್ಯತಿಥಿ ಸಂದರ್ಭದಲ್ಲಿ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ಅನುಗ್ರಹಿಸಿದರು.

बुबनाळला आडवी पालखी सोहळा उत्साहात

हजारो भाविकांचा सहभाग : काशी, श्रीशैलच्या जगद्गुरूंचे आगमन



बुबनाळ (ता. शिरोळ) : येथील वीरशैव लिंगायत समाजाच्या वतीने श्रीशैल व श्री काशी धर्मपीठाचे जगद्गुरू यांची आडवी पालखी सोहळा काढण्यात आली. (सुरेश मेंगे : सकाळ छायाचित्रसेवा)

16–4–2010ರಂದು ಕುರುಂದವಾಡ ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ಜರುಗಿತು.

26–4–2010ರಂದು ಸಾಂಗ್ಲಿಯಲ್ಲಿಯೂ ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿತು.

वीरशैव समाजाच्या वतीने धर्मजागृती अभियान सुरू

अड्डु पालखी सोहळा : ढोल-ताशा, झांजपथकासह मिरवणूक

17–4–2010ರಂದು ಕೊಲ್ಲಾಪುರದಲ್ಲಿ ಕಾಶೀ, ಶ್ರೀಶೈಲ ಪೀಠಗಳ ಜಗದ್ಗುರುಗಳು 2 ದಿನಗಳು ವಾಸ್ತವ್ಯ ಹೂಡಿ ದೀಕ್ಷಾ, ಆಶೀರ್ವಚನ, ಧರ್ಮಸಭೆ ನಡೆಸಿದರು.



डॉ. चंद्रशेखर शिवाचार्य महास्वामी, डॉ. चन्नसिद्धराम शिवाचार्य महास्वामी

श्री काशी व श्रीशैल्य पीठाचे जगद्गुरू मंगळवारी कोल्हापुरात

वीरशैव समाजातर्फे धर्मसभेचे आयोजन

22ರಂದು ಉಭಯ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿತು. ಆ ಸಂದರ್ಭದಲ್ಲಿ ತಮ್ಮ ಆಶೀರ್ವಚನದಲ್ಲಿ ಕಾಶೀ ಜಗದ್ಗುರುಗಳು– ಪ್ರಾಚೀನ ಪರಂಪರೆ, ನಂಬಿಕೆ ಪ್ರಕಾರ ದೇವರು ಹಾಗೂ ಗುರುಗಳನ್ನು ಸಮಾನವಾಗಿ ಕಂಡು ಭಕ್ತಿಯಿಂದ ನಡೆದುಕೊಳ್ಳುವ ರೂಢಿ ಬೆಳೆದು ಬಂದಿದೆ. ದೇವರ ಹಾಗೂ ಗುರುಗಳ ಪಲ್ಲಕ್ಕಿ ಉತ್ಸವ ಮಾಡಲು ಯಾರನ್ನೂ ಒತ್ತಾಯಿಸುವುದಿಲ್ಲ. ಶ್ರದ್ಧೆ ಮತ್ತು ಭಕ್ತಿಯಿರುವ ಭಕ್ತಾದಿಗಳು ತಾವಾಗಿಯೇ ನಡೆಸಿಕೊಡುತ್ತಾರೆಂದು ತಿಳಿಸಿದರು.

2010 ಜುಲೈ 1ನೇ ತಾರೀಖಿನಿಂದ 10ನೇ ತಾರೀಖಿನವರೆಗೆ ರಷ್ಯಾದಲ್ಲಿ ವೀರಶೈವ ಧರ್ಮಸ್ಥಾಪನೆ ಹಾಗೂ ಶಿವಯೋಗ ತರಬೇತಿಗೆ ಜಗದ್ಗುರುಗಳು ಹೊರಟಿರುವ ಸಮಾಚಾರ ಅಲ್ಲಿನ ಪತ್ರಿಕೆಗಳಾದ ತರುಣ ಭಾರತ್, ಸಂಚಾರ್, ಸಕಾಲ್ ಮುಂತಾದ ಪತ್ರಿಕೆಗಳಿಂದ ತಿಳಿದ ಮಹಾರಾಷ್ಟ್ರ ವೀರಶೈವ ಸಮಾಜದಲ್ಲಿ ಹರ್ಷ ಮೂಡಿತು.

ಗಣತಿಯಲ್ಲಿ ಒಳಪಂಗಡ ಬರೆಸದಿರಿ

ಕೊಡೋಲಿಯಲ್ಲಿ ವೀರಶೈವ ಧರ್ಮ ಪ್ರಚಾರ ಅಭಿಯಾನ ಉದ್ಘಾಟನೆ

ವಿಜಯ ಕರ್ನಾಟಕ, 18-6-2010



ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ವಾರಣಾ ನಗರದ ಸಮೀಪದ ಕೊಡೋಲಿಯಲ್ಲಿ ಹಮ್ಮಿಕೊಂಡಿದ್ದ ವೀರಶೈವ ಧರ್ಮ ಪ್ರಚಾರ ಅಭಿಯಾನವನ್ನು ಶ್ರೀಶೈಲಪೀಠದ ನೂತನ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಶನಿವಾರ ಉದ್ಘಾಟಿಸಿದರು. ಕಾಶೀ ಜಗದ್ಗುರು ಮತ್ತಿತರರಿದ್ದರು.

18-6-2010

ಜನಗಣತಿಯಲ್ಲಿ ವೀರಶೈವ ಧರ್ಮದ ಎಲ್ಲ ಒಳಪಂಗಡಗಳದವರು ಧರ್ಮದ ಕಾಲಂನಲ್ಲಿ ವೀರಶೈವ/ಲಿಂಗಾಯತ ಎಂದೇ ಬರೆಯಿಸಬೇಕು ಎಂದು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮತ್ತು ಶ್ರೀಶೈಲದ ನೂತನ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ಅಧಿಕಮಾಸ ನಿಮಿತ್ತ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ವಾರಣಾ ನಗರದ ಸಮೀಪದ ಕೊಡೋಲಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ವೀರಶೈವ ಧರ್ಮ ಪ್ರಚಾರ ಅಭಿಯಾನ ಉದ್ಘಾಟಿಸಿ ಅವರು ಮಾತನಾಡಿದರು. ವೀರಶೈವ ಧರ್ಮ ಸನಾತನವಾಗಿದ್ದು, ಇದರ ಅನುಯಾಯಿಗಳು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಮುಂತಾದ ಹಲವಾರು ಪ್ರಾಂತಗಳಲ್ಲಿ ವಾಸವಾಗಿದ್ದಾರೆ. ಆದರೆ ಇಲ್ಲಿಯವರೆಗೆ ನಡೆದ ಜನಗಣತಿಯಲ್ಲಿ ಧರ್ಮದ ಕಾಲಂನಲ್ಲಿ ಧರ್ಮದ ಹೆಸರನ್ನು ಸರಿಯಾಗಿ ಉಲ್ಲೇಖಿಸದ ಕಾರಣ ವೀರಶೈವರ ಅಂಕಿ-ಸಂಖ್ಯೆಗಳನ್ನು ನಿಖರವಾಗಿ ಸರಕಾರದ ಗಮನಕ್ಕೆ ತರಲು ಸಾಧ್ಯವಾಗಿಲ್ಲ. ಅಂತೆಯೇ ವೀರಶೈವ ಎಲ್ಲ ಒಳ ಪಂಗಡದವರು ಸರಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಆದ್ದರಿಂದ ವೀರಶೈವ ಧರ್ಮದ ಎಲ್ಲ ಒಳ ಪಂಗಡದವರು ಜನಗಣತಿಯ ಧರ್ಮದ ಕಾಲಂನಲ್ಲಿ ವೀರಶೈವ ಲಿಂಗಾಯತ ಎಂದು ಒಂದೇ ರೀತಿಯಾಗಿ ನಮೂದಿಸುವ ಮೂಲಕ ವೀರಶೈವರ ಅಂಕಿ-ಸಂಖ್ಯೆಗಳನ್ನು ನಿಖರವಾಗಿ ಸರಕಾರದ ಗಮನಕ್ಕೆ ತಂದು ಎಲ್ಲ ಒಳಪಂಗಡದವರಿಗೂ ಸರಕಾರಿ ಸೌಲಭ್ಯಗಳು ದೊರೆಯುವಂತೆ ಮಾಡಲು ಸರಕಾರಕ್ಕೆ ಒತ್ತಾಯಿಸಬಹುದು ಎಂದು ಉಭಯ ಜಗದ್ಗುರುಗಳು ಹೇಳಿದರು. ಧರ್ಮ ಪ್ರಚಾರ ಅಭಿಯಾನದಲ್ಲಿ ವೈಶಾಳದ ಡಾ. ಶಿವಯೋಗಿ ಶಿವಾಚಾರ್ಯರು, ಶ್ರೀ ಮಹಾದೇವ ಶಿವಾಚಾರ್ಯರು, ಧಾರೇಶ್ವರದ ಶ್ರೀ ಶಿವಾನಂದ ಶಿವಾಚಾರ್ಯರು ಪಾಲ್ಗೊಂಡಿದ್ದರು.

25ರವರೆಗೆ ಅಭಿಯಾನ

ಏ. 15ರಿಂದ ಪ್ರಾರಂಭವಾದ ಈ ಅಭಿಯಾನ ಏ. 25ರವರೆಗೆ ನಡೆಯಲಿದ್ದು, ಮಹಾರಾಷ್ಟ್ರದ ಬುಬನಾಳ, ಕೊಡೋಲಿ, ಗುಣಕಿ, ಚಿಂಚವಾಡ, ಕಸಬೆಡಿಗ್ರಜ, ಕೊಲ್ಹಾಪುರ, ಉದಗಾಂವ, ಬಾಗಣಿ ಮತ್ತು ಸಾಂಗಲಿ ನಗರಗಳಲ್ಲಿ ನಡೆಯಲಿವೆ. ಪ್ರತಿಯೊಂದು ಊರಿನಲ್ಲಿ ಸಂಜೆ ಉಭಯ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ, ರಾತ್ರಿ ಧರ್ಮ ಜಾಗೃತಿ ಸಮಾರಂಭ, ಮರುದಿನ ಪ್ರಾತಃಕಾಲ ಶಿವದೀಕ್ಷೆ ಮತ್ತು ಪರಮ ರಹಸ್ಯ ಗ್ರಂಥದ ಪಾರಾಯಣ ನೆರವೇರಲಿವೆ. ನಿತ್ಯ 500 ರಿಂದ 1000ರವರೆಗೆ ಜನರು ಲಿಂಗದೀಕ್ಷೆ ಪಡೆಯುತ್ತಲಿದ್ದಾರೆ. ಮೂರು ವರ್ಷಕ್ಕೊಮ್ಮೆ ಬರುವ ಈ ಅಧಿಕ ಮಾಸದಲ್ಲಿ ಯಾವುದೇ ಲೌಕಿಕ ಮಂಗಲ ಕಾರ್ಯವನ್ನು ಮಾಡಲು ಬರುವುದಿಲ್ಲ. ಕಾರಣ ಸರ್ವರೂ ತೀರ್ಥಯಾತ್ರೆ, ಜಪ, ತಪ, ದಾನ-ಧರ್ಮಗಳನ್ನು ಮಾಡಿ ಪುಣ್ಯಶಾಲಿಗಳಾಗಬೇಕೆಂದು ಉಭಯ ಸನ್ನಿಧಿಯವರು ತಿಳಿಸಿದ್ದಾರೆ.







ಮಹಾರಾಷ್ಟ್ರದ ಸಾಂಗಲಿ ಜಿಲ್ಲಾ ಜತ್ ನಗರದ ಶ್ರೀ ಮಲ್ಲಿಕಾರ್ಜುನ ಕಳಸಾರೋಹಣ ಮಹೋತ್ಸವವನ್ನು ಶ್ರೀ ಕಾಶೀಜಗದ್ಗುರುಗಳವರು ನೆರವೇರಿಸುತ್ತಿರುವರು. ಜೊತೆಗೆ ಶ್ರೀ ಷ.ಬ್ರ. ಶಿವಲಿಂಗ ಶಿವಾಚಾರ್ಯರು ಬೆಳ್ಳಂಕಿಯವರು ಇದ್ದಾರೆ.




ಮಹಾರಾಷ್ಟ್ರದ ಜೌಂದ್‌ನಾಗ್‌ನಾಥ್‌ನಲ್ಲಿ ಪಾರಾಯಣ ಗ್ರಂಥ ಬಿಡುಗಡೆ



ಮಹಾರಾಷ್ಟ್ರದ ಜೌಂದ್‌ನಾಗ್‌ನಾಥ್ ಜ್ಯೋತಿರ್ಲಿಂಗದ ಮೇಲೆ ಪೂಜೆ ಆದನಂತರ ಪಾರಾಯಣ ಗ್ರಂಥವನ್ನು ಶ್ರೀ ಶೈಲ ಹಾಗೂ ಜಗದ್ಗುರುಗಳು ತೋರಿಸುತ್ತಿರುವುದು.



ಮಹಾರಾಷ್ಟ್ರದ ಜೌಂದ್‌ನಾಗ್‌ನಾಥ್ ಜ್ಯೋತಿರ್ಲಿಂಗಕ್ಕೆ ಶ್ರೀ ಶೈಲ ಹಾಗೂ ಕಾಶೀಜಗದ್ಗುರುಗಳವರು ಅಭಿಷೇಕ ಮಾಡುತ್ತಿರುವುದು.



ಲಾತೋರ್ ಕಾಶೀವಿಶ್ವನಾಥದೇವಸ್ಥಾನ ಉದ್ಘಾಟನೆಗೆ ಜಗದ್ಗುರುತ್ರಯರನ್ನು ಮೆರವಣಿಗೆಯಲ್ಲಿ ಕರೆದೊಯ್ಯುತ್ತಿರುವುದು.



ಸೊಲ್ಲಾಪುರದ ವೀರಶೈವ ಮಾಹೇಶ್ವರ ವೈದಿಕ ಮಂಡಲಿ 1-7-2012ರಲ್ಲಿ ಉಜ್ಜಯಿನಿ, ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳಿಂದ ಪಾರಾಯಣ ಗ್ರಂಥ ಬಿಡುಗಡೆ



ವೀರಶೈವ ಮಹೇಶ್ವರ ವೈದಿಕ್ ಮಂಡಳಿ ಸೊಲ್ಲಾಪುರ ಉಜ್ಜಯಿನಿ ಮತ್ತು ಶ್ರೀ ಶೈಲ ಜಗದ್ಗುರುಗಳಿಂದ ಕಾಶೀ ಜಗದ್ಗುರುಗಳಿಗೆ ಸನ್ಮಾನ



ವಾಸಿಂ ನಗರದಲ್ಲಿ ಪಾರಾಯಣ ಗ್ರಂಥ ಬಿಡುಗಡೆ



ವಾಸಿಂ ನಗರದಲ್ಲಿ ಪಾರಾಯಣ ಗ್ರಂಥದ ಮೆರವಣಿಗೆ ಆದನಂತರ ಪಲ್ಲಕ್ಕಿಯಲ್ಲಿ ಬಿಡುಗಡೆ ಕಾಯುತ್ತಿರುವುದು



ವಾಸಿಂ (ಮಹಾರಾಷ್ಟ್ರ) ನಗರದಲ್ಲಿ ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳವರ ಮೆರವಣಿಗೆ



ಪರಳಿ ವೈದ್ಯನಾಥ ಜ್ಯೋತಿರ್ಲಿಂಗ ಪುಣ್ಯಕ್ಷೇತ್ರದಲ್ಲಿ ಶ್ರೀಶೈಲ ಹಾಗೂ ಕಾಶೀಜಗದ್ಗುರುಗಳಿಗೆ ಅಲಂಕೃತ ಜೀಪ್‌ಗಳ ಮೇಲೆ ಮೆರವಣಿಗೆ ಮಾಡಿ ಸ್ವಾಗತಿಸಿದರು. ಪರಳಿಯ ಯುವ ಮಂಚ್ ದ್ವಾರ



ಪರಳಿ ವೈದ್ಯನಾಥ್ ಜ್ಯೋತಿರ್ಲಿಂಗದಲ್ಲಿ ಶ್ರೀಶೈಲ ಮತ್ತು ಕಾಶೀ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಪಾರಾಯಣ ಗ್ರಂಥ ಬಿಡುಗಡೆ



ಮುಂಬಯಿಯಲ್ಲಿ ಸಿದ್ಧಾಂತ ಶಿಖಾಮಣಿ ದಂಡಿ



ಯರವಾಡ (ಸತಾರಜಿಲ್ಲೆ) ಮಹಾರಾಷ್ಟ್ರದಲ್ಲಿ ಕಾಶೀ ಜಗದ್ಗುರುಗಳನ್ನು ಸ್ವಾಗತಿಸುತ್ತಿರುವುದು.



31–3–09 ರಿಂದ 2–4–09 ರವರೆಗೆ ಪುಣೆಯ ಪಿಂಪಿರೀ ಚಿಂಚವಾಡ್‌ನಲ್ಲಿ ನಡೆದ ಯುಗಮಾನೋತ್ಸವದಲ್ಲಿ ಪಂಚಾಚಾರ್ಯರುಗಳು.



ಮಹಾರಾಷ್ಟ್ರ ರಾಜ್ಯದಲ್ಲಿ ಪಾರಾಯಣ ಗ್ರಂಥದ ಪಲ್ಲಕ್ಕಿ ಉತ್ಸವ



ಮಹಾರಾಷ್ಟ್ರದ ಯವದತ್‌ಮಾಳದಲ್ಲಿ ಜಗದ್ಗುರುಗಳು



ಬಾರ್ಶಿ ಗ್ರಂಥ ಬಿಡುಗಡೆ



ಮಹಾರಾಷ್ಟ್ರದ ಲಾತೋರ್ ನಗರದಲ್ಲಿ ಡಾ. ಸ್ವಾಮಿ ಇರುದರ ಬಾಲರುಗ್ಣಾಲಯ ಮತ್ತು ನವಜಾತ ಶಿಶುಗಳ ಅತಿದಕ್ಷತಾ ವಿಭಾಗವನ್ನು ಶ್ರೀ ಕಾಶೀಜಗದ್ಗುರುಗಳವರು ಉದ್ಘಾಟನೆಯನ್ನು ನೆರವೇರಿಸಿದರು. ಜೊತೆಗೆ ಜೌಸಾಹಿರೇಮಠದ ಶ್ರೀ ಷ.ಬ್ರ. ಶಾತವಾರಲಿಂಗ ಶಿವಾಚಾರ್ಯರು ಮತ್ತು ಊರ ಪ್ರಮುಖರು ಇದ್ದಾರೆ.

ಸತ್ಸಂಗದಲ್ಲಿ ವಿಶ್ವದಲ್ಲಿ ಶಾಂತಿ : ಕಾಶಿ ಶ್ರೀ

ವಿಜಯ ಕರ್ನಾಟಕ, 25–9–2010



ಮಹಾರಾಷ್ಟ್ರದ ಲಾತೂರ ನಗರದಲ್ಲಿ ಹೊಟಗಿ ಬೃಹನ್ಮಠದ ಯೋಗಿರಾಜೇಂದ್ರ ಶಿವಾಚಾರ್ಯ ಶ್ರೀಗಳ ತಪೋನುಷ್ಠಾನ ಮುಕ್ತಾಯ ಸಮಾರಂಭದಲ್ಲಿ ಕಾಶೀ ಶ್ರೀಗಳೂ ಸೇರಿದಂತೆ ಮತ್ತಿತರ ಮಠಾಧೀಶರು ಇದ್ದರು.

21–8–2010 : ಜಗದ್ಗುರುಗಳವರ 64ನೇ ಜನ್ಮೋತ್ಸವವನ್ನು ಲಾತೂರಿನಲ್ಲಿ ಬಹು ಸಂಭ್ರಮದಿಂದ ಆಚರಿಸಲಾಯಿತು. ಮರಾಠವಾಡ ಅನೇಕ ಪತ್ರಿಕೆಯ ಸಂಪಾದಕೀಯದಲ್ಲಿ ಜಗದ್ಗುರುಗಳ ವ್ಯಕ್ತಿತ್ವ ಕುರಿತು ಉತ್ತಮ ಲೇಖನವನ್ನು ಪ್ರಕಟಿಸಿದ್ದರು. ವೀರಶೈವ ಧರ್ಮದ ಪ್ರಾಚೀನತೆ, ಪಂಚಪೀಠಗಳ ಪರಂಪರೆ, ಕಾಶೀ ಪರಂಪರೆ ಇತಿಹಾಸ ದಾನ ಪತ್ರಗಳು ಹೀಗೆ ಎಲ್ಲವನ್ನು ಒಳಗೊಂಡ ಲೇಖನ ಪ್ರಕಟಗೊಂಡಿತ್ತು.

ಮಹಾರಾಷ್ಟ್ರದ ಲಾತೂರ ನಗರದಲ್ಲಿ ಹೊಟಗಿ ಬೃಹನ್ಮಠದ ಯೋಗಿರಾಜೇಂದ್ರ ಶಿವಾಚಾರ್ಯ ಶ್ರೀಗಳ ತಪೋನುಷ್ಠಾನ ಮುಕ್ತಾಯ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಪ್ರತಿಯೊಬ್ಬ ಮನುಷ್ಯನಲ್ಲಿರುವ ವಿದ್ಯೆ, ಧನ ಮತ್ತು ಶಕ್ತಿಗಳು ಅಮೂಲ್ಯ ಸಂಪತ್ತುಗಳಾಗಿವೆ. ಇವುಗಳ ಸದುಪಯೋಗದಿಂದ ರಾಷ್ಟ್ರದ ಅಭಿವೃದ್ಧಿಯಾಗಿ ಶಾಂತಿ ನೆಲೆಸಲು ಸಾಧ್ಯ ಎಂದರು. ಸತ್ಸಂಗದಿಂದ ಸಂಸ್ಕಾರ ಪಡೆದ ಮನುಷ್ಯ ತನ್ನ ವಿದ್ಯೆಯನ್ನು ಇನ್ನೊಬ್ಬರ ಜ್ಞಾನವೃದ್ಧಿಗಾಗಿ, ಧನವನ್ನು ರಾಷ್ಟ್ರ ಹಾಗೂ ಸಮಾಜದ ಹಿತಕ್ಕಾಗಿ ಮತ್ತು ಶಕ್ತಿಯನ್ನು ಅನ್ಯರ ರಕ್ಷಣೆಗಾಗಿ ಬಳಸುತ್ತಾನೆ. ಸತ್ಸಂಗ, ಸಂಸ್ಕಾರವಿಲ್ಲದ ಮನುಷ್ಯ ವಿದ್ಯೆಯನ್ನು ವಿವಾದಕ್ಕೆ, ಧನವನ್ನು ಅಹಂಕಾರಕ್ಕೆ ಮತ್ತು ಶಕ್ತಿಯನ್ನು ಪರರ ಪೀಡೆಗಾಗಿ ಉಪಯೋಗಿಸುತ್ತಾನೆ ಎಂದನು.

ಇಂದು ಜಗತ್ತಿನಾದ್ಯಂತ ವಿದ್ಯೆ-ಧನ ಮತ್ತು ಶಕ್ತಿಗಳ ದುರುಪಯೋಗವಾಗುತ್ತಿದೆ. ಇದರಿಂದ ಅಶಾಂತಿ ತಾಂಡವವಾಡುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದ ಶ್ರೀಗಳು, ಶಾಂತಿ ನೆಲೆಸಲು ಸತ್ಸಂಗಕ್ಕೆ ಆದ್ಯತೆ ನೀಡಲಾಗಿದೆ ಎಂದರು.

ಚಾತುರ್ಮಾಸದಲ್ಲಿ ಪ್ರತಿಯೊಬ್ಬ ಮಠಾಧಿಪತಿಗಳೂ ನಿತ್ಯ ಪೂಜಾಕರ್ಮದ ಜತೆಗೆ ಸತ್ಸಂಗ ನಡೆಸಿಕೊಂಡು ಬರುತ್ತಿದ್ದಾರೆ. ಅದೇ ಪರಂಪರೆಯನ್ನು ಯೋಗಿರಾಜೇಂದ್ರ ಶಿವಾ ಚಾರ್ಯರು 55 ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಇವರು ತಪೋಮೂರ್ತಿಗಳು ಎಂದು ಕಾಶೀ ಶ್ರೀಗಳು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀಶೈಲ ಪೀಠದ ನೂತನ ಪೀಠಾಧಿಪತಿ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಭಗವತ್ಪಾದರು ಮಾತನಾಡಿ, ಪ್ರತಿಯೊಬ್ಬರೂ ಶಕ್ತ್ಯಾನುಸಾರ ತಪಸ್ಸು ಆಚರಿಸಬೇಕು ಎಂದರು.

ಮರದೂರ್‍ಪ, ನಾಗಣಸೂರ, ಔಸಾ, ಚಿಟಗುಪ್ಪಾ ಮಣೂರ, ಅಂಬಾಜೋಗಾಯಿ, ಸೋನಪೀಠ, ಜಿಂತೂರ ಮತ್ತಿತರ ಗ್ರಾಮಗಳ ಪಟ್ಟಾಧ್ಯಕ್ಷರು ಧರ್ಮ ಸಂದೇಶ ನೀಡಿದರು. ಸಾವಿರಾರು ಭಕ್ತರು ಉತ್ಸವ ಮತ್ತು ಸತ್ಸಂಗದಲ್ಲಿ ಪಾಲ್ಗೊಂಡಿದ್ದರು.

11-7-2011 ಮತ್ತು **12-7-2011** ಈ ಎರಡು ದಿನಗಳ ಕಾಲ ಸೊಲ್ಲಾಪುರದಲ್ಲಿ ಜಗದ್ಗುರುಗಳು ಧಾರ್ಮಿಕ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ – ವೀರಶೈವ ಸಿದ್ಧಾಂತದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿದ್ದಲ್ಲದೆ, ಆರೋಗ್ಯ ಶಿಬಿರ, ರಕ್ತದಾನ ಶಿಬಿರಗಳಲ್ಲಿ ಪಾಲ್ಗೊಂಡಿದ್ದರು. ವಿಶ್ವಶಾಂತಿ ಹಾಗೂ ಲೋಕಕಲ್ಯಾಣಾರ್ಥ ಈ ಎಲ್ಲಾ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಜಗದ್ಗುರುಗಳ ಸಾನ್ನಿಧ್ಯದಲ್ಲಿ ನಡೆಸಲಾಗಿತ್ತು.



ಸೊಲ್ಲಾಪುರ : ಮಲ್ಲಿಕಾರ್ಜುನ ಮಂದಿರ, ಬಾಳಿವೇಸ್, ಟಿಳಕ ಚೌಕ್, ಮದಲಾ ಮಾರುತಿ ಮಾರ್ಗದಿಂದ ಶಿವಾನುಭವ ಮಂಗಲ ಕಾರ್ಯಾಲಯದವರೆಗೆ ಸಿದ್ಧಾಂತ ಶಿಖಾಮಣಿ ತತ್ತ್ವಾಮೃತ ಮರಾಠಿ ಗ್ರಂಥವನ್ನು ಮೆರವಣಿಗೆ ಮಾಡಲಾಯಿತು. ಕಾಶೀ ಜಗದ್ಗುರು, ಶ್ರೀ ಶೈಲ ಜಗದ್ಗುರು ಪಾಲ್ಗೊಂಡಿದ್ದರು.



ಸೊಲ್ಲಾಪುರ : ಶಿವಾನುಭವ ಮಂಗಲ ಕಾರ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ತತ್ತ್ವಾಮೃತ ಮರಾಠಿ ಪಾರಾಯಣ ಗ್ರಂಥವನ್ನು ಲೋಕಾರ್ಪಣೆ ಮಾಡಲಾಯಿತು.

2011ರ ಜುಲೈ ತಿಂಗಳ ಮರಾಠಿ ಮಾಸ ಪತ್ರಿಕೆಯಾದ 'ವೀರಶೈವ ದರ್ಶನ'ದಲ್ಲಿ ಶ್ರಾವಣಮಾಸದಲ್ಲಿ ಕಾಶೀ ಜಗದ್ಗುರುಗಳವರ ತಪೋನುಷ್ಠಾನ ಹಾಗೂ ಧರ್ಮಪ್ರಚಾರ ಕೈಗೊಳ್ಳುವ ಬಗ್ಗೆ ಲೇಖನ ಬಂದಿತ್ತು.

2-7-2013ರಲ್ಲಿ ಅಮರಾವತಿಯಲ್ಲಿ ಕಾಶೀ ಹಾಗೂ ಶ್ರೀಶೈಲ ಜಗದ್ಗುರುಗಳ ರಥಯಾತ್ರೆ ವೈಭವಯುತವಾಗಿ ನಡೆದದ್ದಲ್ಲದೆ ಶ್ರೀ ಸಿದ್ಧಾಂತ ಶಿಖಾಮಣಿ ಮರಾಠಿ ಗ್ರಂಥದ ಮೆರವಣಿಗೆಯೂ ನಡೆಯಿತು.

7-7-2013 ರಂದು ಔರಂಗಾಬಾದ್‌ನ ಕುರುಂಡಾ ಗ್ರಾಮದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥ ಮೆರವಣಿಗೆ ಹಾಗೂ ಬಿಡುಗಡೆ ಸಮಾರಂಭದ ಸಾನಿಧ್ಯವನ್ನು ಜಗದ್ಗುರುಗಳು ವಹಿಸಿದರು.

25-5-2014 ರಿಂದ **31-5-2014**ರವರೆಗೆ ಮುಂಬಯಿನ ಘಾಟಕೋಪರ್‌ನ ವೀರಶೈವ ಮಹೇಶ್ವರ್ ಮಂಡಲಿಯವರು 'ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥ' ಮೆರವಣಿಗೆ ಹಾಗೂ ಕಾಶೀ ಜಗದ್ಗುರುಗಳವರ ಧರ್ಮಸಂದೇಶ ಪ್ರವಾಸವನ್ನು ಮುಂಬಯಿ ಮತ್ತು ಕೊಂಕಣಗಳಲ್ಲಿ ಏರ್ಪಡಿಸಲಾಗಿತ್ತು.



ಸೊಲ್ಲಾಪುರದ ಹೆತ್ತೂರು ನಗರದಲ್ಲಿ 20-5-14ರಿಂದ ಗ್ರಂಥ ಮೆರವಣಿಗೆ ಹಾಗೂ ಗ್ರಂಥ ಬಿಡುಗಡೆಯನ್ನು ಕಾಶೀ ಜಗದ್ಗುರುಗಳು



हत्तुरे वस्ती येथे शिवसमर्थ प्रतिष्ठान आयोजित श्री सिद्धांत शिखामणी पारायण, प्रवचन

ग्रंथांच्या दिंडीने दुमदुमला परिसर

काशीपीठाचे जगद्गुरू डॉ. चंद्रशेखर शिवाचार्य यांच्या हस्ते श्री सिद्धांत शिखामणी ग्रंथाचे प्रकाशन करण्यात आले. यावेळी उपस्थित मान्यवर. दुसऱ्या छायाचित्रात प्रवचनासाठी उपस्थित महिला समुदाय.

ನೆರವೇರಿಸಿದರು. ಸಾವಿರಾರು ಮಹಿಳೆಯರು ಕುಂಭಗಳ ಬದಲಿಗೆ ಶ್ರೀಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ತಲೆಮೇಲೆ ಹೊತ್ತು ಭಕ್ತಿಯಿಂದ ಮೆರವಣಿಗೆಯಲ್ಲಿ ಸಾಗಿದ್ದು ಹೆತ್ತೂರು ನಗರದಲ್ಲಿ ಎಲ್ಲರ ಕಣ್ಮನ ಸೆಳೆಯಿತು. 650 ಮಂದಿಗೆ ದೀಕ್ಷೆ ನೀಡಿ, ಬಿಡುಗಡೆಗೊಂಡ ಗ್ರಂಥವನ್ನು ದೀಕ್ಷಾರ್ಥಿಗಳಿಗೆ ಕೊಟ್ಟ, ದಿನಾ ಪಾರಾಯಣ ಮಾಡಿದರೆ ನಿಮ್ಮ ಸಂಕಲ್ಪ ಸಿದ್ಧಿಸುವುದೆಂದು ಹಿತವಚನವನ್ನು ಜಗದ್ಗುರುಗಳು ನುಡಿದರು. ಹೆತ್ತೂರು ನಗರದಲ್ಲಿ ನಡೆದಿರುವ ಈ ಪಾರಾಯಣ ಸಪ್ತಾಹ ಸುವರ್ಣಾಕ್ಷರಗಳಲ್ಲಿ ಬರೆಯುವಂಥದ್ದು ಎಂದು ಜಗದ್ಗುರುಗಳು ಹರ್ಷದಿಂದ ಹೇಳಿದರು. ಜೀವನದಲ್ಲಿ ಅನ್ನದಾನ ಮತ್ತು ಪಾರಾಯಣದಿಂದ ತೃಪ್ತಿಸಿಗುವುದೆಂದರು. ಇದೇ ಸಂದರ್ಭದಲ್ಲಿ ಸಿದ್ಧಾಂತ ಶಿಖಾಮಣಿ ಮರಾಠಿ ವ್ಯಾಖ್ಯಾನದೊಂದಿಗೆ ಅನುವಾದ ಗ್ರಂಥವನ್ನು ಜಗದ್ಗುರುಗಳು ಬಿಡುಗಡೆ ಮಾಡಿದರು.



धर्मग्रंथाचे पारायण केल्यास मुक्ती : काशी जगद्गुरु

हत्तुरेनगरात काढण्यात आलेल्या श्री सिध्दान्त शिखामणी ग्रंथ दिंडीत डोक्यावर ग्रंथ घेऊन सहभागी झालेल्या महिला, काशी जगद्गुरू व अन्य.

ಕಾಶೀಪೀಠದಲ್ಲಿ ಜಗದ್ಗುರುಗಳ ರಜತ ಮಹೋತ್ಸವ ಆರಂಭವಾಗುವ ಮುನ್ನ ಸೊಲ್ಲಾಪುರದಲ್ಲಿ ಪತ್ರಿಕಾ ಗೋಷ್ಠಿಯನ್ನು ನಡೆಸಿ ಜುಲೈ 7ನೇ ತಾರೀಖಿನಿಂದ ನವೆಂಬರ್ 11ನೇ ತಾರೀಖಿನವರೆಗೆ ನಡೆಸಲಾಗದ 12ಕೋಟಿ ಜಪಯಜ್ಞ ಮುಂತಾದ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ಈ ವಿಚಾರಗಳು ಮಹಾರಾಷ್ಟ್ರದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲೂ ಪ್ರಸಾರಗೊಂಡವು.

ಸೊಲ್ಲಾಪುರದಲ್ಲಿ ನಡೆದ ಧರ್ಮ ಸಭೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಜಗದ್ಗುರುಗಳು ಪುರಸ್ಕಾರ ನೀಡಿ ಗೌರವಿಸಿ ಆಶೀರ್ವದಿಸಿದರು.

ಸಾಮಾಜಿಕ ಸೇವೆ– ಡಾ. ಶಕುಂತಲಾಬಾಯಿ ಕೇಕಡೆ, ಹಿರಿಯ ಪತ್ರಕರ್ತ – ಶ್ರೀ ಅರುಣರಾಮ್ ತೀರ್‌ತಕರ್,
ಶ್ರೇಷ್ಠ ಉಪಾಧ್ಯಾಯ – ಸೇವಾತಿ ಸರ್ವಲತಾ ಬಿಶಿಕರ್, ಸಾಹಿತ್ಯ – ಡಾ. ಶಿವಶಂಕರ ಉಪಾಸೆ
ಇವರೆಲ್ಲರನ್ನು ಗುರುಗಳು ಸನ್ಮಾನಿಸಿ ಆಶೀರ್ವದಿಸಿದರು.

प्रामाणिकपणामुळे देशाचा स्वर्ग होईल

काशीजगद्गुरू डॉ. शिवाचार्य महास्वामीजी; काशीपीठाच्या पुरस्कारांचे वितरण

ಸತ್ಯವಂತರಾಗಿ ನಿಷ್ಠೆಯಿಂದ ಕಾರ್ಯಪ್ರವೃತ್ತರಾದಲ್ಲಿ ದೇಶವೇ ಸ್ವರ್ಗವಾಗಿ ಮಾರ್ಪಡುವುದು. ಇಂದಿನ ದಿನಗಳಲ್ಲಿ ಲೌಕಿಕ ಆಕರ್ಷಣೆಗೆ ಒಳಗಾಗಿ ಸಮಾಜ ಪತನದ ಹಾದಿಯಲ್ಲಿ ಸಾಗಿದೆ. ಈಗ ತೀರಾ ಅವಶ್ಯಕವಾಗಿರುವುದು ನ್ಯಾಯ ನಿಷ್ಠೆಯಿಂದ ಕೆಲಸ ಮಾಡುವುದು ಎಂದು ಕಳಕಳಿಯಿಂದ ಜನತೆಗೆ ಜಗದ್ಗುರುಗಳು ತಿಳಿಸಿದರು.

ಆಂಧ್ರ ಪ್ರದೇಶ ತೆಲಂಗಾಣದಲ್ಲಿ ಜಗದ್ಗುರುಗಳು

1997ರ ಜೂನ್ ತಿಂಗಳಲ್ಲಿ ಎರಡುವಾರಗಳ ಕಾಲ ಜಗದ್ಗುರುಗಳನ್ನು ಧರ್ಮ ಪ್ರಚಾರಕ್ಕಾಗಿ ಆಂಧ್ರ ಪ್ರದೇಶಕ್ಕೆ ಆಹ್ವಾನಿಸಿದವರು– ದಿಲ್ಲಿಯ ಅಡಿಷನಲ್ ಪೋಲಿಸ್ ಕಮಿಷನರಾದ ಶ್ರೀ ಯು.ಎಸ್.ಬಿ. ರಾವ್ ಅವರು. ಇವರು ಆಂಧ್ರಪ್ರದೇಶದ ವೀರಶೈವ ಜಂಗಮರಾಗಿದ್ದು ಸದ್ಯ ವರಿಷ್ಠ ಪೋಲಿಸ್ ಅಧಿಕಾರಿಯಾಗಿ ದೆಹಲಿಯಲ್ಲಿ ಕೆಲಸದಲ್ಲಿದ್ದಾರೆ. ಇವರು ಅನೇಕ ಸಾರಿ ಕಾಶಿಯ ಜಂಗಮವಾಡಿ ಮಠಕ್ಕೆ ಭೇಟಿ ನೀಡಿದ್ದರು. ಕಾಶೀ ಜಗದ್ಗುರುಗಳನ್ನು ದಿಲ್ಲಿಗೆ ಕರೆಯಿಸಿಕೊಂಡು ಅಲ್ಲಿಯ ಸುಪ್ರಸಿದ್ಧವಾದ ಛತ್ರಪುರದ ಕಾತ್ಯಾಯಿನಿ ಶಕ್ತಿಪೀಠದಲ್ಲಿಯೂ ಜಗದ್ಗುರುಗಳ ಆಶೀರ್ವಚನ ಏರ್ಪಡಿಸಿದ್ದರು. ಎರಡು ವರ್ಷಗಳ ಪ್ರಯತ್ನದಿಂದ ಈಗ ಕಾಶೀ ಜಗದ್ಗುರುಗಳನ್ನು ಆಂಧ್ರಪ್ರದೇಶಕ್ಕೆ ಆಹ್ವಾನ ಮಾಡಿದ್ದರು.

13–6–1997 ರಿಂದ 26–6–1997ರವರೆಗೆ ಆಂಧ್ರಪ್ರದೇಶದ ಸದಾಶಿವಪೇಟೆ, ವಿಕಾರಾಬಾದ್, ವಿಜಯವಾಡಾ, ರಾಜಮಂಡ್ರಿ, ವಿಶಾಖಪಟ್ಟಣಂ, ಕಾಕಿನಾಡಾ, ಗುಂಟೂರ, ಓಂಗಾಲ್, ನೆಲ್ಲೂರ ಕಡಪಾ, ತಿರುಪತಿ ಮತ್ತು ಅನಂತಪುರ ಈ ಎಲ್ಲಾ ಪ್ರಮುಖ ನಗರಗಳಲ್ಲಿ ಅಲ್ಲಿಯ ಭಕ್ತರ ಅಪೇಕ್ಷೆಯ ಮೇರೆಗೆ ಧರ್ಮದಂಡ ಯಾತ್ರೆಯನ್ನು ನಡೆಯಿಸಿ ಪ್ರತೀ ಗ್ರಾಮದಲ್ಲಿಯೂ ಧರ್ಮಜಾಗೃತಿ ಸಭೆ, ಶಿವದೀಕ್ಷಾ ಮತ್ತು ಅಯ್ಯಾಚಾರ ಕಾರ್ಯಕ್ರಮಗಳನ್ನು ಜಗದ್ಗುರುಗಳು ಯಶಸ್ವಿಯಾಗಿ ನೆರವೇರಿಸಿ ಆಂಧ್ರಪ್ರದೇಶದ ಜನರಲ್ಲಿ ಹೊಸ ಚೇತನ ನಿರ್ಮಾಣ ಮಾಡಿದ್ದಾರೆ. ಪಂಚಪೀಠಗಳ ಜಗದ್ಗುರುಗಳ ಕಾರ್ಯಕ್ರಮದಿಂದಾಗಿ ಬಹು ಹರ್ಷಿತರಾಗಿದ್ದಾರೆ.

ಶ್ರೀ ರಾವ್ ಸಾಹೇಬರು ತಮ್ಮ ಪತ್ನಿಯಾದ ಛಾಯಾದೇವಿಯವರೊಂದಿಗೆ ಎಲ್ಲಾ ಊರಿನ ಕಾರ್ಯಕ್ರಮದಲ್ಲಿ ಮುಂದಾಳುತನವನ್ನು ವಹಿಸಿದ್ದರು.

13–6–1997ರಲ್ಲಿ ಸದಾಶಿವಪೇಟೆಯಲ್ಲಿ ನಡೆದ ಧರ್ಮಸಭೆಯಲ್ಲಿ ಜಗದ್ಗುರುಗಳ ಆಸ್ತಿಕಭಾವನೆ ಶಾಂತಿಯ ಸಾಧನ. ಗುರು ದೇವರು ಮತ್ತು ಶಾಸ್ತ್ರಾದಿಗಳಲ್ಲಿ ಪ್ರತಿಯೊಬ್ಬರೂ ನಂಬಿಕೆ ಇಡಬೇಕು. ಆಗಲೇ ಮನುಷ್ಯನು ಸಂಸಾರದಲ್ಲಿ ಶಾಂತಿ ಪಡೆಯಲು ಸಾಧ್ಯ ಎಂದು ಹೇಳಿ ಶಿವದೀಕ್ಷೆಯ ಮಹತ್ವವನ್ನು ಇಲ್ಲಿ ಬೋಧಿಸಿದರು.

ಆಂಧ್ರಪ್ರದೇಶದಲ್ಲಿ ಸಂಚರಿಸಿ ಸನಾತನ ವೀರಶೈವ ಧರ್ಮದ ಇತಿಹಾಸ ಹಾಗೂ ಧರ್ಮ ತತ್ವಗಳನ್ನು ತಿಳಿಸುವ ಸಲುವಾಗಿ ಈ ಧರ್ಮ ಪ್ರಚಾರ ಕಾರ್ಯವನ್ನು ಕೈಗೊಂಡಿರುವುದಾಗಿ ಶ್ರೀಗಳು ತಿಳಿಸಿದರು.

ಪಂಚಪೀಠಗಳಲ್ಲಿ ಮೂರು ಪೀಠಗಳ ಜಗದ್ಗುರುಗಳು ಅಂದರೆ ಜಗದ್ಗುರು ರೇಣುಕಾಚಾರ್ಯರು ಕೊಲನಪಾಕಿಯ ಸೋಮೇಶ್ವರ ಲಿಂಗದಿಂದ, ಶ್ರೀ ಜಗದ್ಗುರು ಪಂಡಿತಾರಾಧ್ಯರು ಶ್ರೀಶೈಲ ಮಲ್ಲಿಕಾರ್ಜುನಲಿಂಗದಿಂದ, ಜ. ಏಕೋರಾಮಾರಾಧ್ಯರು ದ್ರಾಕ್ಷಾರಾಮ ಕ್ಷೇತ್ರದ ಭೀಮನಾಥ ಲಿಂಗದಿಂದ ಅವತರಿಸಿದ ಬಗ್ಗೆ ಆಗಮಗಳಲ್ಲಿ ಉಲ್ಲೇಖವಿದೆಯೆಂದು ಜಗದ್ಗುರುಗಳು ಹೇಳಿದರು.



పీఠాధిపతుల నుంచి ఆశీస్సులు అందుకుంటున్న కేంద్రమంత్రి విద్యాసాగర్‌రావు, ఎల్.రమణ, జడ్పీ చైర్మెన్ రాజేశ్వర్‌రావు



కాశీపీఠాధిపతికి మంగళహారతులతో స్వాగతం పలుకుతున్న భక్తులు, కోటి కుంకుమార్చన సందర్భంగా యాగం కోసం సిద్ధం చేస్తున్న కలశాలు, కోటి కుంకుమార్చన, విష్ణుయాగం కార్యక్రమంలో పాల్గొన్న కాశీ

శాంతి, సామరస్యాలతోనే మానవ మనుగడ

జగిత్యాల(రూరల్), నవంబర్ 19 (ఆన్‌లైన్): శాంతి సామరస్యంతోనే మానవ మనుగడ సాధ్యమౌతుందని విశ్వంలో వాటిని నెలకొల్పేందుకే విష్ణుయాగాలు నిర్వహిస్తున్నట్లు కాశీపీఠాధిపతి శ్రీశ్రీశ్రీ చంద్రశేఖర శివాచార్య మహాస్వామిజీ పేర్కొన్నారు. జగిత్యాల పట్టణంలో నంబివేణు గోపాలాచార్యులు ఆధ్వర్యంలో నిర్వహిస్తున్న కోటి కుంకుమార్చన, విష్ణుయాగంలో పాల్గొనేందుకు వచ్చిన ఆయన మంగళవారం రాత్రి 'ఆన్‌లైన్' తో మాట్లాడారు.

వ్యక్తి స్వభావ రీత్యా దుష్టుడు కాడని, పరిస్థితులు మనిషిని అలా తయారు చేస్తున్నాయని అలాంటి పరిస్థితుల నుండి వ్యక్తి జీవితాన్ని మళ్ళించేందుకే సత్సంగ కార్యక్రమాలు జరుపుతున్నామని అన్నారు. హిందూ, ముస్లిం అంటూ బేధ భావాలు చూపుతూ యుద్ధాలు చేసుకుంటూ అమాయక ప్రజల ప్రాణాలు తీస్తున్నారనీ, ఏ ధర్మంలోనూ, ఏ మతంలోనూ హింస లేదని, అన్ని మతాలు, అన్ని కులాలు శాంతిని కోరుకుంటున్నాయని అహింసను ప్రోత్సహిస్తున్నాయని అన్నారు. హిందూమతం, ముస్లీం, క్రైస్తవ మతాలు కూడా సత్యం, ధర్మం, అహింసా, ధ్యానం, జపం, ధాన ధర్మం చేయాలని, దొంగతనాలు చేయవద్దని చెడును మాట్లాడవద్దని బోధిస్తున్నాయని వాటి దిశలోనే తాము ప్రచారాన్ని చేస్తున్నామన్నారు.

పుట్టుకతో మనిషి దొంగ కాదని, హింసావాది కాదని కేవలం అక్కడి పరిస్థితులు, డబ్బు, స్వార్థబుద్ధి మనిషి ప్రభావం చూపడంతోనే చెడుదారి పడుతు న్నాడని వీరిని సన్మార్గులుగా తీర్చిదిద్దేందుకే విష్ణు యాగాలు నిర్వహిస్తున్నామని ఆయన వివరించారు. అన్నింటికీ మూలం 'మనస్సు' అని దీనివల్లే సమాజంలో అశాంతి సంఘటన చోటుచేసుకుంటున్నాయని, ఇంటిలో ఒక వ్యక్తి సన్మార్గుడు ఉంటే ఆ కుటుంబం అంతా సన్మార్గంలోనే పయనిస్తుందని ఆ కుటుంబం ద్వారా గ్రామాలు, రాష్ట్రం, దేశం బాగుపడుతుందని అలాంటి సమాజం నిర్మాణం కోసమే ఇలాంటి కార్యక్రమాలు నిర్వహిస్తున్నట్లు స్వామీజీ పేర్కొన్నారు.

నీటి స్వభావం వాస్తవంగా చల్లగా ఉంటుందని, నిప్పు పెడితే వేడిగా మారుతుందని, ఆ తరువాత మళ్ళీ చల్లగా మారుతుందని, మనిషి కూడా అలాగే పరిస్థితుల ప్రభావం వల్ల తన దైనందిత జీవితంలో మారుతున్నాడని అలాంటి మార్పు లు చోటు చేసుకోకుండా స్థిరమైన జీవితాన్ని సాగించే దిశలో మనిషి మనసు పయని ంచేలా చేసేందుకే యజ్ఞాలు, యాగాలు, కోటి కుంకుమార్చనలాంటి కార్యక్రమాలు నిర్వహిస్తున్నట్లు చంద్రశేఖర శివాచార్య స్వామీజీ వివరించారు.

కాశీపీఠాధిపతి రాకతో ప్రారంభమైన విష్ణుయాగం

జగిత్యాల, నవంబర్ 19 (ఆన్‌లైన్): శ్రీ శ్రీ శ్రీ చంద్రశేఖర శివాచార్య మహాస్వామి అయిన కాశీపీఠాధిపతి మంగళవారం జగిత్యాలకు రావడంతో సమస్త లోకక్షేమం కోసం చేస్తున్న కోటి కుంకుమార్చన విష్ణుయాగం ప్రారంభమైంది.నంబి వేణుగోపాల స్వామి ఆధ్వర్యంలో ప్రప్రథమంగా జగిత్యాల పట్టణంలో నిర్వహిస్తున్న కోటి కుంకుమార్చన కార్యక్రమానికి వివిధ ప్రాంతాల నుండి వేద పండితులు మంగళవారం ఉదయం జగిత్యాల డిగ్రీకళాశాల ఆవరణలో జరిగే విష్ణుయాగ కార్యక్రమానికి చేరుకున్నారు. ఉదయం ప్రజల సంపూర్ణ ఆరోగ్యానికై సుదర్శనేష్ఠి. ప్రజల ఆయురార్తికి వాసుదేవేష్ఠి కార్యక్రమం నిర్వహించారు. వందలాది మంది ఉదయాన్నే కుంకుమార్చన జరిగే యాగానికి విచ్చేయగా భక్తుల సౌకర్యార్థం రమణాచార్య ఆధ్వర్యంలో కార్యకర్తలకు శిక్షణ కార్యక్రమం జరిగింది. మరోవైపు యాగకలశాలను, పూజా కలశాలను సిద్ధం చేస్తుండగా స్త్రీలు కుంకుమార్చనకు కావాల్సిన ఏర్పాట్లను చేస్తుండడంతో ఆ ప్రాంతమంతా జాతరలాగా కనిపించింది. వివిధ ప్రాంతాల నుండి వచ్చిన భక్తులు శ్రీమన్నారాయణ తారకమంత్రాన్ని జపిస్తుండడంతో ఆ ప్రాంతమంతా భక్తి ప్రార్థనలతో మిన్నంటింది. మొదటిరోజు ప్రారంభమైన ప్రారంభమైన ఈ కోటికుంకుమార్చన కార్యక్రామానికి అధిక సంఖ్యలో భక్తులు పాల్గొని పూజలు నిర్వహించారు. ఈ సందర్భంగా జగిత్యాల డియస్పీ టి.సత్యానారాయణరెడ్డి ఆధ్వర్యంలో ప్రొబేషనరీ డియస్పి నారాయణ్ నాయక్, జగిత్యాల సి. ఐ.హబీబ్‌ఖాన్ ఏలాంటి అవాంఛనీయ సంఘటనలు జరుగకుండా గట్టి బందోబస్తు ఏర్పాటు చేశారు.

కాశీ పీఠాధిపతికి ఘన స్వాగతం

జగిత్యాల, నవంబర్ 19 (ఆన్‌లైన్): లోక క్షేమం కోసం, ఇష్టకార్య సిద్ధికై జగిత్యాలలో నిర్వహిస్తున్న 'గీతాజ్యోతి కోటికుంకుమార్చన' సహిత శ్రీ విష్ణు యాగం కార్యక్రమంలో పాల్గొనేందుకు జగిత్యాలకు మంగళవారం వచ్చిన కాశీ పీఠాధిపతి శ్రీశ్రీశ్రీ చంద్రశేఖర శివాచార్య మహాస్వామికి ఘన స్వాగతం లభించింది. కొత్తబస్టాండు ప్రాంతంలో నంబి వేణుగోపాలాచార్యుల ఆధ్వర్యంలో జగిత్యాల మున్సిపల్ చైర్మెన్ జి. ఆర్.దేశాయ్, న్యాయవాది జగదీశ్వర్, కౌన్సిలర్ రాజేందర్ లతోపాటు వీరశైవ ప్రముఖులు కాశీ పీఠాధిపతి చంద్రశేఖర శివాచార్య మహా స్వామికి స్వాగతం పలికారు. వందలాది మంది ఆయనకు పాదపూజలు చేయగా మహిళలు పెద్ద సంఖ్యలో మంగళ హారతులతో స్వాగతం పలికారు. కొత్త బస్టాండు నుండి ప్రధాన రహదారి మీదగా నారాయణదాసు ఆశ్రమం వరకు పెద్ద ఎత్తున మేళతాళాలతో ఊరేగింపు జరుపగా అంగడిమఠం సదాశివ్, అంగడి రాజేశ్వరయ్య, ములస్తం కైలాసం, లుక్క భద్రయ్య వందలాది మంది భక్తులు స్వామి వారిని జపిస్తూ వెంటరాగా అనంతరం పూజాకార్యక్రమాలు నిర్వహించారు.



పీఠాధిపతికి పాదపూజలు చేస్తున్న మున్సిపల్ చైర్మన్, మహిళలు



శివదీక్ష లింగధారణ మహోత్సవంలో పాల్గొన్న కాశీపీఠాధిపతి శ్రీ చంద్రశేఖర్ శివాచార్య మహాస్వామి, హాజరైన భక్తజనం

మర్‌నాథ్‌బాబు, బోధన్ మున్సిపల్ మాజీ చైర్‌పర్సన్ సునీతా దేశాయ్, దేశం నాయకుడు వెంకటేశ్వరరావు దేశాయ్, డాక్టర్ శివప్ప, టి.ఆర్.ఎస్. నాయకుడు శ్యాంరావు, బోధన్ మున్సిపల్ కమిషనర్ మాదిరెడ్డి లక్ష్మారెడ్డి, బాబు అప్ప, అజయ్‌కుమార్ సిద్ధయ్య అప్ప, భగవాన్ కైలాస కాశీనాథ్ అప్ప, ఉమాశంకర్ ఈర్వంత్ అప్ప, శివమూర్తప్ప స్వామీ, శివరాజ్ అప్ప స్వామీ, మాతృశ్రీ విద్యాసంస్థ యజమాని డిగంబర్‌రావు తదితరులు పాల్గొన్నారు.

16 ಮತ್ತು 17–6–2006ರಲ್ಲಿ ಆದೋನಿಯ ಸ್ವಾಗತ ಸಮಿತಿಯವರು ಪಂಚಪೀಠಾಧೀಶ್ವರರನ್ನು ಆಹ್ವಾನಿಸಿದ್ದರು. ಅಡ್ಡಪಲ್ಲಕ್ಕಿ ಮಹೋತ್ಸವ, ಜನಜಾಗೃತಿ ಧರ್ಮಸಮಾವೇಶ, ಸಾಮೂಹಿಕ ವಿವಾಹ, ಜಂಗಮ ವಟುಗಳಿಗೆ ಅಯ್ಯಾಚಾರ ಈ ಎಲ್ಲಾ ಕಾರ್ಯಕ್ರಮಕ್ಕೂ ಪಂಚಪೀಠಾಧೀಶ್ವರರು ಆಗಮಿಸಿ ಯಶಸ್ವಿಯಾಗಿ ಎಲ್ಲವನ್ನು ನಡೆಸಿಕೊಟ್ಟರು.

1–9–2008

1997ರಲ್ಲಿ ಆಂಧ್ರಪ್ರದೇಶದ ವೀರಶೈವ ಸಮಾಜದವರು ವೀರಶೈವ ಧರ್ಮ–ತತ್ವಗಳ ಬೋಧನೆ ಕೇಳಿದಾಗಿನಿಂದ ಅಲ್ಲಿನ ಭಕ್ತರು ಪ್ರತೀ ವರ್ಷ ಶ್ರಾವಣ ಮಾಸದ ಅನುಷ್ಠಾನಕ್ಕಾಗಿ ಜಗದ್ಗುರುಗಳನ್ನು ಕರೆಸಿಕೊಳ್ಳಲಾರಂಭಿಸಿದರು.



జగద్గురుకు బ్రహ్మరథం


అశ్వరథంపై జగద్గురు ఊరేగింపు దృశ్యం

2008ರ ಶ್ರಾವಣಮಾಸದಲ್ಲಿ ಆಂಧ್ರದ ಷಾದ್‌ನಗರದ ಜನತೆ ಸುಂದರವಾದ ಬ್ರಹ್ಮರಥದಲ್ಲಿ ಜಗದ್ಗುರುಗಳನ್ನು ಕುಳ್ಳಿರಿಸಿ ಮೆರವಣಿಗೆ ಮೂಲಕ ಈ ನಗರಕ್ಕೆ ಸ್ವಾಗತಿಸಿದರು.

ಇಷ್ಟು ವರ್ಷಗಳ ಕಾಲ ಆಂಧ್ರಪ್ರದೇಶದಲ್ಲಿ ಧರ್ಮ ಪ್ರಚಾರದ ಸಲುವಾಗಿ ಪ್ರವಾಸ ಕೈಗೊಂಡು ಅಲ್ಲಿನ ಭಕ್ತರಲ್ಲಿದ್ದ ಶ್ರದ್ಧಾ ಭಕ್ತಿಯನ್ನು ಕಂಡು, ಶ್ರೀ ಸಿದ್ಧಾಂತ ಶಿಖಾಮಣಿಯನ್ನು ತೆಲುಗು ಭಾಷೆಗೆ ಅನುವಾದಿಸುವ ಆಲೋಚನೆ ಮಾಡಿದ್ದರು. ಈ ಆಲೋಚನೆ ಕಾರ್ಯರೂಪಕ್ಕೆ ಬಂದು ಸೆಪ್ಟೆಂಬರ್ 2008 2ನೇ ತಾರೀಖಿನಂದು ಪುಸ್ತಕ ರೂಪದಲ್ಲಿ ಬಿಡುಗಡೆಗೆ ಸಿದ್ಧವಾಗಿ ನಿಂತಿತ್ತು. ಶ್ರಾವಣಮಾಸದ ಅನುಷ್ಠಾನ ಮಂಗಲೋತ್ಸವದಂದು ಶ್ರೀ ಶೈಲ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯರ ಅಮೃತಹಸ್ತದಿಂದ ಬಿಡುಗಡೆಗೊಂಡಿದ್ದನ್ನು ನೋಡಿದರೆ ಕಾಶೀ ಜಗದ್ಗುರುಗಳ ಆಲೋಚನೆಗಳು ಎಷ್ಟು ಮಹತ್ವಪೂರ್ಣವಾದದ್ದು ಎಂದು ತಿಳಿಯಬಹುದು.

ಶ್ರೀ ಸಿದ್ಧಾಂತ ಶಿಖಾಮಣಿ ತೆಲುಗು ಆವೃತ್ತಿ ಬಿಡುಗಡೆ

ವಿಜಯ ಕರ್ನಾಟಕ, 3–9–2008



ಹೈದರಾಬಾದ ಸಮೀಪದ ಷಾದನಗರದಲ್ಲಿ ಹಮ್ಮಿಕೊಂಡಿದ್ದ ಕಾಶಿ ಜಗದ್ಗುರುಗಳ ಶ್ರಾವಣಮಾಸ ಅನುಷ್ಠಾನ ಮಂಗಲ ಮಹೋತ್ಸವದಲ್ಲಿ ತೆಲುಗು ಭಾಷೆಯ 'ಸಿದ್ಧಾಂತ ಶಿಖಾಮಣಿ ಪ್ರವಚನಪ್ರಭೆ' ಕೃತಿಯನ್ನು ಶ್ರೀಶೈಲ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯರು ಬಿಡುಗಡೆಗೊಳಿಸಿದರು.

ಶ್ರೀಶೈಲದ ಜಗದ್ಗುರುಗಳು ಆಂಧ್ರಪ್ರದೇಶದಲ್ಲಿ ಕಾಶಿ ಜಗದ್ಗುರುಗಳು ನಗರಗಳಲ್ಲಿ ಗ್ರಾಮಗಳಲ್ಲಿ ಸಂಚರಿಸಿ ಧರ್ಮಜಾಗೃತಿ ಮೂಡಿಸಿ ವೀರಶೈವರನ್ನು ಸಂಘಟಿಸಿರುವುದನ್ನು ಕಂಡು ಮನಸಾರೆ ಶ್ಲಾಘಿಸಿದರು. ಅಲ್ಲದೆ ಮೊದಲ ಬಾರಿಗೆ ಆಂಧ್ರಪ್ರದೇಶದಲ್ಲಿ ವೀರಶೈವ ಸಮ್ಮೇಳನ ಹಮ್ಮಿಕೊಂಡಿರುವುದನ್ನು ಸಭೆಗೆ ಮೆಚ್ಚುಗೆಯಿಂದ ತಿಳಿಸಿದರು.

ಸಿದ್ಧಾಂತ ಶಿಖಾಮಣಿಯನ್ನು ತೆಲುಗು ಭಾಷೆಗೆ ಅನುವಾದ ಮಾಡಿದ ಮಠ ಲಿಂಗಯ್ಯ ಅವರನ್ನು, ಕೃತಿಯ ಮುದ್ರಣ ದಾನಿಗಳಾದ ಪ್ರಸಾದ್ ಅವರನ್ನು ಸನ್ಮಾನಿಸಿ ಆಶೀರ್ವದಿಸಿದರು.

2008ರ ಆಗಸ್ಟ್ ತಿಂಗಳ 29 ಮತ್ತು 30ರಂದು ಕಾಶೀ ಜಗದ್ಗುರುಗಳು ಆಂಧ್ರಪ್ರದೇಶದಲ್ಲಿ ಪ್ರಥಮ ವೀರಶೈವ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದ್ದು ಜಗದ್ಗುರುಗಳಿಗೆ ಸಂತೋಷ ತಂದಿತು.

ಸಮ್ಮೇಳನವನ್ನು ಉದ್ಘಾಟನೆ ಮಾಡಿ, ಸಾಹಿತ್ಯ ಎಂದರೇನು ಎಂದು ಸಾಹಿತ್ಯ ಪದದ ಅರ್ಥವನ್ನು ಎಳೆ ಎಳೆಯಾಗಿ ಬಿಡಿಸಿ ಹೇಳಿದರು. ಸಾಹಿತ್ಯವೆಂಬ ಶಬ್ದದಲ್ಲಿ ಹಿತ ಶಬ್ದವು ವಿಹಿತವಾಗಿದೆ. ಹಿತವೆಂದರೆ ಆರೋಗ್ಯಕರವಾದ ವಿಚಾರವೆಂದರ್ಥ. ಸಾಹಿತ್ಯವೆಂದರೆ ಆರೋಗ್ಯಕರ ವಿಚಾರ ಹೊಂದಿರುವುದು. ಪ್ರತಿಯೊಂದು ಧರ್ಮದ ಸಾಹಿತ್ಯದಲ್ಲಿ ಸಮಾಜದ ಸರ್ವಾಂಗೀಣ ಹಿತ ಅಡಗಿದೆ. ಧರ್ಮ, ನೀತಿ, ತತ್ತ್ವಜ್ಞಾನ, ಸಮಾಜಶಾಸ್ತ್ರ ಮತ್ತು ವಿವಿಧ ಲಲಿತ ಸಾಮಗ್ರಿಗಳಿಂದ ಕಾಪಾಡಿರುವುದೇ ಸಾಹಿತ್ಯ. ಪ್ರತಿಯೊಂದು ಭಾಷೆಯ ಸಾಹಿತ್ಯದಲ್ಲಿ ಈ ಎಲ್ಲಾ ವಿಷಯಗಳು ಅಡಕವಾಗಿರುತ್ತದೆ. ವೀರಶೈವಧರ್ಮವು ಸಂಸ್ಕೃತ, ಕನ್ನಡ, ತೆಲುಗು, ಮರಾಠಿ,

ಸಮಾಜ ಹಿತ ರಕ್ಷಿಸುವುದೇ ಸಾಹಿತ್ಯ

ವಿಜಯ ಕರ್ನಾಟಕ, 31–8–2008



ಹೈದರಾಬಾದ್ ಸಮೀಪದ ಷಾದ ನಗರದಲ್ಲಿ ಹಮ್ಮಿಕೊಂಡಿದ್ದ ಪ್ರಥಮ ಆಂಧ್ರ ವೀರಶೈವ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಕಾಶೀ ಜಗದ್ಗುರುಗಳು, ಆಂಧ್ರಪ್ರದೇಶದ ಧರ್ಮಾದಾಯ ಕಮೀಷನರ್ ಸುಂದರಕುಮಾರ, ನಿವೃತ್ತ ಉಪಲೋಕಾಯುಕ್ತ ಶಿವರತ್ನಂ, ಸಮ್ಮೇಳನಾಧ್ಯಕ್ಷ ಮಠಂ ಶಂಕರಯ್ಯಾಗಾರು, ಆಚಾರ್ಯಮಠಂ ಲಿಂಗಯ್ಯಗಾರು ಮತ್ತಿತರರು ಉಪಸ್ಥಿತರಿದ್ದರು.

ತಮಿಳು ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಸಾಹಿತ್ಯವನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದೆ. ವೀರಶೈವ ಧರ್ಮದ ಇತಿಹಾಸದಲ್ಲಿ ಪ್ರಾಚೀನ ಆಂಧ್ರಪ್ರದೇಶವನ್ನು ತ್ರಿಲಿಂಗದೇಶವೆಂದು ಕರೆಯುತ್ತಿದ್ದುದನ್ನು ಮತ್ತೊಮ್ಮೆ ಈ ಸಮಾವೇಶದಲ್ಲಿ ವಿವರಿಸಿದರು. ನಿಘಂಟುಕಾರನಾದ ಸಿ.ಪಿ. ಬ್ರೌನ್‌ರವರ ಪ್ರಕಾರ ನಾಡಿನಲ್ಲಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳೆಂಬ ತ್ರಿಲಿಂಗಗಳನ್ನು ಪೂಜಿಸುವ ವೀರಶೈವ ಸಮಾಜ ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದ ಕಾರಣ ಕನ್ನಡಿಗರಿಗೆ ತ್ರಿಲಿಂಗದ ಹೆಸರು ಬಂದಿದೆ. ಈ ತ್ರಿಲಿಂಗವನ್ನು ಪೂಜಿಸುವ ವೀರಶೈವ ಸಮಾಜ ಈ ನಾಡಿನಲ್ಲಿ ಆರಾಧ್ಯ ಬ್ರಹ್ಮರು ಮತ್ತು ವೈಶ್ಯ ಸಮಾಜದ ಸ್ತ್ರೀ ಪುರುಷರು ಇಷ್ಟಲಿಂಗಧಾರಿಗಳಾಗಿರುವುದಕ್ಕೆ ಇದೇ ಕಾರಣವೆಂದು ವಿವರಿಸಿದರು.

ಸಂಸ್ಕೃತದಲ್ಲಿ ವೀರಶೈವ ಸಾಹಿತ್ಯವನ್ನು ರಚಿಸಿದ ಆಂಧ್ರಪ್ರದೇಶದ ಶ್ರೀಪತಿ ಪಂಡಿತಾರಾಧ್ಯರು, ಮಲ್ಲಿಕಾರ್ಜುನ ಪಂಡಿತಾರಾಧ್ಯರು, ಮತ್ತು ಮಂಚಣ ಪಂಡಿತಾರಾದ್ಯರು ಈ ಪಂಡಿತ ತ್ರಯರು; ಪಾಲ್ಕುರಿಕೆ ಸೋಮನಾಥನು ತೆಲುಗು ಭಾಷೆಯಲ್ಲಿ ವೀರಶೈವ ಸಾಹಿತ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ರಚಿಸಿರುವುದನ್ನು ತಿಳಿಸಿ, ಎಲ್ಲಾ ವೀರಶೈವ ಸಾಹಿತ್ಯದ ಸಂರಕ್ಷಣೆ ಹಾಗೂ ಸಂವರ್ಧನೆಗೆ ನೆರವು ನೀಡುವುದಾಗಿ ತಿಳಿಸಿದರು.

ಈಗಾಗಲೇ ಕಾಶೀಪೀಠದ ಗ್ರಂಥಾಲಯವನ್ನು ತುಂಬಾ ವ್ಯವಸ್ಥಿತವಾಗಿ ಸಂರಕ್ಷಿಸಿ ಎಲ್ಲಾ ಗ್ರಂಥಗಳು ಕೈಗೆಟಕುವಂತೆ ಜೋಡಿಸಿರುವ ಅನುಭವ ಜಗದ್ಗುರುಗಳಿಗಿತ್ತು. ಶೈವಭಾರತಿ ಶೋಧ ಪ್ರತಿಷ್ಠಾನದಿಂದ ಗ್ರಂಥ ಪ್ರಕಟಣೆಗಳು ಜಗದ್ಗುರುಗಳ ಮಾರ್ಗದರ್ಶನದಲ್ಲಿ ನಡೆಯುತ್ತಿದೆ. ಇದೆಲ್ಲದರ ಹಿನ್ನಲೆಯಲ್ಲಿ ಜಗದ್ಗುರುಗಳು ತೆಲುಗು ವೀರಶೈವ ಸಾಹಿತ್ಯವನ್ನು ವ್ಯವಸ್ಥಿತಗೊಳಿಸುವ ಆಲೋಚನೆ ಮಾಡಿದರು.

2009ರ ಶ್ರಾವಣಮಾಸದಲ್ಲಿ ಜಗದ್ಗುರುಗಳು ಆಂಧ್ರಪ್ರದೇಶದ ವಿವಿಧ ನಗರಗಳಲ್ಲಿ ಕಾರ್ಯಕ್ರಮ ನಡೆಸಿದರು. ಧರ್ಮಪ್ರಚಾರ ಹಾಗೂ ಶಿವಲಿಂಗದೀಕ್ಷೆ ಮಾಡಿಸುವುದೇ ಈ ಪ್ರವಾಸದ ಉದ್ದೇಶವೆಂದು ಹೇಳಿದರು. ತೆಲಂಗಾಣದ ಮೆಹಬೂಬನಗರ, ಕುರ್ತಕೋಟಿ, ಗಾರ್ವ್ಲಾಲ್, ನಾರಾಯಣಪೇಟೆ, ಕೋಸ್ಗಿ, ತಾಂಡೂರು, ಬೋಧನ, ಕರೀಂನಗರ, ಜಗತ್ಯಾಲ್, ಸಿದ್ದಿಪೇಟ್, ಇಬ್ರಾಹಿಂ ಪಟ್ಟಣಮ್, ಆಲಿಯಾಬಾದ್, ಷಾದ್‌ನಗರ್, ಸದಾಶಿವಪೇಟೆ, ರಂಗಾರೆಡ್ಡಿ ಬೋಗಿಪೇಟೆ, ಬಿಚಕುಂದಾ, ಸಾಲೂರು, ಬಲ್ಕಂಪೇಟೆ, ಕಿಸನ್‌ಗಂಜ, ಹೈದರಬಾದ್–ಈ ಎಲ್ಲಾ ನಗರಗಳಲ್ಲಿ ಪ್ರವಾಸ ಮಾಡಿದರು. ಶಿವದೀಕ್ಷೆ ನಡೆಸಿಕೊಡಲೆಂದು ಜಗದ್ಗುರುಗಳ ಜೊತೆಯಲ್ಲಿ ಮಳಖೇಡದ ಶ್ರೀ ಗಂಗಾಧರ ಶಿವಾಚಾರ್ಯರು, ಬಿಚಕುಂದದ ಶ್ರೀ ಸೋಮಲಿಂಗ ಶಿವಾಚಾರ್ಯರು ಇದ್ದರು.

ತೆಲುಗು ವಾರ್ತೆ, 23–07–09



ಮೆಹಬೂಬನಗರದಲ್ಲಿ ಒಮ್ಮೆ ಆಶೀರ್ವಚನ ಮಾಡುವಾಗ ಶಾಸ್ತ್ರಗ್ರಂಥಗಳು ಬದುಕಿಗೆ ಎಷ್ಟು ಅವಶ್ಯಕತೆ ಇದೆ ಎಂದು ಒಂದು ಉತ್ತಮ ಉದಾಹರಣೆ ಕೊಟ್ಟಿರುವುದನ್ನು ನೋಡಿದರೆ ಅವರಿಗಿರುವ ಜ್ಞಾನವನ್ನು ಕಂಡು ಅಚ್ಚರಿ ಮೂಡುತ್ತದೆ. ಅವರು ಹೇಳಿದ್ದು ಇಷ್ಟು : ನಾವು ಯಾವುದೇ ಒಂದು ಯಂತ್ರವನ್ನು ಖರೀದಿಸಿದಾಗ ಅದರ ಬಳಕೆಯನ್ನು ಹೇಗೆ ಮಾಡಬೇಕು ಎಂಬುದರ ಮಾಹಿತಿಯುಳ್ಳ ಒಂದು ಸಣ್ಣ ಪುಸ್ತಕವನ್ನು ಕಂಪನಿಯವರು ಆ ಯಂತ್ರದ ಜೊತೆಗೆ ಕೊಡುತ್ತಾರೆ. ಕಂಪನಿಯ ನಿರ್ದೇಶನದಂತೆಯೇ ಯಂತ್ರವನ್ನು ಬಳಸಿದರೆ ಪೂರ್ಣ ಅವಧಿಯವರೆಗೆ ಆ ಯಂತ್ರವನ್ನು ಉಪಯೋಗಿಸಬಹುದು ಅದರಂತೆಯೇ ಮಾನವ ದೇಹವೂ ಒಂದು ಯಂತ್ರ, ದೇವರಿಂದ ದೊರೆತ ಈ ಮನೋಚಾಲಿತ ಶ್ರೇಷ್ಠ ಯಂತ್ರದ ಸದ್ಬಳಕೆಯ ಮಾರ್ಗದರ್ಶಕಗಳೇ ಧರ್ಮಗ್ರಂಥಗಳು. ಈ ದೇಶದ ಆಚಾರ್ಯರು, ಪ್ರವಾದಿಗಳು ತಮ್ಮ ತಮ್ಮ ಧರ್ಮಗ್ರಂಥಗಳನ್ನು ಮಾನವ ಸಮಾಜಕ್ಕೆ ಕೊಟ್ಟಿದ್ದಾರೆ. ಇಂತಹ ಅನೇಕ ಗ್ರಂಥಗಳ ಪಂಕ್ತಿಯಲ್ಲಿರುವ ಶ್ರೀ ಸಿದ್ಧಾಂತ ಶಿಖಾಮಣಿಯು ವೀರಶೈವ ಧರ್ಮದ ಆದ್ಯ ಗ್ರಂಥವಾಗಿದೆ. ಇದರಲ್ಲಿರುವ ನೀತಿ, ಆಚಾರ ಮತ್ತು ತತ್ವಗಳನ್ನು ಅರಿತು ಆಚರಿಸಿದರೆ ಒಂದೇ ಜನ್ಮದಲ್ಲಿ ಲಿಂಗಾಂಗ ಸಾಮರಸ್ಯರೂಪವಾದ ಮುಕ್ತಿಯನ್ನು ಪಡೆಯಬಹುದು. ಅಲ್ಲಿಯ ತತ್ವಗಳು, ನೀತಿ ಸಂಹಿತೆಗಳು ಇಂದಿಗೂ ಅಷ್ಟೇ ಪ್ರಸ್ತುತವಾಗಿವೆ ಎಂದು ಗ್ರಂಥದ ಮಹತ್ವ, ಬಳಕೆಯಿಂದ ದೊರಕುವ ಸದ್ಗತಿ ಎಲ್ಲವನ್ನು ಎಂದೂ ಮರೆಯಬಾರದು ಎಂಬಂತೆ ಭಕ್ತಾದಿಗಳಿಗೆ ಬೋಧಿಸಿದರು.

20–7–2012 ರಿಂದ 18–8–2012ರವರೆಗೆ ಆಂಧ್ರಪ್ರದೇಶದ ಧರ್ಮಪ್ರಚಾರ

ಆಂಧ್ರಪ್ರದೇಶದ ಧರ್ಮಪ್ರಚಾರ ಸಂಘವು ಸ್ಥಳೀಯ ವೀರಶೈವ ಸಮಾಜದ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಆಂಧ್ರಪ್ರದೇಶದಲ್ಲಿ ಬೃಹತ್ ಧರ್ಮಸಭೆ ಅಭಿಯಾನ ಹಮ್ಮಿಕೊಂಡಿದ್ದರು.

ಜುಲೈ 20ರಂದು ಶ್ರೀಕಾಕುಳಂನಲ್ಲಿ ಉದ್ಘಾಟನೆ ಮಾಡಲಾಯಿತು. ತಿಂಗಳು ಪೂರ್ತಿ ಶ್ರೀಕಾಕುಳಂ, ವಿಶಾಖಪಟ್ಟಣಂ, ರಾಜಮಂಡ್ರಿ, ಗುಂಟೂರು, ಅನಂತಪುರ, ಕರ್ನಾಲ್, ಆಧೋನಿ, ಮೆಹಬೂಬನಗರ, ತಾಂಡೂರು, ವಿಕಾರಾಬಾದ್, ರಂಗಾರೆಡ್ಡಿ, ಸದಾಶಿವ ಪೇಟೆ, ಸಾಂಗರೆಡ್ಡಿ, ಕಾಮಾರೆಡ್ಡಿ, ಬೋಧನ, ಕಡತಾಲ್, ಶಾದ್‌ನಗರ, ನಿಜಾಮಾಬಾದ್, ಮತ್ತು ಹೈದರಬಾದ್ ಮುಂತಾದ ಮೂವತ್ತು ಪ್ರಮುಖ ನಗರಗಳಲ್ಲಿ ಧರ್ಮಸಭೆಗಳನ್ನು ಜಗದ್ಗುರುಗಳು ನಡೆಸಿದರು.

ಪ್ರತಿ ಗ್ರಾಮ ಹಾಗೂ ನಗರಗಳಲ್ಲಿ ಸಾಯಂಕಾಲದಲ್ಲಿ ಪುರಪ್ರವೇಶದ ಉತ್ಸವ ನಡೆಸಿ ನಂತರ ಧರ್ಮಸಭೆ. ಮರುದಿನ ಬೆಳಗ್ಗೆ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಸಾಮೂಹಿಕ ಇಷ್ಟಲಿಂಗಪೂಜೆ, ಮಳಖೇಡದ ಶ್ರೀ ಗಂಗಾಧರ ಶಿವಾಚಾರ್ಯರಿಂದ ಇಷ್ಟಲಿಂಗ ದೀಕ್ಷೆ. ಶ್ರೀಶೈಲ ಕ್ಷೇತ್ರದ ಪಂ. ವಿಶ್ವನಾಥ ಶಾಸ್ತ್ರಿ ಮತ್ತು ಪಂ. ಮಲ್ಲಿಕಾರ್ಜುನ ಸ್ವಾಮಿಗಳು ಪೂಜಾವಿಧಿಯ ವೈದಿಕತ್ವ ನೆರವೇರಿಸಿದರು.

ಈ ಬಾರಿ ನಾಲ್ವರು ಜಗದ್ಗುರುಗಳು ತಿರುಪತಿ ವಿ.ವಿಯ ಸಂಸ್ಕೃತ ಪ್ರಾಧ್ಯಾಪಕ ಡಾ. ಕೆ. ಪ್ರತಾಪ್ ಇವರಿಂದ ತೆಲಗು ಭಾಷೆಗೆ ಅನುವಾದಗೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣದ ಗ್ರಂಥ ಮತ್ತು ಪಾರಾಯಣದ ಮೂರು ಸಿಡಿಗಳನ್ನು ಲೋಕಾರ್ಪಣೆ ಮಾಡಿದರು. ಹೈದರಾಬಾದಿನ ಬಲ್ಕಂಪೇಟೆಯ ವೀರಶೈವದ ಸಮಾಜದವರು ಕಾಶೀ ಜಗದ್ಗುರುಗಳ 64ನೇ ಜನ್ಮ ದಿನೋತ್ಸವವನ್ನು ವೈಭವದಿಂದ ಆಚರಿಸಿದರು. ಆಗಸ್ಟ್ 18ರಂದು ಶ್ರೀಶೈಲಜಗದ್ಗುರುಗಳ ಸಾನ್ನಿಧ್ಯದಲ್ಲಿ ಶ್ರಾವಣಮಾಸದ ಧರ್ಮಪ್ರಚಾರ ಅಭಿಯಾನ ಪೂರ್ಣಗೊಂಡಿತು.

ದೀಕ್ಷೆ ಧರ್ಮಾಚರಣೆಯ ಮೊದಲು ಮೆಟ್ಟಿಲು



24-7-2012 : ವಿಶಾಖಪಟ್ಟಣ(ಆಂಧ್ರಪ್ರದೇಶ): ಕರ್ನಾಟಕ ಸಂಘದ ಕನ್ನಡ ಕಾವೇರಿ ಕಲ್ಯಾಣ ಮಂಟಪದಲ್ಲಿ ಶ್ರಾವಣ ಸೋಮವಾರ ಕಾಶೀ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಭಕ್ತರಿಗೆ ದೀಕ್ಷೆ ನೀಡಲಾಯಿತು.

ಆಂಧ್ರದ ಕರ್ನೂಲ್ ನಗರದಲ್ಲಿ ಪಂಚಾಚಾರ್ಯರ ಯುಗ ಮಾನೋತ್ಸವ ಹಾಗೂ ಬಸವೇಶ್ವರರ ಜಯಂತ್ಯುತ್ಸವ ಅದ್ಧೂರಿಯಿಂದ ಜರುಗಿತು. ತೆಲುಗು ಭಾಷೆಗೆ ಭಾಷಾಂತರಗೊಳಿಸಿರುವ ವೀರಶೈವ ಧರ್ಮದ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ಇದೇ ವೇಳೆ ಬಿಡುಗಡೆಗೊಳಿಸಿಸಲಾಯಿತು. ಯುಗಮಾನೋತ್ಸವ ನಿಮಿತ್ತ ಶ್ರೀಶೈಲ, ಉಜ್ಜೈನಿ ಹಾಗೂ ಕಾಶೀ ಜಗದ್ಗುರುಗಳ ಭವ್ಯ ಶೋಭಾಯಾತ್ರೆ ಗಮನಸೆಳೆಯಿತು.

ಶಕ್ತಿ ಪೀಠಗಳು ಮಹಿಮಾ ಕ್ಷೇತ್ರಗಳು

ವಿಜಯ ಕರ್ನಾಟಕ, 2-8-2012



ಶ್ರಾವಣಮಾಸದ ಪ್ರಯುಕ್ತ ಆಂಧ್ರಪ್ರದೇಶದಲ್ಲಿ ಹಮ್ಮಿಕೊಂಡಿದ್ದ ಧರ್ಮ ಪ್ರಚಾರ ಅಭಿಯಾನದಲ್ಲಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು.

ಐದು ತಾಸು ನಡೆದ ಶೋಭಾಯಾತ್ರೆಯಲ್ಲಿ ಜಗದ್ಗುರುಗಳ ಮೆರವಣಿಗೆ, ನಂದಿಕೋಲು ಕುಣಿತ, ಜನಪದ ತಂಡಗಳಿಂದಸ ಕಲಾ ಪ್ರದರ್ಶನ, ಸುಮಂಗಲೆಯರ ಕಳಶದೊಂದಿಗೆ ತೆರೆದ ವಾಹನದಲ್ಲಿ ಶ್ರೀಶೈಲ, ಉಜ್ಜಯಿನಿ ಹಾಗೂ ಕಾಶೀ ಶ್ರೀಗಳನ್ನು ವೇದಿಕೆಗೆ ಕರೆತರಲಾಯಿತು.

ಸಿದ್ಧಾಂತ ಶಿಖಾಮಣಿ ಗ್ರಂಥ ತೆಲುಗು ಭಾಷೆಗೆ ಭಾಷಾಂತರ ಗೊಂಡು ಬಿಡುಗಡೆಯಾಗಿದ್ದಕ್ಕೆ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಹರ್ಷ ವ್ಯಕ್ತಪಡಿಸಿದರು.

ಹಗಲು ರಾತ್ರಿ ಎಡೆ ಬಿಡದೆ ಒಂದು ತಿಂಗಳ ಕಾಲ ಊರಿಂದೂರಿಗೆ ಪ್ರಯಾಣಿಸಿ ಧರ್ಮಪ್ರಚಾರ ಕೈಗೊಂಡಿದ್ದ ಜಗದ್ಗುರುಗಳ ಸಂಕಲ್ಪಶಕ್ತಿ ಸಾಮರ್ಥ್ಯಗಳಿಗೆ ಭಕ್ತಿಯಿಂದ ನಮಿಸ ಬೇಕೆನಿಸುತ್ತದೆ.

ಪಂಚಾಚಾರ್ಯರ ಯುಗಮಾನೋತ್ಸವ ಕರ್ನೂಲ್‌ನಲ್ಲಿ ಶೋಭಾಯಾತ್ರೆ




ಆಂಧ್ರದ ಕರ್ನೂಲ್ ನಗರದಲ್ಲಿ ಪಂಚಾಚಾರ್ಯರ ಯುಗಮಾನೋತ್ಸವ ನಿಮಿತ್ತ ನಡೆದ ಶೋಭಾಯಾತ್ರೆಯಲ್ಲಿ ಶ್ರೀಶೈಲ, ಉಜ್ಜೈನಿ ಹಾಗೂ ಕಾಶೀ ಶ್ರೀಗಳನ್ನು ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಲಾಯಿತು.

ವಿದೇಶಗಳಲ್ಲಿ ಕಾಶೀ ಜಗದ್ಗುರುಗಳು

ಹಾಂಗ್ ಕಾಂಗ್

ಕನ್ನಡ ಸಂಘ ಹಾಂಗ್ ಕಾಂಗ್‌ದ ಖಜಾಂಚಿಯಾದ ಶ್ರೀ ಮೋಹನ್ ವರ್ಣೇಕರ್ ಅವರು ತಮ್ಮ ಸಂಘದ ಕಮಿಟಿಯ ಪರವಾಗಿ ಕಾಶೀ ಜಗದ್ಗುರುಗಳಿಗೆ 18–9–2009ರಲ್ಲಿ ಒಂದು ಆಮಂತ್ರಣ ಪತ್ರ ಬರೆದು 7–11–2009ರಲ್ಲಿ ಸಂಘವು ಆಚರಿಸುವ ರಾಜ್ಯೋತ್ಸವದಲ್ಲಿ ಭಾಗವಹಿಸಬೇಕೆಂದು ವಿನಂತಿಸಿಕೊಂಡಿದ್ದರು.



Kannada Sangha Hong Kong ®

(Registered under Hong Kong societies ordinance Ref CP/LIC/SO/19/31330)
Unit 1401, Chekiang Frist Bank Center, 1 Duddell street, Central, Hong Kong

Propagating Karnataka Culture and Kannada fragrance

KSHK

SHK Officers:

President:
Sadashiv Hegde
Tel: 6252 7552

Secretary:
Roopa Kiran
68978762

Treasurer:
Mohan Vernekar
Tel: 9047 4510

Executive Committee:

Poorna Mysoor
Tel: 9102 9151

Kathyayini Kaushik
Tel: 6506 4726

Uday Kaushik
Tel: 9105 0934

Rajesh Kulkarni
Tel: 9685 3685

Ravi Shorff
Tel: 9039 2354

Venkat Rangan
Tel: 6184 9175

Web:www.kshk.org

18 September, 2009

Sri Shivacharya Mahaswami Jagadguru chandrashekhar

Invitation Letter

On behalf of KSHK committee, I take the opportunity of inviting pujya Sri Shivacharya Mahaswami Jagadguru chandrashekhar to visit Hong Kong during our Rajyotsava celebrations on 7th November,09.

We will be highly obliged if you could attend the occasion and bless our community people with your auspicious presence.

On behalf of KSHK Committee

Mohan Vernekar
Treasurer

PROPAGATING KANNADA CULTURE AND KANNADA FRAGRANCE AMONG FELLOW KANNADIGAS IN THE HONG KONG NEIGHBORHOOD.

ಗುಳೇದಗುಡ್ಡದ ಕೃಷ್ಣಯೋಗಾಶ್ರಮದ ಬಸವರಾಜ ಹಡಗಲಿಯವರು ಜಗದ್ಗುರುಗಳಿಗೆ ಚಿರಪರಿಚಿತರು ಹಾಗೂ ಆತ್ಮೀಯರು. ಅವರ ಪುತ್ರ ಸಂಜೀವಕುಮಾರ ಹಡಗಲಿಯವರು ಹಾಂಗ್‌ಕಾಂಗ್‌ನಲ್ಲಿ ಹೆಸರುವಾಸಿಯಾದ ಯೋಗ ಕೇಂದ್ರವನ್ನು ತೆರೆದು ಸ್ನೇಹಿತ ವೀರೇಶ ಬಲ್ಲಾಳರ ಜೊತೆಗೂಡಿ ಹಠಯೋಗ ಕಲಿಸುವಲ್ಲಿ ಈಗಾಗಲೇ ಪ್ರಖ್ಯಾತರಾಗಿದ್ದರು.

ತಮಗೆ ಗೊತ್ತಿರುವ ಒಂದು ಕುಟುಂಬ ಹಾಂಗ್‌ಕಾಂಗ್‌ನಲ್ಲಿ ಇರುವುದರಿಂದ ಜಗದ್ಗುರುಗಳು ಬಹಳ ಆಲೋಚಿಸಿ ತಮ್ಮ ಒಪ್ಪಿಗೆಯನ್ನು ಕೊಟ್ಟರು.


ಗುರುಗಳಿಗದು ಮೊದಲ ವಿದೇಶ ಪ್ರಯಾಣ. ತಮ್ಮ ದಿನನಿತ್ಯದ ಧಾರ್ಮಿಕಾಚರಣೆಗಳಿಗೆ ಲೋಪ ಬರಬಾರದೆಂದು ತಮ್ಮೊಡನೆ ಕೊಟ್ಟೂರಿನ ಷ॥ಬ್ರ॥ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿಯವರನ್ನು ಜೇವರ್ಗಿ ತಾ॥ ಶಾಖಾಪುರದ ಸಿದ್ಧರಾಮ ಶಿವಾಚಾರ್ಯ ಸ್ವಾಮೀಜಿಯವರನ್ನೂ ಕರೆದುಕೊಂಡು ಬಸವರಾಜ ಹಡಗಲಿ ದಂಪತಿಗಳೊಡನೆ ನವೆಂಬರ್ 6ರಂದು ಬೆಂಗಳೂರಿನಿಂದ ಹಾಂಗ್‌ಕಾಂಗ್‌ಗೆ ಪ್ರಯಾಣ ಬೆಳೆಸಿದರು.

ಹಾಂಗ್‌ಕಾಂಗ್‌ಗೆ ಜಗದ್ಗುರುಗಳು ಹೊರಡುವ ವಿಚಾರ ತಿಳಿದ ಕೂಡಲೆ ಹುಬ್ಬಳ್ಳಿಯ ನವನಗರದಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಶಿವಯೋಗಿ ಪುಣ್ಯಾಶ್ರಮದಲ್ಲಿ ಹುಬ್ಬಳ್ಳಿ ತಾಲೂಕ್ ಕನ್ನಡ ಸಾಹಿತ್ಯ ಪರಿಷತ್ ಹಾಗೂ ನಾಗರಿಕರ ಪರವಾಗಿ ವಿಶೇಷ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿ ಗುರುಗಳಿಗೆ ಶುಭ ನಮನ ಸಲ್ಲಿಸಿದರು.

ಈ ವಿಚಾರವನ್ನು ವಿಜಯಕರ್ನಾಟಕ, ಕ್ರಾಂತಿ ಪತ್ರಿಕೆಗಳು ಪ್ರಕಟಿಸಿದ್ದವು. ಗುರುಪರಂಪರೆಯ ಪಂಚಪೀಠಗಳ ಜಗದ್ಗುರುಗಳು ಈ ಹಿಂದೆ ಯಾರೂ ಕಡಲನ್ನು ದಾಟಿ ವಿದೇಶಗಳಿಗೆ ಹೋಗಿರಲಿಲ್ಲ. ಇದಕ್ಕೆ ಭಕ್ತರಿಂದ ಆಕ್ಷೇಪ ಬರಬಹುದೆಂದು ತಿಳಿದಿದ್ದ ಜಗದ್ಗುರುಗಳು ವೀರಶೈವ ಧರ್ಮದ ಸಿದ್ಧಾಂತವನ್ನು ಶಿವಯೋಗಿ ಶಿವಾಚಾರ್ಯರಿಗೆ ಬೋಧಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯರು ರಾವಣನ ಸಹೋದರ ವಿಭೀಷಣನ ಭಕ್ತಿಯ ಬೇಡಿಕೆಗೆ ಒಪ್ಪಿ ಶ್ರೀಲಂಕಾಗೆ ಹೋಗಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ್ದರು. ಇದೇ ರೀತಿ ಕಾಶೀಪೀಠದ ಆದಿಜಗದ್ಗುರು ವಿಶ್ವಾರಾಧ್ಯರು ನೇಪಾಳದಲ್ಲಿ ಜಂಗಮಮಠವನ್ನು ಸ್ಥಾಪಿಸಿ ವೀರಶೈವ ಧರ್ಮ ಸಿದ್ಧಾಂತವನ್ನು ಬೋಧಿಸಿದರು. ಆದಿ ಜಗದ್ಗುರು ದ್ವಯರನ್ನು ಬಿಟ್ಟರೆ ಕಾಶೀ ಜಗದ್ಗುರುಗಳೇ ಮೊದಲ ಬಾರಿಗೆ ವಿದೇಶ ಪ್ರಯಾಣ ಕೈಗೊಂಡವರು.

ಕಾಶೀ ಶ್ರೀಗಳು ಹಾಂಗ್ ಕಾಂಗ್‌ಗೆ

ವಿಜಯ ಕರ್ನಾಟಕ 2–11–2009



ಹುಬ್ಬಳ್ಳಿ : ಕನ್ನಡ ಸಂಘದ ಆಮಂತ್ರಣದ ಮೇರೆಗೆ ಕಾಶೀಪೀಠದ ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನ.6ರಂದು ಬೆಂಗಳೂರಿನಿಂದ ಹಾಂಗ್ ಕಾಂಗ್ ದೇಶಕ್ಕೆ ತೆರಳಲಿದ್ದಾರೆ. ನ.7ರಂದು ಹಾಂಕಾಂಗ್‌ನ ಕನ್ನಡ ಸಂಘಟನೆ ಏರ್ಪಡಿಸಿರುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟನಾ ಸಮಾರಂಭದಲ್ಲಿ ಶ್ರೀಗಳು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.


ಜಗದ್ಗುರುಗಳ ಹಾಂಗ್ ಕಾಂಗ್ ಪ್ರಯಾಣ
ಜನ್ಮಭೂಮಿ, ಮಾತೃಭಾಷೆ ಬದುಕಿನ ಸರ್ವಸ್ವಗಳು

3–11–2009

ಹುಬ್ಬಳ್ಳಿಯ ಅನೇಕ ಸಂಘ ಸಂಸ್ಥೆಗಳು, ಹುಬ್ಬಳ್ಳಿ ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ತು, ರಾಜ್ಯ ಜಾನಪದ ಅಕಾಡೆಮಿ, ಶ್ರೀ ಜಗದ್ಗುರು ಪಂಚಾಚಾರ್ಯ ಮಾನವ ಧರ್ಮ ಸಂಸ್ಥೆ–ಧಾರವಾಡ ಜಿಲ್ಲಾ ಘಟಕ, ಧಾರವಾಡ ಜಿಲ್ಲಾ ಪಂಚಾಯತ್ ಎಲ್ಲವೂ ಸೇರಿ 2009ರ ನವೆಂಬರ್ ತಿಂಗಳ 2ನೇ ತಾ.ನಂದು ಕಾಶೀ ಜಗದ್ಗುರುಗಳ ಪ್ರಪ್ರಥಮ ವಿದೇಶ ಪ್ರವಾಸದ ಹಿನ್ನೆಲೆಯಲ್ಲಿ ವಿಶೇಷ ಗುರುವಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ನವೆಂಬರ್ 6ರಂದು ಬೆಂಗಳೂರಿನಿಂದ ಹಾಂಗ್‌ಕಾಂಗ್ ದೇಶಕ್ಕೆ ತೆರಳುವ ಸಲುವಾಗಿ ಎಲ್ಲಾ ನಾಗರಿಕರೂ ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರನ್ನು ಗೌರವಿಸಿ ಶುಭನಮನ ಸಲ್ಲಿಸಿ ಬೀಳ್ಕೊಟ್ಟರು.

ಗೌರವವನ್ನು ಸ್ವೀಕರಿಸಿದ ಜಗದ್ಗುರುಗಳು ತಾವು ಯಾವ ನೆಲೆಯ ಮೇಲೆ ಹೊರಡುವ ನಿರ್ಧಾರಕ್ಕೆ ಕೈಗೊಂಡರೆಂದು ತಿಳಿಸಿದರು. ಜನ್ಮಕೊಟ್ಟ ತಾಯಿ, ಜನ್ಮಭೂಮಿ ಮತ್ತು ಮಾತೃಭಾಷೆ ನಮ್ಮ ಬದುಕಿನ ಸರ್ವಸ್ವಗಳು, ವಿದೇಶದಲ್ಲಿರುವ ಕನ್ನಡಿಗರು ತಮ್ಮ ತಾಯ್ನಾಡು, ತಾಯಿ ನುಡಿಗಳನ್ನು ಮರೆತಿರುವುದಿಲ್ಲ. ಹಾಂಗ್‌ಕಾಂಗ್‌ನಲ್ಲಿರುವ ಕನ್ನಡಿಗರು ಒಂದಾಗಿ 'ಕನ್ನಡ ಸಂಘ'ವನ್ನು ಸ್ಥಾಪಿಸಿ–ಕನ್ನಡ ರಾಜ್ಯೋತ್ಸವದ ಜೊತೆಜೊತೆಯಲ್ಲಿ ನಾಡು–ನುಡಿಯ ವೈಭವವನ್ನು ವಿದೇಶಗಳಿಗೂ ಪರಿಚಯಿಸುವ ಪ್ರಯತ್ನ ಮಾಡುತ್ತಿದ್ದಾರೆ. ತಮ್ಮ ಕನ್ನಡಾಭಿಮಾನವನ್ನು, ಕನ್ನಡತನವನ್ನು ಉಳಿಸಿಕೊಂಡು ಕನ್ನಡ ಸೇವೆ ಮಾಡುತ್ತಿರುವುದು ಆದರ್ಶವಾಗಿದೆ. ಇಂತಹ ಸ್ವಾಭಿಮಾನಿ ಕನ್ನಡಿಗರೊಂದಿಗೆ ವಿಚಾರಗಳನ್ನು ಹಂಚಿಕೊಳ್ಳಲು ಅವಕಾಶ ದೊರೆತಿರುವುದು ಸಂತೋಷ ತಂದಿದೆ ಎಂದು ಹೇಳಿದರು.

ವೀರಶೈವ ಧರ್ಮದಲ್ಲಿ ಸ್ವಜಾತಿ–ಪರಜಾತಿ, ಸ್ವಧರ್ಮ–ಪರಧರ್ಮ, ಸ್ವದೇಶ–ಪರದೇಶ ಎಂಬ ದ್ವಂದ್ವಗಳಿಲ್ಲ. ಎಲ್ಲ ಜಾತಿ, ಧರ್ಮ, ಭಾಷೆ, ನಾಡು, ಪ್ರಾಂತ–ಪ್ರದೇಶಗಳಲ್ಲಿಯೂ ವೀರಶೈವ ಧರ್ಮ ತತ್ವಗಳು ಸ್ವೀಕೃತವಾಗಿವೆ. ಎಲ್ಲರೊಂದಿಗೆ ಸ್ನೇಹ–ಸಮನ್ವಯ–ಪ್ರೀತಿ–ಸೌಹಾರ್ದಭಾವ ಹೊಂದಿರುವುದೇ ವೀರಶೈವ ಧರ್ಮದ ಮೂಲ ಆಶಯವಾಗಿದೆ. ಈ ಗುರು ಪರಂಪರೆಯಲ್ಲಿ ಪ್ರಸ್ತುತ ಹಾಂಗ್‌ಕಾಂಗ್ ಪ್ರವಾಸ ಕೈಗೊಳ್ಳುವ ಮೂಲಕ ಶ್ರೀ ಕಾಶೀ ಜ್ಞಾನ ಪೀಠವು ವಿದೇಶಗಳಲ್ಲಿ ವೀರಶೈವ ಧರ್ಮ–ತತ್ವ ಆಗುಮಾಡಿದೆ ಎಂದು ಕಾಶೀ ಜಗದ್ಗುರುಗಳು ತಿಳಿಸಿದರು.



ಶ್ರೀ ಕಾಶೀ ಜಗದ್ಗುರುಗಳ ಪ್ರಪ್ರಥಮ ವಿದೇಶ ಪ್ರವಾಸದ ಹಿನ್ನೆಲೆಯಲ್ಲಿ ಸಮೀಪದ ನವನಗರದಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಶಿವಯೋಗಿ ಪುಣ್ಯಾಶ್ರಮದಲ್ಲಿ ಹುಬ್ಬಳ್ಳಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ನಾಗರಿಕ ಪರವಾಗಿ ಹಮ್ಮಿಕೊಂಡಿದ್ದ ವಿಶೇಷ 'ಗುರುವಂದನ' ಸಮಾರಂಭದಲ್ಲಿ ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರನ್ನು ಗೌರವಿಸಿ ಶುಭನಮನ ಸಲ್ಲಿಸಿ ಬೀಳ್ಕೊಡಲಾಯಿತು. ಡಾ.ಎಸ್.ಎಫ್. ಹಿರೇಮಠ, ಡಾ.ಎಸ್.ಆರ್. ರಾಮನಗೌಡರ, ಸಿ.ಆರ್. ಹಳ್ಳಿಗೇರಿಮಠ, ಧಾರವಾಡ ಜಿ.ಪಂ. ಸದಸ್ಯ ನಿಜನಗೌಡ ಪಾಟೀಲ, ಬಸವರಾಜ ಕೌಜಲಗಿ.

ಹಾಂಗ್‌ಕಾಂಗ್‌ನಲ್ಲಿರುವ ಶ್ಯುಂಗ್‌ವಾನ ಸಿವಿಕ್ ಸೆಂಟರ್‌ನಲ್ಲಿ ನವೆಂಬರ್ 7–2009ರಂದು ಹಾಂಗ್‌ಕಾಂಗ್ ಕನ್ನಡ ಸಂಘವು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಮುಖ್ಯ ಅತಿಥಿಗಳಾಗಿ ಬಾರತೀಯ ರಾಯಭಾರಿಯಾಗಿರುವ ರಾಲ್ಫೆ, ಅವರ ಪತ್ನಿ ಮತ್ತು ಭಾರತದ ಉತ್ತರಪ್ರದೇಶದ ವಾರಣಾಸಿಯ ಜಂಗಮವಾಡಿ ಮಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಆಗಮಿಸಿದ್ದರು. ಸಂಘದ ಅಧ್ಯಕ್ಷರಾದ ಸದಾಶಿವ ಹೆಗಡೆ ಮುಖ್ಯ ಅತಿಥಿಗಳನ್ನು ಜಗದ್ಗುರುಗಳನ್ನು ನೆರೆದಿದ್ದ ಸಮಸ್ತ ಕನ್ನಡಿಗರಿಗೆ ಸ್ವಾಗತ ಬಯಸಿದರು.

ಮುಖ್ಯ ಅತಿತಿಗಳಾಗಿ ಬಂದಿದ್ದ ರಾಲ್ಫೆ ಅವರು ಕನ್ನಡ ಸಂಘದ ಸೇವಾ ಯೋಜನೆಯನ್ನು ಮೆಚ್ಚಿ ಈ ಯೋಜನೆಯನ್ನು ನಿರಂತರವಾಗಿ ಮಾಡುವ ಸಂಕಲ್ಪವನ್ನು ಮಾಡಿದ ಸಂಘವನ್ನು ಪ್ರಶಂಸಿಸಿ ಮಾತಾಡಿದರು. ನಂತರ ಹಾಂಗ್‌ಕಾಂಗ್ ಕನ್ನಡ ಸಂಘದ "ಸಮುದಾಯ ಸೇವಾ ಯೋಜನೆ ಪತ್ರಕ"ವನ್ನು ಉದ್ಘಾಟಿಸಿ–ಗುರುಗಳಾಡಿದ ಆಶೀರ್ವಾದದ ಮಾತುಗಳನ್ನು ಸಂಘದ ಖಜಾಂಚಿಗಳು ತಮ್ಮ ಸಂಘದ ಲೆಟರ್‌ಹೆಡ್‌ನಲ್ಲಿ ಸಂಪೂರ್ಣವಾಗಿ ಸಂಗ್ರಹಿಸಿದ್ದಾರೆ ಹಾಗಾಗಿ ಜಗದ್ಗುರುಗಲು ಉದ್ಘಾಟನಾ ಸಂದರ್ಭದಲ್ಲಿ ಮಾಡಿದ ಭಾಷಣವನ್ನು ಮುದ್ರಿಸಲಾಗಿದೆ.

'ಭಾಷೆ ಭಾವಾಭಿವ್ಯಕ್ತಿಯ ಸಾಧನ'



ಹಾಂಗ್ ಕಾಂಗ್ ಕನ್ನಡ ಸಂಘದ ಆಶ್ರಯದಲ್ಲಿ ನಡೆದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಾರಣಾಸಿಯ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಭಾರತದ ರಾಯಭಾರಿ ರಾಲ್ಟೆ ಪಾಲ್ಗೊಂಡಿದ್ದರು

ಭಾಷೆ ಭಾವಾಭಿವ್ಯಕ್ತಿಯ ಪ್ರಮುಖ ಸಾಧನ

ಹಾಂಗ್‌ಕಾಂಗ್‌ನಲ್ಲಿ ಕನ್ನಡ ಸಂಘದಿಂದ ಕನ್ನಡ ರಾಜ್ಯೋತ್ಸವ

ಹಾಂಗ್‌ಕಾಂಗ್‌ನಲ್ಲಿ ಕನ್ನಡ ಜಾತ್ರೆ



ಹಾಂಗ್‌ಕಾಂಗ್‌ನಲ್ಲಿ ಕನ್ನಡ ಸಂಘ ಹಮ್ಮಿಕೊಂಡಿದ್ದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಪಾಲ್ಗೊಂಡಿದ್ದರು.



Kannada Sangha Hong Kong ®

(Registered under Hong Kong societies ordinance Ref CP/LIC/SO/19/31330)
Unit 1401, Chekiang Frist Bank Center, 1 Duddell street, Central, Hong Kong

Propagating Karnataka Culture and Kannada fragrance

KSHK

KSHK Officers:

President:
Sadashiv Hegde
Tel: 6252 7552

Secretary:
Roopa Kiran
68978762

Treasurer:
Mohan Vernekar
Tel: 9047 4510

Executive Committee:

Poorna Mysoor
Tel: 9102 9151

Uday Kaushik
Tel: 9105 0934

Ravi Shroff
Tel: 9039 2354

Venkat Rangan
Tel: 6184 9175

Web: www.kshk.org

ಎಲ್ಲಿಯೇ ಇರು, ಹೇಗೇ ಇರು ಕನ್ನಡವಾಗಿರು

ಶ್ರೀ ಕಾಶೀ ಜಗದ್ಗುರುಗಳು

ಹಾಂಗ್‌ಕಾಂಗ್.
8-11-2009.

ಕನ್ನಡನಾಡಿನಲ್ಲಿ ಜನಿಸಿದ ಪ್ರತಿಯೊಬ್ಬರು ತನ್ನ ಕನ್ನಡತನವನ್ನು ಉಳಿಸಿಕೊಂಡು ಬೆಳಿಸಿಕೊಂಡು ಹೋಗಬೇಕು. "ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ರಾಷ್ಟ್ರಕವಿ ಕುವೆಂಪು ಅವರ ಉಕ್ತಿಯಂತೆ ಕನ್ನಡಿಗರೆಲ್ಲರೂ ಕನ್ನಡಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳಬೇಕು ಎಂಬ ವಿಚಾರವನ್ನು ಶ್ರೀ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಹಾಂಗ್‌ಕಾಂಗ್‌ನಲ್ಲಿಯ ಕನ್ನಡ ಸಂಘವು ದಿ॥ ೬ ರಂದು ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಸಾನಿಧ್ಯವಹಿಸಿ ಸಂಘವು ಹಮ್ಮಿಕೊಂಡಿದ್ದ "ಸಮುದಾಯ ಸೇವಾ ಯೋಜನೆಯ ಪತ್ರಕ"ವನ್ನು ಉದ್ಘಾಟಿಸುತ್ತಾ ಈ ವಿಚಾರವನ್ನು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹಾಂಗ್‌ಕಾಂಗ್‌ನಲ್ಲಿ ಭಾರತೀಯ ರಾಯಭಾರಿಯಾಗಿರುವ ಶ್ರೀಮಾನ್ ಎಲ್.ಡಿ.ರಾಲ್ಟೆ ಹಾಗೂ ಶ್ರೀಮತಿ ಎಲ್.ಟಿ.ರಾಲ್ಟೆ ಸಹಭಾಗಿ ಆಗಿದ್ದರು.

ಶ್ರೀ ಕಾಶೀ ಜಗದ್ಗುರುಗಳು ತಮ್ಮ ಆಶೀರ್ವಚನವನ್ನು ಮುಂದುವರಿಸುತ್ತಾ... ಹಾಂಗ್‌ಕಾಂಗ್ ಕನ್ನಡ ಸಂಘವು ಸಮುದಾಯ ಸೇವಾಯೋಜನೆಯನ್ನು ಹಮ್ಮಿಕೊಂಡು ಕರ್ನಾಟಕದ ನೆಲಮಂಗಲದಲ್ಲಿಯ ಹಿಂದುಳಿದ ಸರಕಾರಿ ಶಾಲೆಯ ಅಭಿವೃದ್ಧಿಗಾಗಿ ಪ್ರತಿವರ್ಷ ೧,೩೦,೦೦೦ ರೂ.ಗಳ ಸಹಾಯ ಹಸ್ತವನ್ನು ಚಾಚಿರುವದು ಹೊರನಾಡ ಮತ್ತು ಹೊರ ರಾಷ್ಟ್ರಗಳ ಕನ್ನಡಿಗರೆಲ್ಲರೂ ಅನುಕರಿಸುವಂತಹದಾಗಿದೆ ಎಂದರು.

ಕನ್ನಡ ರಾಜ್ಯೋತ್ಸವವನ್ನು ಕುರಿತು ಮಾತನಾಡುತ್ತಾ ಭಾಷೆಯು ಭಾವಾಭಿವ್ಯಕ್ತಿಯ ಒಂದು ಪ್ರಮುಖವಾದ ಸಾಧನವು. ಇಂದು ವಿಶ್ವದಲ್ಲಿ ೬,೯೦೯ ಭಾಷೆಗಳು ಪ್ರಚಲಿತದಲ್ಲಿವೆ. ಕೇವಲ ಭಾರತದಲ್ಲಿಯೇ ೧,೫೦೦ ಭಾಷೆಗಳು ಬಳಕೆಯಲ್ಲಿವೆ. ಅಂತೆಯೇ ಭಾರತದೇಶವು ಪ್ರಾಚೀನ

PROPAGATING KANNADA CULTURE AND KANNADA FRAGRANCE AMONG FELLOW KANNADIGAS IN THE HONG KONG NEIGHBORHOOD.

Kannada Sangha Hong Kong ®

Propagating Karnataka Culture and Kannada fragrance

KSHK

(Registered under Hong Kong societies ordinance Ref CP/LIC/SO/19/31330)
Unit 1401, Chekiang Frist Bank Center, 1 Duddell street, Central, Hong Kong

KSHK Officers:

President:
Sadashiv Hegde
Tel: 6252 7552

Secretary:
Roopa Kiran
68978762

Treasurer:
Mohan Vernekar
Tel: 9047 4510

Executive Committee:

Poorna Mysoor
Tel: 9102 9151

Uday Kaushik
Tel: 9105 0934

Ravi Shroff
Tel: 9039 2354

Venkat Rangan
Tel: 6184 9175

Web: www.kshk.org

ಕಾಲದಿಂದಲೂ ಒಂದು ವಿಶಾಲವಾದ ಬಹುಜನಾಂಗೀಯ, ಬಹುಧರ್ಮೀಯ, ಬಹುಭಾಷಿಕ ಪ್ರದೇಶ ಎನಿಸಿದೆ. ಈ ದೇಶದಲ್ಲಿ ಕನ್ನಡ ಭಾಷೆಗೆ ಅತ್ಯಂತ ಪ್ರಾಚೀನವೂ ಸಮೃದ್ಧವೂ ಆದ ಪರಂಪರೆ ಹಾಗೂ ಇತಿಹಾಸ ಇದೆ. ಇಂದು ಪ್ರಪಂಚದಾದ್ಯಂತ ೫ ರಿಂದ ೬ ಕೋಟಿ ಜನರು ಕನ್ನಡವನ್ನು ಮಾತನಾಡುತ್ತಾರೆ. ದ್ರಾವಿಡ ಭಾಷೆಯಾಗಿ ಸ್ವತಂತ್ರವಾಗಿ ಮೂಡಿಬಂದಿದ್ದರೂ ಸಂಸ್ಕೃತದ ತೊಟ್ಟಿಲಲ್ಲಿ ಬೆಳೆದು ಸಮೃದ್ಧಿಗೊಂಡಿದೆ.

ಕನ್ನಡ ನಾಡಿನ ಯುವಕ-ಯುವತಿಯರು ಮಾಹಿತಿ ತಂತ್ರಜ್ಞಾನದಲ್ಲಿ ಇಂದು ವಿಶ್ವದಲ್ಲಿಯೇ ಮುಂಚೂಣಿಯಲ್ಲಿದ್ದಾರೆ. ಇದಕ್ಕೆಲ್ಲಾ ಮೂಲಕಾರಣ ಕರ್ನಾಟಕದಲ್ಲಿಯ ಮಠಮಾನ್ಯಗಳು. ಅದರಲ್ಲಿಯೂ ವೀರಶೈವ ಮಠಗಳ ಪಾತ್ರ ಪ್ರಮುಖವಾದುದು. ಅಂತೆಯೇ ಅನೇಕ ಕನ್ನಡಿಗರು ಹೊರ ರಾಷ್ಟ್ರಗಳಿಗೆ ಹೋಗುವ ಸದಾವಕಾಶವನ್ನು ಪಡೆದುಕೊಂಡರು. ಇಂದು ಹಾಂಗ್‌ಕಾಂಗ್‌ನಲ್ಲೂ ಸಹ ವಿವಿಧ ಕ್ಷೇತ್ರಗಳಲ್ಲಿ ಕಾರ್ಯಮಾಡುತ್ತಿರುವ ಕನ್ನಡಿಗರೆಲ್ಲಾ ಒಂದು ಕುಟುಂಬದಂತೆ ಕೂಡಿಕೊಂಡಿದ್ದು ಕನ್ನಡ ರಾಜ್ಯೋತ್ಸವವನ್ನು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಆಚರಿಸುತ್ತಿರುವುದು ನಮಗೆ ಅತ್ಯಂತ ಹೆಮ್ಮೆ ತಂದಿದೆ ಎಂಬುದಾಗಿ ಹೇಳಿದ ಶ್ರೀ ಜಗದ್ಗುರುಗಳವರು ಸಂಘದ ಅಧ್ಯಕ್ಷರಾದ ಶ್ರೀ ಸದಾಶಿವ ಹೆಗಡೆಯವರಿಗೆ ಶಾಲು ಹೊದೆಸಿ ಶ್ರೀ ಪೀಠದಿಂದ ಗೌರವಿಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಹಾಂಗ್‌ಕಾಂಗ್‌ನಲ್ಲಿನ ಭಾರತೀಯ ರಾಯಭಾರಿಗಳಾದ ಶ್ರೀಮಾನ್ ರಾಲ್ಟೆ ಅವರು ಕನ್ನಡ ಸಂಘದ ಸೇವಾ ಯೊಜನೆಯನ್ನು ಮೆಚ್ಚಿ, ಈ ಯೊಜನೆಯನ್ನು ನಿರಂತರವಾಗಿ ಮಾಡುವ ಸಂಕಲ್ಪವನ್ನು ಮಾಡಿದ ಸಂಘವನ್ನು ಪ್ರಶಂಸಿಸಿದರು.

ಕಾರ್ಯಕ್ರಮವು ರಷ್ಮಿ ಹಾಗೂ ಶೋಭಾ ಶರಾಫ್ ರವರ ಗಣೇಶ ಸ್ತುತಿಯಿಂದ ಪ್ರಾರಂಭವಾಯಿತು. ಸುಮತಿ,ರಘು,ಸುಷ್ಮಾ, ಪ್ರದೀಪ ಇವರು ಸ್ವಾಗತ ಗೀತೆಯನ್ನು ಹಾಡಿದರು. ಸಂಘದ ಅಧ್ಯಕ್ಷರಾದ ಶ್ರೀ ಸದಾಶಿವ ಅವರು ಸರ್ವರನ್ನು ಸ್ವಾಗತಿಸಿದರು. ತರುವಾಯ ಪ್ರಣವ್, ಮೇದಾ, ವಾಸುಕಿ, ಅಮೋಘ, ಶ್ರೀನಂದನ್,ಅಭಿ,ಖುಷಿ,ಶ್ರೀಯಾ ಮತ್ತು ತೇಜಸ್ ಈ ಚಿಕ್ಕಮಕ್ಕಳು ಪುಣ್ಯಕೋಟಿಯ ನೃತ್ಯ ನಾಟಕವನ್ನು ಸಾದರಪಡಿಸಿದರು. ಅದರಂತೆ ಸಂಘದ ಸ್ತ್ರೀ ಶಕ್ತಿ ಸಹೋದರಿಯರಾದ ರಮಾ, ಕಾತ್ಯಾಯಿನಿ, ವಾಣಿ, ಜ್ಯೋತಿ, ರೇಖಾ ಮತ್ತು ರೂಪಾ ಅವರು

PROPAGATING KANNADA CULTURE AND KANNADA FRAGRANCE AMONG FELLOW KANNADIGAS IN THE HONG KONG NEIGHBORHOOD.

KANNADA SANGHA HONG KONG

Kannada Sangha Hong Kong ®

Propagating Karnataka Culture and Kannada fragrance

KSHK

(Registered under Hong Kong societies ordinance Ref CP/LIC/SO/19/31330)
Unit 1401, Chekiang Frist Bank Center, 1 Duddell street, Central, Hong Kong

KSHK Officers:

President:
Sadashiv Hegde
Tel: 6252 7552

Secretary:
Roopa Kiran
68978762

Treasurer:
Mohan Vernekar
Tel: 9047 4510

Executive Committee:

Poorna Mysoor
Tel: 9102 9151

Uday Kaushik
Tel: 9105 0934

Ravi Shroff
Tel: 9039 2354

Venkat Rangan
Tel: 6184 9175

Web: www.kshk.org

ಸಾಮೂಹಿಕ ನೃತ್ಯವನ್ನು ಅಭಿನಯಿಸಿದರು. ಅದರಂತೆ ಪವನ್ ಹಾಗು ತೇಜಸ್ ಶಾಸ್ತ್ರೀಯ ವಾದ್ಯ ಸಂಗೀತವನ್ನು ಸಾದರಪಡಿಸಿದರು. ಪುಟಾಣಿ ಪ್ರೀತಿಯಿಂದ ಹಾಡು, ಗಾಯತ್ರಿಯಿಂದ ನೃತ್ಯ, ಸುಷ್ಮಾರಿಂದ ಭರತ ನಾಟ್ಯ, ಸುಮತಿಯವರಿಂದ ಕವಿಪರಿಚಯ, ಪ್ರಸನ್ನ ಅವರಿಂದ ಕಾವ್ಯವಾಚನ ನಡೆಯಿತು. ಬಾಬು, ಸಮೀರ್, ಶ್ರೀನಿವಾಸ್, ತಾಂಡವ್ ಹಾಗೂ ವೀರ್ ಇವರು ಜಾನಪದ ನೃತ್ಯವನ್ನು ಅಭಿನಯಿಸಿದರು. ಇದೂ ಅಲ್ಲದೆ ರಂಗನ್, ರೂಪಾ, ಪ್ರಸನ್ನ, ಸತೀಶ್, ಸುಮತಿ, ರಾಜ್‌ಪುರೋಹಿತ್ ಹಾಗೂ ಉದಯ್ "ಸಿನಿ ಮಹಾತ್ಮೆ" ಎಂಬ ನಗೆ ನಾಟಕವನ್ನು ಸಾದರ ಪಡಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಸನ್ನಿಧಿಯವರ ಜೊತೆಗೆ ಬಂದಿದ್ದ ಶಾಖಾಪುರದ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಹಾಗೂ ಕೊಟ್ಟೂರಿನ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಗುಳೇದಗುಡ್ಡದ ಶ್ರೀ ಕೃಷ್ಣಯೋಗಾಶ್ರಮದ ಶ್ರೀ ಬಸವರಾಜ್ ಹಡಗಲಿಯವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕೊನೆಗೆ ರೂಪಾ ಕಿರಣ ಅವರ ಅಭಿನಂದನೆಯೊಂದಿಗೆ ಕಾರ್ಯಕ್ರಮ ಪೂರ್ಣಗೊಂಡಿತು.

KANNADA SANGHA HONG KONG

ಕನ್ನಡ ಸಂಘದ ಪರವಾಗಿ

ಖಜಾಂಚಿಗಳು

25 ರಜತ ಮಹೋತ್ಸವ



ಹಾಂಕಾಂಗ್ ಗಲ್ಲಿಗಳಲ್ಲಿ ಯೋಗದ ಬಿಂಕ

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಹಾಂಕಾಂಗ್‌ಗೆ ತೆರಳಿದ್ದ ಕಾಶೀ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ಅಲ್ಲಿಯ ಕೆಲವು ವೈಶಿಷ್ಟ್ಯಗಳ ಬಗ್ಗೆ ಕೆಲವೊಂದು ಸ್ವಾರಸ್ಯಕರ ವಿಷಯಗಳನ್ನು ಹೇಳಿದ್ದಾರೆ.

ಪ್ರತಿಯೊಂದಕ್ಕೂ ಮೀಟರ್

ನಮ್ಮಲ್ಲಿಯ ಸರಕಾರಗಳು ಅದು ಇದು 'ಫ್ರೀ' ಕೊಡುವಂತೆ ಇಲ್ಲಿಯ ಸರಕಾರ ಯಾವುದನ್ನೂ 'ಫ್ರೀ'ಯಾಗಿ ಕೊಡುವುದಿಲ್ಲ. ಪ್ರತಿಯೊಂದಕ್ಕೂ ಮೀಟರ್ ಅಳವಡಿಕೆ. ಹೀಗಾಗಿ ಅವುಗಳ ದುರ್ಬಳಕೆ ಇಲ್ಲ. ಒಂದು ವೇಳೆ ದುರ್ಬಳಕೆ ಮಾಡಿಕೊಂಡರೆ ಅಷ್ಟು ಹಣವನ್ನು ಅವರ ಅಕೌಂಟ್‌ನಿಂದಲೇ ಕಟ್ ಮಾಡಿಕೊಳ್ಳಲಾಗುತ್ತದೆ. ಹಾಂಕಾಂಗ್‌ನಲ್ಲಿ ಅಪ್ಪಿತಪ್ಪಿಯೂ ಗಿಡ ಮರ ಕಡಿಯುವಂತಿಲ್ಲ. ರಸ್ತೆಗಳ ಎರಡೂ ಪಕ್ಕಗಳಲ್ಲಿ ಎಲ್ಲಿಯಾದರೂ ಖಾಲಿ ಜಾಗ ಕಂಡು ಬಂದರೆ ಅಲ್ಲಿಯೂ ಗಿಡ ಬಳ್ಳಿಗಳನ್ನೇ ಬೆಳೆಸಲು ಮುಂದಾಗುತ್ತಾರೆ.

• ರಂಗನಾಥ ಕಮತರ

ಹಾಂಕಾಂಗ್ ಯಾರಿಗೆ ಗೊತ್ತಿಲ್ಲ. ಒಂದು ಕಾಲದಲ್ಲಿ ಬ್ರಿಟಿಷರ ವಸಾಹತುವಾದ ಇದು ಈಗ ಜಗತ್ತಿನ ಪ್ರಮುಖ ವ್ಯಾಪಾರ ಕೇಂದ್ರ. ಕೆಲವೇ ವರ್ಷಗಳ ವರೆಗೆ ಬ್ರಿಟಿಷರ ವಶದಲ್ಲಿದ್ದು ಇದು ಈಗ ಚೀನಾ ಕೈಯಲ್ಲಿದೆ. ಆದ್ರೆ ಇಲ್ಲಿ ಯೋಗ ಭಾರತಕ್ಕಿಂತ ಹೆಚ್ಚು ಪ್ರಖ್ಯಾತಿ. ಹಾಂಕಾಂಗ್‌ನಲ್ಲಂತೂ ಪ್ರತಿ ಗಲ್ಲಿಗಲ್ಲಿಗಳಲ್ಲಿ ಯೋಗ ಕೇಂದ್ರಗಳು ತಲೆ ಎತ್ತಿವೆ. ನಮ್ಮಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ ಪ್ರತಿ ಗಲ್ಲಿಗಲ್ಲಿಗಳಲ್ಲಿ ದವಾಖಾನೆ ಇರುತ್ತದಲ್ಲ, ಹಾಗೆ...!

ವಿಶೇಷ ಅಂದ್ರೆ ಹಾಂಕಾಂಗ್‌ನಲ್ಲಿರುವ ಬಹುತೇಕ ಯೋಗ ಶಿಕ್ಷಕರು ಭಾರತದವರು..! ಇಲ್ಲಿನ ಯೋಗ ಶಿಕ್ಷಕರಿಗೆ ಅಲ್ಲಿ ಎಲ್ಲಿಲ್ಲದ ಬೇಡಿಕೆ. 40-80 ಸಾವಿರ ರೂ.ಗಳ ವರೆಗೂ ಸಂಬಳ ಪಡೆಯುತ್ತಾರಂತೆ. ಅಲ್ಲಿಯ ಜನರು ಆರೋಗ್ಯ ಮತ್ತು ಸೌಂದರ್ಯಪ್ರಿಯರು. ಹೀಗಾಗಿ ಯೋಗಕ್ಕೆ ಪ್ರಾಮುಖ್ಯತೆ ಬಂದಿದೆ. ಯೋಗಾಭ್ಯಾಸದ ಮೂಲಕವೇ ತಮ್ಮ ಶರೀರ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಒತ್ತು ನೀಡುತ್ತಿದ್ದಾರೆ. ಜತೆಗೆ ಹಾಂಕಾಂಗ್ ಹೇಳಿ ಕೇಳಿ ವ್ಯಾಪಾರ ಕೇಂದ್ರ. ಹೀಗಾಗಿ ದೈಹಿಕ ಶ್ರಮವೂ ಕಡಿಮೆ, ಮಾನಸಿಕ ಒತ್ತಡ ಜಾಸ್ತಿ. ಮಾನಸಿಕ ಹಾಗೂ ದೈಹಿಕ ಸಮತೋಲನಕ್ಕಾಗಿ ಯೋಗ ಅಲ್ಲಿ ಜನಪ್ರಿಯವಾಗುತ್ತಿದೆ ಎನ್ನುತ್ತಾರೆ ಶ್ರೀಗಳು.

ಭಾರತದಲ್ಲಿ ಪ್ರತಿಯೊಂದು ಓಣಿ ಓಣಿಗಳಲ್ಲಿ ದವಾಖಾನೆಗಳಿರುವಂತೆ ಅಲ್ಲಿ ಅಷ್ಟು ಸಂಖ್ಯೆಯ ಯೋಗ ಕೇಂದ್ರಗಳು ಕಾಣುತ್ತವೆ. ಭಾರತೀಯ ಯೋಗ ಗುರುಗಳಿಂದ ಕಲಿತೇ ಇಷ್ಟೆಲ್ಲ ಯೋಗ ಕೇಂದ್ರಗಳು ಆರಂಭವಾಗಿರುವುದು...! 80-90 ವರ್ಷ ವಯಸ್ಸಾಗಿದ್ದರೂ ತಮ್ಮ ಕೆಲಸ

ರಾಜದಂಡದ ಭೀತಿ

ಅಲ್ಲಿಯ ಪ್ರತಿಯೊಂದು ಅಪರಾಧಕ್ಕೆ ಪ್ರಬಲವಾದ 'ರಾಜದಂಡ' ವಿಧಿಸುತ್ತಾರೆ. ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ ಮತ್ತು ಧೂಮ್ರಪಾನ ಮಾಡುವ ಅಪರಾಧಿಗಳಿಗೆ ನೂರಾರು ಡಾಲರ್‌ಗಳ ದಂಡ ವಿಧಿಸುವುದರಿಂದ ಮತ್ತು ಅಂತಹ ಅಪರಾಧಗಳಿಗೆ ಪುನಃ ಪುನಃ ಶಿಕ್ಷೆ ಆಗುವುದರಿಂದ ರಾಷ್ಟ್ರೀಯ ಸುರಕ್ಷಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪರಿಪಾಲಿಸುತ್ತಾರೆ. ಭಾರತದಲ್ಲಿ ಯಾರಿಗೂ ರಾಜದಂಡದ ಭೀತಿ ಇಲ್ಲ. ಹೀಗಾಗಿಯೇ ಕಾನೂನು ಇದ್ದರೂ ಪರಿಪಾಲಿಸುವ ಪರಿಪಾಠವಿಲ್ಲ.


ಕಾರ್ಯಗಳನ್ನು ತಾವೇ ಮಾಡಿಕೊಳ್ಳುತ್ತಾರೆ, ಕ್ರಿಯಾಶೀಲರಾಗಿರುತ್ತಾರೆ.

ಎಲ್ಲವೂ ಆಮದು : ಭಾರತದಂತೆ ಅಲ್ಲಿ ಯಾವುದೇ ಆಹಾರ ಧಾನ್ಯಗಳಾಗಲಿ, ತರಕಾರಿಗಳಾಗಲಿ ಉತ್ಪನ್ನವಾಗುವುದಿಲ್ಲ. ಬೆಳೆಸುವುದೂ ಇಲ್ಲ. ವ್ಯಾಪಾರವೇ ಪ್ರಮುಖ ಉದ್ಯೋಗ. ಹೀಗಾಗಿ ಎಲ್ಲವನ್ನೂ ಹೊರದೇಶಗಳಿಂದ ಆಮದು ಮಾಡಿಕೊಳ್ಳುವುದು ಅನಿವಾರ್ಯ. ಆದ್ರೂ ಎಲ್ಲವೂ ಲಭ್ಯ. ನೋಡಿದವರಿಗೆ ಎಲ್ಲವನ್ನೂ ಹಾಂಕಾಂಗ್‌ನಲ್ಲಿಯೇ ಬೆಳೆಯುತ್ತಾರೆಯೋ ಎಂದೆಂ ಅನ್ನಿಸದಿರದು. ಸ್ವಚ್ಛತೆಯಲ್ಲಿ ಎಲ್ಲರಿಗಿಂತ ಮುಂದೆ.

ನೊಣಗಳು ಕಾಣುವುದೇ ಇಲ್ಲ: ಸೊಳ್ಳೆ ಹಾಗೂ ನೊಣ ಕಾಣುವುದೇ ಇಲ್ಲ. ಹೀಗಾಗಿ ಸಾಂಕ್ರಾಮಿಕ ರೋಗಗಳ ಭಯ ತೀರ ಕಡಿಮೆ. ಇದಕ್ಕೆ ಕಾರಣ ಸ್ವಚ್ಛತೆ ಆಡಳಿತದ ಕೆಲಸವಷ್ಟೇ ಅಲ್ಲ, ಕೆಲಸವಲ್ಲ, ಎಲ್ಲರೂ ಸಹ ಸ್ವಚ್ಛತೆ ಕಾಪಾಡುವುದು ತಮ್ಮ ಜವಾಬ್ದಾರಿಯೂ ಹೌದು ಎಂದು ತಿಳಿದಿರುವುದು. ಹೀಗಾಗಿ ರಸ್ತೆ ಸಹ ಮನೆ ಒಳಗೆ ಇರುವಷ್ಟು ಸ್ವಚ್ಛವಾಗಿರುತ್ತದೆ. ಪ್ರತಿ ರಸ್ತೆ ಅಥವಾ ಬೀದಿ ಪಕ್ಕದಲ್ಲಿ ಕಸದ ಡಬ್ಬಗಳಿರುತ್ತವೆ, ಕಸವನ್ನು ಅಲ್ಲಿಯೇ ಚೆಲ್ಲಬೇಕು.

ಅಲ್ಲಿಯ ರಸ್ತೆಗಳು ಬಹಳ ಸ್ವಚ್ಛವಾಗಿರುತ್ತವೆ. ರಸ್ತೆಗಳ ಮೇಲೆ ಹುಡುಕಾಡಿದರೂ ಸ್ವಲ್ಪವೂ ಧೂಳು ಸಿಗುವುದಿಲ್ಲ. ಯಾವಾಗಲೂ ಕಸಗೂಡಿಸಿ ನೀರಿನಿಂದ ತೊಳೆದಂತೆ ಕಾಣುತ್ತಿರುತ್ತದೆ. ಅಪ್ಪಿತಪ್ಪಿಯೂ ಒಂದು ಕಸ ಕಡ್ಡಿಯೂ ಕಂಡು ಬರುವುದಿಲ್ಲ. ಪ್ರತಿ ವಾರಕ್ಕೊಮ್ಮೆ ರಸ್ತೆಗಳ ಸ್ವಚ್ಛತೆ ಕಾರ್ಯ ನಡೆದಿರುತ್ತದೆ. ಅಲ್ಲಿಯ ರಸ್ತೆಗಳನ್ನು ನೋಡುವುದೇ ಚೆಂದ. ಅಲ್ಲಿಯ ಟ್ರಾಫಿಕ್ ವ್ಯವಸ್ಥೆಯೂ ಅಷ್ಟೇ ಅಚ್ಚುಕಟ್ಟು, ಇಲ್ಲಿ ಪಾದಚಾರಿಗಳಿಗೆ ಹಾಗೂ ಇಲ್ಲಿಯ ರಸ್ತೆಯ ನಿಯಮಗಳು ಅಪಘಾತ ಮತ್ತು ಅವಘಡಗಳು ಸಂಭವಿಸದಂತೆ ತಡೆಯುತ್ತವೆ. ಅದೂ ಅಲ್ಲದೇ





ಘಂಟೆಗಳ ಬಳಕೆಯೂ ಅಲ್ಲಿದೆ...!


ಗುಂಪುಗಾರಿಕೆ ಇಲ್ಲ: ಬೌದ್ಧ ಧರ್ಮದಲ್ಲಿ 'ವಿಪಸ್ಯನೆ' ಎಂಬ ಧ್ಯಾನ ಯೋಗವನ್ನು ಮೊದಲಿನಿಂದಲೂ ಕಲಿಸುತ್ತಾ ಬಂದಿದ್ದಾರೆ. ಈ ಧ್ಯಾನ ಮಾರ್ಗದಲ್ಲಿ ಅನೇಕ ಜನರ ಗುಂಪಿನಲ್ಲಿ ತಾನಿದ್ದರೂ ನಾನು ಒಬ್ಬನೇ ಇದ್ದೇನೆ ಎಂಬ ಪ್ರತೀತಿ ಧ್ಯಾನ ಮಾಡುವವರಿಗೆ ಬಂದಾಗ 'ವಿಪಸ್ಯನೆ' ಧ್ಯಾನವು ಪೂರ್ಣವಾಗುವುದು. ಇಂದು ಹಾಂಗಕಾಂಗ್ ದೇಶದ ಜನರೂ ಸಹ ಆ ಧ್ಯಾನ ಮಾರ್ಗದಿಂದ ಪ್ರಭಾವಿತರಾಗಿದ್ದಾರೇನೋ. ಇಲ್ಲಿಯ ಜನರಲ್ಲಿ ಗುಂಪುಗಾರಿಕೆ ಇಲ್ಲ. ದೈನಂದಿನ ಬದುಕಿನಲ್ಲಿಯೂ ಒಬ್ಬರಿಗೊಬ್ಬರು ಅಪರಿಚಿತರಂತೆಯೇ ಇರುತ್ತಾರೆ.

ಇಲ್ಲಿ ಯಾರೂ ಯಾವ ಧರ್ಮವನ್ನೂ ಬಹಿರಂಗ ವೇದಿಕೆಗಳ ಮೂಲಕ ಪ್ರಚಾರ ಮಾಡುವಂತಿಲ್ಲ. ಏನಿದ್ದರೂ ಒಳ ಆವರಣದಲ್ಲಿಯೇ ಮಾಡಬೇಕು. ಮೊದಲಿನಿಂದಲೂ ಬೌದ್ಧ ಧರ್ಮದ ಪ್ರಭಾವ ಇಲ್ಲಿ ಎದ್ದು ಕಾಣುವುದು. ಇಲ್ಲಿ ವಿಶಾಲವಾದ ಬೌದ್ಧ ಪ್ರತಿಮೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿಯ ಸಣ್ಣ ಸಣ್ಣ ಪ್ರತಿಮೆಗಳು ಕಂಡು ಬರುತ್ತವೆ ಅಷ್ಟೆ ಎನ್ನುತ್ತಾರೆ.










ಹಾಂಗ್‌ಕಾಂಗ್‌ನಲ್ಲಿ ಕಾಶೀ ಶ್ರೀಗಳ ಪೀಠಾರೋಹಣ ವರ್ಧಂತಿ ಮಹೋತ್ಸವ

ಜಗದ್ಗುರುಗಳು ಕಾಶೀಪೀಠದ ಜಗದ್ಗುರುಗಳಾಗಿ 11–11–2009ಕ್ಕೆ 21 ವರ್ಷಗಳಾಗಿದ್ದು–ಅಲ್ಲಿನ ಕನ್ನಡಿಗರಿಗೆ ಇದು ತಿಳಿದು ಬಂದು ಎಲ್ಲರೂ ಸೇರಿ ಬಹಳ ಸಂಭ್ರಮದಿಂದ ವರ್ಧಂತಿ ಮಹೋತ್ಸವವನ್ನು ಅಲ್ಲಿನ ಬಾಡಿ ವೈಸ್ ಯೋಗ ಕೇಂದ್ರದಲ್ಲಿ ಆಚರಿಸಿದರು. ಅಂದಿನ ವೈಶಿಷ್ಟ್ಯವೇನೆಂದರೆ–ಮಹಿಳೆಯರು ಪಂಚವರ್ಣದ ಸೀರೆಗಳನ್ನು ಧರಿಸಿ ಗುರುಗಳ ಪಾದಪೂಜೆಯನ್ನು ಬಹಳ ಭಕ್ತಿಯಿಂದ ಎಲ್ಲರೂ ಕೂಡಿ ಮಾಡಿದ್ದು ಗುರುಗಳಿಗೆ ಆನಂದವಾಯ್ತು. ಹಸಿರು, ಕೆಂಪು, ನೀಲಿ, ಬಿಳಿ, ಹಳದಿ ಬಣ್ಣದ ಉಡುಗೆ ಉಟ್ಟಿದ್ದು ಪಂಚಪೀಠಗಳನ್ನು ಪ್ರತಿನಿಧಿಸಿದೆ ಎಂದರು.


ಚೀನಾದ ಹಾಂಕಾಂಗ್‌ನ ಬಾಡಿವೈಸ್ ಯೋಗ ಕೇಂದ್ರದಲ್ಲಿ ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಪೀಠಾರೋಹಣದ 21ನೇ ವರ್ಧಂತಿ ಮಹೋತ್ಸವವನ್ನು ಆಚರಿಸಲಾಯಿತು.

ಯೋಗ ಕೇಂದ್ರದ ಮಾಲೀಕರಾದ ಮಾಕ್‌ಪುಯಿ, ಸಾನ್‌ಲಿಸಾ, ಮುಕ್‌ಪುಯಿ ಚ್ರೆಸ್‌ಇ, ಕ್ಲೆರ್‌ವೊಂಗ್, ಸುಹಾಸಿನಿ ಮತ್ತು ಅನಿತಾ ಪಂಚಪೀಠಗಳ ಧ್ವಜವರ್ಣಗಳಾದ ಹಸಿರು, ಕೆಂಪು, ನೀಲಿ, ಬಿಳಿ ಮತ್ತು ಹಳದಿ ಬಣ್ಣದ ಉಡುಪುಗಳನ್ನು ಧರಿಸಿ ಶ್ರೀಗಳ ಪಾದಪೂಜೆ ಮಾಡಿ ಶಾಲುಹೊದಿಸಿ ಪುಷ್ಪಗುಚ್ಛ ಸಮರ್ಪಿಸಿ ಗೌರವ ಸಲ್ಲಿಸಿದರು.

ಒಬ್ಬ ಯೋಗಿಯು ಅನುಭವಿಸಿದ ಒಂದು ಕ್ಷಣದ ಆನಂದವನ್ನು ಭೋಗಿಯು ಕೋಟಿ ಜನ್ಮಗಳ ವಿಷಯಭೋಗದಿಂದ ಪಡೆಯಲು ಸಾಧ್ಯವಿಲ್ಲ. ಮನುಷ್ಯನ ಬದುಕಿಗೆ ಯೋಗವು ಅತ್ಯವಶ್ಯವಾಗಿದ್ದು, ಸರ್ವರೂ ಯೋಗಾಭ್ಯಾಸ ಮಾಡಬೇಕೆಂದು ಕಾಶೀ ಶ್ರೀಗಳು ಹೇಳಿದರು.

ಪ್ರತಿಯೊಬ್ಬರೂ ಯೋಗಮಾರ್ಗದಿಂದಲೇ ಶರೀರವನ್ನು ತ್ಯಜಿಸಬೇಕು. ಆದರೆ ಇಂದು ಬಹುತೇಕರು ರೋಗ ಮಾರ್ಗದಿಂದಲೇ ಶರೀರ ತ್ಯಜಿಸುವ ಕಾಲ ಬಂದೊದಗಿದೆ. ದೇವಾಲಯುವೆಂದು ಕರೆಸಿ ಕೊಳ್ಳಬೇಕಾದ ದೇಹವು ಇಂದು ರೋಗಾಲಯವಾಗಿದೆ. ಇದಕ್ಕೆಲ್ಲ ಅನಿಯಮಿತ ಮತ್ತು ಅನುಶಾಸನರಹಿತ ಬದುಕೇ ಕಾರಣವಾಗಿದ್ದು, ಯೋಗಮಾರ್ಗ ಅನುಸರಿಸಿದಾಗ ಬದುಕು ಸಾರ್ಥಕವಾಗುತ್ತದೆ ಎಂದರು.

ಮಹಾತ್ಮಾ ಬಸವೇಶ್ವರರೂ ಸಹ ಕೂಡಲ ಸಂಗಮದೇವರನ್ನು ಒಲಿಸಿಬಂದ ಪ್ರಸಾದಕಾಯವನ್ನು ಕೆಡಿಸಲಾಗದು ಎಂದು ತಮ್ಮ ವಚನದಲ್ಲಿ ಯೋಗಜೀವನವನ್ನು ಎತ್ತಿ ಹಿಡಿದಿದ್ದಾರೆ. ಇಂದು ರಾಷ್ಟ್ರಮಟ್ಟದ ಭಾರತೀಯ ಯೋಗ ಗುರುಗಳು ಎಲ್ಲ ದೇಶದ ಜನರಿಗೆ ಭಾರತದ ಹಠಯೋಗ, ರಾಜಯೋಗ ಮತ್ತು ಶಿವಯೋಗಗಳ ಬಗ್ಗೆ ಅರಿವು ಮೂಡಿಸಿ ಅವರನ್ನು ಭೋಗ ಜೀವನದಿಂದ ಯೋಗಜೀವನದೆಡೆಗೆ ಕೊಂಡೊಯ್ಯುತ್ತಿದ್ದಾರೆ ಎಂದರು.



ಹಾಂಕಾಂಗ್ : ಕಾಶೀ ಶ್ರೀಗಳ ವರ್ಧಂತ್ಯುತ್ಸವ

ಪ್ರತಿಯೊಬ್ಬರೂ ಯೋಗ ಮಾರ್ಗದಿಂದಲೇ ಶರೀರವನ್ನು ತ್ಯಜಿಸಬೇಕು. ದೇಹವೇ ದೇವಾಲಯ. ಅದಕ್ಕಾಗಿ ದೇಹವನ್ನು ಶುಚಿಯಾಗಿಟ್ಟುಕೊಳ್ಳಬೇಕು.

ಕಾಶೀ ಶ್ರೀಗಳ ಪೀಠಾರೋಹಣ

ಹಾಂಕಾಂಗ್‌ನಲ್ಲಿ ವರ್ಧಂತಿ ಮಹೋತ್ಸವ

ವಿಜಯ ಕರ್ನಾಟಕ



ಹಾಂಕಾಂಗ್‌ನ ಬಾಡಿವೈಸ್ ಯೋಗ ಕೇಂದ್ರದಲ್ಲಿ ನಡೆದ ಕಾಶೀ ಶ್ರೀಗಳ ಪೀಠಾರೋಹಣದ 21ನೇ ವರ್ಧಂತಿ ಮಹೋತ್ಸವದಲ್ಲಿ ಶ್ರೀ ಜಗದ್ಗುರು ಡಾ. ಚಂದ್ರಶೇಖರ ಮಹಾಸ್ವಾಮೀಜಿಯವರನ್ನು ಗೌರವಿಸಲಾಯಿತು.

ಗುರುಗಳ ಪಾದಪೂಜೆ ಆದನಂತರ ಅಲ್ಲಿ ನೆರೆದಿದ್ದ ಭಕ್ತರು ಗುರುಗಳೊಂದಿಗೆ ಸಂವಾದವನ್ನು ಆರಂಭಿಸಿದರು ಅವರುಗಳು ಕೇಳಿದ ಪ್ರಶ್ನೆಗಳಿವು:

1. ದೇವರು ಇದ್ದಾನೆಯೆ?

2. ದೇವರು ಯಾಕೆ ಬೇಕು? ದೈನಂದಿನ ಬದುಕಿನಲ್ಲಿ ದೇವರ ಅವಶ್ಯಕತೆ ಇದೆಯೇ?

ಗುರುಗಳ ಉತ್ತರ ಬಹಳ ವಿಸ್ತಾರವಾಗಿ, ಸರಳವಾಗಿ ಎಲ್ಲರಿಗೂ ತಿಳಿಯುವಂತಹ ಉದಾಹರಣೆಗಳನ್ನು ಕೊಡುತ್ತಾ ಅವರುಗಳ ಪ್ರಶ್ನೆಗೆ ಉತ್ತರ ಆರಂಭಿಸಿದರು.

ದೈನಂದಿನ ಬದುಕಿನಲ್ಲಿ ನಾವೆಲ್ಲ ಬದುಕುತ್ತಿದ್ದೇವೆ. ಆದರೆ ಪ್ರತಿಕ್ಷಣ ಬದುಕು ಬದಲಾಗುತ್ತಿರುತ್ತದೆ. ಕಷ್ಟ-ಸುಖಗಳ ಚಕ್ರದಲ್ಲಿ ಸಿಲುಕಿರುತ್ತಾರೆ–ಇದಕ್ಕೆಲ್ಲಾ ಕಾರಣವೇನು? ನಮ್ಮ ಧರ್ಮದಲ್ಲಿ ಕರ್ಮಸಿದ್ಧಾಂತವಿದೆ. ಪ್ರತಿಯೊಂದು ವ್ಯವಹಾರಕ್ಕೂ ಕರ್ಮ ಕಾರಣವಾಗಿರುತ್ತದೆ. ಕಾರ್ಯ ಆಗಬೇಕಾದರೆ ಒಂದು ಕಾರಣಬೇಕು. ದೇವರು ಇರುವುದಕ್ಕೆ ಈ ಜಗತ್ತೇ ಕಾರಣ. ಈ ವಿಶ್ವ ಒಂದು ಕಾರ್ಯ. ಈ ಕಾರ್ಯ ಇರಬೇಕಾದರೆ ಇದನ್ನು ಮಾಡಲು ಒಂದು ಕಾರಣಬೇಕು. ಉದಾಹರಣೆಗೆ ಇಲ್ಲಿ ಒಂದು ಮರದ ಟೇಬಲ್ ಇದೆ. ಅದು ಕಾರ್ಯದ ಫಲ. ಅದು ತಾನಾಗಿಯೇ ಟೇಬಲ್ ಆಗಿ ಬಂದಿಲ್ಲ. ಅದನ್ನು ಮಾಡುವವನೊಬ್ಬ ಇರಬೇಕು. ಅವನಿಗೆ ಆ ಬಗ್ಗೆ ಪೂರ್ಣ ಜ್ಞಾನವಿರಬೇಕು. ಆಗಲೇ ಮರದಿಂದ ಟೇಬಲ್ ಆಗಲು ಸಾಧ್ಯ. ಹಾಗೆಯೇ ನ್ಯಾಯಶಾಸ್ತ್ರದಲ್ಲಿ ಒಂದು ಉದಾಹರಣೆ ಹೇಳ್ತಾರೆ– ಇಬ್ಬರು ಸ್ನೇಹಿತರು ಜೊತೆಗೂಡಿ ಹೋಗುವಾಗ ದೂರದ ಗುಡ್ಡದಲ್ಲಿ ಧೂಮ (ಹೊಗೆ) ಕಾಣುತ್ತದೆ. ಒಬ್ಬ ಗೆಳೆಯ ಹೇಳುತ್ತಾನೆ–ಅಲ್ಲಿ ಬೆಂಕಿ ಇದೆ ಎಂದು. ಬೆಂಕಿ ಕಾಣದೆ ಬೆಂಕಿ ಇದೆ ಎಂದು ಹೇಗೆ ಹೇಳುತ್ತೀ–ಎಂದು ಇನ್ನೊಬ್ಬ ಕೇಳಿದ. ಇಬ್ಬರೂ ಹತ್ತಿರ ಹೋಗಿ ನೋಡಿದಾಗ ಅವನಿಗೆ ಬೆಂಕಿ ಕಂಡು ಆಶ್ಚರ್ಯವಾಯ್ತು. ಬೆಂಕಿ ಇದೆ–ಎಂದು ಹೇಗೆ ಹೇಳಿದೆ? ಎಂದಾಗ ಮೊದಲನೆ ಸ್ನೇಹಿತ ಹೇಳುತ್ತಾನೆ ಮನೆಯಲ್ಲಿ ಅಡಿಗೆ ಮಾಡುವ ಸಲುವಾಗಿ ಬೆಂಕಿ ಹಚ್ಚಿದಾಗ ಹೊಗೆ ಬಂದದ್ದು ನೋಡಿದ್ದೆ ಎಂದನು "ಯತ್ರಯತ್ರ ದೂಮಃ ತತ್ರತತ್ರ ವಹ್ನಿಃ"

ಇದರೊಟ್ಟಿಗೆ ಇನ್ನೂ ಅರ್ಥಮಾಡಿಸುವ ಸಲುವಾಗಿ ಮತ್ತೊಂದು ಉದಾಹರಣೆ ಹೇಳಿದರು : ಒಂದು ದೊಡ್ಡ ಅರಣ್ಯದಲ್ಲಿ ಎಳೇ ಮಗುವೊಂದು ಅಳುತ್ತಿತ್ತು. ಅದನ್ನು ನೋಡಿದವ ಇಷ್ಟು ಎಳೇ ಮಗು ಇಲ್ಲಿದೆ ಎಂದರೆ ಅದರ ಹೆತ್ತವ್ವ ಇಲ್ಲೇ ಹತ್ತಿರದಲ್ಲೇ ಇರಬೇಕೆಂದು ಊಹಿಸುತ್ತಾನೆ. ಅವನು ನೋಡಿದ್ದು ಮಗುವನ್ನು ಮಾತ್ರ. ಊಹಿಸಿದ್ದು ತಾಯಿ ಇರುವಳೆಂದು. ಬೆಂಕಿಯನ್ನು ನೋಡಿದವ ಬೆಂಕಿ ಇದೆ ಎಂದು ಹೇಳಿದ್ದು. ಕಾರ್ಯ ಇದ್ದರೆ ಅದನ್ನು ಮಾಡಿದ ಕರ್ತೃ ಇರಲೇಬೇಕು. ಈ ಜಗತ್ತನ್ನು ಮಾಡುವಾಗ ಪರಿಪೂರ್ಣಜ್ಞಾನ ಇರಬೇಕು. 84 ಲಕ್ಷ ಜೀವಕೋಟಿಗಳ ಲೆಕ್ಕ ಇಡಬೇಕು. ಅವರಿಗೆ ಸುಖ–ದುಃಖ ಅವರ ಕರ್ಮಾನುಸಾರ ಕೊಡಬೇಕು, ಆಯಸ್ಸು ಮುಗಿದಾಗ ಮರಣ ಕೊಡಬೇಕು, ಮತ್ತೊಂದು ಜನ್ಮ ಕೊಡಬೇಕು–ಸಾಮಾನ್ಯರಿಗೆ ಇದೆಲ್ಲಾ ಲೆಕ್ಕ ಇಡಲು ಸಾಧ್ಯವಿಲ್ಲ. ಏಕೆಂದರೆ ಸಾಮಾನ್ಯ ಮನುಷ್ಯನಿಗೆ ತಾನು ಹೇಗೆ ಬಂದೆ ಎಂದಾಗಲಿ, ಎಂದು ಮರಣ ಬರುವುದೆಂದಾಗಲಿ ತಿಳಿದಿರುವುದಿಲ್ಲ. ಇದೆಲ್ಲವನ್ನು ತಿಳಿದಿರುವ ಸರ್ವಜ್ಞನಾಗಿರುವ, ಸರ್ವಕರ್ತೃವಾಗಿರುವ, ಸರ್ವಸಮರ್ಥನಾಗಿರುವ ಒಂದು ವಿಲಕ್ಷಣ ಶಕ್ತಿ ಇರಲೇಬೇಕು–ಎಂಬ ಅನುಮಾನ ಅಥವಾ ಕಲ್ಪನೆ ಮೂಡುತ್ತದೆ. ಈಶ್ವರನನ್ನು ಕಂಡಿಲ್ಲ ಆದರೂ ಇದೆಲ್ಲವನ್ನು ನೋಡಿ ಅನುಮಾನ ಮಾಡಬಹುದು. ಪ್ರತಿಯೊಂದಕ್ಕೂ ಪ್ರತ್ಯಕ್ಷ ಪ್ರಮಾಣ ಬೇಕೆಂದಿಲ್ಲ. ಗೆಳೆಯ ನೋಡಿದ್ದು ಹೊಗೆಯನ್ನು, ಹೇಳಿದ್ದು ಬೆಂಕಿ. ಕಂಡಿದ್ದು ಒಂದು ಹೇಳಿದ್ದು ಇನ್ನೊಂದು. ಹಾಗೆ ಕಾರ್ಯವನ್ನು ನೋಡಿ ಕಾರಣವನ್ನು ಅನುಮಾನ ಮಾಡುತ್ತೇವೆ. ಇದನ್ನು ಶಾಸ್ತ್ರಗಳು ಒಪ್ಪಿಕೊಂಡು ಬಂದಿರುತ್ತವೆ.

ನ್ಯಾಯಶಾಸ್ತ್ರದಲ್ಲಿ 'ಈಶ್ವರಸಿದ್ಧಿ' ಎನ್ನುವ ಚರ್ಚೆ ಇದೆ. ಈಶ್ವರ ಇದ್ದಾನೆ. ಆತ ಬಹಳ ಶಕ್ತಿ ಸಾಮರ್ಥ್ಯ ಉಳ್ಳವನು, ಎಲ್ಲವನ್ನು ಮಾಡುವವನು. ಒಮ್ಮೊಮ್ಮೆ ನಮ್ಮ ಕೈಯನ್ನೇ ಎತ್ತಿ ಅಲುಗಾಡಿಸಲಾಗುವುದಿಲ್ಲ. ಅಶಕ್ತರಾಗುತ್ತೇವೆ. ಆದರೆ ಇದೇ ಭೂಮಂಡಲವನ್ನು ತಿರುಗಿಸಬೇಕು. ಇಂತಹ ಎಷ್ಟೋ ಭೂಮಂಡಲಗಳು ಗ್ರಹಗಳೂ ಇವೆ. ಅವೆಲ್ಲವನ್ನು ಸರಿಯಾಗಿ ಸುಸೂತ್ರವಾಗಿ ನಡೆಸಲು ದೊಡ್ಡ ಶಕ್ತಿ ಬೇಕು, ಜ್ಞಾನ ಬೇಕು, ಸಮರ್ಥನಾಗಿರಬೇಕು. ಸರ್ವಜ್ಞ, ಸರ್ವಶಕ್ತ, ಸರ್ವಕರ್ತ ಅದಕ್ಕೆ ಈಶ್ವರ ಇದ್ದಾನೆ. ಇಷ್ಟು ದೊಡ್ಡ ಕಾರ್ಯ ಈ ಜಗತ್ತು ನಮ್ಮೆದುರಿಗಿರುವಾಗ ಇದಕ್ಕಿಂತ ಹೆಚ್ಚಿನ ಸಾಮರ್ಥ್ಯವುಳ್ಳ ಈಶ್ವರ ಇದ್ದಾನೆ.

II. ದೇವರು ಯಾಕೆ ಬೇಕು–ದೈನಂದಿನ ಬದುಕಿನಲ್ಲಿ ಅವನ ಅವಶ್ಯಕತೆ ಇದೆಯೆ ಎಂದು ಕೇಳಿದಿರಿ. ಈಶ್ವರ ಇದ್ದಾನೆ ಎಂಬ ನಂಬಿಕೆ, ಭಾವನೆ ನಮ್ಮಲ್ಲಿ ಮೂಡಿದಾಗ ಅವನಲ್ಲಿ ನಮಗೆ ಭಕ್ತಿ ಮೂಡುತ್ತದೆ. ಅವನ ವಾಣಿಯನ್ನು ಒಪ್ಪುತ್ತೇವೆ. 'ಸತ್ಯಂವಧ, ಧರ್ಮಂಚರ' ಎಂದು ವೇದಾಗಮಗಳಲ್ಲಿ ಹೇಳಿದ್ದಾನೆ. ಶಾಸ್ತ್ರಗಳೆಲ್ಲಾ ಈಶ್ವರನ ವಾಣಿ ಎಂದ ಮೇಲೆ ಅವನ ವಾಣಿಯನ್ನು ಒಪ್ಪುತ್ತೇವೆ. ಎಲ್ಲವನ್ನು ಇಟ್ಟಿರುತ್ತಾನೆ. ಸತ್ಯ ಹೇಳು, ಪ್ರಾಣಿ ಹಿಂಸೆ ಮಾಡಬೇಡ–ಎಂದೆಲ್ಲಾ ಹೇಳಿದ್ದಾನೆ. ಅಲ್ಲಿ ಹೇಳಿರುವುದನ್ನು ಪಾಲಿಸಿದಾಗ ನಮಗೆ ಸುಖ ಸಿಗುತ್ತದೆ. ಈ ಪ್ರಪಂಚವೊಂದು Mall ಇದ್ದಂತೆ. ಎಲ್ಲವೂ ಅಲ್ಲಿರುತ್ತದೆ. ಆದರೆ ಅಲ್ಲಿನ ವಸ್ತುಗಳಿಗೆ ಪರಮಾತ್ಮ ಬೆಲೆ ನಿಗಧಿಪಡಿಸಿರುತ್ತಾನೆ. ಎಲ್ಲರ ಕರ್ಮಗಳನ್ನು ಪ್ರತ್ಯಕ್ಷ ನೋಡುತ್ತಿರುತ್ತಾನೆ. ಯಾರು ಹೆಚ್ಚು ಪುಣ್ಯ ಗಳಿಸಿರುತ್ತಾರೋ ಅವರಿಗೆ ಹೆಚ್ಚು ಸುಖ ಸಿಗುತ್ತದೆ. ಯಾರು ಹೆಚ್ಚು ಪಾಪ ಮಾಡಿರುತ್ತಾರೋ ಅವರಿಗೆ ಹೆಚ್ಚು ದುಃಖ ಸಿಗುತ್ತದೆ.

ದೇವರು, ಧರ್ಮದ ಮೇಲೆ ನಂಬಿಕೆ ಇರಲಿ

ವಿಜಯ ಕರ್ನಾಟಕ 21–11–2009

ಮನುಷ್ಯನಿಗೆ ಆಶ್ರಯಬೇಕು ಬಾಳಿಗೊಂದು ನಂಬಿಕೆ ಬೇಕು. ಮಕ್ಕಳಿಗೆ ತಂದೆ ತಾಯಿಕಗಳ ಆಶ್ರಯ, ವಯಸ್ಸಾದ ತಂದೆ–ತಾಯಿಗಳಿಗೆ ಮಕ್ಕಳ ಆಶ್ರಯ ಬೇಕು. ಹಾಗೆಯೇ ಎಲ್ಲದಕ್ಕೂ ಆಧಾರ ಈಶ್ವರ. ಎಲ್ಲದಕ್ಕೂ ದೊಡ್ಡದಾವುದೋ ಅದನ್ನು ಆಶ್ರಯಿಸಬೇಕು. ಆಧಾರಬೇಕು. ಪ್ರತಿಯೊಬ್ಬರಲ್ಲೂ ಈಶ್ವರನಲ್ಲಿ ಆಸ್ತಿಕಭಾವನೆ ಹುಟ್ಟಿದರೆ–ನನ್ನ ಹಿಂದೆ ಒಂದು ಶಕ್ತಿಯಿದೆ ಎಂಬ ಧೈರ್ಯ ಮೂಡುತ್ತದೆ.

ಈಗ ಒಬ್ಬ ಅನಾರೋಗ್ಯದಿಂದ ಬಳಲುತ್ತಿರುವವರ ಬಳಿ ಹೋಗಿ ಮಾತನಾಡಿಸಿದಾಗ ಅವರಿಗೆ ಮನೋಸ್ಥೈರ್ಯ ಮೂಡುತ್ತದೆ. ಅಷ್ಟೇ ನಮ್ಮಿಂದ ಆಗುವುದು.

ಈಶ್ವರ ನಿಸ್ವಾರ್ಥಿ. ಏನನ್ನು ಅಪೇಕ್ಷಿಸುವುದಿಲ್ಲ. ಎಲ್ಲವೂ ಅವನದ್ದೆ. ಹೀಗೆ ಎಲ್ಲವನ್ನು ಕೊಟ್ಟಿರುವ ಈಶ್ವರನ ಬಗೆಗೆ ನಮ್ಮಲ್ಲಿ ಕೃತಜ್ಞತೆ ತುಂಬಿ ಬರಬೇಕು. ಪ್ರತಿಯೊಂದು ಜೀವಿಗಳ ಕರ್ಮಗಳೆಲ್ಲದರ ನಿಯಂತ್ರಕ ಅವನು. ಅವನನ್ನೇ ಯಾವ ರೀತಿಯಲ್ಲಿ ಆರಾಧಿಸುತ್ತೇವೆಯೋ ಅದು ನಮ್ಮ ನಮ್ಮ ಭಾವನೆಗೆ ಸೇರಿದ್ದು. ಶಿವ ಎನ್ನಿ, ಹರಿ ಎನ್ನಿ, ದೇವಿ, ಗಣಪ, ಅಲ್ಲ, ಕ್ರಿಸ್ತ ಯಾವುದೇ ರೂಪವನ್ನು ಪರಿಭಾವಿಸಿ, ಎಲ್ಲವೂ ಆ ದಿವ್ಯಶಕ್ತಿ. ಯಾರಿಗೆ ಯಾವ ನಾಮ ರೂಪದಲ್ಲಿ ನಂಬಿಕೆ ಇರುವುದೋ ಆ ದೈವವನ್ನು ಬೆಳಗ್ಗೆ ಎದ್ದು ಸ್ನಾನಮಾಡಿ ಆ ದೇವರನ್ನು ಪೂಜಿಸುತ್ತೇವೆ. ಇದರಿಂದ ಅವನಿಗೇನೂ ಲಾಭವಿಲ್ಲ. ಲಾಭವಿರುವುದು ಪೂಜಿಸುವವರಿಗೆ. ನಮ್ಮ ಮನಸ್ಸು ಶುಭ್ರವಾಗುತ್ತದೆ, ತಿಳಿಯಾಗಿರುತ್ತದೆ; ಭಾವನಾತ್ಮಕವಾಗಿ ಭಗವಂತನೊಡನೆ ಕೂಡಿಕೊಳ್ಳುತ್ತೇವೆ; 'ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ. ಸುಳಿದು ಸೂಸುವ ಗಾಳಿ ನಿಮ್ಮ ದಾನ' ಎಂದು ಕೃತಜ್ಞತೆಯನ್ನು ತೋರುತ್ತೇವೆ. ಹೀಗೆ ಮಾಡುವುದರಿಂದ ನಮ್ಮ ಮನಸ್ಸಿಗೆ ಒಂದು ಶಕ್ತಿ ತುಂಬುತ್ತದೆ. ಹೀಗಾಗಿ ದೇವರೊಟ್ಟಿಗೆ ದಿನಾ ಸಂಪರ್ಕ ಇರುತ್ತದೆ. ಸಂಬಂಧ ಇರುವುದರಿಂದ ಶುಭ್ರವಾಗಿರುತ್ತೇವೆ.

ಜಗತ್ತಿನ ಕಾರಣರೂಪಕ್ಕೆ ಈಶ್ವರ ಬೇಕೆ? ಜೀವಿಗಳ ಕಾರ್ಯಾನುಸಾರ ಫಲ ಕೊಡಲು ಈಶ್ವರ ಬೇಕು. ನಮಗೊಂದು ಬಲವಾದ ಆಧಾರ ಬೇಕು. ಅದಕ್ಕಾಗಿ ಭಕ್ತಿ ತೋರಿಸುತ್ತೇವೆ.

ಯಾವ ರೀತಿ ಆರಾಧಿಸುವುದು ವ್ಯಕ್ತಿ ಸ್ವಾತಂತ್ರ್ಯ ನಂಬಿಕೆಗೆ ಬಿಟ್ಟದ್ದು. ಎಲ್ಲಾ ದೇಶದಲ್ಲೂ ಇದನ್ನು ಒಪ್ಪಿ ಆರಾಧಿಸುತ್ತಾರೆ. ಹಿಂದುಗಳು ಏಕದೇವೋಪಾಸಕರೆ. ಆದರೆ, ನಾನಾ ರೂಪ ನಾನಾ ನಾಮಗಳಿಂದ ವೈಭವಿಸಿಕೊಂಡು ಪೂಜಿಸುತ್ತೇವೆ.

ಮತ್ತೊಂದು ವಿಷಯ ದೇವರು ಎಲ್ಲೋ ಇಲ್ಲ. ನಮ್ಮೊಳಗಿನ ಆತ್ಮವೇ ದೇವರು. ಜೀವನೂ ದೇವನೇ–ಆತ್ಮನೂ ದೇವನೆ. ಉಪನಿಷತ್ತಿನಲ್ಲಿ ಒಂದು ಶ್ಲೋಕವಿದೆ "ದ್ವಾಸುಪರ್ಣ ಸಂಜಾಯ ....ಒಂದು ಮರದಲ್ಲಿ ಎರಡೂ ಹಕ್ಕಿಗಳಿವೆ. ಒಂದು ಸುಮ್ಮನೆ ಮೇಲೆ ಕುಳಿತಿರುತ್ತದೆ. ಮತ್ತೊಂದು ರಂಬೆಯಿಂದ ರಂಬೆಗೆ ಹಾರಿ ಹಣ್ಣುಗಳ ರುಚಿ ನೋಡುತ್ತಿರುತ್ತದೆ. ಇದೇ ಜೀವ–ಸುಮ್ಮನೆ ಕುಳಿತಿರುವುದೇ ಸಾಕ್ಷೀರೂಪವಾಗಿರುವುದೇ ಆತ್ಮ–ಎಂದು ಉಪನಿಷತ್ ಹೇಳುತ್ತದೆ. ದೇಹವೇ ದೇವಾಲಯ 'ಯತ್ರ ಜೀವಃ ತತ್ರ ಶಿವಃ' ದೇವರೇ ಗುಡಿ ಎಂಬ ಭಾವನೆ ಬಂದರೆ– ಒಬ್ಬರನ್ನೊಬ್ಬರು ಭೇಟಿ ಮಾಡಿದಾಗ ಪರಸ್ಪರ ಕೈಮುಗಿದು ನಮಸ್ಕರಿಸುತ್ತೇವೆ. ಏಕೆಂದರೆ ಅವನಲ್ಲಿ ದೇವರನ್ನು ಕಾಣುತ್ತೇವೆ. ಪರಸ್ಪರ ದೇವೋಭವ ಎನ್ನುತ್ತೇವೆ. ಈಗ ತಲೆ ಮೇಲೆ ಹಾರ ಹಾಕದೆ ಕೊರಳಿಗೆ ಹಾರ ಹಾಕುತ್ತೇವೆ. ಅದು ಒಂದು ಹೃದಯವನ್ನು ಮುಚ್ಚುತ್ತದೆ. ಹೃದಯದಲ್ಲಿ ಪರಮಾತ್ಮನಿದ್ದಾನೆ ಎಂಬ ಭಾವದಿಂದ ಒಳಗಿರುವ ದೇವರನ್ನು ಹಾರ ಹಾಕಿ ಗೌರವಿಸುವುದು–ಎಂದು ಅರ್ಥ. ಹೀಗೆ ದೇವರನ್ನು ದೇವಸ್ಥಾನದಲ್ಲಿ ಕಾಣುವುದಲ್ಲದೆ ಎಲ್ಲರಲ್ಲೂ ಇರುವ ದೇವರನ್ನು ಕಾಣುವಂತಾಗಬೇಕು. ಸರ್ವತ್ರ ದೇವಾಃ ಎಂಬ ಭಾವ ಬೆಳೆದುಬಿಟ್ಟರೆ ರಾಗ ದ್ವೇಷ ಹೋಗಿ ಸಮಾನತೆ ಬರುತ್ತದೆ. ದೇಹಗಳಲ್ಲಿ ಭಿನ್ನತೆ ಇರಬಹುದು. ಜಾತಿಯಲ್ಲಿರಬಹುದು. ಧರ್ಮ, ಭಾಷೆಗಳಲ್ಲಿ ಭಿನ್ನತೆ ಇರಬಾರದು. ಆದರೆ ಒಳಗಿನ ಆತ್ಮಕ್ಕೆ ಯಾವ ಭಿನ್ನತೆಯೂ ಇರುವುದಿಲ್ಲ.


ದೇವರನ್ನು ಮೊದಲು ಗುಡಿಯಲ್ಲಿ ನೋಡುತ್ತೇವೆ. ನಂತರ ನಮ್ಮಲ್ಲಿ ನೋಡುತ್ತೇವೆ. ಆಮೇಲೆ ಎಲ್ಲರಲ್ಲೂ ನೋಡುತ್ತೇವೆ. ಇಂತಹ ಸರ್ವತ್ರ ದೇವತಾಭಾವ ಬಂದುಬಿಟ್ಟರೆ ಅವನ ಬುದ್ಧಿ ಇನ್ನೂ ಚೆನ್ನಾಗಿರುತ್ತದೆ. ಎಲ್ಲಾ ನಾನೇ, ಹೀಗಾಗಿ ಯಾರ ಜೊತೆ ದ್ವೇಷ ಮಾಡಬೇಕು

ಎನ್ನುವ ಸರಳತೆ, ಸಹಜತೆ ಬಂದುಬಿಡುತ್ತದೆ. "ಯತ್ರ ಸರ್ವ ಅಹಮೇವ ಭವತಿ" 'ಅಲ್ಲಿ ಉಂಬರೆ ಸಂಗ ಇಲ್ಲಿ ಉಂಬರೆ ಸಂಗ' ಎನ್ನುತ್ತಾರೆ ಬಸವಣ್ಣನವರು. ಅವರ ಮನೆಯ ಆಕಳನ್ನು ಒಬ್ಬ ಕದ್ದು ಒಯ್ದು ಬಿಡುತ್ತಾನೆ. ಇದು ತಿಳಿದಾಗ ಅವರು ಹೋಗಲಿ ಬಿಡು ಇಲ್ಲೂ ಹಾಲು ಕುಡಿಯುತ್ತಿದ್ದವನು ಸಂಗಮನಾಥ, ಅಲ್ಲೂ ಸಂಗಮನಾಥನೇ ಉಣ್ಣುತ್ತಾನೆ ಎನ್ನುತ್ತಾರೆ. ಎಲ್ಲ ಕಡೆ ದೇವರನ್ನು ಕಾಣುವ ಭಾವನೆ ಮುಖ್ಯ. ಏಕನಾಥರು ಗಂಗೆಯ ತೀರ್ಥವನ್ನು ರಾಮೇಶ್ವರದಲ್ಲಿ ಒಂದು ನರಳುತ್ತಿದ್ದ ನಾಯಿಗೆ ಕುಡಿಸಿಬಿಡುತ್ತಾರೆ. ಯಥಾ ಭಾವಃ ತಥಾ ಶಿವಃ

ಇವೆಲ್ಲವನ್ನು ಕೇಳಿದ ಮೇಲೆ ಈಗ ನೀವೇ ಹೇಳಿ ದೈನಂದಿನ ಬದುಕಿನಲ್ಲಿ ಈಶ್ವರನ ಅವಶ್ಯಕತೆ ಬೇಕೋ ಬೇಡವೋ –ಹೀಗೆ ಹೇಳಿ ತಮ್ಮ ಆಶೀರ್ವಚನವನ್ನು ಮುಗಿಸಿದರು.

ಆಸ್ತಿಕತೆಯೇ ಜೀವನಾಧಾರ : ಕಾಶೀ ಶ್ರೀಗಳು

ದೇವರು ಹಾಗೂ ಧರ್ಮದ ಮೇಲಿನ ನಂಬಿಕೆ ಕಳೆದುಕೊಳ್ಳಬೇಡಿ ಎಂದು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ಹಾಂಗ್ ಕಾಂಗ್ ದೇಶದ ಕನ್ನಡ ಸಂಘದ ಸದಸ್ಯರು ಶ್ರೀ ರಾಜಪುರೋಹಿತರ ಮನೆಯಲ್ಲಿ ಹಮ್ಮಿಕೊಂಡಿದ್ದ ಚರ್ಚಾಗೋಷ್ಠಿಯಲ್ಲಿ ದೈನಂದಿನ ಬದುಕಿನಲ್ಲಿ ದೇವರ ಅವಶ್ಯಕತೆ ಕುರಿತು ಚರ್ಚೆಯಲ್ಲಿ ಅವರು ಮಾತನಾಡಿದರು.



ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯಾ, ಕ್ಷಮಾ, ದಾನ, ಪೂಜಾ, ಜಪ ಮತ್ತು ಧ್ಯಾನಗಳೆಂಬ ದಶ ಧರ್ಮಸೂತ್ರಗಳನ್ನು ಜೈನ ಬೌದ್ಧ ಧರ್ಮಗಳಲ್ಲಿಯ ಪಂಚಶೀಲಗಳನ್ನು, ಕ್ರಿಶ್ಚಿಯನ್ ಧರ್ಮದ ಪ್ರಾಣಿ ದಯೆಯನ್ನು ಹಾಗೂ ಇಸ್ಲಾಂ ಧರ್ಮದ ಶಾಂತಿ ಇಂತಹ ತಾತ್ವಿಕ ಧರ್ಮಾಚರಣೆಗಳನ್ನು ಸರ್ವರೂ ಪ್ರಾಮಾಣಿಕವಾಗಿ ಆಚರಿಸಿದಾಗ ಮಾತ್ರ ದೇವರು ಹಾಗೂ ಧರ್ಮದ ಹೆಸರಿನಲ್ಲಿ ಆಗುತ್ತಿರುವ ಕಲಹಗಳು ಶಾಂತವಾಗಲು ಸಾಧ್ಯ.

ಆಸ್ತಿಕತೆಯೇ ಜೀವನಾಧಾರ :

ವಿಶ್ವದ ಯಾವುದೇ ದೇಶಕ್ಕೆ ಹೋದರೂ ಅಲ್ಲಿಯೂ ಪ್ರಜೆಗಳು ಒಂದಿಲ್ಲೊಂದು ದೇವರ ಮತ್ತು ಧರ್ಮದ ಬಗ್ಗೆ ನಂಬಿಕೆ ಇಟ್ಟುಕೊಂಡಿರುತ್ತಾರೆ. ಅಂತೆಯೇ ಆಸ್ತಿಕತೆಯೇ ಜೀವನಾಧಾರ. ಧರ್ಮಗಳೂ ಅನೇಕವಾಗಿದ್ದರೂ ಎಲ್ಲವೂ ಶಾಂತಿ ಸಂದೇಶ ಕೊಡುತ್ತ ಬಂದಿವೆ. ಅಲ್ಲದೇ "ಏಕಂ ಸದ್ ವಿಪ್ರಾ ಬಹುಧಾ ವದಂತಿ" ಎಂಬ ಉಕ್ತಿಯಂತೆ ದೇವರೂ ಸಹ ಅನೇಕರಲ್ಲಿ ಒಬ್ಬನೇ ಆಗಿದ್ದಾನೆ. ಹೀಗೆ ವಿಶ್ವಕ್ಕೆಲ್ಲ ಒಬ್ಬನೇ ದೇವರು. ಎಲ್ಲ ಧರ್ಮಗಳ ಸಂದೇಶವೂ ಶಾಂತಿಯೇ ಆಗಿದ್ದರೂ ವಿಶ್ವದಲ್ಲಿ ಧರ್ಮ ಹಾಗೂ ದೇವರ ಹೆಸರಿನಿಂದಲೇ ಪರಸ್ಪರ ಕಲಹ, ಯುದ್ಧಗಳು ನಡೆಯುತ್ತಲೇ ಬಂದಿವೆ. ಇಂದೂ ಸಹ ನಡೆಯುತ್ತಿವೆ. ಇದೊಂದು ದೇವರು ಮತ್ತು ಧರ್ಮದ ಹೆಸರಿಗೆ ಕಳಂಕವೇ ಸರಿ.

ಧರ್ಮಾಂಧತೆಯಿಂದ ಅನರ್ಥ :

ಭಾರತ ದೇಶ ಅನೇಕ ದೇವೋಪಾಸಕರ ಹಾಗೂ ವಿವಿಧ ಧರ್ಮಾನುಯಾಯಿಗಳ ನಿವಾಸ ಭೂಮಿಯಾಗಿದೆ. ಅಂತೆಯೇ ಇಲ್ಲಿಯ ಪ್ರಜೆಗಳು ಪರಸ್ಪರ ಕಲಹ ಮಾಡದೇ ಶಾಂತಿಯಿಂದ ಬದುಕಲೆಂಬ ಉದ್ದೇಶದಿಂದ ಈ ದೇಶದ ಆಚಾರ್ಯರ, ಋಷಿ, ಮುನಿಗಳು, ಸಂತರು ಮತ್ತು ಶರಣರು ಸ್ವಧರ್ಮನಿಷ್ಠೆ ಹಾಗೂ ಪರಧರ್ಮ ಸಹಿಷ್ಣುತೆ ಸಮನ್ವಯ ಸೂತ್ರದಿಂದ ರಾಷ್ಟ್ರೀಯ ಭಾವೈಕ್ಯತೆಯ ಸಂದೇಶ ಕೊಟ್ಟಿದ್ದಾರೆ. ಈ ಸಮನ್ವಯ ಸೂತ್ರವನ್ನು ವಿಶ್ವದ ಎಲ್ಲ ಧರ್ಮೀಯರು ಅನುಸರಿಸಿದಾಗ ಸರ್ವರೂ ನೆಮ್ಮದಿಯಿಂದ ಬಾಳಬಹುದು. ಆದರೆ ಒಮ್ಮೊಮ್ಮೆ ಯಾರಾದರೂ ಧರ್ಮಾಂಧರಂತೆ ವರ್ತಿಸಿದಾಗ ಅನರ್ಥಗಳು ಆಗುವುದು ಅನಿವಾರ್ಯ. ಇತ್ತೀಚೆಗೆ ಧರ್ಮದಲ್ಲಿ ಅನುಯಾಯಿಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ರಾಜನೀತಿಯ ಪ್ರವೇಶವೂ ಹೆಚ್ಚಾಗಿರುವುದರಿಂದ ಧರ್ಮಾಂತರಗಳು ನಡೆದು ಧರ್ಮದ ಸ್ವರೂಪವೂ ಕೆಡುತ್ತದೆ. ಅದನ್ನು ಶೀಘ್ರ ಸರಿಪಡಿಸಬೇಕು.

ಪ್ರತಿಯೊಬ್ಬ ಮನುಷ್ಯನೂ ಸರಿಯಾಗಿ ವರ್ತಿಸಬೇಕಾದರೆ ಧರ್ಮದಂಡದ ಮತ್ತು ರಾಜದಂಡದ ಭೀತಿಯೂ ಅವಶ್ಯವಾಗಿರಬೇಕು. ಇಂದು ಹಾಂಗ್ ಕಾಂಗ್ ದೇಶದ ಸ್ವಚ್ಛತೆ ಮತ್ತು ಸಮೃದ್ಧಿಗೆ ರಾಜದಂಡದ ಭೀತಿಯೇ ಕಾರಣ ಎಂಬುದು ಸರ್ವವೇದ್ಯವೇ ಸರಿ. ಇಂದು ಭಾರತದಲ್ಲಿ ಅಪರಾಧಿಗಳಿಗೆ ಸರಿಯಾದ ರಾಜದಂಡವಿಲ್ಲದಿರುವುದರಿಂದ ಸಾಧಿಸಬೇಕಾದ ಪ್ರಗತಿಯಾಗದಿರುವುದು ವಿಷಾದನೀಯ. ಆದ್ದರಿಂದ ವ್ಯಕ್ತಿಗತ, ರಾಷ್ಟ್ರೀಯ ಪ್ರಗತಿಗೆ ದೇವರ ಹಾಗೂ ಧರ್ಮದ ಮೇಲಿನ ನಂಬಿಕೆ ಕೆಡಿಸಿಕೊಳ್ಳದೇ ರಾಷ್ಟ್ರೀಯ ಭಾವೈಕ್ಯ ಭಾವನೆಗಳನ್ನು ಬೆಳೆಸಿಕೊಳ್ಳಬೇಕೆಂದು ಶ್ರೀ ಸನ್ನಿಧಿಯವರು ತಿಳಿಸಿದರು. ಶಾಖಾಪುರ ತಪೋವನಮಠದ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಕೊಟ್ಟೂರಿನ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಗುಳೇದಗುಡ್ಡದ ಶ್ರೀ ಕೃಷ್ಣ ಯೋಗಾಶ್ರಮದ ಬಸವರಾಜ ಹಡಗಲಿ, ಕನ್ನಡ ಸಂಘದ ಸದಸ್ಯರಾದ ರವಿ ಶರಾಫ, ಸದಾಶಿವ ಹೆಗಡೆ, ಮೋಹನ್ ವೇರ್ಣೇಕರ್, ತಾಂಡವಮೂರ್ತಿ, ಪ್ರಸನ್ನಗೋಪಾಲ, ಆನಂದರಾವ್, ಉದಯ ಕುಲಕರ್ಣಿ, ಸಂಜೀವಕುಮಾರ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ರಾಜಪುರೋಹಿತ ಸ್ವಾಗತಿಸಿದರು. ರಂಗಣ್ಣ ಪ್ರಾಸ್ತಾವಿಕ ಮಾತನಾಡಿದರು. ಪ್ರಸನ್ನಗೋಪಾಲ ವಂದಿಸಿದರು.

ಶ್ರೀಗಳು ಒಂದು ವಾರ ಹಾಂಗ್ ಕಾಂಗ್ ಸುತ್ತಿ ಅಲ್ಲಿನ ಕೆಲವು ವಿಶೇಷತೆಗಳನ್ನು ಗಮನಿಸಿದ್ದರು. ಅಲ್ಲಿಯ ಜನರ ಪ್ರಾಮಾಣಿಕತೆ, ನಿಯಮಗಳನ್ನು ಉಲ್ಲಂಘಿಸದಿರುವುದು, ಬಸ್ ಟ್ರೈನ್‌ಗಳಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಿಸುವಂತಿಲ್ಲ, ಬಸ್‌ಗಳಲ್ಲಿ ಕಂಡಕ್ಟರ್ ಇಲ್ಲದಿದ್ದರೂ ಸ್ವಪ್ರೇರಣೆಯಿಂದ ಜನ ತಾವೇ ಟಿಕೆಟ್ ತೆಗೆದುಕೊಳ್ಳುವುದು, ಪ್ರತಿಯೊಬ್ಬ ಕೆಲಸಗಾರರೂ ಮೇಲ್ವಿಚಾರಕರಿಲ್ಲದಿದ್ದರೂ ನಿಷ್ಠೆಯಿಂದ ಶ್ರದ್ಧೆಯಿಂದ ಕೆಲಸ ಮಾಡುವುದು, ವ್ಯಾಪಾರಸ್ಥರು ಜನರೊಡನೆ ವ್ಯವಹರಿಸುವಾಗ ಬಹಳ ಗೌರವದಿಂದ ಮೃದು ವರ್ತನೆಯಿಂದ ನಡೆದುಕೊಳ್ಳುವ ರೀತಿ–ಮುಂತಾದವು ಗುರುಗಳ ಗಮನ ಸೆಳೆಯಿತು.

ವಿಜಯ ಕರ್ನಾಟಕ ದಿನಪತ್ರಿಕೆ ಮೇಲಿನ ಎಲ್ಲಾ ವಿಚಾರಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದೆ.

ಕಾಶಿ ಶ್ರೀಗಳ ಹಾಂಕಾಂಗ್ ಪ್ರವಾಸ ಅನುಭವ : ಇಲ್ಲಿ ಆಸ್ಪತ್ರೆಗಳು ಅಲ್ಲಿ ಯೋಗ ಕೇಂದ್ರಗಳು

ವಿಜಯ ಕರ್ನಾಟಕ 24–11–2009


'ಹಾಂಕಾಂಗ್ ಪ್ರವಾಸ' ಕಥನ ಬಿಚ್ಚಿಟ್ಟ ಕಾಶೀ ಪೀಠದ ಡಾ. ಚಂದ್ರಶೇಖರ ಶ್ರೀ

'ಅಭಿವೃದ್ಧಿ ದೇಶಗಳ ಆಡಳಿತ ಅನುಕರಿಸಿ'

ಕನ್ನಡ ಪ್ರಭ, 20–11–2009

ಕನ್ನಡಪ್ರಭ ವಾರ್ತೆ, ಗದಗ, ನ. 20–11–2009

ಸರ್ಕಾರದ ಪ್ರತಿನಿಧಿಗಳು ಕೇವಲ ಮುಂದುವರೆದ ದೇಶಗಳನ್ನು ನೋಡಿ ಬಂದರೆ ಸಾಲದು ಅವುಗಳಲ್ಲಿನ ಒಳ್ಳೆಯತನವನ್ನು ಅನುಕರಣೆ ಮಾಡಬೇಕು ಹಾಗೂ ದೇಶದ ಆಡಳಿತ ವ್ಯವಸ್ಥೆಯಲ್ಲಿ ಅದನ್ನು ಜಾರಿಗೆ ತರಬೇಕು ಎಂದು ಕಾಶೀ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳು ಹೇಳಿದರು.



- **ವಿದೇಶಿಯರ ಪ್ರಾಮಾಣಿಕತೆ, ಸಮಯ ಪಾಲನೆ ಅಳವಡಿಕೆಗೆ ಕರೆ**
- **ಭಾರತದ ರಾಜದಂಡ ಬದಲಾಗಬೇಕು.**
- **ಸಮಯ 'ಅಮೂಲ್ಯ' ಎಂಬುದನ್ನು ಅರಿಯಬೇಕು**

ಶುಕ್ರವಾರ ನಗರದ ಪಂಚಾಚಾರ್ಯ ಸಂಸ್ಕೃತ ಪಾಠಶಾಲೆ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ತಮ್ಮ 'ಹಾಂಗ್ ಕಾಂಗ್ ಪ್ರವಾಸ' ಕುರಿತು ಮಾತನಾಡಿದ ಶ್ರೀಗಳು, ಹಾಂಗ್ ಕಾಂಗ್‌ನಂತಹ ಚಿಕ್ಕ ದೇಶದ ಜನರಲ್ಲಿ ದೇಶಪ್ರೇಮ, ಪ್ರಾಮಾಣಿಕತೆ, ಸಮಯ ಪಾಲನೆ ಇತ್ಯಾದಿಗಳನ್ನು ಭಾರತೀಯರೂ ರೂಢಿಸಿಕೊಳ್ಳುವುದರಿಂದ ಭಾರತವನ್ನು ಇತರ ಮುಂದುವರೆದ ದೇಶಗಳಂತೆ ಅಭಿವೃದ್ಧಿಪಡಿಸಲು ಸಾಧ್ಯವಿದೆ ಎಂದರು.

ಭಾರತದ ರಾಜದಂಡ ಬದಲಾಗಬೇಕು. ಇಲ್ಲಿ ಸುಪ್ರೀಂ ಕೋರ್ಟ್ ಹೇಳಿದರೂ ಸಹ ದ್ರೋಹಿಗಳಿಗೆ ಶಿಕ್ಷೆ ವಿಧಿಸಲು ಸರ್ಕಾರಗಳು ಹಿಂಜರಿಯುತ್ತವೆ. ಈ ರೀತಿಯಾದಲ್ಲಿ ಯಾರಿಗೂ ನಮ್ಮ ಕಾನೂನು ವ್ಯವಸ್ಥೆಯ ಬಗ್ಗೆ ಹೆದರಿಕೆ ಇರುವುದಿಲ್ಲ. ಅಪರಾಧಗಳು ಹೆಚ್ಚುತ್ತವೆ. ಆದರೆ ಹಾಂಗ್ ಕಾಂಗ್‌ನಂತ ದೇಶದಲ್ಲಿ ತಪ್ಪು ಮಾಡಿದವ ಯಾರೇ ಆಗಲಿ ಆತನು ಶಿಕ್ಷೆ ಅನುಭವಿಸುತ್ತಾನೆ. ಈ ಭಯ ಇದ್ದಲ್ಲಿ ಮಾತ್ರ ತಪ್ಪು ಮಾಡುವುದು ಸಹ ಕಡಿಮೆಯಾಗುವುದು.

ಭಾರತದ ಯೋಗವನ್ನು ಹಾಂಗ್ ಕಾಂಗ್‌ನಲ್ಲಿ ಪ್ರತಿಯೊಬ್ಬರೂ ಸ್ವೀಕರಿಸುತ್ತಿದ್ದಾರೆ. ಅಲ್ಲಿ ಆಸ್ಪತ್ರೆಗಳಿಗಿಂತ ಯೋಗ ಕೇಂದ್ರಗಳೇ ಹೆಚ್ಚಾಗಿವೆ. ಅಲ್ಲಿನ ಜನರು ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಒತ್ತು ನೀಡುತ್ತಾರೆ. ಆದರೆ ಭಾರತೀಯರು ಯೋಗವನ್ನೇ ಮರೆಯುತ್ತಿದ್ದೇವೆ ಎಂದು ವಿಷಾಧಿಸಿದರು.

ಹಿಂದೆ ನಮ್ಮ ಪೂರ್ವಿಕರು ಯೋಗದ ಮೂಲಕ ಜೀವತ್ಯಾಗ ಮಾಡುತ್ತಿದ್ದರು. ಈಗ ನಾವು ಅದನ್ನು ಮರೆತಿರುವುದರಿಂದ ಹಾಗೂ ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ವಹಿಸದಿರುವುದರಿಂದ ನಾನಾ ರೋಗಗಳ ಮೂಲಕ ಜೀವತ್ಯಾಗ ಮಾಡುವಂತಾಗಿದೆ ಎಂದರು.

ಸ್ವಚ್ಛತೆ ಬಗ್ಗೆ ಭಾರತೀಯರಿಗೆ ಅರಿವೇ ಇಲ್ಲ. ಇದರಿಂದ ಎಲ್ಲೆಂದರಲ್ಲಿ ಉಗುಳುವುದು, ನಮ್ಮ ರಸ್ತೆ, ಸಾರ್ವಜನಿಕ ಸ್ಥಳಗಳನ್ನು ಶುಚಿಯಾಗಿಡದಿರುವುದು ಸಾಮಾನ್ಯವಾಗಿದೆ. ಆದರೆ ಹಾಂಗ್ ಕಾಂಗ್ ದೇಶದಲ್ಲಿ ಶುಚಿತ್ವಕ್ಕೆ ಒತ್ತು ನೀಡಲಾಗುವುದು. ರಸ್ತೆ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡಲಾಗುತ್ತಿದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸಮಯ ಅತ್ಯಮೂಲ್ಯ. ಇದರ ಬಗ್ಗೆ ಭಾರತೀಯರೂ ಅರಿಯಬೇಕು, ಅನಗತ್ಯವಾಗಿ ಸಮಯ ಹಾಳು ಮಾಡಬಾರದು. ಸಮಯ ಉಳಿತಾಯಕ್ಕಾಗಿ ಹಾಂಗ್ ಕಾಂಗ್‌ನಲ್ಲಿ ಸಾರ್ವಜನಿಕರಿಗೆ ಎಲ್ಲ ರೀತಿಯ ಸೌಲಭ್ಯ ನೀಡಲಾಗಿದೆ. ಸಿಲಿಂಡರ್, ಪಡಿತರ ಯಾವುದನ್ನು ಸಾಲಿನಲ್ಲಿ ನಿಂತು ಗಂಟೆಗಟ್ಟಲೇ ಕಾದು ತರುವ ಪರಿಸ್ಥಿತಿಯೇ ಇಲ್ಲ. ಎಲ್ಲವೂ ಎಷ್ಟು ಬೇಕಷ್ಟು ಸಿಗುತ್ತದೆ, ಆದರೆ ಅಲ್ಲಿ ಯಾವುದನ್ನೂ ಉಚಿತ ಅಥವಾ ಸಬ್ಸಿಡಿಯಲ್ಲಿ ನೀಡುವುದಿಲ್ಲ. ಆದ್ದರಿಂದ ಜನರು ಸಹ ಅವುಗಳನ್ನು ವ್ಯರ್ಥಮಾಡುವುದಿಲ್ಲ.

ಪ್ರವಾಸೋದ್ಯಮಕ್ಕೆ ಹಾಂಗ್ ಕಾಂಗ್ ದೇಶ ಒತ್ತು ನೀಡಿದ್ದು, ಇದಕ್ಕಾಗಿಯೇ ದೊಡ್ಡ ದೊಡ್ಡ ಕಟ್ಟಡಗಳು ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಬೇಕಾದ ತಾಣಗಳನ್ನು ರೂಪಿಸಿದೆ. ಅಲ್ಲಿನ ಜನರು ಶ್ರಮಜೀವಿಗಳು, ಕೆಲಸಕ್ಕೆ ಒತ್ತು ನೀಡುತ್ತಾರೆ, ಆದ್ದರಿಂದ ದೇಶವೂ ಮುಂದುವರೆದಿದೆ.

ಹಾಂಗ್ ಕಾಂಗ್ ದೇಶದಲ್ಲಿ ಕನ್ನಡಿಗರೂ ಇದ್ದಾರೆ, ಕಳೆದ ಐದು ವರ್ಷಗಳಿಂದ ಕನ್ನಡ ಸಂಘ ಮಾಡಿಕೊಂಡು, ಆಗಾಗ ಎಲ್ಲರೂ ಒಟ್ಟಾಗಿ ಸೇರುವ ಪರಿಪಾಠ ಬೆಳೆಸಿಕೊಂಡಿದ್ದು, ನ. 7ರಂದು ಹಾಂಗ್ ಕಾಂಗ್ ಕನ್ನಡ ಸಂಘದ ಕನ್ನಡ ರಾಜ್ಯೋತ್ಸವದಲ್ಲಿ ತಾವು ಭಾಗವಹಿಸಿದ್ದೆವು.

ಈ ಸಂಘವು ಸಮುದಾಯ ಸೇವಾ ಯೋಜನೆ ಯಡಿ ತನ್ನ ತಾಯ್ನಾಡಿನ ಋಣ ತೀರಿಸುವ ಕಾರ್ಯ ಕ್ರಮವನ್ನು ಹಮ್ಮಿಕೊಂಡಿದೆ. ಪ್ರಸ್ತುತ ನೆಲಮಂಗಲದ ಸರ್ಕಾರಿ ಶಾಲೆಯನ್ನು ದತ್ತು ಪಡೆದಿದೆ ಹಾಗೂ ಬೆಂಗಳೂರಿನ ಅನಾಥಾಲಯವೊಂದರ ಮೂರು ಮಕ್ಕಳ ವೆಚ್ಚ ಭರಿಸುತ್ತಿದೆ ಎಂದು ಅವರು ಹೇಳಿದರು.

ರಾಜದಂಡದ ಭೀತಿ ಇಲ್ಲದಿರುವುದೇ ಭಾರತದ ಹಿನ್ನಡೆಗೆ ಕಾರಣ : ಶ್ರೀ ಕಾಶೀ ಜಗದ್ಗುರುಗಳು

ಕಠಿಣ ಕಾನೂನಿಂದ ಅಪರಾಧ ಇಳಿಮುಖ

ವಿದೇಶಗಳಲ್ಲಿ ರಾಜಕಾರಣಿಗಳು ರಾಷ್ಟ್ರಹಿತಕ್ಕೆ ಹೆಚ್ಚಿನ ಒತ್ತು ನೀಡುತ್ತಾರೆ. ಇನ್ನು ಇಲ್ಲಿ ವ್ಯಾಪಾರ ನೀತಿ ಕೂಡ ಉತ್ತಮವಾಗಿದೆ. ಸರಕಾರಕ್ಕೆ ಮೋಸ ಮಾಡದೆ ಚಾಚೂ ತಪ್ಪದೆ ತೆರಿಗೆ ಕಟ್ಟುತ್ತಾರೆ. ರಾಜಕಾರಣಿಗಳು ಜನರ ಪ್ರೀತಿಗೆ ಗಂಟುಬೀಳದೆ ರಾಷ್ಟ್ರದ ಅಭಿವೃದ್ಧಿ ದಿಸೆಯಲ್ಲಿ ಕೈಗೊಳ್ಳಬೇಕಾದ ಯೋಜನೆಗಳ ಬಗ್ಗೆ ಚಿಂತನೆ ನಡೆಸುತ್ತಿರುತ್ತಾರೆ. ಹೀಗಾಗಿ ಸಣ್ಣಪುಟ್ಟ ರಾಷ್ಟ್ರಗಳು ಅಭಿವೃದ್ಧಿಪಥದಲ್ಲಿ ಮುಂಚೂಣಿಯಲ್ಲಿವೆ.

ಜಗದ್ಗುರುಗಳು ಅಲ್ಲಿನ ಜನರ ಮನೋಭಾವ ಕುರಿತು ಹೀಗೆ ಹೇಳಿದರು : ಅಲ್ಲಿನ ಜನರು ಬಹಳ ಸ್ವತಂತ್ರ್ಯ ಮನೋಭಾವದವರು. ಪರಸ್ಪರ ಕೂಡಿ ಬಾಳಬೇಕೆಂಬ ನಿಯಮ ಅವರಲ್ಲಿಲ್ಲ. ಗಂಡ–ಹೆಂಡತಿ ಸಂಬಂಧಗಳಾಗಲಿ, ತಂದೆ ಮಕ್ಕಳ ಸಂಬಂಧವಾಗಲಿ ಕೊನೆಯವರೆಗೂ ಇರುತ್ತದೆಂಬ ನಂಬಿಕೆಯಿಲ್ಲ. ಸಂಘ ಜೀವಿಗಳೆಲ್ಲ ಅವರು ಯಾರು ಯಾರ ಮೇಲೂ ಅವಲಂಬಿಗಳಾಗಿರುವುದಿಲ್ಲ. ಆದ್ದರಿಂದ ಅವರುಗಳ ಗಮನವೆಲ್ಲಾ ಶಾರೀರಿಕ ಸ್ವಾಸ್ಥ್ಯದ ಕಡೆಗೆ ಹೆಚ್ಚಾಗಿದೆ. ಹೀಗಾಗಿ ಹಾಂಗ್‌ಕಾಂಗ್‌ನಲ್ಲಿ ಯೋಗ ಕೇಂದ್ರಗಳು ಬಹಳ ಹೆಚ್ಚಾಗಿವೆ. ಶಾರೀರಿಕವಾಗಿ, ಮಾನಸಿಕವಾಗಿ ಆರೋಗ್ಯವಾಗಿರಲು ಪ್ರಯತ್ನಿಸುತ್ತಾರೆ ಎಂದರು.

ಮಾಸ್ಕೋದಲ್ಲಿ ಕಾಶೀ ಜಗದ್ಗುರುಗಳು 2010

ಕೆಲವು ರಷ್ಯನ್‌ರಿಗೆ ಭಾರತೀಯ ಆಧ್ಯಾತ್ಮಿಕತೆ ಬಗೆಗೆ ಅಪಾರ ಒಲವಿತ್ತು. ಹೆಸರಾಂತ ಲೇಖಕ ಲಿಯೋ ಟಾಲ್‌ಸ್ಟಾಯ್ ಅವರು ಸ್ವಾಮಿ ವಿವೇಕಾನಂದರ ಕೆಲವು ವಿಚಾರಧಾರೆಗಳನ್ನು ಓದಿದ್ದರಿಂದ ಅವರನ್ನು ಜಗತ್ತಿನ ಇತಿಹಾಸದ ಅತ್ಯಂತ ಶ್ರೇಷ್ಠ ಚಿಂತಕ ಎಂದು ಹೇಳಿದ್ದರು. ಹಾಗೂ ಭಗವದ್ಗೀತೆಯ ಬಗೆಗೆ 'ಇದುವೆ ಜಗತ್ತಿನ ಎಲ್ಲ ಧರ್ಮ ಮತ್ತು ತತ್ತ್ವ ಶಾಸ್ತ್ರಗಳಿಗೆ ಆಧಾರ' ಎಂದು ಹೇಳಿದ್ದಾರೆ.

ಇನ್ನು ಖ್ಯಾತ ಹಾಗೂ ಶ್ರೇಷ್ಠ ಚಿತ್ರಕಾರನಾದ ರೋರಿಚ್ ಅವರಿಗೆ ಹಿಂದೂ ತತ್ತ್ವಶಾಸ್ತ್ರದ ಗಾಢ ಪ್ರಭಾವ ಬೀರಿರುವುದನ್ನು ಅವರ ಕಲಾಕೃತಿಗಳನ್ನು ಗಮನಿಸಿದರೆ ಕಾಣಬಹುದಾಗಿದೆ.


ರಷ್ಯಾದಲ್ಲಿ ಕ್ರಾಂತಿ ಸೃಷ್ಟಿಸಿದ ಅಧ್ಯಕ್ಷ ಗೋರ್ಬಚೆವ್ ಅವರಿಗೆ ಸ್ವಾಮಿ ವಿವೇಕಾನಂದರ ಬೋಧನೆಗಳ ಪ್ರಭಾವವಾಗಿದ್ದು, ಅದು ಅವರು ರಚಿಸಿರುವ ಕೃತಿಗಳಲ್ಲಿ ಕಂಡುಬರುತ್ತದೆ.

ಹೀಗೆ ಹೆಸರಿಸುತ್ತಾ ಹೋದರೆ ಅನೇಕರು ಭಾರತೀಯ ಆಧ್ಯಾತ್ಮ ಚಿಂತನೆಗಳ ಪ್ರಭಾವಕ್ಕೆ ಒಳಗಾಗಿದ್ದರು.


ಸುಮಾರು 18–19 ವರ್ಷಗಳ ಹಿಂದೆ ಮಾಸ್ಕೋದ ಪ್ರಮುಖ ಬೀದಿಗಳಲ್ಲಿ ಡ್ಯಾನಿಷ್ ಎಂಬ ಯುವಕ ಯೋಗದ ವಿವಿಧ ಆಸನಗಳನ್ನು ಪ್ರದರ್ಶಿಸಿ ಹಣ ಗಳಿಸುತ್ತಿದ್ದ. ಕಾಶೀ ಪೀಠದಿಂದ ಪ್ರಕಟಗೊಂಡಿದ್ದ ಚಂದ್ರಜ್ಞಾನಾಗಮದ ಇಂಗ್ಲಿಷ್ ಆನುವಾದ ಗ್ರಂಥ ರಷ್ಯಾದ ಲೈಬ್ರರಿಯಲ್ಲಿ ಸಿಕ್ಕಿ ಅದನ್ನು ಆಮೂಲಾಗ್ರವಾಗಿ ಓದಿ–ಅದರಲ್ಲಿ ಬರುವ ಶಿವಯೋಗದ ಬಗ್ಗೆ ತಿಳಿದು ಅದನ್ನು ತಾನು ಕಲಿಯಬೇಕೆಂಬ ಆಸೆ ಅವನಲ್ಲಿ ಅಂಕುರಿಸಿತು. ಚಂದ್ರಜ್ಞಾನಾಗಮ ಗ್ರಂಥದಲ್ಲಿ ಜಂಗಮವಾಡಿ ಮಠದ ವಿಳಾಸವನ್ನು ಕಂಡು 2002ರಲ್ಲಿ ರಷ್ಯಾದಿಂದ ಭಾರತಕ್ಕೆ ಬಂದು ಜಂಗಮವಾಡಿ ಮಠದಲ್ಲಿ ಬಂದಿಳಿದ. ಸಂಸ್ಕೃತದಲ್ಲಿ ಪ್ರಕಟಗೊಂಡಿದ್ದ ಚಂದ್ರಜ್ಞಾನಾಗಮವನ್ನು ಜಗದ್ಗುರುಗಳು ಪೀಠಕ್ಕೆ ಬಂದನಂತರ ಡಾ॥ ರಮಾಘೋಷ್ ಅವರಿಂದ ಇಂಗ್ಲಿಷ್‌ಗೆ ಅನುವಾದಿಸಿ ಪ್ರಕಟಿಸಿದರು. ಈ ಗ್ರಂಥವನ್ನು ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನಕ್ಕೂ ಕಳುಹಿಸಿಕೊಟ್ಟಿದ್ದರು, ಕನ್ನಡಕ್ಕೆ ಅನುವಾದ ಮಾಡಿಸುವ ಸಲುವಾಗಿ. ಕರ್ನಾಟಕದಲ್ಲೂ ಕನ್ನಡಕ್ಕೆ ಅನುವಾದಗೊಂಡು 'ಚಂದ್ರಜ್ಞಾನಾಗಮ' ಬಿಡುಗಡೆ ಆಯಿತು. ಸಾವಿರ ಪ್ರತಿಗಳಲ್ಲಿ ಇಂದು ಕೇವಲ ಐದು ಕೃತಿಗಳು ಸಂಸ್ಥಾನದಲ್ಲಿ ಉಳಿದಿವೆ. ಮುಂದೆ ಚಂದ್ರಜ್ಞಾನಾಗಮ ಕುರಿತು ಒಂದು ವಿಚಾರ ಸಂಕಿರಣ ಏರ್ಪಡಿಸಿದ್ದೆವು. ಅಲ್ಲಿನ ಪ್ರಬಂಧಗಳು 'ಚಂದ್ರಜ್ಞಾನಾಗಮ ವಿಚಾರ ರಶ್ಮಿ' ಎಂಬ ಹೆಸರಿನಲ್ಲಿ ಪ್ರಕಟಗೊಂಡಿತು. ಇಷ್ಟು ಸಾವಿರ ಸಂಖ್ಯೆಯಲ್ಲಿ ಪ್ರಕಟಗೊಂಡಿದ್ದರೂ ಅದನ್ನು ಆಳವಾಗಿ ಅಧ್ಯಯನ ಮಾಡಿ ಪ್ರಭಾವಿತರಾಗಿ ಅನುಷ್ಠಾನಕ್ಕೆ ತಂದವರು ತೀರ ತೀರ ವಿರಳವೆಂದೇ ಹೇಳಬಹುದು.

ರಷ್ಯಾದ ರಾಜಧಾನಿ ಮಾಸ್ಕೋದ ಗ್ರಂಥಾಲಯದ ಕಪಾಟಿನಲ್ಲಿ ಇಂಗ್ಲಿಷ್‌ಗೆ ಅನುವಾದಗೊಂಡ ರಮಾಘೋಷ್ ಅವರ 'ಚಂದ್ರಜ್ಞಾನಾಗಮ' ಹೇಗೆ ಅಲ್ಲಿ ಸೇರಿತೋ–ಎಂಬುದರ ಮಾಹಿತಿ ಇಲ್ಲ. ಆದರೆ ಈ ಆಗಮ ಅಲ್ಲಿತ್ತು. ಅದು ಯೋಗಾಭ್ಯಾಸಿಯಾಗಿದ್ದ ಡ್ಯಾನಿಷ್ ಕಣ್ಣಿಗೆ ಬಿತ್ತು. ಅದನ್ನು ಓದುತ್ತಾ ಅದರಲ್ಲಿ ಬರುವ ಗುರುವಿನ ಲಕ್ಷಣಗಳ ಬಗ್ಗೆ ಶ್ರೇಷ್ಠ ಗುರು ಹೇಗಿರಬೇಕು? ಶಿಷ್ಯನ ಲಕ್ಷಣಗಳನ್ನು ಕುರಿತು ಬರೆದಿರುವುದನ್ನು ಓದಿಕೊಂಡನು. ಗುರುಲಕ್ಷಣ ಸ್ವರೂಪವನ್ನು ಚಂದ್ರಜ್ಞಾನಾಗಮದ ದ್ವಿತೀಯ ಪಟಲದಲ್ಲಿನ ಸುಮಾರು 66 ಶ್ಲೋಕಗಳಿವೆ. ಶಿಷ್ಯನ ಲಕ್ಷಣ ಮತ್ತು ಕರ್ತವ್ಯ ಕುರಿತು 9 ಶ್ಲೋಕಗಳೂ, ಶಿಷ್ಯನ ಪರೀಕ್ಷೆ ಕುರಿತು 6 ಶ್ಲೋಕಗಳೂ ಇವೆ. (ನೋಡಿ ಡಾ.ಎಂ. ಶಿವಕುಮಾರಸ್ವಾಮಿ ಅನುವಾದಿತ ಚಂದ್ರಜ್ಞಾನಾಗಮ 2002.) ಅವುಗಳಿಂದ ಪ್ರಭಾವಿತನಾಗಿ ಆ ಗ್ರಂಥದಲ್ಲಿದ್ದ ಪ್ರಕಾಶಕರ ವಿಳಾಸ ಹಿಡಿದು 2002ರಲ್ಲಿ ಕಾಶಿಗೆ ಬಂದಿಳಿದನು. ಆ ಸಮಯದಲ್ಲಿ ಜಗದ್ಗುರುಗಳು ಮಹಾಪೀಠದಲ್ಲಿರಲಿಲ್ಲ. ಅಲ್ಲಿನ ಆಡಳಿತಾಧಿಕಾರಿಗಳು ಬೆಂಗಳೂರಿನಲ್ಲಿದ್ದಾರೆಂದು ಹೇಳಿ ಅಲ್ಲಿನ ವಿಳಾಸವನ್ನು ಡ್ಯಾನಿಷ್‌ಗೆ ಕೊಟ್ಟು ಕಳುಹಿಸಿದರು.

ವಿಶ್ವಾರಾಧ್ಯ ಜನ ಕಲ್ಯಾಣ ಪ್ರತಿಷ್ಠಾನದ ಬೆಂಗಳೂರು ಶಾಖೆಯಾದ ವೀರಶೈವ ಅನುಸಂಧಾನ ಸಂಸ್ಥಾನವು ಹಮ್ಮಿಕೊಂಡಿದ್ದ ಧನುರ್ಮಾಸದ ಶಿವಪೂಜಾ ಕಾರ್ಯಕ್ರಮದಲ್ಲಿ ಜಗದ್ಗುರುಗಳು ಆಶೀರ್ವಚನ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದರು. ಕಾಶಿಯಲ್ಲಿ ಡ್ಯಾನಿಷ್‌ಗೆ ಗುರುಗಳು ಬೆಂಗಳೂರಿನಲ್ಲಿರುವ ವಿಚಾರ ತಿಳಿದು ಸೀದಾ ಬೆಂಗಳೂರಿಗೆ ಬಂದು ಶ್ರೀ ಜಗಜ್ಯೋತಿ ಕಲ್ಯಾಣ ಮಂಟಪದಲ್ಲಿ ಗುರುಗಳನ್ನು ಭೇಟಿ ಮಾಡಿದ. ಮತ್ತೆ ದೀಕ್ಷೆಗಾಗಿ ಭಕ್ತಿಯಿಂದ ಬೇಡಿಕೊಂಡ. ದೀಕ್ಷೆ ಕೊಡುವ ಮುನ್ನ ಸಂಪಾದಕ ಮಂಡಲಿ ಅಧ್ಯಕ್ಷರಾಗಿದ್ದ ಡಾ॥ ಎಂ. ಶಿವಕುಮಾರ ಸ್ವಾಮಿಗಳ ಬಳಿ ಬಿಟ್ಟು ಅವನನ್ನು ದಿನಾ ಗಮನಿಸಲು ಹೇಳಿದರು. ಅವನಿಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನು ಗುರುಗಳ ಸಂಸ್ಥಾನದ ಸಹಕಾರ್ಯದರ್ಶಿ ಉಮಾಶಂಕರ್ ಅವರಿಗೆ ಹೇಳಿದರು. ಕಲ್ಯಾಣ ಮಂಟಪಕ್ಕೆ ಹತ್ತಿರವಿದ್ದ ಹೋಟೆಲ್‌ನಲ್ಲಿ ಅವನಿಗೆ ವ್ಯವಸ್ಥೆ ಆಯ್ತು. ದಿನಾ ಬೆಳಗ್ಗೆ ಸ್ನಾನಮಾಡಿ ಶುಭ್ರವಾಗಿ ಪಂಚೆ ವಸ್ತ್ರಗಳನ್ನು ಧರಿಸಿ ಶಿವಪೂಜೆಯಲ್ಲಿ ಭಾಗಿಯಾಗುತ್ತಿದ್ದ. ಗುರುಗಳ ರುದ್ರಾಭಿಷೇಕ ಮುಗಿಯುವವರೆಗೂ ಸಂಪೂರ್ಣ ರುದ್ರವನ್ನು ಪುಸ್ತಕದ ನೆರವಿಲ್ಲದೆ ಹೇಳುವುದನ್ನು ಕಂಡು ಅಲ್ಲಿನ ಭಕ್ತರು ಅಚ್ಚರಿಪಟ್ಟರು! ಡಾ.ಎಂ. ಶಿವಕುಮಾರಸ್ವಾಮಿಗಳು ಡ್ಯಾನಿಷ್ ಸಂಪೂರ್ಣ ವ್ಯಸನಮುಕ್ತನಾಗಿದ್ದಾನೆ, ಸಸ್ಯಾಹಾರಿಯಾಗಿ ದೀಕ್ಷೆ ಪಡೆಯಲು ಯೋಗ್ಯನಾಗಿದ್ದಾನೆ ಎಂದು ಗುರುಗಳಿಗೆ ತಿಳಿಸಿದ ನಂತರ ಜಗದ್ಗುರುಗಳು 8–2–2002ರಂದು ಶಿವದೀಕ್ಷೆ ನೀಡಿದರು. ದಿನೇಶ ಎಂದು ಹೆಸರಿಟ್ಟರು. ಯೋಗದೀಕ್ಷೆ ಪಡೆದ ದಿನೇಶ ಮತ್ತೆ ರಷ್ಯಾಕ್ಕೆ ಮರಳಿ ತನ್ನ ಸಾಧನೆಯಲ್ಲಿ ತೊಡಗಿಕೊಂಡ.



ಎಡದಿಂದ ಬಲಕ್ಕೆ : ಶ್ರೀ ಸಿ. ಉಮಾಶಂಕರ್, ಶ್ರೀ ದಿನೇಶ್, ಡಾ|| ಎಂ. ಶಿವಕುಮಾರಸ್ವಾಮಿ



ಜಗದ್ಗುರುಗಳು ದಿನೇಶನಿಗೆ (Danish ಗೆ) ದೀಕ್ಷೆ ನೀಡುತ್ತಿರುವುದು.



ದೀಕ್ಷೆ ನಂತರ ಜಗದ್ಗುರುಗಳು ದಿನೇಶನಿಗೆ ಆಶೀರ್ವದಿಸುತ್ತಿರುವುದು

ದಿನೇಶ ನಿತ್ಯವೂ ಎರಡು ಬಾರಿ ಶ್ರೀರುದ್ರ ಹೇಳಿಕೊಂಡು ಬೆಳಗ್ಗೆ ಸಂಜೆ ಇಷ್ಟಲಿಂಗ ಪೂಜೆ ಮಾಡುತ್ತಿದ್ದಾನೆ. ಲಿಂಗದಲ್ಲೇ ಎಲ್ಲವನ್ನು ಕಾಣುತ್ತಿದ್ದಾನೆ. ಮಾಸ್ಕೋದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಯೋಗದ ಶಿಕ್ಷಕನಾಗಿ ಅಷ್ಟಾಂಗಯೋಗ ಕೇಂದ್ರ ನಡೆಸುತ್ತಿದ್ದಾನೆ. ಧಾರವಾಡದ ತಪೋವನದಲ್ಲಿ ಶ್ರೀ ನೀಲಕಂಠ ಧನಶ್ರೀಯವರಿಂದ ಶಿವಯೋಗ ಸಾಧನೆಗಾಗಿ ಅವನನ್ನು ಕಳುಹಿಸಿಕೊಟ್ಟು ಪ್ರೊ. ನಂದಿ ಬೇವೂರರ ಬಳಿ ದೃಷ್ಟಿಯೋಗದ ಬಗ್ಗೆ ವೈಜ್ಞಾನಿಕವಾಗಿ ತರಬೇತಿ ಪಡೆದು ಪ್ರಭಾವಿ ಯೋಗ ಪಟುವಾಗಿದ್ದಾನೆ ದಿನೇಶ. ಈತನ ಬಳಿ 100 ಜನ ಯೋಗ ಶಿಕ್ಷಕರು ಈಗ ಕೆಲಸಮಾಡುತ್ತಿದ್ದಾರೆ. ಶಿವಯೋಗ, ವೀರಶೈವಧರ್ಮ ಹಾಗೂ ಅಷ್ಟಾಂಗಯೋಗಗಳ ಶಿಬಿರವನ್ನು ಆಯೋಜಿಸುತ್ತಿದ್ದಾನೆ.



ಬೆಂಗಳೂರಿನಲ್ಲಿ ಭಕ್ತರೆದುರಿಗೆ ಯೋಗ ಪ್ರದರ್ಶನ ಮಾಡುತ್ತಿರುವುದು

ಡ್ಯಾನಿಷ್‌ನಲ್ಲಿ ಅಡಗಿದ್ದ ಯೋಗಪಟುತ್ವವನ್ನು ಜಗದ್ಗುರುಗಳು ಬಹಳ ಸೂಕ್ಷ್ಮವಾಗಿ ಗಮನಿಸಲು ಮುಖ್ಯ ಕಾರಣ ತಾವೇ ಸ್ವತಃ ಯೋಗಾಭ್ಯಾಸಿಗಳಾಗಿದ್ದರು. ಪೀಠಕ್ಕೆ ಬರುವ ಮೊದಲೇ ಗುರುಗಳು ಗುಳೇದಗುಡ್ಡದ ಅಮರೇಶ್ವರ ಮಠಾಧ್ಯಕ್ಷರಾಗಿದ್ದಾಗಿನಿಂದಲೇ ಪ್ರವಚನದಲ್ಲಿ ಬಹಳ ಹೆಸರಾಗಿದ್ದರು. ಸ್ವಾಮಿಗಳ ಪ್ರವಚನವೆಂದರೆ ನೂರಾರು ಸಾವಿರದ ಹತ್ತಿರ ಜನ ಸೇರುತ್ತಿದ್ದರು. ಎಷ್ಟೋ ವೇಳೆ ಯೋಗವನ್ನು ಕೆಲವು ಊರುಗಳಲ್ಲಿ ಹೇಳಿಕೊಡುತ್ತಿದ್ದರು. ಒಮ್ಮೆ 1988ರಲ್ಲಿ ಬೆಂಗಳೂರಿನಲ್ಲಿ ಒಂದು ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮರಳಿ ವಾರಣಾಸಿಗೆ ಹೋಗುವ ಸಂದರ್ಭದಲ್ಲಿ ಮಹಾರಾಷ್ಟ್ರದ ನಾಗಪುರದ ಭಕ್ತರ ಆಹ್ವಾನದ ಮೇರೆಗೆ ಜನವರಿ 16, 17, 18 ಮೂರು ದಿನಗಳು–ಅಲ್ಲಿ ಉಳಿಯಬೇಕಾಯ್ತು. ಮೊದಲದಿನ ಸಂಜೆ ಕಿಕ್ಕಿರಿದ ಜನಸ್ತೋಮಕ್ಕೆ ಪತಂಜಲಿ ಮಹರ್ಷಿಯ ಅಷ್ಟಾಂಗಯೋಗ ಸೂತ್ರದಲ್ಲಿ ಬರುವ ಪ್ರಾಣಾಯಾಮದ ಬಗೆಗೆ ವಿದ್ವತ್ಪೂರ್ಣವಾಗಿ ಹಿಂದಿಯಲ್ಲಿ ಗುರುಗಳು ಪ್ರವಚನ ಮಾಡಿದರು. ಎರಡನೇ ದಿನ ಸಂಜೆ ಅದೇ ಜಾಗದಲ್ಲಿ ಸಭೆಯನ್ನುದ್ದೇಶಿಸಿ ಧ್ಯಾನದ ಬಗ್ಗೆ ಕೇಳುಗರು ತಲೆತೂಗುವಂತೆ ಪೂಜ್ಯರು ಪ್ರವಚನ ಮಾಡಿದರು. 'ಧ್ಯಾನ' ಹಾಗೂ 'ಪ್ರಾಣಾಯಾಮ' ಕುರಿತು ಪ್ರವಚನ ಕೇಳಿದ ಭಕ್ತಾದಿಗಳು, ಕೇಳಿದ ಮಾತ್ರದಿಂದ ತೃಪ್ತಿಯಾಗಿಲ್ಲ, ಅವುಗಳನ್ನು ಹೇಗೆ ಮಾಡಬೇಕೆಂದು ತೋರಿಸಬೇಕೆಂದು ಪ್ರಾರ್ಥಿಸಿದರು. ಮರುದಿನ 18ನೇ ತಾರೀಖಿನಂದು 6 ಗಂಟೆಗೆ 'ಪ್ರಾಣಯಾಮ ಮತ್ತು ಧ್ಯಾನ' ಕುರಿತು ಗುರುಗಳು ಪ್ರಾತ್ಯಕ್ಷಿಕೆಯನ್ನು ಒಳ್ಳೆ ಪರಿಣಾಮಕಾರಿಯಾಗಿ ಮಾಡಿ ತೋರಿಸಿದರು.

ಜಗದ್ಗುರುಗಳ ಜೊತೆಯಲ್ಲೇ ನೆರಳಿನಂತೆ ಹಿಂಬಾಲಿಸುತ್ತಿದ್ದ ಬಬಲೇಶ್ವರ ಬೃಹನ್ಮಠದ ಷ||ಬ್ರ|| ಮಹಾದೇವ ಶಿವಾಚಾರ್ಯರು ಕಾರ್ಯಕ್ರಮಗಳ ಎಲ್ಲ ವಿವರಗಳನ್ನು ಸಂಗ್ರಹಿಸಿದ್ದರು.

ಹೀಗೆ ತಾವೇ ಸ್ವತಃ ಯೋಗ ಮಾಡುತ್ತಿದ್ದುದರಿಂದ ಡ್ಯಾನಿಷ್‌ನಲ್ಲಿ ಯೋಗಿಯ ಪ್ರತಿಭೆಯನ್ನು ಬಹು ಬೇಗ ಗುರುತಿಸಿದರು. ಇದರಿಂದಾಗಿಯೇ ಅವನಿಗೆ ದೀಕ್ಷೆ ನೀಡಿ ಆಶೀರ್ವದಿಸಿದರು. ಗುರುಗಳ ನಂಬಿಕೆಯನ್ನು ಡ್ಯಾನಿಶ್ ಹುಸಿಯಾಗಿಸಲಿಲ್ಲ. ಅವನೊಬ್ಬ ಶಿವದೀಕ್ಷೆ ತೆಗೆದುಕೊಂಡಿದ್ದಲ್ಲದೆ ಅನೇಕ ರಷ್ಯನ್ನರು ಶಿವದೀಕ್ಷೆ ತೆಗೆದುಕೊಳ್ಳುವಂತಾಯ್ತು.

ಇಷ್ಟಲಿಂಗ ಧಾರಣೆಗೆ ಜಾತಿಯ ಅಡೆತಡೆಯಿಲ್ಲ



ಕಾಶೀಯ ಶ್ರೀ ಜಂಗಮವಾಡಿ ಮಠದಲ್ಲಿ ನಡೆಯುತ್ತಿರುವ ಷಷ್ಟ್ಯಬ್ದಿ ಕಾರ್ಯಕ್ರಮದಲ್ಲಿ ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ರಷ್ಯನ್ ಭಕ್ತ ಮಿಹಾಯಿಲ್ ಎಂಬವರಿಗೆ ಲಿಂಗದೀಕ್ಷೆ ನೀಡಿದರು.

ಶಿವಾಗಮಗಳ ಸಾರವೇ ಆಗಿರುವ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಇಷ್ಟಲಿಂಗಧಾರಣೆಗೆ ಯೋಗ್ಯತೆಯನ್ನೇ ಮಾನದಂಡವಾಗಿ ಸ್ವೀಕರಿಸಿರುವುದರಿಂದ ಜಗದ್ಗುರುಗಳು ಈಗಾಗಲೇ ಅನೇಕ ಜಾತಿ, ವರ್ಗಗಳ ಶಿವಭಕ್ತರಿಗೆ ಲಿಂಗದೀಕ್ಷೆ ನೀಡಿದ್ದಾರೆ. ನೀಡುತ್ತಲೂ ಇದ್ದಾರೆ. ಅವರು ಹೇಳುವಂತೆ-ಅಗ್ನಿಯಲ್ಲಿ ಸುಟ್ಟುಹೋದ ಮೇಲೆ ಕಟ್ಟಿಗೆ ಉರಿದು ಬರಿ ಬೆಂಕಿಯೇ ಉಳಿಯುವಂತೆ ಲಿಂಗದೀಕ್ಷೆ ಪಡೆದ ಭಕ್ತನ ಪೂರ್ವಜಾತಿಯು ದಹಿಸಿ ಅವನು ಕೇವಲ ಶಿವಭಕ್ತನಾಗುತ್ತಾನೆ.

ಜಗದ್ಗುರುಗಳ ಷಷ್ಟ್ಯಬ್ದಿ ಸಮಾರಂಭದ ಸಮಯದಲ್ಲಿ ವಾರಾಣಸಿಗೆ ಮಾಸ್ಕೋದ ಮಿಹಾಯಿಲ ಎಂಬ ಯೋಗ ಶಿಕ್ಷಕನು ಬಂದು ಜಗದ್ಗುರುಗಳಿಂದ ವೀರಶೈವ ಧರ್ಮಾನುಸಾರ ದೀಕ್ಷಾ ಸಂಸ್ಕಾರ, ಮಹಾಮಂತ್ರೋಪದೇಶ, ಉಪದೇಶ ಮಾಡಿ ಗುರುಗಳು ಇಷ್ಟಲಿಂಗಧಾರಣೆ ಮಾಡಿದರು. ಮಿಹಾಯಿಲನಿಗೆ ವಿಶ್ವಾರಾಧ್ಯ ಎಂದು ಗುರುಗಳು ನಾಮಕರಣ ಮಾಡಿದರು.

12ನೇ ಶತಮಾನದಲ್ಲಿ ಬೇರೆ ಬೇರೆ ಜಾತಿಯ ಶರಣರು ಲಿಂಗದೀಕ್ಷೆ ಪಡೆದು ವೀರಶೈವದ ದೀಕ್ಷೆ ಪಡೆದುದನ್ನು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಐದು ವರ್ಷಗಳ ಹಿಂದೆ ದೀಕ್ಷೆ ಪಡೆದಿದ್ದ ಗೌರಿ (ಯಹೂಲಿಯಾ) ಪ್ರತಿದಿನ ಶ್ರೀರುದ್ರ ಪಠಣ ಮಾಡುತ್ತಾ ಲಿಂಗಪೂಜೆ ಮಾಡುತ್ತಾ ಧರ್ಮಾಚರಣೆಯಲ್ಲಿ ತೊಡಗಿರುವುದಲ್ಲದೆ ಶ್ರೀ ಸಿದ್ಧಾಂತ ಶಿಖಾಮಣಿ ಅಭ್ಯಾಸ ಮಾಡಿದ್ದು, ಅದನ್ನೀಗ ರಷ್ಯನ್ ಭಾಷೆಗೆ ಅನುವಾದಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಇದೀಗ ದೀಕ್ಷೆ ಪಡೆದ ಮಿಹಾಯಿಲ (ವಿಶ್ವಾರಾಧ್ಯ) ಆ ಗ್ರಂಥವನ್ನು ಮುದ್ರಿಸಿ ಪ್ರಚಾರ ಮಾಡುವ ಹೊಣೆ ಹೊತ್ತಿದ್ದಾರೆ.



ಈ ರೀತಿ ಕಾಶೀ ಜಗದ್ಗುರುಗಳು ತಮ್ಮ ವಿದೇಶೀ ಶಿಷ್ಯರಿಂದ ವಿದೇಶಗಳಲ್ಲಿ ಧರ್ಮ ಪ್ರಚಾರ ಮಾಡುವ ಯೋಜನೆ ತಯಾರಿಸಿದ್ದಾರೆ. ಗೌರಿ (ಯುಲಿಯಾ) ಜಗದ್ಗುರುಗಳ ಷಷ್ಟ್ಯಬ್ದಿ ಸಮಾರಂಭದಲ್ಲಿ ಪಾಲ್ಗೊಳ್ಳುವ ಸಲುವಾಗಿ ಬಂದು ಮಠದಲ್ಲೇ ವಾಸ್ತವ್ಯ ಹೂಡಿ ಪ್ರತಿದಿನ ನಡೆಯುತ್ತಿರುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅತ್ಯಂತ ಭಕ್ತಿಯಿಂದ ಭಾಗವಹಿಸುತ್ತಿದ್ದರು. ನಾವುಗಳು ಈ ಸಮಾರಂಭದಲ್ಲಿ ಭಾಗಿಯಾಗಲು ಕಾಶಿಗೆ ಹೋದಾಗ ಈ ಸರಳವಾದ, ಸುಶಿಕ್ಷಿತ ಸಂಸ್ಕಾರವಂತ ಗೌರಿಯನ್ನು ಜಗದ್ಗುರುಗಳು ಭೇಟಿ ಮಾಡಿಸಿದರು. ಪೂಜಾ ಕಾರ್ಯಕ್ರಮದಲ್ಲಿ ಅವಳಲ್ಲಿದ್ದ ಶ್ರದ್ಧೆ ಭಕ್ತಿಯನ್ನು ಕಂಡು ಆಶ್ಚರ್ಯವಾಯಿತು!



ಮುಂದೆ ದಿನೇಶನು ವಿವಾಹ ಮಾಡಿಕೊಳ್ಳುವ ಅಪೇಕ್ಷೆಯಿಂದ ತಾನು ಅಪೇಕ್ಷಿಸಿದ 'ಅಲೆಕ್ಸಾಂಡ್ರ' ಎಂಬ ಹೆಸರಿನ ಯೋಗ ಪ್ರಶಿಕ್ಷಿತಳಾದ ಒಬ್ಬ ಕನ್ಯಾಮಣಿಯನ್ನು ಕರೆದುಕೊಂಡು ಭಾರತಕ್ಕೆ 2003ರಲ್ಲಿ ಆಗಮಿಸಿದನು. ಆಗ ಶ್ರೀ ಕಾಶೀ ಜಗದ್ಗುರುಗಳವರು ಬಳ್ಳಾರಿಯ ಕ್ಯಾಂಪಿನಲ್ಲಿದ್ದರು. ಆಗ ಅವನು ಅಲ್ಲಿಗೆ ಆಗಮಿಸಿ ಶ್ರೀ ಸನ್ನಿಧಿಯವರಿಗೆ ತನ್ನ ಇಚ್ಛೆಯನ್ನು ವ್ಯಕ್ತಮಾಡಿದಾಗ ಅಲೆಕ್ಸಾಂಡ್ರಾಳಿಗೂ ಲಿಂಗದೀಕ್ಷೆಯನ್ನು ಮಾಡಿ ಅವಳಿಗೆ 'ಉಷಾ' ಎಂಬ ನಾಮಕರಣವನ್ನು ಮಾಡಿದರು. ಹಾಗೂ ಸ್ಥಳೀಯ ಬಸವ ಭವನದಲ್ಲಿ ವೀರಶೈವ ಧರ್ಮದ ಪದ್ಧತಿಯಂತೆ ಪಂಚಕಳಸಗಳ ಸಾಕ್ಷಿಯಾಗಿ ವಿವಾಹ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಈ ಸಮಾರಂಭಕ್ಕೆ ಬಳ್ಳಾರಿಯ ವೀರಶೈವ ಸಮಾಜವು ಸ್ಪಂದಿಸಿ ಸಾವಿರಕ್ಕೂ ಹೆಚ್ಚು ಜನರು ಆ ಸಮಾರಂಭದಲ್ಲಿ ಪಾಲ್ಗೊಂಡು



ಜಂಗಮವಾಡಿ ಮಠದಲ್ಲಿ ಶಿವರಾತ್ರಿಯಂದು ಜಗದ್ಗುರುಗಳಿಂದ ದೀಕ್ಷೆ ಪಡೆದ ರಷ್ಯನ್ ಭಕ್ತರು

ಸಂತೋಷವನ್ನು ಹಂಚಿಕೊಂಡರು. ಬಳ್ಳಾರಿಯಲ್ಲಿ ನಡೆದ ಈ ವಿವಾಹ ಕಾರ್ಯಕ್ರಮದ ವಾರ್ತೆಯನ್ನು ಕರ್ನಾಟಕದ ಎಲ್ಲ ಪ್ರಮುಖ ಪತ್ರಿಕೆಗಳು ಮುಖಪುಟದಲ್ಲಿ ಸ್ಥಾನವನ್ನು ಕೊಟ್ಟದ್ದು ಒಂದು ವಿಶೇಷಸುದ್ದಿಯಾಗಿತ್ತು. ಮುಂದೆ ಶಿವರಾತ್ರಿಯಂದು ದಿನೇಶನು ತನ್ನ ತಾಯಿಯ ಜೊತೆಗೆ ಏಳೆಂಟು ಜನ ತನ್ನ ಯೋಗ ಶಿಷ್ಯರನ್ನು ಕರೆದುಕೊಂಡು ಕಾಶೀಕ್ಷೇತ್ರಕ್ಕೆ ಬಂದು ಅವರೆಲ್ಲರಿಗೂ ಲಿಂಗದೀಕ್ಷೆಯನ್ನು ಕೊಡಿಸಿದನು. ಅವರಲ್ಲಿ ಯುಕ್ರೇನ್ ದೇಶದ ಯುಲಿಯಾ ಎಂಬ ಹೆಸರಿನ ಸಾಫ್ಟ್‌ವೇರ್ ಇಂಜಿನಿಯರ್ ಅವರ ಹೆಣ್ಣು ಮಗಳು ಸಹ ಲಿಂಗದೀಕ್ಷೆಯನ್ನು ಪಡೆದುಕೊಂಡಿದ್ದು ಅವಳಿಗೆ ಶ್ರೀ ಸನ್ನಿಧಿಯವರು 'ಗೌರಿ' ಎಂದು ಭಾರತೀಯ ಪವಿತ್ರ ನಾಮಕರಣ ಮಾಡಿದರು.

ಈ ಗೌರಿಯು ಕಳೆದ ಆರೇಳು ವರ್ಷಗಳಿಂದ ಪ್ರತಿವರ್ಷ ಶಿವರಾತ್ರಿಯ ಪೂರ್ವಕಾಲದಲ್ಲಿ ಕಾಶೀ ಕ್ಷೇತ್ರಕ್ಕೆ ಬಂದು ಸಂಸ್ಕೃತ ಹಾಗೂ ಹಿಂದಿ ಭಾಷೆಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಅವರ ಜೊತೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ಅನುಭವ ಸೂತ್ರ ಗ್ರಂಥಗಳನ್ನು ಸಹ ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ದಿನೇಶ ಮತ್ತು ಗೌರಿ ಇವರೀರ್ವರೂ ಪರಸ್ಪರ ಆಪ್ತಾಲೋಚನೆಯನ್ನು ಮಾಡಿಕೊಂಡು ಶ್ರೀ ಕಾಶೀ ಸನ್ನಿಧಿಯವರನ್ನು ರಷ್ಯಾ ದೇಶಕ್ಕೆ ಬರಮಾಡಿಕೊಂಡು ಅಲ್ಲಿಯ ಯೋಗ ಶಿಕ್ಷಕರಿಗೆ ಶಿವಲಿಂಗ ದೀಕ್ಷೆಯನ್ನು ಮಾಡಿಸಿ ಶಿವಯೋಗ ತರಬೇತಿಯನ್ನು ಕೊಡಿಸಬೇಕೆಂಬುದಾಗಿ ನಿರ್ಣಯಿಸಿದರು.

ಡ್ಯಾನಿಷ್/ದಿನೇಶನಿಂದಾಗಿ ವಿದೇಶದ ಯೋಗ ಶಿಕ್ಷಕರಲ್ಲಿ ಶಿವಯೋಗದಲ್ಲಿ ಆಸಕ್ತಿ ಹೆಚ್ಚಾಗತೊಡಗಿತು. ಅವನ ಸಾಧನೆಯನ್ನು ಕಂಡು ತಾವೂ ಆ ನಿಟ್ಟಿನಲ್ಲಿ ಪ್ರಯತ್ನಿಸಬೇಕೆಂದು 4 ಜನ ಯೋಗ ಶಿಕ್ಷಕರು ಕಾಶಿಗೆ ಹೋಗಿ ಜಗದ್ಗುರುಗಳ ಬಳಿ ಶಿವದೀಕ್ಷೆಯನ್ನು ಪಡೆಯುವ ನಿರ್ಧಾರ ಕೈಗೊಂಡು ಕಾಶಿಗೆ ಬಂದರು.

ಚಂದ್ರಜ್ಞಾನಾಗಮದಲ್ಲಿ ಶಿವದೀಕ್ಷೆಯನ್ನು ಕೊಡುವ ಮುನ್ನ ಶಿಷ್ಯನ ಪರೀಕ್ಷೆ ಮಾಡಬೇಕೆಂದು ಹೇಳಿದೆಯೇ ವಿನಃ ಯಾವ ವರ್ಣ, ವರ್ಗದವರಿಗೆಂದು ಎಲ್ಲೂ ಹೇಳಿಲ್ಲ ಎಂಬುದು ಗಮನಾರ್ಹ ಸಂಗತಿ. ಆ ಆಗಮದ ಕಾಲಕ್ಕೆ ಬಹುಶಃ ಶಿವಭಕ್ತನಾದವನಿಗೆ ದೀಕ್ಷೆ ಕೊಡುವ ಪದ್ಧತಿ ರೂಢಿಯಲ್ಲಿದ್ದಿರಬೇಕೆಂಬುದು ಆಗಮಗಳಿಂದ ತಿಳಿದುಬರುತ್ತದೆ.

ಎಲ್ಲಾ ಶೈವಾಗಮಗಳನ್ನು ಅಧ್ಯಯನ ಮಾಡಿರುವ ಜಗದ್ಗುರುಗಳಿಗೆ ಈ ಸಂಗತಿ ಗೊತ್ತಿದ್ದರಿಂದ ಶಿವದೀಕ್ಷೆ ಪಡೆಯಬೇಕೆಂದು ಬಂದವರನ್ನು ಬಹುಕಾಲ ಪರೀಕ್ಷಿಸಿ-ಅರ್ಹರಾದವರಿಗೆ ಶಿವದೀಕ್ಷೆ ಕೊಡುತ್ತಿದ್ದರು. ಹಾಗಿದ್ದುದರಿಂದಲೇ ರಶಿಯಾದ ನಾಲ್ವರು ಯೋಗ ಶಿಕ್ಷಕರಿಗೆ ಲಿಂಗದೀಕ್ಷೆ ನೀಡಿದರು. ಅವರುಗಳಿಗೆ ಆಶೀರ್ವದಿಸುತ್ತಾ ಶಿವಯೋಗದ ಬಗೆಗೆ ತಿಳಿಸಿ ಹಠಯೋಗ, ಮಂತ್ರಯೋಗ ರಾಜಯೋಗಗಳು ಶಿವಯೋಗಕ್ಕೆ ಸಹಕಾರಿಯಾಗುವುದೆಂದೂ ಜೀವಾತ್ಮನನ್ನು ಪರಮಾತ್ಮನೊಂದಿಗೆ ಜೋಡಿಸುವುದೇ ಶಿವಯೋಗವೆಂದು ದೀಕ್ಷಾ ಸಂಸ್ಕಾರದ ಮೂಲಕ ಅವರನ್ನು ಶಿವಯೋಗ ಸಾಧಕರನ್ನಾಗಿ ಮಾಡಲಾಗುವುದೆಂದು ತಿಳಿಸಿದರು. ಈಗ ದೀಕ್ಷೆ ತೆಗೆದುಕೊಂಡ ರಷ್ಯಾದ ಯೋಗ ಶಿಕ್ಷಕರಿಗೆ ತಮ್ಮ ಮೊದಲಿನ ಸಂಸ್ಕಾರಗಳನ್ನು ತ್ಯಜಿಸಿ ಶಿವಸಂಸ್ಕಾರಿಗಳಾಗಬೇಕು-ಅಂಥವರನ್ನು ನೀವೇ ನೋಡಿ ಅವರು ಲಿಂಗದೀಕ್ಷೆ ಪಡೆದುಕೊಳ್ಳಲು ತಯಾರಿದ್ದರೆ ಕಳುಹಿಸಿಕೊಡಿ ಎಂದರು.



ವಾರಾಣಸಿಯಲ್ಲಿ ಲಿಂಗದೀಕ್ಷೆ ಪಡೆದ ರಷ್ಯಾದ ನಾಲ್ವರು ಯೋಗ ಶಿಕ್ಷಕರನ್ನು ಕಾಶೀ ಶ್ರೀಗಳು ಸನ್ಮಾನಿಸಿದರು.

ಜಗದ್ಗುರುಗಳಿಂದ ಲಿಂಗದೀಕ್ಷೆ ಪಡೆದುಕೊಂಡ ಓಲೇಗ, ಯುರಜಿನ್ ಕೋಹ, ವಿಕಚೇಬಾ ಸ್ಲಾವ್, ತಾತ್ಸನಾ ಪೋಲೇಯೇವಾ ಅವರುಗಳನ್ನು ಜಗದ್ಗುರುಗಳು ಸನ್ಮಾನಿಸಿದರು.

ಕು. ಯುಲಿಯಾ (ಗೌರಿ) ಎಂಟು ವರ್ಷಗಳ ಹಿಂದೆಯೇ ಲಿಂಗದೀಕ್ಷೆ ಪಡೆದಿದ್ದು, ಸಿದ್ಧಾಂತ ಶಿಖಾಮಣಿಯನ್ನು ರಷ್ಯನ್ ಭಾಷೆಗೆ ಅನುವಾದ ಮಾಡಿದ್ದಾರೆ. ಅನುಭವ ಸೂತ್ರ ಮತ್ತು ಚಂದ್ರಜ್ಞಾನಾಗಮವನ್ನು ಅನುವಾದ ಮಾಡುವ ಉದ್ದೇಶವಿರುವುದನ್ನು ಜಗದ್ಗುರುಗಳಿಗೆ ತಿಳಿಸಿದರು.

ಬಹುದೊಡ್ಡ ಯೋಗ ಸಾಧಕ ಹಾಗೂ ಶಿಕ್ಷಕನಾಗಿ ಬೆಳೆದಿರುವ ದಿನೇಶ್ 2010ರಲ್ಲಿ ಶಿವಯೋಗ, ವೀರಶೈವ ಧರ್ಮ ಹಾಗೂ ಅಷ್ಟಾಂಗಯೋಗ ಶಿಬಿರಕ್ಕೆ ಜಗದ್ಗುರುಗಳನ್ನು ರಷ್ಯಾಗೆ ಬರಲು ಆಹ್ವಾನ ನೀಡಿರುವುದೊಂದು ಸಂತಸದ ಸಂಗತಿಯಾಗಿದೆ.

ಜಗದ್ಗುರುಗಳಿಗೆ ಆಮಂತ್ರಣ ನೀಡಿ ರಷ್ಯಾಕ್ಕೆ ಕರೆಸಿಕೊಳ್ಳುತ್ತಿರುವ ವಿಚಾರ ಜಗದ್ಗುರುಗಳಿಂದ ಭಕ್ತರಿಗೆ ತಿಳಿದು ಅನೇಕರು ಶುಭ ಕೋರಿದರು. ಸಂಘ ಸಂಸ್ಥೆಗಳು ಶುಭ ಹಾರೈಸಿದವು.

ಗದಗ್ ಕಾರ್ಯಕ್ರಮಲ್ಲಿ ಗುರುಗಳು ಯೋಗಶಾಸ್ತ್ರ ವಿದೇಶಗಳಲ್ಲಿ ದಿನೇದಿನೇ ಜನಪ್ರಿಯಗೊಳ್ಳುತ್ತಿರುವುದನ್ನು ಹೇಳಿ ಯೋಗಶಾಸ್ತ್ರ ಭಾರತೀಯ ಋಷಿಮುನಿಗಳು ವಿಶ್ವಕ್ಕೆ ನೀಡಿರುವ ಅಪೂರ್ವ ಕೊಡುಗೆಯಾಗಿದೆ. ಇದರಿಂದ ಶಾರೀರಿಕವಾಗಿ ಮಾನಸಿಕವಾಗಿ ಸ್ವಸ್ಥರಾಗಿರಲು ಸಾಧ್ಯ. ಯೋಗಗಳಲ್ಲಿ ಹಠಯೋಗ, ಮಂತ್ರಯೋಗ, ಲಯಯೋಗ, ರಾಜಯೋಗ, ಶಿವಯೋಗಗಳೆಂಬ ಪ್ರಕಾರಗಳಿರುವುದನ್ನು ಸಭೆಯಲ್ಲಿ ತಿಳಿಸಿದರಲ್ಲದೆ, ಅವುಗಳಲ್ಲಿ ಶಿವಯೋಗ ಅತ್ಯಂತ ಪ್ರಸಿದ್ಧವಾದುದು. ಅನೇಕ ವೀರಶೈವ ಆಚಾರ್ಯರೂ, ಶಿವಶರಣರೂ ಶಿವಯೋಗವನ್ನು ಸಾಧಿಸಿದ್ದಾರೆ. ಇದನ್ನು ತಿಳಿದ ರಷ್ಯನ್‌ರು ವೀರಶೈವ ಧರ್ಮದ ಶಿವಯೋಗವನ್ನು ಕಲಿಯಲು ಉತ್ಸಾಹ ತೋರಿದ ವಿಚಾರಗಳನ್ನೂ ತಿಳಿಸಿದರು. ತಮ್ಮ ಜೊತೆಯಲ್ಲಿ ಬೆಂಗಳೂರಿನ ವಿಭೂತಿಪುರಮಠದ ಶ್ರೀ ಮಹಂತಲಿಂಗ ಶಿವಾಚಾರ್ಯರೂ ಭಾಗವಹಿಸಲಿದ್ದಾರೆಂದೂ ಜುಲೈ 1ರಂದು ಮಾಸ್ಕೋ ತಲುಪಿ, ಜುಲೈ 10ರಂದು ಅಲ್ಲಿಂದ ಹಿಂತಿರುಗುವುದಾಗಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯ ಶಿವಾಚಾರ್ಯರು ಶ್ರೀಲಂಕಾಗೆ ಆಕಾಶಮಾರ್ಗವಾಗಿ ತೆರಳಿ ಅಲ್ಲಿ ರಾವಣನ ಸಹೋದರ ವಿಭೀಷಣನ ಕೋರಿಕೆ ಮೇರೆಗೆ ಏಕಕಾಲಕ್ಕೆ ಕೋಟಿಲಿಂಗ ಸ್ಥಾಪನೆ ಮಾಡಿದ್ದರು. ಕಾಶೀಪೀಠದ ಆದಿ ಜಗದ್ಗುರು ವಿಶ್ವಾರಾಧ್ಯರು ನೇಪಾಳ ರಾಜನ ಕೋರಿಕೆ ಮೇರೆಗೆ ಭಕ್ತಪುರಕ್ಕೆ ಹೋಗಿದ್ದರು. ಇವನ್ನು ಬಿಟ್ಟರೆ ಇಲ್ಲಿಯವರೆಗೆ ಪಂಚಪೀಠದ ಜಗದ್ಗುರುಗಳು ವಿದೇಶಕ್ಕೆ ಹೋಗಿಲ್ಲ. ಇದೇ ಮೊದಲ ಬಾರಿಗೆ ಕಾಶೀ ಜಗದ್ಗುರುಗಳು ವೀರಶೈವ ಧರ್ಮ, ಸಿದ್ಧಾಂತ, ಲಿಂಗಪೂಜೆ ಹಾಗೂ ಶಿವಯೋಗ ಶಿಬಿರದಲ್ಲಿ ಸೂಕ್ತ ಮಾರ್ಗದರ್ಶನ ನೀಡಲು ರಷ್ಯಾದೇಶಕ್ಕೆ ತೆರಳಲಿದ್ದಾರೆ.

ಈ ಎಲ್ಲಾ ವಿಷಯಗಳೂ ದೈನಂದಿನ ಪತ್ರಿಕೆಗಳಾದ ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ನವೋದಯ, ನಾಗರಿಕ, ಸಂಜೆವಾಣಿಗಳಲ್ಲಿ ಪ್ರಚಾರಗೊಂಡವು.

ರಷ್ಯಾದ ಶಿವಯೋಗ ಶಿಬಿರಕ್ಕೆ ಕಾಶೀ ಶ್ರೀಗಳು, ಪ್ರಜಾವಾಣಿ, 29–6–2010
ಜೂನ್ 30 ರಂದು ರಶಿಯಾಗೆ ಕಾಶಿ ಶ್ರೀಗಳ ಪ್ರಯಾಣ ನಾಗರಿಕ, 29–6–2010
ಮಾಸ್ಕೋದಲ್ಲಿ ಜುಲೈ 1 ರಂದು ಕಾಶಿ ಜಗದ್ಗುರುಗಳ ನೇತೃತ್ವದಲ್ಲಿ ಶಿವಯೋಗ ಶಿಬಿರ – ನವೋದಯ, 30–6–2010
ವಿದೇಶದಲ್ಲಿ ಶಿವಯೋಗದ ಆಸಕ್ತಿ ಹೆಚ್ಚಳ – ಮಾಸ್ಕೋಕ್ಕೆ ಕಾಶೀ ಶ್ರೀಗಳ ಭೇಟಿ – ಸಂಯುಕ್ತ ಕರ್ನಾಟಕ
ಯೋಗಶಾಸ್ತ್ರ ವಿದೇಶದಲ್ಲೂ ಜನಪ್ರಿಯ – ವಿಜಯ ಕರ್ನಾಟಕ, 29–6–2010

ವೀರಶೈವ ಧರ್ಮ ಪ್ರಚಾರಕ್ಕಾಗಿ ಕಾಶೀ ಜಗದ್ಗುರುಗಳ ವಿದೇಶ ಪ್ರಯಾಣ

2010ನೇ ಇಸ್ವಿ ಮೇ ಮತ್ತು ಜೂನ್ ತಿಂಗಳಲ್ಲಿ ದಿನೇಶ್ ಮತ್ತು ಗೌರಿ ಶ್ರೀ ಸನ್ನಿಧಿಯವರಿಗೆ ರಷ್ಯಾದೇಶಕ್ಕೆ ಬರಲು ವಿನಂತಿ ಮಾಡಿಕೊಂಡು, ತಮ್ಮ ಅಷ್ಟಾಂಗಯೋಗ ಕೇಂದ್ರದಿಂದ ವಿಧಿವತ್ತಾಗಿ ಲಿಖಿತ ಆಮಂತ್ರಣವನ್ನು ಕಳುಹಿಸಿಕೊಟ್ಟರು. ರಷ್ಯಾ ದೇಶದ ಯೋಗ ಶಿಕ್ಷಕರಲ್ಲಿಯ ಶಿವಯೋಗದ ಬಗ್ಗೆ ಇರುವ ಪ್ರೀತಿ ವಿಶ್ವಾಸಗಳನ್ನು ಕಂಡು ಸಂತುಷ್ಟರಾದರು ಮತ್ತು ಬೆಂಗಳೂರಿನ ವಿಭೂತಿಪುರ ಮಠದ ಶ್ರೀ ಷ.ಬ್ರ. ಡಾ. ಮಹಂತಲಿಂಗ ಶಿವಾಚಾರ್ಯರನ್ನು ಜೊತೆಗೆ ಕರೆದುಕೊಂಡು ದಿನಾಂಕ 1–7–2010 ರಿಂದ 9–7–2010ರವರೆಗೆ 9 ದಿನಗಳ ಕಾಲ ರಷ್ಯಾ ದೇಶಕ್ಕೆ ಹೋಗುವುದಾಗಿ ನಿರ್ಣಯಿಸಿದರು.

1–7–2010 ಮಾಸ್ಕೋ ದೇಶಕ್ಕೆ ಜಗದ್ಗುರುಗಳ ಪ್ರಯಾಣ

ಶ್ರೀ ಷ.ಬ್ರ. ಡಾ. ಮಹಂತಲಿಂಗ ಶಿವಾಚಾರ್ಯರು ರಷ್ಯಾ ದೇಶಕ್ಕೆ ಹೋಗಿ ಬರುವ ವೀಸಾ ಮುಂತಾದ ಕಾನೂನಿನ ಪರವಾನಿಗಿಯನ್ನು ಮದ್ರಾಸಿನಿಂದ ಮಾಡಿಸಿ ಟಿಕೆಟ್ ಬುಕ್ ಮಾಡಿಸಿ ದಿನಾಂಕ 30–6–2010 ರಂದು ಬೆಂಗಳೂರಿನಿಂದ ದಿಲ್ಲಿಗೆ ಪ್ರಯಾಣಗೈದರು. ದಿಲ್ಲಿಯ ಸುಪ್ರಸಿದ್ಧವಾದ ಛತ್ರಪುರದ ಮಂದಿರದ ಶಿಷ್ಯರಲ್ಲೊಬ್ಬರಾದ ಶ್ರೀ ವಿಜಯಶಂಕರ ಗೌಡ ಇವರ ಮನೆಯಲ್ಲಿ ಸ್ನಾನ ಶಿವಪೂಜಾದಿಗಳನ್ನು ಮುಗಿಸಿಕೊಂಡು ದಿನಾಂಕ 1–7–2010ರಂದು ರಾತ್ರಿ 2 ಗಂಟೆಗೆ ಏರೋಫ್ಲಾಟ್ ಏರ್ ಲೈನ್ ವಿಮಾನ ಮೂಲಕ ಪ್ರಯಾಣವನ್ನು ಪ್ರಾರಂಭಿಸಿ 6 ಘಂಟೆಗಳ ನಿರಂತರ ಪ್ರವಾಸದ ಬಳಿಕ ಪ್ರಾತಃಕಾಲ 7 ಘಂಟೆಗೆ ಮಾಸ್ಕೋ ನಗರವನ್ನು ತಲುಪಿದರು. ಶ್ರೀ ಸನ್ನಿಧಿಯವರನ್ನು ಸ್ವಾಗತಿಸಿದ ದಿನೇಶನು ತನ್ನ ಮನೆಗೆ ಅವರನ್ನು ಕರೆದುಕೊಂಡು ಹೋದನು. ಅಂದು ಅವನ ಮನೆಯಲ್ಲಿ ಸ್ನಾನ ಪೂಜಾದಿಗಳನ್ನು ಪೂರೈಸಿ ವಿಶ್ರಾಂತಿಯನ್ನು ಮಾಡಿದರು.



ವೀರಶೈವ ಧರ್ಮ ಪ್ರಚಾರಕ್ಕಾಗಿ
ಕಾಶಿ ಜಗದ್ಗುರುಗಳ ವಿದೇಶ ಪ್ರಯಾಣ

30–6–10 ರಿಂದ 9–7–10ರ ವರೆಗೆ
ಧರ್ಮ ಪ್ರಚಾರದ ಉದ್ದೇಶದಿಂದ
ರಷಿಯಾದ ರಾಜಧಾನಿ ಮಾಸ್ಕೋ ಹಾಗೂ
ಪೀಟರ್ಸಬರ್ಗ್ ನಗರಗಳಲ್ಲಿ ಜರುಗುವ
ತತ್ವಶಾಸ್ತ್ರ ಚಿಂತನೆ ಸಮಾರಂಭಗಳಲ್ಲಿ
ಪಾಲ್ಗೊಳ್ಳಲು ವಿದೇಶ ಯಾತ್ರೆ
ಕೈಗೊಳ್ಳಲಿರುವ ಶ್ರೀ ಕಾಶಿ ಜಗದ್ಗುರುಗಳಾದ
ಡಾ. ಚಂದ್ರಶೇಖರ ಶಿವಾಚಾರ್ಯ
ಭಗವತ್ಪಾದರಿಗೆ
ಮತ್ತು ಬೆಂಗಳೂರಿನ

ಡಾ. ಚಂದ್ರಶೇಖರ ಶಿವಾಚಾರ್ಯರು

ವಿಭೂತಿಪೂರ ಮಠದ ಶ್ರೀಗಳಿಗೆ ನಮ್ಮ ಹೃತ್ಪೂರ್ವಕ, ಹಾರ್ದಿಕ ಬೀಳ್ಕೊಡುಗೆ.

ಗೌರವ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಮತ್ತು
ಸಿಬ್ಬಂದಿ ವರ್ಗ. ಮಹಾಲಕ್ಷ್ಮೀ ಅಲ್ಪಸಂಖ್ಯಾತರ ಮತ್ತು ಹಿಂದುಳಿದ
ವರ್ಗದವರ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ.,
ಸಾ. ಸತ್ತಿ ತಾಲೂಕ: ಅಥಣಿ.



ವೀರಶೈವ ಧರ್ಮ ಪ್ರಚಾರಕ್ಕಾಗಿ ಕಾಶೀ ಜಗದ್ಗುರುಗಳ
ವಿದೇಶ ಪ್ರಯಾಣ


ಕಾಶೀ ಜಗದ್ಗುರು ಶ್ರೀ ಶ್ರೀ
ಡಾ.ಚಂದ್ರಶೇಖರ ಶಿವಾಚಾರ್ಯ
ಭಗವತ್ಪಾದರು

ದಿ: 30-6-2010 ರಿಂದ 9-7-2010 ರವರೆಗೆ
ವೀರಶೈವ ಧರ್ಮ ಪ್ರಚಾರದ ಉದ್ದೇಶದಿಂದ ರಷ್ಯಾದ ರಾಜಧಾನಿ ಮಾಸ್ಕೋ ಹಾಗೂ
ಪೀಟರ್ಸ್‌ಬರ್ಗ್ ಮಹಾನಗರದಲ್ಲಿ ಜರುಗುವ ತತ್ವಶಾಸ್ತ್ರ ಚಿಂತನ ಸಮಾವೇಶ
"ಲಿಂಗದೀಕ್ಷೆ" ಹಾಗೂ "ಲಿಂಗ ಪೂಜಾ ಪ್ರಾತ್ಯಕ್ಷಿಕೆ" ಸಮಾರಂಭದಲ್ಲಿ
ಪಾಲ್ಗೊಳ್ಳಲು ರಷ್ಯಾ ದೇಶಕ್ಕೆ ದಯಮಾಡಿಸುತ್ತಿರುವ
ಕಾಶೀ ಜಗದ್ಗುರು ಶ್ರೀ ಶ್ರೀ ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರಿಗೆ ಮತ್ತು
ಬೆಂಗಳೂರು ವಿಭೂತಿಪುರ ಮಠದ ಶ್ರೀಗಳಿಗೆ
ಭಕ್ತಿಪೂರ್ವಕ ಪ್ರಣಾಮಗಳೊಂದಿಗೆ ಶುಭ ಕೋರುವವರು

ದಿ.ಜಮಖಂಡಿ ಅರ್ಬನ್ ಕೋ ಆಪ್ ಲಿ.,ಜಮಖಂಡಿ.

ಶ್ರೀ ಅರುಣಕುಮಾರ ಶಹಾ — ಅಧ್ಯಕ್ಷರು
ಶ್ರೀ ಸೂರ್ಯಕಾಂತ ಕಲೂತಿ — ಉಪಾಧ್ಯಕ್ಷರು

ಬ್ಯಾಂಕಿನ ಸರ್ವ ನಿರ್ದೇಶಕ ಮಂಡಳಿ ಹಾಗೂ
ಸಿಬ್ಬಂದಿ ವರ್ಗದವರು,ಜಮಖಂಡಿ.



ವೀರಶೈವ ಧರ್ಮ ಪ್ರಚಾರಕ್ಕಾಗಿ ಕಾಶೀ ಜಗದ್ಗುರುಗಳ ವಿದೇಶ ಪ್ರಯಾಣ

ದಿ. 30–6–2010 ರಿಂದ 9–7–2010 ರವರೆಗೆ ವೀರಶೈವ ಧರ್ಮ ಪ್ರಚಾರದ ಉದ್ದೇಶದಿಂದ
ರಷ್ಯಾದ ರಾಜಧಾನಿ ಮಾಸ್ಕೋ ಹಾಗೂ ಪೀಟರ್ಸ್‌ಬರ್ಗ್ ಮಹಾನಗರದಲ್ಲಿ ಜರುಗುವ ತತ್ವ ಶಾಸ್ತ್ರ
ಚಿಂತನ ಸಮಾವೇಶ "ಲಿಂಗದೀಕ್ಷೆ" ಹಾಗೂ "ಲಿಂಗ ಪೂಜಾ ಪ್ರಾತ್ಯಕ್ಷಿಕೆ"
ಸಮಾರಂಭದಲ್ಲಿ ಪಾಲ್ಗೊಳ್ಳಲು ರಷ್ಯಾ ದೇಶಕ್ಕೆ ದಯಮಾಡಿಸುತ್ತಿರುವ ಕಾಶೀ ಜಗದ್ಗುರು
ಶ್ರೀ ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರಿಗೆ ಮತ್ತು
ಬೆಂಗಳೂರು ವಿಭೂತಿಪುರ ಮಠದ ಶ್ರೀಗಳಿಗೆ
ಭಕ್ತಿಪೂರ್ವಕ ಪ್ರಣಾಮಗಳೊಂದಿಗೆ ಶುಭ ಕೋರುವ

ಶ್ರೀ ಜಗದ್ಗುರು ಪಂಚಾಚಾರ್ಯ ಕ್ರೆಡಿಟ್ ಸೊಸೈಟಿ ಜಮಖಂಡಿ

ಅಧ್ಯಕ್ಷರು, ಶ್ರೀ ಆರ್.ಎಸ್. ಅಕ್ಕಿ
ಉಪಾಧ್ಯಕ್ಷರು, ಶ್ರೀ ಗುರುಮೂರ್ತಯ್ಯ ಜಿ. ಮಠಪತಿ
ಹಾಗೂ ಸರ್ವಸದಸ್ಯರು



ವೀರಶೈವ ಧರ್ಮ ಪ್ರಚಾರಕ್ಕಾಗಿ ಕಾಶಿ ಜಗದ್ಗುರುಗಳ
ವಿದೇಶ ಪ್ರಯಾಣ

ದಿನಾಂಕ 30–06–2010 ರಿಂದ 09–07–2010
ವರೆಗೆ ವೀರಶೈವ ಧರ್ಮ ಪ್ರಚಾರದ ಉದ್ದೇಶದಿಂದ
ರಷ್ಯಾದ ರಾಜಧಾನಿಯಾದ ಮಾಸ್ಕೊ ಮತ್ತು
ಪೀಟರ್ಸ್‌ಬರ್ಗ್ ಮಹಾನಗರಗಳಲ್ಲಿ ಜರುಗುವ
ತತ್ವಶಾಸ್ತ್ರ ಚಿಂತನ ಸಮಾವೇಶದಲ್ಲಿ ಪಾಲ್ಗೊಳ್ಳಲು
ವಿದೇಶ ಯಾತ್ರೆ ಕೈಗೊಳ್ಳಲಿರುವ
ಶ್ರೀ 1008 ಜಗದ್ಗುರು
ಡಾ. ಚಂದ್ರಶೇಖರ ಶಿವಾಚಾರ್ಯ,
ಭಗವತ್ಪಾದರು, ಕಾಶಿ ಮತ್ತು ಬೆಂಗಳೂರಿನ ವಿಭೂತಪೂರ್ಣಮಠದ ಶ್ರೀಗಳಿಗೆ
ಹಾರ್ದಿಕ ಅಭಿನಂದನೆಗಳು.

: ಶುಭ ಕೋರುವವರು :
ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ
ಕಾರ್ಯಾಧ್ಯಕ್ಷರು, ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರು
ಹಾಗೂ ಸರ್ವ ಸದಸ್ಯರು,ಬಾಗಲಕೋಟ.

ದಿನಾಂಕ 2–7–2010ರಂದು ಮಧ್ಯಾಹ್ನ 1.30ಕ್ಕೆ ರಷ್ಯಾದ ರಾಜಧಾನಿಯಾದ ಮಾಸ್ಕೋ ನಗರದ ಅಷ್ಟಾಂಗಯೋಗ ಕೇಂದ್ರಕ್ಕೆ ಶ್ರೀ ಸನ್ನಿಧಿಯವರು ಆಗಮಿಸಿ ಪತಂಜಲಿ ಯೋಗ ಮತ್ತು ಶಿವಯೋಯಗಗಳ ಬಗೆ ಆಶೀರ್ವಚನಗಳನ್ನು ಏರ್ಪಡಿಸಲಾಗಿತ್ತು. ಪ್ರಾರಂಭದಲ್ಲಿ ಡಾ. ಮಹಾಂತಲಿಂಗ ಶಿವಾಚಾರ್ಯರು ವೇದಘೋಷ ವಾತಾವರಣವನ್ನು ಮಂಗಲಗೊಳಿಸಿದರು. ದಿನೇಶನು ಸರ್ವರನ್ನೂ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದನು. ಯುಕ್ರೇನ್ ದೇಶದ ಶ್ರೀ ಸನ್ನಿಧಿಯವರ ಶಿಷ್ಯಳಾದ ಗೌರಿಯು ಶ್ರೀ ಸನ್ನಿಧಿಯವರ ಹಿಂದಿ ಭಾಷೆಯಲ್ಲಿ ಮಾಡಿದ ಆಶೀರ್ವಚನವನ್ನು ರಷ್ಯನ್ ಭಾಷೆಗೆ ಅನುವಾದ ಮಾಡಿ ಎಲ್ಲರಿಗೂ ಆಶೀರ್ವಚನವು ಅರ್ಥವಾಗುವಂತೆ ಅನುವಾದ ಸೇವೆಗೈದರು. ಶ್ರೀ ಸನ್ನಿಧಿಯವರು ಪ್ರಥಮ ದಿನದ ಆಶೀರ್ವಚನದಲ್ಲಿ "ಯೋಗಃ ಚಿತ್ತವೃತ್ತಿ ನಿರೋಧಃ" ಎಂಬ ಪತಂಜಲಿ ಸೂತ್ರದ ಮೇಲೆ ಆಶೀರ್ವಚನವನ್ನು ದಯಪಾಲಿಸುತ್ತಾ ಪ್ರಮಾಣ, ವಿಪರ್ಯಣ, ವಿಕಲ್ಪ, ನಿದ್ರಾ ಮತ್ತು ಸ್ಮೃತಿಗಳೆಂಬ ಐದು ಮನೋಪ್ರವೃತ್ತಿಗಳ ಬಗ್ಗೆ ವಿಶೇಷವಾಗಿ ತಿಳಿಸುತ್ತಾ ಅವುಗಳ ಕ್ಲಿಷ್ಟ ಮತ್ತು ಅಕ್ಲಿಷ್ಟ ಸ್ವರೂಪಗಳನ್ನು ಸಹ ತಿಳುವಳಿಕೆ ಮಾಡಿಕೊಟ್ಟರು. ಚಿತ್ತವೃತ್ತಿಯನ್ನು ನಿರೋಧಿಸುವುದೆಂದರೆ ಎಲ್ಲಾ ಚಿತ್ತವೃತ್ತಿಗಳನ್ನು

ನಿರೋಧಿಸುವುದೆಂದರ್ಥವಲ್ಲ ಕೇವಲ ಕ್ಲೇಶದಾಯಕಗಳಾದ ಕ್ಲಿಷ್ಟ ವೃತ್ತಿಗಳನ್ನು ತಡೆಯುವುದೇ ಯೋಗದ ಪರಮ ಗುರಿ ಎಂಬುದಾಗಿ ತಿಳಿಹೇಳಿದರು. ಜೊತೆಗೆ ಶಿವಯೋಗವೆಂದರೆ ಏನು? ಅದರ ವಿಧಾನ ಮತ್ತು ಶಿವಯೋಗದಿಂದ ವಿಶ್ವದಲ್ಲಿ ಶಾಂತಿಯನ್ನು ಸ್ಥಾಪಿಸುವುದು ಹೇಗೆ ಸಾಧ್ಯ? ಎಂಬ ವಿಚಾರವಾಗಿ ಒಂದು ಘಂಟೆಯ ಕಾಲ ಶ್ರೀ ಸನ್ನಿಧಿಯವರು ಆಶೀರ್ವಚನವನ್ನು ದಯಪಾಲಿಸಿದರು.

ಶಿವಯೋಗದಿಂದ ವಿಶ್ವದಲ್ಲಿ ಶಾಂತಿ ಸ್ಥಾಪನೆ

– ಶ್ರೀ ಕಾಶೀ ಜಗದ್ಗುರುಗಳು

ಮಾಸ್ಕೋ (ರಷ್ಯಾ) 2–7–2010 ಶಿವಯೋಗ ಸಾಧನೆಯಿಂದ ವಿಶ್ವದಲ್ಲಿ ಶಾಂತಿ ಸ್ಥಾಪನೆಯು ಸಾಧ್ಯ. ಆದ್ದರಿಂದ ದೇಶ, ಭಾಷೆ ಮತ್ತು ಜಾತಿಗಳ ಭೇದಭಾವವನ್ನು ಮರೆತು ಸರ್ವರೂ ಶಿವಯೋಗ ಸಾಧನೆಯನ್ನು ಮಾಡಬೇಕು ಎಂಬ ವಿಚಾರವನ್ನು ಶ್ರೀ ಕಾಶೀ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ರಷ್ಯಾ ದೇಶದ ರಾಜಧಾನಿಯಾದ ಮಾಸ್ಕೋ ಮಹಾನಗರದ 'ಮಾಸ್ಕೋ ಅಷ್ಟಾಂಗ ಯೋಗ ಕೇಂದ್ರ'ದಲ್ಲಿ ಏರ್ಪಡಿಸಲಾಗಿದ್ದ ಶಿವಯೋಗ ಚರ್ಚಾಕೂಟದಲ್ಲಿ ಆಶೀರ್ವಚನವನ್ನು ದಯಪಾಲಿಸುತ್ತಾ ಈ ವಿಚಾರವನ್ನು ತಿಳಿಸಿದರು.

ವಿಶ್ವದಲ್ಲಿ ಅನೇಕ ದೇಶಗಳಿದ್ದು, ಪ್ರತಿಯೊಂದು ದೇಶದ ಜನರ ಧರ್ಮ ಹಾಗೂ ಭಾಷೆಗಳು ಭಿನ್ನ ಭಿನ್ನಗಳಾಗಿವೆ. ಆದರೂ ನಾವೆಲ್ಲರೂ ಮಾನವರು ಎಂಬುದನ್ನು ಸರ್ವರೂ ಮೊದಲು ತಿಳಿದುಕೊಳ್ಳಬೇಕು. ಅಂತೆಯೇ ಜಗತ್ತಿನ ಮೊದಲನೇ ಧರ್ಮವೆಂದರೆ ಮಾನವ ಧರ್ಮವೇ. ವಿಶಾಲವಾದ ಆಕಾಶದಂತೆ ಅಖಂಡವಾಗಿದ್ದ ಈ ಮಾನವಧರ್ಮವನ್ನು ಇಂದು ನಾವುಗಳೆಲ್ಲಾ ದೇಶ, ಧರ್ಮ, ಜಾತಿ ಮತ್ತು ಭಾಷೆಗಳೆಂಬ ಗೋಡೆಗಳನ್ನು ಕಟ್ಟಿಕೊಂಡು. ಅದನ್ನು ತುಂಡು ತುಂಡಾಗಿ ಮಾಡಿದ್ದೇವೆ. ಅಂತೆಯೇ ಇಂದು ಮನುಷ್ಯ ಮನುಷ್ಯರಲ್ಲಿ ರಾಗ, ದ್ವೇಷ, ಅಸೂಯೆ, ಮಾತ್ಸರ್ಯಾದಿ ದುರ್ಗುಣಗಳು ಬೆಳೆದು ಒಬ್ಬರನ್ನೊಬ್ಬರು ಹಿಂಸಿಸುವ ಕಾರ್ಯದಲ್ಲಿ ತೊಡಗಿರುವುದರಿಂದ ವಿಶ್ವದಲ್ಲಿ ಅಶಾಂತಿಯು ಬೆಳೆಯುತ್ತಿದೆ. ಈ ಅಶಾಂತಿಗೆ ಮಾನವರೆ ಕಾರಣರು.

ಮಾನವರಲ್ಲಿಯ ಈ ಮಾತ್ಸರ್ಯಾದಿ ಭಾವನೆಗಳು ತೊಲಗಬೇಕಾದರೆ ಸರ್ವರೂ ಯೋಗಮಾರ್ಗವನ್ನು ಅವಲಂಬಿಸಬೇಕು. ಯೋಗದಲ್ಲಿ ಹಠಯೋಗ, ಮಂತ್ರಯೋಗ, ಲಯಯೋಗ, ರಾಜಯೋಗ ಮತ್ತು ಶಿವಯೋಗಗಳೆಂಬ ವಿವಿಧ ಮಾರ್ಗಗಳಿವೆ. ಇವುಗಳಲ್ಲಿ ಶಿವಯೋಗವು ಸರ್ವರಿಗೂ ಸುಲಭವಾದುದು. ಈ ಶಿವಯೋಗ ಸಾಧನೆಯನ್ನು ಕುರಿತು ಶ್ರೀ ಸಿದ್ಧಾಂತ ಶಿಖಾಮಣಿಯ ಪ್ರಾಣಲಿಂಗಿಸ್ಥಲದ 'ಶಿವಯೋಗ ಸಮಾಧಿಸ್ಥಲ'ದಲ್ಲಿ ವಿಶೇಷವಾಗಿ ನಿರೂಪಿಸಲಾಗಿದೆ. ಕಾಯಾ ವಾಚಾ ಮನಸಾ ಶಿವನೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದೇ ಶಿವಯೋಗವು. ಸರ್ವರಿಗೂ ಸದಾ ಕಲ್ಯಾಣವನ್ನುಂಟುಮಾಡುವವನೇ ಶಿವನು. ಅಂತಹ ಶಿವನೊಂದಿಗೆ ಯಾರು ತ್ರಿಕರಣಗಳಿಂದ ಸಂಬಂಧವನ್ನು ಸ್ಥಾಪಿಸಿಕೊಳ್ಳುವರೋ ಅವರೂ ಸಹ ಸದಾ ಲೋಕದ ಕಲ್ಯಾಣವನ್ನೇ ಬಯಸುವವರಾಗುವರು. ಸರ್ವರಲ್ಲಿ ಇಂತಹ ಪರಸ್ಪರ ಕಲ್ಯಾಣಭಾವನೆಗಳು ಬೆಳೆದುಬಂದಾಗ ಸರ್ವರೂ ಶಾಂತಿಯಿಂದ ಜೀವಿಸಲು ಸಾಧ್ಯವಾಗುವುದು.

ಈ ಶಿವಯೋಗದಲ್ಲಿ ಇಷ್ಟಲಿಂಗಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಲಾಗಿದೆ. ದೀಕ್ಷೆಯಿಂದ ಪ್ರಾಪ್ತವಾದ ಇಷ್ಟಲಿಂಗದ ಪೂಜೆ, ದೃಷ್ಟಿಯೋಗ ಹಾಗೂ ಪಂಚಾಕ್ಷರ ಮಂತ್ರಗಳ ಜಪಗಳ ಮೂಲಕ ಸಾಧಕನು ತನ್ನ ಮಸ್ತಕದ ಸಹಸ್ರಾರಕಮಲದಲ್ಲಿಯ ಶಿವತತ್ವವನ್ನು ತನ್ನ ಸ್ವರೂಪವನ್ನಾಗಿ ಭಾವಿಸಿ ಸೋऽಹಂ ಭಾವನೆಯಿಂದ ಕೂಡಿಕೊಂಡಾಗ ಅವನು ಶಿವಯೋಗಿಯಾಗುವನು. ಈ ಸ್ಥಿತಿಯಲ್ಲಿದ್ದಾಗ ಬಹಿರಂಗದ ವಾಸನೆಗಳು ಇಲ್ಲವಾಗಿ, ಸರ್ವವೆಲ್ಲವನ್ನು ಶಿವಮಯವನ್ನಾಗಿ ಕಾಣುವನು. ಹೀಗೆ ಸಾಧಕರು ತಮ್ಮ ಸಾತ್ವಿಕ ಭಾವನೆಗಳಿಂದ ಈ ಸ್ಥಿತಿಯನ್ನು ತಲುಪುವುದರ ಮೂಲಕ ಆತ್ಮಕಲ್ಯಾಣದ ಜೊತೆಗೆ ಲೋಕಕಲ್ಯಾಣವನ್ನೂ ಸಹ ಸಾಧಿಸಬಲ್ಲರು ಎಂಬುದಾಗಿ ಶ್ರೀ ಜಗದ್ಗುರುಗಳವರು ತಮ್ಮ ಆಶೀರ್ವಚನದಲ್ಲಿ ಶಿವಯೋಗವನ್ನು ಕುರಿತು ವಿಶ್ಲೇಷಿಸಿದರು.

ಶ್ರೀ ಸನ್ನಿಧಿಯವರ ಆಶೀರ್ವಚನದ ನಂತರ ಸಭೆಯಲ್ಲಿ ಸಮ್ಮಿಲಿತರಾಗಿದ್ದ ಯೋಗ ಜಿಜ್ಞಾಸುಗಳು ಯೋಗ ಹಾಗೂ ಶಿವಯೋಗಕ್ಕೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಕೇಳಿದರು. ಎರಡು ಗಂಟೆಗಳ ಕಾಲ ನಡೆದ ಈ ಪ್ರಶ್ನೋತ್ತರದಲ್ಲಿ ಶ್ರೀ ಸನ್ನಿಧಿಯವರು ಸಮಾಧಾನಕರ ಉತ್ತರಗಳನ್ನು ದಯಪಾಲಿಸಿದರು, ಶ್ರೀ ಸನ್ನಿಧಿಯವರು ಮಾಡಿದ ಹಿಂದಿ ಭಾಷೆಯ ಆಶೀರ್ವಚನ ಮತ್ತು ಪ್ರಶ್ನೋತ್ತರಗಳನ್ನು ಯುಲಿಯಾ (ಗೌರಿ) ಎಂಬ ಹೆಸರಿನ ಯುಕ್ರೇನ್ ದೇಶದ ಶ್ರೀ ಸನ್ನಿಧಿಯ ಶಿಷ್ಯಳು ರಷ್ಯನ್ ಭಾಷೆಗೆ ಅನುವಾದ ಮಾಡಿದ್ದರಿಂದ ಯಾವ ತೊಂದರೆಯೂ ಇಲ್ಲದೆ ಸರ್ವರೂ ಎಲ್ಲ ವಿಷಯವನ್ನು ಸರಿಯಾಗಿ ತಿಳಿದುಕೊಂಡರಲ್ಲದೆ ಅನೇಕರು ಇಷ್ಟಲಿಂಗ ದೀಕ್ಷೆಯನ್ನು ಪಡೆಯಲು ಮುಂದಾದರು.

ಸಭೆಯ ಪ್ರಾರಂಭದಲ್ಲಿ ಬೆಂಗಳೂರು ವಿಭೂತಿಪುರಮಠದ ಶ್ರೀ ಷ.ಬ್ರ. ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳವರು 'ಶಂಭೋ ಮಹಾದೇವ' ಎಂಬ ಶಿವಸ್ತೋತ್ರವನ್ನು ಮಾಡಿ ಸರ್ವರನ್ನು ಮಂತ್ರಮುಗ್ಧಗೊಳಿಸಿದರು. ಈ ಸಭೆಯಲ್ಲಿ ಐವತ್ತಕ್ಕೂ ಹೆಚ್ಚು ಮಾಸ್ಕೋದ ಯೋಗಜಿಜ್ಞಾಸುಗಳು ಭಾಗವಹಿಸಿದ್ದರು. ಶ್ರೀ ಸನ್ನಿಧಿಯವರ ರಷ್ಯಾ ದೇಶದ ಪ್ರಥಮ ಶಿಷ್ಯನಾದ ಡ್ಯಾನಿಶ್ (ದಿನೇಶ) ಅವರ ಪತ್ನಿ ಅಲೆಕ್ಸಾಂಡ್ರಾ

(ಉಷಾ), ಅವರ ತಾಯಿ ನತಾಲಿಯ (ಅನ್ನಪೂರ್ಣಾ), ಮಿಹಈಲ್ (ವಿಶ್ವಾರಾಧ್ಯ) ದಮಿತ್ರಿಯ್ (ವಿಶ್ವೇಶ್ವರ) ಮತ್ತು ಯುಕ್ರೇನದ ಪ್ರಥಮ ಶಿಷ್ಯಳಾದ ಯುಲಿಯಾ (ಗೌರೀ) ಇವರೆಲ್ಲರೂ ಈ ಕಾರ್ಯಕ್ರಮದ ಆಯೋಜನೆಯನ್ನು ಮಾಡಿದ್ದರು.

ಶ್ರೀ ಸನ್ನಿಧಿಯವರ ರಷ್ಯಾ ದೇಶದ ಪ್ರಥಮ ಧರ್ಮ ಪ್ರಚಾರದ ಕಾರ್ಯಕ್ರಮದಿಂದ ಈ ದೇಶದ ಯೋಗ ಪ್ರೇಮಿಗಳಲ್ಲಿ ವೀರಶೈವ ಧರ್ಮದ ಶಿವಯೋಗದ ಬಗ್ಗೆ ಉತ್ಕಟವಾದ ಬಯಕೆಯು ಕಂಡುಬಂದಿದೆ. ಆದ್ದರಿಂದ ಶ್ರೀ ಸನ್ನಿಧಿಯವರು ಮಾಸ್ಕೋ ನಗರದಲ್ಲಿ 'ಶ್ರೀ ಜಗದ್ಗುರು ಪಂಚಾಚಾರ್ಯ ಶಿವಯೋಗ ಕೇಂದ್ರ'ವನ್ನು ಸಂಸ್ಥಾಪಿಸುವ ಸಂಕಲ್ಪವನ್ನು ಮಾಡಿದ್ದು ಶ್ರೀ ದಿನೇಶನು ಅದರ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಲು ಸನ್ನದ್ಧನಾಗಿರುವುದು ಒಂದು ಹೆಮ್ಮೆಯ ವಿಷಯವಾಗಿದೆ.

3–7–2010 : ಮರು ದಿವಸ ಅದೇ ಯೋಗ ಕೇಂದ್ರದಲ್ಲಿ ಸಾಯಂಕಾಲ 6 ಘಂಟೆಯಿಂದ 7 ಘಂಟೆಯವರೆಗೆ ಇಷ್ಟಲಿಂಗ ಧಾರಣೆ ಮತ್ತು ಅದರ ಪೂಜೆಯ ಒಂದು ಶ್ರೇಷ್ಠವಾದ ವೀರವ್ರತವು ಎಂಬ ವಿಷಯದ ಮೇಲೆ ಆಶೀರ್ವಚನವನ್ನು ದಯಪಾಲಿಸಿದರು. ಎರಡು ಘಂಟೆಗಳ ಕಾಲ ಪ್ರಶ್ನೋತ್ತರ ಕಲಾಪ ನೆರವೇರಿತು.

ಮಾಸ್ಕೋ (ರಷ್ಯಾ) 3–7–2010 : ವೀರಶೈವ ಧರ್ಮದಲ್ಲಿ ಹೇಳಲಾಗಿರುವ ಇಷ್ಟಲಿಂಗ ಪೂಜೆಯು ಒಂದು ಶ್ರೇಷ್ಠವಾದ ವೀರವ್ರತವಾಗಿದೆ ಎಂಬ ವಿಚಾರವನ್ನು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ರಷ್ಯಾ ದೇಶದ ರಾಜಧಾನಿಯಾದ ಮಾಸ್ಕೋ ಮಹಾನಗರದ ಅಷ್ಟಾಂಗ ಯೋಗಕೇಂದ್ರದಲ್ಲಿ ಏರ್ಪಡಿಸಲಾಗಿದ್ದ ಸಾಮೂಹಿಕ ಲಿಂಗಪೂಜಾ ಸಮಾರಂಭದಲ್ಲಿ ಸಮ್ಮಿಲಿತರಾಗಿದ್ದ ರಷ್ಯಾ ದೇಶದ ಶಿವಯೋಗ ಪ್ರೇಮಿಗಳನ್ನು ಉದ್ದೇಶಿಸಿ ಈ ವಿಚಾರವನ್ನು ತಿಳಿಸಿದರು.

ಜಗತ್ತಿನ ಎಲ್ಲ ವ್ರತ್ತಗಳು ನೈಮಿತ್ತಿಕಗಳಾಗಿರುವುದರಿಂದ ಅವುಗಳನ್ನು ಒಮ್ಮೆ ಪ್ರಾರಂಭಿಸಿ ನಂತರ ಸಮಾಪ್ತಿಗೊಳಿಸಲಾಗುವುದು. ಆದರೆ ಇಷ್ಟಲಿಂಗಪೂಜಾರೂಪವಾದ ಈ ವೃತವು ಗುರುವಿನಿಂದ ಲಿಂಗದೀಕ್ಷೆಯನ್ನು ಪಡೆದ ನಂತರ ಪ್ರಾರಂಭವಾಗಿ ಜೀವನ ಪರಿಯಂತರ ಅಖಂಡವಾಗಿ ನಡೆಯುವುದರಿಂದ ಇದಕ್ಕೆ ಮಹಾವ್ರತ, ಶಿರೋವ್ರತ, ಮಹಾಪಾಶುಪತ ವ್ರತ ಮತ್ತು ವೀರವ್ರತ ಎಂಬುದಾಗಿ ಕರೆಯುತ್ತಾರೆ. ಇಂತಹ ವೀರವ್ರತವನ್ನು ಪರಿಪಾಲಿಸುವವನೇ ವೀರಶೈವನು. ಈ ಇಷ್ಟಲಿಂಗ ಪೂಜಾರೂಪವಾದ ವೀರವ್ರತವನ್ನು ಶ್ರೀ ಜಗದ್ಗುರು ಪಂಚಾರ್ಚಾರು ಸಮಸ್ತ ಮನುಕುಲದ ಕಲ್ಯಾಣಕ್ಕಾಗಿ ಬೋಧಿಸಿದ್ದಾರೆ. ಆದ್ದರಿಂದ ಆಹಾರ ವಿಹಾರದ ಪರಿಶುದ್ಧಿಯನ್ನು ಪರಿಪಾಲಿಸಿವ ಸರ್ವಧರ್ಮೀಯರು ಈ ವ್ರತವನ್ನು ಸ್ವೀಕರಿಸಬಹುದು.

ಒಬ್ಬನೇ ವ್ಯಕ್ತಿಯಿಂದ ಪ್ರತಿನಿತ್ಯ ತಪ್ಪದೇ ಪೂಜಿಸಲ್ಪಡುವ ಲಿಂಗವೇ ಇಷ್ಟಲಿಂಗವು. ಹೀಗಾಗಿ ಇದನ್ನು ಸರ್ವರಿಗೂ ಸ್ವತಂತ್ರವಾಗಿ ಕೊಡಲಾಗುತ್ತದೆ. ಯಾವುದೇ ಮಧ್ಯಸ್ತ ವ್ಯಕ್ತಿಯ ಸಹಾಯವಿಲ್ಲದೇ ನಾವೇ ಸ್ವತಂತ್ರವಾಗಿ ಈ ಲಿಂಗಪೂಜೆಯನ್ನು ಮನಸ್ಸಿಗೆ ತೃಪ್ತಿಯಾಗುವವರೆಗೆ ಮಾಡಬಹುದು. ಇದು ಸಾಧಕನ ದೇಹದ ಮೇಲೆ ಸದಾ ಇರುವುದರಿಂದ ದೇಶ ವಿದೇಶಗಳಲ್ಲಿ ಎಲ್ಲಿಯೇ ಹೋದರೂ ಲಿಂಗಪೂಜಾರೂಪವಾದ ನಿತ್ಯಕರ್ಮವು ಎಂದೂ ತಪ್ಪುವುದಿಲ್ಲ.

ಅಖಂಡ ಚೈತನ್ಯರೂಪವಾದ ಮಹಾಲಿಂಗವೇ ಇಷ್ಟಲಿಂಗರೂಪದಲ್ಲಿ ಪ್ರಾಪ್ತವಾಗಿರುವುದರಿಂದ ದೃಷ್ಟಿಯೋಗವನ್ನು ಸಾಧಿಸುವಾಗ ತನ್ನ ಬಗ್ಗೆ ಧನ್ಯತಾ ಮನೋಭಾವವನ್ನು ತಾಳಿಕೊಳ್ಳಬೇಕು. ಅದರಿಂದ ಮಹಾತೃಪ್ತಿಯನ್ನು ಅನುಭವಿಸಲು ಸಾಧ್ಯವಾಗುವುದು ಎಂಬುದಾಗಿ ಶ್ರೀ ಸನ್ನಿಧಿಯವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಇಷ್ಟಲಿಂಗಪೂಜಾರೂಪವಾದ ಕರ್ಮಯಜ್ಞ, ಪ್ರಣವ, ಪ್ರಣವಸಹಿತ ಪಂಚಾಕ್ಷರೀಮಂತ್ರ ಮತ್ತು ಶ್ರೀರುದ್ರರೂಪವಾದ ಜಪಯಜ್ಞ, ಸೋsಹಂರೂಪವಾದ ಜ್ಞಾನಯಜ್ಞ ಮತ್ತು ಶಿವಾಗಮಗಳ ಅಧ್ಯಯನರೂಪವಾದ ಜ್ಞಾನಯಜ್ಞದ ಬಗ್ಗೆಯೂ ಶ್ರೀ ಸನ್ನಿಧಿಯವರು ಸರ್ವರಿಗೂ ತಿಳಿಸಿಕೊಟ್ಟರು.

ಈ ಲಿಂಗಪೂಜಾ ಪ್ರಾತ್ಯಕ್ಷಿಕೆಯಲ್ಲಿ ಎಪ್ಪತ್ತಕ್ಕೂ ಹೆಚ್ಚು ರಷ್ಯಾದೇಶದ ಯೋಗ ಶಿಕ್ಷಕರು ಶ್ರದ್ಧೆಯಿಂದ ಪಾಲ್ಗೊಂಡಿದ್ದರು. ಈ ಪೂಜೆಯಲ್ಲಿ ಬೆಂಗಳೂರು ವಿಭೂತಿಪುರಮಠದ ಶ್ರೀ ಷ.ಬ್ರ. ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು, ರಷ್ಯಾ ದೇಶದ ದಿನೇಶ್, ಉಷಾ, ಅನ್ನಪೂರ್ಣಾ, ವಿಶ್ವಾರಾಧ್ಯ ಮತ್ತು ಯುಕ್ರೇನ್ ದೇಶದ ಗೌರಿ ಇವರುಗಳು ಶ್ರೀರುದ್ರ ಪಠಣ, ಶಿವಸ್ತೋತ್ರ ಮತ್ತು ಮಹಾಮಂಗಳಾರತಿಯನ್ನು ತಮ್ಮ ಮಧುರಕಂಠದಿಂದ ಹೇಳಿ ಸರ್ವರನ್ನು ಸಂತೋಷಗೊಳಿಸಿದರು.

ಇಷ್ಟಲಿಂಗ ಪೂಜೆಯು ಒಂದು ವೀರವ್ರತವು

– ಶ್ರೀ ಕಾಶೀ ಜಗದ್ಗುರುಗಳು

ಇಷ್ಟಲಿಂಗ ಪೂಜೆ ಶ್ರೇಷ್ಠ ವ್ರತ



ರಷ್ಯಾ ರಾಜಧಾನಿ ಮಾಸ್ಕೋ ನಗರದ ಅಷ್ಟಾಂಗ ಯೋಗ ಕೇಂದ್ರದಲ್ಲಿ ಏರ್ಪಡಿಸಿದ್ದ ಸಾಮೂಹಿಕ ಲಿಂಗಪೂಜೆ ಸಮಾರಂಭದಲ್ಲಿ ಕಾಶಿ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯರು ಶಿವಯೋಗ ಪ್ರೇಮಿಗಳಿಗೆ ಲಿಂಗದೀಕ್ಷೆ ನೀಡಿದರು.

ದಿನಾಂಕ 4–7–2010ರಂದು ಮಧ್ಯಾಹ್ನ 1.30 ಘಂಟೆಗೆ ಅದೇ ಯೋಗ ಕೇಂದ್ರದಲ್ಲಿ ಶ್ರೀ ಕಾಶಿ ಜಗದ್ಗುರುಗಳವರು ಬಹಿರಂಗ ಇಷ್ಟಲಿಂಗ ಪೂಜೆಯನ್ನು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ 170ಕ್ಕೂ ಹೆಚ್ಚು ಯೋಗ ಶಿಕ್ಷಕರು ಸಕ್ರಿಯವಾಗಿ ಸಹಭಾಗಿಯಾಗಿದ್ದರು. ಲಿಂಗಪೂಜೆ ಮುಗಿದ ನಂತರ ಶ್ರೀ ಸನ್ನಿಧಿಯವರು "ಪ್ರಾಕೃತರನ್ನು ಪರಿಶುದ್ಧಗೊಳಿಸುವ ಸಂಸ್ಕಾರವೇ ದೀಕ್ಷೆ" ಎಂಬ ವಿಷಯದ ಮೇಲೆ ಆಶೀರ್ವಚನವನ್ನು ದಯಪಾಲಿಸಿದರು.

ಮಾಸ್ಕೋ ಮಹಾನಗರದಲ್ಲಿ ಲಿಂಗದೀಕ್ಷೆ ಮತ್ತು ಶಿವಯೋಗ ಕೇಂದ್ರ ಸ್ಥಾಪನೆ

– ಶ್ರೀ ಕಾಶಿ ಸದ್ಗುರುಗಳು

ಮಾಸ್ಕೋ ಮಹಾನಗರದ 'ಅಷ್ಟಾಂಗ ಯೋಗ ಕೇಂದ್ರದಲ್ಲಿ ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮದಲ್ಲಿ ಆಶೀರ್ವಚನವನ್ನು ದಯಪಾಲಿಸಿದರು. ಈ ವಿಚಾರವನ್ನು ತಿಳಿಸಿದರು. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಮಾನವರನ್ನು ವಿಶುದ್ಧರೆಂತಲೂ ಮತ್ತು ಪ್ರಾಕೃತರೆಂತಲೂ ಎರಡು ವಿಧವಾಗಿ ಪರಿಗಣಿಸಲಾಗಿದೆ. ಧರ್ಮಶಾಸ್ತ್ರದಲ್ಲಿ ಹೇಳಿದ ಗರ್ಭಾದಾನ, ಪುಂಸವನ, ಜಾತಕರ್ಮ, ದೀಕ್ಷೆ ಮುಂತಾದ ಹದಿನಾರು ಪ್ರಕಾರದ ಸಂಸ್ಕಾರಗಳನ್ನು ಪಡೆದವರು ವಿಶುದ್ಧರೆಂತಲೂ ಮತ್ತು ಸಂಸ್ಕಾರಹೀನರು ಪ್ರಾಕೃತರೆಂತಲೂ ಕರೆಯಲ್ಪಡುತ್ತಾರೆ. ಈ ಹದಿನಾರು ಸಂಸ್ಕಾರಗಳಲ್ಲಿ ದೀಕ್ಷಾ ಸಂಸ್ಕಾರವನ್ನು ಪ್ರತಿಯೊಬ್ಬ ಸಾಧಕರು ಅವಶ್ಯವಾಗಿ ಪಡೆದುಕೊಳ್ಳಲೇಬೇಕು. ವೀರಶೈವ ಧರ್ಮದಲ್ಲಿ ಆಣವ, ಮಾಯಾ ಮತ್ತು ಕಾರ್ಮಿಕಗಳೆಂಬ ಮಲಗಳನ್ನು ದೂರಮಾಡಲು ವೇಧಾ, ಮಂತ್ರ ಮತ್ತು ಕ್ರಿಯಾದೀಕ್ಷೆಗಳನ್ನು ಬೋಧಿಸಲಾಗಿದೆ. ದೀಕ್ಷೆಗಾಗಿ ಎಂಟನೇ ವರ್ಷವೇ ಪ್ರಶಸ್ತವಾಗಿದ್ದರೂ ಶಿವನಲ್ಲಿ ಭಕ್ತಿಯುಳ್ಳ ಮತ್ತು ದೀಕ್ಷೆಯನ್ನು ಪಡೆದುಕೊಳ್ಳುವ ಉತ್ಕಟದ ಬಯಕೆಯುಳ್ಳ ವ್ಯಕ್ತಿಯು ಎಷ್ಟೇ ವರ್ಷದವನಾಗಿದ್ದರೂ ದೀಕ್ಷೆಯನ್ನು ಪಡೆದುಕೊಳ್ಳಬಹುದು.

ಆಣವಮಲವನ್ನು ನಿವೃತ್ತಿಗೊಳಿಸುವ ಮತ್ತು ಸಾಧಕನಲ್ಲಿ ಶಿವಭಾವನೆಯನ್ನು ಜಾಗೃತಗೊಳಿಸುವ ಸಂಸ್ಕಾರವೇ ವೇಧಾ ದೀಕ್ಷೆಯು. ಮಾಯಾಮಲ ನಿವಾರಕವಾದ ಮಂತ್ರೋಪದೇಶ ಮತ್ತು ಮಂತ್ರಜಪದ ವಿಧಿವಿಧಾನಗಳನ್ನು ತಿಳಿಸುವ ಸಂಸ್ಕಾರವೇ ಮಂತ್ರದೀಕ್ಷಾ. ಇನ್ನು ಶುಭಾಶುಭವಾಸನಾರೂಪವಾದ ಪೂಜಾವಿಧಾನವನ್ನು ತಿಳಿಸಿಕೊಡುವ ಸಂಸ್ಕಾರವೇ ಕ್ರಿಯಾದೀಕ್ಷೆಯು. ಹೀಗೆ ತ್ರಿವಿಧ ದೀಕ್ಷೆಗಳನ್ನು ಶ್ರೀಗುರುವಿನಿಂದ ಪಡೆದುಕೊಂಡವನೇ ಶಿವಯೋಗವನ್ನು ಸಾಧಿಸಬಲ್ಲನು ಎಂಬುದಾಗಿ ಶ್ರೀ ಸನ್ನಿಧಿಯವರು ತಮ್ಮ ಆಶೀರ್ವಚನದಲ್ಲಿ ದೀಕ್ಷಾವಿಧಿಯನ್ನು ಕುರಿತು ವಿವರಿಸಿದರು.

ಬೆಂಗಳೂರು ವಿಭೂತಿಪುರಮಠದ ಶ್ರೀ ಷ.ಬ್ರ. ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳವರು ಸಭೆಯ ಪ್ರಾರಂಭದಲ್ಲಿ ಪ್ರಾಸ್ತಾವಿಕವಾಗಿ ಇಂಗ್ಲಿಷ್‌ನಲ್ಲಿ ಧರ್ಮ ಸಂದೇಶವನ್ನು ಕೊಟ್ಟರು.

ಈ ಸಂದರ್ಭದಲ್ಲಿ ದೀಕ್ಷೆಯ ಮಹತ್ವವನ್ನು ಅರಿತು ರಷ್ಯಾ ದೇಶದ 35 ಜನ ಯೋಗ ಶಿಕ್ಷಕರು ವಿಧಿವತ್ತಾಗಿ ದೀಕ್ಷಾ ಸಂಸ್ಕಾರವನ್ನು ಪಡೆದುಕೊಂಡರು. ಒಂದು ವಿಶೇಷವೇನೆಂದರೆ ದೀಕ್ಷಾಸಂಸ್ಕಾರವನ್ನು ಪಡೆದುಕೊಂಡವರೆಲ್ಲರೂ ಶುದ್ಧ ಶಾಖಾಹಾರಿ ಬದುಕನ್ನು ಸಾಗಿಸುವುದಾಗಿ ಸಂಕಲ್ಪ ಮಾಡಿದರು. ಇವರಲ್ಲಿ ಕೆಲವರು ಭಾರತೀಯ ಪವಿತ್ರನಾಮಗಳನ್ನು ಅಪೇಕ್ಷಿಸಿದಾಗ ಶ್ರೀ ಸನ್ನಿಧಿಯವರು ವಿಕ್ಟೋರಿಯಾ ಕ್ರಿಓನೋಸೋವಾ ಇವಳಿಗೆ ವಿಶಾಲಾಕ್ಷಿ, ಸಿರಗೇಯ ಗೋಓರುಹಿನ್ ಈತನಿಗೆ ಶಂಭು, ಕೋಸ್ತಾ ಕಿರೋಸ್ಕಿನ್ ಈತನಿಗೆ ಮಹೇಶ್ವರ, ಸ್ಲವಾ ಜಿಹುನೋವ್ ಈತನಿಗೆ ವೀರೇಶ್ (ವೀರಭದ್ರ), ಅಂತೋನ್ ಈತನಿಗೆ ಪಂಚಾಕ್ಷರೀ, ಓಲ್ಗಾ ಮಲೇಏವಾ ಇವಳಿಗೆ ಮಂಗಲಾ, ದಮಿತ್ರೀಯ್ ಕಾಲ್ಲಾಸ್ ಈತನಿಗೆ ರಾಜೇಶ್ವರ ಮುಂತಾದ ಪವಿತ್ರ ಹೆಸರುಗಳನ್ನು ದಯಪಾಲಿಸಿದರು.

ಹೀಗೆ ಮಾಸ್ಕೋ ಮಹಾನಗರದಲ್ಲಿ ಸದ್ಯದ 35 ಜನರಿಗೆ ಈ ಪೂರ್ವದಲ್ಲಿ ದೀಕ್ಷೆಯನ್ನು ಪಡೆದುಕೊಂಡಿದ್ದ 15 ಜನವರಿ ಒಟ್ಟು 50 ಜನರಿಗೆ ನಿರಂತರವಾಗಿ ಶಿವಯೋಗ ಸಾಧನೆಯ ಮಾರ್ಗದರ್ಶನವು ದೊರೆಯಬೇಕೆಂಬ ಉದ್ದೇಶದಿಂದ ಶ್ರೀ ಸನ್ನಿಧಿಯವರು ತಮ್ಮ ಮೊದಲ ಶಿಷ್ಯನಾದ ದಿನೇಶ ಇವರ ಸ್ವಗೃಹದಲ್ಲಿ 'ಶ್ರೀ ಜಗದ್ಗುರು ಪಂಚಾಚಾರ್ಯ ಶಿವಯೋಗ ಕೇಂದ್ರ'ವನ್ನು ಸ್ಥಾಪಿಸಿ ತಮಗೆ ದೊರೆತ ಎಲ್ಲಾ ಗುರುಕಾಣಿಕೆಯನ್ನು ದಿನೇಶನಿಗೆ ಆಶೀರ್ವದಿಸಿ ಅವನನ್ನೇ ಅದರ ಮುಖ್ಯಸ್ಥನನ್ನಾಗಿ ಘೋಷಿಸಿದರು. ಇದರಿಂದ ರಷ್ಯಾ ದೇಶದ ಶಿವಯೋಗ ಸಾಧಕರು ಕರತಾಡನದ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು.

ಶ್ರೀ ಸನ್ನಿಧಿಯವರ ಆಶೀರ್ವಚನವನ್ನು ರಷ್ಯಾ ಭಾಷೆಗೆ ಅನುವಾದ ಮಾಡಿದ್ದ ಯುಕ್ರೇನ್ ದೇಶದ ಗೌರೀ ಇವರಿಗೆ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ರಷ್ಯನ್ ಭಾಷೆಗೆ ಅನುವಾದಿಸುವ ಜವಾಬ್ದಾರಿಯನ್ನು ಕೊಟ್ಟಿದ್ದು ಮುಂದಿನ ಪ್ರಚಾರ ಸಂದರ್ಭದಲ್ಲಿ ಗ್ರಂಥವನ್ನು ಬಿಡುಗಡೆ ಮಾಡಿ ಎಲ್ಲರಿಗೂ ಸ್ವಾಧ್ಯಾಯಕ್ಕೆ ಕೊಡಲಾಗುವದು ಎಂದು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಇದೂ ಅಲ್ಲದೆ ಲಿಂಗದೀಕ್ಷೆಯನ್ನು ತೆಗೆದುಕೊಳ್ಳಬೇಕಾದರೆ ಮದ್ಯ ಮಾಂಸಗಳನ್ನು ಸೇವಿಸಕೂಡದು. ಶುದ್ಧ ಸಾತ್ತ್ವಿಕ ಆಹಾರಿಗಳಾಗಿ ಜೀವನವನ್ನು ಸಾಗಿಸಬೇಕು ಎಂಬುದಾಗಿ ಆಶೀರ್ವಚನವನ್ನು ದಯಪಾಲಿಸಿದರು. ಈ ಸಮಯದಲ್ಲಿ ರಷ್ಯಾದೇಶದ 16 ಜನ ಯೋಗ ಶಿಕ್ಷಕರು ಇಷ್ಟಲಿಂಗ ದೀಕ್ಷೆಯನ್ನು ಮತ್ತು 19 ಜನ ಶಿಕ್ಷಕ–ಶಿಕ್ಷಕಿಯರು ಮಂತ್ರದೀಕ್ಷೆಯನ್ನು ತೆಗೆದುಕೊಂಡರು. ಈ ಸಂದರ್ಭದಲ್ಲಿ ಎಲ್ಲಾ ಯೋಗ ಶಿಕ್ಷಕರು ಶ್ರೀ ಸನ್ನಿಧಿಯವರಿಗೆ ಒಂದು ಲಕ್ಷ ರೂಪಾಯಿಗಳನ್ನು ಗುರುಕಾಣಿಕೆಯನ್ನು ಸಲ್ಲಿಸಿದರು. ಶ್ರೀ ಸನ್ನಿಧಿಯವರು ಆ ಒಂದು ಲಕ್ಷ ರೂಪಾಯಿಗಳನ್ನು ಶ್ರೀ ದಿನೇಶನಿಗೆ ಆಶೀರ್ವದಿಸಿದರು. ಅವರ ಮನೆಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಶಿವಯೋಗ ಕೇಂದ್ರವನ್ನು ಸ್ಥಾಪಿಸಿ ಅದರ ಮುಖಾಂತರ ಸರ್ವರಿಗೂ ಶಿವಯೋಗ ಮಾರ್ಗ ದರ್ಶನವು ನಿರಂತರವಾಗಿ ನಡೆಯುವ ಒಂದು ವ್ಯವಸ್ಥೆಯನ್ನು ಮಾಡಿದರು. ದಿನಾಂಕ **5–7–2010** ರಂದು ಮಾಸ್ಕೋನಗರದ ಎಲ್ಲ ಪ್ರೇಕ್ಷಣೀಯ ಸ್ಥಳಗಳನ್ನು ಶ್ರೀ ಸನ್ನಿಧಿಯವರು ನೋಡಿ ಸಂತೋಷಪಟ್ಟರು. ಸನ್ನಿಧಿಯವರ ಜೊತೆಗಿದ್ದ ಬೆಂಗಳೂರಿನ ವಿಭೂತಿಪುರ ಮಠದ ಶ್ರೀ ಷ.ಬ್ರ. ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ವೀಡಿಯೋ ರೆಕಾರ್ಡಿಂಗ್ ಚಿತ್ರೀಕರಣ ಎಲ್ಲ ದಾಖಲಾತಿಗಳನ್ನು ಸಂಗ್ರಹಿಸಿದರು. ಅಂದೇ ರಾತ್ರಿ ಒಂದು ಘಂಟೆಗೆ ರೈಲ್ವೆ ಪ್ರವಾಸವನ್ನು ಪ್ರಾರಂಭಿಸಿ 6ನೇ ತಾರಿಖಿನಂದು ಪ್ರಾತಃಕಾಲ 7 ಘಂಟೆಗೆ ರಷ್ಯಾ ದೇಶದ ಪ್ರಾಚೀನ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗ್ ಮಹಾನಗರವನ್ನು ತಲುಪಿದರು. ಶ್ರೀ ಸನ್ನಿಧಿಯವರ ಜೊತೆ ಮಹಾಂತಲಿಂಗ ಶಿವಾಚಾರ್ಯರು ದಿನೇಶ್ ಮತ್ತು ಗೌರಿಯವರು ಸಹ ಪ್ರವಾಸವನ್ನು ಮಾಡಿದರು.

ದಿನಾಂಕ 6ರಂದು ಸೇಂಟ್ ಪೀಟರ್ಸ್‌ಬರ್ಗ್ ಮಹಾನಗರದ ಅಷ್ಟಾಂಗಯೋಗ ಕೇಂದ್ರದಲ್ಲಿ ಸಾಯಂಕಾಲ 6 ಘಂಟೆಗೆ "ಮನದ ಸಮಚಿತ್ತಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಳ್ಳುವುದೇ ಶಿವಯೋಗದ ಗುರಿ" ಎಂಬ ವಿಷಯದ ಮೇಲೆ ಆಶೀರ್ವಚನವನ್ನು ದಯಪಾಲಿಸಿದರು. ಇಲ್ಲಿಯೂ ಕೂಡ 50ಕ್ಕೂ ಹೆಚ್ಚು ಜನ ಯೋಗ ಶಿಕ್ಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇವರೆಲ್ಲರೂ ವಿಷಯಕ್ಕೆ ಸಂಬಂಧಿಸಿದಂತೆ ವಿವಿಧ ಜಿಜ್ಞಾಸೆಯನ್ನು ಮಾಡಿದರು. ಶ್ರೀ ಸನ್ನಿಧಿಯವರು ಎಲ್ಲರಿಗೂ ಸಮಾಧಾನವಾಗುವ ಹಾಗೆ ಪ್ರಶ್ನೋತ್ತರ ರೂಪವಾದ ಆಶೀರ್ವಚನವನ್ನು ದಯಪಾಲಿಸಿದರು.

ಸಮತ್ವ ಸ್ಥಿತಿಯನ್ನು ಪಡೆದುಕೊಳ್ಳುವುದೇ ಶಿವಯೋಗದ ಗುರಿ

– ಶ್ರೀ ಕಾಶೀ ಜಗದ್ಗುರುಗಳು

ಸೇಂಟ್ ಪೀಟರ್ಸ್‌ಬರ್ಗ್ (ರಷ್ಯಾ) **7–7–2010 :** ಮನೋಬುದ್ಧಿಗಳನ್ನು ಸಮಸ್ಥಿತಿಯಲ್ಲಿ ಇಟ್ಟುಕೊಳ್ಳುವುದೇ ಶಿವಯೋಗದ ಪರಮ ಗುರಿಯು ಎಂಬ ವಿಚಾರವನ್ನು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ರಷ್ಯಾ ದೇಶದ ಪೂರ್ವ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗ್ ಮಹಾನಗರದ ಅಷ್ಟಾಂಗಯೋಗ ಕೇಂದ್ರದಲ್ಲಿ ಏರ್ಪಡಿಸಲಾಗಿದ್ದ ಸಭೆಯಲ್ಲಿ ಶಿವಯೋಗವನ್ನು ಕುರಿತು ಆಶೀರ್ವಚನವನ್ನು ದಯಪಾಲಿಸುತ್ತಾ ಈ ವಿಚಾರವನ್ನು ತಿಳಿಸಿದರು. ಸೃಷ್ಟಿಯು ವಿಷಮವಾಗಿರುತ್ತದೆ. ಅಂತೆಯೇ ಇಲ್ಲಿಯ ಜೀವಿಗಳು ರಾಗದ್ವೇಷಾದಿಗಳಿಂದ ಕೂಡಿಕೊಂಡಿರುತ್ತಾರೆ. ಅಂತೆಯೇ ಅವರು ಮನೋಬುದ್ಧಿಗಳ ಸಮತೆಯನ್ನು ಕಳೆದುಕೊಂಡಿರುತ್ತಾರೆ. ಸೃಷ್ಟಿಯ ವಿಷಮತೆಯನ್ನು ಯಾರಿಂದಲೂ ಸಮಮಾಡಲಾಗುವುದಿಲ್ಲ. ಶಿವನು ಮಾತ್ರ ಸರ್ವಜೀವಿಗಳ ಹೃದಯದಲ್ಲಿ ಆತ್ಮರೂಪದಿಂದ ಸಮಾನವಾಗಿ ವಿರಾಜಮಾನನಾಗಿದ್ದಾನೆ. ಇದು ಮಾತ್ರ ಸತ್ಯವಾದುದು. ಕಾರಣ ಸಾಧಕರು ಸರ್ವರಲ್ಲಿ ಸಮಾನವಾಗಿರುವ ಶಿವತತ್ತ್ವವನ್ನು ಶಿವಯೋಗದಿಂದ ಅರಿತು ಅನುಭವಿಸಬೇಕು. ಆಗ ಮನಸ್ಸಿನಲ್ಲಿಯ ರಾಗದ್ವೇಷಾದಿಗಳು ದೂರಾಗಿ ಸಾಧಕನ ಮನಸ್ಸು ಸಮಸ್ಥಿತಿಯನ್ನು ಪಡೆದುಕೊಳ್ಳುತ್ತದೆ.

ಶಿವಯೋಗಸಾಧನೆಯ ಬಲದಿಂದ ಸಾಧಕನು ಸುಖ–ದುಃಖ, ಲಾಭ–ಹಾನಿ, ಜನನ–ಮರಣ ಮುಂತಾದ ಸಾಂಸಾರಿಕ ದ್ವಂದ್ವಗಳಲ್ಲಿ ತನ್ನ ಮನೋಬುದ್ಧಿಗಳನ್ನು ಸಮಸ್ಥಿಯಲ್ಲಿ ಇಟ್ಟುಕೊಳ್ಳುತ್ತಾನೆ. ಈ ಸಮಸ್ಥಿತಿಯೇ ತೃತೀಯ ನೇತ್ರವೆಂದು ಕರೆಯಲ್ಪಡುವುದು. ಶಿವನು ಸರ್ವಜೀವಿಗಳನ್ನು ಸಮಾನವಾಗಿ ನೋಡುತ್ತಾನೆ. ಕಾರಣ ಕಾಯಾ–ವಾಚಾ–ಮನಸಾ ಈ ತ್ರಿಕರಣಗಳಿಂದ ಶಿವನನ್ನೇ ಆರಾಧಿಸಿ ನೀವೆಲ್ಲಾ ಮನಸ್ಸಿನ ವಿಷಮತೆಯನ್ನು ಕಳೆದುಕೊಂಡು ಶಿವಸ್ವರೂಪಿಗಳಾಗಿರಿ ಎಂಬುದಾಗಿ ಸೇಂಟ್ ಪೀಟರ್ಸ್ ಬರ್ಗ್‌ದ ಎಲ್ಲಾ ಶಿವಯೋಗಪ್ರೇಮಿಗಳಿಗೆ ಕರೆಕೊಟ್ಟರು.

ಈ ಸಮಾರಂಭದಲ್ಲಿ ಐವತ್ತಕ್ಕೂ ಹೆಚ್ಚು ಅಷ್ಟಾಂಗ ಯೋಗಶಿಕ್ಷಕರು ಪಾಲ್ಗೊಂಡಿದ್ದರು. ಅದೇ ಸ್ಥಾನದಲ್ಲಿ ಮರುದಿನ ಶ್ರೀ ಸನ್ನಿಧಿಯವರ ಸಾಮೂಹಿಕ ಲಿಂಗಪೂಜೆ, ಮತ್ತು ದೀಕ್ಷಾಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದಲ್ಲಿ ಗೋಕೋರ್ವಾ ಸ್ವೇತಲಾನಾ, ಸ್ಲಾವಾ, ಪೋಮೋರೆವ್ ಮಿಹಈಲ್, ಬ್ಲಿನೋ ಮಕ್ಷಿನ್, ಡಾರೀವಾಯೇವ್ ಸೆರ್ಗೇಯ್ ಈ ಐದು ಜನರು ಲಿಂಗದೀಕ್ಷೆಯನ್ನು ಮತ್ತು

ರೋದಿಕೋ ಅಲೇಕ್ಸಾಂದ್ರ್, ಗೋರ್ಕೋವಾ ನಾತಾಲಿಯಾ, ಲ್ಯೂಬಾ, ತತ್ಯಾನಾ, ಏದೋಕೀಮೋ, ಕ್ಸೆನಿಯಾ ಲೌರೇನ್ಸ್, ಜ್ಯುದ್ಮೀರಾ, ತತ್ಯಾನಾ, ಕತೇರಿನಾ ಈ ಒಂಬತ್ತು ಮಂದಿ ಮಂತ್ರದೀಕ್ಷೆಯನ್ನು ಪಡೆದುಕೊಂಡರು.

ರಷ್ಯಾ ದೇಶದ ಹತ್ತುದಿನಗಳ ವೀರಶೈವಧರ್ಮ ಪ್ರಚಾರ, ದೇಶಭ್ರಮಣ ಕಾರ್ಯಕ್ರಮದಲ್ಲಿ ಶ್ರೀ ಸನ್ನಿಧಿಯವರ ಜೊತೆಗೆ ಪ್ರಯಾಣ ಮಾಡಿದ್ದ ಬೆಂಗಳೂರು ವಿಭೂತಿಪುರಮಠದ ಶ್ರೀ ಷ.ಬ್ರ. ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಸಭೆಯಲ್ಲಿ ಪ್ರಾಸ್ತಾವಿಕ ಮತ್ತು ಇಷ್ಟಲಿಂಗಪೂಜಾ–ದೀಕ್ಷಾ ಕಾರ್ಯಕ್ರಮಗಳಲ್ಲಿ ಶ್ರೀರುದ್ರ ಪಠಣ ಹಾಗೂ ಭಜನಾದಿಗಳನ್ನು ಮಾಡಿಸಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಶ್ರೀ ಸನ್ನಿಧಿಯವರ ಯುಕ್ರೇನ್ ದೇಶದ ಶಿಷ್ಯಳಾದ ಕುಮಾರಿ ಯುಲಿಯಾ (ಗೌರಿ) ಇವರು ಹಿಂದಿಭಾಷೆಯನ್ನು ಚೆನ್ನಾಗಿ ಬಲ್ಲವರಾಗಿದ್ದರಿಂದ ಶ್ರೀ ಸನ್ನಿಧಿಯವರ ಹಿಂದಿ ಭಾಷೆಯ ಆಶೀರ್ವಚನಗಳನ್ನು ರಷ್ಯನ್ ಭಾಷೆಗೆ ಅನುವಾದಮಾಡಿದರು. ಇದರಿಂದ ಈ ದೇಶದ ಜನರಿಗೆ ವೀರಶೈವಧರ್ಮ, ಅಷ್ಟಾವರಣ ಮತ್ತು ದೀಕ್ಷೆ ಮುಂತಾದ ವಿಷಯಗಳನ್ನು ಸರಿಯಾಗಿ ತಿಳಿದುಕೊಂಡರಲ್ಲದೆ ಮುಕ್ತ ಮನಸ್ಸಿನಿಂದ ಪ್ರಶ್ನೋತ್ತರಗಳನ್ನು ನಡೆಸಿದರು.

ಮಾಸ್ಕೋ ನಗರದ ಸುಪ್ರಸಿದ್ಧ ಅಷ್ಟಾಂಗ ಯೋಗ ಶಿಕ್ಷಕರಾದ ಶ್ರೀ ಡ್ಯಾನಿಶ್ (ದಿನೇಶ್) ಇವರು 8–1–2002ರಂದು ಬೆಂಗಳೂರು ಮಹಾನಗರದಲ್ಲಿ ನಡೆದ ಧನುರ್ಮಾಸದ ಶಿವಪೂಜಾ ಸಮಾರಂಭದಲ್ಲಿ ಶ್ರೀ ಸನ್ನಿಧಿಯವರಿಂದ ಲಿಂಗದೀಕ್ಷೆಯನ್ನು ಪಡೆದುಕೊಂಡಿದ್ದರು. ಇಂದು ಇವರು ರಷ್ಯಾದೇಶದಲ್ಲಿ ಒಬ್ಬ ಶ್ರೇಷ್ಠ ಶಿವಯೋಗ ಸಾಧಕರಾಗಿದ್ದಾರೆ. ಇವರೇ ಮಾಸ್ಕೋ ಮತ್ತು ಸೇಂಟ್ ಪೀಟರ್ಸ್‌ಬರ್ಗ್ ಮಹಾನಗರಗಳಲ್ಲಿ ಶ್ರೀ ಸನ್ನಿಧಿಯವರ ಹತ್ತು ದಿನಗಳ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು.

ದಿನಾಂಕ 7ರಂದು ಅದೇ ಯೋಗಕೇಂದ್ರದಲ್ಲಿ ಸಾಯಂಕಾಲ ಶ್ರೀ ಸನ್ನಿಧಿಯವರು ಬಹಿರಂಗ ಇಷ್ಟಲಿಂಗ ಪೂಜೆಯನ್ನು ನೆರವೇರಿಸಿ ದೀಕ್ಷೆಯ ಬಗ್ಗೆ ತಿಳುವಳಿಕೆಯನ್ನುಂಟು ಮಾಡಿಕೊಟ್ಟರು. ಆಗ ಆಶೀರ್ವಚನದಿಂದ ಪ್ರೇರಿತರಾದ ನಾಲ್ವರು ಯೋಗ ಶಿಕ್ಷಕರು ಮತ್ತು ಓರ್ವ ಯೋಗ ಶಿಕ್ಷಕಿಯು ಇಷ್ಟಲಿಂಗ ದೀಕ್ಷೆಯನ್ನು ಪಡೆದುಕೊಂಡರು. ಉಳಿದ 9 ಜನ ಯೋಗಶಿಕ್ಷಕರು ಮಾತ್ರ ದೀಕ್ಷೆಯನ್ನು ಪಡೆದುಕೊಂಡರು. ಅಂದು ಸಾಯಂಕಾಲ 6 ಘಂಟೆಗೆ ಪ್ರಾರಂಭವಾದ ಕಾರ್ಯಕ್ರಮವು ರಾತ್ರಿ 11 ಘಂಟೆಗೆ ಸೂರ್ಯಾಸ್ತವಾಗುತ್ತಿತ್ತು. ಸುಮಾರು 17 ರಿಂದ 18 ಘಂಟೆಗಳ ಕಾಲ ಅಲ್ಲಿಯ ಜನರಿಗೆ ಸೂರ್ಯನ ಬೆಳಕು ದೊರೆಯುತ್ತಿರುವುದನ್ನು ಕಂಡು ನಾವೆಲ್ಲ ಆಶ್ಚರ್ಯಗೊಂಡೆವು. ಈ ಎಲ್ಲ ಕಾರ್ಯಕ್ರಮಗಳನ್ನು ಪೂರೈಸಿಕೊಂಡು ಅಂದೇ ರಾತ್ರಿ 1 ಘಂಟೆಗೆ ರೈಲ್ವೆ ಮುಖಾಂತರ ಪ್ರಯಾಣವನ್ನು ಮಾಡಿ 8ನೇ ತಾರೀಖಿನಂದು ಮುಂಜಾನೆ 7 ಘಂಟೆಗೆ ಮಾಸ್ಕೋ ನಗರವನ್ನು ತಲುಪಿದೆವು. ಸೇಂಟ್‌ಪೀಟರ್ಸ್‌ಬರ್ಗ್‌ನ ಎಲ್ಲ ದರ್ಶನೀಯ ಸ್ಥಳಗಳನ್ನು ನೋಡಿಕೊಂಡು ಚಿತ್ರೀಕರಿಸಿಕೊಂಡು ಬರಲಾಯಿತು.

ದಿನಾಂಕ : 8ರಂದು ಮಾಸ್ಕೋ ನಗರದ ಸುಪ್ರಸಿದ್ಧವಾದ ಒಂದು ಉದ್ಯಾನವನ್ನು ವೀಕ್ಷಿಸಲಾಯಿತು. ಅಂದು ಸಾಯಂಕಾಲ ದಿನೇಶನು ತನ್ನ ಮನೆಯಲ್ಲಿ ಒಂದು ವಿಶೇಷವಾದ ಸ್ನಾನದ ವ್ಯವಸ್ಥೆ ಮಾಡಿದ್ದನು. ಅದಕ್ಕೆ ಯೋಗ ಚಿಕಿತ್ಸಾ ಪದ್ಧತಿಯಲ್ಲಿ (steem bath) ಎಂದು ಕರೆಯುತ್ತಾರೆ. 90 ಡಿಗ್ರಿ ಉಷ್ಣಾಂಶದಲ್ಲಿ ನಮ್ಮನ್ನು ಕೂಡಿಸಿ ಸ್ವಲ್ಪ ಹೊತ್ತಿನ ನಂತರ ಮತ್ತೆ ತಣ್ಣೀರಿನ ಸ್ನಾನ ಮತ್ತೆ ಉಗಿಯ ಸ್ನಾನ ಹೀಗೆ ಒಂದು ತಾಸಿನವರೆಗೆ ಸ್ನಾನ ಮಾಡಿಸಿದನು. ನಮಗೆ ಹೊಸ ಚೈತನ್ಯವನ್ನು ತಂದುಕೊಟ್ಟನು. ಆ ವಿಧವಾದ ಸ್ನಾನ ಶ್ರೀ ಸನ್ನಿಧಿಯವರಿಗೆ ಹೊಸ ಅನುಭವವನ್ನುಂಟುಮಾಡಿತು.

ದಿನಾಂಕ : 9ರಂದು ಪ್ರಾತಃಕಾಲದಲ್ಲಿ ಶಿವಪೂಜಾ ಹಾಗೂ ಪ್ರಸಾದವನ್ನು ಪೂರೈಸಿ ಸಾಯಂಕಾಲ 3.30ಕ್ಕೆ ಮಾಸ್ಕೋ ವಿಮಾನ ನಿಲ್ದಾಣವನ್ನು ತಲುಪಿದೆವು. ವಿಮಾನ ಪ್ರಯಾಣದ ಎಲ್ಲ ಪ್ರಕ್ರಿಯೆಗಳನ್ನು ಮಾಡಿಕೊಳ್ಳುವುದರಲ್ಲಿ ಕುಮಾರಿ ಗೌರಿಯವರು ವಿಶೇಷವಾಗಿ ಸಹಕರಿಸಿದರು. ಅಂದು ಸಾಯಂಕಾಲ 5.10 ನಿಮಿಷಕ್ಕೆ ಏರೋ ಫ್ಲಾಟ್ ವಿಮಾನದ ಮೂಲಕ ಪ್ರಯಾಣವನ್ನು ಬೆಳೆಸಿ ರಾತ್ರಿ 12.30ಕ್ಕೆ ದಿಲ್ಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸುರಕ್ಷಿತವಾಗಿ ತಲುಪಿದೆವು. ಅಂದೇ ಪ್ರಾತಃಕಾಲ ಬೆಳಗಿನ 6 ಘಂಟೆಗೆ ಕಿಂಗ್ ಫಿಶರ್ ವಿಮಾನದ ಮೂಲಕ 8.30ಕ್ಕೆ ಬೆಂಗಳೂರು ಮಹಾನಗರವನ್ನು ಸುರಕ್ಷಿತವಾಗಿ ತಲುಪಿದೆವು.

ಶಿವನು ಸರ್ವಜೀವಿಗಳನ್ನು ಸಮಾನವಾಗಿ ನೋಡುವುದರಿಂದ ಶಿವನನ್ನು ಕಾಯಾ–ವಾಚಾ–ಮನಸಾ ತ್ರಿಕರಣಗಳಿಂದ ಆರಾಧಿಸಿದಲ್ಲಿ ಮನಸ್ಸಿನ ದ್ವಂದ್ವಗಳನ್ನು ವಿಷಮತೆಯನ್ನು ನಿವಾರಿಸಿಕೊಳ್ಳಲು ಸಾಧ್ಯವೆಂದು ಬಹು ಸ್ವಾರಸ್ಯವಾಗಿ ಬೋಧಿಸಿದ್ದರ ಪ್ರಭಾವದಿಂದಾಗಿ ಹೆಚ್ಚು ಹೆಚ್ಚು ಯೋಗ ಶಿಕ್ಷಕರು ಶಿವಯೋಗದಲ್ಲಿ ಆಸಕ್ತರಾಗಿರುವುದು ತಿಳಿಯುತ್ತದೆ.

ಇದೇ ಸ್ಥಾನದಲ್ಲಿ ಮರುದಿನ ಜಗದ್ಗುರುಗಳವರ ಸಾಮೂಹಿಕ ಶಿವಪೂಜೆ, ಮತ್ತು ದೀಕ್ಷಾ ಕಾರ್ಯಕ್ರಮವಿತ್ತು. ಆಗ ಗೋರ್ಕೋವಾ, ಸ್ವೆತಲಾನಾ, ಸ್ಲಾವ, ಪೋಮೋರೆವ್, ಮಿಹಈಲ್, ಬ್ಲಿನೋ, ದುಕ್ಷೀನ್, ಡಾರೀವಾಯೇವ್, ಸೇರ್ಗೆಯ್ ಅವರುಗಳು ಜಗದ್ಗುರುಗಳಿಂದ ಲಿಂಗದೀಕ್ಷೆ ಪಡೆದುಕೊಂಡರೆ–ರೋದಿಕೋ ಗೋರ್ಕೋವಾ. ಲ್ಯೂಬಾ, ತತ್ಯಾನಾ, ಏದೋಕೀಯೋ, ಕ್ಸೆನಿಯಾ ಲೌರೇನ್ಸ್, ಜ್ಯುದ್ಮೀರಾತತ್ಯಾನಾ, ಕತೇರಿನಾ ಅವರುಗಳು ಮಂತ್ರದೀಕ್ಷೆ ಪಡೆದುಕೊಂಡರು.

ಇಲ್ಲಿನ ಈ ಕಾರ್ಯಕ್ರಮವನ್ನು ಜಗದ್ಗುರುಗಳು ಮೊದಲ ರಷ್ಯಾ ದೇಶದ ಶಿಷ್ಯ ದಿನೇಶ್ ಏರ್ಪಡಿಸಿದ್ದನು. ಜಗದ್ಗುರುಗಳನ್ನು ರಷ್ಯಾಕ್ಕೆ ಕರೆಸಿಕೊಂಡಾಗ ಸುಮಾರು ಹತ್ತಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಸಂಘಟಿಸಿದ್ದು ಅವನಿಗಿರುವ ವೀರಶೈವ ಧರ್ಮದ ಮೇಲಿನ ಭಕ್ತಿ, ಶಿವಯೋಗದ ಮೇಲಿನ ನಿಷ್ಠೆ ವ್ಯಕ್ತವಾಗುವುದು.

ಈ ಎಲ್ಲಾ ಕಾರ್ಯಕ್ರಮಗಳಲ್ಲೂ ಡಾ॥ ಮಹಂತಲಿಂಗ ಶಿವಾಚಾರ್ಯರು ತಮ್ಮ ಸುಶ್ರಾವ್ಯ ಕಂಠದಿಂದ ಅನೇಕ ಶಿವಗೀತೆಗಲನ್ನು ಹಾಡಿ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿದರು.

ಜಗದ್ಗುರುಗಳಿಗೆ ರಷ್ಯನ್ ಭಾಷೆ ಬಾರದು. ರಷ್ಯಾದ ಯೋಗ ಶಿಕ್ಷಕರಿಗೆ, ದೀಕ್ಷೆ ಪಡೆದ ಅನೇಕ ಶಿಷ್ಯರಿಗೆ ಸಂಸ್ಕೃತವಾಗಲಿ ಹಿಂದಿಯಾಗಲಿ ಬಾರದು. ಆದಾಗ್ಯೂ ಹತ್ತಾರು ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲು ಮುಖ್ಯಕಾರಣ ದ್ವಿಭಾಷಿಯಾಗಿ ಗೌರಿ (ಉಕ್ರೇನಿನ ಯುಲಿಯಾ) ಬಹು ಪ್ರತಿಭೆಯುಳ್ಳವಳು. ಸಂಸ್ಕೃತವನ್ನು ಹಿಂದಿಯನ್ನು ಚೆನ್ನಾಗಿ ಬಲ್ಲವಳು. ಜಗದ್ಗುರುಗಳ ಭಾಷೆಯನ್ನು ರಷ್ಯನ್ ಭಾಷೆಯಲ್ಲಿ ಅಲ್ಲಿನ ಭಕ್ತರಿಗೂ; ಭಕ್ತರ ಪ್ರಶ್ನೆ, ಸಮಸ್ಯೆಗಳನ್ನು ಜಗದ್ಗುರುಗಳಿಗೂ ಹಿಂದಿಯಲ್ಲೂ ತಿಳಿಸಿದ ಕಾರಣ ಜಗದ್ಗುರುಗಳಿಗೆ ರಷ್ಯಾದಲ್ಲಿ ಇದ್ದ ಭಾವನೆಯೇ ಬಾರಲಿಲ್ಲ ಎಂದು ವ್ಯಕ್ತಪಡಿಸಿದ್ದಾರೆ.


ದಿನೇಶನು ತನ್ನ ಯೋಗ ಶಿಷ್ಯೆಯನ್ನು ಮದುವೆ ಮಾಡಿಕೊಂಡು ಅವಳಿಗೂ ದೀಕ್ಷೆ ಕೊಡಿಸಿದ. ಆಕೆಯು ಹೆಸರೀಗ ಉಷಾ ದಿನೇಶ್, ದಿನೇಶನ ತಾಯಿಯು ದೀಕ್ಷೆ ಪಡೆದು ಅನ್ನಪೂರ್ಣೆಯೆಂದಾಗಿದೆ. ಈ ರೀತಿ ದಿನೇಶನ ಇಡೀ ಕುಟುಂಬವೇ ವೀರಶೈವರಾಗಿ ರಷ್ಯಾದಲ್ಲಿ ವೀರಶೈವದ ಪ್ರಚಾರಕರಾಗಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಚಂದ್ರಜ್ಞಾನಾಗಮ ಶಿಷ್ಯನ ಲಕ್ಷಣ ಮತ್ತು ಕರ್ತವ್ಯ ಎಂದಿರುವ ದ್ವಿತೀಯ ಪಟಲದ 73ನೇ ಶ್ಲೋಕ

"ನಿವೇದ್ಯ ಪಶ್ಚಾತ್ ಸ್ವಾತ್ಮಾನಂ ಸಪರಿಗ್ರಹಮಾ
ಸಮರ್ಪ್ಯ ಸಾದರಂ ತಸ್ಮೈ ನಿತ್ಯಂ ತದ್ವಶಗೋಭವೇತ್" ॥73॥

ಗುರುಗಳಿಗೆ ಸಂಪೂರ್ಣವಾಗಿ ಶಾಖಾಹಾರದ ವ್ಯವಸ್ಥೆಯನ್ನು ದಿನೇಶನ ತಾಯಿ ವಹಿಸಿಕೊಂಡು ಶ್ರದ್ಧೆಯಿಂದ ಮಾಡುತ್ತಿದ್ದರು. ಸಮೃದ್ಧಿಯಾಗಿ ಹಾಲು ಹಣ್ಣು ತರಕಾರಿಗಳು ಗೋಧಿ ಪದಾರ್ಥಗಳು ಅಕ್ಕಿ ಎಲ್ಲವೂ ಇದ್ದುದರಿಂದ ಪ್ರಸಾದದ ವ್ಯವಸ್ಥೆಗೆ ಏನೂ ತೊಂದರೆಯಾಗಲಿಲ್ಲ.

ದಿನೇಶನ ತಾಯಿ ದೀಕ್ಷೆ ತೆಗೆದುಕೊಂಡವರೆಲ್ಲರಿಗೂ ತಾವೇ ಸ್ವತಃ ಇಷ್ಟಲಿಂಗವನ್ನು ಇಡಲು ಸುಂದರವಾದ ಚೀಲಗಳನ್ನು ಕೊರಳಲ್ಲಿ ಧರಿಸುವಂತೆ ಹೊಲೆದುಕೊಟ್ಟಿದ್ದನ್ನು ಗುರುಗಳು ಸ್ಮರಿಸುತ್ತಿದ್ದರು.

ಅಲ್ಲಿನ ನಿಯತಕಾಲಿಕೆಯೊಂದು ರಷ್ಯನ್ ಬಾಷೆಯಲ್ಲಿ ವೀರಶೈವ ಧರ್ಮ ಹಾಗೂ ಕಾಶೀ ಶ್ರೀಗಳ ಸಂದರ್ಶನವನ್ನು ಪ್ರಕಟಿಸಿದೆ. ಜಗದ್ಗುರುಗಳ ಆಶೀರ್ವಚನವನ್ನು ರಷ್ಯನ್ ಭಾಷೆಗೆ ಅನುಮಾಡಿದ್ದರು.





Слово от редакции

Этим летом **реальность смерти** стала многим как бы ближе, яснее, понятнее. Смерть ходила вокруг, проявляясь в стихии огня, воды, воздуха… От угарного газа слезились глаза, заставляя не думать о временных интервалах. Потому и наш номер по теме **«Смерть и бессмертие»** вышел немного позже, а тематика смерти в нем представлена явно больше, чем идея бессмертия.

На конечность истории указывает все вокруг. В новом номере «Імперіи Духа» **о сценариях Конца времен** говорит иудейский раввин, говорят шииты, говорит даже сам Патриарх шиваитов, проживающий в Индии и вступивший недавно в редакционный совет «Імперіи Духа».

Все религии сходятся на том, что история не бесконечна. Фактор смерти есть «самое определенное, что имеется в человеческой жизни» – говорил нам Эмир Кустурица. Мы считаем, что **жизнь обретает свой смысл лишь через соединение с ритуалами.** И благодаря им она может продлиться, что нам показали **филиппинские хилеры,** о которых читайте в этом же номере.

Более того, **хоронить свою смерть –** это тоже возможно при помощи ритуала: в интервью с Алексеем Тегиным этот путь был показан довольно четко. Прохождение через смерть есть основа для многих духовных путей: это – **путь «осознанной смерти»,** о котором говорит суфийский учитель Селим Айссель. После этого само тело становится светоносным. Шриланкийского монаха, настоятеля двух храмов, привезшего в Россию костные останки (шариру) Будды Сакьямуни, мы просили рассказать **о «мощах в буддизме».** Это – опыт преображения, ведущий по ту сторону смерти, по ту сторону ночи, по ту сторону зла и ада…

Редакция «Імперія Духа»

ИМПЕРИЯ ДУХА №5(11) ОСЕНЬ 2010 | 3

Шри Джагадгуру Др. Чандрашекхара Шивачарья Махасвамиджи:

Вирашиваиты – генетические потомки Шивы



Беседу вел Андрей Кондратьев

В июле 2010 года в истории индуизма произошло важное событие: в Россию впервые приехал Патриарх всех вирашиваитов, первый из пяти лингаятских Патриархов, проживающий в Варанаси. Им были даны посвящения (дикши) в Москве и Санкт-Петербурге. «Імперіи Духа» удалось не только пообщаться с Махасвамиджи, но даже и получить благословение Патриарха Варанаси на издание «Імперіи Духа». Мы попросили Свамиджи рассказать нам о сути вирашиваизма и о том, каким образом проявились на Земле люди.

— Что значит слово «вирашиваизм»? Кто такой «вирашайва»?

— Слово ***вирашайва*** – оно состоит из двух слогов. Слово ВИ – это от слова ВИДЬЯ, «знание». А РА – от слова «радуется, получает удовольствие». Вирашайва есть тот, кто благодаря практике достигает состояния слияния с Шивой, видит во всем Шиву и радуется от этого – вот это по сути и есть вирашайва.

— В чем основная суть учения вирашиваитов?

— Вся наша философия направлена на то, чтобы человек достиг Освобождения и в этом мире более не рождался. И начинается это еще до рождения. Когда женщина находится на восьмом месяце беременности, проводится определенный ритуал и подготавливают эту уже воплотившуюся душу к тому, что она освободится. Когда ребенку еще месяцев 7, и он находится в утробе матери, он прекрасно слышит все, что происходит снаружи. Поэтому, когда у женщины в традиции вирашайва начинается восьмой месяц беременности, в дом приглашаются учителя, монахи. Они проводят определенный ритуал, на живот беременной женщины помещают шивалингу и ей на правое ухо произносят мантру. Таким образом, первый звук, который услышит ребенок – это будет звук мантры. После того, как ребенок родится, эту лингу, которую до рождения помещали на живот матери, еще раз очищают и вешают на шею ребенку. И снова, уже родившемуся ребенку, говорят на ухо ту же мантру.

— А что потом?

— Потом ребенок дорастает до восьми лет, тогда снова приходят учителя, проводится определенный обряд, и ребенку уже объясняют, что делать с этой лингой, которую он до этого носил. И как проводить пуджу. И что делать с мантрой. Так, в течение всей жизни, человек готовит себя к тому, что он и есть Шива. То, с чего начинает практику – это состояние бхакта: когда он поклоняется небольшой личной шивалинге, которую ставит на ладошку своей левой руки. При этом он ощущает, что эта шивалинга является образом всех Божеств.

— Сейчас многих в Европе волнует вопрос: какова вероятность того, что Кали-Юга закончится скоро и человечество будет уничтожено или перейдет в иной цикл существования?

— Кали-Юга длится 432 000 лет, а прошло только 5000 лет. Времени еще много осталось. Разные катаклизмы, конечно, случаться могут. Засуха, наводнение, цунами… Были разные предсказания, связанные и с 2000-м, и с 2012-м годом. Но все человечество никуда не исчезнет. Разные ожидания сильно связывают человека. Чем больше у человека надежд и ожиданий – тем более он связан. По мере того, как человек перестает придавать им значение – он становится предрасположенным к Освобождению.

— А в чем заключается Освобождение?

— В том, чтобы отрешиться от ощущения того, что «это – мое и это – мое». Как только человек осознает, что все есть Господь и все принадлежит Господу, он достигнет Освобождения. Для этого вовсе не надо уходить в горы и жить в пещере. Нет, надо лишь жить в этом мире, всему радоваться, заниматься своим делом, но воспринимать все как подарки Господа. Главное не в том, где человек живет, а в том, как он это все воспринимает.

— В каких телах удобнее всего достигать Освобождения?

— Только в телах людей. Существуют сотни тысяч вариантов рождения в разных телах, но только в человеческом теле можно достичь Освобождения. По количеству удовольствий человеческое тело ниже, чем тела Богов, но по близости к Освобождению – выше.

— Когда говорят о вирашиваизме, обычно говорят, что практика погребения в нем своеобразная, отличная от кремации.

— Если человек получил посвящение в вирашиваизм, то он должен постоянно носить на груди шивалингу – специальную коробочку, в которой внутри – шивалинга. И когда человек умирает, эту шивалингу сжигать нельзя, но нельзя ее и хоронить отдельно. Поэтому человека здесь не кремируют, а хоронят в землю.

— Из каких тел состоит человек, по учению вирашиваизма?

— В индуизме считается, что в человеке есть пять



оболочек, и они распределены по трем телам: по физическому, тонкому и причинному. Это – аннамайя коша, оболочка пищи. Это и есть физическое тело. Еще есть пранамайя (управление дыханием), мономайя (оболочка в виде ума), виджняна (оболочка сознания). Вот эти три последние оболочки вместе образуют тонкое тело. И самая последняя оболочка – анандамайя, это – оболочка радости и блаженства.

— А что происходит с человеком после смерти?

— Физическая оболочка после смерти разрушается, но те три оболочки, которые формируют тонкое тело, то есть, прана, ум и сознание – они сами по себе не разрушаются. Этого можно добиться лишь практиками, ведущими к Освобождению. Три дня после смерти, когда совершаются ритуалы, эти три тонкие оболочки находятся вокруг физического тела. Но после третьего дня они идут либо в какой-то из миров, либо в следующее рождение.

— Как человек возник на Земле? Как он был создан, кем и зачем?

— Когда еще ничего не было, Господь Шива сказал Брахме начать Творение мира. Тогда Брахма сказал: «Я не знаю, как это вообще делается. Расскажи мне, Господь Шива, что надо делать. Научи меня». Шива рассказал Брахме, как это делается. Но даже после всех инструкций Брахма не смог сотворить, не справился. Тогда Брахма сказал Шиве: «Тогда ты сотвори и научи меня своим примером». У Шивы, как Вы знаете, пять ликов: четыре по сторонам света и один сверху. И тогда Шива сосредоточился и мысленно представил себе процесс Творения. И тогда из каждого лика Шивы возникло по одному преданному Шивы. Их звали Вира, Нанди, Брунди, Врушава и Сканда. По вирашиваистской традиции вначале был не один человек, а возникло сразу пять человек. От них уже пошли все остальные, поэтому их называют готрапуршана – «семья человеческая».

— И все люди, которые сейчас есть, суть потомки одного из пяти Перволюдей?

— Нет, только вирашиваиты. Они входят в пять семей. А остальные люди, например, брахманы, происходят из творения Брахмы, которому Шива подал пример. Это уже другое Творение.

— Перволюди имели пол? Они были мужчины или женщины?

— Они рождались парами. По образу Шивы и Шакти. Мужчина и женщина возникали одновременно.

— Как давно произошло это Творение?

— В цифрах это выразить сложно.

— А Творение Шивы от Творения Брахмы по времени отделяет большой интервал?

— Брахма сразу, как увидел пример, стал ему подражать. Но и сейчас еще эти два Творения продолжаются. И возникают потомки потомков.

— В чем качественные отличия потомков Шивы от потомков Брахмы?

— В Творении Брахмы все поделено на четыре варны: брахманы, кшатрии, вайшьи, шудры. А в Творении Шивы нет никаких различий – ни по варнам, ни по кастам. Там все равны, и нет никаких социальных различий. И все, кто присоединяется к вирашиваитской традиции, должны оставить свои представления о социальных различиях. Вот,

к примеру, я сейчас приехал в Россию и давал посвящения. И многие присоединились к вирашиваитской традиции. В Москве это было 16 человек, в Петербурге еще 5. И всем я давал посвящения, не спрашивая, какой у них социальный статус. Все они были приняты в семью Шивы.

— А может ли человек из рода Шивы, из числа прямых генетических его генетических потомков, не исповедовать традицию вирашиваизм?

— Так не бывает. Если человек рождается в роду Шивы, то над ним еще до рождения, внутриутробно, на 8-м месяце беременности, проводится особый ритуал. Семья его делает преданным Шивы, проводит ритуал, и он становится родным сыном Шивы. Тогда как те, кто через это не проходили, но приняли вирашиваизм позже – это как бы приемные дети.

— Помимо Творения Брахмы и Шивы существовали еще и другие Творения? Например, Боги, которые тоже все это видели – они не желали повторить за Шивой или за Брахмой?

— В целом, в индуизме считается, что основной Творец – это Брахма. А Шива – разрушает. Это как такая мирская игра: старая вещь приходит в негодность – мы покупаем новую. И в этом круговороте заранее неизвестно, какая душа где примет рождение.

— Получается, все люди происходят от Дэвов?

— По учению вирашайвов все существующие души – это часть одной Всеобщей Души. Она именуется Шивой. В этом смысле мы все – дети Шивы. Поскольку мы все – дети Единого Бессмертного, не важным становится, является ли человек христианином или буддистом. Душа едина.

— Бывает ли такое, что в человек, сотворенного Высшими Божествами, вселяются низшие духи и начинают им управлять?

— Да нет никаких злых духов! У каждого человека есть ум, в котором, в процессе рождений, накопились определенные отпечатки и впечатления. И вот когда ум под воздействием скверных впечатлений делает что-то плохое, получается, что человек ведет себя так, как если бы в него вселился злой дух. Хотя там никто не вселился: это – его же собственный ум. Точно так же, когда преобладают благие впечатления и склонности человека, человек ведет себя как Божество. Хотя это все – единственный ум. Как сказано в Амрита-Бинду Упанишаде, именно ум является для человека и причиной связанности, и источником освобождения. И не какое-то постороннее существо, которое вселяется, а именно ум определяет, на кого похож человек: на злого духа или на Божество. В Бхагавад-гите тоже упоминается, что в человеке есть как Божественные, так и демонические качества. Все те качества, которые ведут к благу всего мира – это божественные качества. А демонические свойства связаны с установкой: «Пропади все пропадом, пусть все умрут, а я один спасусь». И постоянно в уме каждого из нас происходит битва между божественными склонностями и демоническими. Подчинять себе свои демонические качества можно с помощью сатсанга, то есть, общения с людьми, более светлыми и устойчивыми. Поэтому в христианстве есть практика общей молитвы, в исламе – когда все вместе делают намаз. В индуизме есть практика, когда пуджу выполняет сразу много людей. Эта практика, когда нечто хорошее делается большой группой людей одновременно, ведет к тому, что создается общее ощущение некоего духовного возвышения. Это – очень благое состояние для всех.

— А практика соединения в молитве представителей разных религий – эта практика могла бы принести пользу человечеству?

— Сейчас все, как правило, молятся поотдельности. Но если бы представители всех религий вместе могли молиться, то только с чувством того, что все религии – правильные. Им надо молиться словами своей религии, но с ощущением того, что сосед, который принадлежит к другой религии – он тоже действует правильно и обращается тому же. Если бы они могли молиться все вместе и вместе проводить пуджу – для мира это было бы лучше всего. Так, например, происходит в Индии, где сосуществует много религий. И там у нас до сих пор существует такая традиция, что если в какой-то местности почитается некий выдающийся человек, будь то святой или, как в старые времена – какой-то раджа, то приглашают представителей всех религий, чтобы они там все вместе читали свои молитвы и гимны. ■



После этой беседы Патриарх традиции Вирашайва Шри Джагадгуру Др. Чандрашекхара Шивачарья Махасвамиджи согласился вступить в редакционный совет журнала «Імперія Духа» и дал журналу свое благословение

ಅವರಲ್ಲಿ ಜಾತಿಮತ ಭೇದವಿಲ್ಲ, ಶಾಂತಿ ಸಾಮರಸ್ಯದ ಬಗೆಗೆ ಕಳಕಳಿ, ಕಾಳಜಿ ಇದೆ. ಶಿವನ ಬಗೆಗಿನ ನಂಬಿಕೆ ಅವರೆಲ್ಲರೂ ವೀರಶೈವದ ಬಗ್ಗೆ ವಾಲಿಕೊಳ್ಳಲು ಕಾರಣವಾಗಿದೆ. ಅವರುಗಳಲ್ಲಿ ನಾಟಕೀಯತೆ ಇಲ್ಲ. ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಅತೀವ ಆಸಕ್ತಿ–ಎನ್ನುವುದು ಅವರುಗಳೊಟ್ಟಿಗೆ ನಡೆಸಿದ ಸಂವಾದದಿಂದ ತಿಳಿದುಬರುತ್ತದೆ ಎನ್ನುತ್ತಾರೆ ಗುರುಗಳು. ತಮ್ಮ ಕಾಯಕದಲ್ಲಿ ಶ್ರದ್ಧೆ ವಿಶ್ವಾಸ ಅಪಾರ. ಸಂಸ್ಕೃತದ ಬಗ್ಗೆ ಆಸಕ್ತಿ ಭಾರತೀಯ ದರ್ಶನಗಳ ಮೂಲಸೂತ್ರಗಳ ಅಧ್ಯಯನ ಮಾಡುವ ಆಸೆಯಿಂದ ಅನೇಕರು ಶಂಕರಾಚಾರ್ಯರ ಮೂಲ ಸಿದ್ಧಾಂತ, ನಂತರ ವೀರಶೈವ ಸಿದ್ಧಾಂತ ತಿಳಿದುಕೊಳ್ಳುತ್ತಿದ್ದಾರೆ. ಅಲ್ಲಿನ ಸಮಾಜದಲ್ಲಿ ಭೋಗಜೀವನಕ್ಕೆ ಆದ್ಯತೆಯಿದ್ದರೂ ಯೋಗದತ್ತ ಹೆಚ್ಚು ಹೆಚ್ಚು ಒಲಿಯುತ್ತಿದ್ದಾರೆ. ಅವರೆಲ್ಲರಿಗೂ ಅನುಕೂಲವಾಗಲೆಂದು ವೀರಶೈವ ಧರ್ಮಗ್ರಂಥವಾದ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ರಷ್ಯನ್ ಭಾಷೆಗೆ ಅನುವಾದ ಮಾಡಿಸಲು ಗುರುಗಳು ನಿರ್ಧರಿದ್ದಾರೆ. ಮುಂದಿನ ಪ್ರಚಾರ ಸಂದರ್ಭದಲ್ಲಿ ಈ ಗ್ರಂಥವನ್ನು ಬಿಡುಗಡೆ ಮಾಡಿ ಸ್ವಾಧ್ಯಾಯಕ್ಕೆ, ಎಲ್ಲರಿಗೂ ಕೊಡಲಾಗುವುದೆಂದು ಹೇಳಿ ಮತ್ತೆ ಈ ದೇಶಕ್ಕೆ ಬರುವ ಸುಳುವನ್ನೇ ಕೊಟ್ಟರು.



ಸುಮಾರು 50 ಜನರಿಗೆ ನಿರಂತರವಾಗಿ ಶಿವಯೋಗ ಸಾಧನೆಯ ಮಾರ್ಗದರ್ಶನ ದೊರೆಯಬೇಕೆಂಬ ಉದ್ದೇಶದಿಂದ ಜಗದ್ಗುರುಗಳು ತಮ್ಮ ಮೊದಲ ಶಿಷ್ಯ ದಿನೇಶನ ಸ್ವಗೃಹದಲ್ಲಿ "ಶ್ರೀ ಜಗದ್ಗುರು ಪಂಚಾಚಾರ್ಯ ಶಿವಯೋಗ ಕೇಂದ್ರ"ವನ್ನು ಸ್ಥಾಪಿಸಿದ್ದಲ್ಲದೆ ಅಷ್ಟು ದಿನಗಳಲ್ಲಿ ತಮಗೆ ದೊರೆತ ಎಲ್ಲಾ ಗುರುಕಾಣಿಕೆಯನ್ನು ದಿನೇಶನಿಗೆ ಆಶೀರ್ವದಿಸಿ ಕೊಟ್ಟು ಆ ಕೇಂದ್ರಕ್ಕೆ ಅವನನ್ನೇ ಮುಖ್ಯಸ್ಥನನ್ನಾಗಿ ಘೋಷಿಸಿದರು. ರಷ್ಯಾ ದೇಶದ ಶಿವಯೋಗ ಸಾಧಕರು ಕರತಾಡನ ಮೂಲಕ ಹರ್ಷ ವ್ಯಕ್ತಪಡಿಸಿದರು.




ಹೀಗೆ ರಷ್ಯಾದಲ್ಲಿ ವೀರಶೈವ ಧರ್ಮ ಸ್ಥಾಪನೆಗೊಂಡದ್ದು ಚರಿತ್ರಾರ್ಹ ಸಂಗತಿಯಾಗಿದೆ. ಇದಕ್ಕೆ ಮೂಲ ಕಾರಣವಾದ 'ಚಂದ್ರಜ್ಞಾನಾಗಮ' ಗ್ರಂಥಕ್ಕೆ ವೀರಶೈವರೆಲ್ಲರೂ ಕೃತಜ್ಞತೆಯನ್ನು ಸಲ್ಲಿಸಬೇಕು. ಒಂದು ಗ್ರಂಥಕ್ಕೆ ವಿದೇಶದಲ್ಲಿ ಧರ್ಮಸ್ಥಾಪನೆ ಮಾಡುವ ಶಕ್ತಿಯಿದೆ ಎಂದರೆ ಅದರಲ್ಲಡಗಿರುವ ಸಿದ್ಧಾಂತ, ಶಾಸ್ತ್ರಗಳು ಅದೆಷ್ಟು ಉತ್ಕೃಷ್ಟವಾಗಿರಬಹುದು! ಈ ಆಗಮ ಒಂದು ರೀತಿಯ ಕ್ರಾಂತಿಯನ್ನೇ ಮಾಡಿದೆ ಎಂದರೆ ತಪ್ಪಾಗಲಾರದು.



ವಿದೇಶದಿಂದ ಹಿಂತಿರುಗಿದ ಜಗದ್ಗುರುಗಳನ್ನು ಹೋದೆಡೆಯಲ್ಲೆಲ್ಲಾ ಭವ್ಯ ಸ್ವಾಗತ ನೀಡಿ ಭಕ್ತಾದಿಗಳು ಗೌರವಿಸಿದರು. ಹನ್ನೆರಡು ತಿಂಗಳ ಕಾಲ ಜಗದ್ಗುರುಗಳು ಭಕ್ತರು ಕೇಳಿದಾಗಲೆಲ್ಲಾ ತಮ್ಮ ವಿದೇಶ ಪ್ರವಾಸದ ಬಗ್ಗೆ ಸ್ವಲ್ಪವೂ ಬೇಸರಿಸದೆ ಸಮಾಧಾನದಿಂದ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು.



ಗುಳೇದಗುಡ್ಡದ ಬಳಿಯ ತೋಗಣಸಿ ಒಂದು ದಿವ್ಯ ಚೇತನ ಇಂದು ವಿದೇಶದಲ್ಲಿ ಅದರಲ್ಲೂ ಕಮ್ಯುನಿಷ್ಟ್ ದೇಶದಲ್ಲಿ ವೀರಶೈವ ಧರ್ಮಪತಾಕೆಯನ್ನು ಹಾರಿಸಿ, ಸಿದ್ಧಾಂತವನ್ನು ಆಳವಾಗಿ ಬೇರೂರುವಂತೆ ಮಾಡಿ ದೇಶಕ್ಕೆ ಹಿಂತಿರುಗಿದ ಕಾಶೀ ಜ್ಞಾನಸಿಂಹಾಸನಾಧೀಶ್ವರರಾದ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಪವಿತ್ರ ಪಾದಗಳಿಗೆ ಎಲ್ಲಾ ಭಕ್ತಾದಿಗಳು ಭಕ್ತಿಯಿಂದ ಹೆಮ್ಮೆಯಿಂದ ನಮಸ್ಕರಿಸುತ್ತೇವೆ.


महाराष्ट्र वीरशैव सभेचे मुखपत्र

मूल्य २० रुपये

मासिक

वीरशैव दर्शन

वर्ष ३० वे । अंक १० वा

ऑगस्ट २०१०

रशियातील योगशिक्षकांना
अष्टांग शिवयोग केंद्रात लिंगदिक्षा देताना
प.पू. श्रीश्रीश्री १००८ श्री काशी जगद्गुरु डॉ. चंद्रशेखर महास्वामीजी.

वीरशैव धर्म आता सातासमुद्रापलिकडे

प.पू. श्रीश्रीश्री १००८ श्री काशी जगद्गुरू महास्वामीजी यांचा रशिया दौरा... विशेष वृत्त १५


ऑगस्ट २०१०

This Slip or Rubber band can be open for Postal Examinations if needs Post at P.S.O. Market Yard, Pune 30, on 8th of every Month


Reg. No. RNI 37493/80
Regd. No. PNCW/M-42/2009-2011
Licenced to Post without prepayment No. L-35


प.पू. श्रीश्रीश्री १००८ श्री काशी जगद्गुरू महास्वामीजी यांचा रशिया दौरा... काही क्षणचित्रे


सेंट पिटर्स बर्ग येथील अष्टांग शिवयोग केंद्रात मंत्रदीक्षा व लिंगदीक्षा घेतलेले भाविकभक्त काशी जगद्गुरूंच्या परमपावन सानिध्यात... शिवयोगाच्या आनंदात...

सेंट पिटर्स बर्ग येथील अष्टांगयोग केंद्रात प.पू. काशी जगद्गुरु रशियातील भक्तांना/शिष्यांना इष्टलिंग पूजेची प्रात्यक्षिकासह माहिती देताना...


ಕಾಶೀ ಜಗದ್ಗುರುಗಳು ವಿಭೂತಿಪುರ ಮಠದ ಡಾ|| ಮಹಂತಲಿಂಗ ಶಿವಾಚಾರ್ಯರೊಡನೆ
ರಶಿಯಾದ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದರು





























2012ರಲ್ಲಿ ಜಗದ್ಗುರುಗಳು ರಷ್ಯಾ ದೇಶಕ್ಕೆ ಭೇಟಿ

ಕಮ್ಯುನಿಸ್ಟ್ ಆಡಳಿತ ಇಂದು ಸಡಿಲಗೊಂಡಿದ್ದರೂ ರಷ್ಯಾದಲ್ಲಿ ಬಹಿರಂಗವಾಗಿ ಧಾರ್ಮಿಕ ಆಚರಣೆಗಳು ಮಾಡುವಂತಿಲ್ಲ. ಆದರೆ ಕಾಶೀ ಜಗದ್ಗುರುಗಳ ಕರ್ತೃತ್ವ ಶಕ್ತಿಯಿಂದಾಗಿ ಅಂತಹ ದೇಶದಲ್ಲಿ ಕಾಲಿರಿಸಿ ಶಿವಯೋಗ ನೆಲೆಯೂರುವಂತೆ ಮಾಡಿದ್ದಲ್ಲದೆ ಇಂದು ವೀರಶೈವದ ಸಿದ್ಧಾಂತ ಗ್ರಂಥವಾದ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ರಷ್ಯನ್ ಭಾಷೆಗೆ ಅನುವಾದಿಸಿ ಬಿಡುಗಡೆಗೆ ಸಿದ್ಧವಾಗುವಂತೆ ಮಾಡಿದ್ದು ವೀರಶೈವರೆಲ್ಲರೂ ಹೆಮ್ಮೆಪಡುವಂತಾಗಿದೆ. ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ವೀರಶೈವ ಸಿದ್ಧಾಂತವನ್ನು ಅಗಸ್ತ್ಯರಿಗೆ ಮಾತ್ರ ಬೋಧಿಸಿದ್ದರು. ಆದರಿಂದು ಕಾಶೀ ಜಗದ್ಗುರುಗಳು ಅದೇ ಸಿದ್ಧಾಂತವನ್ನು ಭಾರತಾದ್ಯಂತ ಎಲ್ಲಾ ಭಾಷೆಗಳಿಗೆ ಅನುವಾದ ಮಾಡಿಸಿ ಜನ ಸಾಮಾನ್ಯರಿಗೆಲ್ಲಾ ಎಟುಕುವಂತೆ ಮಾಡುತ್ತಿರುವುದಲ್ಲದೆ ವಿದೇಶಕ್ಕೂ ದಯಮಾಡಿಸಿ ರಷ್ಯನ್ ಭಾಷೆಗೆ ಅನುವಾದ ಮಾಡಿಸಿ ಬಿಡುಗಡೆಗೆ ಹೊರಟಿರುವುದನ್ನು ನೋಡಿದರೆ–ಒಬ್ಬ ಅಗಸ್ತ್ಯರನ್ನಲ್ಲ–ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಅಗಸ್ತ್ಯರನ್ನು ತಯಾರುಮಾಡುವ ದೂರದೃಷ್ಟಿಯುಳ್ಳವರಾಗಿದ್ದಾರೆ. 19 ವರ್ಷಗಳ ಕೆಳಗೆ ಗುರುಗಳನ್ನು ಅರಸಿಕೊಂಡು ಕಾಶಿಗೆ ಬಂದಿದ್ದ ಡ್ಯಾನಿಷ್/ದಿನೇಶ್ ಇಂದು ಶಿವಯೋಗ ಸಾಧಕನಾಗಿ ಮಾರ್ಪಟ್ಟು ರಷ್ಯಾದಲ್ಲಿ "ಶ್ರೀ ಜಗದ್ಗುರು ಪಂಚಾಚಾರ್ಯ ಶಿವಯೋಗ ಕೇಂದ್ರ"ದ ಮುಖ್ಯಸ್ಥನಾಗಿ ನೂರಾರು ಯೋಗ ಶಿಕ್ಷಕರನ್ನು ತಯಾರು ಮಾಡುತ್ತಿದ್ದಾನೆ. ಇದೆಲ್ಲವೂ ಕಾಶೀ ಜಗದ್ಗುರುಗಳ ಆಶೀರ್ವಾದ, ಅನುಗ್ರಹದಿಂದ ಸಾಧ್ಯವಾಗಿದೆ.

ಸಿದ್ಧಾಂತ ಶಿಖಾಮಣಿ ಸಂಸ್ಕೃತದಲ್ಲಿದ್ದು ಕೇವಲ ಸಂಸ್ಕೃತ ಬಲ್ಲವರಿಗೆ ಮಾತ್ರ ಎಟುಕುವಂತಿತ್ತು. ಇಂದು ಆಧ್ಯಾತ್ಮದಲ್ಲಿ ಆಸಕ್ತಿಯುಳ್ಳ ಯಾರಾದರೂ ಸರಿ, ಯಾವ ಭಾಷೆಯವರಾದರೂ ಸರಿ–ಅವರಿಗೆ ಇಂತಹ ಅಮೂಲ್ಯ ಗ್ರಂಥ ಸಿಗುವಂತಾಗಿದೆ.

ಈ ಹಿಂದೆ ಸೋಸಲೆ ರೇವಣಾರಾಧ್ಯರು, ಪಿ.ಆರ್. ಕರಿಬಸವಶಾಸ್ತ್ರಿಗಳು, ರಸ್ತಾಪುರಮಠದ ಬಸವಾಚಾರ್ಯರು, ಎನ್.ಆರ್. ಕರಿಬಸವ ಶಾಸ್ತ್ರಿಗಳು, ಮಲ್ಲಿಕಾರ್ಜುನ ಸ್ವಾಮಿಗಳು, ಡಾ. ಜ.ಚ.ನಿ., ಎಂ.ಎಲ್. ನಾಗಣ್ಣ–ಹೀಗೆ ಅನೇಕರು ತಮ್ಮ ತಮ್ಮ ಶೈಲಿಯಲ್ಲಿ ಕನ್ನಡದಲ್ಲಿ ಅನುವಾದ ಮಾಡಿದ್ದಾರೆ. ತಿರುವಣ್ಣಾಮಲೈ ಶಿವಪ್ರಕಾಶ ಸ್ವಾಮಿಗಳು ತಮಿಳು ಭಾಷೆಗೆ, ಆಂಧ್ರಪ್ರದೇಶದ ಚನ್ನಪ್ರಗ್ಗಡ ನಾಗೇಂದ್ರರಾವ್ ಅವರು ತೆಲುಗಭಾಷೆಗೆ, ಗದುಗಿನ ಲಿಂ. ಪುಟ್ಟರಾಜ ಗವಾಯಿಗಳು ಇದನ್ನು ಹಿಂದಿ ಭಾಷೆಗೆ ದೋಹಾ ರೂಪದಲ್ಲಿ ಪದ್ಯಾನುವಾದ, ಪಂಡಿತ ರಾಧೇಶ್ಯಾಮ ಚತುರ್ವೇದಿ ಗದ್ಯಾನುವಾದ ಮಾಡಿದ್ದಾರೆ.

ಪಂ. ನಟೇಶನ್ ಮಲೆಯಾಳ ಭಾಷೆಗೆ, ಬೆಂಗಳೂರಿನ ಡಾ.ಎಂ. ಶಿವಕುಮಾರ ಸ್ವಾಮಿಗಳು ಇಂಗ್ಲಿಷ್ ಭಾಷೆಗೆ–ಹೀಗೆ ಸಿದ್ಧಾಂತ ಶಿಖಾಮಣಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಭಾಷೆಗಳಲ್ಲಿ ಅನುವಾದಗೊಂಡು ಮಾನವ ಸಮಾಜಕ್ಕೆಲ್ಲ ಮಾರ್ಗದರ್ಶಿಯಾಗಿದೆ.

ಶ್ರೀ ಸಿದ್ಧಾಂತ ಶಿಖಾಮಣಿಯು ಯುಕ್ರೇನ್ ದೇಶದ ಯುಲಿಯಾ (ಗೌರಿ) ಇದನ್ನು ರಷ್ಯನ್ ಭಾಷೆಗೆ ಅನುವಾದಿಸಿರುವುದು ಹೆಮ್ಮೆಯ ವಿಷಯವಾಗಿದೆ. ಈ ಅನುವಾದದ ಗ್ರಂಥದಲ್ಲಿ ಪಾರಾಯಣವನ್ನು ಅಳವಡಿಸಲಾಗಿದೆ ಎಂದು ಜಗದ್ಗುರುಗಳು ಗುಳೇದಗುಡ್ಡದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿ ತಮಗೆ ರಷ್ಯಾದಿಂದ ಎರಡನೇ ಭಾರಿ ಭೇಟಿಕೊಡಲು ಆಹ್ವಾನ ಬಂದಿರುವ ವಿಷಯ ತಿಳಿಸಿದರು.

ರಷ್ಯಾ ಭಾಷೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಅನುವಾದಗೊಂಡು ಮುದ್ರಣವಾಗಿ ಬಿಡುಗಡೆಗೆ ಸಿದ್ಧವಾಗಿ ಆ ಸಲುವಾಗಿ ತಮ್ಮನ್ನು ಆಮಂತ್ರಿಸಿರುವ ವಿಚಾರವನ್ನು ತಿಳಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಿದ್ಧಾಂತ ಶಿಖಾಮಣಿ ಗ್ರಂಥದ ಪಾರಾಯಣ ಪ್ರಥಮ ಬಾರಿಗೆ ಮಾಸ್ಕೋದಲ್ಲಿ ನಡೆಸುವ ಆಲೋಚನೆಯನ್ನು ತಿಳಿಸಿದರು. ಮೇ ತಿಂಗಳ 25ನೇ ತಾರೀಖಿನಂದು (2012) ಈ ಗ್ರಂಥವನ್ನು ಉದ್ಘಾಟಿಸುವುದರ ಜೊತೆಯಲ್ಲಿ ಅಂತರ್ಜಾಲಕ್ಕೂ ಅಳವಡಿಸಲಾಗುವುದು ಎಂದು ಹೇಳಿ ನಂತರದ ದಿನಗಳಲ್ಲಿ ಶಿವದೀಕ್ಷೆ, ಇಷ್ಟಲಿಂಗಪೂಜೆ, ಆಶೀರ್ವಚನವನ್ನು ಹಮ್ಮಿಕೊಳ್ಳಲಾಗಿದೆಯೆಂದು ತಿಳಿಸಿದರು. ಜಗದ್ಗುರುಗಳು ಅಲ್ಲಿಗೆ ಕೊಂಡೊಯ್ದು ಅಲ್ಲಿ ಬಿಡುಗಡೆಗೊಳಿಸಲಾಗುವ ವಿಚಾರವನ್ನು, ಈ ಬಾರಿ ತಮ್ಮೊಡನೆ ಶಾಖಾಪುರ ತಪೋವನ ಮಠದ ಸಿದ್ಧರಾಮ ಸ್ವಾಮೀಜಿ, ಗುಳೇದಗುಡ್ಡದ ಶಿವಯೋಗ ಗುರು ಬಸವರಾಜ ಹಡಗಲಿ ದಂಪತಿಗಳು ಹೊರಟಿರುವುದಾಗಿ ಪತ್ರಕರ್ತರಿಗೆ ತಿಳಿಸಿದರು.

ರಷ್ಯಾ ದೇಶದಲ್ಲಿ ಸಿದ್ಧಾಂತ ಶಿಖಾಮಣಿ ಪಾರಾಯಣ

ವಿಜಯ ಕರ್ನಾಟಕ, ಗುಳೇದಗುಡ್ಡ, ವಿಜಯ ಕರ್ನಾಟಕ, ಜೇವರ್ಗಿ 21–5–12

ಪ್ರಜಾವಾಣಿ ವಾರ್ತೆ 21–5–12, ಪ್ರಜಾವಾಣಿ ವಾರ್ತೆ 27–5–12

ವಿಜಯವಾಣಿ 19–5–12, ಸಂಯುಕ್ತ ಕರ್ನಾಟಕ 16–5–12

ವೀರಶೈವರೆಲ್ಲರೂ ಹೆಮ್ಮೆಪಡುವ ಕ್ಷಣ!

ರಷ್ಯಾದ ರಾಜಧಾನಿ ಮಾಸ್ಕೋ ನಗರದ ಅಷ್ಟಾಂಗಯೋಗ ಕೇಂದ್ರದಲ್ಲಿ ಏರ್ಪಡಿಸಿದ್ದ ರಷ್ಯನ್ ಭಾಷೆಗೆ ಅನುವಾದಗೊಂಡ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಕಾಶೀ ಜಗದ್ಗುರುಗಳ ಅಮೃತಹಸ್ತದಿಂದ ಬಿಡುಗಡೆ ಮಾಡಲಾಯಿತು. ಗ್ರಂಥವನ್ನು ರಷ್ಯನ್ ಭಾಷೆಗೆ ಅನುವಾದ ಮಾಡಿದ ಯುಕ್ರೇನ್ ದೇಶದ ಕು. ಯುಲಿಯಾ (ಗೌರಿ) ಮಾಸ್ಕೋ ವಿಶ್ವವಿದ್ಯಾಲಯದ ಸಿಬ್ಬಂದಿಗಳು, ಅಲ್ಲಿನ ನೂರಾರು ಶಿವಯೋಗ ಸಾಧಕರು ಶಾಖಾಪುರ ತಪೋವನ ಮಠದ ಶ್ರೀ ಸಿದ್ಧರಾಮ ಶಿವಾಚಾರ್ಯರು ಶ್ರೀ ಕೃಷ್ಣಯೋಗಾಶ್ರಮದ ಡಾ॥ ಬಸವರಾಜ ಹಡಗಲಿ ದಂಪತಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಸಿದ್ಧಾಂತ ಶಿಖಾಮಣಿ ಪಾರಾಯಣ ಸಿಡಿಯನ್ನು ಅಂತರ್ಜಾಲಕ್ಕೆ ಅಳವಡಿಸಲಾಯಿತು (ವೆಬ್ ಸೈಟ್ : WWW. Veerashaiva.ru)

ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಭಾರತದಲ್ಲಿ ಈಗಾಗಲೇ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವು ಕನ್ನಡ, ಹಿಂದಿ, ಇಂಗ್ಲಿಷ್, ಮರಾಠಿ, ತೆಲುಗು, ತಮಿಳು ಮತ್ತು ಮಲಯಾಳಂ ಭಾಷೆಗಳಿಗೆ ಅನುವಾದಗೊಂಡು ಎಲ್ಲೆಡೆ ಬಿಡುಗಡೆಯಾಗುತ್ತಿರುವುದು ತಮಗೆ ಅತ್ಯಂತ ಸಂತೋಷ ತಂದಿದೆ. ಈ ಅಂತರರಾಷ್ಟ್ರೀಯ ಭಾಷೆಯಾದ ರಷ್ಯನ್ ಬಾಷೆಗೆ ಅನುವಾದಗೊಂಡು ಇದು ಬಿಡುಗಡೆಯಾಗಿದ್ದು ಹೆಮ್ಮೆಪಡುವಂತಾಗಿದೆ.

ಇಂದು ಮಾನವ ಸಮಾಜದಲ್ಲಿ ಜಾತಿ, ಭಾಷೆ ಧರ್ಮಗಳ ಸಂಘರ್ಷಗಳಿಂದ ಪರಸ್ಪರರಲ್ಲಿ ದ್ವೇಷ, ಮಾತ್ಸರ್ಯ ತುಂಬಿ ಸಮಾಜ ವಿನಾಶದ ಅಂಚಿನಲ್ಲಿ ನಿಂತಿದೆ. ಈ ವಿಷಮ ಪರಿಸ್ಥಿತಿಯಿಂದ ದೂರಾಗಬೇಕಾದರೆ, ಶಮನಗೊಳ್ಳಬೇಕಾದರೆ ಆಧ್ಯಾತ್ಮ ಹಾಗೂ ಯೋಗಗಳೇ ಅಮೋಘ ಸಾಧನಗಳಾಗಿವೆ. ಶ್ರೀ ಸಿದ್ಧಾಂತ ಶಿಖಾಮಣಿಯು ಆಧ್ಯಾತ್ಮವಿದ್ಯೆಯ ಜೊತೆಗೆ ಶಿವಯೋಗವನ್ನು ವ್ಯವಸ್ಥಿತವಾಗಿ ತಿಳಿಸುವ ಅಮೂಲ್ಯ ಗ್ರಂಥವಾಗಿದೆ ಎಂದರು. ತಂತ್ರಜ್ಞಾನ-ವಿಜ್ಞಾನ, ವಿಶ್ವವನ್ನು ಒಂದು ಕುಟುಂಬವನ್ನಾಗಿ ಮಾರ್ಪಡಿಸುತ್ತದೆ ಎಂದರು.

ರಷ್ಯಾದ ಪ್ರಮುಖನಗರಗಳಲ್ಲಿ ಅನೇಕ ಯೋಗ ಕೇಂದ್ರಗಳಿದ್ದು ಇಲ್ಲಿಯ ಅಷ್ಟಾಂಗ ಯೋಗಕೇಂದ್ರ 10 ವರ್ಷಗಳಿಂದ ಶಿವಯೋಗದ ಕಡೆ ಮುಖಮಾಡಿದೆ. ಡ್ಯಾನಿಷ್‌ನಿಂದ ಪ್ರಾರಂಭವಾದ ಇಲ್ಲಿಯ ಶಿವಯೋಗ ಸಾಧನೆಯು ನೂರರ ಸಂಖ್ಯೆ ದಾಟಿದ್ದು ಒಂದು ಐತಿಹಾಸಿಕ ದಾಖಲೆಯಾಗಿದೆ ಇಂದು.

ಮಹಾಕವಿ ಕಾಳಿದಾಸನು 'ಯೋಗೇನಾಂತೆ ತನುತ್ಯಣಂ' ಎಂದರೆ ಪ್ರತಿಯೊಬ್ಬರು ಯೋಗಮಾರ್ಗದಿಂದಲೇ ದೇಹ ತ್ಯಜಿಸಬೇಕೆಂದು ಹೇಳಿರುವನು. ಆದರೆ ಇಂದು ಜೀವನ ಶೈಲಿ, ಜೀವನ ಪದ್ಧತಿ ವಿಕೃತವಾಗಿರುವುದರಿಂದ ವಿವಿಧ ರೋಗಗಳಿಗೆ ತುತ್ತಾಗಿ ರೋಗಮಾರ್ಗದಿಂದಲೇ ದೇಹ ತ್ಯಜಿಸುವಂತಾಗಿದೆ. ಇದಕ್ಕೆ ಯಾವ ದೇಶವೂ ಹೊರತಲ್ಲ ಎಂದು ಗುರುಗಳು ಹೇಳುತ್ತಾ ರೋಗದ ಜೊತೆಗೆ ಇಂದು ಸಮಸ್ತ ಮಾನವ ಸಮಾಜ ಜಾತಿ-ಭಾಷೆ-ಧರ್ಮಗಳ ಭೇದದಿಂದ ಪರಸ್ಪರರಲ್ಲಿ ದ್ವೇಷ-ಮಾತ್ಸರ್ಯದಿಂದಾಗಿ ವಿನಾಶದ ಅಂಚಿನಲ್ಲಿ ನಿಂತಿದೆ. ಇವೆಲ್ಲವನ್ನು ಹೋಗಲಾಡಿಸಲು, ವಿಶ್ವಬಂಧುತ್ವ ಭಾವನೆಯನ್ನು ಬೆಳೆಸಲು ಆಧ್ಯಾತ್ಮ ಯೋಗಗಳೇ ಅಮೊಘವಾದ ಸಾಧನಗಳಾಗಿವೆ ಎಂದು ಜಗದ್ಗುರುಗಳು ಭಕ್ತರಿಗೆ ಹೇಳಿದರು. ಆಧ್ಯಾತ್ಮ ಮತ್ತು ಶಿವಯೋಗಗಳನ್ನು ಪ್ರತಿಪಾದಿಸುವ ಶ್ರೇಷ್ಠ ಗ್ರಂಥ ಶ್ರೀ ಸಿದ್ಧಾಂತ ಶಿಖಾಮಣಿ. ಸವಿಸ್ತಾರವಾಗಿ ಮಾನಸಿಕ ವಿವಿಧ ಸ್ತರಗಳನ್ನು ಪದರ ಪದರವಾಗಿ ಬಿಡಿಸುತ್ತಾ ಹೋಗುವ ಅತ್ಯಮೂಲ್ಯವಾದ ಗ್ರಂಥವಾಗಿದೆ. ಇಂತಹ ಪವಿತ್ರ ಗ್ರಂಥವನ್ನು ಪ್ರತಿನಿತ್ಯ ಸ್ವಾಧ್ಯಾಯ ಪಾರಾಯಣ ಮಾಡುವುದರಿಂದ ಆಧ್ಯಾತ್ಮ ಜ್ಞಾನದೊಂದಿಗೆ ಶಿವಯೋಗಸಾಧನೆ ಅರಿವಾಗುವುದು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಜಗದ್ಗುರುಗಳು ಹೇಳಿದ ಈ ಒಂದು ಮಾತು ಮಾನವೀಯವಾಗಿದೆ "ವಿಜ್ಞಾನ ತಂತ್ರಜ್ಞಾನಗಳು ವಿಶ್ವವನ್ನು ಒಂದು ಗ್ರಾಮವನ್ನಾಗಿಸಿವೆ; ಆದರೆ ಈ ಆಧ್ಯಾತ್ಮವಿದ್ಯೆಯು ವಿಶ್ವವನ್ನು ಒಂದು ಕುಟುಂಬವನ್ನಾಗಿ ಮಾರ್ಪಾಡಿಸುತ್ತದೆ" ವಿಶ್ವ ಕೌಟುಂಬಿಕ ಭಾವನೆ ಬೆಳೆದಷ್ಟು ರಾಗದ್ವೇಷಗಳು ಶಮನಗೊಳ್ಳುವುವು.

ಇಲ್ಲಿಂದ ಮುಂದೆ ಇದೀಗ ತಾನೆ ಬಿಡುಗಡೆಯಾದ ಗ್ರಂಥ ಸಿದ್ಧಾಂತ ಶಿಖಾಮಣಿಯನ್ನು ಪರಿಚಯಿಸುತ್ತಾ ಈ ಗ್ರಂಥದಲ್ಲಿ ಬರುವ 101 ಸ್ಥಲಗಳು ಮನೋವಿಕಾಸದ ಮೆಟ್ಟಿಲುಗಳಾಗಿವೆ. ಪಿಂಡಸ್ಥಲದಲ್ಲಿ ಅಂತರಂಗಶುದ್ಧಿಯಾದ ನಂತರ ಆತ್ಮಾನಾತ್ಮ ವಿವೇಕ ಉಂಟಾಗಿ ಸಂಸಾರದಲ್ಲಿ ಹೇಯ ಬುದ್ಧಿ (ತ್ಯಜಿಸುವ ಬುದ್ಧಿ) ಉಂಟಾಗುತ್ತದೆ. ಆಗ ಶ್ರೀ ಗುರುವಿನಿಂದ ಇಷ್ಟಲಿಂಗದೀಕ್ಷೆ ಪ್ರಾಪ್ತವಾಗುವುದು. ಮುಂದೆ ಸಾಧಕನಾದವನು ಗುರುವಿನ ಉಪದೇಶದಿಂದ ಪ್ರಾಣಲಿಂಗ-ಭಾವಲಿಂಗಗಳ ಅರ್ಚನೆ ಅನುಸಂಧಾನಗಳನ್ನು ಅರಿತು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್‌ಸ್ಥಲ ಮಾರ್ಗದಿಂದ ಜೀವನು ಶಿವನಾಗುವ ಶಿವಯೋಗ ಮಾರ್ಗವು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಸವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಇದೊಂದು ಪ್ರಾಸ್ತಾವಿಕ ಗ್ರಂಥವಾಗಿದೆ. ಆದ್ದರಿಂದ ಇದರ ಪಾರಾಯಣ ಮತ್ತು ಸ್ವಾಧ್ಯಾಯಗಳಿಂದ ಇಹಲೋಕದ ಭೋಗಭಾಗ್ಯಗಳ ಜೊತೆಗೆ ಲಿಂಗಾಂಗ ಸಾಮರಸ್ಯರೂಪವಾದ ಮುಕ್ತಿಯು ದೊರೆಯುವುದಾಗಿ ವಿವರಣೆಯನ್ನು ಮಾಡಿದರು.

ಗ್ರಂಥದ ಬಿಡುಗಡೆ ಸಮಾರಂಭದಲ್ಲಿ ಅನುವಾದ ಮಾಡಿರುವ ಯೂಲಿಯಾ, ಶಹಾಪುರ ತಪೋವನ ಮಠದ ಶ್ರೀ ಸಿದ್ಧರಾಮ ಶಿವಾಚಾರ್ಯರು, ಶ್ರೀ ಕೃಷ್ಣಯೋಗಾಶ್ರಮದ ಡಾ॥ ಬಸವರಾಜ ಹಡಗಲಿ ದಂಪತಿಗಳು, ಮಾಸ್ಕೋ ವಿಶ್ವವಿದ್ಯಾಲಯದ ಸಿಬ್ಬಂದಿ, ಅಲ್ಲಿಯ ನೂರಾರು ಶಿವಯೋಗ ಸಾಧಕರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಶ್ರೀ ಕಾಶೀ ಜಗದ್ಗುರುಗಳು ಪಾರಾಯಣ ಮಾಡಿದ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಸಿಡಿ ಹಾಗೂ ಗ್ರಂಥವನ್ನು ಅಂತರ್ಜಾಲಕ್ಕೆ ಅಳವಡಿಸಲಾಯಿತು.

ಅಧ್ಯಾತ್ಮದಿಂದ ವಿಶ್ವಕುಟುಂಬ ರಚನೆ : ಕಾಶೀ ಶ್ರೀಗಳು



ರಷ್ಯನ್ ಭಾಷೆಗೆ ಅನುವಾದಗೊಂಡ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ರಷ್ಯಾದ ರಾಜಧಾನಿ ಮಾಸ್ಕೋ ನಗರದ ಅಷ್ಟಾಂಗಯೋಗ ಕೇಂದ್ರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು.



ರಷ್ಯನ್ ಭಾಷೆಗೆ ಅನುವಾದ ಮಾಡಿದ ಯುಕ್ರೇನ್ ದೇಶದ ಯುಲಿಯಾ (ಗೌರಿ) ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಜಗದ್ಗುರುಗಳಿಂದ ಸ್ವೀಕರಿಸುತ್ತಿರುವುದು.



ದಿನೇಶ್ (ಡ್ಯಾನಿಶ್), ಗೌರಿ (ಯುಲಿಯಾ) ಮತ್ತು ವೀರೇಶ್ (ಸ್ಲಾವಾ) – ಇವರುಗಳ ಜೊತೆ ಜಗದ್ಗುರುಗಳು



ರಷ್ಯನ್ ಭಾಷೆಗೆ ಅನುವಾದಗೊಂಡ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥ ಪ್ರಕಟಣೆ ಮಾಡಿದ ರಷ್ಯನ್ ಭಕ್ತ ಮಾಸ್ಕೋದ ಇಂಜಿನಿಯರ್ ಸ್ಲಾವಾ (ವೀರೇಶ) ಅವರು ಜಗದ್ಗುರುಗಳಿಂದ ಗ್ರಂಥ ಸ್ವೀಕರಿಸುತ್ತಿರುವುದು.

ಮಾಸ್ಕೋದಲ್ಲಿ ವೀರಶೈವ ಧರ್ಮಗ್ರಂಥ ಬಿಡುಗಡೆ

ಎರಡು ವರ್ಷಗಳ ಕೆಳಗೆ ರಷ್ಯಾದೇಶದಲ್ಲಿ ವೀರಶೈವ ಧರ್ಮವನ್ನು ಸ್ಥಾಪಿಸಿ ಅನೇಕ ಯೋಗ ಶಿಕ್ಷಕರಿಗೆ ಶಿವದೀಕ್ಷೆ ನೀಡಿ ಬಂದಿದ್ದರು. ಈಗ ದೀಕ್ಷೆ ಪಡೆದ ಯೋಗ ಶಿಕ್ಷಕರ ಸಾಧನೆಯನ್ನು ಕಂಡು ಜಗದ್ಗುರುಗಳಿಗೆ ಆಶ್ಚರ್ಯದ ಜೊತೆಗೆ ಬಹಳ ಸಂತೋಷವಾಯಿತು. ಉದ್ಘಾಟನೆ ಸಮಾರಂಭವಾದ ಮರುದಿನದಿಂದ ಸಾಮೂಹಿಕ ಇಷ್ಟಲಿಂಗಪೂಜೆ ಹಾಗೂ ದೀಕ್ಷಾ ಆರಂಭವಾಯಿತು. ಆ ಸಾಮೂಹಿಕ ಇಷ್ಟಲಿಂಗಪೂಜೆಯಲ್ಲಿ ಎರಡು ವರ್ಷಗಳ ಹಿಂದೆ ಲಿಂಗದೀಕ್ಷೆ ಪಡೆದ 20ಕ್ಕೂ ಹೆಚ್ಚು ಯೋಗ ಶಿಕ್ಷಕರು ಪಾಲ್ಗೊಂಡಿದ್ದರು. ಈಗ ನೂತನ ಯೋಗ ಶಿಕ್ಷಕರಿಗೆ ಇಷ್ಟಲಿಂಗವನ್ನು ಅನುಗ್ರಹಿಸಲಾಯಿತು. ಅವರೆಲ್ಲರಿಗೂ ಸಂಸ್ಕಾರ ಕೊಟ್ಟವರು ಶಾಖಾಪುರ ವಿಶ್ವಾರಾಧ್ಯ ತಪೋವನ ಮಠದ ಸಿದ್ಧರಾಮ ಶಿವಾಚಾರ್ಯರು. ಎಲ್ಲವೂ ಶಾಸ್ತ್ರೋಕ್ತವಾಗಿ ನೆರವೇರಿತು. ದೀಕ್ಷೆ ಪಡೆದವರಿಗೆ ಜಗದ್ಗುರುಗಳು ಆಶೀರ್ವದಿಸಿ ಇಷ್ಟಲಿಂಗದ ಪೂಜೆ ದೈನಂದಿನ ಬದುಕಿನಲ್ಲಿ ಮಹತ್ವಪೂರ್ಣವಾದದ್ದು ಎಂದು ಹೇಳಿ ವೀರಶೈವ ಧರ್ಮದಲ್ಲಿ ಕ್ರಿಯಾದೀಕ್ಷೆಯಲ್ಲಿ ಗುರುಗಳು ಇಷ್ಟಲಿಂಗವನ್ನು ದಯಪಾಲಿಸುತ್ತಾರೆ. ಈ ಲಿಂಗದಲ್ಲಿ ಶಿವಕಳೆಯ ಸಂಯೋಜನೆಯ ಜೊತೆಗೆ ಶಿಷ್ಯನ ಪ್ರಾಣಶಕ್ತಿಯನ್ನು ಅದರಲ್ಲಿ ಸಂಯೋಜಿಸುತ್ತಾರೆ. ಆದ್ದರಿಂದ ಇದಕ್ಕೆ ಪ್ರಾಣಲಿಂಗವೆನ್ನಲಾಗುತ್ತದೆ ಎಂದು ಹೇಳಿದರು.

ಪ್ರತಿಯೊಬ್ಬ ಮನುಷ್ಯನ ಶರೀರದ ಮೂಲಾಧಾರ, ಹೃದಯ ಮತ್ತು ಭ್ರೂಮಧ್ಯಗಳಲ್ಲಿ ಜ್ಯೋತಿರ್ಲಿಂಗಗಳಿರುವುದಾಗಿ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿಸಿರುವುದನ್ನು ವಿವರಿಸಿ ಇದನ್ನು ಎಲ್ಲಾ ಯೋಗಿಗಳು ಒಪ್ಪಿದ್ದಾರೆಂದರು. ನಮ್ಮೆಲ್ಲರಲ್ಲಿರುವ ಜ್ಯೋತಿಯೇ ಈ ಆತ್ಮವು. ಅದೇ ಆಕಾರದ ಈ ಇಷ್ಟಲಿಂಗವು ಒಂದು ಮೂರ್ತಿಯಾಗಿರದೆ ನಮ್ಮ

ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮಾಸ್ಕೋ ನಗರದಲ್ಲಿ ಸಾಮೂಹಿಕ ಪೂಜೆ, ದೀಕ್ಷಾ ಸಮಾರಂಭದಲ್ಲಿ ರಷ್ಯಾ ಭಕ್ತರಿಗೆ ಇಷ್ಟಲಿಂಗ ಪ್ರದಾನ ಮಾಡಿದರು






ಆತ್ಮಜ್ಯೋತಿಯ ಕುರುಹಾಗಿರುತ್ತದೆ. ಅಂತರಂಗದ ಆತ್ಮಜ್ಯೋತಿಯನ್ನರಿಯಲು ಈ ಇಷ್ಟಲಿಂಗವೇ ಸಹಾಯಕವಾದದ್ದು. ಆದ್ದರಿಂದ ಶಿವಯೋಗ ಸಾಧಕರು ಈ ಇಷ್ಟಲಿಂಗವನ್ನು ಸದಾ ದೇಹದ ಮೇಲೆ ಧರಿಸಬೇಕೆಂದು ಉಪದೇಶ ಮಾಡಿದರು.

ಸ್ವಸ್ವರೂಪದ ಅನುಸಂಧಾನವೇ ಇಷ್ಟಲಿಂಗಪೂಜೆ : ಕಾಶೀ ಶ್ರೀಗಳು

ಯಾರ ಒತ್ತಡವೂ ಇಲ್ಲದೇ ಸ್ವಇಚ್ಛೆಯಿಂದ ದೀಕ್ಷೆ ಪಡೆದವರೆಲ್ಲಾ ಭಕ್ತಿ, ಶ್ರದ್ಧೆಯಿಂದ ಇಷ್ಟಲಿಂಗ ಪೂಜೆಮಾಡಿ ಶಿವಯೋಗ ಸಾಧನೆ ಮಾಡುವರೆಂಬ ನಂಬಿಕೆ ಸಂಪೂರ್ಣವಾಗಿತ್ತು. ಎರಡು ವರ್ಷಗಳ ಹಿಂದೆ ವೀರಶೈವ ಧರ್ಮವನ್ನು ರಶಿಯಾದಲ್ಲಿ ಸ್ಥಾಪಿಸಿ, ಇಷ್ಟಲಿಂಗ ಪೂಜಾವಿಧಾನವನ್ನೆಲ್ಲಾ ತಿಳಿಸಿಕೊಟ್ಟು ಬಂದಿದ್ದರೂ ಆ ಭಕ್ತರಿಗೆ ವೀರಶೈವದ ಸಿದ್ಧಾಂತ ಗ್ರಂಥ ಇಲ್ಲದಿರುವ ಕೊರತೆ ಕಾಣುತ್ತಿತ್ತು. ಈ ಬಾರಿ ಎರಡನೇ ಸಲ ರಷ್ಯಾಗೆ ಭೇಟಿ ನೀಡಿದ್ದೇ ಈ ಕೊರತೆಯನ್ನು ನಿವಾರಿಸಲು. ಜಗದ್ಗುರುಗಳ ಇಚ್ಛೆಯಂತೆ ಗ್ರಂಥ ಬಿಡುಗಡೆಯ ಜೊತೆಯಲ್ಲೆ, ಪಾರಾಯಣದ ಸಿಡಿ ಅಲ್ಲಿನ ಭಕ್ತರ ಕೈಗೆ ಸಿಗುವಂತಾಗಿದ್ದು ತುಂಬಾ ಸಂತೋಷಪಟ್ಟರು. ಈ ಗ್ರಂಥವನ್ನು ಅಂತರ್ಜಾಲಕ್ಕೆ ಅಳವಡಿಸಿ ಎಲ್ಲೆಡೆ ಸಿಗುವಂತಾಗಿದ್ದು ತೃಪ್ತಿ ತಂದಿದೆ ಎಂದು ಹೇಳಿದರು.

ಯಶಸ್ವಿಯಾಗಿ ಎಲ್ಲಾ ಕಾರ್ಯ ಗಳನ್ನು ಸಮರ್ಪಕವಾಗಿ ಮುಗಿಸಿ ಸ್ವದೇಶಕ್ಕೆ ಹಿಂತಿರುಗಿದ ಕಾಶೀ ಜಗದ್ಗುರುಗಳನ್ನು ಮೊದಲು ಭವ್ಯಸ್ವಾಗತ ನೀಡಿದವರು ಉಜ್ಜಯನಿ ಜಗದ್ಗುರು ಶ್ರೀ ಸಿದ್ಧಲಿಂಗ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು. ಕಾಶೀ ಪೀಠಾಧೀಶ್ವರರನ್ನು ಸ್ವಧರ್ಮ ಪೀಠಕ್ಕೆ ಆತ್ಮೀಯವಾಗಿ ಬರಮಾಡಿಕೊಂಡು ಗೌರವ ಸಲ್ಲಿಸಿ ಕಮ್ಯೂನಿಸ್ಟ್ ಆಡಳಿತಕ್ಕೆ ಒಳಗಾಗಿರುವ ರಷ್ಯಾದಂತಹ ದೊಡ್ಡ ರಾಷ್ಟ್ರದಲ್ಲಿ ವೀರಶೈವ ಧರ್ಮ ನೆಲೆ ಯೂರಲು ಕಾಶೀಪೀಠದ ಜಗದ್ಗುರುಗಳು ಪ್ರಮುಖ ಕಾರಣ, ಇವರ ಕರ್ತೃತ್ವಶಕ್ತಿಯ ಪ್ರೇರಣೆಯಿಂದಾಗಿ ರಷ್ಯನ್‌ಭಾಷೆಗೆ ಸಿದ್ಧಾಂತ ಶಿಖಾಮಣಿ ಗ್ರಂಥ ಅನುವಾದ ಗೊಳ್ಳುವಂತಾಯಿತು. ಅವರ ಈ ಅನು ಪಮ ಸೇವೆ ಎಣಿಕೆಗೆ ನಿಲ್ಲದು–ಎಂದು ಹೃದಯ ತುಂಬಿ ಹೇಳಿದರು. ಅಲ್ಲದೆ ಕಾಶೀ ಜಗದ್ಗುರುಗಳು ಧರ್ಮ ಗ್ರಂಥದ ಪ್ರಚಾರಕ್ಕಾಗಿ ಕೈಗೊಂಡಿರುವ ಧರ್ಮ ಪಾರಾಯಣ, ಮತ್ತಿತರ ಎಲ್ಲಾ ಕಾರ್ಯಗಳಿಗೆ ಪಂಚ ಪೀಠಾಧೀಶ್ವರರು ಸದಾ ಬೆಂಬಲವಾಗಿದ್ದೇವೆ. ಅವರ ಎಲ್ಲಾ ಕಾರ್ಯಗಳಿಗೆ ಸಹಕಾರ ನೀಡುತ್ತೇವೆ ಎಂದು ಹರ್ಷದಿಂದ ಹೆಮ್ಮೆಯಿಂದ ಹೇಳಿರುವುದನ್ನು ನೋಡಿದರೆ ಕಾಶೀ ಜಗದ್ಗುರುಗಳ ಕಾರ್ಯವನ್ನು ನಿಜಕ್ಕೂ ಮೆಚ್ಚಿದ್ದಾರೆ. ಹಲವು ಬಗೆಯ ಸಾಧನೆಯನ್ನು ಮಾಡಿರುವ ಗುರುಗಳ ಮಾರ್ಗದರ್ಶನ ಎಲ್ಲಾ ಧರ್ಮದವರಿಗೆ ಬೇಕಿದ್ದು ಈ ನಿಟ್ಟಿನಲ್ಲಿ ಅವರು ತೊಡಗಿಸಿ ಕೊಂಡಿರುವುದು ಹೆಮ್ಮೆಯ ವಿಷಯವೆಂದು ಹೇಳಿದರು.


ಇಷ್ಟದೇವರ ಆರಾಧನೆಯೇ ಮಹತ್ವದ್ದು



ಮಾಸ್ಕೋ ನಗರದ ಅಷ್ಟಾಂಗಯೋಗ ಕೇಂದ್ರದಲ್ಲಿ ಕಾಶೀ ಶ್ರೀಗಳ ಸಮ್ಮುಖದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ಹಾಗೂ ದೀಕ್ಷೆ ನಡೆಯಿತು.


ನಮ್ಮ ದೈನಂದಿನ ಬದುಕಿನಲ್ಲಿ ಇಷ್ಟದೇವರ ಆರಾಧನೆ ಅತ್ಯಂತ ಮಹತ್ವದ್ದು. ವೀರಶೈವ ಧರ್ಮದಲ್ಲಿ ಕ್ರಿಯಾದೀಕ್ಷೆ ಮಾಡುವಾಗ ಸದ್ಗುರುಗಳು ಇಷ್ಟಲಿಂಗ ದಯಪಾಲಿಸುತ್ತಾರೆ. ಈ ಲಿಂಗದಲ್ಲಿ ಶಿವಕಲೆಯ ಸಂಯೋಜನೆಯ ಜತೆಗೆ ಶಿಷ್ಯನ ಪ್ರಾಣಶಕ್ತಿಯನ್ನು ಅದರಲ್ಲಿ ಸಂಯೋಜಿಸುತ್ತಾರೆ. ಅಂತೆಯೇ ಇದಕ್ಕೆ ಪ್ರಾಣಲಿಂಗ ಎಂದು ಕರೆಯುತ್ತಾರೆ.











ಉಜ್ಜಯನಿ ಜಗದ್ಗುರುಗಳ ಗೌರವ ಸ್ವೀಕರಿಸಿ ಕಾಶಿ ಜಗದ್ಗುರುಗಳು ತಮ್ಮ ಮಾಸ್ಕೋ ಪ್ರವಾಸದ ಅನುಭವವನ್ನು ಹಚ್ಚಿಕೊಂಡರು. ಸಿದ್ಧಾಂತ ಶಿಖಾಮಣಿ ಗ್ರಂಥ ಕೇವಲ ವೀರಶೈವ ಗ್ರಂಥವಾಗಿರದೆ ಇಡೀ ಮಾನವ ಧರ್ಮ ಪವಿತ್ರ ಗ್ರಂಥವಾಗಿದೆ. ಈ ಗ್ರಂಥ ವಿಶ್ವಮಾನ್ಯತೆ ಪಡೆಯುವ ದಿನ ದೂರವಿಲ್ಲ. ಈ ಗ್ರಂಥ ಶಿವಾಗಮಗಳ ಆಧಾರದಿಂದ ರಚಿತವಾಗಿದೆ. ಅದರಲ್ಲಿರುವ ಪ್ರತೀ ಶಬ್ದ ವಿಶಾಲ ತಳಹದಿಯ ಅರ್ಥವನ್ನೇ ತಿಳಿಹೇಳುತ್ತದೆ. ಮನುಕುಲದ ಏಳಿಗೆಗಾಗಿ ರಚನೆಗೊಂಡಿರುವ ಈ ಗ್ರಂಥದ ಮಹತ್ವ ಅರಿತು ರಷ್ಯಾದ ಲೇಖಕ ಇದನ್ನು ರಷ್ಯನ್ ಭಾಷೆಗೆ ಅನುವಾದಿಸಿ ಇಂದು ಅದು ಪ್ರಕಟವಾಗಿರುವುದು ಅದರ ಶ್ರೇಷ್ಠತೆಯನ್ನು ತೋರಿಸುತ್ತದೆ ಎಂದು ಹೇಳಿದರು.

ಸಿದ್ಧಾಂತ ಶಿಖಾಮಣಿ ವಿಶ್ವಮಾನ್ಯ : ಶ್ರೀಗಳ ವಿಶ್ವಾಸ ರಷ್ಯಾ ಜನರಲ್ಲಿ ಹೆಚ್ಚುತ್ತಿರುವ ಶಿವಭಕ್ತಿ



ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ರಷ್ಯಾ ದೇಶದಲ್ಲಿ ಇಷ್ಟಲಿಂಗ ದೀಕ್ಷೆ ನೀಡುತ್ತಿರುವುದು

ಉಕ್ರೇನ್ ದೇಶದ ಯುಲಿಯಾರಿಂದ ರಷ್ಯನ್ ಭಾಷೆಗೆ ಅನುವಾದ ಸಿದ್ಧಾಂತ ಶಿಖಾಮಣಿ ರಷ್ಯನ್ ಆವೃತ್ತಿ ಬಿಡುಗಡೆ



ಸಿದ್ದಾಂತ ಶಿಖಾಮಣಿ ಗ್ರಂಥವನ್ನು ಸ್ವಾಮೀಜಿ ಬಿಡುಗಡೆಗೊಳಿಸಿದರು


ಇಷ್ಟಲಿಂಗ ಆತ್ಮಜ್ಯೋತಿಯ ಪ್ರತೀಕ : ಕಾಶೀ ಶ್ರೀ ಅಭಿಮತ







ರಷ್ಯಾ ಭಕ್ತರಿಗೆ ಸಿದ್ಧಾಂತ ಶಿಖಾಮಣಿ ಪಾರಾಯಣವನ್ನು ಜಗದ್ಗುರುಗಳು ಸ್ವತಃ ಹೇಳಿಕೊಡುತ್ತಿರುವುದು.



ಸಿದ್ಧಾಂತ ಶಿಖಾಮಣಿ ವಿಶ್ವಮಾನ್ಯ : ಶ್ರೀ ವಿಶ್ವಾಸ
ರಷ್ಯಾ ಜನರಲ್ಲಿ ಹೆಚ್ಚುತ್ತಿರುವ ಶಿವಭಕ್ತಿ



ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ರಷ್ಯಾ ದೇಶದಲ್ಲಿ ಇಷ್ಟಲಿಂಗ ದೀಕ್ಷೆ ನೀಡುತ್ತಿರುವುದು

ಉಕ್ರೇನ್ ದೇಶದ ಯುಲಿಯಾರಿಂದ ರಷ್ಯನ್ ಭಾಷೆಗೆ ಅನುವಾದ
ಸಿದ್ಧಾಂತ ಶಿಖಾಮಣಿ ರಷ್ಯನ್ ಆವೃತ್ತಿ ಬಿಡುಗಡೆ



ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಸ್ವಾಮೀಜಿ ಬಿಡುಗಡೆಗೊಳಿಸಿದರು

ಈ ಗ್ರಂಥವನ್ನು ಸಮಗ್ರವಾಗಿ ಅಭ್ಯಾಸಮಾಡಿ ಅರ್ಥೈಸಿಕೊಂಡರೆ ಓದುಗನಿಗೆ ಅದರ ಸೂಕ್ಷ್ಮತೆಯ ಅರಿವಾಗುತ್ತದೆ. ಅದನ್ನು ಓದದೆ ಕೆಲವರು ಗೊಂದಲ ಸೃಷ್ಟಿಸುವ ಸಲುವಾಗಿ ಅನಾವಶ್ಯಕ ಟೀಕೆ ಮಾಡಿ ಅವರ ಸಂಕುಚಿತ ದೃಷ್ಟಿಯಿಂದ ಅದನ್ನು ವಿರೋಧಿಸುತ್ತಿದ್ದಾರೆ. ಈ ಸಂಚಿನ ಬಗ್ಗೆ ತಿಳಿದಿದ್ದರಿಂದ ಕಾಶೀ ಜಗದ್ಗುರುಗಳು ಇದರ ಬಗ್ಗೆ ಗಮನ ಕೊಡುವ ಅವಶ್ಯಕತೆಯಿಲ್ಲ. ಏಕೆಂದರೆ ಗ್ರಂಥದ ಮಹತ್ವವನ್ನು ಯಾರೂ ಕಳೆಯಲು ಸಾಧ್ಯವಿಲ್ಲ ಎಂದು ಭರವಸೆ ನೀಡಿದರು.


ಮಾಸ್ಕೋಗೆ ತೆರಳಿ ಅಲ್ಲಿ ಧರ್ಮ ಪ್ರಚಾರ ಕೈಗೊಂಡು, ಅಷ್ಟಾಂಗಯೋಗ ಕೇಂದ್ರಗಳಿಗೆ ಭೇಟಿ ನೀಡಿ, ಇಷ್ಟಲಿಂಗ ಪೂಜೆಯ ಮಹತ್ವವನ್ನು ವಿವರಿಸಿದ್ದು ಈಗ 400ಕ್ಕೂ ಹೆಚ್ಚು ನಾಗರಿಕರು ಇಷ್ಟಲಿಂಗ ದೀಕ್ಷೆ ಪಡೆಯುವ ಪ್ರೇರಣೆ ಹೊಂದಿರುವುದನ್ನು ತಿಳಿಸಿದರು. ರಷ್ಯಾದಲ್ಲಿ ಧರ್ಮ ಸ್ಥಾಪನೆಗೆ ಕಾರಣವಾದ ಇಂಗ್ಲಿಷಿನಲ್ಲಿದ್ದ 'ಚಂದ್ರಜ್ಞಾನಾಗಮ' ಕಾರಣ ಎಂದು ಆ ಘಟನೆಗಳನ್ನೆಲ್ಲಾ ವಿವರಿಸಿ, ಅಲ್ಲೀಗ ಪಂಚಾಚಾರ್ಯ ಶಿವಯೋಗ ಕೇಂದ್ರ ಸ್ಥಾಪಿತಗೊಂಡು ಆ ಮೂಲಕ ಶಿವಯೋಗಾಭ್ಯಾಸ, ಶಿವಲಿಂಗ ಪೂಜೆಯ ಬಗ್ಗೆ ನಿಷ್ಠೆ ಬೆಳೆಯುತ್ತಿದೆ ಎಂದು ಅಲ್ಲಿನ ಕಾರ್ಯಕ್ರಮಗಳ ಬಗ್ಗೆ ವಿವರಣೆ ನೀಡಿದ್ದರು.

ರಷ್ಯಾದಲ್ಲಿ ಯಶಸ್ವಿಯಾದ ಶ್ರೀಗಳ ಧಾರ್ಮಿಕ ಪ್ರಚಾರ
ರಷ್ಯಾ ಪ್ರವಾಸ : ಕಾಶೀ ಶ್ರೀಗೆ ಸ್ವಾಗತ



ಕಾಶೀ ಶ್ರೀಗಳನ್ನು ಸ್ವಾಗತಿಸುತ್ತಿರುವ ಉಜ್ಜಯಿನಿ ಪೀಠದ ಶ್ರೀಗಳು

ಪವಿತ್ರ ಗ್ರಂಥ ಸಿದ್ಧಾಂತ ಶಿಖಾಮಣಿ
ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಬಣ್ಣನೆ



ಸುದ್ದಿಗೋಷ್ಠಿಯಲ್ಲಿ ಸಿದ್ಧಾಂತ ಶಿಖಾಮಣಿ ಗ್ರಂಥ ಕುರಿತು ಕಾಶೀ ಶ್ರೀಗಳು ಮಾತನಾಡಿದರು.

12 ವರ್ಷಗಳಿಗೊಮ್ಮೆ ಅಲಹಾಬಾದ್‌ನಲ್ಲಿ ನಡೆಯುವ ತ್ರಿವೇಣಿ ಸಂಗಮ ಜಗದ್ವಿಖ್ಯಾತಿ ಪಡೆದಿದೆ. ಪ್ರತಿಯೊಬ್ಬರೂ, ಪ್ರತೀ ದೇಶದಲ್ಲೂ ಈ ಕುಂಭಮೇಳದ ಬಗೆಗೆ ಅಚ್ಚರಿ ಹಾಗೂ ಕುತೂಹಲ. ಮಾಘ ಮಾಸದಲ್ಲಿ ನಡುಗುವ ಚಳಿಯಲ್ಲಿ ಲಕ್ಷೋಪಲಕ್ಷ ಜನರು ತ್ರಿವೇಣಿ ಸಂಗಮದಲ್ಲಿ ಮಿಂದೇಳುವ ದೃಶ್ಯಗಳು ಅಚ್ಚರಿ ಮೂಡಿಸುವಂತಹದ್ದು.

ಮಾಘ ಮಾಸದ ಮಕರ ಸಂಕ್ರಮಣದಿಂದ ಆರಂಭಗೊಂಡು ಶಿವರಾತ್ರಿಯಂದು ಮುಗಿಯುವ ಕುಂಭಮೇಳಕ್ಕೆ ಫೆಬ್ರವರಿ 28, 2013ರಲ್ಲಿ ಕಾಶೀ ಜಗದ್ಗುರುಗಳು ಅಲಹಾಬಾದಿನಲ್ಲಿ ತ್ರಿವೇಣಿ ಸಂಗಮವಾಗುವ ದಡದಲ್ಲೇ ಇರುವ ಜಂಗಮವಾಡಿ ಮಠಕ್ಕೆ ಆಗಮಿಸಿ ಮಾಘ ಪೌರ್ಣಿಮೆ ದಿನದಂದು ತ್ರಿವೇಣಿ ಸಂಗಮದಲ್ಲಿ ಮಂಗಲಸ್ನಾನ ಮಾಡಿ ನಂತರ ಆಶೀರ್ವಚನ ನೀಡಿದರು.

ದೇಶ, ಭಾಷೆ, ಧರ್ಮ ಮತ್ತು ಸಂಸ್ಕೃತಿಗಳಿಂದಾಗಿ ಜಗತ್ತನ್ನು ಖಂಡಗಳನ್ನಾಗಿ ಮಾಡಿದೆ. ಖಂಡಗಳ ನಡುವಿನ ಭೇದವನ್ನು ದೂರಮಾಡಿ ಅಕಂಡತೆ ಸಾರಲು ಈ ಕುಂಭಮೇಳದ ವ್ಯವಸ್ಥೆ ಮಾಡಲಾಗಿದೆ. ಬೇರೆ ಬೇರೆ ಮೂಲದಿಂದ ಹರಿದುಬಂದ ಗಂಗಾ, ಯುಮುನಾ, ಗುಪ್ತಗಾಮಿನಿಯಾದ ಸರಸ್ವತಿ ನದಿಗಳು ಈ ಪ್ರಯಾಗ ಕ್ಷೇತ್ರದಲ್ಲಿ ಒಂದಾಗಿ ಸೇರಿ ಮುಂದೆ ಒಂದೇ ನದಿಯಾಗಿ ಹರಿದು ಸಮುದ್ರ ಸೇರುತ್ತದೆ. ಈ ನದಿಗಳ ಸಂಗಮ

ಮಾನವ ಸಮಾಜಕ್ಕೆ ಅಖಂಡತೆಯ ಸಂದೇಶ ಸಾರುತ್ತದೆ. ಆದ್ದರಿಂದ ಧರ್ಮ, ಭಾಷೆ, ದೇಶ ಮುಂತಾದವುಗಳಿಂದ ಭಿನ್ನವಾಗಿರುವ ಮಾನವ ಈ ಸಂಗಮದಲ್ಲಿ ಸ್ನಾನ ಮಾಡಿದ್ದು ಅಖಂಡತೆಯೆಡೆಗೆ ಸಾಗಬೇಕು ಎಂದರು. ಮನುಷ್ಯ ಮನುಷ್ಯರಲ್ಲಿ ಸಾಮರಸ್ಯತೆ ಸಾಧಿಸುವುದು, ಕೊನೆಗೆ ಪರಬ್ರಹ್ಮ ಪರಮಾತ್ಮನಲ್ಲಿ ಸಾಮರಸ್ಯತೆ ಹೊಂದುವುದೇ ಮಾನವಜನ್ಮದ ಗುರಿ ಎಂದು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಕುಂಭಮೇಳದಲ್ಲಿ ಜಗದ್ಗುರುಗಳಿಂದ ರಷ್ಯಾ ದೇಶದಿಂದ ಬಂದ ಭಕ್ತರು ಆಶೀರ್ವಾದ ಪಡೆದರು

ಉದಯವಾಣಿ, 28–2–2013



ಸೊಲ್ಲಾಪುರ : ಮಾಘ ಪೌರ್ಣಿಮೆಯಂದು ತ್ರಿವೇಣಿ ಸಂಗಮದಲ್ಲಿ ಮಂಗಲಸ್ನಾನಕ್ಕೆ ಆಗಮಿಸಿದ್ದ ರಷ್ಯಾದೇಶದ ಭಕ್ತರು ಕಾಶೀ ಜಗದ್ಗುರುಗಳ ಇಷ್ಟಲಿಂಗಪೂಜೆಯಲ್ಲಿ ಪಾಲ್ಗೊಂಡು ಆಶೀರ್ವಾದ ಪಡೆದರು.

28–2–2013ರಲ್ಲಿ ಈ ಕುಂಭಮೇಳದ ಬಗ್ಗೆ ಸಾಕಷ್ಟು ತಿಳಿದಿದ್ದ ರಷ್ಯಾದ ಭಕ್ತರಲ್ಲಿ ಕೆಲವರು ಅಲಹಾಬಾದ್‌ಗೆ ಬಂದು ಕುಂಭಮೇಳದಲ್ಲಿ ಭಾಗವಹಿಸಿ ಜಗದ್ಗುರುಗಳಿಂದ ಆಶೀರ್ವಾದ ಪಡೆದರು.

ಜಗದ್ಗುರುಗಳು ಪೀಠವನ್ನಲಂಕರಿಸಿದ ಮರುವರ್ಷದಿಂದ ಶ್ರೀ ಜಗದ್ಗುರು ವಿಶ್ವಾರಾಧ್ಯ ವಿಶ್ವಭಾರತಿ ಪುರಸ್ಕಾರ ಪ್ರಶಸ್ತಿಯೂ ಶಿವರಾತ್ರಿಯ ಪೂರ್ವದಿನದಂದು ಬಹುದೊಡ್ಡ ವಿದ್ವತ್ ಸಭೆಯನ್ನು ಏರ್ಪಡಿಸಿ ರಾಷ್ಟ್ರಮಟ್ಟದ ಓರ್ವ ವಿದ್ವಾಂಸರಿಗೆ ಅನುಗ್ರಹಿಸುವ ಪದ್ಧತಿಯನ್ನು ಆರಂಭಿಸಿದ್ದಾರೆ. 2013 ಶಿವರಾತ್ರಿಯ ಈ 'ಶ್ರೀ ಜಗದ್ಗುರು ವಿಶ್ವಾರಾಧ್ಯ ವಿಶ್ವಭಾರತಿ ಪುರಸ್ಕಾರ'ವನ್ನು ಶ್ರೀ ಸಿದ್ಧಾಂತ ಶಿಖಾಮಣಿಯನ್ನು ರಷ್ಯನ್ ಭಾಷೆಗೆ ಅನುವಾದ ಮಾಡಿದ ಯುಕ್ರೇನ್ ಯುವತಿ ಯುಲಿಯಾ ಅವರಿಗೆ ಕೊಡುವ ನಿರ್ಧಾರವನ್ನು ಜಗದ್ಗುರುಗಳು ತೆಗೆದುಕೊಂಡರು. ಆ ಪ್ರಕಾರವಾಗಿ ಶಿವರಾತ್ರಿ ಹಿಂದಿನ ದಿನ ಬೃಹತ್‌ಪ್ರಮಾಣದ ವಿದ್ವತ್ ಸಭೆಯಲ್ಲಿ ಯೂಲಿಯಾ (ಗೌರಿ) ಅವರನ್ನು ವಿದ್ವಾಂಸರೆದುರು ವಿಶ್ವಭಾರತಿ ಪುರಸ್ಕಾರವನ್ನು ಪ್ರದಾನ ಮಾಡಿ ಗೌರವಿಸಿದರು. ರಷ್ಯನ್ ಭಾಷೆಯಲ್ಲಿ ಅನುವಾದಗೊಂಡ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಬಹು ಸುಂದರವಾಗಿ ಮುದ್ರಿಸಲು ಧನಸಹಾಯ ಮಾಡಿದ ರಷ್ಯಾದ ಮಾಸ್ಕೋ ನಗರದ ಸ್ಲಾವಾ (ವೀರೇಶ್) ಅವರಿಗೆ "ಸಾಹಿತ್ಯ ಸೇವಾ ಧುರಂಧರಃ" ಎಂಬ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇದುವರೆಗೂ ಭಾರತೀಯ ವಿದ್ವಾಂಸರಿಗೇ ಕೊಡಮಾಡಲಾಗುತ್ತಿದ್ದ ಬಹು ಪ್ರತಿಷ್ಠಿತ "ಶ್ರೀ ಜಗದ್ಗುರು ವಿಶ್ವಾರಾಧ್ಯ ವಿಶ್ವ ಭಾರತಿ ಪುರಸ್ಕಾರ"ವು ವಿದೇಶಿಯ ಪಾಲಾದದ್ದು ಅದರಲ್ಲೂ ಮಹಿಳೆಗೆ ಪ್ರದಾನ ಮಾಡಲಾದದ್ದು ಬಹು ಹೆಮ್ಮೆಯ ವಿಷಯವಾಗಿದೆ.

ಪ್ರಶಸ್ತಿ ಪ್ರದಾನ ಉದಯವಾಣಿ, 10–3–2014




ವಾರಣಾಸಿ : ರಷ್ಯನ್ ಭಾಷೆಗೆ ಶ್ರೀ ಸಿದ್ಧಾಂತ ಶಿಖಾಮಣಿ ಅನುವಾದಿಸಿದ ಯುಕ್ರೇನ್ ದೇಶದ ಕು. ಯೂಲಿಯಾ (ಗೌರಿ) ಅವರಿಗೆ ಕಾಶೀ ಜಗದ್ಗುರುಗಳು ಅಂತರರಾಷ್ಟ್ರೀಯ ಮಟ್ಟದ ಶ್ರೀ ವಿಶ್ವಾರಾಧ್ಯ ವಿಶ್ವಭಾರತಿ ಪ್ರಶಸ್ತಿ ನೀಡಿದರು.


ಅಂದಿನ ಅನೇಕ ದಿನಪತ್ರಿಕೆಗಳು ಈ ವಿಷಯವನ್ನು ವಿವರವಾಗಿ ಫೋಟೋ ಸಹಿತ ಪ್ರಕಟಿಸಿದ್ದರು.

ಕು॥ ಯುಲಿಯಾ ಪಟ್ಟ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಿದ್ದು ವೀರಶೈವರಿಗೆ, ಅದರಲ್ಲೂ ಮಹಿಳೆಯರಿಗೆ ತುಂಬಾ ಸಂತೋಷ ಮತ್ತು ಹೆಮ್ಮೆ ತರುವಂಥದ್ದಾಗಿದೆ.

ಅವರಿಬ್ಬರಿಗೆ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿದ ಮೇಲೆ ಜಗದ್ಗುರುಗಳು ವಿದ್ವತ್ ಸಭೆಯನ್ನುದ್ದೇಶಿಸಿ ಜಗದ್ಗುರು ಪಂಚಾಚಾರ್ಯರಿಂದ ಸ್ಥಾಪನೆಗೊಂಡ ವೀರಶೈವ ಧರ್ಮವು ವಿಶ್ವಧರ್ಮವಾಗಿದೆ. ಜಗದ್ಗುರು ರೇಣುಕಾಚಾರ್ಯರು ಶ್ರೀಲಂಕಾದಲ್ಲಿ ವೀರಶೈವ ತತ್ವಗಳನ್ನು ಪ್ರಚಾರ ಮಾಡಿದ್ದರು. ಹಾಗೆಯೇ ಕಾಶೀಪೀಠದ ಮಲ್ಲಿಕಾರ್ಜುನ ವಿಶ್ವಾರಾಧ್ಯರು ನೇಪಾಳ ದೇಶಕ್ಕೆ ಹೋಗಿ ಅಲ್ಲಿನ ವಿಶ್ವಮಲ್ಲ ರಾಜನಿಗೆ ವೀರಶೈವ ಧರ್ಮದ ತತ್ವಗಳನ್ನು ತಿಳಿಸಿದ್ದರು. ಅದೇ ರಾಜನಿಂದ ಕ್ರಿ.ಶ. 6ನೇ ಶತಮಾನದಲ್ಲಿ ದಾನ ಪಡೆದು ಅಲ್ಲಿನ ಭಕ್ತಪುರದಲ್ಲಿ ಜಂಗಮವಾಡಿ ಮಠ ಸ್ಥಾಪಿಸಿದ್ದರು ಎಂದು ಕಾಶೀಪೀಠದ ಇತಿಹಾಸವನ್ನು ತಿಳಿಸುತ್ತಾ ವಿಶ್ವಬಂಧುತ್ವ ಸಾರುವ ವೀರಶೈವ ಧರ್ಮದ ಸಮಾನತೆಯ ಸಿದ್ಧಾಂತಗಳನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವ ವಿಷಯವನ್ನು ವಿವರಿಸಿ ವೀರಶೈವ ಧರ್ಮದ ಶಿವಯೋಗದ ಬಗ್ಗೆ ರಷ್ಯಾದ ಯೋಗ ಶಿಕ್ಷಕರು ಆಸಕ್ತಿ

ತೋರಿ ಸುಮಾರು 200 ಜನ ಪ್ರತಿನಿತ್ಯ ಇಷ್ಟಲಿಂಗಪೂಜೆ ಜತೆ ಸಿದ್ಧಾಂತ ಶಿಖಾಮಣಿಯ ಅಧ್ಯಯನ ಮಾಡಲು ಮುಖ್ಯ ಕಾರಣಕರ್ತೃಗಳಾದ ಯೋಗಶಿಕ್ಷಕ ದಿನೇಶ ಮತ್ತು ಕು. ಯೂಲಿಯಾ (ಗೌರಿ) ಇಷ್ಟಲಿಂಗ ದೀಕ್ಷೆ ಪಡೆದದ್ದನ್ನು ಹೇಳಿ ಗೌರಿಯು ಸಂಸ್ಕೃತ ಭಾಷೆಯ ಅಧ್ಯಯ ಮಾಡಿ ಸಿದ್ಧಾಂತ ಶಿಖಾಮಣಿಯನ್ನು ರಷ್ಯನ್ ಭಾಷೆಗೆ ಅನುವಾದಿಸಿ ಅಲ್ಲಿನ ಜನರಿಗೆ ವೀರಶೈವ ಧರ್ಮವನ್ನು ಅದರಲ್ಲೂ ಶಿವಯೋಗವನ್ನು ಸುಲಭವಾಗಿ ತಿಳಿಯುವಂತೆ ಮಾಡಿ ಇಂದು ಆ ದೇಶದಲ್ಲಿ ಲಿಂಗದೀಕ್ಷೆ ಪಡೆದವರಿಗೆಲ್ಲಾ ಅನುಕೂಲ ಮಾಡಿಕೊಟ್ಟಿರುವ ಬಗ್ಗೆ ಬಹಳ ಸಂತೋಷದಿಂದ ಸಭೆಗೆ ತಿಳಿಸಿದರು. ಇಂತಹ ಸಾಹಸದ ಕಾರ್ಯ ಮಾಡಿರುವ ಪ್ರತಿಭಾವಂತ, ಸರಳ ಸೌಮ್ಯದ ಸುಸಂಸ್ಕೃತ ಮಹಿಳೆಯಾದ ಕು. ಗೌರಿ (ಯೂಲಿಯಾಗೆ) ವಿಶ್ವಾರಾಧ್ಯ ವಿಶ್ವಭಾರತಿ ಪ್ರಶಸ್ತಿ ನೀಡಿ ಆಕೆಯನ್ನು ಗೌರವಿಸಿದ್ದು ಗೌರಿ ಮಾಡಿರುವ ಮಹತ್ಕಾರ್ಯಕ್ಕೆ ನಿರೀಕ್ಷಿಸದೆ ಪ್ರತಿಫಲ ಸಿಕ್ಕಂತಾಗಿದೆ.






ಈ ಅನುವಾದಿತ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಸುಂದರವಾಗಿ ಮುದ್ರಿಸಿ ಬಿಡುಗಡೆ ಮಾಡಿಸಿದ ಮಾಸ್ಕೋ ನಗರದ ಇಂಜಿನಿಯರ್ ಸ್ಲಾವಾ (ವೀರೇಶ) ಅವರಿಗೂ ಸಾಹಿತ್ಯ ಸೇವಾ ಧುರಂಧರಃ ಎಂಬ ಪ್ರಶಸ್ತಿ ನೀಡಿ ಜಗದ್ಗುರುಗಳು ಆಶೀರ್ವದಿಸಿದರು.

ಪ್ರಶಸ್ತಿ ಸ್ವೀಕರಿಸಿದ ಮೇಲೆ ಯೂಲಿಯಾ ಮಾತನಾಡಿ ವಿದೇಶದಲ್ಲಿ ಸಂಸ್ಕೃತವನ್ನು ಕಲಿಯುವ ಅಭಿರುಚಿ ಹೆಚ್ಚಿರುವ ಬಗೆಗೆ ಹೇಳಿ ಒಂದು ಅಪೂರ್ವ ಸಲಹೆ ನೀಡಿದರು. ವಿದೇಶೀಯರಿಗೆ ಭಾರತದ ಪಂಡಿತರು ಸಂಸ್ಕೃತವನ್ನು ಕಲಿಸಿದರೆ ಅದರಿಂದ ಭಾರತೀಯ ಸಂಸ್ಕೃತಿ ವಿದೇಶದಲ್ಲಿ ಪ್ರಚಾರಗೊಳ್ಳುತ್ತದೆ ಎಂದು ತಿಳಿಸಿ ಸಿದ್ಧಾಂತ ಶಿಖಾಮಣಿಯನ್ನು ಅನುವಾದ ಮಾಡಿದ್ದು ಅತ್ಯಂತ ಸಂತೋಷವನ್ನುಂಟುಮಾಡಿದೆ ಎಂದರು.

ಜಗತ್ತಿನಲ್ಲಿ ಜ್ಞಾನವೇ ಅತ್ಯಂತ ಪವಿತ್ರ : ಕಾಶೀ ಶ್ರೀಗಳು ಆಧ್ಯಾತ್ಮ ಜ್ಞಾನದಿಂದ ಆತ್ಮಶಾಂತಿ

ವಿಜಯ ಕರ್ನಾಟಕ, 11–3–2013

ಈ ವಿದ್ವತ್‌ಸಭೆಯಲ್ಲಿ ಆಧ್ಯಾತ್ಮಜ್ಞಾನದ ಬಗೆಗೆ ಸರ್ವರಿಗೂ ತಿಳಿಸುತ್ತಾ ಜಗತ್ತಿನಲ್ಲಿ ಆಧ್ಯಾತ್ಮ ವಿದ್ಯೆಯೇ ಪವಿತ್ರವಾದುದು. ಅಂತಹ ಜ್ಞಾನಿಯನ್ನು ಜಗತ್ತು ಮಾನ್ಯ ಮಾಡುತ್ತದೆ. ಭೌತಿಕ ಐಶ್ವರ್ಯಗಳು ಕ್ಷಣಕಾಲ ಸುಖಕೊಟ್ಟರೂ ಜೀವನಪರ್ಯಂತ ದುಃಖ ಅನುಭವಿಸಿರುವುದನ್ನು ನೋಡುತ್ತಿರುತ್ತೇವೆ ಎಂದರು. ಶಾಶ್ವತ ಶಾಂತಿಗೆ ಆಧ್ಯಾತ್ಮಜ್ಞಾನವನ್ನೇ ಮೊರೆ ಹೋಗಬೇಕು ಎಂದು ಅನುಭವಪೂರ್ಣ ಮಾತುಗಳನ್ನು ಹೇಳಿದರು. ಅದೇ ಸಭೆಯಲ್ಲಿ ಡಾ॥ ಪ್ರಭುನಾಥ ದ್ವಿವೇದಿ ಅವರಿಗೆ ಪಂ. ವ್ರಜವಲ್ಲಭ ದ್ವಿವೇದಿ ಸ್ಮಾರಕವಾದ 'ಶೈವ ಭಾರತಿ ಪುರಸ್ಕಾರ' ಹಾಗೂ ಡಾ॥ ಜಯಪ್ರಕಾಶ ನಾರಾಯಣ ತ್ರಿಪಾಠಿ ಅವರಿಗೆ ಕೋಡಿಮಠ ಪುರಸ್ಕಾರ ನೀಡಿ ಜಗದ್ಗುರುಗಳು ಅವರಿಬ್ಬರನ್ನು ಗೌರವಿಸಿದರು.



2012ರಲ್ಲಿ ಗ್ರಂಥ ಬಿಡುಗಡೆಗೆ ಆಗಮಿಸಿದ ಜಗದ್ಗುರುಗಳು ಮಾಸ್ಕೋದ ಹೆಸರುವಾಸಿಯಾದ ಆನಿಯನ್ ಸ್ಕ್ವೇರ್‌ನ ಮುಂದೆ ಯೋಗಶಿಕ್ಷಕ ದಂಪತಿಗಳು ಮತ್ತು ಸ್ವಾಮೀಜಿಗಳೊಂದಿಗೆ ನಿಂತಿರುವುದು




ರಷ್ಯಾದ ಪ್ರಮುಖ ವೀಕ್ಷಣಾ ಸ್ಥಳಗಳಲ್ಲಿ ಜಗದ್ಗುರುಗಳು









ಶ್ರೀ ಸಿದ್ಧಾಂತ ಶಿಖಾಮಣಿ
ಪಾರಾಯಣದ ಯಶೋಗಾಥೆ

ಇಳಕಲ್ಲಿನ ಆಧ್ಯಾತ್ಮ ಮಂಡಲಿಯವರು ಅಮರೇಶ್ವರ ಮಠದ ಅಮರೇಶ್ವರ ಸ್ವಾಮಿಗಳನ್ನು ಜೇಷ್ಠ ಮಾಸದ ಕಾರ್ಯಕ್ರಮಗಳಿಗೆ ಪ್ರವಚನ ಮಾಡಲು ಕರೆಯುತ್ತಿದ್ದರು. ಅಮರೇಶ್ವರ ಸ್ವಾಮಿಗಳು ನಿಜಗುಣ ಶಿವಯೋಗಿ ರಚಿತ ಗ್ರಂಥಗಳನ್ನು ಕುರಿತು, ಭಗವದ್ಗೀತೆ ಕುರಿತು ಪ್ರವಚನವನ್ನು ಮಾಡುತ್ತಿದ್ದರು. ಇದೇ ರೀತಿ ಸುಮಾರು 45 ವರ್ಷಗಳ ಕಾಲ ಅಂದರೆ 1925ರಿಂದ 1969ರವರೆಗೆ ಅಮರೇಶ್ವರ ಸ್ವಾಮೀಜಿಗಳು ಲಿಂಗೈಕ್ಯರಾಗುವವರೆಗೂ ಇಳಕಲ್ಲಿನಲ್ಲಿ ಪ್ರವಚನ ಮಾಡುತ್ತಿದ್ದರು. ಆನಂತರ ಅಮರೇಶ್ವರ ಮಠದ ಉತ್ತರಾಧಿಕಾರಿಗಳಾದ ಷ॥ಬ್ರ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಇಳಕಲ್‌ನಲ್ಲಿ ಪ್ರವಚನ ಕಾರ್ಯಕ್ರಮವನ್ನು ಮುಂದುವರೆಸಿದರು.

ಬೆಳಗಿನ ಸಮಯದಲ್ಲಿ ಮೊದಲಿಗೆ 10–15 ನಿಮಿಷಗಳ ಕಾಲ ಭಗವದ್ಗೀತೆ ಪಾರಾಯಣವಾದ ನಂತರ ಭಗವದ್ಗೀತೆ ಕುರಿತು ಉಪನ್ಯಾಸ ಮಾಡುತ್ತಿದ್ದರು. ಸ್ವಾಮಿಗಳೇ ರಾಗವಾಗಿ ಪಾರಾಯಣ ಹೇಳಿಕೊಡುತ್ತಿದ್ದರು. 1970ರವೊಳಗೆ ಸಂಪೂರ್ಣ ಭಗವದ್ಗೀತೆಯ ಪಾರಾಯಣವನ್ನು, ಉಪನ್ಯಾಸವನ್ನು ಸ್ವಾಮೀಜಿ ಮಾಡಿದ್ದರು. ಆ ವೇಳೆಗಾಗಲೇ ದೇವಿ ಪುರಾಣಗಳ ಪಾರಾಯಣ, ಭಗವದ್ಗೀತಾ ಪಾರಾಯಣ, ಶಂಕರಾಚಾರ್ಯ ವಿರಚಿತ ಸೌಂದರ್ಯಲಹರಿ ಪಾರಾಯಣ ಅಲ್ಲಲ್ಲಿ ನಡೆಯುತ್ತಲಿತ್ತು.

ವೀರಶೈವ ಧರ್ಮ ಗ್ರಂಥವಾದ ಶ್ರೀ ಸಿದ್ಧಾಂತ ಶಿಖಾಮಣಿ ಸಂಸ್ಕೃತ ಭಾಷೆಯಲ್ಲಿದ್ದು ಜನಸಾಮಾನ್ಯರಿಗೆ ಎಟುಕುವಂತಿರಲಿಲ್ಲ. ಕೆಲವರಿಗೆ ಅದರಲ್ಲೂ ಹಿರಿಯರಿಗೆ ಸಿದ್ಧಾಂತ ಶಿಖಾಮಣಿ ಹೆಸರು ಗೊತ್ತಿತ್ತೇ ವಿನಃ ಅದರೊಳಗೇನಿದೆ ಎಂದು ತಿಳಿದಿರಲಿಲ್ಲ. 40 ವರ್ಷಗಳ ಹಿಂದೆ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಸಂಸ್ಕೃತದಲ್ಲಿ ಎಂ.ಎ. ವ್ಯಾಸಂಗ ಮಾಡುವ ಕಾಲಕ್ಕಾಗಲೇ ಉತ್ತಮ ವಾಗ್ಮಿಗಳೆನಿಸಿ ಪ್ರವಚನದಲ್ಲಿ ಹೆಸರು ಗಳಿಸಿದ್ದರು. 1970ರಲ್ಲಿ ಕಾಶಿಯಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ಜಂಗಮವಾಡಿ ಮಠದ ಗುರುಕುಲವನ್ನು ಸೇರಿ 1973ರಲ್ಲಿ ಎಂ.ಎ. ಪದವಿ (ವೇದಾಂತಾಚಾರ್ಯ)ಯಲ್ಲಿ ಪ್ರಥಮ ರ್‍ಯಾಂಕ್–ಸ್ವರ್ಣ ಪದಕವನ್ನು ಪಡೆದರು.

ಅಂದಿನ ಪೀಠದ ಜಗದ್ಗುರುಗಳಾಗಿದ್ದ ವಿಶ್ವೇಶ್ವರ ಶಿವಾಚಾರ್ಯರು ಚಂದ್ರಶೇಖರ ಶಿವಾಚಾರ್ಯರಿಗೆ ವ್ಯಾಸಂಗ ಮುಂದುವರೆಸಲು ಹೇಳಿದ್ದಕ್ಕೆ ಚಂದ್ರಶೇಖರ ಶಿವಾಚಾರ್ಯರು ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ಷಟ್‌ದರ್ಶನಗಳು–ಇವುಗಳ ತೌಲನಿಕ ಅಧ್ಯಯನ'–ಎಂಬ ವಿಷಯ ಕುರಿತು ಸಂಶೋಧನೆಯನ್ನು 1974ರಲ್ಲಿ ಆರಂಭಿಸಿದರು. ಈ ಕಾರಣದಿಂದಾಗಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಸಿದ್ಧಾಂತ ಶಿಖಾಮಣಿಯನ್ನು ಬಹು ಆಸಕ್ತಿಯಿಂದ ಓದಲಾರಂಭಿಸಿದರು. ಸಂಸ್ಕೃತ ಶ್ಲೋಕಗಳನ್ನು ಅರ್ಥೈಸುವುದು ಕಠಿಣ ಕೆಲಸ. ಅರ್ಥೈಸಿಕೊಂಡಂತೆಲ್ಲಾ ಶ್ಲೋಕಗಳಲ್ಲಿ ಹೊಮ್ಮುತ್ತಿದ್ದ ಅರ್ಥ ಅಪಾರ. ಈ ಸಂಶೋಧನೆಯ ಸಲುವಾಗಿ ಎಲ್ಲಾ ದರ್ಶನಗಳನ್ನು ತೌಲನಿಕವಾಗಿ ನೋಡಲಾರಂಭಿಸಿದ ಮೇಲೆ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಗೆ ಸಿದ್ಧಾಂತ ಶಿಖಾಮಣಿಯು ಸಮನ್ವಯ ಸೂತ್ರದ ತಳಹದಿ ಮೇಲೆ ರೂಪಗೊಂಡ ಗ್ರಂಥವೆಂಬರಿವಾಯ್ತು. ಈ ಒಂದಂಶವೇ ಸ್ವಾಮಿಗಳನ್ನು ಸಿದ್ಧಾಂತ ಶಿಖಾಮಣಿ ತನ್ನೆಡೆಗೆ ಸೆಳೆದುಕೊಂಡಿತು. ಅದರಲ್ಲಿನ ಷಟ್‌ಸ್ಥಲದ ಭಾಗವಂತೂ ಮನುಷ್ಯನ ಮಾನಸಿಕ ಬೆಳವಣಿಗೆಯನ್ನು ಹಂತಹಂತವಾಗಿ ವಿವರಿಸುತ್ತ ಸ್ವಾಮಿಗಳು ಇನ್ನೂ ಹೆಚ್ಚು ಈ ಗ್ರಂಥದೆಡೆ ಬಾಗುವಂತಾಯಿತು. ಈ ಅಧ್ಯಯನದ ಸಮಯದಲ್ಲಿ ಸ್ವಾಮಿಗಳನ್ನು ಪ್ರವಚನಕ್ಕಾಗಿ ಕರೆದೆಡೆಯಲ್ಲೆಲ್ಲಾ ಈ ಗ್ರಂಥ ಕುರಿತು ಸ್ವಾರಸ್ಯವಾಗಿ ವಿವರಿಸಲಾರಂಭಿಸಿದರು. ಇವರ ಪಿಹೆಚ್.ಡಿ ಪದವಿ ದೊರೆಯುವಷ್ಟರಲ್ಲಿ ಸಿದ್ಧಾಂತ ಶಿಖಾಮಣಿಯನ್ನು ಸ್ವಾಮಿಗಳ ಕರಗತ ಮಾಡಿಕೊಂಡುಬಿಟ್ಟಿದ್ದರು. ಯಾವ ತಯಾರಿಯೂ ಬೇಕಿಲ್ಲದೆ ನಿರರ್ಗಳವಾಗಿ ಗಂಭೀರ ವಾಣಿಯಿಂದ ಬಹು ಸರಳವಾಗಿ ಪ್ರವಚನ ಮಾಡುತ್ತಾ ಎಲ್ಲರ ಗಮನವನ್ನು ಸಿದ್ಧಾಂತ ಶಿಖಾಮಣಿಯ ಕಡೆ ಸೆಳೆಯಲಾರಂಭಿಸಿದರು.

17–11–1989ರಲ್ಲಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಕಾಶೀ ಜ್ಞಾನಸಿಂಹಾಸನದ ಉತ್ತರಾಧಿಕಾರಿಯೆಂದು ಘೋಷಣೆ ಮಾಡಿ ಪಟ್ಟಾಭಿಷಿಕ್ತರಾದ ಮೇಲೆ ಜಗದ್ಗುರುಗಳೆನಿಸಿಕೊಂಡರು.

1970 ರಿಂದ 1989ರವರೆಗೆ 19 ವರ್ಷಗಳ ಕಾಲ ಅಧ್ಯಯನದಲ್ಲಿ ತೊಡಗಿಸಿಕೊಂಡು ಸಿದ್ಧಾಂತ ಶಿಖಾಮಣಿಯನ್ನು ತಮ್ಮದಾಗಿಸಿಕೊಂಡರು. ಸಿದ್ಧಾಂತ ಶಿಖಾಮಣಿಯೆ ಜಗದ್ಗುರುಗಳಾಗಿ ಅಥವಾ ಜಗದ್ಗುರುಗಳೇ ಸಿದ್ದಾಂತ ಶಿಖಾಮಣಿಯಾಗಿ ಒಂದರೊಳಗೊಂದು ಬೆರೆತು ಹೋಗಿ

ಬಿಟ್ಟಿದ್ದರು. ಸಿದ್ಧಾಂತ ಶಿಖಾಮಣಿಯಲ್ಲಿರುವ ತತ್ತ್ವಗಳು ಸಾಕಾರಗೊಂಡು ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ರೂಪ ತಾಳಿದೆ. ಜಗದ್ಗುರುಗಳ ನಡೆ–ನುಡಿ, ಆಚಾರ–ವಿಚಾರಗಳೆಲ್ಲವೂ ಇದೇ ತತ್ತ್ವಗಳನ್ನು ಪ್ರತಿಬಿಂಬಿಸುತ್ತಿವೆ. ಅವರ ಉಸಿರೇ ಸಿದ್ಧಾಂತ ಶಿಖಾಮಣಿಯಾಗಿದೆ. ಇಂತಹ ಮಹಿಮೆಯುಳ್ಳವರೂ, ತಪಸ್ವಿಗಳೂ ಆದ ಜಗದ್ಗುರುಗಳಿಗೆ ಸಿದ್ಧಾಂತ ಶಿಖಾಣಿಯನ್ನು ಜನರ ಬಳಿ ಕೊಂಡೊಯ್ದು ಸರಳವಾಗಿ ವಿವರಿಸುತ್ತಾ ಅದರಲ್ಲಡಗಿರುವ ತತ್ತ್ವಗಳನ್ನು ಬದುಕಿಗೆ ಅಳವಡಿಸಿಕೊಳ್ಳುವ ಬಗ್ಗೆ ಹೇಳತೊಡಗಿದರು.

ಜಗದ್ಗುರುಗಳಿಗೆ ಸಿದ್ಧಾಂತ ಶಿಖಾಮಣಿಯು ಸಮಾಜಮುಖಿಯಾಗಿ ಬಾಳುವ ತಿಳುವಳಿಕೆ ನೀಡುವ ಗ್ರಂಥವಾಗಿದೆ. ಅದು ಭಾವ ಸಮನ್ವಯದೊಂದಿಗೆ ಎಲ್ಲೆಲ್ಲಿಯೂ ಕೂಡಿ ಬಾಳುವ ಜೀವನ ಸಿದ್ಧಾಂತವನ್ನು ಬೋಧಿಸುವ ಶಿವಕಾವ್ಯ ಎಂದೇ ಜಗದ್ಗುರುಗಳು ಹೇಳುವುದು. ಚೂರ್ಣತ್ವದಿಂದ ಪೂರ್ಣತ್ವಕ್ಕೆ ಏರುವ ಶಕ್ತಿಯನ್ನು ಸಿದ್ಧಾಂತ ಶಿಖಾಮಣಿ ಬೋಧಿಸಿದೆ. ನೂರೊಂದು ನೆಲೆಗಳಲ್ಲಿ ಅನುಭಾವ ಹೆಣೆಯುವ ಮೂಲಕ ನಿರಂತರ ಆಧ್ಯಾತ್ಮದ ಸಿಂಚನ ಒದಗಿಸುವ ಮಹಾನ್ ಕಾವ್ಯವಾಗಿದೆ ಜಗದ್ಗುರುಗಳಿಗೆ.

ಇಂತಹ ಸಿದ್ಧಾಂತ ಶಿಖಾಮಣಿಯ ಬಗೆಗೆ ಅದನ್ನು ನಾನಾ ದೃಷ್ಟಿಕೋನಗಳಿಂದ ವಿಶ್ಲೇಷಿಸುತ್ತಾ ಅದರ ಮಹತ್ವವನ್ನು ತಾನರಿತು ಅನುಭವಿಸಿ ಅನುಭಾವಿಯಾಗಿ ಜನರಿಗೆ ಮುಟ್ಟಿಸುವಲ್ಲಿ ಜಯಶೀಲರಾಗಿರುವ ಜಗದ್ಗುರುಗಳ ಬಗ್ಗೆ ಗೌರವ ಹುಟ್ಟುವುದಲ್ಲದೆ, ಇದರ ಮಹತ್ವ ನಮಗೆ ಮತ್ತು ಜನಸಾಮಾನ್ಯರಿಗೆ ಅರಿಯದೆ ಇದ್ದಿದ್ದರೆ ಆಗುತ್ತಿದ್ದ ನಷ್ಟ ಎಷ್ಟೆಂದು ತಿಳಿಯುತ್ತಿದೆ. ಕಾಶೀ ಜಗದ್ಗುರುಗಳ ಅಗಾಧವಾದ ವಿದ್ವತ್ತು, ಸಂಶೋಧನದೃಷ್ಟಿ, ವಿಮರ್ಶನಶಕ್ತಿ, ನಿರುಪಣಾಚಾತುರ್ಯತೆ ಇವೆಲ್ಲ ಗುಣಗಳಿಂದ ಸಿದ್ಧಾಂತ ಶಿಖಾಮಣಿ–ಒಂದು ಮಹತ್ವದ ಆಚಾರ್ಯಕೃತಿಯಾಗಿ ಮೆರೆದಿದೆ. ಸಿದ್ಧಾಂತ ಶಿಖಾಮಣಿ ಸಾಮಾನ್ಯರು ಓದಿದರೆ ಸಾಮಾನ್ಯ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು. ಅದೇ ಜಗದ್ಗುರುಗಳು ತಮ್ಮ ಪ್ರತಿಭೆಯ ಮೂಲಕ ಈ ಆಧುನಿಕ ಕಾಲಕ್ಕೆ ಹೊಂದುವ ರೀತಿಯಲ್ಲಿ ವ್ಯಾಖ್ಯಾನಿಸಿ ಒಂದು ಪ್ರತಿಮೆಯನ್ನಾಗಿ ಕಡೆದು ನಿಲ್ಲಿಸಿದ್ದಾರೆ. ಜಗದ್ಗುರುಗಳ ಪ್ರವಚನದಲ್ಲಿ ತನ್ನದೇ ದೇಶದ ಚರಿತ್ರೆ, ಪುರಾಣಗಳತ್ತ ಸಾಗಿ ವಾಸ್ತವದೊಂದಿಗೆ ಬೆರೆಸಿ ಸತ್ವಯುತವಾಗಿ ಸರಳವಾಗಿ ಮನ ಆಕರ್ಶಿಸುವಂತೆ ಆಶೀರ್ವಚನ ನೀಡುತ್ತಿರುವುದು ನಮ್ಮೆಲ್ಲರ ಸೌಭಾಗ್ಯವೆಂದೇ ಹೇಳಬಹುದು. ಅವರ ಆಶೀರ್ಚನವನ್ನು ಕೇಳಿರುವ ಸಹಸ್ರಾರು ಭಕ್ತರು ತಾವೇ ಅದನ್ನು ಓದುವಂತೆ ಪ್ರಚೋದನೆ ನೀಡಿದೆ. ಹಾಗೆಯೇ ಬದುಕಿನ ಶ್ರೇಯಸ್ಸನ್ನು ಸಾಧಿಸುವ ಮೌಲ್ಯಗಳನ್ನು ನಿತ್ಯ ಬದುಕಿನಲ್ಲಿ ಅಳವಡಿಸುವ ಪ್ರಯತ್ನವೂ ಹಲವರಲ್ಲಿ ನಡೆದಿರುವುದನ್ನು ಕಂಡು ಜಗದ್ಗುರುಗಳು ಹರ್ಷಿತರಾಗಿದ್ದಾರೆ.

ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಪೀಠಾಚಾರ್ಯರಾಗುವ ಪೂರ್ವದಲ್ಲೇ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಅಧ್ಯಯನ ಮಾಡಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿ ಈ ಕುರಿತೇ ಪ್ರವಚನ ಮಾಡುತ್ತ ಬಂದಿದ್ದಾರೆ. ಈ ನಲ್ವತ್ತು ವರ್ಷಗಳಲ್ಲಿ ಕೋಟ್ಯಂತರ ಭಕ್ತಾದಿಗಳು ಜಗದ್ಗುರುಗಳ ಪ್ರವಚನದಿಂದ ಪ್ರಭಾವಿತರಾಗಿದ್ದಾರೆ. ಬರೀ ವೀರಶೈವರಲ್ಲದೆ ಇತರ ಧರ್ಮೀಯರೂ ಪ್ರವಚನ ಕೇಳಲು ಆತುರರಾಗಿರುವುದು ಇವತ್ತಿಗೂ ತಿಳಿದ ವಿಚಾರವಾಗಿದೆ. ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನವು ಧನುರ್ಮಾಸದಲ್ಲಿ ಕಾಶೀ ಜಗದ್ಗುರುಗಳ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮವನ್ನು ಸಂಜೆ 5.30ಕ್ಕೆ ಆರಂಭಿಸುತ್ತಿದ್ದೆವು. ಸಂಗೀತ, ವೇದಘೋಷ, ಪ್ರಾರ್ಥನೆ, ಪ್ರಾಸ್ತಾವಿಕ ಪ್ರವಚನ ಎಲ್ಲಾ ಆದಮೇಲೆ ಸರಿಯಾಗಿ 7 ಗಂಟೆಗೆ ಜಗದ್ಗುರುಗಳ ಆಶೀರ್ವಚನ ಆರಂಭವಾಗುತ್ತಿತ್ತು. 8 ಗಂಟೆಗೆ ಸರಿಯಾಗಿ ಮುಕ್ತಾಯಗೊಳ್ಳುತ್ತಿತ್ತು. ಎಷ್ಟೋ ಜನ ಕಛೇರಿಗೆ ಹೋಗುವವರು ನಮ್ಮ ಬಳಿ ಬಂದು ಜಗದ್ಗುರುಗಳ ಆಶೀರ್ವಚನವನ್ನು ಅರ್ಧಗಂಟೆ ತಡವಾಗಿ ಆರಂಭಿಸಿ; ದಯವಿಟ್ಟು ಅವರ ಒಂದೊಂದು ಮಾತುಗಳನ್ನು ಮಿಸ್ ಮಾಡಿಕೊಳ್ಳಬಾರದೆಂಬುದು ನಮ್ಮೆಲ್ಲರ ಆಸೆ ಎನ್ನುತ್ತಿದ್ದರು. ಹೀಗೆ ಜಗದ್ಗುರುಗಳ ಆಶೀರ್ವಚನಕ್ಕೆ ಯುವಕರು, ಯುವತಿಯರು, ಆಫೀಸರ್‌ಗಳು, ಬೇರೆ ಬೇರೆ ಜನಾಂಗದವರೆಲ್ಲಾ ಆಗಮಿಸಿ ನಿಶ್ಶಬ್ದವಾಗಿ 1 ಗಂಟೆ ಕಾಲ ಕುಳಿತು ಆಲಿಸುವುದನ್ನು ಇವತ್ತಿಗೂ ನೋಡಬಹುದಾಗಿದೆ. ಇದು ಬೆಂಗಳೂರು ಮಾತ್ರವಲ್ಲ ದೇಶದಾದ್ಯಂತ ಅವರು ಹೋದೆಡೆಯೆಲ್ಲಾ ಅವರ ಆಶೀರ್ವಚನಕ್ಕಾಗಿ ಕಾತರದಿಂದ ಕಾಯುತ್ತಿರುತ್ತಾರೆ.

ಪಿಹೆಚ್.ಡಿ. ಮಾಡುವಾಗಿನ ಅಧ್ಯಯನ ಮುಂದೆ ಡಿ.ಲಿಟ್ ಪದವಿಗಾಗಿ ನಡೆಸಿದ ಅಧ್ಯಯನಗಳಿಂದ ದೊರೆತ ಜ್ಞಾನವನ್ನು ಹೋದೆಡೆಯಲ್ಲೆಲ್ಲಾ ಜನತೆಗೆ ಹಂಚುತ್ತಿದ್ದಾರೆ. ಜಗದ್ಗುರುಗಳಿಗೆ ಇಷ್ಟರಿಂದ ತೃಪ್ತಿಯಾಗಲಿಲ್ಲ. ಪ್ರವಚನಗಳನ್ನೆಲ್ಲಾ ಸಂಗ್ರಹಿಹಿ ಕನ್ನಡ, ತೆಲುಗು, ಮರಾಠಿ ಭಾಷೆಗಳಲ್ಲಿ ಗ್ರಂಥರೂಪದಲ್ಲಿ ಹೊರತಂದು ಜನರ ಕೈಗೆಟುಕುವಂತೆ ಮಾಡಿದ್ದಲ್ಲದೆ–ಪ್ರವಚನದ ಕ್ಯಾಸೆಟ್, ಸಿ.ಡಿ.ಗಳನ್ನು ಮಾಡಿಸಿ ಎಲ್ಲರಿಗೂ ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡಿದರು. 2010ರಲ್ಲಿ ಜಗದ್ಗುರುಗಳು ಶಿವಯೋಗದ ಪ್ರಚಾರಕ್ಕಾಗಿ ರಷ್ಯಾ ದೇಶದ ಮಾಸ್ಕೊ ಮತ್ತು ಸೇಂಟ್ ಪೀಟರ್ಸ್‌ಬರ್ಗ್ ನಗರಗಳಲ್ಲಿ 100 ಜನ ಯೋಗ ಶಿಕ್ಷಕರಿಗೆ ಶಿವಯೋಗವನ್ನು ಬೋಧಿಸಿ ಅವರಿಗೆಲ್ಲಾ ಶಿವದೀಕ್ಷೆ ನೀಡಿದ್ದಾರೆ. ಸಿದ್ಧಾಂತ ಶಿಖಾಮಣಿಯನ್ನು ರಷ್ಯನ್ ಭಾಷೆಗೆ ಅನುವಾದಿಸಿ, ರಷ್ಯಾಕ್ಕೆ ಹೋಗಿ ಅಲ್ಲಿ ಅದನ್ನು ಬಿಡುಗಡೆ ಮಾಡಿದರು. ಇಂಟರ್‌ನೆಟ್ ಮೂಲಕ ರಷ್ಯಾದ ಪ್ರತಿಯೊಬ್ಬರಿಗೂ ತಲುಪಿಸುವ ವಿನೂತನ ವ್ಯವಸ್ಥೆಯನ್ನು ಜಗದ್ಗುರುಗಳು ಮಾಡಿದರು. ಅಂತರರಾಷ್ಟ್ರೀಯ ಮಟ್ಟದ ಗ್ರಂಥ ಇದಾಗಿದ್ದರಿಂದ ಸಿದ್ಧಾಂತ ಶಿಖಾಮಣಿಯನ್ನು ಇಂಗ್ಲಿಷ್ ಭಾಷೆಯಲ್ಲಿ ಹೊರತರಲು ಶ್ರೀಗಳವರು ಶಿವಕುಮಾರ ಸ್ವಾಮಿಗಳಿಗೆ ವಹಿಸಿಕೊಟ್ಟರು. ಅಲ್ಲಿಗೂ ಜಗದ್ಗುರುಗಳಿಗೆ ಏನೋ ಕೊರತೆ ಕಾಣಲಾರಂಭಿಸಿತು. ಇದಕ್ಕೆ ಉತ್ತರ ದೊರೆತದ್ದು ಸಿದ್ಧಾಂತ ಶಿಖಾಮಣಿಯಲ್ಲೇ. ಈ ಗ್ರಂಥದ ಕೊನೆಯಲ್ಲಿ ಶ್ರೀ ಶಿವಯೋಗಿ ಶಿವಾಚಾರ್ಯರು ಇದರ ಫಲಶ್ರುತಿಯನ್ನು ಹೇಳುವಾಗ ಯಾರು ಈ ಗ್ರಂಥವನ್ನು ಸ್ವಾಧ್ಯಾಯ ಮಾಡುವರೋ ಅಥವಾ ಪಾರಾಯಣ ಮಾಡುವರೋ ಅವರಿಗೆ ಇಹಲೋಕದ ಭೋಗ ಭಾಗ್ಯಗಳ ಜೊತೆಗೆ ಕೊನೆಗೆ ಸದ್ಗತಿಯೂ ಪ್ರಾಪ್ತವಾಗುವುದೆಂದು ತಿಳಿಸಿದ್ದಾರೆ.

ಭೋಗ ಭಾಗ್ಯಗಳ ಜೊತೆಗೆ ಸದ್ಗತಿಯನ್ನು ಎಲ್ಲರೂ ಪಡೆಯಬೇಕೆಂಬುದೇ ಜಗದ್ಗುರುಗಳ ಆಶಯ. ಇದೇ ಕೊರತೆ ಅವರನ್ನು ಕಾಡುತ್ತಿತ್ತು. ಪ್ರತಿಯೊಬ್ಬರೂ ಈ ಗ್ರಂಥವನ್ನು ಪಾರಾಯಣ ಮಾಡುವಂತೆ ಯೋಜನೆ ರೂಪಿಸಬೇಕೆಂದು ಆ ನಿಟ್ಟಿನಲ್ಲಿ ಆಲೋಚಿಸತೊಡಗಿದಾಗ; ಈಗಾಗಲೇ ಜಗದ್ಗುರುಗಳಿಗೆ ಭಗವದ್ಗೀತೆ ಪಾರಾಯಣ ಮಾಡಿದ ಅನುಭವವಿತ್ತು.

ಜಗದ್ಗುರುಗಳು ಇತ್ತೀಚೆಗೆ ಅನೇಕ ವಿದ್ವಾಂಸರ ಸಹಯೋಗ ಸಹಕಾರದಿಂದ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ಕನ್ನಡ ಭಾವಾರ್ಥದೊಂದಿಗೆ ಸ್ವತಃ ತಾವೇ ಸಿದ್ಧಪಡಿಸಿದರು. ಪಾರಾಯಣಕ್ಕೆ ಸಂಬಂಧಿಸಿದ ನ್ಯಾಸ, ಧ್ಯಾನ ಎಲ್ಲವನ್ನು ಜಗದ್ಗುರುಗಳೇ ಸಂಯೋಜಿಸಿದರು. ಬೆಂಗಳೂರಿನ ವಿಜ್ಞಾನಿ ಡಾ॥ ಎಸ್.ಆರ್. ಸಿದ್ಧಲಿಂಗಪ್ಪನವರು ಈ ಗ್ರಂಥವನ್ನು ಸಂಪಾದಿಸಿದ್ದಾರೆ. ಬೈಬಲ್ ಮಾದರಿಯಲ್ಲಿ ಈ ಪಾರಾಯಣ ಗ್ರಂಥದ ಒಂದುಲಕ್ಷ ಪ್ರತಿಗಳನ್ನು ಮುದ್ರಿಸಿ ಒಂದುನೂರು ಊರುಗಳಲ್ಲಿ ಗ್ರಂಥವನ್ನು ಬಿಡುಗಡೆಗೊಳಿಸುವ ವ್ಯವಸ್ಥಿತ ಯೋಜನೆಯನ್ನು ಹೋದೆಡೆಯಲ್ಲೆಲ್ಲಾ ಹೇಳಲಾರಂಭಿಸಿದರು.

ಜಗದ್ಗುರುಗಳವರ ಅದ್ಭುತ ಆಲೋಚನೆ ಏನೆಂದರೆ ಒಂದು ಬೃಹತ್ ಪಾರಾಯಣ ಅಭಿಯಾನವನ್ನು ಹಮ್ಮಿಕೊಂಡು ಲಕ್ಷಾಂತರ ಜನರಿಗೆ ಇದರ ಪ್ರಯೋಜನ ದೊರಕಿಸಿಕೊಡುವುದಾಗಿದೆ. ಜಗದ್ಗುರುಗಳ ಈ ಯೋಜನೆಗೆ ಅನೇಕ ಶಿವಾಚಾರ್ಯರು, ನಿರಂಜನ ಮೂರ್ತಿಗಳು, ಸಮಾಜದ ಗಣ್ಯರು, ಸದ್ಭಕ್ತರು ಮತ್ತು ವಿವಿಧ ಸಂಘ ಸಂಸ್ಥೆಗಳು ಈ ಗ್ರಂಥ ಮುದ್ರಣಕ್ಕೆ ಮುಂದೆ ಬಂದಿರುವುದು ಜಗದ್ಗುರುಗಳಿಗೆ ಸಂತೋಷವಾಗಿದೆ.

ಜಗದ್ಗುರುಗಳ ಮತ್ತೊಂದು ಮಹದಾಸೆ ಏನೆಂದರೆ–ಮನೆಗಳಲ್ಲಿ, ಮಂದಿರಗಳಲ್ಲಿ ಮತ್ತು ಸಾರ್ವಜನಿಕ ಸಭಾಗೃಹಗಳಲ್ಲಿ ಹೆಚ್ಚುಹೆಚ್ಚು ಸಂಖ್ಯೆಯಲ್ಲಿ ಜನರು ಒಂದೆಡೆ ಸೇರಿ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಪಾರಾಯಣ ಮಾಡುವುದರಿಂದ ಆ ಸಾಮೂಹಿಕ ಧ್ವನಿಗಳಿಂದ ಹೊರಟ ಅಲೆಗಳಿಂದ ಆ ಪರಿಸರವು ಶಿವಮಯವಾಗುವುದು. ಅಲ್ಲಿ ಸಕಾರಾತ್ಮಕವಾದ ಶಕ್ತಿಯು ನಿರ್ಮಾಣಗೊಂಡು ಸರ್ವರ ಮನಸ್ಸಿನ ಮೇಲೆ ಅತ್ಯುತ್ತಮ ಸಾತ್ವಿಕ ಪ್ರಭಾವ ಬೀರುವುದು. ಇದರಿಂದ ವ್ಯಷ್ಠಿ ಹಾಗೂ ಸಮಷ್ಠಿಯಲ್ಲಿ ಸದ್ಭಾವನೆ ಬೆಳೆಯುತ್ತವೆ. ವ್ಯಕ್ತಿ ವ್ಯಕ್ತಿಗಳಲ್ಲಿ ಪರಸ್ಪರ ಪ್ರೀತಿ, ವಾತ್ಸಲ್ಯಗಳು ಬೆಳೆದು ಅದರಲ್ಲಿಯೂ ಮಾನಸಿಕ ಕ್ಲೇಶಗಳು ದೂರವಾಗುವುವು.

ಮನುಕುಲದ ಕಲ್ಯಾಣಕ್ಕಾಗಿ ಶಿವನ ಕರುಣೆಯೇ ಜ್ಞಾನರೂಪವಾಗಿ ಬಂದಂತಿರುವ ಈ ಸಿದ್ಧಾಂತ ಶಿಖಾಮಣಿಯನ್ನು ಸರ್ವರೂ ಆದರದಿಂದ ಆರಾಧಿಸಿ ಪಾರಾಯಣ ಹಾಗೂ ಸ್ವಾಧ್ಯಾಯ ಮಾಡಿ ಭೋಗ ಮೋಕ್ಷಗಳೆರಡನ್ನು ಪಡೆದು ಪುನೀತರಾಗಬೇಕೆಂಬುದೇ ಜಗದ್ಗುರುಗಳ ಮಹದಾಸೆ.

ಮೊಟ್ಟ ಮೊದಲಿಗೆ ಜಗದ್ಗುರುಗಳು ಹೊಸದುರ್ಗಕ್ಕೆ ಆಶೀರ್ವಚನಕ್ಕಾಗಿ ಹೋದಾಗ ಅಲ್ಲಿನ ಕೆಲವು ಹೆಣ್ಣು ಮಕ್ಕಳಿಗೆ ಪಾರಾಯಣವನ್ನು ಜಗದ್ಗುರುಗಳು ಹೇಳಿಕೊಟ್ಟರು. ಆ ಹೆಣ್ಣುಮಕ್ಕಳು ಚೆನ್ನಾಗಿ ಕಲಿತು ಹಾಡಲಾರಂಭಿಸಿದರು.

ಬಹಳ ಚೆನ್ನಾಗಿ ಕಲಿತವರೆಂದರೆ ಬಂಕಾಪುರದ ಹೆಣ್ಣುಮಕ್ಕಳು. ಅವರಾಗಲೇ ಶ್ರೀರುದ್ರವನ್ನು ಕಂಠಪಾಠ ಮಾಡಿಕೊಂಡು ಹೇಳುತ್ತಿದ್ದರು. ಜಗದ್ಗುರುಗಳು ಅವರುಗಳಿಗೆ ಯಮನ್ ರಾಗದ ಕ್ಯಾಸೆಟ್ ಕೊಟ್ಟು ಈ ರಾಗದಲ್ಲಿ ಹಾಡುವುದನ್ನು ಕಲಿಯಿರಿ ಎಂದರು. ಬಂಕಾಪುರದಲ್ಲಿ 30–50 ಜನರ ಗುಂಪೇ ತಯಾರಾಗಿಬಿಟ್ಟಿತು. ಇವರಿಗೆಲ್ಲಾ ಕವಿತಾ ಹಿರೇಮಠ ಎನ್ನುವವರು ಕಲಿಸಿಕೊಟ್ಟರು. ಎಲ್ಲೆಲ್ಲಿ ಗ್ರಂಥ ಮೊಟ್ಟ ಮೊದಲ ಬಾರಿಗೆ ಬಿಡುಗಡೆಯಾಗುವುದೋ ಅಲ್ಲಿಗೆ ಬಂಕಾಪುರದವರನ್ನು ಜಗದ್ಗುರುಗಳು ಕರೆಸಿ ಸಭೆಯಲ್ಲಿ ಪಾರಾಯಣ ಮಾಡಿಸುತ್ತಿದ್ದರು.

ಪಾರಾಯಣ ಗ್ರಂಥ ಬಿಡುಗಡೆ 31–5–2011

ಪಾರಾಯಣ ಗ್ರಂಥ ಮುದ್ರಿತಗೊಂಡು ಬಿಡುಗಡೆಗೆ ಸಿದ್ಧವಾಗಿತ್ತು. ಸಿಂದಗಿ ಪಟ್ಟಣದ ಸಾರಂಗಿ ಮಠದ ಕಾಯಕಯೋಗಿ ಲಿಂ. ಚನ್ನವೀರ ಸ್ವಾಮೀಜಿಯವರ 19ನೇ ಪುಣ್ಯ ಸ್ಮರಣೋತ್ಸವ ಸಪ್ತಾಹದ ನಿಮಿತ್ತ ಪಾರಾಯಣ ಗ್ರಂಥದ ಪಲ್ಲಕ್ಕಿ ಉತ್ಸವ ನಡೆಯಿತು. ಸಾರಂಗ ಮಠದ ಪ್ರಭು ಸಾರಂಗದೇವ ಶಿವಾಚಾರ್ಯರು 20 ಜನ ದಾನಿಗಳ ನೆರವಿನಿಂದ ಪಾರಾಯಣ ಗ್ರಂಥವನ್ನು ಮುದ್ರಣ ಮಾಡಿಸಲು ಮುಂದೆ ಬಂದವರಲ್ಲಿ ಮೊದಲಿಗರಾದರು. ಅದ್ದೂರಿಯಾಗಿ ಜನಪದ ಕಲಾತಂಡ, ಸಕಲ ವಾದ್ಯ ವೈಭವದೊಂದಿಗೆ ಗ್ರಂಥವನ್ನು ಸಿಂಗರಿಸಿದ ಅಡ್ಡಪಲ್ಲಕ್ಕಿಯಲ್ಲಿರಿಸಿ, ಗ್ರಂಥ ಬಿಡುಗಡೆಗಾಗಿ ಆಗಮಿಸಿದ್ದ ಶ್ರೀಶೈಲ ಜಗದ್ಗುರುಗಳು ಡಾ॥ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರೂ, ಕಾಶೀ ಜಗದ್ಗುರು ಡಾ। ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರೂ ಗ್ರಂಥವನ್ನು ಪಲ್ಲಕ್ಕಿಯಲ್ಲಿರಿಸಿ ಪಾದಯಾತ್ರೆ ನಡೆಸಿದರು. ಜಗದ್ಗುರುದ್ವಯರ ಜೊತೆಗೂಡಿ ಅನೇಕ ಶಿವಾಚಾರ್ಯರು ಹರಗುರು ಚರಮೂರ್ತಿಗಳು ಭಾಗವಹಿಸಿದ್ದರು.



ಸಿಂದಗಿ : ಇಲ್ಲಿಯ ಸಾರಂಗಮಠದ ಶ್ರೀ ಚನ್ನವೀರ ಸ್ವಾಮಿಗಳ 19ನೇ ಪುಣ್ಯಸ್ಮರಣೋತ್ಸವ ಸಪ್ತಾಹ ನಿಮಿತ್ತ ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥದ ಪಲ್ಲಕ್ಕಿ ಉತ್ಸವ ಸೋಮವಾರ ನಡೆಯಿತು.

ಗೋಪ್ಯ ಚಿಂತಾಮಣಿ ಶ್ರೀ ಸಿದ್ಧಾಂತ ಶಿಖಾಮಣಿ

ಉದಯವಾಣಿ, 04–06–2011



ಸಾರಂಗ ಮಠದ ಶ್ರೀ ಚನ್ನವೀರಸ್ವಾಮಿಗಳ 19ನೇ ಪುಣ್ಯಸ್ಮರಣೋತ್ಸವ ಸಪ್ತಾಹ ನಿಮಿತ್ತ ರಾಜ್ಯದಲ್ಲಿ ಪ್ರಪ್ರಥಮವಾಗಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥದ ಪಲ್ಲಕ್ಕಿ ಉತ್ಸವ.

ಧರ್ಮ ಗ್ರಂಥವನ್ನು ಅಡ್ಡಪಲ್ಲಕ್ಕಿ ಉತ್ಸವ ಮಾಡಿ–ಉತ್ಸವದಲ್ಲಿ ಜಗದ್ಗುರುಗಳಿಬ್ಬರೂ ಪಾದಯಾತ್ರೆ ನಡೆಸಿರುವುದು ಸಿಂದಗಿ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವು ದಾಗಿದೆ ಎಂದು ಶ್ರೀಶೈಲ ಜಗದ್ಗುರುಗಳು ಹೇಳಿದರು.

ಕಾಶೀ ಜಗದ್ಗುರುಗಳು ಗ್ರಂಥದ ಮಹತ್ವ ವನ್ನು ತಿಳಿಸಿ ಮನುಕುಲಕ್ಕೆ ಅದರಿಂದಾಗುವ ಪ್ರಯೋಜನವನ್ನು ವಿವರಿಸಿ–ಪ್ರತಿಯೊಬ್ಬರೂ ಗ್ರಂಥ ಪಾರಾಯಣ ಮಾಡಿ ಇಷ್ಟಾರ್ಥ ಪೂರೈಸಿ ಕೊಳ್ಳಬೇಕೆಂಬ ಸಂಕಲ್ಪ ನಮ್ಮದಾಗಿದೆ ಎಂದರು.

ಜನಜಾಗೃತಿಗೆ ಶ್ರೀಗಳ ಪಾದಯಾತ್ರೆ

ಭೋಗ–ಮೋಕ್ಷ ಅನುಗ್ರಹಿಸುವ ಗ್ರಂಥ

ಪ್ರತಿಯೊಬ್ಬರೂ ಗ್ರಂಥ ಪಾರಾಯಣ ಮಾಡಿ ಇಷ್ಟಾರ್ಥ ಪೂರೈಸಿಕೊಳ್ಳಲಿ :
ಕಾಶೀ ಜಗದ್ಗುರು
ಸಿದ್ಧಾಂತ ಶಿಖಾಮಣಿ
ಮನುಕುಲದ ಮುಕುಟ

ಪಾದಯಾತ್ರೆಗೆ ಭಕ್ತಿಪೂರ್ವಕ ಸ್ವಾಗತ

ವಿಜಯ ಕರ್ನಾಟಕ, 1–6–2011



ಸಿಂದಗಿಯಲ್ಲಿ ನಡೆದ ವೀರಶೈವ ಸಿದ್ಧಾಂತ ಶಿಖಾಮಣಿ ಪಾರಾಯಣಗ್ರಂಥ ಬಿಡುಗಡೆ ಸಮಾರಂಭವನ್ನು ಶಾಸಕ ರಮೇಶ ಭೂಸನೂರ ಉದ್ಘಾಟಿಸಿದರು.

ಸಿದ್ಧಾಂತ ಶಿಖಾಮಣಿ ದಿವ್ಯ ಗ್ರಂಥ : ಶ್ರೀಗಳು

ಹೀಗೆ ಸಿಂದಗಿಯಲ್ಲಾರಂಭವಾದ ಗ್ರಂಥ ಬಿಡುಗಡೆ ಸಮಾರಂಭ ಎಡಬಿಡದೆ ಇಂದಿಗೂ (28–8–14) ಸಾಗಿದೆ.



18–6–2012 : ಆನೇಕಲ್ ರಾಜಾಪುರ ಸಂಸ್ಥಾನ ಮಠದವರು ಉಜ್ಜಯಿನಿ ಶ್ರೀ ಶೈಲ ಕಾಶೀ ಜಗದ್ಗುರುಗಳನ್ನು ಸಾರೋಟ್ ಮೆರವಣಿಗೆ ನಡೆಸಿ ಸ್ವಾಗತಿಸಿದರು.

ವೀರಶೈವ ಸರ್ವಸ್ವ ಶ್ರೀ ಸಿದ್ಧಾಂತ ಶಿಖಾಮಣಿ


ಸಿಂದಗಿ : ಶ್ರೀ ಸಿದ್ಧಾಂತ ಶಿಖಾಮಣಿಯು ವೀರಶೈವರ ಸರ್ವಸ್ವವಾಗಿದೆ ಎಂದು ಶ್ರೀ ಕಾಶೀ ಜಗದ್ಗುರು ಡಾ। ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ನಗರದ ಸಾರಂಗಮಠದ ಲಿಂ. ಚೆನ್ನವೀರ ಶಿವಾಚಾರ್ಯ ಸ್ವಾಮಿಗಳವರ 19ನೇ ಪುಣ್ಯಸ್ಮರಣೋತ್ಸವದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥ ಕುರಿತು ಅವರು ಆಶೀರ್ವಚನ ನೀಡಿದರು. ವೀರಶೈವ ಧರ್ಮ ದರ್ಶನಗಳ ಸಕಲ ವಿಷಯಗಳನ್ನು ಶಾಸ್ತ್ರೀಯ ಕ್ರಮದಲ್ಲಿ ಪ್ರತಿಪಾದಿಸಿರುವ ಈ ಗ್ರಂಥವು ಸರ್ವರ ಮನೋರಥವನ್ನು ಪೂರ್ಣಮಾಡುವ ಚಿಂತಾಮಣಿಯಾಗಿರುತ್ತದೆ. ಗಣಶ್ರೇಷ್ಠರಾದ ರೇಣುಕ ಭಗವತ್ಪಾದರು ಮುನಿಶ್ರೇಷ್ಠ ಅಗಸ್ತ್ಯ ಮಹರ್ಷಿಗಳಿಗೆ ಬೋಧಿಸಿದ ತತ್ವಗಳು ಈ ಗ್ರಂಥದಲ್ಲಿರುವುದರಿಂದ ಈ ಗ್ರಂಥವು ಎಷ್ಟು ಮಹತ್ವಪೂರ್ಣವಾದುದೆಂದು ಅರ್ಥಮಾಡಿಕೊಳ್ಳಬೇಕು ಎಂದರು.

ಗ್ರಂಥಕಾರರಾದ ಶ್ರೀ ಶಿವಯೋಗಿ ಶಿವಾಚಾರ್ಯರು ಗ್ರಂಥಾರಂಭದಲ್ಲಿ ಯಾರೂ ಯಾವ ಮತಸಿದ್ಧಾಂತವನ್ನೂ ಖಂಡಿಸ ಬಾರದೆಂಬುದಾಗಿ ಹೇಳಿರುವುದರಿಂದ ಸರ್ವ ಧರ್ಮ ದರ್ಶನಗಳ ಸಮನ್ವಯ ಸೂಸುವ ಇದೊಂದು ಮೇರುಕೃತಿ ಎಂಬುದು ತಿಳಿದುಬರುತ್ತದೆ. ಈ ಗ್ರಂಥದಲ್ಲಿ ಪ್ರತಿಪಾದಿಸಲಾದ 101 ಸ್ಥಲಗಳು ಮನುಷ್ಯನ ಮನೋವಿಕಾಸದ ಮಾರ್ಗ ಬೋಧಿಸಿರುವುದರಿಂದ ಇದೊಂದು ಉತ್ಕೃಷ್ಟ ಮಾನವ ಧರ್ಮ ಗ್ರಂಥವೆಂತಲೇ ಹೇಳ ಬಹುದಾಗಿದೆ ಎಂದರು.

ಈ ಗ್ರಂಥದಲ್ಲಿ 44 ಅಂಗಸ್ಥಲಗಳು ಮತ್ತು 57 ಲಿಂಗಸ್ಥಲಗಳು ಪ್ರತಿಪಾದಿತವಾಗಿವೆ. ಷಟ್‌ಸ್ಥಲ ಮಾರ್ಗದಲ್ಲಿ ನಡೆಯುವ ಸಾಧಕನು ಅಂಗಸ್ಥಲದ 44 ಸ್ಥಲಗಳಲ್ಲಿ ಜೀವನ್ಮುಕ್ತಿ ಸ್ಥಿತಿ ತಲುಪುತ್ತಾನೆ. ಮುಂದಿನ 57 ಲಿಂಗಸ್ಥಲಗಳಲ್ಲಿ ಜೀವನ್ಮುಕ್ತಿಯ ವಿಲಕ್ಷಣ ಆನಂದ ಅನುಭವಿಸುತ್ತಾನೆ.

ಹೀಗೆ ಸಾಧಕನಿಗೆ ಒಂದೇ ಜನ್ಮದಲ್ಲಿ ಮುಕ್ತಿ ಕೊಡುವ ಶ್ರೇಷ್ಠ ಸಿದ್ಧಾಂತವು ಈ ಗ್ರಂಥದಲ್ಲಿ ಪ್ರತಿಪಾದಿಸಲ್ಪಟ್ಟಿರುವುದರಿಂದ ಮುಕ್ತಿಯ ಅಪೇಕ್ಷೆಯುಳ್ಳ ಸರ್ವ ಮುಮುಕ್ಷುಗಳು ಈ ಗ್ರಂಥದ ಪಾರಾಯಣ ಹಾಗೂ ಸ್ವಾಧ್ಯಾಯಗಳನ್ನು ಪ್ರತಿನಿತ್ಯ ತಪ್ಪದೇ ಮಾಡಬೇಕು ಎಂದರು.



ಸಾಧಕನಿಗೆ ಒಂದೇ ಜನ್ಮದಲ್ಲಿ ಮುಕ್ತಿ ಕೊಡುವ ಶ್ರೇಷ್ಠ ಸಿದ್ಧಾಂತವು ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥದಲ್ಲಿ ಪ್ರತಿಪಾದಿಸಲ್ಪಟ್ಟಿರುವುದರಿಂದ ಮುಕ್ತಿಯ ಆಪೇಕ್ಷಯುಳ್ಳ ಸರ್ವ ಮುಮುಕ್ಷುಗಳು ಈ ಗ್ರಂಥದ ಪಾರಾಯಣ ಹಾಗೂ ಸ್ವಾಧ್ಯಾಯಗಳನ್ನು ಪ್ರತಿನಿತ್ಯ ತಪ್ಪದೇ ಮಾಡಬೇಕು......

ಶಿವನಿಂದ ಬೋಧಿಸಲ್ಪಟ್ಟ ಕಾಮಿಕಾದಿ ವಾತುಲಾಂತಗಳಾದ 28 ಶಿವಾಗಮಗಳಿಗೆ ಸಿದ್ಧಾಂತಾಗಮಗಳೆಂದು ಕರೆಯುವರು. ಈ ಆಗಮಗಳ ಕೊನೆಯ ಭಾಗದಲ್ಲಿ ವೀರಶೈವ ಸಿದ್ಧಾಂತವು ನಿರೂಪಿತವಾಗಿದೆ. ಅದನ್ನೇ ಶ್ರೀ ಶಿವಯೋಗಿ ಶಿವಾಚಾರ್ಯರು ಸಂಗ್ರಹಿಸಿ ಈ ವಿನೂತನ ಕೃತಿ ರಚಿಸಿದ್ದಾರೆ. ಹೀಗೆ ಸಿದ್ಧಾಂತಾಗಮಗಳ ಕೊನೆಯ ನಿರ್ಣಯವನ್ನು ಇಲ್ಲಿ ಹೇಳಿರುವುದರಿಂದ ಈ ಗ್ರಂಥಕ್ಕೆ 'ಸಿದ್ಧಾಂತ ಶಿಖಾಮಣಿ' ಎಂಬ ಹೆಸರು ಕೊಡಲಾಗಿದೆ ಎಂದು ಹೇಳಿದರು.

ಈ ಗ್ರಂಥ ರಚಿಸಿದ ಶ್ರೀ ಶಿವಯೋಗಿ ಶಿವಾಚಾರ್ಯರು ಅಂದಿನ ವೀರಶೈವ ವಿದ್ವಾಂಸರಿಗೆಲ್ಲ ಶಿಖಾರತ್ನೋಪಾದಿಯಲ್ಲಿದ್ದರು. ಅಂತೆಯೇ ಅವರಿಗೆ ಶಿವಜ್ಞಾನ ಮಹಾಸಿಂಧುವೆಂದು ಕರೆಯುತ್ತಿದ್ದರು. ಈ ಗ್ರಂಥದಲ್ಲಿ ಬರುವ ಶಿವಯೋಗ ಸಮಾಧಿಸ್ಥಲವನ್ನು ಅವಲೋಕಿಸಿದಾಗ ಶ್ರೀ ಶಿವಯೋಗಿ ಶಿವಾಚಾರ್ಯರ ಶಿವಯೋಗ ಸಿದ್ಧಿಯ ಆಳವು ಅರ್ಥವಾಗುವುದು. ಒಂದು ವೇಳೆ ಶ್ರೀ ಶಿವಯೋಗಿ ಶಿವಾಚಾರ್ಯರು ಈ ಧರ್ಮದಲ್ಲಿ ಜನ್ಮ ತಾಳದಿದ್ದರೆ ಈ ಧರ್ಮಕ್ಕೆ ಶಾಸ್ತ್ರೀಯ ಗ್ರಂಥದ ಅಭಾವದ ಕೊರಗು ಸದಾ ಕಾಡುತ್ತಿತ್ತು. ಆ ಕೊರಗು ನೀಗಿಸಿದ ಧವಲಕೀರ್ತಿ ಶ್ರೀ ಶಿವಯೋಗಿ ಶಿವಾಚಾರ್ಯರಿಗೆ ಸಲ್ಲಬೇಕು ಎಂದರು.

ಶ್ರೀ ಶಿವಯೋಗಿ ಶಿವಾಚಾರ್ಯರು ತತ್ವಜ್ಞಾನ ಸಂಪನ್ನರು, ಶಿವಯೋಗಸಿದ್ಧರಷ್ಟೇ ಆಗಿರಲಿಲ್ಲ, ಅವರೊಬ್ಬ ಮಹಾಕವಿಯಾಗಿದ್ದರು. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಬರುವ ಸಾಹಿತ್ಯ ಸೌಂದರ್ಯವನ್ನು ಅವಲೋಕಿಸಿದಾಗ ಶ್ರೀ ಸಿದ್ಧಾಂತ ಶಿಖಾಣಿಯು ಒಂದು ದಾರ್ಶನಿಕ ಮಹಾಕಾವ್ಯವೆಂದು ಪರಿಗಣಿಸಲ್ಪಡುತ್ತದೆ. ಕಾಳಿದಾಸ ಮುಂತಾದ ಕವಿಗಳಂತೆ ಈ ಗ್ರಂಥದಲ್ಲಿ ಶ್ರೀ ಶಿವಯೋಗಿ ಶಿವಾಚಾರ್ಯರ ಕಾವ್ಯ ಗುಣಗಳು ಪ್ರಾಸಾದಿಕ ಗುಣದಿಂದ ಕೂಡಿದೆ. ಈ ಗ್ರಂಥದಲ್ಲಿ ಪ್ರಸಂಗಾನುಸಾರವಾಗಿ ಉಪಮಾ, ಮಾಲೋಪಮಾ, ಪ್ರತಿವಸ್ತು ಉಪಮಾ, ಪರಿಕರ ಮತ್ತು ರೂಪಕಾಲಂಕಾರಗಳು ಮನೋಜ್ಞವಾಗಿ ಪ್ರಯೋಗಿಸಲ್ಪಟ್ಟಿವೆ. ಈ ಗ್ರಂಥದ ಮೊದಲಿನ ನಾಲ್ಕು ಪರಿಚ್ಛೇದಗಳು ಉತ್ಕೃಷ್ಟ ಕಾವ್ಯಗುಣಗಳಿಂದ ಓತಪ್ರೋತವಾಗಿವೆ.


ಹೀಗೆ ದಾರ್ಶನಿಕ ಮಹಾಕಾವ್ಯವಾಗಿರುವ ಈ ಸಿದ್ಧಾಂತ ಶಿಖಾಮಣಿಯನ್ನು ಸದ್ಯ ಪಾರಾಯಣ ಪದ್ಧತಿಗೆ ಅಳವಡಿಸಲಾಗಿದೆ. ಪಾರಾಯಣಕ್ಕೆ ಸಂಬಂಧಿಸಿದ ನ್ಯಾಸ, ಧ್ಯಾನಾದಿಗಳು ಇದರಲ್ಲಿ ಸಂಯೋಜಿಸಲಾಗಿದ್ದು ಅದಕ್ಕೆ ಸಂಸ್ಕೃತ ವೀರಶೈವ ವಿದ್ವತ್ ಪರಿಷತ್ತಿನಲ್ಲಿ ಸಮ್ಮತಿ ಸಹ ದೊರೆತಿದೆ. ಕಾರಣ ವೀರಶೈವನು ಈ ಪಾರಾಯಣ ಗ್ರಂಥವನ್ನು ಸ್ವಾಗತಿಸಿ ಸರ್ವರೂ ಪ್ರತಿನಿತ್ಯ ಇಷ್ಟಲಿಂಗ ಪೂಜಾ ಸಮಯದಲ್ಲಿ ಈ ಗ್ರಂಥದ ಪಾರಾಯಣ ಸ್ವಾಧ್ಯಾಯಗಳನ್ನು ಮಾಡಿ ಭೋಗ ಮೋಕ್ಷಗಳೆರಡನ್ನೂ ಪಡೆದುಕೊಳ್ಳಬೇಕೆಂಬುದಾಗಿ ಜಗದ್ಗುರುಗಳು ಆಶೀರ್ವಚನದಲ್ಲಿ ತಿಳಿಸಿದರು.

ಹೀಗೆ ವೀರಶೈವರ ಸರ್ವಸ್ವವಾದ ಈ ಶಾಸ್ತ್ರ ಗ್ರಂಥ ಚೆನ್ನಾಗಿ ಅಭ್ಯಾಸ ಮಾಡಿದರೆ ಬಸವಾದಿ ಶರಣರ ಅನುಭಾವ ಸಾಹಿತ್ಯ ವಚನ ಶಾಸ್ತ್ರವನ್ನು ಸರಿಯಾಗಿ ಅರ್ಥೈಸಲು ಸುಲಭವಾಗುತ್ತದೆ. ಒಬ್ಬ ಮನುಷ್ಯನಿಗೆ ಪರಿಪೂರ್ಣ ತಿಳಿವಳಿಕೆ ಬರಬೇಕಾದರೆ ಶಾಸ್ತ್ರ ಹಾಗೂ ಅನುಭಾವಗಳ ಸಮನ್ವಯವೂ ಅತ್ಯವಶ್ಯ. ಸಮಗ್ರ ವೀರಶೈವರ ಪುಣ್ಯವೋ ಏನೋ ಎಂಬುವ ಹಾಗೆ ಇಂದು ಶ್ರೀ ಸಿದ್ಧಾಂತ ಶಿಖಾಮಣಿಯಂತೆ ಶ್ರೇಷ್ಠ ಶಾಸ್ತ್ರಗ್ರಂಥವು ಮತ್ತು ಬಸವಾದಿ ಶಿವಶರಣರ ವಿಪುಲ ಅನುಭಾವ ಸಾಹಿತ್ಯವು ಇಂದು ನಮಗೆ ಉಪಲಬ್ಧವಾಗಿವೆ. ಇವೆರಡು ಹಾಲಿಗೆ ಜೇನನ್ನು ಬೆರೆಸಿದಂತೆ ಪರಸ್ಪರ ಪೂರಕಗಳಾಗಿವೆ. ಇವೆರಡರಲ್ಲಿ ಭೇದ ಮಾಡದೆ ಸರ್ವರೂ ಸಮನ್ವಯದಿಂದ ಅಧ್ಯಯನ ಮಾಡಿ ಸಮಾಜದಲ್ಲಿ ಸಾಮರಸ್ಯ ಮೂಡಿಸಬೇಕೆಂಬುದಾಗಿ ಶ್ರೀಗಳು ಆಶೀರ್ವಚನದಲ್ಲಿ ತಿಳಿಸಿದರು.

5–7–11 :
ಸ್ವಾಧ್ಯಾಯ–ಪ್ರವಚನ ಕರ್ತವ್ಯವಾಗಲಿ

ಶ್ರೀ ಸಿದ್ಧಾಂತ ಶಿಖಾಮಣಿ ಒಂದು ಮಹಾಮಂತ್ರ– ಕಾಶೀ ಶ್ರೀಗಳು

'ಸಿದ್ಧಾಂತ ಶಿಖಾಮಣಿ' ಗ್ರಂಥ ಬಿಡುಗಡೆ
ಪ್ರಜಾವಾಣಿ, 18–6–2012



ಆನೇಕಲ್ ತಾಲ್ಲೂಕಿನ ರಾಜಾಪುರ ಸಂಸ್ಥಾನ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಬಿಡುಗಡೆ ಮಾಡಿದರು. ವಿಧಾನ ಪರಿಷತ್ ಸದಸ್ಯ ದಯಾನಂದರೆಡ್ಡಿ, ರಾಜಾಪುರ ಸಂಸ್ಥಾನಮಠದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ವಿಭೂತಿಪುರ ಮಠದ ಶ್ರೀಗಳು, ಆನೇಕಲ್ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ. ಜಯಣ್ಣ, ಕಾಂಗ್ರೆಸ್ ಮುಖಂಡ ಎಚ್.ಪಿ. ರಾಜಗೋಪಾಲರೆಡ್ಡಿ ಮತ್ತಿತರರು ಚಿತ್ರದಲ್ಲಿದ್ದಾರೆ.

ಕಲಬುರ್ಗಿಯಲ್ಲಿ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮ ನಡೆಯುತ್ತಿರುವಾಗ ಜಗದ್ಗುರುಗಳ ಪಾರಾಯಣ ಗ್ರಂಥ ಬಿಡುಗಡೆಯಾದ ನಂತರ ತಮ್ಮ ಆಶೀರ್ವಚನದಲ್ಲಿ ಪಾರಾಯಣ ಗ್ರಂಥದ ಮಹತ್ವವನ್ನು ವಿವರಿಸುತ್ತಾ ಪಾರಾಯಣ ಗ್ರಂಥವೆಂದರೆ ಪುನಃ ಪುನಃ ಆವೃತ್ತಿ ಶಾಸ್ತ್ರದಲ್ಲಿ ಮಂತ್ರದ ಆವೃತ್ತಿಯನ್ನು ಮಾಡಲು ಆದೇಶಿಸಿದೆ. ಪಂಚಾಕ್ಷರಿ, ಗಾಯತ್ರಿ, ಮೃತ್ಯುಂಜಯ ಹೇಗೆ ಆವೃತ್ತಿ ಮಂತ್ರವೋ ಅದರಂತೆ ಧರ್ಮ ಗ್ರಂಥಗಳೂ ಸಹ ಮಂತ್ರ ಸ್ವರೂಪಗಳಾಗಿರುವುದರಿಂದ ಅವುಗಳನ್ನು ಪಾರಾಯಣ ಸ್ವರೂಪ ಆವೃತ್ತಿಯನ್ನು ಮಾಡಬೇಕು. ಭಗವದ್ಗೀತೆ ಹೇಗೆ ಮಹಾಮಂತ್ರವೆನಿಸಿದೆಯೋ ಅದರಂತೆಯೇ ಶ್ರೀ ಸಿದ್ಧಾಂತ ಶಿಖಾಮಣಿ ಸಹ ಒಂದು ಮಹಾಮಂತ್ರವೆನಿಸಿದೆ. ಶ್ರೀ ಶಿವಯೋಗಿ ಶಿವಾಚಾರ್ಯರ ಶ್ರೀ ಸಿದ್ಧಾಂತ ಶಿಖಾಮಣಿ ಎಂಬ ಮಹಾಮಂತ್ರದಲ್ಲಿ 1403 ಶ್ಲೋಕಗಳಿವೆ. ಅಂತೆಯೇ ಈ ಮಂತ್ರದಲ್ಲಿ 44896 ಅಕ್ಷರಗಳಿವೆ. ಇಷ್ಟು ಅಕ್ಷರಗಳಿರುವುದರಿಂದಲೇ ಇದಕ್ಕೆ ಮಹಾ ಮಂತ್ರವೆಂದು ಕರೆಯಲಾಗಿದೆ. ಇದನ್ನು ಪಾರಾಯಣ ಸ್ವರೂಪ ಜಪಮಾಡಿ ಸರ್ವರೂ ಭೋಗ ಮೋಕ್ಷಗಳನ್ನು ಪಡೆದುಕೊಳ್ಳಬೇಕೆಂದು ಹೇಳಿ ಮಹಾಮಂತ್ರದ ಸ್ವರೂಪವನ್ನು ತಿಳಿಸಿದರು.

ಕಲಬುರ್ಗಿಯ ಸಿದ್ಧಾಂತ ಶಿಖಾಮಣಿ ಪಾರಾಯಣ ಅಭಿಯಾನದಲ್ಲಿ ಮಹಿಳಾ ಘಟಕದ ಮಹಿಳೆಯರು ಪಾರಾಯಣ ನಡೆಸಿದ್ದಲ್ಲದೆ– ಪಾರಾಯಣ ಗ್ರಂಥ ಖರೀದಿಯಲ್ಲೂ ಮುಂದಾಗಿದ್ದನ್ನು ನೋಡಿ ಜಗದ್ಗುರುಗಳಿಗೆ ಸಂತೋಷವಾಯಿತು.

ಧರ್ಮದಲ್ಲಿ ಮಹಿಳೆಯರಿಗೂ ಸಮಪಾಲು : ಕಾಶೀ ಶ್ರೀಗಳು
ಉದಯವಾಣಿ, 8–7–2011



ಸೋಗಸನಗೇರಿಯ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಸಿದ್ಧಾಂತ ಶಿಖಾಮಣಿ ವಚನ ಸಾಹಿತ್ಯ ಪ್ರವಚನ ವೇದಿಕೆಯಲ್ಲಿ ಶ್ರೀ ಕಾಶೀ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಪಾರಾಯಣ ಗ್ರಂಥ ವಿತರಿಸಲಾಯಿತು.

ಆನೆ ಅಂಬಾರಿ ಮೇಲೆ ಸಿದ್ಧಾಂತ ಶಿಖಾಮಣಿ ಗ್ರಂಥದ ಮೆರವಣಿಗೆ





ಗದಗ್‌ನಲ್ಲಿ ಪಾರಾಯಣ ಗ್ರಂಥ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಕಾಶೀ ಜಗದ್ಗುರುಗಳು ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ನಿತ್ಯವೂ ಪಾರಾಯಣ ಮಾಡಿ ಬುದ್ಧಿಯಲ್ಲಿನ ದ್ವೈತ ಭಾವನೆಗಳನ್ನು ದೂರ ಮಾಡಿಕೊಂಡು ಸರ್ವರೊಂದಿಗೆ ಸಮನ್ವಯದಿಂದ ಬದುಕುವ ಕಲೆ ಮೈಗೂಡಿಸಿಕೊಳ್ಳಬೇಕೆನ್ನುವುದು ಸಿದ್ಧಾಂತ ಶಿಖಾಮಣಿಯ ಮೂಲ ಉದ್ದೇಶ ಎಂದು ತಿಳಿಸಿದರು.

ಗದಗ್ ನಗರದ ಸುಪ್ರಸಿದ್ಧ ಮುದ್ರಕರೂ, ಪ್ರಕಾಶಕರೂ ಆದ ಪಿ.ಸಿ. ಶಾಬಾದಿ ಮಠ ಅವರು ಲಿಂ. ಶಿವಯ್ಯನವರು ಶಾಬಾದಿಮಠ ಇವರ ನೆನಪಿನಲ್ಲಿ ಒಂದು ಸಾವಿರ ಗ್ರಂಥಗಳನ್ನು ಮುದ್ರಿಸಿ ಇಂದು ಗ್ರಂಥ ದಾಸೋಹ ಮಾಡಿದ್ದಾರೆ.

ಶ್ರೀ ಸಿದ್ಧಾಂತ ಶಿಖಾಮಣಿ ಮೋಕ್ಷ ನೀಡುವ ಗ್ರಂಥ



ಕನ್ನಡ ಭಾಷೆಗೆ ಅನುವಾದಿಸಲ್ಪಟ್ಟ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ಬೆಂಗಳೂರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕುಲಸಚಿವ ಡಾ. ಚಂದ್ರಮೌಳಿ ನಾಯ್ಕರ ಬಿಡುಗಡೆ ಮಾಡಿದರು. ಕಾಶೀ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಸಂಸದ ಶಿವಕುಮಾರ ಉದಾಸಿ ಉಪಸ್ಥಿತರಿದ್ದರು.

ನಿರಂತರ ಗ್ರಂಥ ಪಾರಾಯಣದಿಂದ ಜೀವನ ಮುಕ್ತಿ : ಚಂದ್ರಶೇಖರ ಶ್ರೀಗಳವರು

ಜೀವನ ಸಿದ್ಧಾಂತವನ್ನು ಬೋಧಿಸುವ ಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿಯು-ಕಾಶೀ ಶ್ರೀಗಳು

14-12-2011 : ತಡಕೋಡ ಗ್ರಾಮದಲ್ಲಿ ಪಾರಾಯಣ ಗ್ರಂಥವನ್ನು ಮೆರವಣಿಗೆ ಮಾಡಿ ಬಿಡುಗಡೆ ಮಾಡಲಾಯಿತು.

ಪ್ರಜಾವಾಣಿ 23-12-2011

ಶಿಗ್ಗಾವಿ ತಾ॥ ಬಂಕಾಪುರದ ಹುಚ್ಚೇಶ್ವರ ಮಹಾಮಠದಲ್ಲಿ 7ನೇ ವರ್ಷದ ಇಷ್ಟಲಿಂಗಪೂಜೆ, ಸಿದ್ಧಾಂತ ಶಿಖಾಮಣಿ ಮತ್ತು ಭಗವದ್ಗೀತಾ ಪ್ರವಚನ ಹಾಗೂ ಶಿವದೀಕ್ಷಾ ಕಾರ್ಯಕ್ರಮವನ್ನು ಉಜ್ಜಯಿನಿ ಪೀಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಕಾಶೀಪೀಠದ ಡಾ. ಚಂದ್ರಶೇಖರ ಶಿವಾಚಾರ್ಯರು ಇತರರು ಚಿತ್ರದಲ್ಲಿರುವರು.



ಬಂಕಾಪುರ (ಶಿಗ್ಗಾವಿ ತಾ॥)ದಲ್ಲಿ ಉಜ್ಜಯಿನಿ ಪೀಠದ ನೂತನ ಜಗದ್ಗುರುಗಳಾದ ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯರ ಪುರ ಪ್ರವೇಶ, ಅಡ್ಡಪಲ್ಲಕ್ಕಿ ಮಹೋತ್ಸವದ ಜೊತೆಗೆ ಸಿದ್ಧಾಂತ ಶಿಖಾಮಣಿ ಗ್ರಂಥದ ಅಂಬಾರಿ ಮೆರವಣಿಗೆ ಉತ್ಸಾಹ, ಭಕ್ತಿಯಿಂದ, ಸಂಭ್ರಮದಿಂದ ಆಚರಿಸಿದ್ದು ಜಗದ್ಗುರುಗಳಿಗೆ ಸಂತೋಷ ತಂದಿತು.



ಸಿದ್ಧಾಂತ ಶಿಖಾಮಣಿ ಮನುಕುಲದ ಚಿಂತಾಮಣಿ

ವಿಜಯ ಕರ್ನಾಟಕ, 28–12–2011

ಹುಬ್ಬಳ್ಳಿ ನವನಗರದ ಶ್ರೀ ಚಿಕೇನಕೊಪ್ಪ ಚನ್ನವೀರ ಶರಣರ ಆಶ್ರಮದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ಡಾ. ಪಂಚಾಕ್ಷರಿ ಹಿರೇಮಠ ಲೋಕಾರ್ಪಣೆಗೊಳಿಸಿದರು.

29–12–2011 – ಪಾರಾಯಣ ಗ್ರಂಥ ಲೋಕಾರ್ಪಣೆಯಾದ ನಂತರ ಜಗದ್ಗುರುಗಳು ಧರ್ಮವೆಂದರೆ ಕೇವಲ ಜಾತಿ, ಪಂಥಗಳಲ್ಲ, ಡಾಂಭಿಕ ಧರ್ಮಾಚರಣೆಗಳಲ್ಲ. ಧರ್ಮವೆಂದರೆ ಸನ್ಮಾರ್ಗದಲ್ಲಿ ನಡೆಯುವುದು ಎಂದು ಆಶೀರ್ವಚನದಲ್ಲಿ ತಿಳಿಸಿದರು. ಪಾರಾಯಣ ಗ್ರಂಥದ ಜೊತೆಗೆ ಧ್ವನಿಸುರುಳಿಯನ್ನು ಬಿಡುಗಡೆ ಮಾಡಲಾಯಿತು. ಯಾದಗಿರಿಯಲ್ಲಿ ಪಾರಾಯಣ ಗ್ರಂಥ ಬಿಡುಗಡೆ ಮುನ್ನ ಬೃಹತ್ ಮೆರವಣಿಗೆ ಮಾಡಲಾಯ್ತು.




ವಿಜಯ ಕರ್ನಾಟಕ, 31–12–2011

ಯಾದಗಿರಿಯಲ್ಲಿ ಶುಕ್ರವಾರ ನಡೆದ ಧರ್ಮಸಭೆಯಲ್ಲಿ ಕಾಶೀ ಜಗದ್ಗುರು ಸಿದ್ಧಾಂತ ಶಿಖಾಮಣಿ ಪಾರಾಯಣ ಧರ್ಮ ಗ್ರಂಥ ಬಿಡುಗಡೆ ಮಾಡಿದರು. ಶಾಸಕ ಮಾಲಕರಡ್ಡಿ, ಡಾ. ಮುದ್ನಾಳ, ಬಸವರಾಜ ಜೈನ್, ನಾಗನಗೌಡ ಕಂದಕೂರ, ಶ್ರೀನಿವಾಸರೆಡ್ಡಿ ಚೆನ್ನೂರ ಇದ್ದರು.

ಯಾದಗಿರಿಯಲ್ಲಿ 25 ಸಾವಿರದ ಪ್ರತಿಗಳನ್ನು ಬಿಡುಗಡೆ ಮಾಡಲಾಯಿತು. ಜಗದ್ಗುರುಗಳು ಸಿದ್ಧಾಂತ ಶಿಖಾಮಣಿಯನ್ನು ನಿತ್ಯ ಓದುವುದರಿಂದ ಮನೋಬಲ ವಿಕಾಸಕೊಂಡು ಆರೋಗ್ಯಕರ ಸಮಾಜ ನಿರ್ಮಾಣವಾಗುವುದು. ಸಂಕುಚಿತ ಮನೋಭಾವದಿಂದ ಬಿಡುಗಡೆ ಹೊಂದಿ ಆತ್ಮಶುದ್ಧವಾಗುತ್ತದೆ ಎಂದು ಉಪದೇಶ ಮಾಡಿದರು.

9–1–2012



9–1–2012 : ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನದಲ್ಲಿ ಪಾರಾಯಣ ಗ್ರಂಥವನ್ನು ಕೇರಳ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಾಧೀಶ ಶ್ರೀ ವಿ.ಎಸ್. ಮಳಿಮಠ ಅವರಿಂದ ಬಿಡುಗಡೆ ಮಾಡಲಾಯಿತು. ಜಗದ್ಗುರುಗಳಿಗೆ 1 ಲಕ್ಷ ಪ್ರತಿ ಬಿಡುಗಡೆ ಯಾದ ನಂತರ, ರಾಜ್ಯದ ಒಂದು ಪ್ರದೇಶದಲ್ಲಿ ಲಕ್ಷಾಂತರ ಜನರನ್ನು ಕೂಡಿಸಿ ಬೃಹತ್ ಕಾರ್ಯಕ್ರಮ ನಡೆಸುವ ಆಲೋಚನೆಯೂ ಇದೆ.



ಬಂಕಾಪುರದ ಮಹಿಳೆಯರು ಒಂದು ದಿನ ಮತ್ತು ವಿಭೂತಿಪುರದ ಉಚಿತ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಒಂದು ದಿನ ಪಾರಾಯಣವನ್ನು ಮಾಡಿದ್ದು ವಿಶೇಷ.

17–1–2012

ಹುಮನಾಬಾದ್‌ನಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ಹಳದಿ ವಸ್ತ್ರದಲ್ಲಿ ಕಟ್ಟಿ ಶಿರದ ಮೇಲೆ ಹೊತ್ತ ನೂರಾರು ಮಹಿಳೆಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಉದಯವಾಣಿ, 17–1–2012



ಹುಮನಾಬಾದ : ಕಾಶೀ ಜಗದ್ಗುರುಗಳು ಹಾಗೂ ಸಿದ್ಧಾಂತ ಶಿಖಾಮಣಿ ಗ್ರಂಥ ಮೆರವಣಿಗೆ ನಡೆಯಿತು.

ಲಕ್ಷ ದೀಪೋತ್ಸವ, ಸಿದ್ಧಾಂತ ಶಿಖಾಮಣಿ ಗ್ರಂಥ ಬಿಡುಗಡೆ ಕಾರ್ಯಕ್ರಮ

ಭಕ್ತಿಯಿಂದ ಕೆಲಸ ಮಾಡಿದಲ್ಲಿ ಯಶಸ್ಸು : ಕಾಶಿಪೀಠಶ್ರೀ

ಪ್ರಜಾವಾಣಿ, 17–1–2012



ಹುಮನಾಬಾದ್ ವೀರಭದ್ರೇಶ್ವರ ದೇವಸ್ಥಾನ ಮುಂಭಾಗದಲ್ಲಿ ಅನೀಲಕುಮಾರ ಚಂದ್ರಶೆಟ್ಟಿ ಪಾಟೀಲ ಪರಿವಾರದ ವತಿಯಿಂದ ನಡೆಸಲಾದ ಲಕ್ಷದೀಪೋತ್ಸವದ ಒಂದು ನೋಟ.

21–1–2012 : ಕಾದರವಳ್ಳಿ ಗ್ರಾಮದಲ್ಲಿ ಜಗದ್ಗುರುಗಳು ಪಾರಾಯಣ ಗ್ರಂಥ ಬಿಡುಗಡೆ ಮಾಡಿದರು.

22–1–2012 – ಚಿಕ್ಕೋಡಿ ತಾ॥ ಯಡೂರಿನಲ್ಲಿ ಪಾರಾಯಣ ಗ್ರಂಥವನ್ನು ಒಂಟೆ ಕುದುರೆಗಳ ಮೇಲೆ ಇಟ್ಟು ಮೆರವಣಿಗೆ ಮಾಡಿದ್ದಲ್ಲದೆ, ಊರಿನ ಸುಮಂಗಲಿಯುರ ಕುಂಭಗಳ ಬದಲು ಪಾರಾಯಣ ಗ್ರಂಥವನ್ನು ತಲೆ ಮೇಲೆ ಹೊತ್ತು ಸಾಗಿದ್ದು ವಿಶೇಷವಾಗಿತ್ತು. ಉಜ್ಜಯಿನಿ ಹಾಗೂ ಕಾಶೀ ಜಗದ್ಗುರುಗಳು ಸಾನ್ನಿಧ್ಯ ವಹಿಸಿದ್ದರು.



ಸಿದ್ಧಾಂತ ಶಿಖಾಮಣಿ ಅಡ್ಡಪಲ್ಲಕ್ಕಿ ಉತ್ಸವ

ಸುಕ್ಷೇತ್ರ ಯಡೂರಿನ ಜಾತ್ರಾಮಹೋತ್ಸವ ಅಂಗವಾಗಿ ರವಿವಾರ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥೋತ್ಸವ ಹಾಗೂ ಶ್ರೀಮದುಜ್ಜಯನಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಗ್ರಂಥಹೊತ್ತ ಸುಮಂಗಲೆಯರು.

25–1–2012 : ಬಳ್ಳಾರಿಯಲ್ಲಿ ಗ್ರಂಥ ಬಿಡುಗಡೆ ಮಾಡಲಾಯಿತು.

8–2–2012ರಂದು ಬಿಜಾಪುರದಲ್ಲಿ ಗ್ರಂಥವನ್ನು ಅಡ್ಡಪಲ್ಲಕ್ಕಿ ಉತ್ಸವವನ್ನು ಬಹು ವಿಜೃಂಭಣೆಯಿಂದ ಮಾಡಲಾಯಿತು. ಜಗದ್ಗುರುಗಳು ಪಾದಯಾತ್ರೆ ನಡೆಸಿದಾಗ ಅನೇಕ ಶಿವಾಚಾರ್ಯರುಗಳು ಕಾಲ್ನಡಿಗೆಯಲ್ಲಿ ಪಾಲ್ಗೊಂಡಿದ್ದರು.

ಸಂಭ್ರಮದ ಅಡ್ಡಪಲ್ಲಕ್ಕಿ ಉತ್ಸವ

8–2–2012, ಪ್ರಜಾವಾಣಿ ವಾರ್ತೆ



ವಿಜಾಪುರದಲ್ಲಿ ಜಗದಾರಾಧ್ಯ ಜಯಶಾಂತಲಿಂಗೇಶ್ವರ ಮತ್ತು ದ್ವಾದಶ ಜ್ಯೋತಿರ್ಲಿಂಗಗಳ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಕಾಶೀ ಜಗದ್ಗುರುಗಳ ನೇತೃತ್ವದಲ್ಲಿ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥದ ಅಡ್ಡಪಲ್ಲಕ್ಕಿ ಮಹೋತ್ಸವ ನೆರವೇರಿತು. ಡಾ. ಮಹಾದೇವ ಶಿವಾಚಾರ್ಯರು, ಜಯಶಾಂತೇಶ್ವರ ಶಿವಾಚಾರ್ಯರು ಇತರರು ಚಿತ್ರದಲ್ಲಿದ್ದಾರೆ.



ಸೇಡಂ ಪಟ್ಟಣದ ವೀರಭದ್ರೇಶ್ವರ ದೇವಾಲಯದಲ್ಲಿ ಮಂಗಳವಾರ 'ಸಿದ್ಧಾಂತ ಶಿಖಾಮಣಿ' ಪವಿತ್ರ ಗ್ರಂಥದ ಅಡ್ಡಪಲ್ಲಕ್ಕಿ ಮೆರವಣಿಗೆಗೆ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಚಾಲನೆ ನೀಡಿದರು. ಗಂಗಾಧರ ಶಿವಾಚಾರ್ಯರು, ಶಿವಶಂಕರ ಶಿವಾಚಾರ್ಯರು, ಪಂಚಾಕ್ಷರ ಸ್ವಾಮಿಗಳು, ಸದಾಶಿವ ಸ್ವಾಮಿಗಳು ಮತ್ತಿತರರು ಇದ್ದರು.

ಬಿಡುಗಡೆ

27–5–2012, ಪ್ರಜಾವಾಣಿ

ಕೆರೂರ ಸಮೀಪದ ಕೊಣ್ಣೂರ ಗ್ರಾಮದಲ್ಲಿ ಚನ್ನವೀರ ಸ್ವಾಮಿಗಳ 6ನೇ ಸ್ಮರಣೋತ್ಸವ ಸಮಾರಂಭದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣದ ಸಿ.ಡಿ. ಬಿಡುಗಡೆ ಮಾಡಲಾಯಿತು.





2–6–2012ರಲ್ಲಿ ಮಾಸ್ಕೋದ ಅಷ್ಟಾಂಗಯೋಗ ಕೇಂದ್ರದಲ್ಲಿ ಸಿದ್ಧಾಂತ ಶಿಖಾಮಣಿ ಗ್ರಂಥ ಬಿಡುಗಡೆ.

ರಷ್ಯನ್ ಭಾಷೆಗೆ ಅನುವಾದಗೊಂಡ ಸಿದ್ಧಾಂತ ಶಿಖಾಮಣಿ ಗ್ರಂಥದ ಪಾರಾಯಣ ಅಭಿಯಾನವನ್ನು ರಷ್ಯಾದ ರಾಜಧಾನಿ ಮಾಸ್ಕೊದಲ್ಲಿ ಅಷ್ಟಾಂಗ ಯೋಗ ಕೇಂದ್ರದಲ್ಲಿ ಕಾಶೀ ಜಗದ್ಗುರುಗಳ ಪವಿತ್ರ ಹಸ್ತಗಳಿಂದ ಬಿಡುಗಡೆ ಮಾಡಲಾಯಿತು. ಅನುವಾದ ಮಾಡಿದ ಕು. ಯುಲಿಯಾ, ಮಾಸ್ಕೊ ವಿಶ್ವವಿದ್ಯಾಲಯದ ಸಿಬ್ಬಂದಿಗಳು, ನೂರಾರು ಶಿವಯೋಗ ಸಾಧಕರು– ಜಗದ್ಗುರುಗಳ ಜೊತೆಯಲ್ಲಿ ಹೋಗಿದ್ದ ಸ್ವಾಮೀಜಿಗಳು, ಯೋಗ ಶಿಕ್ಷಕರು ಇದರಲ್ಲಿ ಪಾಲ್ಗೊಂಡಿದ್ದರು. (ಇದರ ವಿವರಗಳನ್ನು ವಿದೇಶಗಳಲ್ಲಿ ಜಗದ್ಗುರುಗಳು ಎಂಬ ಶೀರ್ಷಿಕೆಯಲ್ಲಿ ನೋಡಬಹುದು.)

ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ

●ತೆಲುಗು ಭಾಷೆಗೆ ಅನುವಾದಗೊಂಡ ಕೃತಿ ಲೋಕಾರ್ಪಣೆ ● ಜಗದ್ಗುರುಗಳ ಭವ್ಯ ಮೆರವಣಿಗೆ

ಉದಯವಾಣಿ, 9–6–2012

ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ತೆಲುಗು ಭಾಷೆಗೆ ಅನುವಾದಗೊಂಡಿರುವ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಜಗದ್ಗುರುಗಳು ಬಿಡುಗಡೆಮಾಡಿ ಇಂದು ತೆಲುಗು ಭಾಷೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಬಿಡುಗಡೆ ಆಗಿದ್ದ ಸಂತಸದಂತಿದೆ ಎಂದು ವ್ಯಕ್ತಪಡಿಸಿಕೊಂಡರು.

‘ಮನಸ್ಸಿನ ಪರಿಶುದ್ಧತೆಯೇ ತೀರ್ಥ’

ವಿಜಯವಾಣಿ,16–6–2012



ಇಲಕಲ್ಲದಲ್ಲಿ ನಡೆದ ದೇಹದಾನ ಮತ್ತು ನೇತ್ರದಾನ ಪತ್ರಾರ್ಪಣೆ ಕಾರ್ಯಕ್ರಮದಲ್ಲಿ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಜ್ಯೋತಿ ಬೆಳಗಿಸುವ ಮೂಲಕ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥ ಬಿಡುಗಡೆ ಮಾಡಿದರು.

ಇಳಕಲ್ಲಿನಲ್ಲಿ ಗ್ರಂಥವನ್ನು ಜ್ಯೋತಿ ಬೆಳಗಿಸುವ ಮೂಲಕ ಬಿಡುಗಡೆ ಮಾಡಿ ಸಾಂಕೇತಿಕವಾಗಿ ಭಕ್ತರಿಗೆ ಪಾರಾಯಣ ಮಾಡಿಸಿದರು.


ಉಜ್ಜಯಿನಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ



ಕಲಬುರ್ಗಿ ನಗರದಲ್ಲಿ ಉಜ್ಜಯಿನಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಆನೆಯ ಮೇಲೆ ಶ್ರೀ ಸಿದ್ಧಾಂತ ಶಿಖಾಮಣಿ ಮೆರವಣಿಗೆ ಜರುಗಿತು. ಕಡಗಂಚಿ ಶ್ರೀಗಳು, ರಾಯಚೂರು ಶ್ರೀಗಳು ಭಾಗವಹಿಸಿದ್ದರು.

ಅಂತರ್ಮುಖದಿಂದ ಮನಸ್ಸಿಗೆ ಶಾಂತಿ : ಕಾಶೀ ಶ್ರೀಗಳು

ಉದಯವಾಣಿ, 23-6-2012



ಕಡಗಂಚಿ ಶಾಂತಲಿಂಗೇಶ್ವರಮಠದ ಶಾಂತೇಶ್ವರ ಕಲ್ಯಾಣ ಮಂಟಪದಲ್ಲಿ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಪ್ರವಚನ ಕಾರ್ಯಕ್ರಮದಲ್ಲಿ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥ ಬಿಡುಗಡೆ ಮಾಡಲಾಯಿತು.

ಕಲಬುರ್ಗಿ : ಮನುಷ್ಯ ಅಂತರ್ಮುಖಿಯಾಗಿ ಸದೃಢ ಹಾಗೂ ಶ್ರೇಷ್ಠತೆ ಹೊಂದಿದರೆ ಶಾಂತಿ ಹಾಗೂ ಸಮಾಧಾನಗಳನ್ನು ಒಟ್ಟಿಗೆ ಪಡೆಯಬಹುದಾಗಿದೆ ಎಂದು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ನುಡಿದರು.

ನಗರದ ಸೋಗನಸಕೇರಿಯಲ್ಲಿರುವ ಕಡಗಂಚಿ ಶಾಂತಲಿಂಗೇಶ್ವರ ಮಠದ ಶಾಂತೇಶ್ವರ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡ ಸಿದ್ಧಾಂತ ಶಿಖಾಮಣಿ ವಚನ ಸಾಹಿತ್ಯ ಪ್ರವಚನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಭೋಗದಿಂದ ಕ್ಷಣಿಕ ಸುಖ ಸಿಕ್ಕರೂ ಕೊನೆಗೆ ಶರೀರವು ಅನೇಕ ರೋಗ ರುಜಿನಗಳಿಗೆ ತುತ್ತಾಗ ಬೇಕಾಗುತ್ತದೆ. ಶರೀರವನ್ನು ಆರೋಗ್ಯವಾಗಿಟ್ಟುಕೊಂಡು ಶಾಶ್ವತವಾದ ಮಾನಸಿಕ ಶಾಂತಿ ಪಡೆಯಬೇಕಾದರೆ ಮೊದಲು ಅಂತರ್ಮುಖಿಯಾಗಿ ಕಠಿಣ ಅಭ್ಯಾಸ ಮಾಡಬೇಕೆಂದು ಶ್ರೀಗಳವರು ಕರೆ ನೀಡಿದರು. ಅಂತರಂಗದಿಂದ ದೊರೆಯುವ ಆನಂದ ನೂರು ವರ್ಷಗಳ ಭೋಗದಿಂದ ದೊರೆಯುವುದಿಲ್ಲ ಎಂಬುದಾಗಿ ಸಿದ್ಧಾಂತ ಶಿಖಾಮಣಿ ಪ್ರತಿಪಾದಿಸಿದೆ ಎಂದು ವಿವರಣೆ ನೀಡಿದರು. ಇದೇ ಸಂದರ್ಭದಲ್ಲಿ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥ ಬಿಡುಗಡೆ ಮಾಡಲಾಯಿತು. ಕಡಗಂಚಿ ಮಠದ ವೀರಭದ್ರ ಶಿವಾಚಾರ್ಯರು, ಜೈನಾಪುರದ ರೇಣುಕಾಚಾರ್ಯ ಶಿವಾಚಾರ್ಯರು, ಹಾಗರಗಿಯ ರೇವಣಸಿದ್ಧ ಶಿವಾಚಾರ್ಯರು, ಡಿಸಿಸಿ ಬ್ಯಾಂಕ್ ನಿರ್ದೇಶಕ ಶರಣಬಸಪ್ಪ ಪಾಟೀಲ ಅಷ್ಠಗಾ, ಬಾಬುರಾವ ಅಗ್ರೆ, ವಿಜಯಕುಮಾರ ಗಾದಗೆ, ಶರಣಪ್ಪ ಪುಣೆ ಸೇರಿದಂತೆ ಮುಂತಾದವರಿದ್ದರು. ಶಿವಶರಣಪ್ಪ ಸರಸಂಬಾ ಕಾರ್ಯಕ್ರಮ ನಿರೂಪಿಸಿದರು.

ಕಲಬುರ್ಗಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಜಗದ್ಗುರುಗಳು ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ಅಂಬಾರಿ ಮೇಲೆ ಮೆರವಣಿಗೆಗೊಂಡ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ಜಗದ್ಗುರುಗಳು ಬಿಡುಗಡೆಮಾಡಿದರು.

ಧರ್ಮಗ್ರಂಥಗಳು ಮನುಕುಲಕ್ಕೆ ಮಾರ್ಗದರ್ಶಕ

ಉದಯವಾಣಿ, 21–8–2012



ಆಂಧ್ರಪ್ರದೇಶದಲ್ಲಿ ಶ್ರಾವಣಮಾಸದ ಧರ್ಮ ಪ್ರಚಾರದ ಮಂಗಲೋತ್ಸವದಲ್ಲಿ ತೆಲುಗು ಭಾಷೆಯ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥದ ಎರಡನೇ ಆವೃತ್ತಿಯನ್ನು ಜಗದ್ಗುರುಗಳು ಬಿಡುಗಡೆ ಮಾಡಿದರು.

ಜಗದ್ಗುರು ಶ್ರಾವಣ ಮಾಸದಲ್ಲಿ ಆಂಧ್ರ ಪ್ರದೇಶದ ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ, ಕೃಷ್ಣಾ, ರಾಜಮಂಡ್ರಿ, ವಿಜಯವಾಡಾ, ಗಾಂಡೂರು, ಮೆಹಬೂಬನಗರ, ರಂಗಾರೆಡ್ಡಿ, ಮೇಡಕ್, ನಿಜಾಮಾಬಾದ್, ಅಲಿಲಾಬಾದ, ಕರೀಂನಗರ, ವಾರಂಗಲ್ ಮುಂತಾದ 14 ಜಿಲ್ಲೆಗಳ 40 ನಗರಗಳಲ್ಲಿ ಧರ್ಮ ಪ್ರಚಾರ ನಡೆಸಿದ ಜಗದ್ಗುರುಗಳು–ಈ ಅಭಿಯಾನದಲ್ಲಿ 40 ನಗರಗಳ ಪ್ರತಿಯೊಂದು ಮನೆಗೆ ಸಿದ್ಧಾಂತ ಶಿಖಾಮಣಿ ಪಾರಾಯಣಗ್ರಂಥ ಕೊಟ್ಟು ಅವರಿಗೆ ಪಾರಾಯಣ ಕಲಿಸಲಾಯಿತು. ಶ್ರೀಶೈಲ ಜಗದ್ಗುರುಗಳು ಸಾನ್ನಿಧ್ಯ ವಹಿಸಿದ್ದರು.

4–12–2012 : ರಾಣಿಬೆನ್ನೂರಿನಲ್ಲಿ ಪರಾಯಣದ ಗ್ರಂಥ ಮೆರವಣಿಗೆಯ ಜೊತೆಯಲ್ಲಿ ಉಜ್ಜಯಿನಿ ಶ್ರೀ ಶೈಲ ಕಾಶೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವವೂ ಜರುಗಿತು.

ಸಾಮೂಹಿಕ ವಿವಾಹ, ಸಿದ್ಧಾಂತ ಶಿಖಾಮಣಿ ಗ್ರಂಥ ಮೆರವಣಿಗೆ – ಉಜ್ಜಯಿನಿ, ಶ್ರೀಶೈಲ, ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ

ಶಿಡ್ಲು ಪತ್ರಿಕೆ, 4–12–2012

ಕಾಶೀ ಜಗದ್ಗುರುಗಳಿಂದ ಸಿದ್ಧಾಂತ ಶಿಖಾಮಣಿ ಗ್ರಂಥ ಲೋಕಾರ್ಪಣೆ
ಧರ್ಮದಿಂದಲೇ ಅರ್ಥ, ಕಾಮ, ಮೋಕ್ಷ ಪ್ರಾಪ್ತಿ

ವಿಜಯವಾಣಿ, 12–12–2012



ಧಾರವಾಡ ತಾಲೂಕಿನ ಮಂಗಳಗಟ್ಟಿಯಲ್ಲಿ ನಡೆದ 'ಶ್ರೀ ಗುರುವಿನ ನಡಿಗೆ ಭಕ್ತರ ಕಡೆಗೆ' ಎಂಬ ಅಭಿಯಾನದ ಅಂಗವಾಗಿ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಶ್ರೀ ಕಾಶೀಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಲೋಕಾರ್ಪಣೆಗೊಳಿಸಿದರು.

ಮನುಕುಲಕ್ಕೆ ಮಾರ್ಗದರ್ಶನ

ಸಮಸ್ತ ಮನುಕುಲಕ್ಕೆ ಧರ್ಮದ ತತ್ವ ಬೋಧಿಸಿ,
ಪಾರದರ್ಶಕ ವ್ಯಕ್ತಿತ್ವ
ನಿರ್ಮಾಣಕ್ಕೆ ಅಗತ್ಯವಾದ ಮಾರ್ಗದರ್ಶನವನ್ನು
ಶ್ರೀ ಸಿದ್ಧಾಂತ ಶಿಖಾಮಣಿ ಪ್ರತಿಪಾದಿಸುತ್ತದೆ.

– ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು
ಕಾಶೀ ಪೀಠದ ಜಗದ್ಗುರುಗಳು

ಕಾಶೀ ಜಗದ್ಗುರುಗಳು 'ಶ್ರೀ ಗುರುವಿನ ನಡಿಗೆ ಭಕ್ತರ ಕಡೆಗೆ' ಎಂಬ ವಿನೂತನ ಅಭಿಯಾನವನ್ನು ಧಾರವಾಡದ ತಾಲ್ಲೂಕಿನ ವಿವಿಧ ಆಯ್ದ ಹಳ್ಳಿಗಳಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿಯ ಪಾರಾಯಣ ಗ್ರಂಥದ ಪಲ್ಲಕ್ಕಿ ಉತ್ಸವದೊಂದಿಗೆ ಗ್ರಾಮದ ಬೀದಿಗಳಲ್ಲಿ ಪಾದಯಾತ್ರೆ ಕೈಗೊಂಡು ಸಾರ್ವಜನಿಕ ಬದುಕಿಗೆ ಶಿಸ್ತು–ರೀತಿ–ನೀತಿ–ಧರ್ಮ–ಸಂಸ್ಕಾರಗಳನ್ನು ನಿರಂತರವಾಗಿ ಬೋಧಿಸುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದುದು ಪಂಚಪೀಠಗಳ ಇತಿಹಾಸದಲ್ಲಿ ದಾಖಲೆಯಾಗಿದೆ.

ಧಾರವಾಡ ಜಿಲ್ಲೆ ಶಿಂಗನ ಹಳ್ಳಿ ಗ್ರಾಮದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥದ ಉತ್ಸವ-ಜಗದ್ಗುರುಗಳ ಮೆರವಣಿಗೆ

ಉದಯವಾಣಿ, 13-12-2012

ಪ್ರತಿಯೊಂದು ಧರ್ಮದ ಸಂಸ್ಥಾಪಕರು ಹಾಗೂ ಪ್ರವಾದಿಗಳು ಮನುಕುಲಕ್ಕೆ ಉಪದೇಶ ಮಾಡಿದ ಉಪದೇಶಗಳೇ ಇಂದು ಧರ್ಮಗ್ರಂಥಗಳಾಗಿವೆ. ಪ್ರತಿ ಧರ್ಮಗ್ರಂಥದಲ್ಲಿ ಆ ಧರ್ಮದ ಚೌಕಟ್ಟಿಗೆ ಒಳಪಟ್ಟು ಮನುಕುಲದ ಏಳ್ಗೆಯ ಮಾರ್ಗದರ್ಶನ ಮಾಡಲಾಗಿದೆ. ಅದರಂತೆಯೇ ಸನಾತನ ವೀರಶೈವ ಧರ್ಮದ ತತ್ವ-ಸಿದ್ಧಾಂತಗಳನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸುವ ಗ್ರಂಥವೇ 'ಸಿದ್ಧಾಂತ ಶಿಖಾಮಣಿ'

ಕಾಶೀ ಜಗದ್ಗುರು
ಡಾ॥ ಚಂದ್ರಶೇಖರ ಶಿವಾಚಾರ್ಯ
ಭಗವತ್ಪಾದರು

14-12-2012 : ಧಾರವಾಡ ಜಿಲ್ಲೆ ಶಿಂಗನಹಳ್ಳಿ ಗ್ರಾಮದಲ್ಲಿ ಗ್ರಂಥ ಬಿಡುಗಡೆ ಮಾಡಿ ಆಶೀರ್ವಚನದಲ್ಲಿ ಜಗದ್ಗುರುಗಳು ದೇಹ, ಮನಸ್ಸು, ಬುದ್ಧಿಯಲ್ಲಿ ಬಿನ್ನತೆ ಇದೆ. ಆದರೆ ಆತ್ಮದಲ್ಲಿ ಸಮಾನತೆ ಇದೆ. 84 ಲಕ್ಷ ಜೀವರಾಶಿಗಳಲ್ಲಿ ಆತ್ಮತತ್ವ ಒಂದೇ ಎಂದು ಹೇಳಿ-ಶರೀರ ಯಂತ್ರವಿದ್ದಂತೆ, ಆತ್ಮ ವಿದ್ಯುತ್ ಇದ್ದಂತೆ. ವಿದ್ಯುತ್ ಇದ್ದಾಗ ಮಾತ್ರ ಯಂತ್ರ ಕೆಲಸವಾಡಬಲ್ಲದು. ಅಂತೆಯೇ ಆತ್ಮ, ಆಧ್ಯಾತ್ಮವಿದ್ದಾಗಲೇ ಶರೀರಕ್ಕೆ ಒಂದು ಬೆಲೆ. ಆದರೆ ಇಂದು ನಾವಿದನ್ನು ಮರೆತು ವ್ಯವಹಾರದ ಬೆನ್ನುಹತ್ತಿದ್ದೇವೆ. ಪ್ರತಿದಿನ ನಿಗದಿಪಡಿಸಿದ ಹೊತ್ತು ಆಧ್ಯಾತ್ಮದ ಕಡೆ ಒಲವು ತೋರಿದರೆ ವ್ಯಕ್ತಿ ತನ್ನ ಜೀವನದ ಗುರಿ ಮುಟ್ಟಲು ಸಾಧ್ಯ ಎಂದು ಹೇಳಿದರು.

14-12-2012 : ಮುಳಮುತ್ತಲ ಗ್ರಾಮದಲ್ಲಿ ಧರ್ಮಸಭೆ ನಡೆಸಿ ಗ್ರಂಥ ಬಿಡುಗಡೆ ಮಾಡಿದರು.

27-12-2012 : ಹುಬ್ಬಳ್ಳಿ : ಇಲ್ಲಿನ ನವನಗರದಲ್ಲಿರುವ ಶ್ರೀ ಚಿಕ್ಕೇನಕೊಪ್ಪ ಚನ್ನವೀರ ಶರಣರ ಅಂಧರ ಆಶ್ರಮದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥ ಹಾಗೂ ಧ್ವನಿ ಸುರುಳಿಯನ್ನು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಬಿಡುಗಡೆ ಮಾಡಿದರು.

ಹುಬ್ಬಳ್ಳಿಯ ನವನಗರದಲ್ಲಿ ಜಗದ್ಗುರುಗಳು ಪಾರಾಯಣ ಗ್ರಂಥ ಬಿಡುಗಡೆ ಮಾಡಿ ಅಡಕ ಮುದ್ರಿಕೆ (ಸಿಡಿ)ಯನ್ನು ಅನಾವರಣಗೊಳಿಸಿ-ಸುಮಾರು 200 ವರ್ಷಗಳ ಹಿಂದೆ ಕ್ರೈಸ್ತರು ಬೈಬಲ್ ಅನ್ನು ಮುದ್ರಿಸಿ ಎಲ್ಲ ಕಡೆ ಅದನ್ನು ವಿತರಿಸಿ, ಅದರ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು. ಅದೇ ರೀತಿ ಸಿದ್ಧಾಂತ ಶಿಖಾಮಣಿ ಕೂಡ ಎಲ್ಲೆಡೆ ಪ್ರಚಾರ ಪಡೆಯಬೇಕೆಂದರು.

6-1-2013

ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನವು ಜಗದ್ಗುರುಗಳ ಆಧ್ಯಾತ್ಮಿಕ ಆಶೀರ್ವಚನದಲ್ಲಿ ಬೆಂಗಳೂರಿನಲ್ಲಿ ಮೊಟ್ಟ ಮೊದಲ ಬಾರಿಗೆ ಸಿದ್ಧಾಂತ ಶಿಖಾಮಣಿಯ ಪಾರಾಯಣ ಅಭಿಯಾನ ಆರಂಭೋತ್ಸವವನ್ನು ವಿಭೂತಿಪುರದ ಮಕ್ಕಳಿಂದ ಆರಂಭಗೊಳಿಸಲಾಯಿತು.



ಶ್ರೀ ಸಿದ್ಧಾಂತ ಶಿಖಾಮಣಿಯ ಪಾರಾಯಣ ಅಭಿಯಾನ ಆರಂಭೋತ್ಸವವನ್ನು ಉದ್ಘಾಟಿಸುತ್ತಿರುವವರು ಮಾಜಿ ಇಂಧನ ಸಚಿವೆ ಶ್ರೀಮತಿ ಶೋಭಾ ಕರೆಂದ್ಲಾಜೆ





ಪಾರಾಯಣವನ್ನು ಶುಶ್ರಾವ್ಯವಾಗಿ ಹೇಳುತ್ತಿರುವ ವಿಭೂತಿಪುರದ ವಿದ್ಯಾರ್ಥಿಗಳು

ಏಕಪಕ್ಷೀಯವಾಗಿ ಶಿವಶರಣರ ವಚನಗಳೇ ಹೆಚ್ಚು ಎಂದು ಹೇಳುವುದರಿಂದ ಅಥವಾ ಆಚಾರ್ಯರ ಉಕ್ತಿಗಳೇ ಶ್ರೇಷ್ಠ ಎಂದು ಹೇಳುವುದರಿಂದ ಜಗತ್ತಿನಲ್ಲಿ ಜಗಳಗಳಾಗುತ್ತವೆ.

– ಡಾ. ಚಂದ್ರಶೇಖರ ಸ್ವಾಮೀಜಿ, ಕಾಶೀ ಜಗದ್ಗುರು

ಸಿದ್ಧಾಂತ ಶಿಖಾಮಣಿ ಅಂತರ್ಜಾಲದ ಮೂಲಕ ವಿವಿಧ ಭಾಷೆಗಳಲ್ಲಿಯೂ ಸರ್ವರಿಗೆ ತಲುಪುವ ವ್ಯವಸ್ಥೆ

ಮರಾಠಿ ಪಾರಾಯಣ ಗ್ರಂಥ ಲೋಕಾರ್ಪಣೆ

ಉದಯವಾಣಿ, 22–1–2013



ಸೊಲ್ಲಾಪುರ : ಶಿವಾನುಭವ ಮಂಗಲ ಕಾರ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ ಮರಾಠಿ ಪಾರಾಯಣ ಗ್ರಂಥವನ್ನು ಲೋಕಾರ್ಪಣೆ ಮಾಡಲಾಯಿತು.

ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಪಾರಂಪರಿಕ ಪದ್ಧತಿಯಂತೆ ಜನವರಿ 20ರಂದು ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ ಮರಾಠಿ ಪಾರಾಯಣ ಗ್ರಂಥ (ಗ್ರಂಥ ಪಲ್ಲಕ್ಕಿ ಉತ್ಸವ)ದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದರು. ಭಕ್ತರೊಡನೆ ಕಾಶೀ ಜಗದ್ಗುರುಗಳು, ಶ್ರೀಶೈಲ ಜಗದ್ಗುರುಗಳು ಮೆರವಣಿಗೆಯಲ್ಲಿ ಪಾದಯಾತ್ರೆ ನಡೆಸಿದರು.

ಸೊಲ್ಲಾಪುರ ಸಂಗಮೇಶ್ವರ ಮಹಾವಿದ್ಯಾಲಯದ ನಿವೃತ್ತ ಮರಾಠಿ ಪ್ರಾಧ್ಯಾಪಕ ಡಾ॥ ಶೇಷನಾರಾಯಣ ಪಸಾರಕರ ಅವರು ಶ್ರೀ ಸಿದ್ಧಾಂತ ಶಿಖಾಮಣಿಯ 1405 ಸಂಸ್ಕೃತ ಶ್ಲೋಕಗಳಿಗೆ 3811 ಮರಾಠಿ ವೋವಿರೂಪ ಪದ್ಯಾನುವಾದ ಮಾಡಿದ್ದಾರೆ. ಶ್ರೀ ಭಗವದ್ಗೀತೆಗೆ ಶ್ರೀ ಜ್ಞಾನೇಶ್ವರ ಪದ್ಯಾನುವಾದ ಇರುವಂತೆ ಶ್ರೀ ಸಿದ್ಧಾಂತ ಶಿಖಾಮಣಿಗೆ ತತ್ವಾಮೃತವೆಂಬ ಮರಾಠಿ ಪದ್ಯಾನುವಾದ ಬರೆಯಲಾಗಿದೆ ಎಂದು ಜಗದ್ಗುರುಗಳು ಹೇಳಿದರು.

ಇಲ್ಲಿಯವರೆಗೆ ಶ್ರೀ ಕಾಶೀ ಮಹಾಪೀಠದಿಂದ ಕನ್ನಡ, ತೆಲುಗು, ತಮಿಳು, ಮಲೆಯಾಳಂ, ಹಿಂದಿ, ಇಂಗ್ಲಿಷ್, ರಶಿಯನ್ ಭಾಷೆಗಳಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥಗಳು ಅನುವಾದಗೊಂಡು ಲೋಕಾರ್ಪಣೆ ಮಾಡಲಾಗಿತ್ತು. ಇದೆಲ್ಲವೂ ಗದ್ಯಾನುವಾದವಾಗಿದ್ದರೆ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತವು ಮರಾಠಿ ಪದ್ಯರೂಪದ ಅಪರೂಪದ ಕೃತಿಯಾಗಿದೆ ಎಂದರು.

ಮಹಾರಾಷ್ಟ್ರದಲ್ಲಿ ದಿವ್ಯರೂಪದ ಧರ್ಮಗ್ರಂಥಗಳನ್ನು ಪಾರಾಯಣ ಮಾಡುವ ಪದ್ಧತಿ ಅತ್ಯಂತ ಪ್ರಾಚೀನವಾದದ್ದು. ವಾರಕರಿ ಸಂಪ್ರದಾಯದಲ್ಲಿ ಜ್ಞಾನೇಶ್ವರಿ, ಏಕನಾಥ, ಭಾಗವತ, ತುಕಾರಾಮಗಾಥಾ ಮುಂತಾದ ಮರಾಠಿ ಪದ್ಯಗ್ರಂಥಗಳನ್ನು ಪಾರಾಯಣ ಮಾಡುವಂತೆ ಮಹಾರಾಷ್ಟ್ರದ ವೀರಶೈವರು ಪರಮರಹಸ್ಯ, ಲಕ್ಷ್ಮಣಗಾಥಾ, ಶಿವಲೀಲಾಮೃತ ಮುಂತಾದ ಗ್ರಂಥಗಳನ್ನು ಪಾರಾಯಣ ಮಾಡುತ್ತಾ ಬಂದಿದ್ದಾರೆ. ಇಂದು ವೀರಶೈವ ಸಿದ್ಧಾಂತವನ್ನು ಸಮಗ್ರವಾಗಿ ಪ್ರತಿಪಾದಿಸುವ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತವು ಮರಾಠಿ ಪದ್ಯದಲ್ಲಿರುವುದರಿಂದ ಮಹಾರಾಷ್ಟ್ರದ ವೀರಶೈವರಿಗೆ ಯಾರ ಸಹಾಯವಿಲ್ಲದೆ ನೇರವಾಗಿ ತತ್ವಾಮೃತವನ್ನು ಸವಿಯುವ ಮಹಾಭಾಗ್ಯ ದೊರಕಿರುವುದು ಸಂತಸವಾಗಿದೆ ಎಂದು ಜಗದ್ಗುರುಗಳು ತಿಳಿಸಿದರು.

ಉದಯವಾಣಿ, 29–1–2013



ಸೊಲ್ಲಾಪುರ : ಲಾತೂರು ನಗರದ ಕೋರೆ ಗಾರ್ಡನ್‌ನಲ್ಲಿ ಆಯೋಜಿಸಲಾಗಿದ್ದ ಮಲ್ಲಿಕಾರ್ಜುನ ಜವಳೆ ಅವರ ಜನ್ಮದಿನದ ಅಮೃತ ಮಹೋತ್ಸವ ಸಮಾರಂಭದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ ಮರಾಠಿ ಪಾರಾಯಣ ಗ್ರಂಥವನ್ನು ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಲೋಕಾರ್ಪಣೆ ಮಾಡಿದರು.

ಮಹಾರಾಷ್ಟ್ರದ ಲಾತೂರಿನಲ್ಲಿ ಸಿದ್ಧಾಂತ ಶಿಖಾಮಣಿ ತತ್ವಾಮೃತ ಪಾರಾಯಣ ಮರಾಠಿ ಗ್ರಂಥ ಬಿಡುಗಡೆ ಮಾಡಿದ ಜಗದ್ಗುರುಗಳು ಅಮೃತವೆಂದರೆ ಜನನ–ಮರಣ ದೂರಮಾಡಿ ಪರಮಪದವಿ ಕೊಡುವುದಾಗಿದೆ. ಇಂತಹ ತತ್ವಾಮೃತವನ್ನು ಪಡೆದುಕೊಂಡಾಗಲೇ ಮನುಷ್ಯಜನ್ಮ ಸಾರ್ಥಕವಾಗುವುದು. ಅಮೃತವಿರುವುದು ಶಿವನ, ಶಿವಾಚಾರ್ಯರ ಮತ್ತು ಶರಣರ ತತ್ವೋಪದೇಶದಲ್ಲಿ ಮಾತ್ರ. ತತ್ವೋಪದೇಶವೇ ನಿಜವಾದ ಅಮೃತ ಎಂದು ಪ್ರತಿದಿನವೂ ಪಾರಾಯಣ ಮಾಡಬೇಕೆಂದು ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

11–2–2013 : ಮಹಾರಾಷ್ಟ್ರದ ಸಾಂಸ್ಕೃತಿಕ ನಗರವಾದ ಪುಣೆಯಲ್ಲಿ ಸಿದ್ಧಾಂತ ಶಿಖಾಮಣಿ ತತ್ವಾಮೃತ ಪಾರಾಯಣ ಗ್ರಂಥವನ್ನು ಲೋಕಾರ್ಪಣೆ ಮಾಡಿ ಆಶೀರ್ವಚನದಲ್ಲಿ ಜಗದ್ಗುರುಗಳು ಸಾವಿರಾರು ವರ್ಷಗಳಲ್ಲಿ ಸಿಗದ ಒಂದು ಅದೃಷ್ಟ ಮಹಾರಾಷ್ಟ್ರ ಜನರಿಗೆ ಪ್ರಾಪ್ತವಾಗಿದೆ. ಮನ್ಮಥಸ್ವಾಮಿ ಅವರು ಬರೆದ ಪರಮರಹಸ್ಯ ಪಾರಾಯಣ, ಶಿವಲೀಲಾಮೃತ ಗ್ರಂಥ ಪಾರಾಯಣ ಮಾಡುವಂತೆ ಈ ಗ್ರಂಥ ಪಾರಾಯಣ ಮಾಡಿ ಪ್ರಚುರಗೊಳಿಸಬೇಕೆಂದರಲ್ಲದೆ, ಯಾವ ಯಾವ ನಗರಗಳಲ್ಲಿ ಈ ಗ್ರಂಥದ ಮೆರವಣಿಗೆ ಮಾಡುವರೋ ಅಲ್ಲಿ ಜಗದ್ಗುರುಗಳು ಮೆರವಣಿಗೆಯಲ್ಲಿ ಪಾದಯಾತ್ರೆ ಮೂಲಕ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

‘ಧರ್ಮದ ಹಾದಿಯಲ್ಲಿ ಬದುಕಿ’ **ಪ್ರಜಾವಾಣಿ, 17–2–2013**



ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘದ ವತಿಯಿಂದ ಎಸ್.ಎನ್. ವೈದ್ಯಕೀಯ ಕಾಲೇಜು ಆವರಣದಲ್ಲಿ ನೂತನವಾಗಿ ನಿರ್ಮಾಣವಾಗಿರುವ ವಿವಿಧ ಕಟ್ಟಡಗಳ ಉದ್ಘಾಟನೆಗೆ ಆಗಮಿಸಿದ ಕಾಶೀ ಮತ್ತು ಶ್ರೀಶೈಲ ಪೀಠಾಧೀಶರ ಮತ್ತು ‘ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥ’ದ ಪಲ್ಲಕ್ಕಿ ಉತ್ಸವ ಭಾನುವಾರ ನಡೆಯಿತು.

ಸಾಧಕರಿಗೆ ಸನ್ಮಾನ, ಉದ್ಘಾಟನೆ, ಗ್ರಂಥ ಬಿಡುಗಡೆ

ಸಂಕ, 18–2–2013



ಬ.ವಿ.ವಿ. ಸಂಘದ ಆಶ್ರಯದಲ್ಲಿ ನಡೆದ ದೇವಾಲಯ, ವಸತಿ ನಿಲಯ, ಆಸ್ಪತ್ರೆ ಉದ್ಘಾಟನಾ ಸಮಾರಂಭದಲ್ಲಿ ಕಾಶೀ, ಶ್ರೀಶೈಲ, ಉಜ್ಜಯನಿ ಜಗದ್ಗುರುಗಳು ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಬಿಡುಗಡೆ ಮಾಡಿದರು.

ಜಗದ್ಗುರುಗಳಿಗೆ ನಾಗರಿಕರ ಉತ್ಸವದ ನಮನ



ಬಾಗಲಕೋಟೆಯಲ್ಲಿ ನಡೆದ ಉತ್ಸವದಲ್ಲಿ ಪಾಲ್ಗೊಂಡಿದ್ದ ಕಾಶೀ, ಶ್ರೀಶೈಲ ಜಗದ್ಗುರುಗಳು ಸಾರೋಟ ಮಾದರಿಯ ರಥದಲ್ಲಿ ವಿರಾಜಮಾನರಾಗಿ ದರ್ಶನ ನೀಡುತ್ತಿರುವುದು.

ಬಾಗಲಕೋಟೆಯಲ್ಲಿ ಸಿದ್ಧಾಂತ ಶಿಖಾಮಣಿ ಗ್ರಂಥದ ಪಲ್ಲಕ್ಕಿ ಉತ್ಸವ ಹಾಗೂ ಉಜ್ಜಯಿನಿ ಶ್ರೀಶೈಲ ಹಾಗೂ ಕಾಶೀ ಪೀಠಗಳ ಜಗದ್ಗುರುಗಳ ಸಾರೋಟ ಮಾದರಿಯ ತೆರೆದ ವಾಹನದಲ್ಲಿ ಮೆರವಣಿಗೆ ಊರೊಳಗೆ ಸಾಗಿ ಬರುವಾಗ ರಸ್ತೆಯ ಇಕ್ಕೆಲಗಳಲ್ಲಿ ಸೇರಿದ್ದ ಜನರು ಭಕ್ತಿಯಿಂದ ಪುಷ್ಪವೃಷ್ಟಿ ಮಾಡಿ ಸ್ವಾಗತ ನೀಡಿದರು. ಪಾರಾಯಣ ಗ್ರಂಥದ ಪಲ್ಲಕ್ಕಿ ಉತ್ಸವ ಊರೊಳಗೆಲ್ಲಾ ಹಬ್ಬದ ವಾತಾವರಣ ನಿರ್ಮಿಸಿದಂತಿತ್ತು. ಕಾಶೀ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವು ಹಿಂದುಗಳಿಗೆ ಪವಿತ್ರವಾದ ಗ್ರಂಥವಾಗಿದೆ. ಹಿಂದೂಧರ್ಮದ ಬಗ್ಗೆ ತಿಳಿಯಲು ಮತ್ತು ಮಾನವೀಯ ಮೌಲ್ಯಗಳನ್ನು ತಿಳಿಯಲು ಈ ಗ್ರಂಥ ಸಹಾಯಕವಾಗಲಿದೆ ಎಂದು ಹೇಳಿದರು.

ಹೊಸದಿಗಂತ, 5–3–2013

ಗ್ರಂಥ ಪಠಿಸಿ

ಪ್ರತಿಭೆ ಜಾತಿ, ಪ್ರದೇಶಕ್ಕೆ ಸೀಮಿತವಲ್ಲ. ಪ್ರತಿಭಾ ಸಂಪನ್ನರನ್ನು ಗುರುತಿಸಿ, ಗೌರವಿಸುವ ಕಾರ್ಯ ನಿರಂತರವಾಗಿ ನಡೆಯಬೇಕು. ಮಾನವ ಕುಲಕ್ಕೆ ಲೇಸನ್ನು ಬಯಸುವ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥ ಬಹುಮುಖ್ಯ ಗ್ರಂಥವಾಗಿದ್ದು, ಈ ಗ್ರಂಥವನ್ನು ಪ್ರತಿಯೊಬ್ಬರೂ ಪಠಣಮಾಡಬೇಕು. ಇತಿಹಾಸ ಇರುವ ವೀರಶೈವ ವಿದ್ಯಾವರ್ಧಕ ಸಂಘ ಈ ಭಾಗದ ಜನರ ವಿದ್ಯೆಯ ಹಸಿವು ನೀಗಿಸುತ್ತಿದೆ ಎಂದು ಶ್ಲಾಘಿಸಿದರು.

– ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ



ಕಾಶೀ ಜಂಗಮವಾಡಿ ಮಠದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ

'ಧರ್ಮಗ್ರಂಥಗಳ ಪಾರಾಯಣದಿಂದ ಪುಣ್ಯೋದಯ'

ಉದಯವಾಣಿ, 6–3–2013



ವಾರಣಾಸಿ ಕಾಶೀ ಕ್ಷೇತ್ರದ ಜಂಗಮವಾಡಿ ಮಠದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ ಎಂಬ ಮರಾಠಿ ಪದ್ಯಗ್ರಂಥದ ಪಾರಾಯಣ ಅಭಿಯಾನ ಕಾಶೀ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಪ್ರಾರಂಭಗೊಂಡಿತು.

ಕಾಶೀ ಕ್ಷೇತ್ರದ ಜಂಗಮವಾಡಿ ಮಠದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ ಎಂಬ ಮರಾಠಿ ಪದ್ಯಗ್ರಂಥದ ಪಾರಾಯಣ ಅಭಿಯಾನಕ್ಕೆ ಕಾಶಿ ಜಗದ್ಗುರುಗಳು ಪಂಚಾಚಾರ್ಯ ಧ್ವಜಾರೋಹಣವನ್ನು ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸೊಲ್ಲಾಪುರ, ಮಾ. 5 : ಸಂಸಾರಸಾಗರದ ಕಷ್ಟಗಳಿಂದ ಪಾರುಮಾಡುವ ಸುಲಭಸಾಧನ ಪಾರಾಯಣವಾಗಿದ್ದು, ಧರ್ಮಗ್ರಂಥಗಳ ಪಾರಾಯಣ ಮೂಲಕ ಉತ್ಕೃಷ್ಟವಾದ ಪುಣ್ಯೋದಯವಾಗುವುದು. ಆ ಪುಣ್ಯದಿಂದಲೇ ಎಲ್ಲಾ ಮನೋರಥಗಳು ಪೂರ್ಣಗೊಳ್ಳಲಿದೆ ಎಂದು ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಕಾಶಿ ಕ್ಷೇತ್ರದ ಜಂಗಮವಾಡಿ ಮಠದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ ಎಂಬ ಮರಾಠಿ ಪದ್ಯಗ್ರಂಥದ ಪಾರಾಯಣ ಅಭಿಯಾನದಲ್ಲಿ ಅವರು ಆಶೀರ್ವಚನ ನೀಡಿದರು. ಪಾರಾಯಣದ ಜತೆಗೆ ಅದರ ಅರ್ಥವನ್ನು ತಿಳಿದುಕೊಂಡಾಗ ಲಿಂಗಾಂಗ ಸಾಮರಸ್ಯದ ಜ್ಞಾನವಾಗಿ ಕೊನೆಗೆ ಮುಕ್ತಿಯೂ ದೊರೆಯುತ್ತದೆ. ಆದ್ದರಿಂದ ಮಹಾರಾಷ್ಟ್ರದ ಭಕ್ತರಿಗೆ ಈ ಗ್ರಂಥವು ದೊರೆತಿರುವುದು ಅಮೂಲ್ಯ ಅಮೃತಕಲಶವೇ ದೊರೆತಂದಾಗಿದೆ ಎಂದರು.

ಸೋಮವಾರ ಬೆಳಗ್ಗೆ ಕಾಶೀ ಜಗದ್ಗುರುಗಳು ಪಂಚಾಚಾರ್ಯ ಧ್ವಜಾರೋಹಣವನ್ನು ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪೂಜ್ಯ ಶಿವಲಿಂಗ ಶಿವಾಚಾರ್ಯರು ಬೆಳ್ಳಂಕಿ, ಪೂಜ್ಯ ಮುಕ್ತೇಶ್ವರ ಶಿವಾಚಾರ್ಯರು ವೇಳಾಪುರ, ಪೂಜ್ಯ ಪ್ರಭುದೇವ ಶಿವಾಚಾರ್ಯರು ಮಾಢಾ, ಪೂಜ್ಯ ಶಿವಶಂಕರ ಶಿವಾಚಾರ್ಯರು ನೇರಪಿಂಗಳಾಯಿ, ಪೂಜ್ಯ ರಾಚಲಿಂಗ ಶಿವಾಚಾರ್ಯರು ಬಾರ್ಶಿ, ಪೂಜ್ಯ ಶಾಂತವೀರ ಶಿವಾಚಾರ್ಯರು ಔಸಾ, ಪೂಜ್ಯ ನಂದಿಕೇಶ್ವರ ಶಿವಾಚಾರ್ಯರು ಇವರೇ ಮೊದಲಾದ ಶ್ರೀಗಳ ನೇತೃತ್ವದಲ್ಲಿ ಕಾರ್ಯಕ್ರಮ ಪ್ರಾರಂಭಗೊಂಡಿದೆ.

ಮಾರ್ಚ್ 10ರಂದು ಮಹಾಶಿವರಾತ್ರಿ ನಿಮಿತ್ತ ಏಳುದಿನಗಳ ಕಾಲ ಪಾರಾಯಣವು ದಿನಂಪ್ರತಿ ಬೆಳಗ್ಗೆ 8ರಿಂದ 12ರವರೆಗೆ ನಡೆಯಲಿದೆ.

ಸೊಲ್ಲಾಪುರ ಸಂಗಮೇಶ್ವರ ಮಹಾ ವಿದ್ಯಾಲಯದ ನಿವೃತ್ತ ಮರಾಠಿ ಪ್ರಾಧ್ಯಾಪಕರಾದ ಡಾ॥ ಶೇಷನಾರಾಯಣ ಪಸಾರಕರ ಅವರು ಶ್ರೀ ಸಿದ್ಧಾಂತ ಶಿಖಾಮಣಿಯ 1,405 ಸಂಸ್ಕೃತ ಶ್ಲೋಕಗಳಿಗೆ 3,811 ಮರಾಠಿ ವೋವಿರೂಪದ ಪದ್ಯಾನುವಾದವನ್ನು ಮಾಡಿದ್ದಾರೆ. ಶ್ರೀ ಭಗವದ್ಗೀತೆಗೆ ಶ್ರೀ ಜ್ಞಾನೇಶ್ವರ ಪದ್ಯಾನುವಾದ ಇರುವಂತೆ ಶ್ರೀ ಸಿದ್ಧಾಂತ ಶಿಖಾಮಣಿಗೆ ತತ್ವಾಮೃತವೆಂಬ ಪದ್ಯಾನುವಾದವನ್ನು ಬರೆಯಲಾಗಿದೆ. ಆದ್ದರಿಂದ ಏಳು ದಿನಗಳ ವರೆಗೆ ನಡೆಯುವ ಪಾರಾಯಣ ಕಾರ್ಯಕ್ರಮಕ್ಕೆ ಮಹಾರಾಷ್ಟ್ರದ ಸಾವಿರಾರು ಭಕ್ತರು ಪಾಲ್ಗೊಳ್ಳಲಿದ್ದಾರೆ. ಕಾಶಿಯಿಂದ ಪ್ರಾರಂಭವಾದ ಈ ಪಾರಾಯಣ ಅಭಿಯಾನ ಮಹಾರಾಷ್ಟ್ರದ ಪ್ರತಿಯೊಂದು ಜಿಲ್ಲೆ, ತಾಲೂಕು ಹಾಗೂ ಗ್ರಾಮಗಳಲ್ಲಿ ಪ್ರಾರಂಭಿಸಲಾಗುತ್ತದೆ ಎಂದು ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಜಗದ್ಗುರುಗಳು ಮಹಾರಾಷ್ಟ್ರದೆಲ್ಲೆಡೆ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ ಮರಾಠಿ ಪದ್ಯ ಗ್ರಂಥವನ್ನು ಬಿಡುಗಡೆ ಮಾಡಿದ್ದರು. ಈ ಗ್ರಂಥದ ಪಾರಾಯಣ ಆರಂಭಗೊಂಡಿದ್ದು ಕಾಶೀ ಜಂಗಮವಾಡಿ ಮಠದಲ್ಲಿ. ಕಾಶೀ ಜಗದ್ಗುರುಗಳು ಪಂಚಾಚಾರ್ಯ ಧ್ವಜಾರೋಹಣವನ್ನು ನೆರವೇರಿಸಿ ಪಾರಾಯಣಕ್ಕೆ ಚಾಲನೆ ನೀಡಿದರು.

ಏಳು ದಿನಗಳವರೆಗೆ ನಡೆಯುವ ಪಾರಾಯಣ ಕಾರ್ಯಕ್ರಮಕ್ಕೆ ಮಹಾರಾಷ್ಟ್ರದ ಸಾವಿರಾರು ಭಕ್ತರು ಆಗಮಿಸುವ ನಿರೀಕ್ಷೆಯನ್ನು ಜಗದ್ಗುರುಗಳು ಹೊಂದಿದ್ದಾರೆ.

ಬೆಳೆಯಲಿ ಒಂದೇ ಎನ್ನುವ ಮನೋಭಾವ

ಉದಯವಾಣಿ, 20-4-2013



ಹಾವೇರಿ : ಸಿದ್ಧಾಂತ ಶಿಖಾಮಣಿ ಪ್ರವಚನದ ಪಾರಾಯಣ ಗ್ರಂಥ ಹಾಗೂ ಸಿಡಿಯನ್ನು ದಿಂಗಾಲೇಶ್ವರ ಶ್ರೀಗಳು ಬಿಡುಗಡೆಗೊಳಿಸಿದರು.

ಇದೇ ವೇಳೆ ದಿಂಗಾಲೇಶ್ವರ ಶ್ರೀಗಳು ಸಿದ್ಧಾಂತ ಶಿಖಾಮಣಿ ಪ್ರವಚನದ ಪಾರಾಯಣ ಗ್ರಂಥ ಹಾಗೂ ಸಿಡಿಯನ್ನು ಬಿಡುಗಡೆ ಗೊಳಿಸಿದರು. ಜ್ಞಾನ ಮೂರ್ತಿಗಳಾದ ಉಜ್ಜಯನಿ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯರು, ಶ್ರೀಶೈಲದ ಡಾ॥ ಚನ್ನಸಿದ್ಧರಾಮ ಪಂಡಿತಾರಾಧ್ಯಾ ಶಿವಾಚಾರ್ಯ ಶ್ರೀಗಳು ಹಾಗೂ ಕಾಶಿ ಡಾ। ಚಂದ್ರಶೇಖರ ಶಿವಾಚಾರ್ಯ ಶ್ರೀಗಳು ಸಾನಿಧ್ಯ ವಹಿಸಿದ್ದರು.

16–6–2013 : ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಮಂಗಳವೇಡಾ ಪಟ್ಟಣದ ಗುರು ಕೇದಾರಲಿಂಗ ಮಠದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ ಮರಾಠಿ ಪಾರಾಯಣ ಗ್ರಂಥದ ಉತ್ಸವ ನಡೆದ ನಂತರ ಕಾಶೀ ಜಗದ್ಗುರುಗಳು ಬಿಡುಗಡೆಗೊಳಿಸಿದರು. ಮಂಗಳವೇಡಾದಿಂದಲೇ ಪಾರಾಯಣ ಗ್ರಂಥದಿಂದ ಸಮಾರಂಭ ಆರಂಭಿಸಲು ಮುಖ್ಯ ಕಾರಣ ಬಸವಣ್ಣನವರ ಕ್ರಾಂತಿ ಆರಂಭಗೊಂಡಿದ್ದ ಮಹಾರಾಷ್ಟ್ರದ ಮಂಗಳವೇಡಾದಿಂದ. ಜುಲೈ ತಿಂಗಳ 7ನೇ ತಾರೀಖಿನವರೆಗೆ ಮೌಢಾ, ಉಪಳಾಯಿ, ಕರಮಾಳಾ, ಕೇಮ್ ಗ್ರಾಮಗಳಲ್ಲಿ ಗ್ರಂಥ ದಿಂಡಿ ಕಾರ್ಯಕ್ರಮ ಸಾಗಿದ್ದನ್ನು ಜಗದ್ಗುರುಗಳು ತಿಳಿಸಿದರು.

ಮಹಾರಾಷ್ಟ್ರದ ಪ್ರತಿಯೊಬ್ಬರ ಕೈಗೂ ಗ್ರಂಥ ಸೇರಬೇಕು : ಶ್ರೀಶೈಲ ಜಗದ್ಗುರು

ಉದಯವಾಣಿ, 20–6–2013



ಸೊಲ್ಲಾಪುರ ಜಿಲ್ಲೆಯ ಮಾಢಾ ತಾಲೂಕಿನ ಉಪಳಾಯಿ (ಬು) ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ ಮರಾಠಿ ಪಾರಾಯಣ ಗ್ರಂಥವನ್ನು ಕಾಶಿ ಜಗದ್ಗುರುಗಳು ಲೋಕಾರ್ಪಣೆ ಗೊಳಿಸಿದರು.

ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ತಾಸಗಾಂವನಲ್ಲಿ ಸಿದ್ಧಾಂತ ಶಿಖಾಮಣಿ ತತ್ವಾಮೃತ ಮರಾಠಿ ಪಾರಾಯಣ ಗ್ರಂಥವನ್ನು ಬಿಡುಗಡೆ ಮಾಡಿದರು. ಸೋಲ್ಲಾಪುರ, ಸಾಂಗಲಿ, ಉಸ್ಮಾನಾಬಾದ್, ನಾಂದೇಡ, ಪರಳಿ ವೈಜನಾಥ, ಬೀಡ್, ಪರಬಾಣಿ, ಹಿಂಗೋಲಿ, ವಾಶಿವ್, ಆಕೋಲಾ, ಅಮರಾವತಿ, ಯುವಕಮಾಳ, ವರ್ಧಾ, ನಾಗಪುರ ಮತ್ತು ಮಧ್ಯಪ್ರದೇಶದ ಪಾಂಡುರ್ಣಾ, ಆಂಧ್ರಪ್ರದೇಶದ ನಿಜಾಮಾ ಬಾದ್ ಸೇರಿದಂತೆ ಅನೇಕ ಜಿಲ್ಲೆಯ ಗ್ರಾಮಗಳಲ್ಲಿ ಗ್ರಂಥ ಮೆರವಣಿಗೆ ಕೈಗೊಂಡು ಗ್ರಂಥ ಮಹಿಮೆ ಮತ್ತು ಪಾರಾಯಣ ಮಾಡಲಾಗುತ್ತಿದೆ. ಕಾಶೀ ಜಗದ್ಗುರುಗಳ ಜೊತೆ ಶ್ರೀಶೈಲ ಜಗದ್ಗುರುಗಳು ಎಲ್ಲೆಡೆ ಸಾನ್ನಿಧ್ಯ ವಹಿಸಿದ್ದರು.

ಸಾಂಗಲಿ ಜಿಲ್ಲೆಯ ತಾಸಗಾಂವನಲ್ಲಿ ಗ್ರಂಥ ಮೆರವಣಿಗೆಯಲ್ಲಿ ಜಗದ್ಗುರುಗಲ್ಲದೆ ಮಹಾರಾಷ್ಟ್ರದ ಗೃಹಸಚಿವ ಆರ್.ಆರ್. ಪಾಟೀಲ್ ಅವರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಗ್ರಂಥ ಬಿಡುಗಡೆ ಮಾಡಿದ ಗೃಹಸಚಿವರು ಗ್ರಂಥ ಮುದ್ರಣಕ್ಕಾಗಿ ಮಹಾರಾಷ್ಟ್ರ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ಉದಯವಾಣಿ, 20–6–2013



ಸೊಲ್ಲಾಪುರ : ಉಸ್ಮಾನಾಬಾದ ಜಿಲ್ಲೆಯ ಭೂಮ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿದ್ಧಾಂತ ಶಿಖಾಮಣಿ ತತ್ವಾಮೃತ ಮರಾಠಿ ಪಾರಾಯಣ ಗ್ರಂಥವನ್ನು ಲೋಕಾರ್ಪಣೆ ಮಾಡಲಾಯಿತು.



ಉದಯವಾಣಿ, 1–7–2013

ಲೋಕಾರ್ಪಣೆ

ಸೊಲ್ಲಾಪುರ : ವಾಶಿಮ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿದ್ಧಾಂತ ಶಿಖಾಮಣಿ ಗ್ರಂಥ ಲೋಕಾರ್ಪಣೆ ಮಾಡಲಾಯಿತು. ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯರು ಮತ್ತು ಶ್ರೀಶೈಲ ಜಗದ್ಗುರು ಡಾ। ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಉಪಸ್ಥಿತರಿದ್ದರು.

'ಸಿದ್ಧಾಂತ ಶಿಖಾಮಣಿ' ಬಿಡುಗಡೆ

ಸೊಲ್ಲಾಪುರ : ವಾಶಿಮ ನಗರದಲ್ಲಿ ಕಾಶೀ ಶ್ರೀಗಳ ಮತ್ತು ಶ್ರೀಶೈಲ ಜಗದ್ಗುರುಗಳ ಪಲ್ಲಕ್ಕಿ ಮಹೋತ್ಸವ ಮತ್ತು ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥದ ಬಿಡುಗಡೆ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು. ಸಾಖರಖೇರ್ಡಾ ಮಠದ ಸಿದ್ಧಲಿಂಗ ಶಿವಾಚಾರ್ಯರು, ಲಾಡಕಾರಂಜಾ ಮಠದ ಮರುಳಸಿದ್ಧ ಶಿವಾಚಾರ್ಯರು, ಮನ್ಮಥಧಾಮ ಮಾಂಜರಶುಂಬಾ ಮಠದ ಡಾ॥ ವಿರೂಪಾಕ್ಷ ಶಿವಾಚಾರ್ಯರು, ಔಸಾ ಮಠದ ಶಾಂತವೀರಲಿಂಗ ಶಿವಾಚಾರ್ಯರು, ಚಿಂತಾಮಣಿ ಮಠ ಟ್ರಸ್ಟ್ ಅಧ್ಯಕ್ಷ ಕಾಶಿನಾಥಪ್ಪ ಲಾಹ್ವರೆ, ಸಿದ್ಧಾಂತ ಶಿಖಾಮಣಿ ತತ್ತ್ವಾಮೃತ ಮರಾಠಿ ಪಾರಾಯಣ ಗ್ರಂಥದ ರಚನಾಕಾರ ಡಾ॥ ಶೇಷನಾರಾಯಣ ಪಸಾರಕರ ಸಮ್ಮುಖದಲ್ಲಿ ಗ್ರಂಥ ಲೋಕಾರ್ಪಣೆ ಜರುಗಿತು. ಕಾಶೀ ಮತ್ತು ಶ್ರೀಶೈಲ ಜಗದ್ಗುರುಗಳು ಮಾತನಾಡಿ, ವಾಶಿಮ ಜಿಲ್ಲೆಯಲ್ಲಿ 25 ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವೀರಶೈವರಿದ್ದಾರೆ. ಮುಂದಿನ ದಿನಗಳಲ್ಲಿ ಸ್ಥಳೀಯ ಶಿವಾಚಾರ್ಯರ ಮಾರ್ಗದರ್ಶನದಲ್ಲಿ ಬೃಹತ್ ಪ್ರಮಾಣದ ಶ್ರೀ ಸಿದ್ಧಾಂತ ಶಿಖಾಮಣಿ ತತ್ತ್ವಾಮೃತ ಗ್ರಂಥದ ಪಾರಾಯಣ ಸಪ್ತಾಹ ಏರ್ಪಡಿಸಿ ಎಂದರು.



वसमत में सोमवार को सिद्धांत शिखामणि ग्रंथ का लोकार्पण करते हुए जगतगुरु डॉ चंद्रशेखर महास्वामी. साथ हैं सिद्धलिंग शिवाचार्य महाराज, शांभ शिवाचार्य महाराज, दिगांबर शिवाचार्य महाराज, पूर्व मंत्री डॉ जयप्रकाश मुंदडा. छाया : श्रीधर वालवंते



ಸೊಲ್ಲಾಪುರ : ನಾಗಪುರದಲ್ಲಿ ನಡೆದ ಶ್ರೀ ಸಿದ್ಧಾಂತ ಶಿಖಾಮಣಿ ತತ್ತ್ವಾಮೃತ ಮರಾಠಿ ಪಾರಾಯಣ ಗ್ರಂಥ ದಿಂಡಿ ಪ್ರಥಮ ಚರಣದ ಸಮಾರೋಪ ಸಮಾರಂಭದಲ್ಲಿ ಕಾಶೀ ಮತ್ತು ಶ್ರೀಶೈಲ ಜಗದ್ಗುರು ಮತ್ತು ಭಕ್ತರು ಭಾಗವಹಿಸಿದ್ದರು.

ಸಿದ್ಧಾಂತ ಶಿಖಾಮಣಿ ಧರ್ಮಸಭೆಯಲ್ಲಿ ಕಾಶೀ ಜಗದ್ಗುರುಗಳು

ಧರ್ಮಗ್ರಂಥ ಪಾರಾಯಣ, ಮಂತ್ರ ಜಪಕ್ಕೆ ಸಮಾನ

ಕಾಶೀ ಜಗದ್ಗುರುಗಳು ಸಂಕಲ್ಪ ಮಾಡಿದಂತೆ ಮಹಾರಾಷ್ಟ್ರದ ಮಂಗಳ ವೇಡಾದಿಂದ ಆರಂಭಗೊಂಡ ಪಾರಾಯಣ ಗ್ರಂಥದ ದಿಂಡಿಯ ಪ್ರಥಮ ಚರಣದ ಸಮಾರೋಪ ಸಮಾರಂಭ ನಾಗಪುರದಲ್ಲಿ ಸಮಾರೋಪಗೊಂಡಿತು. ಒಂದು ತಿಂಗಳ ಪರ್ಯಂತ ಗ್ರಾಮ–ನಗರಗಳಲ್ಲಿ ಗ್ರಂಥೋತ್ಸವ ಮತ್ತು ಗ್ರಂಥ ಲೋಕಾರ್ಪಣ ಕಾರ್ಯಕ್ರಮಗಳನ್ನು ಶ್ರೀಶೈಲ ಹಾಗೂ ಕಾಶಿ ಜಗದ್ಗುರುಗಳ ಜೊತೆಗೂಡಿ ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ನಾಗಪುರದ ಜಗದ್ಗುರು ಪಂಚಾಚಾರ್ಯ ಸಭಾ ಭವನದ ಎರಡನೇ ಮಹಡಿ ಕಟ್ಟಡ ನಿರ್ಮಾಣಕ್ಕೆ ಉಭಯ ಜಗದ್ಗುರುಗಳು ತಲಾ 51 ಸಾವಿರ ರೂಗಳನ್ನು ದಯಪಾಲಿಸಿದರು.

11–7–2013 : ಗುಲ್ಬರ್ಗಾದಲ್ಲಿ ಧರ್ಮಸಭೆಯಲ್ಲಿ ಆಶೀರ್ವಚನ ನೀಡುತ್ತಾ ಧರ್ಮಗ್ರಂಥಗಳ ಶಾಸ್ತ್ರರೂಪಿ ಮಹಾಮಂತ್ರವ್ಯಕ್ತಿಗಳಾಗಿದ್ದ ಇವುಗಳ ಪಾರಾಯಣದಿಂದ ಪುಣ್ಯ ಪ್ರಾಪ್ತವಾಗುತ್ತದೆ. ಹೀಗಾಗಿ ಪ್ರತಿಯೊಬ್ಬರೂ ಧರ್ಮಗ್ರಂಥಗಳ ಪಾರಾಯಣ ಮಾಡಬೇಕೆಂದು ಕಾಶೀ ಜಗದ್ಗುರುಗಳು ಅಪ್ಪಣೆ ಕೊಡಿಸಿದರು.

ವೀರಶೈವ ಒಳ ಪಂಗಡಗಳು ಒಂದಾಗಬೇಕು

ರಾಜಕೀಯ ಮಾರ್ಗದರ್ಶನ ತಪ್ಪೇನಲ್ಲ

ವಿಜಯ ಕರ್ನಾಟಕ, 26–7–2013



ರಾಯಚೂರಿನ ಸೋಮವಾರಪೇಟೆ ಹಿರೇಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಕಾಶೀ ಮಠದ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಶುಕ್ರವಾರ ಲೋಕಾರ್ಪಣೆ ಮಾಡಿದರು.



ರಾಯಚೂರಿನ ಕಿಲ್ಲೆ ಬೃಹನ್ಮಠದಿಂದ ಸೋಮವಾರ ಪೇಟೆ ಹಿರೇಮಠದವರೆಗೆ ಕಾಶೀ ಜಗದ್ಗುರುಗಳು ಪಾದಯಾತ್ರೆ ನಡೆಸಿದರು.

ಪಲ್ಲಕ್ಕಿ ಮಹೋತ್ಸವ ಮೆರವಣಿಗೆ :

ಕಾಯಕ್ರಮಕ್ಕೂ ಮುನ್ನ ಸ್ಥಳೀಯ ಸಾವಿರದೇವರ ಮಠ ಕಿಲ್ಲೆ ಬೃಹನ್ಮಠದಿಂದ ಸೋಮವಾರಪೇಟೆ ಹಿರೇಮಠದವರೆಗೆ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥದ ಪಲ್ಲಕ್ಕಿ ಮಹೋತ್ಸವ ನಡೆಯಿತು. ಕಾಶೀ ಜ್ಞಾನಸಿಂಹಾಸನಾಧೀಶ್ವರ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಪಾದಯಾತ್ರೆ ಮೆರವಣಿಗೆ ನಡೆಸಲಾಯಿತು.

ಕನ್ನಡ ಸೇರಿ 8 ಭಾಷೆಗಳಲ್ಲಿ ಸಿದ್ಧಾಂತ ಶಿಖಾಮಣಿ ಗ್ರಂಥ ಅನುವಾದ–ಕಾಶಿ ಜಗದ್ಗುರುಗಳು

27–7–2013, ರಾಯಚೂರುವಾಣಿ

ರಾಯಚೂರಿನಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥದ ಅಡ್ಡಪಲ್ಲಕ್ಕಿ ಮಹೋತ್ಸವ ಜಗದ್ಗುರುಗಳವರ ಪಾದಯಾತ್ರೆ ಮತ್ತು ಗ್ರಂಥ ಬಿಡುಗಡೆ ಸಮಾರಂಭದ ಸಾನ್ನಿಧ್ಯವನ್ನು ಜಗದ್ಗುರುಗಳು ವಹಿಸಿ ಧರ್ಮ ಸಂದೇಶವನ್ನು ನೀಡಿದರು. ಜಗದ್ಗುರುಗಳು ನಿರ್ಧರಿಸಿದಂತೆ ಒಂದು ಲಕ್ಷ ಪ್ರತಿಗಳನ್ನು ಹೊರತರಲಾಗಿದ್ದನ್ನು ಸಂತೋಷದಿಂದ ಸಭೆಯಲ್ಲಿ ತಿಳಿಸುತ್ತಾ ಗ್ರಂಥಕ್ಕೆ ಇನ್ನೂ ಬೇಡಿಕೆ ಹೆಚ್ಚಾಗಿರುವುದರಿಂದ ಸದ್ಯದಲ್ಲಿ 2ನೇ ಆವೃತ್ತಿ ಬಿಡುಗಡೆ ಮಾಡಲಾಗುವುದೆಂದರು. ಈಗಾಗಲೇ ಕನ್ನಡ ಸೇರಿ ಎಂಟು ಭಾಷೆಗಳಲ್ಲಿ ಗ್ರಂಥ ಅನುವಾದವಾಗಿ ಬಿಡುಗಡೆಗೊಂಡಿದೆ. ತಮ್ಮ ಆಶೀರ್ವಚನದಲ್ಲಿ ವೀರಶೈವ ಒಳಪಂಗಡಗಳು ಒಗ್ಗೂಡಬೇಕು. ಕುಲ, ಕಸುಬು, ಆಧರಿಸಿ ಗುರುತಿಸಿಕೊಂಡಿರುವ ಒಳಪಂಗಡಗಳಲ್ಲಿ ವೈವಾಹಿಕ ಸಂಬಂಧ ಮಾಡಬೇಕು ಎಂದು ಹೇಳಿದರು.

10–7–2013 : ಕಲ್ಬುರ್ಗಿಯಲ್ಲಿ ನಡೆದ ಧರ್ಮ ಸಭೆಯಲ್ಲಿ ಜಗದ್ಗುರುಗಳು ಪಾರಾಯಣದ ಬಗ್ಗೆ ಹೇಳುತ್ತಾ, ದೈನಂದಿನ ಪಾರಾಯಣದ ಜೊತೆಗೆ ಜನ್ಮದಿನ, ಮಕ್ಕಳ ಜನ್ಮದಿನ, ಹಿರಿಯರ ಪುಣ್ಯತಿಥಿ ಹಾಗೂ ವಿವಾಹ ವಾರ್ಷಿಕೋತ್ಸವ ಮುಂತಾದ ಪರ್ವಕಾಲಗಳಲ್ಲಿ ಸಾಪ್ತಾಹಿಕ ಪಾರಾಯಣಗಳನ್ನು ಮಾಡುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕೆಂದು ಹೊಸ ರೀತಿಯಲ್ಲಿ ಸಲಹೆ ನೀಡಿ ಪಾರಾಯಣದ ಪ್ರಚಾರವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪ್ರಚಾರಮಾಡುವ ಕೀರ್ತಿಗೊಳಿಸುವ ನಿಟ್ಟಿನಲ್ಲಿ ಹೇಳಿದರು.



29–7–2013, ಉದಯವಾಣಿ

ಮೆರವಣಿಗೆ

ಜಮಖಂಡಿ : ಸಿದ್ಧಾಂತ ಶಿಖಾಮಣಿ ಗ್ರಂಥದ ಪಲ್ಲಕ್ಕಿ ಮಹೋತ್ಸವದಲ್ಲಿ ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ರಾಜ ದೇಶಿಕೇಂದ್ರ ಶಿವಾಚಾರ್ಯ ಶ್ರೀಗಳು, ಶ್ರೀಶೈಲ ಜಗದ್ಗುರು ಡಾ॥ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು, ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಶ್ರೀಗಳು ಪಾಲ್ಗೊಂಡಿದ್ದರು.

6–1–2014 : ಬೆಂಗಳೂರಿನ ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಶಾಖೆ ವೀರಶೈವ ಅನುಸಂಧಾನ ಸಂಸ್ಥಾನವು 1998ರಿಂದ ಕಾಶೀ ಜಗದ್ಗುರುಗಳವರ ಧನುರ್ಮಾಸ ಮಹಾಶಿವಪೂಜೆ ಹಾಗೂ ಆಧ್ಯಾತ್ಮಿಕ ಪ್ರವಚನವನ್ನು ಪ್ರತೀವರ್ಷ ಜನವರಿಯಲ್ಲಿ ನಡೆಸಿಕೊಂಡು ಬರುತ್ತಾ ಇದೆ. 2014ರಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣವನ್ನೇ ಪ್ರಾರ್ಥನೆಗೆ ಬದಲು ಅರ್ಧಗಂಟೆ ಮಾಡುವಂತೆ ಏರ್ಪಡಿಸಿದ್ದೆವು. ಬೆಂಗಳೂರಿನಲ್ಲಿ 'ಸ್ನೇಹಾ' ಎಂಬ ವೀರಶೈವ ಮಹಿಳಾ ಸಂಘಟನೆಯಲ್ಲಿ 4000ಕ್ಕೂ ಹೆಚ್ಚು ಸದಸ್ಯರಿದ್ದಾರೆ. ಅದರ ಕಾರ್ಯದರ್ಶಿ ಶ್ರೀಮತಿ ಸುಜಾತಾ



ಬೆಂಗಳೂರಿನ ಸ್ನೇಹಾ ಸದಸ್ಯೆಯರಿಂದ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ



ಬೆಂಗಳೂರಿನ ವಿಭೂತಿಪುರ ಮಠದ ವಿದ್ಯಾರ್ಥಿಗಳು ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಮಾಡುತ್ತಿರುವುದು.

ರಾಜಣ್ಣ ಅವರನ್ನು ಸಂಪರ್ಕಿಸಿ ಪ್ರತೀದಿನ ಒಂದೊಂದು ಬಡಾವಣೆಯವರು ಪಾರಾಯಣ ಮಾಡುವಂತೆ ಏರ್ಪಡಿಸಿದ್ದಲ್ಲದೆ, ಸ್ನೇಹಾ ಕೇಂದ್ರದಿಂದ 10-1-2014ರಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸುಶ್ರಾವ್ಯವಾಗಿ ರಾಗಬದ್ಧವಾಗಿ ಜಗದ್ಗುರುಗಳವರ ಸಿಡಿಯನ್ನೇ ಅನುಸರಿಸಿ ಪಾರಾಯಣ ಮಾಡಿದ್ದು ಜಗದ್ಗುರುಗಳಿಗೆ ತಮ್ಮ ಪ್ರಯತ್ನ ಸಾರ್ಥಕವಾಯಿತೆಂದೆನಿಸಿ ಸಂತೋಷ ವ್ಯಕ್ತಪಡಿಸಿದರು. ಇದೆಲ್ಲದರ ಹಿಂದೆ ಶ್ರೀಮತಿ ಇಂದುಕಲಾ ಅವರ ಪರಿಶ್ರಮ ಸಾಕ್ಷಿದೆ.

ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ಕರ್ನಾಟಕ ಸರ್ಕಾರದ ಆಯುಕ್ತರಾದ ಶ್ರೀ ಎಂ.ವಿ. ವೇದಮೂರ್ತಿ ಐ.ಎ.ಎಸ್. ಅವರು ಬಿಡುಗಡೆ ಮಾಡಿದರು.

14-1-2014 : ಹಾನಗಲ್ಲಿನಲ್ಲಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಜನಪ್ರಿಯ ಶಾಸಕರಾದ ಶ್ರೀ ಮನೋಹರ ತಹಶೀಲ್ದಾರರಿಂದ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥ ಬಿಡುಗಡೆ ಮಾಡಲಾಯಿತು.

ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥ ಪಲ್ಲಕ್ಕಿ ಮೆರವಣಿಗೆ
ಪೂರತಿಪ್ಲಿ ಗ್ರಾಮದ ಬಸ್ ನಿಲ್ದಾಣದಿಂದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದವರೆಗೆ

ದಿನಾಂಕ : 10-6-2014 ರಂದು ಮಂಗಳವಾರ   ಸಮಯ : ಬೆಳಗ್ಗೆ 10. ಗಂಟೆಗೆ
ಸ್ಥಳ : ಶ್ರೀ ರಾಮಲಿಂಗೇಶ್ವರ ದೇವಸ್ಥಾನ, ಪೂರತಿಪ್ಲಿ ತಾ|| ಜಿ|| ರಾಯಚೂರು

ಧಾರ್ಮಿಕ ನೆಲೆಯಲ್ಲಿ ಬದುಕು ಸಾರ್ಥಕ   **ವಿಜಯ ಕರ್ನಾಟಕ, 11-6-2014**



ದೇವದುರ್ಗ ತಾಲೂಕಿನ ಮಸರಕಲ್ ಶ್ರೀಮಠ ಆವರಣದಲ್ಲಿ ಜರುಗಿದ ಜಗದ್ಗುರುಗಳ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಕಾಶೀ ಜ್ಞಾನಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಬುಧವಾರ ಮಾತನಾಡಿದರು.

ಮಸರಕಲ್ (ರಾಯಚೂರು ಜಿಲ್ಲೆ)ನಲ್ಲಿ ಜಗದ್ಗುರುಗಳ ಪೀಠಾರೋಹಣ ರಜತ ಮಹೋತ್ಸವ ಸಿದ್ಧಾಂತ ಶಿಖಾಮಣಿ ಗ್ರಂಥ ಪಲ್ಲಕ್ಕಿ ಉತ್ಸವ ಜರುಗಿತು. ಜಗದ್ಗುರುಗಳು ದೇಶ ಧಾರ್ಮಿಕ ಸಂಸ್ಕೃತಿಯಿಂದ ಕೂಡಿಕೊಂಡಿದೆ. ಭಾವನಾತ್ಮಕ ಭಾವನೆಗಳೊಂದಿಗೆ ಜನಜೀವನ ನಡೆಸುತ್ತಿದ್ದಾರೆ. ಹೀಗಾಗಿಯೇ ಮಾನವಧರ್ಮ ಮತ್ತು ಧರ್ಮದಿಂದಲೇ ಶಾಂತಿ ಎಂಬ ಸಂದೇಶ ನೀಡಲಾಗುತ್ತಿದೆ ಎಂದು ಜಗದ್ಗುರುಗಳು ಹೇಳುತ್ತಾ ಮಗುವನ್ನು ತಾಯಿ ಶುಚಿಗೊಳಿಸಿ ತಂದೆ ಬಳಿ ಕಳುಹಿಸುತ್ತಾಳೋ ಅದೇ ಮಾದರಿಯಲ್ಲಿ ಗುರು ದೀಕ್ಷೆ ನೀಡಿ ಭಗವಂತನ ದರ್ಶನಕ್ಕೆ ಮಾರ್ಗದರ್ಶನ ನೀಡುತ್ತಾನೆಂದರು.

ಶ್ರೀ ಶ್ರೀ 1008 ಕಾಶಿ ಜಗದ್ಗುರುಗಳ ಪೀಠಾರೋಹಣ ರಜತ ಮಹೋತ್ಸವ ಮತ್ತು ಪ್ರಚಾರ ಅಭಿಯಾನ
ಆನೆ ಅಂಬಾರಿ ಮೇಲೆ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥ ಪಲ್ಲಕ್ಕಿ ಮಹೋತ್ಸವ
ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥ ಪಲ್ಲಕ್ಕಿ ಮೆರವಣಿಗೆ
ಶ್ರೀ ಕರಿಯಪ್ಪ ತಾತ ದೇವಸ್ಥಾನದಿಂದ ಶ್ರೀ ಬೋಗೇಶ್ವರ ದೇವಸ್ಥಾನದವರೆಗೆ

ದಿನಾಂಕ : 12-6-2014 ರಂದು ಗುರುವಾರ ಸಮಯ : ಬೆಳಗ್ಗೆ 10. ಗಂಟೆಗೆ
ಸ್ಥಳ : ಶ್ರೀ ಬೋಗೇಶ್ವರ ದೇವಸ್ಥಾನ, ಕಲ್ಮಲಾ ತಾ॥ ಜಿ॥ ರಾಯಚೂರು

13-6-2014,
ಶ್ರೀ ಶ್ರೀ 1008 ಕಾಶಿ ಜಗದ್ಗುರುಗಳ ಪೀಠಾರೋಹಣ ರಜತ ಮಹೋತ್ಸವ ಮತ್ತು ಪ್ರಚಾರ ಅಭಿಯಾನ
ಆನೆ ಅಂಬಾರಿ ಮೇಲೆ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥ ಪಲ್ಲಕ್ಕಿ ಮಹೋತ್ಸವ
ಸೋಮವಾರಪೇಟೆ ಹಿರೇಮಠದಿಂದ ಪ್ರಮುಖ ರಸ್ತೆಗಳ ಮೂಲಕ ಬಾಜಾ ಭಜಂತ್ರಿ ನಂದಿಕೋಲು ಹಾಗೂ
ವಿವಿಧ ವಾದ್ಯಗಳೊಂದಿಗೆ ಮಕ್ತಲ್‌ಪೇಟೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನದವರೆಗೆ ಮೆರವಣಿಗೆ

ಧರ್ಮಾಚರಣೆಗಳಿಂದ ಶಾಂತಿ ನೆಮ್ಮದಿ : ಕಾಶಿ ಶ್ರೀಗಳವರು
ರಜತ ಮಹೋತ್ಸವ : ಶ್ರೀ ಕಾಶಿ ಜಗದ್ಗುರುಗಳ ಅದ್ಧೂರಿ ಮೆರವಣಿಗೆ

8-7-2014 : ಕಾಶೀ ಮಹಾಪೀಠದಲ್ಲಿ ಆರಂಭಗೊಂಡಿರುವ ಪೀಠಾರೋಹಣದ ರಜತ ಮಹೋತ್ಸವವು ಜುಲೈ 7ನೇ ತಾ.ನಿಂದ ನವೆಂಬರ್ 11ರವರೆಗೆ ನಡೆಯುತ್ತಲಿದೆ. 8ನೇ ತಾ॥ ಜುಲೈ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಸಪ್ತಾಹದ ಉದ್ಘಾಟನೆಯನ್ನು ಶ್ರೀ ಪಂ. ಶಿವಪ್ಪ ನಾಗನಾಥಪ್ಪ ಖಿಕೆ, ಶ್ರೀಮತಿ ಮಹಾನಂದ ಖಿಕೆ ಅವರು ಮಾಡಿದರು. ಉಜ್ಜಯಿನಿ ಮತ್ತು ಕಾಶೀ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆಯಿತು. ಬಂಕಾಪುರದಿಂದ ವಿವಿಧ ಬಳಗಗಳಿಂದ ಆಗಮಿಸಿದ್ದ ಹೆಣ್ಣುಮಕ್ಕಳಿಂದ ಪಾರಾಯಣ ಸಪ್ತಾಹ ಆರಂಭಗೊಂಡಿತ್ತು.

ಧರ್ಮ ಗ್ರಂಥಗಳಿಗೆ ಮಹಾಮಂತ್ರ ಎಂದು ಶಾಸ್ತ್ರಗಳು ಹೇಳುತ್ತವೆ. ಇವುಗಳಿಗೂ ಋಷಿ, ಛಂದಸ್ಸು ಮತ್ತು ನ್ಯಾಸಾದಿಗಳು ಇರುತ್ತವೆ ಆದಕಾರಣ ಮಂತ್ರಗಳ ಜಪವನ್ನು ಮಾಡುವಂತೆ ಧರ್ಮಗ್ರಂಥಗಳನ್ನು ಪಾರಾಯಣ ಮಾಡಬೇಕೆಂದು ಜಗದ್ಗುರುಗಳು ತಿಳಿಸಿದರು.

ಪಾರಾಯಣದಿಂದ ಪರಮಪದ ಪ್ರಾಪ್ತಿ



ಪಂ.ಪ್ರ । ಸುದ್ದಿ ಮನೆ । ವಾರಣಾಸಿ : ನಮ್ಮ ದೇಶದಲ್ಲಿ ಧರ್ಮ, ಗ್ರಂಥ, ಪುರಾಣ, ಸಂತರ ಚರಿತ್ರೆ ಮತ್ತು ದೇವರ ನಾಮಾವಳಿಗಳನ್ನು ಪಾರಾಯಣ ಮಾಡುವ ಪದ್ಧತಿಯು ಅತ್ಯಂತ ಪ್ರಾಚೀನವಾದುದು ಈ ಪಾರಾಯಣದಿಂದ ಪರಮಪದ ಪ್ರಾಪ್ತಿಯಾಗುವುದೆಂಬ ವಿಚಾರವನ್ನು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಕಾಶೀಪೀಠದಲ್ಲಿ ನಡೆದಿರುವ 12 ಕೋಟಿ ಮಹಾಮಂತ್ರ ಜಪಯಜ್ಞದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿಯ ಪಾರಾಯಣವನ್ನು ಕುರಿತು ಮಾತನಾಡುತ್ತಾ ಈ ವಿಚಾರವನ್ನು ತಿಳಿಸಿದರು. ಶ್ರೀಗುರುವಿನಿಂದ ಪ್ರಾಪ್ತವಾದ ಮಂತ್ರವನ್ನು ಪ್ರತಿನಿತ್ಯ ಜಪಮಾಡುವಂತೆ ತಮ್ಮ ತಮ್ಮ ಧರ್ಮಗ್ರಂಥಗಳನ್ನು ಪಾರಾಯಣ ಮಾಡಬೇಕು. ಈ ಪಾರಾಯಣದಿಂದ ಸಂಸಾರ ಸಾಗರವನ್ನು ಪಾರುಮಾಡಿ ಸಾಧಕನು ಪರಮಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳುವನು. ಶಿವನಿಂದ ಉಪದೇಶಿಸಿಲ್ಪಟ್ಟ 28 ಶಿವಾಗಮಗಳ ಸಾರವೇ ಶ್ರೀ ಸಿದ್ಧಾಂತ ಶಿಖಾಮಣಿಯು. ಅಂತೆಯೇ ಇದೊಂದು ಶಿವಪ್ರಸಾದ ರೂಪ. ಇಂತಹ ಪ್ರಾಸಾದಿಕ ಗ್ರಂಥಗಳನ್ನು ಪಾರಾಯಣ ಮಾಡುವುದರಿಂದ ಭೋಗ-ಮೋಕ್ಷಗಳೆರಡೂ ದೊರೆಯುವವು. ಈ

ಗ್ರಂಥಗಳನ್ನು ಸರ್ವಧರ್ಮೀಯರು ಸಹ ಪಾರಾಯಣ ಮಾಡಬಹುದು ಎಂಬುದಾಗಿಯೂ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು



ಶ್ರೀ ಕಾಶೀ ಮಹಾಪೀಠದಲ್ಲಿ ಜುಲೈ 7 ರಿಂದ ಪ್ರಾರಂಭಗೊಂಡ ಶ್ರೀ ಸಿದ್ಧಾಂತ ಶಿಖಾಮಣಿಯ ಪಾರಾಯಣವು ಆಗಸ್ಟ್ 25ರವರೆಗೆ 7 ಸಪ್ತಾಹಗಳ ಪರ್ಯಂತರ ಅಖಂಡವಾಗಿ ನಡೆದುಕೊಂಡು ಬಂದಿದೆ. ಬಂಕಾಪುರದ ಪರಶುರಾಮ ನರೇಗಲ್, ಧಾರವಾಡದ ಶ್ರೀಮತಿ ಕವಿತಾ ಹಿರೇಮಠ, ಸಾಂಗ್ಲಿ ಜಿಲ್ಲಾ ಬೆಳ್ಳಂಕಿಯ ಶ್ರೀ ಷ.ಬ್ರ. ಶಿವಲಿಂಗ ಶಿವಾಚಾರ್ಯರು ಮತ್ತು ಲಾತೂರ ಜಿಲ್ಲಾ ಔಸಾದ ಶ್ರೀ ಶಾಂತವೀರಲಿಂಗ ಶಿವಾಚಾರ್ಯರು ಈ ಸಪ್ತಾಹಗಳ ನೇತೃತ್ವವನ್ನು ವಹಿಸಿದ್ದರು. ಶ್ರೀ ಕಾಶೀ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಈ ಪಾರಾಯಣದಲ್ಲಿ ಕರ್ನಾಟಕ, ಮಹಾರಾಷ್ಟ್ರ, ಸೀಮಾಂಧ್ರ, ತೆಲಂಗಾಣ ಮತ್ತು ಉತ್ತರ ಭಾರತದ ದೆಹಲಿ, ರಾಜಸ್ಥಾನ, ಹರ್ಯಾಣ ಮುಂತಾದ ಪ್ರಾಂತಗಳ ಸಾವಿರಾರು ಸರ್ವ ಧರ್ಮಿಯ ಸದ್ಭಕ್ತರು ಪಾಲ್ಗೊಂಡಿದ್ದರು.

ಈ ಪಾರಾಯಣದ ಮಂಗಲ ಮಹೋತ್ಸವದಂದು ಶ್ರೀ ಕಾಶೀ ಜಗದ್ಗುರುಗಳವರೇ ಮೊದಲುಗೊಂಡು ಶಿವಾಚಾರ್ಯರು, ಗುರುಕುಲದ ವಿದ್ಯಾರ್ಥಿಗಳು ಮತ್ತು ಸದ್ಭಕ್ತರು ಶ್ರದ್ಧೆಯಿಂದ ಪಾಲ್ಗೊಂಡಿದ್ದರು. ಕಾಶೀಪೀಠದಲ್ಲಿ ನಡೆಯುತ್ತಿರುವ 12 ಕೋಟಿ ಮಹಾಮಂತ್ರ ಜಪಯಜ್ಞ ನವೆಂಬರ್ 11ರವರೆಗೆ ನಡೆಯಲಿರುವದು. ಮುಂದಿನ ದಿನಗಳಲ್ಲಿ ಜಪಯಜ್ಞದ ಜೊತೆಗೆ ಪರಮರಹಸ್ಯ ಗ್ರಂಥದ ಪಾರಾಯಣವು ನಡೆಯುವುದು ಎಂದು ತಿಳಿಸಿದರು.



ಬಾಗಲಕೋಟೆ ನಗರದ ಅಕ್ಕನ ಶ್ರೀರುದ್ರ ಬಳಗದಲ್ಲಿ ಪ್ರಾರಂಭಗೊಂಡ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಸಮಾರಂಭವನ್ನು ಜಗದ್ಗುರುಗಳು ದೀಪ ಬೆಳಗಿ ಉದ್ಘಾಟಿಸಿದರು. ಜಗದ್ಗುರುಗಳು ಈ ಗ್ರಂಥದ ಪಾರಾಯಣ ಕೃತಿಯನ್ನು ಸಿದ್ಧಗೊಳಿಸಿ, ಪ್ರಾಂತೀಯ ಮತ್ತು ಜಾಗತಿಕ ಭಾಷೆಗಳಿಗೆ ವಿವಿಧ ಪಂಡಿತರಿಂದ ಅನುವಾದಗೊಳಿಸಿ ದೇಶ ವಿದೇಶಗಳಲ್ಲಿ ಪ್ರಚಾರ ಮಾಡಿದ್ದಾರೆ. ಕರ್ನಾಟಕದ ಭಕ್ತ ಜನರಿಗೆ ಅದರಲ್ಲಿರುವ ಸಂಸ್ಕೃತ ಶ್ಲೋಕಗಳನ್ನು ರಾಗಬದ್ಧ ವಾಗಿ ಶುದ್ಧವಾಗಿ ಹಾಡಲೆಂದು ಎಲ್ಲೆಡೆ ಶಿಬಿರಗಳನ್ನು ಏರ್ಪಡಿಸಿ ತರಬೇತಿ ಕೊಡಿಸಿದ್ದಾರೆ. ಈಗಾಗಲೇ ಬಂಕಾಪುರ, ಬಾದಾಮಿ, ಬೆಂಗಳೂರು, ಶಿಗ್ಗಾಂವ, ಹಾವೇರಿ, ಧಾರವಾಡ ಮುಂತಾದ ನಗರಗಳಲ್ಲಿ ವಿವಿಧ ಮಹಿಳಾ ಸಂಘಟನೆಗಳ ಸಾವಿರಾರು ಮಹಿಳೆಯರು ತರಬೇತಿ ಹೊಂದಿ ಪಾರಾಯಣವನ್ನು ಮಾಡುತ್ತಿರುವುದು ಜಗದ್ಗುರುಗಳಿಗೆ ಅತ್ಯಂತ ಸಂತೋಷ ತಂದಿದೆ.

ಕಾಶೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಉತ್ಸವಗಳು

ಭಾರತೀಯ ಪರಂಪರೆಯಲ್ಲಿ ದೇವರನ್ನು ನಿರಾಕಾರ ಹಾಗೂ ಸಾಕಾರ ರೂಪದಲ್ಲಿ (ಸಗುಣ–ನಿರ್ಗುಣ) ಪೂಜಿಸುವ ಪದ್ಧತಿ ಬೆಳೆದು ಬಂದಿದೆ. ಸಾಕಾರ ರೂಪವನ್ನು ಮೂರ್ತಿಗಳಂತೆ ಕೆತ್ತನೆ ಮಾಡಿ, ಆ ಮೂರ್ತಿಗಳಲ್ಲಿ ಆಯಾ ದೇವರನ್ನು ಆಹ್ವಾನ ಮಾಡಿ ಪೂಜಿಸಲಾರಂಭಿಸಿದರು. ಹೀಗೆ ಪೂಜಿಸುವ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಹೊತ್ತು ಅಥವಾ ರಥಗಳಲ್ಲಿಟ್ಟು ಮೆರವಣಿಗೆ ಮಾಡುತ್ತಿದ್ದರು. ಈ ರಥಗಳ ಕಲ್ಪನೆಯನ್ನು ಸಿಂಧೂ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ.

ವಿಜಯನಗರದ ಅರಸರ ಕಾಲದಲ್ಲಿ ರಾಜಗುರುಗಳನ್ನು ಅರಮನೆಗೆ ಕರೆಸಿಕೊಳ್ಳುವ ಸಂದರ್ಭದಲ್ಲಿ ರಾಜನು ಅರಮನೆಯಿಂದ ಪಲ್ಲಕ್ಕಿಯನ್ನು ಗುರುಗಳಿರುವ ಮಠಕ್ಕೆ ಕಳುಹಿಸಿ ಗೌರವದಿಂದ ಕರೆಸಿಕೊಳ್ಳುತ್ತಿದ್ದುದು ಚರಿತ್ರೆಯಿಂದ ತಿಳಿದುಬರುತ್ತದೆ. 'ರಾಯ ರಾಜಗುರು ಮಹಾಮಂಡಲಾಚಾರ್ಯ' ಎಂಬ ಶಬ್ದೋಕ್ತಿಗಳು ವಿಜಯನಗರದ ಶಾಸನಗಳಲ್ಲಿ ಕಂಡುಬರುತ್ತವೆ. ಗುರುಗಳಿಗೆ ಭಕ್ತಿಯಿಂದ ಗೌರವ ತೋರುವುದು, ಗುರುಗಳಿಂದ ಆಶೀರ್ವಾದ ಪಡೆಯುವುದು, ಗುರುಗಳ ರಕ್ಷಣೆ ಮಾಡುವುದು ರಾಜರ ಆದ್ಯ ಕರ್ತವ್ಯವಾಗಿರುತ್ತಿತ್ತು.

ನಮ್ಮ ಧರ್ಮೋ ಸಂಸ್ಕೃತಿ ಪ್ರಕಾರ ದೇವರ ವಾಸ್ತವಿಕ ಸ್ವರೂಪವನ್ನು ತಿಳಿಸಿಕೊಡುವವನು ಗುರು. ಪ್ರತಿಯೊಬ್ಬ ಮನುಷ್ಯನಿಗೆ ಸಂಸ್ಕಾರ ಕೊಟ್ಟು ಅವನ ಬದುಕನ್ನು ಸಾರ್ಥಕಗೊಳಿಸುವ ಗುರುಗಳಿಗೆ ಭಕ್ತಿ ಸಮರ್ಪಿಸುವುದು ಭಕ್ತನ ಕರ್ತವ್ಯವಾಗಿರುತ್ತದೆ. ಗುರುಗಳಿಗೆ ಗುರುಸ್ಥಾನವನ್ನು ಕಲ್ಪಿಸಿಕೊಡುವಂತಹ ಜಗದ್ಗುರುಗಳಿಗೆ ಭಕ್ತರು ತಮ್ಮ ಗುರು ಋಣದ ಭಾಗವಾಗಿ ಗುರುಗಳನ್ನು ಅಡ್ಡಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಪಲ್ಲಕ್ಕಿಯನ್ನು ತಮ್ಮ ಹೆಗಲ ಮೇಲೆ ಹೊತ್ತು ಧನ್ಯತಾಭಾವವನ್ನು ಪಡೆದುಕೊಳ್ಳುತ್ತಿದ್ದರು. ಈ ಕ್ರಿಯೆಯಿಂದಾಗಿ ಭಕ್ತಿಮಾರ್ಗದಲ್ಲಿರುವ ಭಕ್ತನಿಗೊಂದು ಸೇವೆ ಮಾಡುವ ಅವಕಾಶ ದೊರೆತ ಭಾವ ತುಂಬಿರುತ್ತಿತ್ತು.

ಹೀಗೆಯೇ ಮುಂದುವರೆದು ಸನಾತನ ಕಾಲದಿಂದಲೂ ಪಂಚಪೀಠದ ಜಗದ್ಗುರುಗಳು ಪ್ರಥಮ ಬಾರಿಗೆ ಪುರಪ್ರವೇಶ ಮಾಡುವಾಗ ಆ ಊರಿನ ಜನತೆ ಜಗದ್ಗುರುಗಳನ್ನು ನೆಲದ ಮೇಲೆ ನಡೆಯಲು ಬಿಡದೆ ಭಕ್ತಿಗೌರವಗಳಿಂದ ಪಲ್ಲಕ್ಕಿಯಲ್ಲಿ ಹೊತ್ತು ಊರತುಂಬಾ ಮೆರವಣಿಗೆ ಮಾಡುತ್ತಿದ್ದರು. ಇದೇ ಪದ್ಧತಿ ಇಂದಿಗೂ ಮುಂದುವರೆದುಕೊಂಡು ಬಂದಿದೆ. ಅಡ್ಡಪಲ್ಲಕ್ಕಿ ಉತ್ಸವಗಳಲ್ಲಿ ಹಲವಾರು ಜಾನಪದ ಕಲಾವಿದರು ಭಾಗವಹಿಸಿ ತಮ್ಮ ಕಲೆಗಳನ್ನು ಪ್ರದರ್ಶಿಸುತ್ತಾರೆ. ನಂದೀಧ್ವಜ, ವೀರಗಾಸೆ ನೃತ್ಯ, ಡೊಳ್ಳು ಕುಣಿತ, ಕರಡಿಮಜಲು, ದೋಣಿ, ಹಲಗೆ, ನಾಗಸ್ವರಗಳಂತಹ ಕಲಾವಿದರು ಈ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಕಾರಣದಿಂದಾಗಿ ಪಾರಂಪರಿಕ ಜನಪದ ಕಲೆಗಳಿಗೆ ಪ್ರೋತ್ಸಾಹಿಸಿದಂತಾಗಿ ಅವೆಲ್ಲವೂ ಬೆಳೆಯಲು ಅವಕಾಶ ಮಾಡಿದಂತಾಗುತ್ತದೆ. ಕಲಾವಿದರಿಗೆ ಧನ ಸಹಾಯ ನೀಡಿ ಪ್ರೋತ್ಸಾಹಿಸಿದಾಗ ಬಹಳ ಸಂತೋಷಪಡುತ್ತಾರೆ. ಈ ಎಲ್ಲಾ ಕಲಾಪ್ರದರ್ಶನ ಕಣ್ಮನ ಸೆಳೆಯುವಂತಿರುತ್ತದೆ. ಚಿಕ್ಕ ಮಕ್ಕಳು ಬಹಳ ಖುಷಿಪಡುತ್ತವೆ. ಈ ಜನಪದ ಕಲೆಗಳ ಪ್ರಕಾರಗಳು ಉಳಿಯಬೇಕಾದರೆ ದೇವರ ಉತ್ಸವಗಳು, ಜಗದ್ಗುರುಗಳ ಉತ್ಸವಗಳು ನಡೆಯುತ್ತಲೇ ಇರಬೇಕು. ಕೊಂಬು, ಕಹಳೆ, ಡೋಲುಗಳೇ ಅಂದಿನ ದಿನಗಳ ಪ್ರಚಾರ ಮಾಧ್ಯಮವಾಗಿರುತ್ತಿತ್ತು.

ಸಿಂಧೂ ಸಂಸ್ಕೃತಿಯಲ್ಲಿ ರಥಗಳ ಕಲ್ಪನೆಯನ್ನು ಕಂಡ ನಂತರ ರಾಜ ಮಹಾರಾಜರ ಕಾಲದಲ್ಲಿ ಪಲ್ಲಕ್ಕಿಗಳಲ್ಲಿ ದೇವರ, ಗುರುಗಳ ಉತ್ಸವ ಮಾಡುವ ಪದ್ಧತಿಯೇ ಮುಂದುವರೆದು ಇಂದು ಅಡ್ಡಪಲ್ಲಕ್ಕಿಯ ರೂಪ ತಾಳಿ ಗುರುಗಳ ಪುರಪ್ರವೇಶದ ಉತ್ಸವಗಳನ್ನು ಆಚರಿಸಲಾಗುತ್ತಿದೆ. ಈ ಎಲ್ಲಾ ಕಾರ್ಯಗಳ ಹಿಂದೆ ಭಕ್ತಿಭಾವವೇ ಪ್ರಧಾನವಾಗಿ ಕೆಲಸ ಮಾಡುತ್ತಿರುವುದನ್ನು ಇಂದಿಗೂ ಕಾಣಬಹುದಾಗಿದೆ.

ಹಿಂದೆ ಕಾಡುಗಳಲ್ಲಿ ವಾಸಮಾಡುತ್ತಿದ್ದಂತಹ ಸಂದರ್ಭದಲ್ಲಿ ಕಾಡಿನಲ್ಲಿರುವ ಪವಿತ್ರವೆಂದು ತಿಳಿದ ಒಂಬತ್ತು ವೃಕ್ಷಗಳನ್ನು ಪೂಜಿಸುವ ಪದ್ಧತಿ ಸುಮಾರು 5000 ವರ್ಷಗಳಷ್ಟು ಹಿಂದಿನದ್ದಾಗಿದೆ. ಅದರಿಂದ ಕಾಡುಗಳಿಂದ ದೂರವಾಗಿರುವ ಮನುಷ್ಯ ನವಧಾನ್ಯಗಳ ರೂಪದಲ್ಲಿ ಪೂಜಿಸುವ ಪದ್ಧತಿಯನ್ನು ರೂಢಿಸಿಕೊಂಡು ಆ ಮೂಲಕ ನವವೃಕ್ಷಗಳಿಗೆ ಪೂಜೆ ಸಲ್ಲಿಸಿದ ಭಾವವನ್ನು ಬೆಳೆಸಿಕೊಂಡಿದ್ದಾನೆ. ಈ ಭಾವನೆ ಇಲ್ಲದವರಿಗೆ ಈ ಪದ್ಧತಿ ಅರ್ಥಹೀನವೆನಿಸಬಹುದು.

'ಶಿವಪಥವನರಿವಡೆ ಗುರುಪಥವೇ ಮೊದಲು' ಎಂದು ಬಸವಣ್ಣನವರು ಹೇಳಿದಂತೆ–ಮುಕ್ತಿ ಮಾರ್ಗವ ತೋರುವಂತಹ ಜಗದ್ಗುರುಗಳನ್ನು ಅಡ್ಡಪಲ್ಲಕ್ಕಿಯಲ್ಲಿ ಹೊತ್ತು ತಿರುಗುವ ಜನರ ಭಕ್ತಿ, ಶ್ರದ್ಧೆ, ಗೌರವಾದರ ಭಾವನೆಗಳನ್ನು ತಪ್ಪೆನಲಾದೀತೆ? ದೇವರ, ಗುರುಗಳ ಪಲ್ಲಕ್ಕಿ ಉತ್ಸವಗಳು "ನಮ್ಮ ದೇಶದ ಶ್ರೇಷ್ಠ ಸಂಸ್ಕೃತಿಯ ಸಂಕೇತಗಳಾಗಿವೆ". ಶ್ರದ್ಧೆಯನ್ನು ಯಾರು ಪ್ರಶ್ನಿಸಲಾಗದು.

ಪಂಚಪೀಠದ ಜಗದ್ಗುರುಗಳನ್ನು ತಮ್ಮ ಊರಿಗೆ ಕರೆಸಿಕೊಳ್ಳುವ ನಿರ್ಧಾರ ಕೈಕೊಂಡ ಮೇಲೆ ಸುಮಾರು ಒಂದು ತಿಂಗಳಿಗೂ ಹೆಚ್ಚು ದಿನಗಳಿಂದ ತಯಾರಿ ನಡೆಸಬೇಕಾಗುತ್ತದೆ. ಊರಿಗೆ ಊರೇ ಸಂಭ್ರಮಿಸುವ ಈ ಉತ್ಸವ ಒಂದು ರೀತಿಯಲ್ಲಿ ಊರ ಹಬ್ಬವನ್ನಾಗಿ ಊರ ಜಾತ್ರೆಯಂತೆ ಆಚರಿಸಲಾಗುತ್ತಿದೆ. ಇದಕ್ಕಾಗಿ ಊರಿನ ವಿವಿಧ ಸಂಘ ಸಂಸ್ಥೆಗಳೆಲ್ಲವೂ ಹಾಗೂ ಊರಿನ ಪ್ರಮುಖರು ಜಾತಿ ಭೇದ ಮರೆತು ಈ ಏರ್ಪಾಡಿನಲ್ಲಿ ಕೈಜೋಡಿಸಿ ಸಹಬಾಳ್ವೆಯನ್ನು ಮೆರೆಯುತ್ತಾರೆ ಎನ್ನುವುದಕ್ಕೆ ಇಲ್ಲಿರುವ ಜಾಹಿರಾತುಗಳೇ ಸಾಕ್ಷಿಯಾಗಿವೆ. ಏಕೆಂದರೆ ಸನಾತನ ಸಂಸ್ಕೃತಿಯಲ್ಲಿ ದೇವರಿಗಿಂತ ಗುರುಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ.


ಮಾನವ ಧರ್ಮಕ್ಕೆ ಜಯವಾಗಲಿ !
ಧರ್ಮದಿಂದಲೇ ವಿಶ್ವಕ್ಕೆ ಶಾಂತಿ !!


ಸಾಹಿತ್ಯ ಸಂಸ್ಕೃತಿ ಸಂವರ್ಧಿಸಲಿ !
ಶಾಂತಿ-ಸಮೃದ್ಧಿ ಸರ್ವರಿಗಾಗಲಿ !!

ಭಾವೈಕ್ಯ ಧರ್ಮ ಸಮ್ಮೇಳನ ನಿಮಿತ್ತ ವಿಶೇಷ ಸ್ಮರಣ ಸಂಚಿಕೆ

ಹರಿಹರ ನಗರದಲ್ಲಿ
ಶ್ರೀ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ ಸಮಾರಂಭ
ಮತ್ತು ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವ
ಮಾರ್ಚ್ 21,22, ಮತ್ತು 23 1999 ಸ್ಥಳ: ಗಾಂಧೀ ಮೈದಾನ, ಹರಿಹರ.

ಕಾರ್ಯಕ್ರಮದ ರೂವಾರಿ
ಸನ್ಮಾನ್ಯ ಶ್ರೀ ಹೆಚ್. ಶಿವಪ್ಪನವರು
ಸಕ್ಕರೆ ಖಾತೆ ಸಚಿವರು, ಕರ್ನಾಟಕ ಸರ್ಕಾರ
ಹಾಗೂ ಶ್ರೀ ಹೆಚ್.ಎಸ್. ಶಿವಶಂಕರ್,
ರಾಜ್ಯ ಯುವಜನತಾದಳ ಖಜಾಂಚಿ

ಹರಿಹರ ನಗರದಲ್ಲಿ ನಡೆಯುತ್ತಿರುವ ಶ್ರೀ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ,
ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವ ಹಾಗೂ
ಭಾವೈಕ್ಯ ಧರ್ಮಸಮ್ಮೇಳನವು ಯಶಸ್ವಿಯಾಗಲೆಂದು ಶುಭ ಹಾರೈಸುವೆ.


ಶ್ರೀ ಕೃಷ್ಣಸಾ ಭೂತೆ
ಅಧ್ಯಕ್ಷರು, ನಗರ ಸಭೆ, ಹರಿಹರ.

ಶ್ರೀ ಕೃಷ್ಣಸಾ ಭೂತೆ
ಅಧ್ಯಕ್ಷರು, ನಗರ ಸಭೆ, ಹರಿಹರ.
ಅಧ್ಯಕ್ಷರು, ಎಸ್.ಎಸ್.ಕೆ. ಸಮಾಜ, ಹರಿಹರ.
ನಿರ್ದೇಶಕರು, ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಪಾಲುದಾರರು, ಶ್ರೀಮನೋರಂಜನ್ ಎಂಟರ್‌ಪ್ರೈಸಸ್, ಹರಿಹರ.,
ಪೂಜಾ ಇಂಟರ್‌ನ್ಯಾಷನಲ್ ಹೋಟೆಲ್, ದಾವಣಗೆರೆ.,
ನಂದಿನಿ ಫೈನಾನ್ಸ್, ಹರಿಹರ.

ಈ ಮಹಾನ್ ಉತ್ಸವಕ್ಕೆ ಆಗಮಿಸುತ್ತಿರುವ ಎಲ್ಲಾ ಭಕ್ತವೃಂದಕ್ಕೂ
ಹರಿಹರ ನಾಗರೀಕರ ಪರವಾಗಿ ಹಾರ್ದಿಕ ಸ್ವಾಗತ.

ಹಾರ್ದಿಕ ಶುಭಾಶಯಗಳೊಂದಿಗೆ :
ಶ್ರೀ ಹಮ್ಮಿಗಿ ಸತ್ಯನಾರಾಯಣ ಶ್ರೇಷ್ಠಿ ಮತ್ತು ಮಕ್ಕಳು
ಜನರಲ್ ಮರ್ಚಂಟ್ಸ್,
ಮೇನ್ ರೋಡ್, ಹರಿಹರ.


ಹಾರ್ದಿಕ ಶುಭಾಶಯಗಳೊಂದಿಗೆ
ಬಾಲಾಜಿ ರೈಸ್‌ಮಿಲ್
ಶಿವಮೊಗ್ಗ ರಸ್ತೆ, ಹರಿಹರ.
ಉತ್ತಮ ಗುಣಮಟ್ಟದ ಅಕ್ಕಿ, ಕುಚ್ಚಲಕ್ಕಿ, ಸ್ಟೀಮ್ ಅಕ್ಕಿ ತಯಾರಕರು.
ಶ್ರೀ ಆರ್.ವಿ. ಶ್ರೀನಿವಾಸ ಶ್ರೇಷ್ಠಿ,
ಶ್ರೀ ಆರ್.ವಿ. ಭಕ್ತವತ್ಸಲ ಶ್ರೇಷ್ಠಿ,
ಶ್ರೀ ಆರ್.ವಿ. ಕೃಷ್ಣಮೂರ್ತಿ ಶ್ರೇಷ್ಠಿ,
ಶ್ರೀ ಆರ್.ವಿ. ದೃವಕುಮಾರ್ ಶ್ರೇಷ್ಠಿ.

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವ, ಯುಗಮಾನೋತ್ಸವ
ಹಾಗೂ ಭಾವೈಕ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.
ABC BRICKS
ಶ್ರೀ ಅಮರಾವತಿ ಭರಮಣ್ಣ ಮತ್ತು ಮಕ್ಕಳು
ಕಂಟ್ರಾಕ್ಟರ್, ಅಮರಾವತಿ, ಹರಿಹರ ತಾಲೂಕು.
ದೂವಾಣಿ : 42053 - 50887.
ಉತ್ತಮ ಗುಣಮಟ್ಟದ ಇಟ್ಟಿಗೆಗಳಿಗಾಗಿ ಮತ್ತು ಎಲ್ಲಾ ರೀತಿಯ ಕಟ್ಟಡ ಸಾಮಗ್ರಿಗೆ
ಒಮ್ಮೆ ತಪ್ಪದೇ ಸಂಪರ್ಕಿಸಿರಿ.

ಶ್ರೀ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ, ಅಡ್ಡಪಲ್ಲಕ್ಕಿ ಉತ್ಸವ ಹಾಗೂ
ಭಾವೈಕ್ಯ ಧರ್ಮ ಸಮ್ಮೇಳನಕ್ಕೆ ನಮ್ಮ ಹಾರ್ದಿಕ ಶುಭಾಶಯಗಳು.

ಶ್ರೀ ಡಿ.ಜಿ. ರಘುನಾಥ್
ನಗರಸಭಾ ಸದಸ್ಯರು ಮತ್ತು
ಹರಿಹರ ನಗರ ಬಿ.ಜೆ.ಪಿ. ಅಧ್ಯಕ್ಷರು.

ಮಾಲೀಕರು :
ಹೋಟೆಲ್ ಗೋಪಾಲಕೃಷ್ಣ
ಬೋರ್ಡಿಂಗ್ ಮತ್ತು ಡೀಲಕ್ಸ್ ಲಾಡ್ಜಿಂಗ್
ಪಿ.ಬಿ. ರಸ್ತೆ, ಹರಿಹರ,
ದೂರವಾಣಿ : ಕಛೇರಿ : ೪೨೫೮೯, ಮನೆ : ೪೨೮೮೯


ಶ್ರೀ ಡಿ.ಜಿ. ರಘುನಾಥ್
ನಗರಸಭಾ ಸದಸ್ಯರು, ಹರಿಹರ.

ಶ್ರೀ ಕೃಷ್ಣ ಡೀಲಕ್ಸ್ ಲಾಡ್ಜ್
ಕೆ.ಎಸ್. ಆರ್.ಟಿ.ಸಿ. ಬಸ ನಿಲ್ದಾಣದ ಹತ್ತಿರ.
ಹರಿಹರ- ೫೭೭ ೬೦೧.

ಹರಿಹರಕ್ಕೆ ಬಂದಾಗ ನಮ್ಮ ಡೀಲಕ್ಸ್ ಲಾಡ್ಜ್‌ಗಳಿಗೆ ತಪ್ಪದೇ ಭೇಟಿಕೊಡಿ.

ವಿವೇಕ್ ಗ್ರಾಫಿಕ್ಸ್
ದೇವಸ್ಥಾನ ರಸ್ತೆ, ಶಿವಮೊಗ್ಗ ವೃತ್ತ
ಹರಿಹರ – ೫೭೭ ೬೦೧.
ದೂರವಾಣಿ : ೪೯೬೭೫ (ನಿವಾಸ)
ಸಂಪರ್ಕಿಸಿ : ಡಿ.ಟಿ.ಪಿ.,(ಕನ್ನಡ, ಹಿಂದಿ, ಇಂಗ್ಲೀಷ್)
ಲೇಸರ್ ಪ್ರಿಂಟಿಂಗ್, ಕಲರ್ ಪ್ರಿಂಟಿಂಗ್
ಕಲರ್ ಸ್ಕ್ಯಾನಿಂಗ್, ಕಮರ್ಷಿಯಲ್ ಡಿಸೈನಿಂಗ್

ಹಾರ್ದಿಕ ಶುಭಾಶಯಗಳೊಂದಿಗೆ
ಶ್ರೀ ಲಿಂಗಡಿ ಗಂಗಣ್ಣ ಮತ್ತು ಮಕ್ಕಳು
ಮಾಲೀಕರು, ಜನತಾ ಸ್ವೀಟ್ ಸ್ಟಾಲ್,
ಶಿವಮೊಗ್ಗ ಸರ್ಕಲ್, ಹರಿಹರ.

ಹಾರ್ದಿಕ ಶುಭಾಶಯಗಳೊಂದಿಗೆ
ಶಂಕರ್ ಖಟಾವ್ಕರ್
ಮಾಜೀ ನಗರಸಭೆ ಅಧ್ಯಕ್ಷರು,
ನಗರಸಭಾ ಸದಸ್ಯರು.



ಮಾಲೀಕರು :
ಶ್ರೀ ಮಂಜುನಾಥ ಸೈಕಲ್ ಮಾರ್ಟ್,
ಉಡ್‌ಲ್ಯಾಂಡ್ ರಸ್ತೆ, ಹರಿಹರ - 577 601.

ಹಾರ್ದಿಕ ಶುಭಾಶಯಗಳೊಂದಿಗೆ
ಶ್ರೀ ಪಿ. ರಾಮಭಟ್
ಮಾಲೀಕರು,
ಶ್ರೀ ಅರ್ಜುನ್ ಹೋಟೆಲ್
ಪಿ. ಬಿ. ರಸ್ತೆ, ಹರಿಹರ.

ಶುಚಿ–ರುಚಿಯಾದ ಊಟ
ತಿಂಡಿಗಳಿಗೆ ನಾರ್ಥ ಇಂಡಿಯನ್
ಸ್ಪೆಷಲ್ ಮೀಲ್ಸ್‌ಗಾಗಿ ಒಮ್ಮೆ
ತಪ್ಪದೇ ಭೇಟಿ ಕೊಡಿ.

ಹಾರ್ದಿಕ ಶುಭಾಶಯಗಳೊಂದಿಗೆ
ಶ್ರೀ ಸೋಮನಾಥಸಾ ಕಾಟ್ವೆ
ನಗರಸಭಾ, ಸದಸ್ಯರು,
ಕಾಟ್ವೆ ಅಂಡ್ ಸನ್ಸ್, ಸ್ಟೇಷನರಿ ಮತ್ತು ಎಲೆಕ್ಟ್ರಿಕಲ್
ಸ್ಟೋರ್ಸ್, ಮೇನ್ ರೋಡ್, ಹರಿಹರ.
ಪಾಲುದಾರರು: ಅರುಣ ಫೈನಾನ್ಸ್, ಹರಿಹರ.

ಇಂತಹ ಉತ್ಸವಗಳ ಏರ್ಪಾಡಿನ ಸಂದರ್ಭದಲ್ಲಿ ವೈಮನಸ್ಸಿನವರೂ ಅದನ್ನು ಮರೆತು ಇಲ್ಲಿ ಕೈ ಜೋಡಿಸುವುದನ್ನು ಕಂಡಿದ್ದೇವೆ. ಎಂದೋ ಒಮ್ಮೆ ಬಂದು ಹೋಗುವ ಬಂಧು ಬಾಂಧವರು ಈ ಸಂದರ್ಭದಲ್ಲಿ ಊರಿಗೆ ಬರಲು ಒಂದು ನೆಪ ಸಿಕ್ಕಂತಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ನ್ಯಾಯಾಲಯದಲ್ಲಿ ಬಗೆಹರಿಯದ ಜಗಳಗಳು ಇಲ್ಲಿ ಬಗೆಹರಿದಿದೆ. ಉತ್ಸವದ ತರುವಾಯ ನಡೆಯುವ ಧಾರ್ಮಿಕ ಸಭೆಗಳಲ್ಲಿ ಜಗದ್ಗುರುಗಳ ಉಪದೇಶವನ್ನು ಕೇಳಲು ಜನರು ಹಾತೊರೆಯುತ್ತಿರುತ್ತಾರೆ. ಒಟ್ಟಾರೆ ಈ ಉತ್ಸವದಿಂದ ಸಮಾಜದಲ್ಲಿ ಮಾನಸಿಕವಾಗಿ ಒಳ್ಳೆಯ ಪರಿಣಾಮ ಬೀರುತ್ತದೆ.

ಎಷ್ಟೋ ವೇಳೆ ಉತ್ಸವ ಧರ್ಮಸಭೆಗಳು ನಡೆದ ನಂತರ ಜಗದ್ಗುರುಗಳು ಸಂಘಟನೆಯ ಮುಖ್ಯಸ್ಥರನ್ನು ಸೇರಿಸಿ ಶೈಕ್ಷಣಿಕವಾಗಿ ನೆರವು ನೀಡುವ ಯೋಜನೆ, ಸಾಮಾಜಿಕವಾಗಿ ಊರಿನ ಅಭಿವೃದ್ಧಿಗಾಗಿ ಕಾರ್ಯ ರೂಪಿಸುವಂತಹ ಯೋಜನೆ, ಧಾರ್ಮಿಕ ಕಾರ್ಯ ಚಟುವಟಿಕೆ ನಿರಂತರವಾಗಿ ನಡೆಯುವ ಯೋಜನೆಗಳನ್ನು ರೂಪಿಸಿ ಅಲ್ಲೇ ಒಂದು ಟ್ರಸ್ಟ್ ಮಾಡಿ ಕಾರ್ಯ ಆರಂಭವಾಗುವಂತೆ ಮಾಡುತ್ತಿದ್ದಾರೆ. ಅದಕ್ಕಾಗಿ ಸೂಕ್ತ ಸಲಹೆ, ಮಾರ್ಗದರ್ಶನ ನೀಡುವುದಲ್ಲದೆ ಧನಸಹಾಯವನ್ನು ಮಾಡಿದ್ದಾರೆ. ಸಮಾಜದ ಏಳಿಗೆಯೇ ಜಗದ್ಗುರುಗಳ ಆಶಯವಾಗಿರುತ್ತದೆ.

"ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆಯಿತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥ" ಎಂಬ ಜೇಡರ ದಾಸಿಮಯ್ಯನ ವಚನದಂತೆ ಕಾಶೀ ಜಗದ್ಗುರುಗಳ ಆಶೀರ್ವಚನ ಕೇಳಲು ಭಕ್ತಾದಿಗಳು ಬಂದು ಸೇರುತ್ತಿದ್ದರು.

1. **25–9–1995**ರಲ್ಲಿ ಸಾಂಗ್ಲಿಯಲ್ಲಿ ಕಾಶಿ ಜಗದ್ಗುರುಗಳ ಆಶೀರ್ವಚನವನ್ನು ಹತ್ತು ದಿನಗಳ ಕಾಲ 4–10–1995ರವರೆಗೆ ಏರ್ಪಡಿಸಿದ್ದರು. 25ರಂದು ಸಾಂಗ್ಲಿಗೆ ಆಗಮಿಸಿದ ಜಗದ್ಗುರುಗಳನ್ನು ಸಹಸ್ರ ಕುಂಭಗಳೊಂದಿಗೆ ಭವ್ಯ ಮೆರವಣಿಗೆಯಲ್ಲಿ ಕರೆತರಲಾಯಿತು. ಖೋಳಕರ ಮಹಾರಾಜರು ಹಾಗೂ ಧಾರೇಶ್ವರ ಮಹಾರಾಜರು ಜಗದ್ಗುರುಗಳೊಂದಿಗೆ ಅಲಂಕೃತ ತೆರದ ಜೀಪಿನಲ್ಲಿ ಆಸೀನರಾಗಿದ್ದರು.

11–12–2000

ಖಜೂರಿ : ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ



ಖಜೂರಿಯಲ್ಲಿ ಇತ್ತೀಚೆಗೆ ಜರುಗಿದ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವದ ದೃಶ್ಯ

5–7–98

ಮಾಗಡಿಯಲ್ಲಿ ಶ್ರೀ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿದ ದೃಶ್ಯ



ಭಕ್ತಿಯ ಬೆಳಕನ್ನೆ ಸೃಷ್ಟಿಸಿದ ಪ್ರವಚನ ಕಾರ್ಯಕ್ರಮ

ಅದ್ದೂರಿ ಅಡ್ಡಪಲ್ಲಕ್ಕಿ ಮಹೋತ್ಸವ



ರಾಯಚೂರು, ಜು–6 : ನಗರದಲ್ಲಿ ಶುಕ್ರವಾರ ಕಾಶೀ ಜಗದ್ಗುರುಗಳ ಅದ್ದೂರಿ ಅಡ್ಡಪಲ್ಲಕ್ಕಿ ಮಹೋತ್ಸವ ನೆರವೇರಿತು.

ಶೆರೇವಾಡದಲ್ಲಿ ಗ್ರಾಮದೇವಿ ಪ್ರತಿಷ್ಠಾಪನೆ



14–5–2003 – ಶೆರೇವಾಡದಲ್ಲಿ ಗ್ರಾಮದೇವಿ ಪ್ರತಿಷ್ಠಾಪನೆ ಅಂಗವಾಗಿ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿತು.



ರಾಯಚೂರಿನಲ್ಲಿ ಶುಕ್ರವಾರ ಕಾಶೀ ಮಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ 1008 ಸುಮಂಗಲಿಯರು ಪೂರ್ಣಕುಂಭ ಹೊತ್ತು ಮೆರವಣಿಗೆಯಲ್ಲಿ ಪಾಲ್ಗೊಂಡಿರುವ ದೃಶ್ಯ.

ಭಕ್ತಿಯ ಬೆಳಕನ್ನೆ ಸೃಷ್ಟಿಸಿದ ಪ್ರವಚನ ಕಾರ್ಯಕ್ರಮ

25–11–2002 ರಾಯಚೂರು ಜಿಲ್ಲೆಯ ಇಡಪನೂರು ಮೂರ್ತಿ ಪ್ರತಿಷ್ಠಾಪನೆಯನ್ನು ಜಗದ್ಗುರುಗಳಿಂದ ನೆರವೇರಿಸುವ ಸಲುವಾಗಿ ಅಡ್ಡಪಲ್ಲಕ್ಕಿ ಮಹೋತ್ಸವ ನೆರವೇರಿತು. 1008 ಕುಂಭೋತ್ಸವ ಹಾಗೂ ಜಗದ್ಗುರುಗಳವರ 13ನೇ ವರ್ಧಂತಿ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನಡೆಸಿದರು.

25–5–03 ಶ್ರೀ ಜಗದ್ಗುರು ದಾರುಕಾಚಾರ್ಯ ಜಯಂತಿ ಅಂಗವಾಗಿ ಕಾಶೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವವನ್ನು ಗೋಕಾಕ್ ತಾಲ್ಲೂಕಿನ ಮಮದಾಪುರದಲ್ಲಿ ಹಮ್ಮಿಕೊಳ್ಳಲಾಗಿತ್ತು. ನಂತರ ನಡೆದ ಧರ್ಮಸಭೆಯಲ್ಲಿ ಜಗದ್ಗುರುಗಳು ಆಶೀರ್ವಚನ ನೀಡಿದರು.

10–11–2003
ನ.10 ರಂದು ಬೋರೋಟಿ (ಕೆ)ಯಲ್ಲಿ ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ

19–2–2003–ಐನಾಪುರ

ಐನಾಪುರ (ಅಥಣಿ ತಾ॥)ದಲ್ಲಿ ಎಲ್ಲೆಡೆ ಜನಸಾಗರ. ಕಾಶೀಪೀಠದ ಹಳದಿ ಬಣ್ಣವಾಗಿರುವುದರಿಂದ 1008 ಸುಮಂಗಲೆಯರು ಕುಂಭಗಳನ್ನು ಹೊತ್ತು 1008 ಸುಮಂಗಲೆಯರು ಆರತಿಗಳನ್ನು ಹಿಡಿದು ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವಕ್ಕೆ ವಿಶೇಷ ಕಳೆ ತಂದಿದ್ದರು. ನೆರೆದಿದ್ದ ಜನಸ್ತೋಮ ವೀರಶೈವ ಧರ್ಮಕ್ಕೆ, ಮಾನವ ಧರ್ಮಕ್ಕೆ, ಕಾಶೀ ಜಗದ್ಗುರುಗಳಿಗೆ ಜಯವಾಗಲಿ ಎಂಬ ಘೋಷಣೆ ನಿರಂತರವಾಗಿ ಮೆರವಣಿಗೆಯಲ್ಲಿ ನಡೆದಿತ್ತು.

ಜಾನಪದ ಕಲಾವಿದರು ಶಿವ ಪಾರ್ವತಿ ದರ್ಬಾರ ಎಂಬ ಶಿವನ 12 ಅವತಾರ ಧರಿಸಿದ ನೃತ್ಯ, ಕುದುರೆ ಕುಣಿತ, ದಶಕಂದ್ರ ಹಲಗೆ ವಾದನ, ಝಾಂಜ್ ಪಥಕ್, ಶಿವಭಜನೆಗಳು ಉತ್ಸವದ ಆಕರ್ಷಣೆಗಳಾಗಿದ್ದವು.

ಪ್ರತಿ ಮನೆ, ಅಂಗಡಿ, ಸಂಸ್ಥೆಗಳ ಮುಂದೆ ರಂಗೋಲೆ ಹಾಕಿ ತಳಿರು ತೋರಣದಿಂದ ಅಲಂಕರಿಸಿ, ಆರತಿ ಎತ್ತಿ ಸ್ವಾಗತಿಸುತ್ತಿದ್ದರು. ಈ ಮೆರವಣಿಗೆಯಲ್ಲಿ ಅಥಣಿ ತಾ॥ ಬಹುತೇಕ ಗ್ರಾಮಸ್ಥರು ಪಾಲ್ಗೊಂಡಿದ್ದರು. ಕಟಗೇರಿ, ಕೃಷ್ಣಾ, ಕಿತ್ತೂರ, ಮೊಳೆ ಉಗಾರ, ಕಾಗವಾಡ, ಶೇಡಬಾಳ, ಕಾತ್ರಾಳೆ, ಲಕ್ಷ್ಮೀನಗರ ಹಾಗೂ ನೆರೆಯ ಮಹಾರಾಷ್ಟ್ರವೂ ಸೇರಿದಂತೆ ಮೂವತ್ತು ಸಾವಿರದಷ್ಟು ಜನರು ಪಾಲ್ಗೊಂಡಿದ್ದು ನೋಡಿದರೆ ಜನರಲ್ಲಿನ ಭಕ್ತಿಭಾವ ಎಷ್ಟೆಂದು ತಿಳಿಯಬಹುದಾಗಿದೆ.

ವಿಜಯ ಕರ್ನಾಟಕ 20–12–2003

ಭಕ್ತಿಭಾವ ನಡುವೆ ಕಾಶಿ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ





ಅಥಣಿ ತಾಲೂಕಿನ ಐನಾಪೂರದಲ್ಲಿ ಕಾಶೀ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿತು. ಡಾ. ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಹುಕ್ಕೇರಿ ಶ್ರೀಗಳು, ಶ್ರೀ ಗೌರಿಶಂಕರ ಸ್ವಾಮೀಜಿ ಮತ್ತಿತರರು ಉಪಸ್ಥಿತರಿದ್ದರು. ನಂತರ ನಡೆದ ಡಾ. ಸಿದ್ಧರಾಮ ಪಂಡಿತಾರಾಧ್ಯ ಸ್ವಾಮಿಗಳ ಆಧ್ಯಾತ್ಮ ಪ್ರವಚನದ ಮಂಗಲೋತ್ಸವದಲ್ಲಿ ಕಾಶೀ ಶ್ರೀಗಳು ಮಾತನಾಡಿದರು. ನಾಗಠಾಣ ಶ್ರೀಗಳು, ಶ್ರೀ ಗೌರಿಶಂಕರ ಸ್ವಾಮೀಜಿ, ಹುಕ್ಕೇರಿ ಶ್ರೀಗಳು, ಕೊಣ್ಣೂರ ಶ್ರೀಗಳು ಉಪಸ್ಥಿತರಿದ್ದರು.






ಅಥಣಿ ತಾಲೂಕಿನ ಐನಾಪೂರದಲ್ಲಿ ಶುಕ್ರವಾರ ಕಾಶೀ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಕುಂಭಗಳ ಸಮೇತ ಪಾಲ್ಗೊಂಡಿರುವ ಸುಮಂಗಲೆಯರು. ಜಮಖಂಡಿ ತಾಲೂಕಿನ ತುಬಚಿ ಗ್ರಾಮದ ಕಲಾವಿದರು ಶಿವನ ದರ್ಬಾರ ರೂಪಕ ಪ್ರಸ್ತುತ ಪಡಿಸಿದರು

6–4–2004

ಹಿರೇಮ್ಯಾಗೇರಿ : ಅಡ್ಡಪಲ್ಲಕ್ಕಿ ಉತ್ಸವ



ಯಲಬುರ್ಗಿ ತಾಲೂಕಿನ ಹಿರೇಮ್ಯಾಗೇರಿ ಗ್ರಾಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಸಕಲ ವಾದ್ಯ–ವೈಭವದೊಂದಿಗೆ ನಡೆಯಿತು



11–6–2005 : ಜಮಖಂಡಿ ತಾಲೂಕ ಮಧುರಖಂಡಿ ಗ್ರಾಮದ ಮಹಾಲಕ್ಷ್ಮಿ ಮಹಾಹಬ್ಬ ಮಹೋತ್ಸವದ ಅಂಗವಾಗಿ ಶನಿವಾರ ನಡೆದ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವದ ದೃಶ್ಯ

13–11–2005 ಸಂಕ

ಪಟ್ಟಾಭಿಷೇಕ, ವರ್ಧಂತಿ ಮಹೋತ್ಸವ



ಮಹಾಲಿಂಗಪುರದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಪಟ್ಟಾಭಿಷೇಕದ 17ನೇ ವರ್ಧಂತ್ಯುತ್ಸವ ಸಮಾರಂಭವನ್ನು ಕೆರೂರ ಚರಂತಿಮಠದ ಡಾ. ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಸಹಜಾನಂದ ಸ್ವಾಮೀಜಿ, ಬಸಯ್ಯ ಸ್ವಾಮೀಜಿ, ಇಬ್ರಾಹಿಂ ಸುತಾರ ಉಪಸ್ಥಿತರಿದ್ದರು.

ಕಾಶೀ ಜಗದ್ಗುರುಗಳವರ ಮಹಾಲಿಂಗಪುರದ ಪುರಪ್ರವೇಶ ಅಲಂಕೃತ ವಾಹನದಲ್ಲಿ ನಡೆಯಿತು. ಮಂಗಳ ವಾದ್ಯಗಳು, ಜಾನಪದ ಕಲಾವಿದರು, ಸುಮಂಗಲೆಯರು ಈ ಮೆರವಣಿಗೆಯಲ್ಲಿ ಭಕ್ತರನ್ನು ಆಕರ್ಷಿಸಿದರು. ಇದೇ ಸಂದರ್ಭದಲ್ಲಿ ಜಗದ್ಗುರುಗಳ 17ನೇ ವರ್ಷದ ಪಟ್ಟಾಬಿಷೇಕ ವರ್ಧಂತಿ ಮಹೋತ್ಸವವನ್ನು ಮಹಾಲಿಂಗಪುರದವರು ಬಹು ಭಕ್ತಿ ಶ್ರದ್ಧೆಯಿಂದ ವಿಜೃಂಭಣೆಯಿಂದ ಆಚರಿಸಿದರು.

29–11–2005 ಕಣ್ಮನ ಸೆಳೆದ ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ

ವೈಭವದ ಅಡ್ಡಪಲ್ಲಕ್ಕಿ ಮಹೋತ್ಸವ



ತೇರದಾಳ (ತಾ. ಜಮಖಂಡಿ) 29, ಪಟ್ಟಣದ ಎಲ್ಲೆಡೆ ಜಗದ್ಗುರುಗಳಿಗೆ ಸ್ವಾಗತ ಕೋರುವ ಬ್ಯಾನರ್‌ಗಳು, ದ್ವಾರಗಳು, ತೆಂಗಿನ ಗರಿಗಳು, ಅಲಂಕೃತ ಬೀದಿಗಳು, ಬಣ್ಣ ಬಣ್ಣದ ಹಾಳೆಗಳು, ಆಕರ್ಷಕ ರಂಗೋಲಿಗಳಿಂದ ಶೃಂಗರಿಸಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರನ್ನು ಶ್ರದ್ಧಾ–ಭಕ್ತಿಯಿಂದ ಸ್ವಾಗತಿಸಲಾಯಿತು.

ಕಾಶೀ ಶ್ರೀಗಳಿಗೆ ಭಸ್ಮದಿಂದ ತುಲಾಭಾರ

29–11–2005

ತೇರದಾಳದಲ್ಲಿ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ, ಶ್ರೀ ವೀರಭದ್ರೇಶ್ವರ ಕಾರ್ತಿಕ ದೀಪಾರಾಧನೆ ಮಹೋತ್ಸವ ಹಾಗೂ ಧರ್ಮ ಜಾಗೃತಿ ಭಾವೈಕ್ಯ ಸಮ್ಮೇಳನ ಎಲ್ಲವೂ ವೈಭವದಿಂದ ನೆರವೇರಿತು. ಇದರ ಜೊತೆಗೆ ಕ್ರಿಯಾಭಸ್ಮದಿಂದ ಕಾಶೀ ಜಗದ್ಗುರುಗಳ ತುಲಾಭಾರವನ್ನು ತೇರದಾಳದ ಶ್ರೀ ಸಿದ್ಧಿವಿನಾಯಕ ಅಭಿವೃದ್ಧಿ ಸಂಘದವರು ಮಾಡಿದರು.

ಬ್ರಹ್ಮಕುಮಾರಿ ವಿದ್ಯಾಲಯದಲ್ಲಿ ಕಾಶೀ ಶ್ರೀಗಳ ಸನ್ಮಾನ

ಸಂಯುಕ್ತ ಕರ್ನಾಟಕ, 10–12–2005



ಜಮಖಂಡಿ ತಾಲೂಕು ತೇರದಾಳದ ಪ್ರಜಾಪಿತ ಬ್ರಹ್ಮಕುಮಾರಿ ವಿ.ವಿ.ಯಲ್ಲಿ ಕಾಶೀ ಶ್ರೀಗಳನ್ನು ಸನ್ಮಾನಿಸಲಾಯಿತು.

ತೇರದಾಳ, 9–ಹುಟ್ಟಿದ ಜೀವಿಗಳೆಲ್ಲ ಪರಮಾತ್ಮನ ಸಂತಾನವೇ. ಮನುಷ್ಯ ಜ್ಞಾನ, ತಿಳುವಳಿಕೆ, ಬುದ್ಧಿಯುಳ್ಳವ. ಶಿವನನ್ನು ಹೊಂದಲು ಮಾಡಬೇಕಾದ ಸಾಧನಾ ನಿಯಮ, ಯೋಗದ ಮಹಿಮೆಯನ್ನು ಪ್ರಜಾಪಿತ ಬ್ರಹ್ಮಕುಮಾರಿ ವಿದ್ಯಾಲಯದವರು ಹೇಳುವ ಪರಿ ಅನನ್ಯವೆಂದು ಕಾಶೀ ಡಾ. ಚಂದ್ರಶೇಖರ ಶಿವಯೋಗಿ ಶಿವಾಚಾರ್ಯ ಶ್ರೀಗಳು ಶ್ಲಾಘಿಸಿದರು.

ಇಲ್ಲಿಯ ಪ್ರ.ಬ್ರ.ಕು. ವಿದ್ಯಾಲಯದ ಧ್ಯಾನಯೋಗ ಮಂದಿರದಲ್ಲಿ ಸಂಚಾಲಕಿ ರಾಜಯೋಗಿನಿ ಸುವರ್ಣಾ ಅಕ್ಕ ಹಾಗೂ ರಾಜಯೋಗಿನಿ ಸವಿತಾ ಅಕ್ಕ ನೀಡಿದ ಭಕ್ತಿಯ ಸನ್ಮಾನ ಸ್ವೀಕರಿಸಿ, ಪ್ರತಿಯೊಬ್ಬರೂ ಯೋಗಿಗಳಾಗಲು ಮನುಷ್ಯ ಜನ್ಮಬೇಕು. ಮನುಷ್ಯ ಭೋಗ ಪ್ರವೃತ್ತಿ ಬಿಟ್ಟು ಯೋಗ ಮಾರ್ಗ ಅನುಸರಿಸುವುದು ಒಳಿತು ಎಂದು ನುಡಿದರು.

ಕಂಪ್ಲಿ : ವೈಭವದ ಅಡ್ಡಪಲ್ಲಕ್ಕಿ ಉತ್ಸವ

ಪ್ರಜಾವಾಣಿ ವಾರ್ತೆ, 26–01–2006



ಕಂಪ್ಲಿ ಸಮೀಪದ ಮೆಟ್ರಿ ಗ್ರಾಮದಲ್ಲಿ ಗುರುವಾರ ಕಾಶಿ ಜ್ಞಾನಸಿಂಹಾಸನಾಧೀಶ್ವರ ಡಾ। ಚಂದ್ರಶೇಖರ ಶಿವಾಚಾರ್ಯರರ ಅಡ್ಡಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು

ಕಾಶೀ ಜಗದ್ಗುರು ಕರೆ ವಿಶ್ವ ಭ್ರಾತೃತ್ವ ಬೆಳೆಸಿಕೊಳ್ಳಿ



ಸಿಂಧನೂರಿನಲ್ಲಿ ಸೋಮವಾರ ಸಿದ್ಧಾಂತ ಶಿಖಾಮಣಿ ಧರ್ಮೋಪದೇಶ ನೀಡಲು ಆಗಮಿಸಿದ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಅದ್ದೂರಿಯಾಗಿ ಸ್ವಾಗತ ನೀಡಲಾಯಿತು.

15–5–06 ಸಿಂಧನೂರು : ಮನುಷ್ಯ ಮನುಷ್ಯರ ಮಧ್ಯೆ ಇರುವ ದ್ವೇಷ ಅಸೂಯೆ ಸಂಘರ್ಷದ ಭಾವನೆಗಳನ್ನು ತ್ಯಜಿಸಿ ವಿಶ್ವ ಭ್ರಾತೃತ್ವ ಮನೋಭಾವನೆಯನ್ನು ಬೆಳೆಸಿಕೊಂಡು ಶಾಂತಿ ಸಾಮರಸ್ಯದಿಂದ ಬದುಕು ಸಾಗಿಸುವಂತೆ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಕರೆ ನೀಡಿದರು.

ಡಾ. ಚಂದ್ರಶೇಖರ ಶಿವಾಚಾರ್ಯರಿಗೆ ತೆರೆದ ಜೀಪಲ್ಲಿ ಮೆರವಣಿಗೆ

__24–8–06 ಚಿಂಚೋಳಿ :__ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮಕ್ಕೆ ಬುಧವಾರ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಆಗಮಿಸಿದಾಗ ಭಕ್ತರು ಶ್ರೀಗಳನ್ನು ತೆರೆದ ಜೀಪಿನಲ್ಲಿ ಮೆರವಣಿಗೆ ನಡೆಸುವ ಮೂಲಕ ಸರಳ ಆಚರಣೆಗೆ ಚಾಲನೆ ನೀಡಿದರು. ಮೆರವಣಿಗೆ ಮುಗಿಸಿಕೊಂಡು ಗ್ರಾಮದ ಮಲ್ಲಿಕಾರ್ಜುನ ದೇವಾಲಯದಲ್ಲಿ ನಡೆದ ಧಾರ್ಮಿಕ ಸಭೆಯಲ್ಲಿ ಶ್ರೀಗಳು ಭಕ್ತರನ್ನುದ್ದೇಶಿಸಿ ಮಾತನಾಡಿ ಜಗದ್ಗುರುಗಳು ಸರಳವಾಗಿರಲು ಬಯಸುತ್ತಾರೆ, ಆದರೆ ಭಕ್ತರು ಇದಕ್ಕೆ ಅವಕಾಶ ನೀಡದೆ ಅಡ್ಡಪಲ್ಲಕ್ಕಿ ಉತ್ಸವ ನಡೆಸುತ್ತಾರೆ ಎಂದರು.

ತಂದೆ ತಾಯಿ, ಗುರು ಹಿರಿಯರೆಲ್ಲರೂ ದೇವರ ಸಮಾನರೆಂದು ಹೇಳಿದ ಅವರು ಮಾತಿನುದ್ದಕ್ಕೂ ಬಸವಣ್ಣನವರ ವಚನಗಳನ್ನು ಉಲ್ಲೇಖಿಸುತ್ತಾ ವಿಜ್ಞಾನಯುಗದಲ್ಲಿ ಶಾಂತಿ ಮತ್ತು ನೆಮ್ಮದಿ ಇಲ್ಲವಾಗಿದೆ. ಹೀಗಾಗಿ ಜನರು ಧರ್ಮದ ಕಡೆಗೆ ಒಲವು ಬೆಳೆಸಿಕೊಳ್ಳಬೇಕೆಂದರು.

ಇಂದು ಕಾಶಿ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ

24–8–06 ಸೇಡಂ ತಾಲೂಕಿನ ಕುರಕುಂಟಾ ಗ್ರಾಮದಲ್ಲಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿತು.

17–11–2006 : ಹುಕ್ಕೇರಿ ತಾಲೂಕಿನ ಶ್ರೀಕ್ಷೇತ್ರ ರಕ್ಷಿ ಶಿರಗಾಂವದ ಶ್ರೀ ಶಿವಾನಂದ ಮಹಾಸ್ವಾಮಿಗಳು ಶ್ರೀ ಸಿದ್ಧಾರೂಢರ ಅಷ್ಟಮ ಜ್ಞಾನಯಜ್ಞ ಸಮ್ಮೇಳನದ ಅಂಗವಾಗಿ ಕಾಶೀ ಜಗದ್ಗುರುಗಳ ಷಷ್ಟ್ಯಬ್ದಿ ಸಮಾರಂಭ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ, ಕುಂಭೋತ್ಸವ, ಗಾಯತ್ರಿ ಯಜ್ಞ ಬಹು ಯಶಸ್ವಿಯಾಗಿ ನೆರವೇರಿತು.

ಬಂಕಾಪುರದಲ್ಲಿ ಕಾಶಿ ಶ್ರೀಗಳಿಗೆ ಭವ್ಯ ಸ್ವಾಗತ



19–12–2006 : ಶಿಗ್ಗಾವಿ ತಾಲೂಕು ಬಂಕಾಪುರಕ್ಕೆ ಮಂಗಳವಾರ ಆಗಮಿಸಿದ್ದ ಕಾಶಿಯ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳವರಿಗೆ ಭವ್ಯ ಸ್ವಾಗತ ನೀಡಿದರು.

ಬಂಕಾಪುರದ ಭಕ್ತರು ಎರಡನೇ ಬಾರಿ ಆಶೀರ್ವಚನ ನೀಡಲು ಬಂದ ಜಗದ್ಗುರುಗಳನ್ನು ಅದೇ ಮೊದಲ ಬಾರಿಗೆ ಪುರಪ್ರವೇಶ ಮಾಡಿದಂತೆ ಭವ್ಯವಾಗಿ ಮೆರವಣಿಗೆಯಲ್ಲಿ ಸಂಭ್ರಮ ಹಾಗೂ ಭಕ್ತಿ ಗೌರವಗಳಿಂದ ಭವ್ಯ ಸ್ವಾಗತ ನೀಡಿದರು.

ಧಾರವಾಡ, 30 ಸಾಮಾಜಿಕ ಪರಿಸರದ ವಿದ್ಯಮಾನಗಳಲ್ಲಿ ಪ್ರಬಲವಾಗಿ ಬೇರೂರಿರುವ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಜಾತಿ, ವರ್ಗ, ವರ್ಣ, ಪಂಗಡಗಳ ಕುಬ್ಜ ಭಾವನೆಗಳಿಂದ ಹೊರಬಂದು ಸಾತ್ವಿಕ ಸಮನ್ವಯ ಭಾವದ ಸಜೀವನ ವಿಧಾನ ರೂಢಿಸಿಕೊಂಡಾಗ ಮಾತ್ರ ಸರ್ವ ಸಮಾಜಗಳಲ್ಲಿಯೂ ಭಾವೈಕ್ಯತೆಯಿಂದ ಬದುಕಲು ಸಾಧ್ಯವಾಗುತ್ತದೆ ಎಂದು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು. "ವಿನಾಶದತ್ತ ಮುಖ ಮಾಡದಂತೆ ನಮ್ಮೊಳಗೆ ವೈರುಧ್ಯಗಳನ್ನು ಮರೆತು ಸಹೋದರತ್ವದ ಸ್ನೇಹ ಸಂಬಂಧಗಳನ್ನು ಸಂವರ್ಧಿಸಿ ಮನುಕುಲದ ಒಳಿತಿಗೆ ಸಿದ್ಧಾಂತ ಶಿಖಾಮಣಿ ಕೃತಿಯ ವಿಶಾಲ ಆಶಯಗಳು ಬೆಳಕು ಚೆಲ್ಲುತ್ತವೆ" ಎಂದು ಅವರು ಹೇಳಿದರು.

ಬದುಕಿನಲ್ಲಿ ತ್ಯಾಗ ಮತ್ತು ಯೋಗಗಳಿಗೆ ಮಹತ್ವ ಕೊಡದ ಕಾರಣದಿಂದ ಭೋಗ ಜೀವಿಗಳಾಗಿ ಕೊನೆಯಲ್ಲಿ ರೋಗಿಗಳಾಗಿ ದೇಹ ತ್ಯಾಗ ಮಾಡುವ ಪರಿಸ್ಥಿತಿ ಎದುರಾಗುತ್ತಿದೆ. ತನ್ನ ಆಯುಷ್ಯವನ್ನು ಸ್ವಾರ್ಥದಲ್ಲಿಯೇ ಕಳೆಯಬಾರದು ಎಂಬ ಉದ್ದೇಶದಿಂದ 60 ತುಂಬಿದ ಸಂದರ್ಭದಲ್ಲಿ ಷಷ್ಠ್ಯಬ್ದಿ ಆಚರಿಸಿ, ಆ ಮೂಲಕ ಅವರನ್ನು ಸಮಾಜ ಸೇವೆಗೆ ತೊಡಗಿಸುವುದು ಉದಾತ್ತ ಉದ್ದೇಶವಾಗಿದೆ ಎಂದು ಶ್ರೀಗಳು ಹೇಳಿದರು. ಧರ್ಮ ಮತ್ತು ಆಧ್ಯಾತ್ಮಗಳಲ್ಲಿ ಆಸಕ್ತಿ ಬೆಳೆಸಿಕೊಂಡು ರಾಷ್ಟ್ರದ ಅಪೂರ್ವ ಸಂಸ್ಕೃತಿಯನ್ನು ಕಾಪಾಡುವುದರ ಜೊತೆಗೆ ಭಾರತವನ್ನು ಬಲಿಷ್ಠಗೊಳಿಸಬೇಕೆಂದು ಕರೆ ನೀಡಿದರು.



30–12–06 : ಧಾರವಾಡದಲ್ಲಿ ಶನಿವಾರ ನಡೆದ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಧರ್ಮೋತ್ಸವದ ಮೆರವಣಿಗೆ ದೃಶ್ಯ.

ಚಾಮನೂರಿಗೆ ಇಂದು ಕಾಶಿ ಜಗದ್ಗುರು

4–2–2007 ಚಿತ್ತಾಪುರ ತಾಲೂಕಿನ ಚಾಮನೂರ ಗ್ರಾಮದಲ್ಲಿ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಮತ್ತು ಧರ್ಮಸಭೆ ನಡೆಸಿ ಆಶೀರ್ವಚನ ನೀಡಿದರು.

ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಬಬಲೇಶ್ವರ ಶಾಖಾಮಠದ ಅಡಿಗಲ್ಲು ಸಮಾರಂಭ

ದಿನಾಂಕ 23 ಏಪ್ರಿಲ್ 2007 ಸೋಮವಾರದಂದು ಜರುಗಲಿರುವ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರ ಅಡ್ಡಪಲ್ಲಕ್ಕಿ ಮಹೋತ್ಸವ, ಸಹಸ್ರ ಕುಂಭೋತ್ಸವ ಹಾಗೂ ಅಡಿಗಲ್ಲು ಸಮಾರಂಭ, ಲಕ್ಷ ಬಿಲ್ವಾರ್ಚನಾ ಕಾರ್ಯಕ್ರಮ ನಡೆಯಿಸಿತು. ಉತ್ಸವದಲ್ಲಿ ಸಹಸ್ರಾರು ಸುಮಂಗಲೆಯರು ಕುಂಭ ಹೊತ್ತು ಮೆರವಣಿಗೆಯಲ್ಲಿ ಸಾಗಿದ್ದರು.





20-6-2007 ಶಿಗ್ಗಾವಿ ತಾಲೂಕಿನ ಹಿರೇಬೆಂಡಿಗೇರಿಯಲ್ಲಿ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಶಿಗ್ಗಾವಿ ತಾಲೂಕಿನ ಹಿರೇ ಬೆಂಡಿಗೇರಿ ಗ್ರಾಮದಲ್ಲಿ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವವನ್ನು ಹಾಗೂ ಷಷ್ಠ್ಯಬ್ಧಿ ನಿಮಿತ್ತ ತುಲಾಭಾರವನ್ನು, ಧರ್ಮಸಭೆಯನ್ನು ಏರ್ಪಡಿಸಿದರು.

29-6-2007 : ಬಿಲ್ ಕೆರೂರ್ (ತಾ. ಬಾಗಲಕೋಟೆ)ನ ಬಿಲ್ವಾಶ್ರಮ ಹಿರೇಮಠದ ಮೌನ ತಪಸ್ವಿ ಲಿಂ. ರುದ್ರಮುನಿ ಶಿವಯೋಗಿ ಶಿವಾಚಾರ್ಯರ ಪುಣ್ಯ ದಿನೋತ್ಸವ ಸಂದಭದಲ್ಲಿ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿತು.

ಸಂಕನಾಳ (ಬಸವನ ಬಾಗೇವಾಡಿ ತಾ॥)ದಲ್ಲಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಧರ್ಮಸಭೆ ನಡೆಯಿತು.



4-7-2009 : ಬಸವನ ಬಾಗೇವಾಡಿ ತಾಲೂಕಿನ ಸಂಕನಾಳದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಶಾಸಕ ಶಿವಾನಂದ ಪಾಟೀಲ ಮಾತನಾಡಿದರು. ಚಿತ್ರದಲ್ಲಿ ಸಚಿವ ಅಪ್ಪಾ ಸಾಹೇಬ ಪಟ್ಟಣಶೆಟ್ಟಿ, ಶಾಸಕ ಶಿವಪುತ್ರಪ್ಪ ದೇಸಾಯಿ, ಕಾಶೀ ಜಗದ್ಗುರು ಡಾ. ಚಂದ್ರಶೇಖರ ಸ್ವಾಮೀಜಿ ಮತ್ತಿತರರು ಇದ್ದಾರೆ.

ಮಹಾರಾಷ್ಟ್ರದ ಬುಲಢಾಣಾ ಜಿಲ್ಲೆಯ ಸಾಖರ ಖೇಡಾ ಗ್ರಾಮದಲ್ಲಿ ಕಾಶೀ ಜಗದ್ಗುರುಗಳ ಮತ್ತು ಮರಾಠಿ ಸಾಹಿತ್ಯದ ಪಲ್ಲಕ್ಕಿ ಉತ್ಸವ ನಡೆಯಿತು.

ವೀರಶೈವ ಧರ್ಮದಲ್ಲಿ ವಿಪುಲ ಸಾಹಿತ್ಯ : ಸಾಖರಖೇಡಾದಲ್ಲಿ ದ್ವಿತೀಯ ವೀರಶೈವ ಮರಾಠಿ ಸಾಹಿತ್ಯ ಸಮ್ಮೇಳನ

5-6-2008, ವಿಜಯ ಕರ್ನಾಟಕ



ಮಹಾರಾಷ್ಟ್ರದ ಬುಲಢಾಣಾ ಜಿಲ್ಲೆಯ ಸಾಖರಖೇಡಾ ಗ್ರಾಮದಲ್ಲ ನಡೆದ ದ್ವಿತೀಯ ವೀರಶೈವ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಕಾಶೀಪೀಠದ ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಸಾನ್ನಿಧ್ಯ ವಹಿಸಿದ್ದರು.

ವೈಭವದ ಪಲ್ಲಕ್ಕಿ ಮಹೋತ್ಸವ

ಎರಡು ದಿನಗಳವರೆಗೆ ನಡೆದ ಸಮ್ಮೇಳನದಲ್ಲಿ ಮೊದಲ ದಿನ ಶ್ರೀ ಜಗದ್ಗುರುಗಳ ಮತ್ತು ಸಮಗ್ರ ಮರಾಠಿ ವೀರಶೈವ ಸಾಹಿತ್ಯದ ಪಲ್ಲಕ್ಕಿ ಮಹೋತ್ಸವ ವೈಭವದಿಂದ ನೆರವೇರಿತು. ಡಾ.ಶೇ.ದೆ.ಪಸಾರಕರ, ಡಾ. ಶಾಮಾ ಘೋಣಸೆ, ಡಾ. ಪ್ರವೀಣ ಕಾರಂಜಕರ, ಡಾ. ವಿಜಯ ತೇಲಂಗ, ಶಾತಿ ತೀರ್ಥಸ್ವಾಮಿ, ಡಾ. ಅಶೋಕ ಮೇನಕುದಳೆ, ಡಾ. ಅನೀಲ ಕಾಟಕರ, ಡಾ. ಆನಂದ ಕುಂಬಾರ, ಡಾ. ಸುಧಾಕರ ಮೊಗಲೇದಾರ, ಅನಿಲ ಸರ್ಜೆ, ಪ್ರಾ. ಸಂಜಯ ಚಾಂಡಾ ಮತ್ತಿತರರು ಸಮ್ಮೇಳನದಲ್ಲಿ ವಿವಿಧ ವಿಷಯಗಳ ಮೇಲೆ ಪ್ರಬಂಧಗಳನ್ನು ಪ್ರಸ್ತುತ

ಪಡಿಸಿದರು. ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ ಮತ್ತು ಸಾಖರಖೇಡಾ ಫಲಸಿದ್ಧ ಸಂಸ್ಥಾನಮಠ ಸಂಯುಕ್ತಾಶ್ರಯದಲ್ಲಿ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿತ್ತು. ಮಹಾರಾಷ್ಟ್ರದ ಮೂಲೆ ಮೂಲೆಗಳಿಂದ 10 ಸಾವಿರಕ್ಕೂ ಹೆಚ್ಚು ಜಿಜ್ಞಾಸುಗಳು ಭಾಗವಹಿಸಿದ್ದರು. ಸಾಖರಖೇಡಾದ ಫಲಸಿದ್ಧ ಸಂಸ್ಥಾನ ಮಠ, ಉಜ್ಜಯಿನಿ ಪೀಠದ ಶಾಖಾ ಮಠವಾಗಿದೆ. ಈ ಮಠದ ಮೂಲ ಕರ್ತೃಗಳಾದ ಶ್ರೀ ಫಲಸಿದ್ಧ ಸ್ವಾಮಿಗಳ ಸಹಸ್ರಾಬ್ದಿ ಪೂರ್ತಿ ಮಹೋತ್ಸವ ಅಂಗವಾಗಿ ಈ ಕಾರ್ಯಕ್ರಮವನ್ನು ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಹಮ್ಮಿಕೊಂಡಿದ್ದರು.

ವಿಜಯ ಕರ್ನಾಟಕ 13-11-2008



ಸಿಂದಗಿ ತಾಲೂಕು ಕಲಕೇರಿ ಗ್ರಾಮದಲ್ಲಿ ನಡೆದ ಸಿದ್ಧರಾಮದೇವರ ಗುರುಪಟ್ಟಾಧಿಕಾರ ಮಹೋತ್ಸವದಂಗವಾಗಿ ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ಜರುಗಿತು.

25-12-2008 : ಮುದ್ದೇನಕೊಪ್ಪ (ಹಿರೇಕೆರೂರು ತಾ) ಗ್ರಾಮದಲ್ಲಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿತು.

ಕೋಳಕೂರನಲ್ಲಿ ಕಾಶಿ ಶ್ರೀಗಳ ಮೆರವಣಿಗೆ

ವಿಜಯ ಕರ್ನಾಟಕ, 30-4-2009

ಕಾಶೀ ಜಗದ್ಗುರುಗಳವರಿಗೆ ಅಶ್ವರಥದಲ್ಲಿ ಭವ್ಯ ಮೆರವಣಿಗೆ ನಡೆಯಿತು.



ಅಡ್ಡ ಪಲ್ಲಕ್ಕಿ ಉತ್ಸವ

ಪ್ರಜಾವಾಣಿ, 6-5-2009



ಆಳಂದ ತಾಲ್ಲೂಕಿನ ಹಿರೋಳಿಯಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಸ್ವಾಮೀಜಿ ಹಾಗೂ ಶ್ರೀಶೈಲ ಜಗದ್ಗುರು ಅವರ ಅಡ್ಡ ಪಲ್ಲಕ್ಕಿ ಉತ್ಸವ ಸಂಭ್ರಮದಿಂದ ನಡೆಯಿತು.

ಕಾಶೀ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಉತ್ಸವ

ವಿಜಯ ಕರ್ನಾಟಕ, 14-5-2009



ಬಟಗೇರಿಯಲ್ಲಿ ಬುಧವಾರ ಸಹಸ್ರಾರು ಭಕ್ತರ ಮಧ್ಯೆ ಶ್ರೀಮದ್ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಉತ್ಸವ ಅದ್ದೂರಿಯಿಂದ ನಡೆಯಿತು.

ವಿಜಯ ಕರ್ನಾಟಕ, 29-8-2009

ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ

ಸೇಡಂ : ತಾಲೂಕಿನ ಮುಧೋಳ ಗ್ರಾಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ಜರುಗಿತು. 12 ಗಂಟೆಗೆ ಆರಂಭವಾದ ಪಲ್ಲಕ್ಕಿ ಉತ್ಸವ ರಾತ್ರಿ 8 ಗಂಟೆಗೆ ಗಮ್ಯಸ್ಥಾನ ತಲುಪಿತು.

ವಿಜಯ ಕರ್ನಾಟಕ, 30–8–09



ಅಫಜಲಪುರದಲ್ಲಿ ಶ್ರೀ ಕಾಶೀ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಮಹೋತ್ಸವ ಅದ್ಧೂರಿಯಿಂದ ನಡೆಯಿತು.

ವಿಜಯ ಕರ್ನಾಟಕ, 31–8–2009

ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ


ಅಫಜಲಪುರ : ತಾಲೂಕಿನ ಹಿರೇ ಜೇವರ್ಗಿ ಗ್ರಾಮದಲ್ಲಿ ಗುರುವಾರ ಹಬ್ಬದ ವಾತಾವರಣ. ಎಲ್ಲಿ ನೋಡಿದಲ್ಲಿ ಭಕ್ತ ಸಮೂಹ, ಶ್ರೀ ಗುರುಶಾಂತಲಿಂಗ ದೇವರ ಪಟ್ಟಾಧಿಕಾರ ಮಹೋತ್ಸವ ಹಾಗೂ ಶಿಕ್ಷಣ ಸಂಸ್ಥೆ ಸುವರ್ಣ ಮಹೋತ್ಸವ ನಿಮಿತ್ತ ಗ್ರಾಮದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕಂಡುಬಂದ ದೃಶ್ಯವಿದು.

ಕಾರ್ಯಕ್ರಮದ ಅಂಗವಾಗಿ ಶ್ರೀಶೈಲದ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಹಾಗೂ ಕಾಶಿಯ ಜಗದ್ಗುರು ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಅವರ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ನಡೆಯಿತು.






ವಿಜಯ ಕರ್ನಾಟಕ, 28–10–2009



ಸವದತ್ತಿ ತಾಲೂಕಿನ ಸುತಗಟ್ಟಿ ಗ್ರಾಮದಲ್ಲಿ ಶ್ರೀ ಗುರು ಬಾಲಲೀಲಾ ಸಂಗಮೇಶ್ವರ ಅಜ್ಜನವರ ಜಾತ್ರಾ ಮಹೋತ್ಸವ ಅಂಗವಾಗಿ ಶ್ರೀ ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ನಡೆಯಿತು.

ಪ್ರಜಾವಾಣಿ, 13–3–2010

ಕಾಶೀ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಮೆರವಣಿಗೆ



ಸಿಂಧನೂರು ತಾಲ್ಲೂಕಿನ ಗೊರೇಬಾಳ ಗ್ರಾಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಸ್ವಾಮೀಜಿಗಳ ಅಡ್ಡಪಲ್ಲಕ್ಕಿ ಮೆರವಣಿಗೆ ನಡೆಯಿತು.


ಅಡ್ಡ ಪಲ್ಲಕ್ಕಿ ಮಹೋತ್ಸವ

ವಿಜಯ ಕರ್ನಾಟಕ, 27–3–2010

ಪಂಚ ಪೀಠಗಳ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಅಡ್ಡ ಪಲ್ಲಕ್ಕಿ ಮಹೋತ್ಸವ ಹಾಗೂ ಜ. ರೇಣುಕಾಚಾರ್ಯರ ಜಯಂತ್ಯುತ್ಸವ ಹಾಗೂ ಜನಜಾಗೃತಿ ಧರ್ಮ ಸಮ್ಮೇಳನ ಮಾ. 27ರಂದು ಹಾನಗಲ್ಲ ತಾಲೂಕಿನ ಇನಾಂ ಲಕಮಾಪುರದಲ್ಲಿ ನಡೆಯಿತು.

ಅಡ್ಡಪಲ್ಲಕ್ಕಿ ಉತ್ಸವ ಕೀಳರಿಮೆ ಸಲ್ಲ : ಶ್ರೀಗಳು

28–3–2010



ಚಿಕ್ಕನಾಯಕನಹಳ್ಳಿ ತಾಲ್ಲೂಕು ಮಾದಿಹಳ್ಳಿ ಗ್ರಾಮದಲ್ಲಿ ಭಾನುವಾರ ಜಂಗಮವಾಡಿ ಕಾಶೀ ಕ್ಷೇತ್ರದ ಮಠಾಧೀಶರಾದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವವು ವಿಜೃಂಭಣೆಯಿಂದ ನಡೆಯಿತು.

ಪ್ರಜಾವಾಣಿ, 30–3–2010




ಶಿವಮೊಗ್ಗದಲ್ಲಿ ಸೋಮವಾರ ಕಾಶೀಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯ ಮೆರವಣಿಗೆ ನಡೆಯಿತು. ಈ ಸಂದರ್ಭದಲ್ಲಿ ವೀರಶೈವ ಸಮಾಜದ ಗಣ್ಯರು ಪಾಲ್ಗೊಂಡಿದ್ದರು.



10–8–2010 : ಹುಮನಾಬಾದ್‌ನಲ್ಲಿ ನಡೆಯುವ ಶ್ರಾವಣಮಾಸದ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ ಕಾಶೀ ಜಗದ್ಗುರುಗಳನ್ನು ಭವ್ಯ ರಥದಲ್ಲಿ ಮೆರವಣಿಗೆಯಲ್ಲಿ ಸ್ವಾಗತಿಸಲಾಯಿತು.

ಹುಮನಾಬಾದ್‌ನಲ್ಲಿ ಕಾಶೀ ಜಗದ್ಗುರುಗಳನ್ನು ಶ್ರೀ ಅಗ್ನಿಕುಂಡದಿಂದ ವೀರಭದ್ರೇಶ್ವರ ದೇವಸ್ಥಾನದವರೆಗೆ ತೆರೆದ ವಾಹನದಲ್ಲಿ ಭವ್ಯ ಮೆರವಣಿಗೆಯೊಂದಿಗೆ ಬರಮಾಡಿಕೊಳ್ಳಲಾಯಿತು.




10–1–2011 : ತಿಪಟೂರಿನ ಗುರುಕುಲ ಕಲ್ಯಾಣ ಮಂಟಪದಲ್ಲಿ ಜ.13ರವರೆಗೆ ವೀರಶೈವ ಸಂಘದವರು ಹಮ್ಮಿಕೊಂಡಿರುವ ಇಷ್ಟಲಿಂಗ ಮಹಾಪೂಜೆ ಮತ್ತು ಧಾರ್ಮಿಕ ಸಮಾರಂಭದಲ್ಲಿ ಪಾಲ್ಗೊಳ್ಳಲು ನಗರಕ್ಕೆ ಆಗಮಿಸಿರುವ ಕಾಶೀ ಧಾರ್ಮಿಕ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರನ್ನು ಪುಷ್ಪಾಲಂಕೃತವಾದ ಮಂಟಪದಲ್ಲಿ ಮೆರವಣಿಗೆ ನಡೆಸಲಾಯಿತು.

ಕಾಶಿ ಜಗದ್ಗುರುಗಳ ಪುರ ಪ್ರವೇಶ



31–1–20111 : ಬನಹಟ್ಟಿಯಲ್ಲಿ ರವಿವಾರ ಸಂಜೆ ಪುರಪ್ರವೇಶ ಮಾಡಿದ ವಾರಣಾಸಿಯ ಜಂಗಮವಾಡಿ ಮಠದ ಪ.ಪೂ.1008 ಜಗದ್ಗುರು ಕಾಶೀ ಸಿಂಹಾಸನಾಧೀಶ್ವರ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು. ಚಿತ್ರದಲ್ಲಿ ಶರಣಬಸವ ಶಿವಾಚಾರ್ಯರು ಇದ್ದಾರೆ.

3–2–2011 : ಹಂಸಭಾವಿ ಗ್ರಾಮಕ್ಕೆ ಪ್ರಪ್ರಥಮ ಬಾರಿಗೆ ಕಾಶೀ ಜಗದ್ಗುರುಗಳನ್ನು ಅಡ್ಡಪಲ್ಲಕ್ಕಿ ಮಹೋತ್ಸವ ಮಾಡಿ ಸ್ವಾಗತಿಸಿದರು.



ಹಾರ್ದಿಕ ಸುಸ್ವಾಗತ

ಹಂಸಭಾವಿ ಗ್ರಾಮಕ್ಕೆ ಮತ್ತು ನಮ್ಮ ಸಂಸ್ಥೆಯ ದಶಮಾನೋತ್ಸವ ಕಾರ್ಯಕ್ರಮಕ್ಕೆ ಪ್ರ-ಪ್ರಥಮ ಬಾರಿಗೆ ಆಗಮಿಸುತ್ತಿರುವ ಶ್ರೀಮದ್ ಕಾಶಿ ಜ್ಞಾನ ಸಿಂಹಾಸನಾಧೀಶ್ವರ ಶ್ರೀ.ಶ್ರೀ.ಶ್ರೀ.1108 ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಗೆ, ಹರ-ಗುರು-ಚರ ಮೂರ್ತಿಗಳಿಗೆ ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ|| ಬಸವರಾಜ ಕೆರೂಡಿಯವರಿಗೆ ಹಾಗೂ ಸನ್ಮಾನಿತರಿಗೆ ಅತಿಥಿ ಮಹೋದಯರಿಗೆ,ಅಡ್ಡಪಲ್ಲಕ್ಕಿ ಉತ್ಸವಕ್ಕೆ ಆಗಮಿಸುತ್ತಿರುವ ಭಕ್ತಾದಿಗಳಿಗೆ ಹಾರ್ದಿಕ ಸುಸ್ವಾಗತ.

ಸ್ವಾಗತ ಕೋರುವವರು

ಶ್ರೀ.ಪ್ರಭು ಹಾಲೇವಾಡಿಮಠ.ಅಧ್ಯಕ್ಷರು ಹಾಲೇವಾಡಿಮಠ ತರಬೇತಿ ಸಂಸ್ಥೆ.

26–3–2011 : ಮೂಡಬಾಳ (ಶಹಾಪುರ ತಾ||)ದಲ್ಲಿ ಕಡಕೋಳದ ಶಾಖಾಮಠದ 17ನೇ ಜಾತ್ರಾ ಮಹೋತ್ಸವದ ಅಂಗವಾಗಿ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ಏರ್ಪಡಿಸಿ ವಿಜೃಂಭಣೆಯಿಂದ ಸ್ವಾಗತಿಸಿದರು.

ಅಡ್ಡಪಲ್ಲಕ್ಕಿ ಉತ್ಸವ

ಉದಯವಾಣಿ 7–5–2011



ಸಿಂದಗಿ : ತಾಲೂಕು ಬಂದಾಳ ಗ್ರಾಮದಲ್ಲಿ ಬಸಯ್ಯ ಮುತ್ಯಾನ ಜಾತ್ರಾ ಮಹೋತ್ಸವದಲ್ಲಿ ಶ್ರೀಶೈಲ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ವಿಜೃಂಭಣೆಯಿಂದ ಜರುಗಿತು.

ಕಾಶೀ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ



ನರಗುಂದದಲ್ಲಿ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶ್ರೀಗಳ ಅಡ್ಡಪಲ್ಲಕ್ಕಿ ಜರುಗಿತು. ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ. ಪಾಟೀಲ ಹಾಗೂ ಮುಂತಾದವರಿದ್ದಾರೆ.

18–6–2011 ನರಗುಂದ,–ಇಲ್ಲಿನ ಪತ್ರಿವನ ಮಠದ ಶರಣಬಸವ ದೇವರು ಅವರ ಪಟ್ಟಾಧಿಕಾರ ಮಹೋತ್ಸವ ಪ್ರಯುಕ್ತ ಪಟ್ಟಣದಲ್ಲಿ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವ ಜನಸಾಗರದ ಮಧ್ಯೆ ನಡೆಯಿತು. ಇಲ್ಲಿನ ಬಸವೇಶ್ವರ ವೃತ್ತದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ. ಪಾಟೀಲ್ ಅವರು ಮೆರವಣಿಗೆ ಚಾಲನೆ ನೀಡಿದರು. ರಾಣಿಬೆನ್ನೂರಿನ ವೀರಗಾಸೆ ತಂಡ ಝಾಂಜ ಮೇಳ ಮತ್ತು ನೂರಾರು ಸುಮಂಗಲೆಯರ ಪೂರ್ಣ ಕುಂಭೋತ್ಸವದೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಅಡ್ಡಪಲ್ಲಕ್ಕಿ ಉತ್ಸವ ಜರುಗಿತು. ಸಚಿವ ಸಿ.ಸಿ. ಪಾಟೀಲ್ ನರಗುಂದ ಬಸವೇಶ್ವರ ಸವೃತ್ತದಲ್ಲಿ ಅಡ್ಡಪಲ್ಲಕ್ಕಿಯನ್ನು ಹೆಗಲ ಮೇಲೆ ಹೊತ್ತು ತಮ್ಮ ಭಕ್ತಿ ಮೆರೆದರು.



ಕಾಶೀ ಪೀಠಾಧೀಶ್ವರ ಅಡ್ಡಪಲ್ಲಕ್ಕಿ ಮಹೋತ್ಸವ

ಪ್ರಜಾವಾಣಿ, 15–5–2012

ನರಗುಂದ ತಾಲ್ಲೂಕಿನ ಕೊಣ್ಣೂರಿನಲ್ಲಿ ಪಂಚಪೀಠಾಧೀಶ್ವರ ಕಾಶೀ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಸಕಲ ವಾದ್ಯಮೇಳದೊಂದಿಗೆ ಸಂಭ್ರಮದಿಂದ ಮಂಗಳಾವಾರ ನಡೆಯಿತು.

ಲಿಂ. ವಿರುಪಾಕ್ಷಯ್ಯ ಸ್ವಾಮಿ ಪುಣ್ಯ ಸ್ಮರಣೋತ್ಸವ ಗೋರ್ಟಾಗಿಂದು ಕಾಶಿ ಜಗದ್ಗುರು

ವಿಜಯ ವಾಣಿ, 18–5–2012



ಬಸವ ಕಲ್ಯಾಣ : ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಭಾನುವಾರ ಗೋರ್ಟಾ(ಬಿ) ಗ್ರಾಮಕ್ಕೆ ಆಗಮಿಸಲಿದ್ದು, ಮಂತ್ರಯೋಗಿ ವಿರೂಪಾಕ್ಷಯ್ಯ ಸ್ವಾಮೀಜಿಯವರ ಪ್ರಥಮ ಸ್ಮರಣೋತ್ಸವದಲ್ಲಿ ಸಾನ್ನಿಧ್ಯ ವಹಿಸುವರು.

ಇಂದಿನಿಂದ ಗುರು ಪಟ್ಟಾಧಿಕಾರ ಮಹೋತ್ಸವ

ವಿಜಯ ಕರ್ನಾಟಕ, 19–5–2014

ತಾಲೂಕಿನ ಮದ್ರಕಿ ಗ್ರಾಮದ ಮದ್ರಕಿ ಸಂಸ್ಥಾನ ಗಚ್ಚಿನಮಠದಲ್ಲಿ 19 ಹಾಗೂ 20ರಂದು ಶಿವಯೋಗಿ ದೇವರ ಗುರು ಪಟ್ಟಾಧಿಕಾರ ಮಹೋತ್ಸವ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕ ಮೂಗನೂರ ಸುಕ್ಷೇತ್ರದಲ್ಲಿ ದಿನಾಂಕ 09–04–2014

ಶ್ರೀಮದ್ ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾ ಭಗವತ್ಪಾದಂಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ.ಪೂ. ಶ್ರೀ ಜಗದ್ಗುರು ಸಿದ್ಧಾರೂಢ ಶಿವಯೋಗಿಗಳ ಜಯಂತ್ಯೋತ್ಸವದ ನಿಮಿತ್ತವಾಗಿ ಸರ್ವಧರ್ಮ ಸಾಮೂಹಿಕ ವಿವಾಹ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ

FAITH BECKONS



21-4-2014 :Adda Pallakki Mahotsava of Kashi Jnyan Simhasanadheesha Chandrashekar Shivacharya Swamiji was held at Gundakanal Village in Muddebihal taluk in Bijapur district on Sunday

ಬಾಗಲಕೋಟ ಜಿಲ್ಲೆ ಬದಾಮಿ ತಾಲೂಕಿನ ಸುಕ್ಷೇತ್ರ ಹೂಲಗೇರಿ

5ನೇ ವರ್ಷದ ಶ್ರೀ ಗುರು ಕಾಡಸಿದ್ಧೇಶ್ವರ ಜಾತ್ರಾ ಮಹೋತ್ಸವ

7–5–2014 : ಗ್ರಾಮದ ಶ್ರೀ ಗುರು ಕಾಡಸಿದ್ಧೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯವಾಗಿ ಶ್ರೀಮತ್ ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಯೋಗಿ ಶಿವಾಚಾರ್ಯ ಭಗವತ್ಪಾದಂಗಳವರು, ಶ್ರೀ ಕಾಶೀಮಹಾಪೀಠ ವಾರಣಾಸಿ ಇವರ ಅಡ್ಡಪಲ್ಲಕ್ಕಿ ಮಹೋತ್ಸವ, ಕುಂಭಮೇಳ, 1008 ಸುಮಂಗಲೆಯರ ಉಡಿತುಂಬುವದು, ಜಾನಪದ ಕಲಾಮೇಳ, ಅಯ್ಯಾಚಾರ, ಶಿವದೀಕ್ಷಾ, ಸಾಮೂಹಿಕ ವಿವಾಹ, "ಸಿದ್ಧಾಂತಶಿಖಾಮಣಿ ಪ್ರವಚನ"

ಹೂಲಗೇರಿ ಗ್ರಾಮ (ಬಾದಾಮಿ ತಾ) (ಬಾಗಲಕೋಟೆ ಜಿಲ್ಲೆ)ದಲ್ಲಿ 5ನೇ ವರ್ಷದ ಕಾಡಸಿದ್ಧೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಕಾಶೀ ಜಗದ್ಗುರುಗಳವರ ಅಡ್ಡ ಪಲ್ಲಕ್ಕಿ ಮಹೋತ್ಸವ ಏರ್ಪಡಿಸಲಾಗಿತ್ತು.

ಹೀಗೆ ಜಗದ್ಗುರುಗಳು ಹೋದೆಡೆಯೆಲ್ಲಾ ಪಲ್ಲಕ್ಕಿ ಉತ್ಸವಗಳು ಮೆರವಣಿಗೆಗಳು ದೇಶದಾದ್ಯಂತ ನಡೆಯುತ್ತಲೇ ಇವೆ. ಒಮ್ಮೆ ಒಂದೂರಲ್ಲಿ ಪುರ ಪ್ರವೇಶವಾಗಿದ್ದರೆ ಹಲವು ವರ್ಷದ ಮೇಲೆ ಮತ್ತದೇ ಊರಿಗೆ ಹೋದರೆ ಅಲ್ಲಿನ ಭಕ್ತಾದಿಗಳು ಅಷ್ಟೇ ಉತ್ಸಾಹದಿಂದ ಶ್ರದ್ಧೆ ಭಕ್ತಿಯಿಂದ ನೂರಾರು ಕುಂಭಗಳ ಜೊತೆಗೆ ಮೆರವಣಿಗೆ ಮೂಲಕ ಸ್ವಾಗತಿಸಿ ಜಗದ್ಗುರುಗಳ ಮೇಲೆ ತಮಗಿರುವ ಭಕ್ತಿಯನ್ನು ಪ್ರದರ್ಶಿಸಿ ಧನ್ಯರಾಗುತ್ತಿದ್ದರು. ಇದಕ್ಕೆಲ್ಲಾ ಕಾರಣ ಇಷ್ಟೇ : ಕಾಶೀ ಜಗದ್ಗುರುಗಳು ಎಲ್ಲೇ ಹೋಗಲಿ ಆ ಊರಿನ ಸಾಮಾನ್ಯ ಜನರೊಡನೆಯೂ ಬಹು ಪ್ರೀತಿಯಿಂದ ಮಾತನಾಡಿ ಅವರ ಕಷ್ಟಸುಖಗಳನ್ನು ವಿಚಾರಿಸಿ, ಎಷ್ಟೋ ವೇಳೆ ಸೂಕ್ತ ಪರಿಹಾರವನ್ನು ಮಾಡಿದ್ದಾರೆ. ಪಾದಪೂಜೆ ಮಾಡುವ ಮನೆಯವರು ನೂರು ರೂ. ಕಾಣಿಕೆ ಕೊಟ್ಟ ಸಂದರ್ಭಗಳೂ ಹಲವು ಬಾರಿ ನಡೆದಿವೆ. ಗುರುಗಳು ಅದನ್ನು ಪರಿಗಣಿಸದೆ–ಅವರು ಕರೆದಾಗ ಮತ್ತವರ ಮನೆಗೆ ಹೋದದ್ದುಂಟು. ಗುರುಗಳಿಗೆ ಕಾಣಿಕೆಗಳಿಗಿಂತ ಭಕ್ತರು ಮುಖ್ಯರಾಗಿದ್ದಾರೆ. ಈ ರೀತಿ ಅವರುಗಳ ಮನೆಯ ಕಷ್ಟ ಸುಖ ವಿಚಾರಿಸುವಾಗಲೇ ಒಬ್ಬ ಬಡ ಪ್ರತಿಭಾವಂತ ವಿದ್ಯಾರ್ಥಿ ಮೆಡಿಕಲ್ ಓದಲು ಆಗದೆ ತಂದೆ–ಮಗ ಪರಿತಪಿಸುತ್ತಿದ್ದಾಗ ಜಗದ್ಗುರುಗಳು ಆ ಹುಡುಗನಿಗೆ ವಿದ್ಯಾರ್ಥಿವೇತನ ಸಿಗುವ ವ್ಯವಸ್ಥೆ ಮಾಡಿ ಡಾಕ್ಟರ್ ಆಗುವಂತೆ ಮಾಡಿದರು. ಆಗಿನ್ನೂ ಎರಡು ಮೂರು ವರ್ಷಗಳಾಗಿರಲಿಲ್ಲ ಪೀಠಾಧಿಪತಿಗಳಾಗಿ. ಆದರೂ ಪುಣೆಯ ಬಾಬಾ ಸಾಹೇಬ ಕಲ್ಯಾಣಿಯವರ ನೆರವಿನಿಂದ ಈ ಹುಡುಗನಿಗೆ ಓದಿನ ವ್ಯವಸ್ಥೆ ಮಾಡಿದ್ದರು.

ಹಳ್ಳಿ ಹಳ್ಳಿ ಸುತ್ತಿ ಅಲ್ಲಿನ ಬದುಕನ್ನು ಕಣ್ಣಾರೆ ಕಂಡಿರುವರು, ಎಷ್ಟೋ ಬಡ ಭಕ್ತರಿಗೆ ನೆರವು ನೀಡುತ್ತಿರುವರು. ಮಕ್ಕಳಂತೆ ಭಕ್ತರನ್ನು ಪ್ರೀತಿಸುತ್ತಾರೆ. ಈ ಗುಣಗಳಿಂದಾಗಿ ಜಗದ್ಗುರುಗಳಿಗೆ ದೇಶಾದ್ಯಂತ ಲಕ್ಷಲಕ್ಷ ಭಕ್ತರಿದ್ದಾರೆ.

ಪಂಚ ಪೀಠಾಚಾರ್ಯರುಗಳ ಅಡ್ಡಪಲ್ಲಕ್ಕಿ ಮಹೋತ್ಸವಗಳು

ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಪೀಠಾರೋಹಣವಾದ ನಂತರ ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಉತ್ಸವಗಳು ನಡೆದ ಊರುಗಳನ್ನು ಇಲ್ಲಿ ಹೇಳಲಾಗಿದೆ.

ಒಬ್ಬ ಪೀಠಾಚಾರ್ಯರನ್ನು ಪ್ರಥಮ ಪುರಪ್ರವೇಶದ ಸಂದರ್ಭದಲ್ಲಿ ನಡೆಸುವ ತಯಾರಿ ಎಷ್ಟೊಂದು ಎಂಬುದನ್ನು ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ನೋಡಿಯಾಗಿದೆ. ಐದು ಜಗದ್ಗುರುಗಳನ್ನು ಒಂದೇ ಬಾರಿಗೆ ಒಂದೂರಿಗೆ ಕರೆಸಿಕೊಳ್ಳುವುದು ನಿಜಕ್ಕೂ ದೊಡ್ಡ ಸಾಹಸದ ಕೆಲಸ. ಐದು ಜಗದ್ಗುರುಗಳ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ಎಲ್ಲರಿಗೂ ಸರಿಹೋಗುವಂತಹ ತಾರೀಖನ್ನು ನಿರ್ಧರಿಸುವುದು ಬಹುದೊಡ್ಡ ಸಾಹಸದ ಕೆಲಸ. ಜಗದ್ಗುರುಗಳೈವರ ಪೂಜೆ ಪ್ರಸಾದಕ್ಕಾಗಿ ಐವರು ಭಕ್ತರ ಮನೆಗಳಲ್ಲಿ ವ್ಯವಸ್ಥೆ ಮಾಡಬೇಕು. ಐದು ಪಲ್ಲಕ್ಕಿಗಳನ್ನು ಹೊಂದಿಸಬೇಕು. ಬಹಳ ಮೊದಲೇ ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ಮಾಡಬೇಕು–ಹೀಗೆ ಇನ್ನು ಅನೇಕ ಜವಾಬ್ದಾರಿಗಳಿರುತ್ತವೆ. ಹೀಗಾಗಿ ಊರಿನ ಎಲ್ಲಾ ಪ್ರಮುಖ ಸಂಘ ಸಂಸ್ಥೆಗಳು ಒಂದಾಗಿ ಈ ಏರ್ಪಾಡಿನಲ್ಲಿ ಭಾಗಿಯಾಗಿ ಯಶಸ್ವಿಯಾಗಿ ನಡೆಸಿಕೊಡುತ್ತಾರೆ. ಪಲ್ಲಕ್ಕಿ ಉತ್ಸವದಲ್ಲಿ ಭಾಗಿಯಾಗಲು ಸುತ್ತಮುತ್ತ ಹಳ್ಳಿಗಳಿಂದ ಬರುವ ಭಕ್ತಾದಿಗಳಿಗೆ ಪ್ರಸಾದದ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಿ ಲಕ್ಷಾಂತರ ಜನರಿಗೆ ಪ್ರಸಾದ ಸಿಗುವಂತೆ ನೋಡಿಕೊಳ್ಳುತ್ತಾರೆ. ಊರಿನೆಲ್ಲರ ಸಂಪೂರ್ಣ ನೆರವಿನಿಂದ ಅಚ್ಚುಕಟ್ಟಾಗಿ ಪಲ್ಲಕ್ಕಿ ಉತ್ಸವವನ್ನು ಏರ್ಪಡಿಸಲಾಗುತ್ತದೆ.

ಐದು ಪಲ್ಲಕ್ಕಿಗಳನ್ನು ಅಲಂಕರಿಸುವುದನ್ನು ನೋಡಲು ಎರಡು ಕಣ್ಣುಗಳು ಸಾಲದೆನಿಸುತ್ತದೆ. ಒಂದೊಂದು ಊರಿನಲ್ಲಿ ಒಂದೊಂದು ರೀತಿಯಲ್ಲಿ ಸುಂದರವಾಗಿ ಪಲ್ಲಕ್ಕಿಯನ್ನು ಸಿಂಗರಿಸಿರುತ್ತಾರೆ. ಇಡೀ ಊರಿನ ಪ್ರಮುಖ ಬೀದಿಗಳನ್ನು ತಳಿರು ತೋರಣಗಳಿಂದ ಸಿಂಗರಿಸಿ, ಮನೆ ಮನೆಗಳ ಮುಂದೆ ರಂಗೋಲಿ ಬಿಡಿಸಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಕುಂಭ ಹೊತ್ತು ಪಾಲ್ಗೊಳ್ಳುವ ಮಹಿಳೆಯರ ಉತ್ಸಾಹ ಎಷ್ಟು ಬಣ್ಣಿಸಿದರೂ ಸಾಲದು. ಜಗದ್ಗುರುಗಳೊಬ್ಬರನ್ನು ಕಾಣುವುದೇ ಅಪರೂಪವಾದಂತಹ ಸಮಯದಲ್ಲಿ ಒಟ್ಟಿಗೆ ಪಂಚಾಚಾರ್ಯರ ದರ್ಶನ ಸಿಗುವುದು ಒಂದು ಭಾಗ್ಯವೆಂದೇ ಇಂದಿಗೂ ಭಕ್ತರ ಮನದಲ್ಲಿ ಭಾವನೆ ತುಂಬಿದೆ.

ಹಿಂದಿನ ವರ್ಷಗಳಿಗಿಂತ ಇಂದು ಪ್ರಚಾರ ಮಾಧ್ಯಮಗಳು ವಿಪುಲವಾಗಿರುವ ಈ ದಿನಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ಗುಡಿಸಿಲಿನಲ್ಲೂ ಟಿ.ವಿಗಳನ್ನು ಕಾಣಬಹುದಾಗಿದೆ. ಅಡ್ಡಪಲ್ಲಕ್ಕಿ ಉತ್ಸವಗಳನ್ನು ನಡೆಸಲು ಅಡ್ಡಗಾಲು ಹಾಕಿ ಪ್ರಚಾರ ಮಾಡಿದರೂ ಜನರ ತುಂಬಿದ ತೊರೆಯಂತೆ ಹರಿವ ಭಕ್ತಿಭಾವದ ಮುಂದೆ ಯಾವ ಅಪಪ್ರಚಾರವೂ ನಿಲ್ಲದಾಗಿದೆ. ಪರಂಪರೆಯನ್ನು ಮುಂದುವರೆಸುವಲ್ಲಿ ಜನರಲ್ಲಿನ ಶ್ರದ್ಧೆ, ನಂಬಿಕೆ, ಭಕ್ತಿಭಾವನೆ ತುಂಬಿದೆ. ಶತಶತಮಾನಗಳಿಂದ ಪಂಚಾಚಾರ್ಯರುಗಳ ಉತ್ಸವವನ್ನು ಪರಂಪರಾನುಗತವಾಗಿ ನಡೆಸಿಕೊಂಡು ಬಂದಿರುವ, ಇಂದಿಗೂ ನಡೆಸುತ್ತಿರುವ ಭಕ್ತರನ್ನು, ಪಲ್ಲಕ್ಕಿ ಉತ್ಸವ ನಡೆಸಿದ ಊರಿನ ಸಮಸ್ತ ಜನತೆಯನ್ನು, ಇಲ್ಲಿ ಕೃತಜ್ಞತೆಯಿಂದ ನೆನೆಯುವಂತಾಗಿದೆ. ನೂರಾರು ವರ್ಷಗಳು ಕಳೆದರೂ ಈ ಪರಂಪರೆ ಮುಂದುವರೆದುಕೊಂಡು ಹೋಗುವಷ್ಟು ಆಳವಾಗಿ ಬಲವಾಗಿ ಧಾರ್ಮಿಕ ನಂಬುಗೆ ಬೆಳೆದುಬಿಟ್ಟಿದೆ.

ಸಕಲ ಸಮುದಾಯದ ಹಿತವನ್ನೇ ಬಯಸುವ ಜನತೆಗೆ ಧಾರ್ಮಿಕ ಸಂಸ್ಕಾರ ನೀಡುವ ದಿನನಿತ್ಯದ ಬದುಕಿಗೆ ಬೇಕಾದ ಉಪದೇಶಾಮೃತ ನೀಡುವ ಪಂಚಾಚಾರ್ಯರ ದರ್ಶನಕ್ಕಾಗಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಧಾವಿಸಿ ಬರುತ್ತಾರೆ. ಅವರ ಆಶೀರ್ವಾದ ಪಡೆದು ಪಾದಸ್ಪರ್ಶ ಮಾಡಿದರೆ ಬದುಕು ಪಾವನವಾಯ್ತೆಂದು ಭಾವಿಸುತ್ತಾರೆ. ಇದೆಲ್ಲವೂ ಅಡ್ಡಪಲ್ಲಕ್ಕಿ ಉತ್ಸವಗಳಲ್ಲಿ ಕಾಣಬರುವ ದೃಶ್ಯಗಳಾಗಿವೆ.



ಜಗದ್ಗುರುಗಳ ಜನ್ಮಗ್ರಾಮದಲ್ಲಿ ಅಡ್ಡಪಲ್ಲಕ್ಕಿ ಉತ್ಸವ

27–1–1990 : ಕಾಶಿ ಜಗದ್ಗುರುಗಳು ಪೀಠಾರೋಹಣ ಮಾಡಿದ ಬಳಿಕ ಅವರ ಮೊದಲ ಪುರಪ್ರವೇಶವನ್ನು, ಅಡ್ಡಪಲ್ಲಕ್ಕಿ ಮಹೋತ್ಸವವನ್ನು ಗುಳೇದಗುಡ್ಡದಲ್ಲಿ ನೆರವೇರಿಸುವುದಾಗಿ ನಿರ್ಣಯಿಸಿ ಉಳಿದ ಪಂಚ ಪೀಠದ ಜಗದ್ಗುರುಗಳಿಗೆ ಆಮಂತ್ರಣ ಕೊಟ್ಟು **27–1–2090**ರಂದು ರಂಭಾಪುರಿ ಜಗದ್ಗುರುಗಳಾದ ಪ್ರಸನ್ನ ರೇಣುಕ ವೀರರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳವರು, ಉಜ್ಜಯಿನಿ ಪೀಠದ ಜಗದ್ಗುರು ಸಿದ್ಧೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು, ಕೇದಾರ ಪೀಠದ ಜಗದ್ಗುರು 'ರಾವಲ್' ಸಿದ್ಧೇಶ್ವರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು. ಶ್ರೀಶೈಲ ಪೀಠದ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು. ಇವರೆಲ್ಲರೂ ಕೂಡಿಕೊಂಡು ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಪ್ರಪ್ರಥಮವಾಗಿ ಅಡ್ಡಪಲ್ಲಕ್ಕಿಯಲ್ಲಿ ಗೌರವದಿಂದ ಮುಹೂರ್ತ ಮಾಡಿಸಿದರು.

ಸಡಗರದಿಂದ ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮೆರವಣಿಗೆಯಲ್ಲಿ ವಿಜೃಂಭಣೆಯಿಂದ ಸಿಂಗರಿಸಿದ ನಗರದ ಪ್ರಮುಖ ಬೀದಿಗಳಲ್ಲಿ ಹಾಯ್ದು ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಆವರಣದಲ್ಲಿ ಬೃಹತ್ ಧರ್ಮ ಜನಜಾಗೃತಿ ಸಮ್ಮೇಳನ ಜರುಗಿತು.

ಕಾಶೀ ಜಗದ್ಗುರುಗಳ ಎರಡನೇ ಅಡ್ಡಪಲ್ಲಕ್ಕಿ ಉತ್ಸವ

28–1–1990 : ಜಗದ್ಗುರುಗಳ ಜನ್ಮಗ್ರಾಮ ತೋಗುಣಸಿ ಗುಳೇದಗುಡ್ಡದಿಂದ ಮೂರು ಕಿ.ಲೋ. ಮೀಟರು ದೂರದಲ್ಲಿದೆ. ಗುಳೇದಗುಡ್ಡದಲ್ಲಿ ಜಗದ್ಗುರುಗಳ ಮೊದಲ ಅಡ್ಡಪಲ್ಲಕ್ಕಿ ಉತ್ಸವ ಇರುವ ವಿಚಾರ ತೋಗುಣಸಿಯ ಭಕ್ತರಿಗೆ ತಿಳಿದು – ಜನ್ಮಗ್ರಾಮದಲ್ಲೂ ಕಾಶೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಉತ್ಸವಮಾಡಿ ಧರ್ಮಸಭೆಯಲ್ಲಿ ಗೌರವ ಸಮರ್ಪಿಸಬೇಕೆಂದು ತೀರ್ಮಾನಿಸಿ ಏರ್ಪಾಡು ಮಾಡಿಕೊಂಡರು. ಗ್ರಾಮ ಚಿಕ್ಕದಾದರೂ ಬಹುವೈಭವದಿಂದ ಹೆಮ್ಮೆಯಿಂದ ಸಡಗರ ಸಂಭ್ರಮದಿಂದ ಊರಿಗೆ ಊರೇ ಸೇರಿಕೊಂಡು ಪಂಚಪೀಠಾಧೀಶ್ವರರ ಪಲ್ಲಕ್ಕಿ ಉತ್ಸವ ಆಚರಿಸಿದ್ದು ಚರಿತ್ರಾರ್ಹ, ಆ ಸಮಯದಲ್ಲಿ ಕಾಶೀ ಸನ್ನಿಧ್ದಿಯವರ ಪೂರ್ವಾಶ್ರಮದ ತಾಯಿ–ತಂದೆಗಳೂ, ಸೋದರ–ಸೋದರಿಯರು ಈ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು.



ಜಗದ್ಗುರುಗಳವರ ಜನ್ಮಗ್ರಾಮದಲ್ಲಿ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ

29–1–1990ರಲ್ಲಿ ಶ್ರೀ ವೀರಣ್ಣ ಚರಂತಿಮಠ ಇವರ ನೇತೃತ್ವದಲ್ಲಿ ಬಾಗಲಕೋಟೆಯಲ್ಲೂ ಪಂಚ ಪೀಠಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಧಾರ್ಮಿಕ ಸಮಾರಂಭ ನೆರವೇರಿ ಆ ಭಾಗದ ಭಕ್ತಾದಿಗಳಿಗೆ ಪರಮ ಸಂತೋಷವನ್ನುಂಟುಮಾಡಿತು.

1990–ಜುಲೈ ಆಷಾಡಮಾಸದಲ್ಲಿ ಸೊಲ್ಲಾಪುರದಲ್ಲಿ ಶ್ರೀ ಕಾಶೀ ಜಗದ್ಗುರುಗಳಾದ ಮತ್ತು ರಂಭಾಪುರಿಯ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಬಹು ವಿಜೃಂಭಣೆಯಿಂದ ನೆರವೇರಿತು. ಕಾಶೀ ಜಗದ್ಗುರುಗಳು ಕಾಶೀ ಪೀಠದ ಅಧಿಕಾರವನ್ನು ಸ್ವೀಕರಿಸಿದ ನಂತರ 48 ದಿನಗಳವರೆಗೆ ಒಂದು ಮಂಡಲಾನುಷ್ಠಾನವನ್ನೇ ಕೈಕೊಂಡಿದ್ದರು. ಆ ಸಂದರ್ಭದಲ್ಲಿ ಗುರುಗಳಾಧ ಡಾ॥ ಚಂದ್ರಶೇಖರ ಕಪಾಳೆಯವರನ್ನು ತಮ್ಮ ಜೊತೆಗೆ ಶ್ರೀಪೀಠದಲ್ಲಿ ಇರಿಸಿಕೊಂಡು ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥಕ್ಕೆ ಮರಾಠೀ ವ್ಯಾಖ್ಯಾನವನ್ನು ಸಿದ್ಧಪಡಿಸಿದರು ಮತ್ತು ಆ ಗ್ರಂಥಕ್ಕೆ ಒಂದು ವಿಶಿಷ್ಟವಾದ ಅಭ್ಯಾಸಪೂರ್ಣವಾದ ಪ್ರಸ್ತಾವನೆಯನ್ನು ಸಹ ಬರೆದು ಸಿದ್ಧಪಡಿಸಿದರು. ಮೇಲೆ ಸೊಲ್ಲಾಪುರದಲ್ಲಿ ನಡೆದ ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಈ ಸಿದ್ಧಾಂತ ಶಿಖಾಮಣಿ ಗ್ರಂಥದ ಗಜಮಹೋತ್ಸವವನ್ನು ಉದ್ಘಾಟನೆಯಾಯಿತು. ಇಂದು ಈ ಗ್ರಂಥವು ಮಹಾರಾಷ್ಟ್ರದ ಸಾವಿರಾರು ವೀರಶೈವರ ಮನೆಮನೆಯಲ್ಲಿ ರಾರಾಜಿಸುತ್ತಿದೆ.

ಧಾರವಾಡದಲ್ಲಿ ಜ॥ ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಉತ್ಸವ

28–5–1990 ರಂದು ಧಾರವಾಡ ನಗರದಲ್ಲಿ ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಉತ್ಸವವು ಬೆಳಗ್ಗೆ 10 ಗಂಟೆಗೆ ಬಹಳ ವಿಜೃಂಭಣೆಯಿಂದ ಪ್ರಾರಂಭಗೊಂಡು 4 ಗಂಟೆಗೆ ಮುಕ್ತಾಯವಾಯಿತು. ಆಶೀರ್ವಚನ ಸಂಜೆ 5 ಗಂಟೆಗೆ ಆರಂಭಗೊಂಡು ಮಧ್ಯರಾತ್ರಿ 2 ಗಂಟೆಯವರೆಗೆ ನಡೆಯಿತು. ಲಕ್ಷಾಂತರ ಭಕ್ತಾದಿಗಳು ಪಾಲ್ಗೊಂಡಿದ್ದರು.

29–5–1990ರ ಬೆಳಗ್ಗೆ ಧಾರವಾಡ ಸಮೀಪದ ಕೆಲಗೇರಿ ಗ್ರಾಮದಲ್ಲಿ,

30–5–1990 ಬೆಣ್ಣೂರು ಗ್ರಾಮದಲಿ,

31–5–1990 ಜಕ್ಕಲಿ ಗ್ರಾಮದಲ್ಲಿ ಪಂಚಪೀಠಾಚಾರ್ಯರ ಅಡ್ಡಪಲ್ಲಕ್ಕಿ ಉತ್ಸವ ನೆರವೇರಿತು.

ಬೆಂಗಳೂರು ಮಹಾನಗರದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಧರ್ಮದಿಗ್ವಿಜಯ

18–6–1990 : ಕಳೆದ ಜೂನ್ 18–19 ಮತ್ತು 20ನೇ ತಾರೀಖು ಮರೆಯಲಾರದ್ದು. ವೀರಶೈವ ಧರ್ಮಸಂಸ್ಥಾಪನಾಚಾರ್ಯ ಪರಂಪರೆಯಿಂದ ಬಂದ ಇಂದಿನ ಜಗದ್ಗುರುಗಳೈವರ ಶುಭಾಗಮನ, ಮೂರು ದಿನಗಳಕಾಲ ಮೂರು ಗೋಷ್ಠಿಯಂತೆ ಮಹತ್ವಪೂರ್ಣ ಕಾರ್ಯಕಲಾಪಗಳು ಜರುಗಿದವು.

ಇತಿಹಾಸ ಪ್ರಸಿದ್ಧವಾದ ನಗರದಲ್ಲಿ ತಾ॥ 18–6–1990ರಂದು ಶ್ರೀ ಜಗದ್ಗುರು ಪಂಚಾಚಾರ್ಯ ಅಡ್ಡಪಲ್ಲಕ್ಕಿ ವೈಭವದಿಂದ ನಡೆದು ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜಿನ ಪ್ರಾಂಗಣದಲ್ಲಿ ಮುಕ್ತಾಯಗೊಂಡು ಶುಭಾಶೀರ್ವಾದ ಸಂದೇಶವನ್ನು ದಯಪಾಲಿಸಿದರು. ಸಂಜೆ ಸರಿಯಾಗಿ 6 ಗಂಟೆಗೆ ಸುಂದರ ಪರಿಸರದ ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ಶ್ರೀ ಪೀಠಾಧೀಶ್ವರರ ಸಮ್ಮುಖದಲ್ಲಿ ಧರ್ಮ ಸಮಾರಂಭಗಳು ಜರುಗಿದವು.

ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ 18ರಂದು ಬೆಳಗ್ಗೆ 9.30ಕ್ಕೆ ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಮೈಸೂರು ಬ್ಯಾಂಕ್ ಸರ್ಕಲ್‌ನಿಂದ ಆರಂಭಗೊಂಡು ಪ್ಯಾಲೆಸ್ ರಸ್ತೆ, ಗಾಂಧಿನಗರ ಒಂದನೇ ಮೈನ್, ಶೇಷಾದ್ರಿರಸ್ತೆ ಮತ್ತು ರೇಸ್‌ಕೋರ್ಸ್ ಮೂಲಕ ಶ್ರೀ ರೇಣುಕಾಚಾರ್ಯ ಕಾಲೇಜಿನ ಆವರಣ ತಲುಪಿ ಮುಕ್ತಾಯಗೊಂಡಿತು.

11–4–1993, ನೂಲ್ವಿಗ್ರಾಮ

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ

ಉದ್ಘಾಟನೆ

ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ
ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು,
ಇವರಿಂದ

ಅತಿಥಿಗಳು
ಡಾ॥ ಜೀವರಾಜ ಆಳ್ವ, ಶಾಸಕರು
ಕಾರ್ಯಾಧ್ಯಕ್ಷರು, ಕರ್ನಾಟಕ ಪ್ರದೇಶ ಜನತಾ ದಳ, ಬೆಂಗಳೂರು

ಸಾಯಂಕಾಲ 7.00 ಘಂಟೆಗೆ
ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ದಿವ್ಯ ಸನ್ನಿಧಾನದಲ್ಲಿ

ಮಾನವ ಧರ್ಮ ಮಹಾ ಮಂಟಪದ ಉದ್ಘಾಟನೆ
ಹಾಗೂ
ವೀರಶೈವ ಧರ್ಮ ಗೋಷ್ಠಿ

ಮಾನವ ಧರ್ಮ ಮಹಾಮಂಟಪದ ಉದ್ಘಾಟನೆ
ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳವರು,
ಪೇಜಾವರಮಠ ಉಡುಪಿ

ನೂಲ್ವಿಗ್ರಾಮ (ತಾ॥ ಹುಬ್ಬಳ್ಳಿ)ದಲ್ಲಿ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಉದ್ಘಾಟನೆಯನ್ನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಮಾಡಿದರು.

18–5–1993



ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರರಾದ
1008 ಜಗದ್ಗುರು ಶ್ರೀ ಶ್ರೀ ಸಿದ್ಧೇಶ್ವರ ರಾಜದೇಶಿಕೇಂದ್ರ
ಶಿವಾಚಾರ್ಯಸ್ವಾಮಿಗಳವರ
ಅಪ್ಪಣೆ ಮೇರೆಗೆ

ಬಳ್ಳಾರಿ ಜಿಲ್ಲಾ ಶಿರುಗುಪ್ಪ ನಗರದಲ್ಲಿ
ಶ್ರೀ 1008 ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ

ಶ್ರೀ ಜಗದ್ಗುರು ರೇಣುಕಾ ವಿಜಯ
ಪುರಾಣ ಮಂಗಲ
ಮಂಗಳವಾರ 18–5–1993
ವೇಳೆ 2 ಗಂಟೆಗೆ
ಶ್ರೀ ಷ.ಬ್ರ. ವೀರಭದ್ರ ಶಿವಾಚಾರ್ಯಸ್ವಾಮಿಗಳು,
ಕಂಬಾಳಿಮಠ, ತೆಕ್ಕಲಕೋಟೆ

ಇವರ ಅಧ್ಯಕ್ಷತೆಯಲ್ಲಿ

ಸರ್ವಧರ್ಮ ಸಮ್ಮೇಳನ

ಭಕ್ತರ ಸಂಭ್ರಮ : ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ



25–6–1993 : ಹುಬ್ಬಳ್ಳಿಯಲ್ಲಿ ಶುಕ್ರವಾರ ಜರುಗಿದ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ

25–6–1993

ಹುಬ್ಬಳ್ಳಿಯಲ್ಲಿರುವ ಮೂರುಸಾವಿರ ಮಠದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಹಾಗೂ ಪಂಚಪೀಠಾಧೀಶ್ವರರ ಅಪೂರ್ವ ಸಮಾಗಮವು ನಡೆದಿದ್ದು ಚರಿತ್ರಾರ್ಹ.

ಪಂಚಪೀಠ–ಮೂಜಗಂ ಸಮಾಗಮ

ವೀರಶೈವ ಸಮಾಜದ ಅಭಿವೃದ್ಧಿಗೆ ಕರೆ

ಹುಬ್ಬಳ್ಳಿ, ಜೂ–28–ವೀರಶೈವರು ತಮ್ಮಲ್ಲಿರುವ ಒಳಪಂಗಡ ಮರೆತು ಸಮಗ್ರ ಸಮಾಜದ ಹಿತಕ್ಕಾಗಿ ಒಂದಾಗಿ ನಿಲ್ಲಬೇಕು ಎಂದು ಜಗದ್ಗುರು ಪಂಚಪೀಠಾಧೀಶ್ವರರು ಹಾಗೂ ಹುಬ್ಬಳ್ಳಿ ಮೂರುಸಾವಿರಮಠ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಅಪೂರ್ವ ಸಮಾಗಮದಲ್ಲಿ ಇಂದು ಕರೆ ನೀಡಲಾಯಿತು. ನಗರದಲ್ಲಿ ಇಂದು ಸಭೆ ಸೇರಿದ್ದು ಪಂಚಪೀಠದ ಜಗದ್ಗುರುಗಳು ಹಾಗೂ ನಿರಂಜನ ಪೀಠದ ಜಗದ್ಗುರುಗಳು ವೀರಶೈವರ ಕೂಗು ಸರ್ಕಾರವನ್ನು ಎಚ್ಚರಿಸುವಂತಾಗಬೇಕೆಂದು ಕರೆ ನೀಡಿದರು.

ವೀರಶೈವರಲ್ಲಿ ಬಹಳಷ್ಟು ಜನ ಆರ್ಥಿಕವಾಗಿ ಹಿಂದುಳಿದಿದ್ದು ಸರ್ಕಾರವು ಗೊತ್ತುಪಡಿಸಿದ ಮೀಸಲಾತಿಯನ್ನು ಕೇವಲ ಜಾತಿಯ ದೃಷ್ಟಿಯಿಂದ ನೋಡದೇ ಆರ್ಥಿಕ ದೃಷ್ಟಿಯಿಂದ ನೋಡಬೇಕೆಂದು ಸರ್ಕಾರವನ್ನು ಜಗದ್ಗುರುಗಳು ಒತ್ತಾಯಿಸಿದ್ದಾರೆ.

ವೀರಶೈವ ಸಮಾಜವು ಆರ್ಥಿಕವಾಗಿ ಬಲಿಷ್ಟವಾಗಲು ಸಮಾಜದಲ್ಲಿರುವ ಶ್ರೀಮಂತ ಜನರು ದೊಡ್ಡ ಮೊತ್ತದ ಬಂಡವಾಳ ಹೂಡಿ ಅಲ್ಲಲ್ಲಿ ಔದ್ಯೋಗಿಕ ಕೇಂದ್ರಗಳನ್ನು ಸ್ಥಾಪಿಸಿ ಆ ಮೂಲಕ ಬಡ ವೀರಶೈವ ಜನಾಂಗಕ್ಕೆಲ್ಲ ಉದ್ಯೋಗಾವಕಾಶ ಕಲ್ಪಿಸಿಕೊಟ್ಟು ಆರ್ಥಿಕವಾಗಿ ಅವರನ್ನು ಭದ್ರವಾಗಿಸಲು ಪ್ರಯತ್ನಿಸಬೇಕೆಂದು ಜಗದ್ಗುರುಗಳು ಅಪ್ಪಣೆ ಕೊಡಿಸಿದರು.

ಪಂಚಪೀಠ ಹಾಗೂ ಮೂರುಸಾವಿರ ಮಠದ ಜಗದ್ಗುರುಗಳು ಮತ್ತೆ ಕೂಡಲಸಂಗಮ ಕ್ಷೇತ್ರದಲ್ಲಿ ಸಮಾವೇಶಗೊಂಡು ವೀರಶೈವ ಸಮಾಜದ ಪುನರುತ್ಥಾನಕ್ಕೆ ಇನ್ನೂ ಅನೇಕ ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲು ತೀರ್ಮಾನಿಸಿದರು.

ಕೂಡಲಸಂಗಮ ಸುಧಾರಣೆಗೆ ಈಗಾಗಲೇ ಸರ್ಕಾರ ಒಂದು ಕೋಟಿ ರೂ. ಅನುದಾನ ಕೊಡಲು ಘೋಷಿಸಿದ್ದು ಅದನ್ನು ಸಕಾಲದಲ್ಲಿ ನೀಡಿ ಸಂಗಮೇಶ್ವರ ದೇವಸ್ಥಾನ ಜೀರ್ಣೋದ್ಧಾರದ ಜೊತೆಗೆ ಅದರ ಸುತ್ತಮುತ್ತಣ ಪ್ರದೇಶಗಳಲ್ಲಿ ಸಮಾಜಕ್ಕೆ ಉಪಯೋಗವಾಗುವ ಕಲ್ಯಾಣ ಕಾರ್ಯ ಮಾಡಲು ಸರ್ಕಾರಕ್ಕೆ ಸಭೆಯು ಒತ್ತಾಯಿಸಿತು.

ದೇಶದಲ್ಲಿ ಇಂದು ಕೋಮುಗಲಭೆ ವಿಪರೀತವಾಗಿ ಬೆಳೆದು ದೇಶವನ್ನು ವ್ಯವಸ್ಥಿತವಾಗಿ ಒಡೆಯುತ್ತಲಿದ್ದು ಅಂಥ ವಿಧ್ವಂಸಕಶಕ್ತಿಗಳ ವಿರುದ್ಧ ಹೋರಾಡಲು ಸಭೆ ಸಮಗ್ರ ಭಾರತ ರಕ್ಷಣೆಗೆ ರಾಷ್ಟ್ರ ಪ್ರೇಮ ತುಂಬಿಕೊಳ್ಳಲು ಕರೆ ನೀಡಿತು.

4–7–1997 : ಲಿಂಗಸುಗೂರಿನಲ್ಲಿ ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವದ ನಂತರ ಈಶ್ವರಲಿಂಗ ಪ್ರತಿಷ್ಠಾಪನೆಯ ಸಾನ್ನಿಧ್ಯವಹಿಸಿ ಬೃಹತ್ ಧರ್ಮಸಭೆಯಲ್ಲಿ ಆಶೀರ್ವಚನ ನೀಡಿದರು.

ವೈಭವದ ಅಡ್ಡಪಲ್ಲಕ್ಕಿ ಮಹೋತ್ಸವ

ದಿನಾಂಕ 24ರಂದು ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಅತ್ಯಂತ ವೈಭವದಿಂದ ಗದಗ ನಗರದಲ್ಲಿ ನಡೆಯಿತು. ವಿವಿಧ ವಾದ್ಯ ಮೇಳಗಳು ನಂದಿಕುಣಿತ ಶ್ರೀ ಜಗದ್ಗುರು ರೇಣುಕಾಚಾರ್ಯರ ಪ್ರತಿಮೆ ಇದ್ದ ವಾಹನ ಹಾಗೂ ಶ್ರೀಜಗದ್ಗುರುಗಳ ಐದು ಪಲ್ಲಕ್ಕಿಗಳು ಇದ್ದ ಮೆರವಣಿಗೆ 8 ತಾಸುಗಳ ಕಾಲ ನಡೆದು ದಾಖಲೆ ಸ್ಥಾಪಿಸಿತು. ಗದಗ ನಗರದಲ್ಲಿ ಹಬ್ಬದ ಸಡಗರ ಸಂಭ್ರಮ ಕಂಡುಬಂದಿತು.

ನಂತರ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಮಾಂಗಲ್ಯ ಮಂದಿರದ ಉದ್ಘಾಟನೆಯನ್ನು ಶ್ರೀ ರಂಭಾಪುರಿ, ಶ್ರೀ ಉಜ್ಜಯಿನಿ, ಶ್ರೀ ಕೇದಾರ, ಶ್ರೀಶೈಲ ಹಾಗೂ ಶ್ರೀ ಕಾಶೀ ಪೀಠದ ಜಗದ್ಗುರುಗಳಿಂದ ವಿಧ್ಯುಕ್ತವಾಗಿ ನೆರವೇರಿತು.

ಕಾಶೀ ಪೀಠದ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಉಜ್ಜಯನಿ ಪೀಠದ ಗುರುತ್ವಾಧಿಕಾರದ ಬಗ್ಗೆ ಇಲ್ಲಸಲ್ಲದ ಪತ್ರಿಕಾ ಹೇಳಿಕೆಯನ್ನು ಕಂಡು ಗುಳೇದಗುಡ್ಡದಲ್ಲಿ ಪತ್ರಿಕಾಗೋಷ್ಠಿ ನಡೆಸಿ, ಪೀಠಗಳ ಜಗದ್ಗುರುಗಳನ್ನು ಪೀಠದ ಸ್ಥಾನದಿಂದ ತೆಗೆದು ಹಾಕುವಂತಿಲ್ಲ ಎಂದು ವಿವರಿಸಿದ್ದನ್ನು ಇಲ್ಲಿ ಹಾಗೆಯೇ ಮುದ್ರಿಸಲಾಗಿದೆ. ಇದರಿಂದ ತಿಳಿಯುವುದೇನೆಂದರೆ ಪಂಚಪೀಠಗಳು ಪೀಠಗಳ ಮರ್ಯಾದೆಗೆ ಧಕ್ಕೆ ಬರುವಂತಹ ಸಂದರ್ಭದಲ್ಲಿ ಎಲ್ಲಾ ಪೀಠಾಚಾರ್ಯರೂ ಅದರ ರಕ್ಷಣೆಗೆ ಮುಂದೆಬರುತ್ತಾರೆ ಎಂಬುದು.

ಉಜ್ಜಯಿನಿ ಸಿದ್ಧೇಶ್ವರ ಜಗದ್ಗುರುಗಳ ಹೇಳಿಕೆಗೆ ಖಂಡನೆ

10-2-1998 : ಗುಳೇದಗುಡ್ಡ 10 (ಕ.ವಾ.) ವೀರಶೈವ ಪಂಚಪೀಠಗಳಲ್ಲಿ ಒಂದಾದ ಉಜ್ಜಯನಿ ಸದ್ಧರ್ಮ ಪೀಠದ ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರು ದಿನಾಂಕ 5-11-1995 ರಂದು ಪ್ರಸ್ತುತ ಜಗದ್ಗುರು ಮರುಳಸಿದ್ಧ ರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಉಜ್ಜಯನಿ ಪೀಠದ ಗುರುತ್ವಾಧಿಕಾರವನ್ನು, ಸಮಾನ ಪೀಠಗಳಾದ ರಂಭಾಪುರಿ ಶ್ರೀಶೈಲ ಮತ್ತು ಕಾಶಿ ಜಗದ್ಗುರುಗಳು ಹಾಗೂ ಭಕ್ತರ ಸಮ್ಮುಖದಲ್ಲಿ ಪಟ್ಟಾಭಿಷೇಕ ನಡೆದಿರುವಾಗ ಮತ್ತೊಬ್ಬರನ್ನು ಪಟ್ಟಾಭಿಷೇಕ ಮಾಡುವುದೇ ಆಗಲಿ, ಇಲ್ಲವೇ ಮಾಡಿಕೊಂಡ ಜಗದ್ಗುರುಗಳನ್ನು ತೆಗೆದು ಹಾಕುವ ಕಾರ್ಯಕ್ರಮವನ್ನು ಕಾಶೀ ಜ್ಞಾನಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ತೀವ್ರವಾಗಿ ಖಂಡಿಸಿದ್ದಾರೆ.

ಅವರು ಶುಕ್ರವಾರ ದಿ. 6ರಂದು ಗುಳೇದಗುಡ್ಡ ಶ್ರೀ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಸಮಾರಂಭದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 98 ವರ್ಷದ ವಯೋವೃದ್ಧರಾಗಿರುವ ಶ್ರೀ ಸಿದ್ಧೇಶ್ವರ ಜಗದ್ಗುರುಗಳಿಗೆ ಮಾನಸಿಕ ಮತ್ತು ಆರೋಗ್ಯದ ಸ್ಥಿತಿ ಸರಿಯಾಗಿಲ್ಲದ ಸಂದರ್ಭದಲ್ಲಿ ಅವರ ಹೆಸರಿನಲ್ಲಿ ಇಲ್ಲಸಲ್ಲದ ಸುದ್ದಿಗಳನ್ನು ಪತ್ರಿಕೆಗಳಿಗೆ ಕೊಡುವುದನ್ನು ನೋಡಿದರೆ ಯಾರೋ ಉದ್ದೇಶಪೂರ್ವಕ ಅವರ ಹೆಸರು ಕೆಡಿಸುವ ಉದ್ದೇಶ ಹೊಂದಿದ್ದಾರೆ, ಅವರಿಗೆ ಮೋಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಗುರುವಿನ ಸಮ್ಮುಖದಲ್ಲಿ ಹಾಗೂ ಜಗದ್ಗುರುಗಳ ನೇತೃತ್ವದಲ್ಲಿ ಒಮ್ಮೆ ಪೀಠಾಧಿಕಾರದ ಸಂಸ್ಕಾರದ ನಂತರ ಯಾವುದೇ ಅಡಿಯಲ್ಲಿ ಪೀಠದ ಸ್ಥಾನದಿಂದ ತೆಗೆದು ಹಾಕುವುದಾಗಲಿ ಪುನಃ ಮತ್ತೊಬ್ಬರನ್ನು ನೇಮಕ ಮಾಡಿಕೊಳ್ಳುವುದಾಗಲಿ ಯಾರಿಗೂ ಸಾಧ್ಯವಿಲ್ಲ. ಅಲ್ಲದೆ ಸಮಾನ ಪೀಠಗಳ ಮಹಾಚಾರ್ಯರು ಜೊತೆಗೆ ನಾಡಿನಾದ್ಯಂತ ಕಾರ್ಯಕ್ರಮಗಳಲ್ಲಿ ಪ್ರಸ್ತುತ ಮರೂಳಸಿದ್ಧ ರಾಜ ದೇಶಿಕೇಂದ್ರ ಶಿವಾಚಾರ್ಯರು ಪಾಲ್ಗೊಂಡು ಪೀಠದ ಅಭಿವೃದ್ಧಿಗಾಗಿ ನಿರಂತರ ಶ್ರಮಿಸುತ್ತಿರುವ ಇವರನ್ನು, ಇಡೀ ಕನ್ನಡ ನಾಡಿನ ಸಮಸ್ತ ಜನತೆ ಒಪ್ಪಿರುವಾಗ ಇವರ ಬಗ್ಗೆ ಮೇಲಿಂದ ಮೇಲೆ ಇಲ್ಲಸಲ್ಲದ ಹೇಳಿಕೆ ಕೊಟ್ಟು ಭಕ್ತ ಸಂಕುಲವನ್ನು ಗಲಿಬಿಲಿಗೊಳಿಸುತ್ತಿರುವದು ಸರಿಯಲ್ಲ ಎಂದು ಹೇಳಿದರು.

ಉಜ್ಜಯನಿ ಸರ್ವಧರ್ಮ ಪೀಠದ ಸಮಾನ ಪೀಠಾಧೀಶ್ವರರು ಇಂಥ ಹೇಳಿಕೆಗಳನ್ನು ನಂಬಬಾರದು. ಅವರಾಗಲಿ, ಅಥವಾ ಅವರ ಹಿಂಬಾಲಕರಾಗಲಿ ಭಕ್ತ ಸಂಕುಲಕ್ಕೆ ತಪ್ಪು ಹೇಳಿಕೆ ಕೊಟ್ಟಲ್ಲಿ ಅವುಗಳನ್ನು ಭಕ್ತಾದಿಗಳು ಗಂಭೀರವಾಗಿ ಪರಿಗಣಿಬಾರದೆಂದು ಮತ್ತು ಮೋಸ ಹೋಗಬಾರದೆಂದು ಹೇಳಿ ಶ್ರೀ ಪೀಠದ ಜ್ಞಾನ ಗುರು ವಿದ್ಯಾಪೀಠದ ಅಧ್ಯಕ್ಷರಾಗಿ ಪ್ರಸ್ತುತ ಶ್ರೀ ಮರೂಳಸಿದ್ಧ ಜಗದ್ಗುರುಗಳು ಅಧಿಕಾರ ಹೊಂದಿರುವರೆಂದು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಸ್ಪಷ್ಟಪಡಿಸಿದರು.

ಮುಂಬಯಿ ನಗರದಲ್ಲಿ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಧರ್ಮ ಪ್ರಚಾರಾಂದೋಲನ

7-2-1999 : ಮಹಾರಾಷ್ಟ್ರದ ಮುಂಬಯಿ ನಗರದಲ್ಲಿ ಮೊಟ್ಟ ಮೊದಲ ಬಾರಿಗೆ ಜಗದ್ಗುರುಗಳೈವರು ನಗರಕ್ಕೆ ಆಗಮಿಸಿದ್ದು ಮುಂಬಯಿ ನಗರದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಪ್ರಸಂಗ ಎಂದು ಅಂದಿನ ಪತ್ರಿಕೆಗಳಲ್ಲಿ ಹೇಳಲಾಗಿದೆ.

ಉಲ್ಲಾಸನಗರದಲ್ಲಿ ಪಂಚಪೀಠಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವದ ಮೂಲಕ ಅವರನ್ನು ಸ್ವಾಗತಿಸಲಾಯಿತು. ಪಂಚಾಚಾರ್ಯರ ಸಾನಿಧ್ಯದಲ್ಲಿ 500 ಜನ ದೀಕ್ಷೆ ಪಡೆದಿರು.

ಮುಂಬಯಿ ನಗರದ ಕುರ್ಲಾದಲ್ಲಿ ದಿ. 8-2-1999ರಂದು ಬೆಳಗ್ಗೆ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರು ದಯಮಾಡಿಸಿ 'ಶಿವಾಜಿ ಮಹಾವಿದ್ಯಾಲಯದವರು' 50 ಲಕ್ಷ ರೂ. ವೆಚ್ಚದಲ್ಲಿ ಕಟ್ಟಿಸಿದ ಶೈಕ್ಷಣಿಕ ಕಟ್ಟಡವನ್ನು ಉದ್ಘಾಟಿಸಿ, ಶಿಕ್ಷಣದ ಮಹತ್ವದ ಬಗೆಗೆ ತಿಳಿಸಿ, ಸಂಘಟಕರಿಗೆ ಶಾಲು ಹೊದಿಸಿ ಆಶೀರ್ವದಿಸಿದರು.


ಮುಂಬಯಿ ನಗರದ ಮಧ್ಯವರ್ತಿ ಸ್ಥಳಗಳಾದ ಪರೇಳದಲ್ಲಿ ನಡೆದ ಅತ್ಯಂತ ಪ್ರಮುಖ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಜಗದ್ಗುರು ಪಂಚಪೀಠಾಚಾರ್ಯರು 'ರಾಷ್ಟ್ರೀಯ ವೀರಶೈವ ಭಾವೈಕ್ಯ ಧರ್ಮ ಸಮ್ಮೇಳನ' ಉದ್ಘಾಟಿಸಿ ಆಶೀರ್ವಚನ ನೀಡಿ ಪೂಜ್ಯರು ಸಂಯುಕ್ತವಾಗಿ ಹೇಳಿಕೆಯೊಂದನ್ನು ಪ್ರಕಟಿಸಿದರು. 'ಅಂಗದ ಮೇಲೆ ಲಿಂಗ ಧರಿಸಿದವರೆಲ್ಲರೂ ವೀರಶೈವರು. ಗಂಡು ಹೆಣ್ಣೆಂಬ ಭಾವನೆ ಹೊಂದದೇ ಧಾರ್ಮಿಕ ಸಂಸ್ಕಾರ ನೀಡಿದ ವಿಶಿಷ್ಟ ಧರ್ಮ ವೀರಶೈವ.' ಧರ್ಮ ಸಂವಿಧಾನ ಶಾಸನ ರಚಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರು ಇಡೀ ಮನುಕುಲದ ಹಿತವನ್ನು ಬಯಸಿದ್ದು ಮರೆಯಲಾಗದು. ವೀರಶೈವ ಧರ್ಮದಲ್ಲಿ ಬೆಳೆದು ಬಂದಿರುವ ಒಳಪಂಗಡಗಳನ್ನು ನಿರ್ನಾಮಮಾಡಿ ವೀರಶೈವ ಧರ್ಮದ ಧ್ವಜದಡಿಯಲ್ಲಿ ಎಲ್ಲರೂ ಒಂದಾಗಿ ಬಾಳಬೇಕೆಂದು ಕರೆಕೊಟ್ಟ ಜಗದ್ಗುರುಗಳು ಮುಂಬಯಿ ನಗರದಲ್ಲಿ 'ವೀರಶೈವ ಪಂಚಾಚಾರ್ಯ ಭವನ'ವೊಂದನ್ನು ನಿರ್ಮಿಸಲು ಜನತೆಗೆ ಮುಂದಾಗಬೇಕೆಂದು ಅದಕ್ಕೆ ಎಲ್ಲ ಪಂಚಪೀಠಾಚಾರ್ಯರ ಆಶೀರ್ವಾದ ಇದೆಯೆಂದು, ಇದಕ್ಕಾಗಿ ಎಲ್ಲರೂ ಸ್ವಾಭಿಮಾನದಿಂದ ಕಾರ್ಯ ನಿರ್ವಹಿಸಲು ಕಿವಿಮಾತು ಹೇಳಿದರು.

ಈ ಸಮಾರಂಭ'ದಲ್ಲಿ ಪಾಲ್ಗೊಂಡ ಮಹಾರಾಷ್ಟ್ರ ರಾಜ್ಯದ ವನವಿಹಾರ ಸಚಿವ ಚಂದ್ರಕಾಂತ ಠೇರೆ ಹಾಗೂ ನ್ಯಾಯವಿಧಿ-ಮದ್ಯಪಾನ ನಿಷೇಧ ಖಾತೆ ಸಚಿವ ದೀಲಿಪ್ ಸೋಪಲ್ ಇವರು ಜಗದ್ಗುರುಗಳ ಈ ಕರೆಗೆ ಓಗೊಟ್ಟು ತಾವೂ ಕೂಡ ಈ ಕಾರ್ಯಕ್ಕೆ ಸಂಪೂರ್ಣ ನೆರವು ದೊರಕಿಸಿಕೊಡುವುದಾಗಿ ವಚನವಿತ್ತರು. ಇಲ್ಲಿ ಬೆಳಿಗ್ಗೆ ಸುಮಾರು ಒಂದೂವರೆ ಸಾವಿರ ಜನರು ಲಿಂಗದೀಕ್ಷೆ ಪಡೆದು ಪುನೀತರಾದರು. ಸಮಾರಂಭದಲ್ಲಿ ಐದು ಸಾವಿರ ಜನರು ಪಾಲ್ಗೊಂಡು ಜಗದ್ಗುರುಗಳೈವರ ದರ್ಶನ ಪಡೆದು, ಪುನೀತರಾದರು. ಈ ಕಾರ್ಯಕ್ರಮದ ಯಶಸ್ವಿಗಾಗಿ 21 ಸಂಘಟನೆಗಳು ಶ್ರಮಿಸಿ ಸಹಕರಿಸಿದ್ದು ಉಲ್ಲೇಖಾರ್ಹ ಮತ್ತು ಶ್ಲಾಘನೀಯ.

ಮುಂಬಯಿ ನಗರದ ಸುಪ್ರಸಿದ್ಧ ಶ್ರೀ ನಾಗೇಶ್ವರ ಮಂದಿರಕ್ಕೆ ದಿ. 9-2-1999 ರಂದು ಜಗದ್ಗುರುಗಳೈವರು ಆಗಮಿಸಿ ತಮ್ಮ ಪರುಷಹಸ್ತದಿಂದ ನೂರೈವತ್ತು ವರ್ಷ ಇತಿಹಾಸವುಳ್ಳ ನಾಗೇಶ್ವರ ಶಿವಲಿಂಗಕ್ಕೆ ಪಂಚಾಮೃತ ಅಭಿಷೇಕವನ್ನು ನೆರವೇರಿಸಿ ಧಾರ್ಮಿಕ ವಿಧಿವಿಧಾನಗಳನ್ನು ಮುಂದುವರೆಸಿಕೊಂಡು ಬರಲು ಜನತೆಗೆ ಕರೆ ಕೊಟ್ಟರು.



3–4–2001 : ಹಾನಗಲ್ಲದಲ್ಲಿ ಪ್ರಪ್ರಥಮ ಬಾರಿಗೆ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ನೆರವೇರಿತು.



3–4–2001 : ಹಾವೇರಿ ಜಿಲ್ಲೆ ಹಾನಗಲ್ಲಿನಲ್ಲಿ ಮಂಗಳವಾರದಿಂದ ಆರಂಭವಾದ ಶ್ರೀ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವ, ಭಾವೈಕ್ಯ ಧರ್ಮ ಸಮ್ಮೇಳನಕ್ಕಾಗಿ ನಿರ್ಮಿಸಲಾದ ಮಹಾಮಂಟಪದ ಮಹಾದ್ವಾರ.

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ

ಹೊಸ ದಿಗಂತ, 26–8–2001

ದಿನಾಂಕ 26, 27 ಆಗಸ್ಟ್ 2001 ಸ್ಥಳ : ಶ್ರೀ ಮರುಘರಾಜೇಂದ್ರ ಬಸ್ ನಿಲ್ದಾಣದ ಬಳಿ, ಹೊಸದುರ್ಗ

'ಜಗತ್ತನ್ನು ಸನ್ಮಾರ್ಗದತ್ತ ನಡೆಸುವುದೇ ಪಂಚಪೀಠಗಳ ಉದ್ದೇಶ'

ಜನಜಾಗೃತಿ ಭಾವೈಕ್ಯತಾ ಸಮಾವೇಶ

ವಿಜಯ ಕರ್ನಾಟಕ, 9–2–2002



ಕೊಪ್ಪಳದಲ್ಲಿ ಜರುಗಿದ ಜನಜಾಗೃತಿ ಭಾವೈಕ್ಯತಾ ಸಮಾವೇಶದಲ್ಲಿ ಪಂಚಪೀಠಾಧೀಶ್ವರರು, ಸಂಸದ ಹೆಚ್.ಜಿ. ರಾಮುಲು, ಪೌರಾಡಳಿತ ಸಚಿವ ಎಂ.ಮಲ್ಲಿಕಾರ್ಜುನ ನಾಗಪ್ಪ, ಶಾಸಕ ಸಂಗಣ್ಣ ಕರಡಿ ಉಪಸ್ಥಿತರಿದ್ದರು.

ಶ್ರೀ ಶ್ರೀ ಶ್ರೀ 1008 ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಮತ್ತು ಜನಜಾಗೃತಿ ಭಾವೈಕ್ಯ ಧರ್ಮ ಸಮ್ಮೇಳನ

ದಿನಾಂಕ : 18, 19 ಹಾಗೂ 20 ಏಪ್ರಿಲ್ 2002

ಸ್ಥಳ : ಶ್ರೀ ವೀರಶೈವ ಕಲ್ಯಾಣ ಮಂಟಪ,
ಸಾರ್ವಜನಿಕ ಉದ್ಯಾನವನ, ಕಲಬುರ್ಗಿ



ಶ್ರೀ ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಗುರುವಾರ ಗುಲ್ಬರ್ಗಾದಲ್ಲಿ ವಿಜೃಂಭಣೆಯಿಂದ ಜರುಗಿತು.

18–4–2002

ಭಕ್ತಸಾಗರದ ಮಧ್ಯೆ ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಮೆರವಣಿಗೆ

23–4–2002

ಕಪಲಾಪುರದಲ್ಲಿ ಪಂಚಾಚಾರ್ಯರ ಐತಿಹಾಸಿಕ ಅಡ್ಡಪಲ್ಲಕ್ಕಿ ಉತ್ಸವ

25-4-2002, ಜನದನಿ
ಡೋಣಗಾಪೂರ ಗ್ರಾಮದಲ್ಲಿ ಪಂಚಪೀಠಾಧೀಶ್ವರರ ಭವ್ಯ ಮೆರವಣಿಗೆ

21-5-2002 : ಆಳಂದ, ಮೇ 19-ತಾಲೂಕಿನ ನಿರಗುಡಿ ಗ್ರಾಮದ ಶ್ರೀ ಬೊಮ್ಮಲಿಂಗೇಶ್ವರ ಹಿರೇಮಠದಲ್ಲಿ ಮೇ 21 ಮತ್ತು 22ರಂದು ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ, ನೂತನ ಶ್ರೀಗಳಾದ ಗುರುಲಿಂಗ ದೇವರ ಪಟ್ಟಾಧಿಕಾರ ಹಾಗೂ ಉಚಿತ ಸಾಮೂಹಿಕ ವಿವಾಹ, ಧಾರ್ಮಿಕ ಸಭೆ ಕಾರ್ಯಕ್ರಮಗಳು ನಡೆದುವು.

ಅಡ್ಡ ಪಲ್ಲಕ್ಕಿ ಮಹೋತ್ಸವ : 'ನ ಭೂತೋ ನ ಭವಿಷ್ಯತಿ'



ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವದ ಮೆರವಣಿಗೆ ಭಾನುವಾರ ಬಳ್ಳಾರಿ ನಗರದ ಪ್ರಮುಖ ಬೀದಿಗಳ ಮೂಲಕ ಪಾರ್ವತಿನಗರದ ಬಸವ ಭವನಕ್ಕೆ ತೆರಳಿತು.

16-6-2002 : ಈ ಭವ್ಯ ಮೆರವಣಿಗೆಯಲ್ಲಿ ಪಂಚ ಪೀಠಾಧೀಶ್ವರರಾದ ಬಾಳೆಹೊನ್ನೂರಿನ ರಂಭಾಪುರಿ ಶ್ರೀ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಸ್ವಾಮೀಜಿ, ಉಜ್ಜಯನಿಯ ಮರುಳಸಿದ್ಧ ಶ್ರೀ ರಾಜದೇಶಿಕೇಂದ್ರ ಸ್ವಾಮೀಜಿ, ಕೇದಾರದ ಶ್ರೀ ಭೀಮಾಶಂಕರಲಿಂಗ ಸ್ವಾಮೀಜಿ, ಶ್ರೀಶೈಲದ ಶ್ರೀ ಉಮಾಪತಿ ಪಂಡಿತಾರಾಧ್ಯ ಸ್ವಾಮೀಜಿ ಮತ್ತು ಕಾಶಿಯ ಡಾ. ಚಂದ್ರಶೇಖರ ಸ್ವಾಮೀಜಿ ಅವರನ್ನು ಅಲಂಕೃತ ಅಡ್ಡಪಲ್ಲಕ್ಕಿಗಳಲ್ಲಿ ಕೊಂಡೊಯ್ಯಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಶರತ್‌ಚಂದ್ರ, ಹೆಚ್ಚುವರಿ ಎಸ್ಪಿ ತಾವರಗಿ ಮತ್ತು ಅವರ ಸಿಬ್ಬಂದಿ ವರ್ಗ ಬಿಗಿಯಾದ ಬಂದೋಬಸ್ತು ಮಾಡಿತ್ತು. ದಾರಿಯುದ್ದಕ್ಕೂ ಅಲ್ಲಲ್ಲಿ ನಗರಸಭೆಯ ವತಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. 1978ರ ನಂತರ ಇಂತಹ ಬೃಹತ್ ಮಹೋತ್ಸವ ಇದೇ ಮೊದಲು ಎಂದು ಹೇಳಲಾಗುತ್ತಿದೆ.

6-2-2003 : ವಿಮಲಖೇಡ (ಹುಮನಾಬಾದ್ ತಾ, ಬೀದರ್ ಜಿ)



ದಿನಾಂಕ : 6,7 ಫೆಬ್ರುವರಿ 2003 ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಸಾನ್ನಿಧ್ಯದಲ್ಲಿ ವಿಮಲಖೇಡ ಹಿರೇಮಠದ ತಪೋರತ್ನ ಷ.ಬ್ರ. ಶ್ರೀ ಗುರುಪಾದ ಶಿವಾಚಾರ್ಯರ ಸದಿಚ್ಛೆಯಂತೆ ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಅದ್ದೂರಿಯಿಂದ ನೆರವೇರಿತು



ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವ

16-2-2003 : ವಿಜಾಪುರದಲ್ಲಿ ಶನಿವಾರ ಶ್ರೀ ಸಿದ್ಧೇಶ್ವರ ದೇವಸ್ಥಾನದಿಂದ ಉಕ್ಕಲಿ ರಸ್ತೆಯಲ್ಲಿನ ವಿಶ್ವಶಾಂತಿ ಪೀಠ ಪುಣ್ಯಧಾಮದವರೆಗೆ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿತು.

22–4–2003 : ಪಡಸಾವಳಿ (ಆಳಂದ ತಾ, ಕಲಬುರ್ಗಿ ಜಿ)

॥ಶ್ರೀಮದ್ ಜಗದ್ಗುರು ಪಂಚಾಚಾರ್ಯ ಪ್ರಸೀದಂತು॥

ಕಲಬುರ್ಗಿ ಜಿಲ್ಲೆಯ ಆಳಂದ್ ತಾಲ್ಲೂಕಿನ ಪಡಸಾವಳಿಯ ಶ್ರೀ ಷ.ಬ್ರ. ಶಂಭುಲಿಂಗ ಶಿವಾಚಾರ್ಯರರ ದ್ವಾದಶ ಪಟ್ಟಾಧಿಕಾರ ಮಹೋತ್ಸವದ ಆಮಂತ್ರಣ ಪತ್ರಿಕೆ ವಿಶೇಷ ಕಾರ್ಯಕ್ರಮಗಳು

ದಿನಾಂಕ 21–4–2003ರಂದು ತಾಲ್ಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಪುರಾಣ ಮಂಗಲ,
ದಿನಾಂಕ 22–4–2003ರಂದು ಲಿಂಗದೀಕ್ಷೆ, ಅಯ್ಯಾಚಾರ, ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ರಥೋತ್ಸವ ಧರ್ಮಸಭೆ.

23–4–2003 : ನಾಗಣಸೂರ ಗ್ರಾಮ (ಅಕ್ಕಲಕೋಟೆ ತಾ॥ ಸೊಲ್ಲಾಪುರ ಜಿ)

॥ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸಿದಂತು॥

ಸೋಲಾಪೂರ ಜಿಲ್ಲೆ, ಅಕ್ಕಲಕೋಟೆ ತಾಲ್ಲೂಕಿನ ನಾಗಣಸೂರ ಗ್ರಾಮದಲ್ಲಿ ದಿನಾಂಕ 22, 23, 24ರ ಏಪ್ರಿಲ್ 2003ರಂದು ಜರುಗಲಿರುವ ಶ್ರೀ ಜಗದ್ಗುರು ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಶ್ರೀ ಷ.ಬ್ರ. ಶ್ರೀಕಂಠ ಶಿವಾಚಾರ್ಯ ಸ್ವಾಮೀಜಿಯವರ ದ್ವಾದಶ ಪಟ್ಟಾಧಿಕಾರ ಮಹೋತ್ಸವ ಅಯ್ಯಾಚಾರ ಲಿಂಗದೀಕ್ಷೆ ಸಾಮೂಹಿಕ ವಿವಾಹ ಭಾವೈಕ್ಯ ಸಮ್ಮೇಳನ.

ಶಿವಾಲಯ ವಾರ್ಷಿಕೋತ್ಸವ, ಜಗದ್ಗುರು ಪಂಚಾಚಾರ್ಯ ಮಹೋತ್ಸವ

ಉದಯ ವಾಣಿ, 15–12–2003





ರಾಮೂಶೆಟ್ಟಿ ಹೆಬ್ಬಳ್ಳಿ ದಂಪತಿಯನ್ನು ಪಂಚಾಚಾರ್ಯರು ಆಶೀರ್ವದಿಸಿದರು. ಶೋಭಾಯಾತ್ರೆಯ ಒಂದು ದೃಶ್ಯ

ಅಂಬರನಾಥದ ಬಸವಕಲ್ಯಾಣ ನಗರದ ಮಂಜುನಾಥ ಶಿವಾಲಯದ 11ನೇ ವಾರ್ಷಿಕೋತ್ಸವ ಅಂಗವಾಗಿ ಪಂಚಪೀಠಾಧೀಶ್ವರರನ್ನು ಅಲಂಕರಿಸಿದ ರಥಗಳಲ್ಲಿ ಶೋಭಾಯಾತ್ರೆಯಲ್ಲಿ ಶಿವಮಂದಿರಕ್ಕೆ ಕರೆತರಲಾಯಿತು.

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಭವ್ಯ ಮೆರವಣಿಗೆ

ಶ್ರೀಮತಿ ವಿಶಾಲಾಕ್ಷಮ್ಮ ಶ್ರೀ ಸಿದ್ಧಬಸಪ್ಪಶೆಟ್ಟರ ಸಭಾಭವನದ ಉದ್ಘಾಟನೆ ಹಾಗೂ ಭಾವೈಕ್ಯ ಧರ್ಮಜಾಗೃತಿ ಸಮ್ಮೇಳನ

ದಿನಾಂಕ 1–2–2004 ರಿಂದ 2–2–2004

ಸ್ಥಳ :
ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾಪೀಠದ ಆವರಣ ಶ್ರೀ ಜಂಗಮಮಠ,
ಕರ್ಪೂರವಳ್ಳಿ, ಕೆ.ಆರ.ನಗರ ತಾಲ್ಲೂಕು, ಮೈಸೂರು ಜಿಲ್ಲೆ



12–3–2004 : ಚಿಂಚೋಳಿ ತಾಲ್ಲೂಕಿನ ಚಿಮ್ಮಾ ಇದಲಾಯಿ ಗ್ರಾಮದ ಕುಮಾರೇಶ್ವರ ಆಶ್ರಮದಲ್ಲಿ ವೀರಶೈವ ಧರ್ಮದ ಪಂಚಪೀಠದ ಜಗದ್ಗುರುಗಳಿಂದ ಆಶೀರ್ವಚನ ನೀಡಲಾಯಿತು. ಚಿತ್ರದಲ್ಲಿ ಕಾಶಿ, ಉಜ್ಜಯಿನಿ, ಶ್ರೀಶೈಲ ಮತ್ತು ಕೇದಾರ ಪೀಠಗಳ ಜಗದ್ಗುರುಗಳನ್ನು ಕಾಣಬಹುದಾಗಿದೆ.



20–4–2005 : ಶಿವಮೊಗ್ಗ ತಾಲೂಕು ಹಾರನಹಳ್ಳಿಯಲ್ಲಿ ಬುಧವಾರ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿತು.



21–4–2005 : ಚನ್ನಗಿರಿಯಲ್ಲಿ ಗುರುವಾರ ಅಪಾರ ಭಕ್ತ ಸಮೂಹದ ನಡುವೆ ಪಂಚಪೀಠಾಧೀಶ್ವರ ಅಡ್ಡಪಲ್ಲಕ್ಕಿ ಉತ್ಸವ ಭಾರಿ ವಿಜೃಂಭಣೆಯಿಂದ ನಡೆಯಿತು.



ನಮಗೆ ಆಶೀರ್ವಾದ ಮಾಡಿ ಗುರುಗಳೇ ಎಂದು...... ಚನ್ನಗಿರಿಯಲ್ಲಿ ಗುರವಾರ ಜನಜಾಗೃತಿ ಭಾವೈಕ್ಯ ಧರ್ಮ ಸಮಾರಂಭದಲ್ಲಿ ಮಾಜಿ ಪ್ರಧಾನಿ ಶ್ರೀ ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಕಾಶೀ ಜಗದ್ಗುರುಗಳಿಗೆ ನಮಸ್ಕರಿಸು ತ್ತಿರುವುದು.



ಅಣ್ಣಿಗೇರಿಯಲ್ಲಿ ಅಡ್ಡಪಲ್ಲಕ್ಕಿ ಮಹೋತ್ಸವ

1–6–2005 : ಅಣ್ಣಿಗೇರಿಯಲ್ಲಿ ಬುಧವಾರ ಪಂಚಪೀಠಾಧೀಶ್ವರ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿತು. ರಂಭಾಪುರಿ ಮಠದ ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ಸ್ವಾಮೀಜಿ, ಉಜ್ಜಯಿನಿಯ ಮರುಳಸಿದ್ಧ ಸ್ವಾಮೀಜಿ ಹಾಗೂ ಶ್ರೀಶೈಲದ ಉಮಾಪತಿ ಪಂಡಿತಾರಾಧ್ಯ ಸ್ವಾಮೀಜಿ ಚಿತ್ರದಲ್ಲಿದ್ದಾರೆ.



3–12–2005 : ತುಮಕೂರು ಜಿಲ್ಲಾ ಶಿರಾ ಪಟ್ಟಣದಲ್ಲಿ ಪಂಚಪೀಠಾಧೀಶರ ಅಡ್ಡಪಲ್ಲಕ್ಕಿ ಮಹೋತ್ಸವ ಶನಿವಾರ ಅತ್ಯಂತ ಸಡಗರ ಸಂಭ್ರಮಗಳಿಂದ ನಡೆಯಿತು.




20–1–2006 : ಬಳ್ಳಾರಿ ಜಿಲ್ಲೆಯ ಕಂಪ್ಲಿ ಪಟ್ಟಣದಲ್ಲಿ ಶುಕ್ರವಾರ ಶ್ರೀಮದ್ವೀರಶೈವ ಧರ್ಮ ಸಂಸ್ಥಾಪನಾ ಚಾರ್ಯರಾದ ಜಗದ್ಗುರು ಪಂಚಪೀಠಾಧೀಶ್ವರ ಭಗವತ್ಪಾದಂಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ವೈಭವದಿಂದ ಜರುಗಿತು.

ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣುತೆಗೆ ಸ್ವಾಮೀಜಿ ಕರೆ

ಪ್ರಜಾವಾಣಿ, 23–01–2006

ಕಾಶೀ ಜ್ಞಾನಸಿಂಹಾಸನಾಧೀಶ್ವರ ಡಾ॥ ಚಂದ್ರಶೇಖರ ಶಿವಾಚಾರ್ಯರು ಶನಿವಾರ ಕಂಪ್ಲಿಯಲ್ಲಿ ಉಪನ್ಯಾಸ ನೀಡಿದರು. ಕಲ್ಮಠ ಗುರುಸಿದ್ಧ ಮಹಾಸ್ವಾಮಿಗಳು ಆ ಸಂದರ್ಭದಲ್ಲಿ ಹಾಜರಿದ್ದರು.



20–1–2006 : ಕಂಪ್ಲಿಯಲ್ಲಿಯ ಕಲ್ಮಠದಲ್ಲಿ ಕಾಶೀ ಜಗದ್ಗುರುಗಳವರ ಆಧ್ಯಾತ್ಮ ಪ್ರವಚನದಲ್ಲಿ ವೀರಶೈವ ಧರ್ಮ ಗ್ರಂಥಗಳಾದ ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ಶೂನ್ಯಸಂಪಾದನೆ ಕುರಿತು ಉಪನ್ಯಾಸ ನೀಡುವ ಸಮನ್ವಯ ಆಶೀರ್ವಚನ ವೇದಿಕೆಯನ್ನು ಕಲ್ಮಠದ ಹಿರಿಯ ಸ್ವಾಮೀಜಿಗಳಾದ ಪ್ರಭುಸ್ವಾಮಿಗಳು ಏರ್ಪಡಿಸಿದ್ದರು. 81 ವರ್ಷಗಳಾಗಿದ್ದ ಪ್ರಭು ಸ್ವಾಮಿಜಿಗಳು ಅನಾರೋಗ್ಯದಿಂದ್ದರೂ ಪಂಚಪೀಠಾಧೀಶ್ವರರನ್ನು ಕಂಪ್ಲಿಗೆ ಬರಮಾಡಿಕೊಂಡು ಅದ್ಧೂರಿಯಿಂದ ಅಡ್ಡಪಲ್ಲಕ್ಕಿ ಉತ್ಸವ ನಡೆಸಿದ್ದರು. ಕಿರಿಯ ಸ್ವಾಮಿಗಳಾದ ಗುರುಸಿದ್ಧ ಸ್ವಾಮಿಗಳೂ ಉತ್ಸಾಹದಿಂದ ಈ ಸಮಾರಂಭದ ಏರ್ಪಾಡಿನಲ್ಲಿ ಭಾಗಿಯಾಗಿ ಹಿರಿಯ ಸ್ವಾಮಿಗಳಂತೆಯೇ ಸಮನ್ವಯದ ಹಾದಿಯಲ್ಲಿ ನಡೆಯುತ್ತಿದ್ದಾರೆ. ಕಾಶೀ ಜಗದ್ಗುರುಗಳವರ 10 ದಿನಗಳ ಕಾಲ ನಡೆಯುತ್ತಿದ್ದ ಆಶೀರ್ವಚನ ಸಂದರ್ಭದಲ್ಲಿ 26–1–2006 ರಂದು ಹಿರಿಯ ಸ್ವಾಮಿಗಳು ಲಿಂಗೈಕ್ಯರಾಗಿಬಿಟ್ಟರು. ಕಾಶೀ ಜಗದ್ಗುರುಗಳವರು ಕಲ್ಮಠದ ಶ್ರೀಗಳ ಲಿಂಗೈಕ್ಯಕ್ಕಾಗಿ ತೀವ್ರ ಸಂತಾಪ ವ್ಯಕ್ತಪಡಿಸುತ್ತ ಪ್ರಭುಸ್ವಾಮಿಗಳು ಸಮನ್ವಯ ದೃಷ್ಟಿಕೋನದ ಅಪರೂಪದ ವ್ಯಕ್ತಿಯಾಗಿದ್ದರು ಎಂದರು. ಉಜ್ಜಯಿನಿ ಜಗದ್ಗುರುಗಳು, ಕಾಶೀ ಜಗದ್ಗುರುಗಳು ಪ್ರಭುಸ್ವಾಮಿಗಳ ಪಾರ್ಥಿವ ಶರೀರಕ್ಕೆ ಅಂತಿಮ ಗೌರವ ಸಲ್ಲಿಸಿದರು.




21–4–2006 ಸಂಡೂರು : ಪಟ್ಟಣದಲ್ಲಿ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಶುಕ್ರವಾರ ವಿಜೃಂಭಣೆಯಿಂದ ನೆರವೇರಿತು. ಮಲ್ಲಿಗೆ, ಸೇವಂತಿ ಹೂಗಳಿಂದ ಅಲಂಕೃತಗೊಂಡ ಅಡ್ಡಪಲ್ಲಕ್ಕಿಗಳಲ್ಲಿ ರಂಭಾಪುರಿ ಪೀಠದ ಶ್ರೀ ವೀರಸೋಮೇಶ್ವರ ಶಿವಾಚಾರ್ಯರು, ಉಜ್ಜಯಿನಿ ಪೀಠದ ಶ್ರೀ ಮರುಳಸಿದ್ಧ ಶಿವಾಚಾರ್ಯರು, ಶ್ರೀಶೈಲ ಪೀಠದ ಉಮಾಪತಿ ಶಿವಾಚಾರ್ಯರು ಹಾಗೂ ಕಾಶೀ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯರು ವಿರಾಜಮಾನರಾಗಿದ್ದರು. ಇಲ್ಲಿನ ಎಪಿಎಂಸಿಯಿಂದ ಆರಂಭಗೊಂಡ ಅಡ್ಡಪಲ್ಲಕ್ಕಿ ಮಹೋತ್ಸವ ಪ್ರಮುಖ ಬೀದಿಗಳಲ್ಲಿ ಸಾಗಿ ವೀರಶೈವ ಕಲ್ಯಾಣ ಮಂಟಪ ತಲುಪಿತು. 99 ವರ್ಷಗಳ ನಂತರ ಇಲ್ಲಿ ನಡೆಯುತ್ತಿದೆ ಎನ್ನಲಾದ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಇಡೀ ನಗರದಲ್ಲಿ ಹಬ್ಬದ ವಾತಾವರಣವನ್ನುಂಟು ಮಾಡಿತ್ತು. ವೀರಶೈವ ನೂತನ ಕಲ್ಯಾಣ ಮಂಟಪವನ್ನು ಯಲಬುರ್ಗಾ ಸಿದ್ಧರಾಮೇಶ್ವರ ಶಿವಾಚಾರ್ಯರು ಹಾಗೂ ಎಮ್ಮಿಗನೂರು ವಾಮದೇವ ಮಹಾಂತ ಶಿವಾಚಾರ್ಯರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ 22 ಜೋಡಿ ಸಾಮೂಹಿಕ ವಿವಾಹ ಹಾಗೂ 51 ವಟುಗಳ ಅಯ್ಯಾಚಾರ ಕಾರ್ಯಕ್ರಮ ಜರುಗಿತು.

ಎಲ್ಲಾ ಊರುಗಳಲ್ಲಿ ನಡೆವಂತೆ ಸಂಡೂರಿನಲ್ಲೂ ಬಹು ವಿಜೃಂಭಣೆಯಿಂದ ಅಡ್ಡಪಲ್ಲಕ್ಕಿ ಉತ್ಸವ ಜರುಗಿತು. ಆದರೆ ಈ ಊರಿನ ವಿಶೇಷವೆಂದರೆ ಮೆರವಣಿಗೆಯ ಸಂದರ್ಭದಲ್ಲಿ ವೇಸ್ಕೋ ಕಂಪನಿಯವರು ತಣ್ಣೀರು, ವಿಶ್ವಕರ್ಮ ಸಮಾಜದವರಿಂದ ಸಕ್ಕರೆ ಹಾಗೂ ನೀರಿನ ಅರವಟ್ಟಿಗೆ, ವೀರಶೈವ ತರುಣ ಸಂಘದಿಂದ ಮಜ್ಜಿಗೆಯನ್ನು ಸಹಸ್ರಾರು ಭಕ್ತಾದಿಗಳಿಗೆ ವಿತರಿಸಿದರು.



ಬಳ್ಳಾರಿ ಜಿಲ್ಲೆಯ ಸಂಡೂರು ಪಟ್ಟಣದಲ್ಲಿ ಶುಕ್ರವಾರ ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು.



24–4–2006 : ಗಿರಿಸಾಗರದಲ್ಲಿ ಶ್ರೀಜಗದ್ಗುರು ಪಂಚಪೀಠಾಧೀಶ್ವರ ಅಡ್ಡಪಲ್ಲಕ್ಕಿ ಮಹೋತ್ಸವ ಅತ್ಯಂತ ವೈಭವಪೂರಿತವಾಗಿ ನಡೆಯಿತು.


1–12–2006

ರಾಂಪುರ ಹಾಗೂ ಕೆ.ಕೆ. ಪುರದಲ್ಲಿ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಜನ ಜಾಗೃತಿ ಭಾವೈಕ್ಯ ಧರ್ಮ ಸಮ್ಮೇಳನ



14–11–2006 : ರಾಮದುರ್ಗ ತಾಲೂಕಿನ ಎಂ. ಚಂದರಗಿಯ ಗಡದೇಶ್ವರ ಮಠದ ವೀರಭದ್ರ ಶಿವಾಚಾರ್ಯರು ನಡೆಸಿದ 21ನೆಯ 108 ದಿನಗಳ ಮೌನಾನುಷ್ಠಾನದ ಪ್ರಯುಕ್ತ ನಡೆದ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವ ಸೋಮವಾರ ವೈಭವಪೂರ್ಣವಾಗಿ ಜರುಗಿತು.





14–12–2006 : ಸಿಂದಗಿ ತಾಲ್ಲೂಕಿನ ಆಲಮೇಲ ಹಿರೇಮಠದ ಗುರು ಪಟ್ಟಾಧಿಕಾರ ಮಹೋತ್ಸವದ ನಿಮಿತ್ತ ಗುರುವಾರ ಜರುಗಿದ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಸೇರಿದ ಅಪಾರ ಜನಸಾಗರ (ಎಡಚಿತ್ರ). ಬಲಚಿತ್ರದಲ್ಲಿ ಕುಂಭೋತ್ಸವದಲ್ಲಿ ಪಾಲ್ಗೊಳ್ಳಲು ಐದು ವರ್ಣಗಳ ಸೀರೆಯನ್ನುಟ್ಟುಕೊಂಡಿರುವ 540 ಸುಮಂಗಲೆಯರ ಆಕರ್ಷಣೀಯ ದೃಶ್ಯ.

ವಿಜೃಂಭಣೆಯಿಂದ ಜರುಗಿದ ಅಡ್ಡಪಲ್ಲಕ್ಕಿ ಉತ್ಸವ 4–2–2007, ಪ್ರಜಾವಾಣಿ



ಕೊಟ್ಟೂರು ಸಮೀಪದ ಉಜ್ಜಯಿನಿಯಲ್ಲಿ ಶ್ರೀಮದ್ ಉಜ್ಜಯಿನಿ ಜಗದ್ಗುರುಗಳ ಪೀಠಾರೋಹಣ ದ್ವಾದಶ ವರ್ಧಂತಿ ಅಂಗವಾಗಿ ನಡೆದ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ

ಪಂಚಾಪೀಠಾಧೀಶರ ಪಲ್ಲಕ್ಕಿ ಮಹೋತ್ಸವ





23–3–2007 : ಇಳಕಲ್‌ನಲ್ಲಿ ಶುಕ್ರವಾರ ಪಂಚಪೀಠಾಧೀಶರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಸಿದ್ಧಾಂತ ಶಿಖಾಮಣಿ ಧರ್ಮಗ್ರಂಥೋತ್ಸವ ವಿಜೃಂಭಣೆಯಿಂದ ನಡೆಯಿತು (ಎಡಚಿತ್ರ) ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಪಾಲ್ಗೊಂಡ ಕುಂಭ ಹೊತ್ತ ಮಹಿಳೆಯರು

10–4–2007

ರಾಣಿಬೆನ್ನೂರು ತಾಲೂಕಿನ ದಕ್ಷಿಣಕಾಶಿ
ಸುಕ್ಷೇತ್ರ ಚೌಡಯ್ಯದಾನಪುರದಲ್ಲಿ
ದಿನಾಂಕ 10–4–2007ನೇ ಮಂಗಳವಾರ

ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ
ಹಾಗೂ
ಒಡೆಯರ ಸಂಸ್ಥಾನಮಠದ ನೂತನ ಕಟ್ಟಡದ ಉದ್ಘಾಟನೆ, ಜನಜಾಗೃತಿ ಧರ್ಮ ಸಮಾವೇಶ,
ಸಾಮಾಜಿಕ ವಿವಾಹ ಕಾರ್ಯಕ್ರಮ



22–6–2007 : ಹಿರಿಯೂರಿನಲ್ಲಿ ಶುಕ್ರವಾರ ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವ ಅತ್ಯಂತ ವೈಭವದಿಂದ ಜರುಗಿತು.





ಹಿರಿಯೂರಿನಲ್ಲಿ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಜಂಗಮ ವಟುಗಳ ಶಿವದೀಕ್ಷಾ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಎಡೆಯೂರು ರಂಭಾಪುರಿ ಶಾಖಾ ಮಠದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ನೂರಕ್ಕೂ ಹೆಚ್ಚು ಜಂಗಮ ವಟುಗಳಿಗೆ ಅಯ್ಯಾಚಾರ, ಶಿವದೀಕ್ಷೆ ಲಿಂಗಧಾರಣೆ ಮಾಡಲಾಯಿತು.



23–6–2007 : ಹಿರಿಯೂರು ವಾಣಿವಿಲಾಸ ಸಾಗರ ಜಲಾಶಯಕ್ಕೆ ಪಂಚ ಪೀಠಾಧೀಶ್ವರರಿಂದ ಶನಿವಾರ ಗಂಗಾಪೂಜೆ ಸಮರ್ಪಣೆ ಸಂದರ್ಭದಲ್ಲಿ ರಂಭಾಪುರಿಶ್ರೀ, ಉಜ್ಜಯಿನಿಶ್ರೀ, ಕೇದಾರಶ್ರೀ, ಶ್ರೀಶೈಲಶ್ರೀ, ಕಾಶೀಶ್ರೀಗಳು ಸಮ್ಮುಖವಹಿಸಿದ್ದರು.

ಜಗದ್ಗುರುಗಳ ಪಾದಪೂಜೆ ಸಮಾರಂಭ

16–7–2007 : ಹುನಗುಂದ, ಜು. 16–ಸಮೀಪದ ತಿಮ್ಮಾಪುರ ಗ್ರಾಮದಲ್ಲಿ ಪಂಚಪೀಠ ಜಗದ್ಗುರುಗಳ ಪಾದಪೂಜೆ ಸಮಾರಂಭ ನಡೆಯಿತು.

ತಿಮ್ಮಾಪುರ (ಹುನಗುಂದ ತಾ॥) ದಲ್ಲಿ ಉಜ್ಜಯಿನಿ ಜಗದ್ಗುರುಗಳು, ಶ್ರೀಶೈಲ ಜಗದ್ಗುರುಗಳು ಮತ್ತು ಕಾಶೀ ಜಗದ್ಗುರುಗಳವರನ್ನು ಭವ್ಯ ಮೆರವಣಿಗೆಯಲ್ಲಿ ಕರೆತರಲಾಯಿತು. ನಂತರ ಜಗದ್ಗುರುಗಳ ಪಾದಪೂಜೆ ನೆರವೇರಿತು.

ಜನಸಾಗರದಲ್ಲಿ ಪಲ್ಲಕ್ಕಿ ಪಯಣ



21–12–07 : ಹುಮನಾಬಾದಿನಲ್ಲಿ ಗುರುವಾರ ಸಂಜೆ ಪಂಚಪೀಠಾಧೀಶ್ವರರಾದ ರಂಭಾಪುರಿಶ್ರೀ, ಉಜ್ಜಯಿನಿಶ್ರೀ, ಕೇದಾರಶ್ರೀ, ಶ್ರೀಶೈಲಶ್ರೀ, ಕಾಶೀ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿತು.

ಇಂದು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ

8–4–2008 ಗಂಗಾವತಿ ಏ.8 ಕಳೆದ 35 ವರ್ಷಗಳ ನಂತರ ಪ್ರಪ್ರಥಮ ಬಾರಿಗೆ ಅದ್ದೂರಿಯಾಗಿ ನಗರದಲ್ಲಿ ಮದ್ವೀರಶೈವ ಧರ್ಮ ಸಂಸ್ಥಾಪನಾಚಾರ್ಯರಾದ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪಂಚಪೀಠಾಧೀಶ್ವರ ಅಡ್ಡಪಲ್ಲಕ್ಕಿ ಮಹೋತ್ಸವವು ಬುಧವಾರ ಮಧ್ಯಾಹ್ನ 3 ಗಂಟೆಗೆ ಜರುಗಲಿದೆ ಎಂದು ಕನಕಗಿರಿ ಮಾಜಿ ಶಾಸಕ ಹಾಗೂ ಸ್ವಾಗತ ಸಮಿತಿ ಅಧ್ಯಕ್ಷ ಜಿ. ವೀರಪ್ಪ ಹೇಳಿದರು.

ಧರ್ಮ ಜಾಗೃತಿಗೆ ಮಠಾಧೀಶರು ಶ್ರಮಿಸಲಿ

ವಿಜಯ ಕರ್ನಾಟಕ, 10–4–2008



ಶೆರೆವಾಡದಲ್ಲಿ ನಡೆದ ಪಂಚಪೀಠಾಧೀಶರ ಅಡ್ಡಪಲಕ್ಕಿ ಮಹೋತ್ಸವ ಮತ್ತು ಧರ್ಮ ಸಮ್ಮೇಳನವನ್ನು ಪಿ.ಸಿ. ಸಿದ್ದನಗೌಡ ಉದ್ಘಾಟಿಸಿದರು. ರಂಭಾಪುರಿ, ಕೇದಾರ ಹಾಗೂ ಕಾಶೀ ಜಗದ್ಗುರುಗಳು ಉಪಸ್ಥಿತರಿದ್ದರು.

ಪ್ರಜಾವಾಣಿ, 11–4–08





ವಿಜಾಪುರದಲ್ಲಿ ಶುಕ್ರವಾರ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವ ನಡೆಯಿತು (ಎಡಚಿತ್ರ).
ವಿಜಾಪುರದಲ್ಲಿ ನಡೆದ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಕುಂಭಗಳೊಂದಿಗೆ ಪಾಲ್ಗೊಂಡಿದ್ದ ಸುಮಂಗಲೆಯರು (ಬಲಚಿತ್ರ)

ರೇಕುಳಗಿಯಲ್ಲಿ ವೈಭವದ ಅಡ್ಡಪಲ್ಲಕ್ಕಿ ಉತ್ಸವ

ವಿಜಯ ಕರ್ನಾಟಕ, 14–4–2009



ಬೀದರ್ ತಾಲೂಕಿನ ರೇಕುಳಗಿಯಲ್ಲಿ ಸಂಜೆ ಶ್ರೀ ಪಂಚಪೀಠಾಧೀಶ್ವರರಾದ ರಂಭಾಪುರಿ, ಉಜ್ಜಯಿನಿ, ಕೇದಾರ, ಶ್ರೀಶೈಲ, ಕಾಶೀ ಜಗದ್ಗುರುಗಳವರ ವೈಭವದ ಅಡ್ಡಪಲ್ಲಕ್ಕಿ ಉತ್ಸವ ಜರುಗಿತು.



4–2–2010 : ಮುಧೋಳದಲ್ಲಿ ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವದ ಸಮಾರಂಭವನ್ನು ಸಚಿವ ಮುರಗೇಶ ನಿರಾಣಿ ಉದ್ಘಾಟಿಸಿದರು.

11–2–2011
ಕೂಡ್ಲಿಗೆರೆಯಲ್ಲಿ ಇಂದು–ನಾಳೆ ಶ್ರೀ ಜಗದ್ಗುರು ಪಂಚಪೀಠಾಧೀಶ್ವರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಜನಜಾಗೃತಿ ಧರ್ಮ ಸಮಾರಂಭ



3–2–2012 : ಸವದತ್ತಿಯಲ್ಲಿ ಶ್ರೀಮದ್ ಉಜ್ಜಯನಿ, ಶ್ರೀಶೈಲ, ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿತು.

ಕಮಲಾನಗರ : ಪಂಚಾಚಾರ್ಯರ ಅಡ್ಡಪಲ್ಲಕ್ಕಿ, ಲಕ್ಷದೀಪೋತ್ಸವ

10–5–2012 : ಆಳಂದ, 10–ತಾಲೂಕಿನ ಸುಕ್ಷೇತ್ರ ಕಮಲಾನಗರದಲ್ಲಿ ಗುರುವಾರ ಸಂಜೆ ಸಡಗರ–ಸಂಭ್ರಮಗಳ ಮಧ್ಯೆ ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮತ್ತು ಲಕ್ಷದೀಪೋತ್ಸವ ನಡೆಯಿತು. ಉಜ್ಜಯನಿ ಪೀಠದ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ರಾಜದೇಶಿಕೇಂದ್ರ ಭಗವತ್ಪಾದರು, ಶ್ರೀಶೈಲ ಪೀಠದ ಶ್ರೀ ಡಾ. ಚನ್ನ ಸಿದ್ಧಾರಾಮ ಪಂಡಿತಾರಾಧ್ಯ ಶಿವಾಚಾರ್ಯ ರಾಜದೇಶಿಕೇಂದ್ರ ಭಗವತ್ಪಾದರು ಹಾಗೂ ಕಾಶೀ ಪೀಠದ ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ರಾಜದೇಶಿಕೇಂದ್ರ ಭಗವತ್ಪಾದರ ಅಡ್ಡಪಲ್ಲಕ್ಕಿ ಉತ್ಸವ ನಡೆಯಿತು. ಮಹಿಳೆಯರ ಕುಂಭಮೇಳದೊಂದಿಗೆ ವಿಜೃಂಭಣೆಯಿಂದ ನಡೆದ ಉತ್ಸವಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು.

ಶ್ರೀ ಮಲ್ಲಿಕಾರ್ಜುನ ದೇವಾಲಯ ಮುಂಭಾಗದಲ್ಲಿ ನಿರ್ಮಿಸಲಾದ ಮಹಾದ್ವಾರ ಹಾಗೂ ಸ್ವರ್ಣಲೇಪಿತ ಕಳಸಾರೋಹಣವನ್ನು ಶ್ರೀಶೈಲ ಜಗದ್ಗುರುಗಳು ನೆರವೇರಿಸಿದರು. ನಂತರ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಧರ್ಮಸಭೆ ನಡೆಯಿತು. ಕಾಶೀ ಪೀಠದ ಜಗದ್ಗುರುಗಳು ಆಶೀರ್ವಚನ ನೀಡಿ, ಸಮಾಜದಲ್ಲಿ ಸತ್ಕಾರ್ಯಗಳು ನಿರಂತರವಾಗಿ ನಡೆಯಬೇಕು, ಧರ್ಮದಿಂದಲೇ ಸಮಾಜಕ್ಕೆ ಸದ್ಗತಿ ಸಾಧ್ಯ.

ಪ್ರತಿಯೊಬ್ಬರೂ ಧರ್ಮ ಕಾರ್ಯ ಮಾಡಬೇಕು ಎಂದು ಉಪದೇಶಿಸಿದರು. ಶ್ರೀಶೈಲ ಜಗದ್ಗುರುಗಳೂ ಆಶೀರ್ವಚನ ನೀಡಿದರು.

ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ



ಮಾಂಜರಿಯಲ್ಲಿ ನಡೆದ ಅಡ್ಡಪಲ್ಲಕ್ಕಿ ಮಹೋತ್ಸವದ ಒಂದು ನೋಟ

17–11–2012 : ಮಾಂಜರಿ : ಇಲ್ಲಿಯ ಕಾಡಸಿದ್ಧೇಶ್ವರ ಮಠದ ಶ್ರೀ ಗುರುಶಾಂತಲಿಂಗ ದೇಶಿಕರ ಗುರು ಮಹಾಸ್ವಾಮಿಗಳ ಪಟ್ಟಾಧಿಕಾರ ಮಹೋತ್ಸವದ ನಿಮಿತ್ತ ಶ್ರೀಶೈಲ ಜಗದ್ಗುರು, ಕಾಶೀ ಜಗದ್ಗುರು ಅವರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಕುಂಭ, ಗ್ರಂಥ ಮೆರವಣಿಗೆ ಅದ್ಧೂರಿಯಿಂದ ಜರುಗಿತು. ಸುಮಾರು ಎರಡು ಸಾವಿರ ಸುಮಂಗಲೆಯರು ಕುಂಭ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮಹೋತ್ಸವದ ನಿಮಿತ್ತ ಗ್ರಾಮವು ರಂಗೋಲಿ ಹಾಗೂ ಹೂ ತೋರಣಗಳಿಂದ ಶೃಂಗಾರಗೊಂಡಿತ್ತು.

21–11–2012

ಅಡ್ಡಪಲ್ಲಕ್ಕಿ ಮಹೋತ್ಸವಕ್ಕೆ ಹಾರ್ದಿಕ ಸ್ವಾಗತ

4–12–2012


ಹಾವೇರಿ ಜಿಲ್ಲಾ ರಾಣಿಬೆನ್ನೂರಿನಲ್ಲಿ ಜಗದ್ಗುರುಗಳ ಪುರ ಪ್ರವೇಶ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ



ಜಗದ್ಗುರುಗಳ ಅಡ್ಡಪಲ್ಲಕ್ಕಿ

18–4–2013 : ಹಾವೇರಿ : ಉಜ್ಜಯನಿ, ಶ್ರೀಶೈಲ ಹಾಗೂ ಕಾಶಿ ಜಗದ್ಗುರುಗಳ ಅಪರೂಪದ ತ್ರಿವೇಣಿ ಸಂಗಮ ಹಾಗೂ ಮೂವರು ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ ನಗರದಲ್ಲಿ ಗುರುವಾರ ಅದ್ಧೂರಿಯಾಗಿ ನಡೆಯಿತು.

ಡೊಳ್ಳು, ಭಜಂತ್ರಿ, ಸಮಾಳ, ವೀರಗಾಸೆ, ಕುಂಭ, ಕಳಸ, ಅಲಂಕೃತ ಎರಡು ಗಜಗಳು, ಕಹಳೆ ನಿನಾದ, ಭಕ್ತಿ ಸಂಗೀತ ವೈಭವ, ಝಾಂಜ್ ಮೇಳ ಹಾಗೂ ಆಕರ್ಷಕ ಗೊಂಬೆ ಕುಣಿತದೊಂದಿಗೆ ಅಡ್ಡಪಲ್ಲಕ್ಕಿ ಉತ್ಸವ ನಗರದ ಶ್ರೀವೀರಭದ್ರೇಶ್ವರ ದೇವಸ್ಥಾನದಿಂದ ಆರಂಭವಾಯಿತು.



ಹಾವೇರಿ : ಉಜ್ಜಯಿನಿ, ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ನಗರದಲ್ಲಿ ಗುರವಾರ ಅದ್ದೂರಿಯಾಗಿ ನಡೆಯಿತು.

ಉಜ್ಜಯನಿ, ಶ್ರೀಶೈಲ ಹಾಗೂ ಕಾಶಿ ಜಗದ್ಗುರುಗಳ ಪ್ರತ್ಯೇಕ ಮೂರು ಅಡ್ಡ ಪಲ್ಲಕ್ಕಿಗಳನ್ನೊಳಗೊಂಡ ಉತ್ಸವ ಎಂ.ಜಿ. ರಸ್ತೆ ಮೂಲಕ ಹುಕ್ಕೇರಿ ಮಠದವರೆಗೆ ನಡೆಯಿತು. ಮೆರವಣಿಗೆಯುದ್ದಕ್ಕೂ ನೂರಾರು ಭಕ್ತರು ಶ್ರೀಗಳನ್ನು ಕಂಡು ಧನ್ಯತಾಭಾವ ಮೆರೆದರು. ಭಕ್ತರು ಮೂವರು ಶ್ರೀಗಳಿಂದ ಆಶೀರ್ವಾದ ಪಡೆದರು. ಮೆರವಣಿಗೆ ಶಿವಲಿಂಗೇಶ್ವರ ಮಹಿಳಾ ಮಹಾವಿದ್ಯಾಲಯದ ಆವರಣದಲ್ಲಿ ಸಂಪನ್ನಗೊಂಡಿತು.

'ಸಿದ್ಧಾಂತ ಶಿಖಾಮಣಿ' ಮೆರವಣಿಗೆ : *ತ್ರಿಮೂರ್ತಿ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ ಮೆರವಣಿಗೆಯ ಆರಂಭದಲ್ಲಿ ಆನೆಯ ಮೇಲೆ ಧರ್ಮಗ್ರಂಥ 'ಸಿದ್ಧಾಂತ ಶಿಖಾಮಣಿ' ಕೃತಿಯ ಮೆರವಣಿಗೆ ನಡೆಯಿತು.*

ತ್ರಿಮೂರ್ತಿ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ ನಿಮಿತ್ತ ನಗರದ ಪ್ರಮುಖ ಬೀದಿಗಳಲ್ಲಿ ನೀರು ಹಾಕಿ, ರಂಗೋಲಿ ಹಾಕಿ ಸಿಂಗರಿಸಲಾಗಿತ್ತು. ಹಲವೆಡೆ ಹೂ ಹಾಕಿ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಸ್ವಾಗತ ಕೋರಿದರು. ನಗರದ ಗಣ್ಯರು, ನೂರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ



ಐನಾಪೂರ ಗ್ರಾಮದಲ್ಲಿ ಕಾಶಿ, ಶ್ರೀಶೈಲ ಹಾಗೂ ಉಜ್ಜಯಿನಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಒಂದು ನೋಟ

5–5–2014
ಬಾಗಲಕೋಟ ಜಿಲ್ಲೆ ಬದಾಮಿ ತಾಲೂಕಿನ
ನರಸಾಪುರ ಗ್ರಾಮದಲ್ಲಿ
ಶ್ರೀಮದ್ ಶ್ರೀಶೈಲ ಹಾಗೂ
ಶ್ರೀಮದ್ ಕಾಶೀ ಜಗದ್ಗುರುಗಳವರ
ಅಡ್ಡಪಲ್ಲಕ್ಕಿ ಮಹೋತ್ಸವ
ಹಾಗೂ
ಪ.ಪೂ. ಶ್ರೀ ವಿರುಪಾಕ್ಷ ಸ್ವಾಮಿಗಳ
ಶ್ರೀಗುರು ಪಟ್ಟಾಧಿಕಾರ ಸಮಾರಂಭ.

ಕಲಾದಗಿಯಲ್ಲಿ ಇಂದು ನಾಳೆ ಪಂಚಪೀಠಾಧೀಶರ ಅಡ್ಡಪಲ್ಲಕ್ಕಿ ಸಂಕ, 4–6–2014



ಕಲಾದಗಿ : ಗುರುಲಿಂಗೇಶ್ವರ ಮಹಾದ್ವಾರ ಉದ್ಘಾಟನಾ ಸಮಾರಂಭದಲ್ಲಿ ಉಜ್ಜಯಿನಿ, ಕಾಶೀ, ಶ್ರೀಶೈಲ ಜಗದ್ಗುರುಗಳು ಪಾಲ್ಗೊಂಡಿದ್ದರು. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಉಸ್ತುವಾರಿ ಸಚಿವ ಎಸ್.ಆರ್. ಪಾಟೀಲ, ಶಾಸಕ ಜೆ.ಟಿ. ಪಾಟೀಲ ಚಿತ್ರದಲ್ಲಿದ್ದಾರೆ.

ಈ ಎಲ್ಲಾ ಉತ್ಸವಗಳಲ್ಲಿ ಕಾಶೀ ಜಗದ್ಗುರುಗಳು ಸಾನ್ನಿಧ್ಯ ವಹಿಸಿ ಹೋದೆಡೆಯಲ್ಲೆಲ್ಲಾ ಆಶೀರ್ವಚನ ನೀಡಿ 1–7–14ರಂದು ಬೆಂಗಳೂರಿನಿಂದ ವಾರಣಾಸಿಗೆ ಪ್ರಯಾಣ ಬೆಳೆಸಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಯುಗಮಾನೋತ್ಸವದಲ್ಲಿ ಪಂಚಪೀಠಾಧೀಶ್ವರರು

ಭಾರತೀಯ ಧಾರ್ಮಿಕ ಪರಂಪರೆಯು ಯುಗಯುಗಗಳಿಂದಲೂ ಸದಾಕಾಲ ಹೊಸತನದಿಂದ ಬೆಳೆದು ಬಂದಿದೆ. ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳು–ಕಾಲಗಣನೆಯಲ್ಲಿ ಬರುವ ನಾಲ್ಕು ಯುಗಗಳು. ಕೃತಯುಗ, ತ್ರೇತಾಯುಗ, ದ್ವಾಪರಯುಗಗಳು ಕಳೆದು ಕಲಿಯುಗ ನಡೆಯುತ್ತಿದೆ. ಈ ಕಲಿಯುಗದ ಆರಂಭ ದ್ವಾಪರಯುಗದ ಶ್ರೀಕೃಷ್ಣನ ನಿಧನದಿಂದ ಆರಂಭವಾಗಿದೆ. ಯುಗಯುಗಗಳಲ್ಲಿ ಮಹಿಮಾಶಾಲಿಗಳ ಅವತಾರವಾಗಲು ನಡೆದು ಬಂದಿದೆ. ಕೃತಯುಗದಲ್ಲಿ ವಿಷ್ಣುವಿನ ನೃಸಿಂಹಾವತಾರ, ರಾಮನ ಅವತಾರ, ತ್ರೇತಾಯುಗದಲ್ಲಿ, ದ್ವಾಪರಯುಗದಲ್ಲಿ ಕೃಷ್ಣಾವತಾರ–ಹೀಗೆ ಮಹಾತ್ಮರು ಯುಗಯುಗಗಳಲ್ಲಿ ಜನ್ಮತಾಳಿ ಲೋಕೋದ್ಧಾರಗೈದಿದ್ದಾರೆ.

ಭಾರತದ ಹಿಂದೂ ಧಾರ್ಮಿಕ ಪರಂಪರೆಯಲ್ಲಿ ವೀರಶೈವ ಧರ್ಮಸಂಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು ಯುಗಯುಗಗಳಲ್ಲಿ ಅವತಾರ ಎತ್ತಿದ್ದಾರೆ. ಶಿವನ ಗಣಾಧೀಶರಾಗಿದ್ದ ಅವರೈವರು ದಿವ್ಯದೇಹದಾರಿಗಳಾಗಿಯೆ ಲಿಂಗಗಳಿಂದ ಅವತರಿಸಿದ್ದು ಅವರ ವೈಶಿಷ್ಟ್ಯವಾಗಿದೆ. ಈ ವಿಚಾರ ಶೈವಾಗಮಳಲ್ಲಿ–ಸ್ವಾಯಂಭುವಾಗಮ, ಸುಪ್ರಭೇದಾಗಮ, ಪಾಶುಪತಾಗಮಗಳಲ್ಲಿ ನಿರೂಪಿಸಲಾಗಿದೆ.

ಕೃತಯುಗದಲ್ಲಿ–ಪಂಚಾಚಾರ್ಯರು ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಚತುರಕ್ಷರ ಮತ್ತು ಪಂಚಾಕ್ಷರ ಎಂಬ ಹೆಸರುಗಳಿಂದ ಪ್ರಸಿದ್ಧರಾಗಿರುವುದನ್ನು ಶೈವಾಗಮಗಳಲ್ಲಿ ನೋಡಬಹುದಾಗಿದೆ.

ತ್ರೇತಾಯುಗದಲ್ಲಿ ಅವರೇ ಮತ್ತೆ ಕ್ರಮವಾಗಿ ಏಕವಕ್ತ್ರ, ದ್ವಿವಕ್ತ್ರ, ತ್ರಿವಕ್ತ್ರ, ಚತುರ್ವಕ್ತ್ರ ಮತ್ತು ಪಂಚವಕ್ತ್ರರಾಗಿ; ದ್ವಾಪರಯುಗದಲ್ಲಿ ರೇಣುಕ, ದಾರುಕ, ಶಂಖುಕರ್ಣ, ಧೇನುಕರ್ಣ ಮತ್ತು ವಿಶ್ವಕರ್ಣರಾಗಿ; ಕಲಿಯುಗದಲ್ಲಿ ಅವರೇ ಕ್ರಮವಾಗಿ, ರೇವಣಾರಾಧ್ಯ, ಮರುಳಾರಾಧ್ಯ,, ಏಕೋರಾಮಾರಾಧ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯ,ರಾಗಿ ಪಂಚ ಆರಾಧ್ಯರಾಗಿ ಅವತರಿಸಿದರು.

ಈ ಐವರು ಆಚಾರ್ಯರು ಕ್ರಮವಾಗಿ ಆಂಧ್ರದ ಕೊಲನುಪಾಕದಲ್ಲಿರುವ ಸೋಮೇಶ್ವರ ಲಿಂಗದಿಂದ ಶ್ರೀ ರೇಣುಕರೂ, ಮಧ್ಯಪ್ರದೇಶದ ಉಜ್ಜಯನಿಯ ವಟಕ್ಷೇತ್ರದ ಸಿದ್ಧೇಶ್ವರಲಿಂಗದಿಂದ ಶ್ರೀ ಮರುಳಾರಾಧ್ಯರೂ, ಆಂಧ್ರದ ದ್ರಾಕ್ಷಾರಾಮ ಕ್ಷೇತ್ರದ ರಾಮನಾಥಲಿಂಗದಿಂದ

ಶ್ರೀ ಏಕೋರಾಮಾರಾಧ್ಯರೂ, ಆಂಧ್ರದ ಸುಧಾಕುಂಡವೆಂಬ ಸ್ಥಾನದ ಮಲ್ಲಿಕಾರ್ಜುನಲಿಂಗದಿಂದ ಶ್ರೀ ಪಂಡಿತಾರಾಧ್ಯರೂ ಮತ್ತು ಉತ್ತರಪ್ರದೇಶದ ಕಾಶೀ ವಿಶ್ವೇಶ್ವರಲಿಂಗದಿಂದ ಶ್ರೀ ವಿಶ್ವಾರಾಧ್ಯರೂ ಅವತರಿಸಿದ್ದಾರೆ.

ಅಂದು ಈ ಆದಿ ಜಗದ್ಗುರುಗಳು ಸ್ಥಾಪಿಸಿದ ಪೀಠಗಳು ಸಹಸ್ರಾರು ವರ್ಷಗಳಾದರೂ ಇಂದಿಗೂ ಜೀವಂತಿಕೆಯಿಂದ ಬೆಳೆದಿದೆ; ನಡೆದುಕೊಂಡು ಬಂದಿದೆ.

ಶ್ರೀ ಜಗದ್ಗುರು ರೇಣುಕರ ವಾಸಸ್ಥಾನ ಕರ್ನಾಟಕದ ಕದಲೀಪುರ (ಬಾಳೆಹೊನ್ನೂರು), ಶ್ರೀ ಜಗದ್ಗುರು ಮರುಳಾರಾಧ್ಯರ ವಾಸಸ್ಥಾನ ಕರ್ನಾಟಕದ ಉಜ್ಜಯನಿ, ಶ್ರೀ ಜಗದ್ಗುರು ಏಕೋರಾಮಾರಾಧ್ಯರ ವಾಸಸ್ಥಾನ ಹಿಮಾಲಯದ ಕೇದಾರ, ಶ್ರೀ ಜಗದ್ಗುರು ಪಂಡಿತಾರಾಧ್ಯರ ವಾಸಸ್ಥಾನ ಶ್ರೀಶೈಲ, ಶ್ರೀ ಜಗದ್ಗುರು ವಿಶ್ವಾರಾಧ್ಯರ ವಾಸಸ್ಥಾನ ಕಾಶಿ.

ಇಂದಿಗೂ ಈ ಎಲ್ಲಾ ಪೀಠಗಳನ್ನು ಕಾಣಬಹುದಾಗಿದೆ.

ಪಂಚಪೀಠಗಳ ಹೆಸರುಗಳೂ ಕ್ರಮವಾಗಿ ವೀರಸಿಂಹಾಸನಪೀಠ, ಸದ್ಧರ್ಮ ಸಿಂಹಾಸನ ಪೀಠ, ವೈರಾಗ್ಯ ಸಿಂಹಾಸನ ಪೀಠ, ಸೂರ್ಯಸಿಂಹಾಸನ ಪೀಠ ಮತ್ತು ಜ್ಞಾನ ಸಿಂಹಾಸನ ಪೀಠಗಳೆಂದೇ ಹೆಸರುವಾಸಿಯಾಗಿವೆ.

ಇಂದು ಪಂಚ ಪೀಠಗಳ ಗೋತ್ರ ಸೂತ್ರಗಳೇ ಸಮಸ್ತ ವೀರಶೈವರ ಗೋತ್ರ ಸೂತ್ರಗಳಾಗಿವೆ.

ಶ್ರೀ ಜಗದ್ಗುರು ಪಂಚಾಚಾರ್ಯ ಇತಿಹಾಸವು ಯುಗಯುಗಗಳಿಂದಲೂ ಬೆಳೆದುಬಂದಿದೆ. ಮೂರು ಯುಗಗಳಲ್ಲಿ ಅವತರಿಸಿ 5109 ವರ್ಷಗಳೇ ದಾಟಿರುವುದರಿಂದ ಶತಮಾನೋತ್ಸವವೆನ್ನದೆ ಯುಗಮಾನೋತ್ಸವವೆಂದು ಆಚರಿಸಲಾಗುತ್ತಿದೆ.

ಮೂರುದಿನಗಳ ಕಾಲ ಆಚರಿಸಲಾಗುವ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಐದು ಜಗದ್ಗುರುಗಳು ಒಂದೆಡೆ ಸೇರುವುದರಿಂದ–ಆ ಊರುಗಳಲ್ಲಿ ಹೊಸ ಧಾರ್ಮಿಕ ಸಾಂಸ್ಕೃತಿಕ ಚಳುವಳಿಯೇ ನಡೆದಂತಾಗುತ್ತಿದೆ. ಲಿಂಗೈಕ್ಯ ವೀರಗಂಗಾಧರ ಶಿವಾಚಾರ್ಯ ಜಗದ್ಗುರುಗಳ ಕಾಲದಿಂದ ಈ ಉತ್ಸವ ಹೆಚ್ಚು ಪ್ರಚಾರಗೊಂಡಿದೆ. ಪ್ರತಿ ಯುಗಾದಿಯ ಪಾಡ್ಯಮಿ ದಿನದಂದು ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದ್ದರು. 1999ರಲ್ಲಿ ಹರಿಹರದಲ್ಲಿ ಈ ಯುಗಮಾನೋತ್ಸವ ಹೊಸ ರೂಪ ತಾಳಿ ಎಲ್ಲಿ ನಡೆಸಲಾಗುವುದೋ ಆ ಊರಿನ ಉತ್ಸವ ಆದಂತೆ ಬಹು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಈ ಮೂರು ದಿನಗಳಲ್ಲಿ ವೀರಶೈವ ಧರ್ಮದ ಪ್ರಾಚೀನತೆ, ಪಂಚಪೀಠಗಳ ಪ್ರಾಚೀನತೆ, ಪಂಚಪೀಠದ ಶಾಖಾಮಠಗಳ ಕಾರ್ಯವಿಧಾನ–ಹೀಗೆ ಹತ್ತು ಹಲವು ವಿಚಾರಗಳನ್ನು ಜನಗಳಿಗೆ ಮುಟ್ಟಿಸುವಲ್ಲಿ ಯಶಸ್ಸನ್ನು ಕಂಡಿದೆ. ಪಂಚಾಚಾರ್ಯರ ಸಾನ್ನಿಧ್ಯದಲ್ಲಿ ಸಾಹಿತಿಗಳು, ಸಂಶೋಧಕರು, ವಿವಿಧ ಕ್ಷೇತ್ರದಲ್ಲಿ ಹೆಸರಾಗಿರುವ ಒಬ್ಬ ವ್ಯಕ್ತಿಯನ್ನು ಯುಗಮಾನೋತ್ಸವ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುವುದು. ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಒತ್ತು ಕೊಡಲಾಗುತ್ತಿದೆ.

ಡಾ॥ ಎಂ. ಶಿವಕುಮಾರ ಸ್ವಾಮಿಗಳ ಅಭಿಪ್ರಾಯದಲ್ಲಿ ಯುಗಯುಗಗಳ ಇತಿಹಾಸವಿರುವ ವಿಚಾರಗಳು ಜನಸಾಮಾನ್ಯರಿಗೆ ತಿಳಿಯುವಂಥ ರೀತಿಯಲ್ಲಿ ಆಚರಿಸಬೇಕು. ಪಂಚಾಚಾರ್ಯರ ಪ್ರಾಚೀನತೆ ಎಂದರೆ ವೀರಶೈವರ ಪ್ರಾಚೀನತೆ ಎಂಬ ಅರಿವೂ ಎಲ್ಲರಲ್ಲೂ ಮೂಡಬೇಕು. ಯುವ ಜನಾಂಗವನ್ನು ಗಮನದಲ್ಲಿಟ್ಟುಕೊಂಡು ಅನೇಕ ಕಾರ್ಯಕ್ರಮಗಳನ್ನು ರೂಪಿಸಬೇಕು. ಶಿವಾನುಭವ ಪರೀಕ್ಷೆ, ವೀರಶೈವದ ಪ್ರಾಚೀನ ಇತಿಹಾಸ, ಆಚಾರ ತತ್ತ್ವ ಸಿದ್ಧಾಂತಗಳ ಕುರಿತು ಸ್ಪರ್ಧೆಗಳನ್ನು ಏರ್ಪಡಿಸಿ ಸೂಕ್ತ ಬಹುಮಾನ ಕೊಡಮಾಡುವುದು ವಿದ್ವತ್‌ಗೋಷ್ಠಿಗಳಲ್ಲಿ ಅನೇಕ ಸಂಶಯಗಳು ದೂರಮಾಡುವಂತಹ ಚರ್ಚೆಗಳು ನಡೆಯುವಂತಾಗಬೇಕು ಎಂದು ತಮ್ಮ ಒಂದು ಲೇಖನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಶ್ರೀಮದ್ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ, ಅಡ್ಡಪಲ್ಲಕ್ಕಿ ಮಹೋತ್ಸವ

ಮತ್ತು

ಶ್ರೀ ಜಗಜ್ಯೋತಿ ಬಸವೇಶ್ವರರ ಜಯಂತ್ಯುತ್ಸವ ಕಾರ್ಯಕ್ರಮಗಳು

ಬೆಂಗಳೂರು ಲಾಲ್‌ಬಾಗ್ ಗಾಜಿನ ಮನೆಯಲ್ಲಿ

18–6–90ರಿಂದ 20–6–90 ಶ್ರೀ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ ಬೆಂಗಳೂರಿನ ಗಾಜಿನ ಮನೆಯಲ್ಲಿ ಬಹು ವೈಭವದಿಂದ ನಡೆಯಿತು. ಅಂದಿನ ವಿಧಾನ ಸಭಾಧ್ಯಕ್ಷರಾಗಿದ್ದ ಎಸ್.ಎಂ. ಕೃಷ್ಣ ಅವರು ಉದ್ಘಾಟನೆ ಮಾಡಿದರು. 20–6–1990ರಂದು ನಡೆದ ಸಮಾರೋಪ ಭಾಷಣವನ್ನು ಕರ್ನಾಟಕ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್ ಅವರು ಮಾಡಿದರು. ಸಾಹಿತ್ಯಗೋಷ್ಠಿ, ಮಠಾಧೀಶರ ಗೋಷ್ಠಿ, ಮಹಿಳಾ ಗೋಷ್ಠಿ, ಯುವ ಗೋಷ್ಠಿ–ಹೀಗೆ ಕಾರ್ಯಕ್ರಮಗಳು ಬಹು ಯಶಸ್ವಿಯಾಗಿ ನಡೆದುವು.

3–3–1999ರಲ್ಲಿ ಬಾಳೆಹೊನ್ನೂರಿನಲ್ಲಿ ನಡೆಸಲಾದ ಪಂಚಾಚಾರ್ಯ ಯುಗಮಾನೋತ್ಸವದಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಜೆ.ಎಚ್. ಪಟೇಲ್ ಅವರು ಭಾಗವಹಿಸಿದ್ದರು.

'ದೇಶಕ್ಕೆ ಧರ್ಮಗುರುಗಳ ಮಾರ್ಗದರ್ಶನ ಅಗತ್ಯ'



ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಜೆ.ಹೆಚ್. ಪಾಟೇಲ್ ಅವರು ಸಚಿವರಾದ ಎಂ.ಪಿ. ಪ್ರಕಾಶ್, ಎಚ್.ಜಿ. ಗೋವಿಂದೇಗೌಡ, ಎಸ್.ಎಸ್. ಪಾಟೀಲ, ಎಚ್. ಶಿವಪ್ಪ, ಬಿ.ಎಲ್. ಶಂಕರ್ ಹಾಗೂ ಬಿ.ಬಿ. ನಿಂಗಯ್ಯ ಇವರೊಂದಿಗೆ ಪಂಚಪೀಠಾಧೀಶ್ವರರಾದ ರಂಭಾಪುರಿ, ಶ್ರೀಶೈಲ, ಕಾಶೀ, ಕೇದಾರ ಮತ್ತು ಉಜ್ಜಯನಿ ಪೀಠಗಳ ಜಗದ್ಗುರುಗಳ ದರ್ಶನಾಶೀರ್ವಾದ ಪಡೆದರು.

22–3–99ರಲ್ಲಿ ಹರಿಹರದಲ್ಲಿ ನಡೆದ ಯುಗಮಾನೋತ್ಸವ ಉದ್ಘಾಟನೆಯೂ ಶ್ರೀ ಎಸ್.ಆರ್. ಬೊಮ್ಮಾಯಿ (ಮಾಜಿ ಮುಖ್ಯಮಂತ್ರಿಗಳು)ಯವರು ಮಾಡಿದ್ದಾರೆ.

ವೀರಶೈವ ಸಮಾಜದ ದೃಷ್ಟಿಯಿಂದ ಪಂಚಪೀಠಾಧೀಶ್ವರರ ನಿರ್ಣಯಗಳು

ಹರಿಹರ : ಮಾ.30–ಇತ್ತೀಚೆಗೆ ಹರಿಹರ ಕ್ಷೇತ್ರದಲ್ಲಿ ಮೊಟ್ಟಮೊದಲ ಬಾರಿಗೆ ಆರಂಭಿಸಲ್ಪಟ್ಟ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಶುಭ ಸಂದರ್ಭದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಮಾನವ ಧರ್ಮ ಸಂಸ್ಥೆಯು ವತಿಯಿಂದ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರು ವೀರಶೈವ ಸಮಾಜದ ದೃಷ್ಟಿಯಿಂದ ಕೆಲ ನಿರ್ಣಯಗಳನ್ನು ಕೈಗೊಂಡು ಘೋಷಿಸಿದರು.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರಿಂದ ಸಂಸ್ಥಾಪಿಸಲ್ಪಟ್ಟ ಪಂಚಪೀಠಗಳ ಶಾಖಾಮಠಗಳ ಆಸ್ತಿಪಾಸ್ತಿಗಳು ಮತ್ತು ಗುರು ಪರಂಪರೆಯು ಸದಾ ಉಳಿದುಕೊಂಡು ಬರುವುದಕ್ಕಾಗಿ ಕಾನೂನಿನ ಚೌಕಟ್ಟಿನಲ್ಲಿ ಕೆಲ ನಿಯಮಾವಳಿಗಳನ್ನು ರಚಿಸಿ ನೊಂದಾಯಿಸಬೇಕು.

ಒಂದು ಶಾಖಾಮಠಕ್ಕೆ ಪಟ್ಟಾಧಿಕಾರಿಗಳಾದವರು ಸಂದರ್ಭವಶಾತ್ ಗೃಹಸ್ಥರಾದರೆ, ಅಥವಾ ಬೇರೊಂದು ಮಠಕ್ಕೆ ಇಲ್ಲವೇ ಪೀಠಕ್ಕೆ ಅಧಿಕಾರಿಗಳಾಗಿ ಹೋದರೆ ತಮ್ಮ ಮೂಲಮಠಕ್ಕೆ ಆ ಮಠದ ಸಂಪ್ರದಾಯದ ಪ್ರಕಾರ ಉತ್ತರಾಧಿಕಾರಿಗಳನ್ನು ನೇಮಿಸಿ ಮಠದ ಆಸ್ತಿಪಾಸ್ತಿಗಳನ್ನು ಅವರ ಹೆಸರಿಗೆ ನೊಂದಾಯಿಸಬೇಕು.

ಟ್ರಸ್ಟಿನ ಆಡಳಿತಕ್ಕೆ ಒಳಪಟ್ಟಂತಹ ಮಠಗಳಿಗೆ ಪಟ್ಟಾಧಿಕಾರಿಗಳಿಲ್ಲದ ಪಕ್ಷದಲ್ಲಿ ಅಂತಹ ಮಠಗಳ ಗುರುಪರಂಪರೆಗಳ ಅನುಸಾರವಾಗಿ ಪಟ್ಟಾಧಿಕಾರಿಗಳನ್ನು ನೇಮಿಸಿಕೊಂಡು ಮಠಗಳ ಆಡಳಿತವನ್ನು ಮುಂದುವರೆಸಿಕೊಂಡು ಹೋಗತಕ್ಕದ್ದು.

ವೀರಶೈವರಲ್ಲಿ ವೃತ್ತಿಯಿಂದ ಉಂಟಾಗಿರುವ ಒಳಪಂಗಡಗಳನ್ನು ಕಡಿಮೆ ಮಾಡುವುದಲ್ಲದೇ, ಒಳಪಂಗಡಗಳಲ್ಲಿ ವಿವಾಹಾದಿಗಳಿಗೆ ಅವಕಾಶಗಳನ್ನು ಕಲ್ಪಿಸಿ ಪರಸ್ಪರರಲ್ಲಿ ಕಂಡುಬರುವ ಪ್ರತ್ಯೇಕತೆಯನ್ನು ನಿವಾರಿಸಲು ಪ್ರಯತ್ನಿಸಬೇಕು. ಶ್ರೀ ಜಗದ್ಗುರು ಪಂಚಾಚಾರ್ಯರ ಮಠ ಮಂದಿರಗಳಲ್ಲಿ ಪೀಠಾಚಾರ್ಯರ ಸಾಹಿತ್ಯಕ್ಕೆ ಸಂಬಂಧಪಟ್ಟ ಪುರಾಣ, ಪ್ರವಚನಗಳನ್ನು ಮೇಲಿಂದ ಮೇಲೆ ನಡೆಯಿಸಬೇಕು. ಎಲ್ಲ ಮಠಗಳಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನು ಕಡ್ಡಾಯವಾಗಿ ಆಚರಿಸಬೇಕು. ವೀರಶೈವ ಧರ್ಮದ ವ್ಯಾಪಕ ಪ್ರಚಾರದ ಸಲುವಾಗಿ ಮಠಗಳ ವತಿಯಿಂದ ಆಗಾಗ ಚರ್ಚಾಸತ್ರಗಳನ್ನು ಏರ್ಪಡಿಸಬೇಕು.

ವೀರಶೈವ ಧರ್ಮದ ಪ್ರಾಚೀನ ಸಾಹಿತ್ಯದಲ್ಲಿ ಅಡಕವಾಗಿರುವ ಸೈದ್ಧಾಂತಿಕ ವಿಚಾರಗಳನ್ನು ಸಣ್ಣ ಸಣ್ಣ ಪುಸ್ತಕಗಳಲ್ಲಿ ಅಚ್ಚುಹಾಕಿಸಿ ಪ್ರಸಾರ ಮಾಡಬೇಕು. ಶ್ರೀ ಜಗದ್ಗುರು ಕೇದಾರ ಪೀಠದ ಹಕ್ಕು ಬಾಧ್ಯತೆಗಳನ್ನು ಸ್ಥಿರೀಕರಿಸುವ ಬಗ್ಗೆ ಪ್ರಯತ್ನವನ್ನು ಮುಂದುವರೆಸುವುದು. ಶ್ರೀ ಜಗದ್ಗುರು ಪಂಚಾಚಾರ್ಯರು ವೀರಶೈವ ಮತಸ್ಥಾಪಕರು ಮತ್ತು ಬಸವಾದಿ ಶಿವಶರಣರು ವೀರಶೈವ ಮತೋದ್ಧಾರಕರು ಎಂಬ ಸಮನ್ವಯ ದೃಷ್ಟಿಯಿಂದ ಪಂಚಾಚಾರ್ಯರಲ್ಲಿ ಮತ್ತು ಬಸವಾದಿ ಶಿವಶರಣರಲ್ಲಿ ಪೂಜ್ಯ ಭಾವನೆಯನ್ನು ಇಟ್ಟುಕೊಂಡು ಎಲ್ಲರೂ ನಡೆಯಬೇಕು ಎಂದು ತೀರ್ಮಾನಿಸಲಾಯಿತು.

ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಉದ್ಘಾಟನೆ
9–4–2014, ಸಂಯುಕ್ತ ಕರ್ನಾಟಕ



ಹುಬ್ಬಳ್ಳಿ ಇಂದಿರಾ ಗಾಜಿನ ಮನೆಯಲ್ಲಿ ರವಿವಾರ ಸಂಜೆ ಕೇಂದ್ರ ಪ್ರವಾಸೋದ್ದಿಮೆ ಸಚಿವ ಅನಂತಕುಮಾರ್ ಪಂಚಾಚಾರ್ಯರ ಯುಗಮಾನೋತ್ಸವ ಉದ್ಘಾಟಿಸಿದರು. ರಂಭಾಪುರಿ, ಉಜ್ಜಯಿನಿ, ಕಾಶೀ ಪೀಠದ ಜಗದ್ಗುರುಗಳು, ಸಚಿವರಾದ ಎಚ್.ಕೆ. ಪಾಟೀಲ, ಡಾ.ಎ.ಬಿ. ಮಲಕರೆಡ್ಡಿ, ಲೋಕ ಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ಕೆ. ಶಾಮರಾವ್, ಶಾಸಕ ಬಸವರಾಜ ಹೊರಟ್ಟಿ, ಮಾಜಿ ಸಚಿವ ಪಿ.ಸಿ. ಸಿದ್ದನಗೌಡರ ಉಪಸ್ಥಿತರಿದ್ದರು.

ಹುಬ್ಬಳ್ಳಿ ಮಹಾನಗರದಲ್ಲಿ ಅತ್ಯಂತ ಸಡಗರದಿಂದ ನಡೆದು ನಭೂತೋನ ಭವಿಷ್ಯತಿ–ಎಂಬಂತೆ ಇತಿಹಾಸ ಸೃಷ್ಟಿಸಿದೆ.

ಮಾರ್ಚ್ 30, 31, ಏಪ್ರಿಲ್ 1 2001 ಬಾಗಲಕೋಟೆಯ ಜಮಖಂಡಿಯಲ್ಲಿ ಯುಗಮಾನೋತ್ಸವ ಪಂಚಪೀಠಾಧೀಶ್ವರರ ಸಾನ್ನಿಧ್ಯದಲ್ಲಿ ನಡೆಯಿತು. ಈ ಬಾರಿಯ ವೈಶಿಷ್ಟ್ಯವೆಂದರೆ ಈ ಯುಗಮಾನೋತ್ಸವಕ್ಕೆ ನಾಡಿನ ಹಿರಿಯ ರಾಜ್ಯಪ್ರಶಸ್ತಿ ವಿಜೇತ ಡಾ. ಪಂಚಾಕ್ಷರಿ ಹಿರೇಮಠ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ.

ಕಪಲಾಪೂರದಲ್ಲಿ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ
'ಜನಜಾಗೃತಿ ಮೂಡಿಸುವುದೇ ಯುಗಮಾನೋತ್ಸವದ ಗುರಿ'
ಸಂಯುಕ್ತ ಕರ್ನಾಟಕ,
22–4–2002

ಭಾಲ್ಕಿ ತಾ॥ ಕಪಲಾಪೂರ ಗ್ರಾಮದಲ್ಲಿ ಹಮ್ಮಿಕೊಳ್ಳಲಾದ ಯುಗಮಾನೋತ್ಸವ ಸಮಾರಂಭದ ಸಭೆಯ ಪೂರ್ವದಲ್ಲಿ ಹೊಸದಾಗಿ ನಿರ್ಮಿಸಿರುವ ಜೈಭವಾನಿ ದೇವಸ್ಥಾನದ ಕಳಸಾರೋಹಣವನ್ನು ಪಂಚಪೀಠಾಧೀಶ್ವರರ ಜೊತೆ ಕಂಚಿ ಜಗದ್ಗುರುಗಳು ನೆರವೇರಿಸಿದರು. ಆಗ ಹೆಲಿಕಾಪ್ಟರ್ ಮೂಲಕ ದೇವಸ್ಥಾನದ ಮೇಲೆ ಪುಷ್ಪವೃಷ್ಟಿ ನಡೆದಿದ್ದನ್ನು ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ನೋಡಿ ಸಂತೋಷಪಟ್ಟರು. ಈ ವರ್ಷದ ಯುಗಮಾನೋತ್ಸವದ ಅಧ್ಯಕ್ಷರಾಗಿ ಡಾ. ಎಂ. ಶಿವಕುಮಾರ ಸ್ವಾಮಿಗಳು ಆಯ್ಕೆಯಾಗಿದ್ದರು.

ಹೊನ್ನಾಳಿಯಲ್ಲಿ ಮೂರು ದಿವಸ ಸಂಭ್ರಮ ಯುಗಮಾನೋತ್ಸವಕ್ಕೆ ಚಾಲನೆ

ವಿಜಯ ಕರ್ನಾಟಕ
31–5–2002

ಶ್ರೀ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ –ಜೂನ್ 1, 2 ಮತ್ತು 2002
ಶ್ರೀ ಶ್ರೀ ಶ್ರೀ ಇವರ ಸಾನಿಧ್ಯದಲ್ಲಿ



ಶ್ರೀ ಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು



ಶ್ರೀಮತ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ 1008 ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು



ಶ್ರೀಮತ್ ಹಿಮವತ್ ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ರಾವಲ್ ಶ್ರೀ ಶ್ರೀ ಶ್ರೀ 1008 ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮಿಗಳವರು



ಶ್ರೀಮತ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು



ಶ್ರೀಮತ್ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು

ಮಾನವ ಧರ್ಮ ಮಹಾಮಂಟಪ

ಸ್ಥಳ : ಶ್ರೀ ರಾಮಮಂದಿರ ಆಟದ ಮೈದಾನ, ರಾಜಾಜಿನಗರ, ಬೆಂಗಳೂರು–10

1–6–2002ರಿಂದ 3–6–2002ರವರೆವಿಗೆ ಬೆಂಗಳೂರಿನ ರಾಜಾಜಿನಗರದಲ್ಲಿ ಯುಗಮಾನೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು. ಅನೇಕ ಕಾರ್ಯಕ್ರಮಗಳ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅನೇಕ ಗಣ್ಯರಿಗೆ ಗುರುರಕ್ಷೆ ನೀಡಿ ಗೌರವಿಸಲಾಯಿತು.

ಯುಗಮಾನೋತ್ಸವಕ್ಕೆ ಚಾಲನೆ



ಬೆಳಗಾವಿ ಜಿಲ್ಲೆಯ ಕಿತ್ತೂರಲ್ಲಿ ಗುರುವಾರ ಆರಂಭವಾದ ಶ್ರೀ ಪಂಚಾಚಾರ್ಯ ಯುಗಮಾನೋತ್ಸವ ಅಂಗವಾಗಿ ನಡೆದ ಆಕರ್ಷಕ ಮೆರವಣಿಗೆಯಲ್ಲಿ ಪಂಚಪೀಠಾಧೀಶರರು ಮತ್ತು ಭಕ್ತ ಸಮೂಹ.

25–3–2004 ರಿಂದ 26–3–2004ರವರೆಗೆ ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ಶ್ರೀ ಪಂಚಾಚಾರ್ಯರ ಯುಗಮಾನೋತ್ಸವ ನಡೆಯಿತು. ಇಲ್ಲಿಯ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ರಾಣಿ ಚನ್ನಮ್ಮನ ಪ್ರತಿಮೆಗೆ ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರಸೋಮೇಶ್ವರ ಸ್ವಾಮಿಗಳು ಮಾಲಾರ್ಪಣೆ ಮಾಡಿ ನಂದಿ ಧ್ವಜಾರೋಹಣ ನೆರವೇರಿಸುವುದರ ಮೂಲಕ ಎರಡು ದಿನಗಳ ಕಾಲ ಇಲ್ಲಿ ನಡೆಯಲಿರುವ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವಕ್ಕೆ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಗೊಡಚಿ ಕ್ಷೇತ್ರದಿಂದ ಆಗಮಿಸಿದ ಪಂಚಾಚಾರ್ಯ ಜ್ಯೋತಿಯನ್ನು ಕಟಕೋಳದ ಶ್ರೀ ವೀರಭದ್ರ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಬರಮಾಡಿಕೊಂಡರು. ನಂತರ ನಡೆದ ಭವ್ಯ ಮೆರವಣಿಗೆಯಲ್ಲಿ ಪಂಚಪೀಠಾಧೀಶ್ವರರ ಶೋಭಾಯಾತ್ರೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ರಾಣಿ ಚನ್ನಮ್ಮನ ಅರಮನೆ ಆವರಣಕ್ಕೆ ತೆರಳಿತು. ಸಮ್ಮೇಳನಾಧ್ಯಕ್ಷ ಡಾ. ಸಂಗಮೇಶ ಸವದತ್ತಿಮಠ ಅವರೂ ತೆರೆದ ಜೀಪಿನಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಆನೆ, ಕುದುರೆಗಳು, ಕುಂಭ ಹೊತ್ತ ಮಹಿಳೆಯರು, ಕೋಲಾಟ, ಕರಡಿ ಮಜಲು, ವಾದ್ಯ ಮೇಳಗಳು, ಕುದುರೆ ಮೇಲೆ ಕುಳಿತ ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣನ ವೇಷಧಾರಿಗಳು ಮೆರವಣಿಗೆಗೆ ವಿಶೇಷ ಕಳೆ ತಂದಿದ್ದರು. ಕಾದರವಳ್ಳಿ ಪಾಲಾಕ್ಷ ದೇವರು, ಕಿಲ್ಲಾ ತೋರಗಲ್ಲದ ಶಿವಾಚಾರ್ಯ ಸ್ವಾಮಿಗಳು, ನಿಚ್ಚಣಕಿ, ಕೆಳದಿ, ನರೇಗಲ್, ಕಬ್ಬೂರ, ಸಂಪಗಾಂವ ಶ್ರೀಗಳು, ಉತ್ಸವದ ಪ್ರಮುಖ ರೂವಾರಿ ಹುಕ್ಕೇರಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಭಾಗವಹಿಸಿದ್ದರು.

ವಿಜಯ ಕರ್ನಾಟಕ, 14–4–2005

13–4–2005 ರಿಂದ 15–4–2005ರವರೆವಿಗೆ ಶ್ರೀ ಪಂಚಾಚಾರ್ಯ ಯುಗಮಾನೋತ್ಸವವು ರಾಯಚೂರಿನಲ್ಲಿ ನಡೆಯಿತು.



ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ನಿಮಿತ್ತ ಬುಧವಾರ ರಾಯಚೂರಿನ ಮುಖ್ಯ ಬೀದಿಯಲ್ಲಿ ಪೂರ್ಣಕುಂಭ ಮೇಳದೊಂದಿಗೆ ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ವಿಜೃಂಭಣೆಯಿಂದ ಜರುಗಿತ್ತು.

ರಾಯಚೂರಿನಲ್ಲಿ ಪಂಚಾಚಾರ್ಯ ಯುಗಮಾನೋತ್ಸವ ಧಾರ್ಮಿಕ ಮತ್ತು ಸಾಹಿತ್ಯಕ ಸಮ್ಮೇಳನವು ಪಂಚಾಚಾರ್ಯರ ಸಾನ್ನಿಧ್ಯದಲ್ಲಿ ನಡೆಯಿತು. ಸಮ್ಮೇಳನ ಸರ್ವಾಧ್ಯಕ್ಷರಾಗಿ ಡಾ॥ ಮಲ್ಲಿಕಾರ್ಜುನ ಪರಡ್ಡಿಯವರನ್ನು ಆಯ್ಕೆ ಮಾಡಲಾಗಿತ್ತು.



ದಾವಣಗೆರೆ ಜಿಲ್ಲೆ ಹೊನ್ನಾಳಿಯಲ್ಲಿ ಭಾನುವಾರ ಆರಂಭವಾದ ಯುಗಮಾನೋತ್ಸವ ಹಾಗೂ ಜನಜಾಗೃತಿ ಧರ್ಮಸಮ್ಮೇಳನದ ಪ್ರಯುಕ್ತ ಪಂಚಾಚಾರ್ಯರಾದ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ, ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ, ಜಗದ್ಗುರು ರಾವಲ್ ಭೀಮಾಶಂಕರಲಿಂಗ, ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಹಾಗೂ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಉತ್ಸವ ನಡೆಯಿತು.

ಪ್ರಜಾವಾಣಿ, 3–4–2005

2–4–2006 ರಿಂದ 4–4–2006 ಮೂರು ದಿನಗಳ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವವನ್ನು ಹೊನ್ನಾಳಿಯಲ್ಲಿ ಏರ್ಪಡಿಸಲಾಗಿತ್ತು. ಸಮ್ಮೇಳನಾಧ್ಯಕ್ಷರಾಗಿ ಶಾಸನ ತಜ್ಞ ಸಂಶೋಧಕರೂ ಆದ ಡಾ॥ ಎಂ.ಜಿ. ನಾಗರಾಜ್ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು.

ಇಳಕಲ್ಲ : ವೈಭವದ ಯುಗಮಾನೋತ್ಸವ

ವಿಜಯ ಕರ್ನಾಟಕ, 24–3–2007

23–3–07 ರಿಂದ 25–3–07ರವರೆಗೆ ಮೂರು ದಿವಸ ಇಳಕಲ್ಲದಲ್ಲಿ ಶ್ರೀ ಪಂಚಾಚಾರ್ಯ ಯುಗಮಾನೋತ್ಸವ ಕಾರ್ಯಕ್ರಮ ನಡೆಯಿತು.



ಇಳಕಲ್ಲದಲ್ಲಿ ಯುಗಮಾನೋತ್ಸವದ ಅಂಗವಾಗಿ ಶುಕ್ರವಾರ ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿತು.



ಇಳಕಲ್ಲದಲ್ಲಿ ನಡೆದ ಪಂಚಾಚಾರ್ಯರ ಯುಗಮಾನೋತ್ಸವ ಸಮಾರಂಭದ ಉದ್ಘಾಟನಾ ದೃಶ್ಯ. ಪಂಚಪೀಠಗಳ ಜಗದ್ಗುರುಗಳು ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

ಯುಗಮಾನೋತ್ಸವ ಸರ್ವಾಧ್ಯಕ್ಷ ಡಾ.ಸಾ.ಶಿ. ಮರುಳಯ್ಯ ಮಾತನಾಡುತ್ತಾ, ವೀರಶೈವಕ್ಕೊಂದು ಇತಿಹಾಸವಿದೆ, ಅಧ್ಯಯನ ಇಲ್ಲ. ಅದರದೇ ಆದ ಒಂದು ಸಂಹಿತೆ ಇದೆ, ಆಚರಣೆ ವ್ಯವಸ್ಥೆ ಇಲ್ಲ. ಸಂಸ್ಕೃತಿ ಇದೆ, ಸಂವಹನ ಸಾಧನಗಳು ಸಾಕಷ್ಟು ಇಲ್ಲ, ದರ್ಶನವಿದೆ, ಮಾರ್ಗದರ್ಶನ ಇಲ್ಲ. ಪರಂಪರೆಯಿದೆ, ಪರಿಣಾಮವಿಲ್ಲ. ಅನುಭಾವ ಇದೆ, ಆತ್ಮಜ್ಞಾನ ಇಲ್ಲ. ಸಿದ್ಧಾಂತವಿದೆ, ಸಾಧನೆ ಇಲ್ಲ. ಸಮಾಜವಿದೆ, ಸಂಘಟನೆ ಇಲ್ಲ ಎಂದು ಹೇಳಿದರು.

11–4–2008 ರಿಂದ **13–4–2008**ರವರೆವಿಗೆ ವಿಜಾಪುರದಲ್ಲಿ ಶ್ರೀ ಪಂಚಾಚಾರ್ಯರ ಯುಗಮಾನೋತ್ಸವ ಕಾರ್ಯಕ್ರಮ ನಡೆಯಿತು. ಪ್ರೊ.ಎನ್. ಬಸವಾರಾಧ್ಯರು ಯುಗಮಾನೋತ್ಸರದ ಸರ್ವಾಧ್ಯಕ್ಷರಾಗಿ ಭಾಗಿಯಾಗಿದ್ದರು.



ಪಂಚಪೀಠಾಧೀಶರು ವಿಜಾಪುರದ ಬಿಎಲ್‌ಡಿಇ ಕಾಲೇಜಿನ ಆವರಣದಲ್ಲಿ ನಡೆದಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಹಾಗೂ ಸರ್ವಧರ್ಮ ಸಮ್ಮೇಳನದಲ್ಲಿ ಪಂಚಪೀಠಾಧೀಶರು ಆಶೀರ್ವಚನ ನೀಡಿದರು.



ವಿಜಾಪುರದಲ್ಲಿ ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಉತ್ಸವ ಅಂಗವಾಗಿ 108 ಸುಮಂಗಲೆಯರಿಂದ ಕುಂಭಮೇಳ ನಡೆಯಿತು.



ಅಡ್ಡಪಲ್ಲಕ್ಕಿ ಉತ್ಸವದ ವೇಳೆ ಜಾನಪದ ಕಲಾತಂಡ ಕರಡಿ ಮಜಲು ಪ್ರದರ್ಶನ ನೀಡಿತು.

ವೀರಶೈವ ಸಾಹಿತ್ಯಕ್ಕೆ ಆಗಮಗಳೇ ಆಧಾರ : ಕಾಶಿ ಜಗದ್ಗುರುಗಳು



ವಿಜಾಪುರದಲ್ಲಿ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಅಂಗವಾಗಿ ರವಿವಾರ ನಡೆದ ವೀರಶೈವ ಸಾಹಿತ್ಯ ಸಮ್ಮೇಳನದ ಸಾನ್ನಿಧ್ಯ ವಹಿಸಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಆಶೀರ್ವಚನ ನೀಡಿದರು. ಸಮ್ಮೇಳನದ ಸರ್ವಾಧ್ಯಕ್ಷ ಎನ್. ಬಸವಾರಾಧ್ಯ, ಡಾ. ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು, ಡಾ. ಸಿದ್ಧರಾಮ ಶಿವಾಚಾರ್ಯರು ಉಪಸ್ಥಿತರಿದ್ದರು.



ಪಂಚಾಚಾರ್ಯರ ಯುಗಮಾನೋತ್ಸವ 31ರಿಂದ

31–3–2009ರಿಂದ 3–4–2009ರವರೆವಿಗೆ ಪುಣೆ ನಗರದ ಪಿಂಪರಿ ಚಿಂಚವಾಡದಲ್ಲಿ ಪಂಚಾಚಾರ್ಯರ ಯುಗಮಾನೋತ್ಸವ ಪಂಚಾಚಾರ್ಯರ ಸಾನ್ನಿಧ್ಯದಲ್ಲಿ ಬಹು ಅದ್ದೂರಿಯಿಂದ ನಡೆಯಿತು. ಪುಣೆ ನಗರದ ಮಹಾರಾಷ್ಟ್ರ ವೀರಶೈವ ಮಹಾಸಭೆ, ವೀರಶೈವ ಸಾಂಸ್ಕೃತಿಕ ಸೇವಾ ಮಹಾಮಂಡಳ, ವೀರಶೈವ ಶಿವ ಸಂಘಟನಾ, ಲೋನಾವಳ ವೀರಶೈವ ಸಮಾಜ, ತಳೆಗಾಂವ ವೀರಶೈವ ಮಹೇಶ್ವರ ಮಂಡಳ್, ಶ್ರೀ ಕಾಶಿ ವಿಶ್ವೇಶ್ವರ ಶ್ರೀ ಜಗದ್ಗುರು ವಿಶ್ವಾರಾಧ್ಯ ಚಾರಿಟೇಬಲ್ ಟ್ರಸ್ಟ್, ವೀರಶೈವ ಶಾಳಿ ಸಮಾಜ್, ವೀರಶೈವ ತಿರಾಳಿ ಸಮಾಜ, ವೀರಶೈವ ರೆಡ್ಡಿ ಸಮಾಜ, ವಿಶ್ವೇಶ್ವರ ಸಹಕಾರಿ ಬ್ಯಾಂಕ್ ಮುಂತಾದ 25ಕ್ಕೂ ಹೆಚ್ಚು ವಿವಿಧ ವೀರಶೈವ ಸಂಘಟನೆಗಳು ಭಾಗಿಯಾಗಿದ್ದರು.



ಹುಬ್ಬಳ್ಳಿಯಲ್ಲಿ ಶ್ರೀ ಜಗದ್ಗುರು ಯುಗಮಾನೋತ್ಸವ

9–4–2010 : ಹುಬ್ಬಳ್ಳಿಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ ನಡೆಯಿತು. ಈ ಸಂದರ್ಭದಲ್ಲಿ ಕಾಶೀ ಜಗದ್ಗುರುಗಳವರ ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ ಬೃಹತ್‌ಗ್ರಂಥದ 2 ಸಂಪುಟಗಳನ್ನು ಆನೆ ಅಂಬಾರಿ ಮೇಲೆ ಇಟ್ಟು ಮೆರವಣಿಗೆ ಮಾಡಲಾಯಿತು.

ಪಂಚಪೀಠದ ಜಗದ್ಗುರುಗಳ ಪಟ್ಟಾಭಿಷೇಕ ಮಹೋತ್ಸವದಲ್ಲಿ ಕಾಶೀ ಜಗದ್ಗುರುಗಳು

ದ್ವಾದಶ ವರ್ಷದ ಶ್ರೀ ಜಗದ್ಗುರು ಲಿಂ. ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಸಂಸ್ಮರಣೋತ್ಸವ ಹಾಗೂ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಪೀಠಾರೋಹಣದ ದ್ವಾದಶ ವಾರ್ಷಿಕೋತ್ಸವ

ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಕಾಶೀ ಜಂಗಮವಾಡಿ ಮಠದಲ್ಲಿ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿ–ಅದು ಬೃಹತ್ ಪ್ರಮಾಣದ್ದಾಗಿರುತ್ತದೆ. ದೇಶಾದ್ಯಂತ ಸಂಚರಿಸಿ ಎಲ್ಲಾ ರಾಜ್ಯಗಳಲ್ಲೂ ಆಶೀರ್ವಚನ ನೀಡಿ, ಅನೇಕ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಬಂದಿರುವ ಜಗದ್ಗುರುಗಳಿಗೆ ಅಪಾರ ಸಂಖ್ಯೆಯಲ್ಲಿ ಭಕ್ತರಿದ್ದಾರೆ. ಅವರೆಲ್ಲಾ ಒಮ್ಮೆಗೇ ಕಾಶಿಗೆ ಬಂದರೆ ವ್ಯವಸ್ಥೆ ಮಾಡಲು ಕಷ್ಟವಾಗುತ್ತದೆ. ಇದೆಲ್ಲವನ್ನು ಗಮನದಲ್ಲಿರಿಸಿಕೊಂಡು ದ್ವಾದಶಪೀಠಾರೋಹಣ ಹಾಗೂ ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಸಂಸ್ಮರಣೋತ್ಸವ ಕಾರ್ಯಕ್ರಮವನ್ನು ಈ ಭಾರಿ 48 ದಿನಗಳ ಕಾಲ ಆಚರಿಸುವ ಏರ್ಪಾಡು ಮಾಡಿದರು.



ಈ 48 ದಿನಗಳಲ್ಲಿ ಪ್ರತೀ ದಿನ ಪೀಠದಲ್ಲಿ ವಿಶ್ವಶಾಂತಿಗಾಗಿ, ಅತಿರುದ್ರಮಹಾಭಿಷೇಕ, ಬಿಲ್ವಾರ್ಚನೆ, ಕೋಟಿ ದೀಪೋತ್ಸವ, ಶಿವನಾಮ ಸಪ್ತಾಹ, ಪರಮರಹಸ್ಯ ಪಾರಾಯಣ, ಪಾರಮೇಶ್ವರದ ಮೇಲೆ ವಿದ್ವತ್‌ಸಭೆ, ಶಿವಾಚಾರ್ಯರ ಸಮಾವೇಶ ಮತ್ತು ಪಂಚಾಚಾರ್ಯರ ಮಹಾ ಸಮ್ಮೇಳನಗಳನ್ನು ಏರ್ಪಡಿಸಿದ್ದರು. ಈ ಎಲ್ಲಾ ಧಾರ್ಮಿಕ ಪೂಜಾ ವಿಧಿಗಳಲ್ಲಿ ಭಾಗವಹಿಸಲು ಸರ್ವ ಧರ್ಮೀಯರಿಗೂ ಅವಕಾಶ ಕಲ್ಪಿಸಲಾಗಿತ್ತು.

19–10–2001 ರಿಂದ 5–12–2001ರವರೆಗೆ ಮೇಲಿನ ಎಲ್ಲಾ ಪೂಜಾಕಾರ್ಯಗಳು 48 ದಿನಗಳ ಪರ್ಯಂತ ಹಮ್ಮಿಕೊಳ್ಳಲಾಗಿತ್ತು.

ಅತಿರುದ್ರ ದುಃಖ ದಾರಿದ್ರ್ಯಗಳನ್ನು ದೂರ ಮಾಡುವವನೇ ರುದ್ರನು. ವೇದದಲ್ಲಿ ಬರುವ ರುದ್ರನ ಸ್ತುತಿಪರ ಮಂತ್ರಗಳಿಗೆ ಶ್ರೀರುದ್ರವೆನ್ನಲಾಗಿದೆ. ನಮಕ, ಚಮಕ ಮತ್ತು ಪುರುಷಸೂಕ್ತ ರೂಪವಾದ ಶ್ರೀರುದ್ರವನ್ನು ಆವೃತ್ತಿ ಮಾಡುವುದಕ್ಕೆ ಜಪಯಜ್ಞ ಎಂಬುದಾಗಿ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿಸಿರುವುದೆಂದು ಜಗದ್ಗುರುಗಳು ತಿಳಿಸಿದ್ದರು. ಈ ರುದ್ರದ ಆವೃತ್ತಿ ರೂಪವಾದ ಜಪವು ಏಕವರ್ತನ, ಏಕಾದಶಾವರ್ತನ (ಏಕ ವಿಂಶತ್ಯಧಿಕ ಶತಾವರ್ತನ) ಲಘುರುದ್ರ, ಮಹಾರುದ್ರ ಮತ್ತು ಅತಿರುದ್ರವೆಂಬ ಪ್ರಭೇದಗಳನ್ನು ಮಾಡಲಾಗಿದೆ. ಈ ರುದ್ರವನ್ನು ಒಂದು ಸಾರಿ ಆವೃತ್ತಿ ಮಾಡಿದರೆ ಅದಕ್ಕೆ ಏಕಾವರ್ತನ, 11ಸು ಆವರ್ತನ ಮಾಡಿದರೆ ಏಕಾದಶಾವರ್ತವೆಂತಲೂ, 121 ಸಾರಿ ಆವರ್ತನ ಮಾಡುವುದಕ್ಕೆ ಲಘುರುದ್ರ ವೆಂತಲೂ, 1331 ಸಾರಿ ಆವರ್ತನ ಮಾಡುವುದಕ್ಕೆ ಮಹಾರುದ್ರವೆಂತಲೂ, 14641 ಸಾರಿ ಆವರ್ತನ ಮಾಡುವುದಕ್ಕೆ ಅತಿರುದ್ರವೆಂತಲೂ ಕರೆಯಲಾಗಿದೆ.

ಇಷ್ಟಲಿಂಗ ಅಥವಾ ಮಂದಿರಗಳಲ್ಲಿ ಸ್ಥಾಪಿಸಲಾಗಿರುವ ಶಿವಲಿಂಗದ ಮೇಲೆ ಅಖಂಡ ಜಲಧಾರೆಯನೊರೆದು ತಮಗೆ ಅನುಕೂಲವಾದ ರೂಪದಲ್ಲಿ ಏಕವರ್ತನೆಯಿಂದ ಹಿಡಿದು ಅತಿರುದ್ರದವರೆಗೆ ಅಭಿಷೇಕವನ್ನು ಅಲ್ಲಲ್ಲಿ ಮಾಡುವ ಪದ್ಧತಿ ಇದೆ. ಹೆಚ್ಚು ಹೆಚ್ಚು ಶ್ರೀರುದ್ರ ಪಠಣ ಮಾಡುವುದರಿಂದ ಮನುಷ್ಯನ ದುಃಖ ದಾರಿದ್ರ್ಯಗಳು ದೂರವಾಗುವುವು ಎಂಬ ನಂಬಿಕೆ ಬಹಳವಾಗಿದೆ. ಸಾಮೂಹಿಕವಾಗಿ ಮಾಡುವ ಮಂತ್ರಪಠಣದಿಂದುಂಟಾಗುವ ಧ್ವನಿತರಂಗದಿಂದ ಪರಿಸರದಲ್ಲಿ ಶುದ್ಧತೆ ಹಾಗೂ ಸಾತ್ವಿಕತೆ ಒಡಮೂಡುವುದೆಂಬುದು ವೈಜ್ಞಾನಿಕವಾಗಿ ಸತ್ಯವಾಗಿದೆ. ಈ ಎಲ್ಲಾ ಪರಿಣಾಮ ಉಂಟಾಗುವ ಕಾರಣ ಕಾಶೀಪೀಠದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಲಿಂಗೋದ್ಭವ ಮಹಾಮೂರ್ತಿಗೆ ಹಾಗೂ ಪೀಠದಲ್ಲೇ ಸ್ಥಾಪಿಸಲ್ಪಟ್ಟ ಕಾಶೀ ವಿಶ್ವನಾಥ ಲಿಂಗಕ್ಕೆ ಅತಿರುದ್ರ ಅಭಿಷೇಕವನ್ನು ಯಶಸ್ವಿಯಾಗಿ ಮಾಡಿ ಮುಗಿಸಿದವರು–ಜಗದ್ಗುರುಗಳು.

ಕೋಟಿ ದೀಪೋತ್ಸವ ದ ಬಗ್ಗೆಯೂ ಜಗದ್ಗುರುಗಳು ಅನೇಕ ವಿಚಾರಗಳನ್ನು ತಿಳಿಸಿದರು. ದೀಪವು ಜ್ಞಾನದ ಸಂಕೇತ, ಪರಿಸರದಲ್ಲಿ ಮೂಡಿಬರುವ ಕತ್ತಲನ್ನು ದೂರಗೊಳಿಸುವ ಸಾಮರ್ಥ್ಯ ದೀಪಕ್ಕಿದೆ. ನಾವು ದೇವರ ಮುಂದೆ ಹಚ್ಚುವ ಎಣ್ಣೆ, ತುಪ್ಪ ಹಾಗೂ ಕರ್ಪೂರದ ದೀಪಗಳಿಂದ ಪರಿಸರವು ನಿರ್ಮಲವಾಗುವುದೆಂದು ಇಂದು ವೈಜ್ಞಾನಿಕವಾಗಿ ಒಪ್ಪಿಕೊಳ್ಳಲಾಗಿದೆ. ಆದರೆ ಸನಾತನ ಕಾಲದಿಂದಲೂ ಅನೇಕ ಯಜ್ಞಯಾಗಾದಿಗಳನ್ನು ಮಾಡುವುದರ ಜೊತೆಗೆ ದೀಪೋತ್ಸವಗಳನ್ನು ವಿಜ್ಞಾನದ ಲಾಭಕ್ಕಾಗಿ ಮಾಡುತ್ತಾ ಬಂದಿರುತ್ತಾರೆ. ಅದರಲ್ಲೂ ವಿಶೇಷವಾಗಿ ಆಶ್ವಯುಜ, ಕಾರ್ತಿಕ ಮಾಸಗಳಲ್ಲಿ ಋತು ಪರಿವರ್ತನೆಯ ಸಂಧಿಕಾಲಗಳಲ್ಲಿ ಮನುಷ್ಯನ ಆರೋಗ್ಯಕ್ಕೆ ಅಹಿತಕರವಾದ ಅನೇಕ ಕ್ರಿಮಿಕೀಟಗಳು ಉತ್ಪನ್ನವಾಗುವುದರಿಂದ, ಈ ದೀಪೋತ್ಸವಗಳಿಂದ ಅವುಗಳ ಮೇಲೆ ನಿಯಂತ್ರಣವನ್ನು ಮಾಡಬಹುದಾಗಿದೆ. ಈ ಕಾರಣಗಳಿಂದ ಕಾಶೀಪೀಠದಲ್ಲಿ ಕೋಟಿ ದೀಪೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.

ಮಹಾರಾಷ್ಟ್ರದ ಸೊಲ್ಲಾಪುರದಿಂದ ಉತ್ತರ ಕರ್ನಾಟಕದ ಭಕ್ತಾದಿಗಳು ಈ ಎಲ್ಲಾ ಕಾರ್ಯಗಳಲ್ಲಿ ನಿರಂತರ ಸೇವೆ ಮಾಡುತ್ತಿದ್ದರು. ಒಂದೆರಡು ಮೂರು ಕಡೆ ನೂರಾರು ಮಹಿಳೆಯರು ಬಿಲ್ವ ಪತ್ರೆಗಳನ್ನು ಶೋಧಿಸುತ್ತಿದ್ದರೆ, ಮತ್ತೊಂದು ಕಡೆ ರಾತ್ರಿ ಬೆಳಗಬೇಕಾದ ದೀಪಗಳಿಗೆ ಬತ್ತಿ ಹಚ್ಚಿ ಎಣ್ಣೆ ಹಾಕಿ ಇಡುತ್ತಿದ್ದರು. ಕಾರ್ತಿಕ ಮಾಸದಲ್ಲಿ ಸಂಜೆ ಬೇಗ ಕತ್ತಲಾವರಿಸುತ್ತದೆ. ಪೂರ್ಣ ಕತ್ತಲಾದ ಮೇಲೆ ಏಕಕಾಲಕ್ಕೆ ಎಣ್ಣೆ ದೀಪಗಳನ್ನು ಹಚ್ಚಿದಾಗ ಆ ಪ್ರಶಾಂತ ವಾತಾವರಣದಲ್ಲಿ ತಂಪಾಗಿ ಬೆಳಗುವ ದೀಪದ ಬೆಳಕು ಮನಸ್ಸಿಗೆ ಆಹ್ಲಾದಕರವಾಗಿರುತ್ತಿತ್ತು. ಈ ಬೆಳಕಿನಲ್ಲೇ ರಾತ್ರಿಯ ಆಶೀರ್ವಚನ ನಡೆಸುತ್ತಿದ್ದರು.

19–10–2001 ರಂದು ಬೆಳಗ್ಗೆ 6ಗಂಟೆಯಿಂದ 10ಗಂಟೆಯವರೆಗೆ ಕಾಶೀ ವಿಶ್ವನಾಥಲಿಂಗ, ಶ್ರೀ ಜಗದ್ಗುರು ವಿಶ್ವಾರಾಧ್ಯ ಲಿಂಗೋದ್ಭವಮೂರ್ತಿಗೆ ಮತ್ತು ಲಿಂಗೈಕ್ಯ ಜಗದ್ಗುರುಗಳ ಗದ್ದುಗೆಗೆ ಲಘು ರುದ್ರಾಭಿಷೇಕ, ಬಿಲ್ವಾರ್ಚನೆ ಮತ್ತು ಮಹಾಮಂಗಳಾರತಿ ನಡೆದು ಮಧ್ಯಾಹ್ನ 12 ಘಂಟೆಗೆ ಮಹಾ ಪ್ರಸಾದ ನೀಡಲಾಯಿತು.

1–12–2001 ರಿಂದ 3–12–2001ರವರೆಗೆ ಬೆಳಗ್ಗೆ 10ಗಂಟೆಯಿಂದ ಮಧ್ಯಾಹ್ನ 2ರವರೆಗೆ ಮತ್ತು 3ರಿಂದ ಸಂಜೆ 6ರವರೆಗೆ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಪಾರಮೇಶ್ವರಾಗಮದ ವಿಚಾರ ಸಂಕಿರಣದಲ್ಲಿ 30ಕ್ಕೂ ಹೆಚ್ಚು ವಿದ್ವಾಂಸರು ರಾಷ್ಟ್ರದ ವಿವಿಧ ರಾಜ್ಯಗಳಿಂದ ಆಗಮಿಸಿ ಸಂಸ್ಕೃತ, ಹಿಂದಿ, ಮತ್ತು ಇಂಗ್ಲಿಷ್‌ನಲ್ಲಿ ಪ್ರಬಂಧ ಮಂಡಿಸಿದ್ದರು. ಈ ಕಾರ್ಯಕ್ರಮವನ್ನು ಭಾರತ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಾಲಯದ ಅಧೀನದಲ್ಲಿರುವ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಸಹಯೋಗದೊಂದಿಗೆ ಏರ್ಪಡಿಸಲಾಗಿತ್ತು.

2–12–2001ರಂದು ಶ್ರೀಮತ್ ಕೇದಾರ ಹಾಗೂ ಶ್ರೀಮತ್ ಕಾಶೀ ಜಗದ್ಗುರುದ್ವಯರ ಸಾನ್ನಿಧ್ಯದಲ್ಲಿ 'ಧರ್ಮಾಚರಣೆ ಮತ್ತು ಮಹಿಳೆ' ವಿಷಯ ಕುರಿತು ಶ್ರೀಮತಿ ಉಮಾದೇವಿ ಉಮಾಶಂಕರ್, ಬೆಂಗಳೂರು, ಅವರು ಮಾತನಾಡಿದರು. ಅಧ್ಯಕ್ಷತೆ ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ ಅವರೂ, ಉದ್ಘಾಟಕರಾಗಿ ಶ್ರೀಮತಿ ರಾಣಿ ಸತೀಶ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಆಗಮಿಸಿದ್ದರು.

3–12–2001ರಂದು ಕೇದಾರ ಮತ್ತು ಕಾಶೀ ಜಗದ್ಗುರುದ್ವಯರ ಸಾನ್ನಿಧ್ಯದಲ್ಲಿ "ಧರ್ಮ ಮತ್ತು ರಾಜಕೀಯ" ವಿಷಯ ಕುರಿತು ಷ.ಬ್ರ. ಶ್ರೀ ಮಲಯ ಶಾಂತಮುನಿ ಶಿವಾಚಾರ್ಯರು ಮೇಲಣಗವಿಮಠ, ಶಿವಗಂಗೆ ಕರ್ನಾಟಕ ಮಾತನಾಡಿದರು. ಅಧ್ಯಕ್ಷತೆಯನ್ನು ಶ್ರೀ ಎಂ.ಪಿ.ಪ್ರಕಾಶ್ ಅವರು ವಹಿಸಿದ್ದರು. ಉದ್ಘಾಟಕರು ಶ್ರೀ ಸುಶೀಲ್ ಕುಮಾರ್ ಶಿಂಧೆ, ಸಂಸದರು ಸೊಲ್ಲಾಪುರದಿಂದ ಆಗಮಿಸಿದ್ದರು.

4–12–2001ರಂದು ಶ್ರೀಜಗದ್ಗುರು ಪಂಚಪೀಠಾಧೀಶ್ವರರ ಸಾನ್ನಿಧ್ಯದಲ್ಲಿ ಶಿವಾಚಾರ್ಯರ ಸಮಾವೇಶ ಬಹು ಅರ್ಥಪೂರ್ಣವಾಗಿ ನಡೆಯಿತು.' ಸಮಾಜದ ಸರ್ವಾಂಗೀಣ ಸಂವರ್ಧನೆಯಲ್ಲಿ ಶಿವಾಚಾರ್ಯರ ಪಾತ್ರ, ಎಂಬ ವಿಷಯ ಕುರಿತು ಅನೇಕ ಶಿವಾಚಾರ್ಯರು ತಮ್ಮ ಸಾಧನೆಗಳನ್ನು ವಿವರಿಸಿದರು. ಸಂಜೆ– 'ವಿಶ್ವಶಾಂತಿಗಾಗಿ ಧರ್ಮ' ಕುರಿತು ಶಿವಾಚಾರ್ಯರು ಭಾಗವಹಿಸಿ ಈ ವಿಷಯ ಕುರಿತು ಮಾತನಾಡಿದರು.

ಮೇಲಿನ ಎಲ್ಲಾ ವಿಷಯಗಳನ್ನು ಕಾಶೀ ಜಗದ್ಗುರುಗಳೇ ಸ್ವತಃ ಆಲೋಚಿಸಿ ಆರಿಸಿದ್ದರು.

5–12–2001ರ ಬುಧವಾರ ಪ್ರಾತಃಕಾಲ 4ಗಂಟೆಗೆ ಗಂಗಾಪೂಜೆಯಿಂದ ಪೀಠಾರೋಹಣ ದ್ವಾದಶ ವಾರ್ಷಿಕ ಮಹೋತ್ಸವವನ್ನು ಆರಂಭಿಸಲಾಯಿತು.

ಕಾಶೀ ಜಗದ್ಗುರುಗಳ ಸಂಕಲ್ಪ ಸಮಾಜದ ಉನ್ನತಿಗಾಗಿ ಶ್ರಮಿಸುವ ಮಹದಾಕಾಂಕ್ಷೆ

ಇತಿಹಾಸ ಪ್ರಸಿದ್ಧ ಶ್ರೀಕ್ಷೇತ್ರ ಕಾಶಿಯಲ್ಲಿ ವಿರಾಜಮಾನವಾದ ವೀರಶೈವ ಪಂಚಪೀಠಗಳಲ್ಲಿ ಒಂದಾದ ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನದ ಶ್ರೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ಸಮಾಜದ ಉನ್ನತಿಗಾಗಿ ಮತ್ತು ಪ್ರಗತಿಗಾಗಿ ನಿರಂತರ ಶ್ರಮಿಸುವ ಸತ್ಯಸಂಕಲ್ಪವನ್ನು ಕೈಕೊಂಡರು.

ಅವರು ತಮ್ಮ ಶ್ರೀಪೀಠದಲ್ಲಿ ಜರುಗಿದ ದ್ವಾದಶ ಪೀಠಾರೋಹಣ ಪವಿತ್ರ ಸಮಾರಂಭದಲ್ಲಿ ಆಶೀರ್ವಚನ ನೀಡುತ್ತಿದ್ದರು. ವೀರಶೈವ ಧರ್ಮದ ಪ್ರಾಚೀನತೆ ಮತ್ತು ಇತಿಹಾಸ ಅರಿಯದ ಕೆಲವರು ಆಗಮಗಳನ್ನು ಅಲ್ಲಗಳೆಯುತ್ತಿರುವದಕ್ಕೆ ವಿಷಾದ ವ್ಯಕ್ತಪಡಿಸಿದ ಅವರು ಜನಜಾಗೃತಿಗಾಗಿ ಧರ್ಮಪ್ರಜ್ಞೆಗಾಗಿ ಅಲ್ಲಲ್ಲಿ ಶಿವಾಗಮಗಳ ಶಿಬಿರಗಳನ್ನು ಏರ್ಪಡಿಸುವ ಇಂಗಿತವನ್ನು ಕಾಶೀ ಜಗದ್ಗುರುಗಳು ವ್ಯಕ್ತಪಡಿಸಿದರು. ಅಕ್ಟೋಬರ್ 19ರಿಂದ ನಡೆದುಕೊಂಡು ಬಂದ ಜ್ಞಾನಯಜ್ಞ ಶ್ರೀ ಕೇದಾರ ಮತ್ತು ಶ್ರೀಶೈಲ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಡಿಸೆಂಬರ್ 5ರಂದು ಮಹಾಮಂಗಲ ಗೊಂಡಿತು.

ಆ ಸಮಾರಂಭದ ಸಾನ್ನಿಧ್ಯ ವಹಿಸಿದ ಬಾಳೆ ಹೊನ್ನೂರಿನ ಶ್ರೀ ರಂಭಾಪುರೀ ಜಗದ್ಗುರುಗಳು ಶಾಂತಿ ನೆಮ್ಮದಿಯ ಬದುಕಿಗೆ ಧರ್ಮಾಚರಣೆ ಅಗತ್ಯ ಎಂದ ಅವರು ಹನ್ನೆರಡು ವರುಷಗಳ ಅವಧಿಯಲ್ಲಿ ಶ್ರೀ ಕಾಶೀ ಜಗದ್ಗುರುಗಳು ಪೀಠಕ್ಕಾಗಿ ಮಾಡಿದ ಸೇವೆ ಹಾಗೂ ಸಾಹಿತ್ಯ, ಶಿವಾಗಮಗಳ ಸೇವೆಯನ್ನು ಪ್ರಶಂಶಿಸಿದರು. ಉಜ್ಜಯಿನಿ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಕಾಶೀ ಜಗದ್ಗುರುಗಳು ಶ್ರೀ ಪೀಠಕ್ಕೆ ಕಾಯಕಲ್ಪ ಕಲ್ಪಿಸಿದ ಕೀರ್ತಿ ಸಲ್ಲುತ್ತಿದೆ ಎಂದರು. ಶ್ರೀ ಕೇದಾರ ಜಗದ್ಗುರುಗಳು ಮಾತನಾಡಿ, ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಕ್ರಿಯಾಕರ್ತೃತ್ವ ಶಕ್ತಿ ಅಮೋಘ ವಾದದ್ದು. ಅವರಿಂದ ಪೀಠದ ಕೀರ್ತಿ ಬೆಳೆಯಿತೆಂದು ಹರುಷ ವ್ಯಕ್ತಪಡಿಸಿದರು. ಶ್ರೀಶೈಲ ಜಗದ್ಗುರುಗಳು ನಾಡಿನಾದ್ಯಂತ ಸಂಚರಿಸಿ ಜನಜಾಗೃತಿಯನ್ನು ಮತ್ತು ಧರ್ಮ ಜಾಗೃತಿ ಭಾವನೆ ಬೆಳೆಸುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿ ಇವರಿಂದ ನಾಡಿಗೆ–ನಾಡಿನ ಜನ ಸಮು ದಾಯಕ್ಕೆ ಇನ್ನೂ ಹೆಚ್ಚಿನ ಕೊಡುಗೆ ದೊರೆಯಲೆಂದು ಆಶಿಸಿದರು. ದ್ವಾದಶ ಪೀಠಾರೋಹಣ ನಿಮಿತ್ಯ ಶ್ರೀ ಕಾಶೀ ಜಗದ್ಗುರುಗಳವರಿಗೆ 'ಸುವರ್ಣ ಕಿರೀಟ ಧರಿಸಿ ಸವಾನ ಕಾರ್ಯಕ್ರಮಗಳಲ್ಲಿ ನಾಡಿನ ಶಿವಾಚಾರ್ಯರು, ಕವಿಗಳು, ಕಲಾವಿದರು, ಸಾಹಿತಿಗಳು ಮತ್ತು ರಾಜಕೀಯ ಧುರೀಣರು ಪಾಲ್ಗೊಂಡಿದ್ದರಲ್ಲದೇ ಕರ್ನಾಟಕ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ರಾಣಿ ಸತೀಶ್, ಮಾಜಿ ಮಂತ್ರಿ ಎಂ.ಎಸ್. ಪಾಟೀಲ ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಕಾಶೀಪೀಠದ ಲಿಂ. ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯ ಭಗವತ್ಪಾದರು 12ನೇ ವರ್ಷದ ಪುಣ್ಯ ಸಂಸ್ಮರಣೆಯನ್ನು ವಿಶೇಷವಾಗಿ ಆಚರಿಸ ಲಾಯಿತು. ನಿತ್ಯವೂ ದೀಪೋತ್ಸವ, ಬಿಲ್ವಾರ್ಚನೆ, ಅತೀ ರುದ್ರಾಭಿಷೇಕ ಮತ್ತು ಪಾರಮೇಶ್ವರಾಗಮ ವಿಚಾರ ಗೋಷ್ಠಿ, ರುದ್ರಹೋಮ ಹಾಗೂ ಶಿವಾಚಾರ್ಯ ಸಮಾವೇಶ ಸಮಾರಂಭಗಳು ಅರ್ಥಪೂರ್ಣವಾಗಿ ಜರುಗಿದವು.

ಈ ಅಭೂತಪೂರ್ವ ಸಮಾರಂಭದಲ್ಲಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ಮಧ್ಯಪ್ರದೇಶ, ಉತ್ತರಪ್ರದೇಶ ಉತ್ತರಾಂಚಲ ರಾಜ್ಯಗಳಿಂದ ಅಪಾರಸಂಖ್ಯೆಯಲ್ಲಿ ಭಕ್ತಾದಿಗಳು ಸಮ್ಮಿಲಿತರಾಗಿ ಶ್ರೀ ಜಗದ್ಗುರು ಪಂಚ ಪೀಠಾಧೀಶ್ವರರ ಕೃಪಾಶೀರ್ವಾದಕ್ಕೆ ಪಾತ್ರರಾದರು.





ಕಾಶೀ ಜಗದ್ಗುರುಗಳು ಪೀಠಾರೋಹಣದ ದ್ವಾದಶ ವಾರ್ಷಿಕೋತ್ಸವದಂದು ಬಾಳೇಹೊನ್ನೂರ ಶ್ರೀ ಶೈಲ, ಉಜ್ಜಯಿನಿ ಹಾಗೂ ಕೇದಾರ ಪೀಠದ ಜಗದ್ಗುರುಗಳು ಜ್ಞಾನಪೀಠದಲ್ಲಿ ಕಾಶೀ ಜಗದ್ಗುರುಗಳಿಗೆ ಮಂಗಳ ಸ್ನಾನ ಮಾಡಿಸಿದರು.



ದ್ವಾದಶ ಪೀಠಾರೋಹಣದ ನಿಮಿತ್ತ 5–12–2001ರಂದು ಉಳಿದ ನಾಲ್ವರು ಶ್ರೀ ರಂಭಾಪುರಿ ಜಗದ್ಗುರುಗಳು, ಉಜ್ಜಯನಿ ಜಗದ್ಗುರುಗಳು, ಶ್ರೀಶೈಲ ಜಗದ್ಗುರುಗಳು, ಕೇದಾರ ಜಗದ್ಗುರುಗಳು ಕಾಶೀ ಜಗದ್ಗುರುಗಳಿಗೆ ಸುವರ್ಣ ಕಿರೀಟ ಧಾರಣೆ ಮಾಡಿದರು.



ಜಂಗಮವಾಡಿ ಮಠದ ಒಳ ಆವರಣದಲ್ಲಿರುವ
ನೀರಿನ ಕಾರಂಜಿ ಮುಂದೆ ಪಂಚಪೀಠಾಧೀಶ್ವರರು

31–8–2010

ಕಾಶೀ ಜಗದ್ಗುರುಗಳವರ 64ನೇ ಹುಟ್ಟು ಹಬ್ಬವನ್ನು ಹುಮನಾಬಾದ್‌ನಲ್ಲಿ ವೈಭವದಿಂದ ಆಚರಿಸಿದರು ಕಣ್ ಸೆಳೆಯುವಂತಿತ್ತು.

'ಭಕ್ತರ ದಕ್ಷಿಣೆ ಶಿಕ್ಷಣಕ್ಕೆ ಮೀಸಲು'

ಪ್ರಜಾವಾಣಿ, 31–8–2010



ಕಾಶೀಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರ 64ನೇ ಹುಟ್ಟುಹಬ್ಬದ ಅಂಗವಾಗಿ ಹುಮನಾಬಾದ್ ಇತಿಹಾಸ ಪ್ರಸಿದ್ಧ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ನೆರೆದ ಜನಸ್ತೋಮ.

ಹುಮನಾಬಾದ್ : ಶ್ರಾವಣಮಾಸ ನಿಮಿತ್ತ ನಡೆಯುತ್ತಿರುವ ಆಶೀರ್ವಚನ ಅವಧಿಯಲ್ಲಿ ಬರುವ ನಾಣ್ಯ ದಕ್ಷಿಣೆಯನ್ನು ಕಲ್ಯಾಣ ಕರ್ನಾಟಕ ಬಡ ವಿದ್ಯಾರ್ಥಿಗಳಿಗೆ ಶಿಷ್ಯವೇತನ ರೂಪದಲ್ಲಿ ಶಿಕ್ಷಣಕ್ಕೆ ಮೀಸಲು ಇಡಲಾಗುವುದು ಎಂದು ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಸ್ವಾಮೀಜಿ ಹೇಳಿದರು. ಇತಿಹಾಸ ಪ್ರಸಿದ್ಧ ಇಲ್ಲಿನ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಸೇವಾ ಸಮಿತಿ ಈಚೆಗೆ ಆಯೋಜಿಸಿದ್ದ 64ನೇ ಹುಟ್ಟು ಹಬ್ಬ ಸಂದರ್ಭದಲ್ಲಿ ಅವರು ಭಕ್ತ ಸಮೂಹಕ್ಕೆ ತಿಳಿಸಿದರು.

ಭಾರತ ವೈವಿಧ್ಯಮಯ ಸಂಸ್ಕೃತಿಗಳ ಸಂಗಮ. ಇಲ್ಲಿನ ಪ್ರತಿಯೊಬ್ಬರೂ ಪರಸ್ಪರ ಪ್ರೀತಿ, ವಿಶ್ವಾಸದಿಂದ ಬಾಳಬೇಕು. ಪರಿಸರ ಪ್ರೀತಿಯ ಜೊತೆಗೆ ಸಮಾಜ ಕಲ್ಯಾಣ ಹಾಗೂ ನುಡಿದಂತೆ ನಡೆಯುವ ಉದ್ದೇಶದಿಂದ ಈ ಬಾರಿ ಅಡ್ಡಪಲ್ಲಕ್ಕಿ ಉತ್ಸವ ಬದಲಿಗೆ ಸದ್ಭಾವನಾ ಪಾದಯಾತ್ರೆ ನಡೆಸಲಾಯಿತು ಎಂದು ಶ್ರೀಗಳು ವಿವರಿಸಿದರು.

ಸೋದರ ರಾಜ್ಯ ರಾಜಸ್ಥಾನದಲ್ಲಿ 50 ಸಾವಿರ ಜಂಗಮ ಪರಿವಾರ ಇರುವುದು ಸಮೀಕ್ಷೆಯೊಂದರಿಂದ ಗೊತ್ತಾಗಿದೆ. ಆ ಪೈಕಿ ಈಗಾಗಲೇ 50ಮಂದಿಗೆ ದೀಕ್ಷೆ ನೀಡಿದ್ದು, ಇನ್ನುಳಿದ ಎಲ್ಲರಿಗೂ ಶೀಘ್ರದಲ್ಲೇ ದೀಕ್ಷೆ ನೀಡಲಾಗುವುದು ಎಂದು ಶ್ರೀಗಳು ತಿಳಿಸಿದರು. ಕಳೆದ ವರ್ಷ ರಷ್ಯಾದ ಕೆಲವು ಯೋಗ ಶಿಕ್ಷಕರಿಗೆ ದೀಕ್ಷೆ ನೀಡಲಾಗಿದೆ ಎಂದರು.

64 ಜ್ಯೋತಿ ಪ್ರಜ್ವಲಿಸುವ ಕಾರ್ಯಕ್ರಮ, ಹುಟ್ಟುಹಬ್ಬ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ ಒಂದು ತಿಂಗಳ ಕಾಲ ಶ್ರೀಗಳ ಪ್ರವಚನ ಆಲಿಸುವ ಭಾಗ್ಯ ದೊರೆತಿರುವುದು ಹುಮನಾಬಾದ್ ನಾಗರಿಕರ ಅದೃಷ್ಟ ಎಂದರು.

ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಷಷ್ಟ್ಯಬ್ದಿ ಸಮಾರಂಭದ ನಿಮಿತ್ತ ಗುರುವಂದನಾ, ತುಲಾಭಾರ ಮಹೋತ್ಸವ–ಶ್ರೀ ಕಾಶೀ ಕ್ಷೇತ್ರ ಮತ್ತು ರಾಜ್ಯದ ವಿವಿಧೆಡೆಯಲ್ಲಿ

ಮನುಷ್ಯನ ಜೀವಿತಾವಧಿಯಲ್ಲಿ 60 ಸಂವತ್ಸರಗಳೆಂದರೆ ಆಯುಷ್ಯದ ಮಧ್ಯಕಾಲವೆಂದೇ ಪರಿಗಣಿಸಲಾಗಿದೆ. ಪ್ರಭವ ಸಂವತ್ಸರದಿಂದ ಅಕ್ಷಯ ಸಂವತ್ಸರದವರೆಗೆ 60 ಸಂವತ್ಸರಗಳಿರುತ್ತವೆ. ಸಂವತ್ಸರದ ಒಂದು ಚಕ್ರ ಮುಗಿಸಿದಂತಾಗುತ್ತದೆ. ನವಗ್ರಹಗಳ ದಶಭುಕ್ತಿಯನ್ನು ಪೂರ್ಣ ಅನುಭವಿಸಲು 120 ವರ್ಷಗಳ ಪೂರ್ಣಾಯುಷ್ಯ ಹೊಂದಿರಬೇಕು. ಇದೆಲ್ಲದರ ಕಾರಣ ಅರವತ್ತು ವರ್ಷ ಮುಗಿಸಿದ ಮನುಷ್ಯ ಷಷ್ಟ್ಯಬ್ದಿ ಸಮಾರಂಭ ಮಾಡಿಕೊಳ್ಳುವುದು ರೂಢಿಯಲ್ಲಿ ಬಂದಿದೆ.

ಈ ಆಚರಣೆಯಲ್ಲಿ ತುಲಾಭಾರವು ಒಂದಾಗಿದೆ. ಷಷ್ಟ್ಯಬ್ದಿ ನಿಮಿತ್ತ ಮಾಡಿಸುವ ತುಲಾಭಾರ, ದೇವಸ್ಥಾನಗಳಿಗೆ ದಾನಕೊಡುವ ಪದ್ಧತಿ ಬೆಳೆದುಬಂದಿದೆ.

ಜಗದ್ಗುರುಗಳ ಷಷ್ಟ್ಯಬ್ದಿ ಸಮಾರಂಭ ಕಾಶಿಯಲ್ಲಿ ಬಹು ವಿಜೃಂಭಣೆಯಿಂದ ಆಚರಿಸಲಾಯಿತು. ಪೀಠಾಧಿಕಾರ ವಹಿಸಿಕೊಂಡು ಅಲ್ಲಿಗೆ 18 ವರ್ಷಗಳಾಗಿತ್ತು. ಈ ಕಾಲಾವಧಿಯಲ್ಲಿ ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಉಲ್ಲೇಖನೀಯ ಕಾರ್ಯ ಮಾಡಿದ್ದಾರೆ. ಈ ಶುಭ ಸಂದರ್ಭದಲ್ಲಿ ಲೋಕಕಲ್ಯಾಣಾರ್ಥವಾಗಿ 108 ದಿನಗಳವರೆಗೆ ಶ್ರೀ ಮಠದಲ್ಲಿರುವ ಕಾಶೀ ವಿಶ್ವನಾಥಲಿಂಗಕ್ಕೆ ಲಕ್ಷಕುಂಭಾಭಿಷೇಕ, ಶ್ರೀ ಜಗದ್ಗುರು ವಿಶ್ವಾರಾಧ್ಯ ಲಿಂಗೋದ್ಭವ ಮೂರ್ತಿಗೆ ಕೋಟಿ ಬಿಲ್ವ–ಪುಷ್ಪಾರ್ಚನೆ, ಮಾತಾ ಅನ್ನಪೂರ್ಣೇಶ್ವರಿಗೆ ಕೋಟಿ ಕುಂಕುಮಾರ್ಚನೆ ಮತ್ತು ಕೋಟಿ

ಸರ್ವಧರ್ಮ ಸಮಭಾವ ಸಂಗಮಸ್ಥಲವೇ ಕಾಶೀ ವಾರಾಣಸಿಯಲ್ಲಿ ಕಾಶೀ ಜಗದ್ಗುರುಗಳ ಷಷ್ಟ್ಯಬ್ದಿ ಮಹೋತ್ಸವ



25–8–2007 : ಉತ್ತರಪ್ರದೇಶ ಕಾಶೀ ಜಂಗಮವಾಡಿಮಠದಲ್ಲಿ ಕೇಂದ್ರ ಗೃಹ ಸಚಿವ ಶಿವರಾಜ ಪಾಟೀಲರನ್ನು ಕಾಶೀ ಜಗದ್ಗುರುಗಳು ಗೌರವಿಸಿದರು. ಅಶೋಕ ಖೇಣಿ, ಡಾ. ಬಾಬಾಸಾಹೇಬ ಕಲ್ಯಾಣಿ ಉಪಸ್ಥಿತರಿದ್ದರು.

ದೀಪೋತ್ಸವ ಮಾಡಿ ಜಗದ್ಗುರುಗಳಿಗೆ ಗುರುವಂದನಾ ಸಮಾರಂಭವನ್ನು ಬಹು ವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ, ವಿಜೃಂಭಣೆಯಿಂದ ಆಚರಿಸಲಾಯ್ತು. ಪ್ರತಿನಿತ್ಯ ಭಕ್ತಾದಿಗಳು ತುಲಾಭಾರಸೇವೆ, ಕುಂಭಾಭಿಷೇಕ, ಅನ್ನದಾನ ಸೇವೆಯನ್ನು ಮಾಡಿದರು.

25–8–2007 ರಂದು 61ನೇಯ ವರ್ಧಂತಿ ಮಹೋತ್ಸವ, ನೂತನ ಭಕ್ತನಿವಾಸದ ಉದ್ಘಾಟನೆ ಮತ್ತು ಸತ್ಕಾರ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಕೇದಾರ ಜಗದ್ಗುರುಗಳು ವಹಿಸಿದ್ದರು. ಸಮಾರಂಭದ ಉದ್ಘಾಟನೆಯನ್ನು ಭಾರತ ಸರಕಾರದ ಗೃಹ ಮಂತ್ರಿಗಳಾದ ಶ್ರೀಮಾನ್ ಶಿವರಾಜ ಪಾಟೀಲರು ಮಾಡಿದರು. ಅಂದು ಪುಣೆಯ ಭಾರತ್ ಫೋರ್ಜ್ ಕಂಪನಿಯ ಮೇನೇಜಿಂಗ್ ಡೈರೆಕ್ಟರ್ ಹಾಗೂ ಕಾಶೀಪೀಠದ ಪರಮ ಭಕ್ತರೂ, ಕಾಶೀ ಜಗದ್ಗುರುಗಳ ಬಗ್ಗೆ ಅಪಾರ ಅಭಿಮಾನವುಳ್ಳವರೂ ಆದ ಡಾ. ಬಾಬಾ ಸಾಹೇಬ ನೀಲಕಂಠರಾವ್ ಕಲ್ಯಾಣಿ, ಅವರ ಶ್ರೀಮತಿಯವರಾದ ಸುನೀತಾ ಬಾಬಾಸಾಹೇಬ ಕಲ್ಯಾಣಿ ಮತ್ತು ಬೆಂಗಳೂರಿನ ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್ ಪ್ರಾಯಿಜಿಸಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಆದ ಶ್ರೀ ಅಶೋಕ ಖೇಣಿ ಅವರನ್ನು ಜಗದ್ಗುರುಗಳು ಸತ್ಕರಿಸಿದರು. ಜಗದ್ಗುರುಗಳು ಆರಂಭಿಸಿದ ಶಿಷ್ಯವೇತನಕ್ಕೆ ಮೊಟ್ಟಮೊದಲು ಸ್ಪಂದಿಸಿದವರು ಕಲ್ಯಾಣಿ ದಂಪತಿಗಳು. ಪುಣೆಯಲ್ಲಿರುವ ಕಾಶೀ ವಿಶ್ವೇಶ್ವರ ಆಂಗ್ಲ ಮಾಧ್ಯಮ ಹೈಸ್ಕೂಲ್‌ಗೆ ಕಟ್ಟಡ ಕಟ್ಟಿಸಿದ ಮಹಾದಾನಿಗಳು ಕಲ್ಯಾಣಿ ದಂಪತಿಗಳು. ಅವರೆಲ್ಲರೂ ಸಕುಟುಂಬ ಪರಿವಾರ ಸಮೇತ ಆಗಮಿಸಿ ಜಗದ್ಗುರುಗಳ ಷಷ್ಟ್ಯಬ್ದಿ ಸಮಾರಂಭದ ಎಲ್ಲಾ ಪೂಜಾವಿಧಿಗಳಲ್ಲಿ ಭಕ್ತಿಯಿಂದ ಪಾಲ್ಗೊಂಡು ಸಂಜೆ ಲಕ್ಷದೀಪೋತ್ಸವ ದೀಪವನ್ನು ಕಲ್ಯಾಣಿಯವರು ತಮ್ಮ ಶುಭ ಹಸ್ತದಿಂದ ಬೆಳಗಿದರು.

ಅಂದು ರಾತ್ರಿ ಜಗದ್ಗುರುಗಳವರ ರಜತ ತುಲಾಭಾರವನ್ನು ನಡೆಸಲಾಯಿತು. ಇದರಲ್ಲಿ ಭಕ್ತರಿಂದ ಕೊಟ್ಟಿದ್ದ ಎಲ್ಲಾ ಸುವರ್ಣ ಮತ್ತು ನವರತ್ನಗಳನ್ನು ಇಡಲಾಗಿತ್ತು. ತುಲಾಭಾರದಿಂದ ಸಂಗ್ರಹವಾದ ಧನಕನಕಾದಿಗಳೆಲ್ಲವನ್ನು ಶಿಷ್ಯವೇತನಕ್ಕೆ ಮೀಸಲಿಡುವುದಕ್ಕೆ ಈ ಹಿಂದೆ ಹೋದೆಡೆಯಲ್ಲೆಲ್ಲಾ ಘೋಷಣೆ ಮಾಡಿದ್ದರು.







ತುಲಾಭಾರ ಆರಂಭದಲ್ಲಿ ತೂಕದ ಯಂತ್ರದ ಮೇಲೆ ನಡೆಸಿದಾಗ ಜಗದ್ಗುರುಗಳು ಮುದಸ್ಮಿತರಾಗಿದ್ದಾರೆ.









ನವೆಂಬರ್ 21 ರಿಂದ ಕಾಶಿಯಲ್ಲಿ ಅಖಿಲ ಭಾರತ ವೀರಶೈವ ಸಮ್ಮೇಳನ



ವಾರಣಾಸಿ, ಅ.23–ಕಾಶೀ ಜ್ಞಾನ ಸಿಂಹಾಸನದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ 60ನೇ ವರ್ಷದ ಷಷ್ಟ್ಯಬ್ಧಿ ಸಮಾರಂಭದ ಅಂಗವಾಗಿ ನ.21 ರಿಂದ 27ರವರೆಗೆ ಇಲ್ಲಿಯ ಜಂಗಮವಾಡಿಮಠದಲ್ಲಿ ಐತಿಹಾಸಿಕ ಅಖಿಲ ಭಾರತ ಪ್ರಥಮ ವೀರಶೈವ ಸಮ್ಮೇಳನ ನಡೆಯಲಿದೆ.

ಸಂಸ್ಕೃತ, ಕನ್ನಡ, ಹಿಂದಿ, ಮರಾಠಿ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ವೀರಶೈವ ಸಾಹಿತ್ಯ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಸಿದ್ಧ ಸಂಸ್ಕೃತ ವಿದ್ವಾಂಸ ಡಾ.ಎಂ. ಶಿವಕುಮಾರ ಸ್ವಾಮಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ನ.21ರಂದು ಸಂಜೆ 6.30ಕ್ಕೆ ಅ.ಭಾ.ವೀ. ಸಾಹಿತ್ಯ ಸಮ್ಮೇಳನ ಉದ್ಘಾಟನೆಗೊಳ್ಳಲಿದೆ. 22ರಂದು ಬೆಳಗ್ಗೆ 10ಕ್ಕೆ ನಡೆಯುವ ಸಂಸ್ಕೃತ ವೀರಶೈವ ಸಾಹಿತ್ಯದ ಒಂದನೇ ಗೋಷ್ಠಿಯಲ್ಲಿ ಬೆಂಗಳೂರಿನ ಡಾ.ಎಂ. ಶಿವಕುಮಾರ ಸ್ವಾಮಿಯವರು ವೇದೋಪನಿಷತ್ತು ವೀರಶೈವ ವಿಚಾರ, ಧಾರವಾಡದ ಡಾ. ಮಲ್ಲಿಕಾರ್ಜುನ ಪರಡ್ಡಿಯವರು ಸಂಸ್ಕೃತ ವೀರಶೈವ ಸಾಹಿತ್ಯ ಷಟ್‌ಸ್ಥಲ ಮಾರ್ಗ, ತಿರುಪತಿಯ ಡಾ.ಕೆ. ಪ್ರತಾಪ್‌ರವರು ಸಂಸ್ಕೃತ ವೀರಶೈವ ಸಾಹಿತ್ಯ ಅಷ್ಟಾವರಣಾನಿ ಪಂಚಾಚಾರ್ಯಶ್ಚ, ಕುರಿತು ಪ್ರಬಂಧ ಮಂಡಿಸುವರು. ವಾರಾಣಸಿಯ ಡಾ. ಪಾರ್ಶ್ವನಾಥ ದ್ವಿವೇದಿ ಅಧ್ಯಕ್ಷತೆ ವಹಿಸುವರು. ನಂತರ ಮಧ್ಯಾಹ್ನ ನಡೆಯುವ 2ನೇ ಗೋಷ್ಠಿಯಲ್ಲಿ ಕಾಶಿಯ ಪಂ.ರಾಧೇಶ್ಯಾಮ ಚತುರ್ವೇದಿಯವರು ಶ್ರೀ ಸಿದ್ಧಾಂತ ಶಿಖಾಮಣೌ ಏಕೋತ್ತರ ಶತಸ್ಥಲ ವಿನ್ಯಾಸ, ಬೆಂಗಳೂರಿನ ಡಾ.ಸಿ. ಶಿವಕುಮಾರ ಸ್ವಾಮಿಯವರು ವೀರಶೈವ ಸಿದ್ಧಾಂತ ತತ್ವತ್ರಯ ವಿಮರ್ಶೆ, ತುಮಕೂರಿನ ವಿದ್ವಾನ್ ಕೋರಂ. ಬಸವರಾಜುರವರು ಶ್ರೀ ಸಿದ್ಧಾಂತ ಶಿಖಾಮಣ್ಯುತ್ತರ ಕಾಲೀನ ವೀರಶೈವ ಸಾಹಿತ್ಯಮ್ ಕುರಿತು ಪ್ರಬಂಧ ಮಂಡಿಸುವರು. ಜಂಗಮವಾಡಿಮಠದ ಶೈವ ಭಾರತಿ ಶೋಧ ಪ್ರತಿಷ್ಠಾನದ ನಿರ್ದೇಶಕ ಪಂ. ವ್ರಜವಲ್ಲಭ ದ್ವಿವೇದಿ ಅಧ್ಯಕ್ಷತೆ ವಹಿಸುವರು. ವಾರಾಣಸಿಯ ಡಾ. ಕಮಲೇಶ ಝಾ, ಡಾ. ರಮಾ ಘೋಷ ಮತ್ತಿತರ ವಿದ್ವಾಂಸರು ಪಾಲ್ಗೊಳ್ಳುವರು.

23ರಂದು ಬೆಳಗ್ಗೆ 10ಕ್ಕೆ ನಡೆಯುವ 3ನೇ ಗೋಷ್ಠಿಯಲ್ಲಿ ಸೋಲಾಪುರದ ಡಾ.ಶೇ.ದೆ.ಪಸಾರಕರ ಅವರು ವೀರಶೈವ ಮರಾಠಿ ವಾಙ್ಮಯ ಪ್ರೇರಣಾ ಆಣಿ ಸ್ವರೂಪ, ಔರಂಗಾಬಾದ ಪಂ. ಶಾಂತಿತೀರ್ಥ ಸ್ವಾಮಿ ಅವರು ವೀರಶೈವ ಮರಾಠಿ ಸಾಹಿತ್ಯಾಂಚೆ ಸಂಶೋಧನಸ ಚಾರಠಾಣ, ಪಂ. ಶಿವಪ್ಪ ಖಕೆ ಅವರು ವೀರಶೈವ ಮರಾಠಿ ಸಾಹಿತ್ಯಾವರ ಸಂಸ್ಕೃತಾಚಾ ಪ್ರಭಾವ ಕುರಿತು ಪ್ರಬಂಧ ಮಂಡಿಸುವರು. ನಾಗಪುರದ ಡಾ. ಸುಧಾಕರ ಮೊಗಲೆವಾರ ಅಧ್ಯಕ್ಷತೆ ವಹಿಸುವರು.

ಮಧ್ಯಾಹ್ನ ನಡೆಯುವ 4ನೇ ಗೋಷ್ಠಿಯಲ್ಲಿ ಪುಣೆಯ ಡಾ. ಶ್ಯಾಮಾ ಘೋಣಸೆ ಅವರು ವೀರಶೈವ ಸಾಹಿತ್ಯಾಶೀಲ ಸ್ತ್ರೀಯಾಂಚೆ ಯೋಗದಾನ, ಡಾ. ಸುಧಾಕರ ಮೊಗಲೆವಾರ ಅವರು ಕನ್ನಡ ಸಾಹಿತ್ಯಾಂಚೆ ಮರಾಠಿತೀಲ ಅನುವಾದ, ಸೋಲಾಪುರದ ಪಂ. ಆನಂದ ಕುಂಬಾರ ಕೋರಿವ ಅವರು ಲೇಖಾತೀಲ ಶಿವಶರಣಾಂಚೆ ದರ್ಶನ ಕುರಿತು ಪ್ರಬಂಧ ಮಂಡಿಸುವರು. ಡಾ. ಶೇ.ದೆ. ಪಸಾರಕರ ಅಧ್ಯಕ್ಷತೆ ವಹಿಸುವರು.

24ರಂದು ಬೆಳಗ್ಗೆ 10ಕ್ಕೆ ನಡೆಯುವ 5ನೇ ಗೋಷ್ಠಿಯಲ್ಲಿ ಸೋಲಾಪುರದ ಡಾ. ಈರೇಶ ಸ್ವಾಮಿ ಅವರು ಹಿಂದಿ ವೀರಶೈವ ಮೂಲ ಸಾಹಿತ್ಯ ಔರ ಅನುವಾದಿತ ವಚನ ಸಾಹಿತ್ಯ, ಡಾ. ಗೋವಿಂದ ಸಪ್ತರ್ಷಿ ಅವರು ಶ್ರೀ ಸಿದ್ಧಾಂತ ಶಿಖಾಮಣಿ ಔರ ಉಸಕಾ ಹಿಂದಿ ಅನುವಾದ, ಡಾ. ರಮಾ ಘೋಷ ಕಾರಣಾಗಮ, ಪಾರಮೇಶ್ವರಾಗಮ, ವಾತುಲ ಶುದ್ಧಾಗಮ, ಮಕುಟಗಮ ಔರ ಅನುಭವ ಸೂತ್ರ ಔರ ಉಸಕಾ ಹಿಂದಿ ಅನುವಾದ, ಬೆಂಗಳೂರಿನ ವಿದ್ವಾನ್ ಷಣ್ಮುಖಯ್ಯ ಅಕ್ಕೂರಮಠ ಅವರು ಚಂದ್ರಜ್ಞಾನಾಗಮ, ಸುಕ್ಷ್ಮಾಗಮ ಔರ ಉಸಕಾ ಹಿಂದಿ ಅನುವಾದ, ತೈಲಂಗದ ಪಂ. ಜಗನ್ನಾಥ ಶಾಸ್ತ್ರಿ ಅವರು ಈಶ, ಕೇನ, ಮುಂಡಕ, ಕೈವಲ್ಯ ಸಿದ್ಧಾಂತ ಶಿಖೋಪನಿಷತ್ ಔರ ಉನಕಾ ಹಿಂದಿ ಅನುವಾದ ಕುರಿತು ಪ್ರಬಂಧ ಮಂಡಿಸಲಿದ್ದಾರೆ. ಡಾ. ರಾಧೇಶ್ಯಾಮ ಚತುರ್ವೇದಿ ಅಧ್ಯಕ್ಷತೆ ವಹಿಸುವರು. ಮಧ್ಯಾಹ್ನ 2ಕ್ಕೆ ನಡೆಯುವ 6ನೇ ಗೋಷ್ಠಿಯಲ್ಲಿ ಚೆನ್ನೈನ ಡಾ. ಟಿ.ಬಿ. ಸಿದ್ಧಲಿಂಗಯ್ಯ ಅವರು ತಮಿಳು ಭಾಷೆಯಲ್ಲಿ ಅನುವಾದಿತ ವೀರಶೈವ ಸಾಹಿತ್ಯ ಕುರಿತು ಪ್ರಬಂಧ ಮಂಡಿಸುವರು. ಬೆಂಗಳೂರಿನ ವಿಭೂತಿಪುರಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯರು ಅಧ್ಯಕ್ಷತೆ ವಹಿಸುವರು.

25ರಂದು ಬೆಳಗ್ಗೆ 10ಕ್ಕೆ ನಡೆಯುವ 7ನೇ ಗೋಷ್ಠಿಯಲ್ಲಿ ತಿರುಪತಿಯ ಸಮುದ್ರಲ್ ಲಕ್ಷ್ಮಣಯ್ಯ ಅವರು ತೆಲುಗು ಸಾಹಿತ್ಯದ ಮೇಲೆ ವೀರಶೈವ ಧರ್ಮದ ಪ್ರಭಾವ, ಹೈದ್ರಾಬಾದದ ಡಾ.ಎಂ. ಮಹಾಂತಯ್ಯ ಸ್ವಾಮಿ ಅವರು ತೆಲುಗು ಸಾಹಿತ್ಯದಲ್ಲಿ ವೀರಶೈವ ಕವಿಗಳು, ಪಂ.ಎನ್.ಎಂ. ರೇವಣಸಿದ್ಧಾಂತಿ ನಂದ್ಯಾಲ ಅವರು ತೆಲುಗು ಸಾಹಿತ್ಯದಲ್ಲಿ ಪಂಚಪೀಠ ಮತ್ತು ಪಂಚಾಚಾರ್ಯರ ಉಲ್ಲೇಖ, ಹೈದ್ರಾಬಾದ ಮಾರ್ಗಂ ಬಸವರಾಜು ಶ್ರೀಶೈಲ ಪೀಠದ ಇತಿಹಾಸ ಕುರಿತು ಪ್ರಬಂಧ ಮಂಡಿಸಲಿದ್ದಾರೆ. ತಿರುಪತಿಯ ಡಾ.ಕೆ. ಪ್ರತಾಪ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಧ್ಯಾಹ್ನ 2ಕ್ಕೆ ನಡೆಯುವ 8ನೇ ಗೋಷ್ಠಿಯಲ್ಲಿ ಪಂ. ವಿಕಾರಾಬಾದದ ಸಾಂಬಶಿವ ಶರ್ಮಾ ಅವರು ಕೊಲನುಪಾಕ ವೀರಶೈವರ ಪ್ರಾಚೀನ ನೆಲೆ, ಬೆಂಗಳೂರಿನ ಜಿ.ಎಸ್. ಮೋಹನ್ ಅವರು ವೀರಶೈವ ಧರ್ಮಕ್ಕೆ ಪಾಲ್ಕುರಿಕೆ ಸೋಮನಾಥನ ಕೊಡುಗೆ, ಮಹಬೂಬ ನಗರದ ರುದ್ರಾಕ್ಷಲಮಠಂ ಪ್ರಭುಲಿಂಗ ಶಾಸ್ತ್ರಿ ಅವರು ವೀರಶೈವ ಧರ್ಮಕ್ಕೆ ಬಂಡಾರು ತಮ್ಮಯ್ಯನವರ ಕೊಡುಗೆ, ಡಾ.ಕೆ. ಪ್ರತಾಪ್ ವೀರಶೈವ ಧರ್ಮಕ್ಕೆ ಚಿದರೇಮಠಂ ವೀರಭದ್ರ ಶರ್ಮರ ಕೊಡುಗೆ ಕುರಿತು ಪ್ರಬಂಧ ಮಂಡಿಸುವರು. ಪಂ.ಎನ್.ಎಂ. ರೇವಣಸಿದ್ಧಾಂತಿ ನಂದ್ಯಾಲ ಅಧ್ಯಕ್ಷತೆ ವಹಿಸುವರು.

26ರಂದು ಬೆಳಗ್ಗೆ 10ಕ್ಕೆ ನಡೆಯುವ 9ನೇ ಗೋಷ್ಠಿಯಲ್ಲಿ ಡಾ.ಎಸ್. ವಿದ್ಯಾಶಂಕರ ಅವರು ವಚನ ಸಾಹಿತ್ಯ, ಪೂರ್ವರಂಗ ಮತ್ತು ಉತ್ತರರಂಗ, ಡಾ. ಪಂಚಾಕ್ಷರಿ ಹಿರೇಮಠ ಷಟ್ಪದಿ ಸಾಹಿತ್ಯ ಮತ್ತು ಸಂಕಲನ ಸಾಹಿತ್ಯ, ಡಾ. ರಾಜಶೇಖರ ಸ್ವಾಮಿ ಗೋರಟಾ ಕನ್ನಡ ಸಾಹಿತ್ಯದಲ್ಲಿ ಜಗದ್ಗುರು ಪಂಚಾಚಾರ್ಯರು ಕುರಿತು ಪ್ರಬಂಧ ಮಂಡಿಸಲಿದ್ದಾರೆ. ಬೆಂಗಳೂರಿನ ಪ್ರೊ.ಎಂ.ಜಿ. ನಾಗರಾಜ್ ಅಧ್ಯಕ್ಷತೆ ವಹಿಸುವರು.

ಮಧ್ಯಾಹ್ನ ನಡೆಯುವ 10ನೇ ಗೋಷ್ಠಿಯಲ್ಲಿ ಹುಬ್ಬಳ್ಳಿಯ ಡಾ. ಸಂಗಮೇಶ ಸವದತ್ತಿಮಠ ಅವರು ಸಾಂಗತ್ಯ ಸಾಹಿತ್ಯ ಮತ್ತು ಶತಕ ಸಾಹಿತ್ಯ , ಕೋರಂ. ಬಸವರಾಜ ಅವರು ಚಂಪೂ ತ್ರಿಪದಿ ಸಾಹಿತ್ಯ , ಪ್ರೊ. ಎಂ.ಜಿ. ನಾಗರಾಜ ಶಾಸನಗಳಲ್ಲಿ ವೀರಶೈವ ಸಾಹಿತ್ಯ, ಸಂಸ್ಕೃತಿ ಮತ್ತು ಇತಿಹಾಸ ಕುರಿತು ಪ್ರಬಂಧ ಮಂಡಿಸಲಿದ್ದಾರೆ. ಬೆಂಗಳೂರಿನ ಪ್ರೊ.ಎನ್. ಬಸವಾರಾಧ್ಯರು ಅಧ್ಯಕ್ಷತೆ ವಹಿಸುವರು.

27ರಂದು ಬೆಳಗ್ಗೆ 10ಕ್ಕೆ ನಡೆಯುವ 11ನೇ ಗೋಷ್ಠಿಯಲ್ಲಿ ಡಾ.ಎಂ. ಶಿವಕುಮಾರ ಸ್ವಾಮಿ ಅವರು ಇಂಗ್ಲೀಷ ಭಾಷೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ, ಡಾ. ರಾಜಶೇಖರ ಸ್ವಾಮಿ ಗೋರಟಾ ಅವರು ಕನ್ನಡ ಭಾಷೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ, ಪಂ. ಶಿವಪ್ಪ ಖಕೆ ಅವರು ಮರಾಠಿ ಭಾಷೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಡಾ.ಕೆ. ಪ್ರತಾಪ್ ಅವರು ತೆಲುಗು ಭಾಷೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ, ಡಾ.ಟಿ.ಬಿ. ಸಿದ್ಧಲಿಂಗಯ್ಯ ಅವರು ತಮಿಳು ಭಾಷೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ, ಡಾ. ಸಿ. ಶಿವಕುಮಾರಸ್ವಾಮಿ ಅವರು ಸಂಸ್ಕೃತ ಭಾಷೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿ ಕುರಿತು ಪ್ರಬಂಧ ಮಂಡಿಸುವರು.

27ರಂದು ಸಂಜೆ 4ಕ್ಕೆ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಸಾನ್ನಿಧ್ಯದಲ್ಲಿ ಸಮ್ಮೇಳನದ ಸಮಾರೋಪ ನಡೆಯಲಿದೆ.

ಸಮ್ಮೇಳನಾಧ್ಯಕ್ಷ ಡಾ.ಎಂ. ಶಿವಕುಮಾರ ಸ್ವಾಮಿ ಇಂಗ್ಲೀಷ್‌ನಲ್ಲಿ ವ್ಯಾಖ್ಯಾನದೊಂದಿಗೆ ರಚಿಸಿದ ಶ್ರೀ ಸಿದ್ಧಾಂತ ಶಿಖಾಮಣಿ ಕೃತಿ ಬಿಡುಗಡೆ ನಡೆಯಲಿದ್ದು, ಕಾಶೀಪೀಠದ ಮುಖವಾಣಿ 'ವಿಭೂತಿ' ಪತ್ರಿಕೆ ವಿಶೇಷಾಂಕವನ್ನು ವಿಜಯ ಕರ್ನಾಟಕ ಪತ್ರಿಕೆ ಹುಬ್ಬಳ್ಳಿ ಸ್ಥಾನಿಕ ಸಂಪಾದಕ ಜಿ.ವಿ. ಯತಿರಾಜು ಬಿಡುಗಡೆ ಗೊಳಿಸುವರು.

ಪ್ರೊ. ಅ.ಸಿ. ಹಿರೇಮಠ ಪ್ರಾಸ್ತಾವಿಕ ಮಾತನಾಡಲಿದ್ದು, ಶಿವಯ್ಯ ಸ್ವಾಮಿ ಕೂಗು ನುಡಿ ನೈವೇದ್ಯ ನಡೆಸಿಕೊಡುವರು. ಇದೇ ಸಂದರ್ಭದಲ್ಲಿ ಸಾಹಿತ್ಯ ಸಮ್ಮೇಳನ ಕುರಿತ ನಿರ್ಣಯಗಳನ್ನು ಕೈಗೊಳ್ಳ ಲಾಗುವುದು. ದೇಶದ ವಿವಿಧ ಪ್ರಾಂತಗಳ ಶಿವಾಚಾರ್ಯರು, ವಿದ್ವಾಂಸರು, ಬುದ್ಧಿಜೀವಿಗಳು, ಕವಿ–ಕಲಾವಿದರು ಭಾಗವಹಿಸುವರೆಂದು ಜಂಗಮವಾಡಿಮಠದ ಪ್ರಕಟಣೆ ತಿಳಿಸಿದೆ.

ಸಾಮರಸ್ಯ ವೀರಶೈವ ಸಾಹಿತ್ಯದ ಮೂಲ ಗುರಿ

ವಿಜಯ ಕರ್ನಾಟಕ

ವಾರಣಾಸಿ : ಭಾರತೀಯ ದರ್ಶನ ಶಾಸ್ತ್ರಕ್ಕೆ ವೀರಶೈವ ಸಾಹಿತ್ಯದ ಕೊಡುಗೆ ಅಪಾರವೆಂದು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಅವರು ಇಲ್ಲಿಯ ಜಂಗಮವಾಡಿ ಮಠದಲ್ಲಿ ಶ್ರೀ ಕಾಶೀ ಜಗದ್ಗುರುಗಳ ಷಷ್ಟ್ಯಬ್ದಿ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಅಖಿಲ ಭಾರತ ಪ್ರಥಮ ವೀರಶೈವ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಆಶೀರ್ವಚನ ನೀಡಿದರು.



ಉತ್ತರಪ್ರದೇಶದ ಕಾಶೀ ಜಂಗಮವಾಡಿ ಮಠದಲ್ಲಿ ಹಮ್ಮಿಕೊಂಡ ಅಖಿಲಭಾರತ ಪ್ರಥಮ ವೀರಶೈವ ಸಾಹಿತ್ಯ ಸಮ್ಮೇಳನವನ್ನು ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು. ಸಾಖರಖೇಡಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಡಾ.ಎಂ. ಶಿವಕುಮಾರಸ್ವಾಮಿ ಮತ್ತಿತರರಿದ್ದರು.

ವಿಶ್ವದ ತತ್ವಶಾಸ್ತ್ರದಲ್ಲಿ ಭಾರತೀಯ ತತ್ವಶಾಸ್ತ್ರವು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಅದರಲ್ಲಿ ವೀರಶೈವ ಸಾಹಿತ್ಯವೂ ಭಾರತೀಯ ತತ್ವಶಾಸ್ತ್ರವನ್ನು ಸಮೃದ್ಧಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಶಿವ–ಜೀವರ ಐಕ್ಯತೆಯನ್ನು ಬೋಧಿಸುವುದರ ಮೂಲಕ ಜನಮನದಲ್ಲಿ ತುಂಬಿರುವ ಅಜ್ಞಾನ ದೂರೀಕರಿಸಿ ಶಿವಜ್ಜೀವರ ಅಭೇದದ ಜತೆಗೆ ಸಾಮಾಜಿಕ ಭೇದಭಾವವನ್ನೂ ದೂರಮಾಡಿ ಎಲ್ಲರಲ್ಲಿ ಸಾಮರಸ್ಯವನ್ನುಂಟುಮಾಡುವುದೇ ವೀರಶೈವ ಸಾಹಿತ್ಯದ ಮೂಲ ಗುರಿಯಾಗಿದೆ ಎಂದರು.

ವೀರಶೈವ ಪದವು ಅನೇಕ ಅರ್ಥಗಳ ನ್ನೊಳಗೊಂಡ ಸಮಗ್ರ ಧರ್ಮವಾಚಕ ಪದವಾಗಿದೆ. ವೀರವ್ರತವನ್ನು ಪರಿಪಾಲಿಸುವ ವಿರೋಧ ಭಾವನೆಯನ್ನು ಅಲ್ಲಗಳೆಯುವ ಧರ್ಮಾಚರಣೆಯಲ್ಲಿ ವಿಕಲ್ಪ ಭಾವನೆ ಇಲ್ಲದಿರುವ ಮತ್ತು ಶಿವ–ಜೀವರ ಐಕ್ಯ ಬೋಧಕ ವಿದ್ಯೆಯಲ್ಲಿ ಆನಂದಿಸುವ ಮುಂತಾದ ಅರ್ಥಗಳು ವೀರಶೈವ ಪದದಲ್ಲಿ ಅಡಕವಾಗಿವೆ ಎಂದರು.

ವೀರಶೈವ ಸಾಹಿತ್ಯವು ಮೂಲತಃ ಸಂಸ್ಕೃತದಲ್ಲಿದ್ದು ಕಾಲ ಕಾಲಕ್ಕೆ ಕನ್ನಡ, ಮರಾಠಿ, ಹಿಂದಿ, ತೆಲುಗು, ತಮಿಳು, ಮುಂತಾದ ಭಾರತೀಯ ಭಾಷೆಗಳಲ್ಲಿ ಆಯಾ ಪ್ರಾಂತದ ಆಚಾರ್ಯರು, ಶರಣರು ವಿಪುಲವಾಗಿ ರಚಿಸಿದ್ದಾರೆ. ಎಲ್ಲ ಭಾಷೆಗಳಲ್ಲಿರುವ ವೀರಶೈವ ಸಾಹಿತ್ಯ ಕುರಿತು ಒಂದೇ ವೇದಿಕೆಯಲ್ಲಿ ಚರ್ಚಿಸುವ ಒಮ್ಮತದ ವಿಚಾರವನ್ನು ಮನುಕುಲದ ಒಳಿತಿಗೆ, ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಸಾಹಿತ್ಯ ಜನಜಾಗೃತಿಯ ಉದ್ದೇಶದಿಂದ ಶ್ರೀಪೀಠದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಅ.ಭಾ. ಪ್ರಥಮ ವೀರಶೈವ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸಾಖರಖೇಡಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನಾಧ್ಯಕ್ಷ ಪ್ರಸಿದ್ಧ ಸಂಸ್ಕೃತ ವಿದ್ವಾಂಸರಾದ ಬೆಂಗಳೂರಿನ ಡಾ.ಎಂ. ಶಿವಕುಮಾರಸ್ವಾಮಿ ಅವರು ಮಾತನಾಡಿದರು. ಬಬಲೇಶ್ವರದ ಡಾ. ಮಹಾದೇವ ಶಿವಾಚಾರ್ಯರು ಉಪದೇಶಾಮೃತ ನೀಡಿದರು.

ತುಮಕೂರಿನ ಡಾ. ಶಿವಾನಂದ ಶಿವಾಚಾರ್ಯರು, ಖ್ಯಾತ ಮರಾಠಿ ವಿದ್ವಾಂಸ ಡಾ.ಎಸ್.ಡಿ. ಪಸಾರಕರ ಅವರು ಪ್ರಾಸ್ತಾವಿಕ ಮಾತನಾಡಿದರು.

ಮೋಹಕರದ ಶ್ರೀ ರಾಜೇಶ್ವರ ಶಿವಾಚಾರ್ಯರು, ಬೇಲೂರಿನ ಶ್ರೀ ಗುರುಲಿಂಗ ಶಿವಾಚಾರ್ಯರು, ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯರು, ಧಾರವಾಡದ ಡಾ. ಮಲ್ಲಿಕಾರ್ಜುನ ಪರಡ್ಡಿ, ಡಾ.ಸಿ. ಶಿವಕುಮಾರ ಸ್ವಾಮಿ, ಪುಣೆಯ ಡಾ. ಶಾಮಾ ಗೋಣಸೆ, ಔರಂಗಾಬಾದದ ಶ್ರೀ ಶಾಂತಿ ತೀರ್ಥ ಸ್ವಾಮೀಜಿ, ಶ್ರೀ ಶಿವಪ್ಪ ಖಕೆ, ಎಸ್.ಜಿ. ಸ್ವಾಮಿ, ಸೊಲ್ಲಾಪುರದ ಸಿದ್ಧಯ್ಯಸ್ವಾಮಿ, ಶಿವಯೋಗಿ ಕಂಬಾಳಿಮಠ, ಮಳಲಕೆರೆ ಗುರುಮೂರ್ತಿ ಉಪಸ್ಥಿತರಿದ್ದರು

ಸಂಶೋಧಕ ಡಾ. ರಾಜಶೇಖರ ಸ್ವಾಮಿ ಗೋರಟಾ ಸ್ವಾಗತಿಸಿದರು. ಶ್ರೀ ರೇವಣಸಿದ್ಧ ವಾಡಕರ ನಿರೂಪಿಸಿದರು.

27–11–2007



27–11–2007 : ವಾರಣಾಸಿಯ ಸುಪ್ರಸಿದ್ಧ ಜಂಗಮವಾಡಿ ಮಠದಲ್ಲಿ ಇತ್ತೀಚೆಗೆ ಅಖಿಲ ಭಾರತ ವೀರಶೈವ ಸಾಹಿತ್ಯ ಸಮ್ಮೇಳನವನ್ನು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅವರು ಪಂಚ ಪೀಠಾಧೀಶ್ವರರ ಸಾನ್ನಿಧ್ಯದಲ್ಲಿ ಉದ್ಘಾಟಿಸಿದರು.

ದಿನಾಂಕ **28–11–07** ರಂದು ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದ ಅಮೃತ ಮಹೋತ್ಸವವನ್ನು ಗುರುಕುಲದಲ್ಲಿ ಶಿಕ್ಷಣ ಪಡೆದ ಜಗದ್ಗುರುಗಳು, ನಿರಂಜನ ಮೂರ್ತಿಗಳು, ಶಿವಾಚಾರ್ಯರು, ಪಂಡಿತರಲ್ಲಿ ಅನೇಕರು ಅಂದು ಕಾಶಿಗೆ ಆಗಮಿಸಿ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು ಈ ಸಂದರ್ಭದಲ್ಲಿ ಗುರುಕುಲದ ವಿಧ್ಯಾರ್ಥಿಗಳ ದಾಖಲಾತಿ ಗ್ರಂಥವಾದ ಶ್ರೀ ಕಾಶೀ ಪೀಠ ಜ್ಞಾನಗಂಗಾ ಗ್ರಂಥ ಬಿಡುಗಡೆ ಗೊಂಡಿದ್ದು ಬಹು ಮಹತ್ವದ ಸಂಗತಿಯಾದ್ದು.

ಕಳೆದ ಎರಡು ವರ್ಷಗಳ ಹಿಂದಿನಿಂದಲೂ ಅನೇಕ ನೆಚ್ಚಿನ ಸಂಶೋಧಕ ಶಿವಾಚಾರ್ಯರಾದ ಷ.ಬ್ರ. ಡಾ. ಶಿವಾನಂದ

ಶಿವಾಚಾರ್ಯ ಸ್ವಾಮಿಗಳು, ನಂತರ ಮುಂದೆ ಇನ್ನೊಬ್ಬ ಹಿರಿಯ ಸಂಶೋಧಕರಾದ ಬಬಲೇಶ್ವರ ಬೃಹನ್ಮಠದ ಡಾ. ಮಹದೇವ ಶಿವಾಚಾರ್ಯ ಸ್ವಾಮಿಗಳು ನಿರಂತರ ಪರಿಶ್ರಮದಿಂದಾಗಿ ಎಲ್ಲ ದಾಖಲೆಗಳನ್ನು ಸಂಗ್ರಹಿಸಿ ಪತ್ರ ವ್ಯವಹಾರ ನಡೆಸಿ ವಿದ್ಯಾರ್ಥಿಗಳ ಪರಿಚಯ ಲೇಖನವನ್ನು ಜಗದ್ಗುರುಗಳ ಮಾರ್ಗದರ್ಶನದಲ್ಲಿ ಸಿದ್ಧಗೊಳಿಸಿದ್ದರು. ಅಂತಹ ಒಂದು ಮಹತ್ವ ಪೂರ್ಣ ಗ್ರಂಥ – ಗುರುಕುಲದ ಅದ್ಭುತ ಮಹೋತ್ಸವದಂದೇ ಬಿಡುಗಡೆಗೊಂಡದ್ದು ಜಗದ್ಗುರುಗಳಿಗೆ ಅತ್ಯಂತ ಹರ್ಷದ ಸಂಗತಿಯಾಗಿತ್ತು.

ಸಮಾರಂಭದಲ್ಲಿ ಹಾಜರಿದ್ದ ಎಲ್ಲಾ ಹಳೇ ವಿದ್ಯಾರ್ಥಿಗಳಿಗೆ ಪಂಚಪೀಠಾಧೀಶ್ವರರು ತಮ್ಮ ಪ್ರಸಾದ ಹಸ್ತದಿಂದ ಗುರುರಕ್ಷೆ ನೀಡಿ ಆಶೀರ್ವದಿಸಿದರು.



ಉತ್ತರಪ್ರದೇಶದ ಕಾಶೀ ಜಂಗಮವಾಡಿ ಮಠದಲ್ಲಿ ಮಂಗಳವಾರ ಷಷ್ಟ್ಯಬ್ದಿ ಮಹೋತ್ಸವದ ಗುರುವಂದನಾ ಸಮಾರಂಭವನ್ನು ಕೇದಾರ ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು. ಕಾಶೀ ಜಗದ್ಗುರುಗಳು ಮತ್ತಿತರರು ಉಪಸ್ಥಿತರಿದ್ದರು.

ಕಾಶೀ ಪೀಠದಿಂದ ಬಹುದೊಡ್ಡ ಸಮಾಜಸೇವೆ



ಉತ್ತರಪ್ರದೇಶದ ಕಾಶೀ ಜಂಗಮವಾಡಿಮಠದಲ್ಲಿ ಕಾಶೀಪೀಠದ ಜಗದ್ಗುರುಗಳವರ ಪೀಠಾರೋಹಣದ 18ನೇ ವರ್ಷದ ವರ್ಧಂತಿ ನಿಮಿತ್ತ ಏರ್ಪಡಿಸಿದ್ದ ಸಮಾರಂಭದಲ್ಲಿ ಸಮಾನ ಪೀಠಾಚಾರ್ಯರು ಚಿನ್ನದ ಕಿರೀಟವನ್ನಿತ್ತರು.

ವಾರಾಣಸಿ : ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಕಾಶೀಪೀಠದ ಕೊಡುಗೆ ಅಪಾರ ಎಂದು ಪಂಚ ಪೀಠಾಧೀಶ್ವರರು ಹೇಳಿದರು.

ಉತ್ತರಪ್ರದೇಶದ ಕಾಶೀಪೀಠದಲ್ಲಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಷಷ್ಟ್ಯಬ್ದಪೂರ್ತಿ ಮತ್ತು 18ನೇ ವರ್ಷದ ಪೀಠಾರೋಹಣದ ನಿಮಿತ್ತ ಹಮ್ಮಿಕೊಂಡಿದ್ದ ಗುರುವಂದನಾ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿದರು. ಪಂಚಪೀಠದ ಜಗದ್ಗುರುಗಳು, ಶಿವಾಚಾರ್ಯರು, ನಿರಂಜನ ಮೂರ್ತಿಗಳು ಶ್ರೀ ಸಿದ್ಧಾರೂಢ ಮತ್ತು ಶಿವಾನಂದ ಸಂಪ್ರದಾಯಗಳ ಸಾವಿರಾರು ಮಠಾಧಿಪತಿಗಳು ಶ್ರೀ ಕಾಶೀ ಪೀಠದ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ಅಧ್ಯಯನ ಮಾಡಿದ್ದಾರೆ. ಯಾವುದೇ ಭೇದಭಾವ ಮಾಡದೇ ಸರ್ವ ಸಂಪ್ರದಾಯದ ಮಠಾಧಿಪತಿಗಳಿಗೆ ಅನ್ನದಾನ, ವಿದ್ಯಾದಾನ, ಆಶ್ರಯನ್ನಿತ್ತ ಶ್ರೇಯಸ್ಸು ಶ್ರೀಪೀಠಕ್ಕೆ ಸಲ್ಲುತ್ತದೆ ಎಂದರು.

ಇಂದು ಪ್ರಕಟಗೊಂಡ ಶ್ರೀ ಕಾಶೀಪೀಠ ಜ್ಞಾನಗಂಗಾ ಎಂಬ ಗ್ರಂಥದಲ್ಲಿ 1810ರಿಂದ 2007ರವರೆಗೆ ಅಂದರೆ 207 ವರ್ಷಗಳ ವಿದ್ಯಾರ್ಥಿಗಳ ದಾಖಲಾತಿ ಸಂಗ್ರಹವಾಗಿರುವುದು ಹೆಮ್ಮೆಯ ಸಂಗತಿ. ಇಲ್ಲಿ ಮಠಾಧಿಪತಿಗಳಲ್ಲದೇ ಕವಿ–ಕಲಾವಿದರು, ಶಾಸ್ತ್ರಿಗಳು ಸಹ ಅಧ್ಯಯನ ಮಾಡಿದ್ದಾರೆ ಎಂದರು.

ಸದ್ಯದ ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ತಮ್ಮ ಷಷ್ಟ್ಯಬ್ದಿಯ ನಿಮಿತ್ತ ಸಮಾಜದಲ್ಲಿಯ ಬಡ ಮತ್ತು ಬುದ್ಧಿವಂತ ವಿದ್ಯಾರ್ಥಿಗಳಿಗೆ ಮೆಡಿಕಲ್ ಮತ್ತು ಎಂಜಿನೀಯರಿಂಗ್ ಉನ್ನತ ವ್ಯಾಸಂಗಕ್ಕಾಗಿ 61 ಜನ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಸಾವಿರ ರೂ. ಶಿಷ್ಯವೇತನ ಕೊಡುವ ವಿಚಾರ ಘೋಷಿಸಿರುವುದು ಕಾಶೀಪೀಠದ ಬಹುದೊಡ್ಡ ಸಮಾಜಸೇವೆ ಎಂದು ಪಂಚಪೀಠಗಳ ಸಮಾನ ಪೀಠಾಚಾರ್ಯರು ವ್ಯಕ್ತಪಡಿಸಿದರು. ಶ್ರೀ ಕಾಶೀ ಜಗದ್ಗುರುಗಳವರ ಪೀಠಾರೋಹಣದ 18ನೇ ವರ್ಷದ ವರ್ಧಂತಿ ನಿಮಿತ್ತ ಅವರಿಗೆ ಸಮಾನ ಪೀಠಾಚಾರ್ಯರು ಚಿನ್ನದ ಕಿರೀಟವನ್ನಿತ್ತು ಸರ್ವರಿಗೂ ಆಶೀರ್ವಚನ ನೀಡಿದರು.

ಮಹಾರಾಷ್ಟ್ರ ರಾಜ್ಯ ಗೃಹಸಚಿವ ಸಿದ್ಧರಾಮ ಮೇತ್ರೆ, ಸಂಸದ ಮಂಜುನಾಥ ಕುನ್ನೂರ ಉಪಸ್ಥಿತರಿದ್ದರು. ಸಭೆಯಲ್ಲಿ ಎಲ್ಲ ಪ್ರಾಂತಗಳ ನೂರಾರು ಜನ ಶಿವಾಚಾರ್ಯರು, ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.





ಪಂಚ ಪೀಠಾಧೀಶ್ವರರ ಸಾನ್ನಿಧ್ಯದಲ್ಲಿ ಕಾಶೀ ಜಗದ್ಗುರುಗಳ 61ನೇಯ ವರ್ಷದ ಹಾಗೂ ಪೀಠಾರೋಹಣದ ವರ್ಧಂತಿ ಮಹೋತ್ಸವವನ್ನು ವೈಭವಯುತವಾಗಿ ಸಹಸ್ರ ಸಹಸ್ರ ಸಂಖ್ಯೆಯ ಭಕ್ತಾದಿಗಳ ಎದುರು ನಡೆಸಲಾಯಿತು. ಈ ಶುಭ ಪ್ರಸಂಗದಲ್ಲಿ ಜಗದ್ಗುರು ಪಂಚಾಚಾರ್ಯರ ಅಮೃತಹಸ್ತದಿಂದ ನೂತನ ಭಕ್ತ ನಿವಾಸಗಳ ಉದ್ಘಾಟನೆಯಾಯಿತು. ಈಗ ಕಾಶೀಪೀಠದಲ್ಲಿ ಒಂದೇ ಬಾರಿಗೆ 2000 ಭಕ್ತಾದಿಗಳಿಗೆ ವಸತಿ ಹಾಗೂ ಪ್ರಸಾದದ ವ್ಯವಸ್ಥೆಯನ್ನು ಜಗದ್ಗುರುಗಳು ಕಲ್ಪಿಸಿದ್ದಾರೆ.

ಇತರ ರಾಜ್ಯಗಳಲ್ಲಿ ಜಗದ್ಗುರುಗಳಿಗೆ ಗುರುವಂದನೆ ಸಮಾರಂಭ.


6-8-2006 : ಮಳಖೇಡದಲ್ಲಿ ಜಗದ್ಗುರುಗಳ ಷಷ್ಟ್ಯಬ್ದಿ ಆಚರಣೆ ಬಹಳ ಭಕ್ತಿಯಿಂದ ನಡೆಸಿ ತುಲಾಭಾರ ಗುರುವಂದನೆ ಸಮಾರಂಭ ಏರ್ಪಡಿಸಿದ್ದರು.



11-11-06 : ಪುಣೆಯಲ್ಲಿ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರಿಗೆ ಗುರುವಂದನೆ ಸಲ್ಲಿಸಲಾಯಿತು.

11-11-2006 : ಪುಣೆಯಲ್ಲಿ ನಡೆದ ಷಷ್ಟ್ಯಬ್ದಿ ಸಮಾರಂಭ, ಪೀಠಾರೋಹಣದ 18ನೇ ವರ್ಧಂತ್ಯುತ್ಸವ ಹಾಗೂ ಗುರುವಂದನಾ ಸ್ವೀಕರಿಸಿ ಜಗದ್ಗುರುಳು, ಭಾರತವು ಆಧ್ಯಾತ್ಮಿಕ ಸಂಪತ್ತಿಗೆ ಹೆಸರುವಾಸಿಯಾಗಿದೆ. ಪಾರಮಾರ್ಥಿಕ ದೃಷ್ಟಿಯಲ್ಲಿ ಭಾರತವನ್ನು ಹೋಲುವ ಬೇರೊಂದು ದೇಶವಿಲ್ಲ. ಇಂತಹ ಸಂಪತ್ತು ಸದ್ಗುರುವಿನಿಂದ ದೊರೆಯುವುದರಿಂದ ಈ ದೇಶದಲ್ಲಿ ಸದ್ಗುರುವಿಗೆ ಶ್ರೇಷ್ಠ ಸ್ಥಾನವನ್ನು ಕೊಡಲಾಗಿದೆ ಎಂದರಲ್ಲದೆ ಜಗತ್ತಿನ ಇಂದಿನ ಪರಿಸ್ಥಿತಿ ನೋಡಿದರೆ ಮನಸ್ಸಿಗೆ ಉತ್ತಮ ಸಂಸ್ಕಾರದ ಕೊರತೆ ಎದ್ದು ಕಾಣುತ್ತದೆ. ಹಾಗಾಗಿಯೇ ವಿಧ್ವಂಸಕ ಕೃತ್ಯಗಳು ತಲೆಯೆತ್ತಿವೆ. ಸಂಸ್ಕಾರದಿಂದ ರಚನಾತ್ಮಕ, ಲೋಕಕಲ್ಯಾಣದ ಕಾರ್ಯಗಳು ನೆರವೇರಲು ಸಾಧ್ಯವಾಗುವುದೆಂದು ತಿಳಿಸಿದರು.

15-11-2006 ಬಂಕಾಪುರದ ಭಕ್ತಾದಿಗಳು ಜಗದ್ಗುರುಗಳ ತುಲಾಭಾರ ಮಾಡಿ ಗುರುಕಾಣಿಕೆಯನ್ನು ಸಮರ್ಪಿಸಿದರು.

20-12-2006


ಶಿಗ್ಗಾಂವ ತಾಲ್ಲೂಕಿನ ಬಂಕಾಪುರದ ಹುಚ್ಚೇಶ್ವರಮಠದಲ್ಲಿ ಇಷ್ಟಲಿಂಗ ಪೂಜೆ, ಸಿದ್ಧಾಂತ ಶಿಖಾಮಣಿ ಪ್ರವಚನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ನಾಣ್ಯದ ತುಲಾಭಾರ ನಡೆಯಿತು. ಉಜ್ಜೈನಿ ಜಗದ್ಗುರು ಶ್ರೀ ಮರುಳಸಿದ್ಧ ಸ್ವಾಮೀಜಿ, ರೇವಣಸಿದ್ಧೇಶ್ವರ ಸ್ವಾಮೀಜಿ, ಗುರುಲಿಂಗ ಜಂಗಮ ಶಿವಾಚಾರ್ಯರು, ಚನ್ನಬಸವಯ್ಯ ಸ್ವಾಮೀಜಿ, ಸಂಸದ ಮಂಜುನಾಥ ಕುನ್ನೂರ ಚಿತ್ರದಲ್ಲಿದ್ದಾರೆ.


ಶಿಗ್ಗಾಂವ ತಾಲ್ಲೂಕಿನ ಬಂಕಾಪುರದಲ್ಲಿ ನಡೆದ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ 18ನೇ ವರ್ಧಂತಿ ಮಹೋತ್ಸವದಲ್ಲಿ ಬಂಕಾಪುರದ ರೇವಣಸಿದ್ಧೇಶ್ವರ ಸ್ವಾಮೀಜಿ, ವಿಶ್ವಾರಾಧ್ಯ ಸ್ವಾಮೀಜಿ ಅವರು ಸ್ವಾಮೀಜಿಯವರನ್ನು ಸನ್ಮಾನಿಸಿದರು. ಶಶಿಧರ ಹುಚ್ಚಯ್ಯನಮಠ ಮತ್ತಿತರರು ಚಿತ್ರದಲ್ಲಿದ್ದಾರೆ.

ಶ್ರೀ ಜಗದ್ಗುರುಗಳ ತುಲಾಭಾರ

29-11-2006 : ತೇರದಾಳ, 29- ಇಲ್ಲಿಯ ಶ್ರೀ ಸಿದ್ಧಿವಿನಾಯಕ ಅಭಿವೃದ್ಧಿ ಸಂಘದ ವತಿಯಿಂದ ಇಂದು ಇಲ್ಲಿಗೆ ಆಗಮಿಸಿರುವ ಕಾಶೀ ಜ್ಞಾನಸಿಂಹಾಸನಾಧೀಶ್ವರ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಕ್ರಿಯಾಭಸ್ಮ ತುಲಾಭಾರ ಶ್ರದ್ಧಾಭಕ್ತಿಯಿಂದ ನೆರವೇರಿತು. ಶ್ರೀ ಪ್ರಭುಲಿಂಗ ಪದವಿಪೂರ್ವ ಮಹಾವಿದ್ಯಾಲಯದ ಆವರಣದಲ್ಲಿ ನಡೆದ ತುಲಾಭಾರ ಮಹೋತ್ಸವದಲ್ಲಿ ಯಡೂರು-ಹಿಪ್ಪರಗಿ ಹಿರೇಮಠದ ಡಾ. ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಆಶೀರ್ವಚನ ನೀಡಿ ವಿಭೂತಿಪುರುಷರಿಗೆ ಭಸ್ಮ ತುಲಾಭಾರ ನೆರವೇರಿಸಿ ತೇರದಾಳ ಭಕ್ತರು ಅರ್ಥವತ್ತಾದ ದಾಖಲೆ ಮಾಡಿದ್ದಾರೆ ಎಂದರು.

ಸಂಸ್ಕೃತಿ ಸಂರಕ್ಷಣೆಗೆ ಶ್ರಮಿಸಿ


ಕಾಶೀ ಜ್ಞಾನಪೀಠದ ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರನ್ನು ಧಾರವಾಡದಲ್ಲಿ ಷಷ್ಟ್ಯಬ್ದಿ ಸಮಾರಂಭಕ್ಕೆ ಭವ್ಯ ಮೆರವಣಿಗೆಯೊಂದಿಗೆ ಬರಮಾಡಿಕೊಳ್ಳಲಾಯಿತು.

ಧಾರವಾಡ, ಡಿ.30 ಜಗತ್ತಿನಲ್ಲಿಯ ಉತ್ಕೃಷ್ಟ ಸಂಸ್ಕೃತಿ ಹೊಂದಿದ ಭಾರತ ಸ್ವಾರ್ಥಪರ ಜನನಾಯಕರಿಂದ ಜರ್ಝರಿತ ವಾಗಿದೆ. ಧರ್ಮ ಹಾಗೂ ಆಧ್ಯಾತ್ಮಗಳಲ್ಲಿ ಆಸಕ್ತಿ ಬೆಳೆಸಿಕೊಂಡು ನಮ್ಮ ರಾಷ್ಟ್ರದ ಅಪೂರ್ವ ಸಂಸ್ಕೃತಿ ಕಾಪಾಡುವ ಮೂಲಕ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಆಶೀರ್ವಾದ

01–01–2007 ಬೆಂಗಳೂರು ವೀರಶೈವ ಅನುಸಂಧಾನ ಸಂಸ್ಥಾನವು 10 ದಿನಗಳ ಕಾಲ ವಿಶಿಷ್ಟ ರೀತಿಯಲ್ಲಿ ಜಗದ್ಗುರುಗಳ ಷಷ್ಟ್ಯಬ್ದಿ ಸಮಾರಂಭವನ್ನು ಆಚರಿಸಲಾಯಿತು. (ವಿವರಗಳಿಗೆ ನೋಡಿ ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಶಾಖೆಗಳಲ್ಲಿ)




ಜಗದ್ಗುರುಗಳವರ ಷಷ್ಟಬ್ಧಿ ನಿಮಿತ್ತ ಏರ್ಪಡಿಸಿದ್ದ ಆಧ್ಯಾತ್ಮಿಕ ಆಶೀರ್ವಚನದಲ್ಲಿ ಹೂವಿನಿಂದಲಂಕರಿಸಲಾದ ವೇದಿಕೆಯಲ್ಲಿ ಕಾಶೀ ಜಗದ್ಗುರುಗಳು.



ಕಾಶೀ ಜಗದ್ಗುರುಗಳ ಷಷ್ಠಬ್ಧಿ ಸಮಾರಂಭಕ್ಕೆ ಸಾನ್ನಿಧ್ಯ ವಹಿಸಲು ಆಗಮಿಸಿದ್ದ ಲಿಂ॥ ಶ್ರೀ ಶೈಲ ಜಗದ್ಗುರುಗಳ ಪುಷ್ಪವೃಷ್ಟಿ ಮಾಡಿದರು



ಕರ್ನಾಟಕ ರಾಜ್ಯದ ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಜಗದ್ಗುರುಗಳಿಗೆ ಪುಷ್ಪವೃಷ್ಟಿ ಮಾಡಿದರು. ಷಷ್ಟ್ಯಬ್ದಿ ನಿಮಿತ್ತ ಈ ವರ್ಷ 10 ದಿನಗಳ ಕಾಲ ವೇದಿಕೆಯ ಅಲಂಕಾರವನ್ನು ವೀರಶೈವ ಅನುಸಂಧಾನ ಸಂಸ್ಥಾನದ ಉಪಾಧ್ಯಕ್ಷರಾದ ಶ್ರೀ ಕೆ.ಜಿ. ಶಶಿಧರ್ ದಂಪತಿಗಳು ಸೇವೆಯನ್ನು ಸಲ್ಲಿಸಿದ್ದರು.



ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ಕಾಶೀ ಜಗದ್ಗುರುಗಳು ಸನ್ಮಾನ ಮಾಡಿದರು.

21–1–2007



21–1–2007 : ಹುಬ್ಬಳ್ಳಿಯ ವೀರ ಗಂಗಾಧರ ಸಮುದಾಯ ಭವನದಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಕಾಶೀ ಜ್ಞಾನಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರಿಗೆ ಪುಷ್ಪವೃಷ್ಟಿಗೈಯುವ ಮೂಲಕ ಗುರುವಂದನೆ ಸಲ್ಲಿಸಲಾಯಿತು. ಡಾ. ಗಂಗೂಬಾಯಿ ಹಾನಗಲ್ ಮತ್ತಿತರರು ಪಾಲ್ಗೊಂಡಿದ್ದರು.

23–4–2007



23–4–07 : ವಿಜಾಪುರದ ಇಬ್ರಾಹಿಂಪೂರ ಬಡಾವಣೆಯಲ್ಲಿ ಬಬಲೇಶ್ವರ ಬೃಹನ್ಮಠ ಶಾಖಾಮಠದ ಭೂಮಿಪೂಜೆ ಸಮಾರಂಭದಲ್ಲಿ ಸೋಮವಾರ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ತುಲಾಭಾರ ನಡೆಯಿತು. ಡಾ. ಮಹಾದೇವ ಶಿವಾಚಾರ್ಯರು ಮತ್ತಿತರ ಗಣ್ಯರು ಹಾಜರಿದ್ದರು.

15–5–2007

ನಾಳೆ ಶ್ರೀಗಳ ತುಲಾಭಾರ

ವಿಜಯ ಕರ್ನಾಟಕ, 15–5–2007

ಗುಳೇದಗುಡ್ಡ, 13–ವಾರಾಣಾಸಿಯ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಷಷ್ಟ್ಯಬ್ದಿ ತುಲಾಭಾರ ಮತ್ತು ಅಮರೇಶ್ವರ ಶ್ರೀಗಳ 38ನೇ ಪುಣ್ಯಾರಾಧನೆ ದಿ. 15ರಂದು ಮುಂಜಾನೆ 11.30ರಿಂದ ಅಮರೇಶ್ವರ ಮಠದಲ್ಲಿ ನಡೆಯಲಿದೆ.

20–6–2007



20–6–2007 : ಹಿರೇಬೆಂಡಿಗೇರಿಯಲ್ಲಿ ಕಾಶೀಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ತುಲಾಭಾರ ನಡೆಯಿತು.

29–6–2007



ಬಿಲ್‌ಕೆರೂರಿನಲ್ಲಿ ಕಾಶೀ ಜಗದ್ಗುರುಗಳ ತುಲಾಭಾರ ನೆರವೇರಿತು. ಶಾಸಕ ಎಸ್.ಆರ್. ಪಾಟೀಲ, ಶ್ರೀಗಳು ಚಿತ್ರದಲ್ಲಿದ್ದಾರೆ. ಸಾಮೂಹಿಕ ವಿವಾಹದಲ್ಲಿ ಹಸೆಮಣೆ ಏರಿದ ಜೋಡಿಗಳು. (ಒಳಚಿತ್ರ)

4–7–2007



ಗುಳೇದಗುಡ್ಡದ ವಸ್ತ್ರದ ಕಲ್ಯಾಣ ಮಂಟಪದಲ್ಲಿ ನಡೆದ ಸಮಾರಂಭದಲ್ಲಿ ಘನಶಾಮದಾಸ ರಾಠಿ ಪರಿವಾರ ಕಾಶೀ ಜಗದ್ಗುರುಗಳ ತುಲಾಭಾರ ಸೇವೆ ನಡೆಸಿಕೊಟ್ಟರು.

ಗುಳೇದಗುಡ್ಡ, ಜು. 3–ಪ್ರತಿಯೊಬ್ಬನಿಗೂ ಜೀವನದಲ್ಲಿ ಗುರಿಯಿರಬೇಕು, ಆ ಗುರಿ ಸಾಧನೆಗೆ ಒಬ್ಬ ಗುರು ಬೇಕು ಎಂದು ಕಾಶೀ ಜ್ಞಾನಸಿಂಹಾಸನಾಧೀಶ್ವರ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಅವರು ಸ್ಥಳೀಯ ವಸ್ತ್ರದ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಷಷ್ಟ್ಯಬ್ದಿ ಮತ್ತು ತುಲಾಭಾರ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಎಲ್ಲ ಜೀವಿಗಳನ್ನು ಭೌತಿಕ ಆಕರ್ಷಣೆಯಿಂದ ದೂರವಿರಿಸಿ ಸರ್ವರನ್ನು ಸಮಚಿತ್ತರನ್ನಾಗಿ ಮಾಡುವ ಸಾಮರ್ಥ್ಯ ಆಧ್ಯಾತ್ಮ ವಿದ್ಯೆಗೆ ಇದೆ ಎಂದರು. ತುಲಾಭಾರದಿಂದ ಬಂದ ಹಣದಿಂದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನಿಧಿ ಸ್ಥಾಪಿಸಲಾಗಿದ್ದು, ಈಗಾಗಲೇ ಅನೇಕ ಬಡ ವಿದ್ಯಾರ್ಥಿಗಳು ಶಿಷ್ಯ ವೇತನ ನಿಧಿಯಿಂದ ಎಂಜಿನಿಯರಿಂಗ್, ಮೆಡಿಕಲ್ ಓದುತ್ತಿದ್ದಾರೆ ಎಂದರು.



30–7–07 : ರಾಣೇಬೆನ್ನೂರಿನಲ್ಲಿ ನಡೆದ ಜ್ಞಾನವಾಹಿನಿ ಗುರುಪೌರ್ಣಿಮೆ ಮಾಸಿಕ ಧರ್ಮಸಭೆಯನ್ನು ವಿ.ಬಿ. ಅಂಗಡಿ ಉದ್ಘಾಟಿಸಿದರು. ಶಕುಂತಲಾ ಅಂಗಡಿ, ಪುಟ್ಟರಾಜ, ಶೋಭಾ, ಕಾಶೀ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಚಿತ್ರದಲ್ಲಿದ್ದಾರೆ.


ಧರ್ಮದಾಶ್ರಯದಿಂದ ಶಾಂತಿ, ನೆಮ್ಮದಿ



18-12-2007 : ಮಸ್ಕಿ ಸಮೀಪದ ಬಳಗಾನೂರು ಬೃಹನ್ಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಪ್ರವಚನ ಹಾಗೂ ತುಲಾಭಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಕಾಶೀಪೀಠದ ಡಾ. ಚಂದ್ರಶೇಖರ ಶಿವಾಚಾರ್ಯರು, ವೀರಭದ್ರ ಶಿವಾಚಾರ್ಯರು ಹಾಗೂ ಮಾಜಿ ಕೇಂದ್ರ ಸಚಿವ ಬಸವರಾಜ ಪಾಟೀಲ ಅನ್ವರಿ ಇನ್ನಿತರರಿದ್ದಾರೆ.

25-12-08 : ಹಿರೇಕೆರೂರು : ತಾಲೂಕಿನ ಮುದ್ದಿನಕೊಪ್ಪ ಗ್ರಾಮದಲ್ಲಿ ಡಿ.25, 26ರಂದು ಅಡ್ಡಪಲ್ಲಕ್ಕಿ ಮಹೋತ್ಸವ, ತುಲಾಭಾರ, ಕರೆಗಲ್ಲು ಪ್ರತಿಷ್ಠಾಪನೆ ಹಾಗೂ ಬಾವೈಕ್ಯ ಧರ್ಮ ಜಾಗೃತಿ ಕಾರ್ಯಕ್ರಮಗಳು ನಡೆಯಲಿವೆ.

ಡಿ. 25ರಂದು ಶ್ರೀ ದುರ್ಗಾಂಬಿಕೆ, ಶ್ರೀ ಮಾತಂಗೇಶ್ವರಿ ಗ್ರಾಮ ದೇವತೆಗಳಿಗೆ ಅಭಿಷೇಕ ಹಾಗೂ ಉಡಿ ತುಂಬುವುದು, ಶ್ರೀ ಬಸವಣ್ಣ, ಆಂಜನೇಯ ಸ್ವಾಮಿಗೆ ರುದ್ರಾಭಿಷೇಕ ಮಣಕೂರು ಹಾಲಸ್ವಾಮಿ ಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜರುಗುವುದು.



27-1-2008 : ಶಿಗ್ಗಾವಿ ತಾಲೂಕಿನ ಬಂಕಾಪುರ ಹುಚ್ಚಯ್ಯನವರ ಮಠದಲ್ಲಿ ನಡೆದ ಮೂರನೇ ದಿನದ ಇಷ್ಟಲಿಂಗಪೂಜೆ ಹಾಗೂ ಗುರುವಂದನಾ ಸಮಾರಂಭದಲ್ಲಿ ಕಾಶೀ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರ ತುಲಾಭಾರಕಾರ್ಯಕ್ರಮವನ್ನು ಶಿಗ್ಗಾವಿಯ ಪಾಟೀಲ ಬಂಧುಗಳು ನೆರವೇರಿಸಿದರು.



25-12-2008 : ಶಿಗ್ಗಾವಿ ತಾಲೂಕಿನ ಬಂಕಾಪುರ ಹುಚ್ಚಯ್ಯನವರ ಮಠದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರ ತುಲಾಭಾರ ನೆರವೇರಿತು.

11-6-2010

ಗುರು, ಮಾತಾಪಿತೃ ಋಣ ತೀರಿಸಿ : ಕಾಶೀ ಶ್ರೀಗಳು ವಿಜಯ ಕರ್ನಾಟಕ, 11-06-2010

ಜೀವನದಲ್ಲಿ ಪ್ರತಿಯೊಬ್ಬರ ಮೇಲೆ ದೇವಋಣ, ಮಾತಾಪಿತೃ ಋಣ ಮತ್ತು ಗುರುವಿನ ಋಣಗಳಿರುತ್ತವೆ. ಈ ಋಣಗಳಿಂದ ಮುಕ್ತರಾದಾಗ ಮಾತ್ರ ಮುಕ್ತಿ ಸಿಗಲು ಸಾಧ್ಯ ಎಂದು ಕಾಶೀ ಶ್ರೀಗಳಾದ ಡಾ. ಚಂದ್ರಶೇಖರ ಶಿವಾಚಾರ್ಯರು ಹೇಳಿದರು.

ಗುರುವಾರ ಕೋಟೆಕಲ್ ಅಮರೇಶ್ವರ ಮಠದಲ್ಲಿ ಲಿಂ. ಅಮರೇಶ್ವರ ಶ್ರೀಗಳ 41 ಪುಣ್ಯಾರಾಧನೆ ಹಾಗೂ ತುಲಾಭಾರ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿದರು.

ನಿಸರ್ಗ ನಮ್ಮಿಂದ ಏನನ್ನೂ ಅಪೇಕ್ಷಿಸದೆ ಎಲ್ಲವನ್ನೂ ನೀಡಿದೆ. ಹಾಗೆಯೇ ಸಜ್ಜನರೂ ಯಾವಾಗಲೂ ಮತ್ತೊಬ್ಬರಿಗೆ ಉಪಕಾರ ಮಾಡುತ್ತಾರೆ. ಇಂತಹ ಸಜ್ಜನರ ಸಾಲಿನಲ್ಲಿ ಅಮರೇಶ್ವರ ಶ್ರೀಗಳು ಬರುತ್ತಾರೆ. ಅವರೊಬ್ಬ ಮಹಾನ್ ಸಂತ ಎಂದು ಬಣ್ಣಿಸಿದರು.

ತಮ್ಮ ಕಾಶೀ ಪೀಠಕ್ಕೆ ಭಕ್ತರು ನೀಡುವ ದೇಣಿಗೆ ಬಹುಪಾಲನ್ನು ಸಮಾಜದ ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ವಿನಿಯೋಗಿಸಲಾಗುತ್ತಿದೆ. ಪ್ರತಿ ತಿಂಗಳು ತಲಾ ಸಾವಿರ ರೂ.ಗಳಂತೆ ಬಡ ಪ್ರತಿಭಾನ್ವಿತ 100 ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ ಎಂದರು.

ಡಾ. ಶಿವಕುಮಾರ ಶ್ರೀ, ಕಾಶಿನಾಥ ಶ್ರೀಗಳು, ನೀಲಕಂಠ ದೇವರು, ಬಸವರಾಜ ಶಾಸ್ತ್ರಿಗಳು, ಶಿವಪುತ್ರಪ್ಪ ಹಟ್ಟಿ ಮಾತನಾಡಿದರು.



ಗುಳೇದಗುಡ್ಡ ಸಮೀಪದ ಕೋಟೆಕಲ್ ಅಮರೇಶ್ವರ ಮಠದಲ್ಲಿ ಗುರುವಾರ ಅಮರೇಶ್ವರ ಶ್ರೀಗಳ 41ನೇ ಪುಣ್ಯಾರಾಧನೆಯಲ್ಲಿ ಕಾಶೀ ಜಗದ್ಗುರು ಶ್ರೀ ಚಂದ್ರಶೇಖರ ಶಿವಾಚಾರ್ಯರ ತುಲಾಭಾರ ನಡೆಯಿತು. ಶ್ರೀಗಳ ಪೂರ್ವಾಶ್ರಮದ ತಾಯಿ ಸಾವಂತ್ರಮ್ಮ ಉಪಸ್ಥಿತರಿದ್ದರು.

ಕಾಶೀ ಶ್ರೀಗಳು ಆರಂಭಿಸಿರುವ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳ ನಿಧಿಗೆ ಗುಳೇದಗುಡ್ಡದ ಶಶಿಕಲಾ ವಿರುಪಾಕ್ಷ ತಿಪ್ಪಾ ಲಕ್ಷ ರೂ.ಚೆಕ್‌ನ್ನು ಶ್ರೀಗಳಿಗೆ ನೀಡಿದರು. ನಂತರ ಕಾಶೀ ಶ್ರೀಗಳ ತುಲಾಭಾರ ನಡೆಯಿತು. ಬಾಗಲಕೋಟೆ ನಿವೃತ್ತ ಸಹಾಯಕ ಆರಕ್ಷಕ ನಿರೀಕ್ಷಕ ಆರ್. ಎಂ.ರಾಂಪೂರ ತುಲಾಭಾರ ಸೇವೆ ಮಾಡಿದರು.

ಪ್ರಭು ಮರಬದ, ನಿರಂಜನ ಆರಾಧ್ಯ, ನಿಜಗುಣಿ ಆರಾಧ್ಯ, ವೀರಭದ್ರಯ್ಯ ಹೊಸಮಠ, ಎಂ.ಎಂ. ಕಮತಗಿ ಮತ್ತಿತರರು ಇದ್ದರು.

ಈಶ್ವರನ ಕೃಪೆ ಇದ್ದರೂ ತಂದೆ ತಾಯಿ ಇಲ್ಲದೆ ನಾವು ಭೂಮಿಗೆ ಬರಲು ಸಾಧ್ಯವಿಲ್ಲ. ಹೀಗಾಗಿ ತಂದೆ-ತಾಯಿ ಋಣ ಎಲ್ಲರ ಮೇಲಿರುತ್ತದೆ. ಇನ್ನು ಸಮಾಜದಲ್ಲಿ ಬದುಕಲು ಗುರುವಿನ ಮಾರ್ಗದರ್ಶನವೂ ಅಗತ್ಯ. ಹಾಗಾಗಿ ಈ ಮೂವರ ಋಣಗಳನ್ನು ಪ್ರತಿಯೊಬ್ಬರೂ ತೀರಿಸಲೇಬೇಕು. ಅದಕ್ಕಾಗಿ ನಾವು ಜೀವನದಲ್ಲಿ ಉಪಕಾರ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಉಪಕಾರಕ್ಕಾಗಿ ಪ್ರತಿಯಾಗಿ ಏನನ್ನೂ ಅಪೇಕ್ಷಿಸಬಾರದು.

ಸಾರ್ಥಕತೆ ಕಂಡ ಮಾತೃ ಜೀವ

ಅಮರೇಶ್ವರ ಮಠದಲ್ಲಿ ಗುರುವಾರ ನಡೆದ ಡಾ. ಚಂದ್ರಶೇಖರ ಶಿವಾಚಾರ್ಯರ ತುಲಾಭಾರ ಕಾರ್ಯಕ್ರಮವನ್ನು ಅವರ ಪೂರ್ವಾಶ್ರಮದ ತಾಯಿ 85ರ ಸಾವಂತ್ರಮ್ಮ ಪುರಾಣಮಠ ಕಣ್ಣಾರೆ ಕಂಡು ಸಂತಸಪಟ್ಟರು. ಮಗನನ್ನು ಗುರುವಿನ ಸ್ಥಾನದಲ್ಲಿ ಕಂಡು ಪುನೀತರಾದ ಅವರು ಈ ಗುರುವಿನಿಂದ ಸಮಾಜಕ್ಕೆ ಇನ್ನಷ್ಟು ಒಳ್ಳೆಯದಾಗಲಿ ಎಂದರು.

ಕಾಶಿ ಶ್ರೀಗಳ ಸಡಗರದ ಜನ್ಮದಿನ

ವಿಜಯ ಕರ್ನಾಟಕ, 21-8-2010



ಹುಮನಾಬಾದ್‌ನಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ 64ನೇ ಜನ್ಮದಿನೋತ್ಸವ ನಿಮಿತ್ತ ಶನಿವಾರ ನಡೆದ ನಾಗರಿಕ ಸನ್ಮಾನ ಕಾರ್ಯಕ್ರಮದಲ್ಲಿ ಶಾಸಕರಾದ ಬಸವರಾಜ ಪಾಟೀಲ್ ಹುಮನಾಬಾದ್, ರಾಜಶೇಖರ ಪಾಟೀಲ್, ಸೇವಾ ಸಮಿತಿ ಉಪಾಧ್ಯಕ್ಷ ವೀರಣ್ಣ ಪಾಟೀಲ್ ಶ್ರೀಗಳನ್ನು ಸತ್ಕರಿಸಿ ಆಶೀರ್ವಾದ ಪಡೆದುಕೊಂಡರು.

ಹುಮನಾಬಾದ್ ಪಟ್ಟಣದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ 64ನೇ ಜನ್ಮದಿನೋತ್ಸವ ಸಮ್ಮುಖದಲ್ಲಿ ಸಡಗರ ಸಂಭ್ರಮದಿಂದ ಜರುಗಿತು.

ಬೆಳಗ್ಗೆಯಿಂದ ಮಧ್ಯಾಹ್ನ 12ರವರೆಗೆ ಜಗದ್ಗುರುಗಳ ಇಷ್ಟಲಿಂಗಪೂಜೆ, ಸಂಗೀತ, ರುದ್ರಪೂಜೆ ನಂತರ ಬಡ ಮಕ್ಕಳಿಗೆ ಶಾಲಾ ಸಾಮಗ್ರಿ ವಿತರಣೆ, 64 ವೃಕ್ಷರೋಪಣ ಕಾರ್ಯಕ್ರಮ ಜರುಗಿದವು. ಸಂಜೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶ್ರೀಗಳ ಸಾನ್ನಿಧ್ಯದಲ್ಲಿ ಸದ್ಭಾವನಾ ಪಾದಯಾತ್ರೆ ಜರುಗಿತು. ಕಳಶ ಹೊತ್ತ ಮಹಿಳೆಯರು ಸೇರಿದಂತೆ ಅಪಾರ ಭಕ್ತಾದಿಗಳು ಪಾಲ್ಗೊಂಡಿದ್ದರು.

ನಂತರ ದೇವಸ್ಥಾನದ ಆವರಣದಲ್ಲಿ, ಶ್ರೀಗಳು ರಷ್ಯಾ ದೇಶದಲ್ಲಿ ಯಶಸ್ವಿ ಧರ್ಮ ಪ್ರಚಾರ ನಡೆಸಿದ ಹಾಗೂ ಅವರ ಹುಟ್ಟುಹಬ್ಬದ ನಾಗರಿಕ ಸನ್ಮಾನ ಕಾರ್ಯಕ್ರಮವನ್ನು, ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ್ ಹುಮನಾಬಾದ್ 64 ದೀಪ ಬೆಳಗಿಸುವ ಮೂಲಕ ನೆರವೇರಿಸಿದರು. ಶ್ರೀರಣ ಸೇವಾ ಸಮಿತಿ ಅಧ್ಯಕ್ಷ ಶಾಸಕ ರಾಜಶೇಖರ ಪಾಟೀಲ್, ಉಪಾಧ್ಯಕ್ಷ ವೀರಣ್ಣ ಪಾಟೀಲ, ರಾಜಶೇಖರ ಸ್ವಾಮಿ ಗೋರ್ಟಾ, ರಾಜ್ಯ ಹಾಗೂ ಆಂಧ್ರ, ಮಹಾರಾಷ್ಟ್ರ, ಹರಿಯಾಣ ಮತ್ತು ರಾಜಸ್ಥಾನಗಳಿಂದ ಬಂದಿದ್ದ ವೀರಶೈವ ಸಂಘಟನೆಯ ಪ್ರಮುಖರು, ರಾಜಕೀಯ ಧುರೀಣರು ಶ್ರೀಗಳನ್ನು ಸತ್ಕರಿಸಿದರು.

ಶ್ರೀಗಳ ರಾಷ್ಟ್ರೀಯ ಭಾವೈಕ್ಯ ಹಾಗೂ ವೀರಶೈವ ಧರ್ಮ ಪ್ರಚಾರದಲ್ಲಿ ನಿರಂತರವಾಗಿ ಶ್ರಮಿಸಿ ಸರ್ವರನ್ನು ಧರ್ಮದೆಡೆಗೆ ತರುತ್ತಿರುವ ಕಾರ್ಯವನ್ನು ಶ್ಲಾಘಿಸಿದರು. ತಮ್ಮ ಹುಟ್ಟು ಹಬ್ಬಕ್ಕೆ ಭಕ್ತಾದಿಗಳು ನೀಡಿದ ಕಾಣಿಕೆಯನ್ನು ಬಡ ವಿದ್ಯಾರ್ಥಿಗಳಿಗೆ ವಿನಿಯೋಗಿಸಲಾಗುವುದು ಎಂದು ಶ್ರೀಗಳು ಇದೇ ಸಂದರ್ಭದಲ್ಲಿ ಘೋಷಿಸಿದರು.

26-3-2011 : ಮೂಡಬೂಳ (ಶಹಾಪುರ)ದಲ್ಲಿ 17ನೇ ಜಾತ್ರಾ ಮಹೋತ್ಸವದ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಭಾಗಿಯಾಗಿದ್ದ ಕಾಶೀ ಜಗದ್ಗುರುಗಳ ತುಲಾಭಾರವನ್ನು ಅಡಿವೆಪ್ಪ ಸಾಹು ಕುಟುಂಬದವರು ನೆರವೇರಿಸಿದರು.



4-5-2011 : ಗುಳೇದಗುಡ್ಡ ಸಮೀಪದ ಕೊಟಿಕಲ್-ಅಮರೇಶ್ವರ ಮಠದಲ್ಲಿ ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ತುಲಾಭಾರ ಕಾರ್ಯಕ್ರಮ ನಡೆಯಿತು.

ಶ್ರವಣದಿಂದಲೇ ಆತ್ಮದರ್ಶನ : ಕಾಶೀ ಶ್ರೀಗಳು

ವಿಜಯ ಕರ್ನಾಟಕ, 13-80-2011



ಹುಮನಾಬಾದ ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಶೀ ಶ್ರೀಗಳು ಪಾಲ್ಗೊಂಡಿದ್ದರು.

ಆಧ್ಯಾತ್ಮ ಗ್ರಂಥಗಳ ಶ್ರವಣದಿಂದಲೇ ಆತ್ಮದರ್ಶನವಾಗುವುದು ಎಂದು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ತಮ್ಮ ಆಶೀರ್ವಚನದಲ್ಲಿ ಹೇಳಿದರು.

ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣಮಾಸದ ನಿಮಿತ್ತ ಹಮ್ಮಿಕೊಂಡಿದ್ದ ಶ್ರೀ ಸಿದ್ಧಾಂತ ಶಿಖಾಮಣಿ ಆಶೀರ್ವಚನ ಕಾರ್ಯಕ್ರಮದಲ್ಲಿ ಈ ವಿಚಾರ ತಿಳಿಸಿದರು.

ಮರದೊಳಗೆ ಮಂದಾಗ್ನಿ ಇರುವಂತೆ ನೊರೆವಾಲೊಳಗೆ ತುಪ್ಪವಿರುವಂತೆ ಸರ್ವರ ಶರೀರದೊಳಗೆ ಆತ್ಮತತ್ತ್ವವು ನಿಹಿತವಾಗಿದೆ ಎಂಬ ವಿಚಾರವನ್ನು ಜೇಡರದಾಸಿಮಯ್ಯನವರು ತಮ್ಮ ವಚನದಲ್ಲಿ ವಿಶ್ಲೇಷಿಸಿದ್ದಾರೆ. ಹೀಗೆ ಶರೀರದೊಳಗೆ ಅಡಗಿರುವ ಆತ್ಮತತ್ತ್ವ ಅರಿಯಲು ಶ್ರವಣ ಭಕ್ತಿಯೇ ಸುಲಭ ಸಾಧನವಾಗಿದೆ. ಆತ್ಮತತ್ತ್ವವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಲು ಶ್ರವಣ, ಮನನ ಮತ್ತು ನಿಧಿಧ್ಯಾಸನಗಳೆಂಬ ಉಪಾಯಗಳಿವೆ ಎಂದು ಹೇಳಲಾಗಿದೆ.

ಏಕಾಗ್ರಚಿತ್ತದಿಂದ ಸದ್ಗುರುವಿನ ಉಪದೇಶ ಆಲಿಸುವುದಕ್ಕೆ ಶ್ರವಣವೆಂದು ಕರೆದಿದ್ದಾರೆ. ಈ ರೀತಿಯಿಂದ ಶ್ರವಣ ಮಾಡುವುದಕ್ಕಾಗಿಯೇ ಮೀಸಲಾಗಿರುವ ಮಾಸವೇ ಶ್ರಾವಣಮಾಸವು. ಕಾರಣ ಈ ಪವಿತ್ರವಾದ ಶ್ರಾವಣಮಾಸದಲ್ಲಿ ಎಲ್ಲೆಲ್ಲಿ ಕೇಳಲು ಅನುಕೂಲಗಳಿರುವವೋ ಅಲ್ಲೆಲ್ಲ ಸಮಯವನ್ನು ಸಾಧಿಸಿಕೊಂಡು ಪ್ರತಿಯೊಬ್ಬರೂ ಅವಶ್ಯವಾಗಿ ಶ್ರವಣ ಮಾಡಬೇಕು ಎಂದರು. ಶಿವನ ಆದೇಶದ ಮೇರೆಗೆ ಲಿಂಗೋದ್ಭವರಾಗಿ ಅವತರಿಸಿದ ಜಗದ್ಗುರು ರೇಣುಕ ಭಗವತ್ಪಾದರು ಮನುಕುಲಕ್ಕೆಲ್ಲ ಆತ್ಮದರ್ಶನ ಮಾಡಿಕೊಡುವುದಕ್ಕಾಗಿಯೇ ಅಗಸ್ತ್ಯಮಹರ್ಷಿಗೆ ನೂರೊಂದು ಸ್ಥಲಗಳ ಆಧ್ಯಾತ್ಮ ತತ್ತ್ವೋಪದೇಶ ಮಾಡಿದ್ದಾರೆ. ಉಪದೇಶವನ್ನು ಶಿವಯೋಗಿ ಶಿವಾಚಾರ್ಯರು ಸಂಗ್ರಹಿಸಿ ಇಂದು ಲೋಕಕಲ್ಯಾಣಕ್ಕಾಗಿ ಸಮರ್ಪಿಸಿದ್ದಾರೆ. ಆ ರೇಣುಕರ ಪ್ರಸಾದವಾಣಿಯನ್ನು ಶ್ರವಣಮಾಡಿ ಸರ್ವರೂ ಆತ್ಮ ದರ್ಶನ ಲಾಭ ಪಡೆದುಕೊಳ್ಳಬೇಕೆಂದು ತಿಳಿಸಿದರು.



7–6–2013 : ಗುಳೇದಗುಡ್ಡ : ಅಮರೇಶ್ವರ ಮಠದಲ್ಲಿ ಕಾಶೀ ಪೀಠದ ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಗೆ ತುಲಾಭಾರ ಕಾರ್ಯಕ್ರಮ ನಡೆಯಿತು.

ಗುರುವಂದನಾ ಕಾರ್ಯಕ್ರಮ, ಜಗದ್ಗುರುಗಳ ಜನ್ಮದಿನೋತ್ಸವ ಹಾಗೂ ತುಲಾಭಾರ ಇಂದಿಗೂ ನಡೆಯುತ್ತಲೇ ಇದೆ. ಆಯುರ್ವೇದಶಾಸ್ತ್ರದಲ್ಲಿ ಮನುಷ್ಯನಿಗೆ 120ವರ್ಷ ಆಯುಷ್ಯ ಹೇಳಲಾಗಿದೆ. ಮೊದಲ 60 ವರ್ಷಗಳು ಮನುಷ್ಯ ತನ್ನ ಮನೆತನ, ವ್ಯವಹಾರ, ವಿದ್ಯಾಭ್ಯಾಸಕ್ಕೆ ಬಳಸಿಕೊಳ್ಳುತ್ತಾನೆ. ಲೌಕಿಕ ಬದುಕನ್ನು ಈ 60 ವರ್ಷಗಳಲ್ಲಿ ನಡೆಸಿರುವ ಮನುಷ್ಯ ಮುಂದಿನ 60ವರ್ಷ ಆತ ಲೋಕಕಲ್ಯಾಣ ಕಾರ್ಯ ಆತ್ಮ ಕಲ್ಯಾಣದ ಬಗ್ಗೆ ಚಿಂತಿಸಬೇಕು. ಮುಪ್ಪಿನ ಕಾಲದಲ್ಲಿ ರಾಗದ್ವೇಷಾದಿಗಳಿಂದ ಮುಕ್ತರಾಗಿ ಯೋಗಜೀವನವನ್ನು ಸಾಗಿಸಬೇಕು. ಶರೀರ ಮರಣ ಹೊಂದುವ ಸಮಯದಲ್ಲಿ ಮಾನಸಿಕವಾಗಿ, ಶಾರೀರಿಕವಾಗಿ ಸ್ವಸ್ಥರಾಗಿರಬೇಕು. ಅಂದಾಗಲೇ ಯೋಗಮಾರ್ಗದಿಂದ ಶರೀರ ತ್ಯಜಿಸಲು ಸಾಧ್ಯ ಎಂಬುದು ಕಾಶೀ ಜಗದ್ಗುರುಗಳು ಎಲ್ಲೆಡೆ ಬೋಧನೆ ಮಾಡುತ್ತಿರುತ್ತಾರೆ.

ಆರ್ಥಿಕ ಆಧಾರಿತ ಮೀಸಲಾತಿ ಜಾರಿಗೆ ಬರಲಿ

ಸಂಯುಕ್ತ ಕರ್ನಾಟಕ, 23–1–2007



ಹುಬ್ಬಳ್ಳಿ ರಂಭಾಪುರಿ ಜಗದ್ಗುರು ವೀರಗಂಗಾಧರ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಕಾಶೀ ಜಗದ್ಗುರುಗಳಿಗೆ ಕಂದಾಯ ಸಚಿವರು ಗುರುವಂದನೆ ಸಲ್ಲಿಸಿದರು. ಎಸ್.ಎಸ್. ಶೆಟ್ಟರ ಮುಂತಾದವರು ಉಪಸ್ಥಿತರಿದ್ದರು.

ಹುಬ್ಬಳ್ಳಿ 23–ಪ್ರತಿಭೆಗಳ ವಿಕಾಸವೇ ರಾಷ್ಟ್ರದ ಅಭ್ಯುದಯಕ್ಕೆ ಕಾರಣವಾಗಿದೆ, ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವಲ್ಲಿ ಸಮಾಜ ಎಡವಿದೆ. ಬಡತನದ ರೇಖೆಗಿಂತ ಕೆಳಸ್ತರದಲ್ಲಿರುವ ಪ್ರತಿಭೆಗಳಿಗೆ ಸೂಕ್ತ ಆರ್ಥಿಕ ನೆರವು, ಬಲ–ಬೆಂಬಲ ದೊರೆಯದೇ ಅವು ಚಿಗುರಿ ಕವಲೊಡೆದು ಬೆಳೆದು ಬಲಿಯುವ ಮುನ್ನವೇ ಕಮರಿಹೋಗುತ್ತಿವೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಜಾತಿ ಆಧಾರಿತ ಮೀಸಲಾತಿಗಿಂತ ಆರ್ಥಿಕ ನೆಲೆ ಆಧಾರಿತ ಮೀಸಲಾತಿ ವ್ಯವಸ್ಥೆ ಜಾರಿಗೆ ತಂದು ಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕೆಂದು ಕಾಶೀ ಜ್ಞಾನಪೀಠದ ಡಾ. ಚಂದ್ರಶೇಖರ ಮಹಾಸ್ವಾಮಿಗಳು ಸೂಚಿಸಿದ್ದಾರೆ.

ಪ್ರತಿಭೆಗಳ ವ್ಯಾಸಂಗ ಮತ್ತು ವಿಕಾಸಕ್ಕೆ ಆರ್ಥಿಕ ಬಲದ ಅವಶ್ಯಕತೆ ಇದೆ. ಸ್ವಾರ್ಥಪರ ಚಿಂತನೆಯೆ ಮನಸ್ಸುಗಳಲ್ಲಿ ಸುತ್ತುವರಿದಿರುವ ಸಮಾಜದಲ್ಲಿ ಸಮಷ್ಟಿ ಆಶಯಗಳು ಮಂಕಾಗಿವೆ. ವ್ಯಕ್ತಿತ್ವ ನಿರ್ಮಾಣಕ್ಕಿಂತ ವ್ಯಕ್ತಿಗಳು ತಮಗೆ ತಿಳಿದ ದಾರಿಯಲ್ಲಿ ಹೆಜ್ಜೆಹಾಕಿ ಸಂಸ್ಕೃತಿ, ಧರ್ಮ, ಆಧ್ಯಾತ್ಮದ ಅನುಸಂಧಾನದ ವಿದ್ಯಮಾನಗಳಿಂದ ದೂರಸರಿಯುತ್ತಿರುವುದು ನೋವಿನ ಸಂಗತಿಯಾಗಿದೆ ಎಂದು ಶ್ರೀ ಕಾಶೀ ಜಗದ್ಗುರುಗಳು, ರಾಷ್ಟ್ರ ಸಮಗ್ರವಾಗಿ ಮತ್ತು ಸಮರ್ಥವಾಗಿ ಬೆಳೆಸಲು ಪ್ರತಿಭೆಗಳು ಎಲ್ಲಾ ನೆಲೆಗಳಲ್ಲಿ ವಿಕಾಸ ಹೊಂದುವ ಅಗತ್ಯವಿದೆ ಎಂದರು. ನಾಡಿನಾದ್ಯಂತ ಜರುಗುವ ತಮ್ಮ ಷಷ್ಟ್ಯಬ್ದಿಪೂರ್ಣ ಸಮಾರಂಭದ ಹಿನ್ನೆಲೆಯಲ್ಲಿ ಜರುಗುವ 'ಗುರುವಂದನಾ ಸಮಾವೇಶ'ಗಳ ಮೂಲಕ ಲಭಿಸುವ ಎಲ್ಲ ಗುರುಕಾಣಿಕೆಯನ್ನು ಶ್ರೀ ಕಾಶೀ ಜಗದ್ಗುರು ಪೀಠದಲ್ಲಿ ಸ್ಥಾಪಿಸಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದಲ್ಲಿ ರೂಪಿಸಿರುವ ವಿದ್ಯಾರ್ಥಿ ಸ್ಥಿರನಿಧಿ ಯೋಜನಾ ಘಟಕಕ್ಕೆ ಜಮಾಮಾಡಿ, ಆ ಮೂಲಕ ಬಡತನ ರೇಖೆಗಿಂತ ಕೆಳಗಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಿರಂತರ ಶಿಷ್ಯವೇತನ ನೀಡುವ ಯೋಜನೆಯನ್ನು ಆರಂಭಿಸಲಾಗುವುದೆಂದು ಹೇಳಿದರು.

'ಅಭಿನಂದನಾ ಗುರುನಮನ ನುಡಿ ಸೇವೆ' ಸಲ್ಲಿಸಿದ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ. ಪಂಚಾಕ್ಷರಿ ಹಿರೇಮಠ, ಲೋಕದ ಯಾವುದೇ ಅನುಭಾವಿಯಲ್ಲಿ ಕಾಣದ ಚಿಂತನೆ ಶ್ರೀ ಕಾಶೀ ಜಗದ್ಗುರುಗಳಲ್ಲಿ ತುಂಬಿಕೊಂಡಿದೆ. ಕೇವಲ ವೀರಶೈವರಿಗಷ್ಟೇ ಸೀಮಿತವಾಗದೇ ಸಮಸ್ತ ಮನುಕುಲಕ್ಕೆ ಸ್ವೀಕೃತಿಯಾದ ಲೋಕ ನಿಬ್ಬೆರಗಾಗಿ ನೋಡುವಂತಹ ಶಿವನ ಪ್ರತಿನಿಧಿಯೇ ಆಗಿರುವ ಶ್ರೀ ಕಾಶೀ ಜಗದ್ಗುರುಗಳಲ್ಲಿ ಜೀವನದ ಸತ್ಯದರ್ಶನ, ಸೊಬಗು, ಜೀವನಾಮೃತವಿದೆ ಎಂದರು. ಖ್ಯಾತ ಹಿಂದುಸ್ತಾನಿ ಗಾಯಕಿ ಡಾ. ಗಂಗೂಬಾಯಿ ಹಾನಗಲ್ ಸಮಾರಂಭ ಉದ್ಘಾಟಿಸಿದರು. ಕಂದಾಯ ಸಚಿವ ಜಗದೀಶ ಶೆಟ್ಟರ, ಸಂಸದ ಮಂಜುನಾಥ ಕುನ್ನೂರ, ಸಂಶೋದಕ ಡಾ. ಸಂಗಮೇಶ ಸವದತ್ತಿಮಠ, ಹಿರಿಯ ನ್ಯಾಯವಾದಿ ಎಸ್.ಎಸ್. ಶೆಟ್ಟರ, ಡಾ.ಎಸ್.ಆರ್. ರಾಮಗೌಡರ, ಡಾ.ಡಿ.ಎಂ. ಹಿರೇಮಠ, ಡಾ. ಸಿದ್ಧಲಿಂಗಪ್ಪ, ಡಾ.ಎಸ್.ಪಿ. ಬಳಿಗಾರ ಅತಿಥಿಗಳಾಗಿ ಮಾತಾಡಿದರು.

ಕೃತಿ ಬಿಡುಗಡೆ : ಬೆಳಗಾವಿಯ ಎಚ್.ವೈ. ಅಸುಂಡಿ ಬರೆದ 'ವೀರಶೈವ ಶಬ್ದ ವಿವೇಚನೆ' ಕೃತಿಯನ್ನು ಶ್ರೀ ಕಾಶೀ ಜಗದ್ಗುರುಗಳು ಬಿಡುಗಡೆಗೊಳಿಸಿದರು. ಗುರುವಂದನಾ ಸಮಾರಂಭದ ವತಿಯಿಂದ 1,11,111 ರೂ.ಗಳ ಗುರುಕಾಣಿಕೆಯನ್ನು ಇದೇ ಸಮಾರಂಭದಲ್ಲಿ ಸಮರ್ಪಿಸಲಾಯಿತು. ಪೂರ್ಣಕುಂಭ ಸ್ವಾಗತ ಸೇವೆ, ಸಂಗೀತ ಸೇವೆ ಜರುಗಿದವು. ಎಸ್.ಎನ್. ಛಬ್ಬಿ ವಂದಿಸಿದರು.

5–2–1992 : ಇಂದಿನ ಕಾಶೀಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ರಂಭಾಪುರಿ ನೂತನ ಜಗದ್ಗುರುಗಳವರ ಸಿಂಹಾಸನಾರೋಹಣ ಸಮಾರಂಭದಲ್ಲಿ ಸಾನ್ನಿಧ್ಯವಹಿಸಿದ್ದರು.

"ಶ್ರೀ ಜಗದ್ಗುರು ಪಂಚಾಚಾರ್ಯಃ ಪ್ರಸೀದಂತು"

ಶ್ರೀ ಮದ್ರಂಭಾಪುರಿ ನೂತನ ಜಗದ್ಗುರುಗಳವರ

ಸಿಂಹಾಸನಾರೋಹಣ ಮತ್ತು ಅಡ್ಡಪಲ್ಲಕ್ಕಿ ಮಹೋತ್ಸವದ ಅಂಗವಾಗಿ ಧರ್ಮಜಾಗೃತಿ ಸಮಾರಂಭ

ತಾ. 5–2–1992 ಬುಧವಾರ



ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ 1008 ಜಗದ್ಗುರು ಸಿದ್ಧೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಮರುಳಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು. ಶ್ರೀಮದ್ ಹಿಮವತ್ ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ರಾವಲ್ ಶ್ರೀ ಶ್ರೀ ಶ್ರೀ 1008 ಜಗದ್ಗುರು ಸಿದ್ಧೇಶ್ವರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀಮದ್ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಶ್ರೀ ಶೈಲ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀಮದ್ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು.

ಇವರ ದಿವ್ಯ ಸಾನ್ನಿಧ್ಯದಲ್ಲಿ



ದಿನಾಂಕ : 05–11–1995ರಂದು ಶ್ರೀಮದ್ ಉಜ್ಜಯಿನಿ ಪೀಠಕ್ಕೆ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಮರುಳಸಿದ್ಧರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸನ್ನಿಧಿಯವರು ಪೀಠಾಧಿಪತಿಗಳಾಗಿ ಅಧಿಕಾರವಹಿಸಿಕೊಂಡಾಗ ಕಿರೀಟಧಾರಣೆ ಮಾಡುತ್ತಿರುವ ಶ್ರೀ ರಂಭಾಪುರಿ, ಶ್ರೀ ಕಾಶಿ, ಶ್ರೀ ಶೈಲ ಮಹಾಜಗದ್ಗುರುಗಳವರು

13–10–2000ದಲ್ಲಿ ಕೇದಾರ ಪೀಠದ ನೂತನ ಜಗದ್ಗುರುಗಳವರ ಸಿಂಹಾಸನಾರೋಹಣ, ಪಟ್ಟಾಭಿಷೇಕ ಮಹೋತ್ಸವದಲ್ಲಿ ಕಾಶೀ ಜಗದ್ಗುರುಗಳು ಸಾನ್ನಿಧ್ಯವಹಿಸಿದ್ದರು. ಈಗಾಗಲೇ ಕೇದಾರ ಪೀಠದಲ್ಲಿರುವ ಜಗದ್ಗುರು ಸಿದ್ಧೇಶ್ವರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಸದಿಚ್ಛೆ ಹಾಗೂ ಸತ್‌ಸಂಕಲ್ಪದಂತೆ ನೂತನ ಜಗದ್ಗುರುಗಳಿಗೆ ಪಟ್ಟಾಭಿಷೇಕ ಮಾಡಿ ಪೀಠಾಧಿಪತಿಗಳನ್ನಾಗಿ ಮಾಡುತ್ತಿದ್ದಾರೆ. ಪೀಠಾಧಿಕಾರವನ್ನು ತ್ಯಜಿಸಿ ನಾಂದೇಡ ಜಿಲ್ಲೆಯ ಶಿರಡೋಣ ಸಂಸ್ಥಾನ ಮಠದ ಸ್ವಾಮಿಗಳಾಗಿರುವ ವಿದ್ವಾಂಸರಾದ ಷ.ಬ್ರ. ಷಡಕ್ಷರ ಶಿವಾಚಾರ್ಯಸ್ವಾಮಿಗಳನ್ನು ಆಯ್ಕೆ ಮಾಡಿ ತಮ್ಮ ಹಾಗೂ ಪಂಚಪೀಠದ ಉಳಿದ ಪೀಠಾಚಾರ್ಯರ ದಿವ್ಯಸಾನ್ನಿಧ್ಯದಲ್ಲಿ ಪಟ್ಟಾಭಿಷೇಕ ನೆರವೇರಿಸಿದ್ದು ಒಂದು ವಿಶೇಷವಾಗಿತ್ತು. ನೂತನ ಜಗದ್ಗುರುಗಳಿಗೆ ಶ್ರೀ ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ರಾವಲ್ ಪದವೀ ಭೂಷಿತ ಭೀಮಶಂಕರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಎಂಬ ಅಭಿದಾನದೊಂದಿಗೆ ಪಂಚಮುದ್ರ ಸಮೇತ ಅಧಿಕಾರವನ್ನು 13–10–2000ದಂದು ಓಖಿಮಠದಲ್ಲಿ ದಯಪಾಲಿಸಿದರು.

ಅ. 13: ಶ್ರೀಮತ್ ಹಿಮವತ್ಕೇದಾರ ವೈರಾಗ್ಯ
ಸಿಂಹಾಸನ ಶ್ರೀ ಜಗದ್ಗುರು ಪಟ್ಟಾಭಿಷೇಕ

ಶ್ರೀ ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ
ಶ್ರೀ ಶ್ರೀ ಶ್ರೀ 1008 ಜಗದ್ಗುರು ರಾವಲ್ ಪದವಿ ಭೂಷಿತ
ಶ್ರೀ ಸಿದ್ಧೇಶ್ವರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಸದಿಚ್ಛೆ ಮತ್ತು ಸಂಕಲ್ಪದಂತೆ ಹಾಗೂ
ದಿನಾಂಕ 25-7-2000 ದಂದು ಹರಪನಹಳ್ಳಿ ತೆಗ್ಗಿನಮಠದಲ್ಲಿ
ವೀರಶೈವ ಧರ್ಮಸಾಮ್ರಾಜ್ಯದ ಅಧಿಪತಿಗಳಾದ ಜಗದ್ಗುರುಗಳೈವರು ಸಮ್ಮಿಲಿತರಾಗಿ ಕೈಗೊಂಡ ನಿರ್ಧಾರದಂತೆ

ದಿನಾಂಕ 13-10-2000ದಂದು

ಶ್ರೀ ಕೇದಾರ ಪೀಠದ ಜಗದ್ಗುರುಗಳವರ ಪಟ್ಟಾಭಿಷೇಕ ಮಹೋತ್ಸವವು ಜರುಗುವುದು.

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಬಾಳೆಹೊನ್ನೂರು
ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಉಜ್ಜಯಿನಿ
ಶ್ರೀ ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ರಾವಲ್ ಪದವಿ ಭೂಷಿತ
ಶ್ರೀ ಸಿದ್ಧೇಶ್ವರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಕೇದಾರ
ಶ್ರೀಮದ್ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು, ಶ್ರೀಶೈಲ
ಶ್ರೀಮತ್‌ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಶ್ರೀ ಕಾಶಿ
ಇವರ ದಿವ್ಯ ಸಾನ್ನಿಧ್ಯದಲ್ಲಿ ಮಹಾರಾಷ್ಟ್ರ ರಾಜ್ಯದ ನಾಂದೇಡ ಜಿಲ್ಲೆ, ಶಿರಾಡೋಣ ಸಂಸ್ಥಾನ ಮಠದ ಪಟ್ಟಾಧ್ಯಕ್ಷರಾಗಿದ್ದ ಶ್ರೀ ಷ.ಬ್ರ. ಷಡಕ್ಷರ ಶಿವಾಚಾರ್ಯ ಸ್ವಾಮಿಗಳವರಿಗೆ ಆಶ್ವೀಜ ಶುದ್ಧ ಪೌರ್ಣಿಮೆ



ಉಜ್ಜಯಿನಿ, ಬಾಳೆಹೊನ್ನೂರು ಜಗದ್ಗುರುಗಳೊಂದಿಗೆ ಕೇದಾರ ಪೀಠದ ಉತ್ತರಾಧಿಕಾರಿಯಾಗುವ ಮುನ್ನ ಷ॥ ಬ್ರ॥ ಶ್ರೀ ಭೀಮಾಶಂಕರ ಶಿವಾಚಾರ್ಯ ಸ್ವಾಮಿಗಳು. ಕೇದಾರ ಮಾರ್ಗದಲ್ಲಿ ಸಿಗುವ ಗುಪ್ತಕಾಶಿಯಲ್ಲಿ ತೆಗೆದಿರುವ ಚಿತ್ರ




ಕೇದಾರ ಪೀಠದ ಉತ್ತರಾಧಿಕಾರಿಗಳ ಪಟ್ಟಾಭಿಷೇಕಕ್ಕೆ ಆಗಮಿಸುತ್ತಿರುವ ಜಗದ್ಗುರುಗಳು



ಕೇದಾರ ಜಗದ್ಗುರುಗಳ ಪಟ್ಟಾಭಿಷೇಕದ ನಂತರ ಊಕಿ ಮಠದ ಆವರಣದಲ್ಲಿ



ಗುಪ್ತಕಾಶಿಗೆ ಹಿಂತಿರುಗಿ ಆಗಮಿಸಿರುವ ಜಗದ್ಗುರುಗಳು



ಹಿಮಾಲಯದಲ್ಲಿ
ಕಾಶಿ ಜಗದ್ಗುರುಗಳು

8–2–2010

8–2–2010 ರಂದು ಶ್ರೀಶೈಲ ಪೀಠದ ನೂತನ ಜಗದ್ಗುರುಗಳವರ ಪೀಠಾರೋಹಣ ಸಮಾರಂಭದ ಸಾನ್ನಿಧ್ಯವನ್ನು ಕಾಶೀ ಜಗದ್ಗುರುಗಳು ವಹಿಸಿದ್ದರು. ಶ್ರೀಶೈಲಪೀಠದ ಜಗದ್ಗುರು ಉಮಾಪತಿ ಪಂಡಿತಾರಾಧ್ಯರ ಅನಾರೋಗ್ಯ ನಿಮಿತ್ತ ತಾವೇ ಶ್ರೀಶೈಲಪೀಠದ ಮುಂದಿನ ಜಗದ್ಗುರುಗಳನ್ನ ಆಯ್ಕೆಮಾಡಿ ತಮ್ಮ ಉಪಸ್ಥಿತಿಯಲ್ಲೇ ಪಟ್ಟಾಭಿಷೇಕ ನೆರವೇರಿಸಿದರು.

ವೇದ ಘೋಷ, ಪುಷ್ಪವೃಷ್ಟಿ ಮಧ್ಯೆ ಶ್ರೀಶೈಲ ಶ್ರೀ ಪೀಠಾರೋಹಣ



ಶ್ರೀ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವ ಶ್ರೀಶೈಲದಲ್ಲಿ ಸೋಮವಾರ ನೆರವೇರಿತು. ಶ್ರೀ ಉಮಾಪತಿ ಪಂಡಿತಾರಾಧ್ಯ ಸ್ವಾಮೀಜಿ, ಶ್ರೀ ಮರುಳಸಿದ್ಧ ರಾಜದೇಶೀಕೇಂದ್ರ ಸ್ವಾಮೀಜಿ ಮತ್ತು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉಪಸ್ಥಿತರಿದ್ದು ಶುಭ ಕೋರಿದರು.



ಶ್ರೀಶೈಲ ಪೀಠದ ಜಗದ್ಗುರು ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳಿಗೆ ಅಭಿಷೇಕ ಮಾಡುತ್ತಿರುವ ಉಳಿದ ಪಂಚಪೀಠಾಧೀಶ್ವರರು



ಶ್ರೀಶೈಲ ಪೀಠಕ್ಕೆ ನೂತನವಾಗಿ ಆಯ್ಕೆಯಾದ ಶ್ರೀ ಸಿದ್ಧರಾಮ ಪಂಡಿತಾರಾಧ್ಯರಿಗೆ ಉಜ್ಜಯಿನಿ, ಶ್ರೀ ಶೈಲ ಹಾಗೂ ಕಾಶೀ ಜಗದ್ಗುರುಗಳು ಕಿರೀಟ ಧಾರಣೆ ಮಾಡಿದರು.

3–11–2011ರಂದು ನಡೆದ ಉಜ್ಜಯಿನಿ ಪೀಠದ ಪಟ್ಟಾಧಿಕಾರದ ಮಹೋತ್ಸವದಲ್ಲಿ ಕಾಶೀ ಜಗದ್ಗುರುಗಳು ಸಾನ್ನಿಧ್ಯ ವಹಿಸಿದರು.



ಉಜ್ಜಯಿನಿ ಪೀಠದ ನೂತನ ಜಗದ್ಗುರುಗಳಿಗೆ ಶ್ರೀ ಶೈಲ, ರಂಭಾಪುರಿ, ಕಾಶೀ ಜಗದ್ಗುರುಗಳು ಕಿರೀಟಧಾರಣೆ ಮಾಡಿದರು



ನೂತನ ಜಗದ್ಗುರುಗಳಿಗೆ ಕಾಶಿ ಜಗದ್ಗುರುಗಳು ಮುದ್ರೆ ಉಂಗುರ ತೊಡಿಸುತ್ತಿರುವುದು.



ಉಜ್ಜಯಿನಿ ಪೀಠದ ನೂತನ ಜಗದ್ಗುರುಗಳೊಂದಿಗೆ ರಂಭಾಪುರಿ, ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳು ಉಜ್ಜಯಿನಿ ಪೀಠದ ಆವರಣದಲ್ಲಿ

ಈಗ ಪಂಚಪೀಠಗಳ ಜಗದ್ಗುರುಗಳಲ್ಲಿ ಕಾಶೀ ಪೀಠದ ಜಗದ್ಗುರುಗಳೇ ಹಿರಿಯ ಜಗದ್ಗುರುಗಳಾಗಿದ್ದಾರೆ.

ಶ್ರೀ ಶೈಲ ಜಗದ್ಗುರುಗಳ ಜನ್ಮ ಸ್ವರ್ಣಮಹೋತ್ಸವ ಮತ್ತು ಪೀಠಾರೋಹಣದ ರಜತ ಮಹೋತ್ಸವ, ಬಾಳೆ ಹೊನ್ನೂರು ಹಾಗೂ ಉಜ್ಜಯಿನಿ ಜಗದ್ಗುರುಧ್ವಯರ ದ್ವಾದಶ ಪೀಠಾರೋಹಣ ಸಮಾರಂಭಗಳಲ್ಲಿ ಕಾಶೀ ಜಗದ್ಗುರುಗಳು.

4–3–2004

ಪಂಚಪೀಠಾಧೀಶ್ವರರ ಸಮ್ಮುಖದಲ್ಲಿ ರಂಭಾಪುರಿ ವೀರಸೋಮೇಶ್ವರ ಶ್ರೀಗಳ ದ್ವಾದಶ ಪೀಠಾರೋಹಣ

ರಂಭಾಪುರೀ ಪೀಠದ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿಗಳು ಪೀಠಾರೋಹಣ ಮಾಡಿ 12 ವರ್ಷಗಳ ತುಂಬಿದ ಸವಿನೆನಪಿಗಾಗಿ ಗುರುವಾರ 10 ಸಹಸ್ರಕ್ಕೂ ಹೆಚ್ಚು ಭಕ್ತರು ಪಂಚಪೀಠಾಧೀಶ್ವರರ ಸಮ್ಮುಖದಲ್ಲಿ ರತ್ನ ಖಚಿತ ಸುವರ್ಣ ಕಿರೀಟ ಧಾರಣೆ ಮಾಡಿ ದ್ವಾದಶ ಪೀಠಾರೋಹಣ ಮಹೋತ್ಸವ ಆಚರಿಸಿದರು. ರಂಭಾಪುರಿ ಜಗದ್ಗುರುಗಳ ದ್ವಾದಶ ಪೀಠಾರೋಹಣ ಸಮಾರಂಭದಲ್ಲಿ ಕಾಶೀ ಜಗದ್ಗುರುಗಳು ಆಶೀರ್ವಚನ ನೀಡಿ ಬಿಡುಗಡೆಗೊಂಡಿರುವ 12 ಗ್ರಂಥಗಳು ಸಾರಸ್ವತಲೋಕಕ್ಕೆ ನೀಡಿದ ವಿಶಿಷ್ಟ ಕೊಡುಗೆಯಾಗಿದೆ ಎಂದರಲ್ಲದೆ ಪ್ರತಿಯೊಬ್ಬರೂ ಗ್ರಂಥ ಸಂಗ್ರಹಣೆ ಮಾಡಿ ಓದಿ ಮನನಮಾಡಿ ಕೊಳ್ಳುವುದನ್ನು ರೂಢಿಸಿಕೊಳ್ಳಲು ಉಪದೇಶಿಸಿದರು.



ಬಾಳೆ ಹೊನ್ನೂರಿನಲ್ಲಿ ಗುರುವಾರ ನಡೆದ ರೇಣುಕಾಚಾರ್ಯ ಪ್ರಶಸ್ತಿ ಪ್ರದಾನ ಮತ್ತು ವೀರಸೋಮೇಶ್ವರ ಜಗದ್ಗುರು ದ್ವಾದಶ ಪೀಠಾರೋಹಣ ಸಮಾರಂಭವನ್ನು ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು. ವೀರಸೋಮೇಶ್ವರ ಜಗದ್ಗುರುಗಳು, ಮರುಳಸಿದ್ಧ ಶಿವಾಚಾರ್ಯ ಸ್ವಾಮೀಜಿ, ರಾಹುಲ್ ಭೀಮಲಿಂಗೇಶ್ವರ ಸ್ವಾಮೀಜಿ, ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಸಚಿವ ಡಿ.ಬಿ. ಚಂದ್ರೇಗೌಡ, ಸಂಸದರಾದ ಎಂ.ವಿ. ರಾಜಶೇಖರನ್. ಡಿ.ಸಿ. ಶ್ರೀಕಂಠಪ್ಪ, ಶಾಸಕ ವಿ.ಸೋಮಣ್ಣ ಇದ್ದಾರೆ.

14–1–2006

ಶ್ರೀಶೈಲ ಶ್ರೀಗಳಿಗೆ ಬೆಳ್ಳಿ ತುಲಾಭಾರ



ಹುಬ್ಬಳ್ಳಿಯಲ್ಲಿ ಶನಿವಾರ ಶ್ರೀಶೈಲ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯರ ಜನ್ಮ ಸುವರ್ಣ ಹಾಗೂ ಪಟ್ಟಾಧಿಕಾರ ರಜತ ಮಹೋತ್ಸವ ಅಂಗವಾಗಿ ಶ್ರೀಶೈಲ ಜಗದ್ಗುರುಗಳ ತುಲಾಭಾರ ನೆರವೇರಿತು.



ಹುಬ್ಬಳ್ಳಿ ಇಂದಿರಾ ಗಾಜಿನ ಮನೆಯಲ್ಲಿ ಶನಿವಾರ ನಡೆದ ಶ್ರೀಶೈಲ ಜಗದ್ಗುರುಗಳ ಜನ್ಮ ಸ್ವರ್ಣಮಹೋತ್ಸವ ಮತ್ತು ಪಟ್ಟಾಧಿಕಾರ ರಜತಮಹೋತ್ಸವದ ಧರ್ಮಸಭೆಯಲ್ಲಿ ರಂಭಾಪುರಿ, ಕೇದಾರ, ಕಾಶಿ, ಉಜ್ಜಯಿನಿ, ಶ್ರೀಶೈಲ ಜಗದ್ಗುರುಗಳು ಸಾನ್ನಿಧ್ಯ ವಹಿಸಿದ್ದರು.

ಹುಬ್ಬಳ್ಳಿ, ಜ.14–ಶ್ರೀಶೈಲ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯರ ಜನ್ಮ ಸುವರ್ಣ ಹಾಗೂ ಪಟ್ಟಾಧಿಕಾರ ರಜತ ಮಹೋತ್ಸವದ ಅಂಗವಾಗಿ ಶ್ರೀಶೈಲ ಜಗದ್ಗುರುಗಳ ಕ್ಷೀರಾಭಿಷೇಕ, ಬೆಳ್ಳಿ ತುಲಾಭಾರ, ಕಿರೀಟಧಾರಣೆ ಹಾಗೂ ಸಿಂಹಾಸನಾರೋಹಣ ಶನಿವಾರ ಬೆಳಗ್ಗೆ ವೇದಘೋಷಗಳ ಮಧ್ಯೆ ನಡೆಯಿತು.

ಬೆಳಿಗ್ಗೆ ಯಲ್ಲಾಪುರ ಓಣಿಯ ಪಂಚಾಚಾರ್ಯ ಆಶ್ರಮದಲ್ಲಿ ನಡೆದ ಸಮಾರಂಭದಲ್ಲಿ ಹಾಲು, ಮೊಸರು, ಗಂಧ, ಅರಿಶಿಣ, ಕುಂಕುಮ ಅಭಿಷೇಕ ಜರುಗಿತು. ನಂತರ ಶ್ರೀ ಕೇದಾರ, ಶ್ರೀ ಕಾಶೀ , ಶ್ರೀ ಉಜ್ಜಯನಿ ಜಗದ್ಗುರುಗಳ ಸಮ್ಮುಖದಲ್ಲಿ ಬೆಳ್ಳಿ ತುಲಾಭಾರ ಹಾಗೂ ಬೆಳ್ಳಿ ಕಿರೀಟ ಧಾರಣೆ ನೆರವೇರಿತು. ನಂತರ ಭಕ್ತರನ್ನುದ್ದೇಶಿಸಿ ಶ್ರೀ ಉಜ್ಜಯಿನಿ ಜಗದ್ಗುರು ಶ್ರೀ ಮರುಳಸಿದ್ಧ ಶಿವಾಚಾರ್ಯರು, ಶ್ರೀ ಕಾಶೀ ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯರು, ಶ್ರೀ ಕೇದಾರ ಜಗದ್ಗುರು ಶ್ರೀ ಭೀಮಾಶಂಕರಲಿಂಗ ಶಿವಾಚಾರ್ಯರು ಹಾಗೂ ಶ್ರೀಶೈಲ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಪಂಚಪೀಠಾಧೀಶರ ಮೆರವಣಿಗೆ ಆಶ್ರಮದಿಂದ ಹೊರಟು ಯಲ್ಲಾಪುರ ಓಣಿ, ಅಕ್ಕಿಹೊಂಡ, ದಾಜಿಬಾನಪೇಟೆ, ಚೆನ್ನಮ್ಮ ವೃತ್ತದ ಮೂಲಕ ಇಂದಿರಾ ಗಾಜಿನಮನೆ ತಲುಪಿತು.

ಹುಬ್ಬಳ್ಳಿಯಲ್ಲಿ ಶ್ರೀಶೈಲ ಜಗದ್ಗುರುಗಳವರ 50ನೇ ವರ್ಷದ ಜನ್ಮದಿನೋತ್ಸವ ಹಾಗೂ ಪಟ್ಟಾಧಿಕಾರದ ರಜತ ಮಹೋತ್ಸವದ ಸಂದರ್ಭದಲ್ಲಿ ಕಾಶೀ ಜಗದ್ಗುರುಗಳು ಶ್ರೀಶೈಲ ಜಗದ್ಗುರುಗಳ ತುಲಾಭಾರದಲ್ಲಿ ಸಾನ್ನಿಧ್ಯವಹಿಸಿದ್ದರು (ಈ ಲೇಖನ ಸಿದ್ಧಪಡಿಸುವ ಸಂದರ್ಭದಲ್ಲಿ ಜಗದ್ಗುರು ಉಮಾಪತಿ ಪಂಡಿತಾರಾಧ್ಯರು ಲಿಂಗೈಕ್ಯರಾಗಿದ್ದರು)

4–2–2007



4–2–2007 : ಉಜ್ಜಯಿನಿಯಲ್ಲಿ ಶನಿವಾರ ನಡೆದ ಶ್ರೀ ಮರುಳಸಿದ್ಧ ರಾಜದೇಶಿಕೇಂದ್ರ ಮಹಾಸ್ವಾಮಿಗಳ ಪಟ್ಟಾಭಿಷೇಕದ ದ್ವಾದಶ ವರ್ಧಂತಿ ಮಹೋತ್ಸವವನ್ನು ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಿದರು.

ಉಜ್ಜಯಿನಿ ಶ್ರೀಗಳಿಗೆ ಸುವರ್ಣ ಕಿರೀಟ ಧಾರಣೆ

ಕೊಟ್ಟೂರು, ಫೆ. 4–ಶ್ರೀಮದ್ ಉಜ್ಜಯಿನಿ ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶ್ರೀಗಳ 12ನೇ ವರ್ಷದ ದ್ವಾದಶ ವರ್ಧಂತಿ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸುವರ್ಣ ಕಿರೀಟ ಧಾರಣೆ ವೈಭವದಿಂದ ಜರುಗಿತು.

ರಂಭಾಪುರಿ, ಕಾಶಿ, ಶ್ರೀಶೈಲ, ಕೇದಾರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಜರುಗಿದ ಸಮಾರಂಭದಲ್ಲಿ ಲಕ್ಷಾಂತರ ಭಕ್ತ ಸಮುದಾಯವು ಪಂಚಪೀಠಾಧೀಶ್ವರರಿಗೆ ಜಯಘೋಷ ಹಾಕುವ ಮೂಲಕ ಭಕ್ತಿ ನಮನ ಸಲ್ಲಿಸಿದರು.

ಕೇಂದ್ರ ಸರ್ಕಾರದ ಪರವಾಗಿ, ಕೇಂದ್ರದ ಯೋಜನಾಖಾತೆ ರಾಜ್ಯ ಸಚಿವ ಎಂ.ವಿ. ರಾಜಶೇಖರನ್, ರಾಜ್ಯ ಸರ್ಕಾರದ ಪರವಾಗಿ ಶಾಸಕಿ ಟಿ. ಭಾಗೀರಥಿ ಮರುಳಸಿದ್ಧನಗೌಡ ಅವರು ಉಜ್ಜಯಿನಿ ಶ್ರೀಗಳನ್ನು ಗೌರವಿಸಿ, ಭಕ್ತಿನಮನ ಅರ್ಪಿಸಿದರು.



ಉಜ್ಜಯಿನಿ ಜಗದ್ಗುರು ಶ್ರೀ ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ನಾಲ್ವರು ಪೀಠಾಧೀಶ್ವರರು ಸುವರ್ಣ ಕಿರೀಟಧಾರಣೆ ಮಾಡಿದರು.

ವಿವಿಧ ಮಠಗಳ ಶಿವಾಚಾರ್ಯರು, ಸಂಸದರಾದ ಕರುಣಾಕರರೆಡ್ಡಿ, ಮಂಜುನಾಥ ಕುನ್ನೂರು, ಮುಖಂಡರಾದ ಜಿ. ಉಮೇಶ್, ಕೆ. ತಿಪ್ಪೇಸ್ವಾಮಿ, ಗುರುಸಿದ್ಧನಗೌಡ್ರು, ಸಾವಜ್ಜಿ ರಾಜೇಂದ್ರ ಪ್ರಸಾದ್, ಗುಲಿಗಿ ನಾಗರಾಜ್ ಮತ್ತಿತರರು ಭಾಗವಹಿಸಿದ್ದರು.

(ಈ ಲೇಖನ ಸಿದ್ಧಪಡಿಸುವ ಸಂದರ್ಭದಲ್ಲಿ ಉಜ್ಜಯಿನಿ ಜಗದ್ಗುರುಗಳು ಲಿಂಗೈಕ್ಯರಾಗಿದ್ದಾರೆ.)
ಮೇಲಿನ ಮೂರು ಉತ್ಸವಗಳಲ್ಲೂ ಕಾಶಿ ಜಗದ್ಗುರುಗಳು ಆಗಮಿಸಿ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದ್ದರು.

ಗುರುಮಠ ಮತ್ತು ವಿರಕ್ತ ಮಠಗಳ ನೂತನ ಸ್ವಾಮಿಗಳ ಪಟ್ಟಾಧಿಕಾರ ಮಹೋತ್ಸವಗಳಲ್ಲಿ ಜಗದ್ಗುರುಗಳು

1–5–2009

ಹಿರೇಜೇವರ್ಗಿ (ಅಫಜಲ್‌ಪುರ) ಸಮಾ ರಂಭದಲ್ಲಿ ಕಾಶೀ ಜಗದ್ಗುರುಗಳು ಸಾನ್ನಿಧ್ಯವಹಿಸಿ ಆಶೀರ್ವಚನ ನೀಡುತ್ತ ಭಾರತೀಯ ಸಂಸ್ಕೃತಿಯಲ್ಲಿ ದೇವರಿಗಿಂತ ಗುರುವಿಗೆ ಮಹತ್ವದ ಸ್ಥಾನವಿದೆ. ದೇವರು ಎಲ್ಲರಿಗೂ ಕಾಣುವುದಿಲ್ಲ. ಗುರುವನ್ನು ಭಕ್ತಿಯಿಂದ ಕಂಡರೆ ದೇವರನ್ನು ಕಂಡಂತೆ ಎಂದು ಹೇಳಿ ಇಂದು ಪಟ್ಟಾಧಿಕಾರ ಆಗಿ ಮಠದ ಅಧಿಕಾರ ವಹಿಸಿಕೊಂಡ ಸ್ವಾಮಿ ಗಳಿಗೆ ಹಿಂದಿನ ಹಿರಿಯ ಸ್ವಾಮಿಗಳ ದಾರಿಯಲ್ಲೇ ನಡೆದು ಉತ್ತಮ ರೀತಿಯಿಂದ ಧರ್ಮಜಾಗೃತಿಯ ಕೆಲಸಗಳನ್ನು ಮಾಡಿ ಎಂದು ನೆರೆದಿದ್ದ ಭಕ್ತರಿಗೆ ಸ್ವಾಮಿಗಳ ಕಾರ್ಯದಲ್ಲಿ ಸಹಕಾರ ನೀಡಿರೆಂದೂ ಬೋಧಿಸಿದರು.

ಹರನಿಗಿಂತ ಗುರು ಮೇಲು: ಕಾಶೀ ಜಗದ್ಗುರು



1–5–2009 : ಹಿರೇಜೇವರ್ಗಿಯಲ್ಲಿ ಶುಕ್ರವಾರ ನಡೆದ ಶ್ರೀ ಗುರುಶಾಂತಲಿಂಗ ದೇವರ ಪಟ್ಟಾಧಿಕಾರ ಮಹೋತ್ಸವದ ಧರ್ಮಸಭೆಯಲ್ಲಿ ಕಾಶೀ ಜಗದ್ಗುರುಗಳು ಆಶೀರ್ವಚನ ನೀಡಿದರು. ಶ್ರೀಶೈಲ ಜಗದ್ಗುರುಗಳು, ಗುರುಶಾಂತಲಿಂಗ ಶಿವಾಚಾರ್ಯರು, ರೇವುನಾಯಕ ಬೆಳಮಗಿ, ಎಂ.ವೈ. ಪಾಟೀಲ್, ಹಣಮಂತರಾವ ದೇಸಾಯಿ, ದುಧನಿಯ ಸಾತಲಿಂಗಪ್ಪ ಮೇತ್ರೆ, ಅವ್ವಣ್ಣ ಮ್ಯಾಕೇರಿ ಇದ್ದರು. ಸಮಾರಂಭದಲ್ಲಿ ನೆರೆದ ಅಪಾರ ಭಕ್ತ ಸಮೂಹ

8–5–2009

ಹಿರೋಳಿಗ್ರಾಮದ (ಆಳಂದ ತಾ.) ಶಿವಬಸವೇಶ್ವರ ವಿರಕ್ತಮಠಕ್ಕೆ ನೂತನ ಶ್ರೀ ರವಿಕುಮಾರ ದೇವರ ನಿರಾಜನ ಪಟ್ಟಾಧಿಕಾರ ಹಾಗೂ ಲಿಂ. ಶಿವಬಸವೇಶ್ವರ ಮಹಾಸ್ವಾಮಿಗಳ ಸುವರ್ಣ ಪುಣ್ಯ ಸ್ಮರಣೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು ನೂತನ ಶ್ರೀಗಳ ಪಟ್ಟಾಧಿಕಾರ ಬಹುದಿನಗಳಿಂದ ನೆನೆಗುದಿಗೆ ಬಿದ್ದಿದ್ದು ಇಂದು ಸಾಕಾರಗೊಂಡಿದ್ದು ಧರ್ಮಜಾಗೃತಿ ಕಾರ್ಯಗಳು ನಡೆಯಲೆಂದು ತಿಳಿಸಿದರು. ಈ ಸಮಾರಂಭದಲ್ಲಿ ಶ್ರೀಶೈಲ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಇದೇ ಸಂದರ್ಭದಲ್ಲಿ ಉಭಯ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವವೂ ನಡೆಯಿತು.

6–5–2011

ಕಾಶೀ ಜಗದ್ಗುರುಗಳು ಕಾಶಿಯ ಪೀಠಾಧಿಕಾರವನ್ನು ವಹಿಸಿಕೊಳ್ಳುವ ಮುನ್ನ ಗುಳೇದಗುಡ್ಡದ ಅಮರೇಶ್ವರ ಬೃಹನ್ಮಠದ ಸ್ವಾಮಿಗಳಾಗಿದ್ದರು. ಅದೇ ಮಠಕ್ಕೆ ಇಂದು ನೂತನ ಶ್ರೀಗಳನ್ನು ಆಯ್ಕೆಮಾಡಿ ನೂತನ ಶ್ರೀಗಳಿಗೆ ಮಸ್ತಕಾಭಿಷೇಕ, ಪಟ್ಟಬಂಧನ, ದಂಡ ಕಮಂಡಲು ಪ್ರದಾನ, ಪಂಚಮುದ್ರ ಹಾಗೂ ನೂತನ ನಾಮಕರಣಮಾಡಿ ನೀಲಕಂಠ ಶಿವಾಚಾರ್ಯರೆಂದು ಹೆಸರಿಸಿದರು. ಅಧಿಕಾರ ವಹಿಸಿಕೊಟ್ಟ ಜಗದ್ಗುರುಗಳು ಆಶೀರ್ವಚನದಲ್ಲಿ ಮಠಮಾನ್ಯಗಳಿಗೆ ಸಾವಿರಾರು ಕೈಗಳಿಂದ ಬರುವ ಕಾಣಿಕೆ ರೂಪದ ಸಂಪತ್ತನ್ನು ಮರಳಿ ಸಮಾಜಕ್ಕೆ ಉಪಯೋಗಿಸಬೇಕೆಂದಲ್ಲದೆ ಮಠಗಳು ಹಾಗೂ ಮಠಾಧೀಶರಿಗೆ ಭೌತಿಕ ಸಂಪತ್ತಿಗಿಂತ ಜ್ಞಾನ ಸಂಪತ್ತು ಮುಖ್ಯ. ಮನುಷ್ಯ ರಾಗದ್ವೇಷಗಳಿಂದ ಮುಕ್ತನಾಗಿ ಎಲ್ಲರನ್ನು ಸಮಾನವಾಗಿ ಕಂಡಾಗ ದೇವರಾಗಲು ಸಾಧ್ಯ. ತ್ಯಾಗದ ಫಲದಿಂದ ಪೂಜ್ಯತೆ ಸಿಗುವುದು ಎಂದು ತಾವು ಬದುಕುತ್ತಿರುವ ರೀತಿಯನ್ನೇ ಈ ರೀತಿಯ ನುಡಿಗಳಲ್ಲಿ ತಿಳಿಸಿದರು. ಹಾಗೂ ನೂತನ ಶ್ರೀಗಳಿಗೆ ಮಠದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವುದಲ್ಲದೆ ಸತತ ಅಧ್ಯಯನಶೀಲರಾಗಬೇಕು ಎಂದು ಉಪದೇಶಿಸಿದರು.

ಶ್ರೀಮಠಗಳ ಸಂಪತ್ತು ಸದ್ವಿನಿಯೋಗವಾಗಲಿ



6–5–2011 : ಗುಳೇಗುಡ್ಡ ಬಳಿಯ ಅಮರೇಶ್ವರ ಬೃಹನ್ಮಠದಲ್ಲಿ ಶುಕ್ರವಾರ ನೂತನ ಶ್ರೀಗಳಾದ ನೀಲಕಂಠ ಶಿವಾಚಾರ್ಯರ ಪಟ್ಟಾಧಿಕಾರ ಮಹೋತ್ಸವ ಸಮಾರಂಭ ನಡೆಯಿತು. ಕಾಶೀ ಜ್ಞಾನಸಿಂಹಾಸನ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯರು ನೂತನ ಶ್ರೀಗಳನ್ನು ಕಾಶೀಮಠದ ಪರವಾಗಿ ಗೌರವಿಸಿದರು.

19–6–2011



19–6–2011 : ನರಗುಂದದಲ್ಲಿ ಭಾನುವಾರ ಪತ್ರಿವನಮಠದ ಶರಣಬಸವ ದೇವರು ಗುರುಸಿದ್ಧ ವೀರಶಿವಯೋಗಿಗಳಾಗಿ ಪಟ್ಟಾಧಿಕಾರ ಹೊಂದಿದ ಸಂದರ್ಭದಲ್ಲಿ ಡಾ. ಚಂದ್ರಶೇಖರ ಶಿವಾಚಾರ್ಯರು ಪಟ್ಟಧಾರಣೆ ನೆರವೇರಿಸಿ ಕಿರೀಟಧಾರಣೆ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ. ಪಾಟೀಲ ಹಾಗೂ ಹರಗುರು ಚರಮೂರ್ತಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.

ನರಗುಂದದ ಪತ್ರಿವನಮಠದ ಪಟ್ಟಾಧಿಕಾರ ಮಹೋತ್ಸವದಲ್ಲಿ ಕಾಶೀ ಜಗದ್ಗುರುಗಳು ನೂತನ ಶ್ರೀಗಳಿಗೆ ಗುರು ಪಟ್ಟಾಧಿಕಾರ ಪದ್ಧತಿಯಂತೆ ಬಂಗಾರದ ಪಟ್ಟಬಂಧ ತೊಡಿಸಿ ಆಶೀರ್ವದಿಸಿದರು. ಸ್ವಾಮೀಜಿಗಳಾದವರು ಸ್ವಾಮಿತ್ವದ ಸಿದ್ಧಾಂತ ಅರಿತು ಸಮಾಜದಲ್ಲಿಯ ಮೌಢ್ಯವನ್ನು ಹೋಗಲಾಡಿಸಿ ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ಹೇಳಿದರು.

3–2–2012

ಸವದತ್ತಿಯಲ್ಲಿರುವ ಮೂಲಿಮಠದ ನೂತನ ಶ್ರೀಗಳಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಪಟ್ಟಾಧಿಕಾರ ಸಂದರ್ಭದಲ್ಲಿ ಉಜ್ಜಯಿನಿ, ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಉತ್ಸವ ನಡೆಯಿತು. ನಂತರ ಭಾವೈಕ್ಯ ಧರ್ಮಸಭೆಯ ಸಾನ್ನಿಧ್ಯವನ್ನು ವಹಿಸಿದ್ದ ಕಾಶೀ ಜಗದ್ಗುರುಗಳು ಆಶೀರ್ವಚನ ನೀಡಿದರು. ಹಿಂದಿನ ಕಾಲದಲ್ಲಿ ಮಠಗಳು ಆಯಾ ಗ್ರಾಮದ ಸುಪ್ರೀಂ ಕೋರ್ಟುಗಳಾಗಿ ಗ್ರಾಮದ ಯಾವುದೇ ವ್ಯಾಜ್ಯವಿರಲಿ, ಸಮಸ್ಯೆಯಿರಲಿ ಅಲ್ಲಿನ ಮಠ–ಮಂದಿರಗಳಲ್ಲಿ ಇತ್ಯರ್ಥವಾಗುತ್ತಿದ್ದವು. ಇಂದೂ ಕೂಡ ಅಂತಹ ವಾತಾವರಣ ನಿರ್ಮಾಣ ಮಾಡಲು ಸ್ವಾಮಿಗಳೆಲ್ಲಾ ನಿಸ್ವಾರ್ಥದಿಂದ ಶ್ರಮಿಸಬೇಕಾಗಿದೆ ಎಂದು ಹೇಳಿದರು.

20–5–2013

ಮದ್ರಕಿ ಸಂಸ್ಥಾನ (ಶಹಾಪುರ ತಾ.) ಗಚ್ಚಿನ ಮಠಕ್ಕೆ ನೂತನ ಮಠಾಧಿಪತಿಗಳಾಗಿ ಶಿವಯೋಗಿ ದೇವರು ನೇಮಕಗೊಂಡ ಪಟ್ಟಾಧಿಕಾರ ಮಹೋತ್ಸವದ ಸಾನಿಧ್ಯ ವಹಿಸಿದ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಮಾನವನ ಉಜ್ವಲ ಬದುಕಿಗೆ ಧರ್ಮವೇ ಭದ್ರ ಬುನಾದಿಯಾಗಿದ್ದು ನುಡಿದಂತೆ ನಡೆಯುವುದೇ ಧರ್ಮದ ಮೂಲ ಗುರಿ ಎಂದು ಹೇಳಿ ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ಧರ್ಮಗುರುಗಳ

ಮಾರ್ಗದರ್ಶನ ಅಗತ್ಯವಾಗಿದೆ. ಜ್ಞಾನಕರ್ಮಗಳ ಜೊತೆಗೆ ಸಾಮಾಜಿಕ ಚಿಂತನೆಯನ್ನು ಮೈಗೂಡಿಸಿಕೊಳ್ಳಬೇಕೆಂದು ನೂತನ ಸ್ವಾಮಿಗಳಿಗೆ ಉಪದೇಶಿಸಿದರು.



ಸಮ್ಮುಖದಲ್ಲಿ ಪಟ್ಟಾಧಿಕಾರ ಆಚರಣೆ ನಡೆಯಿತು. ಕೆರೂರ ಸ್ವಾಮೀಜಿ ಇತರರಿದ್ದಾರೆ (ಎಡಚಿತ್ರ.) ಸಮಾರಂಭದಲ್ಲಿ ಪಾಲ್ಗೊಂಡಿದ್ದ ಅಪಾರ ಭಕ್ತಸ್ತೋಮ.

ನರಸಾಪುರ ಗ್ರಾಮ (ಕುಳಗೇರಿ ಕ್ರಾಸ್)ದ ಹಿರೇಮಠಕ್ಕೆ ವಿರೂಪಾಕ್ಷ ಸ್ವಾಮಿಗಳ ಪಟ್ಟಾಧಿಕಾರ ಮಹೋತ್ಸವದ ಸಾನ್ನಿಧ್ಯವನ್ನು ಕಾಶೀ ಜಗದ್ಗುರುಗಳು ಹಾಗೂ ಶ್ರೀ ಶೈಲ ಜಗದ್ಗುರುಗಳು ವಹಿಸಿದ್ದರು. ಈ ಸಂದರ್ಭದಲ್ಲಿ ಉಭಯ ಜಗದ್ಗುರುಗಳ ಪಲ್ಲಕ್ಕಿ ಉತ್ಸವವು ಹಿಂದಿನ ರಾತ್ರಿ ವೈಭವದಿಂದ ನೆರವೇರಿತು.

11–11–2005 ರಂದು ಪಂಚ ಪೀಠಾಧೀಶ್ವರರ ಸಾನ್ನಿಧ್ಯದಲ್ಲಿ ತಾವರೆಕೆರೆ ಶಿಲಾಮಠದ ನೂತನ ಶ್ರೀಗಳಾಗಿ ವೇದ ಮೂರ್ತಿ ದೇವರ ಪಟ್ಟಾಧಿಕಾರ ಮಹೋತ್ಸವವು ಜರುಗಿತು.

ಪಂಚಪೀಠದ ಜಗದ್ಗುರುಗಳ ಅಂತ್ಯಕ್ರಿಯಾ ಸಮಾಧಿಯಲ್ಲಿ – ಕಾಶೀ ಜಗದ್ಗುರುಗಳು

18–8–1991ರಂದು ಕಾಶೀ ಜಗದ್ಗುರುಗಳವರು ಶ್ರಾವಣಮಾಸದಲ್ಲಿ ಶಿವಪೂಜಾನುಷ್ಠಾನವನ್ನು ನಾಗಪುರದಲ್ಲಿ ಕೈಗೊಂಡು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಮಾಹೇಶ್ವರ ಸ್ಥಲದಲ್ಲಿನ ಮೊದಲನೆಯ ಅವಾಂತರಸ್ಥಲವಾದ ಮಾಹೇಶ್ವರ ಪ್ರಶಂಸಾಸ್ಥಲದ ಬಗ್ಗೆ ವಿವರಣೆಯನ್ನು 17–8–1991ರಂದು ಮುಗಿಸಿ ಮರುದಿನದಿಂದ ಲಿಂಗನಿಷ್ಠಾಸ್ಥಲವನ್ನು ಆರಂಭಿಸಲಿದ್ದರು. ಆದರೆ, ಅಂದು ರಂಭಾಪುರಿ ಜಗದ್ಗುರು ವೀರರುದ್ರಮುನಿ ಶಿವಾಚಾರ್ಯ ಮಹಾಸನ್ನಿಧಿಯವರು ಲಿಂಗೈಕ್ಯರಾದ ವಿಚಾರ ತಿಳಿದಿದ್ದರಿಂದ ನಾಗಪುರದಲ್ಲಿನ ಅನುಷ್ಠಾನವನ್ನು 4 ದಿನಗಳ ಕಾಲ ಸ್ಥಗಿತಮಾಡಿ ಅಂದೇ ವಿಮಾನದಲ್ಲಿ ಮಂಗಳೂರಿಗೆ ಬಂದು ಅಲ್ಲಿಂದ ರಂಭಾಪುರಿ ಪೀಠವನ್ನು ತಲುಪಿ ಲಿಂಗೈಕ್ಯ ಜಗದ್ಗುರುಗಳ ಅಂತ್ಯವಿಧಿಯಲ್ಲಿ ಭಾಗವಹಿಸಿದ್ದರು. 4 ದಿನಗಳ ಕಾಲ ಬಾಳೆಹೊನ್ನೂರಲ್ಲಿ ನಡೆದ ಎಲ್ಲಾ ಕಾರ್ಯಗಳಲ್ಲೂ ಭಾಗವಹಿಸಿ ಮರಳಿ ನಾಗಪುರವನ್ನು 21 ನೇ ತಾರೀಖು ತಲುಪಿದರು.

ಉಜ್ಜಯಿನಿಪೀಠದ ಹಿರಿಯ ಜಗದ್ಗುರುಗಳಿಬ್ಬರು – ಜಗದ್ಗುರು ಸಿದ್ಧೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು; ಲಿಂಗೈಕ್ಯರಾದ ಸಂದರ್ಭದಲ್ಲಿ ಕಾಶಿ ಜಗದ್ಗುರುಗಳು ಅಂತ್ಯ ಕ್ರಿಯೆಯಲ್ಲಿ ಭಾಗವಹಿಸಿದ್ದರು. ಮತ್ತೋರ್ವ ಹಿರಿಯ ಜಗದ್ಗುರುಗಳಾಗಿದ್ದ ಮರುಳಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಅಂತ್ಯವಿಧಿಯಲ್ಲಿ ಕಾಶೀಜಗದ್ಗುರುಗಳು ಸಾನಿಧ್ಯ ವಹಿಸಿದ್ದರು.

16–10–2011 : ಹಲವಾರು ತಿಂಗಳುಗಳಿಂದ ಪೂಜ್ಯ ಜಗದ್ಗುರುಗಳು ಕಾಯಿಲೆಯಿಂದ ಬಳಲುತ್ತಿದ್ದರು. ಉಜ್ಜಯಿನಿ ಜಗದ್ಗುರುಗಳಾಗಿದ್ದ ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯರಿಗೆ ಭಕ್ತರೊಬ್ಬರು ಲಿವರ್ Transplantations ಮಾಡಲು ದಾನ ಕೊಟ್ಟರು. ಈ ಚಿಕಿತ್ಸೆಗಾಗಿ ಜಗದ್ಗುರುಗಳನ್ನು ದೆಹಲಿಯಲ್ಲಿನ ಇಂದ್ರಪ್ರಸ್ಥ ಅಪೋಲೋ ಆಸ್ಪತ್ರೆಗೆ ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ಕೊಂಡೊಯ್ದರು. ಜಗದ್ಗುರುಗಳು ಈ ಚಿಕಿತ್ಸೆಗೆ ಸ್ಪಂದಿಸುತ್ತಿರುವುದಾಗಿ ಅಲ್ಲಿನ ವೈದ್ಯಾಧಿಕಾರಿಗಳು ತಿಳಿಸಿದ್ದರು.

ಕಾಶಿಯಿಂದ ಕಾಶೀ ಜಗದ್ಗುರುಗಳು ಉಜ್ಜಯಿನಿ ಜಗದ್ಗುರುಗಳ ಆರೋಗ್ಯ ವಿಚಾರಿಸಲು ನವದೆಹಲಿಯ ಅಪೋಲೋ ಆಸ್ಪತ್ರೆಗೆ ಭೇಟಿ ನೀಡಿದ ದಿನ ಉಜ್ಜಯಿನಿ ಜಗದ್ಗುರುಗಳ ಆರೋಗ್ಯ ತೀರ ಹದಗೆಡಲಾರಂಭಿಸಿತ್ತು. ಆಸ್ಪತ್ರೆಯ ಅಧಿಕಾರಿಗಳು ಕಾಶೀ ಜಗದ್ಗುರುಗಳೊಂದಿಗೆ ಸಮಾಲೋಚನೆ ಮಾಡಿ ಉಜ್ಜಯಿನಿಗೆ ಕರೆದೊಯ್ಯುವುದು ಒಳ್ಳೆಯದು, ಅಂತಿಮ ಸಮಯ ತೀರ ಹತ್ತಿರದಲ್ಲಿದೆ ಎಂದು ಹೇಳಿದರು. ಕಾಶೀ ಜಗದ್ಗುರುಗಳ ಉಪಸ್ಥಿತಿಯಲ್ಲಿ ವಿಶೇಷ ವಿಮಾನದ ಏರ್ಪಾಡುಮಾಡಿ ಉಜ್ಜಯಿನಿ ಜಗದ್ಗುರುಗಳನ್ನು ಅಂದೇ ಉಜ್ಜಯಿನಿಗೆ ಕಳುಹಿಸಿ, ತಾವು

ದೆಹಲಿಯಿಂದ ಗೋವಾಗೆ ವಿಮಾನದಲ್ಲಿ ಅಂದೇ ಬಂದು ಗೋವಾದಿಂದ ಕಾರಿನಲ್ಲಿ ಉಜ್ಜಯಿನಿ ತಲ್ಪಿದರು. ಅಷ್ಟರಲ್ಲಿ ಉಜ್ಜಯಿನಿ ಜಗದ್ಗುರುಗಳನ್ನು ಪೀಠಕ್ಕೆ ಜೀವಂತವಿದ್ದಾಗಲೇ ತರಲಾಗಿತ್ತು. ಅವರು ಕೆಲವೇ ಗಂಟೆಗಳಲ್ಲಿ ಲಿಂಗೈಕ್ಯರಾದರು. ಮರುದಿನ ಜಗದ್ಗುರುಗಳ ಪಾರ್ಥಿವ ಶರೀರಕ್ಕೆ ವಿಧಿವತ್ತಾಗಿ ಎಲ್ಲಾ ಕ್ರಿಯೆಗಳನ್ನು ಮಾಡಿ ತಲೆಗೆ ಕೆಂಪು ಬಣ್ಣದ ಪಟ್ಟಗ (ಪೇಟ)ವನ್ನು ಸುತ್ತಿ ಇಡೀ ಊರಿನಲ್ಲಿ ಮೆರವಣಿಗೆ ಮಾಡಿ ಸಮಾಧಿಮಾಡುವ ಸ್ಥಳಕ್ಕೆ ತಂದರು. ನಂತರ ಪಾರ್ಥಿವ ಶರೀರವನ್ನೇ ಕ್ರಿಯಾಸಮಾಧಿಯ ಒಳಗೆ ಇಳಿಸಿ ತಲೆಗೆ ಸುತ್ತಿದ್ದ ಪಟ್ಟಗವನ್ನು ತೆಗೆದು ಸಾನ್ನಿಧ್ಯವಹಿಸಿದ್ದ ಕಾಶೀ ಜಗದ್ಗುರುಗಳು ಮತ್ತು ಶ್ರೀಶೈಲ ಜಗದ್ಗುರುಗಳು ಜೊತೆಗೂಡಿ ಮುಂದಿನ ಪಟ್ಟಾಧಿಕಾರಿಗಳ ಹೆಸರನ್ನು ಘೋಷಣೆ ಮಾಡಿ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಮಾಡಿ ಮುಗಿಸಿದರು.





ಉಜ್ಜಯಿನಿ ಪೀಠಕ್ಕೆ ಮುಂದಿನ ಉತ್ತರಾಧಿಕಾರಿಗಳ ಹೆಸರನ್ನು ಘೋಷಿಸಿ ಅವರ ತಲೆಗೆ ಪಟ್ಟಗವನ್ನು ಕಾಶೀ ಹಾಗೂ ಶ್ರೀಶೈಲ ಶ್ರೀಗಳವರು ತೊಡಿಸುತ್ತಿರುವರು.

ಲಿಂಗೈಕ್ಯರಾದ ಉಜ್ಜಯಿನಿ ಜಗದ್ಗುರು ಪ್ರಸನ್ನ ಮರುಳಸಿದ್ಧ ದೇಶೀಕೇಂದ್ರ ಜಗದ್ಗುರುಗಳಿಗೆ ಕಾಶೀ ಜಗದ್ಗುರುಗಳೆಂದರೆ ಎಲ್ಲಿಲ್ಲದ ಅಭಿಮಾನ, ಗೌರವ. ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನವು ಕಾಶೀ ಜಗದ್ಗುರುಗಳವರ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮ ಏರ್ಪಡಿಸಿ ಅದರ ಉದ್ಘಾಟನೆಗೆ ಸಾನ್ನಿಧ್ಯವಹಿಸಲು ದೂರವಾಣಿ ಮೂಲಕ ಉಜ್ಜಯಿನಿ ಲಿಂ. ಜಗದ್ಗುರುಗಳನ್ನು ಸಂಪರ್ಕಿಸಿದಾಗಲೆಲ್ಲಾ ತಕ್ಷಣ ಒಪ್ಪಿಗೆ ಕೊಡುತ್ತಿದ್ದರಲ್ಲದೆ ಮತ್ತೇನೂ ಪತ್ರ ಬರೆಯುವುದು ಬೇಡವೆಂದು ಪ್ರತೀಬಾರಿಯೂ ನನಗೆ ಹೇಳುತ್ತಿದ್ದುದ್ದನ್ನು ಇಲ್ಲಿ ಸ್ಮರಿಸುವಂತಾಗಿದೆ. ಲಿಂ. ಜಗದ್ಗುರುಗಳನ್ನು ದೆಹಲಿಯಿಂದ ವಿಶೇಷ ವಿಮಾನದಲ್ಲಿ ಕರೆತರಲಾದಾಗಿನಿಂದ ಅಂತ್ಯಸಂಸ್ಕಾರ ಮುಗಿಯುವವರೆಗೆ ಎಲ್ಲವನ್ನು ಸುವರ್ಣ ವಾಹಿನಿಯವರು ಎರಡು ದಿನಗಳು ಬಿತ್ತರಿಸಿದ್ದನ್ನು ನಾವು ನೋಡಿದ್ದನ್ನು ಮರೆಯುವಂತಿಲ್ಲ. ಸದಾ ನಗುಮುಖದ ಸರಳ ಸ್ವಭಾವದ ಪೀಠದ ಅಭಿವೃದ್ಧಿಗಾಗಿ, ಸಮಾಜಕ್ಕಾಗಿ ಕೊನೆಯವರೆಗೆ ಶ್ರಮಿಸಿದ ಜಗದ್ಗುರುಗಳು ಇಂದು ನಮ್ಮೊಡನಿಲ್ಲ. ಆದರೆ ಅವರ ನೆನಪು ನಾವಿರುವವರೆಗೂ ನಮ್ಮೊಡನಿರುತ್ತದೆ.

29–10–11 ರಂದು ಶ್ರೀಶೈಲ ಪೀಠದ ಹಿರಿಯ ಜಗದ್ಗುರುಗಳಾಗಿದ್ದ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಲಿಂಗೈಕ್ಯರಾದರು. ಕ್ರಿಯಾಸಮಾಧಿಯನ್ನು 30ನೇ ತಾರೀಖಿನಂದು ದಾವಣಗೆರೆ ಯಲ್ಲಿರುವ ಶ್ರೀಶೈಲಮಠದಲ್ಲಿ ಸರ್ಕಾರಿ ಗೌರವಗಳೊಂದಿಗೆ ಕಾಶೀ ಜಗದ್ಗುರುಗಳು ಹಾಗೂ ಶ್ರೀಶೈಲ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನೆರವೇರಿಸಲಾಯಿತು.

ಶ್ರೀಶೈಲ ಶ್ರೀಗಳ ಅಂತ್ಯಕ್ರಿಯೆ



ಶ್ರೀಶೈಲ ಶ್ರೀಗಳವರ ಪಾರ್ಥಿವ ಶರೀರಕ್ಕೆ ಕಾಶೀಪೀಠದ ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶ್ರೀಶೈಲಮಠದ ಡಾ. ಚನ್ನಸಿದ್ಧರಾಮ ಶಿವಾಚಾರ್ಯ ಸ್ವಾಮೀಜಿ, ಉಜ್ಜಯನಿಪೀಠದ ನಿಯೋಜಿತ ಪೀಠಾಧಿಪತಿ ಶ್ರೀ ಮಹಾಂತರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ ಅವರಿಂದ ಪುಷ್ಪನಮನ.

ಸಕಲ ಸರ್ಕಾರಿ ಗೌರವದೊಂದಿಗೆ ಉಮಾಪತಿ ಪಂಡಿತಾರಾಧ್ಯರ ಕ್ರಿಯಾಸಮಾಧಿ



ಲಿಂಗೈಕ್ಯ ಜಗದ್ಗುರುಗಳ ಶ್ರದ್ಧಾಂಜಲಿ ಸಭೆಯ ಸಾನ್ನಿಧ್ಯವನ್ನು ಜಗದ್ಗುರುದ್ವಯರು ವಹಿಸಿದ್ದರು.

ಶ್ರೀ 1008 ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸನ್ನಿಧಿಯವರ ಪೀಠಾರೋಹಣದ ರಜತಮಹೋತ್ಸವ 7-7-2014 ರಿಂದ 11-11-2014

ಕಾಶೀ ಜಗದ್ಗುರುಗಳು ಕಾಶೀ ಪೀಠದ ಗುರುಕುಲದಲ್ಲಿ ಅಧ್ಯಯನ ಮಾಡುತ್ತಿರುವಾಗ 1971-72ರಲ್ಲಿ ಕಾಶೀ ವೀರಶೈವ ವಿದ್ವತ್ ಸಂಘದ ಕಾರ್ಯದರ್ಶಿಯಾಗಿದ್ದಾಗಲೇ ಸತತ ಪರಿಶ್ರಮ ಪ್ರಯತ್ನಗಳಿಂದಾಗಿ ಯಾವ ನಿಧಿಯನ್ನು ಕೊಡದೆ ಸಂಪೂರ್ಣನಂದ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ 'ಶಕ್ತಿ ವಿಶಿಷ್ಟಾದ್ವೈತ ಪೀಠ'ವನ್ನು ಸ್ಥಾಪಿಸುವ ಮೂಲಕ ಕಾಶೀ ಜ್ಞಾನಸಿಂಹಾಸನದಲ್ಲಿ ಒಂದು ಹೊಸ ದಾಖಲೆಯನ್ನೇ ಸೃಷ್ಟಿಸಿದರು. ಇದಕ್ಕೆಲ್ಲಾ ಅಂದಿನ ಜಗದ್ಗುರುಗಳಾಗಿದ್ದ ಲಿಂ. ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಸಂಪೂರ್ಣ ಪ್ರೋತ್ಸಾಹವೇ ಕಾರಣವಾಗಿತ್ತು. ಉತ್ತರ ಪ್ರದೇಶದಲ್ಲಿ ಯಾವ ರಾಜಕಾರಣಿಗಳ ಬೆಂಬಲವಿಲ್ಲದೆ, ಯಾರ ಧನಸಹಾಯವಿಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಶಕ್ತಿ ವಿಶಿಷ್ಟಾದ್ವೈತ ಪೀಠ ಸ್ಥಾಪನೆಯಾಗಿದ್ದು ಇಡೀ ವೀರಶೈವ ಸಮುದಾಯವೇ ಅಚ್ಚರಿಪಡುವಂತಾಯ್ತು. ಕಾಶೀ ಜಗದ್ಗುರುಗಳು ಛಲಗಾರರು. ಸಮಾಜದ ಹಿತದೃಷ್ಟಿಯಿಂದ ಕೈಗೆತ್ತಿಕೊಂಡ ಕಾರ್ಯವನ್ನು ಪೂರ್ಣಗೊಳಿಸುತ್ತಿದ್ದರು.



ಬೆಂಗಳೂರಿನ ವೀರಶೈವ ಅನುಸಂಧಾನ ಪ್ರಾರಂಭಿಸುವ ಕಾಲದಲ್ಲಿ 1998ರಲ್ಲಿ ಅನೇಕ ವಿರೋಧಗಳನ್ನು ಎದುರಿಸಬೇಕಾಯ್ತು. ಆ ಸಮಯದಲ್ಲಿ ಕಾಶೀ ಜಗದ್ಗುರುಗಳು ಪ್ರೋತ್ಸಾಹ ನೀಡಿ-ಬೆಂಬಲಿಸಿ- 'ಇಟ್ಟ ಹೆಜ್ಜೆ ಹಿಂದಿಡಬೇಡಿ' ಎಂದು ಧೈರ್ಯ ತುಂಬಿದ್ದ ಕಾರಣ ಇಂದಿಗೂ ಯಶಸ್ವಿಯಾಗಿ ಕಾಶೀ ಜಗದ್ಗುರುಗಳವರ ಯೋಜನೆಯಂತೆ ಕಾರ್ಯಗಳು ನಡೆಯುತ್ತಿವೆ.

ಇಂತಹ ಗುಣ ಸ್ವಭಾವಗಳನ್ನು ಹೊಂದಿರುವ ಜಗದ್ಗುರುಗಳಿಗೆ ಪೀಠದಲ್ಲಿ ಯಾವುದೇ ಸಮಾರಂಭವನ್ನು ದೊಡ್ಡ ಪ್ರಮಾಣದಲ್ಲಿ ಆಯೋಜಿಸುವುದು ಕಷ್ಟದ ಮಾತೇನಲ್ಲ. ದ್ವಾದಶ ಶತಮಾನೋತ್ಸವವನ್ನು 19-10-2001 ರಿಂದ 5-12-2001ರವರೆಗೆ ಬಹು ಯಶಸ್ವಿಯಾಗಿ ಬಹು ಸಮರ್ಪಕವಾಗಿ ನಿರ್ವಹಿಸಿದ್ದರು. ಇಂದು ಜಗದ್ಗುರುಗಳಿಗೆ



ಶ್ರೀ ಪೀಠದಲ್ಲಿ ಸಿದ್ಧಾಂತ ಶಿಖಾಮಣಿ ಪಾರಾಯಣ ಸಪ್ತಾಹದಂದು ಜಗದ್ಗುರು ವಿಶ್ವಾರಾಧ್ಯರಿಗೆ ರುದ್ರಾಕ್ಷಾರ್ಚನೆ ಸಲ್ಲಿಸುತ್ತಿರುವ ಜಗದ್ಗುರುಗಳು.



ಗುರುಪೂರ್ಣಿಮಾದಂದು ಜಗದ್ಗುರುಗಳಿಗೆ
ಸುಮಂಗಲೆಯರಿಂದ ಅರಿಸಿನ ಮಂಗಲಸ್ನಾನ




8–7–2014ರಂದು ಗುರುಪೂರ್ಣಿಮಾ ದಿನದಂದು ಭಕ್ತರಿಂದ ಪುಷ್ಪವೃಷ್ಟಿ

ದೇಶಾದ್ಯಂತ ಲಕ್ಷಾಂತರ ಭಕ್ತರು ಅವರ ಸೇವೆ ಮಾಡಲು ಮುಂದಾಗಿರುವಂತಹ ಇಂದಿನ ದಿನಗಳಲ್ಲಿ ಜಗದ್ಗುರುಗಳು ಆಯೋಜಿಸಿರುವ ಈ ಬೃಹತ್ ಪ್ರಮಾಣದ ರಜಮಹೋತ್ಸವ ಆಚರಣೆಯನ್ನು ಈ ಬಾರಿ 126 ದಿನಗಳ ಕಾಲ 7–7–2014ರಿಂದ 11–11–2014ರವರೆಗೆ ಕಾಶಿಯಲ್ಲಿ ಆತ್ಮಶುದ್ಧಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಕಾಶೀ ಪೀಠದ ಇತಿಹಾಸದಲ್ಲೇ ಹಿಂದೆಂದೂ ನಡೆಯದಿರುವಂತಹ 12 ಕೋಟಿ ಜಪಯಜ್ಞ, ಲಕ್ಷ ಕುಂಬಾಭಿಷೇಕ, ಕೋಟಿ ರುದ್ರಾಕ್ಷಾರ್ಚನೆ, ಕುಂಕುಮಾರ್ಚನೆ, ಬಿಲ್ವಾರ್ಚನೆ ತಿಲ ತೈಲ ದೀಪೋತ್ಸವ, ತುಲಾಭಾರ, ಲಿಂ. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಲಿಂಗಾಂಗ ಸಾಮರಸ್ಯವನ್ನು ಪಡೆದು 25 ಸಂವತ್ಸರಗಳು ಆಗಿದ್ದು ಇವರ ಪುಣ್ಯಾರಾಧನೆಯ ರಜತ ಮಹೋತ್ಸವ, ಸಿದ್ಧಾಂತ ಶಿಖಾಮಣಿಯ ಪಾರಾಯಣ ಸಪ್ತಾಹಗಳು (18 ಸಪ್ತಾಹಗಳು), ದೀಪೋತ್ಸವ, ಗುರುಪೂರ್ಣಿಮಾ ವಿಶೇಷ ಕಾರ್ಯಕ್ರಮ, ಹೊಸದಾಗಿ ಆರಂಭಿಸಲಾಗುವ ಸ್ಕಂಧಷಷ್ಠಿ, ಜಗದ್ಗುರುಗಳವರ 68ನೇ ವರ್ಷದ ಜನ್ಮ ದಿನೋತ್ಸವ, ವಿಜಯದಶಮಿ, ಮಹಾಲಕ್ಷ್ಮಿ–ಮಹಾಸರಸ್ವತಿ ಮಹಾಪೂಜೆ, ಗಣೇಶೋತ್ಸವ, ಪಾರಾಯಣ ಮಂಗಲೋತ್ಸವ, ಶಿವಯೋಗ ವಿಜ್ಞಾನ ಶಿಬಿರ, ಕಾಶೀ ಹಿಂದೂ ವಿಶ್ವವಿದ್ಯಾಲಯ ವಾರಾಣಸಿ, ಶೈವ ಭಾರತಿ ಶೋಧ ಪ್ರತಿಷ್ಠಾನ, ಜಂಗಮವಾಡಿಮಠ, ವಾರಾಣಸಿ ಇವುಗಳ ಸಂಯುಕ್ತಾಶ್ರಯದಲ್ಲಿ 'ವೀರಶೈವ ಧರ್ಮ–ದರ್ಶನ ಉಗಮ ಮತ್ತು ವಿಕಾಸ' ಜಾಗತಿಕ ಮಟ್ಟದ ವಿಚಾರಗೋಷ್ಠಿ, ಅಖಿಲ ಭಾರತೀಯ ಶಿವಾಚಾರ್ಯರ ಸಮ್ಮೇಳನ ಹಾಗೂ ಶ್ರೀ ಕಾಶೀ ಜಗದ್ಗುರುಗಳ ಪೀಠಾರೋಹಣದ ರಜತ ಮಹೋತ್ಸವ ಮತ್ತು ವಿಶ್ವ ವೀರಶೈವ ಮಹಾಸಮ್ಮೇಳನ ಹೀಗೆ 10–20 ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಕಾಶೀ ಜಗದ್ಗುರು 2014ರ ಜನವರಿಯಿಂದಲೇ ಹೋದೆಡೆಯಲ್ಲೆಲ್ಲಾ ಪತ್ರಿಕಾಗೋಷ್ಠಿ ನಡೆಸಿ ಮೇಲೆ ತಿಳಿಸಿರುವ ಕಾರ್ಯಕ್ರಮಗಳ ಬಗ್ಗೆ ವರದಿಗಾರರಿಗೆ ತಿಳಿಸಿ ನಾಡಿನ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಬರುವಂತೆ ಮಾಡಿದ್ದರು. ಎಲ್ಲಾ ರಾಜ್ಯಗಳಲ್ಲೂ ಪತ್ರಿಕಾಗೋಷ್ಠಿ ನಡೆಸಿ ಕಾಶೀ ಜಂಗಮವಾಡಿ ಮಠದೆಡೆ ಧಾವಿಸಿ ಬರುವಂತೆ ಮಾಡಿದ್ದರು. ಜುಲೈ 7ನೇ ತಾರೀಖಿನಿಂದ ದೇಶದ ನಾನಾ ಭಾಗಗಳಿಂದ ಪ್ರತಿನಿತ್ಯ ಸಹಸ್ರ ಸಂಖ್ಯೆಯಲ್ಲಿ ಬಂದು ಭಕ್ತಾದಿಗಳು ಭಾಗವಹಿಸಲಾರಂಭಿಸಿದರು. ಪ್ರತಿನಿತ್ಯ ಎರಡರಿಂದ ಮೂರು ಸಾವಿರ ಭಕ್ತಾದಿಗಳಿಗೆ ವಿಶೇಷ ಪ್ರಸಾದದ



ಜಂಗಮವಾಡಿ ಮಠದಲ್ಲಿ ಸಂಪೂರ್ಣವಾಗಿ ರುದ್ರಾಕ್ಷಿಯಿಂದ ಅಲಂಕೃತಗೊಂಡಿರುವ
ತಕ್ಕಡಿಯಲ್ಲಿ ಜಗದ್ಗುರುಗಳವರ ತುಲಾಭಾರ



ತುಲಾಭಾರದ ಸಂದರ್ಭದಲ್ಲಿ ವಿಶೇಷ ರೀತಿಯಲ್ಲಿ ಜಗದ್ಗುರುಗಳಿಗೆ ದೀಪಾರತಿ
ಬೆಳಗುತ್ತಿರುವುದು.





ಶ್ರೀ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸನ್ನಿಧಿಯವರ 68ನೇ ಜನ್ಮದಿನೋತ್ಸವವನ್ನು ಆಂಧ್ರಪ್ರದೇಶದ 500 ಭಕ್ತರು ಶ್ರೀ ಪೀಠಕ್ಕೆ ಆಗಮಿಸಿ ಸಂಭ್ರಮದಿಂದ ಆಚರಣೆ ಮಾಡಿದಾಗಿನ ದೃಶ್ಯಗಳು



9–8–2014ರಂದು ಹೈದರಬಾದ್ ಬಲಕಂಪೇಟದ ಭಕ್ತರು ಹಾಗೂ ವಿವಿಧ ಪ್ರಾಂತಗಳ ಸುಮಂಗಲೆಯರಿಂದ ಮಂಗಲಸ್ನಾನ

ವ್ಯವಸ್ಥೆಯನ್ನು ಮಾಡಲಾಗಿತ್ತು. ಪ್ರಸಾದವನ್ನು ತಯಾರಿಸುವ ಜವಾಬ್ದಾರಿಯನ್ನು ಮಹಾರಾಷ್ಟ್ರದ ಹೆಸರಾಂತ ಅಡಿಗೆ ಭಟ್ಟರುಗಳಿಗೆ ವಹಿಸಿದ್ದರು. ಕಾಶಿಗೆ ಹೋಗಿ ಬಂದ ಭಕ್ತರು ಅಲ್ಲಿನ ಪ್ರಸಾದದ ವ್ಯವಸ್ಥೆ ಬಗ್ಗೆ ಬಹಳ ಮೆಚ್ಚಿ–ತುಂಬಾ ರುಚಿಕರವಾಗಿತ್ತೆಂದರು. ಅಂದರೆ ಜಗದ್ಗುರುಗಳು ಧಾರ್ಮಿಕ, ಸಾಹಿತ್ಯಿಕ ಕಾರ್ಯಗಳಿಗೆ ಗಮನ ಕೊಟ್ಟಷ್ಟೇ ಪ್ರಸಾದ ವ್ಯವಸ್ಥೆ ಕಡೆಯೂ ಗಮನಿಸುತ್ತಿರುವುದು ಇದರಿಂದ ತಿಳಿಯುತ್ತದೆ.


ನಾವುಗಳು ಕಾಶಿಗೆ ಭೇಟಿ ನೀಡಿದ್ದು ಸೆಪ್ಟೆಂಬರ್ 26ರಂದು. ಕಳೆದ 80 ದಿನಗಳಿಂದ ನಿರಂತರವಾಗಿ ನಡೆಯುತ್ತಿರುವ 12 ಕೋಟಿ ಜಪಯಜ್ಞದಿಂದಾಗಿ ಇಡೀ ಜಂಗಮವಾಡಿ ಮಠದ ತುಂಬೆಲ್ಲಾ ಜಪದ ತರಂಗಗಳೇ ತುಂಬಿರುವುದು ನನ್ನ ಅನುಭವಕ್ಕೆ ಬಂದಿತು. ಶಾದ್ ನಗರದಲ್ಲಿನ ಮಠದ 25–30 ವಿದ್ಯಾರ್ಥಿಗಳು, ಪೀಠದ ಗುರುಕುಲದ ವಿದ್ಯಾರ್ಥಿಗಳು ವಿಶ್ವನಾಥ ಮಂದಿರದ ಮುಂಭಾಗದಲ್ಲಿ ಕುಳಿತು ಪಠಿಸುತ್ತಿರುವ ರುದ್ರ ಮಂತ್ರಗಳ ತರಂಗಗಳೂ ಎಲ್ಲೆಡೆ ತುಂಬಿ ಒಳ ಹೋದವರ ಮನಸ್ಸಿನ ದುಗುಡ, ದುಮ್ಮಾನಗಳೆಲ್ಲಾ ಕರಗಿ ಒಂದು ರೀತಿಯ ಶಾಂತ ಮನಸ್ಥಿತಿಯನ್ನು ಪಡೆಯಬಹುದಾಗಿತ್ತು.



9–8–2014 ಕಾಶೀ ಜಗದ್ಗುರುಗಳಿಂದ 68ನೇ ಜನ್ಮದಿನದಂದು ಹೈದರಬಾದ್‌ನ ಬಲಕಂ ಪೇಟ ವೀರಶೈವ ಸಮಾಜದ ವತಿಯಿಂದ 68 ಸ್ವರ್ಣ ಕುಸುಮಗಳಿಂದ ಶ್ರೀ ಮಹಾಸನ್ನಧಿಯವರ ಇಷ್ಟಲಿಂಗ ಪಾದಪೂಜೆ ಮಾಡುತ್ತಿರುವುದು.



9–8–2014ರಂದು ಜಗದ್ಗುರುಗಳ 68ನೇ ಜನ್ಮದಿನೋತ್ಸವದ ಸಂಜೆ ಧಾರ್ಮಿಕ ಸಭೆಯಲ್ಲಿ ಹೈದರಾಬಾದಿನ ಅಮೂಲ್ಯ ಮುತ್ತುಗಳಿಂದ ಪಾದಪೂಜೆ ಮಾಡುತ್ತಿರುವ ದೃಶ್ಯ



ಪ್ರತಿನಿತ್ಯ ಶ್ರೀ ಪೀಠದಲ್ಲಿ ನಡೆಯುತ್ತಿರುವ ಜಗದ್ಗುರು – ವಿಶ್ವಾರಾಧ್ಯರಿಗೆ ಕೋಟಿ ಬಿಲ್ವಾರ್ಚನೆ ಕಾಶೀ ಜಗದ್ಗುರುಗಳಿಂದ



ಶ್ರೀ ಪೀಠದ ಆವರಣದಲ್ಲಿ ಜಗದ್ಗುರುಗಳ ಆಶೀರ್ವಾದದೊಂದಿಗೆ ಹೊರಟಿರುವ ಗ್ರಂಥ ಪಲ್ಲಕ್ಕಿ ಉತ್ಸವ

27–9–14ರಂದು ಲಿಂ॥ 1008 ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯಾರಾಧನೆಯ ರಜತ ಮಹೋತ್ಸವದಂದು ಬೆಳಗಿನ 5 ಗಂಟೆಗೆ ಮಂಗಳವಾದ್ಯಗಳು ಮೊಳಗಿ ಗಂಗಾನದಿ ತೀರಕ್ಕೆ ಹೊರಟು–ಗಂಗೆಯನ್ನು ತರಲು ಮಠದಲ್ಲಿರುವ ಎಲ್ಲಾ ಭಕ್ತಾದಿಗಳೂ ಹೊರಟರು. ದಶಾಶ್ವಮೇಧ ಘಾಟ್‌ನಲ್ಲಿ ನೆರೆದ ಭಕ್ತಾದಿಗಳೆಲ್ಲರೂ ಸ್ನಾನಮಾಡಿ ಮಡಿಯಿಂದ ಕುಂಭ ಹೊತ್ತು ಗಂಗಾಜಲವನ್ನು ಮಂಗಳವಾದ್ಯದೊಂದಿಗೆ ಮೆರವಣಿಗೆಯಲ್ಲಿ ಶ್ರೀ ಪೀಠಕ್ಕೆ ತರಲಾಯಿತು.

ಪೂರ್ವಾಚಾರ್ಯರ ಸಮಾಧಿಗಳ ಮೇಲೆ ಸ್ಥಾಪಿತವಾಗಿರುವ ಶಿವಲಿಂಗಗಳಿಗೆ ಮಹಾರುದ್ರಾಭಿಷೇಕ, ರುದ್ರಾಕ್ಷಾರ್ಚನೆ ಮತ್ತು ಬಿಲ್ವಾರ್ಚನೆ ನಡೆಸಿ ಸಂಜೆ ನಡೆದ ಧಾರ್ಮಿಕ ಸಭೆಯಲ್ಲಿ ಕಾಶೀ ಜಗದ್ಗುರುಗಳು ಲಿಂ॥ ಜಗದ್ಗುರುಗಳನ್ನು ಸ್ಮರಿಸಿ ಅವರ ಭಾವಚಿತ್ರಕ್ಕೆ ದೀಪಾರತಿ ಬೆಳಗಿ ಭಕ್ತಿಯಿಂದ ಗೌರವ ಸಲ್ಲಿಸಿದರು.



7–7–2014 ರಿಂದ 11–11–2014ರವರೆಗೆ ನಡೆಯುವ ದಾಸೋಹ ಆರಂಭವಾಗುವ ಮುನ್ನ ಜಗದ್ಗುರುಗಳು ಆಗಮಿಸಿ ಸೇವಾಕರ್ತೃಗಳಿಗೆ ಆಶೀರ್ವದಿಸಿದ ನಂತರ ಪ್ರಸಾದ ವಿತರಣೆ ಆರಂಭ



ಶ್ರೀ ಪೀಠದಲ್ಲಿ ಪಾರಾಯಣ ಗ್ರಂಥ ಬಿಡುಗಡೆ



ಪ್ರತೀ ನಿತ್ಯ ಜಗದ್ಗುರುಗಳಿಂದ ಶ್ರೀ ಮಠದಲ್ಲಿ ಸ್ಥಾಪನೆಗೊಂಡಿರುವ ವಿಶ್ವನಾಥ ಲಿಂಗಕ್ಕೆ ಆಭಿಷೇಕ ಮಾಡುವಾಗಿನ ದೃಶ್ಯ

ಶ್ರೀ ಕಾಶೀ ಪೀಠದಲ್ಲಿ ಶಿವಯೋಗ ವಿಜ್ಞಾನ ಶಿಬಿರ



6-11-2014 ರಿಂದ 10-11-2014ರವರೆಗೆ ಶ್ರೀ ಕಾಶೀ ಪೀಠದಲ್ಲಿ ಬಹು ಯಶಸ್ವಿಯಾಗಿ 'ಶಿವಯೋಗ ವಿಜ್ಞಾನ ಶಿಬಿರ' ನಡೆಯಿತು. ಗುಳೇದಗುಡ್ಡದ ಶ್ರೀ ಕೃಷ್ಣ ಯೋಗಾಶ್ರಮದ ಯೋಗಾಚಾರ್ಯರಾದ ಡಾ. ಬಸವರಾಜ ಹಡಗಲಿಯವರು ಶಿಬಿರವನ್ನು ನಡೆಸಿಕೊಟ್ಟರು. ಸಾಧಕನ ದೇಹದಲ್ಲಿರುವ ಷಟ್‌ಚಕ್ರಗಳ ಶುದ್ಧೀಕರಣವನ್ನು ಮಾಡಿಸಿ ಶಿಬಿರಾರ್ಥಿಗಳಿಗೆ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗಗಳೆಂಬ ಅಂತರ್ಲಿಂಗಗಳ ಅನುಭೂತಿಯನ್ನು ಮಾಡಿಕೊಟ್ಟರು. ಉಚಿತವಾಗಿ ಐದು ದಿನಗಳ ಈ ಶಿಬಿರದಲ್ಲಿ ಪ್ರಾಚೀನವಾದ ವೀರಶೈವ ಧರ್ಮದ ಶಿವಯೋಗವನ್ನು ವಿಜ್ಞಾನದೊಂದಿಗೆ ಮೇಳವಿಸಿ ಶಿಬಿರಾರ್ಥಿಗಳಿಗೆ ಕಲಿಸಿಕೊಟ್ಟರು. ಶಿಬಿರದ ನೇತೃತ್ವವನ್ನು ಹಾರನಹಳ್ಳಿ ಕೋಡಿಮಠದ ಶ್ರೀ ಮ.ನಿ.ಪ್ರ. ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು ವಹಿಸಿದ್ದರು. ಅಧ್ಯಕ್ಷತೆಯನ್ನು ಬಾಳೇಹೊಸೂರಿನ ಶ್ರೀ ಮ.ನಿ.ಪ್ರ. ದಿಂಗಾಲೇಶ್ವರ ಸ್ವಾಮಿಗಳು ವಹಿಸಿದ್ದರು. ಶಿಬಿರದ ಉದ್ಘಾಟನೆಯನ್ನು ಹಾವೇರಿ ಹುಕ್ಕೇರಿಮಠದ ಶ್ರೀ ಸದಾಶಿವ ಸ್ವಾಮಿಗಳು ನಡೆಸಿಕೊಟ್ಟರು.

ಕಾಶೀ ವೀರಶೈವ ವಿದ್ವತ್ ಸಂಘದ ವಿದ್ಯಾರ್ಥಿಗಳ ಸಹಯೋಗದೊಂದಿಗೆ ನಡೆದ ಈ ಶಿಬಿರದಲ್ಲಿ ದೇಶದ ಎಲ್ಲಾ ಪ್ರಾಂತಗಳ ಸದ್ಭಕ್ತರು ಹಾಗೂ ಅನೇಕ ರಾಜಕೀಯ ಧುರೀಣರು ಮತ್ತು ವಿವಿಧ ಪ್ರದೇಶಗಳ ವೀರಶೈವ ಸಂಘಟನೆಗಳ ಪದಾಧಿಕಾರಿಗಳು ಶ್ರದ್ಧೆಯಿಂದ ಶಿಬಿರದಲ್ಲಿ ಪಾಲ್ಗೊಂಡು ಈ ಶಿವಯೋಗ ವಿಜ್ಞಾನ ಶಿಬಿರದ ಪ್ರಯೋಜನ ಪಡೆದುಕೊಂಡರು.

ಜಗದ್ಗುರುಗಳ ಮುಖ್ಯ ಉದ್ದೇಶ ವಿವಿಧ ರಾಜ್ಯಗಳಿಂದ ಆಗಮಿಸಿರುವ ಶಿವಾಚಾರ್ಯರು ಇದರ ಪ್ರಯೋಜನ ಪಡೆದು ನಿತ್ಯ ರೂಢಿಸಿಕೊಳ್ಳಬೇಕೆಂಬುದೇ ಆಗಿತ್ತು. ಅನೇಕ ಶಿವಾಚಾರ್ಯರನ್ನು ಈ ಬಗ್ಗೆ ವಿಚಾರಿಸಿದಾಗ "ಬಹಳ ಚೆನ್ನಾಗಿತ್ತು, ಅನೇಕ ಹೊಸ ವಿಚಾರಗಳು ತಿಳಿದವು"ಎಂದು ನನ್ನ ಬಳಿ ಹೇಳಿದ್ದನ್ನು ಕೇಳಿದಾಗ ಜಗದ್ಗುರುಗಳ ಉದ್ದೇಶ ಸ್ವಲ್ಪಮಟ್ಟಿಗಾದರೂ ಈಡೇರಿತೆಂದು ಅನ್ನಿಸಿತು.

ದಿ : 9-11-2014 ರಿಂದ 10-11-2014ರವರೆಗೆ ಕಾಶೀ ಹಿಂದೂ ವಿಶ್ವವಿದ್ಯಾಲಯ, ವಾರಾಣಸಿ ಇವುಗಳ ಸಂಯುಕ್ತ ಆಶ್ರಯದಲ್ಲಿ ವೀರಶೈವದರ್ಮ-ದರ್ಶನಗಳ ಉಗಮ ಮತ್ತು ವಿಕಾಸ : ಜಾಗತಿಕ ಮಟ್ಟದ ವಿಚಾರ ಗೋಷ್ಠಿ



ಶ್ರೀ ಜಗದ್ಗುರುತ್ರಯರಾದ ಉಜ್ಜಯನಿ, ಶ್ರೀಶೈಲ ಹಾಗೂ ಕಾಶೀ ಪೀಠಗಳ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ ಜಾಗತಿಕ ಮಟ್ಟದ ವಿಚಾರಗೋಷ್ಠಿಯಲ್ಲಿ ಭಾರತದ ವಿಭಿನ್ನ ರಾಜ್ಯಗಳ ಪ್ರಖ್ಯಾತ ವಿದ್ವಾಂಸರು ಹಾಗೂ ನೇಪಾಳ ಮತ್ತು ರಶಿಯಾ ದೇಶಗಳ ವಿದ್ವಾಂಸರು ಪಾಲ್ಗೊಂಡಿದ್ದು, ವಿದ್ವಾಂಸರಾದ ಅನೇಕ ಶಿವಾಚಾರ್ಯರು ಚರ್ಚೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ದಿನಾಂಕ 10-11-2014 ಮುಂಜಾನೆ 6.30ಕ್ಕೆ ಸುಂದರವಾಗಿ ಸಿಂಗರಿಸಿದ ಶ್ರೀ ಪೀಠದ ಅಡ್ಡಪಲ್ಲಕ್ಕಿಯಲ್ಲಿ ರೇಶ್ಮೆವಸ್ತ್ರದ ಹೊದಿಕೆ ಹಾಕಿ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ಅದರಲ್ಲಿರಿಸಿ ಮಂಗಳವಾದ್ಯದೊಂದಿಗೆ ಮೆರವಣಿಗೆಯಲ್ಲಿ ಶ್ರೀಮಠದಿಂದ ದಶಾಶ್ವಮೇಧ್ ಘಾಟ್‌ಗೆ ಕೊಂಡೊಯ್ಯಲಾಯ್ತು. ಕಾಲ್ನಡಿಗೆಯಲ್ಲಿ ಉಜ್ಜಯನಿ, ಶ್ರೀಶೈಲ ಹಾಗೂ ಕಾಶೀ ಜಗದ್ಗುರುಗಳು ಪಲ್ಲಕ್ಕಿಯ ಮುಂದೆ ಸಾಗಿದರು. ಸಾವಿರಾರು ಭಕ್ತರು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.



ಗಂಗಾನದಿಯ ದಡದಲ್ಲಿ ಕಾಶೀ ಜಗದ್ಗುರುಗಳು ತಾವೇ ಸ್ವತಃ ಗಂಗೆಯನ್ನು ತಂದು ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥಕ್ಕೆ ಪ್ರೋಕ್ಷಣೆ ಮಾಡಿ, ಹೂವಿರಿಸಿ ಪೂಜೆ ಮಾಡಿದರು.

ಆನಂತರ ಕಾಶೀ ಜಗದ್ಗುರುಗಳಿಗೆ, ಉಜ್ಜಯನಿ ಹಾಗೂ ಶ್ರೀಶೈಲ ಪೀಠದ ಜಗದ್ಗುರುಗಳು ಗಂಗಾಜಲವನ್ನು ಸುರಿದು ಮಜ್ಜನ ಮಾಡಿಸಿದರು. ನಂತರ ನೆರೆದಿದ್ದ ಭಕ್ತರೂ ಒಂದೊಂದು ಕುಂಭದಲ್ಲಿ ಜಗದ್ಗುರುಗಳಿಗೆ ಗಂಗಾಜಲವನ್ನು ಅವರ ಮಸ್ತಕದ ಮೇಲೆ ಸುರಿದು ತಮ್ಮ ಭಕ್ತಿಯನ್ನು ಮೆರೆದರು. ಇದಾದ ಮೇಲೆ ಕಾಶೀ ಜಗದ್ಗುರುಗಳು ಉಜ್ಜಯನಿ ಹಾಗೂ ಶ್ರೀಶೈಲ ಜಗದ್ಗುರುಗಳಿಗೆ ಗಂಗಾಜಲವನ್ನು ಸುರಿದರು. ನೆರೆದಿದ್ದ ಎಲ್ಲಾ ಭಕ್ತರಿಗೂ ತಮ್ಮ ಪವಿತ್ರ ಹಸ್ತಗಳಿಂದ ಗಂಗೆಯನ್ನು ಪ್ರೋಕ್ಷಿಸಿದರು.



ತುಂಬಿ ಹರಿಯುತ್ತಿದ್ದ ಗಂಗೆಯನ್ನು ಕಂಡು ಕಾಶೀ ಜಗದ್ಗುರುಗಳಿಗೆ ಬಾಲ್ಯದಲ್ಲಿ ತಾವು ಈಜುತ್ತಿದ್ದುದು ನೆನಪಾಗಿ ಎಲ್ಲರೂ ಅಚ್ಚರಿಪಡುವಂತೆ ನದಿಗೆ ದುಮುಕಿ ಈಜಲಾರಂಭಿಸಿಯೇಬಿಟ್ಟರು. ಅವರ ಹಿಂದೆ ಉಜ್ಜಯನಿ ಜಗದ್ಗುರುಗಳು, ಶ್ರೀಶೈಲ ಜಗದ್ಗುರುಗಳು ಈಜಲಾರಂಭಿಸಿದರು. ಈ ದೃಶ್ಯವನ್ನು ನೋಡಲು ಎರಡು ಕಣ್ಣುಗಳು ಸಾಲದಾಯಿತು. ಮೂವರು ಜಗದ್ಗುರುಗಳನ್ನು ಕುಳ್ಳಿರಿಸಿ ವೈದಿಕರು ಮಂತ್ರ ಘೋಷದೊಂದಿಗೆ ಪೂಜಿಸಿದ ನಂತರ ಮತ್ತೆ ಎಲ್ಲರೂ ಕುಂಭಗಳಲ್ಲಿ ಗಂಗೆಯನ್ನು ಹೊತ್ತು ಮೆರವಣಿಗೆಯಲ್ಲಿ ಶ್ರೀಮಠದೆಡೆಗೆ ಸಾಗಿದರು. ಪಲ್ಲಕ್ಕಿಯೊಡನೆ ಜಗದ್ಗುರುಗಳೆಲ್ಲರೂ ಮಂಗಳ ವಾದ್ಯದೊಂದಿಗೆ ಕಾಲ್ನಡಿಗೆಯಲ್ಲಿ ಸಾಗಿದ್ದನ್ನು ರಸ್ತೆಯ ಇಕ್ಕೆಲದಲ್ಲಿ ಕಾಶಿಯ ಜನತೆ ಕಂಡು ಕೈಮುಗಿಯುತ್ತಿದ್ದರು.

ಇದೊಂದು ಅಪೂರ್ವ ಹಾಗೂ ಅಪರೂಪದ ಸಂದರ್ಭ. ಇದರಲ್ಲಿ ಭಾಗವಹಿಸಿದ ಭಕ್ತಾದಿಗಳೆಲ್ಲರಿಗೂ ಹಿಂದೆಂದೂ ಜೀವನದಲ್ಲಿ ದೊರಕದ ತೃಪ್ತಿ ಭಾವ ಆವರಿಸಿತ್ತು.

ಶ್ರೀ ಜಂಗಮವಾಡಿ ಮಠದ ಮಹಾದ್ವಾರದಲ್ಲಿ ಮೂವರು ಜಗದ್ಗುರುಗಳಿಗೆ ಮಂಗಳಾರತಿ ಮಾಡಿ ಸ್ವಾಗತಿಸಲಾಯ್ತು. ಕಾಶೀ ಜಗದ್ಗುರುಗಳು ಎಲ್ಲಾ ಪೂರ್ವ ಪೀಠಾಚಾರ್ಯರ ಗದ್ದುಗೆ ಬಳಿ ನಡೆದು ಕುಂಭಗಳಲ್ಲಿ ತಂದಿದ್ದ ಗಂಗೆಯನ್ನು ಸುರಿದು, ವಿಶ್ವಾರಾಧ್ಯ ಮಂದಿರಕ್ಕೆ ಸಾಗಿ ವಿಶ್ವಾರಾಧ್ಯರಿಗೆ ತಮ್ಮ ಕಮಂಡಲದಿಂದ ಗಂಗಾಭಿಷೇಕವನ್ನು ಮಾಡಿದರು.

ಜಗದ್ಗುರುಗಳವರ ಚಾತುರ್ಮಾಸ ಸಂದರ್ಭದಲ್ಲಿ ನಡೆದ 12 ಕೋಟಿ ಜಪಯಜ್ಞ ಸಮಾರೋಪ ಹಿನ್ನೆಲೆಯಲ್ಲಿ ಲೋಕಕಲ್ಯಾಣಾರ್ಥವಾಗಿ





ಶ್ರೀ ರುದ್ರ ಹೋಮ, ಆಯುಷ್ಯ ಹೋಮ, ಮಹಾ ಮೃತ್ಯಂಜಯ, ಸಿದ್ಧಾಂತ ಶಿಖಾಮಣಿ ಪಾರಾಯಣ ಪೂರ್ವಕ ಹೋಮ, ನಕ್ಷತ್ರ ನವಗ್ರಹ, ಜಯಾದಿ ಶಾಂತಿ ಹೋಮಗಳ ಪೂರ್ಣಾಹುತಿ ನಡೆಯಿತು. ಪೂರ್ಣಾಹುತಿಯ ನಂತರ ವಿಶ್ವನಾಥ ಮಂದಿರಕ್ಕೆ ಮೂವರು ಜಗದ್ಗುರುಗಳು ತೆರಳಿ ವಿಶ್ವನಾಥ ಲಿಂಗಕ್ಕೆ ಪೂಜೆ ಸಲ್ಲಿಸಿದರು.





ಅಂತಿಮವಾಗಿ ವಿಶ್ವಾರಾಧ್ಯರ ಮಂದಿರದಲ್ಲಿ ರುದ್ರಾಕ್ಷಾರ್ಚನೆ, ಬಿಲ್ವಾರ್ಚನೆ, ಪುಷ್ಪಾರ್ಚನೆ ನಡೆಸಿದರು.





ಅಂದು ರಾಜಾಸ್ಥಾನದ ಜಂಗಮರು 'ಛಪ್ಪನ್ ಭೋಗ್' 68 ಬಗೆಯ ಸಿಹಿ ತಿಂಡಿಗಳನ್ನು ಮಠದಲ್ಲೆ ತಯಾರಿಸಿ ವಿಶ್ವನಾಥ ಮಂದಿರದಲ್ಲಿ ಬಹು ಆಕರ್ಷಕ ವಾಗಿ ಜೋಡಿಸಿ, ಮೂವರು ಜಗದ್ಗುರುಗಳನ್ನು ಅಲ್ಲಿಗೆ ಕರೆ ದೊಯ್ದು ಎಲ್ಲವನ್ನೂ ಗುರು ಗಳಿಗೆ ಅರ್ಪಿಸಿ ತಮ್ಮ ಭಕ್ತಿಯನ್ನು ಪ್ರದರ್ಶಿಸಿದರು.

ದಿನಾಂಕ 10 ನವ್ಹಂಬರ್ 2014 **ಸಾಯಂಕಾಲ 4 ಘಂಟೆ**

ಅಖಿಲ ಭಾರತೀಯ ಶಿವಾಚಾರ್ಯ ಸಮ್ಮೇಳನ







11–11–2014 ರಜತ ಮಹೋತ್ಸವ

25 ವರ್ಷಗಳ ನಂತರ ಮತ್ತೊಮ್ಮೆ ಮುಂಜಾನೆ 5.00 ಘಂಟೆಗೆ ಜಗದ್ಗುರುಗಳನ್ನು ಕೂಡಿಸಿ ಉಜ್ಜಯಿನಿ ಶ್ರೀಶೈಲ ಜಗದ್ಗುರುಗಳಿಂದ ಮಂಗಳಸ್ನಾನ ಮಾಡಿಸಲಾಯಿತು. ಪೀಠ ಪರಂಪರಾನುಸಾರವಾಗಿ ಜಗದ್ಗುರುಗಳನ್ನು ಜ್ಞಾನಪೀಠ ಮಂಟಪದಲ್ಲಿ ಕುಳ್ಳಿರಿಸಿ ವೇದೋಕ್ತ ವಿಧಿಗಳನುಸಾರ ಉಜ್ಜಯಿನಿ, ಶ್ರೀಶೈಲ ಜಗದ್ಗುರುಗಳಿಬ್ಬರೂ ಸುಗಂಧ ದ್ರವ್ಯಗಳನ್ನು ಲೇಪಿಸಿ ಕ್ಷೀರಾಭಿಷೇಕ ಮಾಡಿಸಿ, 5 ಗಂಟೆ 17 ನಿಮಿಷಕ್ಕೆ ಸರಿಯಾಗಿ ರತ್ನಖಚಿತ ಚಿನ್ನದ ಕಿರೀಟ ತೊಡಿಸಿ ಪುಷ್ಪವೃಷ್ಟಿಗೈದು, ಮಂಗಳಾರತಿ ಬೆಳಗಿದರು. ಧರ್ಮಗುರುಗಳ ಲಾಂಛನಗಳಾದ ದಂಡ, ಕಮಂಡಲಗಳನ್ನು ಸಮರ್ಪಿಸಲಾಯಿತು.




ಕಾಶೀ ಜಗದ್ಗುರುಗಳವರ ಪೀಠಾರೋಹಣದ ರಜತ ಮಹಾತ್ಸವದಲ್ಲಿ

















ಶಾಸ್ತ್ರೋಕ್ತವಾಗಿ ನಡೆದ ವಿಧಿ ವಿಧಾನಗಳ ಕೆಲವು ದೃಶ್ಯಗಳು





















25 ವರ್ಷಗಳ ಹಿಂದೆ ಕಾಶೀ ಜಗದ್ಗುರುಗಳ ಪೀಠಾರೋಹಣ ನೋಡುವ ಭಾಗ್ಯ ಇಲ್ಲದ ನನಗೆ ಇಂದು ಮುಂಜಾನೆ ವೇದ ಮಂತ್ರಗಳ ಘೋಷಗಳ ನಡುವೆ ನಡೆದ ಕಿರೀಟಧಾರಣ ಮಹೋತ್ಸವವನ್ನು ಭಕ್ತಿಯಿಂದ ವೀಕ್ಷಿಸುವ ಸೌಭಾಗ್ಯ ದೊರೆಯಿತು.

ಇಷ್ಟಲಿಂಗ ಮಹಾಪೂಜೆಯಲ್ಲಿ ಶಿವಾಚಾರ್ಯರೆಲ್ಲಾ ಭಾಗವಹಿಸಿ, ಪಾದಪೂಜೆ ಮಾಡಿದರು.





16 ಭಾಷೆಗಳಿಗೆ ಅನುವಾದಗೊಂಡ "ಶ್ರೀ ಸಿದ್ಧಾಂತ ಶಿಖಾಮಣಿ" ಗ್ರಂಥಗಳ ಹಾಗೂ 'ಆಶೀರ್ವಾದ' ಗ್ರಂಥ ಬಿಡುಗಡೆ ಸಮಾರಂಭ.

ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಕರ್ನಾಟಕದ ತೋಟಗಾರಿಕೆ ಸಚಿವ ಶಾಮನೂರು ಶಿವಶಂಕರಪ್ಪ ಆಗಮಿಸಿದರು. ಹತ್ತು ನಿಮಿಷಗಳ ನಂತರ ಪಂಜಾಬ್ ರಾಜ್ಯಪಾಲ ಶ್ರೀ ಶಿವರಾಜ ಪಾಟೀಲ್ ಅವರು ಕುಟುಂಬ ಸಮೇತ ಆಗಮಿಸಿದರು. ಪೂನಾದಿಂದ ಆಗಮಿಸಿದ್ದ ಶ್ರೀಮತಿ ಬಾಬಾ ಕಲ್ಯಾಣಿ ಮತ್ತು ಅವರ ಸುಪುತ್ರ ಕೂಡಾ ವೇದಿಕೆಯಲ್ಲಿ ಉಪಸ್ಥಿತರಾದರು.



ಜಂಗಮವಾಡಿ ಮಠದ ಆವರಣದಲ್ಲಿ ದಕ್ಷಿಣಭಾರತ, ಉತ್ತರ ಭಾರತದಿಂದ ಆಗಮಿಸಿದ್ದ ಸಾವಿರಾರು ಭಕ್ತರು ಕಿಕ್ಕಿರಿದು ನೆರೆದಿದ್ದರು. ರಾಜ್ಯಪಾಲರು ದೀಪ ಬೆಳಗುವುದರ ಮೂಲಕ ಪೀಠಾರೋಹಣದ ರಜತ ಮಹೋತ್ಸವವನ್ನು ಉದ್ಘಾಟಿಸಿದರು.









ಕಾಶೀ ಜಗದ್ಗುರುಗಳ ಬಹುದಿನಗಳ ಪರಿಶ್ರಮದ ಫಲವಾಗಿ ಇಂದು 'ಶ್ರೀ ಸಿದ್ಧಾಂತ ಶಿಖಾಮಣಿ' ದೇಶ, ವಿದೇಶಗಳ 16 ಭಾಷೆಗಳಿಗೆ ಅನುವಾದಗೊಂಡು ಪಂಜಾಬ್ ರಾಜ್ಯಪಾಲರಿಂದ ಲೋಕಾರ್ಪಣೆಗೊಂಡಿತು.

ಗ್ರಂಥಗಳನ್ನು ಬಿಡುಗಡೆಮಾಡಿ ಮಾತನಾಡಿದ ರಾಜ್ಯಪಾಲರು ಶ್ರೀ ಸಿದ್ಧಾಂತ ಶಿಖಾಮಣಿ ಮನುಕುಲವನ್ನು ಒಂದುಗೂಡಿಸುವ ಗ್ರಂಥ ಎಂದು ತಮ್ಮ ಭಾಷಣದಲ್ಲಿ ತಿಳಿಸಿದರು. ಮುಂದುವರೆದ ರಾಜ್ಯಪಾಲರು-ಪ್ರತಿಯೊಂದು ಧರ್ಮಕ್ಕೆ ಧರ್ಮಗ್ರಂಥ ಇರುವಂತೆ ಸನಾತನ ವೀರಶೈವ ಧರ್ಮಕ್ಕೆ ಸಿದ್ಧಾಂತ ಶಿಖಾಮಣಿ ಧರ್ಮ ಗ್ರಂಥವಾಗಿದ್ದರೂ ಈ ಗ್ರಂಥದ ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಸ್ಥಲಗಳಲ್ಲಿ ಬರುವ ವಿಚಾರಗಳು ಉತ್ಕೃಷ್ಟವಾಗಿವೆ. ಸಾಧಕನು ಅಂತರಂಗ ಸಾಧನೆಯನ್ನು ಮಾಡುತ್ತಾ ತನ್ನ ಸ್ವಂತಿಕೆಯ ಅಹಂ ಅನ್ನು ಕಳೆದುಕೊಂಡು ಪರಮದಲ್ಲಿ ವಿಲೀನಗೊಳಿಸುವ ಮಾರ್ಗ ಇದಾಗಿದೆ. ತನ್ನತನವನ್ನು ಕಳೆದುಕೊಳ್ಳದೆ ಪರಮಾತ್ಮನನ್ನು ಪಡೆಯಲಾಗದು ಎನ್ನುವ ಸಿದ್ಧಾಂತವನ್ನು ನೂರೊಂದು ಸ್ಥಲಗಳ ಮೂಲಕ ಪ್ರತಿಪಾದಿಸಲಾಗಿದೆ. ಎಲ್ಲಾ ಮಾನವರಿಗೆ ಉಪಯುಕ್ತವಾಗಿರುವ ಈ ಸಿದ್ಧಾಂತವನ್ನು ಜಗತ್ತಿನ ವಿವಿಧ ಭಾಷೆಗಳಿಗೆ ಭಾಷಾಂತರಿಸುವ ಕಾರ್ಯವನ್ನು ಕಾಶೀ ಜ್ಞಾನಪೀಠದ ಜಗದ್ಗುರುಗಳು





ಹಮ್ಮಿಕೊಂಡಿರುವುದು ಲೋಕಕಲ್ಯಾಣದ ಅಪರೂಪದ ಕಾರ್ಯ. ಇಷ್ಟು ಭಾಷೆಯ ಗ್ರಂಥಗಳನ್ನು ಒಂದೇ ವೇದಿಕೆಯಲ್ಲಿ ಬಿಡುಗಡೆಮಾಡಿರುವುದು ತಮಗೆ ಸಂತಸ ತಂದಿದೆ ಎಂದು ತಿಳಿಸಿದರು.

ಇದೇ ಸಮಯದಲ್ಲಿ ಡಾ ಸಿ.ಯು. ಉಮಾದೇವಿ ಸಂಗ್ರಹಿಸಿ, ಸಂಪಾದಿಸಿರುವ **'ಆಶೀರ್ವಾದ'** ಗ್ರಂಥವನ್ನು ರಾಜ್ಯಪಾಲರು ಲೋಕಾರ್ಪಣೆ ಮಾಡಿದರು.





ವಿವಿಧ ಭಾಷೆಗಳಿಗೆ ಅನುವಾದಗೊಂಡ ಗ್ರಂಥಗಳು ಹೀಗಿವೆ :

ಶ್ರೀ ಸಿದ್ಧಾಂತ ಶಿಖಾಮಣಿ (ಸಂಸ್ಕೃತ)	:	**ಮರಿತೋಂಟದಾರ್ಯ** **ಡಾ.ಎಂ. ಶಿವಕುಮಾರಸ್ವಾಮಿ,** ಬೆಂಗಳೂರು **ವಿದ್ವಾನ್ ಎಂ. ರಾಜಶೇಖರಯ್ಯ,** ಮೈಸೂರು
ಶ್ರೀ ಸಿದ್ಧಾಂತ ಶಿಖಾಮಣಿ (ಕನ್ನಡ)	:	**ಶ್ರೀ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು**
ಶ್ರೀ ಸಿದ್ಧಾಂತ ಶಿಖಾಮಣಿ (ಮರಾಠಿ) ಗದ್ಯಾನುವಾದ	:	**ಡಾ॥ ಕಪಾಳೆ,** ಗುಲಬರ್ಗಾ
ಶ್ರೀ ಸಿದ್ಧಾಂತ ಶಿಖಾಮಣಿ ತತ್ವಾಮೃತ (ಮರಾಠಿ ಓವಿಬದ್ಧ)	:	**ಡಾ॥ ಶೆ.ದೆ. ಪಸಾರಕರ,** ಸೊಲ್ಲಾಪೂರ
ಶ್ರೀ ಸಿದ್ಧಾಂತ ಶಿಖಾಮಣಿ (ತೆಲುಗು)	:	**ಡಾ॥ ಕೆ. ಪ್ರತಾಪ್,** ತಿರುಪತಿ
ಶ್ರೀ ಸಿದ್ಧಾಂತ ಶಿಖಾಮಣಿ (ತಮಿಳು)	:	**ಡಾ॥ ಗಣೇಶ್,** ಪಾಂಡಿಚೇರಿ
ಶ್ರೀ ಸಿದ್ಧಾಂತ ಶಿಖಾಮಣಿ (ಮಲೆಯಾಳಂ)	:	**ಡಾ॥ ಅಂಬಿಕಾ ಅಪ್ಪುಕುಟ್ಟನ್**
ಶ್ರೀ ಸಿದ್ಧಾಂತ ಶಿಖಾಮಣಿ (ಹಿಂದಿ)	:	**ಡಾ॥ ರಾಧೇಶ್ಯಾಮ ಚತುರ್ವೇದಿ** ಕಾಶಿ ಹಿಂದೂ ವಿಶ್ವವಿದ್ಯಾಲಯ, ವಾರಾಣಸಿ
ಶ್ರೀ ಸಿದ್ಧಾಂತ ಶಿಖಾಮಣಿ (ಅವಧಿ ದೋಹಾ-ಚೌಪಾಈ)	:	**ಡಾ॥ ಪ್ರಭುನಾಥ ದ್ವಿವೇದಿ** ಕಾಶಿ ವಿದ್ಯಾಪೀಠ, ವಾರಾಣಸಿ
ಶ್ರೀ ಸಿದ್ಧಾಂತ ಶಿಖಾಮಣಿ (ಗುಜರಾತಿ)	:	**ಶ್ರೀಮತಿ ಡಾ॥ ಕರುಣಾ ತ್ರಿವೇದಿ,** ಅಹ್ಮದಾಬಾದ್
ಶ್ರೀ ಸಿದ್ಧಾಂತ ಶಿಖಾಮಣಿ (ಬಂಗಾಳಿ)	:	**ಡಾ॥ ಮನುದೇವ ಭಟ್ಟಾಚಾರ್ಯ,** ವಾರಾಣಸಿ
ಶ್ರೀ ಸಿದ್ಧಾಂತ ಶಿಖಾಮಣಿ (ಉಡಿಯಾ)	:	**ಡಾ॥ ಗಂಗಾಧರ ಪಂಡ್ಯಾ,** ಕುಲಗುರು ಪುರಿ ವಿಶ್ವವಿದ್ಯಾಲಯ, ಪುರಿ
ಶ್ರೀ ಸಿದ್ಧಾಂತ ಶಿಖಾಮಣಿ ಅಭಂಗಗಾಥಾ (ಮರಾಠಿ ಅಭಂಗ)	:	**ಡಾ॥ ಶೆ.ದೆ. ಪಸಾರಕರ,** ಸೊಲ್ಲಾಪೂರ
ಶ್ರೀ ಸಿದ್ಧಾಂತ ಶಿಖಾಮಣಿ (ಇಂಗ್ಲೀಷ್)	:	**ಡಾ॥ ಎಂ. ಶಿವಕುಮಾರಸ್ವಾಮಿ,** ಬೆಂಗಳೂರು
ಶ್ರೀ ಸಿದ್ಧಾಂತ ಶಿಖಾಮಣಿ (ನೇಪಾಳಿ)	:	**ಡಾ॥ ಹರಿಪ್ರಸಾದ ಅಧಿಕಾರಿ,** ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ
ಶ್ರೀ ಸಿದ್ಧಾಂತ ಶಿಖಾಮಣಿ (ರಶಿಯನ್)	:	**ಕು. ಯುಲಿಯಾ (ಗೌರಿ) ಕ್ರಾವಚೆಂಕೊ,** ಯುಕ್ರೇನ್

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಮನೂರು ಶಿವಶಂಕರಪ್ಪನವರು ಮಾತನಾಡುತ್ತಾ ಉತ್ತರ ಭಾರತದ ಹರಿಯಾಣ, ರಾಜಸ್ಥಾನ, ಪಂಜಾಬ್ ಮುಂತಾದ ಪ್ರಾಂತಗಳಿಂದ ಬಂದು ಸೇರಿದ್ದ ಸಾವಿರಾರು ಭಕ್ತರನ್ನು ಕಂಡು ತಮಗೆ ಅತೀವ ಸಂತೋಷವಾಗಿದೆ. ಉತ್ತರ ಭಾರತದ ವೀರಶೈವ ಹಾಗೂ ಜಂಗಮರು ಈ ಧರ್ಮದ ಮೂಲವಾಹಿನಿಯಿಂದ ಇಷ್ಟು ದಿನ ದೂರವಾಗಿದ್ದರು. ಕಾಶೀ ಜಗದ್ಗುರುಗಳ ಧರ್ಮ ಜಾಗೃತಿಯ ನಿರಂತರ ಪರಿಶ್ರಮದಿಂದ ಇಡೀ ವೀರಶೈವ ಸಮುದಾಯವನ್ನು ಒಗ್ಗೂಡಿಸಿ ಈ ಸಮ್ಮೇಳನವನ್ನು ಸಫಲಗೊಳಿಸಿದ್ದಾರೆಂದು ಮುಕ್ತ ಮನಸ್ಸಿನಿಂದ ಶ್ಲಾಘಿಸಿದರು.



ಕಾಶೀ ಪೀಠದಲ್ಲಿ ಯಾತ್ರಾರ್ಥಿಗಳಿಗಾಗಿ ನಿರ್ಮಾಣಗೊಳ್ಳುತ್ತಿರುವ ಭಕ್ತ ನಿವಾಸದ ಒಂದು ಭಾಗದ ನಿರ್ಮಾಣಕ್ಕಾಗಿ ತಮ್ಮ ಮನೆತನದಿಂದ ಒಂದೂವರೆ ಕೋಟಿ ರೂಪಾಯಿ ದೇಣಿಗೆ ನೀಡುವುದಾಗಿ ಪ್ರಕಟಿಸಿದರು.

ಕಾಶೀ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಇಂದು ಪ್ರಕಟಗೊಂಡಿರುವ 16 ಭಾಷೆಗಳ ಸಿದ್ಧಾಂತ ಶಿಖಾಮಣಿಯನ್ನು ಅನುವಾದಿಸಿದ ವಿದ್ವಾಂಸರ ಪಾತ್ರ-ಅತ್ಯಂತ ಮಹತ್ವದ್ದೆಂದು ಹೇಳಿದರು. ಗ್ರಂಥ ಮುದ್ರಣಕ್ಕೆ ದಾನಿಗಳು ಸಹಜವಾಗಿ ಸಿಗುವಂತೆ ಅನುವಾದಕ ವಿದ್ವಾಂಸರು ಸಿಗುವುದು ವಿರಳ. ಇಂದು ಪ್ರಕಟಗೊಂಡ ಗ್ರಂಥಗಳಿಗೆ ಸಾಕಷ್ಟು ಶ್ರಮ ಹಾಗೂ ಸಮಯವಾಗಿದೆ. ಆದರೂ ಇಂದು ಪ್ರಕಟಗೊಂಡಿರುವುದು ಬಹಳ ಸಂತೋಷ ನೀಡಿದೆ ಎಂದರು.






ಪೀಠ ವತಿಯಿಂದ ಜಗದ್ಗುರುಗಳು ಪಂಜಾಬ್ ರಾಜ್ಯಪಾಲರನ್ನು ಕರ್ನಾಟಕ ತೋಟಗಾರಿಕೆ ಇಲಾಖೆ ಮಂತ್ರಿಗಳನ್ನು ಸತ್ಕರಿಸಿದರು.



ಎರಡು ದಿನಗಳಿಂದ ನಡೆದ 'ವೀರಶೈವ ಧರ್ಮ ದರ್ಶನಗಳ ಉಗಮ ಮತ್ತು ವಿಕಾಸ' ಅಂತರರಾಷ್ಟ್ರೀಯ ಗೋಷ್ಠಿಯಲ್ಲಿ ಪಾಲ್ಗೊಂಡ ವಿದ್ವಾಂಸರನ್ನು ಗೌರವಿಸಲಾಯಿತು.

ಸಂಜೆ ನಡೆದ ಧರ್ಮಸಭೆಯಲ್ಲಿ ದೇಶಾದ್ಯಂತ ಆಗಮಿಸಿದ್ದ ವಿವಿಧ ಸಂಘ ಸಂಸ್ಥೆಗಳು, ಶಿವಾಚಾರ್ಯರು, ಜಗದ್ಗುರು ದ್ವಯರು ಗುರುಗಳಿಗೆ ಗೌರವ ಸಮರ್ಪಿಸಿದರು.





ರಜತ ಮಹೋತ್ಸವದಲ್ಲಿ ಭಾಗಿಯಾಗಿದ್ದ ಕೋಡಿಮಠದ ಸ್ವಾಮಿಗಳನ್ನು ಜಗದ್ಗುರುಗಳು ಸನ್ಮಾನಿಸಿದರು.



ಗುರುಕುಲದ ವಿದ್ಯಾರ್ಥಿಗಳೊಂದಿಗೆ ಜಗದ್ಗುರುತ್ರಯರು



ಮರುದಿನ ಅಂದರೆ 12-11-2014ರಂದು ವಾರಾಣಸಿಯಲ್ಲಿ ಪ್ರಕಟವಾಗುವ ದೈನಂದಿನ ಪತ್ರಿಕೆಗಳಾದ 'ಹಿಂದುಸ್ಥಾನ್', 'ಆಜ್', 'ಉಮರ್ ಉಜಾಲ' ಮುಂತಾದ ಪತ್ರಿಕೆಗಳಲ್ಲಿ ಗ್ರಂಥ ಬಿಡುಗಡೆಯಾದ ವಿಚಾರಗಳು ರಾಜ್ಯಪಾಲರಿಗೆ ಸನ್ಮಾನ ಮಾಡಿದ ವಿಚಾರಗಳು ಪ್ರಕಟಗೊಂಡಿದ್ದವು.



अमर उजाला वाराणसी

शैव धर्म को सीमा में न बांधें

पंजाब के राज्यपाल ने 'सिद्धांत शिखामणि' के संदेशों पर रोशनी डाली

अमर उजाला ब्यूरो

महासम्मेलन



आज वाराणसी महानगर

मानवताका पाठ पढ़ाता है वीर शैव धर्म सिद्धान्त-शिवराज पाटिल

07 • वाराणसी • बुधवार • 12 नवम्बर 2014 हिन्दुस्तान

जंगमबाड़ी मठ में वीरशैव महासम्मेलन के समापन समारोह में पंजाब के राज्यपाल शिवराज पाटिल ने की तल्ख टिप्पणी

दूसरों में रुचि अधिक, खुद के उत्थान में कम

वाराणसी | निज संवाददाता



जंगमबाड़ी मठ में मंगलवार को वीरशैव महासम्मेलन के समापन समारोह में पंजाब के राज्यपाल शिवराज पाटिल को सम्मानित करते मठ के पीठाधीश्वर डॉ. चंद्रशेखर शिवाचार्य एवं अन्य। | • हिन्दुस्तान

ನವೆಂಬರ್ 11ರಂದು ಜಂಗಮವಾಡಿ ಮಠ ಸಣ್ಣ ಭಾರತವನ್ನು ಕಂಡಂತಾಗಿತ್ತು. ಕೇರಳ, ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ಗುಜರಾತ್, ಸೀಮಾಂಧ್ರ, ತಮಿಳುನಾಡು, ಮಧ್ಯಪ್ರದೇಶ, ಉತ್ತರಪ್ರದೇಶ, ಹರಿಯಾಣ, ರಾಜಾಸ್ಥಾನ, ಪಂಜಾಬ್, ಓಡಿಸಾ, ಪಶ್ಚಿಮ ಬಂಗಾಲ ಮತ್ತು ಜಮ್ಮು, ಕಾಶ್ಮೀರ ರಾಜ್ಯಗಳಿಂದ ಅನೇಕ ವೀರಶೈವ ಸಂಘಟನೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು. ನೇಪಾಳದ ಭಕ್ತಪುರದ ಜಂಗಮವಾಡಿ ಶಾಖಾಮಠದವರು, ರಶಿಯಾ ದೇಶದವರೂ ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಕಳೆದ 25 ವರ್ಷಗಳಿಂದ ದೇಶಾದ್ಯಂತ ಸಂಚರಿಸುತ್ತಾ ಜನರಲ್ಲಿ ಧರ್ಮ ಜಾಗೃತಿ ಮೂಡಿಸುವುದಲ್ಲದೆ, ರಾಷ್ಟ್ರಪ್ರೇಮ, ದೇಶಭಕ್ತಿ, ವಿದ್ಯೆಯ ಮಹತ್ವ ಮುಂತಾದವುಗಳ ಬಗ್ಗೆ ತಮ್ಮ ಆಶೀರ್ವಚನದಲ್ಲಿ ಸಮಯಾನುಸಾರ ಹೇಳುತ್ತಲೇ ಬಂದಿದ್ದಾರೆ. ಕರ್ನಾಟಕಕ್ಕೆ ಬಂದಾಗ ಸಮನ್ವಯದ ಹರಿಕಾರರಾಗಿ ಮೆರೆದಿದ್ದಾರೆ. ಇಂದು ಜಗದ್ಗುರುಗಳನ್ನು ಸಮೀಪದಿಂದ ಕಂಡವರಿಗೆ–ತಿಳಿದುಬರುವುದೇನೆಂದರೆ–ಭೂಮಿತಾಯಂತೆ ಸಮಾಧಾನದಲ್ಲಿ, ಆಕಾಶದಂತೆ ವಿಶಾಲ ಹೃದಯವುಳ್ಳವರಾಗಿ, ತಾಯಂತೆ ಬಡ ಜನತೆಗೆ, ಬಡ ವಿದ್ಯಾರ್ಥಿಗಳಿಗೆ ಸಕಲರನ್ನು ಸಮಾನ ದೃಷ್ಟಿಯಿಂದ ಕಾಣುತ್ತಾ ಮೇಲು–ಕೀಳು, ಜಾತಿ–ಕುಲ, ದೇಶ–ಭಾಷೆ ಎಲ್ಲವನ್ನು ಮೀರಿ ನಿಂತಿರುವ ಸಾಕ್ಷಾತ್ ಪರಶಿವನಂತೆ ಕಂಡುಬರುತ್ತಾರೆ.

ಇಂತಹ ಮಹಾಪುರುಷರ, ಮಹಾತ್ಮರ, ಮಹಾಚೇತನದ ಕುರಿತು, ಅವರ ಸಾಧನೆಯ ಬಗೆಗೆ ಬರೆಯುವ ಅವಕಾಶ ದೊರೆತ ನಾನೇ ಪುಣ್ಯವಂತಳು.



ರಜತ ಮಹೋತ್ಸವದಂದು ಎಲ್ಲರಿಂದ ಗೌರವ ಸ್ವೀಕರಿಸಿದ ಜಗದ್ಗುರುಗಳು.

ಕಾಶೀ ಜಗದ್ಗುರುಗಳವರ

'ಆಶೀರ್ವಾದ'

ಎಲ್ಲರಿಗೂ ದೊರೆಯುವಂತಾಗಲಿ.

ಜಗದ್ಗುರುಗಳು ಧಾರೆಯೆರೆದಿರುವ ಪರಿಪೂರ್ಣತೆಯ ಸೂತ್ರಗಳು

ಸಂಯುಕ್ತ ಕರ್ನಾಟಕ
ಕಲಬುರ್ಗಿ | 2-9-2010 3

ಶ್ರಾವಣ ಮಾಸ ಸಂದೇಶ

ಸೇವೆಯಿಂದಲೇ ಗುರು ಕಾರುಣ್ಯ



ಹುಮನಾಬಾದ : ಆಪ್ತ, ಅಂಗ, ಸ್ಥಾನ ಮತ್ತು ಸದ್ಭಾವಗಳೆಂಬ ಚತುರ್ವಿಧ ಸೇವಾ ಸುಶ್ರೂಷೆಗಳಿಂದಲೇ ಗುರು ಕಾರುಣ್ಯವನ್ನು ಪಡೆಯಲು ಸಾಧ್ಯವೆಂದು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿಯ ಗುರು ಕಾರುಣ್ಯಸ್ಥಲವನ್ನು ಕುರಿತು ಆಶೀರ್ವಚನವನ್ನು ದಯಪಾಲಿಸುತ್ತ ಈ ವಿಚಾರವನ್ನು ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿಯ ಗುರು ಕಾರುಣ್ಯಸ್ಥಲದಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು "ಸೇವೇತ ಪರಮಾಚಾರ್ಯಂ ಶಿಷ್ಯೋ ಭಕ್ತಿಭಯಾನ್ವಿತ:" ಎಂಬುದಾಗಿ ಉಪದೇಶಿಸಿದ್ದಾರೆ. ಶಿಷ್ಯನಾದವನು ಭಯ ಭಕ್ತಿಗಳಿಂದ ಕೂಡಿಕೊಂಡು ಪರಮಾಚಾರ್ಯನಾದ ಸದ್ಗುರುವಿನ ಸೇವೆಯನ್ನು ಆತನು ಪ್ರಸನ್ನ ನಾಗುವವರೆಗೆ ಮಾಡಬೇಕೆಂಬುದು ಭಗವತ್ಪಾದರ ಆಶಯವಾಗಿದೆ. ಭಾರತಿಯ ಸಂಸ್ಕೃತಿಯಲ್ಲಿ ಗುರು ಕಾರುಣ್ಯವನ್ನು ಪಡೆಯಲು ಸೇವೆಗೆ ಆದ್ಯತೆಯನ್ನು ಕೊಡಲಾಗಿದೆ.

ಅಂತೆಯೇ ಉಪನಿಷತ್ ಕಾಲದಲ್ಲಿ ಆರುಣಿ, ಶ್ವೇತಕೇತು, ಸತ್ಯಕಾಮ ಮತ್ತು ಉಪಮನ್ಯು ಮುಂತಾದವರು ಮೇಲೆ ಹೇಳಿದ ಚತುರ್ವಿದ ಸೇವೆಯನ್ನು ಮಾಡಿ ಗುರು ಕಾರುಣ್ಯದಿಂದ ಬ್ರಹ್ಮಜ್ಞಾನವನ್ನು ಪಡೆದುಕೊಂಡಿದ್ದಾರೆ. ರಘುವಂಶದಲ್ಲಿ ಸುಪ್ರಸಿದ್ಧನಾದ ದಿಲೀಪ ಮಹಾರಾಜನು ಸಹ ಗುರುವಿನ ಆಶ್ರಮದಲ್ಲಿ ಪತ್ನಿ ಸಮೇತನಾಗಿ ಗೋ ಸೇವೆ ಮಾಡಿ, ಸಂತತಿ ಪಡೆದುಕೊಂಡ ಪ್ರಸಂಗವು ಸುಪ್ರಸಿದ್ಧವಾಗಿದೆ.

ಸದ್ಗುರುವಿನಲ್ಲಿ ಶಿಷ್ಯನಿಗೆ ಭೋಗ ಮೋಕ್ಷಗಳೆರಡನ್ನೂ ಅನುಗ್ರಹಿಸುವ ಸಾಮರ್ಥ್ಯವಿರುತ್ತದೆ. ಅಂತೆಯೇ ಕೆಲವರು ಸೇವೆಯನ್ನು ಮಾಡಿ ಲೌಕಿಕ ಭೋಗಭಾಗ್ಯಗಳನ್ನು ಪಡೆದುಕೊಂಡರೆ ಇನ್ನು ಕೆಲವರು ಅತ್ಯಂತ ದುರ್ಲಭವಾದ ಬ್ರಹ್ಮಜ್ಞಾನವನ್ನು ಸಹ ಪಡೆದುಕೊಂಡಿದ್ದಾರೆ. ಇಂತಹ ಉದಾಹರಣೆ ಬೇಕಾದಷ್ಟಿವೆ.

ತಾನು ಮಾಡಿದ ಸೇವೆಯಿಂದ ಸದ್ಗುರು ಸಂತುಷ್ಟನಾದಾಗ ಶಿಷ್ಯನಾದವನು ಯಾವುದೇ ಐಹಿಕ ಭೋಗವನ್ನು ಆಪೇಕ್ಷಿಸದೇ ಭವ ರೋಗದಿಂದ ಪಾರುಮಾಡುವ ದೀಕ್ಷಾರೂಪವಾದ ಗುರು ಕಾರುಣ್ಯವನ್ನು ಅನುಗ್ರಹಿಸುವಂತೆ ಬೇಡಿಕೊಳ್ಳಬೇಕೆಂಬುದಾಗಿ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಭೋಧಿಸಲಾಗಿದೆ.

ಶ್ರೀ ರೇಣುಕ ಭಗವತ್ಪಾದರು ದೀಕ್ಷೆಗೆ ಶಕ್ತಿಪಾತವನ್ನು ಮಾನದಂಡವನ್ನಾಗಿ ಭೋದಿಸಿದ್ದಾರೆ. ದೀಕ್ಷೆಗಾಗಿ ಸೇವಾ ಸುಶ್ರೂಷೆಯನ್ನು ಮಾಡಿದ ಶಿಷ್ಯನಲ್ಲಿ ಶಕ್ತಿಪಾತ ಲಕ್ಷಣಗಳನ್ನು ಪರೀಕ್ಷಿಸಿ ಅವನಿಗೆ ದೀಕ್ಷೆಯನ್ನು ಮಾಡಬೇಕೆಂಬುದು ಅವರ ಆಶಯವಾಗಿದೆ. ಶಕ್ತಿಪಾತ ವೆಂದರೆ ಶಿಷ್ಯನಲ್ಲಿ ಎದ್ದು ಕಾಣುವ ಸಾತ್ವಿಕ ಭಾವನೆಗಳು. ಶಿವನ ಮಹಿಮೆಯನ್ನು ಶ್ರವಣಮಾಡುವಾಗ ಅಂಗದಲ್ಲಿ ರೋಮಾಂಚನ ವಾಗುವುದು, ಕಣ್ಣುಗಳಲ್ಲಿ ಆನಂದಾಶ್ರುಗಳು ಹೊರಹೊಮ್ಮುವುದು. ಹೃದಯವು ಗದ್ಗದಿತವಾಗುವುದು ಮತ್ತು ಶಿವನ ಬಗ್ಗೆ ಮಾತನಾಡುವಾಗ ತುಟಿಗಳಲ್ಲಿ ಸ್ಪಂದನೆ ಯುಂಟಾಗುವುದು ಇವೆಲ್ಲವುಗಳು ಶಕ್ತಿಪಾತದ ಲಕ್ಷಣಗಳು.

ಆದ್ದರಿಂದ ಜಾತಿಧರ್ಮಗಳನ್ನು ಲೆಕ್ಕಿಸದೇ ಅವನಲ್ಲಿಯ ಶಕ್ತಿಪಾತದ ಸಾತ್ವಿಕ ಭಾವನೆಗಳನ್ನು ಕಂಡು ಕೊಂಡು ಅವನು ಯಾವುದೇ ಜಾತಿಯವನಿದ್ದರೂ ಶಿವಭಕ್ತನಾದ ಅವನಿಗೆ ಲಿಂಗದೀಕ್ಷೆಯನ್ನು ಕೊಡಬೇಕೆನ್ನುವ ಉದಾತ್ತ ವಿಚಾರವು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿತವಾಗಿದೆ. ಇದು ಶಿವಾಗಮಗಳಿಂದ ಬಂದ ಪದ್ಧತಿಯಾಗಿರುವುದರಿಂದ ಇದನ್ನು ಶಿವಶಾಸನವೆಂದೇ ಭಾವಿಸಬೇಕು. ಅಂತೆಯೇ ವೀರಶೈವ ಧರ್ಮದಲ್ಲಿ ಅನಾದಿ ಕಾಲದಿಂದಲೂ ಸರ್ವ ವರ್ಣದವರಿಗೆ ಶಿವದೀಕ್ಷೆಯನ್ನು ಮಾಡಿ ಅವರನ್ನು ಅತಿವರ್ಣಾಶ್ರಮಿಗಳನ್ನಾಗಿ ಮಾಡಿ ಕೊಂಡ ಪರಂಪರೆ ಇದೆ. ಅದು ಇಂದಿಗೂ ಕೂಡ ಪ್ರಚಲಿತದಲ್ಲಿರುವುದನ್ನು ಕಾಣುತ್ತೇವೆ. ಆದ್ದರಿಂದ ವೀರಶೈವ ಧರ್ಮದಲ್ಲಿ ದೀಕ್ಷಾ ಸಂಸ್ಕಾರವನ್ನು ಪಡೆಯಲು ಜಾತಿ ಗೋತ್ರಗಳಿಗಿಂತಲೂ ಅವನಲ್ಲಿಯ ಯೋಗ್ಯತೆಗೆ ಪ್ರಾಧಾನ್ಯತೆಯನ್ನು ಕೊಡಲಾಗಿದೆ. ಆದ ಕಾರಣ ಪ್ರತಿಯೊಬ್ಬರೂ ಗುರು ಸೇವೆಯನ್ನು ಮಾಡಿ ಗುರುವಿನ ಅನುಗ್ರಹರೂಪವಾದ ದೀಕ್ಷಾ ಸಂಸ್ಕಾರವನ್ನು ಪಡೆದು ತನ್ನ ಜನ್ಮವನ್ನು ಪಾವನ ಮಾಡಿಕೊಳ್ಳಬೇಕೆಂಬುದಾಗಿ ಶ್ರೀ ಕಾಶಿ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ತಿಳಿಯ ಪಡಿಸಿದರು.

ವ್ಯಕ್ತಿ ಬದುಕಿಗೆ ಅನ್ನಕ್ಕಿಂತಲೂ ನೀರಿಗಿಂತ ಶುದ್ಧ ಗಾಳಿ ಅವಶ್ಯಕ – ಕಾಶಿಜಗದ್ಗುರು

(ವರದಿ:ನಾಗಪ್ಪ ನಿಣ್ಣೆ)

ಬಸವಕಲ್ಯಾಣ,ಆಗಸ್ಟ್.27–ವ್ಯಕ್ತಿ ಬದುಕಿಗೆ ಅನ್ನಕ್ಕಿಂತ ನೀರಿಗಿಂತ ಶುದ್ಧ ಗಾಳಿ ಅವಶ್ಯಕವಾಗಿದೆ ವಿವಿಧಕಾರಣಗಳಿಂದ ಇಂದು ವಾಯು ಮಾಲಿನ್ಯ ಕಲುಷಿತವಾಗಿದೆ. ಒಳ್ಳೆಯ ವಾತಾವರಣದಲ್ಲಿ ಬುದಕುವುದೇ ದುಸ್ತರವಾಗಿದೆ ಎಂದು 1008 ಶ್ರೀ ಶ್ರೀ ಶ್ರೀ ಕಾಶಿಯ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಖೇಧ್ಯ ವ್ಯಕ್ತಪಡಿಸಿದರು.

ಅವರು ಹುಮನಾಬಾದಿನ ಸುಕ್ಷೇತ್ರ ವೀರಭದ್ರೇಶ್ವರ ದೇವಸ್ಥಾನದ ಭವ್ಯ ಮಂಟಪದಲ್ಲಿ ತಮ್ಮ 64ನೇ ಜನ್ಮ ದಿನೋತ್ಸವದ ನಿಮಿತ್ಯವಾಗಿ 64 ವೃಷಾರೋಪಣವನ್ನು ಹಾಗೂ 64 ದೀಪಗಳನ್ನು ಬೆಳಗಿಸಿ ಮಾತನಾಡಿದ ಜಗದ್ಗುರುಗಳು ಪರಿಸರ ಮತ್ತು ಪ್ರತಿಭೆಗಳು ಸಂರಕ್ಷಿಸಬೇಕಾಗಿದೆ.

ಸಮಾರಂಭವನ್ನು ಹುಮನಾಬಾದಿನ ಹಿರಿಯ ಧುರಿಣರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಬಸವರಾಜ ಪಾಟೀಲ ಉದ್ಘಾಟನೆ ನೆರವೇರಿಸಿ ಕಾಶಿ ಜಗದ್ಗುರುಗಳು ಪಾದಯಾತ್ರೆ ಮಾಡಿ ಸದ್ಭಾವನೆ ರಾಷ್ಟ್ರೀಯ ಏಕ್ಯತೆ ಮೂಡಿಸುವ ಕಾರ್ಯ ಮಾಡಿದ್ದಾರೆ. ವೈಚಾರಿಕ ಪರಂಪರೆಗೆ ನಾಂದಿ ಹಾಕಿದ್ದಾರೆ ಎಂದರು. ಮಾಣಿಕ ಪ್ರಭು ಸಂಸ್ಥಾನದ ಆನಂದರಾಜ ಮಹಾಪ್ರಭು ಇನ್ನಿತರರು ಜಗದ್ಗುರುಗಳ ಜನ್ಮದಿನಕ್ಕೆ ಶುಭಾಶಯ ಕೋರಿ ಅವರ ಸೇವೆ ಭಕ್ತಕುಲಕ್ಕೆ ನಿರಂತರ ಸಿಗಲಿ ಎಂದರು.

ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯ, ಶಾಸಕ ಬಸವರಾಜ ಪಾಟೀಲ ಅಟ್ಟೂರ, ಪತ್ರಕರ್ತ ನಾಗಪ್ಪ ನಿಣ್ಣೆ ಇನ್ನಿತರರು ಶಿವಾಚಾರ್ಯರು ಬೇರೆ ಬೇರೆ ರಾಜ್ಯಗಳಿಂದ ಬಂದ ವೀರಶೈವ ಮುಖಂಡರು ರಾಜಕೀಯ ಧುರಿಣರು, ಕಲಾವಿದರು, ಭಾಗವಹಿಸಿದ್ದರು. ಸ್ವಾಗತವನ್ನು ಶಾಸಕರಾದ ರಾಜಶೇಖರ ಪಾಟೀಲ ಉತ್ತಮ ರೀತಿಯ ಸಂಚಾಲನೆ ಹಾಗೂ ಸಂಘಟನೆಯು ರಶಿವಾರಿ ಡಾ.ರಾಜಶೇಖರ ಸ್ವಾಮಿ ಗೋರ್ಟಾ, ವಂದನಾರ್ಪಣೆಯನ್ನು ವೀರಣ್ಣಾ ಪಾಟೀಲ ಸಲ್ಲಿಸಿದ್ದರು.

ಪಾದಯಾತ್ರೆ:ಅಗ್ನಿ ಕುಂಡದಿಂದ ಜಗದ್ಗುರುಗಳು ಪಾದಯಾತ್ರೆ ಮೂಲಕ ದೇವಸ್ಥಾನಕ್ಕೆ ಆಗಮಿಸಿದ ಪೂಜ್ಯರು ಐಕ್ಯತೆ, ಸರಳತೆಗೆ ಅಲ್ಲದೇ ವೈಭಾವಿಕರಿಸುವುದಕ್ಕೆ ನಿರಾಕರಿಸಿ, ಈ ರೀತಿಯ ಪಾದಯಾತ್ರೆ ಮಾಡಿ ಅನೇಕರ ಪ್ರಗತಿಪರ ಸಂಘಟನೆಗಳ ನಾಗರಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದು ತಿಳಿದು ಬಂದಿದೆ.

ಕನ್ನಡ
ನಲಿ–ಕಲಿ

ದೀಕ್ಷೆಯಿಂದ ಭವಪಾಶ ನಿವೃತ್ತಿ



ಸಂಜೆವಾಣಿ ವಾರ್ತೆ

ಹುಮನಾಬಾದ ಸೆ.3)ಪ್ರತಿಯೊಬ್ಬ ಜೀವಿಯು ಜನ್ಮಿಸುವಾಗ ಆಣವ, ಮಾಯ ಮತ್ತು ಕಾರ್ಮಿಕಗಳೆಂಬ ತ್ರಿವಿಧ ಪಾಶಗಳಿಂದ ಬಂಧಿತನಾಗಿರುತ್ತಾನೆ. ಈ ಪಾಶತ್ರಗಳಿಗೆಗೆ ಮಲಗಳೆಂತಲೂ ಕರೆಯುವರು. ಇವುಗಳು ತ್ರಿವಿಧ ದೀಕ್ಷೆಗಳಿಂದಲೇ ನಿವೃತ್ತಿಯಾಗುವವು ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾ ಸ್ವಾಮಿಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಹೇಳಿದರು. ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ವೇದಿಕೆಯಿಂದ ಈ ವಿಚಾರ"ವನ್ನು ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿಯ ಗುರುಕಾರುಣ್ಯಸ್ಥಲದಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು)ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶ ಬಂಧನಂ) ಎಂಬುದಾಗಿ ಉಪದೇಶಿಸಿದ್ದಾರೆ. ಶಿಷ್ಯನಲ್ಲಿಯ ಪಾಶಬಂಧನವನ್ನು ತೊಡೆದುಹಾಕಿ ಶಿವಜ್ಞಾನವನ್ನುಂಟು ಮಾಡುವ ಸಂಸ್ಕಾರವೇ ದೀಕ್ಷಾ ಸಂಸ್ಕಾರವು. ತ್ರಿವಿಧ ಪಾಶಗಳನ್ನು ದೂರು ಮಾಡಲು ಇಲ್ಲಿ ವೇಧಾ, ಮಂತ್ರಿ ಮತ್ತು ಕ್ರಿಯಾ ದೀಕ್ಷೆಗಳೆಂಬ ಮೂರು ದೀಕ್ಷೆಗಳು ಹೇಳಲಾಗಿದೆ.

ಇಚ್ಛಾಶಕ್ತಿ ಸಂಕೋಚ ರೂಪವು ಮತ್ತು ಜೀವಾತ್ಮನಲ್ಲಿ ಅಣುಭಾವನೆ ಯನ್ನು ನಿರ್ಮಾಣ ಮಾಡುವ ಪಾಶವೇ ಆಣವ ಪಾಶ ಇದುವೇ ಆಣವ ಮಲವು. ಈ ಪಾಶ ಬಂಧನದಿಂದ ತನ್ನ ಪರಿಪೂರ್ಣ ಸ್ವರೂಪವನ್ನು ಮರೆತು ತನ್ನನ್ನು ಅಣುರೂಪವಾಗಿ ಭಾವಿಸಿಕೊಂಡು ಸ್ವಾರ್ಥ ಪರವಾದ ಸಂಕುಚಿತ ವ್ಯವಹಾರಗಳಲ್ಲಿ ತೊಡಗಿರುತ್ತಾನೆ.

ಸದ್ಗುರು ಶಿಷ್ಯನ ಮಸ್ತಕದ ಮೇಲೆ ತನ್ನವರದ ಹಸ್ತವನ್ನಿರಿಸಿ ಕೃಪಾಪೂರ್ಣ ದೃಷ್ಟಿಯಿಂದ ಅವಲೋಕಿಸುತ್ತ ನೀನು ಅಣುರೂಪನಲ್ಲ ನೀನು ಪರಿಪೂರ್ಣ ಪರಮಾತ್ಮರೂಪವೇ ಇರುವೇ ಎಂಬ ಉಪದೇಶದ ಮೂಲಕ ಅವನಿಗೆ ಶಿವೋಹಂಭಾವನೆಯನ್ನು ಉಪದೇಶ ಮಾಡುವುದರ ಮೂಲಕ ಭಾವಲಿಂಗದ ಅನುಸಂಧಾನವನ್ನು ಬೋಧಿಸುತ್ತಾನೆ. ಗುರುವಿನ ಉಪದೇಶದಂತೆ ಶಿಷ್ಯನು ತನ್ನಾತ್ಮವು ಶಿವಸ್ವರೂಪವೆಂಬ ಭಾನೆಯನ್ನು ಸದಾ ಮಾಡುತ್ತಿರುವುದರಿಂದ ಅವನು ಆಣವ ಪಾಶದಿಂದ ಮುಕ್ತನಾಗುವನು. ಜ್ಞಾನ ಶಕ್ತಿಯ ಸಂಕೋಚರೂಪವು ಮತ್ತು ಪರಸ್ಪರರಲ್ಲಿ ಭೇದ ಬುದ್ಧಿಯನ್ನು ನಿರ್ಮಾಣ ಮಾಡುವ ಪಾಶವೇ ಮಾಯಾ ಪಾಶವು, ಇದುವೇ ಮಾಯಾ ಮಲವೆಂದು ಕರೆಸಿಕೊಳ್ಳುವುದು. ಈ ಮಲದ ನಿವೃತ್ತಿಗಾಗಿ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಮಂತ್ರ ದೀಕ್ಷೆಯನ್ನು ಹೇಳಲಾಗಿದೆ. ಸದ್ಗುರು ಶಿಷ್ಯನ ಬಲಬದಿಯಲ್ಲಿ ಓಂ ನಮ: ಶಿವಾಯ ಎಂಬ ಮಹಾ ಮಂತ್ರವನ್ನು ಉಪದೇಶಮಾಡಿರುತ್ತಾನೆ. ಮತ್ತು ಮಂತ್ರದ ಅರ್ಥವನ್ನು ವಿವರಿಸುತ್ತ

ನಮ: ಎಂದರೆ ಜೀವಾತ್ಮನು. ಶಿವ ಎಂದರೆ ಪರಮಾತ್ಮನು, ಆಯ ಎಂದರೆ ಅವೆರಡರ ಅಭೇದ. ಹೀಗೆ ನಮ: ಶಿವಾಯ ಎಂದರೆ ಜೀವಾತ್ಮನು ಶಿವಸ್ವರೂಪನೇ ಆಗಿದ್ದಾನೆ ಎಂದರ್ಥ. ಈ ಮಂತ್ರಾರ್ಥವನ್ನು ಬೋಧಿಸುವುದರ ಜೊತೆಗೆ ಶ್ರೀ ಗುರು ಆತ್ಮದ ಚಿದ್ರೂಪವಾದ ಪ್ರಾಣಲಿಂಗದ ಸ್ವರೂಪವನ್ನು ಸಹ ಬೋಧಿಸುತ್ತಾನೆ. ಇದುವೇ ಮಂತ್ರ ದೀಕ್ಷೆಯು ಈ ಮಂತ್ರದೀಕ್ಷೆಯನ್ನು ಪಡೆದು ಸಾಧಕನು ಶ್ರೀ ಗುರುವಿನ ಉಪದೇಶದಂತೆ ಮಂತ್ರಾರ್ಥದ ಚಿಂತನೆಯನ್ನು ಮಾಡುತ್ತ ಪ್ರಾಣಲಿಂಗದ ಅನುಸಂಧಾನ ಮಾಡುತ್ತ ಬೇಧ ಬುದ್ಧಿಯನ್ನುಂಟುಮಾಡುವ ಮಾಯಾ ಪಾಶಾದಿಂದ ಮುಕ್ತನಾಗುವನು. ಇದರಂತೆ ಕ್ರಿಯಾಶಕ್ತಿಯ ಸಂಕೋಚರೂಪವು ಮತ್ತು ಶುಭಾಶುಭ ವಾಸನರೂಪವಾದ ಪಾಶಕ್ಕೆ ಕರ್ಮಪಾಶ ಅಥವಾ ಕಾರ್ಮಿಕ ಮಲವೆಂದು ಕರೆಯುತ್ತಾರೆ. ಈ ಮಲದ ನಿವೃತ್ತಿಗಾಗಿ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಕ್ರಿಯಾ ದೀಕ್ಷೆಯನ್ನು ಬೋಧಿಸಿದ್ದಾರೆ. ಈ ದೀಕ್ಷೆಯನ್ನು ಮಾಡುವಾಗ ಒಂದು ಶುಭ ಮೂಹೂರ್ತದಲ್ಲಿ ಮಂಟಪಾದಿಗಳನ್ನು ರಚಿಸಿ ಅಲ್ಲಿ ಪಂಚಾಚಾರ್ಯರ ಪ್ರತಿಕಗಳಾದ ಪಂಚಕಲಸಗಳನ್ನು ಸ್ಥಾಪಿಸಿ ಅವುಗಳಲ್ಲಿ ಮೂಲ ಪಂಚಾಚಾರ್ಯರನ್ನು ಅವ್ಹಾನಿಸಿ ಅವರ ಸಾಕ್ಷಿಯಲ್ಲಿ ಶಿಷ್ಯಯನ ಮಾಂಸ ಪಿಂಡಕ್ಕೆ ಮತ್ತು ಶಿಲಾಮಯ ಪಂಚ ಸೂತ್ರಲಿಂಗಕ್ಕೆ ಪಂಚಬ್ರಹ್ಮ ಮಂತ್ರಗಳಿಂದ ಅಭೀಷೇಕಮಾಡಿ ಶಿಷ್ಯನ ದೇಹ ಮತ್ತು ಲಿಂಗಗಳನ್ನು ಪರಿಶುದ್ಧಗೊಳಿಸಿ ಆ ಲಿಂಗದಲ್ಲಿ ಶಿವಕಲೆಯನ್ನು ಮತ್ತು ಶಿಷ್ಯನ ಆತ್ಮ ಕಲೆಯನ್ನು ಸಂಯೋಜಿಸಿ ಶಿಷ್ಯನ ಎಡ ಹಸ್ತದಲ್ಲಿ ಆ ಲಿಂಗವನ್ನು ಅನುಗ್ರಹಿಸುತ್ತಾನೆ. ಅದುವೇ ಇಷ್ಟಲಿಂಗವು. ಶಿವಕಲಾಯುಕ್ತವು ತನ್ನ ಆತ್ಮದ ಚಿತ್ಕಲಾಯುಕ್ತವು ಆದ ಆ ಇಷ್ಟಲಿಂಗವನ್ನು ಸದಾದೇಹದ ಮೇಲೆ ಧರಿಸಿ ಕೊಂಡು ದಿನಾಲು ಆ ಲಿಂಗವನ್ನು ಅಷ್ಟ ವಿದಾರ್ಚನೆಗಳಿಂದ ಪೂಜಿಸಿ ತೊಡಗಲು ಶಿಷ್ಯನ ಮನಸಿನಲ್ಲಿ ಅಶುಭ ವಾಸನೆಗಳೆಂಬ ಕಾರ್ಮಿಕ ಮಲವು ನಿವೃತ್ತಿ ಯಾಗುವುದು.

ಹೀಗೆ ಜೀವಾತ್ಮನು ಸದ್ಗುರುವಿನಿಂದ ದೊರೆತ ತ್ರಿವಿಧ ದೀಕ್ಷೆಗಳಿಂದ ತನಗೆ ಪ್ರಾಪ್ತವಾದ ಇಷ್ಟ, ಪ್ರಾಣ ಮತ್ತು ಭಾವಲಿಂಗಗಳ ಅನುಸಂಧಾನ ಮಾಡುತ್ತ ತ್ರಿವಿಧ ಪಾಶಗಳಿಂದ ಮುಕ್ತನಾಗಿ ಲಿಂಗಾಂಗಸಾಮರಸ್ಯರೂಪವಾದ ಸದ್ಗತಿಯನ್ನು ಪಡೆದು ಕೊಳ್ಳುವನು. ಆದ ಕಾರಣ ಪ್ರತಿಯೊಬ್ಬರೂ ಇಂತಹ ದೀಕ್ಷಾ ಸಂಸ್ಕಾರವನ್ನು ಪಡೆದುಕೊಳ್ಳಬೇಕೆಂಬುದಾಗಿ ಶ್ರೀ ಕಾಶಿ ಮಹಾಸನ್ನಿಧಿಯವರು ಅನೇಕ ಉದಾಹರಣೆಗಳಿಂದ ತಿಳಿಹೇಳಿದರು.

ಕಲಬುರ್ಗಿ | 4-9-2010 2

ತನ್ನ ಆತ್ಮದ ಚಿತ್ಕಳೆಯ ಕುರುಹೇ ಇಷ್ಟಲಿಂಗ



ಹುಮನಾಬಾದ: ನಮ್ಮ ಆತ್ಮದ ಚಿತ್ಕಳೆಯ ಕುರುಹೇ ಇಷ್ಟಲಿಂಗವೆಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಶ್ರಾವಣ ಮಾಸದ ನಿಮಿತ್ತವಾಗಿ ಹುಮನಾಬಾದ ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಹಮ್ಮಿಕ್ರೊಂಡಿದ್ದ ದೀಕ್ಷಾ ಸಮಾರಂಭದಲ್ಲಿ ಈ ವಿಚಾರವನ್ನು ತಿಳಿಸಿದರು.

ಸನಾತನವಾದ ವೀರಶೈವ ಧರ್ಮದಲ್ಲಿ ಪ್ರತಿಯೊಬ್ಬ ವೀರಶೈವನು ತನ್ನ ಗುರುಗಳಿಂದ ಅವಶ್ಯವಾಗಿ ದೀಕ್ಷಾ ಸಂಸ್ಕಾರವನ್ನು ಪಡೆದು ಕೊಳ್ಳಬೇಕು. ದೀಕ್ಷೆಯಲ್ಲಿ ಶ್ರೀ ಗುರು ಕರುಣಿಸಿದ ಇಷ್ಟಲಿಂಗವು ಒಂದು ಮೂರ್ತಿಯಾಗಿರದೇ ತನ್ನದೇ ಆದ ಆತ್ಮದ ಚಿತ್ಕಳೆಯ ಕುರುಹು ಆಗಿರುತ್ತದೆ. ಅಂತೆಯೇ ಅದನ್ನು ಯಾವಾಗಲೂ ದೇಹದ ಮೇಲೆ ಧರಿಸಿ ಕೊಂಡಿರಬೇಕು. ಅಂದಾಗಲೇ ನಾನು ಚಿದ್ರೂಪನಾದ ಆತ್ಮ ಸ್ವರೂಪನೆಂಬ ಅರಿವು ಸದಾ ಇರುವುದಲ್ಲದೇ ಬಾಹ್ಯ ಚಿನ್ಹೆಯಿಂದಲೇ ಅವನನ್ನು ವೀರಶೈವನೆಂದು ಗುರುತಿಸಲಾಗುವುದು.

ಇಂದು ಜಗತ್ತಿನಾದ್ಯಂತ ಪರಿಚಯ ಪತ್ರದ ಅವಶ್ಯಕತೆಯು ಎದ್ದು ಕಾಣುತ್ತಿದೆ. ಭಾರತ ಸರ್ಕಾರವು ಭಾರತೀಯ ಪ್ರಜೆ ಎಂದು ಗುರುತು ಹಿಡಿಯುವುದಕ್ಕಾಗಿ ೨೦೧೧ ರ ಜನಗಣತಿಯಲ್ಲಿ ಪ್ರತಿಯೊಬ್ಬರಿಗೂ ಭಾರತೀಯ ನಾಗರಿಕ ಎಂಬುದರ ಬಗ್ಗೆ ನಮ್ಮ ನಮ್ಮ ಭಾವ ಚಿತ್ರವುಳ್ಳ ಮಾಣಿಕರಿಸಿದ ಗುರುತಿನ ಚೀಟಿಯನ್ನು ಕೊಡಮಾಡಲಿದ್ದಾರೆ. ಮುಂದಿನ ದಿನಮಾನಗಳಲ್ಲಿ ಪ್ರತಿಯೊಬ್ಬ ಭಾರತಿಯ ಪ್ರಜೆ ಆ ಗುರುತಿನ ಚೀಟಿಯನ್ನು ತನ್ನ ಎದೆಯ ಮೇಲೆ ಹಾಕಿ ಕೊಳ್ಳುವ ಅವಶ್ಯಕತೆ ಬರುವ ಸಾಧ್ಯತೆ ಇದೆ.

ಸದ್ಯ: ಶಾಲೆ,ಕಾಲೇಜು,ವಿಶ್ವವಿದ್ಯಾಲಯ,ಸರ್ಕಾರಿ ಕಛೇರಿ,ವಿಮಾನ,ರೈಲ್ವೆ ನಿಲ್ದಾಣ ಮುಂತಾದ ಕಡೆಗಳಲ್ಲಿಯ ಅಧಿಕಾರಿಗಳನ್ನೇ ಮೊದಲು ಮಾಡಿಕೊಂಡು ಕೆಲಸ ಮಾಡುವ ಎಲ್ಲ ಕರ್ಮಚಾರಿಗಳು ತಮ್ಮ ಕೊರಳಲ್ಲಿ ತಮ್ಮದೇ ಭಾವಚಿತ್ರವುಳ್ಳ ಪ್ರಾಮಾಣಿಕರಿಸಿದ ಗುರುತಿನ ಚೀಟಿ ಹಾಕಿಕೊಂಡಿರುವುದು ಕಾಣಬಹುದು.

ಈ ಗುರುತಿನ ಚೀಟಿಯು ನಮ್ಮ ಬಾಹ್ಯ ಸ್ವರೂಪವನ್ನು ತಿಳಿಸುತ್ತಿದ್ದರೆ ಇಷ್ಟಲಿಂಗವು ನಾನು ಚಿದ್ರೂಪನಾದ ಆತ್ಮನೆಂದು ತಿಳಿಸಿಕೊಡುವ ಗುರುತಿನ ಚೀಟಿಯಂತಿರುತ್ತದೆ. ಆದ್ದರಿಂದ ಈ ಇಷ್ಟಲಿಂಗವನ್ನು ಪ್ರತಿಯೊಬ್ಬರೂ ದೇಹದ ಮೇಲೆ ಧರಿಸಿ ಕೊಳ್ಳಲೇಬೇಕು. ತಾನು ಎಲ್ಲಿಯೇ ಹೋದರೂ ತನ್ನ ಆತ್ಮಾನುಸಂಧಾನ 'ಮಾಡಲಿಕ್ಕೆ ಅದು ಅವಶ್ಯವಾಗಿ ಬೇಕೇ ಬೇಕಾಗುವುದು.

ಆದ್ದರಿಂದ ಪ್ರತಿಯೊಬ್ಬ ವೀರಶೈವನು ಎನೇ ವಯಸ್ಸಿನಲ್ಲಿ ಗುರುಗಳಿಂದ ಇಷ್ಟಲಿಂಗ ದೀಕ್ಷೆಯನ್ನು ಪಡೆದು ದಿನಾಲು ಅದನ್ನು ಅಷ್ಟವಿಧೋಪಚಾರಗಳಿಂದ ಪೂಜಿಸುವುದರ ಜೊತೆಗೆ ಅದರ ಮುಖಾಂತರ ಪ್ರಾಣಲಿಂಗ ಮತ್ತು ಭಾವಲಿಂಗಗಳ ಅನುಸಂಧಾನವನ್ನು ಮಾಡಿ ಲಿಂಗಾಂಗಸಾಮರಸ್ಯವನ್ನು ಪಡೆದುಕೊಳ್ಳಬೇಕೆಂಬುದಾಗಿ ಶ್ರೀ ಸನ್ನಿಧಿಯವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಈ ದೀಕ್ಷಾ ಸಮಾರಂಭದಲ್ಲಿ ೨೦೦ ಕ್ಕೂ ಹೆಚ್ಚು ಭಕ್ತಾದಿಗಳು ಲಿಂಗದೀಕ್ಷೆಯನ್ನು, ಜಂಗಮ ವಟುಗಳು ಅಯ್ಯಾಚಾರವನ್ನು ಪಡೆದುಕೊಂಡರು.

ಈ ದೀಕ್ಷಾಸಂಸ್ಕಾರವನ್ನು ಶ್ರೀ ಷ.ಬ್ರ. ಗಂಗಾಧರ ಶಿವಾಚಾರ್ಯರು ಬೀದರ, ಶ್ರೀ ಷ.ಬ್ರ. ಸಿದ್ಧಲಿಂಗ ಶಿವಾಚಾರ್ಯರು ಸದಲಾಪುರ, ಶ್ರೀ ಷ.ಬ್ರ. ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು ಹಳ್ಳಿಖೇಡ (ಬಿ) ಮತ್ತು ಶ್ರೀ ಷ.ಬ್ರ. ಘನಲಿಂಗ ರುದ್ರಮುನಿ ಶಿವಾಚಾರ್ಯರು ರಾಜೇಶ್ವರ ಇವರು ನೀಡಿದರು. ಶ್ರಾವಣ ಅನುಷ್ಠಾನ ಸೇವಾಸಮಿತಿ ಹಾಗೂ ಹುಮನಾಬಾದ ತಾಲೂಕ ಜಂಗಮ ಅಭಿವೃದ್ಧಿ ಸಂಸ್ಥೆಯವರು ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು.



ಶ್ರಾವಣ ಸಂದೇಶ

ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು
ಸ್ಥಳ: ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ್

ಶಿವನು ಸರ್ವಾರಾಧ್ಯ

ದೇವ, ದಾನವ, ಮಾನವ ಮತ್ತು ಪಶು ಪಕ್ಷ್ಯಾದಿಗಳನ್ನು ಸಮಾನವಾಗಿ ನೋಡುವವನೇ ಶಿವ. ಆ ಶಿವನನ್ನು ಲಿಂಗ ರೂಪದಲ್ಲಿ ಪೂಜಿಸಲಾಗುತ್ತಿದ್ದು, ಈ ಲಿಂಗರೂಪನಾದ ಶಿವನು ಸರ್ವಾರಾಧ್ಯನಾಗಿದ್ದಾನೆ.

ಚರಾ ಚರಾತ್ಮಕನಾದ ಈ ಜಗತ್ತು ಎಲ್ಲಿ ಲಯವಾಗುವುದೋ ಪುನಃ ಎಲ್ಲಿಂದ ಪ್ರಾದುರ್ಭವಿಸುವುದೊ ಆ ಪರಶಿವ ಬ್ರಹ್ಮಕ್ಕೆ ಶಿವಾಗಮಗಳಲ್ಲಿ ಲಿಂಗವೆಂಬುದಾಗಿ ಕರೆಯಲಾಗಿದೆ.

ದೇವಾಲಯ ನಿರ್ಮಿಸಿ ಅದರಲ್ಲಿ ಸ್ಥಾಪಿಸಲ್ಪಟ್ಟ ಲಿಂಗಕ್ಕೆ ಸ್ಥಾವರ ಲಿಂಗವೆಂದು ಕರೆಯುವರು. ಆದರೆ ತನ್ನ ದೇಹವನ್ನೇ ದೇವಾಲಯವಾಗಿ ಮಾಡಿಕೊಂಡು ಆ ದೇಹದ ಮೇಲೆ ಸದಾ ಧರಿಸಿಕೊಂಡಿರುವ ಮತ್ತು ಪ್ರತಿನಿತ್ಯ ಆತನಿಂದಲೇ ಪೂಜಿಸಲ್ಪ ಡುವ ಲಿಂಗಕ್ಕೆ ಇಷ್ಟಲಿಂಗ ವೆಂದು ಕರೆಯುವರು. ಸನಾತನವಾದ ವೀರಶೈವ ಧರ್ಮದಲ್ಲಿ ಇಷ್ಟಲಿಂಗ ಧಾರಣೆ ಪ್ರತಿಪಾದಿಸಲ್ಪಟ್ಟಿದೆ. ಭೂಮಿಯ ಮೇಲೆ ಲಿಂಗವನ್ನು ಪ್ರತಿಷ್ಠಾಪಿಸುವ ಪರಂಪರೆಯು ಎಷ್ಟು ಪ್ರಾಚೀನವೋ ದೇಹದ ಮೇಲೆ ಧರಿಸುವ ಇಷ್ಟಲಿಂಗ ಪರಂಪರೆಯೂ ಸಹ ಅಷ್ಟೇ ಪ್ರಾಚೀನವಾದುದು.

ವೇದಗಳಲ್ಲಿ ಶಿವಾಗಮನಗಳಲ್ಲಿ ಮತ್ತು ಸ್ಕಂದಾದಿ ಪುರಾಣಗಳಲ್ಲಿ ವೀರಶೈವ ಧರ್ಮದ ಇಷ್ಟಲಿಂಗ ಧಾರಣೆಯು ಪ್ರತಿಪಾದಿತವಾಗಿದೆ. ವೇದದಲ್ಲಿ ಇಷ್ಟಲಿಂಗಕ್ಕೆ ಪವಿತ್ರ ಎಂಬ ಶಬ್ದದ ಬಳಕೆಯಾಗಿದೆ.ದೇಹದ ಮೇಲೆ ಧರಿಸುವುದರಿಂದ ದೇಹವು ಸದಾ ಪವಿತ್ರವಾಗಿರುತ್ತದೆ. ಎಲ್ಲಿ ಹೋದಲ್ಲಿ ಪೂಜೆ ಸಲ್ಲಿಸಬಹುದಾಗಿದೆ. ಶಿವನ ಪೂಜೆಗೆ ದೇಶ, ಕಾಲ ಬೇಕಿಲ್ಲ, ಎಲ್ಲ ಕಾಲವೂ ಪರ್ವ ಕಾಲ.

ಇಷ್ಟಲಿಂಗ ಸದಾ ದೇಹದ ಮೇಲೆ ಧರಿಸಿಕೊಂಡು ಪೂಜಿಸಬೇಕೆಂದು ಜಗದ್ಗುರು ರೇಣುಕ ಭಗವತ್ಪಾದರು ಸಿದ್ಧಾಂತ ಶಿಖಾಮಣಿಯಲ್ಲಿ ತಿಳಿಸಿದ್ದಾರೆ.

ಇಷ್ಟಲಿಂಗವನ್ನು ಮಸ್ತಕ, ಕಂಠ, ವೃಕ್ಷ ಸ್ಥಲ, ಉದರ, ಬಾಹು ಮತ್ತು ಕಕ್ಷಿಗಳಲ್ಲಿ ಧರಿಸಬೇಕು. ನಾಭಿಗಿಂತಲೂ ಕೆಳಗೆ ಮತ್ತು ಬೆನ್ನಿನ ಮೇಲೆ ಈ ಲಿಂಗವನ್ನು ಧರಿಸಕೂಡದೆಂದು.

ಸಿದ್ಧಾಂತ ಶಿಖಾಮಣಿಯಲ್ಲಿ ಲಿಂಗವು ಸ್ಥೂಲ, ಸೂಕ್ಷ್ಮ ಮತ್ತು ಪರಾತ್ಪರ ಎಂದು ಮೂರು ವಿಧವಾಗಿ ಹೇಳಲ್ಪಟ್ಟಿದೆ. ದೇಹದ ಮೇಲೆ ಧರಿಸುವ ಇಷ್ಟ ಲಿಂಗವೇ ಸ್ಥೂಲ ಪ್ರಾಣಲಿಂಗವೇ ಸೂಕ್ಷ್ಮವು. ಅದರಂತೆಯೇ ಭಾವಲಿಂಗವೇ ಪರಾತ್ಪರ ತತ್ವ.. ಅಂತರ್ಲಿಂಗವನ್ನು ಧರಿಸುವ ಸಾಮರ್ಥ್ಯವು ಇರಲಿ ಅಥವಾ ಇಲ್ಲದಿರಲಿ ಬಾಹ್ಯದಲ್ಲಿ ಇಷ್ಟಲಿಂಗವನ್ನು ಸರ್ವರೂ ಸದಾ ಧರಿಸಿಕೊಂಡಿರಬೇಕು.

ಸರ್ವಾರಾಧ್ಯನಾದ ಶಿವನನ್ನು ವೀರಶೈವ ಸಾಧಕನು ಇಷ್ಟಲಿಂಗ ರೂಪದಲ್ಲಿ ದೇಹದ ಮೇಲೆ ಧರಿಸಿಕೊಂಡು ಶಿವಯೋಗ ಸಾಧನೆಯಿಂದ ಪ್ರಾಣಲಿಂಗ, ಭಾವಲಿಂಗಗಳ ಅನುಸಂಧಾನ ಮಾಡಬೇಕು.

ಸಂಯುಕ್ತ ಕರ್ನಾಟಕ

ಕಲಬುರ್ಗಿ | 7-9-2010 3

ರುದ್ರಾಕ್ಷಿಯಿಂದ ಸಮದೃಷ್ಟಿ



ಹುಮನಾಬಾದ: ಮನಸ್ಸಿನ ವಿಷಮತೆ ಕಳೆದುಕೊಂಡು ಸಮದೃಷ್ಟಿ ಪಡೆದುಕೊಳ್ಳುವುದೇ ರುದ್ರಾಕ್ಷಿ ಧಾರಣೆಯ ಪ್ರಯೋಜನ ಎಂದು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು. ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ವೇದಿಕೆಯಿಂದ ಈ ವಿಚಾರವನ್ನು ತಿಳಿಸಿದರು.

ರುದ್ರಾಕ್ಷವೆಂದರೆ ರುದ್ರದೃಷ್ಟಿ ಎಂದರ್ಥ. ಇದು ಅಷ್ಟಾವರಣಗಳಲ್ಲಿ ಒಂದಾದ ಆವರಣವಾಗಿರುತ್ತದೆ. ತ್ರಿಪುರ ಸಂಹಾರ ಕಾಲದಲ್ಲಿ ಶಿವನ ನಿರ್ನಿಮೇಷ ದೃಷ್ಟಿಯಿಂದ ಭೂಮಿಗೆ ಬಿದ್ದ ಜಲಬಿಂದುಗಳಿಂದ ರುದ್ರಾಕ್ಷಿಗಳು ಉತ್ಪನ್ನವಾದವುಗಳೆಂದು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿಸಲಾಗಿದೆ. ಹೀಗೆ ರುದ್ರನ ನೇತ್ರದಿಂದ ಬಿದ್ದ ಯೋಗಾಶ್ರುಗಳಿಂದ ಉತ್ಪನ್ನವಾದ ಕಾರಣ ಇವುಗಳಿಗೆ ರುದ್ರಾಕ್ಷಿ ಎಂದು ಕರೆಯುತ್ತಾರೆ. ಇವುಗಳನ್ನು ದೇಹದ ಮೇಲೆ ಧರಿಸಿಕೊಳ್ಳುವುದರ ಮೂಲಕ ತನ್ನ ಮನಸ್ಸಿನ ವಿಷಮತೆಯನ್ನು ಕಳೆದು ಕೊಂಡು ಸಾಧಕನು ಸಮದೃಷ್ಟಿ ಪಡೆದುಕೊಳ್ಳುತ್ತಾನೆ.

ಶಿವನಿಗೆ ಸೂರ್ಯ, ಚಂದ್ರ ಮತ್ತು ಅಗ್ನಿಗಳೇ ನೇತ್ರಗಳೆಂದು ಹೇಳಲಾಗಿದೆ. ಸೂರ್ಯ ಚಂದ್ರಾದಿಗಳು ಯಾವುದೇ ಭೇದ ಭಾವ ಮಾಡದೇ ಸರ್ವರಿಗೂ ಸಮಾನವಾಗಿ ಬೆಳಕನ್ನು ಕೊಡುತ್ತವೆ. ಅದರಂತೆ ಅಗ್ನಿಯು ಸಹ ಎಲ್ಲರ ಮನೆಯಲ್ಲಿ ಒಂದೇ ರೀತಿಯಾಗಿ ಉರಿಯುತ್ತದೆ.

ಹೀಗೆ ಶಿವನ ನೇತ್ರಗಳಾದ ಸೂರ್ಯ, ಚಂದ್ರ, ಅಗ್ನಿಗಳು ಸರ್ವರಿಗೂ ಸಮಾನವಾಗಿ ಬಳಕೆಗೆ ಬರುತ್ತವೆ. ಈ ನೇತ್ರಗಳ ಜಲಬಿಂದು ಗಳಿಂದಲೇ ಉತ್ಪನ್ನಗಳಾದ ರುದ್ರಾಕ್ಷಿಯನ್ನು ಬಹಿರಂಗದಲ್ಲಿ ಧರಿಸುವುದರ ಜೊತೆಗೆ ಅಂತರಂಗದಲ್ಲಿ ಆ ಸಮತೆಯನ್ನು ಅಳವಡಿಸಿಕೊಳ್ಳಬೇಕು. ಅಂತರಂಗದಲ್ಲಿ ಅಳವಟ್ಟ ಆ ಸಮಾನತೆಯು ಅಂತರಂಗ ರುದ್ರಾಕ್ಷಿಧಾರಣೆಯು.

ಶ್ರೀ ಸಿದ್ಧಾಂತ ಶಿಖಾಮಣಿಯ ಪ್ರಕಾರ ರುದ್ರಾಕ್ಷಿಗಳು ೩೮ ಪ್ರಕಾರಗಳಾಗಿರುತ್ತವೆ. ಇವುಗಳಲ್ಲಿ ಸೂರ್ಯ ನೇತ್ರದಿಂದ ಹನ್ನೆರಡು ಪ್ರಕಾರ, ಚಂದ್ರನೇತ್ರ ದಿಂದ ಹದಿನಾರು ಪ್ರಕಾರ ಮತ್ತು ಅಗ್ನಿ ನೇತ್ರದಿಂದ ಹತ್ತು ಪ್ರಕಾರ ಹೀಗೆ ಒಟ್ಟು ೩೮ ಪ್ರಕಾರವಾಗಿರುತ್ತವೆ. ಈ ರುದ್ರಾಕ್ಷಿಗಳು ಒಂದು ಮುಖದಿಂದ ಹದಿನಾರು ಮುಖದ ವರೆಗೆ ದೊರೆಯುವವು. ರುದ್ರಾಕ್ಷ ಜಾಬಾಲೋಪನಿಷತ್‌ನಲ್ಲಿ ಮುಖಗಳ ದೃಷ್ಟಿಯಿಂದ ಅವುಗಳ ಬೇರೆ ಬೇರೆ ಮಹಿಮೆಯು ಪ್ರತಿಪಾದಿತವಾಗಿದೆ.

ವೀರಶೈವ ಸಾಧಕನು ತನ್ನ ಇಷ್ಟಲಿಂಗ ಪೂಜೆಯನ್ನು ಮಾಡಿಕೊಳ್ಳುವಾಗ ತನ್ನ ಶಿಖಾಸ್ಥಾನದಲ್ಲಿ ಒಂದು ಮುಖದ ಒಂದು ರುದ್ರಾಕ್ಷಿಯನ್ನು, ಎರಡು, ಮೂರು ಮತ್ತು ಹನ್ನೆರಡು ಮುಖಗಳುಳ್ಳ ಮೂರು ರುದ್ರಾಕ್ಷಿಗಳನ್ನು ತಲೆಯ ಮೇಲೆ, ಹನ್ನೊಂದು ಮುಖದ ೩೬ ರುದ್ರಾಕ್ಷಿಗಳನ್ನು ಮಸ್ತಕದ ಸುತ್ತಲು ಹತ್ತು,ಏಳು ಮತ್ತು ಐದು ಮುಖಗಳ ಎರಡೆರಡು ರುದ್ರಾಕ್ಷಿಗಳನ್ನು ಎರಡು ಕಿವಿಗಳಲ್ಲಿ, ಆರು ಮುಖದ ಹದಿನಾರು ರುದ್ರಾಕ್ಷಿ ಮತ್ತು ಎಂಟು ಮುಖದ ಹದಿನಾರು ರುದ್ರಾಕ್ಷಿ ಒಟ್ಟು ೩೨ ರುದ್ರಾಕ್ಷಿಗಳನ್ನು ಕಂಠದಲ್ಲಿ, ನಾಲ್ಕು ಮುಖದ ೫೦ ರುದ್ರಾಕ್ಷಿಗಳನ್ನು ಎದೆಯ ಮೇಲೆ, ಹದಿಮೂರು ಮುಖದ ೧೬ ರುದ್ರಾಕ್ಷಿಗಳನ್ನು ಎರಡು ರಟ್ಟೆಗಳಲ್ಲಿ ಒಂಬತ್ತು ಮುಖದ ಹನ್ನೆರಡು, ೧೨ ರುದ್ರಾಕ್ಷಿಗಳನ್ನು ಮುಂಗೈಯಲ್ಲಿ ಅದರಂತೆ ಹದಿನಾಲ್ಕು ಮುಖದ ೧೦೮ ರುದ್ರಾಕ್ಷಿಗಳ ಒಂದು ಮಾಲೆಯನ್ನು ತನ್ನ ದೇಹದ ಮೇಲೆ ಯಜ್ಞೋಪವೀತದಂತೆ ಧರಿಸಬೇಕೆಂದು ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಬೋಧಿಸಿದ್ದಾರೆ.

ವೀರಶೈವ ಸಾಧಕನು ತನಗೆ ಸಾಧ್ಯವಾದರೆ ಈ ಪದ್ಧತಿಯ ರುದ್ರಾಕ್ಷಿಯನ್ನು ಶಿವಪೂಜಾ ಕಾಲದಲ್ಲಿ ಧರಿಸಿಕೊಳ್ಳಬೇಕು. ಒಂದು ವೇಳೆ ವಿವಿಧ ಮುಖದ ರುದ್ರಾಕ್ಷಿಗಳು ದೊರೆಯದೇ ಇದ್ದಾಗ ಐದು ಮುಖದ ರುದ್ರಾಕ್ಷಿಗಳನ್ನು ಎಲ್ಲೆಡೆ ಧರಿಸಿಕೊಳ್ಳಬೇಕು. ಒಂದು ಕೋಟಿ ಗೋದಾನವನ್ನು ಮಾಡಿದರೆ ದೊರೆಯುವ ಪುಣ್ಯವನ್ನು ಕೇವಲ ರುದ್ರಾಕ್ಷಿ ಧಾರಣೆಯಿಂದ ದೊರೆಯಬಹುದೆಂದು ಪೂಜ್ಯಪಾದರು ಉಪದೇಶಿಸಿದ್ದಾರೆ.

ಮರಣಕಾಲದಲ್ಲಿ ರುದ್ರಾಕ್ಷಿ ತೊಳೆದ ನೀರನ್ನು ಕುಡಿಸಿದರೆ ಅವನಿಗೆ ರುದ್ರಲೋಕ ಪ್ರಾಪ್ತವಾಗುವುದು. ಈ ರುದ್ರಾಕ್ಷಿಗಳನ್ನು ಧರಿಸಿದ ವ್ಯಕ್ತಿ ಮಧ್ಯಮಾಂಸಗಳನ್ನು ಸೇವಿಸಕೂಡದು. ಹೀಗೆ ಆಹಾರ ವ್ಯವಹಾರಗಳನ್ನು ಪವಿತ್ರವಾಗಿಟ್ಟು ಕೊಂಡು ಶಿವನಲ್ಲಿ ಅನನ್ಯವಾದ ಭಕ್ತಿಯನ್ನಿರಿಸಿ ಈ ರುದ್ರಾಕ್ಷಿಗಳನ್ನು ದೇಹದ ಮೇಲೆ ಧರಿಕೊಂಡರೆ ಸಾಧಕನು ಸರ್ವ ಪಾಪವಿಮುಕ್ತನಾಗಿ ಮನಸ್ಸಿನಲ್ಲಿ ಅಪಾರವಾದ ಶಾಂತಿ ಸಮಾಧಾನಗಳನ್ನು ಹೊಂದಿ ಶಿವನಂತೆ ಸರ್ವರನ್ನೂ ಸಮಾನವಾಗಿ ನೋಡುವ ಒಂದು ಸಮದೃಷ್ಟಿಯನ್ನು ಪಡೆದುಕೊಳ್ಳುತ್ತಾನೆ.

ಇದಲ್ಲದೇ ರುದ್ರಾಕ್ಷಿಗಳನ್ನು ದೇಹದ ಮೇಲೆ ಸದಾ ಧರಿಸುವುದರಿಂದ ರಕ್ತ ಒತ್ತಡದಂತಹ ಅನೇಕ ರೋಗಗಳ ಮೇಲೆ ನಿಯಂತ್ರಣವನ್ನು ಮಾಡಿಕೊಳ್ಳಬಹುದು. ಹೀಗೆ ಆರೋಗ್ಯದಾಯಕವೂ ಸಮ ದೃಷ್ಟಿ ಪ್ರದಾಯಕವಾದ ಈ ರುದ್ರಾಕ್ಷಿಯನ್ನು ಕೇವಲ ವೀರಶೈವರಷ್ಟೇ ಅಲ್ಲ ಸರ್ವರೂ ಧರಿಸಿಕೊಂಡು ಅದರ ಉತ್ತಮವಾದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಶ್ರೀಸನ್ನಿಧಿಯವರು ತಮ್ಮ ಆಶೀರ್ವಚನದಲ್ಲಿ ತಿಳಿಯ ಪಡಿಸಿದರು.

ಬೀದರ ಜಿಲ್ಲೆ

ಇಷ್ಟಲಿಂಗಧಾರಿಗೆ ಸೂತಕವಿಲ್ಲ



ಹುಮನಾಬಾದ: ಧರ್ಮಶಾಸ್ತ್ರದಲ್ಲಿ ಹೇಳಿದ ಜನನ ಸೂತಕ, ಮರಣ ಸೂತಕ, ರಜಸ್ಸೂತಕ, ಜಾತಿಸೂತಕ ಮತ್ತು ಉಚ್ಛಿಷ್ಟ ಸೂತಕಗಳೆಂಬ ಪಂಚಸೂತಕಗಳು ಇಷ್ಟಲಿಂಗಧಾರಿಗೆ ಇರುವದಿಲ್ಲವೆಂದು ಶ್ರೀ ಕಾಶಿ ಜಗದ್ಗುರುಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿಯ ಲಿಂಗಧಾರಣಸ್ಥಲವನ್ನು ಕುರುತು ಆಶೀರ್ವಚನವನ್ನು ದಯಪಾಲಿಸುತ್ತ ಈ ವಿಚಾರವನ್ನು ತಿಳಿಸಿದರು.

ಸೂತಕ ವೆಂದರೆ ಅಶೌಚ ಅಥವಾ ಅಪವಿತ್ರತೇ ಎಂದರ್ಥ, ಧರ್ಮಶಾಸ್ತ್ರದ ಅಶೌಚ ನಿರ್ಣಯದಲ್ಲಿ ಸೂತಕಗಳ ಬಗ್ಗೆ ವಿಸ್ತೃತವಾದ ವಿಚಾರವಿದೆ. ಮನೆಯಲ್ಲಿ ಹೆರಿಗೆಯಾದಾಗ ಜನನ ಸೂತಕ, ನಿಧನರಾದರೆ ಮರಣ ಸೂತಕ, ಹೆಣ್ಣು ಮಕ್ಕಳಿಗೆ ಋತುಶ್ರಾವವಾದಾಗ ರಜಸ್ಸೂತಕ, ಅನ್ಯರು ಉಂಡಳಿದ ಅನ್ನಾದಿಗಳನ್ನು ಸೇವಿಸಿದರೆ ಉಚ್ಛಿಷ್ಟ ಸೂತಕ ಇದೇ ಪ್ರಕಾರ ಅನ್ಯಜಾತಿಯ ಜನರೊಂದಿಗೆ ಸ್ಪರ್ಶವಾದರೆ ಜಾತಿಸೂತಕವು ಪ್ರಾಪ್ತವಾಗುವುದೆಂಬುವುದಾಗಿ ಧರ್ಮಶಾಸ್ತ್ರದಲ್ಲಿ ಹೇಳಿದೆ.


ಜನನಕ್ಕೆ ಹತ್ತು ದಿನಗಳ ಸೂತಕ, ಮರಣಕ್ಕೆ ಹನ್ನೆರಡು ದಿನಗಳ ಸೂತಕ, ಋತುಶ್ರಾವಕ್ಕೆ ಮೂರು ಇಲ್ಲವೇ ನಾಲ್ಕು ದಿನಗಳ ಸೂತಕವು ಹೇಳಲಾಗಿದೆ. ಆ ದಿನಗಳಲ್ಲಿ ಸೂತಕ ಪ್ರಾಪ್ತರಾದವರು ದೇವ ಪೂಜಾದಿಗಳನ್ನು ಮಾಡಬಾರದೆಂಬುದು ಒಂದು ಸಾಮಾನ್ಯ ನಿಯಮವಾಗಿದೆ. ಆದರೆ ಸನಾತನವಾದ ವೀರಶೈವ ಧರ್ಮದಲ್ಲಿ ಇಷ್ಟಲಿಂಗಧಾರಿಗಳಾದವರಿಗೆ ತಮ್ಮ ಇಷ್ಟಲಿಂಗ ಪೂಜೆಗೆ ಯಾವ ಸೂತಕಗಳು ಅಡ್ಡಿ ಆಗುವುದಿಲ್ಲ ವೆಂಬುದಾಗಿ ಹೇಳಲಾಗಿದೆ. ಅಂತೆಯೇ ಶ್ರೀ ಸಿದ್ಧಾಂತ ಶಿಖಾಮಣಿಯ ಭಕ್ತಮಾರ್ಗ ಕ್ರಿಯಾಸ್ಥಲದಲ್ಲಿ "ನ ಸತ್ಯ ಸೂತಕಂ ಕಿಂಚಿತ್ ಪ್ರಾಣಲಿಂಗಾಂಗ ಸಂಗಿನ:" ಎಂಬುದಾಗಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಉಪದೇಶಿಸಿದ್ದಾರೆ.

ವೀರಶೈವರು ಇಷ್ಟಲಿಂಗವನ್ನು ಪ್ರಾಣದೋಪಾದಿಯಲ್ಲಿ ಪ್ರೀತಿಸುತ್ತ ಅದನ್ನು ದೇಹದಿಂದ ಎಂದೂ ಅಗಲಿಸುವುದಿಲ್ಲ. ಅಂತೆಯೇ ವೀರಶೈವರಿಗೆ ಪ್ರಾಣಲಿಂಗಿಗಳು ಎಂದು ಕರೆಯುಲಾಗಿದೆ. ಈ ತೆರನಾದ ಲಿಂಗಧಾರಣೆಯು ಸ್ತ್ರೀ ಪುರುಷರಿಗೆ ಸಮಾನವಾಗಿರುತ್ತದೆ. ಇಷ್ಟಲಿಂಗ ಪೂಜೆಯೇ ವೀರಶೈವರ ನಿತ್ಯ ಕರ್ಮವು. "ನಿತ್ಯಂ ಯಾವದಾಯು:" ಎಂಬ ಉಕ್ತಿಯಂತೆ ತನ್ನ ಆಯುಷ್ಯದ ಕೊನೆಯ ಉಸಿರಿನವರೆಗೆ ಪ್ರತಿದಿನ ತಪ್ಪದೇ ಮಾಡುವಂತಹ ಪೂಜೆಗೆ ನಿತ್ಯಕರ್ಮವೆನ್ನುವರು. ಆದ್ದರಿಂದ ಇಷ್ಟಲಿಂಗಧಾರಿಯಾದ ಹೆಣ್ಣುಮಗಳಿಗೆ ರಜಸ್ಸೂತಕ ಇಲ್ಲವೇ ಜನನ ಸೂತಕಗಳು ಬಂದಾಗಲೂ ಸಹ ಅವಳು ಲಿಂಗಧಾರಿಯಾಗಿರುವುದರಿಂದ ಅವಳು ರವಿ,ಅಗ್ನಿ ಮತ್ತು ವಾಯುಗಳಂತೆ ಸದಾ ಪರಿಶುದ್ಧಳಾಗಿರುತ್ತಾಳೆ.

ಆದ್ದರಿಂದ ಆ ಸೂತಕಗಳು ಬಂದೊದಗಿದಾಗ ಸ್ನಾನವನ್ನು ಮಾಡಿ ಶುಚೀರ್ಭೂತಳಾಗಿ ನಿತ್ಯಕರ್ಮವಾದ ಇಷ್ಟಲಿಂಗ ಪೂಜೆಯನ್ನು ಮಾಡಿದರೆ ಯಾವದೋಷವು ಇರುವುದಿಲ್ಲ, ಅದರಂತೆ ಮನೆಯಲ್ಲಿ ಯಾರಾದರೂ ಮೃತಪಟ್ಟಾಗಲೂ ಸಹ ಮನೆಯವರ್‍ಯಾರು ಇಷ್ಟಲಿಂಗ ಪೂಜೆಯನ್ನು ತಪ್ಪಿಸಕೂಡದು. ಅಂತ್ಯವಿಧಿಯನ್ನು ಪೂರೈಸಿ ಮನೆಯನ್ನು ಶುದ್ಧಗೊಳಿಸಿ ಮನೆಯ ಗುರುಗಳನ್ನು ಬರಮಾಡಿಕೊಂಡು ಅವರ ಧೂಳಪಾದೋದಕದಿಂದ ಮನೆಯನ್ನು ಶುದ್ಧಗೊಳಿಸಿ ಆ ಗುರುಗಳೊಂದಿಗೆ ಇಷ್ಟಲಿಂಗ ಪೂಜೆಯನ್ನು ಮಾಡಿಕೊಂಡು ಅವರ ಪಾದೋದಕ ಪ್ರಸಾದವನ್ನು ಸೇವಿಸಬೇಕೆಂಬುದು ವೀರಶೈವ ಧರ್ಮದ ವಿಶೇಷ ನಿಯಮವಾಗಿದೆ. ಆದ್ದರಿಂದ ಮರಣ ಸೂತಕ ಬಂದಾಗಲೂ ಸಹ ಇಷ್ಟಲಿಂಗಧಾರಿಗಳು ಇಷ್ಟಲಿಂಗ ಪೂಜೆಯನ್ನು ತಪ್ಪಿಸುವಂತಿಲ್ಲ. ಅಂತೆಯೇ ಇಷ್ಟಲಿಂಗ ಪೂಜೆಗೆ ಮರಣ ಸೂತಕವು ಬಾಧಕವಾಗುವುದಿಲ್ಲ.

ಸನಾತನವಾದ ವೀರಶೈವ ಧರ್ಮದಲ್ಲಿ ಇಷ್ಟಲಿಂಗ ಧಾರಣೆಯು ಜಾತಿ ಗೋತ್ರಗಳನ್ನು ಲೆಕ್ಕಿಸದೇ ಶಿವಭಕ್ತಿಯನ್ನು ನೋಡಿ ಲಿಂಗದೀಕ್ಷೆಯನ್ನು ಮಾಡಬೇಕೆಂಬ ಶಿವನ ಹಾಗೂ ಆಚಾರ್ಯರ ಆದೇಶವಾಗಿರುವುದರಿಂದ ಶಕ್ತಿಪಾತ ಲಕ್ಷಣವುಳ್ಳ ಯಾವುದೇ ಜಾತಿಯ ಭಕ್ತನು ಇಷ್ಟಲಿಂಗ ದೀಕ್ಷೆಯನ್ನು ಪಡೆದುಕೊಳ್ಳಬಹುದು. ಹೀಗೆ ಲಿಂಗದೀಕ್ಷೆಯನ್ನು ಪಡೆದು ಕೊಂಡ ಮೇಲೆ ಅಲ್ಲಿ ಜಾತಿಸೂತಕವೂ ಸಹ ಇಲ್ಲದಾಗುವುದು. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು "ಇಂಧನೇಷ್ವಗ್ನಿಧಗ್ಧೇಷು ಕ್ವ ಜಾತಿ ಪರಿಕಲ್ಪನಾ" ಎಂಬುದಾಗಿ ಹೇಳುವುದರ ಮೂಲಕ ಜಾತಿಸೂತಕವನ್ನು ಅಲ್ಲಗಳೆದಿದ್ದಾರೆ ವಿವಿಧ ಜಾತಿಯ ಕಟ್ಟಿಗೆಗಳನ್ನು ಅಗ್ನಿಯಲ್ಲಿ ಹಾಕಿ ಸುಟ್ಟ ಬಳಿಕ ಹೇಗೆ ಆ ಅಗ್ನಿಯಲ್ಲಿ ಜಾತಿ ಇರುವುದಿಲ್ಲವೋ ಅದರಂತೆ ದೀಕ್ಷೆಯಂಬ ಸಂಸ್ಕಾರದಲ್ಲಿ ಮೊದಲಿನ ಜಾತಿಗಳೆಲ್ಲವೂ ದಗ್ಧವಾಗಿ ಅವನು ಶಿವಭಕ್ತನೆನಿಕೊಳ್ಳುವನು.

ಹೀಗೆ ದೀಕ್ಷೆಯಾದವನಲ್ಲಿ ಜಾತಿಯನ್ನು ಪರಿಗಣಿಸದಿರುವುದೇ ಜಾತಿಸೂತಕದ ನಿಷೇಧವು. ಈ ತೆರನಾಗಿ ಇಷ್ಟಲಿಂಗ ಧಾರಿಗಳಲ್ಲಿ ಜಾತಿಸೂತಕ ಇರುವುದಿಲ್ಲ, ಅದರಂತೆ ವೀರಶೈವ ಧರ್ಮದ ಪೂಜಾ ಫಲಗಳಾದ ಪಾದೋದಕ, ಪ್ರಸಾದಗಳನ್ನು ಸೇವಿಸುವಾಗ ಉಚ್ಛಿಷ್ಟಸೂತಕವನ್ನು ನಿಷೇಧಿಸಲಾಗಿದೆ. ಹೀಗೆ ಸನಾತನವಾದ ವೀರಶೈವ ಧರ್ಮದಲ್ಲಿ ಇಷ್ಟಲಿಂಗಧಾರಿಯಾದವನಿಗೆ ಪಂಚಸೂತಕಗಳು ಇಲ್ಲದಿರುವುದರಿಂದ ಪ್ರತಿಯೊಬ್ಬರೂ ಇಷ್ಟಲಿಂಗವನ್ನು ಸದಾ



ಸಂಯುಕ್ತ ಕರ್ನಾಟಕ
ಕಲಬುರ್ಗಿ | 15-8-2010 3

ಕಾಶಿ ಜಗದ್ಗುರುಗಳ ಸಂದೇಶ

ಶಿವನೇ ಸರ್ವಾಂತರ್ಯಾಮಿ

ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ, ಸೂರ್ಯ, ಚಂದ್ರ ಮತ್ತು ಸರ್ವರ ಆತ್ಮ ಇವುಗಳು ಪರಮಾತ್ಮನ ಅಷ್ಟತನುಗಳು. ಆದ್ದರಿಂದ ಸರ್ವವೂ ಶಿವನೇ ಆಗಿದ್ದಾನೆ.

ಶ್ರೀ ಸಿದ್ಧಾಂತ ಶಿಖಾಮಣಿಯ ಮಂಗಲ ಶ್ಲೋಕದಲ್ಲಿ ಶೀವನು ಮೂರು ಲೋಕಗಳೆಂಬ ಚಿತ್ರಕ್ಕೆ ಆಧಾರ ಭಿತ್ತಿಯಂತ್ತಿದ್ದು ಸಚ್ಚಿದಾನಂದ ಸ್ವರೂಪನಾಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ಶಿವನು ವಿಶ್ವೋತ್ತಮನಾಗಿರುವಂತೆ ವಿಶ್ವಸ್ವರೂಪನು ಆಗಿದ್ದಾನೆ.

ಬಹಳಷ್ಟು ಜನರು ದೇವರು ಕಾಣುವದಿಲ್ಲ ಎಂಬುದಾಗಿ ಮಾತಾನಾಡುತ್ತಾರೆ. ಆದರೆ ಪೃಥಿವ್ಯಾದಿ ಎಂಬ ರೂಪದಲ್ಲಿ ಪರಮಾತ್ಮನು ಸರ್ವರಿಗೂ ಪ್ರತ್ಯಕ್ಷವಾಗಿ ತೋರುತ್ತಿರುತ್ತಾನೆ. ಆದರೆ ಅವುಗಳನ್ನು ನೋಡುವ ಭಾವನೆ ಮಾತ್ರ ಅವಶ್ಯಕವಾಗಿ ಬೇಕಾಗುತ್ತದೆ. ಮಹಾತ್ಮ ಬಸವಣ್ಣನವರು ಸಹ "ಎತ್ತನೋಡಿದಡತ್ತ ನೀನೇ ದೇವಾ ಸಕಲ ವಿಸ್ತಾರದ ರೂಹು ನೀನೇ ದೇವಾ" ಎಂಬ ವಚನದಲ್ಲಿ ಪೃಥಿವ್ಯಾದಿಗಳು ಪರಮಾತ್ಮನ ವ್ಯಕ್ತ ರೂಪವೆಂದು ಸಮರ್ಥಿಸಿದ್ದಾರೆ. ಆದ್ದರಿಂದ ಶಿವನ ಈ ಎಂಟು ವ್ಯಕ್ತ ಮೂರ್ತಿಗಳ ಬಗ್ಗೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಗೌರವದ ಭಾವನೆಯಿರಬೇಕು.

ಇಂದು ನಾವು ಕಾರ್ಖಾನೆಗಳ ತ್ಯಾಜ್ಯ ರಾಸಾಯನಿಕ ದ್ರವ್ಯಗಳನ್ನು ದಿಬಳಕೆಯ ಪ್ಲಾಸ್ಟಿಕ ವಸ್ತುಗಳನ್ನು ಭೂಮಿಗೆ ಹಾಕುವುದರ ಮಾಲಕ ಭೂಮಾತೆಯ ಜೊತೆಗೆ ಅತ್ಯಾಚಾರ ಮಾಡುತ್ತಿದ್ದೇವೆ. ಇದನ್ನು ನಿಲ್ಲಿಸುವ ಮೂಲಕ ಭೂಮಿ ರೂಪನಾದ ಶಿವನಿಗೆ ಗೌರವನ್ನು ಸಲ್ಲಿಸಬೇಕು. ಇನ್ನು ನೀರು ಸರ್ವಜೀವಿಗಳ ಜೀವನದ ಆಧಾರವು. ಹೀಗೆ ಆಧಾರವಾಗಿರುವ ನದಿ, ಕೆರೆ, ಸರೋವರ, ಭಾವಿಗಳಲ್ಲಿರುವ ನೀರನ್ನು ಕಲುಷಿತ ಗೊಳಿಸದೇ ಸದ್ಬಳಕೆ ಮಾಡಿಕೊಳ್ಳುವುದೇ ಜಲರೂಪನಾದ ಶಿವನ ಪೂಜೆಯು.

ನಿತ್ಯ ಬದುಕಿಗೆ ವಿವಿಧೋಪಯೋಗಿಯಾಗಿರುವ ಅಗ್ನಿಗೆ ಧೂಪಾದಿ ಹವಿಸ್ಸುಗಳನ್ನು ಅರ್ಪಿಸುವುದೇ ಅಗ್ನಿರೂಪ ಶಿವನ ಪೂಜೆಯು. ವಾಯು ಸಹ ಜೀವನದ ಪ್ರಮುಖ ಆಧಾರವು. ಇಂದು ನಾವು ವಿಪರೀತ ವಾಹನಗಳನ್ನು ಬಳಸುವುದರ ಮೂಲಕ ವಾಯು ಮಾಲಿನ್ಯ ಮಾಡುತ್ತಿದ್ದೇವೆ. ಇದು ಹೀಗೆ ಮುಂದುವರೆದರೆ ಮುಂದೊಂದು ದಿನ ಶುದ್ಧ ವಾಯುವಿಲ್ಲದೇ ಪ್ರಾಣಾಪಾಯ ಉಂಟಾಗಬಹುದು. ಕಾರಣ ಪ್ರತಿಯೊಬ್ಬರು ಮಾಯು ಮಾಲಿನ್ಯ ತಡೆಯುವುದೆ ವಾಯು ರೂಪ ಶಿವ ಪೂಜೆ. ಅದರಂತೆ ಇಂದು ಶಬ್ದ ಮಾಲಿನ್ಯವೂ ಸಹ ಮಿತಿಮೀರಿ ನಡೆಯುತ್ತಿದ್ದು ಅದನ್ನು ತಡೆಯುವುದೆ ಆಕಾಶ ರೂಪ ಶಿವನ ಪೂಜೆಯು,

ಇದೇ ಪ್ರಕಾರ ಬಿಸಿಲು ಬೆಳಕು ಕೊಟ್ಟ ಸೂರ್ಯನನ್ನು ತಂಪು ಬೆಳಕನ್ನು ಕೊಡುವ ಚಂದ್ರನನ್ನು ಆರಾಧಿಸುವುದು ಸಹ ಒಂದು ಶಿವ ಪೂಜೆಯು.

ಇನ್ನು ಸರ್ವತ್ರ ಇವರು ಶಿವನನ್ನು ತನ್ನ ಆತ್ಮಸ್ವರೂಪದಲ್ಲಿ ತಿಳಿದು ಕೊಳ್ಳುವುದು ಸಹ ಒಂದು ಶಿವ ಪೂಜೆಯೇ. ಹೀಗೆ ವ್ಯಕ್ತವಾಗಿರುವ ಅಷ್ಟತನುಗಳಲ್ಲಿ ಯಾರು ಶಿವಭಾವನೆಯನ್ನು ತಾಳುತ್ತಾರೋ ಅವರಿಗೆ ಸರ್ವವೆಲ್ಲವೂ ಶಿವನೇ. ಆದ್ದರಿಂದ ಶಿವಭಕ್ತರೆಲ್ಲರೂ ಪರಿಸರ ಪ್ರೇಮಿಗಳಾಗಬೇಕಾಗಿದೆ.

–ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ,
ಹುಮನಾಬಾದ ಶ್ರಾವಣ ಮಾಸ ನಿಮಿತ್ತ
ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ ಸಾರಂಶ.

ಸಂಜೆವಾಣಿ
ಸೋಮವಾರ 16 ಆಗಸ್ಟ್ 2010

ಶಿವ ಸಮಾನತೆಯ ಹರಿಕಾರ



ಸಂಜೆವಾಣಿ ವಾರ್ತೆ ಹುಮನಾಬಾದ ಆ.16: ಶಿವನು ಶಕ್ತಿಗೆ ತನ್ನದೇಹದ ಅರ್ಧ ಭಾಗವನ್ನು ಕೊಡುವುದರ ಮೂಲಕ ಸ್ತ್ರೀಪುರುಷರು ಸಮಾನರು ಎಂಬುದನ್ನು ಸ್ವತ: ಆಚರಿಸಿ ಸಮಾಜಕ್ಕೆ ಬೋಧೆ ಮಾಡಿದ ಸಮಾನತೆಯ ಮೊಟ್ಟ ಮೊದಲ ಹರಿಕಾರನಾಗಿದ್ದಾನೆ ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ತಿಳಿಸಿದರು. ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ ವೇದಿಕೆಯಿಂದ ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿಯ ಶಕ್ತಿ ಸ್ತುತಿಯಲ್ಲಿ ಶಕ್ತಿಯನ್ನು ಸರ್ವಲೋಕಗಳ ಪ್ರಕೃತಿ ಯಂದು, ಸರ್ವರ ಮಾತೆ ಎಂದು, ಜ್ಞಾನ ಇಚ್ಛಾ ಮತ್ತು ಕ್ರಿಯೆಗಳ ರೂಪದಲ್ಲಿ ಶಿವನೊಂದಿಗೆ ಸದಾ ಸಹಧರ್ಮಚಾರಿಣಿಯಾಗಿರುವಳೆಂದು ವರ್ಣಿಸಲಾಗಿದೆ. ಸೃಷ್ಠಿ ಕರ್ತನಾದ ಬ್ರಹ್ಮನು ಶಾರದೆಗೆ ನಾಲಿಗೆಯ ತುದಿಯಲ್ಲಿ ಸ್ಥಾನವನ್ನು ಕೊಟ್ಟಿದ್ದಾನೆ. ಜಗದ್ರಕ್ಷಕನಾದ ವಿಷ್ಣುಭಗವಂತನು ಲಕ್ಷ್ಮಿಗೆ ತನ್ನ ವಕ್ಷಸ್ಥಲದಲ್ಲಿ ಸ್ಥಾನವನ್ನು ಕೊಟ್ಟಿದ್ದಾನೆ. ಆದರೆ ಶಿವನು ತನ್ನ ಶಕ್ತಿಗೆ ದೇಹದ ಅರ್ಧಭಾಗ ಕೊಡುವುದರ ಮೂಲಕ ಸ್ತ್ರೀಪುರುಷರು ಸಮಾನರು ಎಂಬ ಸಂದೇಶವನ್ನು ಸೃಷ್ಟಿಯ ಆದಿಯಲ್ಲಿಯೇ ಕೊಟ್ಟಿದ್ದಾನೆ.

ಆದ್ದರಿಂದ ಶಿವನು ಸ್ತ್ರೀಪುರುಷರು ಸಮಾನರು ಎಂದು ಸಾರಿದ ಪ್ರಥಮ ಹರಿಕಾರನೆಂದು ಸರ್ವರೂ ತಿಳಿದುಕೊಳ್ಳಬೇಕು. ಅಂತೆಯೇ ವೀರಶೈವ ಸಿದ್ಧಾಂತಕ್ಕೆ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವೆಂದು ಕರೆಯುತ್ತಾರೆ. ವೀರಶೈವರು ಪೂಜಿಸುವ ಇಷ್ಟಲಿಂಗವು ಕೂಡ ಶಿವಶಕ್ತಿ ಯರ ಸ್ವರೂಪವಾಗಿದೆ. ಅಂತೆಯೇ ವೀರಶೈವ ಧರ್ಮದಲ್ಲಿಯು ಈ ಸ್ತ್ರೀ ಸಮಾನತೆಯನ್ನು ಶಿವನು ಶಿವಾಗಮಗಳಲ್ಲಿಯೇ ಬೋಧಿಸಿರುವುದನ್ನು ಕಾಣುತೇವೆ. ಅಂತೆಯೇ ಅನಾದಿಕಾಲದಿಂದ ವೀರಶೈವ ಧರ್ಮದಲ್ಲಿ ಪುರುಷರಿಗಿರುವಷ್ಟು ಧರ್ಮಾಚಾರಣೆಯ ಸ್ವಾತಂತ್ರವನ್ನು ಸ್ತ್ರೀಯರಿಗೂಕೊಡಲಾಗಿದೆ. ಸಮಾನತೆಯ ಈ ನೀತಿಯು ಸಮಾಜದಲ್ಲಿ ಸಾಮರಸ್ಯವನ್ನು ಮೂಡಿಸುವಂತಾಗಬೇಕೆ ವಿನ: ವಿರಸಕ್ಕೆ ಕಾರಣವಾಗಬಾರದು. ಸ್ತ್ರೀ ಪುರುಷರೂ ಒಬ್ಬರಿಗೊಬ್ಬರು ಅನುಕೂಲವಾಗಿದ್ದಾಗ ಸಂಸಾರದಲ್ಲಿ ಸುಖ ಸಮಾಧಾನಗಳು ದೊರೆಯುವವು. ಸಮಾನವಾದ ಉಚ್ಚ. ಶಿಕ್ಷಣವನ್ನು ಪಡೆದ ಸ್ತ್ರೀಪುರುಷರಲ್ಲಿ ಇತ್ತಿಚ್ಚಿಗೆ ದಾಂಪತ್ಯ ವಿರಸವು ಹೆಚ್ಚಾಗಿ ಕಂಡು ಬರುತ್ತಿದೆ. ಇದರಿಂದ ಸಂತಾನದ ಮೇಲೆ ವಿಪರೀತವಾದ ಪರಿಣಾಮವೂ ಸಹ ಆಗುತ್ತಿದೆ.

ಎಷ್ಟೋಜನ ಸುಶಿಕ್ಷಿತ ಹೆಣ್ಣು ಮಕ್ಕಳು ಮಧ್ಯಪಾನ,ದೂಮಪಾನದಿಗಳನ್ನು ಮಾಡುತ್ತ ಸ್ವೇಚ್ಛಾಚಾರದಿಂದ ವರ್ತಿಸಿ ಪುರುಷ ಸಮಾನತೆ ಹಕ್ಕನ್ನು ವಿಕೃತವಾಗಿ ಅನುಭವಿಸುತ್ತಿದ್ದಾರೆ. ಇದೆಲ್ಲವನ್ನು ನೋಡಿದಾಗ ಸ್ತ್ರೀಪುರುಷರು ಸದಾಚಾರಿಗಳಾಗಿ ಸಮಾನ ಮನಸ್ಕರಾಗಿ ಒಬ್ಬರನ್ನೊಬ್ಬರು ಅರಿತುಕೊಳ್ಳುವರಾಗಿ ಒಂದು ದೇಹದ ಎಡಬಲ ಭಾಗಗಳಂತೆ ಪರಸ್ಪರ ಸಹಕಾರದಿಂದ ಭಾಳಿದಾಗ ಸಮಾನತೆಗೆ ಹೆಚ್ಚಿನ ಗೌರವ ದೊರೆಯುವುದು. ಕಾರಣ ಸಮಾಜದಲ್ಲಿಯ ಎಲ್ಲಾ ವರ್ಗದ ಸ್ತ್ರೀಪುರುಷರು ಶಿವ ಶಕ್ತಿಯರ ಸಮಾನತೆಯ ಆದರ್ಶವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು . ಶ್ರೀ ಕಾಶಿ ಮಹಾಸನ್ನಿಧಿಯವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಬದುಕಿನ ಸಾರ್ಥಕತೆಗೆ ಆಧ್ಯಾತ್ಮಿಕ ಚಿಂತನೆ ಅಗತ್ಯ

ಹೊಸದುರ್ಗ, ಡಿ. 25 : ಜನರು ತಮ್ಮ ಬದುಕಿನಲ್ಲಿ ಸಾರ್ಥಕತೆಯನ್ನು ಕಾಣಬೇಕಾದರೆ ಹೆಚ್ಚಿನ ರೀತಿಯಲ್ಲಿ ಆಧ್ಯಾತ್ಮಿಕ ಚಿಂತನೆ ಮಾಡುವುದು ಅಗತ್ಯವಾಗಿದೆ ಎಂದು ಕಾಶೀಜ್ಞಾನ ಸಿಂಹಾಸನಾದೀಶ್ವರ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಜಿ ಹೇಳಿದರು.

ಪಟ್ಟಣದ ವಿನಾಯಕ ರಂಗ ಮಂದಿರದ ಶ್ರೀ ದುರ್ಗಾದೇವಿ ಮಂಟಪದಲ್ಲಿ 9 ದಿನಗಳಿಂದ ಆಯೋಜಿಸಿದ್ದ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಪ್ರವಚನದ ಸಮಾರೋಪ ಸಮಾರಂಭದ ಸಾನಿಧ್ಯವಹಿಸಿ ಮಾತನಾಡಿ, ಜನರು ಲೋಭಿಗಳಾದರೆ ಸಮಾಜಕ್ಕೆ ಕ್ಷೋಭೆ ಉಂಟಾಗುತ್ತದೆ. ಲಾಭಬಡಕು ತನದಿಂದ ದೂರವಾಗಬೇಕು. ಪರರ ಶ್ರೇಯಸ್ಸ ಹಾರೈಸುವ ಪ್ರವೃತ್ತಿ ರೂಢಿಸಿಕೊಳ್ಳಬೇಕೆಂದು ತಿಳಿಸಿದರು. ಪರೋಪಕಾರದಂತಹ ಮಾನವೀಯ ಮೌಲ್ಯ ಅಳವಡಿಸಿಕೊಂಡು, ಹಿಂಸೆಯಿಂದ ದೂರ ಸರಿದಾಗ ಮಾತ್ರ ಶಾಂತಿ, ನೆಮ್ಮದಿ ದೊರೆಯುವುದು. ಧಾರ್ಮಿಕತೆ ಮೈಗೂಡಿಸಿಕೊಂಡು ಆಧ್ಯಾತ್ಮಿಕ ಚೌಕಟ್ಟಿನಲ್ಲಿ ಎಲ್ಲಾ ಧರ್ಮೀಯರು ಏಕತೆಯಿಂದ ಸಹಬಾಳ್ವೆ ಮಾಡುವ ಪರಿಪಾಠ ರೂಢಿಗೆ ಬರಬೇಕೆಂದರು.

ಸ್ಥಳೀಯ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಕೆಬಿ ಗುರುಬಸಪ್ಪ ಅಧ್ಯಕ್ಷತೆ ವಹಿಸಿದ್ದರು.

ಹಣ್ಣೆಮಠದ ಶಿವಾನಂದ ಶಿವಾಚಾರ್ಯ ಸ್ವಾಮಿಜಿ, ಹುಣಸಘಟ್ಟದ ಹಾಲುಸ್ವಾಮಿ ಮಠದ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಜಿ, ನಂದೀಪುರದ ನಂದೀಪುರದ ನಂದೀಶ್ವರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಮಾಜಿ ಶಾಸಕ ಟಿಹೆಚ್. ಬಸವರಾಜ್, ಜೆಡಿಎಸ್ ಅಧ್ಯಕ್ಷ ಹೆಚ್.ಸಿ. ಮಲ್ಲಿಕಾರ್ಜುನಪ್ಪ, ನ್ಯಾಯಮೂರ್ತಿ ಕುಮಾರಿ ಎಂ.ಎಸ್. ಶಶಿಕಲಾ ಪಾಲ್ಗೊಂಡಿದ್ದರು.

ಮೇಘನ ಭಕ್ತಿ ಸಮರ್ಪಣ ಗೀತೆ ಹಾಡಿದರು. ಮಹಿಳಾ ಸಂಘದವರಿಂದ ಶಿವಸ್ತೋತ್ರ ಪಠಣ ನಡೆಯಿತು. ವಿಜಯ ಶಿವಲಿಂಗಪ್ಪ ಸ್ವಾಗತಿಸಿ. ಕೆಎಸ್ ಕಲ್ಮಠ್ ವಂದಿಸಿದರು.

ಧರ್ಮಲಾಂಛನಗಳು ದುರ್ಮಾರ್ಗ ನಿರೋಧಕಗಳು

ಸಂಜೆವಾಣಿ ವಾರ್ತೆ

ಹುಮನಾಬಾದ, ಆ.18-ಪ್ರತಿಯೊಂದು ಧರ್ಮದಲ್ಲಿ ಆಯಾ ಧರ್ಮಕ್ಕೆ ಸಂಬಂಧಿಸಿದ ಧರ್ಮದ ಲಾಂಛನಗಳನ್ನು ದೇಹದ ಮೇಲೆ ಧರಿಸಿವ ಪರಂಪರೆ ಇದೆ. ಈ ಧರ್ಮ ಲಾಂಛನಗಳು ಮನಷ್ಯನನ್ನು ಧುರ್ಮಾರ್ಗದಿಂದ ತಡೆಯುತ್ತೇವೆ. ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಾಹಾಸ್ವಾಮಿಗಳು ಹೇಳಿದರು.



ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಅಧ್ಯಾತ್ಮಿಕ ಆಶೀರ್ವಚನ ವೇದಿಕೆಯಿಂದ ಈ ವಿಚಾರವನ್ನು ತಿಳಿಸಿದರು.

ಪ್ರತಿಯೊಂದು ಧರ್ಮದಲ್ಲಿ ತನ್ನದೇ ಆದ ವಿಶಿಷ್ಟಗಳಾದ ಧರ್ಮಲಾಂಛನಗಳು ಹೇಳಿರುವಂತೆ ವೀರಶೈವ ಧರ್ಮದಲ್ಲಿಯೂ ಸಹ ಅಷ್ಟಾವರಣದಲ್ಲಿ ಹೇಳಲ್ಪಟ್ಟ ಇಷ್ಟಲಿಂಗ ರುದ್ರಕ್ಷಿ ಮತ್ತು ಭಸ್ಮಗಳೆಂಬ ಈ ಮೂರು ಅವರಣಗಳು ಬಹಿರಂಗ ಲಾಂಛನಗಳಾಗಿರುತ್ತವೆ.

ವೀರಶೈವರೆಂದು ಹೇಳುಕೊಳ್ಳುವ ಪ್ರತಿಯೊಬ್ಬರು ಇವುಗಳನ್ನು ಯಾವಾಗಲೂ ದೇಹದ ಮೇಲೆ ಧರಿಸಿಕೊಂಡಿರಬೇಕು, ಅಂದಗಾಲೇ ಸಾದಕನು ಸದಾ ಸಮ್ಮಾರ್ಗದಲ್ಲಿ ಇರಲು ಸಾಧ್ಯವಾಗುವುದು.

ವೀರಶೈವರಲ್ಲಿ ಇವುಗಳಿಗೆ ಅವರಣ ಎಂದು ಕರೆದಿರುವರು. ಅವರಣವೆಂದರೆ ರಕ್ಷಕ ಕವಚ ಎಂದರ್ಥ. ಶತ್ರುವಿನ ಶಸ್ತ್ರ ಭಾದೆಯಿಂದ ತನ್ನನ್ನು ರಕ್ಷಿಸಿಕೊಳ್ಳಲು ಸೈನಿಕರು ಹಾಗೂ ಆರಕ್ಷಕದಳದವರು, ಹೆಲ್ಮೆಟ್, ಹಾಗೂ ಬುಲೇಟ್ ಪ್ರುಫ್, ಜಾಕೆಟ್‌ಗಳನ್ನು ಧರಿಸುವಂತೆ ಸಾಧಕನಿಗೆ ಅಂತರಂಗದ ಶತ್ರುಗಳಾದ ಕಾಮ ಕ್ರೋದಾದಿಗಳ ಹಾದಿಯಿಂದ ತನ್ನನು ರಕ್ಷಿಸಿಕೊಳ್ಳಲು ಅತ್ಯಮೂಲ್ಯ ಉಪಕರಣಗಳಾಗಿರುತ್ತವೆ ಎಂದು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಬೋಧಿಸಲಾಗಿದೆ.

ಸಾಧಕನ್ನು ಸದ್ಗುರುವಿನಿಂದ ದೀಕ್ಷಾ ಮೂಲಕವಾಗಿ ಇಷ್ಟಲಿಂಗ, ರುದ್ರಕ್ಷಿ, ಭಸ್ಮಗಳನ್ನು ಪಡೆಕೊಳ್ಳುತ್ತಾನೆ. ಗುರುವಿನ ಆದೇಶದ ಮೇರೆಗೆ ತನ್ನ ಬದುಕಿನಲ್ಲಿ ಜಂಗಮರ ಉಪದೇಶವನ್ನು ಮತ್ತು ಗುರುಲಿಂಗ ಜಂಗಮರಪದೋದಕ ಪ್ರಸಾದಗಳನ್ನು ಪ್ರತಿನಿತ್ಯ ಸೇವೆಸಿರುತ್ತಾನೆ.

ಹೀಗೆ ಅಷ್ಟವರಣ ಯುಕ್ತನಾಗಿ ನಿಷ್ಠಿಯಿಂದ ಧರ್ಮ ಮಾರ್ಗದಲ್ಲಿ ನಡೆಯುವ ಸಾಧಕನು ತನ್ನಲ್ಲಿ ಉಂಟಾದ ವಿವೇಕದಿಂದ ಅಂತರಂಗದ ಅರಿಷಡ್ವರ್ಗಗಳ ಬಾದೆಯಿಂದ ತನ್ನನ್ನು ರಕ್ಷಿಸಿಕೊಂಡು ತನ್ನ ಸಾಧನೆಯ ಗುರಿಯನ್ನು ತಲುಪುವಲ್ಲಿ ಸಮರ್ಥನಾಗುತ್ತಾನೆ.

ಆದ್ದುದರಿಂದ ನಮ್ಮ ಸಾಧನೆಯ ಮಾರ್ಗದಲ್ಲಿ ಧರ್ಮ ಲಾಂಛನಗಳು ನಮ್ಮನ್ನು ದುರ್ಮಾರ್ಗದಿಂದ ರಕ್ಷಿಸುವುದರ ಜೊತೆಗೆ ಗುರಿ ತಲುಪಲು ಸಹಾಯಕಗಳಾಗಿರುತ್ತವೆ. ಆದ ಕಾರಣ ವಿಶ್ವದ ವಿವಿಧ ಧರ್ಮಗಳ ಅನುಯಾಯಿಗಳು ತಮ್ಮ ತಮ್ಮ ಧರ್ಮದಲ್ಲಿ ಹೇಳಿರುವ ಲಾಂಛನಗಳನ್ನು ದೇಹದ ಮೇಲೆ ನಿಷ್ಠೇಯಿಂದ ಸದಾ ಧರಿಸಿಕೊಂಡು ಅವುಗಳ ಮಹತ್ವವನ್ನು ಅರಿತುಕೊಂಡು ವಿವೇಕ ಉಳ್ಳವನ್ನಾಗಿ ತನ್ನನ್ನು ತಾನು ದುರ್ಮಾರ್ಗ, ದುರ್ವ್ಯಸದಿಂದ ರಕ್ಷಿಸಿಕೊಳ್ಳಬೇಕು ಎಂಬುದಾಗಿ ಶ್ರೀ ಕಾಶಿ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಹೇಳಿದರು.

ಸಂಯುಕ್ತ ಕರ್ನಾಟಕ
ಕಲಬುರ್ಗಿ | 17-8-2010 3

ಕಾಶಿ ಜಗದ್ಗುರುಗಳ ಸಂದೇಶ

ಸಮಸ್ಯೆಗಳಿಗೆ ಶಸ್ತ್ರ ಪರಿಹಾರವಲ್ಲ



ಹುಮನಾಬಾದ: ಬದುಕಿನ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳಲು ಶಸ್ತ್ರ ಹಿಡಿಯುವುದೇ ಅಂತಿಮ ಪರಿಹಾರವಲ್ಲ. ಭಾರತ ದೇಶವು ಅವತಾರ ಭೂಮಿ ಎಂದು ಪ್ರಸಿದ್ಧವಾಗಿದೆ. ಭಗವಂತನು ದುಷ್ಟರ ಸಂಹಾರಕ್ಕಾಗಿ ಅನೇಕ ವೇಳೆ ವಿವಿಧ ಶಸ್ತ್ರಧಾರಿಯಾಗಿ ಅವತರಿಸಿ ದುಷ್ಟರನ್ನು ಸಂಹರಿಸಿದ್ದಾನೆ. ಆದರೂ ಆ ದುಷ್ಟರು ಪುನಃ ಪುನಃ ಜನ್ಮವೆತ್ತಿ ಬರುವುದನ್ನು ಕಂಡು ಸ್ವತಃ ಭಗವಂತನೇ ದುಷ್ಟರ ಸಂಹಾರಕ್ಕೆ ಶಸ್ತ್ರವೇ ಕೊನೆಯ ಉಪಚಾರವಲ್ಲವೆಂದು ಯೋಚಿಸಿ ತನ್ನ ಎಲ್ಲಾ ಶಸ್ತ್ರಾಸ್ತ್ರಗಳನ್ನು ಬಿಟ್ಟು ತನ್ನ ಮಾಯಾ ಶಕ್ತಿಯನ್ನು ಸಹ ತ್ಯಾಗ ಮಾಡಿ, ಜ್ಞಾನಶಕ್ತಿವಿಷ್ಟನಾಗಿ ಗುರುವಾಗಿ ಅವತರಿಸುತ್ತಾನೆ. ಆಗ ಅವನ ಕೈಯಲ್ಲಿರುವುದು ಶಸ್ತ್ರವಲ್ಲ; ಶಾಸ್ತ್ರಗ್ರಂಥವು.

ಶಸ್ತ್ರವು ದುಷ್ಟನ ದೇಹದ ಮೇಲೆ ಪ್ರಹಾರ ಮಾಡಿದರೆ, ಶಾಸ್ತ್ರೋಪದೇಶವು ನೇರವಾಗಿ ಬುದ್ಧಿಯ ಮೇಲೆ ಪ್ರಹಾರ ಮಾಡುತ್ತದೆ. ಶಾಸ್ತ್ರಶ್ರವಣದಿಂದ ಎಂತಹ ದುರ್ಬುದ್ಧಿ ಇದ್ದರೂ ಅದು ದೂರಾಗಿ ಅವನಲ್ಲಿ ಸದ್ವಿಚಾರಗಳು ಮೂಡಿಬರುವವು. ಅಂತೆಯೇ ನಮ್ಮ ದೇಶದಲ್ಲಿ ಅನೇಕ ಆಚಾರ್ಯರು ಸಂತರು ಶರಣರು ಮನುಕುಲಕ್ಕೆ ಸನ್ಮಾರ್ಗದ ಉಪದೇಶವನ್ನು ಮಾಡಿದ್ದಾರೆ.ಅವರ ಆ ಉಪದೇಶಗಳೇ ಇಂದು ಸಮಾಜದ ಮಾರ್ಗದರ್ಶಿಗಳಾದ ಶಾಸ್ತ್ರಗಳಾಗಿವೆ.

ದುರ್ವಿಚಾರದಿಂದ ವಿಕ್ಷೇಪ್ತವಾಗಿ ಬುದ್ಧಿಯನ್ನು ಸದ್ವಿಚಾರಗಗಳಿಂದಲೇ ಸುಧಾರಿಸಬೇಕು. ಆದ್ದರಿಂದ ಶಾಸ್ತ್ರ ಶ್ರವಣ ಪರಸ್ಪರ ವಿಚಾರಗಳಿಂದಲೇ ಎಂತಹ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವಿದೆ. ಇಂದು ಜಗತ್ತಿನಲ್ಲಿ ಶಸ್ತ್ರಧಾರಿಗಳಾದ ಭಯೋತ್ಪಾದಕರಿಗೆ ಭಾರತವನ್ನೇ ಮೊದಲುಗೊಂಡು ಎಲ್ಲ ರಾಷ್ಟ್ರಗಳ ಮುಖಂಡರು ಶಸ್ತ್ರವನ್ನು ತ್ಯಜಿಸಿ ಆಪ್ತಾಲೋಚನೆಗೆ ಆಹ್ವಾನಿಸಿರುವುದನ್ನು ಕಾಣುತ್ತೇವೆ. ಆದ್ದರಿಂದ ಸಮಸ್ಯೆಗಳ ಪರಿಹಾರಕ್ಕೆ ಶಾಸ್ತ್ರ ಚಿಂತನೆ ಮತ್ತು ಪರಸ್ಪರ ವಿಚಾರ ವಿನಿಮಯ ಕೊನೆಯ ಉಪಾಯಗಳಾಗಿವೆ.

ಇನ್ನು ವೇದದಲ್ಲಿ ಬರುವ ದ್ವೈತ-ಅದ್ವೈತಮಂತ್ರಗಳ ಮರ್ಮವನ್ನು ತಿಳಿಸದೆ, ಪರಸ್ಪರ ಕಲಹ ಮಾಡುತ್ತಿರುವುದು ಸರಿಯಲ್ಲ. ಶಿವನ ಆದೇಶದ ಮೇರೆಗೆ ಅವತರಿಸಿದ ಶ್ರೀ ರೇಣುಕಾ ಭಗವತ್ಪಾದರು ಅಗಸ್ತ್ಯನ ಮನಸ್ಸಿನಲ್ಲಿಯ ದ್ವೈತಾದ್ವೈತಗಳದ್ವಂದ್ವಗಳ ಕೋಲಾಹಲ ಶಾಂತಗೊಳಿಸಲೆಂದೇ ಸಂವಾದ ರೂಪವಾಗಿ ಶಾಸ್ತ್ರೋಪದೇಶ ಮಾಡಿ, ದ್ವೈತಾದ್ವೈತಗಳನ್ನುಸಮನ್ವಯಗೊಳಿಸುವ ವೀರಶೈವ ಷಟ್‌ಸ್ಥಲ ಸಿದ್ಧಾಂತ ಬೋಧಿಸಿದ್ದಾರೆ.

ಶಾಸ್ತ್ರಗಳನ್ನು ಹಿಡಿದು ಕೊಂಡು ಖಂಡನ-ಮಂಡನ ಮಾಡುವುದೂ ಸಹ ಉಚಿತವಲ್ಲ. ಯಾರೂ ಯಾರ ಬಗ್ಗೆಯೂ ವಿರೋಧ ಭಾವನೆ ತಾಳಕೂಡದು. ಇಂತಹ ವಿರೋಧಿ ಭಾವವಿಲ್ಲದ ಶಿವಭಕ್ತನೇ ವೀರಶೈವ ಎಂಬ ಮುಂತಾದ ವಿಚಾರಗಳನ್ನು ಶ್ರೀ ರೇಣುಕಾ ಭಗವತ್ಪಾದಕರು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಬೋಧಿಸಿದ್ದಾರೆ. ಆದ್ದರಿಂದ ಸಂಘರ್ಷ ಮಾಡದೇ ಸಮಾಧಾನದಿಂದ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಬೇಕೆಂಬುದಾಗಿ ಶ್ರೀ ಕಾಶಿ ಜಗದ್ಗುರುಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ದ್ವೇಷದಿಂದ ಏನೂ ಸಾಧಿಸಲಾಗದು



ಕಾಶಿ ಜಗದ್ಗುರುಗಳ ವಾಣಿ

ಸೇಡಂ: ದ್ವೇಷದಿಂದ ಏನನ್ನೂ ಸಾಧಿಸಲಾಗದು, ಮೈತ್ರಿಯಿಂದ ಅಗಾಧ ಸಾಧನೆ ಮಾಡಬಹುದು ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನುಡಿದರು.

ಅವರು ತಾಲೂಕಿನ ಮಳಖೇಡ ಭಂಗಿ ಮಠದಲ್ಲಿ ಹಾಗೂ ಸೇಡಂನ ಕೊತ್ತಲ ಬಸವೇಶ್ವರ ದೇವಾಲಯದಲ್ಲಿ ಶ್ರಾವಣ ಮಾಸದ ಪ್ರವಚನದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಬಹುಜನ ಹಿತಾಯ ಬಹುಜನ ಸುಖಾಯ ಎಂಬ ಬದುಕುವ ಸಂಸ್ಕೃತಿ ಭಾರತೀಯರದಾಗಿದೆ. ಇಂತಹ ಸಂಸ್ಕೃತಿಯ ವಾರಸುದಾರರಾದ ನಾವು ಸಮಸ್ತರನ್ನು ಮೈತ್ರಿಯಿಂದ ನೋಡಬೇಕು.ಅಂದಾಗ ವಿಶ್ವ ಭಾತೃತ್ವ ಮೂಡುತ್ತದೆ.ಬಹಳಷ್ಟು ಜನರನ್ನು ವೈರತ್ವ ದೃಷ್ಟಿಯಿಂದ ನೋಡದೆ ನಮ್ಮವರು ಎಂದು ಭಾವಿಸಿ ನಡೆಯಬೇಕು. ಇದುವೇ ಮೌಲ್ಯದ ಬದುಕು ಅಂತಹ ಬದುಕನ್ನು ನಡೆಸಬೇಕು ಎಂದು ನುಡಿದರು.

ಸಂಯುಕ್ತ ಕರ್ನಾಟಕ

ಕಲಬುರ್ಗಿ | 19-8-2010 3

ಭಕ್ತಿ: ಮೊದಲ ಸೋಪಾನ



ಭಗವಂತನ ಹಾದಿಯಲ್ಲಿ ಮುನ್ನಡೆಯುವ ಸಾಧಕನಿಗೆ ಭಕ್ತಿಯೇ ಮೊದಲ ಸೋಪಾನ ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನದಲ್ಲಿ ತಿಳಿಯಪಡಿಸಿದರು. ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕ್ಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನದಲ್ಲಿತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಭಗವಂತನನ್ನು ತಲುಪುವ ಪ್ರಮುಖವಾದ ಆರು ಸೋಪಾನಗಳು ಪ್ರತಿಪಾದಿಸಲ್ಪಟ್ಟಿವೆ. ಅವುಗಳಿಗೆ ಷಟ್‌ಸ್ಥಲಗಳೆಂದು ಕರೆಯುತ್ತಾರೆ. ಈ ಷಟ್‌ಸ್ಥಲಗಳಲ್ಲಿ ಭಕ್ತಿ ಸ್ಥಲವೇ ಮೊದಲನೆಯದು.

ಪೂಜ್ಯರಲ್ಲಿರುವ ಅನುರಾಗಕ್ಕೆ ಭಕ್ತಿಯೆಂದು ಕರೆಯುತ್ತಾರೆ. ಜಗತ್ತಿನಲ್ಲಿ ಸರ್ವರಿಗೂ ಪೂಜ್ಯನೆಂದರೆ ಶಿವನೇ. ಎಲ್ಲ ದೇವತೆಗಳು ಶಿವನನ್ನೆ ಆರಾಧಿಸಿರುತ್ತಾರೆ. ಆದ್ದರಿಂದ ಶಿವನಲ್ಲಿ ಅನನ್ಯವಾದ ಅನುರಾಗ ಉಳ್ಳವನೇ ಭಕ್ತನೆಂದು ಕರೆಸಿಕೊಳ್ಳುತ್ತಾನೆ ಎಂಬುದಾಗಿ ಶ್ರೀ ಜಗದ್ಗುರು ರೇಣುಕಭಗವತ್ಪಾದರು ಆಗಸ್ತ್ಯ ಮಹರ್ಷಿಗೆ ಭೋಧಿಸಿದ್ದಾರೆ. ಮುಕ್ತಿಯ ವಿವಿಧ ಸಾಧನಗಳಲ್ಲಿ ಭಕ್ತಿಯು ಸರ್ವರಿಗೂ ಅತ್ಯಂತ ಸುಲಭ ಸಾಧನ. ತನಗೆ ಇಷ್ಟವಾದ ದೇವರಿಗೆ ತನ್ನನು ಸಂಪೂರ್ಣವಾಗಿ ಸಮರ್ಪಿಸಿ ಕೊಳ್ಳುವುದೆ ನಿಜವಾದ ಭಕ್ತಿಯು. ಮಾರ್ಜಾಲಕಿಶೋರ ನ್ಯಾಯದಂತೆ ಬೆಕ್ಕಿನ ಮರಿಯು ತನ್ನ ತಾಯಿಯ ಮೇಲೆ ತನ್ನ ಪೂರ್ಣ ನಂಬಿಕೆ ಯನ್ನಿಟ್ಟು ತಾಯಿಗೆ ಸಮರ್ಪಿತವಾಗಿರುವುದರಿಂದ ತಾಯಿ ಬೆಕ್ಕು ತನ್ನ ಮರಿಯನ್ನು ಬಾಯಿಯಲ್ಲಿ ಹಿಡಿದು ಕೊಂಡು ಬೇರೆ ಬೇರೆ ಸುರಕ್ಷಿತ ಸ್ಥಳಗಳಲ್ಲಿಟ್ಟು ಅದನ್ನು ಹೇಗೆ ರಕ್ಷಿಸುತ್ತದೆಯೋ ಅದರಂತೆ ತನ್ನನ್ನು ಅನನ್ಯವಾಗಿ ನಂಬಿದ ಭಕನ್ನನ್ನು ಸಹ ಭಗವಂತನು ಯೋಗಕ್ಷೇಮಗಳನ್ನು ಒದಗಿಸುವ ಮೂಲಕ ಸದಾ ರಕ್ಷಿಸುತ್ತಿರುತ್ತಾನೆ. ಆದ್ದರಿಂದ ಸಾಧಕನಲ್ಲಿ ತನ್ನ ಇಷ್ಟದೇವರ ಬಗ್ಗೆ ಬಲವಾದ ಶ್ರದ್ಧೆ ವಿಶ್ವಾಸಗಳು ಅವಶ್ಯ ವಾಗಿರಬೇಕು.

ವೀರಶೈವ ಸಿದ್ಧಾಂತದಲ್ಲಿ ಲಿಂಗಾಂಗ ಸಾಮರಸ್ಯರೂಪವಾದ ಮೋಕ್ಷವನ್ನು ಪಡೆದುಕೊಳ್ಳಲು ಷಟ್‌ಸ್ಥಲ ಮಾರ್ಗದಲ್ಲಿ ಪ್ರಮುಖವಾಗಿ ಶ್ರದ್ಧೆನಿಷ್ಠೆ, ಅವಧಾನ,ಅನುಭವ, ಆನಂದ ಮತು ಸಮರಸಗಳೆಂಬ ಆರು ವಿಧಗಳಾದ ಭಕ್ತಿಗಳೇ ಮುಖ್ಯಸಾಧನಗಳೆಂದು ಹೇಳಲಾಗಿದೆ. ಆದ್ದರಿಂದ ಮೊದಲನೆಯದಾನ ಶ್ರದ್ಧಾ ಭಕ್ತಿಯಿಂದ ಕೂಡಿದ ಸಾಧಕನೇ ಇಲ್ಲಿ ಭಕ್ತನೆಂದು ಕರೆಯಿಸಿಕೊಳ್ಳುವನು.

ಸದ್ಗುರು ಕರುಣಿಸಿದ ತನ್ನ ಇಷ್ಟಲಿಂಗದಲ್ಲಿ ಶ್ರದ್ಧೆಯನ್ನಿರಿಸಿ ಪಿಂಡಸ್ಥಲವನ್ನೇ ಮೊದಲಗೊಂಡು ಸಹಜದಾನಸ್ಥಲದ ವರೆಗೆ ಹೇಳಿರುವ ಹದಿನೈದು ವಿಧಗಳಾದ ಆಚರಣೆಗಳನ್ನು ತನ್ನ ಸಾಧನೆಯಲ್ಲಿ ಅಳವಡಿಸಿಕೊಂಡ ಸಾದಕನು ಪರಿಪೂರ್ಣಭಕ್ತನೆಂದು ಕರೆಯಿಸಿಕೊಳ್ಳುವನೆಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ವಿವಿಧ ಯುಕ್ತಿ, ದೃಷ್ಟಾಂತ ಮತ್ತು ಶರಣರ ಅನುಭಾವದ ವಚನಗಳ ಮೂಲಕ ತಿಳಿಹೇಳಿದರು.

ಪವಿತ್ರ ಮನಸ್ಸು ಗಂಗೆಷ್ಟೇ ಪಾವನ



ಕಾಶಿ ಜಗದ್ಗುರುಗಳ ವಾಣಿ

ಸೇಡಂ: ಪವಿತ್ರ ಪರಿಶುದ್ಧ ಮನಸ್ಸಿನ ವ್ಯಕ್ತಿ ಗಂಗಾನದಿಯಷ್ಟೇ ಪಾವನವಾಗಿರುತ್ತಾನೆ ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನುಡಿದರು.

ಅವರು ತಾಲೂಕಿನ ಮಳಖೇಡ ಭಂಗಿ ಮಠ ಹಾಗೂ ನೀಲಹಳ್ಳಿ ಗ್ರಾಮದ ಎಂ.ಸಿ. ಪಾಟೀಲ್ ವಸತಿ ಸಂಕಿರಣದಲ್ಲಿ ಶ್ರಾವಣ ಮಾಸ ಪ್ರವಚನದ ಸಾನ್ನಿಧ್ಯ ವಹಿಸಿ ಮಾತನಾಡಿದರು.,

ಮನುಷ್ಯನ ಕಾರ್ಯ (ಶರೀರ) ಮತ್ತು ಕಾಯಕ ಎರಡು ಪರಿಶುದ್ಧವಾಗಿದ್ದರೆ ಕೈಲಾಸವೇ ನಿರ್ಮಾಣವಾಗುತ್ತದೆ. ಅಂತಹ ವ್ಯಕ್ತಿಯಲ್ಲಿಯೇ ದೇವರಿದ್ದಾನೆ. ಮಲೀನ ಮನಸ್ಸಿನವನು ಕಾಶಿಗೆ ಹೋದರೂ ಪ್ರಯೋಜನವಿಲ್ಲ, ಗಂಗೆಯಲ್ಲಿ ಮುಳಿಗೆದ್ದರೂ ಯಾವ ಲಾಭವಿಲ್ಲ, ಪರಿಶುದ್ಧ ಮನಸ್ಸಿನವನಲ್ಲಿ ದೇವರು ವಾಸವಾಗಿರುತ್ತಾನೆ. ಅವನಲ್ಲಿರುವ ದೈವತ್ವವನ್ನು ತಿಳಿಸಿಲು ಗುರು ಕಾರುಣ್ಯ ಅಗತ್ಯವಾಗಿದೆ.

ಸಂಯುಕ್ತ ಕರ್ನಾಟಕ

ಕಲಬುರ್ಗಿ | 20-8-2010 3

ಅಂತರಂಗ ಶುದ್ಧಿಯೇ ಭಕ್ತನ ಅರ್ಹತೆ



ಮನ,ಬುದ್ಧಿ,ಚಿತ್ತ ಮತ್ತು ಅಹಂಕಾರಗಳೆಂಬ ಅಂತ: ಕರಣದ ಅಥವಾ ಅಂತರಂಗ ಶುದ್ಧಿಯೇ ಭಕ್ತನಲ್ಲಿರಬೇಕಾದ ಮೊದಲ ಅರ್ಹತೆ ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಯ ಪಡೆಸಿದರು.

ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕ್ಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ ವೇದಿಕೆಯಿಂದ ಈ ವಿಚಾರವನು ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿ ಭಕ್ತಸ್ಥಳದಲ್ಲಿ ಭಕ್ತನ ಪ್ರಥಮ ಅರ್ಹತೆಯನು ಅಂತ: ಕರಣದ ಶುದ್ಧಿಯನ್ನು ಹೇಳುವದಕ್ಕಾಗಿಯೇ ಪಿಂಡಸ್ಥಳವನು ಪ್ರತಿಪಾದಿಸಲಾಗಿದೆ. ಭಕ್ತನಲ್ಲಿರಬೇಕಾದ ಹದಿನೈದು ಪ್ರಕಾರದ ಅರ್ಹತೆಗಳಲ್ಲಿ ಈ ಅಂತ: ಕರಣದ ಶುದ್ಧಿಯು ಪ್ರಥಮ ಅರ್ಹತೆ ಎಂದು ಪರಿಗಣಿಸಲಾಗಿದೆ. ಒಳಗೆ ಇದ್ದುಕೊಂಡು ತಮ್ಮ ಲೌಕಿಕ ಇಲ್ಲವೆ ಆಧ್ಯಾತ್ಮಿಕ ವ್ಯವಹಾರಗಳಿಗೆ ಯಾವುದು ಸಾಧನವಾಗಿರುವುದೋ ಅದಕ್ಕೆನೆ ಅಂತ: ಕರಣ ವೆಂದು ಕರೆಯುತ್ತಾರೆ.

ಪ್ರತಿಯೊಬ್ಬ ಮನುಷ್ಯನಲ್ಲಿರುವ ಮನಸ್ಸು ಬುದ್ಧಿ,ಚಿತ್ತ ಮತ್ತು ಅಹಂಕಾರಗಳು ಅಂತ: ಕರಣಗಳಗಿದೆ. ಇವುಗಳು ನಾವು ಮಾಡುವ ಪಾಪ ಕರ್ಮಗಳಿಂದ ಮಲಿನಗೊಳ್ಳುತ್ತವೆ. ಪುಣ್ಯ ಪಾಪಗಳು ಅಂತ: ಕರಣದಲ್ಲಿಯೇ ಸಂಗ್ರಹವಾಗುವವು. ಪಾಪ ಸಂಗ್ರಹವಾದರೆ ಅದು ಮಲಿನಗೊಳಗಳ್ಳುವುದು ಮತ್ತು ಪೂಣ್ಯ ಸಂಗ್ರಹವಾದರೆ ಅದು ಪರಿಶುದ್ಧಗೊಳ್ಳುವುದು. ಅಂತೆಯೋ ಅನೇಕ ಜನ್ಮಗಳಲ್ಲಿ ಮಾಡಿದ ಪಾಪ ಕರ್ಮಗಳಿಂದ ದೂಷಿತವಾದ ಅಂತ: ಕರಣವನ್ನು ಪರಿಶುದ್ಧಗೊಳಿಸಲು ಮತ್ತೆ ಅನೇಕ ಜನ್ಮಗಳಲ್ಲಿ ಪೂಣ್ಯ ಕರ್ಮಗಳನ್ನೇ ಮಾಡಬೇಕಾಗುವುದು. ನಮ್ಮ ಉತ್ಕೃಷ್ಟವಾದ ಪುಣ್ಯಸಂಗ್ರಹ ವಾಗುತ್ತಿದ್ದಂತೆ ನಮ್ಮ ಮೊದಲಿನ ಪಾಪವು ಕ್ರಮೇಣ ಕ್ಷಯಿಸುತ್ತ ಸಂಪೂರ್ಣ ಇಲ್ಲವಾಗಲು ಸಾಧಕನ ಅಂತ: ಕರಣವು ಪರಿಶುದ್ಧವಾಗುವುದು.

ನಾವು ಭಗವಂತನನ್ನು ಮುಟ್ಟಲು ನಮ್ಮ ಅಂತ: ಕರಣವೇ ಪ್ರಮುಖ ಸಾಧನಗವು. ನಾವು ಶರೀರದಿಂದ ದೇವರ ವಿಗ್ರಹವನ್ನು ಮುಟ್ಟಬಹುದು. ಆದರೆ ಅದರಲ್ಲಡಗಿರುವ ದೇವತ್ವವನ್ನು ಮನಸ್ಸಿನಿಂದಲೇ ಅನುಭವಿಸಬೇಕಾಗುತ್ತದೆ. ಅಂತೆಯೇ ವೀರಶೈವ ಸಿದ್ಧಾಂತದಲ್ಲಿ ದೇವರನ್ನು ನೇರವಾಗಿ ಮುಟ್ಟಬೇಕಾದರೆ ಅರ್ಥಾತ ಅನುಭವಿಸಬೇಕಾದರೆ ಸಮಾನ,ಸುಬುದ್ಧಿ,ಸುಚಿತ ಮತ್ತು ನಿರಹಂಕಾರಗಳೆಂಬ ಹಸ್ತಗಳು ಬೇಕೆಂಬುದಾಗಿ ಹೇಳಲಾಗಿದೆ. ಸ್ಥೂಲ ಶರೀರಗಳಲ್ಲಿಯ ಹಸ್ತಗಳು ದೇವರ ವಿಗ್ರಹವನ್ನು ಸ್ಪರ್ಶಮಾಡಿದರೆ ಅಂತರಂಗದ ಸಮಾನ ಸುಚಿತ್ತಾದಿ ಹಸ್ತಗಳು ನೇರವಾಗಿ ದೇವರನ್ನು ಮುಟ್ಟಬಲ್ಲವು. ದೇವರನ್ನು ಮುಟ್ಟಬಲ್ಲ ಈ ಮನ,ಬುದ್ಧಿ,ಚಿತ್ತ ಅಹಂಕಾರಗಳು ಪರಿಶುದ್ಧಗೊಂಡಾಗ ಅವುಗಳೇ ಅಂತರಂಗದ ಹಸ್ತಗಳಾಗಿ ಪರಿಣಮಿಸುವವು. ಅಂತೆಯೇ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಈ ಅಂತ: ಕರಣ ಶುದ್ಧಿಗೆ ಆದ್ಯತೆಯನ್ನು ಕೊಟ್ಟಿದಾರೆ.

ಯಾರ ಅಂತ: ಕರಣಗಳು ಪರಿಶುದ್ಧಗಳಾಗಿವೆಯೋ ಅವರ ಶರೀರ ಮತ್ತು ವಾಣಿಗಳೆಂಬ ಬಹಿ: ಕರಣಗಳೂ ಸಹ ಪರಿಶುದ್ಧಗಳೇ ಆಗಿರುತ್ತವೆ. ಹೀಗೆ ಈ ಅಂತ: ಕರಣ ಬಹಿ: ಕರಣಗಳ ಪರಿಶುದ್ಧತೆಯೇ ಭಗವಂತನ ಒಲುಮೆಗೆ ಕಾರಣವಾಗುವವು. "ಎಂತೊಲಿವನೊ ಕರಣತ್ರಯದ ದೋಷಮಿರೆ" ಎಂಬ ಉಕ್ತಿಯಲ್ಲಿ ಶ್ರೀ ಮನ್ನಿಜಗುಣಶಿವಯೋಗಿಗಳು ಮತು "ಕಳಬೇಡ ಕೊಲಬೇಡ" ಎಂಬ ವಚನದಲ್ಲಿ ಶ್ರೀ ಮಹಾತ್ಮಾ ಬಸವೇಶ್ವರರು ಸಹ ಈ ಅಂತರಂಗ ಬಹಿರಂಗಗಳ ಪರಿಶುದ್ಧಿಗೆ ಆದ್ಯತೆ ಕೊಟ್ಟಿರುವುದನ್ನು ಕಾಣುತ್ತೇವೆ.

ಆದ್ದರಿಂದ ಈ ಅಂತರಂಗ ಬಹಿರಂಗಗಳ ಪರಿಶುದ್ಧಿಯನ್ನು ಕಾಪಾಡಿಕೊಂಡು ಪ್ರತಿಯೊಬ್ಬರು ಭಗವಂತನ ಕೃಪೆಗೆ ಪಾತ್ರರಾಗಬೇಕೆಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಮಹಾಸನ್ನಿಧಿಯವರು ತಮ್ಮ ಆಶೀರ್ವಚನದಲ್ಲಿ ವಿವರಿಸಿದರು.

ಬೀದರ ಜಿಲ್ಲೆ

ಭಾವೈಕ್ಯತೆ– ಸಮನ್ವಯತೆಯೇ ನಿಜವಾದ ಧರ್ಮ



ಹುಮನಾಬಾದ : ಭಾರತ ದೇಶವು ವಿವಿಧ ಧರ್ಮ, ವಿವಿಧ ಭಾಷೆ ಹಾಗೂ ವಿವಿಧ ಪರಂಪರೆಗಳ ಸಂಗಮ ಭೂಮಿ. ವಿವಿಧತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡು ಧರ್ಮ ಸಮನ್ವಯತೆ ಸಾಧಿಸಿರುವುದೇ ನಿಜವಾದ ಧರ್ಮ.

ಭಾರತದಲ್ಲಿ ಹಿಂದೂ, ಮುಸಲ್ಮಾನ್, ಬೌದ್ಧ, ಜೈನ, ಕ್ರಿಶ್ಚಿಯನ, ಸಿಖ್ ಇವುಗಳು ಈ ದೇಶದಲ್ಲಿಯ ಪ್ರಮುಖ ಧರ್ಮಗಳು. ಎಲ್ಲ ಧರ್ಮಗಳು ಮನುಕುಲದ ಉದ್ಧಾರಕ್ಕಾಗಿಯೇ ಸ್ಥಾಪನೆಗೊಂಡಿವೆ. ಅಂತೆಯೇ ಎಲ್ಲ ಧರ್ಮಗಳ ಪ್ರತಿಷ್ಠಾಪನಾ ಚಾರ್ಯರು, ಪ್ರವಾದಿಗಳು, ಸಂತ–ಮಹಂತರು ಅನಾದಿ ಕಾಲದಿಂದಲೂ ಸರ್ವರಲ್ಲಿ ಸಮನ್ವಯತೆಯನ್ನು ಮೂಡಿಸಿ, ಬೆಳೆಸುತ್ತಾ ಬಂದಿದ್ದಾರೆ.

ಅನೇಕತೆಯಲ್ಲಿ ಏಕತೆಯನ್ನು ಸಾಧಿಸಿಕೊಂಡು ಹೋಗುತ್ತಿರುವ ಈ ಭಾರತವು ಜಗತ್ತಿನ ಜಗದ್ಗುರು ಸ್ಥಾನದಲ್ಲಿ ವಿರಾಜಮಾನವಾಗಿದೆ. ವಿಶ್ವದ ಎಲ್ಲ ಮಾನವರಿಗೆ ಚರಿತ್ರೆ, ನೀತಿ,ತತ್ವಜ್ಞಾನಗಳ ಸಂದೇಶವನ್ನು ಕೊಟ್ಟ ದೇಶವೇ ಭಾರತವು. ಈ ದೇಶದ ಪಾರಂಪರಿಕವಾದ ಈ ಘನತೆ ಗೌರವಗಳನ್ನು ಕಾಪಾಡಿಕೊಂಡು ಹೋಗುವುದು ದೇಶದ ಸರ್ವ ಧರ್ಮಗುರುಗಳ ಹಾಗೂ ಧರ್ಮಾನುಯಾಯಿಗಳ ಆದ್ಯಕರ್ತವ್ಯವಾಗಿದೆ.

ವಸ್ತ್ರದಲ್ಲಿಯ ಹಾಸುಹೊಕ್ಕುಗಳಂತೆ ಈ ದೇಶದ ಎಲ್ಲ ಧರ್ಮಿಯರು ಸಹೋದರ ಭಾವದಿಂದ ಬಾಳುತ್ತ ಬಂದಿದ್ದಾರೆ. ಕೆಲವೊಮ್ಮೆ ಸಣ್ಣಪುಟ್ಟ ಕಾರಣಗಳಿಂದ ಈ ಅಖಂಡತೆಗೆ ಕೆಲವು ಕಡೆ ಆಗಾಗ ಧಕ್ಕೆ ಉಂಟಾಗುತ್ತಿರುವುದು ಅತ್ಯಂತ ನೋವಿನ ವಿಷಯವಾಗಿರುತ್ತದೆ. ಆದ ಕಾರಣ ಸರ್ವರಿಗೂ ಆಶ್ರಯವನ್ನು ಕೊಟ್ಟಿರುವ ಭಾರತ ದೇಶವನ್ನು ರಕ್ಷಿಸುವುದು ಸರ್ವರ ಹೊಣೆಯಾಗಿರುತ್ತದೆ. ಪ್ರತಿಯೊಂದು ಧರ್ಮದವರು ಸ್ವಧರ್ಮನಿಷ್ಠೆ ಮತ್ತು ಪರಧರ್ಮ ಸಹಿಷ್ಣುತೆ ಯನ್ನು ಬೆಳೆಸಿಕೊಂಡು ಹೋದಲ್ಲಿ ಪರಂಪರೆಯಿಂದ ಬಂದ ರಾಷ್ಟ್ರೀಯ ಭಾವೈಕ್ಯತೆಯನ್ನು ಉಳಿಸಿ–ಬೆಳೆಸಿ ಕೊಂಡು ಹೋಗಲು ಸಾಧ್ಯವಾಗುತ್ತದೆ.

ಪ್ರತಿಯೊಬ್ಬರು ತಮ್ಮ ತಮ್ಮ ಧರ್ಮಗಳಿಗೆ ಆದ್ಯತೆಯನ್ನು ಕೊಟ್ಟಂತೆ ಸರ್ವರೂ ರಾಷ್ಟ್ರಧರ್ಮಕ್ಕೆ ಪ್ರಾಧಾನ್ಯತೆಯನ್ನು ಕೊಡಬೇಕು. ರಾಷ್ಟ್ರವು ಸುರಕ್ಷಿತವಾಗಿರಬಲ್ಲವು. ಆದ್ದರಿಂದ ಸರ್ವಧರ್ಮಾನುಯಾಯಿಗಳು ರಾಷ್ಟ್ರೀಯ ಭಾವನೆಯನ್ನು ಮತ್ತು ಧರ್ಮ ಸಮನ್ವಯ ಭಾವನೆಯನ್ನು ಬೆಳೆಸಿಕೊಂಡು ಹೋಗಬೇಕೆಂಬ ದಿವ್ಯ ಸಂದೇಶವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಜಗದ್ಗುರುಗಳ ಒಳನೇ ಜನ್ಮದಿನೋತ್ಸವದ ನಿಮಿತ್ತವಾಗಿ ಹಮ್ಮಿಕೊಂಡಿರುವ ...ದ್ಭಾವನಾ ಪಾದಯಾತ್ರೆಯಲ್ಲಿ ರಾಷ್ಟ್ರವನ್ನುದ್ದೇಶಿಸಿ ಈ ಸಂದೇಶವನ್ನು ...ರುಪಾಲಿಸಿದರು.

ದೇವರನ್ನು ಪ್ರೀತಿಸುವುದೇ ಭಕ್ತಿ: ಕಾಶಿ ಜಗದ್ಗುರು

ಮಳಖೇಡ, 20- ಪ್ರತಿಯೊಬ್ಬರಲ್ಲಿ ಪ್ರೀತಿಸುವ ಗುಣ ಇರುವುದರಿಂದ ಪ್ರೀತಿಯ ವಿವಿಧ ರೂಪಗಳನ್ನು ಕಾಣುತ್ತೇವೆ. ಯಾವಾಗ ಪ್ರೀತಿಯನ್ನು ದೇವರ ಮೇಲೆ ಮಾಡುತ್ತೇವೆಯೋ ಅದುವೇ ಭಕ್ತಿ ಎಂದು ಕರೆಯಿಸಿ ಕೊಳ್ಳುವುದು ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಮಳಖೇಡದ ಭಂಗಿಮಠದಲ್ಲಿ ಶ್ರಾವಣ ಮಾಸ ನಿಮಿತ್ಯ ಹಮ್ಮಿಕೊಂಡಿದ್ದ ಸಿದ್ಧಾತ ಖಾಯಣಿ ಲಿಂಗಧಾರಣ ಸ್ಥಲ ಕುರಿತುರ ಅವರು ಮಾತನಾಡಿದರು.

ಲೌಕಿಕ ವ್ಯಕ್ತಿ ಹಾಗೂ ಪ್ರಸಂಗಳನ್ನು ಪ್ರೀತಿಸುವವನು ಅವ್ಯಶಗಳನ್ನು ಕಳೆದುಕೊಂಡವನು ನಿರಾಶನಾಗುತ್ತಾನೆ. ಆದರೆ ದೇವರ ಪ್ರೀತಿಯನ್ನು ಜೀವನ ದಲ್ಲಿ ನಿರಾಶೆ ಮಾಡುವದಿಲ್ಲ.

ಆದಕಾರಣ ಸಂಸಾರದ ಮೇಲಿನ ಅತಿಯಾದ ಪ್ರೀತಿಯನ್ನು ಸ್ವಲ್ಪ ಕಡಿಮೆ ಮಾಡಿ, ಅದನ್ನೆ ದೇವರು ಮತ್ತು ಧರ್ಮಕ್ಕಾಗಿ ಮೀಸಲಾಗಿಡ ಬೇಕು. ಅಂದಾಗ ಮಾತ್ರ ಜೀವನದಲ್ಲಿ ತೃಪ್ತಿ ಎಂದರು. ಗಂಗಾಧರ ಶಿವಾಚಾರ್ಯರು ಪ್ರಸ್ತಾವಿಕವಾಗಿ ಮಾತನಾಡಿದರು.

ಸಂಯುಕ್ತ ಕರ್ನಾಟಕ
ಕಲಬುರ್ಗಿ | 21-8-2010 3

ಅಂತರಂಗ ಶುದ್ಧಿಯೇ ಭಕ್ತನ ಅರ್ಹತೆ



ಹುಮನಾಬಾದ : ಮನ, ಬುದ್ಧಿ, ಚಿತ್ತ ಮತ್ತು ಅಹಂಕಾರಗಳೆಂಬ ಅಂತ: ಕರಣದ ಅಥವಾ ಅಂತರಂಗ ಶುದ್ಧಿಯೇ ಭಕ್ತನಲ್ಲಿರಬೇಕಾದ ಮೊದಲ ಅರ್ಹತೆ ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಯ ಪಡಿಸಿದರು. ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ ವೇದಿಕೆಯಿಂದ ಈ ವಿಚಾರವನ್ನು ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿ ಬಕ್ತಸ್ಥಲದಲ್ಲಿ ಭಕ್ತನ ಪ್ರಥಮ ಅರ್ಹತೆಯನ್ನು ಅಂತ: ಕರಣದ ಶುದ್ಧಿಯನ್ನು ಹೇಳುವದಕ್ಕಾಗಿಯೇ ಪಿಂಡಸ್ಥಲವನ್ನು ಪ್ರತಿಪಾದಿಸಲಾಗಿದೆ. ಬಕ್ತನಲ್ಲಿರಬೇಕಾದ ಹದಿನೈದು ಪ್ರಕಾರದ ಅರ್ಹತೆಗಳಲ್ಲಿ ಈ ಅಂತ: ಕರಣದ ಶುದ್ಧಿಯು ಪ್ರಥಮ ಅರ್ಹತೆ ಎಂದು ಪರಿಗಣಿಸಲಾಗಿದೆ. ಒಳಗೆ ಇದ್ದು ಕೊಂಡು ತಮ್ಮ ಲೌಕಿಕ ಇಲ್ಲವೆ ಆದ್ಯಾತ್ಮಿಕ ವಯವಹಾರಗಳಿಗೆ ಯಾವುದು ಸಾಧನವಾಗಿರುವುದೋ ಅದಕ್ಕೆನೆ ಅಂತ: ಕರಣ ವೆಂದು ಕರೆಯುತ್ತಾರೆ.

ಪ್ರತಿಯೊಬ್ಬ ಮನುಷ್ಯನಲ್ಲಿರುವ ಮನಸ್ಸು ಬುದ್ಧಿಚಿತ್ತ ಮತ್ತು ಅಹಂಕಾರಗಳು ಅಂತ: ಕರಣಗಳಗಿದೆ. ಇವುಗಳು ನಾವು ಮಾಡುವ ಪಾದ ಕರ್ಮಗಳಿಂದ ಮಲಿನಗೊಳ್ಳುತ್ತವೆ.

ಪೂಣ್ಯ ಪಾಪಗಳು ಅಂತ: ಕರಣದಲ್ಲಿಯೇ ಸಂಗ್ರಹವಾಗುವವು. ಪಾಪ ಸಂಗ್ರಹವಾದರೆ ಅದು ಮಲಿನಗೊಳಗಳ್ಳುವುದು ಮತ್ತು ಪೂಣ್ಯ ಸಂಗ್ರಹವಾದರೆ ಅದು ಪರಿಶುದ್ಧಗೊಳ್ಳುವುದು. ಅಂತೆಯೋ ಅನೇಕ ಜನ್ಮಗಳಲ್ಲಿ ಮಾಡಿದ ಪಾಪ ಕರ್ಮಗಳಿಂದ ದುಷಿತವಾದ ಅಂತ: ಕರಣವನ್ನು ಪರಿಶುದ್ಧಗೊಳಿಸಲು ಮತ್ತೆ ಅನೇಕ ಜನ್ಮಗಳಲ್ಲಿ ಪೂಣ್ಯ ಕರ್ಮಗಳನ್ನೇ ಮಾಡಬೇಕಾಗುವುದು. ನಮ್ಮ ಉತ್ಕೃಷ್ಟವಾದ ಪೂಣ್ಯಸಂಗ್ರಹ ವಾಗುತ್ತಿದ್ದಂತೆ ನಮ್ಮ ಮೊದಲಿನ ಪಾಪವು ಕ್ರಮೇಣ ಕ್ಷಯಿಸುತ್ತ ಸಂಪೂರ್ಣ ಇಲ್ಲವಾಗಲು ಸಾಧಕನ ಅಂತ: ಕರಣವು ಪರಿಶುದ್ಧವಾಗುವುದು.

ನಾವು ಭಗವಂತನನ್ನು ಮುಟ್ಟಲು ನಮ್ಮ ಅಂತ: ಕರಣವೇ ಪ್ರಮುಖ ಸಾಧನಗವು. ನಾವು ಶರೀರದಿಂದ ದೇವರ ವಿಗ್ರಹವನ್ನು ಮುಟ್ಟಬಹುದು. ಆದರೆ ಅದರಲ್ಲಡಗಿರುವ ದೇವತ್ವವನ್ನು ಮನಸ್ಸಿನಿಂದಲೇ ಅನುಭವಿಸಬೇಕಾಗುತ್ತದೆ. ಅಂತೆಯೇ ವೀರಶೈವ ಸಿದ್ಧಾಂತದಲ್ಲಿ ದೇವರನ್ನು ನೇರವಾಗಿ ಮುಟ್ಟಬೇಕಾದರೆ ಅರ್ಥಾತ ಅನುಭವಿಸಬೇಕಾದರೆ ಸಮಾನ,ಸುಬುದ್ಧಿ,ಸುಚಿತ ಮತ್ತು ನಿಹಂಕಾರಗಳೆಂಬ ಹಸ್ತಗಳು ಬೇಕೆಂಬುದಾಗಿ ಹೇಳಲಾಗಿದೆ. ಸ್ಥೂಲ ಶರೀರಗಳಲ್ಲಿಯ ಹಸ್ತಗಳು ದೇವರ ವಿಗ್ರಹವನ್ನು ಸ್ಪರ್ಶಮಾಡಿದರೆ ಅಂತರಂಗದ ಸಮಾನ ಸುಚಿತ್ತಾದಿ ಹಸ್ತಗಳು ನೇರವಾಗಿ ದೇವರನ್ನು ಮುಟ್ಟಬಲ್ಲವು. ದೇವರನ್ನು ಮುಟ್ಟಬಲ್ಲ ಈ ಮನ,ಬುದ್ಧಿ,ಚಿತ್ತ ಅಹಂಕಾರಗಳು ಪರಿಶುದ್ಧ ಗೊಂಡಾಗ ಅವುಗಳೇ ಅಂತರಂಗದ ಹಸ್ತಗಳಾಗಿ ಪರಿಣಮಿಸುವವು. ಅಂತೆಯೇ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಈ ಅಂತ: ಕರಣ ಶುದ್ಧಿಗೆ ಆದ್ಯತೆಯನ್ನು ಕೊಟ್ಟಿದಾರೆ.

ಯಾರ ಅಂತ: ಕರಣಗಳು ಪರಿಶುದ್ಧಗಳಾಗಿವೆಯೋ ಅವರ ಶರೀರ ಮತ್ತು ವಾಣಿಗಳೆಂಬ ಬಹಿ: ಕರಣಗಳೂ ಸಹ ಪರಿಶುದ್ಧಗಳೇ ಆಗಿರುತ್ತವೆ. ಹೀಗೆ ಈ ಅಂತ: ಕರಣ ಬಹಿ: ಕರಣಗಳ ಪರಿಶುದ್ಧತೆಯೇ ಭಗವಂತನ ಒಲುಮೆಗೆ ಕಾರಣವಾಗುವವು. "ಎಂತೊಲಿವನೊ ಕರಣತ್ರಯದ ದೋಷಮಿರೆ" ಎಂಬ ಉಕ್ತಿಯಲ್ಲಿ ಶ್ರೀ ಮನ್ನಿಜಗುಣಶಿವಯೋಗಿಗಳು ಮತು "ಕಳಬೇಡ ಕೊಲಬೇಡ" ಎಂಬ ವಚನದಲ್ಲಿ ಶ್ರೀ ಮಹಾತ್ಮಾ ಬಸವೇಶ್ವರರು ಸಹ ಈ ಅಂತರಂಗ ಬಹಿರಂಗಗಳ ಪರಿಶುದ್ಧಿಗೆ ಆದ್ಯತೆ ಕೊಟ್ಟಿರುವುದನ್ನು ಕಾಣುತ್ತೇವೆ.

ಆದ್ದರಿಂದ ಈ ಅಂತರಂಗ ಬಹಿರಂಗಗಳ ಪರಿಶುದ್ಧಿಯನ್ನು ಕಾಪಾಡಿಕೊಂಡು ಪ್ರತಿಯೊಬ್ಬರು ಭಗವಂತನ ಕೃಪೆಗೆ ಪಾತ್ರರಾಗಬೇಕೆಂಬ ವಿಛಾರವನ್ನು ಶ್ರೀ ಕಾಶಿ ಜಗದ್ಗುರು ಮಹಾಸನ್ನಿಧಿಯವರು ತಮ್ಮ ಆಶೀರ್ವಚನದಲ್ಲಿ ವಿವರಿಸಿದರು.

ಭಕ್ತನು ವಿವೇಕಿ ಯಾಗಿರಬೇಕು



ಸಂಜೆವಾಣಿ ವಾರ್ತೆ ಹುಮನಾಬಾದ, ಆ.22:ಭಕ್ತಸ್ಥಲದ ಸಾಧಕನು ಆತ್ಮ ಮತ್ತು ಅನಾತ್ಮಗಳ ವಿವೇಕವನ್ನು ಪಡೆದುಕೊಂಡವನಾಗಿರಬೇಕು ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು. ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ವೇದಿಕೆಯಿಂದ ಈ ವಿಚಾರವನ್ನು ಹೇಳಿದರು.

ಶ್ರೀ ಸಿದ್ಧಾಂತ ಶಿಖಾಮಣಿಯ ಭಕ್ತಸ್ಥಲ ಎರಡನೇ ಅವಾಂತರಸ್ಥಲವಾದ ಪಿಂಡಜ್ಞಾನ ಸ್ಥಲದಲ್ಲಿ ಶರೀರ ಮತ್ತು ಆತ್ಮಗಳ ವಿವೇಕವನ್ನು ಮಾಡಿಕೊಂಡವನೇ ಪಿಂಡಜ್ಞಾನಿಯೆಂದು ಹೇಳಲಾಗಿದೆ. ಪ್ರಾಯ: ಶಾಸ್ತ್ರ ಸಂಸ್ಕಾರವಿಲ್ಲದ ಬಹಳಷ್ಟು ಜನರು ಶರೀರವನ್ನೇ ಆತ್ಮವೆಂಬುದಾಗಿ ತಿಳಿದುಕೊಂಡಿರುತ್ತಾರೆ. ಆತ್ಮವೆಂದರೆ ಜನನ ಮರಣಾದಿಯಾದ ವಿಕಾರವೂ ಇಲ್ಲದ ಸಚ್ಚಿದಾನಂದ ಸ್ವರೂಪವಾದ ಪರಮ ತತ್ವವೇ ಆತ್ಮವು. ಇಂತಹ ಆತ್ಮ ತತ್ವವು ಪ್ರತಿಯೊಬ್ಬರ ದೇಹದಲ್ಲಿ ಇದ್ದೆ ಇರುತ್ತದೆ.

ಆ ಚೈತನ್ಯರೂಪವಾದ ಆತ್ಮದ ಅಸ್ತಿತ್ವದಿಂದಲೇ ಈ ಜಡವಾದ ದೇಹವೂ ಸಹಿತ ಎಲ್ಲ ಕ್ರೀಯೆಗಳನ್ನು ಮಾಡುತ್ತಿರುತ್ತವೆ. ಹೀಗಿದ್ದರೂ ಆತ್ಮ ಅನಾತ್ಮಗಳ ವಿವೇಕವಿಲ್ಲದ ಜನರು ಕಾಣುವ ದೇಹವನ್ನೇ ತಾವೆಂದು ಅದುವೇ ಆತ್ಮವೆಂದು ಭ್ರಮೆಗೆ ಒಳಗಾಗಿ ಸಂಪೂರ್ಣವಾಗಿ ಬೆಳೆದು ನಿಂತಾಗ ವಿಪರಿಣಮತೆ ಎನ್ನುವರು. ಮುಂದೆ ಕ್ರಮೇಣ ವಯಸ್ಸಾದಂತೆ ಶರೀರವು ಕ್ಷೀಣಗೊಂಡಾಗ ಅಪಕ್ಷೀಯತೆ ಎನ್ನುವರು.

ಮುಂದೊಂದು ದಿನ ಒಳಗಿರುವ ಜೀವಾತ್ಮನು ದೇಹವನ್ನು ತ್ಯಜಿಸಿಹೋದ ಮೇಲೆ ಈ ದೇಹವು ಪಂಚಭೂತಗಳಲ್ಲಿ ಲಯವಾಗುವುದನ್ನು ಕಂಡು ವಿನಶ್ಯತಿ ಎನ್ನುವರು. ಇಂತಹ ಆರು ವಿಕಾರಗಳಿಂದ ಕೂಡಿದ ದೇಹವು ಅನಾತ್ಮರೂಪವಾದದ್ದು, ಇದಕ್ಕಿಂತಲೂ ಭಿನ್ನವಾಗಿ ಸದಾ ಸಚ್ಚಿದಾನಂದ ಸ್ವರೂಪವಾದದ್ದೇ ಆತ್ಮ ತತ್ವವು. ಹೀಗೆ ಆತ್ಮ ಅನಾತ್ಮಗಳ ವಿವೇಕವನ್ನು ಮಾಡಿಕೊಂಡವನೇ ಪಿಂಡಸ್ಥಲದ ಸಾಧಕನು. ಆದ ಕಾರಣ ಸಂಸಾರದಲ್ಲಿ ಬದುಕುತ್ತಿರುತ್ತಾರೆ.

ಪ್ರತಿಯೊಂದು ಶರೀರಕ್ಕೆ ಅಸ್ತಿ, ಜಾಯತೆ, ವಿವರ್ಧತೆ, ವಿಪರಿಣಮತೆ, ಅಪಕ್ಷೀಯತೆ ಮತ್ತು ವಿನಶ್ಯತಿಗಳೆಂಬ ಆರು ವಿಕಾರಗಳು ಅಂಟಿಕೊಂಡಿರುತ್ತವೆ. ತಾಯಿಯಗರ್ಭದಲ್ಲಿ ಶಿಶು ಒಡಮೂಡಿದಾಗ ಅದಕ್ಕೆ ಅಸ್ತಿ ಎಂದು ಕರೆಯುತ್ತಾರೆ. ಮುಂದೆ ಒಂಬತ್ತು ತಿಂಗಳ ನಂತರ ಅದು ತಾಯಿಯ ಗರ್ಭದಿಂದ ಹೊರಬಂದಾಗ ಜಾಯತೇ ಎಂದು. ನಂತರ ತಾಯಿಯ ಹಾಲು ಕುಡಿದು ಅನ್ನಾದಿಗಳನ್ನು ಸೇವಿಸಿ ಬೆಳೆದಾಗ ವಿವರ್ಧತೆಯೆಂದು ಭಕ್ತನಾದವನೂ ಸಹ ಆತ್ಮಾನಾತ್ಮ ವಿವೇಕಿಯಾಗಿರಬೇಕೆಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ದ್ವೇಷದಿಂದ ಏನೂ ಸಾಧಿಸಲಾಗದು



ಕಾಶಿ ಜಗದ್ಗುರುಗಳ ವಾಣಿ

ಸೇಡಂ: ದ್ವೇಷದಿಂದ ಏನನ್ನೂ ಸಾಧಿಸಲಾಗದು, ಮೈತ್ರಿಯಿಂದ ಅಗಾಧ ಸಾಧನೆ ಮಾಡಬಹುದು ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನುಡಿದರು.

ಅವರು ತಾಲೂಕಿನ ಮಳಖೇಡ ಭಂಗಿ ಮಠದಲ್ಲಿ ಹಾಗೂ ಸೇಡಂನ ಕೊತ್ತಲ ಬಸವೇಶ್ವರ ದೇವಾಲಯದಲ್ಲಿ ಶ್ರಾವಣ ಮಾಸದ ಪ್ರವಚನದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಬಹುಜನ ಹಿತಾಯ ಬಹುಜನ ಸುಖಾಯ ಎಂಬ ಬದುಕುವ ಸಂಸ್ಕೃತಿ ಭಾರತೀಯರದಾಗಿದೆ. ಇಂತಹ ಸಂಸ್ಕೃತಿಯ ವಾರಸುದಾರರಾದ ನಾವು ಸಮಸ್ತರನ್ನು ಮೈತ್ರಿಯಿಂದ ನೋಡಬೇಕು.ಅಂದಾಗ ವಿಶ್ವ ಭ್ರಾತೃತ್ವ ಮೂಡುತ್ತದೆ.ಬಹಳಷ್ಟು ಜನರನ್ನು ವೈರತ್ವ ದೃಷ್ಟಿಯಿಂದ ನೋಡದೆ ನಮ್ಮವರು ಎಂದು ಭಾವಿಸಿ ನಡೆಯಬೇಕು. ಇದುವೇ ಮೌಲ್ಯದ ಬದುಕು ಅಂತಹ ಬದುಕನ್ನು ನಡೆಸಬೇಕು ಎಂದು ನುಡಿದರು.

ಸಂಯುಕ್ತ ಕರ್ನಾಟಕ
ಕಲಬುರ್ಗಿ | 24-8-2010 3
ಬೀದರ ಜಿಲ್ಲೆ


ನನ್ನದೆನ್ನುವದೆಲ್ಲವೂ ಅನಾತ್ಮ



ಹುಮನಾಬಾದ: ನಾವು ನಮ್ಮ ಬದುಕಿನಲ್ಲಿ ನಾನು ಮತ್ತು ನನ್ನದು ಎಂಬ ಎರಡು ಶಬ್ದಗಳನ್ನು ಯಾವಾಗಲೂ ಬಳಸುತ್ತರುತ್ತೇವೆ. ಇವುಗಳಲ್ಲಿ ನಾನು ಎಂಬುದು ಆತ್ಮದ್ಯೋತಕ ವಾದರೆ ನನ್ನದೆಂಬುವುದೆಲ್ಲವೂ ಅನಾತ್ಮ ಪ್ರತೀಕವಾಗಿರುತ್ತದೆ. ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ತಮ್ಮ ಆಶಿರ್ವಚನದಲ್ಲಿ ತಿಳಿಸಿದರು. ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ವೇದಿಕೆಯಿಂದ ಈ ವಿಚಾರವನ್ನು ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿಯ ಪಿಂಡಜ್ಞಾನ ಸ್ಥಲದಲ್ಲಿ ಆತ್ಮ-ಅನಾತ್ಮಗಳ ವಿವೇಕವನ್ನು ತಿಳಿಸುತ್ತಾರೆ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶರೀರ,ಇಂದ್ರಿಯಗಳು,ಮನಸ್ಸು,ಚಿತ್ತ ಮತ್ತು ಅಹಂಕಾರಗಳು ಅನಾತ್ಮ ತತ್ವಗಳಾಗಿವೆ. ಆದರೆ ಆತ್ಮ ತತ್ವವು ಇವೆಲ್ಲವುಗಳಿಗಿಂತಲೂ ಭಿನ್ನವಾಗಿದ್ದು ಶುದ್ಧವಾದ ಅಹಂವೃತ್ತಿಗೆ ಮಾತ್ರ ವೇದ್ಯವಾಗಿರುತ್ತದೆ ಎಂಬ ವಿಚಾರವನ್ನು ತಿಳಿಸಿದ್ದಾರೆ.

ಶರೀರಾದಿ ಅನಾತ್ಮ ತತ್ವಗಳೊಂದಿಗೆ ಯಾವಾಗಲೂ ಜೀವಾತ್ಮನು ತಾದಾತ್ಮ್ಯ ಭಾವನಿಯನ್ನು ಹೊಂದಿರುವುದರಿಂದ ಅವುಗಳೇ ತಾನೆಂಬುದಾಗಿ ಭ್ರಮಿತನಾಗಿರುತ್ತಾನೆ. ನೋಡುವ ಕೇಳುವ,ಹೋಗುವ,ಬರುವ,ಕೊಡುವ,ಕೊಳ್ಳುವ ಮುಂತಾದ ವ್ಯವಾರಗಳು ಕಣ್ಣು,ಕಿವಿ,ಕಾಲು,ಕೈ ಮುಂತಾದ ಇಂದ್ರಿಗಳ ಧರ್ಮಗಳಾಗಿರುತ್ತವೆ. ಈ ಇಂದ್ರಿಯ ಧರ್ಮಗಳನ್ನು ತನ್ನ ಆತ್ಮದ ಮೇಲೆ ಆರೋಪ ಮಾಡಿಕೊಂಡು ನಾನು ನೋಡುತ್ತೇನೆ. ನಾನು ಕೆಳುತ್ತೇನೆ, ನಾನು ಹೋಗುತ್ತೇನೆ, ನಾನು ಕೊಡುತ್ತೇನೆ ಮುಂತಾದ ವ್ಯವಹಾರಿಸುತ್ತ ಇಂದ್ರಿಯ ಧರ್ಮಗಳೊಂದಿಗೆ ತಾದಾತ್ಮ್ಯನಾಗುವನ್ನು. ಒಮ್ಮೆಮ್ಮೆ ನನ್ನ ಕಣ್ಣಿಗೆ ಕಾಣುವುದೆಲ್ಲ, ನನ್ನ ಕಿವಿಗೆ ಕೇಳುವುದೆಲ್ಲ ಮುಂತಾಗಿ ವ್ಯವಹರಿಸುವುದನ್ನು ಸಹ ನಾವು ಕಾಣುತ್ತೇವೆ.ಇಂದ್ರಿಯಾದಿ ಅನಾತ್ಮಗಳಿಗೆ ಒಮ್ಮೆ ನಾನೆಂದು ವ್ಯವಹರಿಸಿಮತ್ತೊಮ್ಮೆ ಅವುಗಳು ನನ್ನವುಗಳು ಎಂದು ಹೇಳುತ್ತಾನೆ. ಹೀಗೆ ಯಾವುದರ ಮೇಲೆ ನನ್ನದು,ಎಂಬ ಶಬ್ದ ಪ್ರಯೋಗವಾಗುವುದೋ ಅದೆಲ್ಲವೂ ಅನಾತ್ಮವೇ ಆಗಿರುತ್ತದೆ. ನನ್ನ ಮನೆ,ನನ್ನ ಹೊಲ,ನನ್ನ ದೇಹ,ನನ್ನ ಇಂದ್ರಿಯಗಳು, ನನ್ನ ಮನಸ್ಸು ಮತ್ತು ನನ್ನ ಬುದ್ಧಿ ಎಂದು ವ್ಯವಹರಿಸುವಾಗ ಯಾವುದು ನನ್ನ ದೆಂಬ ವ್ಯವಃಆರಕ್ಕೆ ವಿಷಯ ವಾಗುವುದೋ ಅದು ನನಗಿಂತಲೂ ಭಿನ್ನವಾಗಿ ಅನಾತ್ಮರೂಪವಾಗಿರುತ್ತದೆ. ಆದ್ದರಿಂದ ಅಹಂ ಅಂದರೆ ನಾನು ಎಂಬ ಶುದ್ಧ ವೃತ್ತಿಗೆ ವೇದ್ಯವಾದದ್ದೇ ಆತ್ಮತತ್ವವು. ಆದ ಕಾರಣ ಆತ್ಮ ತತ್ವವನ್ನು ಅರಿಯಲು ಶದ್ಧವಾದ ಅಹಂವೃತ್ತಿಯೇ ಮಾನದಂಡವು. ಅಂತೆಯೇ ನನ್ನದೆನ್ನುವುದೆಲ್ಲವೂ ಅನಾತ್ಮವೆಂದು ತಿಳಿದುಕೊಂಡು ಅವುಗಳ ಮೇಲಿನ ಅತಿಯಾದ ಆಸಕ್ತಿಯನ್ನು ಕ್ರಮೇಣ ಕಡಿಮೆ ಮಾಡಿಕೊಳ್ಳುತ್ತ ಆತ್ಮ ನಿಷ್ಠೆಯನ್ನು ಬೆಳೆಸಿಕೊಳ್ಳಬೇಕು. ಹೀಗೆ ಆತ್ಮ ಅನಾತ್ಮಗಳ ವಿವೇಕವನ್ನು ಮಾಡಿಕೊಂಡು ದೇಹಾದಿಗಳಿಗಿಂತಲೂ ಆತ್ಮನು ಭಿನ್ನವಾಗಿರುತ್ತಾನೆ, ಮತ್ತು ಆ ಆತ್ಮನಿಗಿಂತಲೂ ಪರಮಾತ್ಮನು ಸಗ ಭಿನ್ನವಾಗಿದ್ದು ಜೀವಾತ್ಮನಿಗೆ ಪ್ರೇರಕನಾಗಿರುತ್ತಾನೆ. ಎಂಬ ವಿವೇಕವು ಯಾರಲ್ಲಿ ಜಾಗೃತವಾಗುವುದೋ ಅವನೇ ಪಿಂಡಜ್ಞಾನಿ ಎಂದು ಕರೆಸಿಕೊಳ್ಳುವನೆಂಬ ವಿಚಾರವ್ನನು ಶ್ರೀ ಸನಿಧಿಯವರು ವಿವಿಧ ಯುಕ್ತಿ ದೃಷ್ಟಾಂತಗಳೊಂದಿಗೆ ತಿಳಿಹೇಳಿದರು.



ಆತ್ಮದ ಅರಿವು ನಮಗಾಗಬೇಕು

ನಮ್ಮ ದೈನಂದಿನ ಬದುಕಿನಲ್ಲಿ ಹೊಲ, ಮನೆ, ಧನ, ಶರೀರಾದಿಗಳನ್ನು ಪ್ರೀತಿಸುತ್ತೇವೆಂಬುದು ಸರ್ವಾನುಭವ ಸಿದ್ದವಾಗಿದ್ದರೂ ಸರ್ವರ ಪರಮ ಪ್ರೇಮಕ್ಕೆ ಆಸ್ಪದವಾದದ್ದು ಆತ್ಮವೇ.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಶರೀರದೊಳಗಿರುವ ಆತ್ಮ ತತ್ವವನ್ನು ಅರಿತವನೇ ಪಿಂಡಜ್ಞಾನಿ ಎಂಬುದಾಗಿ ಹೇಳಲಾಗಿದೆ. ಇಲ್ಲಿ ಆತ್ಮಜ್ಞಾನವನ್ನು ಮಾಡಿಕೊಳ್ಳುವ ಪ್ರಯೋಜನ ವೆಂದರೆ ವೀರಶೈವ ಧರ್ಮದಲ್ಲಿ ಇಷ್ಟಲಿಂಗ ಆರಾಧನೆಗೆ ಅತ್ಯಂತ ಮಹತ್ವಕೊಡಲಾಗಿದೆ.

ನಮ್ಮ ಹಸ್ತ ಪೀಠದಲ್ಲಿರುವ ಇಷ್ಟಲಿಂಗವು ನಮ್ಮ ಆತ್ಮದ ಚಿತ್ಕಳೆಯ ಕುರುಹು. ಚಿತ್ಕಳೆಯ ಕುರುಹಾಗಿರುವ ಇಷ್ಟಲಿಂಗವನ್ನು ಕೈಯಲ್ಲಿ ಕೊಡುವುದಕ್ಕಿಂತ ಮೊದಲು ಚಿದ್ರೂಪವಾದ ಆತ್ಮದ ಅರಿವನ್ನು ಮಾಡಿಕೊಡುವುದು ಅವಶ್ಯಕವಾಗಿರುವುದು, ಇಲ್ಲವಾದರೆ ಆ ಇಷ್ಟಲಿಂಗದ ಮಹತ್ವವು ತಿಳಿಯಲಾರದು.


ಇನ್ನೊಬ್ಬರನ್ನು ಅವರ ಹಿತಕ್ಕಾಗಿ ನಾವು ಪ್ರೀತಿಸುವುದಿಲ್ಲ. ನಮಗಾಗಿ ಅವರನ್ನು ಪ್ರೀತಿಸುತ್ತೇವೆ. ನಾವು ನಮ್ಮನ್ನು ಪ್ರೀತಿಸಿದಷ್ಟು ಬೇರೆ ಯಾರನ್ನು ಪ್ರೀತಿಸುವುದಿಲ್ಲ. ಮೊದಲು ಶರೀರಾದಿಗಳನ್ನು ಪ್ರೀತಿಸುತ್ತೇವೆ.

ಆ ಪ್ರೀತಿಯು ತಾತ್ಕಾಲಿಕವಾಗಿದ್ದು, ಆದರೆ ಪರಮ ಪ್ರೇಮಕ್ಕೆ ಆಸ್ಪದವಾಗಿದೆ. ಶರೀರಾದಿಗಳಿಗಿಂತಲೂ ಭಿನ್ನವಾದ ಆತ್ಮವೆಂಬುದಾಗಿ ಸರ್ವರು ತಿಳಿದುಕೊಳ್ಳಬೇಕು.

ಧನ, ಕನಕ, ವಸ್ತು, ವಾಹನಗಳಿಗಿಂತಲೂ ಶರೀರ ಮೇಲಿನ ಪ್ರೀತಿಯೂ ಎದ್ದು ಕಾಣಿಸುತ್ತದೆ. ಶರೀರದಲ್ಲಿಯ ಯಾವುದೇ ಅವಯವಗಳಿಗೆ ಅಸಾಧ್ಯವಾದ ರೋಗ ಅಂಟಿಕೊಂಡಾಗ ಆ ಭಾಗ ಕತ್ತರಿಸಿಕೊಳ್ಳಲು ನಾವು ಸಿದ್ಧರಾಗುತ್ತೇವೆ. ಯಾಕಂದರೆ ಜೀವ ಉಳಿದರೆ ಸಾಕು ಎಂಬ ಭಾವನೆ ನಮ್ಮಲ್ಲಿರುತ್ತದೆ. ಅಂಗಾಂಗ ಇಂದ್ರೀಯಗಳಿಗಿಂತಲೂ ಪ್ರಾಣವು ಹೆಚ್ಚು ಪ್ರೀಯ ವೆಂಬುದು ತಿಳಿದು ಬರುತ್ತದೆ. ಕೆಲವೊಮ್ಮೆ ಸ್ವತಃ ಆತ್ಮಹತ್ಯೆಯ ಮೂಲಕ ಜೀವಾತ್ಮನು ಪ್ರಾಣವನ್ನೂ ಬೀಡಲು ತಯಾರಾಗುವನು. ಪ್ರಾಣಕ್ಕಿಂತಲೂ ಪ್ರೀಯಾವಾದದ್ದು ನಮ್ಮ ಆತ್ಮ ಆದ್ದರಿಂದ ಸರ್ವರು ಅತಿಯಾಗಿ ಪ್ರೀತಿಸುತ್ತಾರೆ.

ನಾವು ಪ್ರೀತಿಸುವ ಆತ್ಮದ ಅರಿವು ನಮಗಾದರೆ ಪ್ರೀತಿ ಸಾರ್ಥಾಕವಾಗುತ್ತದೆ.

ಎಲ್ಲ ಜೀವಿಗಳಿಗಿರುವ ಶರೀರಾದಿಗಳು ಕರ್ಮ ಫಲಗಳಾಗಿರುವುದರಿಂದ ಅವುಗಳಲ್ಲಿ ಸಮಾನತೆ ಇರುವುದಿಲ್ಲ. ಹೀಗೆ ಅತ್ಯಂತ ವಿಷಮವಾಗಿರುವ ಈ ಪ್ರಪಂಚದಲ್ಲಿ ಆತ್ಮ ತತ್ವವೊಂದೇ ಸರ್ವರಲ್ಲಿ ಸಮಾನವಾಗಿರುವುದು. ಈ ಆತ್ಮ ಜ್ಞಾನದಿಂದ ಪ್ರತಿಯೊಬ್ಬ ಜೀವಿಯು ರಾಗ, ದ್ವೇಶ ಯಾದಿ ಗುಣಗಳನ್ನು ಕಳೆದುಕೊಂಡು, ಸಮತ್ವ ಸ್ಥಿತಿ ಪಡೆದುಕೊಳ್ಳಬಹುದು. ಪರಮ ಪ್ರೇಮಾಸ್ಪದವಾದ ಆತ್ಮ ತತ್ವವನ್ನು ಸರ್ವರೂ ಅರಿತುಕೊಳ್ಳಬೇಕು.



ಮಮಕಾರವೇ ಭವ ಬಂಧನ

ಶಿವನಿಂದ ನಿರ್ಮಿತವಾದ ಈ ಸೃಷ್ಟಿ ಸತ್ಯದದ್ದು ಜೀವಾತ್ಮನ ಸಂಸಾರವು ಮಿಥ್ಯೆ ಯಾಗಿರುತ್ತದೆ.


ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಸಿದ್ಧಾಂತ ಶಿಖಾಮಣಿ ಸಂಸಾರಹೇಯ ಸ್ಥಲದಲ್ಲಿ, ಸಂಸಾರವು ಹೇಯವಾದುದ್ದು ಎಂಬುದಾಗಿ ಹೇಳಿದ್ದಾರೆ. ಹಾತುಂ ಯೋಗ್ಯಂ ಹೇಯಂ ಎಂಬತೆ ಯಾವುದು ಬಿಡಲು ಯೋಗ್ಯವಾದುದೋ ಅದು ಹೇಯವೆಂದು ಕರೆಯಲ್ಪಡುತ್ತದೆ. ಅದುವೇ ಮಿಥ್ಯವಾದುದು.

ನಶ್ವರವಾದ ಈ ಶರೀರದ ಮೇಲಿನ ವ್ಯಾಮೋಹ ಕಡಿಮೆಯಾಗಬೇಕು. ಶಾಶ್ವತ ಸುಖ ನೀಡುವ ಮೋಕ್ಷದ ಮಾರ್ಗ ಅನುಸರಿಸಬೇಕು. ಸೃಷ್ಟಿಯಲ್ಲಿರುವ ವಸ್ತುಗಳೆಲ್ಲವೂ ನನ್ನದೆಂಬ ಮಮಕಾರದ ಭಾವನೆಗೆ ಮೋಹ ಎನ್ನುವರು. ಆ ಮೋಹವೇ ಸಂಸಾರ. ಈ ಸಂಸಾರವೇ ನಮ್ಮನ್ನು ಭವ ಬಂಧನಕ್ಕೆ ಸಿಲುಕಿವಂತೆ ಮಾಡುತ್ತದೆ.

ನಿಜ ಗುಣ ಶಿವಯೋಗಿಗಳು ಮಮಕಾರವೇ ಬಂಧನವೆಂದು ಹೇಳಿದ್ದಾರೆ. ಜೀವಾತ್ಮನನ್ನು ಬಂಧಿಸುವ ಮಮಕಾರರೂಪವಾದ ಸಂಸಾರದ ಬಗ್ಗೆ ಅನೇಕ ಜನ ಅನುಭಾವಿಗಳು, ಸಂತರು, ಸತ್ಪುರುಷರು ಹೇಳಿದ್ದಾರೆ. ಸಂಸಾರ ನೀರಮೇಲಿನ ಗುಳ್ಳೆ, ಘೋರಾರಣ್ಯ ಮತ್ತು ಗಂಧರ್ವನಗರಗಳೆಂಬ ಮುಂತಾದ ಉಪಮೇಗಳನ್ನು ಕೊಟ್ಟು ಸಂಸಾರವು ದು:ಖ ಮಯವಾದದ್ದು, ಕ್ಷಣಿಕವು ಮತ್ತು ನಿಸ್ಸಾರವು ಎಂದು ಉಪದೇಶಿಸಿದ್ದಾರೆ. ಆದ್ದರಿಂದಲೇ ಇದನ್ನು ಪ್ರತಿಯೊಬ್ಬರು ತ್ಯಜಿಸಲೇಬೇಕು. ಅಂದಾಗಲೇ ಅಮೃತತ್ವ ಪಡೆಯಲು ಸಾಧ್ಯ. ತ್ಯಾಗದಿಂದಲೇ ಅಮೃತತ್ವ ವನ್ನು ಪಡೆದುಕೊಳ್ಳಬೇಕೆಂದು ಉಪನಿಷತ್ತುಗಳಲ್ಲಿ ಉಲ್ಲೇಖಿಸಲಾಗಿದೆ.

ಸಿದ್ಧಾಂತ ಶಿಖಾಮಣಿಯ ಶಿವಜಗನ್ಮಯ ಸ್ಥಲದಲ್ಲಿ ಶಿವ ಏವ ಚರಾಚರಂ, ಭೂಮ್ಯಾದಿ ರೂಪೇಣ ಶಿವ ಏಕೊ ವಿರಾಜತೇ ಅಂದರೆ ಚರಾ ಚರವೆಲ್ಲವೂ ಶಿವಸ್ವರೂಪ ವಾದದ್ದು ಮತ್ತು ಭೂಮ್ಯಾದಿಗಳರೂಪದಿಂದ ಶಿವನೇ ವಿರಾಜಿಸುತ್ತಾನೆ ಎಂದು ಹೇಳುವ ಮೂಲಕ ಸೃಷ್ಟಿಯು ಶಿವಸ್ವರೂಪವೆಂಬುದಾಗಿ ತಿಳಿಸಲಾಗಿದೆ. ಮಣ್ಣಿನಿಂದ ನಿರ್ಮಾಣಗೊಂಡ ಮಡಿಕೆಯು ಮೃಣ್ಮಯವಾಗಿರುವಂತೆ, ತಂತುಗಳಿಂದ ಉತ್ಪನ್ನವಾದ ವಸ್ತ್ರವು ತಂತುಮಯವಾಗಿರುವಂತೆ, ಶಿವಶಕ್ತಿಯಿಂದ ನಿರ್ಮಿತವಾದ ಈ ಸೃಷ್ಟಿಯೂ ಸಹ ಶಿವಶಕ್ತಿಯರ ಸ್ವರೂಪವಾದುದು. ಆದ್ದರಿಂದ ವೀರಶೈವ ಸಿದ್ಧಾಂತದಲ್ಲಿ ಸೃಷ್ಟಿಯು ಸತ್ಯ ವೆಂಬುದಾಗಿ ಹೇಳಲಾಗಿದೆ.

ಹೀಗೆ ಸೃಷ್ಟಿಯು ಸತ್ಯವಾಗಿದ್ದರೂ ಸಂಸಾರವು ಮಾತ್ರ ಮಿಥ್ಯೆಯಾಗಿರುತ್ತದೆ. ಆದ ಕಾರಣ ಸೃಷ್ಟಿ ಮತ್ತು ಸಂಸಾರಗಳಲ್ಲಿನ ಭೇದವನ್ನರಿತು ಷಟ್‌ಸ್ಥಲ ಸಾಧಕನು ಲಿಂಗಾಂಗ ಸಾಮರಸ್ಯರೂಪವಾದ ಮೋಕ್ಷವನ್ನು ಪಡೆದುಕೊಳ್ಳಲು ಸಂಸಾರದ ಬಗ್ಗೆ ಹೇಯ ಬುದ್ಧಿಯನ್ನು ತಿಳಿದುಕೊಳ್ಳಬೇಕು. ಆದ್ದರಿಂದ ಸೃಷ್ಟಿಯು ಸತ್ಯ ಸಂಸಾರವು ಮಿಥ್ಯವಾದುದು.



ಕ್ಷಣಿಕ ಸುಖ ಅವಿವೇಕಿದ ಲಕ್ಷಣ

ಸತಿ ಸುತರಿಂದ ಇಹಲೋಕದಲ್ಲಿ ದೊರೆಯುವ ಸುಖ ಕ್ಷಣಿಕ. ಇನ್ನು ಪರಲೋಕದ ಸ್ವರ್ಗವೂ ಸಹ ಕ್ಷಯ-ಪತನಾದಿಗಳಿಂದ ಕೂಡಿಕೊಂಡಿರುವುದು. ವಿವೇಕಿಯಾದವ ಈ ಎರಡನ್ನೂ ಬಯಸಲಾರ.

ಶ್ರೀ ಸಿದ್ಧಾಂತ ಶಿಖಾಮಣಿ ಸಂಸಾರ ಹೇಯ ಸ್ಥಲದಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಇಹ-ಪರ ಲೋಕದ ಸುಖ ಕ್ಷಣಿವಾಗಿದ್ದು, ವಿವೇಕಿಯಾದವನು ಇಂಥ ಸುಖ ಬಯಲಾರ ಎಂದು ಬೋಧಿಸಿದ್ದಾರೆ.

ನಮ್ಮೆಲ್ಲರ ಆತ್ಮವೇ ಸುಖ ಸ್ವರೂಪಿಯಾಗಿದೆ. ಆದರೆ ಈ ಆತ್ಮದ ಸುಖ ಸ್ವರೂಪದ ಅರಿವು ಸಾಮಾನ್ಯರಿಗೆ ಇಲ್ಲ. ಸತಿ ಸುತರಿಂದ ಉಂಟಾಗುವ ಶಬ್ದ ಸ್ಪರ್ಶದ ಕ್ಷಣಿಕ ಸುಖ ಮಾತ್ರ ಎಲ್ಲರ ಅನುಭವಕ್ಕೆ ಬರುವದು. ವಾಸ್ತವದಲ್ಲಿ ಸತಿ ಸುರದಿಂದ ದೊರೆಯುವ ಶಬ್ದ ಸ್ಪರ್ಶದಲ್ಲಿ ಸುಖವಿಲ್ಲ. ಆದರೆ ಬಯಸಿದ ವಿಷಯ ದೊರೆತಾಗ ಮನಸ್ಸಿಗೆ ನೆಮ್ಮದಿ, ಏಕಾಗ್ರತೆ ಎನಿಸುತ್ತದೆ. ಆ ಏಕಾಗ್ರ ಮನಸ್ಸಿನಲ್ಲಿ ಸುಖರೂಪ ವಾದ ಆತ್ಮದ ಪ್ರತಿಬಿಂಬ ಫಲಿಸುತ್ತದೆ. ಇದರಿಂದ ವಿಷಯವು ಸುಖರೂಪವೆಂಬ ಭ್ರಾಂತಿ ಉಂಟಾಗುವುದು. ಒಂದು ವೇಳೆ ಆ ಸತಿ-ಸುತಾದಿಗಳಲ್ಲಿಯೇ ಸುಖವು ಇದ್ದದ್ದೇ ಆದರೆ ಜೀವಾತ್ಮನು ಅವರಿಂದ ಎಂದೂ ಹಿಮ್ಮುಖನಾಗುತ್ತಿರಲಿಲ್ಲ. ಕೆಲ ದಿನ ಮಾತ್ರ ಅತ್ಯಂತ ಪ್ರೀತಿಯಿಂದ ಕಳೆಯುವ ಸತಿಸುತಾದಿಗಳು ಅನೇಕ ಪ್ರಸಂಗದಲ್ಲಿ ಪರಸ್ಪರ ಶತ್ರುಗಳಾಗುತ್ತಾರೆ. ಇದು ಸರ್ವಾನುಭವ ಸಿದ್ಧವಾದ ಮಾತು. ಯಾವುದೇ ವಸ್ತು ಇಲ್ಲವೇ ವ್ಯಕ್ತಿ ನಮಗೆ ಅನುಕೂಲವಿದ್ದಾಗ ಮಾತ್ರ ಸುಖ ರೂಪ. ಪ್ರತಿಕೂಲವಾದಾಗ ?.

ಆದ್ದರಿಂದ ಸತಿ ಸುತಾದಿಗಳಿಂದ ಸಿಗುವ ಸುಖವು ಶಾಶ್ವತವೂ, ಅದು ಸುಖವೂ ಅಲ್ಲ. ವಿಷಯ ಸುಖ ಅನುಭವಿಸುವಾಗಲೂ ನಾವು ನಮ್ಮ ಆತ್ಮ ಸುಖವನ್ನೇ ಅನುಭವಿಸುತ್ತೇವೆ. ಆದ್ದರಿಂದ ವಿವೇಕಿಯಾದವ ನೇರ ಆತ್ಮ ಸುಖ ಬಯಸುವನೇ ವಿನಃ ವಿಷಯ ಮೂಲಕ ಸಿಗುವ ಕ್ಷಣಿಕ ಸುಖವಲ್ಲ.

ಜೀವಾತ್ಮನಲ್ಲಿ ಅನೇಕ ಜನ್ಮಗಳ ಸಾಂಸಾರಿಕ ವಾಸನೆಗಳಿರುವುದರಿಂದ ಅವನು ಮತ್ತೆ ಮತ್ತೆ ಕ್ಷಣಿಕ ಸುಖದತ್ತ ಹರಿಯುತ್ತಾನೆ. ಶ್ರೀ ಷಣ್ಮುಖ ಶಿವಯೋಗಿಗಳು ವಿಷಯಾಭಿಮುಖವಾದ ವ್ಯಕ್ತಿಯ ಮನಸ್ಸನ್ನು ಮಂಗಕ್ಕೆ ಹೋಲಿಸುತ್ತಾರೆ. ಮನಸ್ಸನ್ನು ವಿಷಯ ಮುಕ್ತಗೊಳಿಸಲು ಶಿವನ ನೆನಹು ಮುಖ್ಯ ಸಾಧನ ಎನ್ನುತ್ತಾರೆ. ವಿವೇಕಿಯಾದವನು ವಿಷಯ ಸುಖಗಳ ಪ್ರಲೋಭನಕ್ಕೆ ಒಳಗಾಗದೇ ಶಾಶ್ವತವಾದ ಆತ್ಮ ಸುಖ ಪಡೆಯಲು ಸಂಸಾರದ ಬಗ್ಗೆ ಹೇಯ ಬುದ್ಧಿ ತಾಳಿಕೊಳ್ಳಬೇಕು.

ಸಂಯುಕ್ತ ಕರ್ನಾಟಕ

ಕಲಬುರ್ಗಿ | 26-8-2010 3

ಶಿವ ಮಾಡಿದ್ದು ಸೃಷ್ಟಿ ಜೀವಾತ್ಮ ಮಾಡಿದ್ದು ಸಂಸಾರ



ಹುಮನಾಬಾದ : ಶಿವನು ತನ್ನ ಸಂಕಲ್ಪ ಶಕ್ತಿಯಿಂದ ಸೃಷ್ಟಿಯನ್ನು ಮಾಡಿದರೆ, ಜೀವಾತ್ಮನು ಆ ಸೃಷ್ಟಿಯ ಮೇಲೆ ನನ್ನದೆಂಬ ಭಾವನೆಯನ್ನು ನಿರ್ಮಿಸಿಕೊಂಡು ಸಂಸಾರಿಯಾಗುತ್ತಾನೆ. ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು. ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕ್ರೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ವೇದಿಕೆಯಿಂದ ಈ ವಿಚಾರವನ್ನು ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿ ಸಂಸಾರಹೇಯ ಸ್ಥಲದಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಜೀವಾತ್ಮನು ಮಾಡಿಕೊಂಡಿರುವ ಸಂಸಾರದ ಬಗ್ಗೆ ವಿಸ್ತಾರವಾಗಿ ತಿಳಿಸಿ ಅದರಲ್ಲಿ ಹೇಯ ಬುದ್ಧಿಯು ಉಂಟಾದಾಗಲೇ ಜೀವಾತ್ಮನಿಗೆ ಮುಂದಿನ ಪ್ರಗತಿಯು ಸಾಧ್ಯ ವೆಂಬುದಾಗಿ ಬೋಧಿಸಿದ್ದಾರೆ.

ಹೊಲ,ಮನೆ,ಹೆಂಡರು,ಮಕ್ಕಳು ಮೊದಲಾದವುಗಳನ್ನೇ ಸಂಸಾರವೆಂದು ಸರ್ವರು ಭಾವಿಸುತ್ತಾರೆ. ವಾಸ್ತವಿಕವಾಗಿ ವಿಚಾರ ಮಾಡಿದರೆ ಇವೆಲ್ಲವುಗಳು ಈಶ್ವರನ ಸೃಷ್ಟಿಯ ವಸ್ತುಗಳು. ಆದರೆ ಜೀವಾತ್ಮನು ತನ್ನ ಪ್ರಾರಬ್ಧ ಕರ್ಮಾನುಸಾರವಾಗಿ ತಾನು ಸಂಗ್ರಹಿಸಿಕೊಂಡಿರುವ ಈಶ ನಿರ್ಮಿತವಾದ ವಸ್ತುಗಳ ಮೇಲೆ ಯಾವಾಗ ನನ್ನದೆಂಬ ಭಾವನೆಯನ್ನು ಮಾಡಿಕೊಳ್ಳುವನೋ ಅದುವೇ ಅವನ ಸಂಸಾರವು. ನಮಗೆ ದು:ಖ ಕೊಡುವುದು ನಮ್ಮ ನಮ್ಮ ಸಂಸಾರವೇ ಹೊರತು, ಈಶ ಸೃಷ್ಟಿಯು ಯಾರಿಗೂ ದು:ಖವನ್ನು ಕೊಡುವುದಿಲ್ಲ. ಶಿವನು ಸೃಷ್ಟಿಯಲ್ಲಿ ಕಲ್ಲು,ಮಣ್ಣುಗಳನ್ನು ಗಂಡ–ಹೆಣ್ಣುಗಳನ್ನು ಸೃಷ್ಟಿಮಾಡಿದರೆ, ಅವುಗಳನ್ನು ಮನೆ–ಮಠಗಳನ್ನಾಗಿ, ಗಂಡ–ಹೆಂಡತಿಯರನ್ನಾಗಿ ಜೀವಾತ್ಮನು ಸೃಷ್ಟಿಮಾಡಿಕೊಳ್ಳುತ್ತಾನೆ. ಇಲ್ಲಿ ಶಿವನ ಸೃಷ್ಟಿಯ ಕಲ್ಲು ಮಣ್ಣುಗಳು ಗಂಡ–ಹೆಣ್ಣುಗಳು ದು:ಖಕ್ಕೆ ಕಾರಣ ವಾಗುವುದಿಲ್ಲ, ಆದರೆ ಜೀವಾತ್ಮನು ನಿರ್ಮಿಸಿಕೊಂಡಿರುವ ಮನೆ–ಮಠಗಳು ಮತ್ತು ಗಂಡು–ಹೆಂಡತಿಯರು ದು:ಖಕ್ಕೆ ಕಾರಣವಾಗುತ್ತಾರೆ. ಏಕೆಂದರೆ ಇವುಗಳ ಮೇಲೆ ಜೀವಾತ್ಮನು ನನ್ನದೆಂಬ ಬಲವಾದ ಭಾವನೆಯನ್ನು ತಾಳಿಕೊಂಡಿರುತ್ತಾನೆ. ಆದ ಕಾರಣ ಸೃಷ್ಟಿಯು ಸಂಸಾರವಲ್ಲ, ಸೃಷ್ಟಿಯ ಮೇಲಿರುವ ನನ್ನದೆಂಬ ಜೀವಾತ್ಮನ ಭಾವನೆಯೇ ಸಂಸಾರವು. ಅದುವೇ ದು:ಖಕ್ಕೆ ಕಾರಣವು. ಆದ್ದರಿಂದ ಸಂಸಾರಹೇಯ ವೆಂದರೆ ಮನೆ–ಮಠ ಮತ್ತು ಹೆಂಡರು ಮಕ್ಕಳನ್ನು ತ್ಯಜಿಸುವುದು ಎಂದರ್ಥವಲ್ಲ. ಶಾರೀರಿಕವಾಗಿ ತ್ಯಾಗವು ನಿಜವಾದ ತ್ಯಾಗವಲ್ಲ. ಶಿವನಿಂದ ನಿರ್ಮಿತವಾದ ಸೃಷ್ಟಿಯಲ್ಲಿ ಇದ್ದುಕೊಂಡೇ ಇದೆಲ್ಲವೂ ಶಿವನ ಪ್ರಸಾದವು ನನ್ನದೆಂಬುದು ಯಾವುದು ಇಲ್ಲ ಎಂಬ ವಿವೇಕವನ್ನು ಜಾಗೃತಗೊಳಿಸಿಕೊಂಡರೆ ನನ್ನದೆಂಬ ಸಂಕುಚಿತ ಭಾವನೆಯು ದೂರಾಗುವುದು. ಇದುವೆ ನಿಜವಾದ ಸಂಸಾರಹೇಯ ಸ್ಥಿತಿಯು.

"ಈಶಾವಾಸ್ಯಮಿದಂ ಸರ್ವಂ" ಎಂಬ ಉಪನಿಷತ್ತಿನ ಉಕ್ತಿಯಂತೆ ಇದೆಲ್ಲವೂ ಈಶ ನಿರ್ಮಿತವಾದದ್ದು ಮತ್ತು ಈಶ್ವರನಿಂದಲೇ ವ್ಯಾಪಿಸಲ್ಪಟ್ಟಿದ್ದು ಎಂಬ ಭಾವನೆಯನ್ನು ತಾಳಿಕೊಂಡಾಗ ನನ್ನದೆಂಬ ಮಿಥ್ಯಾಭಾವನೆಯು ದೂರಾಗಿ ಜೀವಾತ್ಮನು ಸಂಸಾರಹೇಯ ಸ್ಥಿತಿಯನ್ನು ಪಡೆದುಕೊಳ್ಳುವನು. ಆದ್ದರಿಂದ ಸಂಸಾರವೆಂಬುದು ನಮ್ಮ ನಮ್ಮ ಮನಸ್ಸಿನ ಭಾವನೆಗಳು. ಆ ಭಾವನೆಗಳು ಸಂಕೋಚಗೊಂಡಾಗ ಜೀವನು ಸಂಸಾರಿಯಾಗುವನು. ಆ ಭಾವನೆಗಳೇ ಉದಾತ್ತಗೊಂಡಾಗ ಸಂಸಾರದಿಂದ ಬಿಡುಗಡೆ ಹೊಂದುವನು. ಆದ್ದರಿಂದ ಪ್ರತಿಯೊಬ್ಬ ಸಾಧಕನು ಪುಣ್ಯಕರ್ಮಗಳಿಂದ ತನ್ನ ಮನೋಬುದ್ಧಿಗಳನ್ನು ಶುದ್ಧಮಾಡಿಕೊಂಡು ನಿತ್ಯಾನಿತ್ಯ ಮತ್ತು ಆತ್ಮಾನಾತ್ಮಗಳ ವಿವೇಕವನ್ನು ಸಹ ಮಾಡಿಕೊಂಡು ಆ ವಿವೇಕದ ಬಲದಿಂದ ಉಂಟಾದ ಪ್ರಬಲವಾದ ಶುಭವಾಸನೆಯಿಂದ ಸಂಸಾರದಲ್ಲಿ ಹೇಯಬುದ್ಧಿಯನ್ನು ತಾಳಿಕೊಳ್ಳಬೇಕೆಂಬುದಾಗಿ ಶ್ರೀ ಸನ್ನಿಧಿಯವರು ತಮ್ಮ ಆಶೀರ್ವಚನದಲ್ಲಿ ಅನೇಕ ಯುಕ್ತಿ ದೃಷ್ಟಾಂತಗಳಿಂದ ತಿಳಿಹೇಳಿದರು.

ಶ್ರಾವಣ ಸಂಪದ

ಬೀದರ ಜಿಲ್ಲೆ

ಸೃಷ್ಟಿ ಸತ್ಯ ಸಂಸಾರ ಮಿಥ್ಯ

ಹುಮನಾಬಾದ : 26- ಶಿವ ನಿರ್ಮಿತವಾದ ಸೃಷ್ಟಿಯು ಸತ್ಯವಾಗಿದ್ದು, ಜೀವಾತ್ಮನ ಸಂಸಾರವು ಮಿಥ್ಯವಾಗಿದೆ ಎಂದು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ

ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕ್ರೋಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ವೇದಿಕೆಯಿಂದ ಈ ವಿಚಾರವನ್ನು ತಿಳಿಸಿದರು.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶ್ರೀ ಸಿದ್ಧಾಂತ ಶಿಖಾಮಣಿ ಸಂಸಾರಹೇಯ ಸ್ಥಲದಲ್ಲಿ,ಸಂಸಾರವು ಹೇಯವಾದುದ್ದು ಎಂಬುದಾಗಿ ಹೇಳಿದ್ದಾರೆ.

"ಹಾತುಂ ಯೋಗ್ಯಂ ಹೇಯ" ಎಮಬ ವ್ಯುತ್ಪತ್ತಿಯ ಮೇರೆಗೆ ಯಾವುದು ಬಿಡಲು ಯೋಗ್ಯವಾದುದೋ ಅದು ಹೇಯವೆಂದು ಕರೆಯಲ್ಪಡುತ್ತದೆ,ಅದುವೇ ಮಿಥ್ಯವಾದುದು.

ಸೃಷ್ಟಿಯ ವಸ್ತುಗಳ ಮೇಲಿರುವ ನನ್ನದೆಂಬ ಮಮಕಾರದ ಮೋಹವೆನ್ನುವರು.ಆ ಮೋಹವು ಸಂಸಾರವು.ಈ ಸಂಸಾರವೇ ನಮ್ಮನು ಬಂಧನಕ್ಕೆ ಒಳಗು ಮಾಡುತ್ತದೆ,ಅಂತೆಯೇ ಶ್ರೀ ಮನ್ನಿಗುಣಶಿವಯೋಗಿಗಳು ಸಂಸಾರದ ಬಗ್ಗೆ ಅನೇಕ ಜನ ಅನುಭವಿಗಳು ಅದಕ್ಕೆ ಮಹಾವ್ಯಾಧಿ, ಹೆಣ, ಗಾಳಿಯ ಸೋಡರು, ಕನಸು ನೀರ ಮೇಲಿನ ಗುಳ್ಳೆ, ಘೋರಾರಣ್ಯ ಮತ್ತು ಗಂಧರ್ವ ನಗರಗಳೆಂಬ ಮುಂತಾದ ಉಪಮೇಗಳನ್ನು ಕೊಟ್ಟು, ಸಂಸಾರವು ದು:ಖಮಯವು, ಕ್ಷಣಿಕವೂ ಮತ್ತು ನಿಸ್ಸಾರ ಎಂಬುದಾಗಿ ಉಪದೇಶಿಸಿದ್ದಾರೆ.

ಆದ್ದರಿಂದಲೇ ಇದನ್ನು ಪ್ರತಿಯೋಬ್ಬರು ತ್ಯಜಿಸಲೇಬೇಕು. ಅಂದಾಗಲೆ ಅಮೃತತತ್ವನ್ನು ಪಡೆಯಲು ಸಾಧ್ಯ,ತ್ಯಾಗದಿಂದಲೇ ಅಮೃತತತ್ವವನ್ನು ಪಡೆದುಕೋಳ್ಳಬೇಕೆಂಬುದಾಗಿ ಉಪನಿಷತ್ತುಗಲ್ಲಿಯು ಉಪದೇಶಿಸಲಾಗಿದೆ.

ಇನ್ನು ಶ್ರೀ ಸಿದ್ಧಾಂತ ಶೀಖಾಮಣಿಯ ಶಿವಜಗನ್ಮಯಸ್ಥಲದಲ್ಲಿ"ಶಿವ ಏವ ಚರಾಚಲಂ","ಭುಮ್ಯಾದಿ ರೂಪೇಣ ಶಿವ ಏಕೊ ವಿರಾಜತೇ" ಅಂದರೆ ಚರಾ ಚರವೆಲ್ಲವೂ ಶಿವಸ್ವರೂಪವಾದದ್ದು ಮತ್ತು ಭೂಮ್ಯಾದಿಗಳರೂಪದಿಂದ ಶಿವನೇ ವಿರಾಜಿಸುತ್ತಾನೆ ಎಂಬುದಾಗಿ ಹೇಳುವದರ ಮೂಲಕ ಸೃಷ್ಟಿಯು ಶಿವಸ್ವರೂಪವೆಂಬುದಾಗಿ ತಿಳಿಸಲಾಗಿದೆ.

ಮಣ್ಣಿನಿಂದ ನಿರ್ಮಾಣಗೋಂಡ ಮಡಿಕೆಯನ್ನು ಮಡಿಕೆಯು ಮಣ್ಣುಮಯವಾಗಿರುವಂತೆ, ತಂತುಗಳಿಂದ ಉತ್ಪನ್ನವಾದ ವಸ್ತ್ರವು ತಂತುಮಯವಾಗಿರುವಂತೆ, ಶಿವಶಕ್ತಿಯಿಂದ ಉತ್ಪನ್ನವಾದ ಈ ಸೃಷ್ಟಿಯೂ ಸಹ ಶಿವಶಕ್ತಿಯ ಸ್ವರೂಪವಾದುದು. ಆದ್ದರಿಂದ ವೀರಶೈವ ಸಿದ್ಧಾಂತದಲ್ಲಿ ಸೃಷ್ಟಿಯು ಸತ್ಯ ಎಂಬುದಾಗಿ ಹೇಳಲಾಗಿದೆ.

ಹೀಗೆ ಸೃಷ್ಟಿಯು ಸತ್ಯವಾಗಿದ್ದರೂ ಸಂಸಾರವೂ ಮಾತ್ರ ಮಿಥ್ಯವಾಗಿರುತ್ತದೆ. ಆದ ಕಾರಣ ಸೃಷ್ಟಿ ಮತ್ತು ಸಂಸಾರಗಳಲ್ಲಿ ಭೇದವನ್ನರಿತು, ಷಟ್‌ಸ್ಥಲ ಸಾಧಕನು ಲಿಂಗಾಂಗ ಸಾಮರಸ್ಯ ರೂಪವಾದ ಮೋಕ್ಷವನ್ನು ಪಡೆದುಕೊಳ್ಳಲು ಸಂಸಾರದ ಬಗ್ಗೆ ತಿಳಿದುಕೊಳ್ಳಬೇಕು. ಆದ್ದರಿಂದ ಸೃಷ್ಟಿಯು ಸತ್ಯ ಸಂಸಾರವು ಮಿಥ್ಯವಾದುದು ಎಂಬುದಾಗಿ ಶ್ರೀ ಸನ್ನಿಧಿಯವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಶಾಂತರಸವೇ ಶಾಶ್ವತ: ಕಾಶಿ ಶ್ರೀ

ವಿಕ ಸುದ್ದಿಲೋಕ

ಶಹಾಪುರ: ಸಾಹಿತ್ಯ ಲೋಕದಲ್ಲಿ ಶೃಂಗಾರ ವೀರ, ಕರುಣ ಮತ್ತಿತರ ನವರಸಗಳು ಸುಪ್ರಸಿದ್ಧಗಳಾಗಿವೆ.ಆದರೆ ಇವೆಲ್ಲದರಕ್ಕಿಂತ ಶಾಂತರಸ ಶಾಶ್ವತ ಎಂದು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿ ಹೇಳಿದರು.


ದಿಗ್ಗಿ ಸಂಗಮೇಶ್ವರ ಕ್ಷೇತ್ರದಲ್ಲಿ ನಡೆಯುತ್ತಿರುವ ಶ್ರೀ ಸಿದ್ಧಾಂತ ಶಾಖಾಮಣಿ ಆಧ್ಯಾತ್ಮಿಕ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಮಾನವ ಜೀವನದಲ್ಲಿ ರಸಗಳ ಪಾತ್ರ ಮಹತ್ವವಾದುದು. ಮನರಂಜನೆಗಾಗಿ ಆತ ಶೃಂಗಾರ, ವೀರ, ಕರುಣ, ಅದ್ಭುತ, ಭೀಭತ್ಸ ಮತ್ತು ಹಾಸ್ಯ ಮತ್ತಿತರ ಆಸ್ವಾದನೆ ಮಾಡುತ್ತಾನೆ ಎಂದರು.

ಸಾಹಿತ್ಯ ಲೋಕದ ನವರಸಗಳ ಆಸ್ವಾದನೆ ಕ್ಷಣಕಾಲ ತೃಪಿ ನೀಡುತ್ತವೆ. ಆದರೆ ಭಕ್ತಿ ಮಾರ್ಗದಲ್ಲಿ ದೊರೆಯುವ ಶಾಂತರಸವು ಶಾಶ್ವತ ಎಂದು ವಿವರಿಸಿದರು.

ಶಾಸ್ತ್ರಗಳಲ್ಲಿ 'ರಸೋ ವೈಸ' ಎಂಬ ಉಕ್ತಿಯಿಂದ ಪರಮಾತ್ಮನೇ ರಸಸ್ವರೂಪನಾಗಿದ್ದಾನೆ ಎಂಬುದಾಗಿ ಹೇಳಲಾಗಿದೆ. ಇದರರ್ಥ ಶಾಂತರಸವೇ ಭಗವತ್ಸ ರೂಪವಾದುದು ಎಂದು ವಿಶ್ಲೇಷಿಸಿದರು.

ತಾಪತ್ರಯಗಳು ಅಗ್ನಿಗೆ ಸಮಾನ



ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕಗಳೆಂಬ ಈ ತಾಪತ್ರಯಗಳು ಮನುಷ್ಯನನ್ನು ಯಾವಾಗಲೂ ಸುಡುತ್ತಿರುವುದರಿಂದ ಇವುಗಳು ಅಗ್ನಿಗೆ ಸಮಾನವಾದವುಗಳು ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು. ನಗರದ ಸುಪ್ರಸಿದ್ಧವಾದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ವೇದಿಕೆಯಿಂದ ಈ ವಿಚಾರವನ್ನು ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿ ಸಂಸಾರಹೇಯಸ್ಥಲದಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾ ದರು ಆಧ್ಯಾತ್ಮಿಕಾದಿ ತ್ರಿವಿಧ ತಾಪಗಳ ಬಗ್ಗೆ ಉಪದೇಶವನ್ನು ಮಾಡುತ್ತ ಇವುಗಳಿಗೆ ಮಹಾವಹ್ನಿ ಎಂಬುದಾಗಿ ಬೋಧಿಸಿದ್ದಾರೆ. ಅಗ್ನಿಯು ತನ್ನ ಸಂಪರ್ಕದಲ್ಲಿ ಬಂದ ವಸ್ತುಗಳನ್ನು ಸುಟ್ಟು ಹಾಕುವಂತೆ ಈ ತ್ರಿವಿಧ ತಾಪಗಳೂ ಸಹ ಜೀವಾತ್ಮನನ್ನು ದಿನಾಲು ಸುಡುತ್ತಲೇ ಇರುತ್ತವೆ. ಮೊದಲಿನದಾದ ಆಧ್ಯಾತ್ಮಿಕ ತಾಪವು ಬಾಹ್ಯ ಮತ್ತು ಆಭ್ಯಂತರವೆಂದು ಎರಡು ಪ್ರಕಾರವಾಗಿದೆ. ಶರೀರದಲ್ಲಿಯ ವಾತ,ಪಿತ್ತ ಮತ್ತು ಕಫಗಳ ವ್ಯತ್ಯಾಸದಿಂದ ಉತ್ಪನ್ನವಾದ ಜ್ವರಾದಿಗಳ ತಾಪವು ಬಾಹ್ಯಆಧ್ಯಾತ್ಮಿಕ ತಾಪವೆನಿಸಿಕೊಳ್ಳುವುದು.

ಆಯುರ್ವೇದ ಶಾಸ್ತ್ರದಲ್ಲಿ ವಾತಪಿತ್ತಾದಿಗಳ ವ್ಯತ್ಯಾಸದಿಂದ ಉಂಟಾಗುವ ರೋಗಗಳನ್ನು ಧಾತುಜನ್ಯ ರೋಗಗಳೆಂದು ಕರೆಯುತ್ತಾರೆ. ಇವುಗಳಲ್ಲಿ ವಾತ ಪ್ರಕೋಪದಿಂದ 81 ಪ್ರಕಾರದ, ಪಿತ್ತ ಪ್ರಕೋಪದಿಂದ 64 ಪ್ರಕಾರದ ಮತ್ತು ಕಫ ಪ್ರಕೋಪದಿಂದ 215 ಪ್ರಕಾರದ ರೋಗಗಳು ಹೇಳಲ್ಪಟ್ಟಿವೆ. ಒಟ್ಟಾರೆ ಈ ತ್ರಿದೋಷಗಳ ವ್ಯತ್ಯಾಸದಿಂದ 360 ಪ್ರಕಾರದ ರೋಗಗಳು ಉಂಟಾಗುವವು. ಇದನ್ನೆಲ್ಲ ನೋಡಿದಾಗ ಶರೀರವು ರೋಗಾಲಯವೆಂದು ತಿಳಿದುಬರುವುದು. ಅಂತೆಯೇ ಶ್ರೀ ನಿಜಗುಣಶಿವಯೋಗಿಗಳು ತನು ರುಜ ಯಾಗರ ಎಂಬುದಾಗಿ ಹೇಳಿದ್ದಾರೆ. ಇಂದಿನ ದಿನಮಾನದಲ್ಲಿ ಈ ರೋಗಗಳ ಸಂಖ್ಯೆಯು ಇನ್ನೂ ಹೆಚ್ಚುತ್ತಲೇ ಇದೆ. ಇನ್ನು ಮನಸ್ಸಿನಲ್ಲಿಯ ರಾಗದ್ವೇಷಾದಿಗಳಿಂದ ಉತ್ಪನ್ನವಾಗುವ ತಾಪು ಅಂತರಂಗದ ಆಧ್ಯಾತ್ಮಿಕ ತಾಪವೆಂದು ಕರೆಯಲ್ಪ ಡುವುದು. ಇಲ್ಲಿ ತಾಪವೆಂದರೆ ದು:ಖವೆಂದು ತಿಳಿದುಕೊಳ್ಳಬೇಕು.

ಇದರಂತೆ ರಾಜ,ಕಳ್ಳ,ಸಿಂಹ ಸರ್ಪ ಮೊದಲಾದವುಗಳಿಂದ ಉಂಟಾಗುವ ತಾಪಕ್ಕೆ ಆಧಿಭೌತಿಕ ತಾಪವೆಂದು ಕರೆಯುವರು. ಅದೇ ಪ್ರಕಾರ ಭೂತ,ಪ್ರೇತ,ಬೇತಾಳ,ಅತಿವೃಷ್ಟಿ ಅನಾವೃಷ್ಟಿ ಮುಂತಾದ ದೈವಿ ವಿಪತ್ತುಗಳಿಂದ ಉಂಟಾಗುವ ತಾಪಕ್ಕೆ ಆಧಿದೈವಿಕ ತಾಪವೆಂದು ಕರೆಯುವರು. ಹೀಗೆ ಸಂಸಾರದಲ್ಲಿ ಜೀವಿಸುವ ಪ್ರತಿಯೊಬ್ಬ ಜೀವಾತ್ಮನಿಗೆ ಈ ತ್ರಿವಿಧ ತಾಪಗಳಿಂದ ವಿಶ್ರಾಂತಿಯೇ ಇರುವುದಿಲ್ಲ.

ಹೀಗೆ ತ್ರಿವಿಧ ತಾಪಗಳನ್ನು ಅನುಭವಿಸುತ್ತ ಜೀವಿಯು ಸಂಸಾರದಲ್ಲಿ ಸುತ್ತುತ್ತಿರುತ್ತಾನೆ. ಈ ಭಯಾನಕವಾದ ತ್ರಾಪತ್ರಯಗಳೆಂಬ ಅಗ್ನಿಯಿಂದ ಪಾರಾಗಲು ಸಂಸಾರಹೇಯ ಬುದ್ಧಿಯೇ ಮುಖ್ಯ ಸಾಧನವು. ದೇಹಾದಿಗಳ ಮೇಲಿನ ನಾನು ನನ್ನದೆಂಬ ಮೋಹವನ್ನು ಕಳೆದು ಕೊಂಡಾಗ ದೇಹದಲ್ಲಿದ್ದರೂ ಸಹ ಈ ತಾಪತ್ರಯಗಳ ಬಾಧೆಯಿಂದ ಉಳಿದು ಕೊಳ್ಳಬಹುದು ಎಂಬುದಾಗಿ ಶ್ರೀ ಕಾಶಿ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ತಿಳಿಹೇಳಿದರು.

ಸಂಯುಕ್ತ ಕರ್ನಾಟಕ
ಕಲಬುರ್ಗಿ | 29-8-2010 3

ಅಸಂಗ ಭಾವದಿಂದ ಷಡೂರ್ಮಿಗಳ ನಿವೃತ್ತಿ



ಹುಮನಾಬಾದ, ೨೮- ಶರೀರ ಮತ್ತು ಮನಸ್ಸುಗಳೊಂದಿಗೆ ಅಸಂಗ ಭಾವವಿದ್ದಾಗ ಜನನ–ಮರಣ, ಹಸಿವೆ–ತೃಷೆ, ಶೋಕ–ಮೋಹಗಳೆಂಬ ಷಡೂರ್ಮಿಗಳಿಂದ ನಿವೃತ್ತಿ ಪಡೆಯಲು ಸಾಧ್ಯವೆಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ವೇದಿಕೆಯಿಂದ ಈ ವಿಚಾರವನ್ನು ತಿಳಿಸಿದರು.

ಊರ್ಮಿಗಳೆಂದರೆ ಅಲೆಗಳು ಎಂದರ್ಥ, ಹೇಗೆ ಸಮುದ್ರದಲ್ಲಿ ಅಲೆಗಳು ನಿರಂತರವಾಗಿ ಏಳುತ್ತಿರುತ್ತವೇಯೊ ಅದರಂತೆ ಮನುಷ್ಯನ ಬದುಕಿನಲ್ಲಿ ಜನನ–ಮರಣ, ಹಸಿವೆ–ತೃಷಿ, ಮತ್ತು ಶೋಕ ಮೋಹಗಳೆಂಬ ಅಲೆಗಳು ಏಳುತ್ತಲೆ ಇರುತ್ತವೆ. ಅಂತೆಯೇ ಶಾಸ್ತ್ರಗಳಲ್ಲಿ ಈ ಆರಕ್ಕೆ ಷಡೂರ್ಮಿಗಳೆಂದು ಕರೆದಿದ್ದಾರೆ.

ಶ್ರೀ ಸಿದ್ಧಾಂತ ಶಿಖಾಮಣಿ ಸಂಸಾರ ಹೇಯ ಸ್ಥಳದಲ್ಲಿ ಜನನ–ಮರಣಗಳೆಂಬ ಅಲೆಗಳ ಬಗ್ಗೆ ಚಿಂತನೆಯನ್ನು ಮಾಡುತ್ತ ಶ್ರೀ ಕಾಶಿ ಜಗದ್ಗುರು ರೇಣುಕ ಭಗವತ್ಪಾದರು ಹುಟ್ಟಿದವನಿಗೆ ಸಾವು ಶಾಶ್ವತ, ಸತ್ತವನಿಗೂ ಪುರ್ನಜನ್ಮವೂ ಸಹ ನಿಶ್ಚಿತವಾದದ್ದು. ಪ್ರತಿಯೊಬ್ಬ ಜೀವಾತ್ಮನು ಈ ಜನ್ಮ–ಮರಣಗಳೆಂಬ ಚಕ್ರದಲ್ಲಿ ಯಾವಾಗಲೂ ತಿರುಗುತ್ತಿರುತ್ತಾನೆ.ದೇಹವನ್ನು ಯಾರೇ ಧರಿಸಿಕೊಂಡಿದ್ದರೂ ಅವರಿಗೆ ಮರಣವು ತಪ್ಪದ್ದಲ್ಲ. ಲೋಕಕಲ್ಯಾಣಕ್ಕಾಗಿ ಸ್ವತಃ ವಿಷ್ಣು ಭಗವಂತನು ಮತ್ಸ್ಯ,ಕೂರ್ಮಾದಿ ದಶಾವತಾರಗಳನ್ನು ತಾಳಿಕೊಂಡು ದುಷ್ಟರ ನಿಗ್ರಹದ ನಂತರ ಆ ದೇಹಗಳನ್ನು ಅವನೂ ಸಹ ವಿಸರ್ಜಿಸಿದ್ದಾನೆ. ಅಂದ ಮೇಲೆ ಯಾವುದಕ್ಕೆ ಜನ್ಮವೋ ಅದಕ್ಕೆ ಮರಣವೂ ಸಹ ಅನಿವಾರ್ಯವೆಂಬುದಾಗಿ ಅವರು ಬೋಧಿಸಿದ್ದಾರೆ.

ಈ ಜನನ–ಮರಣ ಬಾಧೆಯನ್ನು ತಪ್ಪಸಿಕೋಳ್ಳಬೇಕಾದರೆ ದೇಹದ ಮೇಲಿನ ಮೋಹವನ್ನು ತ್ಯಜಿಸಬೇಕಾಗುವುದು. ಜನನ–ಮರಣಗಳು ದೇಹದ ಧರ್ಮಗಳೇ ವಿನಃ ಆತ್ಮದ ಧರ್ಮಗಳಲ್ಲ, ಆತ್ಮವು ಮಾತ್ರ ಅಜರವೂ ಅಮರವೂ ಆಗಿರುತ್ತದೆ. ಆ ಆತ್ಮವೇ ತಾನೆಂದು ತಿಳಿದುಕೊಂಡವನಿಗೆ ದೇಹ ಧರ್ಮಗಳಾದ ಜನನ–ಮರಣಗಳು ಬಾಧಿಸಲಾರವು.

ಅದರಂತೆ ಹಸಿವೆ–ತೃಷೆಗಳು ಪ್ರಾಣದ ಧರ್ಮಗಳಾಗಿರುತ್ತವೆ ಸಮಯಕ್ಕೆ ಸರಿಯಾಗಿ . ಅನ್ನ–ನೀರುಗಳನ್ನು ಹಾಕುತ್ತಿದ್ದರೆ ಪ್ರಾಣವು ಬದುಕಿಕೊಂಡಿರಲು ಸಾಧ್ಯವಾಗುವುದು. ಒಂದು ದೀಪವು ಅಖಂಡವಾಗಿ ಉರಿಯಲು ಎಣ್ಣೆ ಬತ್ತಿಗಳನ್ನು ಅದಕ್ಕೆ ಯಾವಾಗಲೂ ಒದಗಿಸುತ್ತಿರುವಂತೆ ದೇಹದ ಮುಖಾಂತರ ಪ್ರಾಣಕ್ಕೆ ಅನ್ನ ನೀರುಗಳನ್ನು ಒದಗಿಸುತ್ತಿರಬೇಕು.

ಜ್ಞಾನಿಯಾದವನು ತನ್ನ ಪ್ರಾಣಕ್ಕೆ ಅನ್ನ–ನೀರುಗಳನ್ನು ಒದಗಿಸುತ್ತಿದ್ದರೂ ಈ ಹಸಿವೆ ತೃಷೆಗಳು ಪ್ರಾಣದ ಧರ್ಮಗಳೆಂದು ಭಾವಿಸಿ ಆ ಪ್ರಾಣಕ್ಕಿಂರಲೂ ತನ್ನನ್ನು ಭಿನ್ನವಾಗಿ ತಿಳಿದುಕೊಂಡಿರುತ್ತಾನೆ. ಅಂತೆಯೆ ಅವನು ಹಸಿವೆ–ತೃಷೆಗಳ ಬಾಧೆಗೆ ಒಳಗಾಗಿವುದಿಲ್ಲ.ಇದೇ ಪ್ರಕಾರ ನಮಗೆ ಉಂಟಾಗುವ ಶೋಕ–ಮೋಹ ಸಹ ಮನಸ್ಸಿನ ಧರ್ಮಗಳಾಗಿರುತ್ತವೆ. ಮನಸ್ಸು ಶೋಕ–ಮೋಹಗಳನ್ನು ಅನುಭವಿಸಬೇಕಾದರೆ ಶರೀರ ಮತ್ತು ಪ್ರಾಣಗಳು ಸಹಾಯಕಗಳಾಗಿರುತ್ತವೆ. ಹೀಗೆ ಇವುಗಳ ಸಹಾಯದಿಂದ ಶೋಕ–ಮೋಹಗಳನ್ನು ಅನುಭವಿಸುವ ಮನಸ್ಸಿಗಿಂತಲೂ ತನ್ನ ಆತ್ಮವೂ ಭಿನ್ನವಾಗಿದೆ ಎಂಬ ತಿಳುವಳಿಕೆಯು ಯಾರಿಗೆ ಉಂಟಾಗುವುದೋ ಅವರು ಈ ಮನೋಧರ್ಮಗಳಿಂದಲೂ ಅಲಿಪ್ತರಾಗುವರು.

ಹೀಗೆ ದೇಹದಿಂದ ಅಸಂಗನಾದಾಗ ಜನನ–ಮರಣಗಳೆಂಬ ಊರ್ಮಿಗಳಿಂದ, ಪ್ರಾಣದಿಂದ ಅಸಂಗನಾದಾಗ ಹಸಿವೆ–ತೃಷೆಗಳೆಂಬ ಊರ್ಮಿಗಳಿಂದ ಮತ್ತು ಮನಸ್ಸಿನಿಂದ ಅಸಂಗನಾದಾಗ ಶೋಕ–ಮೋಹಗಳೆಂಬ ಊರ್ಮಿಗಳಿಂದ ಮುಕ್ತನಾಗಲು ಸಾಧ್ಯವಾಗುವುದು.

ಅಂತೆಯೇ ಅಸಂಗ ಭಾವನೆಯೇ ಷಡೂರ್ಮಿಗಳ ನಿವೃತ್ತಿಗೆ ಕಾರಣವೆಂಬುದಾಗಿ ಶ್ರೀ ಕಾಶಿ ಜಗದ್ಗುರುಗಳು ತಮ್ಮ ಆಶೀರ್ವಚನಲ್ಲಿ ಅನೇಕ ಯುಕ್ತಿ, ದೃಷ್ಟಾಂತಗಳಿಂದ ತಿಳಿ ಹೇಳಿದರು.

ಬೀದರ ಜಿಲ್ಲೆ

ಕಾಶೀ ಜಗದ್ಗುರುಗಳ

ಗುರುವೇ ಪ್ರತ್ಯಕ್ಷ ದೇವರು



ಹುಮನಾಬಾದ್ : ವೀರಶೈವ ಧರ್ಮದಲ್ಲಿ ಗುರು,ಲಿಂಗ ಮತ್ತು ಜಂಮರನ್ನು ಒಂದೇ ತತ್ವದ ಮೂರು ಸ್ವರೂಪಗಳೆಂದು ಹೇಳಲಾಗಿದೆ. ಆದ್ದರಿಂದ ಗುರುವೇ ಪ್ರತ್ಯೇಕ್ಷ ದೇವರೆಂಬುದಾಗಿ ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದರು.

ಪಟ್ಟಣದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಸಂಸಾರಹೇಯ ಸ್ಥಲದ ಮೇಲೆ ಆಧ್ಯಾತ್ಮಿಕ ಆಶೀರ್ವಚನ ವೇದಿಕೆಯಿಂದ ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು "ಪ್ರತ್ಯಕ್ಷೇ ಗುರುರೂಪೇನ ವರ್ತತೇ ಭಕ್ತಿಸಿದ್ಧಯೆ" ಎಂಬುದಾಗಿ ಹೇಳಿದ್ದಾರೆ. ಅದರಂತೆ ಶಿವನು ಮಾಯಾ ಶಕ್ತಿ ವಿಶಿಷ್ಟನಾಗಿರುವದರಿಂದ ಅವನು ಯಾರಿಗೂ ಪ್ರತ್ಯಕ್ಷನಾಗಲಾರನು. ಆದರೇ ಅವೇ ಭಕ್ತರ ಭಕ್ತಿಯನ್ನು ಸ್ವಿಕರಿಸುವುದಕ್ಕಾಗಿ ಗುರುರೂಪದಲ್ಲಿ ಪ್ರತ್ಯಕ್ಷನಾಗಿದ್ದಾನೆ. ಆದ್ದರಿಂದ ಗುರುವೇ ಪ್ರತ್ಯಕ್ಷ ಪರಮಾತ್ಮನು.

ಸನಾತನವಾದ ವೀರಶೈವ ಧರ್ಮದಲ್ಲಿ ಈ ಗುರು ಪರಂಪರೆಯು ಯುಗಯುಗಗಳಿಂದ ಬಂದುದಾಗಿದೆ. ಶಿವನ ಆದೇಶದ ಮೇರೆಗೆ ಮನುಕುಲದ ಕಲ್ಯಾಣಕ್ಕಾಗಿ ವೀರಶೈವ ಧರ್ಮವನ್ನು ಸ್ಥಪಿಸಲು ಅವತರಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರು ವೀರಶೈವ ಧರ್ಮದ ಆದಿಗುರುಗಳು. ಈ ಪಂಚಾಚಾರ್ಯರು ದೇಶದ ಮಧ್ಯದಲ್ಲಿ ಅನೇಕ ಮಠಗಳುನ್ನು ಶಾಖಾಮಠಗಳನ್ನು ಸ್ಥಾಪಿಸಿ ಅವುಗಳಿಗೆ ಪಟ್ಟಾಭಿಕ್ಷಿಕ್ತರಾದ ಶಿವಾಚಾರ್ಯರನ್ನು ಗುರುಗಳಾಗಿ ನೇಮಿಸದ್ದಾರೆ. ಅಂತೆಯೇ ಶಿವಾಚಾರ್ಯರ ಶಾಖಾಮಠಗಳು ಗುರು ವರ್ಗಮಠಗಳಂತಲೇ ಪ್ರಸಿದ್ಧವಾಗಿವೆ.


ವೀರಶೈವ ಧರ್ಮದಲ್ಲಿ ಕುಲಗುರು ಪರಂಪರೆ ಸನಾತನ ಕಾಲದಿಂದಲೂ ಒಂದಿದೆಯಲ್ಲದೇ ಅದು ಇಂದಿಗೂ ಪ್ರಚಲಿತದಲ್ಲಿದೆ. ಒಂದು ಮನೆತನದ ಎಲ್ಲ ಸದಸ್ಯರ ಆರೋಗ್ಯವನ್ನು ನೋಡಿಕೊಳ್ಳಲು ಒಬ್ಬ ವಿಶ್ವಾ ಸಾರ್ಯ ವೈದ್ಯರನ್ನು ನೇಮಿಸಿಕೊಳ್ಳುತ್ತಾರೆ. ಅವರ ಕೌಟುಂಬಿಕ ವೈದ್ಯರೆಂದು ಕರೆಯ್ಲುವರು. ಮನೆಯ ಎಲ್ಲ ಸದಸ್ಯರ ಆರೋಗ್ಯವನ್ನು ಪರೀಕ್ಷಿಸಿ ಹೇಗೆ ಆ ವೈದ್ಯರು ಉಪಚಾರವನ್ನು ಮಾಡಿ ಶಾರೀರಿಕ ಸ್ವಾಸ್ಥ್ಯವನ್ನುಕಾಪಾಡುವರೋ ಅದರಂತೆ ಒಂದುಮನೆತನಕ್ಕೆ ಗುರುವಾಗಿ ಬಂದ ಶಿವಾಚಾರ್ಯರು ಆ ಮನೆತದ ಎಲ್ಲ ಸದಸ್ಯರಿಗೆ ಧರ್ಮದಲ್ಲಿ ಹೇಳಿದ ೧೬ ಸಂಸ್ಕಾರಗಳನ್ನು ಆಯಾ ಸಮಯಕ್ಕೆ ಮಾಡಿ ಆ ವಂಶದ ಎಲ್ಲ ಸದಸ್ಯರ ಮಾನಸಿಕ ಆರೋಗ್ಯವನ್ನು ಕಾಪಾಡಿತ್ತಾ ಬರುತ್ತಿದ್ದಾರೆ. ಅಂತೆಯೇ ವೀರಶೈವ ಧರ್ಮದ ಪಂಚ ಆಚಾರಗಳಲ್ಲೊಂದಾದ ಸದಾಚಾರದಲ್ಲಿ ಒಂದು ವಂಶಕ್ಕೆ ಒಬ್ಬನೇ ಗುರು ಇರಬೇಕೆಂದು ಹೇಳಲಾಗಿದೆ.

ಒಂದೊಂದು ಗುರುವರ್ಗದ ಮಠಳಿಗೆ ಸಾವಿರಾರು ಮನೆತನಗಲು ಇವತ್ತಿಗೂ ಶಿಷ್ಯರಾಗಿರುವುದು ಪ್ರತ್ಯಕ್ಷವಾಗಿ ಕಾಣುತ್ತೇನೆ. ಬೀದರ ಜಿಲ್ಲೆಯಲ್ಲಿರುವ ಬೇಮಳಖೇಡಾ, ಹುಡಗಿ, ಚಿಟಗುಪ್ಪಾ, ಹಳ್ಳಿಖೇಡ (ಬಿ), ಮೇಹಕರ್, ಹಾರಕೂಡ, ಬೇಲೂರು, ತ್ರಿಪುರಾಂತ, ಸದ್ಲಾಪೂರ, ಹೆಡಗಾಪೂರ, ಚಾಂಬಾಳ, ರೇಕುಳಗಿ, ರಾಜೇಶ್ವರ, ಯದಲಾಪೂರ, ಭಾಲ್ಕಿ, ಡೋಣಗಾಂವ ಮತ್ತು ಗಡಿಗೌಡಗಾಂವ ಮುಂತಾದ ಗುರುವರ್ಗದ ಪಟ್ಟಾಧ್ಯಕ್ಷರು ಕಲ್ಯಾಣ ಕರ್ನಾಟಕದ ಮತ್ತು ಆಂಧ್ರ, ಮಹಾರಾಷ್ಟ್ರಗಳ ಲಕ್ಷಾಂತರ ವೀರಶೈವರಿಗೆ ವಂಶಪಾರಂಪರೀಕ ಗುರುಗಳಾಗಿ ಅಂದಿನಿಂದ ಇಂದಿನವರೆಗೆ ಎಲ್ಲ ಶಿಷ್ಯರನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಬಂದಿದ್ದಾರೆ. ಹೀಗೆ ಈ ಗುರು ಪರಂಪರೆಯು ನಮ್ಮ ದೇಶದ ಎಲ್ಲ ಪ್ರಾಂತಗಳಲ್ಲಿ ವ್ಯಾಪಿಸಿಕೊಂಡಿದೆ.

ಆದ್ದರಿಂದ ಪ್ರತಿಯೊಬ್ಬ ವೀರಶೈವರು ತಮ್ಮ ಮನೆಯ ಗುರುಗಳನ್ನು ಪ್ರತ್ಯಕ್ಷ ಪರಮಾತ್ಮನೆಂದೇ ಭಾವಿಸಿ ಅವರಿಂದಲೇ ದೀಕ್ಷಾದಿ ಸಂಸ್ಕಾರಗಳನ್ನು ಪಡೆದುಕೊಂಡು ಧರ್ಮವನ್ನು ಉಳಿಸಿ, ಬೆಳೆಸಿಕೊಂಡು ಹೋಗಬೇಕು. ಈ ಗುರು ವರ್ಗದ ಮಠಗಳಲ್ಲದೇ ಸಮಾಜದಲ್ಲಿ ವೀರಶೈವ ಪರಂಪರೆಯ ನಿರಂಜನ ಮಠಗಳು, ವಿವಿಧ ಆಶ್ರಮಗಳ ಹಾಗೂ ಬೇರೆ ಬೇರೆ ಧರ್ಮಗಳ ಮಠಾಧಿಪತಿಗಳೂ ಸಹ ಸಮಾಜದ ಸರ್ವಾಂಗೀಣ' ವಿಕಾಸಕ್ಕಾಗಿ ಧಾರ್ಮಿಕ ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯಗಳನ್ನು ಹಮ್ಮಿಕೊಂಡು ಸಮಾಜದ ಹಿತರಕ್ಷಣೆ ಮಾಡುತ್ತಿದ್ದಾರೆ. ಈ ಎಲ್ಲಾ ಪತಿಗಳ ಬಗ್ಗೆಯೂ ಸಹ ಗೌರವದ ಭಾವನೆ ಇರಬೇಕೆಂಬುದಾಗಿ ಶ್ರೀ ಕಾಶಿ ಜಗದ್ಗುರು ಮಹಾ ಸನ್ನಿಧಿಯವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದ್ದಾರೆ.

ಶ್ರಾವಣ ಸಂಪದ

ಸಂಸಾರದ ವಿಷಮತೆಗೆ ಕರ್ಮ ಕಾರಣ



ಈ ಜಗತ್ತಿನಲ್ಲಿಯ ಪ್ರಾಣಿಗಳು ಜನ್ಮ, ಆಯು,ಭೋಗಗಳ ದೃಷ್ಟಿಯಿಂದ ವಿಷಮ ಗಳಾಗಿರುತ್ತವೆ, ಅಂತೆಯೇ ಸಂಸಾರವು ವಿಷಮವಾಗದೆ ಈ ವಿಷಮತೆಗೆ ಪ್ರಾಣಿಗಳ ಕರ್ಮವೇ ಕಾರಣವೆಂಬುದಾಗಿ ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು. ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ವೇದಿಕೆಯಿಂದ ಈ ವಿಚಾರವನ್ನು ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿ ಸಂಸಾರಹೇಯಸ್ಥಲದಲ್ಲಿ ಭೂತ್ವಾ ಕರ್ಮವಶಾತ್ ಜಂತು: ಎಂಬ ಉಕ್ತಿಯಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಜೀವಿಗಳ ಕರ್ಮದ ತಾರತಮ್ಯದಿಂದಲೇ ಈ ಸಂಸಾರವು ವಿಷಮವಾಗಿದೆ ಎಂಬುದಾಗಿ ಉಪದೇಶಿಸಿದ್ದಾರೆ.

ಶಾಸ್ತ್ರದೃಷ್ಟಿಯಿಂದ ಸಂಚಿತ,ಪ್ರಾರಬ್ಧ ಮತ್ತು ಆಗಾಮಿ ಎಂಬುದಾಗಿ ಕರ್ಮಗಳನ್ನು ಮೂರು ಪ್ರಕಾರವಾಗಿ ಪರಿಗಣಿಸಲಾಗಿದೆ. ಹಿಂದಿನ ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯ-ಪಾಪಗಳು ನಮ್ಮ ಮನಸ್ಸಿನಲ್ಲಿ ಸಂಗ್ರಹವಾಗಿರುತ್ತವೆ. ಅವುಗಳಿಗೆ ಸಂಚಿತ ಕರ್ಮಗಳೆಂದು ಕರೆಯುವರು. ಈ ಸಂಚಿತದಲ್ಲಿಯೇ ಪಕ್ವವಾಗಿ ಜೀವಿಗೆ ಸುಖ ದು:ಖಗಳನ್ನು ಕೊಡಲು ಸಿದ್ಧವಾದದ್ದೇ ಪ್ರಾರಬ್ಧಕರ್ಮವು. ಅದರಂತೆ ಪ್ರಾರಬ್ಧವನ್ನು ಅನುಭವಿಸುತ್ತ ಜೀವಾತ್ಮನು ಸದ್ಯ ಮಾಡುವ ಶುಭಾಶುಭಕರ್ಮಗಳು ಮುಂದಿನ ದಿನಗಳಲ್ಲಿ ಫಲದಾಯಕವಾಗಿರುವುದರಿಂದ ಅವುಗಳಿಗೆ ಆಗಾಮಿ ಕರ್ಮವೆಂದು ಕರೆಯುವರು.

ಹೀಗೆ ಮೂರು ವಿಧವಾದ ಕರ್ಮಗಳಲ್ಲಿ ಪ್ರಾರಬ್ಧಕರ್ಮವೇ ಈ ಸಂಸಾರದ ವಿಷಮತೆಗೆ ಕಾರಣವಾಗಿರುತ್ತದೆ. ಸುಖ-ದು:ಖ ಫಲಗಳನ್ನು ಕೊಡಲು ಪ್ರಾರಂಭವಾದ ಕರ್ಮದಿಂದಲೇ ನಮಗೆ ಬೇರೆ ಬೇರೆ ಯೋನಿಗಳಲ್ಲಿ ಜನ್ಮವು ಬರುತ್ತದೆ. ಪರಮಾತ್ಮನು ಸೃಷ್ಟಿಕರ್ತನಾಗಿದ್ದರೂ ಅವನು ಪ್ರಾಣಿಗಳ ಕರ್ಮಗಳ ಆಧಾರದಿಂದಲೇ ಸೃಷ್ಟಿಯನ್ನು ಮಾಡುವುದರಿಂದ ವಿಷಮತೆಗೆ ಪರಮಾತ್ಮನು ಕಾರಣನಲ್ಲ.

ಭೂಮಿಯಲ್ಲಿ ಅನೇಕ ಬೀಜಗಳನ್ನು ಬಿತ್ತುತ್ತೇವೆ, ಮಳೆ ಬಂದಾಗ ಎಲ್ಲ ಬೀಜಗಳು ಮೊಳಕೆಯೊಡೆದು ಗಿಡ-ಬಳ್ಳಿಗಳಾಗಿ ಬೆಳೆಯುತ್ತವೆ. ಆ ಗಿಡ-ಮರಗಳು ಬೆಳೆಯಲು ಮಣ್ಣು,ನೀರು,ಗಾಳಿ,ಆಕಾಶ ಮತ್ತು ಸೂರ್ಯ ಚಂದ್ರಾದಿಗಳ ಬೆಳಕು ಹಾಗೂ ಉಷ್ಣಾಂಶಗಳು ಎಲ್ಲ ಗಿಡಗಳಿಗೆ ಸಮಾನವಾಗಿ ದೊರೆತರೂ ಅವುಗಳ ಫಲಗಳಲ್ಲಿರುವ ಮಧುರ,ಆಮ್ಲ,ಕ್ಷಾರ ಮುಂತಾದ ರಸಗಳು ಮಾತ್ರ ಭಿನ್ನ-ಭಿನ್ನ ವಾಗಿರುತ್ತವೆ. ಈ ರಸಗಳ ವೈಷ್ಯಕ್ಕೆ ಆಯಾಯ ವೃಕ್ಷಗಳ ಬೀಜಗಳೇ ಹೇಗೆ ಕಾರಣಗಳಾಗಿರುತ್ತವೆಯೋ ಅದರಂತೆ ಈ ಪ್ರಪಂಚದಲ್ಲಿ ವಿಷಮತೆಗೆ ಪ್ರತಿಯೊಂದು ಜೀವಿಗಳ ಪ್ರಾರಬ್ಧಕರ್ಮವೇ ಕಾರಣವೆಂಬುದನ್ನು ಪತಂಜಲಿ ಮಹರ್ಷಿಗಳೂ ಯೋಗ (2-13) ಸೂತ್ರದಲ್ಲಿ ಪ್ರತಿಪಾದಿಸಿದ್ದಾರೆ.

ಪ್ರಾರಬ್ಧಕರ್ಮದ ವೈಷ್ಯದಿಂದ ದೇವ, ಮಾನವ ಮತ್ತು ತಿರ್ಯಕ್ ಎಂಬುದಾಗಿ ಜನ್ಮಗಳು ಮೂರು ಪ್ರಕಾರವಾಗಿ ಹೇಳಲ್ಪಟ್ಟಿವೆ. ಪುಣ್ಯಾಧಿಕ್ಯದಿಂದ ದೇವಯೋನಿ, ಪಾಪಾಧಿಕ್ಯದಿಂದ ಕ್ರಿಮಿ-ಕೀಟಾದಿ ಹೀನಯೋನಿ ದೊರೆಯುವುದು. ಅಂತೆಯೇ ಶ್ರೀ ನಿಜಗುಣ ಶಿವಯೋಗಿಗಳು ಕೈವಲ್ಯ ಪದ್ಧತಿಯಲ್ಲಿ ಪಾಪಾನುಗುಣದಿಂದೆ ಗಿಡ-ಮರ ಕ್ರಿಮಿಗಳ ರೂಪಾಗಿ ಎಂಬುದಾಗಿ ಹೇಳಿದ್ದಾರೆ. ಇನ್ನು ಪುಣ್ಯಪಾಪಗಳು ಸಮಾನವಾದಾಗ ಮಾನವ ಜನ್ಮವು ಪ್ರಾಪ್ತವಾಗುವುದು. ಅಂತೆಯೇ ಮಾನವಜನ್ಮವು ದುರ್ಲಭವೆಂಬುದಾಗಿ ಹೇಳಿದ್ದಾರೆ.

ಹೀಗೆ ಅವರವರ ಪ್ರಾರಬ್ಧ ಕರ್ಮಾನುಸಾರವಾಗಿ ದೊರೆತ ಮಾನವ ದೇಹವನ್ನು ಬಳಸಿಕೊಂಡು ಪಾರಮಾರ್ಥವನ್ನು ಸಾಧಿಸಬೇಕೇ ವಿನ: ಸಾಂಸಾರಿಕ ಭೋಗಗಳಲ್ಲಿಯೇ ಆಸಕ್ತನಾಗಿರಕೂಡದು. ಜೀವಿಗಳ ಆಸಕ್ತಿಯನ್ನು ದೂರಮಾಡುವದಕ್ಕಾಗಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶರೀರಕ್ಕೆ ಮಲ ಕೋಶ ಎಂಬುದಾಗಿ ಕರೆದಿದ್ದಾರೆ. ಮಲ ಕೋಶವೆಂದರೆ ಹೊಲಸಿನ ಖಜಾನೆ ಎಂದರ್ಥ, ಪ್ರತಿಯೊಬ್ಬರ ದೇಹದಿಂದ ಯಾವಾಗಲೂ ವಿವಿಧ ಮಲಗಳೇ ಹೊರಸೂಸುತ್ತಿರುತ್ತವೆ. ಅಂತೆಯೇ ಅಕ್ಕಮಹಾದೇವಿಯು ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ ಎಂಬುದಾಗಿ ತಮ್ಮ ವಚನದಲ್ಲಿ ಶರೀರವು ಮಲಕೋಶವೆಂಬುದಾಗಿ ಸಮರ್ಥಿಸಿದ್ದಾರೆ.

ಶ್ರೀ ಪತಂಜಲಿ ಮಹರ್ಷಿಗಳು ಶರೀರೋತ್ಪತ್ತಿಗೆ ಕಾರಣಗಳಾದ ಶುಕ್ರ-ಶೋಣಿತಗಳು, ತಾಯಿಯ ಗರ್ಭಾದಿಗಳು ಅಶುಚಿಗಳಾಗಿರುವದರಿಂದ ಶರೀರವೂ ಸಹ ಅಶುಚಿಯೇ ಎಂಬುದಾಗಿ ಹೇಳಿದ್ದಾರೆ.

ಹೀಗೆ ಪ್ರಾರಬ್ಧಕರ್ಮದ ತಾರತಮ್ಯದಿಂದ ಭಿನ್ನ-ಭಿನ್ನವಾಗಿರುವ ಈ ದೇಹವು ಅಶುಚಿಯಾಗಿರುತ್ತದೆ. ಕಾರಣ ಈ ದೇಹವೇ ನಾನೆಂದು ಬಲವಾಗಿ ನಂಬಿ ಸಂಸಾರದಲ್ಲಿ ಆಸಕ್ತರಾಗಿ ಜನ್ಮವನ್ನು ನಿರರ್ಥಕ ಮಾಡಿಕೊಳ್ಳಬಾರದೆಂದು ಶ್ರೀ ಕಾಶಿ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

www.vijaykarnatakaepaper.com



ಶ್ರಾವಣ ಸಂದೇಶ

ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು
ಸ್ಥಳ: ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ್

ಸೃಷ್ಟಿಯೆ ಸಂಸಾರವಲ್ಲ

ಶಿವನು ತನ್ನ ಸಂಕಲ್ಪ ಶಕ್ತಿಯಿಂದ ಲೋಕಗಳನ್ನು ಸೃಷ್ಟಿಸಿದ್ದಾನೆ ಆದರೆ ಜೀವಾತ್ಮನು ಆ ಸೃಷ್ಟಿಯ ಮೇಲೆ ನನ್ನದೆಂಬ ಭಾವನೆ ನಿರ್ಮಿಸಿಕೊಂಡು ಸಂಸಾರಿಯಾಗಿದ್ದಾನೆ.

ಶ್ರೀ ಸಿದ್ಧಾಂತ ಶಿಖಾಮಣಿ ಸಂಸಾರಹೇಯ ಸ್ಥಲದಲ್ಲಿ ಶ್ರೀ ಜಗದ್ಗುರು ರೇಣುಕಾಭಗವತ್ಪಾದರು ಜೀವಾತ್ಮನು ನಿರ್ಮಿಸಿಕೊಂಡಿರುವ ಸಂಸಾರದ ಬಗ್ಗೆ ವಿಸ್ತಾರವಾಗಿ ತಿಳಿಸಿ, ಅದರಲ್ಲಿ ಹೇಯ ಬುದ್ಧಿ ಉಂಟಾದಾಗಲೇ ಜೀವಾತ್ಮನಿಗೆ ಮುಂದಿನ ಪ್ರಗತಿ ಸಾಧ್ಯ ಎಂದು ಬೋಧಿಸಿದ್ದಾರೆ.

ಹೊಲ,ಮನೆ, ಹೆಂಡತಿ,ಮಕ್ಕಳು ಸಂಸಾರವೆಂದು ಭಾವಿಸುತ್ತಾರೆ. ವಾಸ್ತವಿಕವಾಗಿ ವಿಚಾರ ಮಾಡಿದರೆ ಇವೆಲ್ಲವೂ ಈಶ್ವರನ ಸೃಷ್ಟಿಯ ವಸ್ತುಗಳು. ಆದರೆ ಜೀವಾತ್ಮನು ತನ್ನ ಪ್ರಾರಬ್ಧ ಕರ್ಮಾನುಸಾರವಾಗಿ ತಾನು ಸಂಗ್ರಹಿಸಿಕೊಂಡಿರುವ ಈಶ ನಿರ್ಮಿತವಾದ ವಸ್ತುಗಳ ಮೇಲೆ ಯಾವಾಗ ನನ್ನದೆಂಬ ಭಾವನೆಯನ್ನು ಮಾಡಿಕೊಳ್ಳುವನೋ ಅದುವೇ ಅವನ ಸಂಸಾರ. ನಮಗೆ ದು:ಖ ಕೊಡುವುದು ನಮ್ಮ ಸಂಸಾರವೇ ಹೊರತು, ಈಶ ಸೃಷ್ಟಿಯ ವಸ್ತುಗಳಲ್ಲ. ಭಗವಂತ ಯಾರಿಗೂ ದು:ಖ ಕೊಡುವುದಿಲ್ಲ. ಶಿವನು ಕಲ್ಲು,ಮಣ್ಣು, ಗಂಡು-ಹೆಣ್ಣುಗಳನ್ನು ಸೃಷ್ಟಿಮಾಡಿದರೆ, ಅವುಗಳನ್ನು ಮನೆ-ಮಠಗಳನ್ನಾಗಿ, ಗಂಡ-ಹೆಂಡತಿಯರನ್ನಾಗಿ ಜೀವಾತ್ಮನು ನಿರ್ಮಿಸಿಕೊಂಡಿದ್ದಾನೆ. ಇಲ್ಲಿ ಶಿವನ ಸೃಷ್ಟಿಯ ಕಲ್ಲು ಮಣ್ಣುಗಳು ಗಂಡು-ಹೆಣ್ಣುಗಳು ದು:ಖಕ್ಕೆ ಕಾರಣವಾಗುವುದಿಲ್ಲ. ಆದರೆ ಜೀವಾತ್ಮನು ನಿರ್ಮಿಸಿಕೊಂಡಿರುವ ಮನೆ-ಮಠಗಳು ಮತ್ತು ಗಂಡ-ಹೆಂಡತಿಯರು ದು:ಖಕ್ಕೆ ಕಾರಣವಾಗುತ್ತಾರೆ. ಇವುಗಳ ಮೇಲೆ ಜೀವಾತ್ಮನು ನನ್ನದೆಂಬ ಭಾವನೆ ತಾಳಿರುತ್ತಾನೆ. ಸೃಷ್ಟಿ ಸಂಸಾರವಲ್ಲ, ಸೃಷ್ಟಿಯ ಮೇಲಿರುವ ನನ್ನದೆಂಬ ಜೀವಾತ್ಮನ ಭಾವನೆಯೇ ಸಂಸಾರವು. ಅದುವೇ ದು:ಖಕ್ಕೆ ಕಾರಣ. ಸಂಸಾರಹೇಯವೆಂದರೆ ಮನೆ-ಮಠ ಮತ್ತು ಹೆಂಡರು ಮಕ್ಕಳನ್ನು ತ್ಯಜಿಸುವುದು ಎಂದರ್ಥವಲ್ಲ. ಶಾರೀರಿಕವಾಗಿ ತ್ಯಾಗ ನಿಜವಾದ ತ್ಯಾಗವಲ್ಲ. ಶಿವನಿಂದ ನಿರ್ಮಿತವಾದ ಸೃಷ್ಟಿಯಲ್ಲಿ ಇದ್ದುಕೊಂಡೇ ಇದೆಲ್ಲವೂ ಶಿವನ ಪ್ರಸಾದ, ನನ್ನದು ಎನ್ನುವ ವಸ್ತು ಯಾವುದು ಇಲ್ಲ ಎಂಬ ವಿವೇಕ ಜಾಗೃತಗೊಳಿಸಿಕೊಂಡರೆ ನನ್ನದೆಂಬ ಸಂಕುಚಿತ ಭಾವನೆ ದೂರಾಗುತ್ತದೆ. ಇದುವೆ ನಿಜವಾದ ಸಂಸಾರಹೇಯ.

ಈಶಾವಾಸ್ಯಮಿದಂ ಸರ್ವಂ ಎಂಬ ಉಪನಿಷತ್ತನ ಉಕ್ತಿಯಂತೆ ಇದೆಲ್ಲವೂ ಈಶ ನಿರ್ಮಿತವಾದದ್ದು ಮತ್ತು ಈಶ್ವರನಿಂದಲೇ ವ್ಯಾಪಿಸಲ್ಪಟ್ಟಿದ್ದು ಎಂಬ ಭಾವನೆ ತಾಳಿಕೊಂಡಾಗ ನನ್ನದೆಂಬ ಮಿಥ್ಯಾಭಾವನೆ ದೂರಾಗಿ ಜೀವಾತ್ಮನು ಸಂಸಾರಹೇಯ ಸ್ಥಿತಿಯನ್ನು ಪಡೆದುಕೊಳ್ಳುವನು. ಪ್ರತಿಯೊಬ್ಬ ಸಾಧಕನು ಪುಣ್ಯಕರ್ಮಗಳಿಂದ ತನ್ನ ಮನೋಬುದ್ಧಿ ಶುದ್ಧ ಮಾಡಿಕೊಳ್ಳಬೇಕು.

www.vijaykarnatakaepaper.com



ಶ್ರಾವಣ ಸಂದೇಶ

ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು
ಸ್ಥಳ: ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ್

ಪರಮ ತತ್ತ್ವವೇ ಆತ್ಮ

ಭಕ್ತಸ್ಥಲದ ಸಾಧಕನು ಆತ್ಮ ಮತ್ತು ಅನಾತ್ಮಗಳ ವಿವೇಕವನ್ನು ಪಡೆದು ಕೊಂಡವನಾಗಿರಬೇಕು. ಶ್ರೀ ಸಿದ್ಧಾಂತ ಶಿಖಾಮಣಿಯ ಭಕ್ತಸ್ಥಲದ ಎರಡನೇ ಅವಾಂತರಸ್ಥಲವಾದ ಪಿಂಡಜ್ಞಾನ ಸ್ಥಲದಲ್ಲಿ ಶರೀರ ಮತ್ತು ಆತ್ಮಗಳ ವಿವೇಕವನ್ನು ಮಾಡಿಕೊಂಡವನೇ ಪಿಂಡಜ್ಞಾನಿಯೆಂದು ಹೇಳಲಾಗಿದೆ. ಪ್ರಾಯ: ಶಾಸ್ತ್ರ ಸಂಸ್ಕಾರವಿಲ್ಲದ ಬಹಳಷ್ಟು ಜನರು ಶರೀರವನ್ನೇ ಆತ್ಮವೆಂಬುದಾಗಿ ತಿಳಿದುಕೊಂಡಿರುತ್ತಾರೆ. ಆತ್ಮವೆಂದರೆ ಜನನ ಮರಣಾದಿಯಾದ ವಿಕಾರವೂ ಇಲ್ಲದ ಸಚ್ಚಿದಾನಂದ ಸ್ವರೂಪವಾದ ಪರಮ ತತ್ವವೇ ಆತ್ಮವು, ಇಂತಹ ಆತ್ಮ ತತ್ವವು ಪ್ರತಿಯೊಬ್ಬರ ದೇಹದಲ್ಲಿ ಇದ್ದೆ ಇರುತ್ತದೆ. ಆ ಚೈತನ್ಯರೂಪವಾದ ಆತ್ಮದ ಅಸ್ತಿತ್ವ ದಿಂದಲೇ ಈ ಜಡವಾದ ದೇಹವೂ ಸಹಿತ ಎಲ್ಲ ಕ್ರಿಯೇಗಳನ್ನು ಮಾಡುತ್ತಿರುತ್ತವೆ. ಹೀಗಿದ್ದರೂ ಆತ್ಮ ಅನಾತ್ಮಗಳ ವಿವೇಕವಿಲ್ಲದ ಜನರು ಕಾಣುವ ದೇಹವನ್ನೇ ತಾವೆಂದು ಅದುವೇ ಆತ್ಮವೆಂದು ಭ್ರಮೆಗೆ ಒಳಗಾಗಿ ಸಂಪೂರ್ಣವಾಗಿ ಬೆಳೆದು ನಿಂತಾಗ ವಿಪರಿಣಮತೆ ಎನ್ನುವರು. ಮುಂದೆ ಕ್ರಮೇಣ ವಯಸ್ಸಾದಂತೆ ಶರೀರವು ಕ್ಷೀಣಗೊಂಡಾಗ ಅಪಕ್ಷೀಯತೆ ಎನ್ನುವರು. ಮುಂದೊಂದು ದಿನ ಒಳಗಿರುವ ಜೀವಾತ್ಮನು ದೇಹವನ್ನು ತ್ಯಜಿಸಿಹೋದ ಮೇಲೆ ಈ ದೇಹವು ಪಂಚಭೂತಗಳಲ್ಲಿ ಲಯವಾಗುವುದನ್ನು ಕಂಡು ವಿನಶ್ಯತಿ ಎನ್ನುವರು. ಇಂತಹ ಆರು ವಿಕಾರಗಳಿಂದ ಕೂಡಿದ ದೇಹವು ಅನಾತ್ಮರೂಪವಾದದ್ದು ಇದಕ್ಕಿಂತಲೂ ಭಿನ್ನವಾಗಿ ಸದಾ ಸಚ್ಚಿದಾನಂದ ಸ್ವರೂಪವಾದದ್ದೇ ಆತ್ಮ ತತ್ವವು, ಹೀಗೆ ಆತ್ಮ ಅನಾತ್ಮಗಳ ವಿವೇಕವನ್ನು ಮಾಡಿಕೊಂಡವನೇ ಪಿಂಡಸ್ಥಲದ ಸಾಧಕನು. ಪ್ರತಿಯೊಂದು ಶರೀರಕ್ಕೆ ಅಸ್ತಿ, ಜಾಯತೆ, ವಿವರ್ಧತೆ, ವಿಪರಿಣಮತೆ, ಅಪಕ್ಷೀಯತೆ ಮತ್ತು ವಿನಶ್ಯತಿಗಳೆಂಬ ಆರು ವಿಕಾರಗಳು ಅಂಟಿಕೊಂಡಿರುತ್ತವೆ. ತಾಯಿಯಗರ್ಭದಲ್ಲಿ ಶಿಶು ಮೂಡಿದಾಗ ಅದಕ್ಕೆ ಅಸ್ತಿ ಎಂದು ಕರೆಯುತ್ತಾರೆ. ಮುಂದೆ ಒಂಬತ್ತು ತಿಂಗಳ ನಂತರ ಅದು ತಾಯಿಯ ಗರ್ಭದಿಂದ ಹೊರಬಂದಾಗ ಜಾಯತೇ ಎಂದು. ನಂತರ ತಾಯಿಯ ಹಾಲು ಕುಡಿದು ಅನ್ನಾದಿಗಳನ್ನು ಸೇವಿಸಿ ಬೆಳೆದಾಗ ವಿವರ್ಧತೆಯಂದು ಭಕ್ತನಾದವನೂ ಸಹ ಆತ್ಮಾನಾತ್ಮ ವಿವೇಕಿಯಾಗಿರಬೇಕು. ಎಲ್ಲವೂ ನನ್ನಿಂದಲೇ ನಡೆಯುತ್ತದೆ ಎಮದುತಿಳಿದುಕೊಂಡವ ಮಾನವರು ಎಲ್ಲವನ್ನೂನೀಡಿದ ಭಗವಂತನನ್ನು ಮರೆಯುತ್ತಿದ್ದಾರೆ. ಅಧ್ಯಾತ್ಮ ಜ್ಞಾನ ಪಡೆದಾಗ ಮಾತ್ರ ನಾನುಎಂಬ ಅಹಂಕಾರ ನಮ್ಮಿಂದ ದೂರಾಗಬಹುದು. ಎಲ್ಲಿವರೆಗೂ ನಾನು ಎಂಬುದು ಹೋಗುವುದಿಲ್ಲವೋ ಅಲ್ಲಿವರೆಗೂ ಸಾಧನೆ ಮಾಡಲಾಗದು. ಸಾಧನೆಗೆ ಅಹಂಕಾರ ಖಂಡನೆ ಅಗತ್ಯವಾಗಿದೆ. ಎಲ್ಲರೂ ಒಳ್ಳೆಯದನ್ನು ಅನುಸರಿಸಬೇಕು.



ಶ್ರಾವಣ ಸಂದೇಶ

ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು
ಸ್ಥಳ: ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ್

ಭಸ್ಮದಿಂದ ಆರೋಗ್ಯಭಾಗ್ಯ

ಭಸ್ಮ ಧಾರಣೆಯಿಂದ ಉತ್ತಮವಾದ ಆರೋಗ್ಯದ ಜತೆಗೆ ಲೌಕಿಕ ಹಾಗೂ ಆಧ್ಯಾತ್ಮಿಕ ಭಾಗ ದೊರೆಲಿದೆ.

ಭಸ್ಮವೂ ಸಹ ಒಂದು ಶ್ರೇಷ್ಠವಾದ ಆವರಣವು.ಪ್ರತಿಯೊಬ್ಬ ಶಿವಭಕ್ತನು ಶಿವ ಪೂಜಾದಿಗಳನ್ನು ಮಾಡುವಾಗ ತನ್ನ ದೇಹದ ಮೇಲೆ ಭಸ್ಮದ ತ್ರಿಪುಂಡ್ರವನ್ನು ಧರಿಸಿಕೊಳ್ಳಬೇಕು.

ಚೈತನ್ಯ ಸ್ವರೂಪವಾದ ಶಿವನನ್ನು ತನ್ನ ಮನಸ್ಸಿನಲ್ಲಿ ಸದಾ ಧ್ಯಾನಿಸುತ್ತಿರುವುದೇ ನಿರೂಪಾದಿಕ ಭಸ್ಮ ಧಾರಣೆ. ಇದಕ್ಕೆ ಚಿದ್ಭಸ್ಮ ಧಾರಣೆಯಂತಲೂ ಕರೆಯುವರು.

ಗೋಮಾಯದಿಂದ ಶಾಸ್ತ್ರೋಕ್ತ ಪದ್ಧತಿಯಂತೆ ತಯಾರಿಸಲ್ಪಟ್ಟ ಭಸ್ಮವನ್ನು ಬಹಿರಂಗದಲ್ಲಿ ಧರಿಸುವುದು ಸೋಪಾಧಿಕ ಭಸ್ಮಧಾರಣೆ. ಸೃಷ್ಠಿಯ ಆದಿಯಲ್ಲಿ ಶಿವನ ಸದ್ಯೋಜಾತಾದಿ ಪಂಚಮುಖಗಳಿಂದ ಕ್ರಮವಾಗಿ ನಂದಾ,ಭದ್ರಾ, ಸುರಭಿ, ಸುಶಿಲ ಮತ್ತು ಸುಮನಾ ಎಂಬ ಪಂಚಗೋವುಗಳು ಉತ್ಪನ್ನವಾದವು. ಇವುಗಳು ಕಪಿಲ,ಕೃಷ್ಣ ಧವಲ,ಧೂಮ್ರ ಮತ್ತು ರಕ್ತ ವರ್ಣದವುಗಳಾಗಿರುತ್ತವೆ. ಇಂದು ಆಯಾ ವರ್ಣಗಳಿಂದ ದೊರೆಯುವ ದೇಶಿ ಆಕಳುಗಳನ್ನು ಅವುಗಳ ಸ್ವರೂಪವೆಂದೇ ಭಾವಿಸಬೇಕು.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಕಲ್ಪ,ಅನುಕಲ್ಪ ಮತ್ತು ಅಕಲ್ಪಗಳೆಂಬ ಭಸ್ಮ ನಿರ್ಮಾಣದ ನಾಲ್ಕು ವಿಧಾನಗಳು ಪ್ರತಿಪಾದಿಸಲ್ಪಟ್ಟಿದೆ. ಇವುಗಳಲ್ಲಿ ಕಲ್ಪ ವಿಧಿಯೇ ಶ್ರೇಷ್ಠವಾದುದು. ಸದ್ಯೋಜಾತ ಮಂತ್ರವನ್ನು ಪಠಿಸುತ್ತ ಗೋಮಯವನ್ನು ಭೂಸ್ಪರ್ಶವಾಗದ ಹಾಗೆ ಹಿಡಿದು, ವಾಮದೇವ ಮಂತ್ರದಿಂದ ಅದನ್ನು ಕುಳ್ಳುತಟ್ಟಿ ತತ್ಪುರುಷ ಮಂತ್ರ ದಿಂದ ಅದನ್ನು ಒಣಗಿಸಿ, ಅಘೋರ ಮಂತ್ರ ದಿಂದ ಅದನ್ನು ಸುಟ್ಟು ಮತ್ತು ಈಶಾನ ಮಂತ್ರದಿಂದ ಅದನ್ನು ಸಂಗ್ರಹಿಸುವ ವಿಧಾನವೇ ಕಲ್ಪ ವಿಧಿ. ಭಸ್ಮವನ್ನು ವಿಭೂತಿ ಯಂತಲೂ ಕರೆಯುತ್ತಾರೆ. ಹೀಗೆ ಈ ಗೋಮಾಯ ಭಸ್ಮದಲ್ಲಿ ಲೌಕಿಕ ಭೋಗಭಾಗ್ಯಗಳನ್ನು, ಆಧ್ಯಾತ್ಮಿಕ ಜ್ಞಾನ ಸಂಪತ್ತನ್ನು ಕೊಡುವ, ಭೂತಪ್ರೇತ ಮತ್ತು ತಾಪತ್ರಯಾದಿಗಳಿಂದ ರಕ್ಷಿಸುವ ಸಾಮರ್ಥ್ಯವಿದೆ.ಪ್ರತಿಯೊಬ್ಬ ವೀರಶೈವನು ಈ ಭಸ್ಮವನ್ನು ಶಾಸ್ತ್ರೋಕ್ತ ವಿಧಿಯಿಂದ ಧರಿಕೊಳ್ಳಬೇಕು.

ಭಸ್ಮದ ಕಣಗಳನ್ನು ಮೈತುಂಬ ಉದುರಿಸಿಕೊಳ್ಳುವುದೇ ಭಸ್ಮ ಸ್ನಾನ. ಆ ಕಣಗಳನ್ನು ಮೈಗೆಲ್ಲ ಒರೆಸಿಕೊಳ್ಳುವುದೇ ಭಸ್ಮೋದ್ಧೂಲನ. ತನ್ನ ಮಧ್ಯದ ಮೂರು ಬೆರಳುಗಳಿಂದ ಮಸ್ತಕ, ಹಣೆ ಮುಂತಾದ ಹದಿನೈದು ಸ್ಥಾನಗಳಲ್ಲಿ ಧರಿಸುವುದೇ ತ್ರಿಪುಂಡ್ರ ಧಾರಣೆ.

ಗೋಮಾಯದಲ್ಲಿ ಲಕ್ಷ್ಮಿಯವಾಸವಿದೆ ಎಂದು ಮಹಾಭಾರತದಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಅಂತಹ ಗೋಮಾಯದಿಂದಲೇ ಈ ಭಸ್ಮವು ನಿರ್ಮಾಣವಾಗಿರುವುದರಿಂದ ಅದನ್ನುಶ್ರದ್ಧೆಯಿಂಧರಿಸಿದ ಶಿವಭಕ್ತನಿಗೆ ತನ್ನ ಬದುಕಿನಲ್ಲಿ ಸಂಪತ್ತಿನ ಕೊರತೆಯೂ ಇರುವುದಿಲ್ಲ.

ಮಂತ್ರ ಜಪದಿಂದ ಮಾಯಾ ಮಲ ದೂರ



ಬ್ಯಾಡಗಿ,ಆ.1 -ಮನುಷ್ಯನಮನಸ್ಸಿನಏಕಾಗ್ರತೆಗೆಜಪ, ತಪಗಳು ಅತ್ಯವಶ್ಯ ಎಂದು ಕಾಶಿ ಜಗದ್ಗುರು ಡಾ. ಚಂದ್ರ ಶೇಖರ ಶಿವಾಚಾರ್ಯ ಭಗವತ್ಪಾದರು ನುಡಿದರು.

ಮಂಗಳವಾರ ಸ್ಥಳೀಯ ಶ್ರೀ ಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ಎಂಟನೇ ದಿನದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಮಂತ್ರಶಾಸ್ತ್ರದಲ್ಲಿ ಏಳು ಕೋಟಿ ಮಂತ್ರಗಳ ಗಣನೆ ಮಾಡಿದ್ದಾರೆ. ಇವುಗಳಲ್ಲಿ ಪ್ರಣವ ಸಹಿತ ಪಂಚಾಕ್ಷರ ಮಹಾಮಂತ್ರವು ಶ್ರೇಷ್ಠವಾಗಿದೆ. ಅರ್ಥದ ಚಿಂತನೆಯನ್ನು ಮಾಡುತ್ತ ಮಂತ್ರಾಕ್ಷರಗಳನ್ನು ಆವರ್ತನ ಮಾಡುವುದಕ್ಕೆ ಜಪವೆಂದು ಕರೆ-ಯುತ್ತಾರೆ ಎಂದರು.

ಪ್ರತಿಯೊಬ್ಬ ಸಾಧಕನು ತನಗೆ ತನ್ನ ಗುರುವಿನಿಂದ ದೊರೆತ ಮಂತ್ರಾರ್ಥವನ್ನು ಮನಸ್ಸಿನಲ್ಲಿ ಚಿಂತಿಸುತ್ತ ಅದನ್ನು ಆವರ್ತಿಸುತ್ತಾ ಹೋದರೆ ಮನಸ್ಸಿನ ಏಕಾಗ್ರತೆ ಸಾಧಿಸಲು ಸಾಧ್ಯ.ಮಂತ್ರದ ಸಹಾಯದಿಂದ ಮನುಷ್ಯ ಚಂಚಲ ಮನಸ್ಸನ್ನು ನಿಗ್ರಹಗೊಳಿಸಿ ಮನಸ್ಸನ್ನು ಮೇಲ್ಮಟ್ಟಕ್ಕೆ ಎತ್ತರಿಸಲು ಸಾಧ್ಯ.ಅಂತಯೇ ವೀರಶೈವರ ಶಿವಯೋಗದಲ್ಲಿ ಪಂಚಾಕ್ಷರ ಮಹಾಮಂತ್ರದ ಜಪಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ ಎಂದರು.

ಮಂತ್ರ ಜಪದಿಂದ ಮಾಯಾ ಮಲವು ದೂರವಾಗುವುದಲ್ಲದೇ ಬೇಧ ಬುದ್ಧಿ ನಾಶವಾಗುತ್ತದೆ. ಪ್ರತಿಯೊಬ್ಬ ಸಾಧಕನು ಸದ್ಗುರುಗಳಿಂದ ಮಂತ್ರದೀಕ್ಷೆ ಪಡೆದು ಅವರು ಉಪದೇಶಿಸಿದ ರೀತಿಯಲ್ಲಿ ಮಂತ್ರದ ಮನನ ರೂಪವಾದ ಜಪವನ್ನು ಮಾಡಿ ಮಾಯಾ ಮಲದಿಂದ ನಿವೃತ್ತಿ ಪಡೆದಾಗ ಶಿವಯೋಗವು ಸುಲಭವಾಗುವುದೆಂದರು.

ಸಿದ್ಧಾಂತ ಸಾಗರ

ಧರ್ಮ ಸಂಸ್ಕಾರದ ಪಾತ್ರ ಹಿರಿದು



ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು

ಶಹಾಪುರ: ಶ್ರೇಷ್ಠ ಬದುಕನ್ನು ಸಾಗಿಸಲು ವ್ಯಕ್ತಿತ್ವದ ವಿಕಾಸ ಅವಶ್ಯಕ. ಈ ವಿಕಾಸದ ಹಿನ್ನೆಲೆಯಲ್ಲಿ ಧಾರ್ಮಿಕ ಸಂಸ್ಕಾರಗಳ ಪಾತ್ರ ದೊಡ್ಡದು.

ವೀರಶೈವ ಧರ್ಮದಲ್ಲಿ ಗರ್ಭದಾನ, ಸೀಮಂತ, ಗರ್ಭಲಿಂಗ ಧಾರಣ, ಜಾತಕರ್ಮ, ನಾಮಕರಣ, ಚೌಲಕರ್ಮ, ಅನ್ನ ಪ್ರಾಶನ, ದೀಕ್ಷಾ, ವಿವಾಹ ಮತ್ತು ಅಂತ್ಯೇಷ್ಠಿ ಎನ್ನುವ ಸಂಸ್ಕಾರಗಳಿವೆ. ಆಯಾ ಸಮಯ ಮತ್ತು ವಯಸ್ಸಿನ ಸಂದರ್ಭಗಳಲ್ಲಿ ಶಾಸ್ತ್ರೋಕ್ತ ಪದ್ಧತಿಯಂತೆ ಮಾಡಲಾಗುತ್ತದೆ. ಧಾರ್ಮಿಕ ಸಂಸ್ಕಾರಗಳನ್ನು ಮಾಡುವುದರಿಂದ ಬೆಳೆಯುತ್ತಿರುವ ಮಗುವಿನ ಮನಸ್ಸಿನ ಮೇಲೆ ಒಳ್ಳೆಯ ಸಂಸ್ಕಾರಗಳಾಗಿ ವ್ಯಕ್ತಿತ್ವದ ವಿಕಾಸದಲ್ಲಿ ಮೌಲ್ಯಿಕ ಗುಣ ಪ್ರಾಪ್ತವಾಗುತ್ತವೆ.

ಆಧುನಿಕ ತಂತ್ರಜ್ಞಾನವನ್ನು ಪಡೆದು ಬೌದ್ಧಿಕ ಬೆಳವಣಿಗೆ ವ್ಯಕ್ತಿತ್ವ ವಿಕಾಸದ ಒಂದು ಭಾಗವಾದರೆ, ಮನಸ್ಸಿನ ಶ್ರೀಮಂತಿಕೆಯು ಮೌಲ್ಯ ಬೆಳೆಸುವುದು ಇನ್ನೊಂದು ಭಾಗ. ಧಾರ್ಮಿಕ ಸಂಸ್ಕಾರ ಹೀನನಾದ ವ್ಯಕ್ತಿಯು ಉನ್ನತ ಸ್ಥಾನಗಳಲ್ಲಿ ಇದ್ದರೂ ಆಚಾರ ಹೀನತೆಯಿಂದ ಪತೀತನಾಗುವ ಸಾಧ್ಯತೆಗಳಿರುತ್ತವೆ. ನೈತಿಕ ಬಲವನ್ನು ಹೆಚ್ಚಿಸುವ ಧಾರ್ಮಿಕ ಸಂಸ್ಕಾರಗಳು ಅನನ್ಯ.

ಸಂಸ್ಕಾರದಿಂದ ಮಣ್ಣು ಮಡಿಕೆಯಾಗುತ್ತದೆ. ಹೊನ್ನ ತೊಡುಗೆಯಾಗುತ್ತದೆ. ಅರಳೆ ವಸ್ತ್ರವಾಗುತ್ತದೆ. ಹಾಗೆಯೇ ಮಾನವನು ಮಹಾಮಾನವನಾಗಿ ಅಂತಿಮವಾಗಿ ಮಹಾದೇವನಾಗಬಲ್ಲ. ದೀಕ್ಷಾ ಸಂಸ್ಕಾರ ಅವಶ್ಯಕ. ಗುರುಗಳು ಇಷ್ಟಲಿಂಗವನ್ನು ದಯಪಾಲಿಸಿ ಪಂಚಾಕ್ಷರ ಮಹಾಮಂತ್ರವನ್ನು ಉಪದೇಶಿಸುತ್ತಾರೆ.

ಸಾಧಕನು ಆ ಇಷ್ಟಲಿಂಗವನ್ನು ಸದಾದೇಹದ ಎದೆ ಭಾಗದಲ್ಲಿ ಧರಿಸಿಕೊಂಡು ನಿತ್ಯ ಪೂಜಿಸಿ, ಜಪಾದಿಗಳನ್ನು ಕೈಗೊಂಡು ಮನಸ್ಸು ಏಕಾಗ್ರತೆಯಡೆಗೆ ನಿಯಂತ್ರಿಸುತ್ತದೆ.

ಪ್ರಸ್ತುತ ದಿನಗಳಲ್ಲಿ ಮನುಷ್ಯರು ಧಾರ್ಮಿಕ ಸಂಸ್ಕಾರದಿಂದ ದೂರ ಸರಿಯುತ್ತಿದ್ದಾರೆ. ಇದರಿಂದ ಸ್ವೇಚ್ಛಾಚಾರ ನಡತೆಗಳು ಹೆಚ್ಚಾಗುತ್ತಿವೆ. ಮಾನಸಿಕ ನೆಮ್ಮದಿ ಕಳೆದುಕೊಳ್ಳುತ್ತಾನೆ.



ಶ್ರಾವಣ ಸಂದೇಶ

ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು
ಸ್ಥಳ: ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ್

ಇಷ್ಟಲಿಂಗ ಪೂಜೆಯೇ ಕರ್ಮ

ವೀರಶೈವರಿಗೆ ಇಷ್ಟಲಿಂಗ ಪೂಜೆಯೇ ಕರ್ಮ ಯಜ್ಞ. ವೀರಶೈವ ಸಾಧಕ ಪ್ರತಿ ದಿನ ಆಚರಿಸಲೇಬೇಕಾದ ಕರ್ಮವಿದು.

ಷಟಸ್ಥಲ ಮಾರ್ಗದಲ್ಲಿ ನಡೆಯುವ ಭಕ್ತನು ತಪ, ಕರ್ಮ, ಜಪ,ಧ್ಯಾನ ಮತ್ತು ಜ್ಞಾನಗಳೆಂಬ ಪಂಚ ಶಿವ ಯಜ್ಞಗಳನ್ನು ಅಳವಡಿಸಿಕೊಳ್ಳಬೇಕು. ಯಜ್ಞ ಎಂದರೆ ಪೂಜಾ ಪದ್ಧತಿ, ತಪಸ್ಸು ಎಂದರೆ ಶರೀರ ದಂಡನೆ, ವೀರಶೈವ ಧರ್ಮದಲ್ಲಿ ಕಠಿಣ ಉಪವಾಸಾದಿ ಹೇಳದೆ ಕೇವಲ ಶಿವ ಪೂಜೆ ಮಾಡಿದರೆ ಸಾಕು, ಶಿವ ಪೂಜೆ ತಪಸ್ಸಿಗೂ ಮಿಲಿಲಾದದ್ದು ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಜಗ್ದುಗುರು ಶ್ರೀ ರೇಣುಕಾ ಭಗವದ್ಪಾದರು ಉಪದೇಶಿಸಿದ್ದಾರೆ. ಪ್ರಣವ, ಪ್ರಣವ ಸಹಿತ ಪಂಚಾಕ್ಷರ ಮಂತ್ರ ಮತ್ತು ರುದ್ರಾಧ್ಯಾಯಾದಿಗಳ ಅಭ್ಯಾಸವೇ ಜಪ ಎನಿಸುವುದು.

ಜಪ ಎಂದರೆ ಪುನಃ ಪುನಃ ಆವರ್ತಿ ಎಂದರ್ಥ. ಶಿವ ಭಕ್ತನು ಇಷ್ಟಲಿಂಗ ಪೂಜೆ ಸಮಯದಲ್ಲಿ 108. 1008 ಹೀಗೆ ಪ್ರತಿ ದಿನ 21600 ಸಲ ಉಚ್ಚರಿಸಬೇಕು. ಮನಸ್ಸಿಗೆ ಅಭಿಮಾನಿಯಾದ ಶಿವನನ್ನು ಪ್ರಾಣಲಿಂಗ ಮತ್ತು ಭಾವಲಿಂಗ ರೂಪದಲ್ಲಿ ಧ್ಯಾನಿಸುವುದೇ ಧ್ಯಾನ.

ಸ್ವಾಧ್ಯಾಯ ಹಾಗೂ ಪ್ರವಚನಗಳ ಮೂಲಕ ತನ್ನಲ್ಲಿ ಲಿಂಗಾಂಗ ಸಾಮರಸ್ಯ ರೂಪವಾದ ಜ್ಞಾನವನ್ನು ಪಡೆದುಕೊಳ್ಳುವುದೇ ಜ್ಞಾನ ಯಜ್ಞ. ಈ ಪಂಚ ಯಜ್ಞಗಳು ಶರೀರ, ವಾಣಿ ಮತ್ತು ಮನಸ್ಸನ್ನು ಪರಿಶುದ್ಧಗೊಳಿಸಿ, ಸಾಧಕನನ್ನು ಶಿವ ಸ್ವರೂಪನನ್ನಾಗಿ ಮಾಡುತ್ತವೆ. ಆದ್ದರಿಂದ ಪ್ರತಿಯೊಬ್ಬ ವೀರ್ರೈಶವ ಸಾಧಕನು ಪಂಚ ಕರ್ಮಗಳನ್ನು ಅನುಷ್ಠಾನಕ್ಕೆ ತರಬೇಕು.

ಶಿವ ಮಂತ್ರದಲ್ಲಿ ಅದ್ಭುತ ಶಕ್ತಿ ಇದೆ. ಅದನ್ನು ಬಳಸಿಕೊಳ್ಳುವ ಪರಿ ತಿಳಿದುಕೊಳ್ಳಬೇಕು. ಸನಾತನ ಕಾಲದಿಂದಲೂ ರೂಢಿಯಲ್ಲಿರುವ ಶಿವ ಪೂಜೆ ಶ್ರೇಷ್ಠ ಎನಿಸಿದೆ. ಶಿವ ಸ್ಮರಣೆ, ಶಿವ ಭಜನೆ ಇಂದಿನ ಒತ್ತಡದ ಜೀವನಕ್ಕೆ ಅಗತ್ಯವಾಗಿದೆ. ಯಾಂತ್ರಿಕ ಯುದಲ್ಲಿ ಭಗವಂತನ ಸ್ಮರಣೆ ಮರೆಯುತ್ತಿದ್ದೇವೆ. ಅಂತಲೇ ಇಂದು ಅನೇಕ ಅವಘಡಗಳು ಸಂಭವಿಸುತ್ತಲಿವೆ. ನಿರಂತರ ಶಿವ ಧ್ಯಾನ ಮಾಡಬೇಕು. ಅದುವೆ ಉತ್ತಮ ಜೀವನಕ್ಕೆ ನಾಂದಿ.



ಶ್ರಾವಣ ಸಂದೇಶ

ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು
ಸ್ಥಳ: ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ್

ಸಾಧನೆಗೆ ಭಕ್ತಿ ಸೋಪಾನ

ಭಗವಂತನ ಹಾದಿಯಲ್ಲಿ ಮುನ್ನಡೆಯುವ ಸಾಧಕನಿಗೆ ಭಕ್ತಿಯೇ ಮೊದಲ ಸೋಪಾನ. ಸಿದ್ಧಾಂತ ಶಿಖಾಮಣಿಯಲ್ಲಿ ಭಗವಂತನನ್ನು ತಲುಪುವ ಪ್ರಮುಖವಾದ ಆರು ಸೋಪಾನಗಳನ್ನು ಪ್ರತಿಪಾದಿಸಲ್ಪಟ್ಟಿವೆ.

ಅವುಗಳನ್ನು ಷಟ್‌ಸ್ಥಲಗಳೆಂದು ಕರೆಯುತ್ತಾರೆ. ಈ ಷಟ್‌ಸ್ಥಲಗಳಲ್ಲಿ ಭಕ್ತಸ್ಥಲವೇ ಮೊದಲನೆಯದು.

ಪೂಜ್ಯರಲ್ಲಿರುವ ಅನುರಾಗಕ್ಕೆ ಭಕ್ತಿ ಎಂದು ಕರೆಯುತ್ತಾರೆ. ಜಗತ್ತಿನಲ್ಲಿ ಸರ್ವರಿಗೂ ಪೂಜ್ಯನೆಂದರೆ ಶಿವನೇ. ಎಲ್ಲ ದೇವತೆಗಳು ಶಿವನನ್ನೇ ಆರಾಧಿಸಿರುತ್ತಾರೆ. ಆದ್ದರಿಂದ ಶಿವನಲ್ಲಿ ಅನನ್ಯವಾದ ಅನುರಾಗ ಉಳ್ಳವನೇ ಭಕ್ತನೆಂದು ಕರೆಸಿಕೊಳ್ಳುತ್ತಾನೆ ಎಂಬುದಾಗಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಅಗಸ್ತ್ಯ ಮಹರ್ಷಿಗೆ ಬೋಧಿಸಿದ್ದಾರೆ. ಮುಕ್ತಿಯ ವಿವಿಧ ಸಾಧನಗಳಲ್ಲಿ ಭಕ್ತಿ ಸರ್ವರಿಗೂ ಅತ್ಯಂತ ಸುಲಭ ಸಾಧನ. ತನಗೆ ಇಷ್ಟವಾದ ದೇವರಿಗೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದೇ ನಿಜವಾದ ಭಕ್ತಿ.

ಸಾಧನೆ ಅಷ್ಟೊಂದು ಸುಲಭವಾಗಿ ಬರುವುದಲ್ಲ, ಮತ್ತು ಯಾರಿಂದ ಅದು ಪಡೆಯಲೂ ಆಗದು. ಭಗವಂತನ ಮೇಲೆ ಭಕ್ತಿ ಹೆಚ್ಚಾದಂತೆಲ್ಲ ಸಾಧನೆ ತನ್ನಷ್ಟಕ್ಕೆ ತಾನು ಬರುತ್ತದೆ. ಎಷ್ಟೋ ಜನ್ಮ ಸುತ್ತಿ ಮಾನವ ಜನ್ಮ ಬರುತ್ತದೆ. ಅದನ್ನು ವ್ಯರ್ಥ ಹಾಳು ಮಾಡಿಕೊಳ್ಳದೆ. ಸಾಧನೆ ಮಾಡಬೇಕು. ಸಾಧನೆಗೆ ನಿಶ್ಚಲವಾದ ಭಕ್ತಿ ಬೇಕು. ಮಾರ್ಜಾಲಕಿಶೋರ ನ್ಯಾಯದಂತೆ ಬೆಕ್ಕಿನ ಮರಿಯು ತನ್ನ ತಾಯಿಯ ಮೇಲೆ ತನ್ನ ಪೂರ್ಣ ನಂಬಿಕೆಯನ್ನಿಟ್ಟು ತಾಯಿಗೆ ಸಮರ್ಪಿತವಾಗಿರುವುದರಿಂದ ತಾಯಿ ಬೆಕ್ಕು ತನ್ನ ಮರಿಯನ್ನು ಬಾಯಿಯಲ್ಲಿ ಹಿಡಿದುಕೊಂಡು ಬೇರೆ ಬೇರೆ ಸುರಕ್ಷಿತ ಸ್ಥಳಗಳಲ್ಲಿಟ್ಟು ಅದನ್ನು ಹೇಗೆ ರಕ್ಷಿಸುತ್ತದೆಯೋ ಅದರಂತೆ ತನ್ನನ್ನು ಅನನ್ಯವಾಗಿ ನಂಬಿದ ಭಕ್ತನ್ನೂ ಸಹ ಭಗವಂತನು ಯೋಗಕ್ಷೇಮಗಳನ್ನು ಒದಗಿಸುವ ಮೂಲಕ ಸದಾ ರಕ್ಷಿಸುತ್ತಿರುತ್ತಾನೆ. ಆದ್ದರಿಂದ ಸಾಧಕನಲ್ಲಿ ತನ್ನ ಬಗ್ಗೆ ಬಲವಾದ ಶ್ರದ್ಧೆ ವಿಶ್ವಾಸಗಳು ಅವಶ್ಯವಾಗಿರಬೇಕು.

ವೀರಶೈವ ಸಿದ್ಧಾಂತದಲ್ಲಿ ಲಿಂಗಾಂಗ ಸಾಮರಸ್ಯ ರೂಪವಾದ ಮೋಕ್ಷವನ್ನು ಪಡೆದುಕೊಳ್ಳಲು ಷಟ್‌ಸ್ಥಲ ಮಾರ್ಗದಲ್ಲಿ ಪ್ರಮುಖವಾಗಿ ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ ಮತ್ತು ಸಮರಸಗಳೆಂಬ ಆರು ವಿಧಗಳಾದ ಭಕ್ತಿಗಳೇ ಮುಖ್ಯಸಾಧನಗಳೆಂದು ಹೇಳಲಾಗಿದೆ. ಮೊದಲನೆಯದಾದ ಶ್ರದ್ಧಾ ಭಕ್ತಿಯಿಂದ ಕೂಡಿದ ಸಾಧಕನೇ ಇಲ್ಲಿ ಭಕ್ತನೆಂದು ಕರೆಯಿಸಿಕೊಳ್ಳುವನು.ಇಂದು ಭಕ್ತಿ ಕಡಿಮೆಯಾಗುತ್ತಿದೆ.

ಸದ್ಗುರು ಕರುಣಿಸಿದ ತನ್ನ ಇಷ್ಟಲಿಂಗದಲ್ಲಿ ಶ್ರದ್ಧೆಯನ್ನಿರಿಸಿ ಪಿಂಡಸ್ಥಲವನ್ನೇ ಮೊದಲಗೊಂಡು ಸಹಜದಾನಸ್ಥಲದ ವರೆಗೆ ಹೇಳಿರುವ ಹದಿನೈದು ವಿಧದ ಆಚರಣೆಗಳನ್ನು ತನ್ನ ಸಾಧನೆಯಲ್ಲಿ ಅಳವಡಿಸಿಕೊಂಡ ಸಾಧಕನು ಪರಿಪೂರ್ಣ ಭಕ್ತನೆಂದು ಕರೆಯಿಸಿಕೊಳ್ಳುತ್ತಾನೆ.

ಬೀದರ ಜಿಲ್ಲೆ

ಶ್ರಾವಣ ಮಾಸ ಸಂದೇಶ

ದೀಕ್ಷೆಯಿಂದ ಭವಪಾಶ ನಿವೃತ್ತಿ



ಹುಮನಾಬಾದ: ಪ್ರತಿಯೊಬ್ಬ ಜೀವಿಯು ಜನಿಸುವಾಗ ಆಣವ, ಮಾಯ ಮತ್ತು ಕಾರ್ಮಿಕಗಳೆಂಬ ತ್ರಿವಿಧ ಪಾಶಗಳಿಂದ ಬಂಧಿತನಾಗಿರುತ್ತಾನೆ. ಈ ಪಾಶತ್ರಗಳಿಗೆಗೆ ಮಲಗಳೆಂತಲೂ ಕರೆಯುವರು. ಇವುಗಳು ತ್ರಿವಿಧ ದೀಕ್ಷೆಗಳಿಂದಲೇ ನಿವೃತ್ತಿಯಾಗುವವು ಎಂಬ ವಿಚಾರವನ್ನು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾ ಸ್ವಾಮಿಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಹೇಳಿದರು. ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ಹಮ್ಮಿ ಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ವೇದಿಕೆಯಿಂದ ಈ ವಿಚಾರ'ವನ್ನು ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿಯ ಗುರುಕಾರುಣ್ಯಸ್ಥಲದಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು "ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶ ಬಂಧನಂ" ಎಂಬುದಾಗಿ ಉಪದೇಶಿಸಿದ್ದಾರೆ. ಶಿಷ್ಯನಲ್ಲಿಯ ಪಾಶಬಂಧನವನ್ನು ತೊಡೆದುಹಾಕಿ ಶಿವಜ್ಞಾನವನ್ನುಂಟು ಮಾಡುವ ಸಂಸ್ಕಾರವೇ ದೀಕ್ಷಾ ಸಂಸ್ಕಾರವು. ತ್ರಿವಿಧ ಪಾಶಗಳನ್ನು ದೂರು ಮಾಡಲು ಇಲ್ಲಿ ವೇಧಾ, ಮಂತ್ರಿ ಮತ್ತು ಕ್ರಿಯಾ ದೀಕ್ಷೆಗಳೆಂಬ ಮೂರು ದೀಕ್ಷೆಗಳು ಹೇಳಲಾಗಿದೆ.

ಇಚ್ಛಾಶಕ್ತಿ ಸಂಕೋಚ ರೂಪವು ಮತ್ತು ಜೀವಾತ್ಮನಲ್ಲಿ ಅಣುಭಾವನೆ ಯನ್ನು ನಿರ್ಮಾಣ ಮಾಡುವ ಪಾಶವೇ ಆಣವ ಪಾಶ ಇದುವೇ ಆಣವ ಮಲವು. ಈ ಪಾಶ ಬಂಧನದಿಂದ ತನ್ನ ಪರಿಪೂರ್ಣ ಸ್ವರೂಪವನ್ನು ಮರೆತು ತನ್ನನ್ನು ಅಣುರೂಪವಾಗಿ ಭಾವಿಸಿಕೊಂಡು ಸ್ವಾರ್ಥ ಪರವಾದ ಸಂಕುಚಿತ ವ್ಯವಹಾರಗಳಲ್ಲಿ ತೊಡಗಿರುತ್ತಾನೆ.

ಸದ್ಗುರು ಶಿಷ್ಯನ ಮಸ್ತಕದ ಮೇಲೆ ತನ್ನವರದ ಹಸ್ತವನ್ನಿರಿಸಿ ಕೃಪಾಪೂರ್ಣ ದೃಷ್ಟಿಯಿಂದ ಅವಲೋಕಿಸುತ್ತ ನೀನು ಅಣುರೂಪನಲ್ಲ ನೀನು ಪರಿಪೂರ್ಣ ಪರಮಾತ್ಮರೂಪವೇ ಇರುವೇ ಎಂಬ ಉಪದೇಶದ ಮೂಲಕ ಅವನಿಗೆ ಶಿವೋಹಂಭಾವನೆಯನ್ನು ಉಪದೇಶ ಮಾಡುವುದರ ಮೂಲಕ ಭಾವಲಿಂಗದ ಅನುಸಂಧಾನವನ್ನು ಬೋಧಿಸುತ್ತಾನೆ. ಗುರುವಿನ ಉಪದೇಶದಂತೆ ಶಿಷ್ಯನು ತನ್ನಾತ್ಮವು ಶಿವಸ್ವರೂಪವೆಂಬ ಭಾನೆಯನ್ನು ಸದಾ ಮಾಡುತ್ತಿರುವುದರಿಂದ ಅವನು ಆಣವ ಪಾಶದಿಂದ ಮುಕ್ತನಾಗುವನು. ಜ್ಞಾನ ಶಕ್ತಿಯ ಸಂಕೋಚರೂಪವು ಮತ್ತು ಪರಸ್ಪರರಲ್ಲಿ ಭೇದ ಬುದ್ಧಿಯನ್ನು ನಿರ್ಮಾಣ ಮಾಡುವ ಮಾಶವೇ ಮಾಯಾ ಪಾಶವು, ಇದುವೇ ಮಾಯಾ ಮಲವೆಂದು ಕರೆಸಿಕೊಳ್ಳುವುದು. ಈ ಮಲದ ನಿವೃತ್ತಿಗಾಗಿ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಮಂತ್ರ ದೀಕ್ಷೆಯನ್ನು ಹೇಳಲಾಗಿದೆ. ಸದ್ಗುರು ಶಿಷ್ಯನ ಬಲಬದಿಯಲ್ಲಿ ಓಂ ನಮ: ಶಿವಾಯ ಎಂಬ ಮಹಾ ಮಂತ್ರವನ್ನು ಉಪದೇಶಮಾಡಿರುತ್ತಾನೆ. ಮತ್ತು ಮಂತ್ರದ ಅರ್ಥವನ್ನು ವಿವರಿಸುತ್ತ ನಮ: ಎಂದರೆ ಜೀವಾತ್ಮನು. ಶಿವ ಎಂದರೆ ಪರಮಾತ್ಮನು, ಅಯ ಎಂದರೆ ಅವೆರಡರ ಅಭೇದ. ಹೀಗೆ ನಮ: ಶಿವಾಯ ಎಂದರೆ ಜೀವಾತ್ಮನು ಶಿವಸ್ವರೂಪನೇ ಆಗಿದ್ದಾನೆ ಎಂದರ್ಥ. . ಈ ಮಂತ್ರಾರ್ಥವನ್ನು ಬೋಧಿಸುವುದರ ಜೊತೆಗೆ ಶ್ರೀ ಗುರು ಆತ್ಮದ ಚಿದ್ರೂಪವಾದ ಪ್ರಾಣಲಿಂಗದ ಸ್ವರೂಪವನ್ನು ಸಹ ಬೋಧಿಸುತ್ತಾನೆ. ಇದುವೇ ಮಂತ್ರ ದೀಕ್ಷೆಯು ಈ ಮಂತ್ರದೀಕ್ಷೆಯನ್ನು ಪಡೆದು ಸಾಧಕನು ಶ್ರೀ ಗುರುವಿನ ಉಪದೇಶದಂತೆ ಮಂತ್ರಾರ್ಥದ ಚಿಂತನೆಯನ್ನು ಮಾಡುತ್ತ ಪ್ರಾಣಲಿಂಗದ ಅನುಸಂಧಾನ ಮಾಡುತ್ತ ಬೇಧ ಬುದ್ಧಿಯನ್ನುಂಟುಮಾಡುವ ಮಾಯಾ ಪಾಶಾದಿಂದ ಮುಕ್ತನಾಗುವನು.

ಇದರಂತೆ ಕ್ರಿಯಾಶಕ್ತಿಯ ಸಂಕೋಚರೂಪವು ಮತ್ತು ಶುಭಾಶುಭ ವಾಸನರೂಪವಾದ ಪಾಶಕ್ಕೆ ಕರ್ಮಪಾಶ ಅಥವಾ ಕಾರ್ಮಿಕ ಮಲವೆಂದು ಕರೆಯುತ್ತಾರೆ. ಈ ಮಲದ ನಿವೃತ್ತಿಗಾಗಿ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಕ್ರಿಯಾ ದೀಕ್ಷೆಯನ್ನು ಬೋಧಿಸಿದ್ದಾರೆ. ಈ ದೀಕ್ಷೆಯನ್ನು ಮಾಡುವಾಗ ಒಂದು ಶುಭ ಮೂಹೂರ್ತದಲ್ಲಿ ಮಂಟಪಾದಿಗಳನ್ನು ರಚಿಸಿ ಅಲ್ಲಿ ಪಂಚಾಚಾರ್ಯರ ಪ್ರತಿಕಗಳಾದ ಪಂಚಕಲಸಗಳನ್ನು ಸ್ಥಾಪಿಸಿ ಅವುಗಳಲ್ಲಿ ಮೂಲ ಪಂಚಾಚಾರ್ಯರನ್ನು ಅವ್ಹಾನಿಸಿ ಅವರ ಸಾಕ್ಷಿಯಲ್ಲಿ ಶಿಷ್ಯಯನ ಮಾಂಸ ಪಿಂಡಕ್ಕೆ ಮತ್ತು ಶಿಲಾಮಯ ಪಂಚ ಸೂತ್ರಲಿಂಗಕ್ಕೆ ಪಂಚಬ್ರಹ್ಮ ಮಂತ್ರಗಳಿಂದ ಅಭೀಷೇಕಮಾಡಿ ಶಿಷ್ಯನ ದೇಹ ಮತ್ತು ಲಿಂಗಗಳನ್ನು ಪರಿಶುದ್ಧಗೊಳಿಸಿ ಆ ಲಿಂಗದಲ್ಲಿ ಶಿವಕಲೆಯನ್ನು ಮತ್ತು ಶಿಷ್ಯನ ಆತ್ಮ ಕಲೆಯನ್ನು ಸಂಯೋಜಿಸಿ ಶಿಷ್ಯನ ಎಡ ಹಸ್ತದಲ್ಲಿ ಆ ಲಿಂಗವನ್ನು ಅನುಗ್ರಹಿಸುತ್ತಾನೆ.

ಅದುವೇ ಇಷ್ಟಲಿಂಗವು. ಶಿವಕಲಾಯುಕ್ತವು ತನ್ನ ಆತ್ಮದ ಚಿತ್ಕಲಾಯುಕ್ತವು ಆದ ಆ ಇಷ್ಟಲಿಂಗವನ್ನು ಸದಾದೇಹದ ಮೇಲೆ ಧರಿಸಿ ಕೊಂಡು ದಿನಾಲು ಆ ಲಿಂಗವನ್ನು ಅಷ್ಟ ವಿದಾರ್ಚನೆಗಳಿಂದ ಪೂಜಿಸಿ ತೊಡಗಲು ಶಿಷ್ಯನ ಮನಸಿನಲ್ಲಿ ಅಶುಭ ವಾಸನೆಗಳೆಂಬ ಕಾರ್ಮಿಕ ಮಲವು ನಿವೃತ್ತಿ ಯಾಗುವುದು.

ಸದ್ಗುರು ಶಿಷ್ಯನ ಮಸ್ತಕದ ಮೇಲೆ ತನ್ನವರದ ಹಸ್ತವನ್ನಿರಿಸಿ ಕೃಪಾಪೂರ್ಣ ದೃಷ್ಟಿಯಿಂದ ಅವಲೋಕಿಸುತ್ತ ನೀನು ಅಣುರೂಪನಲ್ಲ ನೀನು ಪರಿಪೂರ್ಣ ಪರಮಾತ್ಮರೂಪವೇ ಇರುವೇ ಎಂಬ ಉಪದೇಶದ ಮೂಲಕ ಅವನಿಗೆ ಶಿವೋಹಂಭಾವನೆಯನ್ನು ಉಪದೇಶ ಮಾಡುವುದರ ಮೂಲಕ ಭಾವಲಿಂಗದ ಅನುಸಂಧಾನವನ್ನು ಬೋಧಿಸುತ್ತಾನೆ. ಗುರುವಿನ ಉಪದೇಶದಂತೆ ಶಿಷ್ಯನು ತನ್ನಾತ್ಮವು ಶಿವಸ್ವರೂಪವೆಂಬ ಭಾನೆಯನ್ನು ಸದಾ ಮಾಡುತ್ತಿರುವುದರಿಂದ ಅವನು ಆಣವ ಪಾಶದಿಂದ ಮುಕ್ತನಾಗುವನು. ಜ್ಞಾನ ಶಕ್ತಿಯ ಸಂಕೋಚರೂಪವು ಮತ್ತು ಪರಸ್ಪರರಲ್ಲಿ ಭೇದ ಬುದ್ಧಿಯನ್ನು ನಿರ್ಮಾಣ ಮಾಡುವ ಮಾಶವೇ ಮಾಯಾ ಪಾಶವು, ಇದುವೇ ಮಾಯಾ ಮಲವೆಂದು ಕರೆಸಿಕೊಳ್ಳುವುದು. ಈ ಮಲದ ನಿವೃತ್ತಿಗಾಗಿ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಮಂತ್ರ ದೀಕ್ಷೆಯನ್ನು ಹೇಳಲಾಗಿದೆ. ಸದ್ಗುರು ಶಿಷ್ಯನ ಬಲಬದಿಯಲ್ಲಿ ಓಂ ನಮ: ಶಿವಾಯ ಎಂಬ ಮಹಾ ಮಂತ್ರವನ್ನು ಉಪದೇಶಮಾಡಿರುತ್ತಾನೆ. ಮತ್ತು ಮಂತ್ರದ ಅರ್ಥವನ್ನು ವಿವರಿಸುತ್ತ ನಮ: ಎಂದರೆ ಜೀವಾತ್ಮನು. ಶಿವ ಎಂದರೆ ಪರಮಾತ್ಮನು, ಅಯ ಎಂದರೆ ಅವೆರಡರ ಅಭೇದ. ಹೀಗೆ ನಮ: ಶಿವಾಯ ಎಂದರೆ ಜೀವಾತ್ಮನು ಶಿವಸ್ವರೂಪನೇ ಆಗಿದ್ದಾನೆ ಎಂದರ್ಥ. ಈ ಮಂತ್ರಾರ್ಥವನ್ನು ಬೋಧಿಸುವುದರ ಜೊತೆಗೆ ಶ್ರೀ ಗುರು ಆತ್ಮದ ಚಿದ್ರೂಪವಾದ ಪ್ರಾಣಲಿಂಗದ ಸ್ವರೂಪವನ್ನು ಸಹ ಬೋಧಿಸುತ್ತಾನೆ. ಇದುವೇ ಮಂತ್ರ ದೀಕ್ಷೆಯು ಈ ಮಂತ್ರದೀಕ್ಷೆಯನ್ನು ಪಡೆದು ಸಾಧಕನು ಶ್ರೀ ಗುರುವಿನ ಉಪದೇಶದಂತೆ ಮಂತ್ರಾರ್ಥದ ಚಿಂತನೆಯನ್ನು ಮಾಡುತ್ತ ಪ್ರಾಣಲಿಂಗದ ಅನುಸಂಧಾನ ಮಾಡುತ್ತ ಬೇಧ ಬುದ್ಧಿಯನ್ನುಂಟುಮಾಡುವ ಮಾಯಾ ಪಾಶಾದಿಂದ ಮುಕ್ತನಾಗುವನು.

ಇದರಂತೆ ಕ್ರಿಯಾಶಕ್ತಿಯ ಸಂಕೋಚರೂಪವು ಮತ್ತು ಶುಭಾಶುಭ ವಾಸನರೂಪವಾದ ಪಾಶಕ್ಕೆ ಕರ್ಮಪಾಶ ಅಥವಾ ಕಾರ್ಮಿಕ ಮಲವೆಂದು ಕರೆಯುತ್ತಾರೆ. ಈ ಮಲದ ನಿವೃತ್ತಿಗಾಗಿ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಕ್ರಿಯಾ ದೀಕ್ಷೆಯನ್ನು ಬೋಧಿಸಿದ್ದಾರೆ. ಈ ದೀಕ್ಷೆಯನ್ನು ಮಾಡುವಾಗ ಒಂದು ಶುಭ ಮೂಹೂರ್ತದಲ್ಲಿ ಮಂಟಪಾದಿಗಳನ್ನು ರಚಿಸಿ ಅಲ್ಲಿ ಪಂಚಾಚಾರ್ಯರ ಪ್ರತಿಕಗಳಾದ ಪಂಚಕಲಸಗಳನ್ನು ಸ್ಥಾಪಿಸಿ ಅವುಗಳಲ್ಲಿ ಮೂಲ ಪಂಚಾಚಾರ್ಯರನ್ನು ಅವ್ಹಾನಿಸಿ ಅವರ ಸಾಕ್ಷಿಯಲ್ಲಿ ಶಿಷ್ಯಯನ ಮಾಂಸ ಪಿಂಡಕ್ಕೆ ಮತ್ತು ಶಿಲಾಮಯ ಪಂಚ ಸೂತ್ರಲಿಂಗಕ್ಕೆ ಪಂಚಬ್ರಹ್ಮ ಮಂತ್ರಗಳಿಂದ ಅಭೀಷೇಕಮಾಡಿ ಶಿಷ್ಯನ ದೇಹ ಮತ್ತು ಲಿಂಗಗಳನ್ನು ಪರಿಶುದ್ಧಗೊಳಿಸಿ ಆ ಲಿಂಗದಲ್ಲಿ ಶಿವಕಲೆಯನ್ನು ಮತ್ತು ಶಿಷ್ಯನ ಆತ್ಮ ಕಲೆಯನ್ನು ಸಂಯೋಜಿಸಿ ಶಿಷ್ಯನ ಎಡ ಹಸ್ತದಲ್ಲಿ ಆ ಲಿಂಗವನ್ನು ಅನುಗ್ರಹಿಸುತ್ತಾನೆ.

ಅದುವೇ ಇಷ್ಟಲಿಂಗವು. ಶಿವಕಲಾಯುಕ್ತವು ತನ್ನ ಆತ್ಮದ ಚಿತ್ಕಲಾಯುಕ್ತವು ಆದ ಆ ಇಷ್ಟಲಿಂಗವನ್ನು ಸದಾದೇಹದ ಮೇಲೆ ಧರಿಸಿ ಕೊಂಡು ದಿನಾಲು ಆ ಲಿಂಗವನ್ನು ಅಷ್ಟ ವಿದಾರ್ಚನೆಗಳಿಂದ ಪೂಜಿಸಿ ತೊಡಗಲು ಶಿಷ್ಯನ ಮನಸಿನಲ್ಲಿ ಅಶುಭ ವಾಸನೆಗಳೆಂಬ ಕಾರ್ಮಿಕ ಮಲವು ನಿವೃತ್ತಿ ಯಾಗುವುದು.

ಹೀಗೆ ಜೀವಾತ್ಮನು ಸದ್ಗುರುವಿನಿಂದ ದೊರೆತ ತ್ರಿವಿಧ ದೀಕ್ಷೆಗಳಿಂದ ತನಗೆ ಪ್ರಾಪ್ತವಾದ ಇಷ್ಟ, ಪ್ರಾಣ ಮತ್ತು ಭಾವಲಿಂಗಗಳ ಅನುಸಂಧಾನ ಮಾಡುತ್ತ ತ್ರಿವಿಧ ಪಾಶಗಳಿಂದ ಮುಕ್ತನಾಗಿ ಲಿಂಗಾಂಗಸಾಮರಸ್ಯರೂಪವಾದ ಸದ್ಗತಿಯನ್ನು ಪಡೆದು ಕೊಳ್ಳುವನು. ಆದ ಕಾರಣ ಪ್ರತಿಯೊಬ್ಬರೂ ಇಂತಹ ದೀಕ್ಷಾ ಸಂಸ್ಕಾರವನ್ನು ಪಡೆದುಕೊಳ್ಳಬೇಕೆಂಬುದಾಗಿ ಶ್ರೀ ಕಾಶಿ ಮಹಾಸನ್ನಿಧಿಯವರು ಅನೇಕ ಉದಾಹರಣೆಗಳಿಂದ ತಿಳಿಹೇಳಿದರು.

ಮನಸ್ಸಿನ ಶುದ್ಧೀಕರಣಕ್ಕೆ ಪರಿಶುದ್ಧ ಆಹಾರ-ವಿಚಾರ ಅಗತ್ಯ

ಸೇಡಂ, ಜು.30- ಮನಸ್ಸಿನ ಸುದ್ಧೀಕರಣಕ್ಕೆ ಪರಿಶುದ್ಧ ಆಹಾರ ಮತ್ತು ಪರಿಶುದ್ಧ ವಿಚಾರ ಅಗತ್ಯ ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ತಾಲೂಕಿನ ಸುಕ್ಷೇತ್ರ ಮಳಖೇಡದ ಭಂಗಿ ಮಠದ ಪ್ರವಚನದ ದಿವ್ಯ ಸಾನ್ನಿಧ್ಯ ವಹಿಸಿ ಆಶೀವರ್ಚನ ನೀಡಿದರು. ಸಿದ್ಧಾಂತ ಶಿಖಾಮಣಿಯ ಗ್ರಂಥದ ಪಿಂಡಸ್ಥಳದ ಅಧ್ಯಾಯನದಲ್ಲಿ ಮನಸ್ಸಿನ ಶುದ್ಧೀಕರಣದ ಬಗ್ಗೆ ತಿಳಿಸಲಾಗಿದೆ. ಅಂತರಗಂದಲ್ಲಿ ಮನಸ್ಸಿನ ಪಾತ್ರ ಮಹತ್ವದ್ದು ಅದು ಪರಿಶುದ್ಧವಾದಾಗ ಅಧ್ಯಾತ್ಮದ ಪ್ರಗತಿ ಸಾಧ್ಯ. ಪರಿಶುದ್ಧ ಆಹಾರ ಸೇವನೆ ಪರಿಶುದ್ಧ ವಿಚಾರಗಳನ್ನು, ಮೆಲಕು ಹಾಕಿಕೊಳ್ಳುವುದು, ಯೋಗ, ಜಪ, ತಪಾದಿಗಳಿಂದ ಮನಸ್ಸನ್ನು ಶುದ್ಧೀಕರಿಸಬಹುದು. ಆದರೆ, ಎಲ್ಲಕ್ಕಿಂತ ಮೇಲಾಗಿ ಮನಸ್ಸಿನ ಅಮೂಲಾಗ್ರಪರಿವರ್ತನೆಗೆ ಪರಿಶುದ್ಧ ಆಹಾರ ಸೇವನೆ ಅಗತ್ಯ ಎಂದು ಶ್ರೀಗಳು ನುಡಿದರು. ಮನುಷ್ಯರು ಸ್ವೇಚ್ಛಾಚಾರಿಗಳಲು ಮೂಲಕಾರಣ ಮಾಂಸ ಆಹಾರ ಸೇವನೆಯಿಂದಲೇ ಪ್ರಾಣಿಗಳನ್ನು ಕೊಂದು ತಿಂದು ಮನುಷ್ಯರು ಕ್ರೂರಿಗೊಳ್ಳುತ್ತಿದ್ದಾರೆ. ಕೋಪ, ಕ್ರೋಧ ಮದ ಮತ್ಸರ ಗುಣಗಳು ಬರುತ್ತಿದ್ದ ಜಗತ್ತಿನಲ್ಲಿ ದ್ವೇಷದ ವಾತಾವರಣಕ್ಕೆ ನಾಂದಿ ಹಾಡುತ್ತಿದೆ. ಪರಿಶುದ್ಧವಾದ ಶಾಖಾ ಆಹಾರದಿಂದ ಸನ್ನಡತೆ ಬಂದು ಜಗತ್ತಿನಲ್ಲಿ ಶಾಂತಿ ನೆಲಿಸುತ್ತದೆ. ಮನುಷ್ಯನ ಮನಸ್ಸಿನ ಶುದ್ಧೀಕರಣಕ್ಕೆ ಇಂದು ಒಳ್ಳೆಯ ಆಹಾರ ಮತ್ತು ಒಳ್ಳೆಯ ವಿಚಾರಗಳು ಅಗತ್ಯವಾಗಿವೆ ಎಂದು ಶ್ರೀಗಳು ನುಡಿದರು.



ಶಿವನ ಅಂಶವೇ ಜೀವ

ಶ್ರೀನಾದಿಯಾದ ಅವಿದ್ಯೆಯ ಸಂಬಂಧದಿಂದ ಶಿವನ ಅಂಶವೇ ಜೀವಾತ್ಮ ನಾಗಿ ಸಂಸಾರದಲ್ಲಿ ತಿರುಗುತ್ತಿದ್ದಾನೆ.

ಶ್ರೀ ಸಿದ್ಧಾಂತ ಶಿಖಾಮಣಿ ಪಿಂಡಸ್ಥಲದಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಈ ಸೃಷ್ಟಿ ಶಿವ-ಶಕ್ತಿಯ ಲೀಲೆ ಎನ್ನುತ್ತಾರೆ. ಅನಂತ ರೂಪ ತಾಳುವ ಶಿವನು ಸಂಕಲ್ಪ ಮಾಡಿದಾಗ ಮೂವತ್ತಾರು ತತ್ತ್ವ ರೂಪದಲ್ಲಿ ವ್ಯಕ್ತನಾಗುತ್ತಾನೆ. ಅವುಗಳಲ್ಲಿ ಹನ್ನೆರಡನೇ ತತ್ತ್ವವೇ ಪುರುಷ ತತ್ತ್ವವಾಗಿದೆ. ಈ ಪುರುಷ ತತ್ತ್ವವೇ ಜೀವಾತ್ಮ ಎಂದು ಕರೆಯಲ್ಪಡುತ್ತದೆ.

ದೇವ, ಮನುಷ್ಯ, ಜಲಜ, ವಿಹಗ, ಮೃಗ, ಸರಿಸೃಪ ಮತ್ತು ಗಿಡಮರಾದಿ ಸ್ಥಾವರಗಳೆಂಬ ಸಪ್ತ ಜನ್ಮಗಳಲ್ಲಿ ತನ್ನ ಕರ್ಮಾನುಸಾರ ಪರಿಭ್ರಮಣ ಮಾಡುತ್ತಾನೆ.

ಎಲ್ಲ ಜೀವರಾಶಿಗಳ ಪ್ರೇರಕನಾಗಿರುವ ಮಹೇಶ್ವರನು ಬೀಜದಲ್ಲಿ ಅಂಕುರವಿರುವಂತೆ ಪ್ರತಿಯೊಂದು ಜೀವಿಗಳ ಹೃದಯದಲ್ಲಿ ವಾಸವಾಗಿರುತ್ತಾನೆ. ಈ ಮಹೇಶ್ವರನು ಪ್ರತಿಕ್ಷಣಕ್ಕೂ ಪ್ರತಿಯೊಂದು ಜೀವಿಗೆ ಹಿತಮಾರ್ಗದ ಉಪದೇಶ ಮಾಡುತ್ತಲೇ ಇರುತ್ತಾನೆ. ಈ ಉಪದೇಶವೇ ಅಂತರ್ವಾಣಿ. ಯಾರು ಈ ಅಂತರ್ವಾಣಿಯನ್ನು ಶ್ರವಣ ಮಾಡುವರೋ ಅವರು ತಮ್ಮ ಬದುಕಿನಲ್ಲಿ ಸಾತ್ವಿಕ ಬದಲಾವಣೆ ಕಾಣುತ್ತಾರೆ. ಹೀಗೆ ಶಿವನ ಅಂತರ್ವಾಣಿ ಹಾಗೂ ಬಹಿರಂಗದಲ್ಲಿ ಸದ್ಗುರುಗಳ ಉಪದೇಶ ಶ್ರವಣದ ಜತೆಗೆ ಸತ್ಕರ್ಮ ಮಾಡುತ್ತಾನೆಯೋ ಆಗ ಅವನ ದುರ್ವಾಸನೆ ಕ್ಷೀಣವಾಗುತ್ತವೆ. ಶುಭಾಶುಭ ಕರ್ಮಗಳು ಪಕ್ವವಾಗುವವು. ಹೀಗೆ ಪಕ್ವವಾದ ಕರ್ಮವುಳ್ಳ ಜೀವಾತ್ಮನ ಮೇಲೆ ಶಿವನ ಅನುಗ್ರಹ ರೂಪದ ಪ್ರಸಾದವು ಪ್ರಾಪ್ತವಾಗುವುದು. ಈ ಶಿವ ಪ್ರಸಾದದಿಂದಲೇ ಜೀವಾತ್ಮನು ಶುದ್ಧ ಮನಸ್ಕನಾಗುವನು. ಶುದ್ಧ ಮನಸ್ಕನಾದ ಜೀವಾತ್ಮನೇ ಪಿಂಡಸ್ಥಲದ ಸಾಧಕ. ಒಂದೇ ಜನ್ಮದಲ್ಲಿ ಸದ್ಗತಿಯನ್ನು ಕೊಡುವ ಶಿವಭಕ್ತಿಯನ್ನು ಸರ್ವರು ಮಾಡಿ ಜನ್ಮ ಸಾಫಲ್ಯ ಮಾಡಿಕೊಳ್ಳಬೇಕು.


ಆನಂದದ ಸ್ಥಿತಿಯೇ ಆತ್ಮ

ನಮ್ಮ ಬುದ್ಧಿ ಮನಸ್ಸು ಜಾಗೃತವಾಗಿಟ್ಟುಕೊಳ್ಳ ಬೇಕು. ಸತ್ಕಾರ್ಯದಲ್ಲಿಯೇ ಸದಾ ತೊಡಬೇಕು ಅಂತರ ಯಾತ್ರೆ ಬಹಿರಂಗ ಯಾತ್ರೆಗಿಂತ ಕಠಿಣವಾಗಿದೆ. ಆತ್ಮ ವಿವೇಯುಕ್ತ, ಜಾಗೃತವಾಗಿದ್ದರೆ ಮತ್ತು ಆನಂದ ವಾಗಿದ್ದರೆ ಅದುವೇ ಆತ್ಮ ರೂಪವಾಗಿದೆ ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ನುಡಿದರು.



ಸೇಡಂ ತಾಲೂಕಿನ ಸುಕ್ಷೇತ್ರ ಮಳಖೇಡದ ಭಂಗಿಮಠದಲ್ಲಿ ಶ್ರಾವಣ ಮಾಸ ಪೂರ್ಣ ಹಮ್ಮಿಕೊಂಡ ಸಿದ್ಧಾಂತ ಶಿಖಾಮಣಿ ಪ್ರವಚನದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ದರು. ಎಲ್ಲರಿಗೂ ಎಲ್ಲಾ ತಿಳಿದು ಕೊಳ್ಳಲು ಸಮಯವಿರುತ್ತದೆ. ಆದರೆ ತಾವ್ಯಾರು ಎಂಬುದು ಇಲ್ಲವೇ ತಮ್ಮನ್ನು ತಾವು ತಿಳಿದುಕೊಳ್ಳುವದಕ್ಕೆ ಸಮಯವಿರುವುದಿಲ್ಲ ದಿನಕ್ಕೆ ಒಂದು ಗಂಟೆಯಾದರೂ ಜಪ ತಾಪಕ್ಕೂ ಪ್ರಾರ್ಥನೆಗೂ ಮೀಸಲಿಡಬೇಕು. ಅಂದಾಗ ಆತ್ಮ ಜಾಗೃತವಾಗುತ್ತದೆ. ವಿವೇಕ ಇದ್ದವರಿಗೆ ಸಂತಸ ಹೆಚ್ಚು . ಅಜ್ಞಾನಿಗಳು ಅವಿವೇಕಿಗಳಿಗೆ ದುಃಖಗಳೇ ಹೆಚ್ಚು ಎಂದು ನುಡಿದರು.

ದೇಹದಲ್ಲಿನ ಆತ್ಮ ಎಂಬ ರತ್ನವನ್ನು ತಿಳಿದುಕೊಳ್ಳಲು ಜೀವನದ ಪೂರ್ಣ ಆಯುಷ್ಯ ಉಪಯೋಗಿಸಿಕೊಂಡು ಆನಂದಮಯವಾಗಿರಬೇಕು. ಮನುಷ್ಯರೆಲ್ಲ ಬಹುತೇಕ ಗಾಢ ನಿದ್ರೆ ಯಲ್ಲಿದ್ದಾಗ ಮಾತ್ರ ಆನಂದಮಯವಾಗಿರುತ್ತದೆ ಎಂದರು.



ಸಂಯುಕ್ತ ಕರ್ನಾಟಕ
ಕಲಬುರ್ಗಿ | 8-9-2010 3

ಪಂಚಾಕ್ಷರ ಮಂತ್ರ ನಾಲ್ಕು ವೇದಗಳ ಸಾರ



ಹುಮನಾಬಾದ: 'ನಮ: ಶಿವಾಯ' ಎಂಬ ಪಂಚಾಕ್ಷರ ಮಹಾಮಂತ್ರವು ನಾಲ್ಕು ವೇದಗಳ ಸಾರವಾಗಿದೆ ಎಂದು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು. ಅವರು ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ವೇದಿಕೆಯಿಂದ ಈ ವಿಚಾರವನ್ನು ತಿಳಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ರೇಣುಕ ಭಗವತ್ಪಾದರು "ಮಂತ್ರ: ಪಂಚಾಕ್ಷರೋ ಹ್ಯೇಷ: ಸರ್ವಶ್ರುತಿ ಶಿರೋಗತ:" ಎಂಬುದಾಗಿ ಉಪದೇಶಿಸಿದ್ದಾರೆ. ನಮ: ಶಿವಾಯ ಎಂಬ ಈ ಪಂಚಾಕ್ಷರ ಮಹಾಮಂತ್ರವು ಸರ್ವ ಶ್ರುತಿಗಳ ಶಿಖಾಮಣಿಯಂತಿದೆ. ಹದಿನೆಂಟು ವಿದ್ಯೆಗಳಲ್ಲಿ ಶ್ರುತಿಗಳಲ್ಲಿ ಶ್ರೀ ರುದ್ರವು, ಶ್ರೀ ರುದ್ರದಲ್ಲಿ ಎಂಟನೆಯ ಅನುವಾಕವು, ಅದರಲ್ಲಿಯೂ ನಮ: ಶಿವಾಯಚ ಎಂಬ ಪಂಚಾಕ್ಷರವು, ಅದರಲ್ಲಿಯೂ ಶಿವ ಎಂಬ ಎರಡಕ್ಷರವು ಉತ್ತರೋತ್ತರವಾಗಿ ಶ್ರೇಷ್ಠಗಳೆಂದು ಪರಿಗಣಿಸಲ್ಪಟ್ಟಿವೆ. ಹೀಗೆ ಎಲ್ಲ ವಿದ್ಯೆಗಳ ಕೊನೆಯ ಸಾರವಾಗಿರುವ ಶಿವ ಎಂಬ ಎರಡಕ್ಷರಗಳನ್ನು ತನ್ನ ಗರ್ಭದಲ್ಲಿ ಇರಿಸಿಕೊಂಡಿರುವುದರಿಂದ ಈ ಪಂಚಾಕ್ಷರ ಮಹಾಮಂತ್ರ ಸಪ್ತಕೋಟಿ ಮಂತ್ರಗಳಿಗಿಂತಲೂ ಶ್ರೇಷ್ಠವಾಗಿರುತ್ತದೆ.

ನ ಕಾರಾದಿ ಈ ಪಂಚಾಕ್ಷರಗಳಿಂದಲೇ ಪಂಚ ತನ್ಮಾತ್ರೆಗಳು, ಪಂಚ ಮಹಾಭೂತಗಳು ಇಷ್ಟೇ ಅಲ್ಲ, ಐದರ ಗುಂಪಿನ ಯಾವ ಯಾವ ಪದಾರ್ಥಗಳು ಈ ಪ್ರಂಚದಲ್ಲಿವೆಯೋ ಅವೆಲ್ಲ ಈ ಪಂಚಾಕ್ಷರ ಮಂತ್ರದಿಂದಲೇ ಪ್ರಾದುರ್ಭವಿಸಿರುತ್ತವೆ. ಆದ್ದರಿಂದ ಈ ಪಂಚಾಕ್ಷರ ಮಂತ್ರವು ಪ್ರಪಂಚದ ಮೂಲ ಕಾರಣವಾಗಿರುತ್ತದೆ. ಪಂಚಾಕ್ಷರ ಸ್ವರೂಪರಾದ ಶ್ರೀ ಜಗದ್ಗುರು ಪಂಚಾಚಾರ್ಯರು ಈ ಒಂದೊಂದು ಅಕ್ಷರಗಳ ಅಧಿಪತಿಗಳಾಗಿರುತ್ತಾರೆ. ನ ಕಾರಕ್ಕೆ ಶ್ರೀ ರೇವಣಾರಾಧ್ಯರು, ಮ ಕಾರಕ್ಕೆ ಶ್ರೀ ಮರುಳಾರಾಧ್ಯರು, ಶಿ ಕಾರಕ್ಕೆ ಶ್ರೀ ಏಕೋರಾಮಾರಾಧ್ಯರು ವಾ ಕಾರಕ್ಕೆ ಶ್ರೀ ಪಂಡಿತಾರಾಧ್ಯರು ಯ ಕಾರಕ್ಕೆ ಶ್ರೀ ವಿಶ್ವಾರಾಧ್ಯರು ಹೀಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಈ ಪಂಚಾಕ್ಷರಗಳ ಸ್ವರೂಪರಾಗಿರುತ್ತಾರೆ.

ಈ ಪಂಚಾಕ್ಷರಕ್ಕೆ ಓಂ ಎಂಬ ಪ್ರಣವಾಕ್ಷರವನ್ನು ಜೋಡಿಸಿದಾಗ ಅದಕ್ಕೆ ಶಿವಾಗಮಗಳಲ್ಲಿ ಷಡಕ್ಷರ ವೆಂದು ಕರೆದಿದ್ದಾರೆ. ಈ ಪ್ರಣವವು ನಿಷ್ಕಲ ಶಿವನ ಬೋಧಕವಾದರೆ ಪಂಚಾಕ್ಷರವು ಶಿವನ ಪಂಚಬ್ರಹ್ಮ ಸ್ವರೂಪವನ್ನು ಬೋಧಿಸುತ್ತದೆ.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಈ ಮಂತ್ರಕ್ಕೆ ಮೂಲ ಮಂತ್ರ, ವಿದ್ಯಾಮಂತ್ರ, ಶಿವ ಮಂತ್ರ, ಶೈವ ಸೂತ್ರ ಮಂತ್ರ ಮತ್ತು ಪಂಚಾಕ್ಷರ ಮಂತ್ರವೆಂಬುದಾಗಿ ಐದು ಹೆಸರುಗಳು ಹೇಳಲ್ಪಟ್ಟಿವೆ. ಎಲ್ಲ ಮಂತ್ರಗಳಿಗೆ ಮೂಲ ಕಾರಣವಾದ್ದ ರಿಂದ ಅದಕ್ಕೆ ಮೂಲವೆಂತಲೂ, ಈ ಮಂತ್ರ ಜಪದಿಂದ ಶುದ್ಧವಿದ್ಯೆಯು ಪ್ರಾಪ್ತವಾಗುದರಿಂದ ಇದಕ್ಕೆ ವಿದ್ಯೆ ಎಂತಲೂ, ಸರ್ವರಿಗೂ ಕಲ್ಯಾಣವನ್ನುಂಟು ಮಾಡುವುದರಿಂದ ಶಿವ ಎಂತಲೂ, ಶಿವಜ್ಞಾನಕ್ಕೆ ಮೂಲ ಸೂತ್ರವಾಗಿರುವುದರಿಂದ ಶೈವಸೂತ್ರ ವೆಂತಲೂ ಮತ್ತು ಐದು ಅಕ್ಷರಗಳಿಂದ ಕೂಡಿ ಕೊಂಡಿರುವುದರಿಂದ ಇದಕ್ಕೆ ಪಂಚಾಕ್ಷರ ವೆಂತಲೂ ಕರೆಯುತ್ತಾರೆ.

ಈ ಮಂತ್ರವನ್ನು ಗುರುವಿನಿಂದ ದೀಕ್ಷಾ ಪೂರ್ವಕವಾಗಿ ಪಡೆದುಕೊಂಡು ಜಪಾಭ್ಯಾಸವನ್ನು ಮಾಡಬೇಕು. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ವಾಚಿಕ, ಉಪಾಂಶು ಮತ್ತು ಮಾನಸಿಕ ವೆಂಬುದಾಗಿ ಜಪದ ಮೂರುವಿಧಾನಗಳು ಹೇಳಲ್ಪಟ್ಟಿವೆ. ಅನ್ಯರಿಗೆ ಕೇಳುವ ಹಾಗೆ ಜೋರಾಗಿ ಉಚ್ಚರಿಸುವುದು ವಾಚಿಕ ಜಪವು. ಯಾರಿಗೂ ಕೇಳದ ಹಾಗೆ ಮಂದವಾಗಿ ಉಚ್ಚರಿಸುವುದು ಉಪಾಂಶು ಜಪವು. ಇನ್ನು ಕೇವಲ ಮನಸ್ಸಿನಿಂದಲೇ ಆವರ್ತನ ಮಾಡುವುದು ಮಾನಸಿಕ ಜಪವು, ಇವುಗಳಲ್ಲಿ ಮಾನಸಿಕ ಜಪವೇ ಶ್ರೇಷ್ಠವಾದುದು.

ಜಗತ್ತಿನಲ್ಲಿ ಮಾಡುವ ನಾನಾವಿಧ ವ್ರತಗಳು, ಯಜ್ಞ ಯಾಗಾದಿಗಳು, ಕಠೋರವಾದ ತಪಸ್ಸುಗಳು ಈ ಪಂಚಾಕ್ಷರ ಮಹಾಮಂತ್ರ ಜಪಕ್ಕೆ ಸರಿಸಮಾನವಾಗಲಾರವು ಎಂಬುದಾಗಿ ಶ್ರೀ ರೇಣುಕರು ಉಪದೇಶಿಸಿದ್ದಾರೆ. ಆದ್ದರಿಂದ ಪ್ರಣವ ಸಹಿತವಾದ ಪಂಚಾಕ್ಷರ ಮಹಾಮಂತ್ರದಿಂದ ಮಾಡುವ ಇಷ್ಟಲಿಂಗ ಪೂಜೆಯೇ ಶ್ರೇಷ್ಠವೆಂದು ತಿಳಿದುಕೊಳ್ಳಬೇಕು. ಬ್ರಹ್ಮಾದಿದೇವತೆಗಳು, ವಶಿಷ್ಠಾದಿ ಋಷಿಗಳು ಈ ಮಂತ್ರಜಪದಿಂದಲೇ ಸಿದ್ಧಿಗಳನ್ನು ಪಡೆದುಕೊಂಡಿದ್ದಾರೆ. ಸಾನಂದ ಯೋಗಿಯು ಈ ಮಂತ್ರೋಚ್ಚಾರಣೆಯಿಂದ ನರಕಿಗಳನ್ನು ಉದ್ಧರಿಸಿದರೆ, ಶತಾನಂದರು ನರಕವನ್ನೇ ಸ್ವರ್ಗವನ್ನಾಗಿಸಿದ್ದರೆಂಬ ವಿಚಾರವು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿತವಾಗಿದೆ.

ಶಾಂತಿಗೆ ಧರ್ಮ, ಅಧ್ಯಾತ್ಮ ಅವಶ್ಯ



ವಾರಾಣಸಿ, ಆ.14 - ಇಂದಿನ ವಿಷಮ ಪರಿಸ್ಥಿತಿಯಲ್ಲಿ ಜಗತ್ತಿನಾದ್ಯಂತ ಶಾಂತಿ ನೆಲೆಸಲು ಧರ್ಮ ಹಾಗೂ ಅಧ್ಯಾತ್ಮಗಳು ಪ್ರಮುಖ ಸಾಧನಗಳಾಗಿವೆ ಎಂದು ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಅವರು ಮಂಗಳವಾರ ಉತ್ತರ ಪ್ರದೇಶದ ಕಾಶೀ ಜಂಗಮವಾಡಿ ಮಹಾಮಠದಲ್ಲಿ ಕಾಶೀ ಜಗದ್ಗುರುಗಳ ಷಷ್ಟ್ಯಬ್ದಿ ಮಹೋತ್ಸವದ ಗುರುವಂದನಾ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಕಾಶೀ ಕ್ಷೇತ್ರ ಸರ್ವಧರ್ಮ ದರ್ಶನಗಳ ಸಂಗಮ ಕ್ಷೇತ್ರವಾಗಿದೆ. ಇಲ್ಲಿ ಅನಾದಿ ಕಾಲದಿಂದಲೂ ಎಲ್ಲ ಭಾಷೆಗಳ ಮತ್ತು ಎಲ್ಲ ಧರ್ಮಗಳ ಜನರು ಭಾವೈಕ್ಯತೆಯಿಂದ ನೆಲೆಸಿದ್ದಾರೆ. ಎಲ್ಲ ಜನರಲ್ಲಿ ಭಾವೈಕ್ಯತೆ ಮೂಡಿಸುವುದೇ ಗುರುವಂದನಾ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮಕ್ಕೆ ದೇಶ ವಿದೇಶಗಳಿಂದ ಬರುವ ಜನರೆಲ್ಲ ಭಾವೈಕ್ಯತೆ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಸಮಗ್ರ ಶಾಂತಿ ನೆಲೆಸಲು ಸಾಧ್ಯವೆಂದರು.

ಷಷ್ಟ್ಯಬ್ದಿ ಮಹೋತ್ಸವದ ಗುರುವಂದನಾ ಸಮಾರಂಭವನ್ನು ಕೇದಾರ ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು. ಆಂಧ್ರಪ್ರದೇಶದ ತಾಡೇಪಲ್ಲಿಗುಂಡು, ರಾಜಮಂಡ್ರಿ, ವಿಶಾಖಾಪಟ್ಟಣಂ, ನಲ್ಲಗೊಂಡಾ ನಗರಗಳ ವಿವಿಧ ಮಹಿಳಾ ಮಂಡಳದವರಿಂದ ಲಕ್ಷ ಕುಂಕುಮಾರ್ಚನೆ ನೆರವೇರಿತು.

ಕಾಶೀ ಮತ್ತು ಕೇದಾರ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಆಂಧ್ರಪ್ರದೇಶ ವೀರಶೈವ ಸಭೆಯ ಉಪಾಧ್ಯಕ್ಷ ಎಂ.ವೀರಮಲ್ಲೇಶ ಲಕ್ಷದೀಪೋತ್ಸವ ಉದ್ಘಾಟಿಸಿದರು. ಮಹಾರಾಷ್ಟ್ರ ವೀರಶೈವ ಸಭೆಯ ಅಧ್ಯಕ್ಷ ಶ್ರೀ ವಿಶ್ವನಾಥ ಚಾಕೋಟೆ, ಬೆಳ್ಳಂಕಿ ಮತ್ತು ವಾಯಿ ಪಟ್ಟಾಧ್ಯಕ್ಷರ ಸಮ್ಮುಖದಲ್ಲಿ ಸಹಸ್ರ ಕುಂಭಾಭಿಷೇಕ ಆರಂಭಗೊಂಡಿತು. ಆಂಧ್ರಪ್ರದೇಶದ ಸಿದ್ಧಿಪೀಠ ಮತ್ತು ಶ್ರೀಶೈಲ ಕ್ಷೇತ್ರದ ವೀರಶೈವ ಗುರುಕುಲದ ವೈದಿಕರಿಂದ ಶ್ರೀ ರುದ್ರಪಠಣ ನಡೆಯಿತು.

ಶ್ರೀ ಕಾಶೀ ಜಗದ್ಗುರುಗಳಿಂದ ಇಷ್ಟಲಿಂಗ ಮಹಾಪೂಜೆ ಮತ್ತು ಶ್ರೀ ಜಗದ್ಗುರು ವಿಶ್ವಾರಾಧ್ಯ ಲಿಂಗೋದ್ಭವ ಮೂರ್ತಿಗೆ ಲಕ್ಷ ಬಿಲ್ವ ಪುಷ್ಪಾರ್ಚನೆ ನೆರವೇರಿತು.

ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ, ಆಂಧ್ರ ಮತ್ತು ಕರ್ನಾಟಕ ಪ್ರಾಂತದಿಂದ ಮೂರು ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು.

ಕಾಶಿ ಜಗದ್ಗುರುಗಳ ಉವಾಚ

ಸರ್ವರೊಂದಿಗೆ ಸ್ನೇಹದಿಂದಿರುವವನೇ ವೀರಶೈವ



ವೀರಶೈವ ಎನ್ನುವ ಧರ್ಮ ವಾಚಕ ಪದವು ಅನೇಕ ಅರ್ಥಗಳನ್ನೊಳಗೊಂಡಿದೆ. ವೀ- ಎಂದರೆ ಲಿಂಗಾಂಗ ಸಾಮರಸ್ಯ ವಿದ್ಯೆ. ರ- ಎಂದರೆ ಅದರಲ್ಲಿ ರಮಿಸು, ಆನಂದಿಸು ಎಂದರ್ಥ. ಹೀಗೆ ಲಿಂಗಾಂಗ ಸಾಮರಸ್ಯವಾದ ವಿದ್ಯೆಯಲ್ಲಿ ಆನಂದಿಸುವ ಶಿವ ಭಕ್ತನೇ ವೀರಶೈವ ಎಂಬುದಾಗಿ ಈ ಸಿದ್ಧಾಂತ ಶಿಖಾಮಣಿಯಲ್ಲಿ ವೀರಶೈವ ಪದದ ಅರ್ಥವನ್ನು ವಿವರಿಸಲಾಗಿದೆ ಎಂದು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗತ್ಪಾದರು ನುಡಿದರು.

ಗುಲ್ಬರ್ಗದ ಶಾಂತಲಿಗೇಶ್ವರ ಕಲ್ಯಾಣಮಂಟಪದಲ್ಲಿ ಸಿದ್ಧಾಂತ ಶಿಖಾಮಣಿ ಗ್ರಂಥದ ಕುರಿತು ಪ್ರವಚನ ನೀಡಿದ ಅವರು,ವ್ಯಾಸ ಮಹರ್ಷಿಗಳು ಸ್ಕಂದ ಪುರಾಣದ ಶಂಕರ ಸಂಹಿತೆಯ ಹಸ್ತ ಪೀಠದಲ್ಲಿ ಇಷ್ಟಲಿಂಗವನ್ನು ಇರಿಸಿಕೊಂಡು ಏಕಾಗ್ರವಾದ ಮನಸ್ಸಿನಿಂದ ಅದನ್ನು ಪೂಜಿಸಿ. ಅದನ್ನು ಸದಾ ದೇಹದ ಮೇಲೆ ಧರಿಸಿಕೊಳ್ಳುವವನೇ ವೀರಶೈವನೆಂದು ಹೇಳಿದ್ದಾರೆ.

ಇದನ್ನು ಕ್ರಿಯಾಸಾರ ಗ್ರಂಥದಲ್ಲಿ ನೀಲಕಂಠ ಶಿವಾಚಾರ್ಯರು ವೀ -ಎಂದರೆ ವಿರೋಧ ಭಾವನೆ ಎಂತಲು. ರ-ಎಂದರೆ ರಹಿತ ಎಂತಲು ಅರ್ಥಮಾಡಿ ಯಾವ ಶಿವ ಭಕ್ತನ ಮನಸ್ಸಿನಲ್ಲಿ ಯಾರೊಬ್ಬರ ಬಗ್ಗೆಯೂ ವಿರೋಧ ಭಾವನೆಗಳು ಇರುವುದಲ್ಲವೋ ಅವನೇ ವೀರಶೈವ ಎಂದು ತಿಳಿಸಿದ್ದಾರೆ. ಲಿಂಗಾಂಗ ಸಾಮರಸ್ಯ ವಿದ್ಯೆಯಲ್ಲಿ ಸದಾ ಆನಂದ ಪಡೆಯುವವನೇ ವೀರಶೈವನೆಂಬುದು ಸ್ಥಿರವಾಗುವುದು. ಆದ್ದರಿಂದ ಸ್ವಧರ್ಮ ನಿಷ್ಠೆ ಪರಧರ್ಮ ಸಹಿಷ್ಣುತೆಗಳನ್ನು ತಾಳಿ ಸರ್ವ ರೊಂದಿಗೆ ಸ್ನೇಹದಿಂದಿರುವವನೇ ವೀರಶೈವನಾಗುವನು. ಇಲ್ಲಿ ಹೇಳಿರುವ ಇಷ್ಟಲಿಂಗ, ಭಸ್ಮ ರುದ್ರಾಕ್ಷಿಗಳು ಸದಾ ದೇಹದ ಮೇಲೆ ಧರಿಸುವುದರಿಂದ ಸಾಧಕನು ಸದಾ ಸನ್ಮಾರ್ಗದಲ್ಲಿ ವರ್ತಿಸುತ್ತಾನೆ. ಅಂತಯೇ ಧರ್ಮ ಲಾಂಛನಗಳಿಗೆ ಪ್ರತಿಯೊಂದು ಧರ್ಮದಲ್ಲಿ ಮಹತ್ವವನ್ನು ಕೊಟ್ಟಿದ್ದಾರೆ.

ಶಿವಭಕ್ತನ ಮೈಮೇಲೆ ಇರುವ ಭಸ್ಮ ರುದ್ರಾಕ್ಷಿಗಳು ಸಾತ್ವಿಕ ಅಲಂಕಾರಗಳೆಂದು ಕರೆಯಲ್ಪಡುತ್ತವೆ. ಇವುಗಳಿಗೆ ವೀರಶೈವ ಧರ್ಮದಲ್ಲಿ ಆವರಣಗಳೆಂದು ಕರೆದಿದ್ದಾರೆ. ಆವರಣವೆಂದರೆ ರಕ್ಷಾಕವಚ ಎಂದರ್ಥ. ಯುದ್ಧ ಭೂಮಿಯಲ್ಲಿ ತನ್ನ ಅಂಗರಕ್ಷಣೆಗೆ ಸೈನಿಕನು ಕವಚಗಳನ್ನು ಧರಿಸುವಂತೆ ಅರಿಷಡ್ ವರ್ಗಗಳ ಬಾಧೆಯಿಂದ ತನ್ನನ್ನು ರಕ್ಷಿಸಿಕೊಳ್ಳಲು ವೀರಶೈವ ಆಚಾರ್ಯರು ಎಂಟು ಆವರಣಗಳನ್ನು ಕರುಣಿಸಿದ್ದಾರೆ. ಅವುಗಳಲ್ಲಿ ಇಷ್ಟಲಿಂಗ, ಭಸ್ಮ ಮತ್ತು ರುದ್ರಾಕ್ಷಿಗಳು ನಮ್ಮ ದೇಹದ ಮೇಲೆ ಸದಾ ಕಂಗೊಳಿಸುತ್ತವೆ. ಅಲ್ಲದೇ ನಮ್ಮ ಮನಸ್ಸಿನಲ್ಲಿ ನಿಷಿದ್ಧ ವಿಷಯಗಳತ್ತ ಪ್ರವೃತ್ತಿಯ ಉಂಟಾಗದಂತೆ ನೋಡಿ ಕೊಳ್ಳುತ್ತವೆ. ಆದಕಾರಣ ವೀರಶೈವರ ಈ ಧರ್ಮಲಾಂಛನಗಳು ದೇಹದಿಂದ ಎಂದೂ ಅಗಲಿಸಬಾರದು. ಹೀಗೆ ಧರ್ಮದ ಆವರಣಗಳನ್ನು ಧರಿಸಿ ತನ್ನ ಮನಸ್ಸನ್ನು ತಾನು ರಕ್ಷಿಸಿಗೊಳ್ಳಬೇಕು. ಮನಸ್ಸು ರಕ್ಷಿತವಾಗಿದ್ದರೆ ನಾವು ಸುರಕ್ಷಿತ ಎಂಬ ವಿಚಾರವನ್ನು ಶ್ರೀ ಗಳು ಹೇಳಿದರು.

ಸದ್ಗುಣಗಳಿಂದಲೇ ಜ್ಞಾನಾಭಿವೃದ್ಧಿ

ಗದಗ : ಜ್ಞಾನದ ಅಭಿವೃದ್ಧಿಗೆ ಸದ್ಗುಣಗಳೇ ಕಾರಣ ಎಂದು ಕಾಶಿ ಜ.ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಹೇಳಿದರು.



ಸ್ಥಳೀಯ ಕೆ.ಎಚ್.ಪಾಟೀಲ ಸಭಾಭವನದಲ್ಲಿ ಸಿದ್ಧಾಂತ ಶಿಖಾಮಣಿಯ ಶರಣ ಸ್ಥಲ ಕುರಿತು ಅವರು ಆಶೀರ್ವಚನ ನೀಡಿ, ಲಿಂಗಾಂಗ ಸಾಮರಸ್ಯದ ದಿವ್ಯ ಜ್ಞಾನ ಪಡೆದುಕೊಳ್ಳಬೇಕಾದರೆಶಮೆ, ದಮೆ, ವಿವೇಕ, ವೈರಾಗ್ಯ, ಕ್ಷಮೆ, ಕಾರುಣ್ಯ, ಶ್ರದ್ಧೆ ಮುಂತಾದ ಸದ್ಗುಣ ಸಂಪನ್ನನಾಗಿ ಶಿವಭಕ್ತಿಯುಕ್ತನಾಗಿರಬೇಕು. ಹಾಗಿದ್ದರೆ ಪ್ರತಿಯೊಬ್ಬರು ಲಿಂಗಾಂಗ ಸಾಮರಸ್ಯದ ಶಿವಜ್ಞಾನ ಪಡೆದುಕೊಳ್ಳಬಹುದು. ಸದ್ಗುಣಗಳು ಶಿವಜ್ಞಾನದ ಬಂಧುಗಳೆಂದು ಶ್ರೀ ಜ.ರೇಣುಕಭಗವತ್ಪಾದರು ಸಿದ್ಧಾಂತ ಶಿಖಾಮಣಿಯಲ್ಲಿ ಉಪದೇಶಿಸಿದ್ದಾರೆ ಎಂದು ಹೇಳಿದರು.

ಗುಣಾಃ ಪೂಜಾಸ್ಥಾನಂ ಗುಣಿಷು ನಚ ಲಿಂಗಂ ನಚ ವಯಃ ಎಂಬ ಉಕ್ತಿಗನುಸಾರವಾಗಿ ಲಿಂಗ ಮತ್ತು ಆಯುಷ್ಯವನ್ನು ಲೆಕ್ಕಿಸದೇ ಗುಣಗಳನ್ನು ನೋಡಿಯೇ ಗೌರವಿಸಬೇಕೆಂಬುದು ಆ ಉಕ್ತಿಯ ಸಾರವಾಗಿದೆ. ಸದ್ಗುಣಗಳಿಂದ ಲೋಕದಲ್ಲಿ ಗೌರವ ದೊರೆಯುವುದರ ಜತೆಗೆ ಶ್ರೇಷ್ಠವಾದ ಶಿವಜ್ಞಾನ ಪಡೆದುಕೊಂಡು ಶಿವನ ಕೃಪೆಗೂ ಪಾತ್ರರಾಗಬಹುದು ಎಂದರು.

ಮನೆಯಲ್ಲಿ ಕಾಳುಗಳನ್ನು ಹಸನು ಮಾಡಲು ಮೊರ ಉಪಯೋಗಿಸಲಾಗುತ್ತದೆ. ಕೇರುವ ಮೊರ ಕಸಕಡ್ಡಿಗಳನ್ನು ಹೊರಹಾಕಿ ಸ್ವಚ್ಛ ಕಾಳುಗಳನ್ನು ತನ್ನ ಹೊಟ್ಟೆಯಲ್ಲಿ ಇಟ್ಟುಕೊಳ್ಳುವುದರಿಂದ ಹೆಣ್ಣು ಮಕ್ಕಳು ಕಾಳು ಕೇರುವಾಗ ಮರದ ಬೆನ್ನು ಚಪ್ಪರಿಸುತ್ತಾರೆ. ಸಾಣಿಗೆ ಹಿಟ್ಟನ್ನು ಕೆಳಗೆ ಬಿಟ್ಟು ತೌಡನ್ನು ತನ್ನ ಉದರದಲ್ಲಿ ಇಟ್ಟುಕೊಳ್ಳುವುದರಿಂದ ಅದರ ಎರಡೂ ಕಪಾಳಕ್ಕೆ ಹೆಣ್ಣು ಮಕ್ಕಳ ಕೈಗಳಿಂದ ಹೊಡೆಯುತ್ತಿರುತ್ತಾರೆ. ಈ ಲೌಕಿಕ ದೃಷ್ಟಾಂತದಿಂದ ನಾವು ತಿಳಿದುಕೊಳ್ಳುವುದೇನೆಂದರೆ ಗುಣವಂತನು ಗೌರವಕ್ಕೆ ಒಳಗಾಗುತ್ತಾನೆ. ದುರ್ಗುಣಿ ತಿರಸ್ಕಾರಕ್ಕೆ ಒಳಗಾಗುತ್ತಾನೆ ಎಂದು ಹೇಳಿದರು. ಶಮೆ, ದಮೆ ಮುಂತಾದ ಸದ್ಗುಣಗಳನ್ನು ಸಂಗ್ರಹಿಸಿದಾಗ ಅವನಲ್ಲಿಯ ತಮೋ ಗುಣ ಇಲ್ಲದಾಗಿ ಶುದ್ಧ ಸಾತ್ವಿಕ ಭಾವನೆ ಉದಯವಾಗುವುದು. ಈ ಸಾತ್ವಿಕ ಭಾವನೆಯೇ ಶಿವಜ್ಞಾನಕ್ಕೆ ಕಾರಣವಾಗುವುದರಿಂದ ಪ್ರತಿಯೊಬ್ಬರೂ ಸದ್ಗುಣಿಗಳಾಗಬೇಕೆಂದು ಶ್ರೀಗಳು ಹೇಳಿದರು.

ಭಕ್ತಿ ಮಾರ್ಗವೇ ಉತ್ಕೃಷ್ಠ



ಕಾಶಿ ಜಗದ್ಗುರುಗಳ ವಾಣಿ

ಸೇಡಂ: ಎಲ್ಲಾ ಮಾರ್ಗಗಳಿಗಿಂತಲೂ ಭಕ್ತಿ ಮಾರ್ಗ ಉತ್ಕೃಷ್ಠವಾಗಿದೆ ಎಂದು ಕಾಶಿಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನುಡಿದರು.

ಅವರು ತಾಲೂಕಿನ ಮಳಖೇಡ ಭಂಗಿ ಮಠದಲ್ಲಿ ಶ್ರಾವಣ ಮಾಸದ ಪ್ರವಚನದ ಸಾನಿಧ್ಯವಹಿಸಿ ಮಾತನಾಡಿದರು. ಲೌಕಿಕ ಜೀವನದಲ್ಲಿ ಹೆಂಡತಿ ಮಕ್ಕಳು ಸಂಸಾರ ಎಂಬ ಜಂಜಡ ಹೊಂದಿದ್ದರೂ ಮುಕ್ತಿ ಪಡೆಯಲು ಭಕ್ತಿ ಮಾರ್ಗ ಅಗತ್ಯವಾಗಿದೆ. ದೇವರಲ್ಲಿ ನಂಬಿಕೆ ಶ್ರದ್ಧೆ ಇದ್ದರೆ ಜೀವನವು ಅಮೃತಮಯವಾಗುತ್ತದೆ. ದಿನದ 24 ಗಂಟೆ ನಿದ್ರೆ, ಕೆಲಸ ಹಣ ಗಳಿಕೆ ಇತ್ಯಾದಿ ಕಾರ್ಯಗಳಲ್ಲಿ ತೊಡಗಿದರೂ ಲಿಂಗಪೂಜೆ ಮರೆಯಬಾರದು.

ಪೂಜೆ ಮಾಡುವ ಸಂಸ್ಕೃತಿ, ದೇವರನ್ನು ಭಜಿಸುವ ಭಕ್ತಿ ಮಾರ್ಗದಿಂದ ಜೀವನ ಯಶಸ್ವಿಯಾಗಲು ಸಾಧ್ಯ. ಮನುಷ್ಯ ಹಣದಿಂದ ಎಷ್ಟೇ ಶ್ರೀಮಂತನಾದರೂ ಪ್ರಯೋಜನವಿಲ್ಲ. ಗುಣದಿಂದ ಶ್ರೀಮಂತನಾಗಲೂ ಭಕ್ತಿ ಮಾರ್ಗ ಅಗತ್ಯವಾಗಿ ಬೇಕಾಗಿದೆ. ಎಲ್ಲಾ ಶ್ರೀಮಂತಿಕೆಗಳಿಗಿಂತಲೂ ಆತ್ಮ ಶ್ರೀಮಂತಿಕೆ ಉನ್ನತವಾದುದು.

ಆತ್ಮ ಸಾಕ್ಷಿಯಾಗಿ ನಡೆದರೆ ಜೀವನ ಪಾವನವಾಗುತ್ತದೆ. ಎಷ್ಟೇ ದೊಡ್ಡ ವ್ಯಕ್ತಿಯಾಗಿ ಬೆಳೆದರೂ ದೇವರನ್ನು ಕುರಿತು ಪೂಜೆ ಮಾಡದೆ ಅಥವಾ ದೇವರಿಗೆ ಸಮಾನವಾದ ಸದ್ಗುಣಗಳನ್ನು ಸದಾಚಾರಗಳನ್ನು ಮೈಗೂಡಿಸಿಕೊಳ್ಳದೆ ಹೋದರೆ ಖಂಡಿತ ಮುಕ್ತಿ ಸಿಗುವುದಿಲ್ಲ ಎಂದರು.

ಸಿದ್ಧಾಂತ ಸಾಗರ

ದೇವರನ್ನು ತೋರಿಸುವ ವೀರಶೈವ ಧರ್ಮ



ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು

ವೀರಶೈವ ಧರ್ಮ ಇಷ್ಟಲಿಂಗ ಧಾರಣೆ ಮೂಲಕ ದೇವರನ್ನು ಅತೀ ಸಮೀಪದಲ್ಲಿ ತೋರಿಸುತ್ತದೆ. ಲಿಂಗವೆಂದರೆ ಚರಾಚರ ಜಗತ್ತೆಲ್ಲವನ್ನು ತನ್ನಲ್ಲಿ ಅಡಗಿಸಿಕೊಂಡಿರುವ ಅಖಂಡ ಪರಶಿವತತ್ವವೇ ಆಗಿದೆ. ಇಂತಹ ನಿರ್ಗುಣ, ನಿರಾಕಾರ ತತ್ವವನ್ನು ವೀರಶೈವ ಆಚಾರ್ಯರು ಇಷ್ಟಲಿಂಗ ರೂಪದಲ್ಲಿ ದೀಕ್ಷೆ ಮೂಲಕ ಅನುಗ್ರಹಿಸಿದ್ದಾರೆ.

ದೇವಾಲಯಗಳಲ್ಲಿ ದೇವರನ್ನು ತೋರಿಸುವುದಕ್ಕಿಂತ ದೇಹದ ಮೇಲೆಯೇ ದೇವರನ್ನು ಧರಿಸಿ ದೇಹವನ್ನೇ ದೇವಾಲಯವನ್ನಾಗಿ ಮಾಡಿಕೊಳ್ಳುವುದೇ ವೀರಶೈವ ಧರ್ಮದ ಗುರಿ. ಇದಲ್ಲದೆ ದೇಹ ಮೇಲೆ ಭಸ್ಮ ರುದ್ರಾಕ್ಷಿ ಮತ್ತು ಇಷ್ಟಲಿಂಗವನ್ನು ಧರಿಸುವುದರಿಂದ ದೇಹವು ಸದಾ ಪವಿತ್ರವಾಗಿರುತ್ತದೆ. ಅದರಂತೆ ದುರ್ಮಾರ್ಗದತ್ತ ಮನಸ್ಸು ಹಾತೊರೆಯುವುದಿಲ್ಲ. ಹೀಗೆ ಸಾಧಕ ಸದಾ ಪವಿತ್ರ ಭಾವನೆ ಹೊಂದಿ ಸನ್ಮಾರ್ಗದಲ್ಲಿ ಇರಬೇಕೆಂಬುದೇ ಇಷ್ಟಲಿಂಗ ಧಾರಣೆಯ ಉದ್ದೇಶ.

ದೇಹದ ಮೇಲೆ ಇಷ್ಟ ಲಿಂಗ ಧರಿಸುವ ಪದ್ಧತಿ ಅತ್ಯಂತ ಪ್ರಾಚೀನವಾದುದು. ನಮ್ಮ ದೇಶದ ಅನೇಕ ಮಹರ್ಷಿಗಳು, ಬ್ರಹ್ಮ-ವಿಷ್ಣು ಮೊದಲಾದ ದೇವತೆಗಳು ಲಕ್ಷ್ಮೀ ಮುಂತಾದ ಸ್ತ್ರೀ ದೇವತೆಗಳು ಮಸ್ತಕದ ಮೇಲೆ ಲಿಂಗವನ್ನು ಧರಿಸುತ್ತದ್ದರೆಂಬುದಕ್ಕೆ ಇಂದಿಗೂ ಬಾರ್ಸಿ, ತುಳಜಾಪುರ ಮತ್ತು ಕೊಲ್ಹಾಪುರ ನಗರಗಳಲ್ಲಿರುವ ದೇವತಾ ವಿಗ್ರಹಗಳ ಮಸ್ತಕದ ಮೇಲೆ ಲಿಂಗವಿರುವುದನ್ನು ನೋಡಬಹುದು. ಶಿವನು ಸರ್ವಾರಾಧ್ಯನಾಗಿರುವುದರಿಂದ ಶಿವನನ್ನು ಲಿಂಗ ರೂಪದಲ್ಲಿ ಆರಾಧಿಸುವ ಪದ್ಧತಿ ಇದೆ. ಅಂತೆಯೇ ವೀರಶೈವ ಧರ್ಮದಲ್ಲಿ ಲಿಂಗಧಾರಣೆಗೆ ಮಹತ್ವ ಕೊಡಲಾಗಿದೆ. ಅಕ್ಕಮಹಾದೇವಿಯು ತನ್ನ ಒಂದು ವಚನದಲ್ಲಿ ಗುರುವಿನ ಹಸ್ತ ಸ್ಪರ್ಶದಿಂದ ಪಂಚಕಲಶಾಭಿಷೇಕ, ವಿಭೂತಿ ಧಾರಣೆ, ಲಿಂಗಧಾರಣೆ ಹಾಗೂ ಪಂಚಾಕ್ಷರ ಮಹಾಮಂತ್ರೋಪ್ರದೇಶವನ್ನು ಪಡೆದ ಸಾಧಕನ ಕಾಯಕವೇ ಕೈಲಾಸವೆಂಬುದಾಗಿ ಹೇಳಿದ್ದಾರೆ. ಆದಕಾರಣ 8 ವರ್ಷ ಮೇಲ್ಪಟ್ಟ ವಯಸ್ಸಿನ ಹೆಣ್ಣುಮಕ್ಕಳಾಗಲಿ ಗಂಡು ಮಕ್ಕಳಾಗಲಿ ಎಲ್ಲರೂ ಲಿಂಗ ದೀಕ್ಷೆಯನ್ನು ಪಡೆದುಕೊಂಡು ಸಾತ್ವಿಕರಾಗಬೇಕು.

ಕಾಶಿ ಜಗದ್ಗುರುಗಳ ಉವಾಚ

ಚಿದ್ರೂಪ ಚಿಂತನೆಯೇ ಪ್ರಾಣಲಿಂಗಾರ್ಚನೆ



ವೀರಶೈವ ಧರ್ಮ ಸಿದ್ಧಾಂತದಲ್ಲಿ ಭಕ್ತ ಮತ್ತು ಮಹೇಶ್ವರನಿಗೆ ಇಷ್ಟ ಲಿಂಗಾರ್ಚನೆಯನ್ನು ಹೇಳಿ ಪ್ರಸಾದಿ ಹಾಗೂ ಪ್ರಾಣಲಿಂಗಿ ಸಾಧಕರಿಗೆ ಪ್ರಾಣಲಿಂಗಾರ್ಚನೆಯನ್ನು ಬೋಧಿಸಲಾಗಿದೆ ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಶೇಖ ರೋಜಾದಲ್ಲಿರುವ ಶ್ರೀ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಪ್ರವಚನ ನೀಡಿದ ಅವರು, ಸಿದ್ಧಾಂತ ಶಿಖಾಮಣಿಯಲ್ಲಿ ಕ್ಷಮೆಯೇ ಅಭಿಷೇಕ ಜಲ, ವಿವೇಕವೇ ವಸ್ತ್ರ, ಸತ್ಯವೇ ಆಭರಣ, ವೈರಾಗ್ಯವೇ ಪುಷ್ಪಮಾಲೆ, ಸಮಾಧಿ ಸಂಪತ್ತಿ ಗಂಧ, ನಿರಹಂಕಾರ ಭಾವನೇ ಅಕ್ಷತೆ, ಶ್ರದ್ಧೆ ಧೂಪ ಜ್ಞಾನದೀಪ, ಭ್ರಾಂತಿಗ್ಯಾವೇ ನೈವೇದ್ಯ, ಮೌನವೇ ಗಂಟಾನಾದ, ವಿಷಯ ಸಮರ್ಪಣೆಯೇ ತಾಂಬೂಲ, ವಿಷಯ ಭ್ರಾಂತಿರಾಹಿತ್ಯವೇ ಪ್ರದಕ್ಷಿಣೆ ಮತ್ತು ಬುದ್ಧಿ ಸಮರ್ಪಣೆಯೇ ನಮಸ್ಕಾರವು, ಹೀಗೆ ಭಾವನಾಮಯಗಳಾದ ಉಪಚಾರಗಳಿಂದ ಪ್ರಾಣಲಿಂಗಾರ್ಚನೆಯು ಬೋಧಿಸಲಾಗಿದೆ.


ಅಂದರೆ ಕ್ಷಮೆ, ವಿವೇಕ ಮತ್ತು ವೈರಾಗ್ಯ ಮುಂತಾದ ಸದ್ಗುಣಗಳೇ ಪ್ರಾಣಲಿಂಗಕ್ಕೆ ಸಮರ್ಪಿಸುವ ಉಪಚಾರಗಳೆಂದು ತಿಳಿದುಕೊಳ್ಳಬೇಕು. ಒಟ್ಟಿನಲ್ಲಿ ಈ ಮೇಲೆ ಹೇಳಿದ ಉತ್ಕೃಷ್ಟಗಳಾದ ಗುಣಗಳು ಯಾರು ಸಂಪಾದಿಸಿಕೊಳ್ಳುವರೋ ಅವರೇ ಪ್ರಾಣಲಿಂಗಾರ್ಚನೆಯನ್ನು ಮಾಡಲು ಅರ್ಹ ಎಂಬುದನ್ನು ಸರ್ವರು ತಿಳಿದುಕೊಳ್ಳಬೇಕು. ಈ ರೀತಿಯಾದ ಅಂತರಂಗ ಪ್ರವೃತ್ತಿಯಾಗದೇ ಸಾಧಕನ ಪ್ರಗತಿಯಾಗಲು ಸಾಧ್ಯವಿಲ್ಲ.

ಅಂತೆಯೇ ಶರಣರು -ಹೊಟ್ಟೆಯ ಮೇಲೆ 'ಕಟೋಗರವ ಕಟ್ಟಿದರೆ ತೃಪ್ತಿಯಾಗಬಲ್ಲದೇ ?' ಎಂಬುದಾಗಿ ಪ್ರಶ್ನಿಸಿದ್ದಾರೆ. ಅಂದರೆ ಹೊಟ್ಟೆಯ ಮೇಲೆ ಕಟ್ಟಿರುವ ಬುತ್ತಿಯನ್ನು ಬಿಚ್ಚಿ ಊಟ ಮಾಡಿದಾಗ ತೃಪ್ತಿಯಾಗುವಂತೆ ಹೊರಗಿನ ಇಷ್ಟಲಿಂಗವನ್ನು ಎಡ ಹಸ್ತ ಪೀಠದಲ್ಲಿ ಇರಿಸಿ ಅದನ್ನು ದೃಷ್ಟಿಯೋಗದಿಂದ ನಿರೀಕ್ಷಿಸುತ್ತಾ ಮನಸ್ಸನ್ನು ಹೃದಯದಲ್ಲಿ ಹವಳದ ವರ್ಣದಿಂದ ಹೊಳೆಯು ಪ್ರಾಣಲಿಂಗದಲ್ಲಿ ಮಗ್ನ ಮಾಡಲಾಗಿ ತನ್ನ ಚಿದ್ರೂಪ ಚಿಂತನೆಯು ಉಂಟಾಗುವುದು. ಈ ಚಿದ್ರೂಪ ಚಿಂತನೆಯೇ ನಮಗೆ ತೃಪ್ತಿಯನ್ನು ಕೊಡುತ್ತದೆ. ಹೀಗೆ ಅಂತರಂಗದಲ್ಲಿ ಪ್ರವೃತ್ತಿಯಾಗದೇ ಕೇವಲ ಹೊರಗಿನ ಇಷ್ಟಲಿಂಗವನ್ನೇ ಪೂಜಿಸಿರುವುದರಲ್ಲಿಯೇ ತೊಡಗಿದರೆ ಹೊಟ್ಟೆಯ ಮೇಲೆ ಬುತ್ತಿಯನ್ನು ಕಟ್ಟಿಕೊಂಡಂತಾಗುತ್ತದೆ. ಎಂಬುದಾಗಿ ಶರಣರು ತಿಳಿ ಹೇಳಿದ್ದನ್ನು ಇಲ್ಲಿ ಗಮನಿಸಬೇಕು.

ಕಾಶಿ ಜಗದ್ಗುರುಗಳ ಉವಾಚ

ಸಂಸ್ಕಾರ ಆಧ್ಯಾತ್ಮ ಮಾರ್ಗದ ಮೊದಲ ದೀಕ್ಷೆ

ವೀರಶೈವ ಧರ್ಮದಲ್ಲಿ ಗರ್ಭದಾನ ಸಂಸ್ಕಾರವನ್ನೇ ಮೊದಲ ಮಾಡಿಕೊಂಡು ಅಂತ್ಯೇಷ್ಟಿಯವರಿಗೆ 10 ಸಂಸ್ಕಾರಗಳಿಗೆ ದಶವಿಧ ಸಂಸ್ಕಾರಗಳೆಂದು ಕರೆಯುತ್ತಾರೆ. ಇವುಗಳಲ್ಲಿ ದೀಕ್ಷಾ ಸಂಸ್ಕಾರವು ಆಧ್ಯಾತ್ಮಿಕ ಮಾರ್ಗದ ಪ್ರಮುಖ, ಈ ಸಂಸ್ಕಾರವನ್ನು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಸಮಗ್ರ ಮಾನವನ ಸಮಾಜವನ್ನು ವಿಶುದ್ಧರು ಪ್ರಾಕೃತರು ಎಂದು ಎರಡು ವಿಧವಾಗಿ



ಹೇಳಲಾಗಿದೆ. ಶಿವ ದೀಕ್ಷಾ ಸಂಸ್ಕಾರವನ್ನು ಹೊಂದಿದವರು ವಿಶುದ್ಧರು ಇತರರು ಪ್ರಾಕೃತರು ಶರಣು ಇವರಿಗೇನೇ ಭಕ್ತರು ಮತ್ತು ಭಾವಿಗಳು ಎಂದು ಹೇಳಿದ್ದಾರೆ ಎಂದು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಅಭಿಪ್ರಾಯ ಪಟ್ಟರು.

ನಗರದ ಸೊಗಸನಗೇರಿಯ ಶ್ರೀ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಆಶೀರ್ವಚನ ನೀಡಿದ ಅವರು , ಈ ಜಗತ್ತಿನಲ್ಲಿ ಜನ್ಮ ತಾಳಿದ ಪ್ರತಿಯೊಬ್ಬ ಜೀವಿಯು ಮೂರು ಮಲಗಳಿಂದ ಕೂಡಿಕೊಂಡಿರುತ್ತಾನೆ. ಅವುಗಳೇ ಅಣವ ಮಲ, ಮಾಯಾಮಲ ಮತ್ತು ಕಾರ್ಮಿಕ ಮಲಗಳು ಇವುಗಳಲ್ಲಿ ತನ್ನಲ್ಲಿ ಅಣುಭಾವವನ್ನು ತಂದುಕೊಡುವುದೇ ಅಣವ ಮಲವು, ಬೇಧ-ಬುದ್ಧಿಯನ್ನು ಹುಟ್ಟಿಸುವುದೇ ಮಾಯಾ ಮಲವು, ಶುಭಾಶುಭವಾಸನಾ ರೂಪವಾದ್ದದೇ ಕಾರ್ಮಿಕ ಮಲವು. ಈ ಮೂರು ಮಲಗಳನ್ನು ಕಳೆದುಕೊಳ್ಳದೇ ದೇವರ ಭಕ್ತಿಯನ್ನು ಮಾಡಲಿಕ್ಕಾಗುವುದಿಲ್ಲ, ಅಂತೇ ಈ ಮಲಗಳ ನಿವೃತ್ತಿಗಾಗಿ ಸದ್ಗುರುಗಳಿಗೆ ಶರಣು ಹೋಗಬೇಕುಎಂದರು.

ಸದ್ಗುರು ತನಗೆ ಶರಣಾಗತನಾದ ಶಿಷ್ಯನ ಅಣವ ಮಲ ನಿವೃತ್ತಿಗಾಗಿ ವೇದ ದೀಕ್ಷೆಯನ್ನು, ಮಾಯಾಮಲ ನಿವೃತ್ತಿಗಾಗಿ ಮಂತ್ರ ದೀಕ್ಷೆಯನ್ನು ಕಾರ್ಮಿಕ ಮಲ ನಿವೃತ್ತಿಗಾಗಿ ಕ್ರಿಯಾ ದೀಕ್ಷೆಯನ್ನು ಅನುಗ್ರಹಿಸುತ್ತಾನೆ. ಹೀಗೆ ತ್ರಿವಿಧ ದೀಕ್ಷೆಯಿಂದ ತ್ರಿವಿಧಗಳನ್ನು ದೂರಿಕರಿಸಿಕೊಂಡು ಶಿಷ್ಯನೇ ಇಷ್ಟಲಿಂಗ, ಪ್ರಾಣಲಿಂಗಮತ್ತು ಭಾವಲಿಂಗಗಳು ಅನುಸಂಧಾನ ಮಾಡಿ ಲಿಂಗಾಂಗ ಸಾಮರಸ್ಯವನ್ನು ಪಡೆದುಕೊಳ್ಳುವವನು. ಆದ್ದರಿಂದ ಲಿಂಗಾಂಗ ಸಾಮರಸ್ಯಕ್ಕೆ ದೀಕ್ಷಾ ಸಂಸ್ಕಾರವು ಪ್ರಮುಖವಾಗಿದೆ.

ಈ ದೀಕ್ಷಾ ಸಂಸ್ಕಾರವನ್ನು ಮಾಡುವಾಗ ಸದ್ಗುರುಗಳು ಸಾಧಕನ ಸಂಕುಚಿತ ಭಾವನೆಗಳ ನಿವೃತ್ತಿಗಾಗಿ ಏಕಾಗ್ರ ಚಿತ್ತ ದೃಢವ್ರತ, ಪಂಚೇಂದ್ರಿಯಾರ್ಪಣ, ಅಹಿಂಸೆ, ಲಿಂಗನಿಷ್ಠೆ ಮತ್ತು ಮನೋಲಯ ಮಂತ್ರದ ಉತ್ಕೃಷ್ಟ ಭಾವನೆಗಳ ಬಗ್ಗೆ ತಿಳವಳಿಕೆಯನ್ನು ಸಹ ಮುಡಿಸುತ್ತಾರೆ. ಸಾಧಕನು ಲಿಂಗಾನುಸಂಧಾನ ಜತೆಗೆ ಈ ಮೇಲಿನ ಉತ್ಕೃಷ್ಟ ಭಾವನೆಗಳನ್ನು ಮೈಗೂಡಿಸಿಕೊಂಡರೆ ಲಿಂಗಾಂಗ ಸಾಮರಸ್ಯಕ್ಕೆ ಹೆಚ್ಚಿನ ಅನುಕೂಲತೆಯಾಗುವುದು ಎಂದು ನುಡಿದರು.

ಧರ್ಮಸರ್ವರನ್ನು ನಿಯಂತ್ರಿಸುವ ಅಂಕುಶ



ಎಲ್ಲ ದುಃಖಗಳನ್ನು ಶಮನ ಮಾಡುವ ದಿವ್ಯ ಔಷಧಿಯೇ ಧರ್ಮ. ಈ ಧರ್ಮದ ನಿಯಂತ್ರಣವು ಸರ್ವರಿಗೂ ಇರಲೇ ಬೇಕು. ಅಂದಾಗ ಮಾತ್ರ ಎಲ್ಲ ಕ್ಷೇತ್ರಗಳು ಸರಿಯಾಗಿ ಕಾರ್ಯ ಮಾಡಬಲ್ಲವು.

ಧರ್ಮದಂಡವು ಸರ್ವಗಳನ್ನು ನಿಯಂತ್ರಿಸುವ ಅಂಕುಶವಿದ್ದಂತೆ ಎಂದು ಕಾಶಿ ಜಗದ್ಗುರುಗಳಾದ ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಶ್ರಾವಣಮಾಸದ ನಿಮಿತ್ತವಾಗಿ ಇಲ್ಲಿನ ಭಂಗಿಮಠದಲ್ಲಿ ಏರ್ಪಡಿಸಲಾಗಿರುವ ಸಿದ್ಧಾಂತ ಶಿಖಾಮಣಿ ಕುರಿತು ಮಾತನಾಡಿದ ಅವರು, ಪ್ರಜೆಗಳನ್ನು ನಿಯಂತ್ರಿಸಲು ರಾಜದಂಡವು ಮಹತ್ವದ ಪಾತ್ರವಹಿಸುತ್ತಿತ್ತು, ಆ ರಾಜನನ್ನು ನಿಯಂತ್ರಿಸುವುದು ಧರ್ಮದಂಡವಾಗಿರುತ್ತದೆ. ರಾಜ ಸಹ ಧರ್ಮದ ಉಲ್ಲಂಘನೆ ಮಾಡಲು ಈ ದೇಶದಲ್ಲಿ ಅವಕಾಶವಿಲ್ಲ, ಆದ್ದರಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮದ ಚೌಕಟ್ಟಿನಲ್ಲಿ ಇದ್ದುಕೊಂಡೇ ಕಾರ್ಯಗಳನ್ನು ಮಾಡಬೇಕು.

ನ್ಯಾ. ರಾಮಾಜೋಯಿಸ್ ರವರು ಸ್ತ್ರೀಯರಿಂದಲೇ ಧರ್ಮ ಉಳಿದಿದೆ ಎಂದು ಹೇಳಿದ ಮಾತು ಅತ್ಯಂತ ಪ್ರಾಮುಖ್ಯವಾದುದು. ಮಹಿಳೆಯರಂತೆ ಪುರುಷರೂ ಧರ್ಮವಂತರಾಗಬೇಕು. ಧರ್ಮದಲ್ಲಿ ರಾಜಕೀಯ ಪ್ರವೇಶ ಇರಕೂಡದು. ರಾಜಕೀಯಕ್ಕೆ ಮಾತ್ರ ಧರ್ಮದ ರಕ್ಷಣೆ ಯಾವಾಗಲೂ ಬೇಕು ಎಂದು ಕಾಶಿ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ

ಶ್ರಾವಣಮಾಸ ಸಂದೇಶ



ಆತ್ಮಲಾಭವೇ ಬಹುದೊಡ್ಡ ಲಾಭ

ಆತ್ಮಲಾಭಕ್ಕಿಂತಲೂ ಮಿಗಿಲಾದ ಲಾಭ ಮತ್ತೊಂದಿಲ್ಲ, ಆತ್ಮವನ್ನು ಅರಿತಾಗಲೇ ಅದರ ಲಾಭವಾಗುವುದು ಎಂದು ಕಾಶಿ ಜಗದ್ಗುರುಗಳಾದ ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಮಳಖೇಡ ಭಂಗಿಮಠದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿಯ ಪಿಂಡ ಜ್ಞಾನ ಸ್ಥಳವನ್ನು ಕುರಿತು ಪ್ರವಚನ ನೀಡಿದ ಅವರು, ಬಹಳಷ್ಟು ಜನರು ಶರೀರವನ್ನೇ ಆತ್ಮವನ್ನಾಗಿ ಭಾವಿಸಿ ಐಹಿಕ ಭೋಗ ಭಾಗ್ಯಗಳೇ ಜೀವನದ ಗುರಿ ಎಂಬುದಾಗಿ ಭಾವಿಸಿ ಸ್ವೇಚ್ಛಾಚಾರಿಗಳಾಗುತ್ತಿದ್ದಾರೆ.

ಇದನ್ನು ನಿಯಂತ್ರಿಸಬೇಕಾದರೆ ಪ್ರತಿಯೊಬ್ಬರೂ ವಿವೇಕವನ್ನು ಬೆಳೆಸಿಕೊಳ್ಳ ಬೇಕಾಗುತ್ತದೆ. ಆತ್ಮ ಮತ್ತು ಅನಾತ್ಮಗಳ ಭೇದಗಳನ್ನು ತಿಳಿಯುವುದೇ ವಿವೇಕದ ಕೆಲಸ. ನನ್ನದೆನ್ನುವ ಹೊರಜಗತ್ತಿನ ಪದಾರ್ಥಗಳೇ ಅನಾತ್ಮವಾಗುತ್ತವೆ, ಮತ್ತು ನಮ್ಮ ದೇಹದಲ್ಲಿರುವ ಇಂದ್ರಿಯಗಳಾದ ದೇಹದ ಭಾಗಗಳು ಕೂಡಾ ಅನಾತ್ಮ ಪದಾರ್ಥಗಳೇ ಆಗಿವೆ. ಆದರೆ, ಅವೆಲ್ಲವೂ ವಿಲಕ್ಷಣಗಳಾಗಿದ್ದು ಎಲ್ಲವೂ ಚೇತನ ಶಕ್ತಿಯನ್ನು ಕೊಡುವುದೇ ಆಗಿದೆ. ಇದೇ ಆತ್ಮ ತತ್ವವಾಗಿದೆ. ಇದನ್ನು ಅರಿತವನೇ ಆತ್ಮಜ್ಞಾನಿ ಎನಿಸುತ್ತಾನೆ. ಹೀಗೆ ಆತ್ಮದ ಅರಿವಿನಿಂದ ಆಗುವ ಲಾಭಕ್ಕೆ ಆತ್ಮ ಲಾಭ ಎನ್ನಬಹುದು. ಭಗವದ್ಗೀತೆಯಲ್ಲಿ ಇದಕ್ಕೆ ಕ್ಷೇತ್ರ-ಕ್ಷೇತ್ರಜ್ಞ ವಿಭಾಗ ಯೋಗ ಎಂದು ಕರೆಯಲಾಗಿದೆ ಎಂದರು.

ಭಂಗೀಮಠದ ಶ್ರೀ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಪ್ರಾಸ್ತಾವಿಕ ಮಾತನಾಡಿದರು.ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ಅಪಾರ ಸಂಖ್ಯೆಯ ಭಕ್ತಾಧಿಗಳು ಪಾಲ್ಗೊಂಡಿದ್ದರು.

ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ


ಶ್ರಾವಣಮಾಸ ಸಂದೇಶ



18-8-06 ಉಷಾ ಕಿರಣ

ಸಂಸ್ಕಾರವೇ ದೀಕ್ಷೆ

ಮಳಖೇಡ :ಧಾರ್ಮಿಕ ಪ್ರಪಂಚದಲ್ಲಿ ಧರ್ಮಾಚರಣೆಗಾಗಿ ಸಾಧಕನಿಗೆ ಮಾಡುವ ಮೊದಲನೇ ಸಂಸ್ಕಾರವೇ ದೀಕ್ಷೆ ಎಂಬುದಾಗಿ ಶ್ರೀ ಕಾಶೀ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದರು.ಮಳಖೇಡದ ಭಂಗೀಮಠದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಹಮ್ಮಿಕೊಂಡಿದ್ದ ಆಶೀರ್ವಚನ ಕಾರ್ಯಕ್ರಮದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿಯ ಗುರುಕಾರುಣ್ಯ ಸ್ಥಲವನ್ನು ಕುರಿತು ಉಪದೇಶ ಮಾಡುತ್ತಿದ್ದ ಅವರು, ಸಂಸಾರದ ತಾಪತ್ರಯಕ್ಕೆ ಬೆಂದು ಜೀವಾತ್ಮನು ಸದ್ಗುರುವಿಗೆ ಶರಣಾಗುತ್ತಾನೆ. ಆಗ ಗುರುಗಳು ಇವನಲ್ಲಿಯ ದೈವೀ ಪ್ರೇಮದ ತೀವ್ರತೆಯನ್ನು ಪರೀಕ್ಷಿಸಿ ದೀಕ್ಷಾ ಸಂಸ್ಕಾರವನ್ನು ಮಾಡುತ್ತಾರೆ. ದೀಕ್ಷೆಯಿಂದ ಶಿಷ್ಯನ ಆಣವ, ಮಾಯಾ ಮತ್ತು ಕಾರ್ಮಿಕ ಮಲಗಳು ನಿವೃತ್ತಿಯಾಗುತ್ತವೆ. ತನ್ನ ಆತ್ಮದ ವ್ಯಾಪಕತೆಯನ್ನು ಮರೆಯಿಸಿ ಅಣುಭಾವವನ್ನು ತಂದು ಕೊಡುವುದೇ ಆಣವ ಮಲವು. ಪರಸ್ಪರರಲ್ಲಿ ಭೇದ ಬುದ್ಧಿಯನ್ನು ಹುಟ್ಟಿಸುವುದೇ ಮಾಯಾ ಮಲವು. ಇನ್ನು ಶುಭ-ಅಶುಭ ವಾಸನಾರೂಪವಾದುದ್ದೇ ಕಾರ್ಮಿಕ ಮಲವು.ದೀಕ್ಷಾ ಸಂಸ್ಕಾರದಿಂದ ಆ ಮೂರು ಮಲಗಳು ಇಲ್ಲವಾಗುತ್ತವೆ. ಮಲಿನವಾದ ಮಗುವನ್ನು ತೊಳೆದು ಸ್ವಚ್ಛಗೊಳಿಸುವಂತೆ ಹೇಳಿದರು.





ಬೈಲಹೊಂಗಲ ಸಮೀಪದ ಹೊಸೂರ ಗ್ರಾಮದಲ್ಲಿ ಜರುಗಿದ ಗಂಗಮ್ಮ ಕಮತಗಿ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಮಾತನಾಡಿದರು.

ಇನ್ನೊಬ್ಬರ ಶ್ರೇಯಸ್ಸು ಬಯಸಿ

ಬೈಲಹೊಂಗಲ, ನ. 20 - ತಾಯಿಗೆ ವಂದಿಸಿದರೆ ಕಾಶೀಗೆ ಹೋಗಿ ವಿಶ್ವನಾಥನಿಗೆ ನಮಸ್ಕರಿಸಿದಷ್ಟೇ ಪುಣ್ಯ ಬರುತ್ತದೆ ಎಂದು ಕಾಶೀ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಬೈಲಹೊಂಗಲ ಸಮೀಪ ಹೊಸೂರ ಗ್ರಾಮದಲ್ಲಿ ಶಿವಶರಣೆ ಗಂಗಮ್ಮ ಅಡಿವೆಪ್ಪ ಕಮತಗಿ ಅವರ ಜನ್ಮ ಶತಮಾನೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿ,ಈ ಭಾಗದ ಮುರಗೋಡ ಮಹಾಂತ ಶಿವಯೋಗಿಗಳು ದೇವರೆಂದೆ ಖ್ಯಾತರಾಗಿದ್ದರು, ಇಲ್ಲಿಯ ನೆಲ ಜಲ, ಗಾಳಿಗೆ ಅಂತಹ ಶಕ್ತಿ ಇದೆ ಎಂದರು.

ಶರೀರ ಸರಿ ಇರಬೇಕಾದರೆ ಮನಸ್ಸು ಸರಿ ಇರಬೇಕು. ತಮಗಾಗಿ ಬದುಕುವ ಜೊತೆಗೆ ಇನ್ನೊಬ್ಬರ ಶ್ರೇಯಸ್ಸನ್ನು ಬಯಸಬೇಕು. ಷಷ್ಟಬ್ಧಿ ಸಂದೇಶ ಆಯುಷ್ಯದ ಕೆಲ ಭಾಗ ಸಮಾಜ ಸೇವೆಗೆ ಮೀಸಲಿಡಬೇಕೆಂಬುದು ಆಗಿದೆ ಎಂದು ಅವರು ಪ್ರತಿಪಾದಿಸಿದರು. ಮೂರುಸಾವಿರ ಮಠದ ಶ್ರೀ ಗಂಗಾಧರ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು.

ಮುರಗೋಡದ ಶ್ರೀ ನೀಲಕಂಠ ಮಹಾಸ್ವಾಮಿಗಳು, ಸಂಸದ ಸುರೇಶ ಅಂಗಡಿ, ಶಾಸಕ ಜಗದೀಶ ಮೆಟಗುಡ್ಡ ಮಾತನಾಡಿ, ಶಿವಶರಣೆ ಗಂಗಮ್ಮ ಕಮತಗಿ 108 ವರ್ಷ ಬದುಕಿರುವುದರ ಹಿಂದೆ ಶುದ್ಧ ಮನಸ್ಸು ಮತ್ತು ಶಾರೀರಿಕ ಶ್ರಮ ಇದೆ ಎಂದರು.

ಶರಣ- ಸಂತರನ್ನು ಜಾತಿಗೆ ಸೀಮಿತಗೊಳಿಸದಿರಿ

ಸೇಡಂ: ಶರಣರನ್ನು, ಸಂತರನ್ನು ಒಂದೊಂದು ಜಾತಿಗೆ ಸೀಮಿತಗೊಳಿಸಬೇಡಿ ಎಂದು ಕಾಶಿ ಶ್ರೀಗಳಾದ ಡಾ. ಚಂದ್ರಶೇಖರ ಶಿವಾಚಾರ್ಯರು ಹೇಳಿದರು.



ಕಾಶಿ ಜಗದ್ಗುರುಗಳ ವಾಣಿ

ತಾಲೂಕಿನ ಮಳಖೇಡ ಭಂಗಿಮಠ ಹಾಗೂ ಪಟ್ಟಣದ ಕೊತ್ತಲ ಬಸವೇಶ್ವರ ದೇವಾಲಯದಲ್ಲಿ ಶ್ರಾವಣಮಾಸದ ಅಂಗವಾಗಿ ಜರುಗಿದ ಪ್ರವಚನದಲ್ಲಿ ಅವರು ಮಾತನಾಡಿ, ಜಾತಿ ನಿರ್ಮೂಲನೆಯಾಗಬೇಕು, ಮನುಷ್ಯತ್ವದಿಂದ ಕಾಯಕ ಜೀವಿಯಾಗಿ, ಮನುಕುಲ ಬದುಕಬೇಕೆಂದು ಕುಲಕ್ಕೊಬ್ಬ ಶರಣರು ಜನ್ಮ ತಾಳಿದರು.

ವಿಶ್ವ ಭಾತೃತ್ವ ವಾತಾವರಣ ಮೂಡಿಸಿ ಶರಣರನ್ನೇ ಇಂದು ಅನುಯಾಯಿಗಳು ಜಾತಿಗೆ ಸೀಮಿತಗೊಳಿಸುತ್ತಿರುವದು ವಿಷಾದದ ಸಂಗತಿ ಎಂದರು.

ಶರಣರು- ಸಂತರು ಜನ್ಮತ: ಯಾವದೇ ಜಾತಿಗೆ ಸೇರಿರಲಿ, ಆದರೆ ಬೆಳೆಯುತ್ತಾ ಅವರು ಮನುಜ ಕುಲಕ್ಕೆ ನೀತಿ ಸಂದೇಶಗಳನ್ನು ನೀಡುತ್ತಾ ಉದಾತ್ತವಾಗಿ ಬೆಳೆದರು. ಅವೈಜ್ಞಾನಿಕ ಕಂದಾಚಾರಗಳನ್ನು ಖಂಡಿಸಿ ಸರಿದಾರಿಗೆ ಜನರನ್ನು ತಂದಿದ್ದು ಶ್ಲಾಘನೀಯ ಎಂದು ಶ್ರೀಗಳು ನುಡಿದರು.

ಮನಸ್ಸು ಹತೋಟಿಯಲ್ಲಿದ್ದರೆ ಮಾತ್ರ ಆಧ್ಯಾತ್ಮದತ್ತ ಸಾಗಲು ಸಾಧ್ಯ- ಕಾಶಿ ಶ್ರೀ

ಪ್ರಜಾವಾಣಿ ವಾರ್ತೆ

ಸೇಡಂ: ಬ್ರಹ್ಮ ವಿದ್ಯೆ ಮಾತ್ರ ಮಾನವನ ಸ್ವಾರ್ಥ ಗುಣವನ್ನು ದೂರ ಮಾಡುತ್ತದೆ. ಸಮಾಜದ ಒಳಿತಿಗಾಗಿ ಕಾಯಕ ಮಾಡಲು ಈ ವಿದ್ಯೆ ಪ್ರೇರಣೆ ನೀಡುತ್ತದೆ. ಇದರಿಂದ ಸುಖಿ ಸಮಾಜ ನೆಲೆಗೊಳ್ಳುವುದರಿಂದ ವಿದ್ಯೆಗಳಲ್ಲಿ ಬ್ರಹ್ಮ ವಿದ್ಯೆ ಶ್ರೇಷ್ಠ ಎಂದು ಕಾಶಿಯ ಡಾ| ಚಂದ್ರಶೇಖರ ಶಿವಾಚಾರ್ಯ ತಿಳಿಸಿದರು.

ಅವರು ತಾಲೂಕಿನ ಮಳಖೇಡದ ಭಂಗೀಮಠದಲ್ಲಿ ಗಂಗಾಧರ ಸ್ವಾಮಿಗಳು ಏರ್ಪಡಿಸಿರುವ ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮದಲ್ಲಿ ಈಚೆಗೆ ಆಶೀರ್ವಚನ ನೀಡಿದರು.

ಮನಸ್ಸು ಹತೋಟಿಯಲ್ಲಿದ್ದಾಗ ಆಧ್ಯಾತ್ಮದ ಕಡೆಗೆ ಸಾಗಲು ಸಾಧ್ಯ. ಮನಸ್ಸಿನ ಕಾರ್ಯ ನಾವು ತೆಗೆದುಕೊಳ್ಳುವ ಆಹಾರವನ್ನು ಅವಲಂಬಿಸಿರುತ್ತದೆ. ಸಾತ್ವಿಕ ಆಹಾರ ಮೃದು ಸ್ವಭಾವಕ್ಕೆ ನಾಂದಿಯಾದರೆ, ತಾಮಸ ಆಹಾರ ಕ್ರೂರ ಸ್ವಭಾವಕ್ಕೆ ಪ್ರೇರಣೆ ನೀಡುತ್ತದೆ ಎಂದು ಎಚ್ಚರಿಸಿದರು.

ಇಂದಿನ ಆಧುನಿಕ ಜಗತ್ತಿನ ಮನುಷ್ಯ, ತನ್ನ ಜೀವನದ ವಿಶಿಷ್ಟ ಹಾಗೂ ಪ್ರಥಮ ಆದ್ಯತೆಯಾದ ಆಹಾರದ ಬಗ್ಗೆ ಬಹಳ ನಿಷ್ಕಾಳಜಿಯಿಂದ ವರ್ತಿಸುತ್ತಿದ್ದಾನೆ. ಪ್ರಸಕ್ತ ಬದಲಾವಣೆ ಆಗುತ್ತಿರುವ ಮನುಷ್ಯನ ಸಂಪೂರ್ಣ ನಡವಳಿಕೆ ಅವನ ಮನಸ್ಸಿನ ಮೇಲೆ ನಿರ್ಧಾರವಾಗಿದೆ. ಸಾತ್ವಿಕ ವಿಚಾರಗಳಿಗೆ ಉತ್ತಮ ಆಹಾರ ಸೇವನೆ ಅವಶ್ಯಕ ಎಂದ ಅವರು ಭಗವಂತನಿಗೆ ನೈವೇದ್ಯ ಮಾಡಿ ಸೇವಿಸಿದ ಆಹಾರ ವೈಶಿಷ್ಟ್ಯಪೂರ್ಣದಿಂದ ಕೂಡಿರುತ್ತದೆ ಎಂದರು.



ಸೇಡಂ ತಾಲೂಕಿನ ಮಳಖೇಡ ಗ್ರಾಮದ ಭಂಗೀಮಠದಲ್ಲಿ ಕಾಶಿಯ ಡಾ.ಚಂದ್ರಶೇಖರ ಶಿವಾಚಾರ್ಯ ಪ್ರವಚನ ನೀಡುತ್ತಿರುವರು.

ಗೃಹಸ್ಥಾಶ್ರಮ ಪಾತ್ರ ಉತ್ಕೃಷ್ಟ



ಸೇಡಂ, ಜು. 1- ದೇಶಭಕ್ತರಿಗೆ ಸಾಧು ಸಂತರಿಗೆ, ಶರಣ ಸತ್ಪುರುಷರಿಗೆ, ದೈವಾಂಶ ಸಂಭೂತರಿಗೆ ಜನ್ಮ ನೀಡುವ ಗೃಹಸ್ಥಾಶ್ರಮದ ಪಾತ್ರ ಉತ್ಕೃಷ್ಟವಾಗಿದೆ ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನುಡಿದರು.

ಅವರು ಮಳಖೇಡದ ಭಂಗಿಮಠದಲ್ಲಿ ಆಧ್ಯಾತ್ಮ ಪ್ರವಚನ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕುಟುಂಬಗಳು ಹಾಳಾದರೆ ಊರು, ನಾಡು ರಾಷ್ಟ್ರ ಹಾಳಾಗುತ್ತದೆ. ಗೃಹಸ್ಥಾಶ್ರಮದಲ್ಲಿ ಒಳ್ಳೆಯ ಸಂಸ್ಕಾರ ನೀಡಬೇಕು. ತ್ಯಾಗ, ಸಂಯಮತೆ, ಉದಾರತೆ, ದೇಶಭಕ್ತಿ, ಸಹಕಾರ, ಪರೋಪಕಾರ ಗುಣಗಳು ಪೂರ್ವಜರಿಂದ ಬಳುವಳಿಯಾಗಿ ಮಕ್ಕಳಿಗೆ ಬರುತ್ತದೆ. ಆದಕ್ಕಾಗಿ ಮನೆಯ ಹಿರಿಯರು, ದಂಪತಿಗಳು ಒಳ್ಳೆಯ ಸನ್ನಡತೆ ಉಳ್ಳವರಾದರೆ ಮಕ್ಕಳು ಸಹ ಅದನ್ನು ಅನುಕರಿಸುತ್ತಾರೆಂದರು.

ಬಿತ್ತಿದಂತೆ ಬೆಳೆ ಎಂಬಂತೆ ನಾವು ಹೇಗೆ ಇದ್ದೇವೆ ಹಾಗೇ ಮಕ್ಕಳು ಇರುತ್ತಾರೆ, ನಾವು ಹೇಗೆ ವರ್ತಿಸುತ್ತೇವೆ ಹಾಗೆ ಮಕ್ಕಳು ವರ್ತಿಸುತ್ತಾರೆ. ಅದಕ್ಕಾಗಿ ಗೃಹಸ್ಥಾಶ್ರಮದಲ್ಲಿ ಸಚ್ಚಾರಿತ್ರ್ಯದ ವಾತಾವರಣ ಇರಬೇಕು ಎಂದು ಶ್ರೀಗಳು ನುಡಿದರು.

ಮಾದಕತೆಯಿಂದ ಮತಿಮಂದ ಸಂತಾನ

ಮಳಖೇಡ (ಸೇಡಂ) :ಮಾದಕ ಪದಾರ್ಥಗಳನ್ನು ಸೇವಿಸುವುದರಿಂದ ಬುದ್ದಿಯ ಮೇಲೆ ದುಷ್ಪರಿಣಾಮ ಉಂಟಾಗುವುದು ಮಾತ್ರವಲ್ಲ, ಸೇವಿಸಿದಾತನ ಸಂತಾನದ ಮೇಲೂ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂದು ಕಾಶಿ ಜಗದ್ಗುರುಗಳಾದ ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.



ಮಳಖೇಡ ಭಂಗಿಮಠದಲ್ಲಿ ಏರ್ಪಡಿಸಲಾದ ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮದಲ್ಲಿ ಸಿದ್ಧಾಂತ ಶಿಖಾಮಣಿ ಕುರಿತು ಮಾತನಾಡಿದ ಶ್ರೀಗಳು ಇತ್ತೀಚಿನ ದಿನಗಳಲ್ಲಿ ಮಾದಕ ಪದಾರ್ಥಗಳ ಸೇವನೆಯು ಸಮಾಜದಲ್ಲಿ ಹೆಚ್ಚಾಗುತ್ತದೆ. ಇದನ್ನು ಸೇವಿಸುವ ವ್ಯಕ್ತಿಯು ಕ್ರಮವಾಗಿ ತನ್ನ ಬುದ್ಧಿ ಶಕ್ತಿಯನ್ನು ಕಳೆದುಕೊಳ್ಳುತ್ತಾನೆ. ನಾವು ಸೇವಿಸುವ ಆಹಾರವೇ ರಸ, ರಕ್ತ, ಮಾಂಸ, ಮೇಧಸ್ಸು ಹಾಗೂ ಶುಕ್ರ ಶ್ರೇಣಿಗಳು ತಯಾರಾಗುವವು. ಆ ಶುಕ್ರ ಶ್ರೇಣಿತಗಳೇ ಮುಂದೆ ಸಂತಾನವಾಗುವುದರಿಂದ ಬುದ್ದಿ ಮಾಂದ್ಯಕ್ಕೆ ಕಾರಣವಾಗುತ್ತದೆ ಎಂದರು.

ಮನಸ್ಸಿನ ಸಣ್ಣತನದಿಂದ ಸಮಾಜದಲ್ಲಿ ಅನೇಕ ಅನರ್ಥಗಳು ಸಂಭವಿಸುತ್ತವೆ. ಅದನ್ನು ನಿವಾರಿಸಿಕೊಳ್ಳಲು ಭಗವಂತನ ಸ್ಮರಣೆ ಅಗತ್ಯವಾಗಿದೆ. ಮನಸ್ಸಿನ ಸಣ್ಣತನದಿಂದಲೇ ಮನುಷ್ಯನು ಸ್ವಾರ್ಥಕ್ಕೆ ಬೀಳುತ್ತಾನೆ. ಇದರಿಂದಾಗಿಯೇ ಮನುಷ್ಯ ಇತರೆ ವಿಷಯಗಳಿಗೆ ದಾಸನಾಗುತ್ತಾನೆ. ಭಗವಂತನ ನಾಮಸ್ಮರಣೆಯೊಂದೇ ಇಂಥ ದುಶ್ಚಟಗಳಿಂದ ಪಾರು ಮಾಡಬಹುದು.

ಆದ್ದರಿಂದ ಯುವಕರು ಮಾದಕ ಪದಾರ್ಥಗಳಿಂದ ದೂರ ಇರಬೇಕು. ಯುವ ಶಕ್ತಿಯನ್ನು ಹಾಳು ಮಾಡುವ ಮಾದಕ ಪದಾರ್ಥಗಳ ಬಳಕೆ ನಿಲ್ಲುವಂತಾಗಬೇಕು. ಮನಸ್ಸಿನ ಶುದ್ಧತೆಯಿಂದ ಮಾತ್ರ ಇದನ್ನು ನಿಯಂತ್ರಿಸಬಹುದು ಎಂದರು. ಭಂಗಿಮಠದ ಪೂಜ್ಯರಾದ ವೀರಗಂಗಾಧರ · ಶಿವಾಚಾರ್ಯ ಮಹಾಸ್ವಾಮಿಗಳು ಉಪಸ್ಥಿತರಿದ್ದರು.

ಅರ್ಚನಾ-ಅರ್ಪಣಾ ಮನೋಭಾವ ಅಗತ್ಯ

ಸೇಡಂ: ಪ್ರತಿಯೊಬ್ಬರಲ್ಲಿ ಅರ್ಚನಾ ಮತ್ತು ಅರ್ಪಣಾ ಮನೋಭಾವ ಅಗತ್ಯವಾಗಿ ಒಡ ಮೂಡಬೇಕಾಗಿದೆ ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನುಡಿದರು.



ಅವರು ತಾಲೂಕಿನ ಸುಕ್ಷೇತ್ರ ಮಳಖೇಡ ಭಂಗಿಮಠ ಹಾಗೂ ಸೇಡಂನ ಕೊತ್ತಲ ಬಸವೇಶ್ವರ ದೇವಾಲಯಗಳಲ್ಲಿ ಪ್ರತ್ಯೇಕವಾಗಿ ನಡೆದ ಶ್ರಾವಣ ಮಾಸದ ನಿಮಿತ್ಯ ಪ್ರವಚನ ಸಾನಿಧ್ಯ ವಹಿಸಿ ಮಾತನಾಡಿದರು.

ಪ್ರತಿಯೊಬ್ಬರು ತಮ್ಮದೇ ಲೋಕ ಸೃಷ್ಟಿಸಿಕೊಂಡಿದ್ದಾರೆ. ಮಠ, ಹೆಂಡತಿ, ಮಕ್ಕಳು, ವ್ಯಾಪಾರ, ಉದ್ಯೋಗ ಇವುಗಳಷ್ಟೇ ಸಂಸಾರ ಎಂದು ತಿಳಿದುಕೊಂಡಿರುವುದು ತಪ್ಪು, ಇವುಗಳು ಬೇಕು ನಿಜ .ಇವುಗಳಿಂದಲೇ ಜೀವನ ಸಾಗುತ್ತದೆ ಎಂಬುದು ಮೇಲ್ನೋಟಕ್ಕೆ ನಿಜವೆನಿಸಿದರೂ ಅದಕ್ಕೆ ಮೀರಿ ನಾವು ಬೆಳೆಯಬೇಕಾಗಿದೆ. ಎಲ್ಲವು ನನ್ನದೆಂಬ ಭಾವನೆಯೇ ದುಃಖಕ್ಕೆ ಕಾರಣವಾಗಿದೆ. ಅದನ್ನು ಬಿಟ್ಟು ಬದುಕುವ ಕಲೆಯನ್ನು ಕಲಿಯಬೇಕಾಗಿದೆ. ಸಂತರೂ, ಶರಣರೂ ಸಂಸಾರದಲ್ಲಿದ್ದರೂ ಅವರು ನನ್ನದೆನ್ನಲಿಲ್ಲ. ಬದಲಿಗೆ ಅರ್ಚನಾ-ಅರ್ಪಣಾ ಮನೋಭಾವ ಅವರಲ್ಲಿತ್ತು. ಸದಾಶಿವ ಸ್ವಾಮಿ, ಪಂಚಾಕ್ಷರಿಸ್ವಾಮಿ, ಮಾಜಿ ಸಂಸದ ಬಸವರಾಜ ಪಾಟೀಲ್ ಸೇಡಂ, ಹೊಸಳ್ಳಿ ಸಿದ್ದಣ್ಣಗೌಡ ಪೂಜ್ಯರನ್ನು ಸತ್ಕರಿಸಿ ಗೌರವಿಸಿದರು.

ಮನಸ್ಸಿನ ಶುದ್ಧಿಯೇ ಆಧ್ಯಾತ್ಮದ ಮೊದಲ ಹೆಜ್ಜೆ



ಮಳಖೇಡ (ಸೇಡಂ) : ಮನಸ್ಸು ಶುದ್ಧವಾಗದೇ ಆಧ್ಯಾತ್ಮದ ಪ್ರವೇಶ ಸಾಧ್ಯವಾಗುವುದಿಲ್ಲ, ಆದ್ದರಿಂದ ಆಧ್ಯಾತ್ಮಿಕ ಅನುಭವ ಗಳಿಸಬೇಕೆಂದರೆ ಮೊದಲು ಮನಸ್ಸನ್ನು ಶುದ್ಧೀಕರಿಸಿಕೊಳ್ಳಬೇಕು ಎಂದು ಕಾಶಿ ಜಗದ್ಗುರುಗಳಾದ ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಮಳಖೇಡದ ಭಂಗೀಮಠದಲ್ಲಿ ಶ್ರಾವಣಮಾಸದ ಅಂಗವಾಗಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿಯ ಕುರಿತು ನೀಡಿದ ಪ್ರವಚನದ ಸಾರಾಂಶ : ಸಿದ್ಧಾಂತ ಶಿಖಾಮಣಿಯು ಮೊದಲನೆಯದಾದ ಪಿಂಡ ಸ್ಥಲದಲ್ಲಿ ಮನಸ್ಸಿನ ಶುದ್ಧಿಯ ಬಗ್ಗೆ ಚಿಂತನೆ ಮಾಡುತ್ತದೆ. ಅಂತರಂಗದಲ್ಲಿ ಮನಸ್ಸಿನ ಪಾತ್ರ ಪರಿಶುದ್ಧವಾದುದು. ಅದು ಪರಿಶುದ್ಧವಿದ್ದಾಗ ಮಾತ್ರ ಆಧ್ಯಾತ್ಮದ ಸಾಧನೆ ಸಾಧ್ಯವಾಗುತ್ತದೆ. ಯೋಗ, ಜಪತಪಾದಿಗಳಿಂದ ಮನಸ್ಸನ್ನು ಶುದ್ಧೀಕರಿಸಿಕೊಳ್ಳಬಹುದು. ಆದರೆ, ಮನಸ್ಸಿನ ಮೂಲ ಪರಿರ್ತನೆಯಾಗಬೇಕಾದರೆ ಪರಿಶುದ್ಧ ಆಹಾರದಿಂದಲೇ ಸಾಧ್ಯ.

ನಾವು ಸೇವಿಸುವ ಆಹಾರದ ಕೊನೆಯ ತುತ್ತೇ ಮನಸ್ಸಿನ ಸಮತೋಲನಕ್ಕೆ ಕಾರಣವಾಗುತ್ತದೆ. ಆಹಾರವು, ಪುರಿಷ್ಠ, ಸ್ಥವಿಷ್ಠ ಮತ್ತು ಅಣಿಷ್ಠ ಎಂದು ಮೂರು ಭಾಗವಾಗುವುದು. ದೇಹದಿಂದ ಹೊರಗೆ ಹೋಗುವ ಮಲವೇ ಪುರಿಷ್ಠ. ರಕ್ತಮಾಂಸಾದಿಗಳ ರೂಪದಲ್ಲಿ ಸ್ಥಾಯಿಯಾಗುವುದೇ ಸ್ಥವಿಷ್ಠ. ಮತ್ತು ಕೊನೆಯದಾದ ತುತ್ತು ಮನಸ್ಸನ್ನು ರೂಪಿಸುವ ಅಣು ಅಂಶವಾಗಿದ್ದರಿಂದ ಇದು ಅಣಿಷ್ಠವಾಗುತ್ತದೆ.

ಆದ್ದರಿಂದ ಶುದ್ಧ ಮನಸ್ಸಿನ ನಿರ್ಮಾಣಕ್ಕಾಗಿ ಆಹಾರ ಶುದ್ಧಿಯು ಅತ್ಯಂತ ಅಗತ್ಯವಾಗಿದೆ. ಆಹಾರದಲ್ಲಿ ಅಸಮ ತೋಲನವುಂಟಾದರೆ ಮನಸ್ಸಿನ ನಿಗ್ರಹವೂ ಹತೋಟಿ ತಪ್ಪುತ್ತದೆ. ತನ್ನ ನಾಲಿಗೆ ರುಚಿಗಾಗಿ ಅನ್ಯ ಜೀವಿಗಳನ್ನು ಕೊಲ್ಲುವುದು ಮಹಾಪಾಪ. ಪ್ರತಿಯೊಂದು ಪ್ರಾಣಿಗೂ ಬದುಕುವ ಹಕ್ಕಿದೆ. ಆದ್ದರಿಂದ ಮೂಕ ಪ್ರಾಣಿಗಳನ್ನು ಕೊಲ್ಲುವುದು ಬಿಟ್ಟು ತನ್ನ ಮನಸ್ಸಿನೊಳಗಿರುವ ಕ್ರೂರ ಭಾವನೆಗಳನ್ನು ಇಲ್ಲದಂತೆ ಮಾಡುವುದು ಇಂದಿನ ಅಗತ್ಯವಾಗಿದೆ.

ಇದನ್ನು ಸಾಧಿಸಬೇಕಾದರೆ ಸಿದ್ಧಾಂತ ಶಿಖಾಮಣಿಯನ್ನು ಅಧ್ಯಯನ ಮಾಡುವುದು ಅನಿವಾರ್ಯವಾಗಿದೆ. ಮನುಷ್ಯನನ್ನು ಮಹದೇವನನ್ನಾಗಿಸುವ 101 ಸ್ಥಳಗಳ ಕುರಿತು ಈ ಗ್ರಂಥದಲ್ಲಿ ಚರ್ಚಿಸಲಾಗಿದೆ. ಇವುಗಳನ್ನು ಅಭ್ಯಸಿಸುವ ಮೂಲಕ ಜೀವನದಲ್ಲಿ ಗಣನೀಯ ಬದಲಾವಣೆ ಹೊಂದಬಹುದು.

ತಾಳ್ಮೆಯಿಂದ ದೀರ್ಘಾಯುಷ್ಯ ಹೊಂದಿರಿ -ಕಾಶೀ ಶ್ರೀ

ಗದಗ, 5- ಮನುಷ್ಯನಿಗೆ ತಾಳ್ಮೆ ಎಂಬುದು ದೊಡ್ಡ ತಪಸ್ಸು ಇದ್ದ ಹಾಗೆ. ತಾಳ್ಮೆಯಿಂದ ದೀರ್ಘಾಯುಷ್ಯವನ್ನು ಹೊಂದಿರಿ ಎಂದು ಕಾಶಿಯ ಜ। ಶ್ರೀ ಡಾ। ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ನುಡಿದರು.

ಅವರು ನಗರದ ಕೆ. ಎಚ್. ಪಾಟೀಲ ಸಭಾ ಭವನದಲ್ಲಿ ಜ। ಪಂಚಾಚಾರ್ಯ ಸೇವಾ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಸಾಯಂಕಾಲದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಭಕ್ತ ಮಾರ್ಗ ಕ್ರಿಯಾಸ್ಥಲದ ಬಗ್ಗೆ ಉಪದೇಶ ನೀಡಿದ ಶ್ರೀಗಳು, ಭಕ್ತರಾದವರು ಇಷ್ಟಲಿಂಗದಲ್ಲಿ ನಿಷ್ಠೆ ಬೆಳೆಸಿಕೊಳ್ಳಬೇಕು. ಸಮಾಜದಲ್ಲಿ ಬವಿಗಳಾದ ಮದ್ಯಪಾನಿ, ಲಿಂಗನಿಷ್ಠೆ ಇಲ್ಲದವನನ್ನು ನಿಷಿದ್ಧ ಆಹಾರ ಸೇವನೆಯುಳ್ಳವರನ್ನು, ಲಿಂಗ ಧರಿಸದೇ ಇರುವ ವ್ಯಕ್ತಿಗಳನ್ನು, ದುರಾಚಾರಿಗಳ ಸಂಗವನ್ನು ತೊರೆದು ಭಕ್ತನಾದವನೊಂದಿಗೆ ಭಕ್ತರು ಸಂಬಂಧ ಬೆಳೆಸಿ, ಸತ್ಸಂಗದಲ್ಲಿ ನಿರತರಾಗಬೇಕು ಎಂದ ಶ್ರೀಗಳು, ಭಕ್ತರ ಭಕ್ತಿ ವಿಕಾಸವಾಗಬೇಕಾದರೆ ಏಕದೇವೋಪಾಸನೆ ಧರ್ಮದ ವಿಧಿ ವಿಧಾನ ಅನುಸಾರ ದೀಕ್ಷಾ, ಸಂಸ್ಕಾರ ಪಡೆದುಕೊಂಡು ಜೀವನದಲ್ಲಿ ತಾಳ್ಮೆ ಎಂಬುದು ರೂಢಿಸಿಕೊಂಡು ಭಕ್ತರೆಲ್ಲರೂ ಸುಖಿಗಳಾಗಲಿ ಎಂದು ನುಡಿದರು.

ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ

ಶ್ರಾವಣಮಾಸ ಸಂದೇಶ



ಕಾಯವನ್ನೇ ಕಾಶಿಯನ್ನಾಗಿಸಿ ಕೊಳ್ಳಿ

ಮಳಖೇಡ (ಸೇಡಂ): ಮನುಷ್ಯನ ಕಾಯವು ದೇವರ ಅಪಾರವಾದ ಕೊಡುಗೆ. ಇದರಲ್ಲಿ ಪರಮಾತ್ಮನ ಸಾನಿಧ್ಯವು ಸದಾ ಇರುತ್ತದೆ. ಅದರ ಜೊತೆಗೆ ಮನಸ್ಸು ನಿರ್ಮಲವಾಗಿಟ್ಟುಕೊಂಡು ಕಾಯವನ್ನೇ ಕಾಶಿಯನ್ನಾಗಿಸಿಕೊಳ್ಳಬೇಕು ಎಂದು ಕಾಶಿ ಜಗದ್ಗುರುಗಳಾದ ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ನೀಲಹಳ್ಳಿಯ ಧರ್ಮಸಭೆಯಲ್ಲಿ ಸದಭಕ್ತರನ್ನು ಉದ್ದೇಶಿಸಿ ಮಾತನಾಡುತತಾ ಕಾಶೀ ಕ್ಷೇತ್ರದಲ್ಲಿ ಶ್ರೀ ವಿಶ್ವನಾಥನ ನಿತ್ಯನಿವಾಸವಿದೆ. ಅದರಂತೆ ಅಲ್ಲಿ ಉತ್ತರವಾಹಿನಿಯಾಗಿ ಹರಿಯುವ ಪವಿತ್ರ ಗಂಗೆ ಇದ್ದಾಳೆ. ಅಂತೆಯೇ ಲಕ್ಷಲಕ್ಷ ಭಕ್ತರು ಗಂಗೆಯಲ್ಲಿ ಮಿಂದು ವಿಶ್ವನಾಥನ ದರ್ಶನಕ್ಕಾಗಿ ಕಾಶಿಗೆ ಹೋಗುವರು. ಅಲ್ಲಿ ಕಾಶೀ ಕ್ಷೇತ್ರವಿರುವಂತೆ ನಮ್ಮ ಕಾಯ (ದೇಹ) ವನ್ನೇ ಕಾಶಿಯನ್ನಾಗಿ ಮಾಡಿಕೊಳ್ಳಬೇಕಾದರೆ ಹೃದಯದಲ್ಲಿ ಸದಾ ಭಗವಂತನ ಸಾನಿಧ್ಯವನ್ನು ಭಾವಿಸಿ ಮನಸ್ಸನ್ನು ಶುದ್ಧವಾಗಿ ಇಟ್ಟುಕೊಳ್ಳಬೇಕು. ನಿರ್ಮಲವಾದ ಮನಸ್ಸೆ ಶುಭತೀರ್ಥವೆಂದು ಕರೆಯಲ್ಪಡುತ್ತಾರೆ. ಹೇರಳವಾಗಿ ಧನದ ಪ್ರಾಪ್ತಿಯಾದಾಗ ಮನಸ್ಸು ಅನೇಕ ಅವ್ಯವಹಾರದ ಕಡೆಗೆ ತಿರುಗುವ ಸಂಭವ ಇರುತ್ತದೆ. ಆದರೆ ಅದಕ್ಕೆ ಸರಿಯದ ಸಂಸ್ಕಾರ ಇದ್ದರೆ ಅನರ್ಥವಾಗುವುದಿಲ್ಲ. ಆದ್ದರಿಂದ ಸದಾ ಮನಸ್ಸಿನ ಬಗ್ಗೆ ಕಾಳಜಿ ವಹಿಸಬೇಕು.

ಕಾಶಿ ಜಗದ್ಗುರುಗಳ ಉವಾಚ

ಶ್ರಾವಣಮಾಸ ಸಂದೇಶ



ಪಾಶವೀ ಬದುಕಿಗೆ ವಿದಾಯ

ಮಳಖೇಡ (ಸೇಡಂ) : ಮನುಷ್ಯನು ಪಾಶವೀ ಬದುಕಿನಿಂದ ಹೊರಬೇಕಾಗಿದೆ. ಮನು ಷ್ಯನಲ್ಲಿರುವಷ್ಟು ಪಾಶವೀ ಗುಣಗಳು ಯಾವ ಪಶುಗಳಲ್ಲಿಯೂ ಕಾಣಲಾರೆವು.

ಆದರೆ, ಇದು ಗೊತ್ತಿದ್ದೂ ಈ ಪ್ರವೃತ್ತಿಯಿಂದ ಮನುಷ್ಯನು ಹೊರಬರಲಾರದೆ ಒದ್ದಾಡುತ್ತಿರುವುದಕ್ಕೆ ಸಂಸ್ಕಾರ ಹೀನತೆಯೇ ಕಾರಣವಾಗಿದೆ ಎಂದು ಕಾಶಿ ಜಗದ್ಗುರುಗಳಾದ ಡಾ.ಚಂದ್ರಶೇಖರ ಶಿವಚಾರ್ಯ ಮಹಾಸ್ವಾಮಿಗಳು ನುಡಿದರು.

ಮಳಖೇಡ ಭಂಗಿಮಠದಲ್ಲಿ ಏರ್ಪಡಿಸಲಾದ ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮದಲ್ಲಿ ಸಿದ್ದಾಂತ ಶಿಖಾಮಣಿ ಕುರಿತು ಮಾತನಾಡಿದ ಶ್ರೀಗಳು ಬ್ರಹ್ಮಾಂಡದಲ್ಲಿರುವುದೆಲ್ಲವೂ ಪಿಂಡಾಂಡದಲ್ಲಿದೆ. ಪಿಂಡಾಂಡದಲ್ಲಿರುವುದು ಶಿವನ ಅಂಶವೇ ಆಗಿದೆ. ಶಿವನ ಅಂಶವೇ ಜೀವಾತ್ಮನೆಂದು ಈತನಿಗೆ ಮಾನವ, ಮಾಯ, ಕಾರ್ಮಿಕಗಳೆಂಬ ಮೂರು ಪಾಶಗಳು ಕಟ್ಟಲ್ಪಟ್ಟಿವೆ. ಬಸವಣ್ಣನವರ ಪಶುವಾನು, ಪಶುಪತಿಯು ನೀನು ಎಂದು ಹೇಳಿರುವುದು ಇದೇ ಹಿನ್ನಲೆಯಲ್ಲಿಯೇ. ಜೀವಾತ್ಮನ ಪಶುತ್ವವನ್ನು ಒತ್ತಿ ಹೇಳಲಾಗಿದೆ.

ಮನುಷ್ಯನಲ್ಲಿರುವ ಸಂಕುಚಿತತೆ, ವಿಷಯ ಲೋಲುಪತೆ, ಅಜ್ಞಾನ, ಸ್ವಾರ್ಥಗಳು ಪಶುತ್ವದ ಸಂಕೇತಗಳಾಗಿವೆ. ಇವೆಲ್ಲವುಗಳನ್ನು ಕೇವಲ ಗುರುಕೃಪೆಯಿಂದ ಕಳೆದು ಕೊಳ್ಳಬಹುದಾಗಿದೆ. ಆಗ ಮಾತ್ರ ಶಿವನ ಅಂಶ ಎಂಬ ಅರಿವಾಗಿ ಮನುಷ್ಯ ಮಾನವಂತನಾಗಬಲ್ಲ ಎಂದರು.

ಭಂಗೀಮಠದ ಪೀಠಾಧಿಪತಿ ಶ್ರೀ ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಗ್ರಾಮದ ಅನೇಕ ಧಾರ್ಮಿಕ ಮುಖಂಡರು, ಭಕ್ತಾದಿಗಳು ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

ಸಕಲ ಜೀವಿಗಳಿಗೆ ಪರಮಾತ್ಮನೇ ಪ್ರೇರಕ



ಕಾಶಿ ಜಗದ್ಗುರುಗಳ ವಾಣಿ

ಸೇಡಂ: ಸಕಲ ಜೀವಿಗಳಿಗೆ ಮತ್ತು ಅವುಗಳ ಕ್ರಿಯೆಗಳಿಗೆ ಪರಮಾತ್ಮನೇ ಪ್ರೇರಕಶಕ್ತಿಯಾಗಿದ್ದಾನೆ ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ನುಡಿದರು.

ಅವರು ತಾಲೂಕಿನ ಐತಿಹಾಸಿಕ ಮಳಖೇಡದ ಭಂಗಿ ಮಠದಲ್ಲಿ ಶ್ರಾವಣಮಾಸ ಪೂರ್ಣ ಪ್ರವಚನದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಪ್ರತಿಯೊಬ್ಬರ ದೇಹದಲ್ಲಿ ಆತ್ಮನು ವಾಸವಾಗಿರುವುದರಿಂದ ಅಲ್ಲಿಯೇ ಪರಮಾತ್ಮನು ಸಹ ವಾಸವಾಗಿದ್ದಾನೆ. ನಮ್ಮಲ್ಲಿ ವಾಸಿಸುವ ಪರಮಾತ್ಮನು ಎಲ್ಲ ಕಾರ್ಯಗಳಿಗೆ ಪ್ರೇರಣಾ ಶಕ್ತಿಯಾಗಿದ್ದಾನೆ. ವಿದ್ಯುತ್ ಶಕ್ತಿಯು ಎಲ್ಲ ಯಂತ್ರಗಳಿಗೆ ಚಾಲನೆಯನ್ನು ಕೊಡುವಂತೆ ಪರಮಾತ್ಮನ ಶಕ್ತಿಯೇ ಜೀವಿಗಳಿಗೆ ಚಾಲಕ ಶಕ್ತಿಯಾಗಿದೆ. ಅವನ ಶಕ್ತಿ ದೊರೆಯದೆ ಯಾರೂ ಏನನ್ನು ಮಾಡಲು ಸಮರ್ಥರಾಗುವುದಿಲ್ಲ.

ಭೂಮಿ, ನೀರು ಒಂದೇ ಆಗಿದ್ದರೂ ಬಿತ್ತಿದ ಬೀಜಗಳು ಬೇರೆ ಬೇರೆ ಇರುವುದರಿಂದ ಅವುಗಳ ರಸಗಳು ಬೇರೆ ಬೇರೆ ಆಗುವಂತೆ ಪರಮಾತ್ಮನ ಪ್ರೇರಕ ಶಕ್ತಿಯು ಒಂದೇ ಆಗಿದ್ದರೂ ನಮ್ಮ ನಮ್ಮ ಕರ್ಮ ಬೀಜಗಳು ಭಿನ್ನವಾಗಿರುವುದರಿಂದ ಜೀವಿಗಳ ಕರ್ಮಗಳಲ್ಲಿ ತಾರತಮ್ಯವು ಕಂಡು ಬರುತ್ತವೆ.

ಉತ್ತಮ ಸಂಸ್ಕಾರವಿದ್ದಾಗ ಉತ್ತಮ ಕಾರ್ಯ ಮಾಡಲು ಸಾಧ್ಯ. ಕಾರಣ ಪರಮಾತ್ಮನ ಪ್ರೇರಕ ಶಕ್ತಿಯನ್ನು ಎಲ್ಲರೂ ಸತ್ಕರ್ಮಕ್ಕೆ ಬಳಸಬೇಕೆಂದು ಜಗದ್ಗುರುಗಳು ಆಶೀರ್ವಚನ ನೀಡಿದರು.

ಪೂಜ್ಯ ಗಂಗಾಧರ ಸ್ವಾಮಿಗಳು ಪ್ರಾಸ್ತಾವಿಕ ಮಾತನಾಡಿದರು.



ಶ್ರೀ ಕಾಶಿ ಜಗದ್ಗುರುಗಳ ಪ್ರವಚನ

ರಾಗ-ದ್ವೇಷ ಅಳಿದಾಗ ದಿವ್ಯದೃಷ್ಟಿಯ ಉದಯ

ಮಹಾಲಿಂಗಪುರ, 20- ರಾಗ-ದ್ವೇಷಗಳಿಂದಲೇ ಜೀವಾತ್ಮನು ಸಂಸಾರದಲ್ಲಿ ಅನಂತ ದುಃಖಗಳನ್ನು ಅನುಭವಿಸುತ್ತಿರುತ್ತಾನೆ. ಇವೆರಡನ್ನು ಕಡಿಮೆ ಮಾಡಿ ಕೊಳ್ಳದ ವಿನಹ ಜೀವನಿಗೆ ದಿವ್ಯದೃಷ್ಟಿಯು ಪ್ರಾಪ್ತವಾಗಲಾರದು ಎಂಬ ವಿಚಾರ ವನ್ನು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಮಹಾಲಿಂಗಪುರದಲ್ಲಿ ತಮ್ಮ ಪೀಠಾರೋಹಣದ ಹದಿನೇಳನೆಯ ವರ್ಷದ ವರ್ಧಂತಿ ಮಹೋತ್ಸವದ ನಿಮಿತ್ತವಾಗಿ ಹಮ್ಮಿಕೊಂಡಿರುವ ಶ್ರೀ ಸಿದ್ಧಾಂತ ಶಿಖಾ ಮಣಿ ಹಾಗೂ ಶೂನ್ಯ ಸಂಪಾದನೆಗಳ ಸಮನ್ವಯ ವಿಚಾರ ವೇದಿಕೆಯಲ್ಲಿ 'ಸಂಸಾರಹೇಯ' ಸ್ಥಲವನ್ನು ಕುರಿತು ಮಾತನಾಡುತ್ತಿದ್ದರು. ಸಿದ್ಧಾಂತ ಶಿಖಾ ಮಣಿಯ ಸಂಸಾರಹೇಯ ಸ್ಥಲದಲ್ಲಿ ತ್ರಿತಾಪಗಳ ಪ್ರಸ್ತಾಪವಾಗಿದ್ದು, ಅವುಗಳಲ್ಲಿ ರಾಗ-ದ್ವೇಷಗಳು ಅಂತರಂಗದ ಆಧ್ಯಾತ್ಮ ದುಃಖಕ್ಕೆ ಕಾರಣಗಳೆಂಬುದಾಗಿ ಪ್ರತಿಪಾ ದಿಸಲಾಗಿದೆ. ಪ್ರತಿಯೊಬ್ಬ ಮನುಷ್ಯನು ತನ್ನ ಎಲ್ಲಾ ವ್ಯವಹಾರಗಳಲ್ಲಿ ರಾಗ-ದ್ವೇಷ ಗಳನ್ನು ಬಳಸಿಗೊಳ್ಳುತ್ತಲೇ ಬಂದಿದ್ದಾನೆ. ಅಂತೆಯೇ ದಿವ್ಯದೃಷ್ಟಿ ಹೀನವಾಗಿ ವರ್ತಿ ಸುತ್ತಿರುತ್ತಾನೆ ಎಂಬ ವಿಚಾರವು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿಸಲ್ಪ ಟ್ಟಿದೆ.

ಇನ್ನು ಶೂನ್ಯ ಸಂಪಾದನೆಯ ಜೀವಭಾವ ಭ್ರಾಂತಿ ವಿರಸನ ಸ್ಥಲದಲ್ಲಿ ಶ್ರೀ ಪ್ರಭುದೇವರು ಗಗನದ ಮೇಲೊಂದು ಅಭಿನವಗಿಳಿ ಹುಟ್ಟಿ ಸಮ ಸಂಭ್ರಮದಲ್ಲಿ ಮನೆಯ ಮಾಡಿತ್ತು ಎಂಬ ವಚನದಲ್ಲಿ ಬಯಲು ರೂಪನಾದ ಪರಮಾತ್ಮನಿಂದ ಅವನ ಅಂಶ ರೂಪವಾಗಿ ಹೊರಬಂದ ಜೀವಾತ್ಮನೇ ಇಲ್ಲಿ ಗಿಳಿಯೆಂಬುದಾಗಿ ಕರೆ ಯಲ್ಪಟ್ಟಿದ್ದಾನೆ. ಇವನು ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ದೇಹಗಳನ್ನು ಧರಿ ಸಿಕೊಂಡು ಈ ದೇಹದಲ್ಲಿ ಬರುವ ಇಪ್ಪತ್ತೈದು ತತ್ವಗಳೊಂದಿಗೆ ತಾದಾತ್ಮ್ಯ ಭಾವ ವನ್ನು ತಾಳಿಕೊಂಡು ಸ್ವರೂಪವನ್ನು ಮರೆತು ರಾಗ-ದ್ವೇಷಗಳ ಮೂಲಕ ವ್ಯವಹರಿ ಸುತ್ತಾ ದುಃಖವನ್ನು ಅನುಭವಿಸುತ್ತಿರುವುದು ಪ್ರತಿಪಾದಿಸಲಾಗಿದೆ.

ಹೀಗೆ ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ಶೂನ್ಯ ಸಂಪಾದನೆಗಳು ಜೀವಾ ತ್ಮನ ಸಾಂಸಾರಿಕ ಸುಖ-ದುಃಖಗಳಿಗೆ ಜೀವಾತ್ಮನಲ್ಲಿರುವ ರಾಗ-ದ್ವೇಷಗಳೇ ಕಾರಣ ವೆಂಬುದನ್ನು ಸ್ಪಷ್ಟಪಡಿಸುತ್ತದೆ. ಸಾಧಕನಾದವನು ತನ್ನ ದೈನಂದಿನ ಸಾಧನೆಯ ಬಲದಿಂದ ತನ್ನ ರಾಗ-ದ್ವೇಷಗಳನ್ನು ಕಡಿಮೆ ಮಾಡಿಕೊಳ್ಳುತ್ತ ಯಾವಾಗ ಅವುಗ ಳನ್ನು ಸಂಪೂರ್ಣವಾಗಿ ಇಲ್ಲವಾಗಿಸಿಕೊಳ್ಳುತ್ತಾನೆಯೋ ಆಗವನು ಸರ್ವರನ್ನೂ ಸಮನಾಗಿ ನೋಡುವ ಶಿವದೃಷ್ಟಿಯನ್ನು ಪಡೆದುಕೊಂಡು ಶಿವನೇ ಆಗುತ್ತಾನೆ ಎಂದರು.

ಒತ್ತಾಯದ ಮತಾಂತರ ಶಾಶ್ವತವಲ್ಲ



ಕಾಶಿ ಜಗದ್ಗುರುಗಳ ವಾಣಿ

ಯಾವುದೇ ಧರ್ಮದ ಮುಖಂಡರು ಅಥವಾ ಅನುಯಾಯಿಗಳು ತಮ್ಮ ಧರ್ಮವೇ ಶ್ರೇಷ್ಠ ಎಂದು ಇನ್ನೊಂದು ಧರ್ಮದ ಜನಾಂಗ ಹಣದ ಆಮಿಷ ಒಡ್ಡಿ, ತನ್ನೆಡೆಗೆ ಸೆಳೆಯುವ ಪ್ರಯತ್ನ ನಿಜಕ್ಕೂ ಸರಿಯಲ್ಲ .ಒತ್ತಾಯದ ಮತಾಂತರ ಶಾಶ್ವತವಾಗಿರುವುದಿಲ್ಲ ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ನುಡಿದರು.

ಅವರು ತಾಲೂಕಿನ ಮಳಖೇಡ ಭಂಗಿ ಮಠದಲ್ಲಿ ಹಾಗೂ ಸೇಡಂನ ಕೊತ್ತಲಬಸವೇಶ್ವರ ದೇವಾಲಯದಲ್ಲಿ ಸಿದ್ಧಾಂತ ಶಿಖಾಮಣಿ ಮತ್ತು ಮತಾಂತರ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಪ್ರಜಾಪ್ರಭುತ್ವದಲ್ಲಿ ಒಂದು ಧರ್ಮಕ್ಕೆ ಸೇರಬಹುದು. ಆದರೆ ತಾನು ಸೇರುವ ಧರ್ಮ ಉತ್ಕೃಷ್ಟ ಸಿದ್ಧಾಂತ ಹೊಂದಿರಬೇಕು.

ಚಂಚಲ ಸ್ವಭಾವವಿದ್ದ ವ್ಯಕ್ತಿ ಯಾವ ಧರ್ಮಕ್ಕೆ ಸೇರಿದರೂ ಯಶಸ್ವಿಯಾಗುವುದಿಲ್ಲ, ಅದೇ ರೀತಿ ಎಲ್ಲ ಧರ್ಮಗಳ ನೀತಿಯೂ ಮೂಲತಃ ಚೆನ್ನಾಗಿರುತ್ತದೆ. ಆದರೆ ದಿಕ್ಕು ತಪ್ಪಿಸುತ್ತಿರುವ ಕೆಲವು ಗುಂಪುಗಳಿಂದ ಮಾತ್ರ ಧರ್ಮಗಳು ಅಧಃಪತನಗೊಳ್ಳುತ್ತಿವೆ ಎಂದರು.

ಭಸ್ಮ ಧಾರಣೆ ಸಾತ್ವಿಕ ಸಂಕೇತ

ಸೇಡಂ: ಪ್ರತಿಯೊಂದು ಧರ್ಮಕ್ಕೂ ಸಂಕೇತ ಲಾಂಛನಗಳಿರುತ್ತವೆ. ಭಸ್ಮ ಗಂಧವನ್ನು ದೇಹದ ಮೇಲೆ ಹಚ್ಚಿಕೊಳ್ಳುವುದರಿಂದ ಸಾತ್ವಿಕ ಗುಣಗಳು ಬರುತ್ತವೆ ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ನುಡಿದರು.



ಕಾಶಿ ಜಗದ್ಗುರುಗಳ ವಾಣಿ

ತಾಲೂಕಿನ ಮಳಖೇಡದ ಭಂಗಿಮಠದಲ್ಲಿ ಶ್ರಾವಣಮಾಸ ಪ್ರವಚನದಲ್ಲಿ ಆಶೀರ್ವಚನ ನೀಡಿದರು.

ಮನುಷ್ಯರು ಆಧುನಿಕ ವಸ್ತ್ರಾಲಂಕಾರಗಳಿಗೆ ಮಾರು ಹೋಗಿದ್ದಾರೆ. ತಮ್ಮ ಧರ್ಮದ ಸಂಕೇತ ಭಸ್ಮ ಮತ್ತು ಗಂಧಗಳನ್ನು ಹಚ್ಚಿಕೊಳ್ಳುವುದು ಅಪರೂಪವಾಗಿದೆ. ಪರಿಣಾಮ ಅಲಂಕಾರಿಕ ಮಾನಸಿಕ ವ್ಯಾಮೋಹಕ್ಕೆ ಒಳಗಾಗಿದ್ದಾನೆ.

ಮನಸ್ಸಿಗೆ ಶಾಂತಿ, ತೃಪ್ತಿ , ಭಕ್ತಿ ಒಡಮೂಡಬೇಕಾದರೆ ಭಸ್ಮ, ಗಂಧ ಲೇಪಿಸಿಕೊಳ್ಳಬೇಕು. ಭಸ್ಮ-ಗ್ರಂಥಗಳು ದೈಹಿಕ ಆರೋಗ್ಯ ಕಾಪಾಡುತ್ತದೆ. ಸುನು, ಪೌಡರ, ಲಿಫ್ಟಿಕ್‌ಗಳು ನಮ್ಮ ಸಂಸ್ಕೃತಿ ಹಾಳು ಮಾಡುತ್ತಿವೆ. ಅಷ್ಟೇ ಅಲ್ಲ ಶರೀರವನ್ನು ವಿನಾಶ ಮಾಡುತ್ತಿವೆ. ಪರಿಣಾಮ ವಿಕೃತಿ ಗುಣಗಳು ಹೆಚ್ಚುತ್ತಿವೆ.

ಗಂಧ ಭಸ್ಮಗಳು ಲೇಪಿಸಿಕೊಳ್ಳುವುದರಿಂದ ಪ್ರತಿಯೊಬ್ಬರು ಸಾತ್ವಿಕರಾಗುತ್ತಾರೆ. ಶ್ರೇಷ್ಠ ಗುಣಗಳು ಒಂದು ಮನುಷ್ಯನ ಮನಸ್ಸು ಪ್ರಫುಲ್ಲವಾಗುತ್ತದೆ ಎಂದು ಜಗದ್ಗುರುಗಳು ನುಡಿದರು.



ಶ್ರೀ ಕಾಶಿ ಜಗದ್ಗುರುಗಳ ಪ್ರವಚನ

ಮನಸ್ಸಿನ ದಾಹವು ಎಂದಿಗೂ ಹಿಂಗದು

ಮಹಾಲಿಂಗಪುರ- ಜೀವಿಗಳ ಮನಸ್ಸು ಯಾವಾಗಲೂ ವೈಷಯಿಕ ಸುಖದ ದಾಹದಿಂದ ಬಳಲುತ್ತಿರುತ್ತದೆ. ಶಬ್ದ ಸ್ಪರ್ಶದ ವಿಷಯಗಳ ಸುಖವನ್ನು ಅದಕ್ಕೆ ಎಷ್ಟು ಸಾರಿ ಕೊಟ್ಟರೂ ಅದು ತೃಪ್ತವಾಗದೆ ಮತ್ತೆ ಮತ್ತೆ ಅದನ್ನೇ ಬಯಸುತ್ತಿರುತ್ತದೆ. ಆದ್ದರಿಂದ ಮನಸ್ಸಿನ ದಾಹವನ್ನು ಹಿಂಗಿಸಲು ಸಾಧ್ಯವಿಲ್ಲವೆಂಬ ವಿಚಾರವನ್ನು ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ಇಂದಿನ ಆಶೀರ್ವಚನದಲ್ಲಿ ಅಪ್ಪಣೆ ಕೊಡಿಸಿದರು.

ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ಶೂನ್ಯ ಸಂಪಾದನೆಗಳಲ್ಲಿ ಬರುವ "ಸಂಸಾರಡೆಯ ಸ್ಥಲ" ಮತ್ತು "ಮಾಯಾ ವಿಲಾಸ ವಿಡಂಬನೆ" ಸ್ಥಲಗಳನ್ನು ಕುರಿತು ಮಹಾಲಿಂಗಪುರದಲ್ಲಿ ಆಶೀವಚನವನ್ನು ದಯಪಾಲಿಸುತ್ತಾ ಮೇಲಿನ ವಿಚಾರವನ್ನು ಶ್ರೋತೃಗಳಿಗೆ ತಿಳಿಯಪಡಿಸಿದರು. ವಿವೇಕ ಹೀನವಾದ ವ್ಯಕ್ತಿಯು ಆತ್ಮಾರ್ಥತೆಯಿಂದ ವಿಮರ್ಶಿಸಿ ವಿಷಯಗಳಲ್ಲಿ ಆಸಕ್ತನಾಗುತ್ತಾನೆ. ಹೀಗೆ ವಿಷಯಾಸಕ್ತವಾದ ಮನಸ್ಸಿಗೆ ಮೇಲಿಂದ ಮೇಲೆ ವಿಷಯಗಳನ್ನು ಒದಗಿಸುತ್ತಿದ್ದರೂ ಅದು ಸದಾ ಅತೃಪ್ತವಾಗಿಯೇ ಇರುತ್ತದೆ. ವಿಷಯಗಳಿಂದ ಮನಸ್ಸನ್ನು ತೃಪ್ತಿಪಡಿಸಲು ಜೀವಾತ್ಮನು ಅನೇಕ ಸ್ಥೂಲ ದೇಹಗಳನ್ನು ಹಾಳು ಮಾಡಿಕೊಂಡಿರುತ್ತಾನೆ. ಈ ವಿಷಯಿಕವಾಗಿ ಶ್ರೀ ಪ್ರಭು ದೇವರು "ಶೂನ್ಯ ಸಂಪಾದನೆಯಲ್ಲಿ" "ಅರಗಿನ ಪುತ್ಥಳಿಯನುರಿಕೊಂಡಡೆ ಉದಕ ಬಾಯಾರಿ ಬಳಲುತ್ತದೆ" ಎಂಬುದಾಗಿ ಹೇಳಿದ್ದಾರೆ. ಇಲ್ಲಿ ಮನಸ್ಸನ್ನು ಉದರವೆಂಬುದಾಗಿ ಸಂಕೇತಿಸಿ ಅದು ಯಾವಾಗಲೂ ಬಾಯಾರಿಕೆಯಿಂದ ಬಳಲುತ್ತಿದೆ ಎಂಬುದಾಗಿ ಹೇಳಿ, ಇದರ ಬಾಯಾರಿಕೆಯನ್ನು ತೀರಿಸಲು "ಅರಗಿನ ಪುತ್ಥಳಿಯೋಪಾದಿಯಲ್ಲಿ" ಅದೆಷ್ಟು ಸ್ಥೂಲ ದೇಹಗಳು ಕರಗಿ ಹೋಗಿವೆಯೋ ಎಂಬುದಾಗಿ ಇಲ್ಲಿ ಅವರು ಚಿಂತಿಸಿದ್ದಾರೆ.

ಈ ಮನಸ್ಸಿನ ದಾಹವನ್ನು ಹೋಗಲಾಡಿಸಲು ಜೀವನು ಅನಂತ ದೇಹಗಳನ್ನು ಬಳಸಿ ಹಾಳು ಮಾಡಿದ್ದಾನೆ. ಆದರೂ ಮನಸ್ಸಿಗೆ ತೃಪ್ತಿಯಾಗಿಲ್ಲ, ಆಗುವಂತೆಯೂ ಇಲ್ಲ. ಮನಸ್ಸನ್ನು ತೃಪ್ತಪಡಿಸಬೇಕೆಂದರೆ ಸಾಧಕನು ವಿವೇಕದಿಂದ ವಿಷಯಗಳಲ್ಲಿ ವಿರಕ್ತಿಯನ್ನು ಹೊಂದಿ "ಆತ್ಮರಾಗಿ"ಯಾಗಿ ಭಗವಂತನಲ್ಲಿ ಭಕ್ತಿಯನ್ನು ಮಾಡಬೇಕೆಂಬುದಾಗಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು "ಶ್ರೀ ಸಿದ್ಧಾಂತ ಶಿಖಾಮಣಿ"ಯಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಹೀಗೆ ವಿಷಯಗಳಿಂದ ಮನಸ್ಸಿಗೆ ತೃಪ್ತಿಯಾಗದು. ಅದನ್ನು ತೃಪ್ತಿಗೊಳಿಸಲು ಭವಧ್ವಂಸಿಯಾದ ಶಿವಭಕ್ತಿಯೇ ಶ್ರೇಷ್ಠವಾದ ಸಾಧನವು ಎಂಬ ವಿಚಾರವು" ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ಶೂನ್ಯ ಸಂಪಾದನೆಗಳಲ್ಲಿ" ಪ್ರತಿಪಾದಿತವಾಗಿದೆ ಎಂದರು.

ಕಾಶಿ ಜಗದ್ಗುರುಗಳ ಉವಾಚ

ಅಂಗ ಗುಣಗಳನ್ನಳಿದ ಲಿಂಗ ಗುಣಗಳನ್ನು ಅಳವಡಿಸುವುದೇ ಜೀವನದ ಗುರಿ



ಗುಲ್ಬರ್ಗ: ಪ್ರತಿಯೊಬ್ಬ ಜೀವಾತ್ಮನು ಅನೇಕ ಜನ್ಮಗಳಲ್ಲಿ ಅಂಗ ಅಂದರೆ ದೇಹ ಒಡನಾಟದಿಂದ ದೇಹದಲ್ಲಿರುವ ಸ್ಥೂಲ ತತ್ವಗಳ ಅಭಿಮಾನವನ್ನು ಹೊಂದಿ ದೇಹಾಭಿಮಾನಿಯಾಗಿರುತ್ತಾನೆ. ಅಂದರೆ ದೇಹೋಽಹಂ ಎಂಬ ಭಾವನೆಯುಳ್ಳವನಾಗಿರುತ್ತಾನೆ. ದೇಹವೇ ನಾನು, ದೇಹಕ್ಕೆ ಸಂಬಂಧ ಪಟ್ಟದ್ದೆಲ್ಲ ನನ್ನದು ಎಂಬ ನಿತ್ಯಾಚಾರಕ್ಕೆ ಒಳಗಾಗಿರುತ್ತಾನೆ. ಜೀವಾತ್ಮನಲ್ಲಿಯ ಈ ಮಿತ್ಯಾಚಾರವನ್ನು ದೂರು ಮಾಡಿ ಅವನಲ್ಲಿ ಶಿವೋಽಹಂ ಭಾವನೆಯನ್ನು ಮೂಡಿಸುವುದಕ್ಕಾಗಿ ವೀರಶೈವ ಧರ್ಮದಲ್ಲಿ ಇಷ್ಟಲಿಂಗ ಧಾರಣೆ ಬೋಧಿಸಲಾಗಿದೆ ಎಂದು ಶ್ರೀ ಕಾಶಿ ಜ್ಞಾನ ಸಿಂಹಾಸನಾಧೀಶ್ವರ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗತ್ಪಾದರು ಹೇಳಿದರು.

ನಗರದ ಶಹಾ ಬಜಾರ, ಸೂಗಸನಗಿರಿ ಶ್ರೀ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡುತ್ತ, ವೀರಶೈವ ಸಿದ್ಧಾಂತ ಪ್ರಕಾರ ಪ್ರಪಂಚವೆಲ್ಲವೂ 36 ತತ್ವ ರೂಪವಾಗಿ ಸಮುದ್ರದ ಜಲವೇ, ನೊರೆ, ತೆರೆ ರೂಪವನ್ನು ತಾಳುವಂತೆ ಅಖಂಡ ಪರಶಿವನ ಚೈತನ್ಯವೇ 36 ತತ್ವಗಳ ರೂಪದಲ್ಲಿ ವಿಕಾಸ ಹೊಂದುತ್ತದೆ. ಪಂಚಕರ್ಮೇಂದ್ರಿಯ ವಿಷಯ ಪಂಚಕ ಪಂಚಜ್ಞಾನೇಂದ್ರಿಯ ಪಂಚ ಪ್ರಾಣ, ಮನ, ಬುದ್ಧಿ, ಚಿತ್ತ ಅಹಂಕಾರಗಳೆಂಬ ಅಂತಃಕರಣ ಚತುಷ್ಟಿಯಗಳಿಂದ ಕೂಡಿದ ಜ್ಞಾತೃ ಆದ ಜೀವಾತ್ಮನು ಮೇಲಿನ ಎಲ್ಲ ಅಶುದ್ಧ ತತ್ವಗಳ ಅಭಿಮಾನವನ್ನು ಹೊಂದಿ ಸಂಸಾರಿಯಾಗಿ ಜನನ-ಮರಣ ಸುತ್ತುವರಿಯುತ್ತಾನೆ. ಈ ಸಂಸಾರಿಯಾದ ಜೀವವನ್ನು ಉದ್ಧಾರಗೊಳಿಸುವುದಕ್ಕಾಗಿ ಸದ್ಗುರು ದೀಕ್ಷೆ ಮೂಲಕ ಇಷ್ಟಲಿಂಗವನ್ನು ಅನುಗ್ರಹಿಸುತ್ತಾನೆ. ಈ ಇಷ್ಟಲಿಂಗದ ಆರಾಧನೆಯಿಂದ ಸಾಧಕನು ಕ್ರಮವಾಗಿ ತನ್ನಲ್ಲಿ ಅನಾದಿಕಾಲದಿಂದ ಬಂದಿರುವ ಅಶುದ್ಧ ತತ್ವಗಳ ಅಭಿಮಾನವನ್ನು ಕಡಿಮೆ ಮಾಡಿಕೊಳ್ಳುತ್ತ ದೇಹಾಭಿಮಾನವೇ ಮೊದಲಾದ ಅಂಗಗುಣಗಳನ್ನು ಕಳೆದುಕೊಂಡು ಪರಿಶುದ್ಧವಾಗಿ ಲಿಂಗಗುಣಗಳನ್ನು ಅಳವಡಿಸಿಕೊಳ್ಳುತ್ತಾನೆ. ದೇಹೋಽಹಂ ಭಾವದಿಂದ ಶಿವೋಽಹಂ ಭಾವನೆಯನ್ನು ಪಡೆದುಕೊಳ್ಳುವುದೇ ಇಷ್ಟಲಿಂಗ ಪೂಜೆಯ ಫಲವು. ಈ ಇಷ್ಟಲಿಂಗವನ್ನು ಪಡೆದುಕೊಳ್ಳಬೇಕಾದರೆ ಅಂತಃಕರಣ ಶುದ್ಧ ಆತ್ಮನಾತ್ಮ ವಿವೇಕ, ಸಂಸಾರಿಕ ಜೀವನದಲ್ಲಿ ನಿಸ್ಪೃಹತೆ ಮತ್ತು ಗುರು ಭಕ್ತಿಯನ್ನು ಹೊಂದಿದವನಾಗ ಬೇಕಾಗುತ್ತದೆ. ಈ ವಿಚಾರವನ್ನು ಸಿದ್ಧಾಂತ ಶಿಖಾಮಣಿಯ, ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರ ಹೇಯ ಸ್ಥಲ ಮತ್ತು ಗುರುಕಾರಣ್ಯ ಸ್ಥಲಗಳಲ್ಲಿ ಪ್ರತಿಪಾದಿಸಿದೆ ಎಂದು ನುಡಿದರು.



ಜಾತಿಗಿಂತ ಯೋಗ್ಯತೆಗೆ ಪ್ರಾಧಾನ್ಯತೆ

ವೀರಶೈವ ಧರ್ಮದ ಸಿದ್ಧಾಂತದಲ್ಲಿ ಮತಾಂತರಕ್ಕೆ ಅವಕಾಶವಿಲ್ಲ. ಬಲಾತ್ಕಾರದಿಂದ ಯಾರಿಗೂ ದೀಕ್ಷಾ ಸಂಸ್ಕಾರ ಕೊಡುವಂತಿಲ್ಲ. ಜತೆಗೆ ಶಿವಭಕ್ತಿ ಇಲ್ಲದವನಿಗೆ ದೀಕ್ಷೆ ನೀಡಲು ಅವಕಾಶವಿಲ್ಲ. ಇದು ವೀರಶೈವ ಧರ್ಮದ ಸಂವಿಧಾನದ ಸ್ಪಷ್ಟ ನೀತಿಯಾಗಿದೆ. ಸಿದ್ಧಾಂತ ಶಿಖಾಮಣಿಯಲ್ಲಿ ಇದನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಎಂದು ಶ್ರೀಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಧಾರವಾಡದ ಆರ್‌ಎಲ್‌ಎಸ್ ಮೈದಾನದಲ್ಲಿ ನಡೆಯುತ್ತಿರುವ 'ಸಿದ್ಧಾಂತ ಶಿಖಾಮಣಿ' ಪ್ರವಚನದ 6ನೇದಿನದ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ವೀರಶೈವ ಧರ್ಮದಲ್ಲಿ ಜಾತಿಗಿಂತ ಯೋಗ್ಯತೆಗೆ ಪ್ರಾಧಾನ್ಯತೆ ಇದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ ಯಾರೇ ಆಗಿದ್ದರೂ ಅವರು ಶಿವಭಕ್ತಿ ಸಂಪನ್ನರಾಗಿ ಸಾತ್ವಿಕ ಶುದ್ಧ ಜೀವನ ವಿಧಾನವನ್ನು ರೂಢಿಸಿಕೊಂಡು ಲಿಂಗಭಕ್ತಿ ಹೊಂದಿದ ಯೋಗ್ಯ ವ್ಯಕ್ತಿಗಳಿಗೆ ದೀಕ್ಷಾ ಸಂಸ್ಕಾರ ನೀಡಲು ವೀರಶೈವ ಧರ್ಮ ಸಿದ್ಧಾಂತದಲ್ಲಿ ಅವಕಾಶವಿದೆ.

ಭಾರತೀಯ ಸಂಸ್ಕೃತಿಯಲ್ಲಿ ಶಿವೋಪಾಸನೆಗೆ ಪ್ರಾಚೀನ ಪರಂಪರೆ ಇದೆ. ದೇವಾನುದೇವತೆಗಳೂ ಲಿಂಗ ಪೂಜಾರಾಧನೆ ಮಾಡಿದ್ದನ್ನು ಕಾಣಬಹುದಾಗಿದ್ದು, ಇಲ್ಲಿ ಜಾತಿಯನ್ನು ಎಲ್ಲಿಯೂ ಪರಿಗಣಿಸಿಲ್ಲ.

ಲಿಂಗವನ್ನು ಮಸ್ತಕದಲ್ಲಿ ಧರಿಸಿ ಲಿಂಗಾರಾಧನೆಯನ್ನು ಕೈಗೊಂಡ ವಿಷ್ಣು, ಬ್ರಹ್ಮ, ಲಕ್ಷ್ಮೀ, ಸರಸ್ವತಿ ಎಲ್ಲರೂ ಮೂಲದಲ್ಲಿ ವೀರಶೈವರೇ ಎಂದು ಹೇಳಬೇಕಾಗುತ್ತದೆ. ಮಾನವರು, ದಾನವರು, ಋಷಿಗಳು, ಶಿವಯೋಗಿಗಳು ನಿತ್ಯದಲ್ಲಿ ಇಷ್ಟ ಲಿಂಗಾರ್ಚನೆ ಕೈಗೊಂಡು ಶಿವೋಪಾಸನೆಯ ಸಾಧಕರಾಗಿ ಮಹಾತ್ಮರೆನಿಸಿಕೊಂಡ ಸ್ಪಷ್ಟ ಇತಿಹಾಸ ಪರಂಪರೆ ಭಾರತೀಯ ಬದುಕಿನೊಂದಿಗಿದೆ.

ವೀರಶೈವ ವಾಙ್ಮಯದ ತಾಯಿ ಬೇರಿನಂತಿರುವ ಶಿವಾಗಮಗಳು ಶಿವೋಪಾಸನೆ, ಇಷ್ಟ ಲಿಂಗಾರ್ಚನೆ, ದೀಕ್ಷಾ ಸಂಸ್ಕಾರದ ವಿಷಯದಲ್ಲಿ ಭಕ್ತಿಯನ್ನಷ್ಟೇ ಕೇಂದ್ರೀಕರಿಸಿದ್ದು, ಎಲ್ಲಿಯೂ ಜಾತಿ, ವರ್ಗ, ಪಂಗಡದ ವಿಂಗಡಣೆಯ ಎಣಿಕೆ ಕಾಣಸಿಗದು. ಇದೇ ವಾಸ್ತವ ನೆಲೆಯಲ್ಲಿ ಶಿವಯೋಗಿ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿಯನ್ನು ರಚಿಸಿದ್ದಾರೆ. ಶ್ರೀ ಜಗದ್ಗುರು ರೇಣುಕರಿಂದ ದೀಕ್ಷೆಗೊಳಗಾದ ಅಗಸ್ತ್ಯ, ಶ್ರೀ ಜಗದ್ಗುರು ದಾರುಕರಿಂದ ದೀಕ್ಷೆಗೊಳಗಾದ ದಧೀಚಿ, ಶ್ರೀ ಜಗದ್ಗುರು ಏಕೋರಾಮರಿಂದ ದೀಕ್ಷೆಗೊಳಗಾದ ವ್ಯಾಸ, ಶ್ರೀ ಜಗದ್ಗುರು ಧೇನುಕರ್ಣರಿಂದ ದೀಕ್ಷೆಗೊಳಗಾದ ಸಾನಂದ ಹಾಗೂ ಶ್ರೀ ಜಗದ್ಗುರು ವಿಶ್ವಕರ್ಣರಿಂದ ದೀಕ್ಷೆಗೊಳಗಾದ ದೂರ್ವಾಸ ಮುನಿಗಳೆಲ್ಲರೂ ನಿಮ್ನ ವರ್ಗದವರೇ ಆಗಿದ್ದರೂ ಅವರಲ್ಲಿಯ ಶಿವಭಕ್ತಿ, ಲಿಂಗಭಕ್ತಿ ಮತ್ತು ಶಿವೋಪಾಸನೆಯ ಬದ್ಧತೆಯಿಂದ ದೀಕ್ಷೆಗೆ ಒಳಗಾಗಿ ಅವರೆಲ್ಲ ಮಹರ್ಷಿಗಳಾಗಿ ಇತಿಹಾಸದಲ್ಲಿ ಉಳಿದಿದ್ದಾರೆ.

ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ

ಶ್ರಾವಣಮಾಸ ಸಂದೇಶ



ನನ್ನದೆಂಬ ಅಭಿಮಾನವೇ ಸಂಸಾರ !

ಸಂಸಾರವೆಂದರೆ ತೋರುವ ಜಗತ್ತಲ್ಲ, ತನ್ನಲ್ಲಿರುವ ನಾನು ನನ್ನದೆಂಬ ಅಭಿಮಾನವೇ ಸಂಸಾರ. ಈ ಅಭಿಮಾನವನ್ನು ತ್ಯಾಗಮಾಡುವುದೇ ಸಂಸಾರ ಹೇಯ ಸ್ಥಲ ಎಂಬುದಾಗಿ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ನುಡಿದರು. ಮಳಖೇಡದ ಭಂಗಿಮಠದಲ್ಲಿ ಶ್ರಾವಣ ಮಾಸದ ಸಿದ್ಧಾಂತ ಶಿಖಾಮಣಿಯ ಕುರಿತು ಮಾತನಾಡಿದ ಅವರು, ಸಂಸಾರದಿಂದ ಬಿಡುಗಡೆ ಹೊಂದಬೇಕಾದರೆ ಸಂಸಾರ ಹೇಯ ಬುದ್ಧಿಯು ಉದಯವಾಗಬೇಕು. ಬಹಳಷ್ಟು ಜನರು ಹೊಲಮನೆ, ಮಠ, ಹೆಂಡರು, ಮಕ್ಕಳು, ವ್ಯಾಪಾರ ಮತ್ತು ಉದ್ಯೋಗಗಳನ್ನೇ ಸಂಸಾರವೆಂದು ತಿಳಿದಿದ್ದಾರೆ. ಆದರೆ ಇದಾವುದೂ ಸಂಸಾರವಲ್ಲ, ಇವುಗಳೆಲ್ಲ ನನ್ನವು ಎಂಬ ಭಾವನೆಯೇ ಸಂಸಾರ ! ಜಗತ್ತಿನಲ್ಲಿ ಬದುಕುವ ಪ್ರತಿಯೊಬ್ಬ ಮನುಷ್ಯನಿಗೆ ಮನೆ, ಮಠ, ಹೆಂಡತಿ ಮತ್ತು ಮಕ್ಕಳಾದಿ ಬೇಕೇ ಬೇಕು. ಅವುಗಳಿಲ್ಲದೆ ಜೀವನ ಸಾಗಲಾರದು. ಆದರೆ, ಅವೆಲ್ಲವೂ ನನ್ನದೆಂಬ ದೃಢ ಭಾವನೆಯೇ ದುಃಖಕ್ಕೆ ಕಾರಣವಾಗಿದೆ. ಇದನ್ನು ಅರಿತು ಬದುಕುವ ಕಲೆ ರೂಢಿಸಿಕೊಂಡವರದು ಸಂತಸದ ಬದುಕಾಗುತ್ತದೆ.

ಸಂತರಾಗಲಿ, ಶರಣರಾಗಲಿ, ಜನಸಾಮಾನ್ಯರಂತೆ ಮನೆಮಠಗಳಲ್ಲಿ ವಾಸವಾಗಿದ್ದರೂ ಅವುಗಳ ಅಭಿಮಾನವನ್ನು ತಮ್ಮ ಮನಸ್ಸಿನಲ್ಲಿ ತುಂಬಿಕೊಂಡಿರಲಿಲ್ಲ. ಹಡಗು ನೀರಿನಲ್ಲಿದ್ದರೆ ಅಪಾಯವಿಲ್ಲ, ಆದರೆ ಅದೇ ನೀರು ಹಡಗಿನಲ್ಲಿದ್ದರೆ ಬದುಕೇ ಇಲ್ಲ! ಅದರಂತೆ ಜಗತ್ತಿನಲ್ಲಿ ನಾವಿರುವುದು ಸಂಸಾರ ಬಂಧನವಲ್ಲ, ಜಗತ್ತಿನ ಅಭಿಮಾನವನ್ನು ತನ್ನೊಳಗೆ ತುಂಬಿಕೊಳ್ಳುವುದೇ ಸಂಸಾರ ಬಂಧನವು. ಭಂಗಿಮಠದ ಶ್ರೀ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಉಪಸ್ಥಿತರಿದ್ದರು.



ಶ್ರೀ ಕಾಶಿ ಜಗದ್ಗುರುಗಳ ಪ್ರವಚನ

ಮರಣ ಪ್ರಾಕೃತಿಕ ಧರ್ಮ

ಜನನ ಹಾಗೂ ಮರಣಗಳು ಶರೀರದ ಪ್ರಾಕೃತಿಕವಾದ ಧರ್ಮಗಳು. ಆದ್ದರಿಂದ ಜನ್ಮತಾಳಿದ ಪ್ರತಿಯೊಂದು ಜೀವಿಯು ಒಂದಿಲ್ಲೊಂದು ದಿನ ಮರಣವನ್ನು ಅವಶ್ಯವಾಗಿ ಪಡೆದುಕೊಳ್ಳುತ್ತದೆ. ಅಂತೆಯೇ ಮರಣವು ಶರೀರದ ಪ್ರಕೃತಿ ಸಿದ್ಧವಾದ ಧರ್ಮವು ಎಂಬುದಾಗಿ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಮಹಾಲಿಂಗಪುರದಲ್ಲಿ ಏರ್ಪಡಿಸಿರುವ ಶ್ರೀ ಸಿದ್ಧಾಂತ ಶಿಖಾಮಣಿ ಶೂನ್ಯ ಸಂಪಾದನೆಗಳ ಸಮನ್ವಯ ಆಶೀರ್ವಚನ ವೇದಿಕೆಯಲ್ಲಿ ಸಿದ್ಧಾಂತ ಶಿಖಾಮಣಿಯ 'ಸಂಸಾರ ಹೇಯ' ಸ್ಥಲ ಶೂನ್ಯ ಸಂಪಾದನೆಯ 'ಮಾಯಾ ವಿಲಾಸ ವಿಡಂಬನ' ಸ್ಥಲವನ್ನು ಕುರಿತು ಆಶೀರ್ವಚನ ದಯಪಾಲಿಸುತ್ತಾ ಅವರು ಮೇಲಿನಂತೆ ಅಪ್ಪಣೆ ಕೊಡಿಸಿದರು.

ಹುಟ್ಟಿದವನಿಗೆ ಸಾವು ಹಾಗೂ ಸತ್ತವನಿಗೆ ಹುಟ್ಟು ಚಕ್ರೋಪಾದಿಯಲ್ಲಿ ಪುನಃ ಪುನಃ ಪ್ರಾಪ್ತವಾಗುತ್ತಲೇ ಇರುತ್ತದೆ. ಈ ಜನನ ಮರಣಾತ್ಮಕವಾದ ಚಕ್ರಕ್ಕೆ ಸಂಸಾರವೆಂಬುದಾಗಿ ಕರೆಯಲಾಗಿದೆ. ಜೀವಾತ್ಮನು ಸ್ವಸ್ವರೂಪವನ್ನು ಮರೆತು ದೇಹೋಹಂ ಎಂಬ ಭಾವದಲ್ಲಿ ಉಳಿದಾಗ ಅವನಿಗೆ ಸಂಸಾರವು ಪ್ರಾಪ್ತವಾಗುವುದು. ಈ ಸ್ಥಿತಿಯಲ್ಲಿದ್ದಾಗ ಸುಖ-ದುಃಖಗಳಿಂದ ಅವನಿಗೆ ತಪ್ಪಿಸಿಕೊಳ್ಳಲಾಗುವದಿಲ್ಲ. ಅಂತೆಯೇ ಪ್ರಭುದೇವರು ಶೂನ್ಯ ಸಂಪಾದನೆಯಲ್ಲಿ ಹಳ್ಳದಲ್ಲಿ ತೇಲುವ ಪುಳ್ಳಿಯ ಉದಾರಣೆಯನ್ನು ಕೊಟ್ಟು ವಿಷಯವನ್ನು ಸ್ಪಷ್ಟಪಡಿಸಿದ್ದಾರೆ.

ನಮ್ಮ ದೇಶದ ಅನೇಕ ಮಹಿಮಾ ಪುರುಷರು ಸತ್ತ ಪ್ರಾಣಿಗಳನ್ನು ಬದುಕಿಸಿದ ಮಹಿಮೆಗಳು ಅವರ ಚರಿತ್ರೆಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ಆಶ್ಚರ್ಯವೆಂದರೆ ಸತ್ತವರನ್ನು ಬದುಕಿಸುವ ಸಾಮರ್ಥ್ಯವಿದ್ದವರೂ ಸಹ ಮರಣಕ್ಕೆ ಒಳಗಾಗಿದ್ದಾರೆ. ವಿಷ್ಣು ಭಗವಂತನು ದಶಾವತಾರಗಳಲ್ಲಿ ತಾನು ಧರಿಸಿದ ದೇಹಗಳನ್ನು ತ್ಯಾಗ ಮಾಡಲೇಬೇಕಾಯಿತು. ಈ ಎಲ್ಲ ವಿಚಾರಗಳನ್ನು ನೋಡಿದಾಗ ಮರಣವು ದೇಹದ ಪ್ರಾಕೃತಿಕ ಧರ್ಮವೆಂಬುದು ಸಿದ್ಧವಾಗುತ್ತದೆ ಎಂದು ಅವರು ಅಪ್ಪಣೆ ಕೊಡಿಸಿದರು.

ಶಿವಯೋಗ ಸಾಧನೆಗೆ ಇಷ್ಟಲಿಂಗ ಅಗತ್ಯ

ಸೇಡಂ: ಶಿವಯೋಗವನ್ನು ಸಾಧಿಸಲು ಇಷ್ಟಲಿಂಗವನ್ನು ಪೂಜಿಸಬೇಕು ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರರು ನುಡಿದರು.



ಕಾಶಿ ಜಗದ್ಗುರುಗಳ ವಾಣಿ

ಮಳಖೇಡ ಭಂಗಿಮಠದಲ್ಲಿ ಶ್ರಾವಣಮಾಸ ಪ್ರವಚನದಲ್ಲಿ ಆಶೀರ್ವಚನ ನೀಡಿದರು.

ಇಷ್ಟಲಿಂಗದ ಮೇಲೆ ದೃಷ್ಟಿಯನ್ನಿರಿಸಿ ಮನಸ್ಸನ್ನು ಏಕಾಗ್ರಗೊಳಿಸಬೇಕು. ಪತಂಜಲಿಯಯೋಗ ಶಾಸ್ತ್ರದಂತೆ ಬಹಿರಂಗದಲ್ಲಿ ಒಂದೇ ಸ್ಥಾನದಲ್ಲಿ ಮನಸ್ಸು ಒಂದು ಗಂಟೆ ಕಾಲ ಅಚಲವಾಗಿ ಸ್ಥಿರಗೊಳಿಸಿದರೆ ಮನಸ್ಸು ಅಂತರ್ಮುಖವಾಗುವುದು. ಪ್ರಾಣಲಿಂಗ ಹಾಗೂ ಭಾವಲಿಂಗ ಆರಾಧನೆಗೆ ಅರ್ಹನಾಗುವುದು. ಶಿವಯೋಗವು ನಿತ್ಯಕರ್ಮವಾಗಿರುವುದರಿಂದ ಪ್ರತಿಯೊಬ್ಬರು ಸಾಧಿಸಬೇಕು.

ಆಧುನಿಕ ಯುಗದಲ್ಲಿ ಮೊಬೈಲ್ ಹ್ಯಾಂಡ್ ಸೆಟ್ ಮೂಲಕ ನಂಬರ್ ಡಾಯಲ್ ಮಾಡಿ ಇಷ್ಟ ವ್ಯಕ್ತಿಯನ್ನು ಸಂಪರ್ಕಿಸುವಂತೆ ಇಷ್ಟ ಲಿಂಗವೆಂಬ ಹ್ಯಾಂಡ್‌ಸೆಟ್ಟನ್ನು ಎಡಗೈ ಪೀಠದಲ್ಲಿಸಿರಿ ಓಂ ನಮಃ ಶಿವಾಯ ಎಂಬ ಅಕ್ಷರಾತ್ಮಕ ನಂಬರ ಡೈಯಿಲ್ ಮಾಡಿ ಮನಸ್ಸಿನ ಏಕಾಗ್ರತೆಯನ್ನು ಸಾಧಿಸಿ ಲಿಂಗಾಂಗ ಸಾಮರಸ್ಯವನ್ನು ಪಡೆಯಬಹುದು.

ಪವಿತ್ರ ದೇಹವೆ ದಿವ್ಯ ದೇವಾಲಯ

ಸೇಡಂ: ಜೀವ ಮತ್ತು ದೇವರು ಬೇರೆ ಬೇರೆ ಕಡೆ ಇಲ್ಲ. ಮನುಷ್ಯರ ಪವಿತ್ರ ದೇಹವೆ ದಿವ್ಯ ದೇವಾಲಯವಾಗಿದೆ ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಆಶೀರ್ವಚನ ನೀಡಿದರು.

ತಾಲೂಕಿನ ಸುಕ್ಷೇತ್ರ ಮಳಖೇಡ ಭಂಗಿ ಮಠದಲ್ಲಿ ನಿರಂತರ ಮಾಸಪೂರ್ಣ ಪ್ರವಚನದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.



ಕಾಶಿ ಜಗದ್ಗುರುಗಳ ವಾಣಿ

ಬೀಜದಲ್ಲಿ ಅಂಕುರ ವಿದ್ದಂತೆ ಪ್ರತಿಯೊಬ್ಬರ ಹೃದಯದಲ್ಲಿ ದೇವರು ನಿತ್ಯ ವಾಸನಾಗಿದ್ದಾನೆ. ಅಜ್ಞಾನದಿಂದ ಕೆಲವರಿಗೆ ತಿಳಿಯುತ್ತಿಲ್ಲ.

ಕಬ್ಬಿನ ಮೇಲೆ ಜೇನು ಗೂಡು ಇದ್ದಂತೆ ಆಗಿದೆ. ತಾಯಿ ಮಗುವಿನ ಕಣ್ಣಿಗೆ ಕಾಡಿಗೆ ಹಚ್ಚುವಂತೆ ಜ್ಞಾನಿಗಳು ಗುರುಗಳು ಭಕ್ತ ಸಮೂಹಕ್ಕೆ ಅಜ್ಞಾನವನ್ನು ಹೊಡೆದು ಹಾಕಿ ದೇವರನ್ನು ಕಾಣುವ ಪರಿಯನ್ನು ತಿಳಿಸಿ ಕೊಡುತ್ತಾರೆ. ಅದಕ್ಕಾಗಿ ಪ್ರತಿಯೊಬ್ಬರು ತಮ್ಮ ಮನಸ್ಸು ಹೃದಯವೆಂಬ ದೇಗುಲವನ್ನು ಪವಿತ್ರವಾಗಿಟ್ಟುಕೊಂಡು ಪರಮಾತ್ಮನನ್ನು ಕಾಣಬೇಕು ಎಂದರು.

ಭಂಗಿಮಠದ ಪೂಜ್ಯ ಗಂಗಾಧರ ಸ್ವಾಮಿಗಳು ಪ್ರಾಸ್ತಾವಿಕ ಮಾತನಾಡಿದರು.

ಪರಮಾತ್ಮನು ಅಭೇದರೂಪನಾಗಿದ್ದಾನೆ

ಸೇಡಂ: ಲೌಕಿಕವೆಲ್ಲವೂ ಭೇದವಾಗಿದೆ ಆದರೆ ಪರಮಾತ್ಮನು ಅಭೇದರೂಪನಾಗಿದ್ದಾನೆ ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನುಡಿದರು.



ಕಾಶಿ ಜಗದ್ಗುರುಗಳ ವಾಣಿ

ಅವರು ತಾಲೂಕಿನ ಮಳಖೇಡ ಭಂಗಿ ಮಠ ಮತ್ತು ಜಾಕನಪಲ್ಲಿ ಗ್ರಾಮದಲ್ಲಿ ನಡೆದ ಶ್ರಾವಣ ಮಾಸದ ಪ್ರವಚನ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಇದು ನನ್ನ ಭೂಮಿ, ಇದು ನಿನ್ನ ಭೂಮಿ ಎಂಬುದು ಕಂಡು ಭೂಮಿಯು ನಗುತ್ತಿದೆ. ಪರಮಾತ್ಮನ ಸಂಕಲ್ಪದಿಂದ ಉತ್ಪನ್ನಗಳಾದ ಪಂಚ ಮಹಾಭೂತಗಳನ್ನೇ ಖಂಡ-ಖಂಡವಾಗಿಸುವುದು ಅಸಾಧ್ಯವಾದಾಗ ಸರ್ವ ಕಾರಣನಾದ ಆ ಪರಶಿವ ಪರಮಾತ್ಮಲ್ಲಿ ಭಿನ್ನ-ಭಿನ್ನತೆಯನ್ನು ಮಾಡುವುದು ಯಾರಿಂದಲೂ ಸಾಧ್ಯವಿಲ್ಲ.

ಪ್ರತಿಯೊಬ್ಬರು ಅಂಧಕಾರದಿಂದ ಜ್ಞಾನದ ಕಡೆಗೆ ಬರಬೇಕಾದರೆ ಶಿವನನ್ನು ಎಲ್ಲ ವಸ್ತುಗಳಲ್ಲಿ ಕಾಣುವ ದೃಷ್ಟಿ ಹೊಂದಿರಬೇಕು. ಶಿವನು ಅಭೇದನಾಗಿದ್ದಾನೆ. ಯಾವ ರೂಪದಲ್ಲೂ ಆತ ಇರಬಹುದು. ಆ ತನವನ್ನು ಕಾಣುವ ಭಕ್ತಿಯೋಗ ದೃಷ್ಟಿ ಇರಬೇಕು ಅಂದಾಗ ಗೋಚರಿಸುತ್ತಾನೆ. ಮಳಖೇಡ ಭಂಗಿ ಮಠದ ಗಂಗಾಧರ ಸ್ವಾಮಿಗಳು ಉಪಸ್ಥಿತರಿದ್ದರು.

‘ಮತಾಂಧತೆಯನ್ನು ಮರೆತು ಭಾವೈಕ್ಯದಿಂದ ಬದುಕಬೇಕು’



ಸೇಡಂ: ಭಾರತೀಯರೆಲ್ಲರೂ ಮತಾಂಧತೆಯನ್ನು ಮರೆತು ರಾಷ್ಟ್ರೀಯ ಭಾವೈಕ್ಯತೆಯಿಂದ ಬದುಕಬೇಕು ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ನುಡಿದರು.

ಅವರು ತಾಲೂಕಿನ ಮಳಖೇಡದ ಭಂಗಿಮಠದಲ್ಲಿ ಶ್ರಾವಣ ಮಾಸ ಪೂರ್ಣ ಪ್ರವಚನ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಭಾರತವು ಅನೇಕ ಧರ್ಮಗಳ ಮತ್ತು ಮತ ಸಂಪ್ರದಾಯಗಳ ಸಂಗಮ, ಸದಾಸುಖದಿಂದ ಬಾಳಲು ಮತಾಂಧತೆಯ ಭಾವನೆಗಳನ್ನು ದೂರು ಮಾಡಿ ಭಾವೈಕ್ಯತೆಯ ಭಾವನೆಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ಪ್ರಸಕ್ತ ಅದರ ಅಳಿವು-ಉಳಿವು ನಮ್ಮ ನಿಮ್ಮೆಲ್ಲರ ಕೈಯಲ್ಲಿದೆ ಎಂದು ನುಡಿದರು.

ಎಲ್ಲ ಜಾತಿ ಜನಾಂಗದಲ್ಲಿ ಬಡವರು ಶ್ರೀಮಂತರಿದ್ದಾರೆ. ಮೀಸಲಾತಿ ರೂಪಿಸುವಾಗ ಜಾತಿ-ಧರ್ಮಗಳ ಮಾನದಂಡವನ್ನು ಬಿಟ್ಟು ಆರ್ಥಿಕ ದುರ್ಬಲತೆಯನ್ನು ಪರಿಗಣಿಸಿದಾಗ ಮಾತ್ರ ಸರ್ವರಿಗೂ ಇದರ ಪ್ರಯೋಜನ ಲಭ್ಯವಾಗುವುದು. ಅದೇ ರೀತಿ ಎಲ್ಲ ವರ್ಗಗಳ ಮಕ್ಕಳ ಪ್ರತಿಭೆಗೆ ಅವಕಾಶ ಮತ್ತು ಅನುಕೂಲತೆ ದೊರೆತಂತಾಗುತ್ತದೆ ಎಂದು ಕಾಶಿ ಜಗದ್ಗುರುಗಳು ನುಡಿದರು.

ಕಾಶಿ ಜಗದ್ಗುರುಗಳ ಉವಾಚ

ಸಿದ್ಧಾಂತ ಮತ್ತು ಅನುಭಾವಗಳು ಪರಸ್ಪರ ಪೂರಕ

ವೀರಶೈವ ಧರ್ಮದ ಸಿದ್ಧಾಂತ ಗ್ರಂಥ ಸಿದ್ಧಾಂತ ಶಿಖಾಮಣಿಯಾದರೆ ಶರಣರ ವಚನಗಳು ಅನುಭಾವ ಸಾಹಿತ್ಯವಾಗಿದ್ದು ಒಂದಕ್ಕೊಂದು ಪೂರಕವಾಗಿವೆ ಎಂದು ಕಾಶಿ ಜಗದ್ಗುರು ಶ್ರೀ ಚಂದ್ರಶೇಖರ ಶಿವಾಚಾರ್ಯರು ಹೇಳಿದರು.



ಶೇಖರೋಜಾದ ಗುರುಶಾಂತ ಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿ ಗ್ರಂಥದ ಪ್ರವಚನ ನೀಡಿದ ಅವರು ಪ್ರತಿಯೊಂದು ಧರ್ಮಕ್ಕೆ ಒಂದು ಸಿದ್ಧಾಂತವಿರುವಂತೆ ವೀರಶೈವ ಧರ್ಮಕ್ಕೆ ಸಿದ್ಧಾಂತ ಶಿಖಾಮಣಿ ಸಿದ್ಧಾಂತ ಗ್ರಂಥವಾಗಿದೆ ಎಂದರು.

ಶಿವಯೋಗಿ ಶಿವಾಚಾರ್ಯರು ವೀರಶೈವ ಸಿದ್ಧಾಂತವನ್ನು ಶಾಸ್ತ್ರೀಯವಾಗಿ ಹಾಗೂ ಕ್ರಮಬದ್ಧವಾಗಿ ಸಂಸ್ಕೃತ ಭಾಷೆಯಲ್ಲಿ ನಿರೂಪಿಸಿರುವ ವೀರಶೈವ ಧರ್ಮದ ಆದ್ಯ ಗ್ರಂಥವಾಗಿದೆ . ಈ ಗ್ರಂಥ ದಲ್ಲಿ 28 ಶೈವಾಗಮಗಳನ್ನು ಮತ್ತು ಶೈವ ಪುರಾಣಗಳನ್ನು ಮುಖ್ಯವಾಗಿ ಆಧಾರವಾಗಿಟ್ಟುಕೊಂಡು ರಚಿಸಲಾಗಿದೆ ಎಂದರು.

12ನೇ ಶತಮಾನದ ಬಸವಾದಿ ಶರಣರು ವೇದ ಆಗಮ ಉಪನಿಷತ್ತು ಮತ್ತು ಸಿದ್ಧಾಂತವನ್ನು ಅರ್ಥಮಾಡಿಕೊಂಡು ಜನಸಾಮಾನ್ಯರಿಗೆ ತಿಳಿಯುವಂತೆ ಸರಳವಾದ ವಚನಗಳನ್ನು ರಚಿಸಿದ್ದಾರೆ. ಈ ವಚನಗಳಲ್ಲಿ ವೀರಶೈವ ಸಿದ್ಧಾಂತ , ಅಷ್ಟಾವರ್ಣ ಹಾಗೂ ಪಂಚಾಚಾರ್ಯರ ಷಟ್ ಸ್ಥಲಗಳು ವಚನಗಳಲ್ಲಿ ಪ್ರತಿಪಾದಿತವಾಗಿವೆ ಎಂದರು.

ವಚನಗಳನ್ನು ಸಿದ್ಧಾಂತ ಕ್ರಮಗೊಳಿಸಬೇಕಾದರೆ ಸಿದ್ಧಾಂತ ಶಿಖಾಮಣಿ ಗ್ರಂಥ ಅಧ್ಯಯನಕ್ಕೆ ಅಗತ್ಯವಾಗಿದ್ದು , ಯಾರು ಸಿದ್ಧಾಂತವನ್ನು ಚೆನ್ನಾಗಿ ಅರ್ಥೈಸಿಕೊಂಡಿದ್ದಾರೋ ಅವರೇ ವಚನಗಳನ್ನು ಚೆನ್ನಾಗಿ ಅರ್ಥೈಸಬಲ್ಲರು, ಸಿದ್ಧಾಂತ ಮತ್ತು ಅನುಭಾವಗಳು ಹಾಲು ಜೇನಿನಂತೆ ಸಮಾಜದಲ್ಲಿ ಮಧುರ ಬಾಂಧವ್ಯವನ್ನು ಹೆಚ್ಚಿಸಿವೆ ಎಂದರು.

www.vijaykarnatakaepaper.com

ಆಹಾರ-ನಿದ್ರೆ ನಿಯಮ ಬಲ್ಲವನೇ ಯೋಗಿ



ಗದಗ: ಯುಕ್ತ ಆಹಾರ, ಯುಕ್ತ ವ್ಯವಹಾರ, ಯುಕ್ತ ನಿದ್ರೆಯನ್ನು ಮಾಡಬಲ್ಲವನೇ ಯೋಗಿ ಎಂದು ಕಾಶಿ ಜ.ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಹೇಳಿದರು. ಬುಧವಾರ ಅವರು ಸ್ಥಳೀಯ ಕೆ.ಎಚ್.ಪಾಟೀಲ ಸಭಾಭವನದಲ್ಲಿ ಶ್ರೀಮದ್ಭಗವದ್ಗೀತೆಯ 6ನೇ ಅಧ್ಯಾಯದ ಮಂಗಲ ಮಹೋತ್ಸವದಲ್ಲಿ ಆಶೀರ್ವಚನ ನೀಡಿದರು. ಆಹಾರ, ನಿದ್ರೆ ಪ್ರತಿಯೊಬ್ಬರಿಗೆ ಅವಶ್ಯವಾದವು.ಅವುಗಳನ್ನು ನಿಯಮದಿಂದ ಸೇವಿಸಿದರೆ ಯೋಗಿಯಾಗುವನು ಇಲ್ಲವಾದರೆ ರೋಗಿಯಾಗಿ ಭವದಲ್ಲಿ ತಿರುಗುವನೆಂದು ಯುಕ್ತಾಹಾರ ವಿಹಾರಸ್ಯ ಎಂಬ ಶ್ಲೋಕದಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ. ಊಟ ಬಲ್ಲವನಿಗೆ ರೋಗ ಇಲ್ಲ ಎಂಬ ನಾಣ್ಣುಡಿಯೂ ಇದನ್ನೇ ಹೇಳುತ್ತದೆ. ಹಿತಭುಕ್ ಮಿತಭುಕ್ ಋತುಭುಕ್ ಎಂಬ ಆರೋಗ್ಯ ಸೂತ್ರದಲ್ಲಿಯೂ ಇದೇ ವಿಚಾರ ತಿಳಿಸಲಾಗಿದೆ. ಹಿತವಾಗಿ, ಮಿತವಾಗಿ, ಋತುಮಾನಕ್ಕನುಗುಣವಾಗಿ ಆಹಾರವನ್ನು ಸೇವಿಸಬೇಕು. ಆಹಾರದಲ್ಲಿಯೂ ಸಾತ್ವಿಕ, ರಾಜಸಿಕ, ತಾಮಸಿಕ ಎಂದು ಮೂರು ಪ್ರಕಾರಗಳಿವೆ. ಹುಳಿ, ಉಪ್ಪು, ಖಾರಗಳನ್ನು ಅಧಿಕವಾಗಿ ಬಳಸಿದ ಆಹಾರವು ರಾಜಸಿಕವಾಗುವುದು. ಮದ್ಯ, ಮಾಂಸ, ತಂಗುಳ ಆಹಾರ ತಾಮಸ ಎನ್ನಿಸುವುದು. ಯೋಗ ಸಾಧಕನು ಶುದ್ಧ ಶಾಖಾಹಾರಿಯಾಗಿ ಸಾತ್ವಿಕ ಆಹಾರವನ್ನು ಸೇವಿಸುತ್ತಿರಬೇಕೆಂದು ಹೇಳಿದರು.

ಆಹಾರವನ್ನು ಅತಿಯಾಗಿ ಸೇವಿಸುವುದು ಅತಿಯಾಗಿ ಉಪವಾಸ ಮಾಡುವುದು ಅತಿ ನಿದ್ರೆಗೈಯುವುದು, ಬಹಳ ನಿದ್ರೆಗೆಡುವುದು ಈ ಅತಿ ವ್ಯವಹಾರಗಳು ಯೋಗಕ್ಕೆ ಬಾಧಕಗಳಾಗಿವೆ. ಯೋಗಸಾಧಕನು ಅಷ್ಟಾಂಗ ಯೋಗಗಳನ್ನು ಸರಿಯಾಗಿ ಪರಿಪಾಲಿಸಿದರೆ ಶ್ರೇಷ್ಠ ಯೋಗಿಯಾಗುವನು. ಭಗವದ್ಗೀತೆಯು ಪ್ರತಿಯೊಬ್ಬರೂ ಜೀವನವನ್ನು ಸಾಗಿಸಬೇಕೆಂಬ ಸಂದೇಶ ಸಾರುತ್ತದೆ.ಎಲ್ಲರೂ ವೇದ, ಉಪನಿಷತ್ತುಗಳ ಸಾರವಾದ ಗೀತೆಯನ್ನು ಶಿವಾಗಮಗಳ ಸಾರವಾದ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಸ್ವಾಧ್ಯಾಯ ಮಾಡಬೇಕೆಂಬುದಾಗಿ ಹೇಳಿದರು. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾಶಿ ಜಗದ್ಗುರುಗಳ ಉವಾಚ

ಸಿದ್ಧಾಂತ ಮತ್ತು ಅನುಭಾವಗಳು ಪರಸ್ಪರ ಪೂರಕ



ವೀರಶೈವ ಧರ್ಮದ ಸಿದ್ಧಾಂತ ಗ್ರಂಥ ಸಿದ್ಧಾಂತ ಶಿಖಾಮಣಿಯಾದರೆ ಶರಣರ ವಚನಗಳು ಅನುಭಾವ ಸಾಹಿತ್ಯವಾಗಿದ್ದು ಒಂದಕ್ಕೊಂದು ಪೂರಕವಾಗಿವೆ ಎಂದು ಕಾಶಿ ಜಗದ್ಗುರು ಶ್ರೀ ಚಂದ್ರಶೇಖರ ಶಿವಾಚಾರ್ಯರು ಹೇಳಿದರು.

ಶೇಖರೋಜಾದ ಗುರುಶಾಂತ ಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿ ಗ್ರಂಥದ ಪ್ರವಚನ ನೀಡಿದ ಅವರು ಪ್ರತಿಯೊಂದು ಧರ್ಮಕ್ಕೆ ಒಂದು ಸಿದ್ಧಾಂತವಿರುವಂತೆ ವೀರಶೈವ ಧರ್ಮಕ್ಕೆ ಸಿದ್ಧಾಂತ ಶಿಖಾಮಣಿ ಸಿದ್ಧಾಂತ ಗ್ರಂಥವಾಗಿದೆ ಎಂದರು.

ಶಿವಯೋಗಿ ಶಿವಾಚಾರ್ಯರು ವೀರಶೈವ ಸಿದ್ಧಾಂತವನ್ನು ಶಾಸ್ತ್ರೀಯವಾಗಿ ಹಾಗೂ ಕ್ರಮಬದ್ಧವಾಗಿ ಸಂಸ್ಕೃತ ಭಾಷೆಯಲ್ಲಿ ನಿರೂಪಿಸಿರುವ ವೀರಶೈವ ಧರ್ಮದ ಆದ್ಯ ಗ್ರಂಥವಾಗಿದೆ . ಈ ಗ್ರಂಥ ದಲ್ಲಿ 28 ಶೈವಾಗಮಗಳನ್ನು ಮತ್ತು ಶೈವ ಪುರಾಣಗಳನ್ನು ಮುಖ್ಯವಾಗಿ ಆಧಾರವಾಗಿಟ್ಟುಕೊಂಡು ರಚಿಸಲಾಗಿದೆ ಎಂದರು.

12ನೇ ಶತಮಾನದ ಬಸವಾದಿ ಶರಣರು ವೇದ ಆಗಮ ಉಪನಿಷತ್ತು ಮತ್ತು ಸಿದ್ಧಾಂತವನ್ನು ಅರ್ಥಮಾಡಿಕೊಂಡು ಜನಸಾಮಾನ್ಯರಿಗೆ ತಿಳಿಯುವಂತೆ ಸರಳವಾದ ವಚನಗಳನ್ನು ರಚಿಸಿದ್ದಾರೆ. ಈ ವಚನಗಳಲ್ಲಿ ವೀರಶೈವ ಸಿದ್ಧಾಂತ , ಅಷ್ಟಾವರ್ಣ ಹಾಗೂ ಪಂಚಾಚಾರ್ಯರ ಷಟ್ ಸ್ಥಲಗಳು ವಚನಗಳಲ್ಲಿ ಪ್ರತಿಪಾದಿತವಾಗಿವೆ ಎಂದರು.

ವಚನಗಳನ್ನು ಸಿದ್ಧಾಂತ ಕ್ರಮಗೊಳಿಸಬೇಕಾದರೆ ಸಿದ್ಧಾಂತ ಶಿಖಾಮಣಿ ಗ್ರಂಥ ಅಧ್ಯಯನಕ್ಕೆ ಅಗತ್ಯವಾಗಿದ್ದು , ಯಾರು ಸಿದ್ಧಾಂತವನ್ನು ಚೆನ್ನಾಗಿ ಅರ್ಥೈಸಿಕೊಂಡಿದ್ದಾರೋ ಅವರೇ ವಚನಗಳನ್ನು ಚೆನ್ನಾಗಿ ಅರ್ಥೈಸಬಲ್ಲರು, ಸಿದ್ಧಾಂತ ಮತ್ತು ಅನುಭಾವಗಳು ಹಾಲು ಜೇನಿನಂತೆ ಸಮಾಜದಲ್ಲಿ ಮಧುರ ಬಾಂಧವ್ಯವನ್ನು ಹೆಚ್ಚಿಸಿವೆ ಎಂದರು.

'ತ್ಯಾಗದಿಂದ ಜೀವನು ದೇವನಾಗುವನು'

ಮನುಷ್ಯನಲ್ಲಿಇರಬೇಕಾದ ಅನೇಕ ಸದ್ಗುಣಗಳಲ್ಲಿತ್ಯಾಗವೂ ಶ್ರೇಷ್ಠವಾದದ್ದು, ತ್ಯಾಗದಿಂದಲೇ ಪಶು, ಪಾಷಾಣ, ವೃಕ್ಷ, ನದಿ ಮುಂತಾದವುಗಳು ದೇವರಂತೆ ಪೂಜೆಗೊಳ್ಳುತ್ತವೆ, ಆದ್ದರಿಂದ ಮನುಷ್ಯನು ಜೀವತ್ವವನ್ನು ತೊರೆದು

ಕಾಶಿ ಜಗದ್ಗುರುಗಳ ಪ್ರವಚನ




ದೇವತ್ವವನ್ನು ಪಡೆಯಬೇಕಾದರೆ ಸಂಸಾರದಲ್ಲಿರುವ ಮೋಹವನ್ನು ತ್ಯಾಗಮಾಡಬೇಕಾಗುವುದು. ಈ ಮೋಹ ತ್ಯಾಗಕ್ಕೇನೇ 'ಶ್ರೀ ಸಿದ್ಧಾಂತ ಶಿಖಾಮಣಿ' ಯಲ್ಲಿ 'ಸಂಸಾರ ಹೇಯಸ್ಥಲ' ವೆಂದು ಕರೆದರೆ 'ಶೂನ್ಯ ಸಂಪಾದನೆ'ಯಲ್ಲಿ ಅದನ್ನೇ 'ಮಾಯಾವಿಲಾಸ ವಿಡಂಬನೆ' ಅಥವಾ ಜೀವಭ್ರಾಂತಿ ನಿರಶನ ಸ್ಥಲ ವೆಂಬುದಾಗಿ ಹೇಳಲಾಗಿದೆ.

ಉಪನಿಷತ್ತುಗಳು ಸಾಧಕರಿಗೆ ಪೂರ್ಣತ್ವದ ಪ್ರಾಪ್ತಿಯನ್ನು ಉಪದೇಶಿಸಿವೆ, ಶಿವಾಗಮಗಳು ಶೂನ್ಯತ್ವದ ಪ್ರಾಪ್ತಿಯ ಬಗ್ಗೆ ಪ್ರತಿಪಾದಿಸಿವೆ. ಉಪನಿಷತ್ತಿನ ಆ ಪೂರ್ಣತೆಯು ಮತ್ತು ಶಿವಾಗಮಗಳ ಆ ಶೂನ್ಯ ಸ್ಥಿತಿಯು ಎರಡೂ ಒಂದೇ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು, ವೀರಶೈವ ಧರ್ಮದರ್ಶನಗಳಿಗೆ ಶಿವಾ ಗಮಗಳೇ ಮೂಲ ಸಾಹಿತ್ಯವಾಗಿದೆ. ಶ್ರೀ ಸಿದ್ಧಾಂತ ಶಿಖಾಮಣಿ ಹಾಗೂ ಶರಣರ ಅನುಭಾವ ಸಾಹಿತ್ಯವಾದ ಶೂನ್ಯ ಸಂಪಾದನೆಗಳಿಗೆ ಶಿವಾಗಮಗಳೇ ಮೂಲವಾದ್ದರಿಂದ ಸಿದ್ಧಾಂತ ಶಿಖಾಮಣಿ ಹಾಗೂ ಶೂನ್ಯ ಸಿದ್ಧಾಂತವನ್ನೇ ಪ್ರತಿಪಾದಿಸುತ್ತದೆ ಆದ್ದರಿಂದ ಇವೆರಡೂ ಸಾಹಿತ್ಯವನ್ನು ಸಾಧಕರು ಸಮಾನ ದೃಷ್ಟಿಯಿಂದಲೇ ಗ್ರಹಿಸಬೇಕು. ಇವೆರಡೂ ಗ್ರಂಥಗಳಲ್ಲಿ ಜೀವವು ಶಿವನಾಗ ಬೇಕಾದರೆ ತ್ಯಾಗವೇ ಪ್ರಧಾನ ವೆಂಬುದನ್ನು ಪ್ರತಿಪಾದಿಸಿವೆ.ಆದ್ದರಿಂದ ಸಾಂಸಾರಿಕ ಮೋಹ ತ್ಯಾಗದಿಂದಲೇ ಜೀವನು ಶಿವನಾಗುವನು.

'ಸ್ವಾರ್ಥತೆಯೇ ಅಶಾಂತಿಗೆ ಕಾರಣ'

ಸೇಡಂ: ಜಗತ್ತಿನಲ್ಲಿ ಅಶಾಂತಿಗೆ ಮೂಲಕಾರಣ ಸ್ವಾರ್ಥತೆ. ಈ ಸ್ವಾರ್ಥ ಭಾವನೆ ತೊಲಗಿಸಲು ಭಗವಂತನ ನಾಮಸ್ಮರಣೆಯೊಂದೇ ಸಾಕು ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ನುಡಿದರು.




ಮಳಖೇಡದ ಭಂಗಿ ಮಠದಲ್ಲಿ ಶ್ರಾವಣ ಮಾಸದ ನಿರಂತರ ಪ್ರವಚನದ ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು, ಮನುಷ್ಯರು ಸ್ವಾರ್ಥಿಯಾಗಲು ಮನಸ್ಸಿನ ವಿಕೃತಗಳೇ ಮುಖ್ಯ ಕಾರಣ. ಎಲ್ಲವೂ ನನಗೆ ಬೇಕು ಎಂಬ ಭಾವನೆಯಿಂದ ಅನೇಕ ಸಂಘರ್ಷ, ಅವಘಡಗಳು ತಲೆದೋರಿ ಅಶಾಂತಿ ವಾತಾವರಣ ನಿರ್ಮಾಣವಾಗುತ್ತಿದೆ. ಇದರ ಶಾಶ್ವತ ನಿರ್ಮೂಲನೆಗೆ ಪ್ರತಿಯೊಬ್ಬರೂ ಭಗವಂತನ ನಾಮಸ್ಮರಣೆ ಮಾಡಬೇಕು ಎಂದರು. .

ವಿಧ್ವಂಸಕ ಕೃತ್ಯಗಳ ತಡೆಗೆ, ಯುವಶಕ್ತಿಯ ಮನಸ್ಸು ಹದಗೆಡಿಸುತ್ತಿರುವ ಕೆಲ ಶಕ್ತಿಗಳ ಮಟ್ಟ ಹಾಕಲು ನಮಗೆ ಉಳಿದಿರುವುದು ಒಂದೇ ಮಾರ್ಗ. ಅದು ಭಗವಂತನ ನಾಮಸ್ಮರಣೆ. ಸತ್ಸಂಗದಿಂದ ಭಗವಂತನ ನಾಮಸ್ಮರಣೆ ಮಾಡುವ ಗುಣ ಬರುತ್ತದೆ. ಇದಕ್ಕಾಗಿ ಇನ್ನೊಬ್ಬರನ್ನು ಮೊದಲು ಗೌರವಿಸುವ ಪರಿಪಾಠ ಬೆಳೆಸಿಕೊಳ್ಳಬೇಕು ಎಂದು ಜಗದ್ಗುರುಗಳು ನುಡಿದರು.

ಸಾಧನೆಯ ಕೊನೆಯ ಗುರಿಯೇ ಲಿಂಗಾಂಗ ಸಾಮರಸ್ಯ: ಕಾಶಿ ಜಗದ್ಗುರು

ಗುಲ್ಬರ್ಗ: ವೀರಶೈವ ಸಿದ್ಧಾಂತದಲ್ಲಿ ಶಿವೋಹಂ ಎಂಬ ಭಾವನೆಯನ್ನೇ ಭಾವಲಿಂಗವೆಂದು ಬೋಧಿಸಿದ್ದಾರೆ. ಇದಕ್ಕೆ ಮಹಾಲಿಂಗ, ಪರಾತ್ಪರಲಿಂಗ, ತೃಪ್ತಿಲಿಂಗ ಎಂದು ಕರೆಯುತ್ತಾರೆ. ಪರಿಪೂರ್ಣ ಶಿವಮಯವಾದ ಮನೋವೃತ್ತಿಗೆ



ಭಾವ ಎಂದು ಕರೆಯುವರು. ಕೇವಲ ಅಹಂಭಾವವಿದ್ದಾಗ ಜೀವಾತ್ಮನು ಸಂಸಾರಿ ಎಂದು ಕರೆಯಿಸಿಕೊಳ್ಳುತ್ತಾನೆ. ಯಾವಾಗ ಶಿವೋಹಂ ಭಾವದಿಂದ ಅರಿಹಂತ ಭಾವವನ್ನು ತಲುಪುವನೋ ಆಗ ಲಿಂಗಾಂಗ ಸಮಾರಸ್ಯ ಪಡೆದುಕೊಳ್ಳುವನು ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಶಹಾಬಜಾರ, ಶೇಖರೋಜಾದ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯದ ಸಮನ್ವಯದ ಹಿನ್ನೆಲೆಯಲ್ಲಿ ಲಿಂಗಾಂಗ ಸಾಮರಸ್ಯವನ್ನು ಕುರಿತು ಆಶೀರ್ವಚನ ನೀಡುತ್ತಿದ್ದ ಅವರು, ಮನುಷ್ಯ ತನ್ನ ಶಿವಸ್ವರೂಪವನ್ನು ಮರೆತು ಜೀವಭಾವದಲ್ಲಿ ಬಂದಾಗ ದುಖಃವನ್ನು ಅನುಭವಿಸುತ್ತಾನೆ. ಈ ಜೀವನು ಸದ್ಗುರುವಿನಿಂದ ಲಿಂಗ ಸ್ವರೂಪವನ್ನು ಅರಿತು ತಾನು ಲಿಂಗರೂಪ ಎಂಬ ಭಾವನೆ ಬೆಳೆಸಿಕೊಳ್ಳುತ್ತ ಹೋದಹಾಗೆ ಜೀವಭಾವ ತೊಲಗಿ ಶಿವಭಾವ ಮೂಡುತ್ತದೆ ಎಂದು ತಿಳಿಸಿದರು.

ವೀರಶೈವ ಸಾಧಕನು ಇಷ್ಟಲಿಂಗ ಪ್ರಾಣಲಿಂಗಗಳನ್ನು ಶಾಸ್ತ್ರೋಕ್ತ ವಿಧದಿಂದ ಪೂಜಿಸಿದಾಗ ಮಾತ್ರ ತಾನೂ ಶಿವಸ್ವರೂಪಿ ಎಂಬ ಭಾವನೆ ಬಂದು ಬಿಡುತ್ತದೆ. ಆಗ ಮಾತ್ರ ಸಂಸಾರದ ಮಾಯೆಯಿಂದ ಮುಕ್ತನಾಗಿ ಲಿಂಗರೂಪನಾಗುವನು. ಇದುವೇ ಸಾಧನೆಯ ಕೊನೆಯ ಗುರಿ ಎಂದು ತಿಳಿಸಿದ ಅವರು ಇದನ್ನೇ ಲಿಂಗಾಂಗ ಸಾಮರಸ್ಯ ಎನ್ನುತ್ತಾರೆ ಎಂದು ನುಡಿದರು.

ಇಷ್ಟಲಿಂಗ ಆರಾಧನೆ

ಲಿಂಗಾಂಗ ಸಾಮರಸ್ಯದ ಮೊದಲ ಹೆಜ್ಜೆ

ಪ್ರಜಾವಾಣಿ ವಾರ್ತೆ



ಗುಲ್ಬರ್ಗ: ವೀರಶೈವ ಧರ್ಮದಲ್ಲಿ ಇಷ್ಟಲಿಂಗದ ಆರಾಧನೆಯ ಮೂಲಕ ಲಿಂಗಾಂಗ ಸಾಮರಸ್ಯವನ್ನು ಬೋಧಿಸಲಾಗಿದೆ. ಇಷ್ಟಲಿಂಗವೆಂದರೆ ಕೇವಲ ಬಹಿರಂಗದಲ್ಲಿನ ಮೂರ್ತಿಯಲ್ಲ; ತನ್ನ ಶಿವಮಯ ಚಿತ್ಕಳೆಯನ್ನೇ ತನ್ನ ಕರದಲ್ಲಿರಿಸಿ ಪೂಜಿಸುವ ತನ್ನ ಆತ್ಮ ಎಂದರ್ಥ ಎಂದು ಕಾಶಿ ಜ್ಞಾನ ಸಿಂಹಾಸನಾಧೀಶ್ವರ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಅಭಿಪ್ರಾಯಪಟ್ಟರು.

ನಗರದ ಸೊಗಸನಗೇರಿ ಶೇಖ ರೋಜಾದ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿ ವಚನ ಸಾಹಿತ್ಯದ ಸಮನ್ವಯಾತ್ಮಕ ಆಧ್ಯಾತ್ಮಿಕ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಇಷ್ಟಲಿಂಗದಲ್ಲಿ ದೃಷ್ಟಿಯೋಗದ ಮೂಲಕ ಶಿವಯೋಗವನ್ನು ಸಾಧಿಸಿ ಲಿಂಗಾಂಗ ಸಾಮರಸ್ಯವನ್ನು ಪಡೆಯಬೇಕು ಎಂದರು.

ಇಷ್ಟಲಿಂಗದ ಅನುಸಂಧಾನವನ್ನು ಮಾಡುವಾಗ ದೃಷ್ಟಿಯೋಗಕ್ಕೆ ಮಹತ್ವ ಇರುವಂತೆ ಉಪಚಾರ, ಪೂಜೆಗೂ ಮಹತ್ವವಿದೆ. ಅಂತೆಯೇ ಶಿವಾಗಮಗಳಲ್ಲಿ ಸಿದ್ಧಾಂತ ಶಿಖಾಮಣಿಯಲ್ಲಿ ಮತ್ತು ಶರಣರ ವಚನಗಳಲ್ಲಿ ಪಂಚೋಪಚಾರ, ಅಷ್ಟವಿದೋಪಚಾರ ಮತ್ತು ಶೋಡಶೋಪಚಾರಗಳು ಪ್ರತಿಪಾದಿತವಾಗಿವೆ ಎಂದು ನುಡಿದರು.

ಉಪಚಾರ ಎಂದರೆ ಶಿವನ ಸಮೀಪಕ್ಕೆ ಕರೆದುಕೊಂಡು ಹೋಗುವ ಪೂಜಾ ಪರಿಕರಗಳು ಎಂದರ್ಥ. ಶುದ್ಧ ಜಲ, ಭಸ್ಮ ಗಂಧ, ಪತ್ರಿಪುಷ್ಪ, ಧೂಪ ಮತ್ತು ದೀಪ ಮುಂತಾದ ಉಪಚಾರಗಳು ನಮ್ಮನ್ನು ನಮ್ಮ ಇಷ್ಟಲಿಂಗದ ಸಮೀಪಕ್ಕೆ ಕರೆದುಕೊಂಡು ಹೋಗುತ್ತವೆ. ಭಕ್ತಿಯಿಂದ ಇಷ್ಟಲಿಂಗಕ್ಕೆ ಅರ್ಪಿಸುವಾಗ ನಾವು ನಮ್ಮ ಇಷ್ಟಲಿಂಗದೊಂದಿಗೆ ಏಕಾಗ್ರ ಭಾವನೆಯನ್ನು ತಾಳುತ್ತೇವೆ. ಈ ಏಕಾಗ್ರತೆಯೇ ಬಲಗೊಳ್ಳುತ್ತ ಮುಂದೊಂದು ದಿನ ನಾವು ಸಂಪೂರ್ಣವಾಗಿ ಅಂತರ್ಮುಖಿಯಾಗಲು ಸಹಾಯವಾಗುತ್ತದೆ ಎಂದರು.

ಬಹಿರಂಗದಲ್ಲಿ ಹಲವು ಕಡೆ ಹರಿದಾಡುವ ಮನಸ್ಸನ್ನು ಮೊದಲು ಬಹಿರಂಗದ ಇಷ್ಟಲಿಂಗದಲ್ಲಿ ನೆಲೆಗೊಳಿಸಿ ನಂತರ ಅಂತರ್ಮುಖವಾಗಿ ಅಖಂಡ ಚೈತನ್ಯಾತ್ಮಕ ಮಹಾಲಿಂಗದೊಂದಿಗೆ ಸಾಮರಸ್ಯ ಪಡೆದುಕೊಳ್ಳುತ್ತಾನೆ. ಹೀಗೆ ಸಾಧಕನ ಅಂತರಂಗ ಪ್ರವೃತ್ತಿಗೆ ಇಷ್ಟಲಿಂಗದ ಧಾರಣೆ, ಅರ್ಚನೆ ಮತ್ತು ಅನುಸಂಧಾನಗಳು ಸಾಧಕವಾಗಿರುವುದರಿಂದ ವೀರಶೈವ ಧರ್ಮದಲ್ಲಿ ಇಷ್ಟಲಿಂಗಕ್ಕೆ ಮಹತ್ವ ಕೊಡಲಾಗಿದೆ ಎಂದು ನುಡಿದರು.

ಪರಮಾತ್ಮನು ಅಭೇದರೂಪನಾಗಿದ್ದಾನೆ

ಸೇಡಂ: ಲೌಕಿಕವೆಲ್ಲವೂ ಭೇದವಾಗಿದೆ ಆದರೆ ಪರಮಾತ್ಮನು ಅಭೇದರೂಪನಾಗಿದ್ದಾನೆ ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ನುಡಿದರು.



ಕಾಶಿ ಜಗದ್ಗುರುಗಳ ವಾಣಿ

ಅವರು ತಾಲೂಕಿನ ಮಳಖೇಡ ಭಂಗಿ ಮಠ ಮತ್ತು ಜಾಕನಪಲ್ಲಿ ಗ್ರಾಮದಲ್ಲಿ ನಡೆದ ಶ್ರಾವಣ ಮಾಸದ ಪ್ರವಚನ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಇದು ನನ್ನ ಭೂಮಿ, ಇದು ನಿನ್ನ ಭೂಮಿ ಎಂಬುದು ಕಂಡು ಭೂಮಿಯು ನಗುತ್ತಿದೆ. ಪರಮಾತ್ಮನ ಸಂಕಲ್ಪದಿಂದ ಉತ್ಪನ್ನಗಳಾದ ಪಂಚ ಮಹಾಭೂತಗಳನ್ನೇ ಖಂಡ-ಖಂಡವಾಗಿಸುವುದು ಅಸಾಧ್ಯವಾದಾಗ ಸರ್ವ ಕಾರಣನಾದ ಆ ಪರಶಿವ ಪರಮಾತ್ಮನಲ್ಲಿ ಭಿನ್ನ-ಭಿನ್ನತೆಯನ್ನು ಮಾಡುವುದು ಯಾರಿಂದಲೂ ಸಾಧ್ಯವಿಲ್ಲ.

ಪ್ರತಿಯೊಬ್ಬರು ಅಂಧಕಾರದಿಂದ ಜ್ಞಾನದ ಕಡೆಗೆ ಬರಬೇಕಾದರೆ ಶಿವನನ್ನು ಎಲ್ಲ ವಸ್ತುಗಳಲ್ಲಿ ಕಾಣುವ ದೃಷ್ಠಿ ಹೊಂದಿರಬೇಕು. ಶಿವನು ಅಭೇದನಾಗಿದ್ದಾನೆ. ಯಾವ ರೂಪದಲ್ಲೂ ಆತ ಇರಬಹುದು. ಆ ತನವನ್ನು ಕಾಣುವ ಭಕ್ತಿಯೋಗ ದೃಷ್ಠಿ ಇರಬೇಕು ಅಂದಾಗ ಗೋಚರಿಸುತ್ತಾನೆ. ಮಳಖೇಡ ಭಂಗಿ ಮಠದ ಗಂಗಾಧರ ಸ್ವಾಮಿಗಳು ಉಪಸ್ಥಿತರಿದ್ದರು.

ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ

ಶ್ರಾವಣಮಾಸ ಸಂದೇಶ




ನಮ್ಮ ಭಾಗ್ಯದ ಶಿಲ್ಪಿಗಳು ನಾವೇ !

ನಮ್ಮ ಹಣೇ ಬರಹವನ್ನು ಬ್ರಹ್ಮನು ಬರೆಯುವುದಿಲ್ಲ. ನಾವೇ ಅದರ ಬರಹಗಾರರು ಎಂದು ಕಾಶಿ ಜಗದ್ಗುರುಗಳಾದ ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಮಳಖೇಡದ ಭಂಗಿಮಠದಲ್ಲಿ ಶ್ರಾವಣ ಮಾಸದ ಅಂಗವಾಗಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿ ಕುರಿತ ಉಪನ್ಯಾಸ ಮಾಲಿಕೆಯಲ್ಲಿ ಪಿಂಡ ಸ್ಥಳದ ಮೇಲೆ ಆಶೀರ್ವಚನ ನೀಡಿದ ಅವರು, ಪ್ರಪಂಚವು ಅನೇಕ ವಿಷಮತೆಯಿಂದ ಕೂಡಿದೆ. ಜಿವರಾಶಿಗಳಲ್ಲಿ ಅನೇಖ ತಾರತಮ್ಯಗಳಿವೆ. ಈ ಎಲ್ಲ ಭೇದ ಭಾವಗಳಿಗೆ ಸೃಷ್ಟಿಕರ್ತನಾದ ದೇವರೇ ಕಾರಣನಲ್ಲ, ಎಲ್ಲ ವಿಷಮತೆಗಳಿಗೆ ನಮ್ಮ ಕರ್ಮಗಳೇ ಕಾರಣಗಳು. ಈ ಕರ್ಮಗಳನ್ನು ನಾವೇ ನಮ್ಮ ಕೈಗಳಿಂದ ಮಾಡಿರುತ್ತೇವೆ. ಆದ್ದರಿಂದ ನಮ್ಮ ಹಣೆಬರಹವೆಂದು ಯಾರೂ ಕೈಕಟ್ಟಿಕೊಂಡು ಕೂಡಬಾರದು. ಯಾವಾಗಲೂ ಲೋಕಹಿತದ ಕರ್ಮಗಳನ್ನು ಮಾಡುತ್ತ ತಾನು ಸುಖಿಯಾಗಿರುವುದರ ಜೊತೆಗೆ ಇತರರಿಗೂ ಸಂತೋಷ ಉಂಟು ಮಾಡಬೇಕು.

ಅಯಂ ಮೇ ಹಸ್ತೋ ಭಗವಾನ್ ಎಂದು ವೇದವು ಹಸ್ತವೇ ದೇವರೆಂದು ಹೇಳಿದೆ. ಬಸವಾದಿ ಶರಣರು ಸಹ ತಮ್ಮ ವಚನಗಳಲ್ಲಿ ಹಸ್ತಗಳ ಮಹತ್ವವನ್ನು ತಿಳಿಸಿದ್ದಾರೆ. ಕಾರಣ ಯಾವ ಪ್ರಾಣಿಗಳಿಗೂ ಇಲ್ಲದ ಅಮೂಲ್ಯ ಹಸ್ತಗಳನ್ನು ಮನುಷ್ಯನು ಹೊಂದಿದ್ದಾನೆ. ಆದ್ದರಿಂದ ತನ್ನ ಹಾಗೂ ರಾಷ್ಟ್ರದ ಉಜ್ವಲ ಭವಿಷ್ಯಕ್ಕಾಗಿ ಯಾವಾಗಲು ಉತ್ತಮ ಕರ್ಮಗಳನ್ನೇ ಮಾಡುತ್ತಿರಬೇಕು. ಅಂದಾಗಲೇ ನಾವು ಭಾಗ್ಯವಂತರಾಗಲು ಸಾಧ್ಯ.ಜಗತ್ತಿನಲ್ಲಿ ನಡೆಯುತ್ತಿರುವ ವಿಧ್ವಂಸಕ ಕೃತ್ಯಗಳು ನಿಲ್ಲಬೇಕು. ರಾಷ್ಟ್ರ ನಿರ್ಮಾಣದ ಕಾರ್ಯಗಳು ಮುಂದುವರೆಯಬೇಕು ಎಂದು ಶ್ರೀಗಳು ತಿಳಿಸಿದರು.ಭಂಗೀಮಠದ ಪೀಠಾಧಿಪತಿ ಶ್ರೀ ಗಂಗಾಧರ ಶಿವಾಚಾರ್ಯರುಉಪಸ್ಥಿತರಿದ್ದರು.



ಸಿದ್ಧಾಂತ ಶಿಖಾಮಣಿ, ವಚನಶಾಸ್ತ್ರದ ಸಮನ್ವಯ ಅಧ್ಯಯನ ಕೈಗೊಳ್ಳಲು ಕರೆ

ಗುಲಬರ್ಗಾ

ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ವಚನ ಶಾಸ್ತ್ರದ ಸಮನ್ವಯ ಅಧ್ಯಯನ ಕೈಗೊಳ್ಳಬೇಕು ಎಂದು ಶ್ರೀ ಕಾಶಿ ಜಗದ್ಗುರು ಗುರುವಾರ ಇಲ್ಲಿ ಹೇಳಿದರು.

ಶೇಖ್‌ರೋಜಾದ ಸೊಗಸನಗೇರಿ ಶ್ರೀ ಶಾಂತಲಿಂಗೇಶ್ವರ್ ಕಲ್ಯಾಣ ಮಂಟಪದಲ್ಲಿ ಆಶೀರ್ವಚನ ನೀಡಿದ ಅವರು, ಸನಾತನವಾದ ವೀರಶೈವ ಧರ್ಮಕ್ಕೆ ಶಿವಾಗಮನಗಳ ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ಶರಣರ ಅನುಭವ ಸಾಹಿತ್ಯ ಒಂದು ಅಪೂರ್ವವಾದ ತ್ರಿವೇಣಿ ಸಂಗದಂತಿದೆ ಎಂದರು.

ಪ್ರಯಾಗ ಕ್ಷೇತ್ರದ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡುವುದರಿಂದ ಪ್ರತಿಯೊಬ್ಬರು ಪರಿಶುದ್ಧರಾಗುವರು ಎಂಬ ಭಾವನೆಯು ಭಾರತೀಯರಲ್ಲಿ ಬೇರೂರಿದೆ. ಅಂತೆಯೇ ಕುಂಭ ಮೇಳ ಮುಂತಾದ ಪರ್ವಗಳಲ್ಲಿ ಕೋಟಿಗಟ್ಟಲೇ ಶ್ರದ್ಧಾಳುಗಳು ಆ ಸಂಗಮದಲ್ಲಿ ಸ್ನಾಕ್ಕೆ ಹೋಗುತ್ತಾರೆ. ಬೇರೆ ಬೇರೆ ಮೂಲಗಳಿಂದ ಬಂದ ನದಿಗಳು ಅಲ್ಲಿ ಒಂದುಗೂಡಿ ಮುಂದೆ ಸಾಗರದವರೆಗೆ ಒಂದಾಗಿಯೇ ಹೋಗುವುದನ್ನು ಗಮನಿಸಿದರೆ ಅಲ್ಲಿ ಸ್ನಾನ ಮಾಡಿದ ಪ್ರತಿಯೊಬ್ಬ ವ್ಯಕ್ತಿಯು ಪರಸ್ಪರ ಭಿನ್ನತೆಗಳನ್ನು ಮರೆತು ಒಂದುಗೂಡಿಕೊಂಡು ಹೋಗುವ ಸಂದೇಶವನ್ನು ಸ್ವೀಕರಿಸಿದಾಗಲೇ ಆ ಸ್ನಾನಕ್ಕೆ ಸಾರ್ಥಕತೆ ಬರುತ್ತದೆ. ಅಂತೆಯೇ ಎಲ್ಲೆಲ್ಲಿ ಸಂಗಮ ಉಂಟೋ ಅಲ್ಲಲ್ಲಿ ಸ್ನಾನಕ್ಕಾಗಿ ಲಕ್ಷಾವಧಿ ಜನರು ಹೋಗುವ ವಾಡಿಕೆ ಇದೆ. ಅಲ್ಲಿ ಸ್ನಾನ ಮಾಡುವರ ಜೊತೆಗೆ ನದಿಗಳಂತೆ ಕೂಡಿಕೊಂಡು ಹೋಗುವ ತಿಳುವಳಿಕೆ ಪಡೆದುಕೊಳ್ಳುವುದೇ ಗಮನಾರ್ಹವಾದ ವಿಷಯವಾಗಿದೆ ಎಂದು ಅವರು ಹೇಳಿದರು.

ನದಿಯ ಸಂಗಮಕ್ಕೆ ಪ್ರಾಶಸ್ತ್ಯ ಇರುವಂತೆ ಸಾಹಿತ್ಯ ಸಂಗಮಕ್ಕೂ ಅದಕ್ಕಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕಾಗಿದೆ. ಹೀಗೆ ವೀರಶೈವ ಸಮಾಜವನ್ನು ನಿಮಿತ್ಯ ಮಾಡಿಕೊಂಡು ಸಮಸ್ತ ಮನುಕೂಲದ ಉದ್ಧಾರಕ್ಕಾಗಿ ಶಿವನ ಉಪದೇಶವಾದ ಶಿವಾಗಮನಗಳು ಶಿವಾಚಾರ್ಯರ ಉಪದೇಶವಾದ ಸಿದ್ಧಾಂತ ಶಿಖಾಮಣಿ ಸೈದ್ಧಾಂತಿಕವಾಗಿ ಮತ್ತು ಶಿವಶರಣರ ಉಪದೇಶವಾದ ವಚನ ಸಾಹಿತ್ಯವು ಸಮಸ್ತ ವೀರಶೈವರಿಂಗೆ ಸಾಹಿತ್ಯದ ತ್ರಿವೇಣಿ ಸಂಗಮ ಇದ್ದಂತೆ. ಇಂತಹ ಪವಿತ್ರವಾದ ಸಾಹಿತ್ಯವನ್ನು ಸಮನ್ವಯದಿಂದ ಅಧ್ಯಯನ ಮಾಡಿ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸಿಕೊಂಡು ಸರ್ವರೊಂದಿಗೆ ಸೌಹಾರ್ದತೆಯಿಂದ ಬದುಕಿಗಾಗಿ ಶಾಂತಿ ನೆಲೆಗೊಳಿಸುವುದು, ಪರಸ್ಪರರ ದೂಕ್ಷಣೆಗೆ ಮುಂದಾಗಿರುವುದು ದುರದೃಷ್ಟಕರ ಸಂಗತಿ. ಇನ್ನು ಮುಂದೆ ಯಾರಾದರೂ ಈ ಗ್ರಂಥಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ಅವುಗಳಲ್ಲಿ ಹೇಳಿದ ತತ್ವಗಳನ್ನು ತಿಳಿದುಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಶಿವಾಗಮ ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ವಚನಗಳು ಸಮನ್ವಯ ಅಧ್ಯಯನ ಕೂಡಲ ಸಂಗಮದಲ್ಲಿ ಕೂಡಿರುವ ಕೃಷ್ಣೆ, ಮಲಪ್ರಭೆಯರ ಕೂಡಲ ಸಂಗಮದಂತಿದೆ. ಆದ್ದರಿಂದ ಶರಣರು ಅಭಿಮಾನಿಗಳಾದ ಸರ್ವ ಭಕ್ತರು ದೋಷಣೆಯ ಮನೋಭಾವ ತ್ಯಜಿಸಿ ಸಮನ್ವಯತೆಗೆ ಮುಂದಾಗಿ ಸಮಾಜದ ಸ್ವಾಸ್ಥ್ಯ ಅಭಿವೃದ್ಧಿಯಲ್ಲಿ ತಮ್ಮ ಅಪಾರವಾದ ಕೊಡುಗೆಯನ್ನು ಕೊಡುವಂತಾಗಲಿ ಎಂದು ಅವರು ಆಶಿಸಿದರು.

ಕಾಶಿ ಜಗದ್ಗುರುಗಳ ಉವಾಚ

ಲಿಂಗಾಂಗ ಸಾಮರಸ್ಯಕ್ಕೆ ಭಕ್ತಿಯೇ ಮುಕ್ತ

ವೀರಶೈವ ಸಿದ್ಧಾಂತ ಲಿಂಗಾಂಗ ಸಾಮರಸ್ಯಕ್ಕೆ ಭಕ್ತಿಯೇ ಮುಕ್ತವಾದದ್ದು ಇಲ್ಲಿ ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ ಮತ್ತು ಸಮರಸಗಳೆಂಬ 6 ವಿಧದ ಭಕ್ತಿಗಳನ್ನು ಅಂಗೀಕರಿಸಲಾಗಿದೆ. ಇಷ್ಟ ಲಿಂಗದ ಆರಾಧನೆ ಶ್ರದ್ಧಾ ಮತ್ತು ನಿಷ್ಠಾ ಭಕ್ತಿಗಳು ಅವಶ್ಯಕವಾದವುಗಳು. ಶ್ರದ್ಧೆ ಎಂದರೆ ವಿಶ್ವಾಸವು ತಾನು ಪೂಜಿಸುವ ಇಷ್ಟ ಲಿಂಗದಲ್ಲಿ ಈ ಇಷ್ಟಲಿಂಗವನ್ನು ಅನುಗ್ರಹಿಸಿದ



ಗುರುವಿನಲ್ಲಿ ಮತ್ತು ಶಾಸ್ತ್ರ ಗ್ರಂಥದಲ್ಲಿ ಇರುವ ನಂಬಿಕೆಯೇ ಶ್ರದ್ಧೆ ಎಂದು ಕರೆಯಲ್ಪಡುವುದು ಎಂದು ಶ್ರೀ ಕಾಶಿ ಜ್ಞಾನ ಸಿಂಹಾಸನಾಧೀಶ್ವರ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಅಭಿಪ್ರಾಯ ಪಟ್ಟರು.

ಅವರು ನಗರದ ಶೇಖ ರೋಜಾ ಶಾಂತಲಿಂಗೇಶ್ವರ ಕಲ್ಯಾಣ ಮಂಟಪದ ಸಿದ್ಧಾಂತ ಶಿಖಾಮಣಿ ವಚನ ಸಾಹಿತ್ಯದ ಸಮನ್ವಯಾತ್ಮಕ ಧರ್ಮ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಈ ಶ್ರದ್ಧಾ ಭಕ್ತಿಯು ನೆಲಗೊಳ್ಳಬೇಕಾದರೆ, ಅಂತಃಕರಣದ ಶುದ್ಧ, ಆತ್ಮಾನಾತ್ಮ ವಿವೇಕ, ಸಂಸಾರದಲ್ಲಿ ನಿಸ್ಪೃಹರ್ತೆ, ಗುರುಸೇವೆ, ದೀಕ್ಷಾಪೂರಕ ಲಿಂಗಧಾರಣೆ, ಭಸ್ಮ, ರುದ್ರಾಕ್ಷಿಗಳ ಧಾರಣೆ, ಪಂಚಾಕ್ಷರ ಮಹಾಮಂತ್ರ ಜಪ ಗುರು-ಲಿಂಗ-ಜಂಗಮರು ಒಂದೇ ಎಂಬ ಭಾವನೆ ಮತ್ತು ತಾನು ಸಂಪಾದಿಸಿದ್ದರಲ್ಲಿ ಧರ್ಮ, ಸಮಾಜ ಮತ್ತು ರಾಷ್ಟ್ರಕ್ಕಾಗಿ ಸಮರ್ಪಣಾ ಮನೋಭಾವಗಳೆಂಬ ಈ ಉತ್ಕೃಷ್ಟ ಗುಣಗಳು ಸಾಧಕನಲ್ಲಿ ಒಡಮೂಡಬೇಕಾಗುತ್ತದೆ. ಆಗ ಸಾಧಕನು ಶ್ರದ್ಧಾ-ಭಕ್ತಿ ಉಳ್ಳವನಾಗುವನು. ಅವನೇ ಭಕ್ತನೆಂದು ಕರೆಯಲ್ಪಡುವನು. ಈ ಶ್ರದ್ಧಾ-ಭಕ್ತಿಯೇ ಸ್ಥಿರಗೊಂಡಾಗ ನಿಷ್ಠಾ-ಭಕ್ತಿಯೆಂದು ಕರೆಯಲ್ಪಡುವುದು 'ನಿಶ್ಚಯೋನತಿಷ್ಠತೀತಿ ನಿಷ್ಠಾ' ಅಂದರೆ ಒಂದೆಡೆ ಸ್ಥಿರವಾಗಿ ನಿಲ್ಲುವ ಭಕ್ತಿಯೇ ನಿಷ್ಠಾಭಕ್ತಿ ಎಂದರ್ಥ. ಹೊರಗಡೆ ಅನೇಕ ಕಡೆಗಳಲ್ಲಿ ಹರಿದಾಡುವ ಶ್ರದ್ಧೆಯು ಇಷ್ಟಲಿಂಗದಲ್ಲಿ ಸ್ಥಿರಗೊಂಡಾಗ ಅದುವೇ ನಿಷ್ಠಾಭಕ್ತಿ ಎಂದೆನಿಸಿಕೊಳ್ಳುವುದು.

ಈ ನಿಷ್ಠಾ-ಭಕ್ತಿಯ ಫಲವಾಗಿ ಶಿವನೇ ಸರ್ವಾರಾಧ್ಯನು ಆ ಶಿವನೇ ಗುರುಕೃಪೆಯಿಂದ ನನ್ನ ಹಸ್ತ ಪೀಠದಲ್ಲಿ ಇಷ್ಟಲಿಂಗರೂಪದಲ್ಲಿ ಪ್ರಾಪ್ತವಾಗಿದ್ದಾನೆ ಎಂಬ ಮನೋಭಾವನೆಯು ಬೆಳೆದು ಬರುತ್ತದೆ. ಇಂತಹ ನಿಷ್ಠೆಯು ಬೆಳೆದು ಬಂದಾಗ ಆ ಸಾಧಕನು ಮಹೇಶ್ವರನೆನಿಸಿಕೊಳ್ಳುವನು.

ಈ ಮಹೇಶ್ವರನಲ್ಲಿಯ ನಿಷ್ಠೆಯು ಸರ್ವೋತ್ಕೃಷ್ಟವಾಗಿರುತ್ತದೆ. ತನ್ನ ಸರ್ವಸ್ವವೂ ಹಾಳಾಗಲಿ ತನಗೆ ಮರಣವೇ ಬರಲಿ ಅಂದರೆ ಎಂತಹ ಆಪತ್ತು-ವಿಪತ್ತುಗಳು ಬಂದರು ಲಿಂಗ ಪೂಜೆ ಮಹಾವ್ರತವನ್ನು ಬಿಡದವನೇ ಮಹೇಶ್ವರನು ಇದುವೇ ನಿಷ್ಠಾಭಕ್ತಿ ಎಂದರು.

ವೀರಶೈವ ಸಾಧಕನು ಷಟಸ್ಥಲಗಳಲ್ಲಿಯ ಭಕ್ತಿ ಮತ್ತು ಮಹೇಶ್ವರ ಸ್ಥಲಗಳಲ್ಲಿ ಬರುವ ಶ್ರದ್ಧಾ ಮತ್ತು ನಿಷ್ಠಾ-ಭಕ್ತಿಗಳನ್ನು ಮೈಗೂಡಿಸಿಕೊಂಡಾಗಲೇ ಅವನು ಯತಾರ್ಥವಾಗಿ ಇಷ್ಟಲಿಂಗ ಪೂಜಕನಾಗುವನು ಒಟ್ಟಿನಲ್ಲಿ ಭಕ್ತಿ ಹಾಗೂ ಮಹೇಶ್ವರ ಸ್ಥಲಗಳಲ್ಲಿ ಬರುವ ಎಲ್ಲ ಉತ್ಕೃಷ್ಟ ಗುಣಗಳನ್ನು ಹೊಂದಿದಾಗಲೇ ಅವನು ಇಷ್ಟಲಿಂಗಾರಾಧಕನಾಗುವನು ಎಂದು ಅಭಿಪ್ರಾಯಪಟ್ಟರು.

ಕಾಶಿ ಜಗದ್ಗುರುಗಳ ಉವಾಚ

ಲಿಂಗಾಂಗ ಸಾಮರಸ್ಯವೇ ವೀರಶೈವ ಸಿದ್ಧಾಂತ

ಗುಲ್ಬರ್ಗ: ಲಿಂಗವೆಂದರೆ ಅಖಂಡವಾದ ಪರಶಿವ ಚೈತನ್ಯ.



ಅಂಗವೆಂದರೆ ಅಮೂಲ ಚೈತನ್ಯದ ಅಂಶ. ಇವೆರಡರ ಸಾಮರಸ್ಯವೇ ಲಿಂಗಾಂಗ ಸಾಮರಸ್ಯ.

ಚರಾಚರ ಪ್ರಪಂಚ ಮೂಲ ಕಾರಣವಾದ ಅಖಂಡ ಚೈತನ್ಯವೇ ಅವಿದ್ಯಾ ಶಕ್ತಿಯಿಂದ ಕೂಡಿಕೊಂಡಾಗ ಅಂಗ ಅಥವಾ ಜೀವ ಎಂದು ಕರೆಯಿಸಿಕೊಳ್ಳುತ್ತದೆ ಎಂದು ಶ್ರೀ ಕಾಶಿಜ್ಞಾನ ಸಿಂಹಾಸನಾಧೀಶ್ವರ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಅವರು ನಗರದ ಶ್ರೀ ಶಾಂತಲಿಂಗೇಶ್ವರ ಕಲ್ಯಾಣ ಮಂಟಪ ಶೇಖರೋಜಾದ ಸಿದ್ಧಾಂತ ಶಿಖಾಮಣಿಯ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಅವಿದ್ಯಾ ಮೂಲಕವಾಗಿ ಪರಶಿವಚೈತನ್ಯದಿಂದ ಬೇರ್ಪಟ್ಟು ಈ ಅಂಗವು ಜೀವಾತ್ಮವಾಗಿ ಸಂಸಾರದಲ್ಲಿ ನಾನಾ ಯೋನಿಗಳಲ್ಲಿ ತಿರುಗುತ್ತಿರುತ್ತದೆ. ಗುರುವಿನ ಸಾನ್ನಿಧ್ಯ ದೊರೆತಾಗ ಆತನ ಉಪದೇಶದಿಂದ ತಾನು ಆ ಪರಶಿವನ ಅಂಶ ಎಂಬ ಅರಿವಾಗಿ ಆ ಲಿಂಗ ತತ್ವವನ್ನು ತಿಳಿದುಕೊಳ್ಳಲು ಹೊರಟ ಸಾಧಕನೇ ಲಿಂಗವೆಂದು ಕರೆಯಿಸಿಕೊಳ್ಳುವನು. ಈ ಅಂಗನು ಆ ಲಿಂಗ ತತ್ವದೊಂದಿಗೆ ಹಾಲಿನಲ್ಲಿ ಹಾಲು ಬೆರೆತಂತೆ ಬೆರೆಯುವುದೇ ಲಿಂಗಾಂಗ ಸಾಮರಸ್ಯ.

ವೀರಶೈವ ಸಿದ್ಧಾಂತ ಗ್ರಂಥವಾದ ಈ ಸಿದ್ಧಾಂತ ಶಿಖಾಮಣಿಯು ಸಾಮರಸ್ಯದ ರಹಸ್ಯವನ್ನೇ ಪ್ರತಿಪಾದಿಸಿದೆ. 12ನೇ ಶತಮಾನದ ಶರಣರೂ ಈ ಸಿದ್ಧಾಂತವನ್ನು ತಿಳಿದುಕೊಂಡು ಅವರು ತಮ್ಮ ಅನುಭಾವ ಸಾಹಿತ್ಯವಾದ ವಚನಗಳಲ್ಲಿ ಲಿಂಗಾಂಗ ಸಾಮರಸ್ಯವನ್ನೇ ಪ್ರತಿಪಾದಿಸಿದ್ದಾರೆ.

ವೀರಶೈವ ಸಿದ್ಧಾಂತವಾದ ಈ ಲಿಂಗಾಂಗ ಸಾಮರಸ್ಯವನ್ನು ಪ್ರತಿಪಾದಿಸುವ ಶಿವಾಗಮಾಗಳು ಈ ಮೂರು ವೀರಶೈವ ಪ್ರಸ್ಥಾನತ್ರಯಗಳಾಗಿವೆ ಎಂದು ಸನ್ನಿಧಿಯವರು ಅಪ್ಪಣೆ ಕೊಡಿಸಿದರು. ಈ ಮೂರು ಪರಸ್ಪರ ಪೂರಕಗಳಾಗಿರುವುದರಿಂದ ಅಭ್ಯಾಸಕರು ಮೂರನ್ನೂ ಸಮನ್ವಯಗೊಳಿಸಿ ಅಭ್ಯಾಸ ಮಾಡಿ ಸಮಾಜಕ್ಕೆ ಬೋಧಿಸಿದರೆ ಸಮಾಜದಲ್ಲಿ ಐಕ್ಯತೆಯನ್ನು ಉಂಟುಮಾಡಲು ಸಾಧ್ಯವಾಗುವುದು ಎಂದು ನುಡಿದರು.

ಧರ್ಮ ಉಳಿದಿದ್ದು ಸ್ತ್ರೀಯರಿಂದ ಮಾತ್ರ

ಸೇಡಂ: ನೀತಿ, ಚಾರಿತ್ರ್ಯ, ಪ್ರಾಮಾಣಿಕತೆ, ಭಕ್ತಿ, ಧರ್ಮದ ಅನುಷ್ಠಾನ ಇಂದು ಉಳಿದಿರುವದು ಸ್ತ್ರೀಯರಿಂದಲೇ ಮಾತ್ರ ಎಂದು ಕಾಶಿ ಶ್ರೀಗಳಾದ ಡಾ. ಚಂದ್ರಶೇಖರ ಶಿವಾಚಾರ್ಯರು ಹೇಳಿದರು.



ಶ್ರಾವಣ ಮಾಸದ ಅಂಗವಾಗಿ ನಡೆದ ಪ್ರವಚನದಲ್ಲಿ ಅವರು ಮಾತನಾಡಿ, ದೇವಾನುದೇವತೆಗಳೇ ಸ್ತ್ರೀಯರಿಗೆ ಪ್ರಾಧ್ಯಾನ್ಯತೆ ನೀಡಿದ್ದಾರೆ. 12 ನೇ ಶತಮಾನದ ಶಿವಶರಣರು ಸ್ತ್ರೀ ವಚನಕಾರರಿಗೆ ಅವಕಾಶ ಮಾಡಿ ಕೊಟ್ಟಿದ್ದು, ದಾರಿ ದೀಪವಾಗಿದೆ.

ಪ್ರತಿಯೊಂದು ಧರ್ಮದ ಸಂಪ್ರದಾಯ ಉಳಿದಿದ್ದು ಮಹಿಳೆಯರಿಂದ ಎಂದರು.

ಪತಿವ್ರತಾ ಮತ್ತು ಪತಿವ್ರತಾ ಧರ್ಮ ಉಳಿದರೆ, ಜಗತ್ತಿನಲ್ಲಿ ಶಾಂತಿ ಸೌಹಾರ್ದ ಉಳಿಯುತ್ತದೆ. ಮೋಕ್ಷ ಪಡೆಯಲು ಸ್ತ್ರೀ ಪುರುಷರು ಸಮಾನರಾಗಿದ್ದಾರೆ ಎಂದು ಶ್ರೀಗಳು ನುಡಿದರು.

ಪಾರಲೌಕಿಕ ಸುಖಗಳು ಕ್ಷಣಿಕ



ಕಾಶಿ ಜಗದ್ಗುರುಗಳ ವಾಣಿ

ಸೇಡಂ: ಧಾರ್ಮಿಕ ಸಹಿಷ್ಣುತೆ, ಶರಣರ, ಸಂತರ, ಮಹಾಂತರ ಸಂದೇಶಗಳು ಮತ್ತು ಸರ್ವಧರ್ಮ ಸಮ ಭಾವನೆಯನ್ನು ವಿಶ್ವಕ್ಕೆ ನೀಡಿದ ಭಾರತೀಯರ ಕೊಡುಗೆ ಅನನ್ಯ ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ನುಡಿದರು.

ಅವರು ತಾಲೂಕಿನ ಮಳಖೇಡದ ಭಂಗಿ ಮಠ ಹಾಗೂ ಸೇಡಂನ ಕೊತ್ತಲಬಸವೇಶ್ವರ ದೇವಾಲಯದಲ್ಲಿ ಪ್ರತ್ಯೇಕವಾಗಿ ಜರುಗಿದ ಶ್ರಾವಣ ಮಾಸ ಪ್ರವಚನಗಳ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ವೀರಶೈವ ಧರ್ಮದ ಸರ್ವೋತ್ಕೃಷ್ಟ ಸಿದ್ಧಾಂತ ಶಿಖಾಮಣಿಯು ಸರ್ವಧರ್ಮಗಳ ಜೊತೆ ಹೇಗೆ ಬದುಕುಬೇಕು ಎಂಬುದು ಸಾದರಪಡಿಸುತ್ತದೆ. ದೇವನೊಬ್ಬ ನಾಮ ಹಲವು ಎಲ್ಲರೂ ಒಬ್ಬ ದೇವನ ಮಕ್ಕಳು ಎಂಬುದು ಈ ದೇಶದ ಸಂತರ ವಾಣಿಯಾಗಿದೆ. ಪ್ರತಿಯೊಬ್ಬರಲ್ಲಿ ಸತ್ಸಂಗ ಸದ್ವಿಚಾರಗಳ ಒಡ ಮೂಡಿದರೆ ಖಂಡಿತ ಸರ್ವಧರ್ಮ ಸಮಭಾವ ಬರಲು ಸಾಧ್ಯ. ಐಹಿಕ ಹಾಗೂ ಪಾರಲೌಕಿಕ ಸುಖಗಳು ಕ್ಷಣಿಕ ಮತ್ತು ಪರತಂತ್ರಗಳಾಗಿರುತ್ತವೆ. ಊಟ, ನಿದ್ರೆಗೆ, ಸಂಸಾರಕ್ಕೆ ಮಾತ್ರ ನಮ್ಮ ಸಮಯ ಸೀಮಿತಗೊಳ್ಳಬಾರದು, ಪ್ರತಿದಿನ ಸತ್ಸಂಗ-ಸದ್ವಿಚಾರಣೆ ತೊಡಗಿಕೊಂಡಾಗ ವಿಶಾಲ ಭಾವನೆ ಬರುತ್ತದೆ.

ಭಾರತೀಯ ಪರಂಪರೆ, ಹಿಂದಿನ ಆದರ್ಶಗಳನ್ನು ತಿಳಿದುಕೊಂಡು ಭಾರತೀಯರೂ ಇಂದು ಸರ್ವಧರ್ಮ ಸಮಭಾಗಿಗಳಾಗಬೇಕು. ಸಿದ್ಧಾಂತ ಶಿಖಾಮಣಿಯೇ ನಮಗೆ ದಾರಿ ದೀಪವಾಗಿದೆ ಎಂದರು.

ಕಾಶಿ ಜಗದ್ಗುರುಗಳ ಉವಾಚ

ಸಿದ್ಧಾಂತ ಮತ್ತು ಅನುಭಾವಗಳು ಪರಸ್ಪರ ಪೂರಕ

ವೀ

ವೀರಶೈವ ಧರ್ಮದ ಸಿದ್ಧಾಂತ ಗ್ರಂಥ ಸಿದ್ಧಾಂತ ಶಿಖಾಮಣಿಯಾದರೆ ಶರಣರ ವಚನಗಳು ಅನುಭಾವ ಸಾಹಿತ್ಯವಾಗಿದ್ದು ಒಂದಕ್ಕೊಂದು



ಪೂರಕವಾಗಿವೆ ಎಂದು ಕಾಶಿ ಜಗದ್ಗುರು ಶ್ರೀ ಚಂದ್ರಶೇಖರ ಶಿವಾಚಾರ್ಯರು ಹೇಳಿದರು.

ಶೇಖರೋಜಾದ ಗುರುಶಾಂತ ಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿ ಗ್ರಂಥದ ಪ್ರವಚನ ನೀಡಿದ ಅವರು ಪ್ರತಿಯೊಂದು ಧರ್ಮಕ್ಕೆ ಒಂದು ಸಿದ್ಧಾಂತವಿರುವಂತೆ ವೀರಶೈವ ಧರ್ಮಕ್ಕೆ ಸಿದ್ಧಾಂತ ಶಿಖಾಮಣಿ ಸಿದ್ಧಾಂತ ಗ್ರಂಥವಾಗಿದೆ ಎಂದರು.

ಶಿವಯೋಗಿ ಶಿವಾಚಾರ್ಯರು ವೀರಶೈವ ಸಿದ್ಧಾಂತವನ್ನು ಶಾಸ್ತ್ರೀಯವಾಗಿ ಹಾಗೂ ಕ್ರಮಬದ್ಧವಾಗಿ ಸಂಸ್ಕೃತ ಭಾಷೆಯಲ್ಲಿ ನಿರೂಪಿಸಿರುವ ವೀರಶೈವ ಧರ್ಮದ ಆದ್ಯ ಗ್ರಂಥವಾಗಿದೆ . ಈ ಗ್ರಂಥ ದಲ್ಲಿ 28 ಶೈವಾಗಮಗಳನ್ನು ಮತ್ತು ಶೈವ ಪುರಾಣಗಳನ್ನು ಮುಖ್ಯವಾಗಿ ಆಧಾರವಾಗಿಟ್ಟುಕೊಂಡು ರಚಿಸಲಾಗಿದೆ ಎಂದರು.

12ನೇ ಶತಮಾನದ ಬಸವಾದಿ ಶರಣರು ವೇದ ಆಗಮ ಉಪನಿಷತ್ತು ಮತ್ತು ಸಿದ್ಧಾಂತವನ್ನು ಅರ್ಥಮಾಡಿಕೊಂಡು ಜನಸಾಮಾನ್ಯರಿಗೆ ತಿಳಿಯುವಂತೆ ಸರಳವಾದ ವಚನಗಳನ್ನು ರಚಿಸಿದ್ದಾರೆ. ಈ ವಚನಗಳಲ್ಲಿ ವೀರಶೈವ ಸಿದ್ಧಾಂತ , ಅಷ್ಟಾವರ್ಣ ಹಾಗೂ ಪಂಚಾಚಾರ್ಯರ ಷಟ್ ಸ್ಥಲಗಳು ವಚನಗಳಲ್ಲಿ ಪ್ರತಿಪಾದಿತವಾಗಿವೆ ಎಂದರು.

ವಚನಗಳನ್ನು ಸಿದ್ಧಾಂತ ಕ್ರಮಗೊಳಿಸಬೇಕಾದರೆ ಸಿದ್ಧಾಂತ ಶಿಖಾಮಣಿ ಗ್ರಂಥ ಅಧ್ಯಯನಕ್ಕೆ ಅಗತ್ಯವಾಗಿದ್ದು , ಯಾರು ಸಿದ್ಧಾಂತವನ್ನು ಚೆನ್ನಾಗಿ ಅರ್ಥೈಸಿಕೊಂಡಿದ್ದಾರೋ ಅವರೇ ವಚನಗಳನ್ನು ಚೆನ್ನಾಗಿ ಅರ್ಥೈಸಬಲ್ಲರು, ಸಿದ್ಧಾಂತ ಮತ್ತು ಅನುಭಾವಗಳು ಹಾಲು ಜೇನಿನಂತೆ ಸಮಾಜದಲ್ಲಿ ಮಧುರ ಬಾಂಧವ್ಯವನ್ನು ಹೆಚ್ಚಿಸಿವೆ ಎಂದರು.

G ಉಷಾ ಕಿರಣ

ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ

ಶ್ರಾವಣಮಾಸ ಸಂದೇಶ



ದೇವ ಸ್ಮರಣೆಯೇ ನಿಜವಾದ ಸಂಪತ್ತು

ಮಳಖೇಡ : ಇಷ್ಟ ದೇವರ ಸ್ಮರಣೆಯೇ ಸಂಪತ್ತು. ದೇವರ ವಿಸ್ಮರಣೆಯೇ ವಿಪತ್ತು. ಇಷ್ಟ ದೇವರನ್ನು ಪ್ರತಿಯೊಬ್ಬರು ದಿನಾಲು ಸ್ಮರಿಸಬೇಕು. ದೇವ ಸ್ಮರಣೆ ಅಕ್ಷಯ ಸಂಪತ್ತು. ಬಹಳಷ್ಟು ಜನ ಧನ,ಭೂಮಿ, ಕನಕವನ್ನೇ ಸಂಪತ್ತು ಎಂದು ಭಾವಿಸಿದ್ದಾರೆ. ಆದರೆ ಆಚಾರ್ಯ ಮತ್ತು ಶರಣರ ದೃಷ್ಟಿಯಲ್ಲಿ ಇವುಗಳೆಲ್ಲವೂ ಜಗಕ್ಕಿಕ್ಕಿದ ವಿಧಿಗಳು. ಆದ್ದರಿಂದ ಮನುಷ್ಯರಾದವರು ತಮ್ಮ ಬದುಕಿನ ಹಲವಾರು ಜಂಜಡಗಳಲ್ಲಿ ಸಮಯವನ್ನು ಉಳಿಸಿಕೊಂಡು ಪೂಜಾ-ಸ್ಮರಣಾದಿಗಳನ್ನು ಮಾಡಬೇಕು. ಯಾರು ದೇವರನ್ನು ಮರೆಯುತ್ತಾರೋ ಅವರು ಜೀವನದಲ್ಲಿ ವಿಪತ್ತುಗಳಿಗೆ ಆಮಂತ್ರಣ ತಂದುಕೊಳ್ಳುತ್ತಾರೆ.

ಜಗದ್ಗುರು ರೇಣುಕ ಭಗವತ್ಪಾದರು ಹೇಳಿದಂತೆ ತಮ್ಮ ಇಷ್ಟಲಿಂಗವನ್ನು ಶರೀರದ ಮೇಲೆ ಧರಿಸಿ ದಿನಾಲು ತಪ್ಪದಂತೆ ಪೂಜಿಸುವಂತೆ ಅಪ್ಪಣೆ ಮಾಡಿದ್ದಾರೆ. ದೇವ ಪೂಜೆ ಮತ್ತು ಸ್ಮರಣಾದಿಗಳಿಂದ ಮನುಷ್ಯನು ಮಾನಸಿಕ ಸ್ಥೈರ್ಯವನ್ನು ಕಡೆದುಕೊಳ್ಳುತ್ತಾನೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮುಸ್ತಫಾ ಖಾದ್ರಿಯವರು ಭಾವೈಕ್ಯದ ಸಂದೇಶವನ್ನಿತ್ತರು. ಗಂಗಾಧರ ಶಿವಾಚಾರ್ಯರು ಪ್ರಸ್ತಾವಿಕ ಧರ್ಮ ಸಂದೇಶವನ್ನು ನೀಡಿದರು.

ಭಕ್ತ ಭವಿಯಾಗಿ ಪರಿವರ್ತಿತನಾಗದಂತೆ ಎಚ್ಚರವಹಿಸಬೇಕು: ಕಾಶಿ ಶ್ರೀಗಳು

ಗದಗ ೫. ಭಕ್ತನಾದವನು ಆತ್ಮ ಸಂಸ್ಕಾರಿತಗೊಳಿಸಲು ಧರ್ಮ ಆಚಾರದ ಬದ್ಧತೆಯಿಂದ ನಡೆಯಬೇಕು ಮತ್ತು ಭಕ್ತನ ತದ್ವಿರುದ್ಧ ಲಕ್ಷಣ ಹೊಂದಿದ 'ಭವಿ'ಯಾಗಿ ಪರಿವರ್ತಿತಗೊಳ್ಳದಂತೆ ಎಚ್ಚರವಹಿಸಬೇಕೆಂದು ಶ್ರೀಮತ್ ಕಾಶಿ ಜ್ಞಾನ ಸಿಂಹಾಸನಾಧೀಶ್ವರ ಜ. ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ಹೇಳಿದರು.

ಮದ್ಯಪಾನಿ, ಮಾಂಸಾಹಾರಿ ತನ್ನ ಇಷ್ಟದೇವರ ತೊರೆದು ಅನೇಕ ದೇವರ ಪೂಜೆ ಮಾಡುತ್ತಲಿರುವವನು, ಲಿಂಗಧಾರಣೆ ಮಾಡದವನು, ದುರಾಚಾರಿಯಾಗಿರುವವ ಭವಿ ಎಂದು ಕರೆಯಿಸಿಕೊಳ್ಳುತ್ತಾನೆ. ಇವುಗಳಿಂದ ಭಕ್ತನಾದವನು ಜಾಗರೂಕತೆ ವಹಿಸಬೇಕೆಂದು ಶ್ರೀಗಳು ಕಿವಿ ಮಾತನ್ನು ಹೇಳಿದರು.

ಜ. ಪಂಚಾಚಾರ್ಯ ಸೇವಾ ಸಂಘದಿಂದ ಕೆ.ಎಚ್. ಪಾಟೀಲ


ಸಭಾಭವನದಲ್ಲಿ ಗುರು ಪೂರ್ಣಿಮೆ ನಿಮಿತ್ತ, ಶ್ರೀ ಭಗವದ್ಗೀತೆ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಉಪದೇಶಾಮೃತದ ೫ನೇ ದಿನದ ಉಪದೇಶವನ್ನು ಅವರು ನೀಡುತ್ತಿದ್ದರು.

ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿಯ ಭಕ್ತ ಕ್ರಿಯಾಚರ್ಯದಲ್ಲಿ ಹೇಳಿರುವ ಏಕದೇವೋಪಾಸನೆ ಮತ್ತು ಭಕ್ತ ಹಾಗೂ ಭವಿ ಕುರಿತು ಅವರು ವಿವರಣೆ ನೀಡುತ್ತಿದ್ದರು.

ಕೆರೂರ ಚರಂತಿಮಠದ ಶಿವಕುಮಾರ ಶಿವಾಚಾರ್ಯ ಶ್ರೀಗಳು ಪ್ರಾಸ್ತಾವಿಕ ನುಡಿ ಸೇವೆ ಗೈದು, ಸಂಸ್ಕಾರ ರಹಿತ ವ್ಯಕ್ತಿ ಮೃಗಗಳಿಗೆ ಸಮಾನವಾಗಿ ವರ್ತಿಸುತ್ತಾನೆ ಮತ್ತು ಆಧ್ಯಾತ್ಮದ ಸ್ಪರ್ಶವಿಲ್ಲದೇ ಅತಂತ್ರ ಪರಿಸ್ಥಿತಿ ಎದುರಿಸುವಂತಾಗುವನು. ಆದ್ದರಿಂದ ಮನುಷ್ಯ ಜನ್ಮದ ಸದುಪಯೋಗ ಪಡೆದು ಆತ್ಮವನ್ನು ಸಂಸ್ಕರಿತಗೊಳಿಸಿ ಉನ್ನತ ಸುಖದ ಗುರಿಗೆ ಪ್ರಯತ್ನಿಸಬೇಕೆಂದು ಹೇಳಿದರು.

ತನ್ನ ಚಿದ್ರೂಪ ಚಿಂತನೆಯೇ ಪ್ರಾಣಲಿಂಗಾರ್ಚನೆ: ಜಗದ್ಗುರು

ಗುಲಬರ್ಗಾ 30-7-08 ಕ್ರಾಂತಿ



ವೀರಶೈವ ಧರ್ಮ ಸಿದ್ಧಾಂತದಲ್ಲಿ ಭಕ್ತ ಮತ್ತು ಮಹೇಶ್ವರನಿಗೆ ಇಷ್ಟ ಲಿಂಗಾರ್ಚನೆಯನ್ನು ಹೇಳಿ ಪ್ರಸಾದಿ ಹಾಗೂ ಪ್ರಾಣಲಿಂಗಿ ಸಾಧಕರಿಗೆ ಪ್ರಾಣ ಲಿಂಗಾರ್ಚನೆ ಬೋಧಿಸಲಾಗಿದೆ ಎಂದು ಶ್ರೀ ಕಾಶಿ ಜಗದ್ಗುರು ಡಾ. ಚಂದ್ರಶೇಖರ್ ಶಿವಾಚಾರ್ಯ ಭಗವತ್ಪಾದರು ಮಂಗಳವಾರ ಇಲ್ಲಿ ಹೇಳಿದರು.

ಶೇಖ್ ರೋಜಾದಲ್ಲಿರುವ ಶ್ರೀ ಶಾಂತಲಿಂಗೇಶ್ವರ್ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯಾತ್ಮಕ ಆಧ್ಯಾತ್ಮಿಕ ಆಶೀರ್ವಚನ ವೇದಿಕೆಯಿಂದ ಮಾತನಾಡುತ್ತಿದ್ದ ಅವರು, ತನ್ನ ಹೃದಯದಲ್ಲಿರುವ ಪ್ರಾಣ ವಾಯುವನ್ನು ಗುರು ಸ್ಥಳದಲ್ಲಿಯ ಅಪಾನವಾಯುವಿಗೆ ಸಂಘಟನೆಯನ್ನು ಮಾಡಲಾಗಿ ಅಲ್ಲಿ ಒಂದು ಜ್ಯೋತಿಯು ಉದಯಿಸುವುದು. ಆ ಜ್ಯೋತಿಯು ಊರ್ಧ್ವಮುಖವಾಗಿ ಸೂಕ್ಷ್ಮ ಮಾರ್ಗದಿಂದ ಹೃದಯದವರೆಗೆ ಬಂದು ಅಲ್ಲಿ ಹವಳದ ವರ್ಣದಿಂದ ಪ್ರಕಾಶಿಸುವುದು. ಆ ಪ್ರಕಾಶವೇ ಪ್ರಾಣಲಿಂಗವೆಂದು ಶ್ರೀ ಸಿದ್ಧಾಂತ ಶಿಖಾಮಣಿಯ ಪ್ರಾಣಲಿಂಗ ಸ್ಥಳದಲ್ಲಿ ಪ್ರತಿಪಾದಿಸಲಾಗಿದೆ ಎಂದರು.

ಈ ಜ್ಯೋತಿಯಲ್ಲಿ ಪ್ರಾಣ ವಾಯು ವಿಲಯವಾಗಿರುವುದರಿಂದ ಅದಕ್ಕೆ ಪ್ರಾಣಲಿಂಗವೆಂದು ಕರೆಯುತ್ತಾರೆ. ಈ ಪ್ರಾಣ ಲಿಂಗವು ಅಂತರಂಗದ ಜ್ಯೋತಿಯಾಗಿರುವುದರಿಂದ ಇದರ ಅರ್ಚನೆಯನ್ನು ಮಾಡಲು ಬಹಿರಂಗದ ಉಪಚಾರ ಸಾಮಗ್ರಿಗಳು ಉಪಯೋಗಕ್ಕೆ ಬರುವುದಿಲ್ಲ. ಅಂತೆಯೇ ಸಿದ್ಧಾಂತ ಶಿಖಾಮಣಿಯಲ್ಲಿ ಕ್ಷಮೆಯೇ ಅಭಿಷೇಕ ಜಲ, ವಿವೇಕವೇ ವಸ್ತ್ರ, ಸತ್ಯವೇ ಆಭರಣ, ವೈರಾಗ್ಯವೇ ಪುಷ್ಪಮಾಲೆ, ಸಮಾಧಿ ಸಂಪತ್ತಿ ಗಂಧ, ನಿರಹಂಕಾರ ಭಾವನೆ ಅಕ್ಷತೆ, ಶ್ರದ್ಧೆ ಧೂಪ ಜ್ಞಾನ ದೀಪ, ಭ್ರಾಂತಿ ತ್ಯಾಗವೇ ನೈವೇದ್ಯ, ಮೌನವೇ ಗಂಟಾನಾದ, ವಿಷಯ ಸಮರ್ಪಣೆಯೇ ತಾಂಬುಲ, ವಿಷಯ ಭ್ರಾಂತಿ ರಾಹಿತ್ಯವೇ ಪ್ರದಕ್ಷಣೆ ಮತ್ತು ಬುದ್ಧಿ ಸಮರ್ಪಣೆಯೇ ನಮಸ್ಕಾರವು, ಹೀಗೆ ಭಾವನಾಮಯ ಆದ ಉಪಚಾರಗಳಿಂದ ಪ್ರಾಣ ಲಿಂಗಾರ್ಚನೆಯು ಬೋಧಿಸಲಾಗಿದೆ ಎಂದು ಅವರು ವಿವರಿಸಿದರು.

ಅಂದರೆ ಕ್ಷಮೆ, ವಿವೇಕ ಮತ್ತು ವೈರಾಗ್ಯ ಮುಂತಾದ ಸದ್ಗುಣಗಳೇ ಪ್ರಾಣ ಲಿಂಗಕ್ಕೆ ಸಮರ್ಪಿಸುವ ಉಪಾಚಾರಗಳು ಎಂದು ತಿಳಿದುಕೊಳ್ಳಬೇಕು. ಒಟ್ಟಿನಲ್ಲಿ ಈ ಮೇಲೆ ಹೇಳಿದ ಉತ್ಕೃಷ್ಟಗಳಾದ ಗುಣಗಳು ಯಾರು ಸಂಪಾದಿಸಿಕೊಳ್ಳುವರೋ ಅವರೇ ಪ್ರಾಣ ಲಿಂಗಾರ್ಚನೆಯನ್ನು ಮಾಡಲು ಅರ್ಹ ಎಂಬುದನ್ನು ಸರ್ವರು ತಿಳಿದುಕೊಳ್ಳಬೇಕು. ಈ ರೀತಿಯಾದ ಅಂತರಂಗ ಪ್ರವೃತ್ತಿಯಾಗದೇ ಸಾಧಕನ ಪ್ರಗತಿಯಾಗಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಅಂತೆಯೇ ಶರಣರು- ಹೊಟ್ಟೆಯ ಮೇಲ್ ಕಟೋಗರವ ಕಟ್ಟಿದರೆ ತೃಪ್ತಿಯಾಗಬಲ್ಲುದೇ? ಎಂಬುದಾಗಿ ಪ್ರಶ್ನಿಸಿದ್ದಾರೆ. ಅಂದರೆ ಹೊಟ್ಟೆಯ ಮೇಲೆ ಕಟ್ಟಿರುವ ಬುತ್ತಿಯನ್ನು ಬಿಚ್ಚಿ ಊಟ ಮಾಡಿದಾಗ ತೃಪ್ತಿಯಾಗುವಂತೆ ಹೊರಗಿನ ಇಷ್ಟಲಿಂಗವನ್ನು ಎಡ ಹಸ್ತ ಪೀಠದಲ್ಲಿ ಇರಿಸಿ ಅದನ್ನು ದೃಷ್ಟಿಯೋಗದಿಂದ, ನಿರೀಕ್ಷಿಸುತ್ತ ಮನಸ್ಸನ್ನು ಹೃದಯದಲ್ಲಿ ಹವಳದ ವರ್ಣದಿಂದ ಹೊಳೆಯು ಪ್ರಾಣಲಿಂಗದಲ್ಲಿ ಮಗ್ನ ಮಾಡಲಾಗಿ ತನ್ನ ಚಿದ್ರೂಪ ಚಿಂತನೆಯು ಉಂಟಾಗುವುದು. ಈ ಚಿದ್ರೂಪ ಚಿಂತನೆಯೇ ನಮಗೆ ತೃಪ್ತಿಯನ್ನು ಕೊಡುತ್ತದೆ ಎಂದು ಅವರು ತಿಳಿಸಿದರು. ಹೀಗೆ ಅಂತರಗದಲ್ಲಿ ಪ್ರವೃತ್ತಿಯಾಗದೇ ಕೇವಲ ಹೊರಗಿನ ಇಷ್ಟಲಿಂಗವನ್ನೇ ಪೂಜಿಸುವುದರಲ್ಲೇ ತೊಡಗಿದರೆ ಹೊಟ್ಟೆಯ ಮೇಲೆ ಬುತ್ತಿಯನ್ನು ಕಟ್ಟಿಕೊಂಡಂತಾಗುತ್ತದೆ ಎಂಬುದನ್ನು ಶರಣರು ತಿಳಿಹೇಳಿದ್ದನ್ನು ಇಲ್ಲಿ ಗಮನಿಸಬೇಕು. ವೀರಶೈವ ಷಟಸ್ಥಲ ಮಾರ್ಗದಲ್ಲಿ ಪ್ರಸಾದಿ ಮತ್ತು ಪ್ರಾಣಲಿಂಗಿ ಸಾಧಕನು ಈ ಪ್ರಾಣ ಲಿಂಗಾರ್ಚನೆಯನ್ನು ಮಾಡಲು ಸಮರ್ಥನಾಗುವನು. ಈ ಎರಡು ಸ್ಥಲಗಳಲ್ಲಿ ಸಾಧಕನು ಅವಧಾನ ಮತ್ತು ಅನುಭವ ಭಕ್ತಿಗಳಿಂದ ಕೂಡಿಕೊಂಡವನು ಆಗಿರುತ್ತಾನೆ. ಈ ಪ್ರಾಣ ಲಿಂಗಾರ್ಚನೆಯನ್ನು ಸರ್ವರು ಮಾಡಬಹುದು. ಇದಕ್ಕಾಗಿ ವಿವೇಕ, ವೈರಾಗ್ಯಾದಿ ಗುಣಗಳನ್ನು ಸಂಪಾದಿಸುವುದೊಂದೇ ಗುರಿ. ಈ ಗುರಿಯನ್ನು ಯಾರು ತಲುಪುವರೋ ಅವರೆಲ್ಲರೂ ಪ್ರಾಣ ಲಿಂಗಾರ್ಚನೆಗೆ ಸಮರ್ಥನಾಗುವರು ಎಂದು ಅವರು ಹೇಳಿದರು.

---

10 ಕನ್ನಡಪ್ರಭ, ಬೆಳಗಾವಿ

ದಿನಚರಿ

ಧರ್ಮ ಜ್ಯೋತಿ



ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ನೆಮ್ಮದಿಯ ಬದುಕಿಗೆ ಶಾಂತರಸ

ರಸವೆಂಬ ಶಬ್ದವನ್ನು ಕೇಳಿದಾಗ ಷಡ್‌ರಸಗಳು ಹಾಗೂ ನವರಸಗಳ ನೆನಪು ಸರ್ವ ಮನಸ್ಸಿನಲ್ಲಿ ಬಾರದೇ ಇರದು. ಮಧುರು(ಸಿಹಿ), ಪಿತ್ತ(ಖಾರ), ಕಟು(ಕಹಿ), ಕಷಾಯ (ಒಗರು)–ಇವುಗಳು ಷಡ್‌ರಸಗಳು.ಶೃಂಗಾರ,ವೀರ, ಕರುಣ, ಹಾಸ್ಯ, ಭಯಾನಕ, ಬೀಭತ್ಸ್ಯ, ರೌದ್ರ ಮತ್ತು ಶಾಂತಿ ಇವು ನವರಸಗಳು. ರಸಗಳಲ್ಲಿ ಶಾಂತರಸವನ್ನು ಹೊರತುಪಡಿಸಿ ಉಳಿದ ಎಲ್ಲಾ ರಸಗಳು ನಮಗೆ ಕೆಲವೊಮ್ಮೆ ಬೇಕೆನಿಸಿ ಮತ್ತೊಮ್ಮೆ ಬೇಡವೆನಿಸುತ್ತದೆ. ಆದರೆ ಶಾಂತರಸವು ಮಾತ್ರ ಅದೆಂದೂ ಯಾರಿಗೂ ಬೇಸರಿಕೆ ಉಂಟು ಮಾಡುವುದಿಲ್ಲ. ಈ ಮಾತನ್ನು ಕಾವ್ಯಶಾಸ್ತ್ರದ ಭಾಷೆಯಲ್ಲಿ ಹೇಳುವುದಾದರೆ ಶಾಂತರಸವೊಂದೇ ಸ್ಥಾಯಿಭಾವವುಳ್ಳದ್ದು,ಉಳಿದವುಗಳೆಲ್ಲ ಸಂಚಾರಿಭಾವದವುಗಳು. ನಾವು ಷಡ್‌ರಸಗಳನ್ನು ಅನುಭವಿಸುವಾಗ ಸಿಹಿ ಬೇಸರಾದಾಗ ಖಾರವನ್ನು, ಅದು ಬೇಡವಾದಾಗ ಕಹಿಯನ್ನು ,ಅದು ಬೇಡವಾದಾಗ ಕಷಾಯವನ್ನು ಇದೇ ರೀತಿಯಾಗಿ ಲವಣ ಆಮ್ಲದ ಪದಾರ್ಥಗಳನ್ನು ಬದಲಿಸುತ್ತೇವೆ. ಇಂದು ವಿಶ್ವದ ಎಲ್ಲಾ ರಾಷ್ಟ್ರಗಳೂ ಮಹಾಯುದ್ಧಗಳ ಭೀತಿಯಿಂದ ಅಪೇಕ್ಷಿಸುತ್ತಿರುವ ರಸವೇ ಶಾಂತರಸ. ಈ ರಸವು ಎಲ್ಲಾ ರಾಷ್ಟ್ರಗಳಿಗೆ ಮನಸಾ ಬೇಕೆನಿಸಿದಾಗ ಸೃಷ್ಟಿಯ ವಿಧ್ವಂಸಕಾರಿಗಳಾದ ಮಹಾಯುದ್ಧಗಳು ನಿಂತು ಹೋಗಿ ವಿಶ್ವದ ತುಂಬೆಲ್ಲ ಶಾಂತಿ ಸ್ಥಾಪಿತವಾಗುವುದು. ನಮ್ಮ ದೇಶದ ಮಹರ್ಷಿಗಳು ತಮ್ಮ ಪ್ರಾರ್ಥನೆಯ ಕೊನೆಗೆ ಶಾಂತಿಃ, ಶಾಂತಿಃ, ಶಾಂತಿಃ ಎಂದು ಶಾಂತಿಯ ಪಠಣವನ್ನು ಮಾಡಿರುತ್ತಾರೆ. ಮನಸ್ಸಿನಲ್ಲಿ ಯಾವುದೇ ವಿಕಾರ ಭಾವನೆಗಳು ಇಲ್ಲದಿರುವಾಗ ಶಾಂತರಸ ಉತ್ಪನ್ನವಾಗುವವು. ವಿಭಿನ್ನ ಪ್ರಸಂಗಗಳಲ್ಲಿ ಉಂಟಾಗುತ್ತಿರುವ ಈ ನವರಸಗಳನ್ನು ನಮ್ಮ ಮನಸ್ಸು ಆಗಾಗ ಅನುಭವಿಸುತ್ತಲೇ ಇರುತ್ತದೆ. ಆದರೆ ಶಾಂತರಸವು ಮಾತ್ರ ಸ್ಥಾಯೀರಸವೆಂದು ಕರೆಯಲ್ಪಡುವುದು. ಶಾಂತಿಯು ಎಲ್ಲರಿಗೂ ಯಾವ ಕಾಲಕ್ಕೂ ಬೇಕೆನಿಸುವುದು. ನಾವು ಹೇಳಿದ ಷಡ್‌ರಸಗಳನ್ನೇ ಆಗಲಿ ಅಥವಾ ಈ ನವರಸಗಳನ್ನೇ ಆಗಲಿ ಅನುಭವಿಸುವ ಕಾರಣ,ಮನಸ್ಸಿಗೆ ಶಾಂತಿ ಮತ್ತು ಸಮಧಾನಗಳು ದೊರೆಯಲೆಂಬುದೇ ಆಗಿದೆ. ಆದರೆ ಅವುಗಳ ಸೇವನೆಯಿಂದ ದೊರೆಯುವ ಶಾಂತಿ ಸಮಧಾನಗಳು ಕ್ಷಣಿಕ. ಅಂತೆಯೇ ಯೋಗಿಗಳು, ಜ್ಞಾನಿಗಳು, ಮನಸ್ಸಿನಲ್ಲಿ ಉಂಟಾಗುವ ಕ್ಷಣಿಕ ವೃತ್ತಿಗಳನ್ನು ತಡೆದು ತನ್ನಆತ್ಮಸ್ವರೂಪವಾದ ಶಾಂತರಸವನ್ನು ಅನುಭವಿಸಬೇಕೆಂದು ಉಪದೇಶಿಸಿದ್ದಾರೆ. 'ರಸೋವೈಸಃ'ಎಂಬ ಉಪನಿಷತ್ತಿನ ವಾಕ್ಯವು ಪರಮಾತ್ಮನೇ ನಿಜವಾದ ರಸರೂಪನು, ಈ ರಸವೇ ಶಾಂತರಸವು ಅದನ್ನು ಪಡೆಯಬೇಕಾದರೆ ಉಳಿದೆಲ್ಲ ರಸಗಳ ಆಸೆ–ಆಮಿಷಗಳನ್ನು ನೀಗಿ ನಿರ್ವಿಕಾರ ಸ್ಥಿತಿಯಲ್ಲಿದ್ದಾಗ ನಮ್ಮ ಆತ್ಮ ಪರಮಾತ್ಮರೂಪವಾದ ಈ ಶಾಂತರಸವನ್ನು ಅನಂತ ಕಾಲದವರೆಗೆ ಅನುಭವಿಸಬಹುದು. ಇದುವೇ ಆತ್ಮಾನಂದ ಭೂತಿಯು, ಇದನ್ನು ಅನುಭವಿಸುವ ಸಾಧನೆಯಲ್ಲಿ ತೊಡಗಿದಾಗ ವಿಶ್ವದಲ್ಲಿ ಶಾಂತಿಯು ಸ್ಥಾಪನೆಯಾಗುವುದು.

10 ಕನ್ನಡಪ್ರಭ, ಬೆಂಗಳೂರು

ದಿನಚರಿ



ಧರ್ಮ ಜ್ಯೋತಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ಮಠ ಮಂದಿರಗಳ ಸುತ್ತಮುತ್ತ

ಪ್ರತಿಯೊಂದು ನಗರ ಮತ್ತು ಗ್ರಾಮಗಳಲ್ಲಿ ಮಠ ಹಾಗೂ ಮಂದಿರಗಳು ಇರುವುದನ್ನು ಕಾಣುತ್ತೇವೆ. ಮಠ ಮಂದಿರಗಳೆಂದರೆ ಊರಿನ ಜನರಿಗೆ ಉತ್ತಮ ಸಂಸ್ಕಾರವನ್ನು ಕೊಡುವ ಕೇಂದ್ರಗಳಿದ್ದಂತೆ. ಹಿಂದಿನ ಕಾಲದಲ್ಲಿ ಮಕ್ಕಳಿಗೆ ಅಕ್ಷರ ಶಿಕ್ಷಣವನ್ನು ಕೊಡುವ ರೂಢಿಯು ಇದ್ದದ್ದನ್ನು ನಾವು ನೋಡಬಹುದು. ಅಮರಕೋಶದಲ್ಲಿ 'ಮಠಸ್ತು ಛಾತ್ರಾದಿ ನಿಲಯ' ಎಂಬುದಾಗಿ ಹೇಳುವುದರ ಮೂಲಕ ವಿದ್ಯಾರ್ಥಿಗಳ ವಾಸಸ್ಥಾನವೇ ಮಠವೆಂಬುದಾಗಿ ಸಮರ್ಥಿಸಿದ್ದಾನೆ. ವ್ಯಾಸ ಮಹರ್ಷಿಯ ಮಠ ಮಂದಿರಗಳಿಲ್ಲದ ಗ್ರಾಮಕ್ಕೆ ಧಿಕ್ಕಾರ ಎಂಬುದಾಗಿ ಹೇಳುವುದರ ಮೂಲಕ ಪ್ರತಿಯೊಂದು ಗ್ರಾಮ ನಗರಳಿಗೆ ಮಠ ಮಂದಿರಗಳು ಅವಶ್ಯವಾಗಿ ಬೇಕೆಬೇಕೆಂಬುದಾಗಿ ಒತ್ತಿ ಹೇಳುವದನ್ನು ಕಾಣುತ್ತೇವೆ. ಗುರುಗಳ ನಿತ್ಯ ನಿವಾಸ್ಥಾನಕ್ಕೆ ಮಠವೆಂದು ಕರೆದರೆ, ದೇವರ ನಿತ್ಯ ನಿವಾಸಸ್ಥಾನಕ್ಕೆ ಮಂದಿರ ಎಂಬುದಾಗಿ ಕರೆಯುವರು. ನಮ್ಮ ದೈನಂದಿನ ಬದುಕಿನಲ್ಲಿ ಗುರು ಮತ್ತು ದೇವರು ಅವಶ್ಯವಾಗಿ ಬೇಕೇಬೇಕು. ಮನುಷ್ಯನು ತನ್ನ ಬದುಕಿನಲ್ಲಿ ಏನನ್ನೇ ಸಾಧಿಸಲಿ ಅಥವಾ ಸಾಧಿಸದೇ ಇರಲಿ, ಆದರೆ ಒಬ್ಬ ಸದ್ಗುರುವಿನ ಶಿಶ್ಯತ್ವವನ್ನು ಮತ್ತು ಒಂದು ಇಷ್ಟ ದೇವರ ಭಕ್ತತ್ವವನ್ನು ಅವಶ್ಯವಾಗಿ ಸಂಪಾದಿಸಬೇಕು. ದೇವರಲ್ಲಿ ಭಕ್ತಿ ಇಲ್ಲದ, ಸದ್ಗುರುವಿನ ಶಿಷ್ಯನಾಗದ ಮನುಷ್ಯನ ಬದುಕು ಎಂದರೆ ವ್ಯರ್ಥ ಬದುಕು ಇದ್ದಂತೆ. ನಮ್ಮ ದೈನಂದಿನ ವ್ಯವಹಾರಗಳಲ್ಲಿ ಸುಖಕ್ಕಿಂತಲೂ ದುಃಖಾನುಭೂತಿ ಹೆಚ್ಚಾಗಿರುತ್ತದೆ. ಈ ದುಃಖವನ್ನು ನಾವು ಕಡಿಮೆ ಮಾಡಿಕೊಳ್ಳಬೇಕಾದರೆ ಅದನ್ನು ಯಾರ ಮುಂದಾದರೂ ಹೇಳಿಕೊಳ್ಳಬೇಕು. ಎಲ್ಲರ ದುಃಖಗಳನ್ನು ಕೇಳುವವರೆಂದರೆ ಒಬ್ಬ ಗುರು, ಇನ್ನೊಬ್ಬ ದೇವರು. ಅಂತೆಯೇ ದುಃಖ ತಪ್ತರಾದ ಜನರು ದೇವಾಲಯಗಳಿಗೆ ಹೋಗಿ ದೇವರ ಮುಂದೆ ಮೌನವಾಗಿ ನಿವೇದಿಸಿಕೊಂಡು ಹಗುರಾದ ಮನಸ್ಸಿನಿಂದ ಮನೆಗೆ ಬರುತ್ತಾರೆ. ದೇವಾಲಯಗಳಲ್ಲಿ ನಾವು ಹೇಳುವುದನ್ನು ದೇವರು ಮೌನವಾಗಿ ಕೇಳುತ್ತಿರುತ್ತಾನೆಯೇ ವಿನಃ ಅದಕ್ಕೆ ಪ್ರತಿಯಾಗಿ ತತ್ಕಾಲದಲ್ಲಿಯೇ ಯಾವ ಉತ್ತರವನ್ನೂ ಕೊಡುವುದಿಲ್ಲ. ಇನ್ನು ಮಠಗಳೆಂದರೆ ಪ್ರತ್ಯಕ್ಷವಾಗಿ ನಮ್ಮೊಂದಿಗೆ ಮಾತನಾಡುವ ಗುರುವಿನ ನಿತ್ಯ ನಿವಾಸವು. ಇಲ್ಲಿಗೆ ಹೋದಾಗ ನಮ್ಮ ಸಮಸ್ಯೆಗೆ ಜನರು. ತತ್‌ಕ್ಷಣದಲ್ಲಿಯೇ ಪರಿಹಾರವನ್ನು ಪಡೆದು ಸಮಾಧಾನಿಯಾಗುತ್ತಾರೆ. ಹೀಗೆ ನಮ್ಮ ದೇಶದ ಪ್ರತಿಯೊಂದು ನಗರ–ಗ್ರಾಮಗಳಲ್ಲಿ ಇರುವ ಮಠ–ಮಂದಿರಗಳು ಜನರ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವ ಕೇಂದ್ರಗಳಾಗಿದ್ದರಿಂದ ಅನಂತ ಸಮಸ್ಯೆಗಳ ಸುಳಿಯಲ್ಲಿ ನಾವು ಸಿಲುಕಿಕೊಂಡಿದ್ದರೂ ಬುದ್ಧಿಯ ತಾಳ್ಮೆಯನ್ನು ಕಳೆದುಕೊಂಡಿರುವುದಿಲ್ಲ. ಮಠ ಮಂದಿರಗಳನ್ನು ಹಾಳು ಮಾಡಬೇಕೆನ್ನುವ ವಿಕ್ಷಿಪ್ತ ವಿಚಾರಿಕ್ಕಿಂತಲೂ ಅವುಗಳಲ್ಲಿ ಸುಧಾರಣೆಯನ್ನು ಮಾಡಿ ಅವುಗಳ ಉಪಯೋಗವನ್ನು ಹೆಚ್ಚಿಸುವುದು ಜನಕಲ್ಯಾಣಕಾರಕವಾಗಿರುತ್ತದೆ.

10 ಕನ್ನಡಪ್ರಭ, ಬೆಳಗಾವಿ

ದಿನಚರಿ



ಧರ್ಮ ಜ್ಯೋತಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿ
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ.

ಒಂದು ಮರ ಹತ್ತು ಪುತ್ರರಿಗೆ ಸಮ

ದೇವನಿರ್ಮಿತವಾದ ಭೂ–ಭೌತಿಕ ಪ್ರಪಂಚವೆಲ್ಲವೂ ಒಂದು ವಿಶಾಲವಾದ ಪರಿಸರ.ಸಾಮಾನ್ಯವಾಗಿ ಮನುಷ್ಯನನ್ನು ಬಿಟ್ಟು ಎಲ್ಲ ಪ್ರಾಣಿಗಳು ಕೃತ್ರಿಮತೆ ಇಲ್ಲದೆ ಸಹಜವಾಗಿ ಬದುಕುತ್ತವೆ. ಹೀಗಾಗಿ ಅವುಗಳಿಂದ ಪರಿಸರದ ಮಾಲಿನ್ಯತೆ ಉಂಟಾಗುವುದಿಲ್ಲ. ಮನುಷ್ಯನು ಬುದ್ಧಿಜೀವಿ, ತನಗೆ ತಿಳಿದ ದಿಶೆಯಲ್ಲಿ ಏನನ್ನಾದರೂ ಕೃತ್ರಿಮ ಸೃಷ್ಟಿಯನ್ನು ಮಾಡುತ್ತಲೇ ಇರುತ್ತಾನೆ. ಇಂದು ನಾವು ಬಳಸುತ್ತಿರುವ ವಾಹನಗಳಿಂದಾಗಿ ಮತ್ತು ಉದ್ಯೋಗಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಕಾರ್ಖಾನೆಗಳ ಮೂಲಕವಾಗಿ ನಾವು ನಮ್ಮ ಪರಿಸರದಲ್ಲಿಯ ಅತ್ಯಂತ ಜೀವನೋಪಯೋಗಿಗಳಾದ ಜಲ ಹಾಗೂ ವಾಯುಗಳನ್ನು ಪ್ರದೂಷಿಸುತ್ತ ನಡೆದಿರುವೆವು. ಇದೊಂದು ಅಪಾಯಕಾರಿ ಬೆಳವಣಿಗೆ. ಪ್ರತಿಯೊಂದು ಜೀವಯ ಬದುಕಿಗೆ ಅನ್ನ, ನೀರು ಮತ್ತು ಹವೆಗಳು ಅವಶ್ಯವಾಗಿ ಬೇಕಾಗುತ್ತದೆ. ನಾವು ಸೇವಿಸುವ ಈ ಜೀವನಾವಶ್ಯಕ ವಸ್ತುಗಳು ಶುದ್ಧವಾಗಿದ್ದರೆ ಮಾತ್ರ ನಾವು ನೆಮ್ಮದಿಯಿಂದ ಬದುಕಬಹುದು. ನಾವು ವಾಸಿಸುವ ಈ ಪರಿಸರದಲ್ಲಿ ಪರಮಾತ್ಮನು ಪರಿಸರದ ಪರಿಶುದ್ಧಿಗಾಗಿ ಅನೇಕ ವನಸ್ಪತಿಗಳನ್ನು, ಗಿಡ–ಮರಗಳನ್ನು ಸೃಷ್ಟಿಸಿದ್ದಾನೆ. ಇವುಗಳು ಈ ಪರಿಸರದಲ್ಲಿ ಉಂಟಾಗುವ ಅಶುದ್ಧವಾದ ಹವೆಯನ್ನು ಸ್ವೀಕರಿಸಿ ಶುದ್ಧವಾದ ವಾಯುವನ್ನು ನೀಡುತ್ತಿವೆ. ಈ ಗಿಡ ಮರಗಳು ಪ್ರಾಣವಾಯುವನ್ನು ನಿರ್ಮಾಣ ಮಾಡುವ ನೈಸಗಿಕ ಕಾರ್ಖಾನೆಗಳು. ಅಂತೆಯೇ ನಾವು ಬದುಕುವ ಪರಿಸರದಲ್ಲಿ ವೃಕ್ಷಗಳನ್ನು ನೆಡುವ ಹಾಗೂ ಬೆಳೆಸುವ ಒಂದು ಉತ್ತಮ ಅಭ್ಯಾಸವನ್ನು ಅವಶ್ಯವಾಗಿ ರೂಢಿಸಿಕೊಳ್ಳಬೇಕು. ಈ ಪರಿಸರದ ಪರಿಜ್ಞಾನುವುಳ್ಳ ವ್ಯಾಸ ಮಹರ್ಷಿಯು 'ದಶಪುತ್ರ ನಮೋ ದ್ರುಮಾಃ' ಎಂಬುದನ್ನು ಹೇಳಿದ್ದಾನೆ. ಅಂದರೆ ಒಂದು ಮರವು ಹತ್ತು ಪುತ್ರರಿಗೆ ಸಮಾನವಾಗಿರುತ್ತದೆ. ಪ್ರಾತಃ ಕಾಲದಲ್ಲಿ ಸೂರ್ಯೋದಯಕ್ಕಿಂತಲೂ ಮೊದಲು ಗಿಡಗಳನ್ನು ಪೂಜಿಸುವ ನಿಮಿತ್ತವಾಗಿ ಅವುಗಳ ಸಮೀಪಕ್ಕೆ ಹೋದಾಗ ಅವುಗಳಿಂದ ಸಿಗುವ ಪರಿಶುದ್ಧವಾದ ಪ್ರಾಣವಾಯುವನ್ನು ಪ್ರತಿನಿತ್ಯ ಸೇವಿಸುವುದರಿಂದ ಆರೋಗ್ಯದಲ್ಲಿ ಸುಧಾರಣೆಯಾಗಿ ಸಂತಾನೋತ್ಪತ್ತಿ ಶಕ್ತಿಯನ್ನು ಪಡೆದುಕೊಳ್ಳಲು ಸಾಧ್ಯಾವಾಗುತ್ತದೆ.ನಮಗೆ ಜನಿಸಿದ ಮಕ್ಕಳು ನಮ್ಮ ಜೀವನಕ್ಕೆ ಉಪಯುಕ್ತರಾಗುವರೋ ಇಲ್ಲವೋ ಹೇಳಲಾಗುವುದಿಲ್ಲ. ಆದರೆ ನಾವು ಹಚ್ಚಿ ಬೆಳೆಸಿದ ಗಿಡವು ನಮಗಷ್ಟೇ ಅಲ್ಲ, ನಮ್ಮ ಪರಿಸರದಲ್ಲಿಯ ಎಲ್ಲರಿಗೂ ಪ್ರಾಣವಾಯು ಕೊಟ್ಟು ಸಂರಕ್ಷಿಸುತ್ತದೆ. ಆ ಹಿನ್ನೆಲೆಯಲ್ಲಿ ವ್ಯಾಸ ಮಹರ್ಷಿಯು ಒಂದು ಮರವು ಹತ್ತು ಪುತ್ರರಿಗೆ ಸಮಾನ ಎಂಬುದಾಗಿ ನಮ್ಮ ದೇಶದ ಪ್ರಾಚೀನ ಮಹರ್ಷಿಗಳು ಗಿಡಗಳ ಬಗ್ಗೆ ಪೂಜ್ಯತಾ ಭಾವನೆಯನ್ನು ಹುಟ್ಟಿಸುವುದರ ಮೂಲಕ ಪರಿಸರದ ಸಂರಕ್ಷಣೆಯ ಉಪಾಯವನ್ನು ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಬೋಧಿಸಿರುವುದನ್ನು ಕಾಣುತ್ತೇವೆ. ನಮ್ಮ ದೈನಂದಿನ ಉಪಯೋಗಕ್ಕಾಗಿ ಮರಗಳನ್ನು ಹಾಳುಮಾಡುತ್ತ ಹೋದರೆ ನಾವು ನಮ್ಮನ್ನೇ ಹಾಳುಮಾಡಿಕೊಂಡಂತೆ.

4 ಕನ್ನಡಪ್ರಭ, ಬೆಳಗಾವಿ

ದಿನಚರಿ



ಧರ್ಮ ಜ್ಯೋತಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ಬದುಕಿಗೆ ಬೇಕು ಈ ಮೂರು ರತ್ನಗಳು

ರತ್ನವೆಂಬ ಶಬ್ದವನ್ನು ಕೇಳಿದಾಗ ಎಲ್ಲರಿಗೂ ನೆನಪಿಗೆ ಬರುವುದು ಮಾಣಿಕ್ಯಾದಿ ರತ್ನಗಳು. ಒಬ್ಬ ತತ್ವಜ್ಞಾನಿಯು ನವರತ್ನಗಳಿಗೆ ರತ್ನಗಳು ಎಂದು ಕರೆಯದೆ ಪಾಷಾಣ ಖಂಡ(ಕಲ್ಲಿನ ಚೂರು)ಗಳೆಂಬುದಾಗಿ ಹೇಳುವುದರ ಮೂಲಕ ಅವುಗಳಿಗೆ ಅಷ್ಟೊಂದು ಮಹತ್ವವನ್ನು ಕೊಡದೆ ಮನುಷ್ಯನ ಸುಖಮಯ ಬದುಕಿಗೆ ಕಾರಣಗಳಾದ 1. ನೀರು, 2. ಆಹಾರ, 3. ಸುಭಾಷಿತಗಳೇ ಮೂರು ದಿವ್ಯರತ್ನಗಳೆಂಬುದಾಗಿ– "ಪೃಥಿವ್ಯಾ ತ್ರೀಣಿ ರತ್ನಾನಿ ಜಲಮನ್ನಂಸುಭಾಷಿತಮ್, ಮೂಢೈಃ ಪಾಷಾಣ ಖಂಡೇಷು ರತ್ನಸಂಜ್ಞಾನ ಭಾಧೀಯತೆ" ಹೇಳಿದ್ದಾನೆ. ಈ ತತ್ವಚಿಂತಕನ ದೃಷ್ಟಿಯಲ್ಲಿ ಮಾಣಿಕ್ಯಾದಿಗಳಿಗೆ ರತ್ನವೆಂಬುದಾಗಿ ಕರೆಯುವವರು ಮೂಢರಾಗಿ ತೋರುತ್ತಾರೆ. ಪ್ರತಿಯೊಬ್ಬ ಮನುಷ್ಯನ ಸುಖಮಯವಾದ ಬದುಕಿಗೆ ಮೇಲಿನ ನವರತ್ನಗಳು ಬೇಕೆ ಬೇಕು ಎನ್ನುವ ನಿರ್ಬಂಧವೇನೂ ಇರುವುದಿಲ್ಲ. ಆದರೆ ಪ್ರತಿಯೊಬ್ಬರಿಗೂ ಕುಡಿಯಲು ನೀರು, ಉಣ್ಣಲು ಅನ್ನ ಹಾಗೂ ಮನಸ್ಸನ್ನು ಸಮಧಾನಗೊಳಿಸಲು ಉತ್ತಮ ಸುಭಾಷಿತಗಳು ಮಾತ್ರ ಅವಶ್ಯವಾಗಿ ಬೇಕಾಗುತ್ತವೆ. ದೇವರು ನಮಗೆ ಎರಡು ಹೊಟ್ಟೆಗಳನ್ನು ಕೊಟ್ಟಿರುತ್ತಾನೆ. ಮೊದಲನೆಯದು ಅನ್ನ ನೀರುಗಳಿಂದ ತುಂಬಲ್ಪಟ್ಟರೆ, ಇನ್ನೊಂದು ಸುವಿಚಾರಗಳಿಂದ ತುಂಬಲ್ಪಡುತ್ತದೆ. ಇವೆರಡು ತುಂಬಿದಾಗ ಮಾತ್ರ ನಾವು ಸಂತೃಪ್ತಿ ಹಾಗೂ ಸಮಧಾನದಿಂದ ಇರಲು ಸಾಧ್ಯವಾಗುವುದು. ಇದು ಅಲ್ಲದೆ ಇಲ್ಲಿರುವ ಇನ್ನೊಂದು ರಹಸ್ಯವೇನೆಂದರೆ ನಮ್ಮೊಳಗೆ ಪ್ರವೇಶ ಮಾಡಲು ಈ ಮೂರಕ್ಕ ಮಾತ್ರ ಸಾಧ್ಯವಾಗುತ್ತದೆ. ನೀರಡಿಸಿದಾಗ ನಾವು ನೀರು ಕುಡಿಯುತ್ತೇವೆ. ಮತ್ತು ಹಸಿವೆ ಆದಾಗ ಅನ್ನವನ್ನು ಗ್ರಹಿಸುತ್ತೇವೆ. ಇವೆರಡು ನಮ್ಮ ಉದರವನ್ನು ಪ್ರವೇಶಿಸಿ, ಒಳಗಿನ ಖಾಲಿ ಜಾಗವನ್ನು ತುಂಬಿಕೊಂಡಾಗ ಮನುಷ್ಯನು ಸಂತೃಪ್ತನಾಗಿ ಸಾಕು ಎಂಬ ಶಬ್ದವನ್ನು ಪ್ರಯೋಗಿಸುತ್ತಾನೆ. ಇದೇ ತೆರನಾಗಿ ನಾವು ಎಲ್ಲಿಯಾದರೂ ಸತ್ಸಂಗಾದಿಗಳಲ್ಲಿ ಭಾಗಿಯಾದಾಗ ಅಲ್ಲಿಯ ಸಂತರ ಸುವಿಚಾರಗಳನ್ನು ಒಂದು ತಾಸಿನವರೆಗೆ ಅಥವಾ ಅದಕ್ಕೂ ಹೆಚ್ಚು ಕಾಲ ಕೇಳುತ್ತಾ ಕುಳಿತಾಗ ಆ ಶಬ್ದಗಳು ನಮ್ಮ ಮನೋಬುದ್ಧಿಯಲ್ಲಿ ತುಂಬುತ್ತ ಹೋಗಿ ಸಂತೃಪ್ತಿಯಾಗಿ ಇಂದು ಇಷ್ಟೇ ಸಾಕು ಎಂಬ ಭಾವನೆಯು ಸರ್ವರಲ್ಲಿ ಒಡಮೂಡುತ್ತದೆ. ಈ ಮೂರನ್ನು ಹೊರತುಪಡಿಸಿ ಬೇರೆ ಯಾವ ಮನುಷ್ಯನಿಗೇ ಆಗಲಿ ಬೇರೆ ಏನನ್ನೇ ಕೊಟ್ಟರೂ ಸಾಕು ಎನ್ನುವ ಸಂತೃಪ್ತಿಯ ಶಬ್ದವೂ ಹೊರಬರುವುದಿಲ್ಲ. ಒಬ್ಬ ಮನುಷ್ಯನಿಗೆ ಅದೆಷ್ಟು ಭೂಮಿ–ಸೀಮೆಗಳು ಮತ್ತು ಐಶ್ವರ್ಯಾದಿಗಳನ್ನು ಕೊಟ್ಟಾಗಲೂ ಸಂತೃಪ್ತಿ ಏಕಾಗುವುದಿಲ್ಲ ಎಂಬುದನ್ನು ವಿಚಾರಿಸಿದಾಗ ನಮಗೆ ದೊರೆತ ಭೂಮಿ–ಸೀಮೆಗಳಾಗಲಿ ಅಥವಾ ಧನ–ಕನಕಾದಿಗಳಾಗಲಿ ಅನ್ನ–ನೀರುಗಳಂತೆ ನಮ್ಮೊಳಗೆ ಪ್ರವೇಶಿಸುವುದಿಲ್ಲ. ಅವು ಎಷ್ಟೇ ಇದ್ದರೂ ಹೊರಗೆ ಇರುವುದರಿಂದ ಅವುಗಳಿಂದ ಯಾರಿಗೂ ಸಂತೃಪ್ತಿಯಾಗುವುದಿಲ್ಲ.

12 ಕನ್ನಡಪ್ರಭ, ಬೆಳಗಾವಿ

ದಿನಚರಿ



ಧರ್ಮ ಜ್ಯೋತಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ಮಾತು ಬಲ್ಲವ ಮಾಣಿಕ್ಯ ತಂದ

ಮನುಷ್ಯನ ಸಾಮಾಜಿಕ ಪ್ರಾಣಿ. ಅವನು ತನ್ನ ಬದುಕನ್ನು ಸುಗಮವಾಗಿ ಸಾಗಿಸಿಕೊಳ್ಳಲು ಅನೇಕ ಜನರೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಈ ಸಂಬಂಧಗಳ ಬೆಳವಣಿಗೆಗೆ ಕೊಡುವ ಮತ್ತು ಕೊಳ್ಳುವ ವ್ಯವಹಾರಗಳ ಜೊತೆಗೆ ನಾವು ಬಳಸುವ ಮಾತುಗಳು ಸಹ ಮಹತ್ವದ ಕಾರಣಗಳಾಗಿರುತ್ತವೆ. 'ಮಾತು ಬಲ್ಲವ ಮಾಣಿಕ್ಯ ತಂದ. ಮಾತು ಬಾರದವ ಜಗಳ ತಂದ' ಎಂಬ ನಾಡುನುಡಿಯು ಇಬ್ಬರು ವ್ಯಕ್ತಿಗಳ ನಡುವಣ ಮಿತ್ರತ್ವ ಹಾಗೂ ಶತ್ರುತ್ವ ಸಂಬಂಧಕ್ಕೆ ನಾವು ಬಳಸುವ ಮಾತೇ ಕಾರಣವೆಂಬುದನ್ನು ಸ್ಪಷ್ಟಪಡಿಸುತ್ತದೆ. ವಿನಮ್ರವಾಗಿ, ಮೃದುವಾಗಿ ಮಾತುಗಳನ್ನು ಸದಾ ಬಳಸುವ ವ್ಯಕ್ತಿಯು ತನ್ನ ಜೀವನದಲ್ಲಿ ಯಾರೊಂದಿಗೂ ಶತ್ರುತ್ವವನ್ನು ತಾಳದೇ ಬದುಕಲು ಸಾಧ್ಯವಾಗುತ್ತದೆ. 'ವಾಗ್ವೈ ಜ್ಯೋತಿಃ' ಎಂಬ ಉಪನಿಷತ್ ವಾಕ್ಯವು ಮಾತೆಂಬುದು ದಿವ್ಯಜ್ಯೋತಿ ಎಂಬುದಾಗಿ ವರ್ಣಿಸಿದೆ. ಶರಣರು ಸಹ ಅದನ್ನೇ ಮಾತೆಂಬುದು ಜ್ಯೋತಿರ್ಲಿಂಗ ಎಂಬುದಾಗಿ ಹೇಳಿದ್ದಾರೆ. ಅಂದರೆ ನಾವು ಆಡಿದ ಮಾತುಗಳು ಜ್ಯೋತಿಯಂತೆ ಮತ್ತೊಬ್ಬರ ಬದುಕಿಗೆ ದಿವ್ಯ ಪ್ರಕಾಶವನ್ನು ಉಂಟು ಮಾಡಬೇಕು. ಬದಲಾಗಿ ಬೆಂಕಿಯಂತೆ ಮತ್ತೊಬ್ಬರ ಮನೆ ಮನವನ್ನು ಉರಿಸಬಾರದು. ನಾವು ನಮ್ಮ ವಾಣಿಯ ಮೂಲಕ ನಮ್ಮ ಭಾವನೆಗಳನ್ನು ಪ್ರಕಟಮಾಡುತ್ತಿರುತ್ತೇವೆ. ನಮ್ಮ ಮಾತಿನ ಮೂಲಕ ನಮ್ಮ ಮನೋಬುದ್ಧಿಗಳಲ್ಲಿ ಅವಿವೇಕವು ಆಕ್ರಮಿಸಬಾರದು. ಅವಿವೇಕ ಮೂಲಕವಾಗಿ ಕ್ರೋಥಾದಿ ಭಾವನೆಗಳಿಂದ ಶಬ್ದಗಳನ್ನು ಹೊರಗೆಡವಿದಾಗ ಅದು ಶಸ್ತ್ರೋಪಾದಿಯಾಗಿ ಇಲ್ಲವೇ ಅಗ್ನಿಯೋಪಾದಿಯಾಗಿ ಹೊರಬಂದು ತತ್ ಕ್ಷಣದಲ್ಲಿಯೇ ಮಹಾನ್ ಅನರ್ಥವನ್ನು ಉಂಟು ಮಾಡುತ್ತದೆ. ಶಸ್ತ್ರದಿಂದ ಒಬ್ಬನ ದೇಹದ ಮೇಲೆ ಗಾಯವನ್ನು ಮಾಡಿದರೆ ಅಥವಾ ಅಗ್ನಿಯಿಂದ ದೇಹದ ಯಾವುದೇ ಅವಯವಗಳು ಸುಟ್ಟರೆ ಶಸ್ತ್ರದ ಹಾಗೂ ಸುಟ್ಟ ಗಾಯಗಳನ್ನು ಔಷಧೋಪಚಾರದಿಂದ ಕೆಲವೇ ದಿನಗಳಲ್ಲಿ ಸರಿಪಡಿಸಬಹುದು. ಆದರೆ ಶಬ್ದರೂಪಿ ಶಸ್ತ್ರ ಹಾಗೂ ಅಗ್ನಿಯಿಂದ ನಮ್ಮ ಮನಸ್ಸು ಒಮ್ಮೆ ಗಾಯಗೊಂಡರೆ ಅಥವಾ ದಗ್ಧವಾದರೆ ಅದನ್ನೆಂದಿಗೂ ಸರಿಪಡಿಸಲಿಕ್ಕಾಗುವುದಿಲ್ಲ. ಆದ್ದರಿಂದ ಮಾತಿನ ಮೇಲೆ ನಿಯಂತ್ರಣವನ್ನು ಹೊಂದಬೇಕು. ಸದಾ ಮೌನವಾಗಿದ್ದು ಉಪಯುಕ್ತವಾದ ವ್ಯವಹಾರವನ್ನು ಮಾಡುವಾಗ ಮಾತ್ರ ಮನಸ್ಸಿನ ಮೇಲೆ ಸಂಯಮವನ್ನು ಮಾಡಿ ಅತ್ಯಂತ ಸಾವಧಾನ ಮನಸ್ಸಿನಿಂದ ಕಾಪಟ್ಯರಹಿತನಾಗಿ ಮೃದುವಾದ ಹಾಗೂ ಸಿಹಿಯಾದ ಶಬ್ದಗಳನ್ನು ಹೊರಹಾಕುತ್ತಿದ್ದರೆ ನಮ್ಮ ಬದುಕಿನುದ್ದಕ್ಕೂ ಎಂದೂ ಜಗಳ ಬಾರದ ಹಾಗೆ ಆದರ್ಶವಾದ ಬದುಕನ್ನು ಬದುಕಲು ಸಾಧ್ಯವಾಗುವುದು. ಮಾತಿನ ಮರ್ಮವನ್ನು ಸರ್ವಜ್ಞ ಮನೋಜ್ಞವಾಗಿ ಹೀಗೆ ಬಿಡಿಸಿ ಹೇಳಿರುವನು. 'ಮಾತಿನಿಂ ನಡೆನುಡಿಯು, ಮಾತನಿಂ ಹಗೆಕಕೊಲೆಯು,' ಮಾತಿನಿಂ ಸರ್ವಸಂಪದವು ಲೋಕಕ್ಕೆಮಾತೇ ಮಾಣಿಕವು ಸರ್ವಜ್ಞ.

10 ಕನ್ನಡಪ್ರಭ, ಬೆಳಗಾವಿ

ದಿನಚರಿ

ಧರ್ಮ ಜ್ಯೋತಿ



ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ಪ್ರೀತಿ ಬದುಕಿನ ಮಂತ್ರವಾಗಲಿ

ನಮ್ಮ ದೇಶದಲ್ಲಿ ವೃದ್ಧಾಶ್ರಮಗಳು ಹಾಗೂ ಶಿಶುವಿವಾಹಗಳ ಸಂಖ್ಯೆಯು ಬೆಳೆಯುತ್ತಿರುವುದು ಒಂದು ದೃಷ್ಟಿಯಲ್ಲಿ ಸಮಾಧಾನಕರವಾಗಿ ತೋರಿದರೂ ನಮ್ಮ ದೇಶದ ಧರ್ಮ ಮತ್ತು ಸಂಸ್ಕೃತಿಗಳ ಹಿನ್ನೆಲೆಯಲ್ಲಿ ವಿಚಾರ ಮಾಡಿದರೆ ಇದು ಅಷ್ಟೊಂದು ಸರಿಯಾದ ಬೆಳವಣಿಗೆ ಎಂದು ತೋರುವುದಿಲ್ಲ. ನಮ್ಮ ಧರ್ಮ ಮತ್ತು ಸಂಸ್ಕೃತಿಗಳಲ್ಲಿ 'ಮಾತೃದೇವೋಭವ, ಪಿತೃದೇವೋಭವ' ಎಂಬುದಾಗಿ ಉಪದೇಶಿಸಲಾಗಿದೆ. ವಯೋವೃದ್ಧರಾದ ತಂದೆತಾಯಿಗಳನ್ನು ಅತ್ಯಂತ ಭಕ್ತಿ ಆದರಗಳಿಂದ ಸಂರಕ್ಷಿಸುವುದು ಪುತ್ರರ ಪರಮ ಕರ್ತವ್ಯವಾಗಿದೆ. ಇತ್ತೀಚಿನ ದಿನಮಾನಗಳಲ್ಲಿ ಇವು ಲುಪ್ತವಾಗುತ್ತಲಿರುವುದರಿಂದಲೇ ಸಾಮಾಜಿಕ ಸೇವಾ ಸಂಸ್ಥೆಗಳು, ಮಠ ಮಂದಿರಗಳು ವೃದ್ಧಾಶ್ರಮಗಳನ್ನು ಸ್ಥಾಪಿಸಿ ಸಮಾಜದಿಂದ ಅಥವಾ ಸರ್ಕಾರದಿಂದ ನೆರವನ್ನು ಪಡೆದು ವೃದ್ಧರನ್ನು ಸಂರಕ್ಷಿಸುವ ಅತ್ಯಂತ ಶ್ರೇಷ್ಠವಾದ ಮಾನವೀಯ ಕಾರ್ಯಗಳನ್ನು ಮಾಡುತ್ತಿದ್ದಾರೆ. ದಂಪತಿಗಳಿಬ್ಬರೂ ದಿನವಿಡೀ ನೌಕರರಾಗಿ ಕೆಲಸ ಮಾಡುವವರಿಗೆ ಜನಿಸಿದ ಮಕ್ಕಳನ್ನು ಯಾರು ಸಂರಕ್ಷಿಸಬೇಕು? ಎಂಬುದು ಬಹುದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಸರ್ಕಾರವು ಶಿಶು ವಿಹಾರಗಳನ್ನು ತರೆದಿದೆಯಲ್ಲದೆ ಖಾಸಗಿ ಸಂಸ್ಥೆಗಳು ಕಾನ್ವೆಂಟ್ ಶಾಲೆಗಳನ್ನು ಸ್ಥಾಪಿಸಿವೆ. ಇಲ್ಲಿ ಮೂರು ವರ್ಷದಿಂದ ಐದು ವರ್ಷದೊಳಗಿನ ಮಕ್ಕಳನ್ನು ತಮಗೆ ಅನುಕೂಲವಾದ ಶಿಶುವಿಹಾರಗಳಲ್ಲೊ ಅಥವಾ ಕಾನ್ವೆಂಟ್ ಶಾಲೆಗಳಲ್ಲೊ ಸೇರಿಸಿ ತಂದೆ–ತಾಯಿಗಳು ನಿಶ್ಚಿಂತರಾಗುತ್ತಾರೆ. ಮಕ್ಕಳ ಬದುಕಿನಲ್ಲಿ ಮೊದಲಿನ ಐದು ವರ್ಷಗಳು ಅತ್ಯಂತ ಮಹತ್ವಪೂರ್ಣವಾದವುಗಳು. ಅಂತೆಯೇ ಒಬ್ಬ ಸುಭಾಷಿತಕಾರನು 'ಪಂಚವರ್ಷಾಣೇ ಲಾಲಯೇತ್'ಎಂಬುದಾಗಿ ಹೇಳಿದ್ದಾನೆ. ನಮ್ಮ ಮನೆಯಲ್ಲಿ ಹುಟ್ಟಿದ ಮಕ್ಕಳನ್ನು 5 ವರ್ಷಗಳ ಒಳಗೆ ನಾವು ಅತ್ಯಂತ ಪ್ರೀತಿ–ವಾತ್ಸಲ್ಯಗಳಿಂದ ಪಾಲಿಸಬೇಕು. ಆ 5 ವರ್ಷ ಕಾಲಾವಧಿಯಲ್ಲಿ ಆ ಮಗು ತನ್ನ ತಂದೆ ತಾಯಿಗಳ ನಿಕಟದಲ್ಲಿಯೇ ಅಥವಾ ಅಜ್ಜಿ ಅಜ್ಜಂದಿರ ಛತ್ರ–ಛಾಯೆಯಲ್ಲಿಯೇ ಬೆಳೆಯಬೇಕು. ಅಂದಾಗ ಆ ಮಗು ಪರಿಪೂರ್ಣವಾದ ಪ್ರೀತಿ ವಾತ್ಸಲ್ಯಗಳನ್ನು ಅನುಭವಿಸಿ ಬೆಳೆಯುತ್ತದೆ. ಈ 5 ವರ್ಷಗಳ ವರೆಗೆ ಆ ಮಗುವು ಯಾರ ಸಮೀಪದಲ್ಲಿರುತ್ತದೆಯೋ ಅವರನ್ನು ಜೀವನದಲ್ಲಿ ಎಂದೂ ಮರೆಯುವುದಿಲ್ಲ. ಹಣ ಗಳಿಸುವ ಹವ್ಯಾಸದಲ್ಲಿ ತೊಡಗಿದವರು ತಮ್ಮ ವಂಶದ ಭೂತಕಾಲದಂತಿರುವ ಅಜ್ಜಿ ಅಜ್ಜಂದಿರನ್ನು ಮತ್ತು ಬೆಳೆಯುತ್ತಿರುವ ಪುಟ್ಟ ಶಿಶುಗಳನ್ನು ನಿರ್ಲಕ್ಷಿಸಿದರೆ ಮುಂದೊಂದು ದಿನ ತಮಗೂ ಅದೇ ಗತಿಯು ಪ್ರಾಪ್ತವಾಗುವುದು, ಆದ್ದರಿಂದ ನಮ್ಮ ಅನಾವಶ್ಯಕ ಅವಶ್ಯಕತೆಗಳನ್ನು ಕಡಿಮೆ ಮಾಡಿಕೊಂಡು ಸ್ವಲ್ಪವೇ ಹಣದಲ್ಲಿ ಸುಖಮಯ ಜೀವನವನ್ನು ಸಾಗಿಸುವ ಕಲೆಯನ್ನು ಅರಿತು ಆ ಮೂಲಕ ಪರಿವಾರದಲ್ಲಿಯ ಪ್ರತಿಯೊಬ್ಬರೂ ಪರಸ್ಪರ ಪ್ರೀತಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು.

10 ಕನ್ನಡಪ್ರಭ, ಬೆಳಗಾವಿ

ದಿನಚರಿ

ಧರ್ಮ ಜ್ಯೋತಿ



ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ಹರಿಯುವ ನೀರು ಎಲ್ಲಿಯ ತೀರ್ಥ?

ತೀರ್ಥ ಎಂಬ ಶಬ್ದವನ್ನು ಕೇಳಿದಾಗ ಪವಿತ್ರ ನದಿಗಳ ಇಲ್ಲವೇ ಪೂಜ್ಯರ ಚರಣಾಮೃತಕ್ಕೆ ಮಾತ್ರ ಸೀಮಿತಗೊಳಿಸಲಿಕ್ಕಾಗುವುದಿಲ್ಲ. ಗಂಗಾ, ಯಮುನಾ, ಸರಸ್ವತಿ, ಗೋದಾವರಿ, ಸಿಂಧು, ಕಾವೇರಿ, ಕೃಷ್ಣಾ, ನರ್ಮದಾ ಮುಂತಾದ ಪವಿತ್ರ ನದಿಗಳು ಹಾಗೂ ಈ ನದಿಗಳ ಸಂಗಮ ಸ್ಥಾನಗಳು ಮತ್ತು ಸರ್ವ ನದಿಗಳ ಸಂಗಮವಾದ ಸಮುದ್ರವನ್ನು ತೀರ್ಥವೆಂಬುದಾಗಿ ಧರ್ಮಶಾಸ್ತ್ರದಲ್ಲಿ ಪ್ರತಿಪಾದಿಸಲಾಗಿದೆ. ಜನರು ತಮ್ಮ ಪಾಪಾದಿ ದೋಷಗಳನ್ನು ಕಳೆದುಕೊಳ್ಳುವ ಉದ್ದೇಶದಿಂದ ಇಂತಹ ಪವಿತ್ರವಾದ ನದಿಗಳ ಹಾಗೂ ನದಿಗಳ ಸಂಗಮ ಕ್ಷೇತ್ರಗಳಲ್ಲಿ ವಿಶಿಷ್ಟ ಪರ್ವಣಿಗಳೆಂದು ಮಂಗಳ ಸ್ನಾನವನ್ನು ಮಾಡಿ ತಮ್ಮನ್ನು ಪುಣ್ಯ ಜೀವಿಗಳನ್ನಾಗಿ ಭಾವಿಸಿಕೊಳ್ಳುತ್ತಾರೆ. ತೀರ್ಥ ಶಬ್ದವನ್ನು ಇಷ್ಟಕ್ಕೇ ಸಮೀತಿಗೊಳಿಸಿದರೆ ಅದು ಆ ಶಬ್ದದ ಪರಿಪೂರ್ಣ ಅರ್ಥವಾಗುವುದಿಲ್ಲ. ಮಹರ್ಷಿ ಅಗಸ್ತ್ಯನ ಅಭಿಪ್ರಾಯದಂತೆ ಸತ್ಯ, ಸಂತೋಷ, ದಯಾ, ಧ್ಯಾನ, ತಪಸ್ಸು ಮತ್ತು ವೈರಾಗ್ಯಾದಿ ಸದ್ಗುಣಗಳಿಗೆ ಅವರು ತೀರ್ಥ ಎಂಬುದಾಗಿ ಕರೆದಿದ್ದಾರೆ. ನಮ್ಮ ದೈನಂದಿನ ಬದುಕಿನಲ್ಲಿ ಸತ್ಯವನ್ನು ನುಡಿಯಲಾರಂಭಿಸಿದರೆ, ಸದಾ ಸಂತೋಷದಲ್ಲಿ ಇರಲಾರಂಭಿಸಿದರೆ, ಸರ್ವ ಪ್ರಾಣಿಗಳಲ್ಲಿ ದಯಾಭಾವನೆಯನ್ನು ಹೊಂದಿದರೆ,ಆತ್ಮ ಹಾಗೂ ಪರಮಾತ್ಮತರ ಧ್ಯಾನದಲ್ಲಿ ಮಗ್ನರಾದರೆ, ಮಡಬೇಕಾದ ಪರಹಿತ ಕಾರ್ಯವನ್ನು ಅತ್ಯಂತ ಧೈರ್ಯದಿಂದ ಮಾಡಿದರೆ, ಶಾರೀರಿಕ, ವಾಚಿಕ ಮತ್ತು ಮಾನಸಿಕ ತಪಸ್ಸುಗಳನ್ನು ಆಚರಿಸಿದರೆ, ವೈಶೇಖ ವ್ಯಾಮೋಹದಿಂದ ಮುಕ್ತಾನಾಗಿ ವೈರಾಗ್ಯ ವೃತ್ತಿಯಿಂದ ಇರಲಾರಂಭಿಸಿದರೆ ತೀರ್ಥ ಸ್ನಾನ ಮಾಡಿದಷ್ಟೇ ಏಕೆ ಅದಕ್ಕಿಂತಲೂ ಹೆಚ್ಚಿನ ಪುಣ್ಯವನ್ನು ಸಂಪಾದಿಸಬಹುದಾಗಿದೆ. ಆದ್ದರಿಂದ ಇಷ್ಟು ವ್ಯಾಪಕವಾದ ತೀರ್ಥವೆಂಬ ಪದದ ಅರ್ಥವನ್ನು ಅರಿತುಕೊಂಡು ಅದರ ಪ್ರಯೋಜನವನ್ನು ಪಡೆಯಬೇಕಾಗಿದೆ. ಸರ್ವಜ್ಞನು ಕೂಡ, 'ಸತ್ಯದ ನಡೆ ತೀರ್ಥ, ಸತ್ಯದ ನುಡಿ ತೀರ್ಥ ಉತ್ತಮರ ಸಂಗವದು ತೀರ್ಥ, ಹರಿಯುವ ನೀರು ಎತ್ತಣದು ತೀರ್ಥ ಸರ್ವಜ್ಞ' ಎಂದು ತನ್ನು ವಚನದಲ್ಲಿ ತೀರ್ಥದ ಮಹತ್ವವನ್ನು ತಿಳಿಸಿದ್ದಾನೆ. ಸನ್ಮಾರ್ಗದಲ್ಲಿ ನಡೆಯುವುದು ಮತ್ತು ಸಜ್ಜನರ ಸಹವಾಸದಲ್ಲಿರುವುದು ತೀರ್ಥಸ್ನಾನದಷ್ಟೇ ಪಾವಿತ್ರ್ಯತೆಯನ್ನು ತಂದುಕೊಡುತ್ತದೆ ಎಂಬುದಾಗಿ ತಿಳಿಸಿದ್ದಾನೆ. ಈ ಪೂರ್ವದಲ್ಲಿ ಹೇಳಲ್ಪಟ್ಟ ಸತ್ಯ, ಸಂತೋಷ, ದಯಾ ಮುಂತಾದ ಸದ್ಗುಣಗಳು ತೀರ್ಥಗಳಾಗಿರುವುದಲ್ಲದೆ ಆ ಗುಣಗಳನ್ನು ಯಾರು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುತ್ತಾರೆಯೋ ಅವರೆಲ್ಲರೂ ತೀರ್ಥರೂಪರೆಂತಲೇ ಕರೆಯಲ್ಪಡುತ್ತಾರೆ. ಅದಕ್ಕಾಗಿ ತಂದೆ ತಾಯಿಗಳಲ್ಲಿ, ಗುರು–ಹಿರಿಯರಲ್ಲಿ,ಸಾಧು ಸಂತ–ಶರಣರಲ್ಲಿ ತೀರ್ಥ ಬುದ್ಧಿಯನ್ನು ತಾಳಿ ಅವರೊಂದಿಗೆ ಗೌರವದಿಂದ ವ್ಯವಹರಿಸಿದರೆ, ಪವಿತ್ರ ತೀರ್ಥಗಳಲ್ಲಿ ಸ್ನಾನ ಮಾಡಿದ್ದಕ್ಕಿಂತಲೂ ಹೆಚ್ಚಿನ ಪುಣ್ಯವನ್ನು ಸಂಪಾದಿಸಬಹುದು.

10 ಕನ್ನಡಪ್ರಭ, ಶಿವಮೊಗ್ಗ

ದಿನಚರಿ



ಧರ್ಮ ಜ್ಯೋತಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ದುಡಿಮೆಗೆ ತಕ್ಕಂತೆ ಖರ್ಚು ಇರಲಿ

ನಮ್ಮ ಬದುಕಿನ ದೈನಂದಿನ ವ್ಯವಹಾರದಲ್ಲಿ ಹಣವೂ ಒಂದು ಪ್ರಮುಖ ಮಾಧ್ಯಮ. ಜೀವನಾವಶ್ಯಕ ವಸ್ತುಗಳನ್ನು ಖರೀದಿ ಮಾಡುವಾಗ ತಾನು ಸಂಗ್ರಹಿಸಿದ ಹಣವನ್ನು ಖರ್ಚು ಮಾಡಬೇಕಾಗುವುದು. ಹೀಗೆ ಖರ್ಚು ಮಾಡುವ ಪ್ರಸಂಗ ಬಂದರೆ ತನ್ನ ಆದಾಯದ ಎಲ್ಲೆಯನ್ನು ಮೀರಕೂಡದು. ಹಾಗೇನಾದರೂ ಮೈ ಮರೆತು ಮೀರುತ್ತ ಹೋದರೆ ತಲೆಯ ಮೇಲೆ ಸಾಲ ಹೊರೆ ಬರುವುದು ನಿಶ್ಚಿತ. ಅಂತೆಯೇ 'ಹಾಸಿಗೆ ಇದ್ದಷ್ಟು ಕಾಲು ಚಾಚು'ಎಂಬ ನಾಣ್ಣುಡಿ ಪ್ರಸಿದ್ಧವಾಗಿದೆ. ಸಾಮಾನ್ಯವಾಗಿ ನಮ್ಮ ಬದುಕಿನಲ್ಲಿ ನಾವು ಅನ್ಯರ ಮೇಲೆ ನಮ್ಮ ಪ್ರಭಾವವನ್ನು ಬೀರುವುದಕ್ಕಾಗಿ ಜನರ ಮಧ್ಯದಲ್ಲಿ ನಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವುದಕ್ಕಾಗಿ ಕೆಲವೊಂದು ಸಂದರ್ಭಗಳಲ್ಲಿ ಅನಾವಶ್ಯಕವಾಗಿ ಹೆಚ್ಚು ಹೆಚ್ಚು ಖರ್ಚು ಮಾಡುತ್ತ ಹೋಗುತ್ತೇನೆ. ಇದರಿಂದ ಲೋಕದಲ್ಲಿ ತಾತ್ಕಾಲಿಕವಾಗಿ ಪ್ರತಿಷ್ಠೆಯು ಬೆಳೆದಂತೆ ತೋರಿದರೂ ಅದರ ಹಿಂದೆ ನಮ್ಮ ಎಲ್ಲ ಪ್ರತಿಷ್ಠೆಯನ್ನು ಹಾಳು ಮಾಡುವುವ ಸಾಲವೂ ಸಹ ಬೆಳೆಯುತ್ತ ಹೋಗುವುದು. ಕೆಲವಾರು ವರ್ಷಗಳಲ್ಲಿ ಆ ಸಾಲದ ಹಣವೂ ಬಡ್ಡಿಗೆ ಮಹಾ ಬಡ್ಡಿಯಾಗಿ ಬೆಳೆಯುತ್ತ ಬೃಹದಾಕಾರ ತಾಳಿ ಕೊನೆಗೆ ಆ ಸಾಲದ ಸಂಕೋಲೆಯಿಂದ ಪಾರಾಗುವುದೇ ದುಸ್ತರವಾಗುವುದು. ಇಂತಹ ಅನಾವಶ್ಯಕ ಸಾಲದ ಹೊರೆಗೆ ತುತ್ತಾದ ಅನೇಕ ಮನೆತನಗಳು ತಾವು ಪೂರ್ವದಲ್ಲಿ ಗಳಿಸಿದ ಇಲ್ಲವೇ ಪೂರ್ವಜರಿಂದ ತಮಗೆ ಪ್ರಾಪ್ತವಾಗಿದ್ದ ಹೊಲ-ಮ[illegible] ಮಾರಾಟ ಮಾಡಿದರೂ ಆ ಸಾಲದ ಭಾರವು ತೀರದೆ ಮರ್ಯಾದೆಗೆ ಅಂಜಿ ಅ[illegible] ಮಾಡಿಕೊಂಡ ಘಟನೆಗಳು ಬೆಳಕಿಗೆ ಬರುವುದನ್ನು ನೋಡುತ್ತಲಿದ್ದೇವೆ. ಸಾಲ[illegible] ಗಾಗಿ ಅಮೂಲ್ಯ ಜೀವನವನ್ನು ಹಾಳು ಮಾಡಿಕೊಳ್ಳುವುದು ಬುದ್ಧಿವಂತಿಕೆಯ[illegible] ವಲ್ಲ. ಆತ್ಮಹತ್ಯೆ ಮಹಾನ್ ದೋಷವಾಗುತ್ತದೆ. ಲೋಕಾಪವಾದಕ್ಕಾಗಿ ಅ[illegible] ಮಾಡಿಕೊಂಡರೆ ಲೋಕಾಪವಾದದ ಜೊತೆಗೆ ಆತ್ಮಹತ್ಯಾರೂಪವಾದ ದೋ[illegible] ಸಹ ನಮ್ಮನ್ನು ಬೆನ್ನಬಿಡದು. ಜ್ಞಾನಿಗಳು ಈ ಪೂರ್ವದಲ್ಲಿ ಹೇಳಿದಂತೆ ನಮ್ಮ [illegible] ಇತಿ ಮಿತಿಗಳನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡರೆ ಮುಂದಾಗುವ ಅ[illegible] ಳನ್ನು ಸಹಜವಾಗಿ ತಡೆಯಬಹುದು. ಒಂದು ವೇಳೆ ಅನಿವಾರ್ಯ ಕಾರಣಕ್ಕಾಗಿ [illegible] ಗಿದ್ದರೆ ಸಾಲಕ್ಕಾಗಿ ಅಂಜಿ ಪ್ರಾಣಾದಿಗಳನ್ನು ಕಳೆದುಕೊಳ್ಳುವುದು ತರವಲ್ಲ. [illegible] ಸಂದರ್ಭಗಳಲ್ಲಿ ಧೈರ್ಯವನ್ನು ತಾಳಿ ಕಷ್ಟಪಟ್ಟು ದುಡಿದು ಅದನ್ನು ತೀರಿಸಲು[illegible] ತ್ನಿಸಬೇಕಲ್ಲದೆ ಪ್ರಾಣ ಕಳೆದುಕೊಳ್ಳುವ ವಿಚಾರವನ್ನು ಮಾಡಕೂಡದು. ಬ[illegible] ಏನೆಲ್ಲವನ್ನೂ ಸಾಧಿಸುವ ಹಾಗೂ ಸಂಪಾದಿಸುವ ಯೋಗಗಳು ಅವಶ್ಯವಾಗಿ ಬರುತ್ತವೆ. ಒಂದು ವೇಳೆ ಸಾಲ ಉಂಟಾದರೆ ಸಾಲಕ್ಕಾಗಿ ಅಂಜಿ ಪ್ರಾಣವನ್ನು ಕೊಳ್ಳದೇ ಶ್ರಮವಹಿಸಿ ಸಂಪಾದಿಸಿ ಸಾಲವನ್ನು ತೀರಿಸುವ ಧೈರ್ಯವನ್ನು [illegible] ಬದುಕಿನ ಸಾರ್ಥಕತೆಯನ್ನು ಪಡೆದುಕೊಳ್ಳಬೇಕು.

10 ಕನ್ನಡಪ್ರಭ, ಬೆಳಗಾವಿ

ದಿನಚರಿ



ಧರ್ಮ ಜ್ಯೋತಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ರೋಗ ಬರುವಾಗ ಹಾಗೆ ತಿನ್ನಬೇಡ

ನಾವು ಸೇವಿಸುವ ಆಹಾರವೂ ನಮ್ಮ ಬದುಕಿಗೆ ಕಾರಣವಾಗುತ್ತದೆ. ದೇಹಕ್ಕೆ ಶಾಸ್ತ್ರಕಾರರ ಅನ್ನಮಯಕೋಶ ಎಂದು ಕರೆದಿದ್ದಾರೆ. 'ಸ ವಾ ಏಷ ಪುರುಷಃ ಅನ್ನ ರಸಮಯಃ' ಎಂಬ ಉಪನಿಷತ್ ವಾಕ್ಯವು ನಮ್ಮ ದೇಹವು ಅನ್ನರಸದ ಪರಿಣಾಮ ಎಂಬುದಾಗಿ ಪ್ರತಿಪಾದಿಸಿರುತ್ತದೆ. ಸೇವಿಸಿದ ಅನ್ನದ ಕೊರೆಯ ಪರಿಣಾಮಗಳಾದ ಶುಕ್ರಶೋಣಿತಗಳಿಂದಲೇ ಈ ದೇಹವು ಉತ್ಪನ್ನವಾಗುವುದು. ಇದು ತಾಯಿಯ ಗರ್ಭದಲ್ಲಿ ತಾಯಿಯು ಸೇವಿಸಿದ ಅನ್ನದ ರಸವನ್ನೇ ಪಡೆದು ಬೆಳೆದು ಕೊನೆಗೆ ಪ್ರಸವವಾದ ಮೇಲೆ ತಾಯಿಯ ಮೊಲೆಹಾಲನ್ನುಂಡು ಬೆಳೆಯುವುದು. ಅನ್ನಮಯವಾದ ಈ ದೇಹವು ನಿಯತಮಿತವಾಗಿ ಅನ್ನ ಸೇವೆಯನ್ನು ಮಾಡಿದಾಗ ಆರೋಗ್ಯವಾಗಿ ಬೆಳೆಯುತ್ತ ಹೋಗುವುದು. ಆದರೆ ಅನ್ನಗ್ರಹಣದ ನಿಯಮಗಳನ್ನು ಮೀರಿ ನಡೆದಾಗ ಈ ದೇಹವು ರೋಗಕ್ಕೆ ತುತ್ತಾಗುವುದು. ಅಂತೆಯೇ 'ಊಟ ಬಲ್ಲವನಿಗೆ ರೋಗುವಿಲ್ಲ' ಎಂಬ ನಾಣ್ಣುಡಿಯು ಪ್ರಸಿದ್ಧವಾಗಿದೆ. ದೇವಾಲಯವಾಗಿದ್ದ ಈ ದೇಹವನ್ನು ಬಹಳಷ್ಟು ಜನರು ಉಣ್ಣುವ ಪದ್ಧತಿಯನ್ನು ಮೀರಿ ನಡೆಯುತ್ತಿರುವುದರಿಂದಲೇ ರೋಗಾಲಯವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಸೃಷ್ಟಿಯಲ್ಲಿರುವ 34 ಲಕ್ಷ ಜೀವರಾಶಿಗಳಲ್ಲಿ ಬಹುಶಃ ಮನುಷ್ಯನಿಗಿರುವಷ್ಟು ರೋಗಗಳು ಬೇರಾವ ಪ್ರಾಣಿಯಲ್ಲೂ ಕಂಡುಬರುವುದಿಲ್ಲ. ಇಂದು ಮನುಷ್ಯನ ದೇಹದಲ್ಲಿ ಹೊಸ ಹೊಸ ರೋಗಗಳು ಆವಿರ್ಭವಿಸುತ್ತಿರುವುದನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗದೇ ಇರದು. ದೇಹದ ಒಂದೊಂದು ಅಂಗ ಅವಯವಗಳಿಗೆಲ್ಲ ಪರೀಕ್ಷಿಸಲು ಒಬ್ಬೊಬ್ಬ ವೈದ್ಯರು ಇಂದು ತಯಾರಾಗಿ ಬರುತ್ತಿದ್ದಾರೆ. ಇಂದಿನ ರೋಗಗಳ ಬೆಳವಣಿಗೆ ನೋಡಿದರೆ ದೇವಾಲಯವಾಗಿದ್ದ ಈ ದೇಹವನ್ನು ನಾವಿಂದ ಖಂಡಿತವಾಗಿಯೂ ರೋಗಾಲಯವನ್ನಾಗಿ ಮಾಡಿದ್ದೇವೆ. ಈ ರೋಗಗಳ ಬೆಳವಣಿಗೆಗೆ ಕಾರಣವೇನು? ಎಂಬುದಾಗಿ ಪ್ರಶ್ನಿಸಿದರೆ ನಮ್ಮ ಆಹಾರದ ಅನಿಯಮಿತತೆ ಹಾಗೂ ನಿಷಿದ್ಧ ಆಹಾರಗಳ ಸೇವನೆ ಎಂಬುದು ಸ್ಪಷ್ಟವಾಗುತ್ತದೆ. ನಾವು ಅರಗಿಸಿಕೊಳ್ಳುವಷ್ಟು ಸಾತ್ವಿಕ ಆಹಾರವನ್ನು ಸೇವಿಸಿದರೆ ಭವಿಷ್ಯದಲ್ಲಿ ರೋಗಬಾರದ ಹಾಗೆ ಎಚ್ಚರಿಕೆ ವಹಿಸುವಂತಾಗುವುದು. ರೋಗಕ್ಕೆ ಅನಿಯಮಿತ ಆಹಾರ ಕಾರಣವಾಗುವಂತೆ ನಿಷಿದ್ಧ ವಿಷಯಗಳ ಭೋಗವೂ ಸಹ ಕಾರಣವಾಗುತ್ತದೆ. ಅಂತೆಯೇ ಭರ್ತೃಹರಿಯು 'ಭೋಗೇ ರೋಗ ಭಯಂ' ಎಂದು ಹೇಳಿ ಆ ಮಾತನ್ನು ಸಮರ್ಥಿಸಿದ್ದಾನೆ. ಈ ಶತಮಾನದ ಭಯಾನಕ ರೋಗವಾಗಿರುವ ಏಡ್ಸ್‌ಗೆ ನಿಷಿದ್ಧ ಭೋಗವೇ ಕಾರಣವೆಂಬುದನ್ನು ವೈದ್ಯ ವಿಜ್ಞಾನಿಗಳು ಜಗತ್ತಿನಲ್ಲೆಲ್ಲ ಸಾರಿ ಅರಿವನ್ನು ಮೂಡಿಸುತ್ತಿದ್ದಾರೆ. ಪ್ರತಿಯೊಬ್ಬರೂ ಇದನ್ನು ಅರ್ಥಮಾಡಿಕೊಂಡು ರೋಗದ ಮೂಲಕಾರಣವನ್ನರಿತು ಅಲ್ಲಿ ಎಚ್ಚರಿಕೆ ವಹಿಸಿದರೆ ಯಾವುದೇ ರೋಗವಿಲ್ಲದೆ ಜೀವಿಸಬಹುದೆಂಬುದನ್ನು ನಮ್ಮ ದೇಶದ ಸನಾತನ ಸಂಸ್ಕೃತಿಯ ಸಂದೇಶ.

ದಿನಚರಿ



ಧರ್ಮ ಜ್ಯೋತಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ಸುಮ್ಮನಿರುವುದೆಲ್ಲಾ ಮೌನವಲ್ಲ

ಮೌನ ಎಂಬ ಶಬ್ದವನ್ನು ಕೇಳಿದಾಗ ಪ್ರಾಯಶಃ ಎಲ್ಲರೂ ಮಾತನಾಡದೇ ಇರುವ ಸ್ಥಿತಿ ಎಂದು ಅರ್ಥೈಸಿಕೊಳ್ಳುತ್ತಾರೆ. ಒಂದು ಅರ್ಥದಲ್ಲಿ ಅದು ಸರಿ. ಮೌನ ಎಂಬ ಶಬ್ದದ ವ್ಯಾಖ್ಯಾನವನ್ನು ಅಷ್ಟಕ್ಕೋ ಸೀಮಿತಗೊಳಿಸುವುದು ತತ್ವಚಿತಂಕರ ದೃಷ್ಟಿಯಲ್ಲಿ ಅಪೂರ್ಣ. ಶಾಸ್ತ್ರ ಚಿಂತಕರು ಮೌನ ಶಬ್ದದ ಬಗ್ಗೆ ಬಹಳಷ್ಟು ಆಳವಾಗಿ ಚಿಂತಿಸಿದ್ದಾರೆ. ಮೌನವೆಂದರೆ ಶರೀರವನ್ನೇ ಮೊದಲು ಮಾಡಿಕೊಂಡು ಶರೀರದಲ್ಲಿಯ ಸಕಲೇಂದ್ರಿಯಗಳು ತಮ್ಮ ತಮ್ಮ ವಿಷಯಗಳೊಂದಿಗೆ ವ್ಯವಹರಿಸದೆ ಸ್ತಬ್ಧವಾಗಿರು ವ್ಯವಸ್ಥೆ ಎಂಬುದಾಗಿ.ಶರೀರವನ್ನು ಒಂದು ಸ್ಥಿರವಾದ ಆಸನದಲ್ಲಿ ಕುಳ್ಳಿರಿಸಿ ಅದು ಕಿಂಚಿತ್ತು ಅಲುಗಾಡದ ಹಾಗೆ ಸ್ತಬ್ಧವಾಗಿ ಇರಿಸುವುದು ಶಾರೀರಿಕ ಮೌನ. ಮಹರ್ಷಿ ಪತಂಜಲಿಯು ಆಸವೆಂಬ ಪದಕ್ಕೆ 'ಸ್ಥಿರ ಸುಖಂ ಆಸನಂ' ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ. ಅಂದರೆ 84 ವಿಧಗಳಾದ ಆಸನಗಳಲ್ಲಿ ಯಾರಿಗೆ ಯಾವ ಆಸನದಲ್ಲಿ ತೊಂದರೆ ಇಲ್ಲದೆ ಬಹಳ ಹೊತ್ತಿನವರೆಗೆ ಸ್ಥಿರವಾಗಿ ಕುಳಿತುಕೊಳ್ಳಲು ಅನುಕೂಲವಾಗುವುದೋ ಅದೇ ಆಸನದಲ್ಲಿ ಆತನು ಸಾಧನೆಯನ್ನು ಪ್ರಾರಂಭಿಸಬೇಕೆಂಬುದು ಸ್ಥಿರಾಸನದ ಮೂಲಕವಾಗಿ ಶಾರೀರಿಕ ಮೌನವನ್ನು ಆಚರಿಸುವುದು. ನಮ್ಮ ವಾಣಿಯ ವ್ಯವಹಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವುದೇ ವಾಚಕ ಮೌನವು. ಪ್ರಾಯಶಃ ಬಹಳಷ್ಟು ಜನರು ವಾಣಿಯ ದುರ್ಬಳಕೆಯನ್ನು ಮಾಡುವುದರ ಮುಖಾಂತರ ಸಮಾಜದಲ್ಲಿ ಯಾವಾಗಲೂ ಗೊಂದಲಗಳನ್ನೇ ಸೃಷ್ಟಿಸುತ್ತಾರೆ. ವಾಣಿ ಎಂಬುದು ನಮ್ಮಲ್ಲಿಯ ಒಂದು ಅಪರೂಪವಾದ ಶಕ್ತಿ ಇದ್ದಂತೆ. ಆ ಶಕ್ತಿಯನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕಲ್ಲದೆ ಯೋಗ್ಯ ಸಮಯದಲ್ಲಿ ಮಾತ್ರ ಅದನ್ನು ಬಳಸಬೇಕು. ಇಲ್ಲವಾದರೆ ವಾಕ್ಷಯವು ಉಂಟಾಗುವುದು. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚವಿಷಯಗಳ ವ್ಯವಹಾರವು ಕ್ರಮವಾಗಿ ಶ್ರೋತ್ರ, ಚರ್ಮ, ನೇತ್ರ, ರಸನಾ ಮತ್ತು ಘ್ರಾಣವೆಂಬ ಪಂಚ ಜ್ಞಾನೇಂದ್ರಿಯಗಳ ಮುಖಾಂತರವಾಗಿ ನಡೆಯುತ್ತಲಿರುತ್ತದೆ. ಈ ಪಂಚ ಜ್ಞಾನೇಂದ್ರಿಯಗಳು ತಮ್ಮ ವ್ಯವಹಾರವನ್ನು ಮಾಡದಿರುವಂತೆ ಅವುಗಳನ್ನು ನಿಯಂತ್ರಿಸುವುದೇ ಜ್ಞಾನೇಂದ್ರಿಯ ಮೌನ ಎನಿಸುವುದು. ವಾಗಾದಿ ಕರ್ಮೇಂದ್ರಿಯಗಳ ಮತ್ತು ಶ್ರೋತ್ರಾದಿ ಜ್ಞಾನೇಂದ್ರಿಯಗಳ ವ್ಯವಹಾರವನ್ನು ಬಂದು ಮಾಡುವುದರ ಜೊತೆಗೆ ಮನಸ್ಸಿನಲ್ಲಿಯೂ ಆಯಾ ಇಂದ್ರಿಯಗಳ ವ್ಯವಹಾರವು ಸುಳಿಯದಂತೆ ಎಚ್ಚರಿಕೆ ವಹಿಸಬೇಕು. ಹೀಗೆ ಶರೀರವಾಣಿ ಮುಂತಾದ ಇಂದ್ರಿಯಗಳು ಮತ್ತು ಮನಸ್ಸು ಇವೆಲ್ಲ ತ್ರಿಕರಣಗಳ ಮೌನವು ಯಾವಾಗ ಸಂಭವಿಸುವುದೋ ಅದುವೇ ಪರಮಶಾಂತಿಯ ಹಾಗೂ ಮುಕ್ತಿಯು ಸ್ಥಿತಿಯು. ಮನಸ್ಸಿನ ಮೌನದವರೆಗೆ ನಾವು ತಲುಪಬೇಕಾದರೆ ಶಾರೀರಿಕ ಮೌನವೆಂಬ ಮೊದಲ ಹೆಜ್ಜೆಯಿಂದ ಈ ಮೌನದ ಮಹಾಯಾತ್ರೆಯನ್ನು ಪ್ರಾರಂಭಿಸಬೇಕು.

10 ಕನ್ನಡಪ್ರಭ, ಬೆಳಗಾವಿ

ದಿನಚರಿ



ಧರ್ಮ ಜ್ಯೋತಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ಬದುಕು ಸಂಸ್ಕಾರಯುತವಾಗಿರಲಿ

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಸಂಸ್ಕಾರಕ್ಕೆ ಅತ್ಯಂತ ಮಹತ್ವ ಕೊಡಲಾಗಿದೆ. ಎಲ್ಲಾ ಧರ್ಮಗಳಲ್ಲಿ ವಿವಾಹ ಸಂಸ್ಕಾರವು ಅಂಗೀಕರಿಸಲ್ಪಟ್ಟಿದೆ. ಅದಿಲ್ಲದೇ ಹೋದರೆ ಜಗತ್ತಿನಲ್ಲಿಯ ಪ್ರಜೋತ್ಪತ್ತಿಯ ಕಾರ್ಯವು ನಿಂತು ಹೋಗುವುದು. ಆದ್ದರಿಂದ ವಂಶದ ವೃದ್ಧಿಗಾಗಿ ರಾಷ್ಟ್ರದ ಅಭ್ಯುದಯಕ್ಕಾಗಿ ಒಬ್ಬ ಗೃಹಸ್ಥನು ಸಂತಾನವನ್ನು ಅವಶ್ಯವಾಗಿ ಅಪೇಕ್ಷಿಸುತ್ತಾನೆ. ಹೀಗೆ ವಂಶಕ್ಕೆ ಮತ್ತು ರಾಷ್ಟ್ರಕ್ಕೆ ಉತ್ತಮ ಸಂತಾನವನ್ನು ಕೊಡುವ ಉದ್ದೇಶಕ್ಕಾಗಿ ಮಾಡಲಾಗುವ ಧಾರ್ಮಿಕ ಭಾವನೆಯನ್ನೊಳಗೊಂಡ ಸಾಮಾಜಿಕ ಸಂಸ್ಕಾರವೇ ವಿವಾಹ ಸಂಸ್ಕಾರ. ನಮ್ಮ ದೇಶದ ಧರ್ಮಶಾಸ್ತ್ರಗಳು ಮತ್ತು ರಾಜಕೀಯ ಚಿಂತಕರು ಹಾಗೂ ಋಷಿಗಳು ಈ ವಿವಾಹ ಸಂಸ್ಕಾರವನ್ನು ಎಂಟು ವಿಧವಾಗಿ ಪ್ರತಿಪಾದಿಸಿದ್ದಾರೆ. 1. ಬ್ರಾಹ್ಮ ವಿವಾಹ, 2. ಪ್ರಜಾಪತ್ಯ ವಿವಾಹ, 3. ಆರ್ಷ, 4. ದಾನ ವಿವಾಹ,5. ಗಾಂಧರ್ವ ವಿವಾಹ, 6. ಆಸುರಿ ವಿವಾಹ, 7. ರಾಕ್ಷಸೀ ವಿವಾಹ ಮತ್ತು 8. ಪೈಶಾಚಿಕ ವಿವಾಹ ಇವುಗಳೇ ಆ ಎಂಟು ವಿಧಗಳು. ಈ ಎಂಟು ವಿಧಗಳಲ್ಲಿ ಮೊದಲಿನ ನಾಲ್ಕು ವಿಧಗಳು ಧರ್ಮಶಾಸ್ತ್ರಕ್ಕೆ ಒಪ್ಪಿಗೆಯಾಗುವಂತವುಗಳಾಗಿವೆ. ವಿವಾಹವೆನ್ನುವುದು ವಿಲಾಸ ಜೀವನಕ್ಕಾಗಿ ಅಲ್ಲ. ಅದೊಂದು ಸಂಯಮಪೂರ್ಣವಾದ ಜೀವನವನ್ನು ಸಾಗಿಸುವುದಕ್ಕೆ ಬುನಾದಿಯು. ಸ್ತ್ರೀ ಪುರುಷರು ಒಂದು ವೇಳೆ ವಿವಾಹ ಬಂಧನದಲ್ಲಿ ಬದ್ಧಿತರಾಗದೇ ಹೋದರೆ ಅವರು ಸ್ವೇಚ್ಛಾಚಾರಿಗಳಾಗಿ, ಧರ್ಮಭ್ರಷ್ಟರಾಗಿ ಧರ್ಮ ಹಾಗೂ ರಾಷ್ಟ್ರ ನಾಶಕ ರೋಗಗಳಿಗೆ ಕಾರಣೀಭೂತರಾಗುತ್ತಾರೆ. ವಿವಾಹ ಸಂಸ್ಕಾರವನ್ನು ಮಾಡುವಾಗ ವಧೂ–ವರರಿಂದ 'ಧರ್ಮೇಚ, ಅರ್ಥೇಚ ಕಾಮೇಚ ನಾತಿಚರಾಮಿ' ಅಂದರೆ ಧರ್ಮ, ಅರ್ಥ ಮತ್ತು ಕಾಮಗಳ ಉಪಭೋಗವನ್ನು ಮಾಡುವಾಗ ಪರಸ್ಪರರನ್ನು ವಂಚಿಸುವುದಿಲ್ಲ ಎಂಬುದಾಗಿ ಪ್ರತಿಜ್ಞೆಯನ್ನು ಮಾಡಿಸುತ್ತಾರೆ. ವಿವಾಹೋತ್ತರ ಗೃಹಸ್ಥಾಶ್ರಮದಲ್ಲಿ ಸ್ತ್ರೀ ಪುರುಷರಿಗೆ ಪತಿ–ಪತ್ನಿ ಎನ್ನುವ ಶಬ್ದಗಳು ಪ್ರಚಲಿತವಾಗಿರುತ್ತವೆ. ಪತ್ನಿಯನ್ನು ಪಥನದಿಂದ ರಕ್ಷಿಸುವ ಕಾರಣದಿಂದಾಗಿ ಪುರುಷನಿಗೆ ಪತಿ ಎಂಬುದಾಗಿಯೂ ಪತಿಯನ್ನು ಪತನದಿಂದ ರಕ್ಷಿಸುವ ಕಾರಣದಿಂದ ಸ್ತ್ರೀಗೆ ಪತ್ನಿ ಎಂಬುದಾಗಿಯೂ ಕರೆಯಲಾಗುತ್ತಿದೆ. ಮನಸ್ಸಿನಲ್ಲಿಯೂ ಕಾಮವಾಸನೆಯು ಹಲವು ಕಡೆ ಹರಿದು ಹೋಗಬಾರದೆಂಬ ಉದ್ದೇಶದಿಂದ ಅದನ್ನು ಒಂದೆಡೆ ಕೇಂದ್ರೀಕರಿಸಿ ಆ ಕಾಮವಾಸನೆಯ ಮೇಲೆ ವಿಜಯವನ್ನು ಸಂಪಾದಿಸುವುದೇ ಗೃಹಸ್ಥಾಶ್ರಮದ ಮುಖ್ಯ ಉದ್ದೇಶವಾಗಿದೆ. ಅಂತೆಯೇ ಈ ಆಶ್ರಮದಲ್ಲಿ ಪತಿ ಪತ್ನಿಯರು ಪರಸ್ಪರ ರಕ್ಷಕರಾಗುತ್ತಾರೆ. ಧರ್ಮಶಾಸ್ತ್ರದಲ್ಲಿ ಒಪ್ಪಿಗೆಯಾಗಿರುವ ಮೊದಲಿನ ನಾಲ್ಕು ವಿವಾಹ ವಿಧಿಗಳಲ್ಲಿ ಬ್ರಾಹ್ಮವಿವಾಹವು ಸರ್ವಶ್ರೇಷ್ಠವಾದುದು. ಆದ್ದರಿಂದ ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟ ಶಾಸ್ತ್ರೋಕ್ತ ವಿವಾಹ ಸಂಸ್ಕಾರ ಹೊಂದಿ ಸಂಯಮ ಜೀವನವನ್ನು ಸಾಗಿಸುವುದರ ಜೊತೆಗೆ ರಾಷ್ಟ್ರವನ್ನು 'ಏಡ್ಸ್' ರೋಗದಿಂದ ಮುಕ್ತವಾಗಿರಿಸಬೇಕು.

10 ಕನ್ನಡಪ್ರಭ, ಬೆಳಗಾವಿ

ದಿನಚರಿ



ಧರ್ಮ ಜ್ಯೋತಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ಅನ್ಯಾಯದ ಸಂಪತ್ತಿನಿಂದ ಆಪತ್ತು

ಸುಖಮಯ ಜೀವನವನ್ನು ನಡೆಸಬೇಕಾದರೆ ಪಾಪವಾಗುವ ಹಾಗೆ ಧನ ಗಳಿಸಬಾರದು. ನಮ್ಮ ಬದುಕಿನ ಮುಖ್ಯ ಆಧಾರ ಸಂಪತ್ತು. ಎಲ್ಲ ವ್ಯವಹಾರಗಳಿಗೆ ಅದುವೇ ಮಾಧ್ಯಮ. ತನ್ನ ಜೀವನದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಪ್ರತಿಯೊಬ್ಬರೂ ಬೇರೆ ಬೇರೆ ಉದ್ಯೋಗಗಳನ್ನು ಅವಲಂಬಿಸಿ ಕಷ್ಟಪಟ್ಟು ಸಂಪಾದಿಸಿ ತನ್ನ ಯೋಗ್ಯ ಸಂಪಾದನೆಯಿಂದ ದೊರೆತ ಹಣದಲ್ಲಿ ಜೀವನಾವಶ್ಯಕತೆಗೆ ವ್ಯವಸ್ಥೆ ಮಾಡಿಕೊಂಡರೆ ಅವನು ಸುಖಮಯ ಜೀವನವನ್ನು ಸಾಗಿಸಲಿಕ್ಕೆ ಸಾಧ್ಯವಾಗುವುದು. ವಾಮಮಾರ್ಗದಿಂದ ಒಬ್ಬ ಮನುಷ್ಯನು ಧನವನ್ನು ಗಳಿಸತೊಡಗಿದರೆ ಆತನು ಕಲವೇ ದಿನಗಳಲ್ಲಿ ಲಕ್ಷಾಧಿಪತಿ, ಕೋಟ್ಯಾಧಿಪತಿ ಆಗುತ್ತಾನೆ. ಕಳ್ಳತನ, ಸುಳ್ಳುಹೇಳುವಿಕೆ, ವಂಚನೆ ಮುಂತಾದುವುಗಳಿಂದ ಅನಾಯಾಸವಾಗಿ ಹೇರಳವಾದ ಧನ ಸಂಪಾದನೆಯ ಅನಂತರ ಆ ಅನ್ಯಾಯದ ಸಂಪತ್ತು ಅವನನ್ನು ಮತ್ತಷ್ಟು ಅನ್ಯಾಯದ ಕೂಪದಲ್ಲಿ ತಳ್ಳಿ ಹಾಕುತ್ತದೆ. ಇದರಿಂದಾಗಿ ವ್ಯಕ್ತಿ ದುಶ್ಚಟಕ್ಕೆ ಗುರಿಯಾಗುತ್ತಾನೆ. ಅಂತೆಯೇ ಜ್ಞಾನಿಗಳು ಅರ್ಥವೆಂಬ ಪುರುಷಾರ್ಥದ ರಹಸ್ಯವನ್ನು ತಿಳಿಸುವುದಕ್ಕಾಗಿ 'ಪಾಪವಾಗುವ ಹಾಗೆ ಧನವನ್ನು ಗಳಿಸಬೇಡಿ' ಎಂಬುದಾಗಿ ಹೇಳಿದ್ದಾರೆ. ಅನ್ಯಾಯ ಮಾರ್ಗದಿಂದ ಹಣವನ್ನು ಸಂಪಾದಿಸಿದರೆ ಈ ಹಣದ ಜೊತೆಗೆ ಪಾಪವು ಸಂಗ್ರಹವಾಗಿ ಆ ಪಾಪದ ಪರಿಣಾಮವಾಗಿ ಮನುಷ್ಯನು ಮತ್ತೆ ಮತ್ತೆ ಪಾಪದ ಕಾರ್ಯಗಳಲ್ಲಿ ತೊಡಗಿ ಜಗತ್ತಿನಲ್ಲಿ ತನ್ನ ಸ್ಥಾನ ಮಾನಗಳನ್ನು ಕಳೆದುಕೊಂಡು ಲೋಕನಿಂದೆಗೆ ಗುರಿಯಾಗುವವನಲ್ಲದೆ ಕೊನೆಗೆ ತನ್ನ ಲೌಕಿಕ ಬದುಕನ್ನೇ ನರಕವನ್ನಾಗಿ ಮಾಡಿಕೊಳ್ಳುತ್ತಾನೆ. ನಾವು ಕೇವಲ ಮಡಿ ವಸ್ತುಗಳನ್ನು ಧರಿಸಿ ಶುಚಿಯಾಗಿದ್ದೇವೆ ಎಂದು ಹೇಳಿದರೆ ಅದು ಪರಿಪೂರ್ಣ ಶುಚಿ ಎನಿಸಿಕೊಳ್ಳಲಾರದು. ಪರಧನಕ್ಕೆ ಆಸೆಪಡದಿರುವ ಅರ್ಥಶುಚಿತ್ವವನ್ನು ಸಂಪಾದಿಸುವುದೇ ಶುಚಿಯ ಲಕ್ಷಣವು. ಅಂತೆಯೇ ಉಪನಿಷತ್ತು 'ಮಾ ಗೃಧಃ ಕಶ್ಯಸ್ವಿದನಮ್' ಎಂಬುದಾಗಿ ಉಪದೇಶ ಮಾಡುವುದರ ಮೂಲಕ ಪ್ರತಿಯೊಬ್ಬರೂ ಅರ್ಥ ಶುಚಿಯಾಗಿರಬೇಕೆಂಬ ಸಂದೇಶವನ್ನು ಕೊಟ್ಟಿದೆ. ಯಾರು ತಮ್ಮ ಬದುಕಿನಲ್ಲಿ ಅರ್ಥ ಶುಚಿತ್ವವನ್ನು ಸಂಪಾದಿಸಿಕೊಳ್ಳುವರೋ ಅವರು ಮಾತ್ರ ಪಾಪವಾಗುವ ಹಾಗೆ ಧನವನ್ನು ಸಂಪಾದಿಸಲಾರರು. ಅದಕ್ಕೆ ವಿಪರೀತವಾಗಿ ನಡೆದುಕೊಳ್ಳುವವರೆಲ್ಲರೂ ಅರ್ಥ ಪಿಪಾಸುಗಳಾಗಿ ಅಂತೆಯೇ ಅರ್ಥ ಪಿಶಾಚಿಗಳಾಗಿ ಅನ್ಯರ ಶೋಷಣೆಯನ್ನು ಮಾಡಿ ಹೇರಳವಾಗಿ ಅನ್ಯಾಯದ ಹಣವನ್ನು ಸಂಗ್ರಹಿಸಿ ಆ ಹಣದ ದುರ್ಬಳಕೆಯನ್ನು ಮಾಡುವುದರ ಮೂಲಕ ತಮ್ಮ ಆರೋಗ್ಯ ಸಂಪತ್ತನ್ನು ಹಾಳುಮಾಡಿಕೊಂಡು ತಾವು ದುಃಖಿಗಳಾಗುವುದರ ಜೊತೆಗೆ ಅನ್ಯರನ್ನೂ ಶೋಷಣೆಗೆ ಈಡು ಮಾಡಿ ಅವರನ್ನು ಸಹ ದುಃಖಿಗಳನ್ನಾಗಿ ಮಾಡುತ್ತಾರೆ. ಸರ್ವರ ದುಃಖಕ್ಕೆ ಕಾರಣೀಭೂತರಾಗುವುದರಿಂದ ಪಾಪವಾಗುವ ಹಾಗೆ ಧನ ಗಳಿಸಬೇಡ ಎಂಬುದಾಗಿ ಜ್ಞಾನಿಗಳು ನೀತಿಯನ್ನು ಹೇಳಿದ್ದಾರೆ.

10 ಕನ್ನಡಪ್ರಭ, ಬೆಳಗಾವಿ

ದಿನಚರಿ



ಧರ್ಮ ಜ್ಯೋತಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು,
ಶ್ರೀ 1008 ಕಾಶೀ ಜಗದ್ಗುರು,
ವಾರಾಣಸಿಯ ಜಂಗಮವಾಡಿ ಮಠ

ಅತ್ತೆ ಸೊಸೆಯರು ಅರ್ಥೈಸಿಕೊಳ್ಳಲಿ

ಮನುಷ್ಯನ ಲೌಕಿಕ ಹಾಗೂ ಆಧ್ಯಾತ್ಮಿಕ ಬದುಕಿನಲ್ಲಿ ಸ್ತ್ರೀಯ ಪಾತ್ರವು ಅತ್ಯಂತ ಮಹತ್ವದ್ದು. ಗೃಹಿಣಿಯಾಗಿ ಬಂದ ಒಬ್ಬ ಹೆಣ್ಣು ಮಗಳು ತಾಯಿಯಾಗಿ, ಲಕ್ಷ್ಮೀಯಾಗಿ, ದಾಸಿಯಾಗಿ, ಮಂತ್ರಿಯಾಗಿ, ರಂಭೆಯಾಗಿ, ತಾಳ್ಮೆಯಲ್ಲಿ ಪ್ರಥ್ವಿಯಾಗಿ ಗಂಡನಿಗೆ ಸಹಧರ್ಮಿಣಿಯಾಗಿರುತ್ತಾಳೆ. ಸ್ತ್ರೀಯ ಉತ್ಕೃಷ್ಟ ಗುಣವನ್ನು ನಮ್ಮ ಮಹರ್ಷಿಗಳು 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ' ಅಂದರೆ ಎಲ್ಲಿ ಸ್ತ್ರೀಯರಿಗೆ ಗೌರವವಿದೆಯೋ ಅಲ್ಲಿ ದೇವತೆಗಳು ಸಂತುಷ್ಟರಾಗಿರುತ್ತಾರೆ ಎಂಬುದಾಗಿ ಹೇಳುವುದರ ಮೂಲಕ ಸ್ತ್ರೀಯಲ್ಲಿಯ ಗುಣಗಳನ್ನು ಗೌರವಿಸಿದ್ದಾರೆ. ಸೀತಾ, ತಾರಾ, ಅಹಲ್ಯ, ದ್ರೌಪದಿ ಹಾಗೂ ಮಂಡೋದರಿಯರು ತಮ್ಮ ಉತ್ಕೃಷ್ಟ ಗುಣಗಳಿಗೆ ಪ್ರಸಿದ್ಧರಾಗಿದ್ದರಿಂದಲೇ 'ಪಂಚಕನ್ಯಾ ಸ್ಮರೇನಿತ್ಯಂ' ಎಂಬ ಉಕ್ತಿಯ ಮೂಲಕ ಈ ಐವರು ಸದಾ ಸ್ಮರಣೀಯರು ಎಂಬುದಾಗಿ ತಿಳಿಸಿದ್ದಾರೆ. ಚಿಂತನಶೀಲರಾದ ಮಹರ್ಷಿಗಳಿಗೆ ಸರಿಸಮಾನವಾಗಿ ಅವರ ಚಿಂತನೆಯಲ್ಲಿ ಪಾಲ್ಗೊಂಡಿದ್ದವರು ಗಾರ್ಗಿ, ಮೈತ್ರೇಯಿ ಮುಂತಾದ ಉಪನಿಷತ್ ಕಾಲದ ಸ್ತ್ರೀಯರನ್ನು ನೆನಪಿಸಿಕೊಂಡಾಗ ಅವರಲ್ಲಿಯ ದಿವ್ಯಶಕ್ತಿತ್ವದ ಅರಿವು ನಮಗಾಗುವುದು. ಮನೆತನದ ದೊಡ್ಡ ಜವಾಬ್ದಾರಿ ಆ ಮನೆಯ ಒಡತಿಯ ಮೇಲೆ ಇರುತ್ತದೆ. ಮನೆ ಅಂದರೆ ಕಲ್ಲು, ಮಣ್ಣು, ಸಿಮೆಂಟು ಮತ್ತು ಇಟ್ಟಿಗೆಗಳಿಂದ ಕಟ್ಟಿರುವ ನಿಕೇತನ ಮಾತ್ರವಲ್ಲ. 'ಗೃಹಿಣಿ ಗೃಹಮುಚ್ಯತೆ' ಎಂಬ ಉಕ್ತಿಗನುಸಾರವಾಗಿ ಮನೆಯೆಂದರೆ ಮನೆಯ ಒಡತಿ ಎಂದೇ ತಿಳಿದುಕೊಳ್ಳಬೇಕು. ಸ್ತ್ರೀಯರನ್ನು ಪ್ರತಿಯೊಬ್ಬರೂ ಗೌರವರದಿಂದ ಕಾಣಬೇಕು. ಸ್ತ್ರೀಯ ಎಂದೂ ಹಿಂದೆ ಬಿದ್ದಿಲ್ಲ.ಋಷಿಗಳೊಂದಿಗೆ, ತತ್ವಚಿಂತನೆಯಲ್ಲಿ, ರಾಜಕೀಯ ಕ್ಷೇತ್ರದಲ್ಲಿಯೂ ಅವರು ಮುಂದಾಗಿದ್ದಾಳೆ ಎಂಬುದಕ್ಕೆ ಕಿತ್ತೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ರಾಣಿ ಅಬ್ಬಕ್ಕ, ಕೆಳದಿ ಚೆನ್ನಮ್ಮ ಮತ್ತು ಝಾನ್ಸಿ ರಾಣಿ ಲಕ್ಷ್ಮೀಬಾಯಿ ಮುಂತಾದ ವೀರ ರಮಣೀಯರು ಉಲ್ಲೇಖನೀಯ. ಅಂತರಿಕ್ಷ ಸಂಶೋಧನೆಯಲ್ಲಿ ಸೇನೆ, ಆರಕ್ಷಕ ದಳ, ಕಚೇರಿ, ಶಾಲೆ ಮತ್ತು ಕಾಲೇಜುಗಳಲ್ಲಿ ಸ್ತ್ರೀ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಕಂಡಾಗ ಪುರುಷನಿಗೆ ಯಾವುದರಲ್ಲಿಯೂ ಕಡಿಮೆ ಇಲ್ಲ ಎಂಬುದು ತಿಳಿದುಬರುತ್ತದೆ.ಮಗಳ ಬಗ್ಗೆ ಕಾಳಜಿ ವಹಿಸಿದಷ್ಟೂ ಸೊಸೆಯ ಬಗ್ಗೆಯೂ ಕಾಳಜಿ ವಹಿಸಿದರೆ ಇಂದಿನ ಕೌಟುಂಬಿಕ ಬದುಕಿನಲ್ಲಿ ಉದ್ಭವಿಸುವ ಅನೇಕ ಸಮಸ್ಯೆಗಳಿಗೆ ತಿಲಾಂಜಲಿ ಹಾಕಬಹುದು. ಇನ್ನು ಮನೆಗೆ ಬಂದ ಸೊಸೆಯೂ ಸಹ ಅತ್ತೆಯನ್ನು ತಾಯಿಯಷ್ಟೇ ಪ್ರೀತಿಯಿಂದ ಕಾಣುವ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಹೀಗೆ ಅತ್ತೆ ಸೊಸೆಯಂದಿರು ತಾಯಿ ಮಕ್ಕಳಂತೆ ಅನ್ಯೋನ್ಯವಾಗಿ ನಡೆದುಕೊಂಡರೆ ಅವರು ವಾಸಿಸುವ ಆ ಮನೆಯೇ ಸ್ವರ್ಗ ವಾಗುವುದು. ಮನೆಯಲ್ಲಿ ಎಲ್ಲ ಸೊಸೆಯಂದಿರುವ ಪರಸ್ಪರ ಪ್ರಗತಿ, ವಿಶ್ವಾಸಗಳನ್ನು ಬೆಳೆಸಿಕೊಂಡರೆ ಕೌಟುಂಬಿಕ ಕಲಹಗಳು ಕಡಿಮೆಯಾಗುತ್ತವೆ.

ಜಾತಿ, ವರ್ಗ, ವರ್ಣ ಕುಬ್ಜ ಭಾವನೆಗಳಿಂದ ಹೊರಬನ್ನಿ

ಸಾಮಾಜಿಕ ಪರಿಸರದ ವಿದ್ಯಮಾನಗಳಲ್ಲಿ ಪ್ರಬಲವಾಗಿ ಬೇರೂರಿರುವ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಜಾತಿ, ವರ್ಗ, ವರ್ಣ, ಪಂಗಡಗಳ ಕುಬ್ಜ ಭಾವನೆಗಳಿಂದ ಹೊರಬಂದರೆ ಸಾತ್ವಿಕ ಸಮನ್ವಯ ಭಾವದ ಜೀವನ ವಿಧಾನ ಸಾಧ್ಯವಾಗುತ್ತದೆ ಎಂದು ಶ್ರೀಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.



ಧಾರವಾಡದ ಆರ್‌ಎಲ್‌ಎಸ್ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡ 'ಸಿದ್ಧಾಂತ ಶಿಖಾಮಣಿ' ಪ್ರವಚನ 7ನೇದಿನದ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಧರ್ಮದ ಹಿರಿದಾದ ಮಾರ್ಗದಲ್ಲಿ ಸಂಸ್ಕೃತಿ ಮೈಗೂಡಿಸಿಕೊಂಡು ತಾನು ಬದುಕುವುದರೊಂದಿಗೆ ಅಖಂಡ ಸಮುದಾಯ ಬದುಕಿಸಬೇಕು ಎಂಬುದು ವಿಶ್ವದ ವಿದ್ಯಮಾನಗಳಲ್ಲಿ ಹೆಣೆದುಕೊಂಡಿರುವ ಸಕಲ ಧರ್ಮ ಸಿದ್ಧಾಂತ-ಸಂವಿಧಾನಗಳ ಮೂಲ ಆಶಯವಾಗಿದೆ.

ವಿನಾಶದತ್ತ ಮುಖಮಾಡದಂತೆ ನಮ್ಮೊಳಗಿನ ವೈರುಧ್ಯ ಮರೆತು ಸಹೋದರತ್ವದ ಸ್ನೇಹ ಸಂಬಂಧ ಸಂವರ್ಧಿಸಿ ಮನುಕುಲದ ಬಾಳು ಬಲಿಯಲು 'ಸಿದ್ಧಾಂತ ಶಿಖಾಮಣಿ' ಮೇರುಕೃತಿಯ ವಿಶಾಲ ಆಶಯಗಳು ಬೆಳಕು ಚೆಲ್ಲುತ್ತವೆ ಅಲ್ಲದೆ ಇವ ನಮ್ಮವ ಎನ್ನುವ ಹಿರಿಭಾವ ಬೆಳೆಸಲು ಬಲ ನೀಡುತ್ತದೆ.

ಸದಾ ಶಾಂತನಾಗಿರುವವನೇ ಸಂತ: ಶ್ರೀ ಕಾಶಿಜಗದ್ಗುರುಗಳು

ವಾರಾಣಸಿ, 2- ಸಂಸಾರದ ಸಂತಾಪಗಳ ಮಧ್ಯದಲ್ಲಿ ಸದಾ ಶಾಂತನಾಗಿರುವವನೇ ಸಂತನು. ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೀಗೆ ವಿಚಾರ ಮಂಡಿಸಿದರು.

ಮಹಾರಾಷ್ಟ್ರದ ಆಳಂದಿ ನಿವಾಸಿಗಳಾದ ಬಾಲಾಜಿ ಮಹಾರಾಜ ಮತ್ತು ವಾಘೇಶ್ವರ ಮಹಾರಾಜ ಇವರುಗಳು ವಾರಾಣಸಿಯ ಜಂಗಮವಾಡಿ ಮಠದಲ್ಲಿ ಹಮ್ಮಿಕೊಂಡಿದ್ದ ಶ್ರೀಸಂತ ತುಕಾರಾಮ ಮಹಾರಾಜರ ಜನ್ಮ ಚತುಃಶತಾಬ್ದಿ ಮಹೋತ್ಸವವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು.

ಸಂತರು ಗಂಧದ ಕೊರಡಿನಂತೆ ತಾವು ಸವೆದು ಸಮಾಜಕ್ಕೆ ಹಿತವನ್ನು ಮಾಡುತ್ತಾರೆ. ಸಂತರು ತಮಗೆ ದುಷ್ಟರು ಮಾಡಿದ ಅಪರಾಧಗಳನ್ನು ಸಹಿಸಿಕೊಂಡು ಮತ್ತೆ ದುಷ್ಟರನ್ನು ಸುಧಾರಿಸುವಲ್ಲಿಯೇ ತೊಡಗುತ್ತಾರೆ ಎಂದರು.

ಮಹಾರಾಷ್ಟ್ರದ ವಾರಕರೀ ಸಂಪ್ರದಾಯದ ಸಂತರಲ್ಲಿ ಶ್ರೀ ಸಂತಜ್ಞಾನೇಶ್ವರ ಮತ್ತು ಶ್ರೀ ಸಂತ ತುಕಾರಾಮರು ಪ್ರಮುಖರು. ಇವರಲ್ಲಿ ತುಕಾರಾಮರು ಅತ್ಯಂತ ಬಡಕುಟುಂಬದಲ್ಲಿ ಜನಿಸಿದವರು. ತಮ್ಮ ಗೃಹಸ್ಥ ಬದುಕಿನಲ್ಲಿ ವಿಪರೀತ ಸ್ವಭಾವದ ಹೆಂಡತಿ, ಕಾಡುವ ಮಕ್ಕಳು. ಇಂತಹ ಪ್ರತಿಕೂಲ ಪರಿಸ್ಥಿತಿ ಇದ್ದರೂ ಅಂಥದರಲ್ಲಿಯೇ ದೈವಸಾಕ್ಷಾತ್ಕಾರವನ್ನು ಪಡೆದು ತಮಗೆ ಆದ ಅನುಭವವನ್ನೇ "ಗಾಥಾ" ರೂಪದಲ್ಲಿ ಬರೆದಿಟ್ಟಿದ್ದಾರೆ. ಅದೇ ಇಂದು "ತುಕಾರಾಮಗಾಥಾ" ಎಂದು ಪ್ರಸಿದ್ಧವಾಗಿದೆ ಎಂದು ವಿವರಿಸಿದರು.

ಕರ್ನಾಟಕದಲ್ಲಿಯ ಕೆಲ ವಿದ್ವಾಂಸರು ಶ್ರೀಸಂತ ತುಕಾರಾಮರು ಮೂಲತಃ ವೀರಶೈವರಾಗಿದ್ದರು ಎಂಬ ವಿಚಾರವನ್ನು ಕೆಲ ಪತ್ರಿಕೆಗಳಲ್ಲಿ ಪ್ರಕಟಪಡಿಸಿದ್ದನ್ನು ಉಲ್ಲೇಖಿಸಿದ ಶ್ರೀ ಕಾಶೀ ಜಗದ್ಗುರುಗಳು, ಈ ವಿಷಯವು ದೃಢಪಟ್ಟರೆ ವೀರಶೈವರ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವು ಪ್ರಾರಂಭವಾಗುವದು. ಈ ವಿಷಯದಲ್ಲಿ ಸಂಶೋಧಕರು ಹೆಚ್ಚಿನ ಗಮನ ಹರಿಸಬೇಕು ಎಂದು ನಿರ್ದೇಶಿಸಿದರು.

ಸಭೆಯಲ್ಲಿ ಕಾಶೀ ವೀರಶೈವ ವಿದ್ವತ್ ಸಂಘದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು ಮಹಾರಾಷ್ಟ್ರದಿಂದ ಬಂದ ಅನೇಕ ಭಕ್ತರು ಸಭೆಯಲ್ಲಿ ಪಾಲ್ಗೊಂಡಿದ್ದರು. ಅಂದಿನ ಸಭೆಯಲ್ಲಿ ಶ್ರೀಸಂತ ತುಕಾರಾಮ ಮಹಾರಾಜರ ನಾಲ್ಕುನೂರನೇ ಜನ್ಮ ವರ್ಷದ ಸಾಂಕೇತಿಕವಾಗಿ ನಾಲ್ಕುನೂರು ಪಣತಿಗಳಲ್ಲಿ ದೀಪೋತ್ಸವವನ್ನು ಮಾಡಲಾಯಿತು.